ವಚನ ಸಾಹಿತ್ಯ ಸಂಗ್ರಹ

ಸಂಪಾದಕರು

ಸಂ. ಶಿ. ಭೂಸನೂರಮಠ, ಎಮ್.ಎ.

ಲಿಂಗರಾಜ ಕಾಲೇಜು, ಬೆಳಗಾವಿ

ಪ್ರಕಾಶಕರು

ಮೈಸೂರು ಸರ್ಕಾರ–ವಿದ್ಯಾಭ್ಯಾಸ ಇಲಾಖೆ

(ಸಾಹಿತ್ಯ-ಸಂಸ್ಕೃತಿ ಅಭಿವೃದ್ಧಿ ಶಾಖೆ)

ಬೆಂಗಳೂರು

ವಚನ ಸಾಹಿತ್ಯ ಸಂಗ್ರಹ

ಸಂಪಾದಕರು

ಸಂ. ಶಿ. ಭೂಸನೂರಮಠ, ಎಮ್.ಎ.
ಲಿಂಗರಾಜ ಕಾಲೇಜ, ಬೆಳಗಾವಿ

ಪ್ರಕಾಶಕರು
ಮೈಸೂರು ಸರ್ಕಾರ ವಿದ್ಯಾಭ್ಯಾಸ ಇಲಾಖೆ
(ಸಾಹಿತ್ಯ - ಸಂಸ್ಕೃತಿ ಅಭಿವೃದ್ಧಿ ಶಾಖೆ)
ಬೆಂಗಳೂರು

ಮೊದಲ ಮುದ್ರಣ : ೧೯೬೫

ಬೆಲೆ
ಸಾಧಾರಣ ಪ್ರತಿ : ರೂ. ೪-೫೦
ಕ್ಯಾಲಿಕೊ ಪ್ರತಿ : ರೂ. ೬-೦೦

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮುನ್ನುಡಿ

ಮೈಸೂರು ರಾಜ್ಯಸರ್ಕಾರವು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಶಾಖೆಯ ವತಿಯಿಂದ ಈಗಾಗಲೇ ಇಪ್ಪತ್ತು ಗ್ರಂಥಗಳನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ಅವು ಸಾರ್ವಜನಿಕ ಮಹಾಜನರಿಗೆ ದೊರೆಯುವಂತೆ ಏರ್ಪಾಟುಮಾಡಿದೆ. ಜನಪ್ರಿಯವಾದ ಮಹಾಕಾವ್ಯಗಳನ್ನು ಸೂಕ್ತ ಪೀಠಿಕೆ ಟಿಪ್ಪಣಿ ಮತ್ತು ಅರ್ಥಕೋಶಗಳೊಂದಿಗೆ ಪ್ರಕಟಿಸಲಾಗಿದೆ. ಕರ್ನಾಟಕ ಧರ್ಮಗಳ ಕೈಪಿಡಿಗಳನ್ನೂ ವಿದ್ವಾಂಸರಿಂದ ತಯಾರಿಸಿ ಪ್ರಚುರ ಪಡಿಸಲಾಗಿದೆ. ಈ ಗ್ರಂಥಮಾಲೆಯು ಮಹಾಜನರ ಪ್ರೋತ್ಸಾಹವನ್ನು ಪಡೆದುದರಿಂದ ಅನೇಕ ಗ್ರಂಥಗಳ ಪ್ರತಿಗಳು ಮುಗಿದುಹೋಗಿವೆ. ಅವುಗಳ ಪುನರ್ಮುದ್ರಣವನ್ನು ಕೈಗೊಳ್ಳಬೇಕೆಂಬ ಉದ್ದೇಶವು ಸರ್ಕಾರಕ್ಕಿದೆ.

ಈ ಮಾಲೆಯಲ್ಲಿ "ವಚನ ಸಾಹಿತ್ಯ ಸಂಗ್ರಹ" ಮತ್ತು "ದಾಸ ಸಾಹಿತ್ಯ ಸಂಗ್ರಹ" ಎಂಬ ಎರಡು ಗ್ರಂಥಗಳನ್ನು ಜೋಡಿಸಬೇಕೆಂದು ತೀರ್ಮಾನಿಸಿ, ಮೊದಲನೆಯ ಗ್ರಂಥದ ಸಂಪಾದಕತ್ವವನ್ನು ಪ್ರೊ. ಸಂ. ಶಿ. ಭೂಸನೂರಮಠ, ಎಂ.ಎ., ಅವರಿಗೂ, ಎರಡನೆಯ ಗ್ರಂಥದ ಸಂಪಾದಕತ್ವವನ್ನು ಪ್ರೊ. ದ.ರಾ. ಬೇಂದ್ರೆ, ಎಂ.ಎ., ಅವರಿಗೂ ವಹಿಸಲಾಯಿತು. ಪ್ರೊ. ಬೇಂದ್ರೆಯವರು ಇತರ ಕಾರ್ಯಗೌರವಗಳಿಂದ ಈ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲವಾಗಿ ಶ್ರೀ ಬೆಟಗೇರಿ ಕೃಷ್ಣಶರ್ಮರವರಿಗೆ "ದಾಸ ಸಾಹಿತ್ಯ ಸಂಗ್ರಹ"ದ ಕಾರ್ಯವನ್ನು ವಹಿಸಲಾಯಿತು. ಈ ಗ್ರಂಥದ ಹಸ್ತಪ್ರತಿ ಇನ್ನೂ ಬರಬೇಕಾಗಿದೆ.

ಪ್ರೊ. ಭೂಸನೂರಮಠ ಅವರು "ವಚನ ಸಾಹಿತ್ಯ ಸಂಗ್ರಹ"ದ ಸಂಪಾದಕತ್ವವನ್ನು ಶ್ರದ್ಧಾಸಕ್ತಿಗಳಿಂದ ನೆರವೇರಿಸಿ, ಈ ಗ್ರಂಥವನ್ನು ಸರ್ವಾಂಗ ಸುಂದರವನ್ನಾಗಿ ಮಾಡಿರುತ್ತಾರೆ. ವಚನ ಸಾಹಿತ್ಯ ರತ್ನಾಕರವನ್ನು ಮಥಿಸಿ, ಕನ್ನಡಿಗರಿಗೆ ಅಮೃತದ ಸವಿಯೂಟವನ್ನು ಉಣಬಡಿಸಿದ್ದಾರೆ. ಆ ರತ್ನಾಕರದೊಳಗಿನ ಅಮೂಲ್ಯ ರತ್ನಗಳನ್ನು ಆರಿಸಿ ತೆಗೆದು, ಜಾಣ್ಮೆಯಿಂದ ಜೋಡಿಸಿ, ಕನ್ನಡ ಸಾಹಿತ್ಯದೇವಿಗೆ ಅಲಂಕರಣ ಮಣಿಹಾರ

ವನ್ನರ್ಪಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಸಿದ್ಧಹಸ್ತರಾಗಿರುವ ಪ್ರೊ. ಭೂಸನೂರಮಠ ಅವರ ಈ ಕಾರ್ಯವು ಅಭಿನಂದನೀಯವಾಗಿದೆ.

ಕನ್ನಡ ಸಾಹಿತ್ಯವನ್ನು ನಾಲ್ಕು ಯುಗಗಳನ್ನಾಗಿ ವಿಂಗಡಿಸುವ ಸಂಪ್ರದಾಯವು ನಮ್ಮಲ್ಲಿ ರೂಢಿಯಲ್ಲಿದೆ. ಅವಾವುವೆಂದರೆ: ಪೌರುಷಯುಗ (ಜೈನ); ತ್ಯಾಗಯುಗ (ವೀರಶೈವ); ಭಕ್ತಿಯುಗ (ಬ್ರಾಹ್ಮಣ) ಮತ್ತು ವಿಮರ್ಶಾಯುಗ (ಆಧುನಿಕ). ಈ ಯುಗಗಳ ಮುಖ್ಯಗುಣಗಳನ್ನು ಹೀಗೆ ನಿರೂಪಿಸಿದರೂ ಪೌರುಷಯುಗದಲ್ಲಿ ತ್ಯಾಗವಿಲ್ಲದಿಲ್ಲ; ತ್ಯಾಗಯುಗದಲ್ಲಿ ಭಕ್ತಿಯಿಲ್ಲದಿಲ್ಲ; ಭಕ್ತಿಯುಗದಲ್ಲಿ ಪೌರುಷವಿಲ್ಲದಿಲ್ಲ. ವಿಮರ್ಶಾಯುಗದಲ್ಲಿ ಈ ಎಲ್ಲ ಗುಣಗಳೂ ಕಂಡುಬರುತ್ತವೆ.

ಕನ್ನಡಕ್ಕೆ ಒಂದು ವೈಶಿಷ್ಟ್ಯವನ್ನು ವೀರಶೈವರ ವಚನ ಸಾಹಿತ್ಯವು ತಂದುಕೊಟ್ಟಿದೆ. ಬೇರೆ ಭಾಷೆಗಳ ಸಾಹಿತ್ಯ ಭಂಡಾರಗಳಲ್ಲಿ ಈ ವಚನ ಸಾಹಿತ್ಯವೆಂಬ ರತ್ನಗಳು ದೊರೆತಿಲ್ಲ. ಮಹಾಜನರು ಈ "ವಚನ ಸಾಹಿತ್ಯ ಸಂಗ್ರಹ"ವನ್ನೂ, ಮುಂದೆ ಬರುವ "ದಾಸ ಸಾಹಿತ್ಯ ಸಂಗ್ರಹ"ವನ್ನೂ ನಲ್ಮೆಯಿಂದ ಸ್ವೀಕರಿಸುವರೆಂಬ ನಂಬುಗೆ ಇದೆ.

ಈ ಗ್ರಂಥದ ಸಂಪಾದಕರಾದ ಶ್ರೀ. ಸಂ. ಶಿ. ಭೂಸನೂರಮಠ ಅವರಿಗೂ, ಇದನ್ನು ಇಷ್ಟು ಅಂದವಾಗಿ ಮುದ್ರಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮಾಲೀಕರಾದ ಶ್ರೀ. ಜಿ. ಎಚ್. ರಾಮರಾಯರಿಗೂ ನಮ್ಮ ವಂದನೆಗಳು ಸಲ್ಲಬೇಕಾಗಿದೆ.

ಬೆಂಗಳೂರು
೩-೧೦-೧೯೬೪

ಕೆ. ಎಸ್. ಧರಣೇಂದ್ರಯ್ಯ,
ವಿಶೇಷಾಧಿಕಾರಿ, ಸಾಹಿತ್ಯ-ಸಂಸ್ಕೃತಿ
ಅಭಿವೃದ್ಧಿ ಶಾಖೆ

ವಿಷಯಾನುಕ್ರಮಣಿಕೆ

ಒಳಗೆ ಪ್ರವೇಶ

೧

ವಚನಸಾಹಿತ್ಯದ ಒಳಗೆ ಪ್ರವೇಶಮಾಡಿ, ಅಲ್ಲಿ ಏನೇನಿದೆ ಎಂಬು ದನ್ನು ನೋಡುವ ಮೊದಲು, ನಿಮ್ಮೊಡನೆ ಒಂದೆರಡು ಮಾತು ಮಾತಾಡ ಬೇಕೆಂದಿದ್ದೇನೆ. ವಚನದ ಬಾಗಿಲು ತೆಗೆದು, ಒಳಗೆ ಬದುಕಿರುವ ಶರಣ ರನ್ನು ಕಂಡು, ಅವರ ಜೀವನಾನುಭವವನ್ನು ಕೇಳಿಕೊಂಡು ಬರಬೇಕೆಂದು ಹೊರಟಿರುವ ನಿಮ್ಮನ್ನು ಸ್ವಲ್ಪ ಹೊತ್ತು ತಡೆದು ಹೊರಗೆ ನಿಲ್ಲಿಸಿದರೆ ಸಿಟ್ಟಾಗಬೇಡಿ. ಮತ್ತು ನನ್ನ ಮಾತು 'ಪ್ರಸ್ತಾವನೆ'ಯ ಬೇರೊಂದು ವೇಷವೆಂದೂ ಭಾವಿಸಬೇಡಿ. ನಿಮ್ಮನ್ನು ಹೊರಗೆ ನಿಲ್ಲಿಸುವ ಅಧಿಕಾರ ನನಗಿಲ್ಲ. ಏಕೆಂದರೆ ವಚನಸಾಹಿತ್ಯದ ಒಳಗನ್ನು ಕಂಡು, ಅಲ್ಲಿರುವ ಜೀವನದ ನೆಲೆಯನ್ನು ಮುಟ್ಟಿ, ನಿಲವನ್ನು ಅಳೆದು ನೋಡಿ ತಿಳಿದುಕೊಂಡ ವರಲ್ಲಿ ನಾನೊಬ್ಬ ಅಲ್ಲ. ವಚನದಲ್ಲಿ ಹೊಳಹುದೋರುವ ಅಖಂಡ, ಆನಂದ, ನಿತ್ಯ, ಸತ್ಯ, ಪರಿಪೂರ್ಣ, ನಿರ್ವಾಣ, ನಿರಂಜನದ ನೆಳಲನ್ನೂ ಕಂಡವ ನಾನಲ್ಲ. ನಿತ್ಯ ಪರಿಪೂರ್ಣಕ್ಕೆ ಹೋಗಲು ವಚನಕಾರರು ಕಟ್ಟಿದ 'ಎರಡಿಲ್ಲದ' ಭಕ್ತಿಯ ಹಾದಿ, ಈ ಹಾದಿ ಸಿಗಬೇಕಾದರೆ 'ಅನ್ಯ ಭಿನ್ನ' ವಿಲ್ಲದ ಜ್ಞಾನದ ಮಾರ್ಗ, ಮತ್ತೆ ಅದೇ ಹಾದಿಗೆ ಹತ್ತಿಸುವ, 'ನದಿಯಲ್ಲಿ ನದಿ' ಕೂಡಿ ಸಮರಸವಾಗುವ ಶಿವಯೋಗದ ಸಂಧಾನ, ಮತ್ತೂ ಶಿವಪೂಜೆ ಶಿವಾಚಾರ ಮುಂತಾದ 'ನಿಜವನೆಯ್ದಿಸುವ' ಕರ್ಮದ ಶಿವರಹಸ್ಯ, ಅದರ ಗಹನಗತಿ, ಗುಹ್ಯ ಪಥಗಳು ಒಳಹೊರಗೆ ಇದ್ದ ಸುದ್ದಿಯ ಸೋಂಕೇ ಇಲ್ಲದ ನಾನು ನಿಮ್ಮನ್ನೇಕೆ ತಡೆದೆ? ಅದು ಬುದ್ಧಿಯ ಚಾಪಲ, ಮಾತಿನ ಹುಚ್ಚು; ಮನುಷ್ಯ ತನ್ನ ಮಬ್ಬಿನಲ್ಲಿ ನಡೆಸುವ ಅಧಿಕಾರ. ಆದರೂ ಮನ್ನಿಸಿರಿ.

ಹೊರಗೆ ಕಾಣುವ ಜಗತ್ತನ್ನು ಮುಂದಿಟ್ಟುಕೊಂಡು, ಹೊರಗನ್ನು ಪರೀಕ್ಷಿಸಬಹುದು, ಪ್ರಯೋಗಿಸಬಹುದು. ಆದರೆ ತನ್ನೊಳಗೆ ನಡೆದಿರುವ ಅಂತಃಪ್ರಪಂಚದ ಸೂಕ್ಷ್ಮವಾದ ಜಾಲವನ್ನು ಎದುರಾಗಿ ಇಟ್ಟುಕೊಂಡು

ನೋಡುವ ಸಾಮರ್ಥ್ಯ, ಅಲ್ಲಿ ಪ್ರಯೋಗ ನಡೆಸುವ ಅಂತರಂಗ ಕೌಶಲ ಸುಲಭಸಾಧ್ಯ ಅಲ್ಲ. ಹೊರಗೆ ನೋಡಿ, ಹೊರಗೆ ಪ್ರಯೋಗಗಳನ್ನು ಕಲ್ಪಿಸಿಕೊಂಡು, ಬಾಹ್ಯಪ್ರಪಂಚದ ಮರೆಯಲ್ಲಿರುವ ಸತ್ಯಗಳನ್ನು ಶಕ್ತಿಗಳನ್ನು ಸುಂದರಗಳನ್ನು ಶಿವ ಅಶಿವಗಳನ್ನು ಕಾಣಬಹುದು; ಕಂಡು ಬಳಸಿಕೊಳ್ಳಬಹುದು; ಭೋಗಿಸಬಹುದು, ಆನಂದಿಸಬಹುದು. ಹೊರಗಿನ ಕಾಡನ್ನು ಕಡಿದು ನಾಡು ಮಾಡಬಹುದು. ಗುಡ್ಡ ಪರ್ವತಗಳನ್ನು ಸವರಿ ಹೊಲಮಾಡಿ ಬಿತ್ತಬಹುದು. ಹೊರಗೆ ಆಕಾಶವನ್ನು ಏರಬಹುದು, ಸಮುದ್ರವನ್ನು ಕಿತ್ತು ಬೇರೊಂದೆಡೆ ಇಡಬಹುದು. ಭೂಮಿಯ ಗರ್ಭವನ್ನು ಭೇದಿಸಬಹುದು, ತಾರಾಗರ್ಭವನ್ನು ಲೆಕ್ಕ ಮಾಡಬಹುದು. ಮನುಷ್ಯನಲ್ಲಿ ಇನ್ನೂ ಬುದ್ಧಿ ಬಲಿತರೆ, ಇನ್ನೂ ಪ್ರಯೋಗದ ಉಪಕರಣಗಳು ಹೆಚ್ಚಿದರೆ, ಇನ್ನೂ ಭಾವ ಜಾಗ್ರತವಾದರೆ, ಇನ್ನೂ ದೃಷ್ಟಿ ಹೆಚ್ಚು ಹೆಚ್ಚಾಗಿ ಪ್ರಭಾವಿಸಿದರೆ ವಿಶ್ವವಿಸ್ತಾರವಾದ ಪ್ರಪಂಚದ ಖಣಿಯಿಂದ ಅಸಂಖ್ಯ ಸಂಖ್ಯೆಯ ಹೊಸ ಹೊಸತುಗಳನ್ನು ಇನ್ನೂ ಹೊರಡಿಸಬಹುದು. ಇಂದಿನ ನಾವು ಇನ್ನು ನೂರು ವರ್ಷದ ಮೇಲೆ ಹುಟ್ಟಿ ಬಂದರೆ ಏನೇನು ಕಂಡೇವು? ಏನೇನು ಕಾಣಲಿಕ್ಕಿಲ್ಲ?

ಹೊರಗನ್ನು ನೋಡುವಂತೆ ಒಳಗನ್ನೂ ಹೊರಗಿಟ್ಟುಕೊಂಡು, ಎದುರಿಗಿಟ್ಟುಕೊಂಡು ನೋಡಿ, ಇಲ್ಲಿಯೂ ಪ್ರಯೋಗಶಾಲೆ ಕಟ್ಟಬೇಕು, ಪ್ರಯೋಗಗಳನ್ನು ನಡೆಸಬೇಕು. ಇದು ಸಾಧ್ಯವಿದೆಯೆ? ನಾವು ಎಚ್ಚತ್ತಿರುವಾಗ ಎಡೆಬಿಡುವಿಲ್ಲದೆ ಹರಿದಾಡುತ್ತಿರುವ ಮನದ ಸಂಚಲಗಳನ್ನು ಮುಂದಿಟ್ಟುಕೊಳ್ಳಬೇಕು. ಬುದ್ಧಿ ಮಾಡುತ್ತಿರುವ ವಿಚಾರಗಳ ಸಂತೆಯನ್ನು, ಹೃದಯದಲ್ಲಿ ಎದ್ದು ಮೂಡಿ ಮೂರ್ತಿಗೊಳ್ಳುತ್ತಿರುವ ಭಾವನೆಗಳ ತರಂಗ ರಾಶಿಯನ್ನು ಕಣ್ಣ ಮುಂದೆ ಇರಿಸಿಕೊಂಡು ನೋಡಬೇಕು. ಅದರಂತೆ ದೇಹ ಪ್ರಾಣ ಇಂದ್ರಿಯಗಳಲ್ಲಿ ನಡೆದಿರುವ ವ್ಯವಹಾರವನ್ನು ಮುಂದಿರಿಸಿಕೊಂಡು ಅವಲೋಕಿಸಬೇಕು. ಇದು ಹೇಗೆ ಸಾಧ್ಯ ಎಂದು ನೀವು ಮತ್ತೆ ಕೇಳಬಹುದು. ಇದು ಸಾಧ್ಯವಿರದಿದ್ದರೆ ಮನಃಶಾಸ್ತ್ರ ತರ್ಕಶಾಸ್ತ್ರ, ಅಧ್ಯಾತ್ಮಶಾಸ್ತ್ರ, ಅನುಭವಶಾಸ್ತ್ರ ಮುಂತಾದುವು ಹೇಗೆ ಹುಟ್ಟುತ್ತಿದ್ದುವು? ಬಾಹ್ಯ ಪ್ರಪಂಚವನ್ನು ನೋಡುವಲ್ಲಿ ಕಣ್ಣು ಕಿವಿ ಮೂಗು ನಾಲಗೆ ತೊವಲುಗಳು

ಕಣ್ಣಾಗಿರುವಂತೆ, ಅಂತಃಪ್ರಪಂಚವನ್ನು ನೋಡಲು ನಮ್ಮ ಅರಿವೇ ಕಣ್ಣು. ಮನದ ಸಂಚಾರವನ್ನು, ಬುದ್ಧಿಯ ವಿಚಾರವನ್ನು, ಹೃದಯದ ವಿಕಾರವನ್ನು ಕಾಣಬಲ್ಲ ಕಣ್ಣು ಅರಿವು. ದೇಹ ಪ್ರಾಣಾದಿಗಳನ್ನೊಳಕೊಂಡು ಇವನ್ನೆಲ್ಲ 'ನಾನು' ಎಂದು ಹೇಳುತ್ತಿರುವ ಅಹಂಭಾವವನ್ನೂ ಕಾಣಬಲ್ಲ ಕಣ್ಣು ಅರಿವು. ಅರಿವು ಕಂಡರೆ ಇವೆಲ್ಲ ಇವೆ. ಅರಿವು ಇಲ್ಲದಿದ್ದರೆ ಇವೇನೂ ಇಲ್ಲ. 'ಅರಿವೆ ಸಮಸ್ತವಸ್ತುವಿಷಯಾಗಮಮುಖ್ಯಮ್' ಎಂಬ ಮಗ್ಗೆಯ ಮಾಯಿದೇವರ ಮಾತನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕು.

ಹೊರಗೆ ಒಳಗೆ ನಡೆದಿರುವ ನಮ್ಮ ವ್ಯವಹರಣೆಯಿಂದ ನಮಗೆ ತೃಪ್ತಿ ಇದೆಯೆ? ಕಾಲಕಾಲಕ್ಕೆ ಹೊಟ್ಟೆಗೆ ಅನ್ನ ಕೊಟ್ಟು, ಹೊಟ್ಟೆಯನ್ನು ತೃಪ್ತಿಯಲ್ಲಿಡಬಹುದು. ಬಟ್ಟೆಕೊಟ್ಟು, ದೇಹವನ್ನು ಸಂತವಿಡಬಹುದು. ಸಮಯಕ್ಕೆ ತಕ್ಕಂತೆ ಕಣ್ಣಿಗೆ ರೂಪವನ್ನು ತೋರಿ, ಕಿವಿಗೆ ಶಬ್ದವನ್ನು ಉಣಿಸಿ, ನಾಲಗೆಗೆ ರುಚಿ ರುಚಿಯನ್ನು ತಿನಿಸಿ, ಮೂಗಿಗೆ ಪರಿಮಳ ಗಂಧವನ್ನು ಕೊಟ್ಟು, ತ್ವಕ್ಕಿಗೆ ಸುಖಸ್ಪರ್ಶಗಳನ್ನು ನೀಡಿ ತಣಿಸಿಕೊಂಡಿರಬಹುದು. ಅದರಂತೆ ಬುದ್ಧಿಗೆ ವಿಚಾರವನ್ನು, ಭಾವಕ್ಕೆ ಬಯಕೆಯನ್ನು, ಮನಸ್ಸಿಗೆ ಮನಬಂದುದನ್ನು ಪೂರೈಸಿಕೊಟ್ಟು ಸಮಾಧಾನದಲ್ಲಿಡಬಹುದು. ಅಹಂಭಾವಕ್ಕೆ ಮಾನ ಮರ್ಯಾದೆಯನ್ನು ಉಣಿಸಿ, ಕೀರ್ತಿವಾರ್ತೆಯನ್ನು ಕುಡಿಸಿ ಸುಖದಲ್ಲಿರಿಸಬಹುದು. ಆದರೆ ಇವೆಲ್ಲ ನಡೆದಾಡಲಿಕ್ಕೆ ಮೂಲಾಧಾರವಾಗಿ, ಇವರ ವ್ಯವಹಾರವನ್ನು ಹಗಲಿರುಳೂ ಕಣ್ಣುಮುಚ್ಚದೆ ನೋಡುತ್ತಿರುವ ಅರಿವಿಗೆ ತೃಪ್ತಿ, ಸಮಾಧಾನ ಇದೆಯೆ? ಇಲ್ಲದವರ ಮಾತು, ಇವಕ್ಕೆಲ್ಲ ಹೊಟ್ಟೆತುಂಬ ಕೊಡಲಾರದ ಬಡವರ ಮಾತು ಅಂತಿರಲಿ. ಎಲ್ಲಾ ಇದ್ದವರ, ಇವೆಲ್ಲರ ಬಯಕೆಯನ್ನು ಪೂರೈಸಿ ಇನ್ನೂ ಹೆಚ್ಚು ಹೆಚ್ಚು ಇದ್ದ ಎಲ್ಲಾ ಉಳ್ಳವರ ಅರಿವಿಗಾದರೂ ತೃಪ್ತಿ ಇದೆಯೆ? ಇಲ್ಲದಿದ್ದರೆ, ಏಕೆ ಇಲ್ಲ?

ಇನ್ನೂ ಒಂದು ಮಾತು. ದೇಹ ಪ್ರಾಣಾದಿಗಳನ್ನು, ಕಣ್ಣು ಕಿವಿ ಮನ ಬುದ್ಧಿ ಭಾವ ಮುಂತಾದವುಗಳನ್ನು ಸಂತಯಿಸಿ ಸುಮ್ಮನೆ ಇರಿಸಿಕೊಂಡು ಇರಬಹುದು ಎಂದು ಹೇಳಿದೆನಲ್ಲಾ, ಆ ಮಾತು ಸಂಪೂರ್ಣ ಸತ್ಯ ಅಲ್ಲ, ಶಾಶ್ವತವಾಗಿ ಸ್ಥಿರವಾಗಿ ಉಳಿಯಬಲ್ಲ ಸತ್ಯ ಅಲ್ಲ. ಏಕೆಂದರೆ

ದೇಹ ಮನ ಭಾವಾದಿಗಳ ಸಮಾಧಾನ, ಸಂತೋಷ ತೃಪ್ತಿಗಳಲ್ಲಿ ಕೆಲವು ಕ್ಷಣಭಂಗುರ, ಕೆಲವು ದಿನ ಮಾಸ ವರ್ಷ ಭಂಗುರ. ಎಂತೂ ಕಾಲದ ಗತಿಯಲ್ಲಿ ಒಡೆದು ಹೋಗುವ ಸಂತೋಷ ಸಮಾಧಾನಗಳು ಅವು. ಮೃಷ್ಟಾನ್ನವನ್ನು ಹೊಟ್ಟೆತುಂಬ ಉಂಡೆ. ಎಷ್ಟು ಹೊತ್ತು ಸುಖವಿರಬಲ್ಲೆ ? ಇದೋ ಈ ಸೌಂದರ್ಯಸಾರಾಯವನ್ನು ನೋಡಬೇಕು. ನೋಡಿದೆ, ಕಣ್ಣ ಮುಂದೆ ಇಟ್ಟುಕೊಂಡೆ, ಅಷ್ಟೇ ಅಲ್ಲ ಕಣ್ಣಿಗೆ ಕಟ್ಟಿಕೊಂಡೆನೆಂದೇ ಇಟ್ಟುಕೊಳ್ಳಿ. ಆ ಸಾರಾಯದ ಮಬ್ಬು, ತೃಪ್ತಿ ಎಷ್ಟು ದಿನ? ಎಷ್ಟು ತಿಂಗಳು, ವರ್ಷ? ವಿದ್ಯಾವಂತನಾಗಬೇಕು, ಎಲ್ಲರಿಗಿಂತ ಬುದ್ಧಿ ಚಾತುರ್ಯದಲ್ಲಿ ಮಿಗಿಲಾಗಬೇಕು. ಕೀರ್ತಿ ಪ್ರಖ್ಯಾತಿ, ಪದವಿ ಅಧಿಕಾರ ಗೌರವ, ಧನ ಮಾನ ಮನ್ನಣೆ ಎಲ್ಲರಿಗಿಂತ ನನಗೆ ಹೆಚ್ಚು ಸಿಗಬೇಕು. ಎಲ್ಲರಿಗಿಂತ ಇವನ್ನು ನಾನು ಹೆಚ್ಚು ಉಂಡು ಗಡುತರ ಆಗಿ, ದೊಡ್ಡ ಮನುಷ್ಯನಾಗ ಬೇಕು. ಆದೆ. ಆದರೆ? ನನ್ನೊಡನೆ ಕಾಲಕಾಲಕ್ಕೆ ಬಲಿತ ಸಂತೋಷ ಸಮಾಧಾನ, ಮತ್ತೆ ಅದೇ ಕಾಲದ ಕಾಲ ಕೆಳಗೆ ಭಂಗುರ. ಒಡೆದು ಹೋಗು ತ್ತವೆ ಆ ಎಲ್ಲ ತೃಪ್ತಿ ಸಂತೋಷದ ಗುಳ್ಳೆ. ಅಂತೆಯೇ ನಶ್ವರ. ನೆಲವೆಲ್ಲ ಇಂದ್ರನ ಸ್ವರ್ಗ, ನೀರೆಲ್ಲ ಅಮೃತ, ಮರವೆಲ್ಲ ಕಲ್ಪವೃಕ್ಷ, ಪಶುವೆಲ್ಲ ಕಾಮಧೇನು, ಬಯಲೆಲ್ಲ ಬೆಳುದಿಂಗಳು, ಗಾಳಿಯೆಲ್ಲ ಮಂದಾರವಾಗಿ, ಹೆಣ್ಣಿನ ಕೋಟಿಯೆಲ್ಲ ರಂಭೆರತಿಯರ ಕೋಟಿಯಾಗಿ, ಪುರುಷಕೋಟಿಯೆಲ್ಲ ಯಕ್ಷ ಗಂಧರ್ವ ಕಿನ್ನರ ಸಿದ್ಧ ವಿದ್ಯಾಧರ ಮುಂತಾದ ಸುರಗಣವಾದರೆ, ಆಗಲೂ ನಮ್ಮ ತೃಪ್ತಿ ಸಮಾಧಾನಗಳು ಉಕ್ಕಿನ ಗುಂಡುಗಳಾಗಬಹು ದೆಂದು ನನಗನಿಸುವುದಿಲ್ಲ. ಸಾವಿರ, ಲಕ್ಷ ಕಾಲದ ಮನುಷ್ಯನ ಅನುಭವ ಅದನ್ನು ಒಪ್ಪಿಕೊಂಡಿಲ್ಲ.

ಸ್ವರ್ಗಲೋಕವನ್ನು ದಾಟಿ, ಮುಕ್ತಿಲೋಕದತ್ತ ಮುಂದುವರಿದ ಮನುಷ್ಯನ ಇತಿಹಾಸವೇ ಈ ಮಾತನ್ನು ಖಚಿತಗೊಳಿಸುತ್ತದೆ. ಇಂದ್ರನ ಮೇಲೆ ಬ್ರಹ್ಮ ವಿಷ್ಣು ರುದ್ರರನ್ನು ಇಟ್ಟಿರುವದೆ ಇದನ್ನು ಸ್ಪಷ್ಟ ಮಾಡುತ್ತದೆ. ಮತ್ತು ಈ ಅನುಭವ ದುರ್ಬಲರ ದರಿದ್ರರ, ಅಜ್ಞಾನಿ ಅಲ್ಪಜ್ಞಾನಿಗಳ ಅನುಭವ ಅಲ್ಲ. ಗೌತಮಬುದ್ಧ, ಶ್ರೀಕೃಷ್ಣ, ವೇದವ್ಯಾಸ, ಯೇಸುಕ್ರೈಸ್ತ, ಜನಕ, ಮಾರ್ಕಸ್ ಆರೇಲಿಯಸ್, ಸಾಕ್ರೆಟಿಸ್ ಮುಂತಾದ ದಿವ್ಯಧೀರರು

ಶ್ರೀವಮಂತರು ಧೀವಮಂತರು ಅಲ್ಪ ವ್ಯಕ್ತಿಗಳಲ್ಲ, ಭೂಮಪುರುಷರು. ಅಂಥವರ ಅನುಭವ ಇದು.

ಮಾನುಷ ಪ್ರಯೋಗಶಾಲೆಯಲ್ಲಿ ದೇಹ ಪ್ರಾಣ ಇಂದ್ರಿಯ ಮನ ಬುದ್ಧಿ ಭಾವಗಳ ವ್ಯಾಪಾರವನ್ನು ನೋಡಿ ಕಂಡು, ಒಂದು ಮಹಾ ನಿರ್ಣಯಕ್ಕೆ ಬಂದ ಒಬ್ಬ ಧೀರ ಬಸವಣ್ಣ ಹೇಳುತ್ತಾನೆ:

ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ.

ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲಸಂಗಮದೇವಾ.

ವ.ಸಾ.ಸಂ.ಪು.೩,ವ.೧.

ಅನುಭಾವದ ಆಶ್ರಯವಿಲ್ಲದೆ ಮಾನವನ ಅರಿವಿಗೆ, ಮಾನವನಿಗೆ ತೃಪ್ತಿ ಇಲ್ಲ. ಯಾವ ಯಾವ ಅನುಭವದಿಂದ ಯಾವ ಎಂದಿಗೂ ತೃಪ್ತಿಪಡೆಯದ ಅರಿವು ತೃಪ್ತಿಯನ್ನು ಕಂಡಿದೆ. ಅದು ಹೆಣ್ಣು ಹೊನ್ನು ಮಣ್ಣು ಹಡೆದ ಸುಖದ ಅನುಭವದಿಂದಲ್ಲ. ಕೀರ್ತಿ ವಾರ್ತೆ ವಿದ್ಯಾ ಬುದ್ಧಿ ಪದವಿ ಅಧಿಕಾರ ತಂದು ಕೊಟ್ಟ ಉತ್ಸವದ ಅನುಭವದಿಂದಲ್ಲ. ಅದು ಕಣ್ಣು ಕಿವಿ ನಾಲಗೆ ಮೂಗಿನ ಬಾಗಿಲೊಳಗೆ ಪ್ರವೇಶಮಾಡಿ ಬಂದ ವಿಷಯವಿಲಾಸದ ಅನುಭವದ ಮೇಲೆ ನಿಂತ ತೃಪ್ತಿಯಲ್ಲ. ಮತ್ತೆ, ಬಸವಣ್ಣನವರು ಹೇಳುವ ಈ ತೃಪ್ತಿ, ಭಂಗುರ ತೃಪ್ತಿಯಲ್ಲ. ದೇಹ ಒಡೆದರೂ ಒಡೆಯದ ತೃಪ್ತಿ. ಪ್ರಾಣ ಹಾರಿ ಹೋದರೂ ಅಖಂಡವಾಗಿ ಬದುಕಿರುವ ತೃಪ್ತಿ. ಕರಣ ಇಂದ್ರಿಯಗಳು ಅಳಿದರೂ ಅವಿನಾಶಿಯಾದ ತೃಪ್ತಿ. ಈ ಸಂತೃಪ್ತಿಯ ಮಹಾಮನೆಯೇ ಅನುಭಾವ, ಅದು ಲಿಂಗಾನುಭಾವ.

'ನಿಮ್ಮ ಕಂಡು ಎನ್ನ ಮರೆದ' ಲಿಂಗವನ್ನು, ಲಿಂಗಾನುಭಾವವನ್ನು, ದೇವರನ್ನು ಎಲ್ಲಿ ಹುಡುಕಬೇಕು ? ಶಬ್ದ ಸ್ಪರ್ಶ ರೂಪ ಮುಂತಾದ ವಿಷಯ ವಾರಾಶಿಯಾಗಿ ಮಾನವಕೋಟಿಗೆ ಅಪ್ಪಳಿಸುತ್ತಿರುವ ಬಾಹ್ಯಪ್ರಪಂಚದ ಅನುಭವ ಕಿವಿ ಮೊದಲಾದ ದ್ವಾರದಿಂದ ಪ್ರವೇಶಮಾಡಿ ಬರುತ್ತದೆ ನನಗೆ. ಇದನ್ನು ಬಹಿರಂಗದ ಅನುಭವವೆಂದು ಕರೆಯೋಣ. ನನ್ನ ದೇಹದ ಅನುಭವ ನನಗಿದೆ. ದೇಹ ಹೊರಗೆ ಕಣ್ಣಿಗೆ ಕಾಣುತ್ತದೆ. ಕಣ್ಣು ಮುಚ್ಚಿದರೂ ನನಗೆ ದೇಹವಿದ್ದ ಅನುಭವ ನನಗಿದೆ. ಈ ದೇಹಾನುಭವವನ್ನು ಬಾಹ್ಯಾಂತರ ಅನುಭವ ಎಂದು ಹೆಸರಿಟ್ಟರೆ ತಪ್ಪಾದೀತೆ? ಮತ್ತೆ ಮನ

ಬುದ್ಧಿ ಪ್ರಾಣ ಅಹಂಭಾವದ ಅನುಭವ ನನ್ನ ಒಳಗಿಂದಲೆ ನನಗೆ ತೋರುತ್ತದೆ. ಇದನ್ನು ಆಂತರ ಅನುಭವ ಎಂದು ಕರೆಯಬಹುದಲ್ಲವೆ? ಬಸವಣ್ಣನವರು ಹೇಳುವ ಲಿಂಗಾನುಭಾವ ಹೊರಗೆ ಒಳಗೆ ನಡುವೆಗಳಲ್ಲಿ ಎಲ್ಲಿ ಹುದುಗಿಕೊಂಡಿದೆ? ಹೊರಗೆ ಹುಡುಕಿದರೆ ಲಿಂಗ ಸಿಗಲಿಲ್ಲ. ಲಿಂಗ ವಿಲ್ಲದೆ ಲಿಂಗಾನುಭಾವ ಹೊರಗಿಂದ ಹೇಗೆ ಬಂದೀತು ಎಂದು ಅಂಬಿಗ ಚೌಡಯ್ಯನವರು ಎಚ್ಚರಿಕೆ ಕೊಡುತ್ತಾರೆ:

ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ.
ಮಡುವಿನೊಳಗರಸುವಡೆ ಮತ್ಸ್ಯ ಮಂಡುಕನಲ್ಲ.
ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ.
ಅಷ್ಟತನುವಿನೊಳಗೆ ಹುದುಗಿರ್ಪ ಲಿಂಗವ
ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ.

ವ.ಸಾ.ಸಂ.ಪು.೪,ವ. ೨

ಅರಣ್ಯದಲ್ಲಿ ತಪಸ್ಸುಮಾಡಿ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ, ವ್ರತ ನಿಯಮ ಆಚರಣೆಯಿಂದ ದೇವನನ್ನು ಕಂಡಿಹೆನೆಂದರೆ, ಲಿಂಗ ಸಿಡಿಹಾಯ್ದು ಕಂಟಿ ಗಿಡ ಮರ ಅಲ್ಲ. ನದಿಯೊಳಗೆ ಮುಳುಗಿದರೆ ಮೀನ ಕಪ್ಪೆಯಲ್ಲದೆ ಅಲ್ಲಿ ದೇವನಿಲ್ಲ. ದೇಹದಂಡನೆ ಮಾಡಿದರೆ ಸಾಲಿಗನಿಂದ ಹಣ ಸಿಗಬಹುದು. ಅರಣ್ಯವಿರಲಿ ಆಕಾಶವಿರಲಿ, ಗುಡ್ಡ ಗವಿ ನದಿ ಪರ್ವತವಿರಲಿ, ಹೊರಗೆ ಲಿಂಗ ಕಾಣಲಿಕ್ಕೆ ಇಲ್ಲ ಎಂಬುದೇ ಲಿಂಗಾನುಭಾವದಲ್ಲಿದ್ದ ಚೌಡಯ್ಯನ ವಿಚಾರ.

ಇನ್ನು ದೇಹದಲ್ಲಿ ಅಥವಾ ದೇಹದ ಒಳಗೆ ದೇವರಿದ್ದಾನೆಯೇ ಎಂದು ಕೇಳಿದರೆ, ಪ್ರಭುದೇವರು ಹೇಳುತ್ತಾರೆ:

ನೆನಹ ನೆನೆವ ಮನದಲ್ಲಿಲ್ಲ. ತನುವಿನಲ್ಲಿ ಆಸೆ ಮುನ್ನಿಲ್ಲ.
ನೆನೆವ ಮನವನತಿಗಳೆದ ಘನಕ್ಕೆ ಘನವನೆಂತೆಂಬೆ?
ತನ್ನಲ್ಲಿ ತಾನಾಯಿತ್ತು. ಭಿನ್ನವಿಲ್ಲದೆ ನಿಂದ ನಿಜವನೇನೆಂಬೆ?
ಅನಾಯಾಸದನುವ ಕಂಡು ಆಸು ಬೆರಗಾದೆನಯ್ಯ.
ಎಂತಿದ್ದುದು ಅಂತೆ ಅದೆ ಚಿಂತೆಯಿಲ್ಲದನುಭಾವ ಗೊಹೇಶ್ವರ.

ವ.ಸಾ.ಸಂ.ಪು.೩,ವ. ೨

ಮನದಲ್ಲಿ ನೆನೆದು, ದೇವನನ್ನು ಧ್ಯಾನಿಸಿ ನೋಡಿದರೆ, ಮನದಲ್ಲಿ ಲಿಂಗ

ವಿದೆಯೆ ? ಧ್ಯಾನದಲ್ಲಿ ದೇವನಿದ್ದಾನೆಯೆ ? ನೆನಹನ್ನೂ, ನೆನೆವ ಮನವನ್ನೂ ಮೀರಿ ದಾಟ ಆತ್ತಾತ್ತಚೆಗಿರುವ ಲಿಂಗದೇವ ಇಲ್ಲಿ ಹೇಗೆ ದೊರಕಬೇಕು ? ಮನದ ನೆನಹು, ಬುದ್ಧಿಯ ವಿಚಾರ, ಚಿತ್ತದ ಸಂಕಲ್ಪವಿಕಲ್ಪ, ಅಹಂಭಾವದ ಭ್ರಮಣ—ಇವೆಲ್ಲ ಒಂದಿಲ್ಲೊಂದು ರೀತಿಯ ಅಂತಃಕರಣದ ವಿಕಾರಗಳ, ಅಂತರಂಗದ ಮಂಥನಗಳ. ಮನದಲ್ಲಿ ಧ್ಯಾನದ ಮಥನಮಾಡಿ, ಬುದ್ಧಿಯಲ್ಲಿ ವಿಚಾರವನ್ನು ಮಥಿಸಿ, ಅಹಂಭಾವವನ್ನು ಕಡೆದು, ಭಾವನೆಯ ಮಾಲೆಯನ್ನು ಎಬ್ಬಿಸಿದರೆ, ಅಲ್ಲಿ ಎಲ್ಲಿಯೂ ಲಿಂಗಾನುಭಾವವಿಲ್ಲ. ಮಾನವಸ್ಥಲದಲ್ಲಿ ನೆಲೆಯೂರಿ ನಿಂದಿರುವ ಮಾನವನ ಅಂತಃಕರಣದ ಅಂತರಂಗಸಾಗರವನ್ನು ಮಥಿಸಿದರೆ, ಮಾನವಗತ್ತಲೆಯೆ ತೆರೆಗೊಂಡು ನಿಲ್ಲಬಹುದು. ಕತ್ತಲೆಯನ್ನು ಕಡೆದರೆ, ದೇವನ ಬೆಳಗು ಒಡೆದು ಮೂಡಲಿಲ್ಲ. ದೇಹಕ್ಕಿಂತ ಪ್ರಾಣಕ್ಕಿಂತ ಸೂಕ್ಷ್ಮವಾದ ಮನವೇ ಹಿಡಿಯಲಾರದ ಬ್ರಹ್ಮವನ್ನು ತನುವಿನಲ್ಲಿ ಹುಡುಕುವುದು ಹುಚ್ಚಿನ ಶಿಖರ. ಮನಸ್ಸು ಮುಟ್ಟದ ಲಿಂಗ ದೇಹಕ್ಕೆ ಹೇಗೆ ನಿಲುಕೀತು ? ಇದೋ ಈ 'ಗೊಹೇಶ್ವರ', ವಿಶ್ವಬ್ರಹ್ಮಾಂಡದೊಳಹೊರಗೆಲ್ಲ, ದೇಹ ಪ್ರಾಣ ಮನ ಭಾವಾದಿಗಳಿಗೆ ಅತೀತವಾದ ಗವಿಯೊಳಗೆ, 'ಹೃದ್ದೇಶ'ದಲ್ಲಿ ಹುದುಗಿರುವ ನಿರಾಳ ಚೈತನ್ಯ. ಮನುಷ್ಯನ ದೇಹ ಪ್ರಾಣ ಮನ ಭಾವಗಳು ಹೊರಗೆ ಒಳಗೆ ಹುಡುಕಿ ನೋಡುತ್ತಿರುವ ಸಂಭ್ರಮವನ್ನು, ಆಯಾಸವನ್ನು ನಿಲ್ಲಿಸಿ, ಅವೆಲ್ಲ ಸ್ವಸ್ಥಿರವಾಗಿ ಸ್ವಸ್ಥವಾಗಿ ಕುಳಿತರೆ, ಆಗ ಕಾಣಬರುತ್ತದೆ ಅನಾಯಾಸದ ಅನು ; ಯಾವ ಆಯಾಸವಿಲ್ಲದ ಲಿಂಗಸ್ಥಲ. ಇಲ್ಲಿಗೆ ಧ್ಯಾನ ಮಾಡಿಸುತ್ತ ಮನವನ್ನು ಕಳಿಸಬೇಕಿಲ್ಲ. ವಿಚಾರದಲ್ಲಿ ನಡೆಸುತ್ತ ಬುದ್ಧಿಯನ್ನು ಆಯಾಸಗೊಳಿಸಿ ಮುಟ್ಟಿಸಬೇಕಿಲ್ಲ. ನಿಯಮ ವ್ರತ ತೀರ್ಥ ಯಾತ್ರೆ ಜಪ ತಪದಿಂದ ದೇಹವನ್ನು ದಂಡಿಸಿ 'ಅನಾಯಾಸದ ಅನು'ವಾದ ಗೊಹೇಶ್ವರಲಿಂಗದ ನಿಜನಿವಾಸಕ್ಕೆ ಅಟ್ಟಬೇಕಿಲ್ಲ. ಇವನ್ನೆಲ್ಲ ಅಟ್ಟಿ ಆಯಾಸಗೊಳಿಸಿ ಕಳಿಸಿದರೂ ಎಂತಿದ್ದಂತೆ ಇರುವ ಸಹಜಸ್ಥಲದ ಇರವು, ನಿಶ್ಚಿಂತವಾದ ನಿರಾಳದಿರವು ಅವಕ್ಕೆ ಸಿಲುಕಲಿಲ್ಲ. '....ಆ ಮನದ ನೆನಹನತಿಗಳೆದ ಘನವು ತನ್ನಲ್ಲಿ ತಾನೆ ನಿಂದು, ನಿಸ್ತರಂಗವಾಗಿ, ಭಿನ್ನವಿಲ್ಲದೆ ತನ್ನ ನಿಜವೆ ತನಗೆ ಸಹಜವಾಗಿದ್ದಿತ್ತು....' (ಪ್ರಭುದೇವರ ವಚನಗಳು, ಪು. ೩೨೪). ಈ ಸಹಜದ ಸುಮ್ಮಾನವನ್ನು

ಆಯಾಸ ಚಿಂತನೆ ಧ್ಯಾನ ವಿಚಾರಗಳು ಎಂದೂ ಮುಟ್ಟಲಿಲ್ಲವೆಂಬುದೇ ಪ್ರಭುದೇವರ ಅನುಭವದ ವಿಚಾರ. ಪ್ರಭುದೇವರ 'ಅನಾಯಾಸದ ಅನು', 'ಚಿಂತೆಯಿಲ್ಲದ ಅನುಭಾವ ಗೊಹೇಶ್ವರ' ಇನ್ನೂ ಶ್ರೋತವ್ಯ, ಇನ್ನೂ ಮಂತವ್ಯ, ಮತ್ತೂ ಮತ್ತೂ ನಿದಿಧ್ಯಾಸಿತವ್ಯ. ಇದ್ದಂತೆ ಇದ್ದ ಸಹಜದ ಅನುಭಾವವನ್ನು ಮುಟ್ಟಲು ಪ್ರಭುದೇವರು ಯಾವುದೋ ಒಂದು ಹೊಚ್ಚ ಹೊಸ ಹಾದಿಯನ್ನು ನಿರ್ಮಾಣ ಮಾಡಿದಂತಿದೆ. ಅವರ ಮಾತಿನಲ್ಲಿ ಇನ್ನೇನೊ ಲಿಂಗಾನುಭಾವದ ನವ್ಯನಿನಾದ ಸೂಸುವಂತಿದೆ. ಕೇಳಬಲ್ಲ ಕಿವಿ ನನಗಿಲ್ಲ. ನಿಮಗೆ? ನೀವೆ ಹೇಳಬೇಕು.

ಇದೋ ಇಲ್ಲಿ ತಾಯಿ ಇಲ್ಲದೆ ಮಗು ಅಳುತ್ತಿದೆ. ಹೊಟ್ಟೆಗೆ ಹಾಕಿದರೆ ಹೊಟ್ಟೆ ತುಂಬಬಹುದು. ನೀರು ಕುಡಿಸಿದರೆ ನೀರಡಕೆ ಹಿಂಗಬಹುದು. ಬಟ್ಟೆ ಉಡಿಸಿ ಅಲಂಕಾರ ತೊಡಿಸಿ ಆಟಿಗೆ ಕೊಟ್ಟರೆ ಆಡಬಹುದು. ತಾಯಿಯನ್ನು ಮರೆತಂತಿರಬಹುದು ಕೆಲಕಾಲ. ಮತ್ತೆ ತಾಯಿಯ ನೆನಪಾದರೆ? ಮುಚ್ಚಿದ ದುಃಖ ಮತ್ತೆ ಮರುಕೊಳಿಸುತ್ತದೆ; ಧಿಗಿಲು ಭುಗಿಲೆಂದು ಉರಿಯುತ್ತದೆ. ಏನು ಉಂಡರೂ ಏನು ಉಟ್ಟು ತೊಟ್ಟರೂ ಯಾವ ಆಟವಾಡಿ ರಮಿಸಿದರೂ ಕ್ಷಣದ ತೃಪ್ತಿ, ಅಲ್ಪಸುಖ, ಜೊಳ್ಳು ಆನಂದ. ತಾಯಿಯಿಲ್ಲದೆ ಕೂಸು, ಅಂದರೆ ಕೂಸಿನ ಅರಿವು ಆಕಾಶದಗಲ ಬಾಯಿಬಿಟ್ಟು ಆಲಿ ಪರಿಯುತ್ತದೆ. ಅರಿವಿನ ಮೈಯಲ್ಲಿ ಸೊಗಸಿಲ್ಲದ ಮಗುವಿನ ಮೈಯಲ್ಲಿ ಕೈಯಲ್ಲಿ ಕಣ್ಣಲ್ಲಿ ಮನದಲ್ಲಿ ಸಮಾಧಾನದ ಸುಳವಿಲ್ಲ. ಮಗುವಿಗೆ ಬೇಕು ತಾಯಿ. ನಿಜವಾಗಿ ಬೇಕಾದುದನ್ನು ಬಿಟ್ಟು ಏನು ಕೊಟ್ಟರೆ ಎಲ್ಲಿಯ ಸಮಾಧಾನ? ಹಂಜರದ ಗಿಳಿಗೆ ಹಣ್ಣು ನೀರು ಪೂರೈಸಿದರೆ ಸರ್ವಸ್ವತಂತ್ರವಾಗಿ ಹಾರಾಡಿ ಇರಬಲ್ಲ ವನದ ವಿಸ್ತಾರವನ್ನು ಕೊಟ್ಟಂತಾಯ್ತೆ? ತುಂಬಿಯನ್ನು ಜೇನುತುಪ್ಪದ ಕೊಡದಲ್ಲಿಟ್ಟರೆ, ಹೂವಿನ ಅರಣ್ಯದ ನೆನಪು ಮುಚ್ಚಿ ಹೋದೀತೇ? ವಿಂಧ್ಯದ ಆನೆ ಪಟ್ಟದಾನೆ ಆದರೆ ಏನು ಬಂತು? ಲಿಂಗಾನುಭಾವವಿಲ್ಲದೆ, ಅನಾಯಾಸದನುವ ಕಾಣದೆ, ತನ್ನಲ್ಲಿ ತಾನಾಗದೆ, ತನಗೆ ಅನ್ಯವಾದ ತನ್ನಿಂದ ಭಿನ್ನವಾದುದೇನೂ ಇಲ್ಲದೆ, ಎಲ್ಲ ತಾನು ತಾನು ಎಲ್ಲವಾದ ನಿಜಗಂಭೀರದ ನೆಲೆಯನ್ನು ಕಾಣದೆ ಕೇಳದೆ, ನೋಡದೆ ನುಡಿಸದೆ, ಉಣ್ಣದೆ ಉಡದೆ, ಭೋಗಿಸದೆ ಆನಂದಿಸದೆ ಮನುಷ್ಯಪ್ರಾಣಿಗೆ, ಮನುಷ್ಯಸ್ಥಲದಲ್ಲಿ ಕೇವಲ

ಮನುಷ್ಯ, ಮನುಷ್ಯದೇಹಿ, ಮನುಷ್ಯಪ್ರಾಣಿ, ಮನುಷ್ಯಭಾವಿಯಾಗಿ ಇರುವುದು ಸುಖವಿಲ್ಲ. ಮಾನವನ ಹಸಿವು 'ಮಾನವ'ನಿಂದ ಹಿಂಗಿಲ್ಲ. ಲಿಂಗದಿಂದ ಹಿಂಗಬಲ್ಲ ಮಾನವನ ಆಪ್ಯಾಯನ, ಬರಿ ನೆಲ ನೀರು ಗಾಳಿ ಬೆಂಕಿಯಿಂದ, ಲಿಂಗವಿಲ್ಲದ ಬರಿ ಶಬ್ದ ಸ್ಪರ್ಶ ವಿಷಯ ಐಶ್ವರ್ಯ ಭೋಗ ಭಾಗ್ಯವಿಲಾಸದಿಂದ ಹೇಗೆ ಹರಿಯಬೇಕು?

ಮಾನವನ ನಿಜಸ್ಥಲ, ಸ್ವಸ್ಥಲ, ಪರಾತ್‌ಪರವಾದ ಮನಕ್ಕೆ ಘನವಾದ, ದೂರಕ್ಕೆ ದೂರ ಸಮೀಪಕ್ಕೆ ಸಮೀಪವಾದ, ಒಳಗಿನ ಒಳಗಿರುವ ಹೊರಗಿಗೆ ಹೊರಗಾಗಿ ಇರುವ ಲಿಂಗದೇವನನ್ನು ಮುಟ್ಟಿ ತಾನೂ ಲಿಂಗವಾಗಿ ಇರುವ ಅಪರೋಕ್ಷ ಅನುಭವವಿಲ್ಲದೆ ಮಾನವನ ಅರಿವು ಹರಿಯುತ್ತಿದೆ; ಅನಾದಿ ಕಾಲದಿಂದ ಅನಂತಕಾಲದವರೆಗೆ ಹರಿಯುತ್ತಿದೆ ತನ್ನ ನಿಜ ಮೂಲವಾದ ತಾಯಿಯ ಕಡೆಗೆ, ತಂದೆಯ ಕಡೆಗೆ. ಸಮುದ್ರವನ್ನು ಮುಟ್ಟದೆ ನದಿಗೆ ವಿಶ್ರಾಂತಿ ಇಲ್ಲ. ಹಣ್ಣು ಮುಟ್ಟದೆ ಬೀಜಕ್ಕೆ ವಿಶ್ರಾಂತಿ ಯಿಲ್ಲ. ಕೋಟಿ ಕಣ್ಣಿಂದ ನೋಡುತ್ತಿದೆ ಮಾನವನ ಅರಿವು. ಕೋಟಿ ಕೈಯಿಂದ ಹುಡುಕುತ್ತಿದೆ, ಕೋಟಿ ಬಾಯಿಂದ ತಿಂದು ನೋಡುತ್ತಿದೆ. ಕೋಟಿ ಬುದ್ಧಿಯಿಂದ ವಿಚಾರಿಸಿ ನೋಡುತ್ತಿದೆ, ಕೋಟಿ ಮನದಿಂದ ನೆನೆದು ನೋಡುತ್ತಿದೆ. ಕೋಟಿ ಹೃದಯದಿಂದ ಹಂಬಲಿಸಿ ನೋಡುತ್ತಿದೆ, ಕೋಟಿ ಭಾವದಿಂದ ಬಯಸಿ ನೋಡುತ್ತಿದೆ. ಯಾರನ್ನು ? ಏನನ್ನು ? ತನ್ನ ಮೂಲಸ್ಥಲವನ್ನು, ತನ್ನ ನಿಜದ ಘನಗಂಭೀರವನ್ನು. ಎಲ್ಲ ಮುಖದಲ್ಲಿ ನೋಡುತ್ತಿದೆ ಅರಿವು ತನ್ನ ಮೂಲಸ್ಥಲವನ್ನು; ಬೇಡುತ್ತಿದೆ ಸತ್ಯ ಶಿವ ಸುಂದರವನ್ನು, ನಿತ್ಯ ಪರಿಪೂರ್ಣವಾದ ಸಚ್ಚಿದಾನಂದವನ್ನು, ಮೇರೆಗಳೆದ ಅಪಾರ ಅನಂತವನ್ನು, ಕತ್ತಲೆ ಇಲ್ಲದ ಬೆಳಗನ್ನು, ಮೃತ್ಯು ಮುಟ್ಟದ ಅಮರ್ತ್ಯವನ್ನು, ಏನೂ ಇಲ್ಲದ ಬಯಲನ್ನು, ಎಲ್ಲ ತುಂಬಿರುವ ನಿರವಯಲನ್ನು.

ಕೂಸಿಗೆ ತಾಯಿ ಬೇಕು. ಆದರೆ ಅದರ ಅರಿವಿನಲ್ಲಿ ತಾನು ಯಾರ ಮಗು, ತನ್ನ ಹಡೆದ ತಾಯಿ ಯಾರು, ಆಕೆಯನ್ನು ತಾನು ಬೇಡುತ್ತಿರುವು ದೇಕೆ, ಆಕೆ ಇರುವುದೆಲ್ಲಿ ?—ಎಂಬ ಎಚ್ಚರ ಇಲ್ಲ. ಬೇಕು ಎಂದು ನೋಡು ವುದು, ಬೇಡುವುದು ಅರಿವಿನ ಮಬ್ಬು ಬೆಳಕಿನಲ್ಲಿ. ತನ್ನ ಸ್ವಸ್ಥಲವಾದ

ತಾಯಿದೇವನನ್ನು ಬೇಡಿ ನೋಡುತ್ತಿರುವ ಮನುಷ್ಯನ ಅರಿವು ಅರೆಗತ್ತಲೆಯ ಮಬ್ಬು. ಈ ಮಬ್ಬಿನಲ್ಲಿ ಯಾರು ನಾನು, ನನಗೆ ಕಾಣಿಸುವುದಿಲ್ಲ. ಯಾರು ಬೇಕು, ನನಗೆ ಕಾಣಿಸುವುದಿಲ್ಲ. ನನ್ನ ಇದಿರಿಗೆ ತೋರುವ ಇದೆಲ್ಲ ಜಗತ್ತು ಏನು, ನನಗೆ ಕಾಣಿಸುವುದಿಲ್ಲ. ಈ ಅರಿವುಗತ್ತಲೆಯಲ್ಲಿ ಕಂಡಷ್ಟು ನಾನು, ಕಂಡಷ್ಟು ನನ್ನ ಹೃದಯದ ಬಯಕೆ, ಕಂಡಷ್ಟು ಜಗತ್ತು—ಈ ಮನುಷ್ಯಸ್ಥಲದಲ್ಲಿಯೆ ನಾನು ವಾಸವಾಗಿ ಇರುವುದು. ಆದರೆ ಇದೇ ಸ್ಥಲದಲ್ಲಿ ನಾನು ನೆಲಸಿಬಿಟ್ಟರೆ, ಮತ್ತೆ ಎಚ್ಚರಿಸುತ್ತದೆ ಹೃದಯಗಂಭೀರದಿಂದ ನಾದ, ಅದೇ ನಿಲುಕದಾಳದಿಂದ ಬೆಳಗು, 'ಉತ್ತಿಷ್ಠತ ಜಾಗ್ರತ' ಎಂದು. ಕತ್ತಲೆಯ ಗವಿಯಲ್ಲಿ ಬೆಳಗಿನ ಕನಸು. ಗವಿಯೆಲ್ಲ ಕತ್ತಲೆ, ಹೊರಗೆಲ್ಲ ಬೆಳಗು. ಮನುಷ್ಯನ ಅರಿವಿನ ಗವಿಯಲ್ಲಿ ಕತ್ತಲೆ. ಗವಿಯಾಚೆ ಹರವಿ ಎಲ್ಲ ಬೆಳಗು, ತಾನು! ಗವಿಯಲ್ಲಿ ಮನುಷ್ಯ, ಹೊರಗೆ ಬಂದರೆ ಲಿಂಗ. ಗವಿಯಲ್ಲಿ ಜೀವಿ, ಹೊರಗೆ ಲಿಂಗಾನುಭಾವಿ. ಸೂಜಿಯ ಮೊನೆಯಷ್ಟು ತೆರಹಿಲ್ಲದೆ ನೀರಂಧ್ರವಾಗಿ, ಅವಿರಳ ಅಖಂಡವಾಗಿ ಬೆಳಗುವ ಸ್ವಯಂಜ್ಯೋತಿಯು, ತತ್ವ ಬ್ರಹ್ಮಾಂಡಗಳನ್ನು ರೂಪುಗೊಳಿಸಿ ತದ್ರೂಪವಾಗಿ ತನ್ಮಯವಾಗಿ ಮೀರಿ ಮೆರೆವ ಪರಂಜ್ಯೋತಿಯು ಪರಿಪೂರ್ಣ ಪರಮಪ್ರಕಾಶದಲ್ಲಿ ಅರಿವಿನ ಕತ್ತಲೆ ಮನೆಮಾಡಿಕೊಂಡು ಇರುವ ದೃಶ್ಯವನ್ನು ನೋಡಿ; ಧ್ಯಾನಿಸಿ ನಿದಿಧ್ಯಾಸಮಾಡಿ ನೋಡಿ:

> ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೋ?
> ಬೆಳಗೂ ಅದೆ, ಕತ್ತಲೆಯೂ ಅದೆ! ಇದೇನು ಚೋದ್ಯವೋ?
> ಒಂದಕ್ಕೊಂದಂಜದು. ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು
> ಬೆರಗಾದೆನು ಕಾಣಾ ಗುಹೇಶ್ವರಾ!

ವ.ಸಾ.ಸಂ.ಪು. ೭೯, ವ.೪

ಅರಿವು ಮರವೆಯ ಸಂಧಿಯಲ್ಲಿ ಸಿಕ್ಕಿರುವ ಮಾನವಸ್ಥಲದಲ್ಲಿ ನನಗೆ ಕಾಣುವ ನಾನು ಮಬ್ಬುಗತ್ತಲೆಯ ಚೋಟುಮೂರ್ತಿ. ನನಗೆ ಇದಿರಿಟ್ಟು ಕಾಣುವ ವಿಶ್ವಪ್ರಪಂಚವೆಲ್ಲ ಮೂರ್ತಿ ದೊಡ್ಡದು, ಆದರೆ ಅಳತೆಗೆಟ್ಟು ಕತ್ತಲೆ. ಚಂದ್ರ ಸೂರ್ಯ ನಕ್ಷತ್ರಮಂಡಲ ಮುಳುಗಿ ಇಲ್ಲಿ ಕತ್ತಲೆಯಾಗಿಲ್ಲ. ಅವೆಲ್ಲ ಇದ್ದು ಇಲ್ಲಿ ಕತ್ತಲೆಯಾಗಿದೆ. ಸೂರ್ಯಚಂದ್ರರ ಬೆಳಗು, ಕೋಟಿ

ನಕ್ಷತ್ರಗಳ ಬೆಳಗು ಈ ಕತ್ತಲೆಯನ್ನು ಭೇದಿಸಲಾರವು. 'ನ ತತ್ರ ಸೂರ್ಯೋ ಭಾತಿ ನಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯ ಮಗ್ನಿಃ' ಎಂಬ ಪುರಾತನ ದ್ರಷ್ಟಾರರ ಮಾತು ಇಲ್ಲಿ ತಾನೆ ಎದ್ದು ಬಂದು ನಿಲ್ಲುತ್ತದೆ. ಇಂಥ ಸೂರ್ಯ ಚಂದ್ರಮರ ಬೆಳಗನ್ನು ಕೊಂಡೊಯ್ದು ತೊವಲ ಕಣ್ಣಲ್ಲಿ ಕಂಡಿಹೆನೆಂದರೆ ಮತ್ತೆ ಮಹಾಘನವಾದ ಅಂಧಕಾರವೆ. ಪ್ರಭುದೇವರು ಹೇಳುವ ಅರಿವಿನ ಅತಿಸೂಕ್ಷ್ಮ ಬೆಳಗು ಚಿತ್ತಿನ ಅಖಂಡ ಪರಿಪೂರ್ಣವಾದ ಪರಂಜ್ಯೋತಿ ಪ್ರಕಾಶ, ಪರಬ್ರಹ್ಮದ ಸ್ವಯಂಭು ಪ್ರಕಾಶ. ಕಣ್ಣಿಗೆ ನೋಡುವ ಬೆಳಗಿನ ಕಳೆಯನ್ನು, ಅನಂತ ಸೂರ್ಯ ಚಂದ್ರರಿಗೆ ಬೆಳಕು ಮಾಡುವ ಶಕ್ತಿಯನ್ನು ಹಡೆದು ಹೊಮ್ಮಿಸಿ ಹೊತ್ತು ಹೊರೆವ ತವರುಬೆಳಗು ಈ 'ವಿಪರೀತದ ಬೆಳಗು.' ವಿಶ್ವಬ್ರಹ್ಮಾಂಡದ ಅನಂತನಾಮ, ಅನೇಕ ರೂಪ, ಅಸಂಖ್ಯ ಕ್ರಿಯೆಗಳು ಅಂಕುರಿಸಿ ಪಲ್ಲವಿಸಿ ಶಾಖೆದೋರಿ ಬ್ರಹ್ಮವೃಕ್ಷವಾಗಿ ನಿಂತಿರುವ ತಾಯಿನೆಲ ಇದೇ ಬೆಳಗು, ಇದೇ ಅರಿವಿನ ಬೆಳಗು, ಇದೇ ಅರಿವಿನ ಚೈತನ್ಯ. ಮನುಷ್ಯನ ದೇಹ ನಾಮ ರೂಪುಗೊಂಡು ಕ್ರಿಯಾವ್ಯವಹಾರವನ್ನು ಬಿತ್ತರಿಸಿದರೆ, ಇದೇ ಬೆಳಗು ನೆಲದ ಶಕ್ತಿಯ ಮೇಲೆ. ಪ್ರಾಣ ಪ್ರಾಣಿಸಿದರೆ, ಪ್ರಾಣದ ನಾಮ ರೂಪ ಕ್ರಿಯೆಯಾಗಿ, ಪ್ರಾಣದಲ್ಲಿ ಪ್ರಾಣಿಸುವ ಚೈತನ್ಯವನ್ನು ದೀಪ್ತಮಾಡಿ ಕೊಡುತ್ತಿರುವ ಪ್ರಾಣಲಿಂಗ, ವಿಶ್ವಪ್ರಾಣವಾದ ಚೈತನ್ಯಲಿಂಗ ಇದೇ ಚಿದ್ ಬೆಳಗು, ಇದೇ ಚಿಚ್ಚೈತನ್ಯ. ಬುದ್ಧಿ, ಬುದ್ಧಿಯ ತರ್ಕ ವಿಚಾರ, ಭಾವ, ಭಾವಿಸುವ ಭಾವನೆಯ ಸರ್ವಪ್ರಪಂಚ, ಮೂಗು, ಮೂಗಿನ ವಿಶ್ವವಾಸನೆಯ ಅನುಭವ ಪ್ರಪಂಚ, ಕಿವಿ, ಕಿವಿಯ ಕೋಟಿ ಅನುಭವ, ನಾಲಗೆ, ನಾಲಗೆಯ ಅನಂತ ರುಚಿಯ ಅನುಭವ, ತೊವಲು, ತೊವಲು ಮುಟ್ಟಿ ಅನುಭವಿಸುವ ಸ್ಪರ್ಶಪ್ರಪಂಚ, ಮನುಷ್ಯನಿರಲಿ ಬೇರೆ ಬೇರೆ ಪಶುಪ್ರಾಣಿ ಸಸ್ಯಾದಿಗಳಿರಲಿ, ಯಾವುದಕ್ಕೆ ಕಣ್ಣು ತೊಗಲು ಪ್ರಾಣ ಬುದ್ಧಿ ಭಾವ ಮುಂತಾದ ಯಾವುದೇ ಮುಖದಿಂದ ಅನುಭವಕ್ಕೆ ಬರುವ ಎಲ್ಲರ ಎಲ್ಲ ಪ್ರಪಂಚ ಮೂಡಿ ಆಡಿ ಮುಳುಗುವ ಮೂಲ ಮಹಾಪರಿಪೂರ್ಣ ಸಮುದ್ರ ಇದೇ ಅರಿವು-ಚೈತನ್ಯದ ಮಹಾಬೆಳಗು. ವಿಶ್ವಬ್ರಹ್ಮಾಂಡಕೋಟಿಯನ್ನು ಹೆತ್ತು ಹೊತ್ತು ಹೊರೆದು ಹೊಟ್ಟೆಯೊಳಗೆ ಇಟ್ಟುಕೊಂಡಿರುವ 'ವಿಪರೀತದ ಬೆಳಗು'

ಎಲ್ಲೆಲ್ಲಿ ಮಹಾಘನವಾಗಿ ತುಂಬಿ ತುಂಬಿ ಮಯವಾಗಿದ್ದರೂ 'ಅಪರಿಮಿತದ ಕತ್ತಲೆ'ಯು ಗೂಡು ಮಾಡಿಕೊಂಡು, ಕತ್ತಲೆಯ ಗವಿಯಲ್ಲಿ ನಾಮ ರೂಪ ಕ್ರಿಯೆ ಆಗುತ್ತಿದೆ ಅರಿವು ಮರವೆಯ ಅಜ್ಞಾನ–ಮಾನವ. ಕತ್ತಲೆ ಬೆಳಗಿಗೆ ಅಂಜಿ ಓಡಿಹೋಗದೆ, ಬೆಳಗು ಕತ್ತಲೆಗೆ ಭಯಪಟ್ಟು ಕರ್ರಗಾಗದೆ, ಆನೆ ಸಿಂಹದಂತೆ ಎರಡೂ ಮೈತ್ರಿಯಲ್ಲಿ ಬಾಳುವೆ ನಡೆಸಿರುವದು ವಿಚಿತ್ರ, ವಿಶ್ವದಾಚೆಯ ಅದ್ಭುತ ವಿಚಿತ್ರ!

ಅಣು ಮೊದಲು ಆತ್ಮ ಕಡೆಯಾಗಿ, ತೃಣ ಮೊದಲು ತಾರಾಗರ್ಭ ಕಡೆಯಾಗಿ ಹುಟ್ಟಿ ಹೊಂದುವ ಪಿಂಡ ಬ್ರಹ್ಮಾಂಡವೆಲ್ಲ ತನ್ನ ನಿಜದ ಎಚ್ಚರ ತನಗಿಲ್ಲದೆ, ತನ್ನ ಮೂಲ ಉಗಮಸ್ಥಾನದ ಅರಿವಿಲ್ಲದೆ ಆಡುತ್ತಿದೆ ಕತ್ತಲೆಯಲ್ಲಿ. ಈ ಕತ್ತಲೆ ಬೆಳಗು ಹಡೆದ ಕೂಸೇ. ತನ್ನ ಬೆಳಗನ್ನು ತಾನೆ ಮಲಗಿಸಿಕೊಂಡು, ತನ್ನ ಬೆಳಗಿಗೆ ತಾನೆ ಮರೆಯಾಗಿ, ತನಗೆ ಬೆಳಗು–ತಾನೆ ಮರವೆಯಾಗಿ ಆಡುತ್ತಿರುವ ಕತ್ತಲೆಯ ಆನೆಗೆ, ಮೂಲಾಹಂಕಾರಕ್ಕೆ ತನ್ನ ಕತ್ತಲೆಯೆ ತನಗೆ ನಿಜವಾದ ಬೆಳಗಾಗಿ, ತನ್ನೊಳಗೆ ಉರಿವ ಬೆಳಗು–ಉರಿಲಿಂಗ–ಕತ್ತಲೆಯಾಗಿ ಎಲ್ಲ ಪಲ್ಲಟವಾಗಿ ಬಿಟ್ಟಿದೆ. ಈ ಅಭೇದ್ಯವಾದ ಕತ್ತಲೆಯ ಕೋಟೆಯನ್ನು ಭೇದಿಸಿ 'ಉರಿಲಿಂಗ'ವನ್ನು ನೋಡಬಲ್ಲಗರುವರಾರು?

> ಬೀಜದೊಳಗಣ ವೃಕ್ಷ ಅಂಕುರ ಪಲ್ಲವ ಪತ್ರ ಕುಸುಮ ಫಲ
> ಮೈದೋರದಂತೆ, ಕಾಷ್ಠದೊಳಗಡಗಿ ಉಷ್ಣದೋರದಂತೆ,
> ಪತಂಗನ ಕರದೊಳಗಡಗಿಪ್ಪ ಮರೀಚಿ ಪ್ರವಹಿಸದಂತೆ,
> ಬಿಂದುವಿನೊಳಗಡಗಿಪ್ಪ ನಾದ ದನಿದೋರದಂತೆ
> ಪಿಂಡ ಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರ
> ಲಿಂಗವನಾರು ಭೇದಿಸಬಾರದಯ್ಯ.

ವ.ಸಾ.ಸಂ.ಪು. ೩೨, ವ. ೧೦

ಪಿಂಡಾಂಡವೆ ಇರಲಿ ಬ್ರಹ್ಮಾಂಡವೆ ಇರಲಿ, ಅಲ್ಲೆಲ್ಲ ಕೂಡಿ 'ಇರುವ' ಸೋಮೇಶ್ವರಲಿಂಗ, ಪ್ರಭುದೇವರು ಹೇಳುವ 'ವಿಪರೀತದ' ಸ್ವಯಂಭುವಾದ ಬೆಳಗೇ. ಎಲ್ಲ ಪಿಂಡಗಳಿಗೆ ಎಲ್ಲ ತತ್ತ್ವ ಎಲ್ಲ ಬ್ರಹ್ಮಾಂಡಗಳಿಗೆ ತಾನೆ ಉಗಮಸ್ಥಾನವಾಗಿ ತಾನೆ ಲೀಲಾಭೂಮಿಯಾಗಿ ತಾನೆ ಲಯಸ್ಥಲ

ವಾಗಿ, ತನಗೆ ಬೇರೆ ತಂದೆ ತಾಯಿಯಿಲ್ಲದೆ ಸ್ವಯಂಭುವಾಗಿ ನಿಂದಿರುವ ಸಂಗತಿಯನ್ನು ಕಂಡು ಪ್ರಭುದೇವರು ಹೇಳುತ್ತಾರೆ ಕೇಳಿ:

ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೆ ಹುಟ್ಟಿದೆಯಲ್ಲಾ!
ನಿನ್ನ ಪರಿಣಾಮವೆ ನಿನಗೆ ಪ್ರಾಣತೃಪ್ತಿಯಾಗಿರ್ದೆಯಲ್ಲಾ!
ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೆ ಬೆಳಗುತ್ತಿರ್ದೆಯಲ್ಲಾ!
ನಿನ್ನ ಚಾರಿತ್ರ ನಿನಗೆ ಸಹಜ ಗೊಹೇಶ್ವರಾ.

ವ.ಸಾ.ಸಂ.ಪು. ೨೩, ವ. ೮೧

'ನಿನಗೆ ನೀನೆ ಬೆಳಗುತ್ತಿರ್ದ' ಸ್ವಯಂಭುಲಿಂಗ, ತನ್ನ ತೃಪ್ತಿಗೆ ನಿಜಾನಂದವೆ ಅಮೃತಾಹಾರವಾಗಿರುವ ಸ್ವಯಂತೃಪ್ತಿಲಿಂಗ. ಸ್ವಯಂಜ್ಯೋತಿಯಾಗಿ ಬೆಳಗುವುದೆ ತನಗೆ ಸಹಜ ಚರಿತ್ರವಾಗಿರುವ ಗೊಹೇಶ್ವರಲಿಂಗದ ಅನುಭಾವ, ಬಸವಣ್ಣನವರು ಹೇಳುವ 'ನಿಮ್ಮ ಕಂಡ' ಲಿಂಗಾನುಭಾವ. ಪ್ರಭುದೇವರ 'ಅನಾಯಾಸದ ಅನು', 'ಎಂತಿರ್ದುದು ಅಂತೆ ಅದೆ ಚಿಂತೆಯಿಲ್ಲದನುಭಾವ ಗೊಹೇಶ್ವರ'–ಅದೇ ಲಿಂಗಾನುಭಾವವೆಂದು ಹೇಳಿದರೂ ಪ್ರಭುದೇವರ ಮಾತು ಇನ್ನೂ ಮುಂದಕ್ಕೆ ಕರೆದುಕೊಂಡು ಹೋಗುವಂತಿದೆ. ಹೋದಂತೆ ಹೋದಂತೆ ಸ್ವಾನುಭಾವದ ವಿಸ್ತಾರ ಬೆಳಗಿನಾಚೆಯು ಹಬ್ಬಿ ಹರವಿಕೊಂಡಂತಿದೆ. ಈ ಹರವಿನ ನಿಸ್ಸೀಮವನ್ನು, ನಿರ್ನಾಮವನ್ನು, ಸುಜ್ಞಾನೋದಯವಾಗಿ ಎಚ್ಚತ್ತ ಮನುಷ್ಯ ತನ್ನ ಸ್ವರೂಪವನ್ನು ತಾನು ಕಂಡು ನುಡಿವ 'ತಾನು–ದೇವ'ನ ನಿಲವನ್ನು, ಇದೋ ಇಲ್ಲಿ ಪ್ರಭುದೇವರ ಮಾತಿನೊಳಗೆ ಇಣುಕಿ ನೋಡಿ:

೧ ನಾ ದೇವನಲ್ಲದೆ ನೀ ದೇವನೆ? ನೀ ದೇವನಾದರೆ ಎನ್ನನೇಕೆ ಸಲಹೆ?
ಆರೈದು ಒಂದು ಕುಡಿತೆ ಉದಕವನೆರೆವೆ. ಹಸಿದಾಗ ಒಂದು ತುತ್ತು
ಓಗರವನಿಕ್ಕುವೆ. ನಾ ದೇವ ಕಾಣಾ ಗೊಹೇಶ್ವರಾ.

ಅದೇ. ಪು. ೧೭, ವ. ೫೮

೨ ಭೂಮಿಯೊಳಗಿಲ್ಲ, ಆಕಾಶದೊಳಗಿಲ್ಲ, ಚತುರ್ದಶ ಭುವನದೊಳಗಿಲ್ಲ.
ಏನೆಂದರಿಯರು, ಎಂತೆಂದರಿಯರು. ಹೇಳಿರಯ್ಯ!
ಕೃತಯುಗದಂದಿನ ಮಾತು ಬೇಡ.
ಗೊಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲ.

ಅದೇ. ಪು. ೨೨, ವ. ೭೭

೩ ಗಂಗಾದೇವಿ ಮುಂಡೆಯಾದಳು, ಗೌರೀದೇವಿ ಓಲೆಯ ಕಳೆದಳು.
ಚಂದ್ರ ಸೂರ್ಯರಿಬ್ಬರೂ ನೀರಿಳಿದರಲ್ಲಾ ! ವಾಯುದೇವ
ವಿಮಾನವ ಹೊತ್ತ, ವಾಸುದೇವ ತಲೆಗೊಳ್ಳಿಯುನಿರಿದ.
ಅಲ್ಲಿಂದತ್ತ ಗೊಹೇಶ್ವರ ಸತ್ತನೆಂಬ ಸುದ್ದಿ !

ವ.ಸಾ.ಸಂ. ಪು. ೩೯–೪೦, ವ. ೪೦

೪ ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ,
ಅಡವಿಯುಲೊಬ್ಬ ದೇವ, ಮಡಿಲಲೊಬ್ಬ ದೇವ.
ನೀರು ನೀರ ಕೂಡಿ, ಬಯಲು ಬಯಲ ಕೂಡಿ,
ನರನೆಂಬ ದೇವ ತಾ ನಿರಾಳವೋ ! ಲಿಂಗವೆಂಬುದೊಂದು
ಅನಂತದ ಹೆಸರು. ಗೊಹೇಶ್ವರನೆಂಬುದದೇನೊ ?

ಅದೇ. ಪು. ೪೦, ವ. ೪೧

ಸ್ವಯಂಜ್ಯೋತಿಲಿಂಗದ ಪ್ರಜ್ವಲವನ್ನು ಬಗಿದು, ವಿಶ್ವಬ್ರಹ್ಮಾಂಡದ ಒಳ ಹೊರಗನ್ನು ತೋರಿ ಮೀರಿ ಮೆರೆವ ಗೊಹೇಶ್ವರಲಿಂಗದ ಸೀಮೆಯನ್ನೂ ಕಳೆದು ಅತ್ತಾಚೆ ನಡೆದು, ನರನೆಂಬ ದೇವ ಹೆಸರಿಲ್ಲದ ನಿರಾಳವಾಗಿ ಇರಬಲ್ಲ, ನಿಜ ನಿರಾಳದಿರವನ್ನು ಅನುಭವಿಸಬಲ್ಲ–ಎಂಬ ಸ್ವಾನುಭಾವದ 'ನರದೇವ'ನ ಸುದ್ದಿಯನ್ನು ನಿರಾಳಸ್ಥಳದಿಂದ ಕಳಿಸುತ್ತಾರೆ ಪ್ರಭು–ದೇವ. ಸ್ವ–ಅನುಭಾವ, ಭೂಮಿ ಆಕಾಶ ಚತುರ್ದಶ ಭುವನದಾಚೆ, ಬ್ರಹ್ಮ ವಿಷ್ಣು ರುದ್ರ ಗಂಗಾಧರ ಗೌರೀವಲ್ಲಭ ಗೊಹೇಶ್ವರಲಿಂಗದತ್ತಾಚೆ ಹೋಗಿ, ತನ್ನ ತಾನಿರುವ ಇರವನ್ನು ಅನುಭವಿಸಿದೆ. ತಾನು ಇದ್ದ ಇರವು ಸ್ವಾನುಭಾವ. ಇರವು ಅನುಭವ, ಅನುಭವ ಇರವು. ನೀರು ನೀರಲ್ಲಿ ಕೂಡಿ, ಬಯಲು ಬಯಲಲ್ಲಿ ಕೂಡಿದರೆ ನರನೆಂಬ ದೇವ ತಾನೆ ನಿರಾಳ. ನೀರ ಬೊಂಬೆ, ಜಲಬುದ್ಬುದದಂತಿರುವ ಮನುಷ್ಯದೇಹ, ಮಾನವಪಿಂಡ, ಚಿಜ್ಜಲದಲ್ಲಿ ಚಿತ್‌ಸಮುದ್ರದಲ್ಲಿ ಕೂಡಿ ಲಯವಾಗಿ ಸಮರಸವಾದರೆ, ಬಯಲು, ಅರಿವಿನ ಬಯಲಾಗಿರುವ ಆತ್ಮ, ಜೀವಾತ್ಮ ಚಿದ್‌ಬಯಲಲ್ಲಿ, ಅರಿವಿನ ನಿರವಯಲಲ್ಲಿ ಬಯಲಾಗಿ ನಿಂತರೆ—ಅದೇ ನರದೇವ, ಆ ನಿರಾಳದಿರವಿನ ಅನುಭವದಲ್ಲಿರುವ ಆ ನರನೇ ದೇವ; ಬೇರೆ ಗೊಹೇಶ್ವರನೆಂಬ ದೇವನಿಲ್ಲ;

ಬೇರೆ ಮತ್ತಾವ ದೇವನೂ ಇಲ್ಲ. ಬೇರೆ ಇದ್ದರೆ ನಿರಾಳ ನಿರಾಳ ಅಲ್ಲ, ದೇವ ದೇವನಲ್ಲ.

ಹೆಸರಿಲ್ಲದ ಈ ನಿರಾಳದಿರವಿಗೆ ಹೆಸರು ಕೊಟ್ಟರೆ ಅದು ನಿರಾಳಲಿಂಗ. ಇಂಥ ಲಿಂಗಾನುಭಾವದಿಂದ ನರದೇವನ ಅರಿವಿಗೆ ತೃಪ್ತಿಯಾಗಿದೆ. ಹಡೆದ ತಾಯಿಯನ್ನು ಕಣ್ಣು ಮುಟ್ಟ ಕಂಡ ಮಗು ತೃಪ್ತಿ ಹೊಂದುವಂತೆ, ಅರಿವಿಗೆ ತನ್ನ ತಾಯಿ ಚಿನ್ಮಯಿ ಚಿನ್‌ಮಾತೆ ಚಿತ್‌ಪ್ರಕಾಶ ಸ್ವಯಂಭುವಾಗಿ ತನ್ನೊಳಗಿಂದಲೆ ಒಡೆಮೂಡಿದರೆ ಆಗ ನಿಜವಾದ ತೃಪ್ತಿ.

೨

ಲಿಂಗದ ಅನುಭಾವದಿಂದ, ಅಂದರೆ ತನ್ನ ನಿಜಸ್ಥಲದ ಸಂಪಾದನೆಯಿಂದ ಮಾನವನ ಅರಿವಿಗೆ ತೃಪ್ತಿಯಾದರೆ ಇಲ್ಲಿಗೆ ಮಾನವಜೀವನದ ಮಹಾಸಮಸ್ಯೆ ಬಗೆಹರಿದಂತಾಯ್ತೆ? ಬಗೆಹರಿಯಿತೆಂದು ತಿಳಿದುಕೊಂಡ ವೇತ್ತಾರರಿದ್ದಾರೆ. ಪಂಚಭೂತ ದೇಹ ಇಂದ್ರಿಯ ಕರಣಾದಿಗಳಿಂದ ಬಂಧನ ಪಡೆದಿರುವ ಅರಿವನ್ನು ಜ್ಞಾನಮಾರ್ಗದಿಂದ ಮುಕ್ತಮಾಡಿಕೊಂಡು, ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣವಾದ ಪರಬ್ರಹ್ಮವೇ ಸ್ವಸ್ವರೂಪವೆಂದು ಅರಿದು ಅನುಭವಿಸಿ, ಅಂಥ ಇರವನ್ನು ಇದ್ದು ಆನಂದಿಸಿ, 'ಜ್ಞಾನ ಕೈವಲ್ಯ'ವೆ ಜೀವನದ ಪರಮಪುರುಷಾರ್ಥವೆಂದು ಸಾರಿದ ಮಹಾಜ್ಞಾನಿಗಳಿದ್ದಾರೆ. ದ್ವೈತಪ್ರಪಂಚವನ್ನು ಅದ್ವೈತಜ್ಞಾನದಿಂದ ಭೇದಿಸಿ, 'ಸರ್ವಂ ಖಲ್ವಿದಂ ಬ್ರಹ್ಮ', 'ಏಕಮೇವಾದ್ವಿತೀಯಂ ಬ್ರಹ್ಮ', 'ನೇಹ ನಾನಾಸ್ತಿಕಿಂಚನ'— ಎಂದು ಒಂದನ್ನು ಕಂಡವರಿದ್ದಾರೆ. ಎರಡಾಗಿ ತೋರುವ, ಹಲವಾಗಿ ಇರುವ, ಅನಂತವಾಗಿ ವರ್ತಿಸುವ ವಿಶ್ವಪ್ರಪಂಚದೊಡನೆ ತನ್ನ ದೇಹ ಪ್ರಾಣಾದಿಗಳನ್ನೂ ಸೇರಿಸಿ, ಇವೆಲ್ಲ ತತ್ತ್ವಗಳ ಬ್ರಹ್ಮಾಂಡಗಳ ತಳಕ್ಕಿಳಿದು ಎಲ್ಲಕ್ಕೂ ಮೂಲ ಒಂದು ವಸ್ತು, ಅದೇ ಪರವಸ್ತು, ಅದು ಪರಾತ್ಪರ ಅದೇ ಪರಬ್ರಹ್ಮ; ಅದೇ 'ಯಸ್ಮಾದ್ ವಿಶ್ವಮುದೇತಿ ಯತ್ರ ರಮತೇ ಯಸ್ಮಿನ್ ಪುನರ್ಲೀಯತೇ,' 'ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ ಪ್ರಯಂತ್ಯಭಿಸಂವಿಶಂತಿ' ಎಂದೆನಿಸಿಕೊಳ್ಳುವ ಜಗತ್ ಪ್ರಪಂಚದ ಜನ್ಮಭೂಮಿ ಸ್ಥಿತಿಭೂಮಿ ಲಯಭೂಮಿ, ಅದೇ ವಿಶ್ವ

ಪ್ರಪಂಚದ ಲೀಲಾಂಗಣವೆಂದು ಪರಬ್ರಹ್ಮದ ಬ್ರಹ್ಮಲೀಲೆಯನ್ನು ಕಂಡು, ತಾವೂ ಬ್ರಹ್ಮಸ್ವರೂಪರಾಗಿ, ಪರಬ್ರಹ್ಮದ ಲೀಲೆಯೊಡನೆ ಲೀಲೆಯಾಡಿದವರಿದ್ದಾರೆ. ಅದ್ವೈತಜ್ಞಾನದ ಲೀಲೆಯಲ್ಲಿ ದ್ವೈತವನ್ನು ಅಜ್ಞಾನ ಮಾಯೆ ಕತ್ತಲೆ ಹೇಯ ತ್ಯಾಜ್ಯವೆಂದು ತಿಳಿದು ನಿರಾಕರಿಸಿ, ಅದ್ವೈತಜ್ಞಾನದ ಅವಶ್ಯಫಲವೆಂದು ಪ್ರಪಂಚ 'ಸಂನ್ಯಾಸ'ವನ್ನು ಸ್ವೀಕರಿಸಿದವರಿದ್ದಾರೆ.

ಅರಿವನ್ನು ಪರಸ್ಥಲದಲ್ಲಿರಿಸಿಕೊಂಡು, ಅರಿವನ್ನು ಧರಿಸಿಕೊಂಡಿರುವ ಮನ ಬುದ್ಧಿ ಪ್ರಾಣ ದೇಹಾದಿಗಳನ್ನು, ಇವನ್ನೆಲ್ಲ ಹೆತ್ತು ಹೊತ್ತು ಹೊರೆದು ಕೊಂಡಿರುವ ವಿಷಯಪ್ರಪಂಚವನ್ನು ಮಿಥ್ಯೆ ಎಂದು, ಮಾಯೆ ಎಂದು, ಹೇಯ ಎಂದು ತೆಗೆದು ಒಗೆವ ಭರದಲ್ಲಿರುವ ವೈರಾಗ್ಯದ ಅರ್ಥವೇನು? ಸಂನ್ಯಾಸದ ಜಾಣತನವೇನು? ಬ್ರಹ್ಮ ಮೊದಲು ಇರುವೆ ಕಡೆಯಾಗಿ, ನಕ್ಷತ್ರ ಮೊದಲು ಪರಮಾಣು ಕಡೆಯಾಗಿ ಇರುವ ಅಥವಾ ತೋರುವ ಹಲವು ವಿಲಾಸವನ್ನು ಕಂಡು, ಒಳಗೆ ಹುದುಗಿ ಇರುವ ಒಂದರ ಮಹಾ ವೈಭವವನ್ನು ಕಾಣದೆ, ಇಲ್ಲವೆಂದು ಅಲ್ಲಗಳೆವ 'ಅವಿದ್ಯೆ'ಯನ್ನು, ಮತ್ತು ಇರುವ ಒಂದನ್ನು ಕಂಡು, ತೋರುವ ಹಲವನ್ನು ಮಂಜಿನ ನೆಳಲೆಂದು ತೂರಿ ಒಗೆವ 'ವಿದ್ಯೆ'ಯನ್ನು ವಿವೇಕಿಸಿ ನೋಡಿ, ತೂಕವನ್ನು ಸರಿಗೊಳಿಸಿ, 'ಪೂರ್ಣಮದಃ ಪೂರ್ಣಮಿದಂ' ಎಂದು ಪ್ರಮಾಣಿಸಿ ಕಂಡ ಉಪನಿಷತ್ಕಾರರ ಫಲಶ್ರುತಿಯ ಮಂತ್ರ ಇಲ್ಲಿ ಗಮನಾರ್ಹ:

ಅಂಧಂ ತಮಃ ಪ್ರವಿಶಂತಿ ಯೇsವಿದ್ಯಾಮುಪಾಸತೇ
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ

ಈಶಾವಾಸ್ಯೋಪನಿಷತ್, ಮಂತ್ರ ೯

ಕತ್ತಲೆಯನ್ನು ಕತ್ತಲೆಯ ಪಾಡಿಗೆ ಬಿಟ್ಟು, ಸೂರ್ಯ ಬೆಳಗಿನ ನಾಡಿನಲ್ಲೇ ಬೆಳಗುತ್ತ ಕುಳಿತರೆ ಸೂರ್ಯನ ಸೂರತನ, ಶೂರತನವೇನು? ಮಾನವನಲ್ಲಿ ಅರಿವಿನ ಅಂಗ ಒಂದು ತೃಪ್ತಿಯಾದರೆ, ಆತನ ಜೀವಾತ್ಮ ಭಾವ ಬುದ್ಧಿ ಮನ ಪ್ರಾಣ ಜ್ಞಾನೇಂದ್ರಿಯ ಕರ್ಮೇಂದ್ರಿಯ ದೇಹದ ಗತಿ ಏನು? ಕಸಕಡ್ಡಿಗಿಂತ ಹೇಯವೆಂದು, ತ್ಯಾಜ್ಯವೆಂದು, ಹೊಲಸು ಹೊಲೆಯೆಂದು, ಭಂಗುರ ನಶ್ವರವೆಂದು, ಹೊಟ್ಟು ತವುಡೆಂದು ಗಾಳಿಗೆ ತೂರಿಸಿಕೊಂಡು, ಹಾರಿ ಕತ್ತಲೆಯಲ್ಲಿ ಶಾಶ್ವತವಾಗಿ ಮರೆಯಾಗಲು ಹುಟ್ಟಿಬಂದವೇ ಅವು ನೆಲದ ಮೇಲೆ?

ತನ್ನ ದೇಹ, ತನ್ನ ಪ್ರಾಣ, ತನ್ನ ಬುದ್ಧಿ, ತನ್ನ ತಾನು ಈ ಕತ್ತಲೆಗೆ ತುತ್ತಾಗಿ ಹೋಗುತ್ತಿದ್ದರೆ ಉಳಿದವರ ಪಾಡೇನು? ಅನಂತ ಆಕಾಶ ಅನಂತ ಲೋಕ, ಕೋಟಿ ಕೋಟಿ ಮಹಾಕೋಟಿ ನಕ್ಷತ್ರ ಸೂರ್ಯ ಚಂದ್ರ ಗ್ರಹ, ನೆಲ ನೀರು ಗಾಳಿ, ಗಿಡ ಮರ ಪರ್ವತ ಸಮುದ್ರ, ಪಶು ಪಕ್ಷಿ ಹೆಣ್ಣು ಗಂಡು, ಹೆಂಡತಿ ಮಕ್ಕಳು ಮನೆ ಮಾರು, ಬದುಕು ಬಾಳುವೆ ವ್ಯಾಪಾರ ಒಕ್ಕಲು ತನ, ಅಧಿಕಾರ ವಿದ್ಯೆ ವಾರ್ತೆ ಕೀರ್ತಿ, ಊಟ ನಿದ್ರೆ ವಿಷಯ ಸುಖ, ಸಮಯ ಸಮಾಜ, ವಿಜ್ಞಾನ ಅಜ್ಞಾನ ಧರ್ಮ ನೀತಿ, ಅಹಿಂಸೆ ಪ್ರೇಮ ಉಪಕಾರ ಸಹಕಾರ, ವಿಶ್ವಶಾಂತಿ ಮಾನವಪ್ರಗತಿ—ಇವೆಲ್ಲ, ಇನ್ನೂ ನೆಲದ ಮೇಲಿರುವ ಮಾನವನ ತನ್ನ ಪ್ರಪಂಚ, ತನ್ನ ಪ್ರಪಂಚವನ್ನು ಸುತ್ತಿದ ವಿಶ್ವಪ್ರಪಂಚವೆಲ್ಲ ಏನು ಅರ್ಥ? ದೇಹ ಪ್ರಾಣಾದಿಗಳ ಪೀಠಿಕೆಯ ಮೇಲೆ ನಾನು-ದೇವ ಅಥವಾ ತಾನು-ದೇವ ಇದ್ದರೆ, ಎಲ್ಲ ಜಗತ್ತು ಇದ್ದಂತೆ. ಅರಿವಿನ ಕರಂಡಕವಾದ ದೇಹಾದಿಗಳನ್ನು ಒಗೆದುಬಿಟ್ಟರೆ, ದೇವನಿಗೆ ಆಧಾರವೆಲ್ಲಿದೆ? ಹಣ್ಣು-ರಸ ಇದ್ದರೆ ರುಚಿ. ರತ್ನ ಇದ್ದರೆ ಕಾಂತಿ.

ಹಣ್ಣು ರಸವೇ ಇಲ್ಲದಿದ್ದರೆ? ರತ್ನದ ಶಿಲೆಯನ್ನು ಕಳೆದು, ಕಾಂತಿಯನ್ನು ಬೇರೆ ಇಡಲೆಲ್ಲಿ? ಮತ್ತೆ, 'ಸರ್ವಂ ಖಲ್ವಿದಂ ಬ್ರಹ್ಮ'ವಾದರೆ, 'ಸರ್ವಂ ಲಿಂಗಮಯಂ ಜಗತ್' ಆದರೆ, ಅರಿವಿನ ಹೆಚ್ಚೇನು? ಶರೀರ ಪ್ರಾಣಾದಿ ನಿಖಿಲಪ್ರಪಂಚದ ಕುಂದೇನು?

ದೇಹ ಮೊದಲು ಅರಿವು ಕಡೆಯಾಗಿರುವ ಸರ್ವಾಂಗಮಾನವ ಲಿಂಗವನ್ನು ಅನುಭವಿಸಿ, ಎಲ್ಲ ಅಂಗದ ಆಪ್ಯಾಯನವೂ ತೃಪ್ತಿವಡೆಯಬೇಕೆಂಬುದು ವಚನಕಾರರಾದ ಶರಣರ ಸನ್ಮತ. ಮಾನವನ ದೇಹಾಂಗ ಪ್ರಾಣಾಂಗ ಇಂದ್ರಿಯಾಂಗ ಕರಣಾಂಗ ಭಾವಾಂಗವೆಲ್ಲ ಚಿದಂಗವಾಗಿ, ಚಿತ್‌ಪ್ರಭಾಂಗವಾಗಿ, ನಿರಾಳಲಿಂಗಕ್ಕೆ ಬೆಳಗಿನ ಸೆಜ್ಜೆಯಾಗಿ, ಒಳಗೆ ದೀಪವಿದ್ದ ಸ್ಫಟಿಕದ ಘಟದಂತೆ ಒಳಹೊರಗೆನ್ನದೆ ಬೆಳಗುವ ದೀವ್ಯಘಟವಾಗಿ, ದಿವ್ಯ ಪರಿವರ್ತನೆ ಸರ್ವಾಂಗದಲ್ಲಿ ಪರಿಣಮಿಸಬೇಕೆಂಬುದೇ ಶರಣರ ಅನುಭವ ವಿಚಾರ. ಹೀಗಲ್ಲದೆ ಅರಿವನ್ನಷ್ಟೇ ಜ್ಯೋತಿಗೆ ಮುಟ್ಟಿಸಿ, ಸತ್ತಿಗೆ ಕಳಿಸಿ, ಅಮೃತಕ್ಕೆ ನಿಲುಕಿಸಿದರೆ, 'ಅಸತೋ ಮಾ ಸದ್ ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ'—ಎಂಬ

ಮಾನವನ ದಿವ್ಯಾಪೇಕ್ಷೆಗೆ ಬಂದ ತೃಪ್ತಿ ಎಷ್ಟು? ಆಗುವ ಅರ್ಥವೇನು ? ಇನ್ನೂ ವಿಶೇಷವೆಂದರೆ ಮಾನವ ತನ್ನ ಸರ್ವಾಂಗದಲ್ಲಿ ಲಿಂಗವನ್ನು ಕಂಡು ಲಿಂಗವನ್ನು ಅನುಭವಿಸಿ ಲಿಂಗಮುಖವಾಗಿ ಸಾಗಿರುವಂತೆ, ತನ್ನ ಸುತ್ತಿ ಮುತ್ತಿರುವ ಬಾಹ್ಯಪ್ರಪಂಚವನ್ನೂ ಲಿಂಗಕ್ಕೆ ಮುಖವಾಗಿ ಕೊಂಡೊಯ್ಯ ಬೇಕೆಂಬುದು ಶರಣರ ಲಿಂಗಮಾರ್ಗದ ಮಹಾಗರ್ಭಿತಾರ್ಥ.

ಮೊದಲು ದೇಹ ಪ್ರಾಣಾದಿಗಳ ವಿಚಾರ. ಮನುಷ್ಯನ ಸರ್ವಾಂಗಕ್ಕೆ ಸಂಸ್ಕಾರ ಮಾಡಿ, ಉಣಿಸಿ ಉಡಿಸಿ ತೊಡಿಸಿ ಬೆಳೆಸಿ ಲಿಂಗದೆತ್ತರ ಮಾಡು ಚುವ ದೃಷ್ಟವನ್ನು ನೋಡಿ:

> ಕೇಳಿರೇ ಕೇಳಿರವ್ವಾ ಕೆಳದಿಯರೆಲ್ಲ. ಮನಕ್ಕೆ ಮನೋಹರವಾದ,
> ಕಂಗಳಿಗೆ ಮಂಗಳವಾದ, ಶೃಂಗಾರದ ಸೊಬಗಿನ ನಲ್ಲ ಬಂದು
> ಎನ್ನ ತನ್ನೊಳಗೆ ಮಾಡಿಕೊಂಡ. ಒಂದು ವಿಪರೀತವ ಹೇಳುವೆ
> ಚಿತ್ತವೊಲಿದು ಲಾಲಿಸಿರವ್ವಾ. ಎನ್ನ ತನುವಿನೊಳಗೆ ತನ್ನ ತನುವನಿಟ್ಟು,
> ಮಹಾತನುವ ಮಾಡಿದ. ಎನ್ನ ಮನದೊಳಗೆ ತನ್ನ ಮನವನಿಟ್ಟು,
> ಘನಮನವಮಾಡಿದ. ಎನ್ನ ಪ್ರಾಣದೊಳಗೆ ತನ್ನ ಪ್ರಾಣವನಿಟ್ಟು,
> ಚಿತ್‌ಪ್ರಾಣವ ಮಾಡಿದ. ಎನ್ನ ಜೀವದೊಳಗೆ ತನ್ನ ಜೀವವನಿಟ್ಟು,
> ಸಂಜೀವನವ ಮಾಡಿದ. ಎನ್ನ ಭಾವದೊಳಗೆ ತನ್ನ ಭಾವವನಿಟ್ಟು,
> ಸದ್ಭಾವವ ಮಾಡಿದ. ಎನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು,
> ಚಿತ್‌ಕರಣಂಗಳ ಮಾಡಿದ. ಎನ್ನ ಇಂದ್ರಿಯಂಗಳೊಳಗೆ
> ತನ್ನ ಇಂದ್ರಿಯಂಗಳನಿಟ್ಟು, ಚಿದಿಂದ್ರಿಯಂಗಳ ಮಾಡಿದ.
> ಎನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು,
> ನಿರ್ವಿಷಯಂಗಳ ಮಾಡಿದನಾಗಿ, ಅಖಂಡೇಶ್ವರನೆಂಬ ನಲ್ಲನೊಳಗೆ
> ಕರ್ಪುರವೆಣ್ಣು ಉರಿಪುರುಷನನಪ್ಪಿ ರೂಪಳಿವಂತಾದೆನು ಕೇಳಿರವ್ವಾ.
>
> ವ.ಸಾ.ಸಂ. ಪು. ೬೪೫-೬, ವ. ೧೩೭

ಇದು ಖಂಡವಾದ ಮನುಷ್ಯ, ಅಸತ್ತಿನಲ್ಲಿ ತಮಸ್ಸಿನಲ್ಲಿ ಮೃತ್ಯು ವಿನ ಮುಖದಲ್ಲಿ ಜೀವಿಸುತ್ತಿರುವ ಮರ್ತ್ಯಲೋಕದ ಕತ್ತಲೆಯ ತುಣುಕು, ಅಖಂಡವಾದ ಸತ್ತಿಗೆ ಗಮಿಸಿ ನಿಂದ ನಿಲವು ; ಜ್ಯೋತಿಗೆ ಗಮಿಸಿ ಅಖಂಡ ಜ್ಯೋತಿಯಾಗಿ ಉರಿವ ನಿಲವು ; ಅಮೃತಕ್ಕೆ ಗಮಿಸಿ ಕಾಲದ ಖಂಡವನಂ

ಯದೆ ಅಖಂಡೇಶ್ವರನಾಗಿ ಇದ್ದ ಇರವು. ಉರಿ ಕರ್ಪುರವನ್ನು ಅಪ್ಪಿದರೆ, ಅದು ಸರ್ವಾಂಗದ ಆಲಿಂಗನ. ಲಿಂಗ ಮನುಷ್ಯವೆಣ್ಣನ್ನು ಅಪ್ಪಿದರೆ, ಅದು ಸರ್ವಾಂಗಾಲಿಂಗನವಾಗಿ ಅಪ್ಪಬೇಕು, ತಾನು ಸರ್ವಾಂಗಾಲಿಂಗನವಾಗಿ ಅಪ್ಪಿಸಿಕೊಳ್ಳಬೇಕು. ಅಂದರೆ ಸರ್ವಾಂಗ ಲಿಂಗ, ಸರ್ವಾಂಗದಲ್ಲಿ ಲಿಂಗಾನು ಭಾವ. ನಲ್ಲನಿದ್ದರೆ ಸರ್ವಾಂಗದ ನಲ್ಲ ಇರಬೇಕು. ನಲ್ಲೆ ಇದ್ದರೆ ಸರ್ವಾಂಗ ವನ್ನು ಒಪ್ಪಿಸಬಲ್ಲ ನಲ್ಲೆ ಇರಬೇಕು. ದೇವನಾದರೆ ಭಕ್ತನ ಸರ್ವಾಂಗ ವನ್ನು ಅಂಗೀಕರಿಸಿ ತನ್ನೊಳಗೆ ಇಂಬಿಟ್ಟುಕೊಂಡು, ತಾನಿಲ್ಲದ ಭಕ್ತನಿಲ್ಲದ ದೇವನಿರಬೇಕು. ಭಕ್ತನಾದರೆ ಏನೆಲ್ಲವನ್ನು, ತಾನೆಲ್ಲವನ್ನು ಸಮರ್ಪಿಸಿ, ಸಮರಸವಾಗಿ ಕೂಡಿ 'ನಾನೆತ್ತ ಹೋದೆನೆಂದರಿಯದ', 'ನಿಮ್ಮ ಕಂಡೆನ್ನ ಮರೆದ' ಭಕ್ತನಿರಬೇಕು.

ಇನ್ನೂ ಬೇಕಿದ್ದರೆ ಮನುಷ್ಯ ಲಿಂಗದೆತ್ತರಕ್ಕೆ ಬೆಳೆದು, ಲಿಂಗವಾಗಿ ಲಿಂಗದಲ್ಲಿ ಇದ್ದು, ಎಲ್ಲೆಲ್ಲಿ ಲಿಂಗವನ್ನು ನೋಡಿ ನಡೆದು ಕೇಳಿ ಮುಟ್ಟಿ ತಿಂದು ಉಂಡು ಉಟ್ಟು ಹಾಸಿ ಹೊದ್ದುಕೊಂಡು ಇರುವ, ಲಿಂಗವಾಗಿ ಬದುಕಿ ಇರುವ ರೀತಿಯನ್ನು ಪರಾಮರ್ಶಿಸಿ ನೋಡಿ, ಮಾನವನ 'ಭವ್ಯ'ವನ್ನು ಸಮಾಲೋಚಿಸಿ:

> ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು, ಸಂತೆಯ ಸೂಳೆಯರಂತೆ.
> ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ.
> ಅಂತರಂಗವೆಲ್ಲ ಅರುಹಾಯಿತ್ತು. ಬಹಿರಂಗವೆಲ್ಲ ಲಿಂಗವಾಯಿತ್ತು.
> ಆ ಲಿಂಗದಲ್ಲಿ ನುಡಿದು, ಲಿಂಗದಲ್ಲಿ ನಡೆದು, ಲಿಂಗದಲ್ಲಿ ಮುಟ್ಟಿ,
> ಲಿಂಗದಲ್ಲಿ ವಾಸಿಸಿ, ಲಿಂಗದಲ್ಲಿ ಕೇಳಿ, ಲಿಂಗವಾಗಿ ನೋಡಿ,
> ಸರ್ವಾಂಗವು ಲಿಂಗವಾಗಿ, ಆ ಲಿಂಗವ ನೋಡುವ ಕಂಗಳಲ್ಲಿ
> ಐಕ್ಯ ಕಂಡಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

ವ.ಸಾ.ಸಂ ಪು. ೬೨೨, ವ. ೪೭

ಅಂತರಂಗ ಬಹಿರಂಗವನ್ನು ಶುದ್ಧಗೊಳಿಸಿ, ಲಿಂಗದ ಬೆಳಗೆ ಹದಗೊಳಿಸಿ ಜೆದೆಗೊಳಿಸಿ, ಅಂತರಂಗದ ಅರುಹು–ತನ್ನ ನಿಜದ ನೆಲೆಯಾದ ಲಿಂಗ ಗಂಭೀರದ ಅನುಭವಜ್ಞಾನ–ಒಳಗೆ ಬೆಳೆದು, ಬಹಿರಂಗವೆನಿಸುವ ದೇಹ ಪ್ರಾಣ ಇಂದ್ರಿಯಗಳಲ್ಲಿ ಹಬ್ಬಿದರೆ ಎಂಥ ಅದ್ಭುತ ಪರಿಣಾಮ! ನಾಲಗೆ

ಯಲ್ಲಿ ಕುಡಿಯಿಟ್ಟಿದೆ ಲಿಂಗ, ಕಿವಿಯಲ್ಲಿ ಮೊಳಕೆಯೊಡೆದಿದೆ ಲಿಂಗ. ಕ
ಮೂಗು ಕೈ ಕಾಲಲ್ಲಿ ಪಲ್ಲವಿಸಿದೆ ಅನುಭವದ ಲಿಂಗ. ನುಡಿವ ನಾಲಗೆಯ
ನೋಡುವ ಕಣ್ಣಲ್ಲಿ, ನಡೆವ ಕಾಲಲ್ಲಿ ಮಾಡುವ ಕೈಯಲ್ಲಿ, ವಿಚಾರಿಸ
ಬುದ್ಧಿಯಲ್ಲಿ ಸಂಚರಿಸುವ ಮನದಲ್ಲಿ, ಜೀವಿಸುವ ಪ್ರಾಣದಲ್ಲಿ ದೇಹಿಸ
ಒಡಲಲ್ಲಿ ಲಿಂಗದ ಅನುಭವ. ಅವರವರ ಮುಖದಲ್ಲಿ ಅವರವರ ಕಣ್ಣ
ಪ್ರತ್ಯಕ್ಷ ಲಿಂಗದೇವ. ಜೇರಿನಲ್ಲಿ ಸಾಗರ ಮಡಿಗಟ್ಟಿದರೆ ಬೊಡ್ಡೆ ಟೊಂಗೆ
ಎಲೆ ಹೂವು ಕಾಯಿ ಹಣ್ಣಿಗೆ ಕಾಣುವುದು ಯಾವ ಅನುಭವ? ಕಾ
ವುದು ಯಾವ ಕಣ್ಣಿಗೆ? ಲಿಂಗದ ನೀರುಂಡು ಮನುಷ್ಯನ ತನು ಬೆಳೆದ
ಅದೇ ಷಣ್ಮುಖಸ್ವಾಮಿಗಳು ಹೇಳುವ ಲಿಂಗಕ್ಕೆ ಮನೆಯಾಗಿರುವ ಮ
ತನು; ಲಿಂಗದಲ್ಲಿ ಮನ ಬೆಳೆದರೆ ಅದೇ ಘನಮನ; ಪ್ರಾಣ ಚಿತ್‌ಪ್ರಾ
ಭಾವ ಸದ್ಭಾವ; ಕರಣ ಚಿತ್‌ಕರಣ, ಸರ್ವೇಂದ್ರಿಯ ಚಿದಿಂದ್ರಿ
ಸರ್ವವಿಷಯ ನಿರ್ವಿಷಯ.

ಇನ್ನು ಬಾಹ್ಯಪ್ರಪಂಚದ ವಿಚಾರ. ಪೃಥ್ವಿ ಯಾರು? ಗಾಳಿ ಬೆ
ಯಾರ ಹೊಟ್ಟೆಯಲ್ಲಿ ಹುಟ್ಟಿದವು? ಆಕಾಶ ಯಾರ ಮಗ? ಪ್ರಕಾ
ಯಾರ ಕೂಸು? ಈ ಪ್ರಶ್ನೆಯನ್ನು ಇಂದಿನ ವಿಜ್ಞಾನಿಗಳ ಬಳಿಗೊಯ್ದ
ಅವರು ಕೊಡುವ ಉತ್ತರ, ಅಂಧಚೈತನ್ಯದ ಅನಂತ ಜಡರಾಶಿಯೆ ಇವ
ನ್ನೆಲ್ಲ ಹಡೆದ ತಂದೆ ತಾಯಿ ಎಂದು. ತನ್ನ ಅರಿವು ತನಗಿಲ್ಲ, ಪ್ರಾಣ
ಮಿಡಿತ ತನ್ನೊಳಗಿಲ್ಲ, ಏಕೆ ರೂಪುಗೊಳ್ಳುತ್ತಿವೆ ಭುವನ ಬ್ರಹ್ಮಾಂಡಗಳ
ಎಂಬ ಪ್ರಯೋಜನ, ಉದ್ದೇಶ, ಧ್ಯೇಯದ ಮಾತು ಮೊದಲೇ ಇ
ಈ ಚೈತನ್ಯದಲ್ಲಿ. ವಿಶ್ವಾತೀತವಾಗಿ ವ್ಯಾಪ್ತವಾಗಿರುವ ಇಂಥ ಜಡಚೈತನ
ದಿಂದ ಪ್ರಾಣ ಹೇಗೆ ಮೊಳಕೆ ಒಡೆಯಿತು? ಯಾವ ಉದ್ದೇಶವಿಲ್ಲದೆ ದೇ
ಕೈ ಕಾಲು, ಕಣ್ಣು ಮೂಗು ಕಿವಿ ನಾಲಗೆ ಏಕೆ ದೇಹದಲ್ಲಿ ಕಿಂಡಿ ಮಾ
ಕೊಂಡು ನೋಡತೊಡಗಿದವು? ಇಲ್ಲದ ಮನ, ಇಲ್ಲದ ಬುದ್ಧಿ, ಇಲ್ಲದ ಭಾ
ದಿಂದ ಇವೆಲ್ಲ ಹೇಗೆ ಮೂಡಿ ಬಂದವು ಜಡಾಂಧಕಾರದ ಊಷರದಲ್ಲಿ
ಯಾವ ಅರ್ಥವು ಇಲ್ಲದೆ ತಿರುಗುವ ಜಡಚೈತನ್ಯ ಹೂಬಿಟ್ಟ ಮಾನವ
ತಲೆಯ ಸತ್ಯಂ ಶಿವಂ ಸುಂದರಂ, ಧರ್ಮ ಅರ್ಥ ಕಾಮ ಮೋಕ್ಷಗಳ
ಸಿಡಿದು ಬಂದುವು ಹೇಗೆ? ಬ್ರಹ್ಮಾಂಡದ ಉತ್ಪತ್ತಿ ಸ್ಥಿತಿ ಲಯವನ್ನು

ಕುರಿತು ಹೇಳುವ ವಿಜ್ಞಾನಿಗಳ ಮಾತನ್ನು ಒಮ್ಮೆಲೆ, ಬುದ್ಧಿಗೆ ಯಾವ ಆಯಾಸವನ್ನು ಕೊಡದೆ ಅತ್ತ ದೂರ ಯಾರೂ ಕಾಣದಂತೆ ಒಗೆದು ಬಿಡಬೇಕೆಂಬ ವಿಚಾರ ನನಗಿಲ್ಲ. ಬುದ್ಧಿಯ ಬಾಗಿಲು ಬಂದು ಮಾಡಿ ವಿಜ್ಞಾನದ ವಿಚಾರಗಳಿಗೆ ಒಳಗೆ ಪ್ರವೇಶ ಕೊಡಲೇ ಕೂಡದೆಂಬ 'ಬುದ್ಧಿ ಗುರುಡು' ಯಾರೂ ಅಂಗೀಕರಿಸಬೇಕಾದ ಮಾತಲ್ಲ. ವಿಜ್ಞಾನಿಗಳ ವಿಚಾರ ವನ್ನು ಸಮಾಹಿತಚಿತ್ತರಾಗಿ ಕೇಳಬೇಕು; ಬುದ್ಧಿಯ ಗಂಭೀರದಲ್ಲಿ ಪರೀಕ್ಷಿಸಬೇಕು; ಭಾವದ ಗಂಭೀರಕ್ಕೊ ಅವರ ಮಾತನ್ನು ಕೊಂಡೊಯ್ದು ಪರಿಭಾವಿಸಬೇಕು. ಆದರೆ ಒಂದು ಸಂಗತಿ ಸ್ಪಷ್ಟ: ವಿಶ್ವದ ಶಾಖೆಗಳಾದ ಭೌತ ಪ್ರಪಂಚವನ್ನು ರಸ ಪ್ರಪಂಚವನ್ನು, ಸಸ್ಯ ಪ್ರಾಣ ಭೂಗೋಲ ಖಗೋಲ ಮುಂತಾದುವನ್ನು ವೀಕ್ಷಿಸಿ ಪ್ರಯೋಗಿಸಿ ಫಲಿತಗಳನ್ನು ನಿರ್ಣ ಯಿಸುವ ವಿಜ್ಞಾನಿ, ದೇವರು ಧರ್ಮ ಪುರುಷಾರ್ಥ ನೀತಿ ಸತ್ಯ ಶಿವ ಸುಂದರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಕಾರಣ, ಆತನ ಪ್ರಯೋಗದ 'ಟೆಸ್ಟ್‌ಟ್ಯೂಬಿ'ನಲ್ಲಿ ದೇವರು ಕಂಡಿಲ್ಲ; ಸಚ್ಚಿದಾನಂದ ಗೋಚರಿಸಿಲ್ಲ; ಶಿವ ಸುಂದರ ಅಲ್ಲಿ ತೇಲಿ ಮೇಲೆ ಬಂದಿಲ್ಲ. ಇದರ ಅರ್ಥ ಇಷ್ಟೇ—ಜ್ಞಾನೇಂದ್ರಿಯ ಕರಣೇಂದ್ರಿಯಗಳಿಗೆ ಇದಿರಿಟ್ಟು ಕಾಣದ ವಸ್ತು ವನ್ನು ಶುದ್ಧವಿಜ್ಞಾನಿ ಇನ್ನೂ ಮನ್ನಿಸಿಲ್ಲ. ಯಾವ ಪ್ರಯೋಗ ಶಾಲೆಯಲ್ಲಿ ಯಾವ ದೂರ-ಸಮೀಪ-ತೀಕ್ಷ್ಣ-ಸೂಕ್ಷ್ಮದರ್ಶಕಗಳ ಕಣ್ಣೊಳಗಿಂದ, ಯಾವ ಯಂತ್ರ ತಂತ್ರ, ಯಾವ ವಿದ್ಯುತ್‌ಪ್ರಭೆಯಲ್ಲಿ, ಎಂಥ ಟ್ಯೂಬು ಎಂಥ ನಾಳಿಕೆಯಲ್ಲಿ ಮಾನವನೆದೆಯ 'ಪ್ರೇಮ'ವನ್ನು, ಕವಿಯ ಕಣ್ಣಿನ 'ಸೌಂದರ್ಯ'ವನ್ನು, ಕ್ರೈಸ್ತನ 'The Kingdom of God is within you' ಎಂಬ ದೇವಸಾಮ್ರಾಜ್ಯವನ್ನು, ಬುದ್ಧದೇವನ 'ತೃಷ್ಣೆ' 'ದುಃಖ' 'ಅಹಿಂಸೆ' 'ನಿರ್ವಾಣ'ವನ್ನು, ಶ್ರೀಕೃಷ್ಣ ಪರಮಾತ್ಮನ 'ಭಕ್ತಿ' 'ಯೋಗ' 'ಸ್ಥಿತಪ್ರಜ್ಞೆ' 'ವಿರಾಟ್ ಪುರುಷ'ನನ್ನು, ಉಪನಿಷತ್‌ಕಾರರ 'ಈಶಾ ವಾಸ್ಯ ಮಿದಂ ಸರ್ವ'ವನ್ನು, ಮಹಮ್ಮದನ 'ಅಲ್ಲಾ ಹು ಅಕ್ಬರ'ನನ್ನು ಯಾವ ವಿಜ್ಞಾನಿ ಎಂದು ಕಾಣಬಲ್ಲ? ಮನೆಯೊಳಗೆ ಮಲಗಿದ ಮಗುವನ್ನು ಊರೆಲ್ಲ ಹುಡುಕಿದರಂತೆ! 'ನಿಮ್ಮೊಳಗೆ ನೀವು ತಿಳಿದು ನೋಡಿರೇ', 'ಅನ್ಯವಿಲ್ಲ ಕಾಣಿರಣ್ಣಾ' ಎಂದು ತಿಳಿದವರು, ನೋಡಿದ ಹಿರಿಯರು ಬುದ್ಧಿಗೊಟ್ಟರು.

ಆದರೆ ಒಳಗೆ ಹೋಗುವ ಬಾಗಿಲು ಬಂದುಮಾಡಿ ಹೊರಗೆಲ್ಲ ಹುಡುಕಿದರೆ ಹೇಗೆ ಸಿಗಬೇಕು ಸತ್ಯ ಶಿವ ಸುಂದರ, ಅಮೃತ ಜ್ಯೋತಿ ಭಕ್ತಿ, ಪ್ರೇಮ ಜ್ಞಾನ ಯೋಗ? ಇನ್ನೂ ಅಂಥ ಶಿವಯೋಗದ ಕಾಲ ಬಂದಿಲ್ಲ ವಿಜ್ಞಾನಕ್ಕೆ. ಹೀಗೆ ಹೇಳಿದಾಕ್ಷಣ ಎಲ್ಲ ವಿಜ್ಞಾನಿಗಳು ಒಳಗಿಗೆ ಬಾಗಿಲು ಮುಚ್ಚಿಕೊಂಡ ವರೆ ಎಂದು ನನ್ನ ಅಭಿಪ್ರಾಯ ಅಲ್ಲ. ಅಲ್ಲಿಯೂ ಇದ್ದಾರೆ 'ಶಿವಯೋಗಿ' ಗಳು, ಶಿವದ ಜ್ಞಾನಿಗಳು, ಸತ್ಯ ಸೌಂದರ್ಯದ ಆರಾಧಕರು, ಶಿವದ ಭಕ್ತರು. ಏನಿದ್ದರೂ ವಿಜ್ಞಾನಿಗಳು ಮನುಷ್ಯ ಕುಲದವರೇ. ಎಂತಿದ್ದರೂ ಮನುಷ್ಯ ಉರಿಯ ವಂಶದವನೇ.

ಅನುಭಾವಿಗಳು ಕಂಡ ವಿಶ್ವರೂಪವನ್ನು ನೀವೂ ನೋಡಬೇಕಿದ್ದರೆ ಅಂಬಿಗರ ಚೌಡಯ್ಯನ 'ಅಷ್ಟತನುವಿನೊಳಗೆ ಹುದುಗಿರ್ಪ ಲಿಂಗವ ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ' ಎಂಬ ಮಾತನ್ನು, ಆದಯ್ಯನ 'ಬೀಜದೊಳಗಣ ವೃಕ್ಷ ಅಂಕುರ ಪಲ್ಲವ ಪತ್ರ ಕುಸುಮ ಫಲ ವೈದೋರದಂತೆ.... ಪಿಂಡ ಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರಲಿಂಗವನಾರು ಭೇದಿಸಬಾರದಯ್ಯ' ಎಂಬ ಮಾತನ್ನು ಮತ್ತೆ ನೆನೆಸಿಕೊಂಡು, ಇದೋ ಈ ಅನಂತನಾಮ ರೂಪ ಕ್ರಿಯಾತ್ಮಕವಾದ ಜಗತ್ತಿನ ಗಂಭೀರದ ಆಳಕ್ಕಿಳಿದು, ಅದರ ಪಾತಾಳವನ್ನು ಕಂಡು, ಹಿಡಿದು, ನೋಡಿ ನುಡಿದ ಚಂದಿಮರಸರ ಗಂಭೀರಗೀತವನ್ನು ಕೇಳಿ:

ಘನಗಂಭೀರ ಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ ಫೇನ
ತರಂಗಗಳು ತೋರಿತ್ತಲ್ಲಾ ಎಂದಡೆ, ಅವು ಬೇರಾಗಬಲ್ಲವೇ?
ಪರಶಿವನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಂಗಳಾದವಲ್ಲನೆ
ಬೇರಾಗಬಲ್ಲವೆ? ಇದ ಬೇರೆಂಬ ಅರೆಮರುಳರ ನಾನೇನೆಂಬೆ?
ವಿಶ್ವವ ತಿಳಿದು ನೋಡಲು ಚಿನ್ಮೂಲಿಗೆಯ ಚೆನ್ನರಾಮನೆಂಬ
ಲಿಂಗವು ತಾನೆ.

ವ.ಸಾ.ಸಂ. ಪು. ೩೪-೫, ವ. ೨೧

ಪರಶಿವಸಮುದ್ರ ಅತ್ಯದ್ಭುತ, ಪರಮವಿಚಿತ್ರ. ಮೇಘಪಂಕ್ತಿಯ ನೊರೆ ಗಟ್ಟಿರುವ ಆಕಾಶದ ತೆರೆ, ನಕ್ಷತ್ರಮಾಲೆಯ ಕೋಟಿತುಂತುರು, ನೆಲ ನೀರು ಗಾಳಿ ಬೆಂಕಿಯ ತರಂಗತರಂಗ, ನದಿ ಪರ್ವತ ಸಾಗರಗಳ ವೀಚಿಕೆಯ

ವಿಲಾಸ, ಗಿಡು ಮರ ಬಳ್ಳಿ ಪಶು ಪಕ್ಷಿ ಕೀಟ ಜಂತು ಮುಂತಾಗಿ ಮಾನವ ಪ್ರಾಣಿಯಾಗಿ ಉಬ್ಬಿ ತೇಲುವ ನೀರುಗುಳ್ಳೆಯ ಸಾವಿರಕೋಟಿ ಸಂಭ್ರಮ. ನೊರೆ ತೆರೆ ಸೀಕರ ಬುದ್ಬುದ ನೀರ ಮೇಲೆ ತೋರಿಬರುತ್ತಿವೆ. ಇದೇ ವಿಶ್ವ ಪ್ರಪಂಚ. ಮೇಲೆ ತೇಲುವ ಕಣ್ಣಿಗೆ ಮೇಲೆ ತೇಲುವ ವಿಶ್ವವಿಲಾಸ. ಈ ವಿಲಾಸವನ್ನೇ ವಿವರಿಸಿ ಭೇದಿಸಿ ಖಂಡಿಸಿ ತುಂಡುಮಾಡಿ ಅಳೆದು ತೂಗಿ ವಿಲಾಸದ ಅದ್ಭುತದಲ್ಲಿ, ಅದರ ಚಿತ್ರ ವಿಚಿತ್ರ ಶಕ್ತಿಯಲ್ಲಿ, ತನ್ನ ವಿಶ್ವಾಕ್ರಮಣಸಾಹಸದಲ್ಲಿ ಮೈಮರೆದು ಅರೆನಿದ್ರೆಯ ಮಬ್ಬಿನಲ್ಲಿ ಜೋಲುವಂತಿದೆ ವಿಜ್ಞಾನದ ಬುದ್ಧಿ. ವಿಜ್ಞಾನಿ ಹೇಳುವ ಮೇಲಿನ ಮಾತು, ಹೊರಗಿನ ಸುದ್ದಿ, ನಿಸರ್ಗದ ನಿಯಮ ಆಚಾರ ವಿಚಾರ ಸತ್ಯವೆಂದು ಒಪ್ಪೋಣ. ಆತ ಕೊಟ್ಟಿರುವ ಯಂತ್ರ ತಂತ್ರಗಳನ್ನು ಬಳಸಿಕೊಂಡು ಸುಖವಾಗಿ ಇರೋಣ. ವಿಶ್ವ ಮಾನವ ಕಲ್ಯಾಣಕ್ಕೆ ಆತ ಸಲ್ಲಿಸುತ್ತಿರುವ ಅಭೂತಪೂರ್ವ ಸೇವೆಗೆ ಕೈ ಮುಗಿದು ನಿಲ್ಲೋಣ. ಆದರೆ ಮೇಲೆ ಕಲ್ಯಾಣ, ಮೇಲೆ ಸತ್ಯ, ಮೇಲೆ ಮೇಲೆ ಸುಖ ಸುಕರ ಸುಲಭಗಳು ದೊರೆತರೆ, 'ವಿಶ್ವವಿಲಾಸ'ವಾಡುತ್ತಿರುವ 'ಚಿಮ್ಮಲಿಗೆಯ ಚೆನ್ನರಾಮ'ನನ್ನು, ಪರಶಿವಸಾಗರದಲ್ಲಿ ತೋರಿ ಬೀರುತ್ತಿರುವ 'ವಿಶ್ವಲಿಂಗ'ವನ್ನು ತಿಳಿದು ನೋಡದೆ, ಆಳಕ್ಕೆ ಹೆದರಿ, ಉದಾಸೀನ ಮಾಡಿ, ಆತ್ಮದೌರ್ಬಲ್ಯದಿಂದ ಎಂದೆಂದಿಗು ದಂಡೆಯ ಮೇಲೆಯೆ ಕುಳಿತು, ತೆರೆಹೊಯ್ದರೆ ಕೊಚ್ಚಿಕೊಂಡು ಹೋಗಿ ಕತ್ತಲೆಯಲ್ಲಿ ಮರೆಯಾಗಬೇಕೆ ?

ವಿಶ್ವದ ಮರೆಯಲ್ಲಿ. ವಿಶ್ವಬ್ರಹ್ಮಾಂಡಗಳ ದೃಶ್ಯವಿಲಾಸದ ಮರೆಯಲ್ಲಿ, ವಿಜ್ಞಾನದ ಪ್ರಯೋಗಶಾಲೆಯಲ್ಲಿ ಜಡಾತ್ಮಕವಾಗಿ ಕಂಡಿರುವ ವಿಶ್ವ ಚೈತನ್ಯದ ತೆರೆಯ ಮರೆಯಲ್ಲಿ, ಇನ್ನೂ ಒಳಗೆ ಹುದುಗಿಕೊಂಡಿರುವ,'ನೆಲದ ಮರೆಯ ನಿಧಾನ' 'ಮೇಘದ ಮರೆಯ ಮಿಂಚು' 'ಕನ್ನೆಯ ಮರೆಯ ಸ್ನೇಹ' 'ಮರದ ಮರೆಯ ಬೆಂಕಿ'ಯಂತೆ ವಿಶ್ವವಾಗಿರುವ, ಆಗುತ್ತಿರುವ ಜಡಚೈತನ್ಯದ ಮುಸುಕಿನೊಳಗೆ ಚಿತ್‌ಪ್ರಭಾಚೈತನ್ಯವಾದ ಪರಶಿವಲಿಂಗದ ಪರವಸ್ತುವಿನ, ಸಚ್ಚಿದಾನಂದ ನಿತ್ಯಪರಿಪೂರ್ಣದ, ಅಖಂಡಿತವಾದ ಪರ ಬ್ರಹ್ಮದ ಮುಖವಿದೆಯೆ ? ಆ ಮುಖದಲ್ಲಿ ಶಿವ ಸೌಂದರ್ಯ ಪವಿತ್ರ ಕಲ್ಯಾಣದ ನವ್ಯ ಭವ್ಯ ದಿವ್ಯದ ಪರಮಗಂಭೀರೋಜ್ವಲಕಾಂತಿ ಥಳಥಳಿಸಿ ಹೊಳೆಯುತ್ತಿದೆಯೆ ? 'ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ,

ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ ಬೆಳಗುತಿದೆ'—ನಾವೂ ಹೀಗೆ ಪರಂಜ್ಯೋತಿ ಗೀತವನ್ನು ಹಾಡ ಬಹುದೇ ಜಡಚೈತನ್ಯದ ಹೃದಯಾಕಾಶದಲ್ಲಿ ಒಳಹೊಕ್ಕು? ಹಾಡ ಬರುವುದು, ನೋಡಲೂ ಬರುವುದು. ಅಷ್ಟೇ ಅಲ್ಲ. ಅದೇ ಸದಾನಂದ ಜ್ಯೋತಿಯಾಗಿ, ಚಿದಾನಂದದ ಬೆಳಗು ಬೆಳಗಾಗಿ, ನಿತ್ಯದಲ್ಲಿ ನಿವಾಸವಾಗಿ, ಪರಿಪೂರ್ಣದಲ್ಲಿ ಆಕಾಶ ಪಾತಾಳ ದಿಗ್ವಳಯದ ಗೋಡೆಯಿಲ್ಲದ 'ಮಹಾ ಮನೆ'ಯಲ್ಲಿ ಇರಲೂ ಬರುವುದು—ಎಂದು ಹೇಳುತ್ತಾರೆ ಬಲ್ಲವರು. ಇವರು ಒಂದು ದೇಶ ಒಂದು ಭಾಷೆ ಒಂದು ಕಾಲ ಒಂದು ಧರ್ಮ ಒಂದು ದರ್ಶನ ದವರಲ್ಲ. ಅನಂತದ ಹೆಸರಾದ ಲಿಂಗದ ಬಗೆಗೆ ಅಂದರೆ ದೇವರ ಬಗೆಗೆ, ಪರವಸ್ತು ಪರಬ್ರಹ್ಮ 'ಅಲ್ಲಾ' 'God' 'Deus'ನ ಬಗೆಗೆ ಸಾಮಾನ್ಯವಾಗಿ ಎಲ್ಲರು ಒಕ್ಕೊರಲಿನಿಂದ 'ದಿವ್ಯೋಜ್ವಲ'ದ ಐಕ್ಯಗೀತವನ್ನು ಸಂಗಮವಾಗಿ ಹಾಡಿದ್ದಾರೆ. ಅವರ ಹಾಡು ಕೇಳಿದರೆ ಮಾನವಹೃದಯದ ಗಂಭೀರ ಕೂಗುತ್ತದೆ—ಅವರು 'ಸತ್ಯ'ವನ್ನು, ಪರಾತ್ಪರವಾದ ಪರಂಜ್ಯೋತಿ ಸತ್ಯವನ್ನು ಕಂಡು ಕೇಳಿ ಉಂಡು ಇದ್ದು ಅನುಭವಿಸಿ ಹಾಡಿದವರು ಎಂದು. ಅವರದು ಇದ್ದ ಇರವಿನ ಹಾಡು, ಅರಿದ ಅರಿವಿನ ಗೀತ, ಅನುಭವದ ಪದ.

ಹೊರಗೆ ತೆರೆದ ಕಣ್ಣು ಕಿವಿ, ಒಳಗಿದ್ದರೂ ಹೊರಗೆ ತೆರೆದ ಮನ ಬುದ್ಧಿಯಿಂದ 'ಅಧೋಮುಖ'ವಾಗಿ ನೋಡಿ, 'ಜಡಚೈತನ್ಯ'ವನ್ನು ಪ್ರಮಾಣಿಸಿ ಕಂಡು, ಕಂಡ ಸತ್ಯವನ್ನು ಮೂಲಸತ್ಯವೆಂದು ಸಾರುತ್ತಾನೆ ಪ್ರಪಂಚವಿಜ್ಞಾನಿ. ಹೊರಗೆ ನೋಡುವ ಕಣ್ಣು ಕಿವಿ, ಹೊರಗಿಂದ ಹೊರಗೆ ವಿಚಾರಿಸುವ ಮನ ಬುದ್ಧಿಯು 'ಅಧೋದ್ವಾರ'ಗಳನ್ನು ಮುಚ್ಚಿ, ಅರಿವಿನ ಕಣ್ಣನ್ನು ತನ್ನ ಅಂತರಂಗಕ್ಕೆ, ವಿಶ್ವಪ್ರಪಂಚದ ಅಂತರಂಗಕ್ಕೆ ತೆರೆದು 'ಊರ್ಧ್ವಮುಖ'ವಾಗಿ ನೋಡಿ ಕಂಡ, 'ಮಾತು ಮನಂಗಳಿಂದ ತ್ತತ್ತ ಮೀರಿದ', 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನ ಸಾ ಸಹ' ಎಂದೆನಿಸಿರುವ ಅತೀತ 'ಅಪ್ರಮಾಣ'ವನ್ನು ಕಣ್ಣಿಲ್ಲದೆ ಕಂಡು, ಕಿವಿಯಿಲ್ಲದೆ ಕೇಳಿ, ಮನದಾಚೆ ನೆನೆದು, ಬುದ್ಧಿಯಾಚೆ ಮಥನವಿಲ್ಲದೆ ವಿಚಾರಿಸಿ, ಅರಿವು ತನ್ನ ನಿಜದಿರವನ್ನು ಒಳಹೊರಗೆ ಅನುಭವಿಸಿದ ಸ್ವಾನು ಭಾವಸ್ವರೂಪವಾದ ತಾನು-ಲಿಂಗವನ್ನು, ವಿಶ್ವಲಿಂಗವನ್ನು ಪರಮಸತ್ಯ

ವೆಂದು ಕುರಾಣ ಹಾಡುತ್ತಾರೆ, ಬಾಯಿಬಲ್ ಹಾಡುತ್ತಾರೆ, ಉಪನಿಷತ್ತು ಭಗವದ್ಗೀತೆ ಲಿಂಗವಚನ ಹಾಡುತ್ತಾರೆ ಸ್ವಸ್ಥಲದಲ್ಲಿದ್ದ ಸ್ವಾನುಭಾವಿಗಳು. ಇವರೆಲ್ಲರ ಅನುಭವದ ಮಟ್ಟ ಒಂದೇ, ಸಾಧನಮಾರ್ಗ ಒಂದೇ, ಕಂಡ ಬೆಳಗು ಉಂಡ ಸವಿ ಒಂದೇ ಎಂದು ಹೇಳುವುದು ತಪ್ಪಾಗಬಹುದು. ಆದರೆ ಅವರೆಲ್ಲ ಗುರಿ ಒಂದೆಯೆಂದು ಕಂಡು, ಒಂದಕ್ಕೆ ಗುರಿ ಇಟ್ಟವರು. ಜಗತ್ತಿನ ಅನುಭಾವಿಗಳು ಹೇಳುವಂತೆ 'ನೆಲದ ಮರೆಯಲ್ಲಿ' ಲಿಂಗನಿಧಾನವಿದ್ದರೆ, ನಿಧಾನದ ವಾಸನೆ ಮನುಷ್ಯನ ಅರಿವಿನ ಮೂಗನ್ನು ಬಲವಾಗಿ ತನ್ನತ್ತ ಸೆಳೆಯುತ್ತಿದ್ದರೆ, ಒಂದು ದಿನ ಒಂದು ವರ್ಷ ಒಂದು ಶತಮಾನ ಸಹಸ್ರ ಮಾನ ಅಲ್ಲ, ಯುಗಯುಗಾಂತರದಿಂದ ನಿಧಾನಲಿಂಗ ಮನುಷ್ಯಕುಲವನ್ನು ಹಗಲಿರುಳೆನ್ನದೆ ದೇಶ ಜಾತಿ ಜನಾಂಗವೆನ್ನದೆ ಕರೆಯುತ್ತಿದ್ದರೆ, ಮರೆಯು ಕರೆಯೆಂದು ನಿರ್ಲಕ್ಷಿಸಿ ಅಥವಾ ದುರ್ಲಕ್ಷಿಸಿ ಹೊರಗೆಯೆ ಹರಿದಾಡುತ್ತ ಇರಬೇಕೆ? ವಿಶ್ವದ ನೆಲದ ಮೇಲೆ ನಡೆದಾಡಲಿ, ವಿಶ್ವದ ನೆಲವನ್ನು ಉಳಲಿ ಬಿತ್ತಲಿ, ವಿಶ್ವದ ಬೆಳಸನ್ನು ಉಂಡು ಸುಖವಾಗಿರಲಿ ಮನುಷ್ಯ. ಆದರೆ ನೆಲದ ಮರೆಯಲ್ಲಿ ದೇವನಿಧಾನವಿದ್ದರೆ ನೆಲವನ್ನು ಏಕೆ ಅಗಿಯಬಾರದು? ಒಳಗೆ ಏಕೆ ನೋಡಬಾರದು? ಏಕೆ ಹುಡುಕಬಾರದು? ಮನುಷ್ಯನ ಮನ ಬುದ್ಧಿ ಹೃದಯ, ಕಣ್ಣು ಕಿವಿ ಮೂಗು ನಾಲಗೆ, ಕೈಯಿ ಕಾಲು ಬಾಯಿ ಮುಂತಾದ ಸರ್ವಾಂಗದ ಆಪ್ಯಾಯನವನ್ನೆಲ್ಲ ಸಂತೃಪ್ತಿಯಲ್ಲಿ ಇರಿಸಬಲ್ಲ ದಿವ್ಯ ನಿಧಾನವನ್ನು ಏಕೆ ಹೊರಗೆ ತೆಗೆಯಬಾರದು? ತೆಗೆದು ಏಕೆ ತಾನು ಬಳಸಿಕೊಳ್ಳಬಾರದು? ತನ್ನಂತೆ ಇರುವ ಅನ್ಯರೂ ಅದನ್ನು ಶ್ರೀಮಂತವಾಗಿ ಬಳಸಿಕೊಳ್ಳುವಂತೆ ಏಕೆ ಮಾಡಬಾರದು? ಒಳಹೊರಗನ್ನು ಕೂಡಿಸಿ ವಿಜ್ಞಾನಿ ಪ್ರಯೋಗಶಾಲೆಯನ್ನು ಕಟ್ಟಿ ಪ್ರಯೋಗ ನಡೆಸುವುದು, ಬಹಿ ರೀಕ್ಷಿಸುವುದು ಅಂತರೀಕ್ಷಿಸುವುದು, ಮತ್ತೆ ಮೇಲೆ ಬಾಹ್ಯವಿಲ್ಲದೆ ಆಂತರ ವಿಲ್ಲದೆ 'ಅನಿಮಿಷ'ನಾಗಿ ನೋಡುವುದು, ಮರ್ತ್ಯಲೋಕದಲ್ಲಿ ದೇವಲೋಕ ಅಂಕುರಿಸಿ ಪಲ್ಲವಿಸಿ ಫಲವಾದ ಫಲಿತಗಳನ್ನು ತಾನುಂಡು, ತನಗನ್ಯರಲ್ಲದ ಎಲ್ಲರುಣ್ಣುವಂತೆ ಮಾಡುವುದು 'ವಿಜ್ಞಾನಸಂಭವ'ವೆ? ವಿಜ್ಞಾನಿಯ ಬುದ್ಧಿಯಲ್ಲಿ ಸ್ವಾನುಭಾವಿ ಮೊಳೆಯಬಹುದೆ? ಸ್ವಾನುಭಾವಿಯ ಭಾವದಲ್ಲಿ ವಿಜ್ಞಾನಿ ಅಂಕುರಿಸಬಹುದೆ? ಇಬ್ಬರೂ ಒಂದಾದರೆ?

'ನಾನು' ಒಕ್ಕಲುತನ ಮಾಡುತ್ತೇನೆ, ವ್ಯಾಪಾರ ಮಾಡುತ್ತೇನೆ, ಆಳಾಗಿ ದುಡಿಯುತ್ತೇನೆ ಅಧಿಕಾರಿಯಾಗಿ ಆಳುತ್ತೇನೆ. ವೈದ್ಯ ಸೈನಿಕ ವೈಮಾನಿಕ ಶಿಕ್ಷಕ, ಗೋವಳ ತಳವಾರ ಮಾಳಿ ಸಿಪಾಯಿಯಾಗಿ ಕೆಲಸ ಮಾಡುತ್ತೇನೆ. ಕವಿ ಕಲಾವಿದ ಧರ್ಮಗುರು ತತ್ವಜ್ಞಾನಿಯಾಗಿ ಜಗತ್ತಿನ ಭಿನ್ನ ವಿಭಿನ್ನ ಸಮಯ ಸಮಾಜದಲ್ಲಿ ಒಂದು ವೃತ್ತಿಯನ್ನು ಕೈಕೊಂಡು ಜೀವಿಸುತ್ತಿದ್ದೇನೆ. ಗಂಡ ಹೆಂಡತಿಯಾಗಿ ತಂದೆ ಮಗನಾಗಿ, ಬಂಧು ಬಾಂಧವ ಪರಿಜನ ಪುರಜನ ಮಿತ್ರ ಶತ್ರುವಾಗಿ, ಮತ್ತೆ ಯಾವ ಹತ್ತುಗಡೆಯಿಲ್ಲದೆ ಉದಾಸೀನನಾಗಿ ಇನ್ನೇನೇನೊ ಹಲವು ವೃತ್ತಿ ಹಲವು ಕಾಯಕ ಹಲವಾರು ಸಂಬಂಧ ಹಲವಾರು ವ್ಯವಹಾರದಲ್ಲಿ ಮಗ್ನನಾಗಿ, ಈ ನಾನಿನಲ್ಲಿ ಮುಳುಗಿ, ನಾನಾದ ನನ್ನ ದೇಹ ನನ್ನ ಪ್ರಾಣ ನನ್ನ ಬುದ್ಧಿ ನನ್ನ ಮನೆ ನನ್ನ ಆಸ್ತಿ ನನ್ನ ಕೀರ್ತಿ ನನ್ನ ಪ್ರತಿಷ್ಠೆಯಲ್ಲಿ ಮುಳುಗಿ ಜೀವಿಸಿಕೊಂಡಿರುವ ಮರ್ತ್ಯದ ಖಂಡದಲ್ಲಿ, ಕತ್ತಲೆಯ ಹಾಹೆಯಾದ ನಾನಿನಲ್ಲಿ,ಸ್ವ-ಅನುಭಾವದ ಲಿಂಗದ ಕಳೆ ಒಡೆದು ಮೂಡಿದರೆ? ಕಳೆಯ ಬೆಳಗಿನಲ್ಲಿ 'ನಾನು' ತಾನಾಗಿದ್ದರೆ? ನಾನು ಅದೇ ಲಿಂಗದ ಕಳೆ, 'ಮಮೈವಾಂಶ'ವಾಗಿದ್ದರೆ? ಅರಿವಿನಲ್ಲಿ ತನ್ನ ಮೂಲನಿಜವಾದ ಇರವನ್ನು ಬೆಳಗುವ 'ಬೆಳಗಿನ ಬೀಜವಾದ ಮಹಾಬೆಳಗು', ತನ್ನಿರವು ತಾನೇ ಆಗಿರುವ ಜ್ವಲಂತ ಅನುಭವ ನಾನಿನ ಸರ್ವಾಂಗದಲ್ಲಿ ಜ್ವಲಿಸಿದರೆ? ಇದೇ ಮಹಾಬೆಳಗಿನಲ್ಲಿ 'ವಿಶ್ವವ ತಿಳಿದು ನೋಡಲು ಚೆಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ' ಎಂಬ ಲಿಂಗಾನುಭಾವ ತನ್ನೊಳಗೆ ಉದಯವಾಗಿ, ತನಗೆ ಹೊರಗಲ್ಲದ ವಿಶ್ವ ಪ್ರಪಂಚವನ್ನೂ ತನ್ನೊಳಗೆ ಮಾಡಿ ಅಖಂಡವಾಗಿ ಬೆಳಗಿದರೆ? ಸ್ವಾನುಭಾವದ ಸೀಮೆಯಲ್ಲಿ, ಎಲ್ಲರ ಎಲ್ಲದರ ನಿಜಗಂಭೀರಸ್ಥಲದಲ್ಲಿ ನಿಂದು ನೋಡಿದರೆ ಎಲ್ಲ ಲಿಂಗ, ಎಲ್ಲ ಲಿಂಗ-ವಂತವಾಗಿ, ಎಲ್ಲ ಬ್ರಹ್ಮ, ಪರಂಜ್ಯೋತಿ, ಎಲ್ಲ ಬ್ರಹ್ಮಸಂಪ್ಲುತ ಬ್ರಹ್ಮಮಯ ಬ್ರಹ್ಮ-ವಂತವಾಗಿ ಇದ್ದರೆ? ಭೌತ ಪ್ರಪಂಚ, ಪ್ರಪಂಚದಲ್ಲಿ ಇರುವ ನಾನು ನಿಜಗಂಭೀರಕ್ಕಿಳಿದು, ಆ ಪರಬ್ರಹ್ಮ ಆ ಪರಶಿವಲಿಂಗಸ್ಥಲದಿಂದ ಇದ್ದರೆ, ಅಲ್ಲಿಂದ ವ್ಯವಹರಿಸಿದರೆ, ಅಲ್ಲಿಂದ ಬಾಳುವೆ ಮಾಡಿದರೆ, ಅಲ್ಲಿಂದ ಉಂಡು ಉಟ್ಟು, ಅಲ್ಲಿ ಮಲಗಿ ಅಲ್ಲಿಯೆ ಎದ್ದು, ಅಲ್ಲಿಯೆ ಅಲ್ಲಿಂದಲೆ ಸಕಲಭೋಗ ಭಾಗ್ಯವಿಲಾಸ ಸ್ವ-ಇಚ್ಛೆಯಂತೆ ನಡೆದರೆ?

೩

ಮನೋ ಬುದ್ಧ್ಯಹಂಕಾರ ಚಿತ್ತಾನಿ ನಾಹಂ
ನ ಚ ಶ್ರೋತ್ರಜಿಹ್ವೇ ನ ಚ ಘ್ರಾಣನೇತ್ರೇ
ನ ಚ ವ್ಯೋಮಭೂಮಿರ್ನ ತೇಜೋ ನ ವಾಯು
ಶ್ಚಿದಾನಂದರೂಪಃ ಶಿವೋಽಹಂ ಶಿವೋಽಹಂ

ನಿರ್ವಾಣಷಟ್ಕಂ, ಶ್ಲೋ. ೧
ಶಂಕರಾಚಾರ್ಯರು

ನೇತಿಗಳೆದು ಕಾಯ ಕರಣ ಕಾರ್ಯಂಗಳ
ಭೂತ ಕಾರಣಪಂಚಕವನುಳಿದು
ನೇತಿ ಭೀತಿಯು ಮೀರಿ ನಿಂದು ನೋಡಲು ಪರಂ-
ಜ್ಯೋತಿಸ್ಸ್ವರೂಪ ನೀನಾಗುತಿಂತು

ಕೈವಲ್ಯ ಪದ್ಧತಿ, ಜ್ಞಾನ ಪ್ರತಿಪಾದನಸ್ಥಲ, ಪದ ೧೩, ನುಡಿ ೨
ನಿಜಗುಣ ಶಿವಯೋಗಿಗಳು

ಶಂಕರಾಚಾರ್ಯರ ಮತ್ತು ನಿಜಗುಣರ ಜ್ಞಾನದ ಈ ಅನುಭವವನ್ನು ನೀವು ಕೇಳಿರಬಹುದು. ಮಾನವಸ್ಥಲದಿಂದ 'ನಾನು' ಹೊರಟು ತನ್ನ ನಿಜ ಸ್ವ-ರೂಪವಾದ, ಚಿದಾನಂದ ರೂಪವಾದ 'ಶಿವ-ನಾನು' ಸ್ಥಲಕ್ಕೆ ಮುಟ್ಟಬೇಕಾದರೆ, ಅಥವಾ ನಿಜಗುಣರು ಹೇಳುವಂತೆ ನಾನು ತನ್ನ ಪರಂಜ್ಯೋತಿ ಸ್ವ-ರೂಪವಾಗಿ ಬೆಳಗುವ, 'ಯತ್ ಜ್ಯೋತಿಷಾಂ ಜ್ಯೋತಿಃ' ಎಂದು ಮಾನವನ ಅನುಭವಕ್ಕೆ ಬಂದಿರುವ 'ಪರಂಜ್ಯೋತಿ—ನಾನು' ಸ್ಥಲಕ್ಕೆ ನಿಲುಕ ಬೇಕಾದರೆ ಇಬ್ಬರೂ ಹೇಳುವ ಸಾಧನೋಪಾಯ ಒಂದೇ. ನಾನು ಮನುಷ್ಯಪ್ರಾಣಿ, ನಾನು ದೇಹ, ನಾನು ಪ್ರಾಣ, ನಾನು ಕರಣ ಇಂದ್ರಿಯಗಳು, ನಾನು ಜೀವಾತ್ಮ—ಎಂದು ದೇಹ ಪ್ರಾಣಾದಿಗಳನ್ನು ಅರಿವಿನ ಮರಿಯಾದ 'ನಾನು' ಲೆಪ್ಪಿಸಿಕೊಂಡು, ಅವರೊಡನೆ ಬೆರೆದು, ಸಮರಸವಾಗಿ ಕೂಡಿ ಒಂದಾಗಿ, ಮಾನವ ಚೋಹದಲ್ಲಿ ಮಾನವಪ್ರಾಣಿಯಾಗಿ, ಮಾನವ ಜೀವಭಾವಿಯಾಗಿ ಇದ್ದೇನೆ. ಹೀಗೆ ಆಗಿ ಇದ್ದ ಇರವು, ಅರಿವಿನ ನಿಜ ತನ್ನಂತೆ ತಾನಿದ್ದ ಸಹಜದ ಇರವಲ್ಲ. ಶಂಕರಾಚಾರ್ಯರು ಅಥವಾ ನಿಜಗುಣರು ಹೇಳುವಂತೆ ನಾನು ದೇಹ ಅಲ್ಲ, ಅದು ನನಗೆ ಪ್ರಕೃತಿಯ ಗುಣ

ಧರ್ಮದ ಲೆಪ್ಪ; ಅದು ನಾನು ತೊಟ್ಟಿರುವ ಪ್ರಾಕೃತ ವೇಷ, ಮನುಷ್ಯ ರೂಪ. ನನಗೆ ಲೆಪ್ಪವಾಗಿರುವ ದೇಹದ ಚೋಹವನ್ನು ಬಿಚ್ಚಬೇಕು, ಕಳೆದಿಡಬೇಕು. ಅದರಂತೆ ನನ್ನ ಮನಸ್ಸು ಬುದ್ಧಿ ಚಿತ್ತ ಅಹಂಕಾರ, ನನ್ನ ಕಣ್ಣು ಕಿವಿ ಮೂಗು ನಾಲಗೆ, ನನ್ನ ಕೈಕಾಲು ಮುಂತಾದ ಕರ್ಮೇಂದ್ರಿಯ ಗಳೆಲ್ಲ 'ನಾನು' ಒಂದರ ಮೇಲೆ ಒಂದು ಹಚ್ಚಿಕೊಂಡು ಹಾಕಿ ಕೊಂಡು ತೊಟ್ಟುಕೊಂಡು ಇರುವ ಶಿವೋಹಂಭಾವದ ಅರಿವಿನ, 'ಶಿವ-ನಾನಿ'ನ ಕೋಶಗಳು, ಭಗವದ್ಗೀತೆ ಹೇಳುವ ವಾಸಗಳು. ನನ್ನ—ಜೀವ ಭಾವದ ನಿಜರೂಪವಾದ ನನ್ನ—ಅಂದರೆ ಶಿವಭಾವದ ನೆಲೆಯನ್ನು ಕಾಣ ಬೇಕಿದ್ದರೆ ಬಿಚ್ಚಬೇಕು ದೇಹವನ್ನು ; ಕಳೆಯಬೇಕು ಕಣ್ಣು ಕಿವಿ ಕೈಕಾಲು ಗಳನ್ನು ; ತೆಗೆದಿಡಬೇಕು ಮನ ಬುದ್ಧಿ ಚಿತ್ತ ಅಹಂಕಾರಗಳನ್ನು. ಏಕೆಂದರೆ ಇವೇನೂ ನಾನು, ನನ್ನ ನಿಜರೂಪದ ನಾನು ಅಲ್ಲ. ನ ಇತಿ ಎಂದು ಕಳೆದು ಬಿಚ್ಚಿಡುವ ಅರಿವಿನ ಈ ಕೆಲಸ ಇನ್ನೂ ಮುಗಿಯಲಿಲ್ಲ. ದೇಹಾದಿ ಗಳನ್ನು ಭೂತಬ್ರಹ್ಮಾಂಡಗಳನ್ನು ರೂಪುಮಾಡಿ, ನಾಮರೂಪಕ್ರಿಯೆ ಯಾಗಿ ಸಂಭ್ರಮಿಸಿ ಇರುವ ಜಗತ್‌ಪ್ರಪಂಚಕ್ಕೆ ಮೂಲದ್ರವ್ಯವಾಗಿರುವ ಪೃಥ್ವಿಯನ್ನು ನಾನು ಅಲ್ಲ ಎಂದು ಕಳೆದು ಇಡಬೇಕು. ಅದರಂತೆ ದೇಹದ ಬೊಂಬೆ, ವಿಶ್ವ ಜಗನ್‌ಮೂರ್ತಿಯನ್ನು ಮಾಡಿರುವ ಭೂತಜಲವನ್ನು ಕಳೆದು ದಾಟಿ ಹೋಗಬೇಕು. ಮತ್ತೆ ತೇಜ ವಾಯುಗಳನ್ನು ಕಳೆದಿಟ್ಟು ಮುಂದೆ ಹೋಗಬೇಕು. ಆಕಾಶವನ್ನೂ ಬಿಚ್ಚಿಟ್ಟು ಅದರಾಚೆ ದಾಟಿ ನಡೆಯ ಬೇಕು. ಆಗ ಬರುತ್ತದೆ ಸಚ್ಚಿದಾನಂದ ರೂಪ ತಾನಾದ 'ಶಿವೋಹಂ' ಸ್ಥಲ, ಪರಂಜ್ಯೋತಿ ಸ್ಥಲ. ಭೂಮಿ ಮೊದಲು ಪ್ರಕೃತಿ ಕಡೆಯಾದ ಇಪ್ಪತ್ತೈದು ತತ್ವಗಳನ್ನು ನಾನಲ್ಲವೆಂದು 'ನೇತಿಗಳೆದು' ನೋಡಿದರೆ, ಆಗ ಕಾಣಬರು ತ್ತದೆ ನಾನಿನ ಪರಮಪದ, ಪರಂಧಾಮ. ಹೀಗೆ ಎಲ್ಲವನ್ನು ಕಳೆದು, ತನಗೆ ಲೆಪ್ಪವಾಗಿ ಬಂಧನಗೊಳಿಸುವ ಪಾಶವಾಗಿ, ಸಚ್ಚಿದಾನಂದ ರೂಪವಾದ ತನ್ನನ್ನು ಜೀವಭಾವವೆಂಬ ಕತ್ತಲೆಯ ತತ್ತಿಯಲ್ಲಿ ಕುಳ್ಳಿರಿಸಿರುವ ಅಜ್ಞಾನದ ಪದರು ಪದರುಗಳನ್ನೆಲ್ಲ ಕಿತ್ತು ಹಾಕಿ, ತಾನು ಅವರ ಮಾಯಾ ಜಾಲದ ಬಂಧನದಿಂದ ಬಿಡಿಸಿಕೊಂಡು ಪಾರಾಗಿ ನಿಂದುದೇ ಮುಕ್ತಿ, ಮೋಕ್ಷ. 'ಶಿವ-ನಾನು' 'ಜೀವ-ನಾನಿ'ನಿಂದ ಹೀಗೆ ಬಿಡುಗಡೆ ಹೊಂದುವ

ಹಾದಿಗೆ ಜ್ಞಾನಮಾರ್ಗವೆಂದು ಕರೆಯುತ್ತಾರೆ ಶಂಕರಾಚಾರ್ಯರು ಮೊದಲಾದವರು.

ಆದರೆ ಇಲ್ಲಿ ಒಂದು ಪ್ರಶ್ನೆ. ಬಿಚ್ಚಿ ಕಳೆದಿಟ್ಟ ಕಾಯ ಕರಣಾದಿಗಳ, ವ್ಯೋಮ ಭೂಮಿಗಳ ಗತಿ ಏನು? ಅದ್ವೈತಜ್ಞಾನದ ಕೇವಲ ದೃಷ್ಟಿಯಲ್ಲಿ ಅವೆಲ್ಲ ಮಾಯೆ, ಆತ್ಮನಲ್ಲಿ ಆದ ಅಧ್ಯಾಸ, ಸ್ವಪ್ನ, ಭ್ರಾಂತಿ. ತನ್ನ ಅರಿವು ತನಗಾದ ಆತ್ಮಜ್ಞಾನದಿಂದ, ಜೀವಾತ್ಮ ಪರಮಾತ್ಮರು ಒಂದಾದ ಅದ್ವೈತ ಜ್ಞಾನದಿಂದ ಅವೆಲ್ಲ ತಾವೇ ಕರಗಿ ಮಾಯವಾಗಿ ಹೋಗುತ್ತವೆ. ಅದು ಹೇಗೆ? ಬಿಸಿಲಿನಲ್ಲಿ ಮೃಗಮರೀಚಿಕೆಯ ಇಲ್ಲದ ಜಲ ಹರಿಯುತ್ತದೆ. ಬಿಸಿಲು ಅಡಗಿದರೆ ಬಿಸಿಲುಗುದುರೆ ಇಲ್ಲ, ಇಲ್ಲದ ಜಲ ಮೊದಲೇ ಇಲ್ಲ. ಹಗ್ಗದಲ್ಲಿ ಹಾವು ಹೆಡೆಯೆತ್ತುವುದು ಭ್ರಾಂತಿ. ಶುಕ್ತಿಕೆಯಲ್ಲಿ ಬೆಳ್ಳಿ ಕಾಣುವುದು ಅಧ್ಯಾಸ. ಅರಿವಿನ ನಿದ್ರೆಯಲ್ಲಿ ಸ್ವಪ್ನದ ಮಾಯೆ. ಅರಿವು ಪೂರ ಕಣ್ದೆರೆದರೆ ಕಾಣುವುದಿಲ್ಲ ಸ್ವಪ್ನ. ಜೀವಭಾವದ ಅರಿವು ಸುಪ್ತಿಯ ಅಂಧತಮವನ್ನು, ಸ್ವಪ್ನದ ರಾತ್ರಿಯ ಹಗಲನ್ನು, ಜಾಗ್ರದವಸ್ಥೆಯ ಹಗಲು ರಾತ್ರಿಯನ್ನು ಕಾಣುವುದು ಕಣ್ಣಿನ ದೋಷ, ಅರಿವಿನ ಮರವೆ, ಅಜ್ಞಾನ. ಈ ಅಜ್ಞಾನ ದೃಷ್ಟಿಯ ವಿಚಿತ್ರ ಹಗಲು ರಾತ್ರಿಗಳಲ್ಲಿ ಕಾಣುವ 'ಕಳ್ಳ' ಪ್ರಪಂಚ, ದೃಷ್ಟಿಯ ಮಬ್ಬು ಓರೆಯಾದರೆ ನಿಜವಾಗಿ 'ಸ್ಥಾಣು'. ಅದರಂತೆಯೆ ವಿಶ್ವಪ್ರಪಂಚ ಮರವೆಯ ಬೆಳಸು. ಕಣ್ಣನ್ನು ಮಬ್ಬುಗೊಳಿಸಿರುವ ಪರೆ ಹರಿದು, 'ತಾನು ಶಿವ' 'ಅಹಂ ಬ್ರಹ್ಮಾಸ್ಮಿ' ಕಂಡ ಬಳಿಕ, ಮರವೆಯ ಮಬ್ಬಿನಲ್ಲಿ ಮೂಡಿ ಆಡಿದ ಪ್ರಪಂಚದಿಂದೇನು? ಇದ್ದ ಬ್ರಹ್ಮವೆ ತಾನಾಗಿ ನಿಂದ ಮೇಲೆ ಅಜ್ಞಾನ ಮರೀಚಿಕೆಯ ಜಲಪ್ರಪಂಚವನ್ನು ಇಟ್ಟುಕೊಂಡರೇನು ಫಲ? ಕತ್ತಲೆಯಲ್ಲಿ ಕಾಣದೆ ಸುತ್ತಿಕೊಂಡ ಭೂಮಿ ಆಕಾಶ ಕಾಯ ಕರಣಗಳನ್ನು, ಮನ ಬುದ್ಧಿ ಜೀವಾಹಂಕಾರಗಳನ್ನು ಮತ್ತೆ ಉಟ್ಟುಕೊಳ್ಳಬೇಕೆ? ಕತ್ತಲೆಯ ಮಾಯೆಯನ್ನು, ಮಾಯಾಪ್ರಕೃತಿಯ 'ಅಸಡ್ಡಾಳ' ವಿಕಾರವನ್ನು ಹಗಲಿನಲ್ಲಿ ಧರಿಸಿಕೊಂಡರೆ 'ಹುಚ್ಚರ ಚಕ್ರವರ್ತಿ' ಯೆಂದು ಜಗತ್ತಿಗೆ ಜಗತ್ತೇ ನಗಲಿಕ್ಕಿಲ್ಲವೆ? ನೇತಿಗಳೆದ ಎಲ್ಲವು ಮಾಯೆ, ಅವಿದ್ಯೆ, ಅಜ್ಞಾನ, ಜಡ, ಪ್ರಕೃತಿ, ಕತ್ತಲೆ, ವಿಕಾರ, ವಿಕಟವಾದ ವಿಚಿತ್ರ ವಿಕಾರ. ಕಳೆದಿಟ್ಟ ಕತ್ತಲೆಯ ದೇಹ ಮನ ಪ್ರಾಣ ಬುದ್ಧಿಗಳನ್ನು, ವ್ಯೋಮ

ಭೂಮಿ ತೇಜ ವಾಯುಗಳನ್ನು ಜ್ಞಾನಾಗ್ನಿಯಿಂದ ಸುಟ್ಟು ಹಾಕಬೇಕು. ನೇತಿಗಳೆದುದನ್ನು ಪೂರ ಅತಿಗಳೆಯಬೇಕು. ಏಕೆ? ಅದೆಲ್ಲ ಮಾಯೆಯ ಬಣವೆ, ಭ್ರಾಂತಿಯ ಭೂತ, ಕತ್ತಲೆಯು ಮಳೆಗರೆವ ಮೇಘಾಡಂಬರ. ಸುಖ ದುಃಖ ಪಾಪ ಪುಣ್ಯ ಮೇಲು ಕೀಳು ಲಾಭಾಲಾಭ ಜಯಾಜಯ, ಪಶುಪಕ್ಷಿ ಮರ ಮನುಷ್ಯ ಕಲ್ಲು ಬಯಲು ಜಡ ಅಜಡಗಳ ದ್ವೈತದ ಭಿನ್ನ ವಿಲಾಸವೇ ವಿಶ್ವಾಡಂಬರದ ಈ ಮಾಯೆ. ಮಾಯೆಯನ್ನು, ಮಾಯೆಯ ಸಂತತಿಯನ್ನು ನಿರ್ನಾಮ ಮಾಡಬೇಕು, ನಿಶ್ಶೇಷಗೊಳಿಸಬೇಕು. ಯಾವ ಅರ್ಥವೂ ಇಲ್ಲದ, ಏನು ಉದ್ಯೋಗ ಯಾವ ಪ್ರಯೋಜನ ಉದ್ದೇಶವೂ ಇಲ್ಲದ, ನ ಸತ್, ನ ಅಸತ್, ನ ಸದಸತ್—'ಉಂಟೆನಿಸದಿಲ್ಲೆನಿಸದುಂಟಿಲ್ಲೆನಿಸದ'—ಮಾಯೆಗೆ ಏಕಮೇವವಾದ, ಅದ್ವಿತೀಯವಾದ ಪರಬ್ರಹ್ಮದಲ್ಲಿ ಸ್ಥಳವೇನು? ಅದರ ಸ್ವರೂಪವೇನು? ಅದೆಲ್ಲ ಅನಿರ್ವಚನೀಯ. ಹೇಳಬಾರದು, ಕೇಳಲೂಬಾರದು.

ಮಾಯೆ ಬೆಂಬತ್ತಿರುವ ಅದ್ವೈತ ಇದು. ಬ್ರಹ್ಮ ಸತ್ಯ, ಜಗತ್ತು ಮಿಥ್ಯೆ, ಮಾಯೆ. ಸುಳ್ಳಾದ ಜಗತ್ತಿನಲ್ಲಿ ನಡೆದ ವ್ಯಾಪಾರ ಸುಳ್ಳು. ಜಗತ್ತಾಗಿ ನಡೆದಿರುವ ಪ್ರಪಂಚವಿಲಾಸ, ಮಾಯೆಯಾಡುವ ಮಿಥ್ಯಾಸಂಭ್ರಮ. ನಾನು ಬರೆವುದು ಮಾಯೆ, ನೀವು ಓದುತ್ತಿರುವುದು ಮಾಯೆ. ನನ್ನ ಬುದ್ಧಿಯಲ್ಲಿ ಸಂತೆಗೂಡಿರುವ ವಿಚಾರ ಮಾಯೆ, ನನ್ನ ಭಾವದಲ್ಲಿ ನೆರೆದಿರುವ ಜಾತ್ರೆ ಮಾಯೆ. ಪ್ರಾಣದ ಉಸಿರು ಮಾಯೆ, ಕೈಯ ಕೃತಿ ಮಾಯೆ. ನೋಡುವುದು ಮಾಯೆ, ನೋಡಿಸಿಕೊಂಬುದು ಮಾಯೆ. ಕೇಳುವ ಕಿವಿ ಮಾಯೆ, ಕೇಳಿಸಿಕೊಳ್ಳುವ ಶಬ್ದಪ್ರಪಂಚ ಮಾಯೆ. ನನ್ನ ಹೆಂಡತಿ ಮಕ್ಕಳು ಮನೆ ಮಾರು, ನನ್ನ ಊಟ ಬೇಟ ನಿದ್ರೆ ಎಚ್ಚರ, ನನ್ನ ಧರ್ಮ ಜಾತಿ ಕುಲ, ನಾನು ಕಟ್ಟಿದ, ಕಟ್ಟುತ್ತಿರುವ ತತ್ತ್ವ ವಿಜ್ಞಾನ, ಯಂತ್ರ ಕಲೆ, ಸಂಘ ಸಂಸ್ಥೆ, ದೇಶ ಕೋಶ ರಾಷ್ಟ್ರ ವಿಶ್ವರಾಷ್ಟ್ರ, ಸಹಕಾರ ಸಹಜೀವನ ಶಾಂತಿ ಸಮೃದ್ಧಿಗಳೆಲ್ಲ ಮಾಯೆಯ ಕೈವಾಡ, ಕತ್ತಲೆಯ ವೃಥಾವಿಲಾಸ. ಅಹಂಕರಿಸಿ ಕಟ್ಟುತ್ತಿರುವ ನಾನು ಮತ್ತು ನಾನು ವಾಸಮಾಡಿ, ಕೆಲಸ ನಡೆಸಿರುವ ಜಗತ್ತೆ (ಮಿಥ್ಯೆಯೆಂದ ಬಳಿಕ ಉಳಿದ 'ಜೀವನ ಸಂತೆ' ಎಲ್ಲ ಮಾಯಾದೇವಿಯ ಛಾಯಾನಾಟಕ.

ಹಾಗಿದ್ದರೆ ಇಂಥ ಜಗತ್ತಿನಲ್ಲಿ ಇಂಥ ನಾನು ಇರಬೇಕು ಏಕೆ? ಈ ನಾನು ಇರಬೇಕು ಎಂದು ಹೇಳುವವರು ಯಾರು? ಬ್ರಹ್ಮ ನಾನಾಗಿ ಇದ್ದರೆ ತೀರಿತು ಪ್ರಪಂಚಯಾತ್ರೆ; ಮುಗಿಯಿತು ಮಾಯೆಯ ಅಧ್ಯಾಯ. ನನ್ನ ದೇಹ ನನ್ನ ಪ್ರಾಣ ನನ್ನ ಹೆಂಡತಿ ಮಕ್ಕಳು ನನ್ನ ಪ್ರಪಂಚ ಸಂಸಾರ, ಮತ್ತೆ ನನ್ನ ಸುತ್ತುಮುತ್ತಿ ಇರುವ ಜಗತ್ ಪ್ರಪಂಚದ ಸಂಸಾರ ಇದೆಯಲ್ಲ, ಇದಕ್ಕೇನು ಉತ್ತರ? ಉತ್ತರ ಒಂದೇ, ಸಂನ್ಯಾಸ. ಎಲ್ಲವನ್ನು ಕೆಳಗಿಡಬೇಕು, ಹೊರಗಿಡಬೇಕು, ಬಿಟ್ಟುಬಿಡಬೇಕು. ಇರುವವರೆಗೆ ದೇಹ ಇರುತ್ತದೆ, ಇರಲಿ. ಪ್ರಾಣ ಉಸಿರಾಡಿಸುತ್ತದೆ, ಆಡಿಸಲಿ. ಬುದ್ಧಿ ವಿಚಾರಿಸುತ್ತದೆ, ವಿಚಾರಿಸಲಿ. ಭಾವ ಭಾವಿಸುತ್ತದೆ, ಭಾವಿಸಲಿ. ಆದರೆ ಇದೆಲ್ಲ ಮಾಯಾವಿಲಾಸ ಎಂಬ ಅರಿವಿರಲಿ. ಆದ್ದರಿಂದ ಅವೆಲ್ಲ 'ಉರಿವ'ವರೆಗೆ ಉರಿಯಲಿ. ಆದರೆ ಅವಕ್ಕೆ ಮತ್ತೆ ಎಣ್ಣೆ ಹಾಕಬೇಡ, ಬತ್ತಿ ಹೊಸೆಯಬೇಡ. ನಂದಿ ಹೋಗುತ್ತವಲ್ಲಾ! ಎಂದು ಚಿಂತಿಸಬೇಡ. ಎಲ್ಲ ನಂದಿದರೆ ಸಂನ್ಯಾಸದ ಚರಮಾಧ್ಯಾಯ ಸಮಾಪ್ತಿ. ಆಗ ಮಾಯೆಯಿಂದ ಸಂಪೂರ್ಣ ಮುಕ್ತಿ. ಅದೇ ಪರಮ ಪದ, ಅದೇ ಪರಮ ಪುರುಷಾರ್ಥ.

ಕೇವಲ ಜ್ಞಾನಮಾರ್ಗದ ಗಂತವ್ಯ ಇದು. ಮಾನವನನ್ನು ಪ್ರಪಂಚದಿಂದ ನಿವೃತ್ತಗೊಳಿಸಿ, ಬ್ರಹ್ಮಕ್ಕೆ ಕೊಂಡೊಯ್ವ ನಿವೃತ್ತಿ ಮಾರ್ಗ ಇದು. ನಾವೆಲ್ಲ ಪ್ರಪಂಚದಲ್ಲಿ ತೊಡಗಿರುವ ಪ್ರವೃತ್ತಿ ಮಾರ್ಗವನ್ನು, ಶಂಕರಾಚಾರ್ಯರಾಗಲಿ ಅಥವಾ ಬೇರಾವ ಜ್ಞಾನಿಗಳಾಗಲಿ ನಮಗೆ ಹೇಳಬೇಕಿಲ್ಲ. ಮೀನಕ್ಕೆ ನೀರಿನ ಪರಿಚಯ ಯಾರು ಮಾಡಿಕೊಡಬೇಕು? ಹಾರುವ ಹಕ್ಕಿಗೆ ಬಯಲಿನ ಲಕ್ಷಣಶಾಸ್ತ್ರ ಬೇಕಿಲ್ಲ. ತನ್ನ ತಾನೆ ಹರಿಯುತ್ತಿದೆ ಪ್ರಾಕೃತ ಪ್ರಪಂಚ ಕೆಳಮುಖವಾಗಿ. ಇಂಥ ಪ್ರಪಂಚದ ಸೆಳವಿನಲ್ಲಿ ಹರಿದು ಹೋಗುತ್ತಿರುವ ಮನುಷ್ಯನನ್ನು ಮಾನುಷ ಪ್ರವೃತ್ತಿಯಿಂದ ತಿರುಗಿಸಿ, ಮೇಲುಗಡೆ ಬ್ರಹ್ಮಕ್ಕೆ ಎತ್ತುತ್ತದೆ ಜ್ಞಾನಮಾರ್ಗ. ಇದು ಕಲ್ಯಾಣ ಮಾರ್ಗವೇ. ಆದರೆ ಈ ಮಾರ್ಗ ಮಾನವನ ಬುದ್ಧಿ ಹೃದಯ ಪ್ರಾಣ ಭಾವ ಕಣ್ಣು ಮೂಗು ಕೈಯಿ ಕಾಲು—ಇವರ ಮನಸ್ಸು ಒಪ್ಪುವ ಮಾರ್ಗವಲ್ಲ. ಅರಿವನ್ನು ಪರಬ್ರಹ್ಮಕ್ಕೆ ಎತ್ತಿ, ಅರಿವಿನ ಅರಮನೆಯಾದ ದೇಹ ಪ್ರಾಣಾದಿಗಳನ್ನು, ಮತ್ತೆ ಅರಿವಿನ ಮಹಾಮನೆಯಾದ ಜಗತ್ತನ್ನು

‘ಮಾಯೆ’ ಎಂದು ‘ಸಂನ್ಯಸನ’ಮಾಡಿ ಕೆಳಗಿಟ್ಟು ಹೋದರೆ, ಮನುಷ್ಯ ಹೇಗೆ ಒಪ್ಪಬೇಕು? ಜಗತ್ತು ಏಕೆ ಒಪ್ಪಬೇಕು? ಮನುಷ್ಯ ಏಕೆ ಹುಟ್ಟಿ ಬಂದ? ಜಗತ್ತು ಏಕೆ ವೈದೋರಿತು? ಎಲ್ಲ ಮಾಯೆ, ಬ್ರಹ್ಮದ ಮಿಥ್ಯಾಲೀಲೆ, ಮಾಯಾವಿಲಾಸ ಎಂದು ಹೇಳಿದರೆ, ಮಾಯಾವಾದಿಗಳ ಅರ್ಥ, ವಿಶ್ವ ಪ್ರಪಂಚಕ್ಕೆ ಸತ್ಯವಾದ ಅರ್ಥ ಇಲ್ಲ ಎಂದರ್ಥವಾಗುತ್ತದೆ. ಅರಿವಿನ ಹಸಿವನ್ನು ಹಿಂಗಿಸುವ ಭರದಲ್ಲಿ ದೇಹದ ಹಸಿವೇನು? ಪ್ರಾಣದ ಬಯಕೆಯೇನು?ಬುದ್ಧಿಯ ವಿಚಾರವೇನು? ಭಾವದ ನಿಜಾಂತರಂಗದ ಕೂಗು ಏನು? ನೆಲ ನೀರು ಬೆಂಕಿ ಗಾಳಿ ಬಯಲುಗಳಿಂದ, ಮತ್ತೆ ಬೇರೆ ಬೇರೆ ಏನೇನೊ ಕಲ್ಲು ಮಣ್ಣು ಗಚ್ಚು ಇಟ್ಟಿಗೆಗಳಿಂದ ವಿಶ್ವಬ್ರಹ್ಮಾಂಡಗಳು ಏಕೆ ನಿರ್ಮಾಣವಾಗಿ, ಏಕೆ ಬೆಳೆದು, ಅಳಿದು ಉಳಿದು ನಿಂತಿವೆ ಮಹಾಂತಮೂರ್ತಿಯಾಗಿ? ಅಣು ರೇಣು ತೃಣ ಕಾಷ್ಠದಲ್ಲಿ, ದೇಹ ಪ್ರಾಣ ಕಣ್ಣು ಕಾಲು ಮನ ಬುದ್ಧಿಯಲ್ಲಿ, ನದಿ ಪರ್ವತ ಆಕಾಶ ನಕ್ಷತ್ರಕೋಟಿಯಲ್ಲಿ, ನಮಗೆ ಗೊತ್ತಿದ್ದ ಗೊತ್ತಿಲ್ಲದ ಭೂತಬ್ರಹ್ಮಾಂಡಗಳಲ್ಲಿ ಅರ್ಥ ಕಾಣದಿದ್ದರೆ, ಎಲ್ಲ ಅರ್ಥವನ್ನು ನಿರಾಕರಿಸುವ ‘ಮಾಯೆ’ ಎಲ್ಲೆಲ್ಲಿ ಕಂಡರೆ, ಇದು ದೃಷ್ಟಿಯ ದೋಷ, ಅನುಭವದ ಕೊರತೆ, ಜ್ಞಾನದ ಸ್ವಾರ್ಥ, ಮಾರ್ಗದ ಸಂಕೋಚ, ಪರಿಪೂರ್ಣದ ನಿರಾಕರಣೆ. ಸಚ್ಚಿದಾನಂದದ ಬ್ರಹ್ಮಭವ್ಯವನ್ನು ಕಂಡು, ಅರಿವು ಯಾರನ್ನೂ ಲೆಕ್ಕಿಸದೆ ತಾನೊಬ್ಬನೆ ಭವ್ಯಕ್ಕೆ ಏರುತ್ತಿರುವಾಗ, ನಿಮಿಷ ನಿಮಿಷಕ್ಕೆ ಅಡ್ಡಿಯಾಗಿ ಆತಂಕವಾಗಿ, ಅಂತರಾಯವಾಗಿ ಕಡುವೈರಿಯಾಗಿ, ಜನ್ಮಜನ್ಮಾಂತರದ ಮಹಾಶತ್ರುವಾಗಿ ಸೆಣಸಿ ಪ್ರತಿ-ಭಟಿಸಿ ಪ್ರತಿ-ರೋಧಿಸಿ ನಿತ್ಯ ನಿರಂತರ ಯುದ್ಧವನ್ನೆ ಹೂಡಿದ ದೇಹ ಪ್ರಾಣ ಕರಣ ಇಂದ್ರಿಯ, ಮನೆ ಮನೆಯ ಹೆಂಡತಿ, ಹಡೆದ ಮಕ್ಕಳು ಬಂಧು ಬಾಂಧವರು ಹೊನ್ನು ಹೆಣ್ಣು ಮಣ್ಣು, ವಿಷಯವಾರಾಶಿ, ವಾರಾಶಿಯಲ್ಲಿ ಏಳುವ ಕಾಮಕ್ರೋಧ ಸುಖದುಃಖ ಪ್ರೇಮದ್ವೇಷ, ಮತ್ತೆ ವಿಷಯದ ಅಮೃತ ವಿಷಸಮುದ್ರವನ್ನು ಹಡೆಯುತ್ತಿರುವ ಜಗತ್ತು ಮುಂತಾದ ಪ್ರಪಂಚದ ಸಂಗ ಸಂಗತಿಯನ್ನೆ ಬಿಟ್ಟು ಅವರಿಂದ ಪಾರಾಗಿ ಏರಿ ಹೋದ ಮಾರ್ಗ ‘ಜಗನ್‌ಮಿಥ್ಯೆ’ಯನ್ನು ಪ್ರತಿಪಾದಿಸುವ ಶುದ್ಧಾದ್ವೈತಮಾರ್ಗ, ಮಾಯಾಮಾರ್ಗ, ಕೇವಲ ನಿವೃತ್ತಿ ಮಾರ್ಗ, ಸಂನ್ಯಾಸಮಾರ್ಗ, ನಿರಾಸಮಾರ್ಗ. ಒಂದು ದೃಷ್ಟಿಯಿಂದ

ನೋಡಿದರೆ ಮನೆ ಹಿಡಿದುಕೊಂಡಿದ್ದು, ದೇಹಪ್ರಾಣಾದಿಗಳನ್ನು ಹಿಡಿದುಕೊಂಡಿದ್ದು, ಮಾನವಕುಲದ ವಿಶ್ವಭೂತಜಾತಿಯ ಬಾಂಧವ್ಯವನ್ನು ಹಿಡಿದುಕೊಂಡಿದ್ದು, ಬದುಕು ಬಾಳುವೆ ಮಾಡುವ ಸಾಮರ್ಥ್ಯವಿಲ್ಲದೆ ಎಲ್ಲವನ್ನು ಎಲ್ಲರನ್ನು ರಾತ್ರಿಯಲ್ಲಿ ಬಿಟ್ಟು ಓಡಿ ಹೋದ ಹಾದಿ ಇದ್ದಂತಿದೆ ಆ ಮಾರ್ಗ. ತಾನೊಬ್ಬನೆ ಕಂಡು ಇರಬಹುದು ಬೆಳಗಿನ ನಾಡಿನಲ್ಲಿ, ಸತ್ತಿನ ಸೀಮೆಯಲ್ಲಿ, ಅಮೃತದ ಬೀಡಿನಲ್ಲಿ. ಅಲ್ಲಿಂದ ಬಂದು ಉಳಿದೆಲ್ಲರನ್ನೂ ಅಲ್ಲಿಗೆ ಕೊಂಡೊಯ್ಯಬಾರದೆ? ಅವರಿಗೆ ನೀವೆಲ್ಲ 'ಮಾಯೆ' ಎಂದು ಮಾಯೆಯ ಧ್ವನಿಯಲ್ಲಿ ಮಾಯೆಯ ಕಿವಿಗೆ ಹೇಳಿ ಮಾಯವಾಗಿ ಬಿಡಬೇಕೆ? ಎಲ್ಲಿಯ ನ್ಯಾಯ?

ಆದರೂ ಪ್ರಪಂಚವನ್ನು ನಿರಾಕರಿಸುವ ಮಾಯಾವಾದದಲ್ಲಿ ಯಾವ ತಥ್ಯಾಂಶ ಇಲ್ಲವೆಂದು ಹೇಳುವುದು ತಪ್ಪು. ತಥ್ಯವಿದೆ ಅದರಲ್ಲಿ, ಒಂದು ಅರ್ಥದಲ್ಲಿ. ಅದನ್ನು ಹೀಗೆ ಸೋಸಿ ಆರಿಸಿ ತೆಗೆದುಕೊಳ್ಳಬಹುದು: ಏಕಮೇವ ಅದ್ವಿತೀಯವಾದ ಬ್ರಹ್ಮ ಸತ್ಯ. ಸತ್ಯಬ್ರಹ್ಮದಿಂದ ಒಗೆದ ಜಗತ್ತು ಸತ್ಯ. ಬ್ರಹ್ಮದ ಇರವು ಒಂದು, ಬ್ರಹ್ಮದಿಂದ ಆದ ಜಗತ್ತಿನ ಇರವು ಹಲವು. ಚಂದಿಮರಸರ ವಿಚಾರದಂತೆ, ವಚನಕಾರರ ಅನುಭವದಂತೆ ಸಮುದ್ರಲಿಂಗ ಒಂದು, ತರಂಗಲಿಂಗ ಹಲವು. ಆದರೆ ಸಮುದ್ರಗಂಭೀರವನ್ನೆ ಕಾಣದೆ, ಕಡೆಗಣಿಸಿ, ಮೇಲೆ ಎದ್ದು ಲೀಲೆ ತೋರುವ ತರಂಗ ಪ್ರಪಂಚವನ್ನು ಶಾಶ್ವತಸತ್ಯವೆಂದು ಆದಕ್ಕೆ ಗಟ್ಟಿಯಾಗಿ ಅಂಟಿಕೊಂಡು, ತಾನೊಂದು ತರಂಗವಾಗಿ ಎದ್ದು, ಉಳಿದ ತರಂಗಗಳನ್ನು ತನ್ನಿಂದ ಬೇರೆಯಾಗಿ ಕಂಡು, ಬೇರೆಯಾಗಿ ಕೇಳಿ, ಬೇರೆಯಾಗಿ ಇದ್ದು ಬಿದ್ದು ಹೋಗಬಾರದು. ಒಂದು ತೆರೆ ಉಳಿದ ತೆರೆಯ ಸಂಬಂಧವಿಲ್ಲದೆ ಒಂದು ನಿಮಿಷ ನಿಮಿಷಾರ್ಧ ಇರಲಾರದು. ಎಲ್ಲ ತೆರೆ ಒಂದನ್ನು ಬಿಟ್ಟು ಬೇರೆಯಾಗಿ ಬಾಳಲಾರವು. ಇವೆಲ್ಲ ಸಮುದ್ರದಿಂದ ಅಗಲಿ, ಅಥವಾ ತರಂಗಸಂತತಿಯಿಂದ ಸಮುದ್ರ ಅಗಲಿ ಒಂದು ಕ್ಷಣಮಾತ್ರ ಇರಲಾರವು. ತೆರೆಗಳನ್ನು ಹಡೆದು ಮೇಲೆ ಹೊರಬೇಕು, ಇಲ್ಲವೆ ತನ್ನೊಳಗೆ ಅಡಗಿಸಿಕೊಂಡು ಒಳಗೆ ಹೊರಬೇಕು ಸಮುದ್ರ. ಬ್ರಹ್ಮ ಒಂದು, ಒಂದೇ ಹಲವು. ಒಂದು ಸತ್ಯ, ಹಲವೂ ಸತ್ಯ. ಎಂದಿಗೂ ಒಂದು ಮತ್ತು ಹಲವು ಕೂಡಿ, ಒಂದಾಗಿ ಇದ್ದ ಪರಿಪೂರ್ಣ

ಸತ್ಯ ಒಂದು. ಆದರೆ ಕಾಣುವ ಸತ್ಯ ಕಣ್ಣಿನ ಎತ್ತರ. ನನಗೆ ಕಾಣುವ ನಾನು ನನಗೆ ಕಾಣುವ ಜಗತ್ತು, ನಿಮಗೆ ಕಾಣುವ ನೀವು, ನಿಮಗೆ ಕಾಣುವ ನಿಮ್ಮ ಜಗತ್ತು ನಮ್ಮಷ್ಟೆ ಎತ್ತರ; ನಮ್ಮ ಅರಿವಿನಷ್ಟೆ ಎತ್ತರ, ಅಗಲ ಆಳ; ನಮ್ಮ ಕರಣ ಇಂದ್ರಿಯಗಳಂತೆ ಅದರ ರೂಪ ಬಣ್ಣ. ಕಣ್ಣು ಕಿವಿಯು ಮುಖವಾಗಿ ಮನ ಬುದ್ಧಿಯು ಗುಣಧರ್ಮದಂತೆ ಮನುಷ್ಯ ಕಾಣುವ 'ನಾನು–ಪ್ರಪಂಚ'ವನ್ನು ಮಾನುಷ ಸತ್ಯ, ಮನುಷ್ಯಸ್ಥಲದ ಸತ್ಯವೆಂದು ಕರೆದರೆ, ಅರಿವಿನ ವಿಕಾಸ ದೃಷ್ಟಿಯಿಂದ ಮನುಷ್ಯನಿಗಿಂತ ಕುಳ್ಳಾಗಿರುವ ಪಶು ಪಕ್ಷಿ ಕ್ರಿಮಿ ಕೀಟಕ ಮರ ಬಳ್ಳಿಗಳಿಗೆ ಅವರವರ ಎತ್ತರಕ್ಕೆ ಕಾಣುವ ಅವು ಮತ್ತು ಜಗತ್ತು. ಅವೂ ಅವರಷ್ಟೆ ಎತ್ತರ. ಮತ್ತೆ ಮಣ್ಣು ಕಲ್ಲಿಗೆ ಏನಾದರೂ ಕಾಣುತ್ತಿದ್ದರೆ ಅದು ಅವರ ಜಗತ್ತು, ಅವರ ಸತ್ಯ. ಮನುಷ್ಯಕುಲದಲ್ಲಿಯೆ 'ಮನುಷ್ಯ'ನನ್ನು ಮೀರಿ ಬೆಳೆದಿರುವ ಬುದ್ಧ ಕ್ರೈಸ್ತ ಮುಂತಾದವರಿಗೆ ಅವರೆತ್ತರದ ಸತ್ಯ. ವಿಜ್ಞಾನಿಗೆ ವಿಜ್ಞಾನಿಯ ಸತ್ಯ, ಕಲಾಭಿಜ್ಞನಿಗೆ ರಸಸತ್ಯ. ಈ ಹಲವು ಸತ್ಯ ಒಂದು ಪರಿಪೂರ್ಣ ನಿತ್ಯಸತ್ಯದ ಅನಂತ ಆವಿರ್ಭಾವಗಳೆಂಬುದನ್ನು ಮರೆದು, ತನತನಗೆ ಕಂಡ ತಾನು–ಜಗತ್ತು ಸತ್ಯವೆಂದು ಅಲ್ಲಿಯೆ ಕುಳ್ಳಿರುವುದು. 'ಮಾಯೆ' ಎಂದು ಕರೆದರೆ, 'ಮಾಯಾವಾದ'ವೂ ಅರ್ಥವಂತವಾದೀತು. ಮಾನುಷಸತ್ಯದಿಂದ ದಿವ್ಯಸತ್ಯಕ್ಕೆ ಕೊಂಡೊಯ್ಯುದು ಜ್ಞಾನಮಾರ್ಗದ ಮಹಾಸಿದ್ಧಿ, ನಿಜ. ಆದರೆ ಪ್ರಪಂಚವನ್ನು ಅಲ್ಲಗಳೆದು, ಜಗತ್ತು ಮಿಥ್ಯೆ ಎಂದು ಹೇಳಿದ 'ಮಾಯಾವಾದ' ಮಾನವಕುಲದ ಪರಿಪೂರ್ಣ ಜೀವನಕ್ಕೆ 'ಮಾರಕ ಮಂತ್ರ'ವಾದಂತೆ ಪರಿಣಮಿಸಿದೆ. ಮಾಯಾವಾದ ಮಾಯೆ. ಸರ್ವಾಂಗ ಸಂತೃಪ್ತಿಯನ್ನು ಬೇಡುವ ಪರಿಪೂರ್ಣದ ಹೃದಯ ಒಪ್ಪುವ ವಿಚಾರ ಅದಲ್ಲ.

'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಬ್ರಹ್ಮಾನುಭವದೊಡನೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಅನುಭವವನ್ನೂ ಕಂಡರು ಉಪನಿಷತ್ಕಾರರು. ಅದರಂತೆ '....ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲಸಂಗಮದೇವ' (ವ.ಸಾ.ಸಂ.ಪು. ೧೨೦, ವ. ೧೨೨) ಎಂದು ಸಕಲವಾದ ಜಗತ್ತನ್ನು ನಿಷ್ಕಲವಾದ ಲಿಂಗವನ್ನು 'ಏಕೋದೇವ' ಎಂದು

ಕಂಡವರು ಶರಣರು. ಶರಣರು ಹೇಳುವ 'ಶಿವ ಜಗನ್ಮಯಸ್ಥಲ', 'ಸರ್ವಂ ಲಿಂಗಮಯಂ ಜಗತ್', 'ದೇವನೊಬ್ಬ, ನಾಮ ಹಲವು', ಮುಂತಾದ ಅನುಭವಗಳೆಲ್ಲ ದೇವನ ಏಕಮೇವ ಸತ್ಯವನ್ನು, ಆದ ಜಗತ್ತಿನ ದೇವ ಮಯ ಸತ್ಯವನ್ನು ಸಾರುತ್ತವೆ. ಒಂದೇ 'ಹಲವುಮಯ'ವಾಗಿ ಆವಿರ್ಭವಿ ಸಿದ್ದರೆ, ಒಂದು ಎಷ್ಟು ಪೂಜ್ಯ, ಹಲವೂ ಅಷ್ಟೇ ಪೂಜ್ಯ. ಒಂದು ಹೇಗೆ ಗಮ್ಯ, ಹಲವೂ ಹಾಗೆಯೆ ಗಮ್ಯ. ಒಂದು ಇದ್ದ ಇರವು, ಹಲವು ಒಂದ ರಿಂದ ಬಂದ ಇರವು. ಒಂದು ಬಂಗಾರದಿಂದ ಬಂಗಾರದ ಹಲವು ಆಭರಣ ಗಳಾಗಿ ರೂಪುಗೊಳ್ಳುವಂತೆ, ಒಂದು ಮಣ್ಣಿನಿಂದ ಮಣ್ಣಿನ ಅನೇಕ ಮಡಕೆಗಳು ರೂಪಾಗುವಂತೆ, ಒಂದು ಮತ್ತು ಎರಡರ ಅಥವಾ ಹಲವರ ಮೂಲಸಂಬಂಧ. ಒಂದು ಬ್ರಹ್ಮದಿರವು ತಾನಾಗಿ ಇದ್ದು, ಹಲವಾದ ಇರವಿ ನಲ್ಲಿ ತಾನಿರುವ 'ಸಮನ್ವಯ' ಸಾಧ್ಯವಿದೆಯೆ ಮನುಷ್ಯನಿಗೆ? ಒಂದು ದೇಹ ಒಂದು ಮನಪ್ರಾಣಭಾವದಲ್ಲಿ ವಾಸವಾಗಿದ್ದರೂ ಬ್ರಹ್ಮವನ್ನು ನಿಲುಕಿ, ಬ್ರಹ್ಮದಿರವು ತಾನಾಗಿ ಇದ್ದು, ಹಲವು ಇರವಿನಲ್ಲಿಯೂ ವೇಧಿಸಿ ಕೊಂಡು ವ್ಯಾಪಿಸಿಕೊಂಡು ಇರುವ ಸತ್ಯಾದ್ವೈತ ಸಾಮರ್ಥ್ಯ, ಶಿವಾದ್ವೈತ ಶಕ್ತಿ ಮಾನುಷಲಭ್ಯವೆ? ಸಾಧ್ಯವೆಂದು ಸಂಪಾದ್ಯವೆಂದು ಹೇಳುತ್ತಾರೆ, ಅಷ್ಟೇ ಅಲ್ಲ ಸಮನ್ವಯಸಿದ್ಧಿಯನ್ನು ಸಂಪಾದಿಸಿಕೊಂಡಿದ್ದಾರೆ ಶರಣರು. ಅದು ಹೇಗೆ? ಯಾವ ಮಾರ್ಗದಿಂದ? ಎಂಥ ಸಾಧನೆಯಿಂದ?

ಏಕಮೇವ ಬ್ರಹ್ಮ ಮತ್ತು ಸರ್ವಂ ಬ್ರಹ್ಮದ ಬ್ರಹ್ಮಸಮನ್ವಯ ಕಂಡಿದೆ ಭಕ್ತಿಯ ಮಾರ್ಗದಲ್ಲಿ ನಡೆದ ಶರಣರಿಗೆ. ಇದೋ ಇಲ್ಲಿ ಬನ್ನಿ ಷಣ್ಮುಖಸ್ವಾಮಿಗಳ ಬಳಿ. ಅವರ ಅನುಭವದ ಮಾತು ಕೇಳಿ:

ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ.
ಆ ಲಿಂಗದೊಳಗೆ ಎನ್ನ ತೋರಿದ.
ಎನ್ನೊಳಗೆ ತನ್ನ ತೋರಿದ ಮಹಾಗುರುವಿಂಗೆ
ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ.

ವ.ಸಾ.ಸಂ.ಪು. ೧೧೭, ವ. ೭೬

ಸಕಲವಾದ, ಸಾಕಾರವಾದ, ಹಲವಾಗಿ ನನಗೆ ಇದಿರಿಟ್ಟು ತೋರುವ ವಿಶ್ವವಿಸ್ತಾರದ ಮುಸುಕನ್ನು ತೆಗೆದು, ಒಳಗೆ ನೋಡಿದರೆ ಕಾಣಬರುವು

ದೇನು? ಲಿಂಗದೇವ, 'ಸಿಮ್ಮಲಿಗೆಯ ಚೆನ್ನರಾಮ'. ಬೀಸುವ ಗಾಳಿಯನ್ನು ಸುಮ್ಮನೆ ಕುಳ್ಳಿರಿಸಿ, ತರಂಗಮಾಲೆಯನ್ನು ಕಳೆದರೆ ಕಾಣುವುದೇನು? ಗಭೀರಸಮುದ್ರ. ಮಲ್ಲಿಗೆಯ ಮುದ್ರೆಯನ್ನು ಮೂಗಿನಿಂದ ಬಿಚ್ಚಿ ಕಳೆದರೆ ಏನಿದೆ? ಪರಿಮಳದ ವಿಸ್ತಾರ. ರತ್ನದ ಕರಂಡಕದ ಮುಚ್ಚುಳ ತೆಗೆದು ಒಳಗೆ ನೋಡಿದರೆ ರತ್ನ-ಕಾಂತಿ. ಕಾಂತಿಮಯವಾದ ರತ್ನ ಕಾಣಬೇಕಾದರೆ ಕರಂಡಕದ ಮುಚ್ಚುಳ ತೆಗೆಯಬೇಕು, ಕಣ್ಣ ಮುಚ್ಚುಳ ತೆಗೆಯಬೇಕು. ಕಣ್ಣಿನ ಮರವೆಯನ್ನು ತೆಗೆದು, ಅನಂತ ವಿಸ್ತಾರದ ಪ್ರಪಂಚಗತಿಯನ್ನು ಓರೆ ಮಾಡಿ ನೋಡಿದರೆ ಕಾಣುತ್ತದೆ ವಿಶ್ವಮಯವಾದ ವಿಶ್ವಾತೀತ ಲಿಂಗಾದ್ಭುತ. ಒಂದು ಪರಮ ಪರಮಾಣು ಬೊಂಬೆಯಾಗಿ, ವಿಶ್ವಪ್ರಪಂಚದೊಳಗೆ ನಿಂತಿರುವ ನಾನು ಅಥವಾ ನಾನಿನ ಮುಚ್ಚುಳ ತೆಗೆದರೆ, ಅದೋ ಆ ಲಿಂಗಾದ್ಭುತದೊಳಗೆ ನಾನು–ಅದ್ಭುತ ನಿಂತಿದ್ದೇನೆ. ವಿಶ್ವದೊಳಗೆ ಲಿಂಗ, ಲಿಂಗದೊಳಗೆ ನಾನು, ನನ್ನೊಳಗೆ ಈ ಅದ್ಭುತ ಅಂತರಂಗವನ್ನು ತೋರಿದ ಗುರು.

ಇದೇ ಸಮನ್ವಯಸಿದ್ಧಿಯ ಅನುಭವವನ್ನು ಮತ್ತೊಬ್ಬ ಅನುಭಾವಿ ಸ್ವತಂತ್ರಸಿದ್ಧಲಿಂಗೇಶ್ವರನ ಸನ್ನಿಧಿಯಲ್ಲಿ ಕುಳಿತು ಸಾವಧಾನವಾಗಿ ಕೇಳಿ:

> ಶಿವನೇ ತಾನೆನಗೆ ಗುರುವಾಗಿ ಬಂದು, ಎನ್ನ ಸಂಸಾರಸಾಗರವ ದಾಂಟಿಸಿ,
> ಅಖಂಡ ಪರಮ ಚೈತನ್ಯ ಶಿವಲಿಂಗವ ವಿಶ್ವದೊಳಗೆಲ್ಲಿಯೂ ಕಾಂಬಂತೆ
> ತೋರಿಸಿ, ವಿಶ್ವವ ಲಿಂಗದೊಳಗೆ ತೋರಿ, ಲಿಂಗವನೆನ್ನಂಗದೊಳ
> ಹೊರಗೆ ತೋರಿ, ಅಂಗವ ಲಿಂಗದೊಳಗಿರಿಸಿ ರಕ್ಷಿಸಿದನಯ್ಯ
> ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.

ವ.ಸಾ.ಸಂ. ಪು. ೧೧೫, ವ. ೬೧

ಈಗ ನಾನು ಎಲ್ಲಿ ಇದ್ದೇನೆ? ಎಲ್ಲಿಗೆ ಬಂದು ಇದ್ದೇನೆ? ಇಲ್ಲಿ ನಾನು ಬೆಳೆದು, ಆಗಿರುವುದು ಎಷ್ಟು ಎತ್ತರ? ಸಂಸಾರಸಾಗರವನ್ನು ದಾಟ ಬಂದಿದ್ದೇನೆ. ತೋರುವ ವಿಶ್ವವನ್ನು ದಾಟಿ, ಒಳಗೆ ಲಿಂಗದಲ್ಲಿಗೆ ಬಂದಿದ್ದೇನೆ. ಕಾಣಬರುತ್ತಿದೆ ಇಲ್ಲಿ ವಿಶ್ವವಿಸ್ತಾರವನೊಳಕೊಂಡ ಶಿವಲಿಂಗ. ಜಡಚೈತನ್ಯ, ಅಣುಚೈತನ್ಯ, ವಿದ್ಯುತ್‌ಚೈತನ್ಯ, ಬೆಂಕಿಯ ಚೈತನ್ಯ, ಸೂರ್ಯ ಚಂದ್ರಮರ

ಚೈತನ್ಯ, ಪ್ರಾಣಚೈತನ್ಯ, ಮನ ಬುದ್ಧಿಯ ಚೈತನ್ಯ, ಅರಿವಿನ ಚೈತನ್ಯ, ಮನುಷ್ಯನಿಗೆ ಗೊತ್ತಿದ್ದ ಗೊತ್ತಿಲ್ಲದ ಎಲ್ಲ ಚೈತನ್ಯಗಳಿಗೆ ಪ್ರಾಣಚೈತನ್ಯವನ್ನು ದಯಪಾಲಿಸಿ, 'ಆಕಾಶವಿತ್ತಿತ್ತ ಮಣಿಮಕುಟವತ್ತತ್ತ'ವಾಗಿ, 'ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ'ವಾಗಿ ಚೇತನಿಸಿ, ಅಖಂಡವಾಗಿ ಇರುವ ಪರಮಚೈತನ್ಯವೆ ತನ್ನ ರೂಪವಾಗಿರುವ ಶಿವಲಿಂಗ ಕಾಣಬರುತ್ತಿದೆ. ವಿಶ್ವದೊಳಗೆ ಕಂಡುಬರುವ ಈ ಅಖಂಡಚೈತನ್ಯ ವಿಶ್ವವಿಸ್ತಾರದ ಹೊರಗೂ ಹಬ್ಬಿಕೊಂಡು ಇದ್ದು, ತನ್ನ ಗರ್ಭದೊಳಗೆ ಧರಿಸಿಕೊಂಡಿದೆ ಎಲ್ಲ ಬ್ರಹ್ಮಾಂಡಗಳ ಬ್ರಹ್ಮವಿಸ್ತಾರವನ್ನು. ಇದೋ ಇದೇ ವಿಶ್ವೇಶ್ವರಲಿಂಗ 'ಎನ್ನಂಗದೊಳಹೊರಗೆ ತೋರಿ' ಬರುತ್ತಿದೆ. ಮತ್ತೆ ಅದೇ ಲಿಂಗದಲ್ಲಿ ಇರಿಸಿದ ನನ್ನ ಅಂಗ ವಿಸ್ತಾರವಾಗಿ ಬಿಟ್ಟಿದೆ. ಈಗ ನಾನು ವಿಶ್ವದೆತ್ತರ, ವಿಶ್ವವನ್ನು ಗರ್ಭೀಕರಿಸಿಕೊಂಡು ಇರುವ ಲಿಂಗದೆತ್ತರ. ಈ ನಾನು ವಿಶ್ವದಲ್ಲಿ ಹಬ್ಬಿಕೊಂಡಿದ್ದೇನೆ, ಲಿಂಗದಲ್ಲಿ ಹಬ್ಬಿ ವ್ಯಾಪಿಸಿಕೊಂಡು ಇದ್ದೇನೆ. 'ಸಕಲವನೆನ್ನೊಳಗಿರಿಸಿ, ಸಕಲದೊಳಹೊರಗೆ ಎನ್ನ ವ್ಯಾಪಕವ ಮಾಡಿ ತೋರಿದ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಗುರುವೇ ನಮೋ ನಮೋ.' (ಸ್ವ. ಸಿ. ವ. ಪು. ೧೭, ವ. ೬೮).

ಹಲವು ಹೆಸರು ಹಲವು ರೂಪ ಆಕಾರ ಹಲವು ಕ್ರಿಯೆಯಾಗಿ ತೋರುವ ವಿಶ್ವ, ವಿಶ್ವದೊಳಗಿರುವ ನಾನು–ಹೆಸರು ನಾನು–ರೂಪ ನನ್ನ ಕ್ರಿಯೆ–ಎಲ್ಲ ಅಖಂಡ ಪರಮ ಚೈತನ್ಯ ಶಿವಲಿಂಗದ ಅಂಗ, ಒಂದು ಸತ್ಯ ಬ್ರಹ್ಮದ ಅನಂತ ಅಂಗ. ಈ ಅನಂತವಾಗಿರುವ ತನ್ನ ಅಂಗದಲ್ಲಿ ಲಿಂಗವೆ ಪ್ರಾಣಿಸುತ್ತಿರುವದು, ಲಿಂಗವೆ ಮನಿಸುತ್ತಿರುವದು, ಲಿಂಗವೆ ಬುದ್ಧಿಸುತ್ತಿರುವದು ಲಿಂಗವೆ ಭಾವಿಸುತ್ತ ಇರುವದು, ಲಿಂಗವೆ ಉಂಡು ಉಟ್ಟು ನಿಜಸುಖದ ಸಾಗರವಾಗಿ ನಿಜಜ್ಞಾನದ ಬಯಲಾಗಿ ಇರುವದು. ಈ ಇರವಿನ ಸ್ಥಲವನ್ನು ಮನುಷ್ಯ–ನಾನು ಮುಟ್ಟಿದ ವಿಧಿ ವಿಧಾನವನ್ನು, ಮಾನವ ಕುಲದ ಈ ಅತ್ಯದ್ಭುತ ಸಾಹಸವನ್ನು, ಅಂಗ ಲಿಂಗ ಸಮರಸವಾಗಿ ನಿಂದ ಪರವೈಕ್ಯಸ್ಥಲದ ಬ್ರಹ್ಮಭವ್ಯವನ್ನು ನೋಡಬೇಕೆಂಬ ಕುತೂಹಲ ನಿಮಗಿದ್ದರೆ, ಹಿಂದೆ ಹೇಳಿದ ಸಮನ್ವಯ ಸಿದ್ಧಿಗೆ ಪ್ರತ್ಯಕ್ಷ ದೃಷ್ಟಾಂತ ಇನ್ನೂ ಸ್ಪಷ್ಟವಾಗಿ ಬೇಕಿದ್ದರೆ ಷಣ್ಮುಖಸ್ವಾಮಿಯ ಪೂಜ್ಯಸನ್ನಿಧಿಯಲ್ಲಿ ಬನ್ನಿ.

ಅವಸರ ಬೇಡ. ಕುಳಿತುಕೊಳ್ಳಿ. ಇಪ್ಪತ್ತನೆಯ ಶತಮಾನದ ಆತುರದ ಸಂಕ್ಷಿಪ್ತ ಬೇಡ; ಶತಮಾನವಲ್ಲ, ಸಹಸ್ರಮಾನಗಳು ಮಾಡಿದ ತಪದ ಫಲವಾದ ಸ್ವಾನುಭಾವದ ಪೂರ್ಣಕಥೆಯನ್ನು ಕೈಮುಗಿದು ಕೇಳಿ:

ಕಾಯ ಜೀವದ ಕೀಲವನರಿದು, ಜನನ ಮರಣಂಗಳಾಯಾಸವಳಿದು,
ಅಂಗ (ವ?) ಲಿಂಗದೊಳಗೆ ಏಕಾರ್ಥವ ಮಾಡುವ ಭೇದವೆಂತೆಂದೊಡೆ:
ಪಂಚಭೂತಂಗಳ ಪೂರ್ವಾಶ್ರಯವನುಳಿದು,
ಪಂಚಕರಣಂಗಳ ಹಂಚುಹರಿ ಮಾಡಿ,
ಕರ್ಮ ಬುದ್ಧೀಂದ್ರಿಯಂಗಳ ಮರ್ದಿಸಿ, ದಶವಾಯುಗಳ ಹಸಗೆಡಿಸಿ,
ಕರಣಚತುಷ್ಟಯಂಗಳ ಕಾಲ ಮುರಿದು,
ಪಂಚವಿಂಶತಿತತ್ವಂಗಳ ವಂಚನೆಯುಳಿದು,
ಹತ್ತುನಾಡಿಗಳ ಏಕೀಕರಿಸಿ, ಅಷ್ಟತನು ಅಷ್ಟಾತ್ಮಗಳ ನಷ್ಟಮಾಡಿ,
ಅಂತರಂಗದ ಅಷ್ಟಮದಂಗಳ ಸಂಹರಿಸಿ, ಬಹಿರಂಗ ಅಷ್ಟಮದಂಗಳ ಬಾಯ ಟೊಣೆದು,
ಅಷ್ಟಮೂರ್ತಿಮದಂಗಳ ಹಿಟ್ಟುಗುಟ್ಟಿ, ಸಪ್ತಧಾತು ಸಪ್ತವ್ಯಸನಂಗಳ ಸಣ್ಣಿಸಿ,
ಷಡೂರ್ಮಿ ಷಡ್ವರ್ಗಂಗಳ ಕೆಡೆಮೆಟ್ಟಿ, ಷಡ್ಭ್ರಮೆ ಷಡ್ಭಾವವಿಕಾರಂಗಳ ಗಂಟು ಸಡಿಲಿಸಿ,
ಪಂಚಕೋಶ ಪಂಚಕ್ಲೇಶಂಗಳ ಪರಿಹರಿಸಿ, ಅಂಗಚತುಷ್ಟಯಂಗಳ ಶೃಂಗಾರವಳಿದು,
ಗುಣತ್ರಯಂಗಳ ಗೂಡ ಮುಚ್ಚಿ, ಅಹಂಕಾರತ್ರಯಂಗಳ ಶಂಕೆಗೊಳಗು ಮಾಡಿ,
ತಾಪತ್ರಯಂಗಳ ತಲ್ಲಣಗೊಳಿಸಿ, ತನುತ್ರಯಂಗಳ ತರಹರಮಾಡಿ,
ಜೀವತ್ರಯಂಗಳ ಜೀರ್ಣೀಕರಿಸಿ, ಆತ್ಮತ್ರಯಂಗಳ ಧಾತುಗೆಡಿಸಿ,
ಅವಸ್ಥಾತ್ರಯಂಗಳ ಅವಗುಣವಳಿದು, ತ್ರಿದೋಷಂಗಳ ಪಲ್ಲಟಗೊಳಿಸಿ,
ಭಾವತ್ರಯಂಗಳ ಬಣ್ಣಗೆಡಿಸಿ, ದುರ್ಭಾವತ್ರಯಂಗಳ ದೂರಮಾಡಿ,
ಮಲತ್ರಯಂಗಳ ಮರ್ದನಮಾಡಿ, ತ್ರಿಕರಣಂಗಳ ಛಿದ್ರಮಾಡಿ,
ಪಂಚಾಗ್ನಿಗಳ ಸಂಚಲವನತಿಗಳೆದು—
ಇಂತೀ ಅಂಗಪ್ರಕೃತಿಗುಣಗಳೆಲ್ಲ ನಷ್ಟವಾಗಿ,

ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು,
ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಾಭಾವವಿಂಬುಗೊಂಡು,
ಅನಿಮಿಷದೃಷ್ಟಿ ಅಚಲಿತವಾಗಿ ಬಲಿದು, ಆ ಲಿಂಗವು ಅಂತರಂಗಕ್ಕೆ ವೇಧಿಸಿ,
ಪ್ರಾಣಲಿಂಗವೆನಿಸಿಕೊಂಡು ಷಡಾಧಾರ ಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ
ನೆಲೆಗೊಂಬುದು.

ಆ ಷಡ್ವಿಧಲಿಂಗಕ್ಕೆ ಷಡಿಂದ್ರಿಯಂಗಳನೆ ಷಡ್ವಿಧಮುಖಂಗಳೆನಿಸಿ,
ಆ ಷಡ್ವಿಧ ಮುಖಂಗಳಿಗೆ ಷಡ್ವಿಧ ವಿಷಯಂಗಳನೆ ಷಡ್ವಿಧದ್ರವ್ಯ
ಪದಾರ್ಥವೆನಿಸಿ,

ಆ ಪದಾರ್ಥಂಗಳು ಷಡ್ವಿಧಲಿಂಗಕ್ಕೆ ಷಡ್ವಿಧಭಕ್ತಿಯಿಂದೆ ಸಮರ್ಪಿತ
ವಾಗಲು,

ಅಂಗವೆಂಬ ಕುರುಹು ಅಡಗಿ, ಒಳಹೊರಗೆಲ್ಲ ಮಹಾಘನಲಿಂಗದ
ದಿವ್ಯಪ್ರಕಾಶವೆ ತುಂಬಿ, ತೊಳಗಿ ಬೆಳಗುತ್ತಿಪ್ಪುದು.
ಇಂತಪ್ಪ ಘನಲಿಂಗದ ಬೆಳಗನೊಳಕೊಂಡಿಪ್ಪ
ಚಿದಂಗವೆ ಚಿತ್ಪಿಂಡವೆನಿಸಿತ್ತು.
ಇಂತಪ್ಪ ಅತಿಸೂಕ್ಷ್ಮವಾದ ಚಿತ್ಪಿಂಡವಿಸ್ತಾರವನು ಚಿದ್‌ಬ್ರಹ್ಮಾಂಡದಲ್ಲಿ
ವೇಧಿಸಿಕೊಂಡು, ಚಿದ್‌ಬ್ರಹ್ಮಾಂಡದ ಅತಿಬಾಹುಲ್ಯವನು
ಆ ಚಿತ್‌ಪಿಂಡದಲ್ಲಿ ವೇಧಿಸಿಕೊಂಡು,
'ಪಿಂಡ ಬ್ರಹ್ಮಾಂಡಯೋರೈಕ್ಯಂ'—ಎಂಬ ಶ್ರುತಿ ಪ್ರಮಾಣದಿಂದ
ಆ ಪಿಂಡ ಬ್ರಹ್ಮಾಂಡಗಳು ಒಂದೇ ಎಂದು ಕಂಡು,
ಆ ಪಿಂಡ ಬ್ರಹ್ಮಾಂಡಗಳಿಗೆ ತಾನೇ ಆಧಾರವೆಂದು ತಿಳಿದು,
ಆ ಪಿಂಡ ಬ್ರಹ್ಮಾಂಡಗಳ ತನ್ನ ಮನದ ಕೊನೆಯಲ್ಲಿ ಅಡಗಿಸಿ,
ಆ ಮನವ ಭಾವದ ಕೊನೆಯಲ್ಲಿ ಅಡಗಿಸಿ,
ಆ ಭಾವವ ಜ್ಞಾನದ ಕೊನೆಯಲ್ಲಿ ಅಡಗಿಸಿ,
ಆ ಜ್ಞಾನವ ಮಹಾಜ್ಞಾನದಲ್ಲಿ ಅಡಗಿಸಿ,
ಆ ಮಹಾಜ್ಞಾನವನ್ನು ಪರಾತ್‌ಪರವಾದ ಪರಿಪೂರ್ಣ ಬ್ರಹ್ಮದಲ್ಲಿ ಅಡಗಿಸಿ,
ಆ ಬ್ರಹ್ಮವೆ ತಾನಾದ ಶರಣಂಗೆ ದೇಹಭಾವವಿಲ್ಲ.
ಆ ದೇಹಭಾವವಿಲ್ಲವಾಗಿ ಜೀವಭಾವವಿಲ್ಲ.
ಆ ಜೀವಭಾವವಿಲ್ಲವಾಗಿ ಫಲ ಪದದ ಹಂಗಿಲ್ಲ.

ಫಲ ಪದದ ಹಂಗಿಲ್ಲವಾಗಿ ಭವ ಬಂಧನಂಗಳು ಮುನ್ನವೆ ಇಲ್ಲ.
ಭವಬಂಧನಂಗಳು ಇಲ್ಲವಾಗಿ
ಆ ಶರಣನು ತಾನು ಎಂತಿರ್ದಂತೆ ಪರಬ್ರಹ್ಮವೆ ಆಗಿ,
ಆತನ ಹೃದಯಾಕಾಶವು ಬಚ್ಚಬರಿಯ ಬಯಲನೆಯ್ದಿಪ್ಪುದು.
ಇದು ಕಾರಣ, ಆ ಶರಣನು ದೇಹವಿದ್ದು ಸುಟ್ಟ ಸರವಿಯಂತೆ
ನಿರ್ದೇಹಿಯಾದ ಕಾರಣ ಉಪಮಾತೀತ, ವಾಙ್ಮನಕ್ಕಗೋಚರ
ನಾಗಿಪ್ಪನಯ್ಯ ಅಖಂಡೇಶ್ವರಾ.

ಅಖಂಡೇಶ್ವರ ವಚನ, ಪ್ರಾಣಲಿಂಗಿಸ್ಥಲ, ಪು. ೧೫೮, ವ. ೧೪

ಮನುಷ್ಯಬೀಜದಲ್ಲಿ ವಿಶ್ವವೃಕ್ಷವನ್ನು ಹಡೆದ ಪ್ರಾಣಲಿಂಗ ಚೈತನ್ಯ ಒಳಗೊಳಗೆ ಉರಿಯುತ್ತಿದೆ. ಅಣುವಿನ ಗರ್ಭದೊಳಗೆ ಅದ್ಭುತ ಚೈತನ್ಯ ಹುದುಗಿದ್ದು, ಅಣು ಒಡೆಯದೆ ಸಿಡಿಯದೆ, ಜಡಕಣವಾಗಿ ಇರುವಂತೆ, ವಿಶ್ವ ಪಿಂಡ ವಿಶ್ವಬ್ರಹ್ಮಾಂಡದ ಪ್ರಾಣಲಿಂಗ ಪಿಂಡಾಂಡ ಮತ್ತು ಬ್ರಹ್ಮಾಂಡದ ಮರೆಯಲ್ಲಿಯೆ ಅಗಮ್ಯವಾಗಿ ಆಗೋಚರವಾಗಿ, ಅದೃಶ್ಯವಾಗಿ ಅಸ್ಪೃಶ್ಯ ವಾಗಿ, 'ಒಳ ಹೊರಗೆಲ್ಲ ಮಹಾಘನಲಿಂಗದ ದಿವ್ಯಪ್ರಕಾಶವೆ ತುಂಬಿ, ತೊಳಗಿ ಬೆಳಗುತ್ತಿಪ್ಪುದು.' 'ಕಾಂಬರೆ ಕಂಗೆ ಅಳತೆಯಲ್ಲದ,' ನಡೆವರೆ ಕಾಲಿಗೆ ಅಳತೆಯಲ್ಲದ, ಮುಟ್ಟುವರೆ ಕೈಗೆ ಕೇಳುವರೆ ಕಿವಿಗೆ ಅಳತೆಯಲ್ಲದ, ನೆನೆವರೆ ಮನಕ್ಕೆ ವಿಚಾರಿಸುವರೆ ಬುದ್ಧಿಗೆ ಅಳತೆಯಾಗದ, ಪ್ರಾಣ ಪ್ರಾಣಿ ಸಲರಿಯದ, ಭಾವ ಬಾವಿಸಲರಿಯದ ಮಹಾಘನಲಿಂಗ ಪಿಂಡಾಂಡ ಬ್ರಹ್ಮಾಂಡದಲ್ಲಿ 'ತುಂಬಿ ತೊಳಗಿ ಬೆಳಗುತ್ತ' ಇಪ್ಪುದು. ಇದು ಗಮ್ಯ ಗೋಚರ, ದೃಶ್ಯ ಸ್ಪೃಶ್ಯ. ಯಾರಿಗೆ? ಯಾವಾಗ? ಅಂಗವನ್ನು ಲಿಂಗ ದೊಳಗೆ ಏಕಾರ್ಥವ ಮಾಡಿದವರಿಗೆ. ಲಿಂಗದೊಳಗೆ ಅಂಗವನ್ನು ಇರಿಸಿ ಸಮರಸಗೊಳಿಸಿ, ಎರಡನ್ನು ಒಂದು ಮಾಡಿ 'ಬ್ರಹ್ಮವೆ ತಾನಾದ ಶರಣಂಗೆ.' ಚಿತ್‌ಪಿಂಡವಾದ ಮಾನವ-ನಾನು ಚಿದ್‌ಬ್ರಹ್ಮಾಂಡವಾದ ವಿಶ್ವಬ್ರಹ್ಮಾಂಡ-ನೀನು ಒಂದರಲ್ಲೊಂದು ವೇಧಿಸಿಕೊಂಡು, ಒಂದರಲ್ಲೊಂದು ಒಳಹೊಕ್ಕು, ಬೇರಿಲ್ಲದಂತೆ ಬೆರಸಿಕೊಂಡು ಕೂಡಿಕೊಂಡು ಒಂದಾಗಿ 'ಆ ಪಿಂಡ ಆ ಬ್ರಹ್ಮಾಂಡಗಳು ಒಂದೇ ಎಂದು ಕಂಡು,' ಈ ಬ್ರಹ್ಮ ಚಿದಂಗವೆ ಮಹಾಘನ ಲಿಂಗಕ್ಕೆ ಅಂಗವಾದವರಿಗೆ. ಅಂದರೆ ಲಿಂಗಾಂಗವಾದವರಿಗೆ ಅಥವಾ

ಲಿಂಗಾಂಗಿಯಾದವರಿಗೆ. ಈ ಅಸಾಧ್ಯ ಸಾಧಿಸಬೇಕಾದರೆ, ಮೊದಲು ಅಭೇದ್ಯವನ್ನು ಭೇದಿಸಬೇಕು. ಷಣ್ಮುಖಸ್ವಾಮಿಗಳು ಹೇಳುವ ಅಂಗ ಪ್ರಕೃತಿ ಗುಣಗಳೆಲ್ಲ ಮೊದಲು ನಷ್ಟವಾಗಬೇಕು. ಪಂಚಭೂತ ಪಂಚ ಕರಣ ಇಂದ್ರಿಯ ಮೊದಲುಗೊಂಡು ಜೀವತ್ರಯ ಭಾವತ್ರಯ ಅವಸ್ಥಾ ತ್ರಯ ಪಂಚಾಗ್ನಿಗಳೆಲ್ಲ ಪ್ರಕೃತಿಯ ನಿರ್ಮಾಣವಾದ ಅಂಗದ ಗುಣಧರ್ಮ, ಅಂಗದ ಪ್ರಕೃತಿ. ತತ್ತಿಯ ಮರಿ ತತ್ತಿಯನ್ನೊಡೆದು ಹೊರಗೆ ಬರಬೇಕು, ಬಯಲುಜೀವನ ಬೇಕಿದ್ದರೆ. ಬಂಧನದಲ್ಲಿ ಸಿಕ್ಕ ಆನೆ ಹಗ್ಗ ಸರಪಳಿಯನ್ನು ಹರಿಯಬೇಕು ತನ್ನ ಮಹಾಮಂದಿರವಾದ ವಿಂಧ್ಯಾರಣ್ಯದಲ್ಲಿ ಮನ ಬಂದಂತೆ ಇರಬೇಕಾದರೆ, ತಿರುಗಬೇಕಿದ್ದರೆ. 'ವನದ ಕೋಗಿಲೆ ಮನೆಗೆ ಬಂದರೆ', ವನದ ಗಿಳಿ ಪಂಜರಕ್ಕೆ ಬಂದರೆ, ಮೊದಲು ಬಂಧನವನ್ನು ಬಿಚ್ಚಿ ಕಳೆಯಬೇಕು. ಅಂಗಪ್ರಕೃತಿಯ ಪಂಜರದ ಗಿಳಿ 'ನಾನು' ಲಿಂಗವನವಿಲಾಸ ದಲ್ಲಿ ಮನದಿಚ್ಛೆಯಂತೆ ವಿಹರಿಸಬೇಕೆಂದಿದ್ದರೆ, ಪ್ರಕೃತಿ ಹೆಣೆದ ಪಂಚ ಭೂತ ಕರಣ ಇಂದ್ರಿಯ, ಜೀವದ ಭಾವ ಗಾಳಿಯ ಪ್ರಾಣ ವಿಷಯದ ಹಣ್ಣು ರಸದ ನೀರಿನ ಪಂಜರದಿಂದ ಹೊರಗೆ ಬರಬೇಕು. ಪ್ರಕೃತಿಯ ಈ ಆಶ್ರಯ ವನ್ನು ದಾಟಿ ಇತ್ತ ಕಡೆ ಬರಬೇಕು ಲಿಂಗದ ನಾಡ ಕಡೆ, ಲಿಂಗದ ವನದ ಕಡೆ, ಲಿಂಗದ ಬಯಲ ಕಡೆ. ಸ್ವತಂತ್ರಸಿದ್ಧಲಿಂಗೇಶ್ವರದೇವರು 'ಎನ್ನ ಸಂಸಾರಸಾಗರವ ದಾಂಟಿಸಿ' ಎಂದು ಹಿಂದೆ ಹೇಳಿರುವ ಲಿಂಗರಹಸ್ಯ ಇದೇ. ಪಂಜರದ ಪಕೃತಿಯಿಂದ ಹೊರಬೀಳದೆ, ಮನುಷ್ಯಕುಲದಲ್ಲಿ ಮಾನುಷಬಂಧನಕ್ಕೆ ಒಳಗಾಗಿರುವ 'ನಾನು' ಮಾನುಷಪ್ರಕೃತಿಯಿಂದ ಮುಕ್ತವಾಗದೆ, ಮಾನುಷವೆ ತನ್ನ ನಿಜವಾಸಸ್ಥಲವೆಂದು ಅಷ್ಟರೊಳಗೇ ಇದ್ದು ಎದ್ದು ಮುಳುಗಿ, ಸುತ್ತಿ ಸುತ್ತಿ ಸಂಸರಿಸುತ್ತಿರುವ ಸಂಸಾರ ಸಮುದ್ರವನ್ನು ದಾಟಿ ಈ ಕಡೆ—ಒಳಹೊರಗೆ ಒಂದಾಗಿ ತಾನು ತುಂಬಿ ತುಳುಕಿರುವ ಕಡೆ–ಬಾರದೆ, ಮನುಷ್ಯನಲ್ಲಿಯೆ ನಾನು ಉಳಿದುಬಿಟ್ಟರೆ, ಇರವಿನ ಹರವು ಅರಿವಿನ ಬೆಳಗು ಆನಂದದ ಅಪಾರ ಅಖಂಡ ನಿತ್ಯ ಪರಿಪೂರ್ಣದ ಪರಬ್ರಹ್ಮ, ಸರ್ವಾಂಗದಲ್ಲಿ ಲಿಂಗ ತುಂಬಿ ಸಂಭ್ರಮಿಸುವ ಗಂಭೀರ ದಿವ್ಯ ಹೇಗೆ ದೊರಕಬೇಕು?

ಮಾನವನಲ್ಲಿ, ಮಾನವನ ಸರ್ವಾಂಗದಲ್ಲಿ, ಮಾನವನನ್ನು ಸುತ್ತು

ಮುತ್ತಿ ಸರ್ವಾಂಗದಲ್ಲಿ ಮೆತ್ತಿರುವ ವಿಶ್ವಪ್ರಪಂಚದಲ್ಲಿ ಇದ್ದು, ಇಲ್ಲದಂತೆ ಇರುವ ಲಿಂಗದ ಮಹಾಘನರಹಸ್ಯವನ್ನು ತನಗೆ ತಾನೆ ಭೇದಿಸಿ, ತನಗೆ ತಾನೆ ಸಾಧಿಸಿಕೊಳ್ಳುವುದು ಸಾಮಾನ್ಯರ ಶಕ್ತಿಯಲ್ಲ. ಸಾಮಾನ್ಯರ ಮಾತಿರಲಿ, ಬಲ್ಲ ಬಲವಂತರಿಗೂ ಇದು ದುಸ್ಸಾಧ್ಯ. ಈ ದುಸ್ಸಾಧ್ಯವನ್ನು ಸು-ಲಭವಾಗಿ ಸಾಧ್ಯಮಾಡಿಕೊಡಬಲ್ಲ ದಿವ್ಯಶಕ್ತಿ ಸದ್ಗುರು. ಶರಣರ ತಿಳಿವಳಿಕೆಯಂತೆ, ಅದ್ವೈತಜ್ಞಾನವನ್ನು ಸಾಧಿಸಿಕೊಂಡರೂ ಸಾಧಿಸಿಕೊಳ್ಳ ಬಹುದು, ಜ್ಞಾನದ ಹಸಿವಾದ ಜಿಜ್ಞಾಸುಗಳು. ಜ್ಞಾನವನ್ನು ಸಾಧಿಸಿ ಕೊಂಡು ಸರ್ವಸಂಗಪರಿತ್ಯಾಗ ಮಾಡಿ, ಜಗತ್ತಿಗೆ ಮಾಯೆಯ ಮುದ್ರೆ ಯನ್ನೊತ್ತಿ ಒದಿಗಿರಿಸಿ ಸಂನ್ಯಾಸಿಗಳಾಗಿ, ಅರಿವಿನಲ್ಲಿ ಅದ್ವೈತಿಗಳಾಗಿ, ಮಾತಿನಲ್ಲಿ ಅದ್ವೈತಿಗಳಾಗಿ 'ಜ್ಞಾನಾದ್ವೈತ'ವನ್ನು, 'ವಾಗದ್ವೈತ'ವನ್ನು ಹೇಳುತ್ತ ಹೋಗಬಹುದು. ಆದರೆ ಮಾನವನ ದೇಹ ಪ್ರಾಣ ಭಾವಾದಿ ಗಳಲ್ಲಿಯೂ ಬ್ರಹ್ಮಾರ್ಥವನ್ನು ಕಂಡು, ಸಕಲ ಬ್ರಹ್ಮಾಂಡಗಳ ಮಹಾಮನೆ ಯಲ್ಲಿಯೂ ಅದೇ ಬ್ರಹ್ಮಭವ್ಯವಾದ ರಹಸ್ಯಾರ್ಥವನ್ನು ಕಂಡು, ಅವನ್ನೆಲ್ಲ ಎತ್ತಿಕೊಂಡು ಅದ್ವೈತಜ್ಞಾನದ ಮಹಾದರ್ಶನವಾದ ಒಂದರಲ್ಲಿಗೆ ಕೊಂಡೊಯ್ದು, ಎಲ್ಲವನ್ನು ಸಮರಸಗೊಳಿಸುವ ಸಮರಸ ಜೀವನಾದ್ವೈತ ವನ್ನು ಸಾಧಿಸಿಕೊಳ್ಳುವುದು ಕಠಿಣ, ಕಠಿಣ. ಅರಿವು ಆಕಾಶದಲ್ಲಿ ಹಾರಾಡ ಬಹುದು; ದೇಹ ಪ್ರಾಣಾದಿಗಳ ನೆಲದ ಮೇಲೆ ನಡೆದಾಡುವುದು ಅತಿಕಷ್ಟ. ವಿಷಯಪ್ರಪಂಚದ ಗುಡ್ಡ ಬೆಟ್ಟ ದರಿ ಕಂದರ ಹೊಳೆ ಹಳ್ಳ ಸಮುದ್ರ ಅರಣ್ಯಪ್ರಪಾತಗಳ ಮೇಲೆ ನಡೆದು ಆಡುವುದು ಕರಕಷ್ಟ. ಈ ಕರಕಷ್ಟವನ್ನು, ಈ ದುಸ್ಸಾಧ್ಯವನ್ನು ಸುಕರವಾಗಿ ಸಾಧ್ಯವಾಗುವಂತೆ ಮಾಡಿ ಕೊಡುತ್ತಾನೆ ಗುರುದೇವ. ಅರಿವಿನಲ್ಲಿ ಪ್ರತ್ಯಕ್ಷ ಅನುಭವಕ್ಕೆ ಬಂದ ಪರವಸ್ತುವನ್ನು, ತನ್ನ ಬಳಿಗೆ 'ಗುರುವೇ ನಮೋ ನಮೋ' ಎಂದು ಬಂದ ಶಿಷ್ಯನಿಗೆ ಕರುಣಿಸಿ, ಆತನ 'ಅಂಗಾಶ್ರಯ'ವಾದ ಮಾನುಷಪ್ರಕೃತಿಯನ್ನು ಕಳೆದು, ಸಂಸಾರಸಾಗರ ವನ್ನು ದಾಟಿಸಿ, ಆತನ ಸರ್ವಾಂಗ 'ಲಿಂಗಾಶ್ರಯ'ದಲ್ಲಿ ಇರುವ ಲಿಂಗದ ಹಾದಿಗೆ ಹಚ್ಚುತ್ತಾನೆ ಸದ್‌ಗುರುನಾಥ. ಬರಿ ಮಾತಿನಿಂದೇನು? ಬರಿ ಅರಿವಿನಿಂದೇನು? ಅರಿವನ್ನು ಭಾವದಲ್ಲಿಗೆ ಹರಿಸಿ ನೆಲೆಗೊಳಿಸಬಲ್ಲ, ಪ್ರಾಣ ದಲ್ಲಿಗೆ, ಕಣ್ಣು ಕಿವಿಯಲ್ಲಿಗೆ, ಕೈಯಿ ಕಾಲುಗಳಲ್ಲಿಗೆ ಅರಿವಿನ ಪರಬ್ರಹ್ಮವನ್ನು

ತಂದು ಇರಿಸಬಲ್ಲ ಗರುವ ಗುರುದೇವ. ಅಂಗದ ಪ್ರಕೃತಿಯನ್ನು ಕೆಡಿಸಿ, ಮಾನವನ ಸರ್ವಾಂಗದಲ್ಲಿ ಲಿಂಗವನ್ನು ಊರುವ ಗುರು ತಂದೆ, ಗುರು ತಾಯಿ. ಆತನಿಗೆ ನಮೋ ನಮೋ ಎಂದು ಬಂದು, ಈ ನಮೋ ನಮೋ ಭಾವದಲ್ಲಿ ಹದವಾಗಿರುವಾಗ, ಸದ್ಗುರು ಮಾಡುತ್ತಿರುವ ಶಿಷ್ಯಸೃಷ್ಟಿಯ ವಿಧಾನವನ್ನು ಶಿಷ್ಯನ ಬಾಯಿಂದಲೆ ಕೇಳಿ :

> ಅಯ್ಯಾ, ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿದ್ಬೆಳಗ
> ಹಸ್ತಮಸ್ತಕ ಸಂಯೋಗದಿಂದೊಂದುಗೂಡಿ ಮಹಾಬೆಳಗ
> ಮಾಡಿದಿರಲ್ಲಾ! ಅಯ್ಯಾ, ಎನ್ನ ಮಸ್ತಕದೊಳಗೊಂದುಗೂಡಿದ
> ಮಹಾಬೆಳಗ ತಂದು ಭಾವದೊಳಗಿಂಬಿಟ್ಟಿರಲ್ಲಾ! ಅಯ್ಯಾ, ಭಾವದೊಳಗೆ
> ಕೂಡಿದ ಮಹಾಬೆಳಗ ತಂದು ಮನಸ್ಸಿನೊಳಗಿಂಬಿಟ್ಟಿರಲ್ಲಾ!
> ಅಯ್ಯಾ, ಎನ್ನ ಮನಸ್ಸಿನೊಳಗೆ ಕೂಡಿದ ಮಹಾಬೆಳಗ ತಂದು ಎನ್ನ
> ಕಂಗಳೊಳಗಿಂಬಿಟ್ಟಿರಲ್ಲಾ! ಅಯ್ಯಾ, ಎನ್ನ ಕಂಗಳೊಳು ಕೂಡಿದ
> ಮಹಾಬೆಳಗ ತಂದು ಕರಸ್ಥಲದೊಳಿಂಬಿಟ್ಟಿರಲ್ಲಾ! ಅಯ್ಯಾ, ಎನ್ನ
> ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆವುತ್ತಿಪ್ಪ ಅಖಂಡತೇಜವನೆ
> ಇಷ್ಟಲಿಂಗವೆಂಬ ದೃಷ್ಟವ ತೋಱಿ, ನಿಶ್ಚಯವ ಶ್ರೋತ್ರದಲ್ಲಿ
> ಸೃಜಿಸಿದಿರಲ್ಲಾ! ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ
> ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ! ಅಯ್ಯಾ, ಎನ್ನ ಆರಾಧ್ಯ
> ಕೂಡಲಸಂಗಮದೇವಾ, ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ
> ಕಾಣಿಸುತ್ತಿರ್ದಿರಲ್ಲಾ!
>
> ಲಿಂಗಲೀಲಾವಿಲಾಸ ಚಾರಿತ್ರ ಪು. ೧೪೧–೨, ವ. ೫೪

ತನ್ನ ನಿಜಸ್ವರೂಪವನ್ನು ಜ್ಞಾನದ ಬೆಳಗಿನಲ್ಲಿ ವಿವೇಕಿಸಿ ನೋಡುವಾಗ 'ನೇತಿಗಳೆದ' ದೇಹ ಇಂದ್ರಿಯ ಕರಣಾದಿಗಳನ್ನು 'ಮಾಯೆ' ಎಂದು ಒಗೆಯದೆ, ಅವನ್ನೂ ಎತ್ತಿಕೊಂಡು, ಅಲ್ಲಲ್ಲಿ ಚಿದ್‌ಬೆಳಗಿನ ದೀಪವನ್ನು ಮುಡಿಸುತ್ತಿರುವ ಆರಾಧ್ಯ ಗುರುಮೂರ್ತಿಯನ್ನು ಬಸವಣ್ಣನವರ ವಚನದಲ್ಲಿ ನಾವು ಕಾಣಬಹುದು. ಗುರುವಿನ ಹಸ್ತ ಶಿಷ್ಯನ ಮಸ್ತಕದ ಮೇಲೆ ಸಂಯೋಗವಾದರೆ, 'ಸಾಸಿರದಳದ ಚಿತ್‌ಕಳೆ', ಬ್ರಹ್ಮರಂಧ್ರದಲ್ಲಿ ನ್ಯಸ್ತ

ವಾಗಿರುವ 'ಬೆಳಗಿನ ಬೀಜ ಮಹಾಬೆಳಗು' ಪ್ರಭಾವಿಸಿದೆ. ಈ ಬೆಳಗನ್ನೆ ಒಬ್ಬುಳಿಮಾಡಿ, ಬ್ರಹ್ಮರಂಧ್ರವೆಂಬ ಹೃದಯಸ್ಥಲದಿಂದ ಭಾವಕ್ಕೆ ತಂದು ಭಾವಕ್ಕೆ ಗಮ್ಯವಾಗುವಂತೆ ಮಾಡಿ, ಭಾವಸ್ಥಲದಿಂದ ಮನಸ್ಸ್ಥಲಕ್ಕೆ ಮತ್ತೆ ಒಬ್ಬುಳಿಮಾಡಿ ಇಳಿಸಿಕೊಟ್ಟು ಮನದ ನೆನಹು ಹಿಡಿವಂತೆ ಮಾಡಿ, ಅಲ್ಲಿಂದ ಮತ್ತೆ ಗಟ್ಟಿಗೊಳಿಸಿ ತಂದು ಕಣ್ಣಿಗೆ ಗೋಚರವಾಗುವಂತೆ ಮಾಡಿ, ಆ ಕಂಗಳ ಬೆಳಗನ್ನೆ ಕರಸ್ಥಲದ ಇಷ್ಟಲಿಂಗದಲ್ಲಿ ದೃಷ್ಟವಾಗುವಂತೆ ಮಾಡಿ, ಪರಸ್ಥಲದ ಬ್ರಹ್ಮವನ್ನು ಕರಸ್ಥಲದ ಬ್ರಹ್ಮವನ್ನಾಗಿ ಅಂಗೈಯೊಳಗೆ ತಂದು ಇರಿಸಿದ್ದಾನೆ, ಸಾಕ್ಷಾತ್ ಪರಬ್ರಹ್ಮ ಗುರುಲಿಂಗಮೂರ್ತಿ. ಪರಮ ಚಿದ್ಬೆಳಗನ್ನು, ಕಂಗಳಿಗೆ ಪ್ರತ್ಯಕ್ಷವಾಗಿ ಕಾಣಿಸಿಕೊಟ್ಟಂತೆ, ಅದೇ ಬೆಳಗನ್ನು ಮಂತ್ರಮಯಮಾಡಿ ಕಿವಿಗೆ ಕೇಳಿಸಿ ಕೊಡುತ್ತಾನೆ ಮಂತ್ರಮೂರ್ತಿ ಗುರುಲಿಂಗ. ಮಂತ್ರದೀಕ್ಷೆಯಿಂದ ಮಾಂಸಮಯ ಪಿಂಡವನ್ನು ಮಂತ್ರ ಮಯ ಪಿಂಡನನ್ನಾಗಿ ಶಿಷ್ಯನನ್ನು ಸಂಸ್ಕರಿಸಿದ ಸಮರ್ಥನೆ ಈ ಸತ್ ಪ್ರಣವ ಸ್ವರೂಪನಾದ ಗುರುಮೂರ್ತಿ.

ಮಾನವಕುಲದ ಹೃದಯಗ್ರಂಥಿಯನ್ನು ಭೇದಿಸಿ, ಶುದ್ಧಾತ್ಮನಾದ ಮಾನವನಿಗೆ ಪರಬ್ರಹ್ಮವನ್ನು ಗಂಟುಹಾಕಿದ ಸದ್ಗುರುವಿನ ಮಹಿಮೆ ಭೂಮಿಯದಲ್ಲ, ಆಕಾಶದ್ದಲ್ಲ. ಪರಾತ್ಪರವಾದ ವಸ್ತುವಿನ ಮೂಲವನ್ನು ಮುಟ್ಟಿ, ಕಂಡು ಉಂಡು ಸರ್ವಾಂಗದಲ್ಲಿ ಅನುಭವಿಸಿ, 'ಲೋಕ'ವನ್ನು ಅಲ್ಲಿಗೆ ಕೊಂಡೊಯ್ಯಲು ಅಲ್ಲಿಂದ ಇಲ್ಲಿಗೆ ಇಳಿದು ಬಂದ ಅವತಾರವೇ ಗುರುದೇವ, ಮಹಾದೇವ.

ಮಾನವ್ಯದ ಮಲವನ್ನು ಕಳೆದು, ಮಾನವನನ್ನು ಸುತ್ತಿರುವ ಮಾಯೆ ಮೋಹ ಸಂಸಾರ ವಿಕಾರದ ವಿಕಟವಿಲಾಸವನ್ನು ಪರಿಹರಿಸಿ, ತೊಳೆದು ಸ್ವಚ್ಛಮಾಡಿ ಶುದ್ಧಾಂಗನಾದ ಶಿಷ್ಯ 'ಶಿಶುಮಗ'ನ ಅಂಗಾಂಗ ದಲ್ಲಿ ಲಿಂಗದ ಜ್ಯೋತಿಯನ್ನು ತುಂಬಿ ಹರವಿ ನೆಲೆಗೊಳಿಸಿ, ಕತ್ತಲೆಯ ಕೂಸನ್ನು ಎತ್ತಿಕೊಂಡು ಸತ್ಯ ಅಮೃತ ಜ್ಯೋತಿ ಆನಂದ ಅನಂತದ ನಾಡಿನಲ್ಲಿ ಇಳಿಸುವ ಗುರುತಂದೆ ಕೊಟ್ಟ ಲಿಂಗಸಂಸ್ಕಾರದ ಹವಣಿಕೆಯ ಫಲವನ್ನು ಇನ್ನೂ ನೋಡಿ :

ಎನ್ನ ಸ್ಥೂಲತನುವೆಂಬ ಮನೆಯಲ್ಲಿ
ಲಿಂಗವೆಂಬ ಜ್ಯೋತಿಯ ತುಂಬಿದೆನಯ್ಯಾ,
ಎನ್ನ ಸೂಕ್ಷ್ಮತನುವೆಂಬ ಮನೆಯಲ್ಲಿ
ಮಂತ್ರವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಕಾರಣತನುವೆಂಬ ಮನೆಯಲ್ಲಿ
ಜ್ಞಾನವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಒಳಹೊರಗೆ ತುಂಬಿ ಬೆಳಗುವ ಜ್ಯೋತಿಯ ಬೆಳಗಿನೊಳಗೆ
ಸುಳಿವುತಿರ್ದೆನಯ್ಯಾ ಅಖಂಡೇಶ್ವರಾ.

ವ.ಸಾ.ಸಂ. ಪು. ೩೦೭, ವ. ೫೦

ಬಸವಣ್ಣ ಹೇಳುವ ಚಿದ್‌ಬೆಳಗೇ ಶಿಷ್ಯನ ಸ್ಥೂಲ ಸೂಕ್ಷ್ಮಕಾರಣತನುವಿನ ಮನೆಯಲ್ಲಿ ತುಂಬಿಕೊಳ್ಳುತ್ತಿದೆ. ಗುರುವಿನ ಕರಕಮಲದಲ್ಲಿ ಹಸ್ತಮಸ್ತಕ ಸಂಯೋಗದಿಂದ ಹುಟ್ಟಿದ ಶಿಷ್ಯ 'ಗುರುಪುತ್ರ'. 'ಗುರುಃ ಸಾಕ್ಷಾತ್ ಪರಬ್ರಹ್ಮ'ವಾದರೆ, ಗುರುಪುತ್ರ ಅದೇ ಬ್ರಹ್ಮದ ಸಾಕ್ಷಾದಂಕುರ.

ಚಿದ್‌ಬೆಳಗಿನ ಅಂಕುರವಾದ ಶಿಷ್ಯನ ಅಂಗಾಂಗದಲ್ಲಿ ಮೊಳಕೆ ಒಡೆದಿರುವ ಲಿಂಗದ ಸಸಿಗಳನ್ನು ಇನ್ನೂ ನೋಡುವುದು ಅವಶ್ಯವಿದೆ. ಹಿಂದೆ ಷಣ್ಮುಖಸ್ವಾಮಿಗಳು ನಿರೂಪಿಸಿದಂತೆ ಸಂಸಾರದಿಂದ ಎಚ್ಚತ್ತು, 'ಶರಣ ಎಂತಿರ್ದಂತೆ ಪರಬ್ರಹ್ಮ'ದ ನಿಜನಿವಾಸಸ್ಥಲಕ್ಕೆ ಬರಬೇಕಾದರೆ, ಕರಸ್ಥಲದ ಪರಬ್ರಹ್ಮವಾದ ಇಷ್ಟಲಿಂಗದಲ್ಲಿ ನಿಷ್ಠೆ, ಲಿಂಗದಲ್ಲಿ ಕೀಲಿಸಿ ಎಂದೂ ಎಂತೂ ಕೀಳಬಾರದ ಭಕ್ತಿಭಾವ ನೆಲೆಗೊಳ್ಳಬೇಕು. ಇಷ್ಟಲಿಂಗದ ಕಳೆಯನ್ನು ಕಾಣುವ ದೃಷ್ಟಿ 'ಅನಿಮಿಷ'ವಾಗಿ, ಹೊರಗೆ ನೋಡುವಂತೆ ಒಳಗಡೆಗೂ ಎವೆಯಿಕ್ಕದೆ ನೋಡಿದರೆ, 'ಆ ಲಿಂಗವು', ಆ ಲಿಂಗದ ಕಳಾ ಚೈತನ್ಯವು ಅಂತರಂಗದಲ್ಲಿ ಚುಚ್ಚಿ ಅಲ್ಲಿ ನಾಟುತ್ತದೆ ಪ್ರಾಣದಲ್ಲಿ, ಪ್ರಾಣ ಲಿಂಗವಾಗಿ. ಈ ಪ್ರಾಣಲಿಂಗವೆ ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂಬ ಆರುಚಕ್ರಗಳಲ್ಲಿ ಆರು ವಿಧ ಲಿಂಗವಾಗಿ ನೆಲೆಗೊಳ್ಳುತ್ತದೆ. ನಮಗಿಲ್ಲಿ ಪ್ರಸ್ತುತ, ಲಿಂಗದಲ್ಲಿ ಹೀಗೆ ಒಳಗು ಎಚ್ಚತ್ತ ಮಾನವನ ಕರಣ ಇಂದ್ರಿಯಗಳಲ್ಲಿ ಲಿಂಗವೆ ನೆಲೆಗೊಂಡು, ಮನುಷ್ಯನ ಅಂಗದಲ್ಲೆಲ್ಲ 'ಸ್ವಯಂಭು'ಲಿಂಗ ಒಡಮೂಡುವುದು. ಭೌತಪ್ರಪಂಚದಲ್ಲಿ

ಹಬ್ಬುತ್ತಿರುವ ಮಾಂಸದ ಮನುಷ್ಯ, ಮನದ ಪ್ರಾಣಿ ಸದ್ಗುರುವಿನ ಅನುಗ್ರಹದಿಂದ ಪ್ರಪಂಚವನ್ನು ಪರಿಹರಿಸಿಕೊಂಡು, ಒಳಹೊರಗೆ ಲಿಂಗದ ಮೇಲೆ ಹಬ್ಬುತ್ತಿರುವ ನವ್ಯವಿಧಾನವನ್ನು ಗಂಭೀರವಾಗಿ ಅವಲೋಕಿಸ ಬೇಕು. ಮನುಷ್ಯನಿಗೆ ಮನುಷ್ಯನ ನಿಜದಾಳ ತಿಳಿಯದೆ, ಆ ಆಳಕ್ಕೆ ಮುಳುಗುವ ಗಂಭೀರಸಾಹಸ ಮಾಡದೆ, ತೆರೆ ದಂಡೆಯ ಮೇಲೆ ಎಷ್ಟು ದಿನ ಕುಳಿತು, ಎಷ್ಟು ದಿನ ಒಳಗು ಸತ್ತಿರಬೇಕು?

ವಿಜ್ಞಾನ 'ಕ್ಷ' ಕಿರಣದಿಂದ ಮನುಷ್ಯನ ಶರೀರವನ್ನು ಭೇದಿಸಿ ನೋಡಿ, ಸೂರ್ಯನ ಕಿರಣ ಕಾಣದುದನ್ನು ಕಾಣುವಂತೆ, ಇಷ್ಟಲಿಂಗದಲ್ಲಿ ನಟ್ಟ ನೋಟಕ್ಕೆ ಗೋಚರವಾಗುವ, ದೃಷ್ಟಿಯೋಗದ ಲಿಂಗಕಿರಣದಿಂದ ಒಳಗೆ ನೋಡುತ್ತಿರುವ ಶಿವಯೋಗಿಯು, ಲಿಂಗವಿಜ್ಞಾನಿಯು ಅಂತರಂಗದ ಲಿಂಗದ ಬಳ್ಳಿಯನ್ನು, ನೋಡಬೇಕು; ಆ ಬಳ್ಳಿಗೆ ಎರೆಯುತ್ತಿರುವ ಭಕ್ತಿಯ ರಸದ ಹೃದಯಜಲವನ್ನು ನೋಡಬೇಕು:

ಆಧಾರದಲ್ಲಿ ಆಚಾರಲಿಂಗವ ಧರಿಸಿದನಾಗಿ,
ಆಚಾರಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
ಸ್ವಾಧಿಷ್ಠಾನದಲ್ಲಿ ಗುರುಲಿಂಗವ ಧರಿಸಿದನಾಗಿ,
ಗುರುಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
ಮಣಿಪೂರಕದಲ್ಲಿ ಶಿವಲಿಂಗವ ಧರಿಸಿದನಾಗಿ,
ಶಿವಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
ಅನಾಹತದಲ್ಲಿ ಜಂಗಮಲಿಂಗವ ಧರಿಸಿದನಾಗಿ,
ಜಂಗಮಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
ವಿಶುದ್ಧಿಯಲ್ಲಿ ಪ್ರಸಾದಲಿಂಗವ ಧರಿಸಿದನಾಗಿ,
ಪ್ರಸಾದಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
ಆಜ್ಞೆಯಲ್ಲಿ ಮಹಾಲಿಂಗವ ಧರಿಸಿದನಾಗಿ,
ಮಹಾಲಿಂಗಭಕ್ತನಾದನಯ್ಯಾ ನಿಮ್ಮ ಶರಣ.
. . . .

ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು ಪು. ೧೯, ವ. ೩೨

ಹಿಂದೆ ಷಣ್ಮುಖಸ್ವಾಮಿಗಳು ಹೇಳಿದಂತೆ, ಈ ಷಡಾಧಾರಚಕ್ರಗಳಲ್ಲಿ ನೆಲಸಿ ಪೂಜೆಗೊಂಬುದೆ ಪ್ರಾಣಲಿಂಗ. ಪ್ರಾಣಲಿಂಗದ ಆರು ನೆಲೆಗಳೆ ಈ ಷಡಾ

ಧಾರ ಚಕ್ರಗಳು. ಈ ಆರು ನೆಲೆಗಳಲ್ಲದೆ, ಬ್ರಹ್ಮರಂಧ್ರದ ಬ್ರಹ್ಮಚಕ್ರ, ಶಿಖಾ ಚಕ್ರ, ಪಶ್ಚಿಮಚಕ್ರ ಮತ್ತೆ ಅಣುಚಕ್ರವೆಂಬ ಒಳಗೊಳಗಿನ ಉತ್ತರೋತ್ತರ ವೆನಿಸುವ 'ಸೂಕ್ಷ್ಮಾತ್ ಸೂಕ್ಷ್ಮತರ' 'ಪರಾತ್ ಪರ' 'ಅಣೋರಣೀಯಾನ್' 'ಮಹತೋ ಮಹೀಯಾನ್' ಆಗಿ ಬೆಳಗುತ್ತಿರುವ, ಬೆಳಗು ನಿಷ್ಪತ್ತಿ ಯಾಗಿ, ಹಣ್ಣಾಗಿ ತೊಟ್ಟು ಬಿಟ್ಟು ಬಯಲಾಗುತ್ತಿರುವ ಮಹಾಘನಶೂನ್ಯ ಲಿಂಗದ ನೆಲೆಗಳನ್ನೂ ನಿರ್ದೇಶಿಸುತ್ತಾರೆ ಶಿವಯೋಗಿಗಳು, ಪ್ರಾಣಲಿಂಗಾನು ಸಂಧಾನಿಗಳು, ಪ್ರಾಣಾನುಭಾವಿಗಳು.

ಮತ್ತೂ ಒಳಗೆ ಹೊಕ್ಕು ನೋಡಬೇಕು, ಶ್ರೀಗುರುಕಾರುಣ್ಯದಿಂದ ಲಿಂಗದ ಬೆಳಗಿನಲ್ಲಿ ಎಚ್ಚತ್ತ ಶರಣನ ಅಂಗ ಇಂದ್ರಿಯ ಕರಣಗಳ ಬಾಗಿಲು ತೆಗೆದು, ಅಲ್ಲಲ್ಲಿ ಸ್ವಾಯತವಾಗಿ ನೆಲೆಗೊಳ್ಳುವ ಮಹಾಘನ ಲಿಂಗದ ಮಂಟಪಗಳನ್ನು. ಮೂಗಿನೊಳಗೆ ಹೊಕ್ಕು ಮೂಗಿನ ಬಾಗಿಲು ತೆಗೆದು, ಅದಕ್ಕೆ 'ಮೂಗುತನ'ವನ್ನು ದಯಪಾಲಿಸಿದ ಘ್ರಾಣಲಿಂಗವನ್ನು, ಆಚಾರಲಿಂಗವೆಂದು ಶರಣರಿಂದ ಕರೆಸಿಕೊಂಡು ಹೊರಗಿಂದ ಬರುವ ಐದು ವಿಷಯಗಳಲ್ಲಿ ಒಂದಾದ ಗಂಧದ್ರವ್ಯದೊಳಗಿಂದ ಗಂಧಲಿಂಗವನ್ನು ಆಘ್ರಾಣಿಸಬಲ್ಲ ಮೂಗಿನ ಚೈತನ್ಯಲಿಂಗವನ್ನು ನೋಡಬೇಕು. ಒಳಗಿನ ಘ್ರಾಣಕ್ಕೆ ಹೊರಗಿನ ಗಂಧಕ್ಕೆ ಸೇತುವೆ ಕಟ್ಟಿ, ಒಳಗಿಂದ ಹೊರಗೆ, ಹೊರಗಿಂದ ಒಳಗೆ ತಾನು ತಾನಾಗಿ, ತನಗೆ ತಾನನ್ಯವಲ್ಲದೆ, ತನಗೆ ತಾನು ಭಿನ್ನವಲ್ಲದೆ, ಜಗತ್ತಿನ ಗಂಧವ್ಯವಹಾರದಲ್ಲಿ ವಿಲಾಸಿಸುತ್ತಿರುವ ಮೂಗಿನ ಲಿಂಗದಲ್ಲಿಗೆ ಯಾರು ಹೋಗಬಲ್ಲರು? ಕಣ್ಣಿನ ಮಂಟಪದ 'ಶಿವಲಿಂಗ' ವನ್ನು, ಕಣ್ಣಿನೊಳಗೆ ಹೊಕ್ಕು ಯಾರು ಕಾಣಬಲ್ಲರು? ಕಿವಿಯ ಲಿಂಗವನ್ನು ಯಾರು ಕೇಳಬಲ್ಲರು? ನಾಲಗೆಯೊಳಗೆ ಸಿಂಹಾಸನವಾಗಿ ಮಂಡಿಸಿರುವ 'ಗುರುಲಿಂಗ'ವನ್ನು ಯಾರು ರುಚಿ ನೋಡಬಲ್ಲರು? ನಮಗೆ ಗೊತ್ತಿಲ್ಲ ಈ ದೇವನ ದೇಹಪ್ರಾಣಕರಣೇಂದ್ರಿಯಗಳ ವಿದ್ಯೆ. ದೇಹದಲ್ಲಿ ಪ್ರಾಣಿಸಿದ್ದೇವೆ. ಆದರೆ ಅದರ ಮರ್ಮ ತಿಳಿಯದೆ ಸತ್ತಿದ್ದೇವೆ. ಇದ್ದೇವೆ ಎಂಬುದು ನಿಜ. ಆದರೆ ಇರುವುದೆಷ್ಟು? ಸತ್ತಿರುವುದೆಷ್ಟು?

ಇದೋ ಇಲ್ಲಿ ಮತ್ತೆ ಬನ್ನಿ ಸ್ವತಂತ್ರಸಿದ್ಧಲಿಂಗೇಶ್ವರಸ್ವಾಮಿಗಳ ಬಳಿ. ಅವರು ಹೇಳುವ ಲಿಂಗದ ವಾರ್ತೆಯನ್ನು ಕೇಳಿ:

ಅಂಗೇಂದ್ರಿಯ ಕರಣ ದಲ್ಲಿ ಲಿಂಗಣಹ ವರಧರಿಸಿ,
ಲಿಂಗಾಂಗಿಯಾದನಯ್ಯಾ ನಿಮ್ಮ ಶರಣ.
ಅದೆಂತೆಂದೊಡೆ :
ಘ್ರಾಣದಲ್ಲಿ ಲಿಂಗವ ಧರಿಸಿದನಾಗಿ, ಘ್ರಾಣ ಲಿಂಗದ ಘ್ರಾಣವಾಯ್ತು.
ಜಿಹ್ವೆಯಲ್ಲಿ ಲಿಂಗವ ಧರಿಸಿದನಾಗಿ, ಜಿಹ್ವೆ ಲಿಂಗದ ಜಿಹ್ವೆಯಾಯ್ತು.
ನೇತ್ರದಲ್ಲಿ ಲಿಂಗವ ಧರಿಸಿದನಾಗಿ, ನೇತ್ರ ಲಿಂಗದ ನೇತ್ರವಾಯ್ತು.
ತ್ವಕ್ಕಿನಲ್ಲಿ ಲಿಂಗವ ಧರಿಸಿದನಾಗಿ, ತ್ವಕ್ಕು ಲಿಂಗದ ತ್ವಕ್ಕಾಯಿತ್ತು.
ಶ್ರೋತ್ರದಲ್ಲಿ ಲಿಂಗವ ಧರಿಸಿದನಾಗಿ, ಶ್ರೋತ್ರ ಲಿಂಗದ ಶ್ರೋತ್ರವಾಯಿತ್ತು.
ಮನದಲ್ಲಿ ಲಿಂಗವ ಧರಿಸಿದನಾಗಿ, ಮನ ಲಿಂಗದ ಮನವಾಯಿತ್ತು.
ಸರ್ವಾಂಗದಲ್ಲಿ ಲಿಂಗವ ಧರಿಸಿದನಾಗಿ, ಸರ್ವಾಂಗ ಲಿಂಗವಾಯಿತ್ತು—
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣಂಗೆ.

ಸ್ವತಂತ್ರಸಿದ್ಧಲಿಂಗೇಶ್ವರನ ವಚನಗಳು, ಪು. ೧೯, ವ. ೭೩

ಮನುಷ್ಯನ ಕಣ್ಣಿನಲ್ಲಿ ಮಹಾದೇವ ನೋಡಿದರೆ, ಮನುಷ್ಯನ ಕಿವಿಯೊಳಗಿಂದ ಮಹಾದೇವ ಕೇಳಿದರೆ, ಮನುಷ್ಯನ ತೊಗಲೊಳಗಿಂದ ಲಿಂಗದೇವ ಸೋಂಕಿದರೆ, ಮನುಷ್ಯನ ನಾಲಗೆ ಲಿಂಗದ ನಾಲಗೆಯಾಗಿ ಉಂಡರೆ, ಮನುಷ್ಯನ ಮನಸ್ಸು ಲಿಂಗದ ಮನವಾಗಿ ವಿಶ್ವಲಿಂಗದಲ್ಲಿ ಹರಿದಾಡಿದರೆ, ಮನುಷ್ಯನ ಪ್ರಾಣ, ವಿಶ್ವದಲ್ಲಿ ವಿಶ್ವವನ್ನು ಪ್ರಾಣಿಸುತ್ತಿರುವ ಪ್ರಾಣಲಿಂಗದಲ್ಲಿ ಅರ್ಪಿತವಾಗಿ ಇರಿಸಲ್ಪಟ್ಟು ಅಲ್ಲಿಂದ ಪ್ರಾಣಿಸಿದರೆ, ಮನುಷ್ಯನ ಬುದ್ಧಿ ಲಿಂಗದ ಬುದ್ಧಿಯಾಗಿ ವಿಚಾರವಿಲಾಸವನ್ನು ಬೀರಿದರೆ, ಮನುಷ್ಯ ಲಿಂಗಾಂಗಿಯಾದರೆ, ಮನುಷ್ಯನ ಸರ್ವಾಂಗ ಲಿಂಗವಾಗಿ ಸರ್ವಾಂಗಲಿಂಗಿಯಾದರೆ, ಮನುಷ್ಯನ ವಿಶ್ವವ್ಯವಹಾರ 'ಲಿಂಗವಂತ'ವಾಗಿ ನಡೆದರೆ, ವಿಶ್ವ ಲಿಂಗವಂತವಾಗಿ ಜೀವಿಸಿದ್ದರೆ, ಆಗ 'ಸತ್ತು ಬದುಕಿ ನಿಶ್ಚಿಂತವಾಯಿತ್ತು ಗೊಹೇಶ್ವರ'. ಇಲ್ಲಿ ಲಿಂಗ ಲಿಂಗ ಲಿಂಗವಂತ ಶಬ್ದಗಳನ್ನು ಮೇಲಿಂದ ಮೇಲೆ ನಾನು ಉಪಯೋಗಿಸಿದ್ದರೆ ನೀವು ಅನ್ಯಥಾ ಭಾವಿಸಬೇಡಿ. 'ದೇವನೊಬ್ಬ ನಾಮ ಹಲವು,' 'ಲಿಂಗವೆಂಬುದು ಅನಂತದ ಹೆಸರು,' 'ಸ್ವ-ಅನುಭಾವ ದೇವರು' ಎಂಬರ್ಥದಲ್ಲಿ ನೀವೂ ಸ್ವ–ಥಾ, ಏಕ-ಥಾ, ವಿಶ್ವೇಶ್ವರ ದೇವ-ಥಾ ಭಾವಿಸಿರಿ. ಎಲ್ಲ ಹೃದಯದ ದೇವ ಒಬ್ಬ, ಹೆಸರಿನ ತರಂಗ ಹಲವು.

ಇಲ್ಲಿ ಇನ್ನೂ ಲಿಂಗಗಂಭೀರವಾಗಿ ನಿದಿಧ್ಯಾಸ ಮಾಡುವ ವಿಚಾರವಿದೆ. ಮನುಷ್ಯಪ್ರಾಣಿಯ ಸರ್ವಾಂಗ ಲಿಂಗವಾಗಿ, ಲಿಂಗಪ್ರಾಣಿಯಾಗಿ ಇರುವ ದಿವ್ಯಪರಿವರ್ತನೆಯ ಸೂಕ್ಷ್ಮವನ್ನು ನೋಡಿ ಮುಂದೆ ಹೊರಡೋಣ. ನಿಮ್ಮ ಒಪ್ಪಿಗೆಯೆ? ಇದೋ ನನ್ನ ಮೂಗಿನ ಕಡೆ ನೋಡಿ. ಅಥವಾ ನಿಮ್ಮ ಮೂಗನ್ನು ವಿಚಾರಿಸಿ ನೋಡಿ. ಅರಳಿದ ಮಲ್ಲಿಗೆ ಬಳ್ಳಿಯ ಬಳಿ ನಾನು ನಿಂತಿದ್ದೇನೆ. ನೀವೂ ನನ್ನ ಬಳಿಯಲ್ಲಿ. ಹೂವಿನ ಪರಿಮಳ ಗಾಳಿಯಲ್ಲಿ ಕುಳಿತು ಮೂಗಿನ ಮನೆಗೆ ಬರುತ್ತದೆ. ಮನೆಗೆ ಬಂದರೂ ಪರಿಮಳವನ್ನು ಸ್ವಾಗತಮಾಡಿ, ಒಳಗೆ ಬರಮಾಡಿಕೊಳ್ಳುವ ಶಕ್ತಿ ಬರಿ ಮೂಗಿಗೆ ಇಲ್ಲ. ಮೂಗಿನ ಒಡೆಯ-ವಾಸನೆಯನ್ನು ನೋಡಿ ಗುರುತುಹಿಡಿದು ಒಳಗೆ ಕರಕೊಳ್ಳಬಲ್ಲ ಒಡೆಯ-ಅರಿವುಚೈತನ್ಯ. ಪರಿಮಳದ ಸ್ವಭಾವಪರಿಚಯ ಇದಕ್ಕೆ. ನಾಸಿಕದ ಈ ಪ್ರಾಣಚೈತನ್ಯಕ್ಕೆ ಅನ್ಯವಾಗಿ ಭಿನ್ನವಾಗಿ ಇದಿರಾಗಿ, ಬೇರೂರಿಂದ ಅತಿಥಿ ಬರುವಂತೆ ಬರುತ್ತದೆ ಹೂವಿನ ಪರಿಮಳ ಮೂಗಿನೊಳಗೆ. ಈ ಅನುಭವದಲ್ಲಿ ಮೂಗು ಬೇರೆ, ಹೂವು ಬೇರೆ. ಅರಿವ ಚೈತನ್ಯ ಬೇರೆ, ಅರುಹಿಸಿಕೊಂಬ ಪರಿಮಳ ಬೇರೆ. ಸ್ವತಂತ್ರಸಿದ್ಧಲಿಂಗೇಶ್ವರನು ಹೇಳುವಂತೆ, 'ಘ್ರಾಣದಲ್ಲಿ ಲಿಂಗವ ಧರಿಸಿದನಾಗಿ, ಘ್ರಾಣ ಲಿಂಗದ ಘ್ರಾಣ, ವಾದರೆ? ಆಘ್ರಾಣಿಸಬಲ್ಲ ಘ್ರಾಣದ ಜ್ಞಾನಚೈತನ್ಯದ ಅಂಗದಲ್ಲಿ, ಈ ಜ್ಞಾನೇಂದ್ರಿಯದ ಒಳಗಡೆ 'ಲೀಯತೇ ಯತ್ರ, ಗಮ್ಯತೇ ಯಸ್ಮಾತ್ ಜಗದೇತತ್ ಚರಾಚರಂ' ಎನಿಸುವ ಲಿಂಗ ಒಡಮೂಡಿದರೆ? ಘ್ರಾಣದ ಘ್ರಾಣ, ಘ್ರಾಣಚೈತನ್ಯದ 'ತಂದೆ ತಾಯಿ ಇಲ್ಲದ ಕಂದ,' 'ಕಾರಣ ಕಾರಣ,' ಮೂಲಕಾರಣವಾದ 'ಪರಿಮಳ ಲಿಂಗ' ಪ್ರಕಟವಾಗಿ ಪ್ರಕಾಶವಾದರೆ? ಘ್ರಾಣಚೈತನ್ಯ ಈ ಪರಿಮಳಲಿಂಗಚೈತನ್ಯ ಕೂಡಿ ಒಂದಾಗಿ, ಮೂಗಿನೊಳಗಿಂದ ಹೂವಿನ ಪರಿಮಳವನ್ನು ಆಘ್ರಾಣಿಸಿದರೆ? ಈಗ ಹೂವಿನ ಪರಿಮಳದ ಸಂಪೂರ್ಣ ಗುರುತು ಹತ್ತುತ್ತದೆ ಲಿಂಗದ ಘ್ರಾಣಕ್ಕೆ. ಯಾರು ಈ ಪರಿಮಳ? ಪರಿಮಳಲಿಂಗದಿಂದಲೆ ಗಮಿಸಿ ಬಂದು, ಹೂವಿನ ಕರಂಡಕದಲ್ಲಿ ಕುಳಿತಿರುವ ಲಿಂಗದಿಂದ ಉದ್ಭೂತವಾದ 'ಭೂತ ಪರಿಮಳ!' ಕಣ್ಣಿಗೆ ರೂಪಾಗಿ ಕಾಣುವ ಪುಷ್ಪ ಯಾರು? 'ನೇತ್ರಸ್ಯ ಹಿ ನೇತ್ರಂ' ಆದ ನೇತ್ರ-ಲಿಂಗ, ಪುಷ್ಪವನ್ನು ಯಾರೆಂದು ಗುರುತು ಹಿಡಿಯುತ್ತದೆ? ತಾನೆಂದು,

ತನ್ನದೆಂದು, ತನ್ನಿಂದ ಭೂತ, ಅಂದರೆ ಆದುದೆಂದು. ಉಪನಿಷತ್ಕಾರರ ಅಥವಾ ಪುರಾತನ ತತ್ತ್ವಜ್ಞಾನಿಗಳ, ಅನುಭಾವಿಗಳ 'ಸ್ವ-ಅನುಭಾವ ದರ್ಶನ'ವನ್ನು ಮುಂದುವರಿಸಿಕೊಂಡು ಬಂದಿರುವ ಶರಣರ 'ಸರ್ವಾಂಗ ಲಿಂಗ'ದ ಅನುಭವವನ್ನು ನೋಡಿದರೆ, ಒಳಗೆ 'ಲಿಂಗಾಂಗೈಕ್ಯ'ದ ಪರಮ ರಹಸ್ಯ ಥಳಥಳಿಸುತ್ತದೆ. ಅರಿವು ಬೆಳಗಾದ ಪರಿಮಳಲಿಂಗದ-ಇದನ್ನೇ ಆಚಾರಲಿಂಗವೆಂದು ಕರೆದಿದ್ದಾರೆ ಬೇರೆ ಕಾರಣದಿಂದ-ಮರವು ಗತ್ತಲೆಯ ಕಣವೇ ನಮ್ಮ ನಿಮ್ಮ ಘ್ರಾಣದ ಮೂಸಿ ನೋಡುವ ಚೈತನ್ಯ. ಮೂಗಿನ ಮನೆ ಕಟ್ಟಿಕೊಂಡು ಇಲ್ಲಿ ವಾಸವಾಗಿದೆ. ಅದೇ ಘ್ರಾಣಚೈತನ್ಯ ಮರೆಯಬಲ್ಲ ಅರಿವು. ಈ ಅರಿವೂ ಇಲ್ಲದೆ, ಅಂದರೆ ಮರವೂ ಇಲ್ಲದೆ ಹೆಪ್ಪುಗಟ್ಟಿದೆ, ಹೂವಿನ ಪರಿಮಳಚೈತನ್ಯ. ಅದೇ ಪರಿಮಳಚೈತನ್ಯ ಇನ್ನೂ ಗಟ್ಟಿಗೊಂಡು, ಇನ್ನೂ ಜಡಭೂತವಾಗಿ ಪರಿಮಳಕ್ಕೆ ಮನೆಯಾಗಿದೆ, ಹೂವು-ರೂಪಾಗಿದೆ. ಈ ಚೈತನ್ಯದ ಪರಂಪರೆ ಹೀಗೆ: ಲಿಂಗಚೈತನ್ಯ, ಅದರಿಂದ ಭೂತವೇ ಘ್ರಾಣಚೈತನ್ಯ. ಇದು ಹಡೆದ ಕೂಸೇ ಪುಷ್ಪದ ಪರಿಮಳಚೈತನ್ಯ. ಇದರಂತೆ ಕಣ್ಣು ಕಿವಿ ನಾಲಗೆ ತೊಗಲುಗಳು ಲಿಂಗ ಧಾರಿಗಳಾಗಿ ರೂಪ ಶಬ್ದ ರುಚಿ ಸ್ಪರ್ಶಗಳನ್ನು ನೋಡಿದರೆ, ಒಂದು ಪರಿಪೂರ್ಣ ತಾನು, ತಾನಾದ ಹಲವನ್ನು ಸಂಪೂರ್ಣ ನೋಡಬಲ್ಲುದು. ಮನುಷ್ಯನ ಸರ್ವಾಂಗ ಲಿಂಗಧಾರಿಯಾದರೆ, ವಿಶ್ವಪ್ರಪಂಚ ಲಿಂಗದಿಂದಲೆ ಗಮಿಸಿದ, ಗಮಿಸುತ್ತ ಇರುವ ಲಿಂಗಭೂತಪ್ರಪಂಚವಾಗಿ, ಲಿಂಗದ ಪರಮಚೈತನ್ಯ ಮಯವಾಗಿ, ಲಿಂಗದ ಮಹಾಬೆಳಗು ಮಯವಾಗಿ ಕಾಣಬರುವುದು. ಇದು ಶರಣರ ಶಿವಯೋಗದ ರಹಸ್ಯ ಎಂದು ನನ್ನ ತಿಳಿವಳಿಕೆ. ನೀವು ನಿಮ್ಮೊಳಗೆ ವಿಚಾರಮಾಡಿ ನೋಡಿರಿ. ಶರಣರ ಶಿವಯೋಗಮಾರ್ಗದ ಜಾಡು ಹಿಡಿದು ನೋಡಿರಿ.

ಮೂಗು ನಾಲಗೆ ಮುಂತಾದ ಇಂದ್ರಿಯಗಳೆಲ್ಲ ಲಿಂಗಕ್ಕೆ ಬಾಗಿಲಾಗಿ, ಲಿಂಗದ ಬಾಯಾಗಿ, ಲಿಂಗಚೈತನ್ಯ ಲಿಂಗದೇವ ಇಂದ್ರಿಯಮುಖವಾಗಿ ಹೊರಗೆ ಬಂದು, ತನ್ನನ್ನೆ ಹೊರಗೆ ಕಂಡು, ಹೊರಗು-ತನ್ನನ್ನೆ ತನಗೆ ಬಾಯಾದ ಮೂಗು ನಾಲಗೆಗಳಲ್ಲಿ ಉಂಡು ನೋಡಿದರೆ, ಆಗ ಅಂಗದ ಇಂದ್ರಿಯ ಲಿಂಗೇಂದ್ರಿಯ. ಹೀಗೆ ಲಿಂಗೇಂದ್ರಿಯ ತನ್ನಲ್ಲಿ ಮೂಡಿದ ಭಕ್ತ

ಲಿಂಗಭಕ್ತ. ಆತನೆ ತನ್ನಿಂದಾದ ಪ್ರಪಂಚವನ್ನು ನೋಡಬಂದ ಪಂಚ ಮುಖದ ಪರಮೇಶ್ವರನ ಚಿದಂಗ. ಇದೋ ಇಲ್ಲಿ ಶಿವಲೆಂಕ ಮಂಚಣ್ಣನ ಮಾತು ಕೇಳಿ :

ರಸವನರಿವುದಕ್ಕೆ ಜಿಹ್ವೆಯಾಗಿ ಬಂದು,
ಗಂಧವನರಿವುದಕ್ಕೆ ನಾಸಿಕವಾಗಿ ಬಂದು,
ರೂಪನರಿವುದಕ್ಕೆ ನೇತ್ರವಾಗಿ ಬಂದು,
ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು,
ಸ್ಪರ್ಶವನರಿವುದಕ್ಕೆ ತ್ವಕ್ಕಾಗಿ ಬಂದು —
ಇಂತೆನ್ನ ಘಟದ ಮಧ್ಯದಲ್ಲಿ ನಿಂದು
ಪಂಚವಕ್ತ್ರನಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ !

ವ.ಸಾ.ಸಂ. ಪು. ೬೨೦-೧೨, ವ. ೪೨

ಭಕ್ತಲಿಂಗೇಂದ್ರಿಯ ಎಂಬ ಅನುಭವವನ್ನು ಇನ್ನೂ ವಿಚಾರಮಾಡಿ ನೋಡಿ. ಸಾಧ್ಯವಿದ್ದರೆ ಅನುಭವಕ್ಕೆ ತಂದುಕೊಂಡು ನೋಡಿ. ಈ ಲಿಂಗೇಂದ್ರಿಯದ ಮರ್ಮ ಸರ್ವಾಂಗ ಲಿಂಗದ ಗೂಡು ಆಗುತ್ತಿರುವ, ಸರ್ವಾಂಗ ಲಿಂಗ ಭಕ್ತನಾಗುತ್ತಿರುವ ನಿಜಭಕ್ತಿಯ ಮರ್ಮ. ಐದೂ ಜ್ಞಾನೇಂದ್ರಿಯಗಳಲ್ಲಿ ಲಿಂಗವನ್ನು ಧರಿಸಿಕೊಂಡು, ಲಿಂಗಕ್ಕೆ ಮನೆಯಾಗಿ ಮಾರಾಗಿ, ಬಾಗಿಲಾಗಿ ಬಾಯಾಗಿ, ವಾಹನವಾಗಿ ಭಕ್ತಕಿಂಕರನಾಗಿ, ಸಮರತಿಗೆ ಶರಣನಾಗಿ ಸಮರಸಕ್ಕೆ ಶರಣಲಿಂಗನಾಗಿ ಇರಬಲ್ಲ, ಲಿಂಗದ ಬದುಕು ಬದುಕಬಲ್ಲ, ಲಿಂಗದೊಡನೆ ಬಾಳುವೆ ಮಾಡಬಲ್ಲ ನಿಜಲಿಂಗಭಕ್ತ. ತನ್ನ ಸರ್ವಾಂಗದ ಸೆಜ್ಜೆಯಲ್ಲಿ ಹೃದಯನಾಥಲಿಂಗವನ್ನು ಧರಿಸಿಕೊಂಡು, ಇರಿಸಿಕೊಂಡು ಇದ್ದರೆ, ಆಗ ಆತನ ವ್ಯವಹಾರ ಹೇಗೆ ನಡೆದಿದೆ? ಮನುಷ್ಯಜಾತಿ-ಕುಲದ ಮನುಷ್ಯ, ಸದ್‌ಗುರುಲಿಂಗಜಾತನಾಗಿ ಲಿಂಗಜಾತಿ ಲಿಂಗಕುಲವಾದರೆ? ಆತನ ಮನ ಬುದ್ಧಿ ಮುಂತಾದ ಕರಣ ಲಿಂಗದ ಕರಣ, ಭಾವ ಲಿಂಗಭಾವ, ಪ್ರಾಣ ಲಿಂಗದ ಪ್ರಾಣ, ಕಾಲು ಲಿಂಗ ನಡೆವ ಕಾಲು, ಕೈ ಲಿಂಗದ ಬೆರಳಿನ ಕೈ. ಮಾನವನ ಅಂಗಾಂಗದ, ನಿಖಿಲಪ್ರಪಂಚದ ಬ್ರಹ್ಮಾಂಗದ ಕಾಡು ಕೆತ್ತಿ, ಕಸ ಕಿತ್ತು, ಸರ್ವಾಂಗದಲ್ಲಿ ಸರ್ವಪ್ರಂಪಚದ ಅಂಗದಲ್ಲಿ ಲಿಂಗವನ್ನು ಬಿತ್ತಿ, ಲಿಂಗದ ಬೆಳಸನ್ನು ಬೆಳೆದು, ಲಿಂಗವನ್ನು ಉಂಡು

ತಿಂದು, ಹಾಸಿ ಹೊದೆದು, ಇಟ್ಟು ತೊಟ್ಟು, ಕೊಟ್ಟು ಕೊಂಡು ಸುಖವಾಗಿ ಇದ್ದರೆ, ಆ ಇರವು ಸತ್ತಿಗೆ ಗಮಿಸಿ ನಿಂದ ಇರವು. ಆ ಸುಖ ಒಳಹೊರ ಗೆನ್ನದೆ ತುಂಬಿದ ಸುಖ. ಆ ವ್ಯವಹಾರ ಪೂಜೆ.

ಇಲ್ಲಿ ನೋಡಿ, ಲಿಂಗದೇವನೊಡನೆ ಕೂಡಿ ಒಂದಾಗಿ ನಡೆದಾಡಿ ನುಡಿ ದಾಡುತ್ತಿದ್ದಾರೆ ಉರಿಲಿಂಗ ಪೆದ್ದಿಗಳು :

ಎನ್ನ ಗತಿ ನಿನ್ನ ಗತಿ. ಎನ್ನ ಕೇಳಿಕೆ ನಿನ್ನ ಕೇಳಿಕೆ.
ಎನ್ನ ನೋಟ ನಿನ್ನ ನೋಟ. ಎನ್ನಂಗಸ್ಪರ್ಶನ ನಿನ್ನಂಗಸ್ಪರ್ಶನ.
ಎನ್ನ ಸುಖಭೋಗವೆಲ್ಲ ನಿನ್ನ ಸುಖ ಭೋಗ.
ಎನ್ನೊಳಗೆ ನೀನು, ನಿನ್ನೊಳಗೆ ನಾನು.
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ,
ಎನ್ನ ಸೋಂಕಿತ್ತೆಲ್ಲ ನಿಮ್ಮ ಪೂಜೆಯಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ !

ವ.ಸಾ.ಸಂ. ಪು. ೬೨೦, ವ. ೩೯

೪

ಸದ್ಗುರುವಿನ ಕಾರುಣ್ಯವಾಗಿ, ದಿವ್ಯಾಪೇಕ್ಷನಾದ ಮನುಷ್ಯನ ಸರ್ವಾಂಗದಲ್ಲಿ ಲಿಂಗದ ಎಚ್ಚರವಾಗಿ, ಸರ್ವಾಂಗ ಲಿಂಗಧಾರಿಯಾಗಿ, ಲಿಂಗವಂತವಾಗಿ, 'ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ' (ಪು. ೬೨೦)ವಾಗಿ ಇದ್ದು, ಲಿಂಗದ ಬದುಕನ್ನು ಬದುಕ ಬೇಕಾದರೆ, ಲಿಂಗದೊಡನೆ ಕೂಡಿ ಬಾಳುವೆ ಮಾಡಬೇಕಾದರೆ, ಮನುಷ್ಯ ಜೀವನದ ಪರಮಾರ್ಥವನ್ನು ಸರ್ವಾಂಗದಲ್ಲಿ ಕಂಡು, ಆ ಅರ್ಥವನ್ನು ಸರ್ವಾಂಗದಲ್ಲಿ ಮೂಡಿಸಿ ಪ್ರಕಾಶಗೊಳಿಸಬೇಕಿದ್ದರೆ ಏನು ಮಾಡಬೇಕು ? ಯಾವ ಹಾದಿ ಹಿಡಿಯಬೇಕು ? ಈ ಪ್ರಶ್ನೆಗಳಿಗೆ ವಚನಕಾರರು ಅಂದರೆ ಶಿವಶರಣರು ಕೊಡುವ ಉತ್ತರ ಸರಳ, ನಿರರ್ಗಳ. ಪೂಜೆ ಮಾಡಬೇಕು, ಲಿಂಗಪೂಜೆ ಮಾಡಬೇಕು ; ಭಕ್ತಿಮಾರ್ಗ ಹಿಡಿಯಬೇಕು, ಶಿವಾದ್ವೈತ ಭಕ್ತಿಯ ಮಾರ್ಗ ಹಿಡಿಯಬೇಕು. ಮಾನವನ ಅರ್ಥ ಲಿಂಗ, ಜಗತ್ತಿನ ಅರ್ಥ ಅದೇ ಲಿಂಗ. ಸರ್ವತತ್ತ್ವ ಭೂತ ಬ್ರಹ್ಮಾಂಡಗಳ ಹೃದ್ದೇಶದಲ್ಲಿ

ಹುದುಗಿ ಇದ್ದು, ಮತ್ತೆ ಎಲ್ಲವನ್ನು ತನ್ನೊಳಗೆ ಇರಿಸಿಕೊಂಡು, ಎಲ್ಲವನ್ನು ಮೀರಿ 'ಅತ್ಯತಿಷ್ಠತ್ ದಶಾಂಗುಲ'ವಾಗಿ ಬೆಳಗುವ ಈಶ್ವರಲಿಂಗವನ್ನು, ದೇವರ ದೇವ ಮಹಾದೇವನನ್ನು, ಮಹಾದೇವ ಮಹಾವಿಷ್ಣು ಬ್ರಹ್ಮ ಗಾಡ್ ಅಲ್ಲಾ ಬುದ್ಧ ತೀರ್ಥಂಕರ, ಇನ್ನೇನೇನು ಹೆಸರು, ಯಾವ ಯಾವ ಧರ್ಮ ಅಧರ್ಮ ಅಂಥಧರ್ಮ ಕಾಲ ದೇಶ ಕೊಟ್ಟವೆಯೋ ಆ ಎಲ್ಲ ಹೆಸರಡಗಿ ನಿಶ್ಶಬ್ದವಾಗಿ ಇರುವ, ಎಲ್ಲ ರೂಪದ ಸಪ್ಪಳು ಮಾಯವಾಗಿ ಇರುವ, ಏನೂ ಏನೂ ಇಲ್ಲದೆ ತಾನೊಂದೆ ಇರುವ, 'ನಿಮ್ಮ ನೀವರಿಯದೆ ಇರ್ದಿರಲ್ಲಾ!' ಎಂಬಂತೆ, ಇರುವೆನೆಂಬ ಅರಿವಿನ ಸದ್ದೂ ಅಡಗಿ ಬಯಲಾಗಿ ಇರುವ ಮಹಾಘನವನ್ನು ಜ್ಞಾನಮಾರ್ಗ ಹಿಡಿದು ನಡೆದ ಬ್ರಹ್ಮಜ್ಞಾನಿ ಕಂಡರೆ, ಅದೋ, ಅದೇ ಇರವನ್ನು ಪೂಜಿಸಬೇಕು. 'ಲಿಕಾರವೆ ಶೂನ್ಯ, ಗಕಾರವೆ ಚಿತ್ತು, ಬಿಂದುವೆ ಲೀಲೆ.' ಜಗವನ್ನು ತನ್ನ ಚಿತ್‌ಶಕ್ತಿಯಿಂದ ತನ್ನೊಳಗೆ ಹರವಿಕೊಂಡು ಲೀಲೆಯಾಡುತ್ತಿರುವ ಮಹಾಘನಶೂನ್ಯದಿರವಿಗೆ 'ಲಿಂಗ'ವೆಂದು ಹೆಸರಿಟ್ಟರೆ, ಅಂಥ ಇರವಿಗೆ ಒಪ್ಪುವ ಹೆಸರು ಎಂದು ಶರಣರ ಅಭಿಮತ. '....ಶಿಶು ಕಂಡ ಕನಸಿನಂತೆ, ಹೆಸರಿಲ್ಲದ ಬಯಲು ಗೊಹೇಶ್ವರ' (ಪು. ೫೨೩), 'ನಾಮವಿಲ್ಲ ಅನಾಮವಿಲ್ಲ' (ಪು. ೫೧೮), 'ಹೆಸರಿಡಬಾರದ ಲಿಂಗವ ಹೆಸರಿಟ್ಟು, ಎನ್ನ ಕರಸ್ಥಲಕ್ಕೆ ತಂದು, ಕರತಳಾಮಳಕದಂತೆ ಮಾಡಿ, ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟ ಶ್ರೀಗುರು ಚೆನ್ನಬಸವಣ್ಣ' (ಶೂನ್ಯಸಂಪಾದನೆ ಪು. ೨೨೫), 'ಯತೋ ವಾಚೋ ನಿವರ್ತಂತೇ', 'ವಾಚಾಮ್ ಅಗೋಚರಂ', 'ಗೊಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು' (ಪು. ೫೦೮)–ಎಂಬಿವೇ ಮೊದಲಾದ ಅನುಭಾವಿಗಳ ಮಾತನ್ನು ಕೇಳಿದರೆ, ದೇವರಿಗೆ ದೇವರೆಂಬ ಹೆಸರೂ ಇಲ್ಲ. ಹೆಸರು ಹಂಗಿನ ಶಬ್ದ ಎಂಬ ಸಂಗತಿ ನಮಗೆ ಗೊತ್ತಾಗುತ್ತದೆ. ಸ್ವಾನುಭಾವದ ದಿವ್ಯಕ್ಕೆ ಹೆಸರಿಡಲು ಶಬ್ದದ ಮೀಸಲು ಮುರಿಯಬಾರದು ಎಂಬ ಮಾತು ಅನುಭಾವಿಗಳಿಗೆಲ್ಲ ಗೊತ್ತಿದೆ. ಮುರಿದು ಸ್ವಾನುಭಾವವನ್ನು ಶಬ್ದಕ್ಕೆ ತಂದರೂ 'ಏನೆನಲಿಲ್ಲದ' ಮಹಾಘನಶೂನ್ಯಲಿಂಗ ಎಂಥ ಶಬ್ದಜಾಲದಿಂದಲಾದರೂ ಜಾರಿ ಪಾರಾಗುತ್ತದೆ. ಆದರೂ ಹೆಸರು ಬೇಕು, ಹೆಸರು ಇಡಬೇಕು. ನಿರಾಕಾರಕ್ಕೆ ಸಾಕಾರ ಸಂಗಡವಾಗಿರುವಂತೆ, ಈ ನಿಶ್ಶಬ್ದ ಬ್ರಹ್ಮಕ್ಕೆ

ಶಬ್ದಬ್ರಹ್ಮದ ಶರೀರ ಇರಬೇಕು. ಬಣ್ಣಕ್ಕೆ ಚಿನ್ನದ ಸೆಜ್ಜೆ ಇರಬೇಕು; ಪರಿಮಳಕ್ಕೆ ಹೂವಿನ ಅರಮನೆ ಇರಬೇಕು. ನಾವು ಸೀಮೆಯಿಲ್ಲದೆ, ಹೆಸರು ದೆಸೆಯಿಲ್ಲದೆ ಇರುವ ಬೆಳಗುವ ಬಯಲಿಗೆ 'ಬೆಳಗು_ಬಯಲು' ಎಂದಾದರೂ ಕರೆಯಬೇಕಲ್ಲವೆ? ಬಹಳ, ಬಹಳ ದೊಡ್ಡದು, ಅತಿ ದೊಡ್ಡದಕ್ಕೆ 'ಅತಿ ದೊಡ್ಡ' ಎಂಬ ಹೆಸರನ್ನಾದರೂ ಕೊಡಬೇಕಲ್ಲವೆ? ಪರಮಶೋಭನ ಶಾಂತಿ ಕಲ್ಯಾಣಕ್ಕೆ 'ಕಲ್ಯಾಣಪ್ಪ'ನೆಂದಾದರೂ ಕರೆಯ ಬೇಡವೆ? ಪಾತಾಳ ಗಗನದತ್ತಾಚೆ ಪಸರಿಸಿದ ವಿಸ್ತಾರಕ್ಕೆ 'ಹರವಣ್ಣ' ನೆಂದು ಹೇಳಬಾರದೆ? ಎಲ್ಲ ಬೆಳಗಿನಾಚೆ ಥಳಥಳಿಸಿದರೆ 'ಹೊಳೆಯು'ನೆಂದು ಹೆಸರಿಡಬಾರದೆ? 'ಬೆಳಗಿನ ಬೆಳಗು ಮಹಾಬೆಳಗು, ಬಯಲಿಗೆ ಬಯಲು ನಿರವಯಲು'ನ್ನು ಪರಂಜ್ಯೋತಿಲಿಂಗ ನಿಶ್ಶೂನ್ಯ ನಿಷ್ಕಳಲಿಂಗ ಅಥವಾ 'ಲಿಂಗ' ಎಂದು ಕರೆದರೆ ಏನು? ದೊಡ್ಡದಕ್ಕೆ ಬ್ರಹ್ಮ, ಕಲ್ಯಾಣಕ್ಕೆ ಶಿವ, ವಿಸ್ತಾರಕ್ಕೆ ವಿಷ್ಣು, ಪ್ರಕಾಶಗಳ ತಂದೆ ಪ್ರಕಾಶಕ್ಕೆ ದೇವರು ಎಂದು ಅಂತ ರಂಗದ ಅನುಭವ ನಾಲಗೆಯಲ್ಲಿ ಕುಡಿಯೊಡೆದರೆ ಯಾರು ಏನು ಮಾಡು ವಂತಿದೆ?

ದೇವರಿಗೆ ಹೆಸರಿರಲಿ, ಬೇರೆ ಬೇರೆ ಹೆಸರಿಡಲಿ. ದೇವರನ್ನು ಅನುಭವಕ್ಕೆ ಅವತರಿಸಿಕೊಳ್ಳಲು ರೂಪ ಕೊಡಲಿ, ಬೇರೆ ಬೇರೆ ರೂಪದಲ್ಲಿ ಧ್ಯಾನಿಸಲಿ. ದೇವರನ್ನು ಹಾಡುವಂತೆ ಹಾಡಲಿ, ಬೇರೆ ಬೇರೆ ಹೆಸರಿನಲ್ಲಿ ಎಲ್ಲರು ಹಾಡಿದರೂ ತೀರದ ಅನಂತ ಮಹಿಮೆಯನ್ನು ಅಳತೆಗೆಟ್ಟು ಹಾಡಲಿ. ಜಗತ್ತಿನ ಎಲ್ಲ ನುಡಿಯನ್ನು ದೇವನ ಅಪಾರಸೌಂದರ್ಯದಿಂದ ಬಣ್ಣ ವಿಡಲಿ, ಬಣ್ಣಿಸಲಿ. ದೇವರನ್ನು ಕುರಿತು ದ್ವೈತಾದ್ವೈತ, ಅಸ್ತಿನಾಸ್ತಿ, ಮಾನಿಜಮ್ ಡ್ಯುಯಾಲಿಜಮ್, ನಿಹಿಲಿಜಮ್ ರಿಯಾಲಿಜಮ್, ಆಯ್ಡಿ ಯಾಲಿಜಮ್ ಪೊಜಿಟಿವಿಜಮ್‌ಗಳು ವಿಚಾರಮಾಡಲಿ, ಜ್ಞಾನಿಸಲಿ. ಜ್ಞಾನದ ಸೀಮೆಗೆಟ್ಟ ಸೀಮೆಯನ್ನು ನೋಡುತ್ತ ನೋಡುತ್ತ ನಡೆಯಲಿ. ಎಲ್ಲ ಹಾದಿಯಲ್ಲಿ ನಡೆಯಲಿ, ಎಲ್ಲ ದಿಕ್ಕಿನಲ್ಲಿ ದಿಕ್ಕುಗೆಟ್ಟು ನೋಡಲಿ. ಮಾನವದ ಹೃದಯ ದೇವನಲ್ಲಿ ಯೋಗಿಸಲಿ, ಕುಂಡಲಿನಿ ಚಕ್ರ ಕಮಲ ದಳಕುಳದಿಂದ, ಮತ್ತಾವ ದೇಶದ ಕಾಲದ ಯೋಗಿಗಳ ಯೋಗ ತಂತ್ರ ಸಾಧನೆ ಸಾವಿರ ಮುಖದಿಂದ ಯೋಗಿಸಲಿ. ಅನಂತ ಯೋಗ ತಂತ್ರದಿಂದ

ದೇವನ ಅನಂತ ದಿವ್ಯೈಶ್ವರ್ಯವನ್ನು ಕಂಡು, ದೇವನೊಡನೆ ಕೂಡಿಕೊಂಡು ಐಶ್ವರ್ಯವಂತವಾಗಿರಲಿ. ದೇವರಿಗೆ ಎಲ್ಲ ಭಕ್ತಿ ಮಾಡಲಿ, ಮಾಡುವ ಪೂಜೆ ಎಲ್ಲ ಮಾಡಲಿ, ಮಾನವನ ಭಾವ ಹಡೆವ ಪೂಜೆ ಭಕ್ತಿಯ ಸೌಂದರ್ಯವಿಲಾಸವೆಲ್ಲ ಸೂರೆಯಾಗಲಿ. ಅನಾದಿಯಿಂದ ನಡೆದಿರುವ ಅನೇಕದ ಭಿನ್ನ-ವಿಭಿನ್ನ ವಿಲಾಸ, ಅನಂತದ ನಿರಾಕಾಶವೈಭವವನ್ನು ಪ್ರಕಾಶಗೊಳಿಸುತ್ತದೆ. ಭಿನ್ನ ಭಿನ್ನ ಕರ್ಮ ಧರ್ಮ ಯೋಗ ಜ್ಞಾನ ಧ್ಯಾನ ಮೌನ ಜಪ ತಪ ಭಕ್ತಿಭಾವಗಳೆಲ್ಲ 'ಬಯಲು ಬತ್ತಲೆ'ಯಾಗಿ ಇರುವ ಹೆಸರಿಲ್ಲದಿರವಿನ ಹೆಸರುಗಳೆ. ಭಿನ್ನ ವಿಭಿನ್ನದ ಚಿತ್ರವಿಚಿತ್ರ, ಬತ್ತಲೆಯು ಉಡುವ ಬಣ್ಣಗಳೆ. ಈ ಭಿನ್ನತೆಯಲ್ಲಿ ಒಂದನ್ನೊಂದು ನೋಡಿ ಆದರಿಸಬೇಕು, ಗೌರವಿಸಬೇಕು, ಆನಂದಿಸಬೇಕು, ಆಲಿಂಗಿಸಬೇಕು. ಏಕೆ ಎಂದು ನಿಮ್ಮ ಪ್ರಶ್ನೆ. ಅಥವಾ ಒಂದು ಧರ್ಮ ಒಂದು ಜ್ಞಾನ ಒಂದು ಹೆಸರು ಒಂದು ಭಕ್ತಿಯಲ್ಲಿ, ಅಖಂಡವಾದ ಅನಂತದಿಂದ ಭಿನ್ನವಾಗಿ, ಒಂಟಿಯಾಗಿ ಕುಳಿತಿರುವ ಭಿನ್ನಧರ್ಮ ಭಿನ್ನಜ್ಞಾನ ಭಿನ್ನ ಹೆಸರು ಭಿನ್ನ ಭಕ್ತಿಯ ಪ್ರಶ್ನೆ ನಿಮ್ಮದು. ಅದಕ್ಕೆ ಉತ್ತರ: ಭಿನ್ನ ಯಾವುದೇ ಇರಲಿ, ಅದು ಪೂರ್ಣವನ್ನು ಎಂದೂ ನಿಲುಕಲಾರದು. ಯಾವ ಕ್ಷೇತ್ರವೆ ಇರಲಿ, ಭಿನ್ನಭಾವ, ಪರಿಪೂರ್ಣ ನಿತ್ಯ ಸತ್ಯ ಜ್ಞಾನ ಆನಂದ ಅನಂತಗಳಲ್ಲಿ ಇಲ್ಲದ ಒಡಕನ್ನು ಉಂಟು ಮಾಡಿಕೊಂಡು, ಕೆಡಿಸಿ ಕೆಡುವ ಭಾವ. ಈ ಮಾತಿನಲ್ಲಿ ಎಚ್ಚರವಾಗಿದ್ದೇ ಲಿಂಗ, ಲಿಂಗಪೂಜೆ, ಲಿಂಗಭಕ್ತಿ, ಲಿಂಗಜ್ಞಾನ, ಲಿಂಗಾಂಗ, ಲಿಂಗಧಾರಣ, ಲಿಂಗವಂತ, ಲಿಂಗಶರಣ ಮುಂತಾದ ಹೆಸರುಗಳನ್ನು ನಾನಿಲ್ಲಿ ಬಳಸಿಕೊಂಡು ನಿಮ್ಮೊಡನೆ ಮಾತಾಡುತ್ತಿದ್ದೇನೆ. ಲಿಂಗಕ್ಕೆ ಬದಲು ನಿಮ್ಮ ದಿವ್ಯಪಾವನ ಭಾವಕ್ಕೆ ಸರಿ ಕಂಡ ಶಬ್ದವನ್ನು ನೀವು ಬಳಸಿಕೊಳ್ಳಿ.

ಜಗನ್ಮಾನವನ ಜೀವನ ಹುಟ್ಟುಸಾವಿನ 'ಮಧ್ಯಂತರ'ದಲ್ಲಿ ತೋರಿದೆ,—ಏಳು ಬೀಳುಗಳ ನಡುವೆ ನಡುಗಾಲದಲ್ಲಿ, ಸಮುದ್ರದ ಮೇಲೆ ಎದ್ದು ತೋರುವ ತರಂಗದಂತೆ. ಮೇಲೆ ಎದ್ದು ಕೆಳಗೆ ಇಳಿದು ಅಪಾರ ಜಲರಾಶಿಯಲ್ಲಿ ಅಡಗಿ ಹೋಗುವ ಮೊದಲೆ ಎಚ್ಚರವಾಗಿ, ತೆರೆಗೆ ತನ್ನ ಸಮುದ್ರತನದ ಅರಿವಾಗಿ, ಸಮುದ್ರವಾಗಿ ಎಚ್ಚತ್ತ ತನಗೆ ಸಮುದ್ರದ ಇರವೆ ಇರವಾಗಿ, ತರಂಗಕೋಟಿಯ ಭಿನ್ನವಿಲಾಸ ಒಂದು ತಾನು-

ಸಮುದ್ರದ ವಿವಿಧೈಕ್ಯವಿಲಾಸವನ್ನು ಕಣ್ಣಾರೆ ಕಂಡು, ಮನವಾರೆ ತಾನೂ ಜೀವನದ ದಿವ್ಯವಿಲಾಸವನ್ನಾಡಿ, ಕೈಯಾರೆ ಅದೇ ಸಮುದ್ರವನ್ನು ಆಚರಿಸಿ, ನಾಲಗೆಯಲ್ಲಿ ಸಮುದ್ರ ತುಂಬಿ ಹಾಡಿ, ಕಿವಿಯಲ್ಲಿ ತುಂಬಿದ ಸಮುದ್ರ ಕೇಳಿ, ಮೈಯೆಲ್ಲಾ ಸಮುದ್ರವಾಗಿ ತರಂಗಕೋಟಿಯನ್ನು ಸರ್ವಾಂಗಾಲಿಂಗನವಾಗಿ ಆಲಿಂಗಿಸಿ, ಕಾಲಲ್ಲಿ ಸಮುದ್ರ ನಡೆದು, ಬುದ್ಧಿಯಲ್ಲಿ ಸಮುದ್ರ ವಿಚಾರವೆದ್ದು, ಭಾವದಲ್ಲಿ ಸಮುದ್ರಭಾವ ತರಂಗ ತರಂಗ ಮೂಡಿ ಆಡಿ ತಾನು-ಸಮುದ್ರದಲ್ಲಿ ಲೀಯವಾಗಿ ಸಮರಸವಾಗಿ ಇರಬೇಕಾದರೆ, ಸರ್ವಾಂಗ ಲಿಂಗಸಮುದ್ರಮಯವಾಗಿ ಲಿಂಗಪೂಜೆ ಮಾಡಬೇಕು; ಲಿಂಗಭಕ್ತಿ ನಡೆಯಬೇಕು.

ಲಿಂಗಭಕ್ತಿಯ ನಿಜಾಂತರಂಗವನ್ನು ಭೇದಿಸಿ ನೋಡಿ, ಅನುಭವಿಸಿ ಕಂಡು ಹೇಳುವ ಶರಣರ ಮಾತನ್ನು ಕೇಳಿ:

೧. ಧರ್ಮಾದಿ ಪುರುಷಾರ್ಥಾನಾಂ ಚತುರ್ಣಾಂ ಪರತಃ ಪರಾ
ಪಂಚಮಃ ಪುರುಷಾರ್ಥೋ ಹಿ ಭಕ್ತಿಃ ಶೈವೀ ಸನಾತನೀ
ಲಿಂಗಲೀಲಾವಿಲಾಸ ಚಾರಿತ್ರ, ಪು. ೪೦೩, ಶ್ಲೋ. ೧೨

೨. ಜ್ಞಾನಾದೇವ ಹಿ ಮೋಕ್ಷಸ್ಸ್ಯಾನ್ಮೋಕ್ಷಾದುಪರಿ ಶಾಂಭವೀ
ಭಕ್ತಿಃ ಪರತರಾ ಭಾತಿ ಸ್ವತಂತ್ರಾ ನಿಜಲೀಲಯಾ
ಅದೇ. ಪು. ೪೦೩, ಶ್ಲೋ. ೧೧

೩. ನ ಯೋಗೋ ನ ತಪೋ ನಾರ್ಚಾಕ್ರಮಃ ಕೋSಪಿ ನ ವಿದ್ಯತೇ
ಅಮಾಯೇ ಶಿವಮಾರ್ಗೇSಸ್ಮಿನ್ ಭಕ್ತಿರೇಕಾ ಪ್ರಶಸ್ಯತೇ
ಅದೇ. ಪು. ೪೦೩, ಶ್ಲೋ. ೧೦

ಈ ಮಾತು ನಿಮಗೆ ಸ್ಪಷ್ಟವಾಗಿ ತಿಳಿದಿರಬಹುದು. ಧರ್ಮ ಅರ್ಥ ಕಾಮ ಮೋಕ್ಷಗಳು, ಭಾರತೀಯರು ತಮ್ಮ ಮುಂದೆ ಇಟ್ಟುಕೊಂಡು ನಡೆದಿರುವ ನಾಲ್ಕು ಪುರುಷಾರ್ಥಗಳು. ಈ ನಾಲ್ಕರಲ್ಲಿ ಪರಮ ಪುರುಷಾರ್ಥ ಮೋಕ್ಷ. ಜ್ಞಾನದಿಂದಲೆ ಮೋಕ್ಷದ ಸಿದ್ಧಿ ಎಂಬ ಮಾತು ಖಂಡಿತ. ಆದರೆ ಮೋಕ್ಷವನ್ನು ಪಡೆದ ಮೇಲೆ ಸಿದ್ಧಿಸಬಹುದು ಭಕ್ತಿ. ಭಕ್ತಿ ಸ್ವತಂತ್ರ, ನಿಜಲೀಲೆಯಿಂದ ಆವಿರ್ಭವಿಸಿದ್ದು. 'ಮಾಯೆ' ಇಲ್ಲದ ಶಿವಮಾರ್ಗದಲ್ಲಿ ಯಮ ನಿಯಮಾದಿ ಅಷ್ಟಾಂಗಯೋಗದ ಮಾತಿಲ್ಲ. ತಪಸ್ಸಿನ ಸುದ್ದಿಯಿಲ್ಲ.

ಸಂಕಲ್ಪ ಆಹ್ವಾನ ವಿಸರ್ಜನೆಯನ್ನು ವಿಧಿಸುವ ದ್ವೈತಭಕ್ತಿಯ ಜಂಜಡವಿಲ್ಲ. ಶಿವಮಾರ್ಗ ಒಂದು ಮಹಾಮಾರ್ಗ, ಒಂದು ಭಕ್ತಿಯ ಶಿವಾದ್ವೈತ ಮಾರ್ಗ. ಈ ಒಂದು ಭಕ್ತಿಯಲ್ಲಿ ಅಡಕವಾಗಿವೆ ಜ್ಞಾನ ಯೋಗ ಕರ್ಮಗಳು —ತಮ್ಮ ಪೂರ್ವಾಶ್ರಯವನ್ನು ಬಿಟ್ಟು. ಇಲ್ಲಿಯ ಜ್ಞಾನ ನಿರ್ಮಾಯವಾದ ಶಿವಾದ್ವೈತಜ್ಞಾನ, ಯೋಗ ಶಿವಯೋಗ, ಕರ್ಮ ಶಿವಾದ್ವೈತ ಪೂಜಾ ಕ್ರಿಯೆ. ತನ್ನ ತಾ ನೋಡುವುದು ಜ್ಞಾನ, ತನ್ನ ತಾ ಕೂಡುವುದು ಯೋಗ, ತನ್ನ ತಾ ಮಾಡುವುದು ಕ್ರಿಯೆ. ಈ ನೋಟ ಕೂಟ ಮಾಟಕ್ಕೆ ಪ್ರಾಣ ಜೀವಾಳ ಪ್ರೇಮ ಆನಂದ ಭಕ್ತಿ, ಶಿವಾದ್ವೈತ ಭಕ್ತಿ.

'ಗೊಹೇಶ್ವರನೆಂಬುದು ಕಲ್ಪಿತದೊಳಗಲ್ಲ,' 'ಗೊಹೇಶ್ವರಲಿಂಗ ವೈದಾನೆ ಇಲ್ಲದಂತೆ'—ಎಂದು ಪ್ರಭುದೇವರು ಹೇಳುವಂತೆ, ಲಿಂಗ 'ಕಲ್ಪಿತ' 'ಭಾವಿತ' 'ವಿಚಾರಿತ' ಹೇಗೆ ಅಲ್ಲವೋ, ಹಾಗೆಯೆ ಲಿಂಗಪೂಜೆ ಲಿಂಗಭಕ್ತಿ 'ಕಲ್ಪಿತದೊಳಗಲ್ಲ.' ಲಿಂಗಪೂಜೆ, ಲಿಂಗಭಕ್ತಿ ಸಹಜ. ಲಿಂಗದ ನಿಸರ್ಗ ಅದು. ಇದು ಹೇಗೆ? ಎಂಬ ಪ್ರಶ್ನೆ ಯಾರ ತಲೆಯಲ್ಲಿಯಾದರೂ ಸಿಡಿದೇಳುವುದು ಸಹಜ. ತಲೆಯ ಈ ಪ್ರಶ್ನೆಗೆ ತಲೆ, ಅಂದರೆ ಬುದ್ಧಿ ಉತ್ತರಕೊಡಬಲ್ಲುದೇನೋ ನನಗೆ ಗೊತ್ತಿಲ್ಲ. ವಿಚಾರದ ಬಲೆಯಿಂದ ಹೊರಗೆ ಬಂದು, 'ಅನಾಯಾಸದನುವ ಕಂಡು,' ಅಲ್ಲಿಂದ ಜಗತ್ತು ಹೇಗೆ ಹುಟ್ಟಿತು, ಏಕೆ ಹುಟ್ಟಿತು ಎಂಬುದನ್ನು ಸ್ವಾನುಭಾವದಲ್ಲಿ ದರ್ಶನ ಮಾಡಿಕೊಂಡ ಶರಣರ ಉತ್ತರ ಹೀಗಿದೆ: ಪ್ರಥಮದಲ್ಲಿ ಅಖಂಡಾದ್ವಯ ಅನುಪಮ ನಿರವಯ ನಿರಂಜನ ಸರ್ವಶೂನ್ಯವನೊಳಕೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲಲಿಂಗವು ಧ್ಯಾನಪೂಜೆಗಳಿಲ್ಲದೆ ನಿರವಯದಲ್ಲಿ ಬಯಲುಗನಾಗಿ ಇರಬಾರದೆಂದು ತನ್ನ ಸ್ವೇಚ್ಛಾಲೀಲಾವಿಲಾಸದ ನೆನಹಿನಿಂದ ತನ್ನ ಚಿತ್ ಪ್ರಭಾಸಾಮರ್ಥ್ಯಶಕ್ತಿಯ ಮುಂದುಗೊಂಡು ಅನಂತಕೋಟಿ ಬ್ರಹ್ಮಾಂಡಂಗಳನು ಅಣುಕೋಟಿ ಆತ್ಮರುಗಳನು ತನ್ನಲ್ಲಿಯೆ ಪುಟ್ಟಿಸಿ, ಆ ಆತ್ಮರುಗಳಿಗೆ ಪಂಚವಿಂಶತಿ ತತ್ತ್ವಂಗಳ ಸಂಬಂಧಿಸಿ'ದನು. (ಶೂನ್ಯಸಂಪಾದನೆ ಪು. ೨) ನಿಃಕಲಲಿಂಗ ಸರ್ವಶೂನ್ಯವನೊಳಕೊಂಡ ಬಯಲು, ನಿರವಯಲು. ಸ್ವ-ಇಚ್ಛೆಯಿಂದ ಲೀಲಾವಿಲಾಸ ಮಾಡುವ ನೆನಹು ಮೂಡಿತು ಈ ನಿರವಯಲಲ್ಲಿ. ಧ್ಯಾನ ಪೂಜೆಯೇ ಆ ಲೀಲಾವಿಲಾಸ. ಯಾರ ಧ್ಯಾನ

ಯಾರು ಮಾಡಬೇಕು? ಯಾರ ಪೂಜೆ ಯಾರು ಮಾಡಬೇಕು? ಅಖಂಡ ವಾಗಿ ಅದ್ವಯವಾಗಿ 'ಏಕಮೇವಾದ್ವಿತೀಯ'ವಾಗಿ ಇರುವ ಬಯಲಲ್ಲಿ ಧ್ಯಾನ ಪೂಜೆಯ ಲೀಲೆಯನ್ನು ಆಡಬೇಕೆಂದರೆ ತನ್ನನ್ನು ಬಿಟ್ಟು ಅನ್ಯರಿಲ್ಲ. ಅನ್ಯ ಭಿನ್ನ ಇದಿರು ಎರಡು ಇಲ್ಲದಾಗ, ಯಾರ ಪೂಜೆ ಯಾರಿಗೆ? ಯಾರ ಧ್ಯಾನ ಯಾರನ್ನು ಕುರಿತು? ತರ್ಕ ಸ್ಪಷ್ಟ, ಉತ್ತರ ಸ್ಪಷ್ಟ. ತನ್ನ ಪೂಜೆ ತನಗೆ, ತನ್ನ ಧ್ಯಾನ ತನಗೆ. ಲಿಂಗಲೀಲಾವಿಲಾಸಚಾರಿತ್ರದ ಲಿಂಗ ಮೂರ್ತಿ ಸ್ಥಲದಲ್ಲಿ (ಪು.೨೨) ಕಲ್ಲುಮಠದ ಪ್ರಭುದೇವರು ಇದೇ ಮಾತನ್ನು ಹೇಳುತ್ತಾರೆ: 'ಅಂತು ಅಖಂಡಗೋಳಾಕಾರಮಪ್ಪ ಮಹಾತೇಜೋ ಮೂರ್ತಿಯಾದ ಮಹಾಲಿಂಗವು ತನ್ನ ತಾನೆ ಅರ್ಚಿಸಿ ಪೂಜಿಸಿಕೊಂಬ ಲೀಲಾವಿಲಾಸದಿಂದ ಲಿಂಗಾಂಗವೆರಡಾಯಿತ್ತು....' ಒಂದೇ ಆಗಿ ಇರುವ ನಿಃಕಲವಸ್ತು ಲಿಂಗ ಅಂಗ ಎಂದು ಎರಡು ಆಯ್ತು. ಆದು ದಕ್ಕೆ ಕಾರಣ–ಧ್ಯಾನ ಪೂಜೆ ಅರ್ಚನೆಗೆ, ಧ್ಯಾನಿಸುವ ಪೂಜಿಸುವ ಅರ್ಚಿಸುವ ಭಕ್ತ ಇರಬೇಕು; ಧ್ಯಾನಿಸಿಕೊಂಬ ಅರ್ಚನೆ ಪೂಜೆ ಗೊಂಬ ದೇವನಿರಬೇಕು. ಅಂದರೆ ಪೂಜೆ ಭಕ್ತಿಯ ವಿಲಾಸ, ಲೀಲೆ, ಆನಂದದ ಸಂಭವ. ಶರಣರು ಹೇಳುವ ಪೂಜ್ಯನಾದ ದೇವ ಲಿಂಗ. ಭಕ್ತಿ ಲೀಲೆಯ ನೆನಹುದೋರದ ಮುನ್ನ ನಿಃಕಲವಾಗಿದ್ದ ಬಯಲುಲಿಂಗ ಇದೇ. ಪೂಜಕನಾದ ಭಕ್ತನೆ ಅಂಗ. ಈ ಅಂಗ, ಇದೂ ನೆನಹಿಲ್ಲದ ಮೂಲದಲ್ಲಿ ಲಿಂಗವೇ, ಬಯಲುಲಿಂಗವೇ. ಇದೆಲ್ಲದರ ಸಾರಾರ್ಥ ಇಷ್ಟೇ: ಪೂಜ್ಯ ಪೂಜಕ, ದೇವ ಭಕ್ತ, ಲಿಂಗ ಅಂಗ—ಇವು ಲೀಲೆಗೆ ಎರಡಾಗಿದ್ದರೂ ಪೂಜೆಯ ಮುಖದಲ್ಲಿ, ಧ್ಯಾನದ ಬಾಗಿಲಲ್ಲಿ, ಅರ್ಚನೆಯ ಗವಾಕ್ಷ, ಬೆಳಕಿಂಡಿಯಲ್ಲಿ ಎರಡೂ ಒಂದು ಎಂಬ ಐಕ್ಯದರ್ಶನ ತಾನೇ ತಾನಾಗಿ ಸನ್ನಿಹಿತವಾಗಿದೆ. ಶಿವಾದ್ವೈತಭಕ್ತಿಯ, ಪೂಜೆಯ ಲೀಲಾವಿಲಾಸ ವೆಂದರೆ, ಭಕ್ತ ತನ್ನ ಸರ್ವಾಂಗದಲ್ಲಿ ಮುಸುಕು ತೆಗೆದು, ವಿಶ್ವಬ್ರಹ್ಮಾಂಡ ಗಳ ಲಯ ಗಮನಕ್ಕೆ ಕಾರಣವಾಗಿರುವ ಲಿಂಗದೇವನ ಹೊದಿಕೆಯನ್ನು ತೆಗೆದು, ತಾನು ತನ್ನದೆ ನಿಜಸ್ವರೂಪವನ್ನು ನೋಡಿ ಕಂಡು ಮುಟ್ಟಿ ಕೇಳಿ, 'ಭಿನ್ನವಿಲ್ಲದ', ಎರಡು ಇದಿರು ಇಲ್ಲದ ಐಕ್ಯಭಕ್ತಿಯಲ್ಲಿ ಪೂಜಿಸುತ್ತಾನೆ.

ಇದೋ ಇಲ್ಲಿ, ಗಣದಾಸಿ ವೀರಣ್ಣನವರ ಬಳಿ ಮೊದಲು ಬನ್ನಿ.

ಗೂಳೂರು ಸಿದ್ಧವೀರಣ್ಣೊಡೆಯರು ಹೇಳಿದ 'ಅನಂತ ಕೋಟಿ ಬ್ರಹ್ಮಾಂಡಂಗಳು' ಲಿಂಗದ ಪೂಜೆಯನ್ನು ಅವಿರತವಾಗಿ ಹೇಗೆ ನಡೆಸಿವೆ ನೋಡಿ. ಈ ಪೂಜೆಯನ್ನು ನೋಡಬೇಕಾದರೆ ಅನಂತಕೋಟಿ ಬ್ರಹ್ಮಾಂಡಗಳ ಅನಂತ ಕೋಟಿ ನಾಮಗಳನ್ನು ಎತ್ತಿ ನೋಡಿ. ಅನಂತಕೋಟಿ ರೂಪಗಳ ಮುಚ್ಚುಳ ತೆಗೆದು ನೋಡಿ. ಅನಂತಕೋಟಿ ಕ್ರಿಯಾಪ್ರಪಂಚದ ಮುಸುಕನ್ನು ಓರೆ ಮಾಡಿ ನೋಡಿ. ನಿಮ್ಮ ನಾಮ ನಿಮ್ಮ ರೂಪ ನಿಮ್ಮ ಕ್ರಿಯೆಯಿಂದ ಮುಕ್ತರಾಗಿ, ಹೊರಗೆ ಬಂದು ಅಥವಾ ಒಳಗೆ ಪ್ರವೇಶ ಮಾಡುವ ಸ್ವತಂತ್ರ ಸಾಮರ್ಥ್ಯ ನಿಮ್ಮಲ್ಲಿದ್ದರೆ, ಲಿಂಗದ್ರವ್ಯದಿಂದ ಮಾಡಿ ಲಿಂಗಮಯವಾಗಿರುವ ಲಿಂಗದ ಅನಂತ ನಾಮ, ನಿರವಯ ನಿರಾಕಾರದಲ್ಲಿ, ಮೇಘಮಾಲೆಯ ವಿವಿಧಾಕಾರದಂತೆ ಮೂಡಿರುವ ಅನಂತ ರೂಪ, ಶಾಶ್ವತ ಶಾಂತವಾದ ಲಿಂಗ ಚೈತನ್ಯದಲ್ಲಿ, ಚಿತ್‌ಪ್ರಭಾಸಾಮರ್ಥ್ಯ ಶಕ್ತಿಯ ಚಿಚ್ಚೈತನ್ಯದಲ್ಲಿ ಆಡಿರುವ ಅನಂತ ಕ್ರಿಯೆಯನ್ನು ಕಾಣಬಲ್ಲ ಕಣ್ಣು ನಿಮಗಿದ್ದರೆ ಅನಂತ ಬ್ರಹ್ಮಾಂಡಗಳ ಲಿಂಗಪೂಜೆ ನಿಮಗೇ ಕಾಣಬಹುದು. ನನ್ನಲ್ಲಿ ಈ ಸಾಮರ್ಥ್ಯ, ಈ ಲಿಂಗಗಂಭೀರ ದೃಷ್ಟಿ ಇಲ್ಲವೆಂದೇ ವೀರಣ್ಣನವರ ಸನ್ನಿಧಿಯಲ್ಲಿ ನಿಮ್ಮನ್ನು ಕರೆತಂದುದು. ನನ್ನ ಧಾರ್ಷ್ಟ್ಯವನ್ನು ಕ್ಷಮಿಸಿ ವಿಶ್ವಬ್ರಹ್ಮಾಂಡ ಮಾಡುತ್ತಿರುವ ಲಿಂಗಪೂಜೆ ನೋಡಿ:

ಅಖಂಡ ಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದೊಡೆ:
ಸದ್ಯೋಜಾತ ಮುಖದಿಂದಾದ ಪೃಥ್ವಿ, ಪತ್ರ ಪುಷ್ಪ ಲಿಂಗಕ್ಕೆ ಬೇಕೆಂದು
ಅನಂತ ಪತ್ರ ಪುಷ್ಪಂಗಳಿಂದ ಅರ್ಚಿಸುತ್ತಿಹುದು.
ವಾಮದೇವ ಮುಖದಿಂದಾದಪ್ಪು, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂದು.
ಸಪ್ತಸಮುದ್ರ ದಶಗಂಗೆಗಳ ಕುಂಭವ ಮಾಡಿ, ಕೆರೆ ಬಾವಿಗಳ ಪಂಚಪಾತ್ರೆಯ
ಮಾಡಿ ಮಜ್ಜನ ನೀಡಿಸುತ್ತಿಹುದು.
ಅಘೋರ ಮುಖದಿಂದಾದಗ್ನಿ, ಲಿಂಗಕ್ಕೆ ಧೂಪ ದೀಪ ಆರುತಿಗಳಾಗಬೇಕೆಂದು
ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು.
ತತ್ಪುರುಷ ಮುಖದಿಂದಾದ ವಾಯು, ಲಿಂಗಕ್ಕೆ ಜಪವ ಮಾಡಿಸುತ್ತಿಹುದು.
ಈಶಾನ ಮುಖದಿಂದಾದ ಆಕಾಶ, ಲಿಂಗಕ್ಕೆ ಭೇರಿ ಮೊದಲಾದ
ನಾದಂಗಳ ಬಾರಿಸುತ್ತಿಹುದು.

ಗೋಪ್ಯಮುಖದಿಂದಾದ ಆತ್ಮನು, ಲಿಂಗಕ್ಕೆ ಸಿಂಹಾಸನವಾಗಿರ್ಪುದು.
ಮನ ಚಕ್ಷುವಿನಿಂದಾದ ಚಂದ್ರಸೂರ್ಯರು, ದೀವಿಗೆಗಳಾಗಿಹರು.
ಇಂತಪ್ಪ ಘನವಸ್ತುವು ಎರಡಾಗಿ, ತನ್ನ ವಿನೋದಕ್ಕೆ ಅರ್ಪಿಸಿ
ಕೊಂಬಾತನು ತಾನೇ, ಅರ್ಪಿಸುವಾತನು ತಾನೇ.
ಇಂತಪ್ಪ ಘನಲಿಂಗವು ಎನ್ನ ಕರಸ್ಥಲದೊಳಗೆ ಚುಳುಕಾಗಿ ನಿಂದ ನಿಲವ
ಎನ್ನೊಳರುಹಿದಾತ ನಮ್ಮ ಶಾಂತ ಕೂಡಲಸಂಗಮದೇವ.

ವ. ಸಾ. ಸಂ. ಪು. ೧೫೦, ವ. ೫೬

ನೆಲ ನೀರು ಬೆಂಕಿ ಗಾಳಿ ಬಯಲು ಚಂದ್ರ ಸೂರ್ಯ ಆತ್ಮರು ದೇವನ ಅಷ್ಟ ತನು, ಕಾಣಬಾರದ ದೇವನ ಎಂಟು ಅಂಗ. ಈ ಅಂಗದಲ್ಲಿ ಲಿಂಗ ಪೂಜೆ ನಡೆದಿದೆ. ನೆಲ ನೀರು ಮುಂತಾದ ಭೂತಾಂಗಗಳು 'ಹೃದಿ ಸ್ಥಿತ'ವಾದ, ಆತ್ಮಾಂಗದಲ್ಲಿ ಸಿಂಹಾಸನವಾಗಿರುವ 'ಮಹಾಲಿಂಗ'ದ ಪೂಜೆಯನ್ನು ನಿತ್ಯ ನಿರಂತರವಾಗಿ, ಅಖಂಡವಾಗಿ ಅವಿರಳವಾಗಿ ನಡೆಸಿವೆ. ಮಹಾಲಿಂಗ ಪೂಜೆಗೊಳ್ಳುತ್ತಿದೆ, ತನ್ನ ಅಷ್ಟವಿಧವಾಗಿರುವ ತನ್ನ ಬ್ರಹ್ಮಾಂಗದಲ್ಲಿ. ನನ್ನ ಅಥವಾ ನಿಮ್ಮ ಅಂಗ, ನನ್ನ ನಿಮ್ಮ ಊಳಿಗವನ್ನು ಮಾಡುತ್ತಿಲ್ಲವೆ? ನನ್ನ ನಿಮ್ಮ ಕೈ ಕಾಲು, ಕಣ್ಣು ಕಿವಿ, ಮನ ಬುದ್ಧಿ ನನ್ನ ನಿಮ್ಮ 'ನಾನಿ'ನ ಸೇವೆಯನ್ನು ನಿರತಿಶಯವಾದ ಪ್ರೀತಿಯಿಂದ ಹಗಲಿರುಳೆನ್ನದೆ ಮಾಡುತ್ತಿಲ್ಲವೆ? ನನ್ನ ನಿಮ್ಮ 'ನಾನು' ಆತ್ಮನ ಸಿಂಹಾಸನದಲ್ಲಿ ಮಂಡಿಸಿ, ಈ ರೀತಿ ಸೇವೆ ಮಾಡಿಸಿಕೊಳ್ಳುವುದನ್ನು ನಾವು ಮನುಷ್ಯ ಜೀವನ, ಜೀವಾತ್ಮನ ಲೋಕವ್ಯವಹಾರ, ವಿಷಯ ಸಂಸಾರವೆಂದೂ ಕರೆಯುತ್ತೇವೆ. ಆದರೆ ಈ ಪ್ರೇಮ ಈ ಸೇವೆ 'ಪೂಜ್ಯ'ರಲ್ಲಿ ಅಥವಾ 'ಪೂಜ್ಯ'ದತ್ತ ನಿರ್ದೇಶಿತವಾದರೆ, ಅದೇ ಪ್ರೇಮದ ಹೆಸರು ಭಕ್ತಿ, ಸೇವೆಯ ಹೆಸರು ಪೂಜೆ.

ಅನಂತಕೋಟಿ ಬ್ರಹ್ಮಾಂಡದಲ್ಲಿ ಲಿಂಗಪೂಜೆ ನಡೆದಿದೆ. ಆದರೆ ಈ ಪೂಜೆ ಜಡಚೈತನ್ಯದಲ್ಲಿ ಮಲಗಿ ನಿದ್ರೆಯಲ್ಲಿ ನಡೆಸಿರುವ ಲಿಂಗಪೂಜೆ. ಬೆಂಕಿ ಸುಡುತ್ತದೆ. ನಾನು ಸುಡುತ್ತೇನೆ ಎಂಬ ಎಚ್ಚರ ಬೆಂಕಿಗಿಲ್ಲ. ಗಾಳಿ ಹರಿದಾಡುತ್ತದೆ. ನಿದ್ದೆಯಲ್ಲಿಯೆ ಹರಿದಾಡುತ್ತದೆ. ನೆಲ ಪತ್ರ ಪುಷ್ಪಗಳನ್ನು ಹಡೆಯುತ್ತಿದೆ, ಮಲಗಿಕೊಂಡು. ಚಂದ್ರ ಸೂರ್ಯ ನಕ್ಷತ್ರಕೋಟಿ

ಬೆಳಗುತ್ತಿವೆ ಕತ್ತಲೆಯಲ್ಲಿ. ಅನಂತಕೋಟಿ ಬ್ರಹ್ಮಾಂಡಗಳು ಮಾಡುತ್ತಿರುವ ಈ ಪೂಜೆ ತನ್ನ ಅರಿವು, ತನ್ನೊಳಗೆ ಸಿಂಹಾಸನವಾಗಿರುವ ಮಹಾಲಿಂಗದ ಪ್ರಜ್ಞೆ ಇಲ್ಲದ ಜಡಪೂಜೆ.

ತನ್ನ ಎಚ್ಚರ ತನಗಿಲ್ಲದ ಬ್ರಹ್ಮಾಂಡಗಳ ನಿದ್ರೆಯ ಪೂಜೆ ಕನಸಿನ ಪೂಜೆಯನ್ನು ಕಾಣುವಂತಿದೆ ಸಿದ್ಧವೀರಣ್ಣೊಡೆಯರು ಹೇಳುವ 'ಅಣುಕೋಟಿ ಆತ್ಮರು'ಗಳಲ್ಲಿ. ಅತ್ಯಂತ ಗೂಢಚೈತನ್ಯವಾಗಿರುವ ಜಡಚೈತನ್ಯದಲ್ಲಿ ಪ್ರಾಣಚೈತನ್ಯ ಮೊಳಕೆಯೊಡೆದ ಜೀವಾತ್ಮರಲ್ಲಿ ಶಿವಪೂಜೆಯ ಸ್ವಪ್ನಬಿದ್ದಿದೆ. ಈ ಸ್ವಪ್ನದ ಸಮಾಚಾರವನ್ನು ಅಲ್ಲಮ ಪ್ರಭುದೇವರು ಹೇಳುತ್ತಾರೆ ಕೇಳಿ :

ಎಂಬತ್ತುನಾಲ್ಕು ಲಕ್ಷ ಯೋನಿಮುಖ ಜೀವಿಗಳಿಗೆ
ಎಂಬತ್ತುನಾಲ್ಕು ಲಕ್ಷಾರಾಧನೆ
ಒಂದೊಂದಱಾರಾಧನೆಯನೊಂದೊಂದಱಿಯದೆ
ಗೊಂದಣಂಗೊಂಡು ಲಯವಾದುದಲ್ಲಾ.

ಶೂನ್ಯಸಂಪಾದನೆ ಪು. ೩೮೨, ಪ. ೨

ಯೋನಿಮುಖದಲ್ಲಿ ಹುಟ್ಟುವ ಎಂಬತ್ತುನಾಲ್ಕು ಜೀವರಾಶಿಗಳು, ಪ್ರಭುದೇವರು ಕಾಣುವಂತೆ ತಂತಮ್ಮ ಆರಾಧನೆಯಲ್ಲಿ, ಪೂಜೆಯಲ್ಲಿ, ತಮ್ಮಲ್ಲಿ ತಮಗಿರುವ 'ಭಕ್ತಿ'ಯಲ್ಲಿ ಕನವರಿಸುತ್ತಿವೆ. ಒಂದೊಂದರ ಪ್ರಾಣಪೂಜೆ ನಿರಂತರವಾಗಿ ನಡೆದಿದೆ. ಒಂದರ ಪೂಜೆ ಮತ್ತೊಂದಕ್ಕೆ ಕಂಡಿಲ್ಲ, ತಿಳಿದಿಲ್ಲ. ಇಲ್ಲಿ ಪ್ರಾಣವೆ ಪೂಜ್ಯ, ಜೀವರಾಶಿಯ ದೇಹರಾಶಿಯೆ ಪೂಜಕ. ಜಡಚೈತನ್ಯದ ಜಡಪೂಜೆಯಿಂದ ಮುಂದೆ ಪ್ರಾಣವಾಗಿ ಚೇತನಿಸುತ್ತಿರುವ ಪ್ರಾಣಪೂಜೆ ಮಹಾಲಿಂಗಪೂಜೆಯ ಬ್ರಹ್ಮಾಂಡಗ್ರಂಥದಲ್ಲಿ ಒಂದು ಹೊಸ ಅಧ್ಯಾಯವೆ.

ಅಹಂಭಾವದ ಜಾಗ್ರದವಸ್ಥೆಯಲ್ಲಿ ಮನುಷ್ಯನ ಅಹಂಭಾವ ಪೂಜೆ. 'ನಾನಿ'ಗೆ ನಾನು ನೀವು ಅವರಿವರೆಲ್ಲ ನಡೆಸಿರುವ ಪೂಜೆ. ಹೀಗೆ ಹೇಳುವಾಗ ನಿಮ್ಮ ಅವರಿವರ ಕ್ಷಮೆ ಕೇಳುತ್ತೇನೆ ನಾನು. ಏಕೆಂದರೆ ನೀವು ಅವರಿವರು ನನ್ನ ಹೋಲಿಕೆಯವರೆಂದು ಭಾವಿಸಿದ್ದೇನೆ ನಾನು. ಈ ನನ್ನ ಭಾವನೆ

ತಪ್ಪಿರಬಹುದು. ಅಹಂಭಾವದ ಮರೆಯಲ್ಲಿ ಅತ್ಯತಿಷ್ಠತ್ ದಶಾಂಗುಲವಾಗಿ ಇರುವ ನಿಮ್ಮ ಲಿಂಗಗಂಭೀರಪೂಜೆಯಲ್ಲಿಯೆ ನೀವು ನಿರತರಾಗಿದ್ದರೆ? ಆಗ ನೀವು ಲಿಂಗಸ್ಥಲದಲ್ಲಿಗೆ ನಡೆದು, ಅಲ್ಲಿಯೆ ಲಿಂಗಾಶ್ರಯದಲ್ಲಿದ್ದು ನಿಜಲಿಂಗಪೂಜೆ ನಡೆಸಿರುವ 'ಮಾನವಲಿಂಗ' ಅಥವಾ 'ಮಾನವದೇವ' ನೆಂದೆ ಹೇಳಬೇಕಾಗುತ್ತದೆ. ಆದರೆ ವಸ್ತುಸ್ಥಿತಿ ಹಾಗಿಲ್ಲದೆ ನೀವೂ ಹೆಚ್ಚು ಕಡಮೆ ನಾನೇ ಆಗಿದ್ದರೆ ನಿಮ್ಮದೂ ನನ್ನಂತೆ ನಾನಿನ ಪೂಜೆಯೆ, ನಾನು ತಿಳಿದಿರುವಂತೆ ಈ ಅಹಂಭಾವಪೂಜೆ ಸಂಧ್ಯಾಕಾಲದ ಪೂಜೆ. ಕತ್ತಲೆ ತಿಳಿದು ಬೆಳಗು ಮೂಡುವ ಸಂಧಿಕಾಲದ ಪೂಜೆ. ಮನುಷ್ಯನ ಅಹಂಭಾವದ ಅಜ್ಞಾನಾಂಧಕಾರದಲ್ಲಿ 'ಯಾರು ನಾನು' ಎಂಬ ಮೂಡಲುಗೆಂಪು ಹರಿಯುತ್ತಿದೆ. ಕತ್ತಲೆ ಬೆಳಗಿಗೆ ಕೈಚಾಚುತ್ತಿದೆ. ದೇಹಪ್ರಾಣಕರಣಾದಿಗಳಿಂದ 'ತನಗಿಂದೆ ಪ್ರಿಯವಾದ ವಿಷಯವೊಂದುಂಟೆ?' ಎಂದಿರುವ ತನ್ನನ್ನು, ಯಾರಲ್ಲಿಯೂ ಇಡದ ಪ್ರೀತಿಯಿಂದ ಪೂಜಿಸಿಕೊಳ್ಳುತ್ತಿರುವ ಮರಣದ ಮನುಷ್ಯ ನಿತ್ಯದ ಕಡೆ ತನ್ನ ಪ್ರಾಣವನ್ನು ಚಾಚುತ್ತಿದ್ದಾನೆ. ಹೆಂಡತಿಯನ್ನು ತನಗೆ ಅಭಿಷೇಕ ಮಾಡಿಕೊಂಡು, ಮಕ್ಕಳನ್ನು ವಿಭೂತಿ ಹಚ್ಚಿಕೊಂಡು, ದುಡ್ಡುದುಗ್ಗಾಣಿಯ ಗಂಧ ಲೇಪಿಸಿಕೊಂಡು, ಮಿತ್ರ ಬಂಧುಬಾಂಧವರನ್ನು ಪತ್ರಿಪುಷ್ಪ ಏರಿಸಿಕೊಂಡು, ಕೀರ್ತಿವಾರ್ತೆ ಪ್ರಖ್ಯಾತಿ ಪ್ರಸಿದ್ಧಿಯ ಗಂಟೆ ಬಾರಿಸಿಕೊಂಡು, ಮನೆ ಮಾರು ಅಧಿಕಾರ ವ್ಯವಹಾರಗಳ ನೈವೇದ್ಯ ಮಾಡಿಕೊಂಡು ತನ್ನ ಪೂಜೆ ತಾ ಮಾಡಿಕೊಳ್ಳುತ್ತಿದ್ದಾನೆ ಮನುಷ್ಯ—ನಾನು. ಇದೂ ಪೂಜೆ ಹೌದು. ಆದರೆ ವ್ಯತ್ಯಸ್ತ ಪೂಜೆ, ಪಲ್ಲಟ ಪೂಜೆ, ಅಧೋಮುಖವಾದ ಅಂಗಪೂಜೆ.

ಈ ಅಂಗಪೂಜೆಗೆ ಸಂಸಾರವೆಂದು ಹೆಸರಿಟ್ಟದ್ದೇವೆ ನಾವು. ಅಂಗ ತನ್ನ ಹೃದ್ದೇಶದ ಗುಹೇಶ್ವರಲಿಂಗಕ್ಕೆ ಅಂಗವಾಗಿ, ಸರ್ವಾಂಗ ಲಿಂಗಕ್ಕೆ ಪೂಜೆಯಾದರೆ,ಅದು ಲಿಂಗಪೂಜೆ. ಅಂಗಪೂಜೆ ಸಂಸಾರ,ಲಿಂಗಪೂಜೆ ನಿಸ್ಸಂಸಾರ. ನಿಸ್ಸಂಸಾರವೆಂದೊಡನೆ ಸಂನ್ಯಾಸದ ಭೂತ ಮತ್ತೆ ನಮ್ಮ ಮುಂದೆ ಬಂದು ನಿಲ್ಲಬಹುದು. ಸ್ವಾಭಾವಿಕ. ಹೆಂಡತಿ ಮಕ್ಕಳು ಮನೆ ಮಾರು ಊಟ ನಿದ್ರೆ ವೃತ್ತಿವ್ಯವಹಾರ ಸೇವೆ ಅಧಿಕಾರ ಕೀರ್ತಿ ಪ್ರಖ್ಯಾತಿ ಸಾಹಿತ್ಯ ಸಮಾಜ ಬುದ್ಧಿ ವಿಜ್ಞಾನ ತತ್ತ್ವಜ್ಞಾನ ಸಂಘ ಸಂಸ್ಥೆ ಸರಕಾರ ಆಡಳಿತ,

ಮತ್ತೆ ಪ್ರಕೃತಿ ನೀಡುವ ಸಕಲ ಭೋಗ ಭಾಗ್ಯ ವಿಲಾಸಗಳು ಅಂಗಕ್ಕೆ ಪೂಜೆಯಾಗುತ್ತಿವೆ. ಆದ್ದರಿಂದ ಅವನ್ನೆಲ್ಲ ಬಿಟ್ಟು ಲಿಂಗಪೂಜೆ ಲಿಂಗಭಕ್ತಿ ಮಾಡಬೇಕು ಎಂದು ಹೇಳಿದರೆ ಅದರ ಅರ್ಥ ಇಷ್ಟೇ: ಅಂಗವೆನಿಸುವ ಜೀವಾತ್ಮ, ಜೀವೋಹಂಭಾವದ ನಾನು, ಸುಜ್ಞಾನ ಸಮ್ಯಗ್‌ಜ್ಞಾನ ಶಿವಜ್ಞಾನವೆನಿಸುವ ಶಿವಾತ್ಮಜ್ಞಾನದಲ್ಲಿ ಶಿವಾನುಭಾವದಲ್ಲಿ ತನ್ನ ನಿಜದಾಳ ವನ್ನು ಕಂಡು, ನಾನು ತಾನಾದ ಲಿಂಗದತ್ತ ಪೂಜೆಯನ್ನು ನಡೆಸಬೇಕು. ನಾನಿನ ಅಂದರೆ ದೇಹ ಪ್ರಾಣ ಭಾವ ನಾನೆಂದಿರುವ ನನ್ನ ವ್ಯವಹಾರವೆಲ್ಲ ಲಿಂಗಗಂಭೀರಕ್ಕೆ ಹರಿದು ಪೂಜೆಯಾಗಬೇಕು. ಅಷ್ಟೇ ಅಲ್ಲ. ಈ ನಾನೂ ಪೂಜೆಯಾಗಬೇಕು, ನಾನಿನ ಮೂಲ ಉಗಮಸ್ಥಲವಾದ ಲಿಂಗಕ್ಕೆ. ಅಂಗ ದಲ್ಲಿ ನಿಸರ್ಗಸಹಜವಾಗಿ ನಡೆದಿರುವ ಯಾವ ಜೀವನವಿಲಾಸವನ್ನೂ ಉಣಲಾಗದೆಂಬ ಶಾಸ್ತ್ರವಿಲ್ಲ 'ಲಿಂಗವಂತಂಗೆ'. ಅದರಂತೆ ಜೀವನದ ಇಂಥ ಅಂಶವನ್ನು ಪೂಜಿಸಲಾಗದು ಎಂಬ ನಿಯಮ ಇಲ್ಲ 'ಲಿಂಗವಂತಂಗೆ'.

ಪೂಜೆಯು ಪ್ರಾಣಚೈತನ್ಯ ಭಕ್ತಿ. ಈ ಮಾತು ಎಲ್ಲರಿಗೆ ಗೊತ್ತು. ಭಕ್ತಿ ಎಂದರೆ ಪ್ರೇಮ ಅನುರಾಗ ಪ್ರೀತಿ ಎಂಬುದು ಎಲ್ಲರಿಗೂ ತಿಳಿದ ವಿಷಯ. ತನ್ನಲ್ಲಿ, ತನ್ನ ಜೀವಭಾವದಲ್ಲಿ ನಟ್ಟಿದ್ದರೆ ಪ್ರೇಮ ಪ್ರೀತಿ ಎಂದು ಕರೆಸಿಕೊಳ್ಳುವ ಈ ಭಾವ ಗುರು ಹಿರಿಯರಲ್ಲಿ ಧರ್ಮ ದೇವರಲ್ಲಿ ಇರಿಸಿದರೆ ಅದನ್ನೆ ಭಕ್ತಿ ಎಂದು ಕರೆಯುತ್ತೇವೆ ನಾವು. 'ಪೂಜ್ಯೇಷು ಅನುರಾಗೋ ಭಕ್ತಿಃ'—ಅಂದರೆ ಪೂಜ್ಯರಲ್ಲಿ ಇಡುವ ಅನುರಾಗ ಭಕ್ತಿ ಎಂದು ಭಕ್ತಿಯ ಸೂತ್ರ. ಈ ಅನುರಾಗ, ಪ್ರೀತಿ ಎಂಥದಿರಬೇಕು ಎಂಬ ಅದರ ಸ್ವರೂಪ ನಿರ್ಣಯ ಈ ಸೂತ್ರದಲ್ಲಿ ಕಾಣುವುದಿಲ್ಲ. ಭಕ್ತಿಯ ಸ್ವರೂಪವನ್ನು ಕಂಡರಿಸಿ ಹೇಳುತ್ತಾರೆ ನಿಜಗುಣ ಶಿವಯೋಗಿಗಳು, ಕೇಳಿ :

> ಆವ ಕಾಲದೊಳು ಬಳಿಕಾವ ದೇಶದೊಳು ಬೇ-
> ರಾವ ವಸ್ತುವಿನೊಳೊಡವೆರೆಯದತಿ ಮಮತೆ
> ಆವ ಪರಿಯೊಳು ತನ್ನ ಮೇಲಿರ್ಪುದಂತೆ ಗುರು
> ದೇವತೆಯೊಳನುರಾಗವಿಹುದೆ ನಿಜಭಕ್ತಿ

ಕೈವಲ್ಯ ಪದ್ಧತಿ, ನೀತಿಕ್ರಿಯಾಚರ್ಯಸ್ಥಲ, ಪದ್ಯ ೨೨, ನುಡಿ. ೧

ಕಾಲ ಯಾವುದೆ ಇರಲಿ, ಯಾವ ಸ್ಥಳ ದೇಶದಲ್ಲಿಯೆ ನಾನಿರಲಿ, ಯಾವಾ

ಗಳೂ ಎಲ್ಲೆಲ್ಲಿಯೂ ಯಾರ ಮೇಲೆಯೂ ಯಾವ ವಸ್ತುವಿನ ಮೇಲೆಯೂ ಇಲ್ಲದ ಮಮತೆ ಪ್ರೇಮ ಅನುರಾಗ ಪ್ರೀತಿ ನನ್ನ ಮೇಲೆ. ಮನೆ ಮಾರು ಹೆಂಡತಿ ಮಕ್ಕಳು ಬಂಧು ಬಾಂಧವರು ಧನ ಕನಕದಲ್ಲಿ ನನ್ನ ಪ್ರೀತಿ ಇದೆ. ಆದರೆ ಈ ಎಲ್ಲ ಮಮತೆ ನನ್ನ ಮೇಲೆ ನನಗಿರುವ 'ಅತಿ ಮಮತೆ'ಯ ಶಾಖೋಪಶಾಖೆಗಳೆ. ನನಗೆ ಬೇಕು ಎಂದು ಇವನ್ನೆಲ್ಲ ಪ್ರೀತಿಸುತ್ತೇನೆ ನಾನು. ಈ 'ಬೇಕಿ'ನ ಬಣ್ಣ ಕುಂದಿದರೆ, ಪ್ರೀತಿಯು ಕಳೆಯೂ ಇಳಿಮುಖ ವಾಗುತ್ತದೆ. ನನಗೆ ಬೇಕಿದ್ದರೆ ಮಮತೆ ಪ್ರೀತಿ, ನನಗೆ ಬೇಡವಾದರೆ ಅಲ್ಲಿಗೆ ಮಮಕಾರ ಪ್ರೇಮ ಮುಗಿಯಿತೆಂದು ಹೇಳಬೇಕು. ಆದರೆ ನನ್ನ ಮೇಲಿರುವ ಪ್ರೀತಿ ಹಾಗಲ್ಲ. ಇಲ್ಲಿ ಬೇಕು ಬೇಡಗಳ ಪ್ರಶ್ನೆಯೆ ಇಲ್ಲ. ನನ್ನ ಮೇಲೆ ನನಗೆ ಪ್ರೇಮ ಸಹಜ, ನಿಸರ್ಗ. ನನ್ನಿಂದ ಎಂದೂ ಎಲ್ಲಿಯೂ ಬಿಚ್ಚಬಾರದ ನಿಸರ್ಗಸಹಜವಾದ ಈ ಅನುರಾಗ, ಪ್ರೇಮುವನ್ನು ನನ್ನಿಂದ ಎಂತೋ ಬಿಚ್ಚಿ ಗುರುವಿನಲ್ಲಿ ತಂದೆತಾಯಿಗಳಲ್ಲಿ ದೇವರಲ್ಲಿ ದೇವತೆಗಳಲ್ಲಿ ಇರಿಸಿದರೆ, ಅದು ನಿಜವಾದ ಸತ್ಯವಾದ ಶಾಶ್ವತವಾದ ಭಕ್ತಿ ಎಂದು ನಿಜ ಗುಣರು ಹೇಳುತ್ತಾರೆ. ಪೂಜ್ಯರಲ್ಲಿ ಅನುರಾಗ ಭಕ್ತಿ ಎಂಬ ಸೂತ್ರಕ್ಕಿಂತ ನಿಜಗುಣರ ಮಾತಿನಲ್ಲಿ ಭಕ್ತಿಯ ಗಂಭೀರಸ್ವರೂಪ ಹೆಚ್ಚು ಸ್ಪಷ್ಟವಾಗಿ ಹೊಳೆಯುತ್ತದೆ ಎಂಬಲ್ಲಿ ಸಂಶಯವಿಲ್ಲ. ಆದರೇನು? ಶರಣರು ನಡೆದ ಭಕ್ತಿ ಇನ್ನೂ ಗಂಭೀರವಾಗಿದೆ. ಎಷ್ಟು ಗಂಭೀರ, ಎಷ್ಟು ಆಳ ಎಂದು ಕೇಳಿದರೆ, ಪೂಜ್ಯಕ್ಕೆ ಪೂಜ್ಯ, ಪರಮಪೂಜ್ಯ 'ಸ್ವಯಂಲಿಂಗ' ಎಷ್ಟು ಆಳವೋ ಅಷ್ಟೇ ಶಿವಾದ್ವೈತ ಭಕ್ತಿಯ ನಿಜಗಂಭೀರವೆಂದು ಶರಣರು ಹೇಳುತ್ತಾರೆ. ನನ್ನ ಆಳ, ನನ್ನ ಮೇಲೆ ನನ್ನ ಪ್ರೀತಿ. ಲಿಂಗದ ಆಳ ಲಿಂಗ ಭಕ್ತಿ, ಲಿಂಗದ ಮೇಲೆ.

ಭಕ್ತಿ ನೂರುಮುಖವಾಗಿ ಸಾವಿರಮುಖವಾಗಿ ಪ್ರೀತಿಸಿದೆ ದೇವರನ್ನು. ಜಾತಿ ಕುಲ ವರ್ಣ, ಜನಾಂಗ ದೇಶ ಕಾಲದ ಭೇದವಿಲ್ಲದೆ ಅತ್ಯಂತ ಪುರಾತನ ಕಾಲದಿಂದ ಮನುಷ್ಯನ ಎದೆಯಲ್ಲಿ ಭಕ್ತಿ ಮೂಡಿ ಬಂದಿದೆ. ಮೂಡಿದ ಭಕ್ತಿ ಮುಳುಗಿಲ್ಲ. ದೇವರೂ ಮುಳುಗಿಲ್ಲ. ಬುದ್ಧಿಗೆ, ಕರಣೇಂದ್ರಿಯಗಳಿಗೆ ಗಮ್ಯವಲ್ಲದ ದೇವರನ್ನು ಏಕೆ ಉಳಿಸಿಕೊಳ್ಳಬೇಕು? ಕಾಣದ ದೇವರನ್ನು ನಂಬಿ, ಮುಟ್ಟಬಾರದ ದೇವರನ್ನು ಪೂಜಿಸಿ, ಇಲ್ಲದ

ದೇವರನ್ನು ಪ್ರೀತಿಸಿ ಭಕ್ತಿ ಎಂದು ಕರೆದು ಧರ್ಮ ತತ್ತ್ವ ಅನುಭವವೆಂಬ 'ಅಮಲಿ'ನಲ್ಲಿ ಮಲಗಿರುವ ಮೂರ್ಖತನವೇನು?—ಎಂದು ದೇವರನ್ನು ತಳ್ಳಿ ಹಾಕಿ ಬಿಡಬೇಕೆಂಬ ವಿಚಾರವಿದೆ ಇಂದಿನ ವಿಚಾರವಂತರಲ್ಲಿ. ಅವರ ವಿಚಾರ ತಪ್ಪಲ್ಲ. ನಂಬಿಗೆಯ ಹೆಸರಿನಲ್ಲಿ ಎಂಥ ಮೂರ್ಖತನವೂ ಅಜ್ಞಾನ ಹೃದಯದಲ್ಲಿ ಸಾಮ್ರಾಜ್ಯ ಕಟ್ಟಿಕೊಂಡು ಆಳಬಹುದು. ಆದರೆ ದೇವರು ಕಣ್ಣಿಗೆ ಕಂಡರೆ? ಆ ಮೇಲೆ ಭಕ್ತಿ ವಿಶ್ವಾಸ ಅರ್ಚನೆ ಪೂಜೆ ಮಾಡಲಿಕ್ಕೆ ಅಡ್ಡಿ ಇಲ್ಲವೆ?

ದೇವರನ್ನು ಕಾಣಲು ಮನುಷ್ಯನ ಅನಂತ ದೃಷ್ಟಿಗಳೂ ಹವಣಿಸುತ್ತ ಬಂದಿವೆ. ಅವರವರ ದೃಷ್ಟಿಯ ಇಚ್ಛಾಶಕ್ತಿ ಜ್ಞಾನಶಕ್ತಿ ಯೋಗಶಕ್ತಿ ಭಕ್ತಿಯ ಶಕ್ತಿಯಂತೆ ದೇವರು ಸಾಕಾರವಾಗಿ ನಿರಾಕಾರವಾಗಿ, ಸಗುಣವಾಗಿ ನಿರ್ಗುಣವಾಗಿ, ದ್ವೈತವಾಗಿ ಅದ್ವೈತವಾಗಿ ನಾಮದಲ್ಲಿ ಕ್ರಿಯೆಯಲ್ಲಿ ರೂಪುಗೊಂಡು, ಅಥವಾ ನಾಮವಿಲ್ಲದೆ ನಿಷ್ಕ್ರಿಯವಾಗಿ ರೂಪವಿಲ್ಲದೆ ಅನುಭವಕ್ಕೆ ಬಂದಿದ್ದಾನೆ. ದ್ರಷ್ಟಾರರು ಹೇಳುತ್ತಾರೆ ತಮ್ಮ ಕಂಡ ಅನುಭವವನ್ನು.

ದೇವರನ್ನು ಕಾಣಲು, ದೇವರನ್ನು ಪೂಜಿಸಲು, ದೇವರಲ್ಲಿ ಭಕ್ತಿಯನ್ನು ಊರಿಸಲು ಶರಣರು ತೋರುವ ಹಾದಿಯಲ್ಲಿ ಒಂದು ಅತ್ಯಂತ ಮಹತ್ವದ ವಿಶೇಷ, ಒಂದು ಅನನ್ಯ ಸಾಮಾನ್ಯವಾದ ವಿಲಕ್ಷಣ ಕಾಣುವಂತಿದೆ. ಅವರು ಭಕ್ತಿ ಪೂಜೆಯ ವಿಚಾರವನ್ನು ಹೀಗೆ ಹೇಳುತ್ತಾರೆ:

> ನಾಶಿವಸ್ಯ ಶಿವೋಪಾಸ್ತಿಃ ಘಟತೇ ಜನ್ಮಕೋಟಿಭಿಃ
> ಶಿವಸ್ಯೈವ ಶಿವೋಪಾಸ್ತಿರಿತಿ ನಾನಾಶ್ರುತಿಸ್ಥಿತಿಃ
>
> ಲಿಂಗಲೀಲಾವಿಲಾಸ ಚಾರಿತ್ರ, ಪು. ೪೦೦, ಶ್ಲೋಕ ೧

ಇದರ ಅರ್ಥ ಸುಸ್ಪಷ್ಟ. ಕೋಟಿ ವರ್ಷ ಅಲ್ಲ, ಕೋಟಿ ಸಾರೆ ಹುಟ್ಟಿಬಂದರೂ ಶಿವನಿಗಲ್ಲದೆ ಶಿವಾರ್ಚನೆ, ಶಿವೋಪಾಸನೆ, ಶಿವಪೂಜೆ, ಶಿವಭಕ್ತಿ ಇಲ್ಲ. ಅಂದರೆ ಶಿವನೇ ಶಿವನನ್ನು ಅರ್ಚಿಸಬಲ್ಲ, ಶಿವನೇ ಶಿವನ ಉಪಾಸ್ತಿ ಮಾಡಬಲ್ಲ, ಪೂಜಿಸಬಲ್ಲ, ಪ್ರೀತಿಸಬಲ್ಲ, ಭಕ್ತಿ ಮಾಡಬಲ್ಲ. ನಿಮಗೆ ದೃಷ್ಟಾಂತ ಬೇಕಾದರೆ ಕವಿಯನ್ನು ನೋಡಬಹುದು. ಹೃದಯದಲ್ಲಿ ಕವಿ ಇಲ್ಲದಿದ್ದರೆ

ಕಾವ್ಯ ಕಾಣಲಿಲ್ಲ, ರಸ ರುಚಿಸಲಿಲ್ಲ. ಆನಂದಿಸಬೇಕೆಂದರೆ ಕಾವ್ಯಾನಂದ ಇಲ್ಲ. ನಾನು ಮತ್ತು ಕವಿ ಇಬ್ಬರಾಗಿದ್ದರೂ ನಮ್ಮಿಬ್ಬರ ಹೃದಯದಲ್ಲಿ ಸಮಧರ್ಮ ಸಮ ಮಾನ ಸಮರಸ ಇಲ್ಲದಿದ್ದರೆ ನಾನು ಕವಿಯ ಹೃದಯವನ್ನು ಹೇಗೆ ಮುಟ್ಟಬಲ್ಲೆ ? ಕಾವ್ಯವನ್ನು ಹೇಗೆ ದರ್ಶನ ಮಾಡಿಕೊಳ್ಳಬಲ್ಲೆ? ಹೇಗೆ ಆಸ್ವಾದಿಸಬಲ್ಲೆ? ಆನಂದಿಸಬಲ್ಲೆ? ಹೀಗೆ ವಿಚಾರ ಮಾಡುತ್ತ ಜೀವನದ ಹಲವಾರು ಕ್ಷೇತ್ರದಲ್ಲಿ ಮುಂದೆ ಮುಂದೆ ನಡೆದರೆ, ವಿಶ್ವಹೃದಯದ ಗಂಭೀರದಲ್ಲಿ 'ಭಾವಾದ್ವೈತ'ವೆ ಎಲ್ಲೆಲ್ಲಿ ಇಣುಕಿ ನೋಡುವಂತಿದೆ.

ಅವರವರ ದೇವರು ಅವರಂತೆ, ಆದರೆ ದೇವರು ದೇವರಂತೆ. ಅವರವರ ಭಕ್ತಿ ಅವರಂತೆ, ಭಕ್ತಿ ಭಕ್ತಿಯಂತೆ. ಅವರವರ ಜ್ಞಾನ ಅವರಂತೆ, ಅವರಷ್ಟು. ಆದರೆ ನಿಜಜ್ಞಾನ ತನ್ನಂತೆ. ಹೀಗೆಯೆ ನಿಜಯೋಗ, ನಿಜ ಕ್ರಿಯೆ ತಮ್ಮಂತೆ ತಾವು ಎಂದು ಹೇಳುತ್ತಾರೆ ವಚನಕಾರರು. ಇವೆಲ್ಲ ತಂತಾವೆ ಇದ್ದಂತೆ ಇದ್ದು, ನೋಡುವಂತೆ ನೋಡಿ, ಮಾಡುವಂತೆ ಮಾಡಿ, ಉಣ್ಣುವಂತೆ ಉಂಡು, ಉಡುವಂತೆ ಉಟ್ಟು, ಕೊಡುವಂತೆ ಕೊಟ್ಟು, ಬಾಳಿ ಬದುಕುವಂತೆ ಬದುಕಿದರೆ, ಅದೇ ನಿರಾಳ ಶರಣನ ಲಿಂಗಸಹಜ ಜೀವನ ಅಥವಾ ಲಿಂಗಸಹಜ ಲೀಲಾಜೀವನ ಎಂದು ವಚನಗಳಲ್ಲಿ ಕುಳಿತು ಹಾಡುವಂತಿದೆ ಶರಣರು. 'ಎಂತಿರುತಿರ್ದೊಡಂತೆ ಶಿವಪೂಜೆ ಶಿವಾರ್ಪಣಮೈಕ್ಯ ಸಂಪದಂ'—ಎಂದು ಇದ್ದಂತೆ ಪೂಜೆಯಾಗಿ ಭಕ್ತಿಯಾಗಿ ಅರ್ಪಣವಾಗಿ ಪ್ರಸಾದಭೋಗವಾಗಿ ಮಾನವಚೋಹದಲ್ಲಿಯೇ ದೇವ ಬೆಳಗಿ, ಮಾನವನ ಸರ್ವಾಂಗದ ಮುಖದಲ್ಲಿ ಉಂಡು ಉಟ್ಟು ಕೊಟ್ಟು ಕೊಂಡು ವ್ಯವಹರಿಸುತ್ತಿರುವ ನಿರಾಳದ ಇರವನ್ನು ಹಾಡಿದ್ದಾರೆ ಮಗ್ಗೆಯ ಮಾಯಿದೇವರು.

ಮಾನವ ಸಹಜವಾದ ಪ್ರಾಕೃತ ಜೀವನದಿಂದ ಮುಕ್ತವಾಗಿ ಸರ್ವಾಂಗ ಲಿಂಗ ಸಹಜವಾದ ದಿವ್ಯಜೀವನಕ್ಕೆ, ಪರಿಪೂರ್ಣಕ್ಕೆ ಅರಳಿ, ಸರ್ವಾಂಗದ ವ್ಯವಹಾರದಲ್ಲಿ ಲಿಂಗದ ಪರಿಮಳಪ್ರಕಾಶವೆ ತುಂಬಿ ಸೂಸುತ್ತಿರುವ ಪರಿಪೂರ್ಣ ಜೀವನಕ್ಕೆ ಹೋಗುವ ಪೂಜೆಯ ಪಥವನ್ನು ಹೇಗೆ ನಿರ್ಮಿಸಿಕೊಂಡಿದ್ದಾರೆ ಶರಣರು ? ಮೊದಲು ಬಹಿರಂಗದಲ್ಲಿ ದೃಷ್ಟಲಿಂಗ ಪೂಜೆ, ಈ ಪೂಜೆಯಲ್ಲಿಯೆ ಗುಪ್ತಗಾಮಿನಿಯಾಗಿ ಹರಿವ ಅಂತರಂಗದ

ಪ್ರಾಣಲಿಂಗ ಪೂಜೆ, ಮತ್ತೆ ಅಂತರಂಗ ಬಹಿರಂಗಗಳು ಒಳಹೊರಗುಳಿಯು ದಂತೆ ಕೂಡಿ ಒಂದಾಗಿ ನಿಂದ ಸರ್ವಾಂಗದ ಭಾವಲಿಂಗ ಪೂಜೆ. ಇಲ್ಲಿ ಪೂಜೆ ಎಂದು ಹೇಳುವಾಗ ಬಹಿರಂಗಪೂಜೆಯು ಕ್ರಿಯಾಚೈತನ್ಯ ಅಂತರಂಗ ಪೂಜೆಯು ಪ್ರಾಣಚೈತನ್ಯ ಸರ್ವಾಂಗಪೂಜೆಯು ಭಾವಚೈತನ್ಯ ಭಕ್ತಿ, ಶಿವಾದ್ವೈತ ಭಕ್ತಿ, ಸುಜ್ಞಾನದ ಬೆಳಗಿನಲ್ಲಿ ಲಿಂಗವನ್ನು ಕಂಡು ಚೇತನಿಸುವ ಸುಜ್ಞಾನ ಭಕ್ತಿ ಎಂಬ ಮಾತನ್ನು ಯಾವಾಗಲು ನಮ್ಮಲ್ಲಿ ಎಚ್ಚರಿಸಿ ಕೊಂಡು ಪೂಜೆಯನ್ನು ನೋಡಬೇಕು, ವಿಚಾರಿಸಬೇಕು.

ಮೊದಲು ಇಲ್ಲಿ ಒಳಗೆ, ಶರಣರ ಸಂಪ್ರದಾಯದವರೆಂದು ಹೇಳಿ ಕೊಳ್ಳುತ್ತಿರುವ ವೀರಶೈವರ ಅಥವಾ ಲಿಂಗಾಯತರ ದೇವರ ಮನೆಯೊಳಗೆ ಬಂದು, ಅವರು ನಡೆಸುವ ಪೂಜೆ ನೋಡಿ. ಇಲ್ಲಿರುವ ಅಭಿಷೇಕ ಜಲ ಗಂಧ ಧೂಪ ದೀಪ ಗಂಟೆ ಪತ್ರಿ ಪುಷ್ಪ ಮುಂತಾದ ಪೂಜಾಸಾಮಗ್ರಿ ವೀರಶೈವ ರಲ್ಲದವರ ದೇವರ ಮನೆಯಲ್ಲಿ ಅಥವಾ ದೇವರ ಗುಡಿಯಲ್ಲಿ ಕಾಣಬರುವ ಸಾಮಗ್ರಿಗಳೆ. ಇಲ್ಲಿಯ ವಿಶೇಷ, ಎಡದ ಕೈಯಲ್ಲಿ ಹಿಡಿದುಕೊಂಡು ಪೂಜಿಸು ತ್ತಿರುವ ಗೋಳಕಾಕಾರ ಲಿಂಗ. ಈ ಶಿಲೆಯ ಗೋಳಕ ಯಾವ ದೇವ, ಯಾವ ದೇವತಾಮೂರ್ತಿಯ ಪ್ರತೀಕವಲ್ಲ. ಗುಡಿಯ ಶಿವಲಿಂಗ ಶಿವನ ಪ್ರತಿನಿಧಿ, ವಿಷ್ಣು ವೀರಭದ್ರ ಹನುಮಂತ ಬಸವಣ್ಣ ಮೀನಾಕ್ಷಿ ಮಹಾಲಕ್ಷ್ಮಿ ಮುಂತಾದ ಮೂರ್ತಿಗಳು ಆಯಾ ದೇವರ ಭಾವಮೂರ್ತಿಗಳೆ. ಹೀಗಿದ್ದರೆ ಯಾರ ಪ್ರತಿಯೂ ಅಲ್ಲದ ಗೋಳಕಲಿಂಗದ ಅರ್ಥವೇನು? ವಿಶೇಷಾರ್ಥವೇನು?

ವೀರಶೈವರು ಹೇಳುವಂತೆ ಈ ಅಂಗೈಯ ಗೋಳಕಲಿಂಗ, ಇಷ್ಟಲಿಂಗ, ತನ್ನ ಹೊರಗೆ ಇರುವ, ಆಹ್ವಾನಿಸಿದರೆ ಬಂದು ವಿಸರ್ಜಿಸಿದರೆ ಹೋಗಿ ಪ್ರತಿಷ್ಠಿಸಿದರೆ ಕುಳಿತುಕೊಳ್ಳುವ ದೇವನಲ್ಲ. ಅಣುರೇಣುತೃಣಕಾಷ್ಠದಲ್ಲಿ, ವಿಶ್ವಬ್ರಹ್ಮಾಂಡ ಪಿಂಡಾಂಡಗಳಲ್ಲಿ ತುಂಬಿ ಮೀರಿ ನಿಂದಿರುವ ಪರಾತ್ಪರ ವಾದ ಪರವಸ್ತು ತನ್ನೊಳಗಿಂದಲೆ ಬಂದು, ತನ್ನ ಮಸ್ತಕದಲ್ಲಿ ನ್ಯಸ್ತವಾಗಿ ಇರುವ ಚಿತ್ಕಳೆಯೆ ತನ್ನ ಭಾವಕ್ಕೆ ಬಂದು, ಭಾವದಿಂದ ಹೃದಯಕ್ಕೆ, ಹೃದಯದಿಂದ ಕಣ್ಣಿಗೆ, ಕಣ್ಣೊಳಗಿಂದ ಉಚ್ಚಳಿಸಿ ಅಂಗೈಗೆ 'ಆಯತ' ಬಂದು ಸಿಕ್ಕಿದೆ ಭಕ್ತನ ಕರಸ್ಥಲಕ್ಕೆ. ಅಂಗೈಯಲ್ಲಿ ಮೂರ್ತಮಾಡಿರುವ

ಸಾಕಾರ, ಅದೊಂದು ಲಿಂಗದರ್ಪಣ. ಸ್ವಸ್ವರೂಪವಾದ ನಿಜಗಂಭೀರದ ಕಳೆಯನ್ನು ಹೊಳಹುದೋರಿಕೊಡುವ ಅಂಗೈಯ ಕನ್ನಡಿ. ಈ ಕನ್ನಡಿಯಲ್ಲಿ ಕಣ್ಣಿಟ್ಟು ನೋಡುವ ಭಕ್ತನ ನಿಜೋದ್ದೇಶವನ್ನು ಮಗ್ಗೆಯ ಮಾಯಿದೇವರು ಸುಂದರವಾಗಿ ಪ್ರಕಾಶ ಮಾಡುತ್ತಾರೆ :

ಮುಕುರವನೀಕ್ಷಿಪಂಗನೆಯ ಬುದ್ಧಿಯದೇಂ ವರರೂಪಹಾವಭಾ
ವಕಲಿತ ವಿಭ್ರಮಾಪ್ತ ನಿಜಮಂಗಳಮೂರ್ತಿಯನೀಕ್ಷಿಪಲ್ಲಿಯೋ
ಮುಕುರವನೇ ನಿರೀಕ್ಷಿಪೆಡೆಯಲ್ಲಿಯೊ ತನ್ನನೆ ನೋಳ್ಪಳೈಸೆ ಲೈಂ
ಗಿಕ ನಿಯಮಾರ್ಚನಾನುಭವದರ್ಪಣದೊಳ್ ಶರಣಂ ಶಿವಾಧವಾ

ಶತಕತ್ರಯ, ಶಿವಾಧವ ಶತಕ, ಪ. ೨೩

ಕನ್ನಡಿಯನ್ನು ನೋಡುವ ಉದ್ದೇಶ ಕನ್ನಡಿಯನ್ನು ನೋಡಬೇಕೆಂದಲ್ಲ, ಕನ್ನಡಿಯೊಳಗೆ ಪ್ರತಿಬಿಂಬಿಸುವ ತನ್ನನ್ನು ನೋಡಬೇಕೆಂದು. ಹಾಗೆಯೆ ಲಿಂಗಪೂಜೆಯು ದರ್ಪಣದ ಅನುಭವ. ಇಷ್ಟಲಿಂಗದ ಪೂಜೆಯಲ್ಲಿ 'ಪಿಂಡಾಂಡದೊಳಗಿರ್ಪಖಂಡ ತೇಜವೆ ಕಣ್ಣ ಕಿಂಡಿಯೊಳೈದಿ ಹಸ್ತಪುಂಡರೀಕದೊಳಿಹುದು'—ಎಂದು ಸರ್ಪಭೂಷಣ ಶಿವಯೋಗಿಗಳು ಹೇಳುವ ಲಿಂಗತೇಜದ ಅನುಭವ ಆಗದಿದ್ದರೆ, ಪೂಜೆ ಪೂಜೆಯಲ್ಲ, ಲಿಂಗದಲ್ಲಿ ಲಿಂಗ ಇಲ್ಲ. ಪೂಜೆಯ ಭಕ್ತನಲ್ಲಿ ಭಕ್ತಿಯಿಲ್ಲ, ಜ್ಞಾನ ಇಲ್ಲ. ಈ ಪೂಜೆ ಕತ್ತಲೆಯಲ್ಲಿ ಸಂಭ್ರಮಿಸುವ ಪೂಜೆ.

ಸಾಮಾನ್ಯವಾಗಿ ಎಲ್ಲ ದೇವರ ಮನೆಗಳಲ್ಲಿ ಇದೇ ಕತ್ತಲೆಯ ಪೂಜೆ. ಭಕ್ತನ ಕಣ್ಣಿಗೆ ದೇವರು ಕಂಡಿಲ್ಲ, ದೇವರ ಕಣ್ಣಿಗೆ ಭಕ್ತ ಬಿದ್ದಿಲ್ಲ. ಲಿಂಗಕ್ಕೆ ಮಜ್ಜನ ಮಾಡುತ್ತೇನೆ. ಆದರೆ ಕತ್ತಲೆಯ ನೀರು, ಕಾಣದ ಕತ್ತಲೆಗೆ ಅಭಿಷೇಕ. ಗಂಧವನ್ನು ಧರಿಸುತ್ತೇನೆ. ಆದರೆ ಗಂಧದ ಪರಿಮಳ ಲಿಂಗದ ಮೂಗಿಗೆ ಮುಟ್ಟಲಿಲ್ಲ. ಪತ್ರಿ ಪುಷ್ಪ ಏರಿಸುತ್ತೇನೆ. ಆದರೆ ಪತ್ರಿ ಪುಷ್ಪ ದೇವನ ಮಸ್ತಕಕ್ಕೆ ಮುಟ್ಟಲಿಲ್ಲ. ಇದರಂತೆ ನನ್ನ ಅರ್ಚನೆ ಅರ್ಪಣ ಉಪಚಾರ. ಇಂಥ ಪೂಜೆ ಸಾವಿರ ಕಾಲ ನಡೆದರೂ 'ಕರಸ್ಥಲದ ಪರಂಜ್ಯೋತಿ', 'ಕರಸ್ಥಲದ ಪರವಸ್ತು', ಗಣದಾಸಿ ವೀರಣ್ಣನವರು ಹೇಳಿದ 'ಇಂತಪ್ಪ ಘನಲಿಂಗವು ಎನ್ನ ಕರಸ್ಥಲದೊಳಗೆ ಚುಳುಕಾಗಿ ನಿಂದ ನಿಲವು' ಕಣ್ಣಿಗೆ ಬೀಳುವಂತಿಲ್ಲ. ಹೇಗೆ ಬೀಳಬೇಕು?

ಹಿಡಿವ ಕೈಯ ಮೇಲೆ ಕತ್ತಲೆಯಯ್ಯ.
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ.
ನೆನೆವ ಮನದ ಮೇಲೆ ಕತ್ತಲೆಯಯ್ಯ.
ಕತ್ತಲೆಯೆಂಬುದು ಇತ್ತಲೆಯಯ್ಯ.
ಗೊಹೇಶ್ವರನೆಂಬುದು ಅತ್ತಲೆಯಯ್ಯ!

ವ.ಸಾ.ಸಂ. ಪು. ೧೫೬, ವ. ೭೮

ಈ ಕತ್ತಲೆಯನ್ನು ದಾಟದೆ ಲಿಂಗಪೂಜೆ ಮಾಡಿದರೆ, ಅದೂ ಒಂದು ಸಾವಿಗೆ ಸಂಗಡವಾದ ಸಂಸಾರವೆ. ಕತ್ತಲೆಯಲ್ಲಿ ಪೂಜೆಯ 'ಕಿತ್ತೆ' ತೀಡಿ ತೀಡಿ ವೃಥಾ ಬಳಲುತ್ತಿರುವ ಪಸಾರದ ಮರುಳರನ್ನು ನೋಡಿ, 'ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಎಲ್ಲರೂ ಪೂಜಿಸಿ, ಏನನೂ ಕಾಣದೆ ಲಯವಾಗಿ ಹೋದರು ಗೊಹೇಶ್ವರಾ' (ಪು. ೧೫೫, ವ. ೭೨)—ಎಂದು ಇದ್ದ ಸತ್ಯವನ್ನು ಕೇಳುವಂತೆ ಹೇಳುತ್ತಾರೆ ಪ್ರಭುದೇವರು.

ವೀರಶೈವರ ಇಂಥ ದೇವರ ಮನೆಗಳನ್ನು ಬಿಟ್ಟು, ಇಲ್ಲಿ ಲಿಂಗದ ಬೆಳಗಿನಲ್ಲಿ ನಿಜಲಿಂಗವನ್ನು ಕರಸ್ಥಲದಲ್ಲಿ ಪ್ರತ್ಯಕ್ಷ ಕಂಡು, ಪೂಜೆಗೆ ಹಾತೊರೆದು ಹವಣಿಸುತ್ತಿರುವ ಉರಿಲಿಂಗಪೆದ್ದಿಗಳ ಸನ್ನಿಧಿಯಲ್ಲಿ ಬಂದು, ಅವರ ಕರಸ್ಥಲದಲ್ಲಿ ಬಿಜಯಂಗೈದ ಇಷ್ಟಲಿಂಗವನ್ನು ಅಥವಾ ದೃಷ್ಟಲಿಂಗವನ್ನು ನೋಡಿ:

ವಟಬೀಜ ವಟವೃಕ್ಷಕೋಟಿಯ ನುಂಗಿಪ್ಪಂತೆ,
ಸಟೆಯಿಂದಾದ ಅಜಾಂಡ ಬ್ರಹ್ಮಾಂಡಕೋಟಿಗಳನೊಳಕೊಂಡಿಪ್ಪ ಲಿಂಗವೇ,
ದಿಟಪುಟವಾಗಿ ಎನ್ನ ಕಣ್ಗೆ ಮನ ಕರಸ್ಥಲಕ್ಕೆ ಬಂದು ಪ್ರಕಟವಾದೆ.
ಮಝು ಭಾಪು ಮಝು ಭಾಪು ಲಿಂಗವೇ!
ನ ಚ ರೇಣು ನ ಚ ಚಕ್ಷುವೆನಿಸುವ ಲಿಂಗವೇ,
ನಿನ್ನುವ ಮುಟ್ಟೆ ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದೆನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!

ವ.ಸಾ.ಸಂ. ಪು. ೧೩೭, ವ. ೧೧

ಯಾವುದನ್ನು ಕಂಡರೆ ಎಲ್ಲ ಕಂಡಂತೆ, ಯಾವುದನ್ನು ಮುಟ್ಟಿದರೆ, ಹುಟ್ಟಹೊಂದುವ ಭವಸಂಸಾರಕ್ಕೆ ಹೊರಗಾಗಿ ಎಲ್ಲವನ್ನು ಮುಟ್ಟಿದಂತೆ,

ಯಾವುದನ್ನು ಅನುಭವಿಸಿದರೆ ಎಲ್ಲವನ್ನು ಅನುಭವಿಸಿದಂತೆ, ಯಾವುದನ್ನು ಪೂಜಿಸಿದರೆ ಎಲ್ಲವನ್ನು ಪೂಜಿಸಿದಂತೆ, ಆ 'ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ವಸ್ತುವು ಪ್ರತ್ಯಕ್ಷವಾಗಿ ಕರಸ್ಥಲಕ್ಕೆ ಬಂದಿರಲು,....ಅಖಂಡೇಶ್ವರ ಲಿಂಗವು ಎನ್ನೊಳಹೊರಗೆ ತಾನಾದ ಬಳಿಕ ಇನ್ನೆಲ್ಲಿಯದಯ್ಯ ಎನಗೆ ಬೇರೆ ತತ್ವವನರಿಯಬೇಕೆಂಬ ಚಿಂತೆ?' (ಪು. ೧೩೭-೮, ವ. ೧೨). ಬೇರೆ ಚಿಂತೆ ಇಲ್ಲ. ಬೇರೆ ಜಪ ತಪ ಧ್ಯಾನ ಮೌನ ಜ್ಞಾನ ಯೋಗಗಳ ಚಿಂತೆ ಇಲ್ಲ. ಆದರೆ ಚಿಂತೆ ಇದೆ ಲಿಂಗಭಕ್ತಿಯ ಚಿಂತೆ, ಲಿಂಗಪೂಜೆಯ ಚಿಂತೆ. ಧ್ಯಾನ ಮೌನದೊಡೆಯ, ಜ್ಞಾನಯೋಗದ ಮನೆಯೊಡೆಯ ಮನೆಗೆ ಬಂದರೆ, ಭಾವದಲ್ಲಿ ಪ್ರಕಾಶವಾಗಿ ಪ್ರಾಣದಲ್ಲಿ ಪ್ರಕಟವಾಗಿ, ಕಣ್ಣೊಳಗಿಂದ ನಡೆದು ಕರಸ್ಥಲದ ಇಷ್ಟಲಿಂಗದಲ್ಲಿ ಚುಳುಕಾಗಿ ಪ್ರಜ್ವಲಿಸಿದರೆ, ಪೂಜಿಸಬೇಕು ಒಡೆಯನನ್ನು. ಸರ್ವಾಂಗದಲ್ಲಿ ಭಕ್ತಿ ತುಂಬಿ ಪೂಜಿಸಬೇಕು. ಕಣ್ಣು ತುಂಬಿ ನೋಡಬೇಕು, ನಾಲಗೆ ತುಂಬಿ ಹಾಡಬೇಕು. ಕಾಲು ತುಂಬಿ ಕುಣಿಯಬೇಕು, ಮೈ ತುಂಬಿ ಮಣಿಯಬೇಕು. ಕಿವಿ ತುಂಬಿ ಕೇಳಬೇಕು, ಮನ ತುಂಬಿ ಮೋಹಿಸಬೇಕು. ಪ್ರಾಣ ತುಂಬಿ ತುಳುಕಬೇಕು, ಭಾವ ತುಂಬಿ ಬೆಳಗಬೇಕು. ಮಾನವಕೋಟಿಯ ಕೋಟಿ ಕಾಲದ ಕನಸು, ಬುದ್ಧಿಯ ಕನಸು ಭಾವದ ಕನಸು, ಪ್ರಾಣದ ಅಮೃತಸ್ವಪ್ನ ದೇಹದ ಸತ್ತಿನ ಬಿಳಿಗನಸು, ಕೈಕಾಲು ಕಣ್ಣು ಕಿವಿಯಲ್ಲಿ ಮೂಡಿ, ಏನು ಮಾಡಿದರೂ ಎಷ್ಟು ನಡೆದರೂ ಏನು ನೋಡಿ ಏನು ಕೇಳಿದರೂ ಎಂದೂ ತಣಿಯದ ಬಯಕೆಯ ಮಹಾಮಂಗಲ ಮೂರ್ತಿ ಇಂದು ಮುಂದೆ ಬಂದು ಅಂಗೈಯಲ್ಲಿ ಮೂರ್ತಿಗೊಂಡರೆ ಪೂಜಿಸಬೇಕು. ಅಗ್ಗವಣಿಯಿಂದ ಪೂಜಿಸಬೇಕು, ಅಗ್ಗವಣಿ ಇಲ್ಲದೆ ಪೂಜಿಸಬೇಕು. ಪತ್ರಿ ಪುಷ್ಪದಿಂದ ಪೂಜಿಸಬೇಕು, ಇಲ್ಲದೆ ಪೂಜಿಸಬೇಕು. ಕಣ್ಣಿಂದ ಪೂಜಿಸಬೇಕು, ಕಣ್ಣಿಲ್ಲದೆ ಪೂಜಿಸಬೇಕು, ಮಾಡಿ ಪೂಜಿಸಬೇಕು, ಮಾಡದೆ ಪೂಜಿಸಬೇಕು. ನಾನು ಪೂಜಿಸಬೇಕು, ನಾನಿಲ್ಲದೆ ಪೂಜಿಸಬೇಕು. ನೀನು ಪೂಜಿಸಬೇಕು, ನೀನಿಲ್ಲದೆ ಪೂಜಿಸಬೇಕು. ನಾನು ನೀನಾಗಿ ಪೂಜಿಸಬೇಕು, ನೀನು ನಾನಾಗಿ ಪೂಜಿಸಬೇಕು. ನಾನು ನೀನು ನಿಷ್ಪತ್ತಿಯಾಗಿ, ನಷ್ಟವಾಗಿ, ಪೂಜೆ ಪೂಜಿಸಬೇಕು. 'ಎಂತಿರುತಿರ್ದೊಡಂತೆ ಶಿವಪೂಜೆ.' ತನ್ನ ತಾ ಪೂಜಿಸಿಕೊಳ್ಳಬೇಕು, ಪೂಜ್ಯ ಪೂಜಕ ಪೂಜೆಯಿಲ್ಲದೆ.

ಲಿಂಗಪೂಜೆಯಲ್ಲಿ ಭಕ್ತ ತುಂಬಿ ಒಂದಾಗಿ, ಒಂದರ ಎಚ್ಚರವೂ ಉಳಿಯದೆ, ಪೂಜೆಯಲ್ಲಿ ಮೈಮರೆದೊರಗಿ ಲಿಂಗವಶವಾಗಿರುವ ಷಣ್ಮುಖ ಸ್ವಾಮಿಗಳ ಶಿವಾದ್ವೈತ ಭಕ್ತಿಯ ನಿರ್ಭರವಿಲಾಸವನ್ನು ನೋಡಿ :—

ಎನ್ನ ಕರಕಮಲಮಧ್ಯದಲ್ಲಿ ಪರಮಶಿವಲಿಂಗವ ತುಂಬಿ,
ಆ ಲಿಂಗದ ಮಧ್ಯದಲ್ಲಿ ಕಂಗಳ ತುಂಬಿ,
ಆ ಕಂಗಳ ಮಧ್ಯದಲ್ಲಿ ಮನವ ತುಂಬಿ,
ಆ ಮನದ ಮಧ್ಯದಲ್ಲಿ ಭಾವವ ತುಂಬಿ
ಪರವಶನಾಗಿರ್ದೆನಯ್ಯ ನಿಮ್ಮೊಳಗೆ ಅಖಂಡೇಶ್ವರಾ !

ವ.ಸಾ.ಸಂ. ಪು. ೧೩೯. ವ. ೧೯

'ನಿಮ್ಮೊಳಗೆ ಪರವಶ'ನಾಗಿದ್ದರೆ ಭಕ್ತ ಇರುವುದು ಎಲ್ಲಿ? ಕರದ ಅಖಂಡ ಜ್ಯೋತಿ, ಅಖಂಡೇಶ್ವರಲಿಂಗ ತಾನಿರುವುದೆಲ್ಲಿ? ಈ ಭಕ್ತನನ್ನು ಹುಡುಕಿ ನೋಡಲೇಬೇಕು ಎಂಬ ವಿಚಾರ ಒತ್ತರಿಸಿ ನಿಮ್ಮ ತಲೆಯಲ್ಲಿ ಮೂಡಿದರೆ, ನಿಮ್ಮ ವಿಚಾರವನ್ನು ತಡೆಹಿಡಿವ ಸಾಹಸ ನಾನು ಮಾಡುವುದಿಲ್ಲ. 'ಅರಿವಿನ ತೃಪ್ತಿಗೆ ಅನುಭಾವವೆ ಆಶ್ರಯ'ವಾಗಿರುವಂತೆ, ವಿಚಾರದ ತೃಪ್ತಿಗೂ ಒಂದು ಆಶ್ರಯ ಬೇಕು. 'ಪರವಶ'ವನ್ನು ನೀವು ಅನುಭವಿಸಿರ ಬಹುದು ಅಥವಾ ಕೇಳಿರಬಹುದು. ಅತ್ಯಂತ ನಿಶ್ಶಕ್ತಿಯಲ್ಲಿ, ತೀಕ್ಷ್ಣವಾದ ರೋಗರುಜಿನದಲ್ಲಿ, ವಿಷಜಂತುಗಳು ಕಚ್ಚಿದಲ್ಲಿ ಅಥವಾ ಕ್ಲೋರೊಫಾರ್ಮ್ ಮುಂತಾದ ಔಷಧ ಸೇವನೆಯಿಂದ, ಇನ್ನು ಹಲವು ವಿಧವಾಗಿ ಮನುಷ್ಯ ಪರವಶನಾಗಬಹುದು. ಇವೇನು ಇಲ್ಲದಿದ್ದರೆ ನಿದ್ರೆಯ ಪರವಶ ನಿಮಗೆ ಗೊತ್ತೇ ಇದ್ದ ಮಾತು. ಅಥವಾ ಅತಿದುಃಖದಿಂದ, ಅತ್ಯಂತ ಆನಂದದಿಂದ ಪರವಶ ಆಗುತ್ತೇವೆ ನಾವು. ಮಾನವಸಾಮಾನ್ಯಪ್ರಜ್ಞೆ ಈ ರೀತಿ ಯಿಂದ'ಪರವಶ''ಮೂರ್ಛೆ''ಪ್ರಜ್ಞಾಹೀನ'ವಾಗುವುದಕ್ಕೂ ಅಖಂಡವಾಗಿ ಬೆಳಗುವ ಅರಿವಿನಲ್ಲಿ, 'ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವಸ್ತು'ವಿನಲ್ಲಿ ಪರವಶವಾಗುವುದಕ್ಕೂ ಬೆಳಗು ಕತ್ತಲೆಯಷ್ಟು ಅಂತರ. ಪೂಜೆಯ ಪರವಶ, ಇದಿರಿಲ್ಲದ ಎರಡಿಲ್ಲದ, ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಅನಾದ್ಯನಂತವಾದ ಪರಿಪೂರ್ಣ ಪ್ರಜ್ಞೆ. ಸ್ವಯಂಜ್ಯೋತಿ, ಪರಿಪೂರ್ಣ ಪರಂಜ್ಯೋತಿ, ಚಿದಾಕಾಶ ಚಿತ್‌ಪ್ರಕಾಶಲಿಂಗದಲ್ಲಿ ಎಚ್ಚರ! ಮನುಷ್ಯನಲ್ಲಿ ಎದ್ದು ಎಚ್ಚರ

ವಾಗಬಲ್ಲುದೆಲ್ಲ ಇಲ್ಲಿ ಎಚ್ಚರ. ಈ ಎಚ್ಚರದಲ್ಲಿ ನಾನು-ಭಕ್ತ ಇಲ್ಲ, ನೀನು-ದೇವ ಇಲ್ಲ. ಈ ಪರವಶಕ್ಕೆ ಇನ್ನೂ ದೃಷ್ಟ ಅನುಭವ ಕೇಳಿ ಪ್ರಭುದೇವರ ಮುಖದಿಂದ:

ಅರ್ಘ್ಯವಣಿಯ ತಂದು ಮಜ್ಜನವ ಮರೆದವನ,
ಪುಷ್ಪವ ತಂದು ಪೂಜೆಯ ಮರೆದವನ,
ಓಗರವ ತಂದು ಅರ್ಪಿತವ ಮರೆದವನ,
ಲಿಂಗವ ಕಂಡು ತನ್ನ ಮರೆದವನ
ಮಹಾಘನ ಒಳಕೊಂಡಿತ್ತು ಗೊಹೇಶ್ವರಾ.

ವ.ಸಾ.ಸಂ. ಪು. ೧೫೩, ವ. ೬೫

'ಲಿಂಗವ ಕಂಡು ತನ್ನ ಮರೆದ'ರೆ, ಅದೇ ಮಹಾಲಾಭ ಭಕ್ತಿಯ ವ್ಯಾಪಾರ ದಲ್ಲಿ. ಸಮುದ್ರದಲ್ಲಿ ನದಿ ಕೂಡಿ, ತನ್ನ ಸರ್ವಾಂಗದಲ್ಲಿ ಸಮುದ್ರವನ್ನು ಕಂಡು, ತಾನೆಲ್ಲ ಸಮುದ್ರವಾಗಿ ಇರುವ ಅನುಭವದಲ್ಲಿ ತನ್ನ ಮುನ್ನಿನ ನದಿಯ ಅಪೂರ್ಣಭಾವ ಅಳುಕಿಸಿ ಹೋದರೆ ನದಿಗಾದ ಹಾನಿಯೇನು? ಸುತ್ತಿದ ಕತ್ತಲೆ ಹರವಿದ ಬೆಳುದಿಂಗಳಲ್ಲಿ ಕೃಷ್ಣಪ್ರಜ್ಞೆ ತಪ್ಪಿದರೆ ಹೋದ ಗಂಟು ಏನು? ಪೂಜಿಸುವ ಪುಷ್ಪವನ್ನು, ಪೂಜಿಸುವಾತನ ನಾನನ್ನು ಘನಕ್ಕೆ ಘನ ವಾದ ಗೊಹೇಶ್ವರಲಿಂಗ ಒಳಕೊಂಡು, ಪೂಜೆಯೆಲ್ಲ ಲಿಂಗವಾದರೆ ಬೇರೆ ಮತ್ತೆ ಬೇಕು ಏನು?

ಇಷ್ಟಪೂಜೆಯಲ್ಲಿ ವಿಚಾರಕ್ಕೆ ಅರ್ಹವಾದ ಇನ್ನೂ ಒಂದು ವಿಷಯ ವಿದೆ. ಬಾಹ್ಯಲಿಂಗ ಬಾಹ್ಯಪೂಜೆ, ಬಹಿರಂಗದ ಕ್ರಿಯೆ ಬಹಿರಂಗದಲ್ಲಿ ಭಕ್ತಿ ಅತ್ಯವಶ್ಯವೆ? ಇವು ಇಲ್ಲದೆ ಅಂತರಂಗದ ಸಿದ್ಧಿಯಾದರೆ ಇವ ರಿಂದೇನು?—ಎಂಬ ಪ್ರಶ್ನೆ ನನ್ನ ನಿಮ್ಮ ಮನದಲ್ಲಿ ಅಥವಾ ಯಾವ ಮನದಲ್ಲಿಯೆ ಆಗಲಿ ಚಿಟುಕುಮುಳ್ಳು ಆಡಿಸುತ್ತ ಬಂದಿದೆ. ಅದಕ್ಕೆ ಉತ್ತರ ವಿದೆಯೆ? ಉತ್ತರವಿದೆ ಇಷ್ಟೇ ಅಲ್ಲ, ಉತ್ತರ ಬಹಳ ಸರಳ ಮತ್ತು ಸುಲಭ ಇದ್ದಂತೆ ತೋರುತ್ತದೆ. ಜ್ಞಾನದ ಆನಂದ, ಯೋಗದ ಆನಂದ, ಪ್ರೇಮದ ಆನಂದ, ಬರಿ ಅರಿವಿಗೆ ಬರಿ ಮನಸ್ಸಿಗೆ ಕೇವಲ ಹೃದಯಕ್ಕೆ ಸೀಮಿತವಾಗಿ ಉಳಿಯಬೇಕೇಕೆ? ಅರಿವಿಗೆ ತಕ್ಕ ತೃಪ್ತಿ ಅರಿವಿಗಾದರೆ, ಮನದ ಹಸಿವು ಹೃದಯದ ಬಯಕೆ ಉಣ್ಣುವುದನ್ನೆಲ್ಲ ಉಂಡು ಸಂತೃಪ್ತಿಯಾಗಿದ್ದರೆ,

ನನ್ನ ಕರ್ಮ-ಜ್ಞಾನೇಂದ್ರಿಯಗಳನ್ನು ಹೊತ್ತಿರುವ ದೇಹ ಮಾಡಿದ ಪಾಪವೇನು? ಕಣ್ಣಿಗೆ ಪ್ರತ್ಯಕ್ಷವನ್ನು ನೋಡುವ ಪುಣ್ಯವನ್ನು ಹೊರಗೆ ಹಾಕಬೇಕೇ? ಪರಮಪದವಾದ ಲಿಂಗವನ್ನು ಹಾಡುವ, ಲಿಂಗದ ಪ್ರಸಾದವನ್ನು ಉಣ್ಣುವ ಪರಮಪದವಿ ನಾಲಗೆಗೇಕೆ ಬೇಡ? ಕೈಯಲ್ಲಿ ಕ್ರಿಯಾಪೂಜೆ ಚಿಗುರುವ ಹೊಸ ಹೊಸ ಸುಖ ಕೈಗೆ ಬೇಡವೆಂದು ಹೇಳಬಲ್ಲ ಬುದ್ಧಿವಂತರಾರು? ಕೇಳಬಾರದ ಲಿಂಗದ ಕೀರ್ತಿಯನ್ನು ಕಿವಿಯಲ್ಲಿ ಕೇಳುವ ನಿರ್ವಾಣ ಸುಖ ಕಿವಿಗೆ ಹೊರತೇ? ಲಿಂಗಪೂಜೆಗಾಗಿ ಕುಣಿದು ನಡೆದು ಲಿಂಗಕ್ಕೆ ಸವೆದರೆ, ಮನುಷ್ಯನಿಗೆ ಕಾಲು ಮೂಡಿದ ಸತ್ಯಾರ್ಥ ಆಗಲಿಕ್ಕಿಲ್ಲವೆ? ಬಸವಣ್ಣನವರ ಮಾತು ಕೇಳಿ:

> ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು,
> ಹಾಡಿ ನಾಲಿಗೆ ದಣಿಯದು. ಇನ್ನೇವೆನಿನ್ನೇವೆ?
> ನಿಮ್ಮ ಕೈಯಾರೆ ಪೂಜಿಸಿ ಮನ ದಣಿಯಲೊಲ್ಲದಿನ್ನೇವೆನಿನ್ನೇವೆ?
> ಕೂಡಲಸಂಗಮದೇವ ಕೇಳಯ್ಯಾ, ನಿಮ್ಮುದರವ ಬಗಿದಾನು ಹೊಗುವ
> ಭರವೆನಗೆ!

ವ.ಸಾ.ಸಂ. ಪು. ೧೪೪, ವ. ೫೧

> ನಿಮ್ಮ ನೋಟವನಂತ ಸುಖ, ಕೂಟ ಪರಮ ಸುಖ!
> ಅವುಟು ಕೋಟಿ ರೋಮಂಗಳೂ ಕಂಗಳಾಗಿ ನೋಡುತ್ತಿದ್ದೆನು!
> ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
> ಮನದಲ್ಲಿ ರತಿ ಹುಟ್ಟಿ ನಿಮಿರ್ದುವೆನ್ನ ಕಳೆಗಳು!

ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೧೨೪, ವ. ೪೯೦

ಕೂಡುವ ರತಿ ಮನದಲ್ಲಿ ಮುಗಿಲಿಗೇರಿ ಲಿಂಗದ 'ಉದರವ ಬಗಿದು ಹೋಗುವ' ಮೊದಲು ಪೂಜೆಯ ಕಣ್ಣಲ್ಲಿ ಕಾಲಲ್ಲಿ, ನಾಲಗೆಯಲ್ಲಿ ಕಿವಿಯಲ್ಲಿ, ಎದೆಯಲ್ಲಿ ರೋಮರೋಮದಲ್ಲಿ ಕಳೆಗಳು ನಿಮಿರಿ ನಿಲ್ಲಬೇಕು. ಅಂದರೆ ಪ್ರೇಮ ಸರ್ವಾಂಗ ಸುಂದರ, ಸರ್ವಾಂಗ ಪಕ್ವ. ತಾಯಿ ಮಗುವಿನ ಲಲ್ಲೆ ಮುದ್ದು, ಆಟ ನೋಟ, ಮೋಹ ಮುನಿಸು, ಸರಸ ವಿನೋದಗಳ ಬಹಿರಂಗ ವಿಲಾಸವನ್ನು ಇನ್ನೊಮ್ಮೆ ನೋಡಿ. ನಲ್ಲ ನಲ್ಲೆಯರ ಕಣ್ಣು

ಕಾಲು ಕೈ ಕಿವಿ ನಾಲಗೆ ಸೋಂಕಿನ ಮುಖದಲ್ಲಿ ಸಾಲಿಡುವ ಸವಿಯು ರತಿವಿಲಾಸವನ್ನು ನೋಡಿ. ಅಂತರಂಗದ ಕೂಟಕ್ಕೆ ಬಹಿರಂಗದ ಆಟ ನೋಟ ಮಾಟವೆ ಮಹಾನಾಂದಿ. ನಿಜವಾದ ನಾಟಕದಿಂದ ಎಂದೂ ಬಿಚ್ಚಬಾರದ ನಾಂದಿ ಇದು. ಮತ್ತೆ ದೇಹಕಾಂತೆ ಇಲ್ಲದೆ, ಪ್ರಾಣಕಾಂತೆ ಭಾವಕಾಂತೆಯೊಡನೆ ಸಮರತಿಯ ಸಂಸಾರ ಎಷ್ಟು ದಿನ? ಕನಸಿನ ಲಗ್ನ ಕನಸಿನ ಕಾಂತೆ, ಬಾಳುವೆ ಮಾಡಿರಿ ನೋಡೋಣ. ಕಂಡ ಲಿಂಗ ಕೈಯಲ್ಲಿರಬೇಕು, ಕೈಯ ಪೂಜೆ ಲಿಂಗದಲ್ಲಿರಬೇಕು. ಸಚ್ಚಿದಾನಂದ ನಿತ್ಯ ಪರಿಪೂರ್ಣಕ್ಕೆ, ಮಹಾಘನಶೂನ್ಯಲಿಂಗಕ್ಕೆ ಕೈಯಿ ಕಾಲು ಕಣ್ಣು ಕಿವಿಗಳ ತ್ಯಾಗಾಂಗವನ್ನು, ದೇಹವನ್ನು ನಿಲುಕಿಸಿಕೊಡುವ ಬಹಿರಂಗದ ಲಿಂಗಪೂಜೆ ಕ್ರಿಯೆ ಬೇಕು. ಭಕ್ತನ ಭಾವಾಂಗದಲ್ಲಿ ಜ್ಞಾನಾಂಗದಲ್ಲಿ ಕ್ರಿಯಾಂಗದಲ್ಲಿ, ಎಲ್ಲಿ ಮುಟ್ಟಿದರಲ್ಲಿ, ಎಲ್ಲಿ ಹಿಳಿದರಲ್ಲಿ ಸದ್ಭಕ್ತಿಯ ರಸ ಹೊಮ್ಮುತ್ತಿರಬೇಕು. ಆ ಭಕ್ತ ಸರ್ವಾಂಗಲಿಂಗಶ್ರೀಮಂತ.

> ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದು ಬಾಹ್ಯಕ್ರೀ
> ಎಂಬ ಭಾವಭ್ರಮಿತರ ಮಾತ ಕೇಳಲಾಗದು, ಕೇಳಲಾಗದು.
> ಧನವುಳ್ಳಾತ ಅಷ್ಟಸಂಪದೈಶ್ವರ್ಯಭೋಗವ ಭೋಗಿಪನಲ್ಲದೆ,
> ಧನಹೀನ ದರಿದ್ರನೇನ ಭೋಗಿಸುವನೋ ?
> ಲಿಂಗವು ಪ್ರಾಣವು ಅವಿರಳಾತ್ಮಕವಾಗಿ, ಅನುಳಸೋಂಕು ತುಳುಕಿ,
> ಬಾಹ್ಯಕ್ರೀಯಾಗಿ ಕರಸ್ಥಲಕ್ಕೆ ಬಂದುತ್ತರಿಸೆ,
> ಇದು ಅಂತರಂಗವಲ್ಲ ಬಹಿರಂಗವಲ್ಲ, ಉರಿಲಿಂಗದೇವ.

ವ.ಸಾ.ಸಂ. ಪು. ೧೪೭, ವ. ೪೬

ಬಹಿರಂಗದ ಪೂಜೆ ಎನಿಸುವ ಅಷ್ಟವಿಧ ಅರ್ಚನೆ ಷೋಡಶವಿಧ ಉಪಚಾರದ ಕ್ರಿಯೆಯಲ್ಲಿ ಲಿಂಗಗಂಭೀರವನ್ನು ಕಂಡಿದ್ದಾರೆ ಉರಿಲಿಂಗದೇವರು. ಪ್ರಾಣಕ್ಕೆ ಪ್ರಾಣಚೈತನ್ಯವಾದ ಲಿಂಗ ಮತ್ತು ಪ್ರಾಣ, ಸಂದುಬಿರುಕಿಲ್ಲದೆ ಕೂಡಿ ಒಂದಾಗುವಲ್ಲಿ, ಲಿಂಗದ ಸೋಂಕಿನಿಂದ ಲಿಂಗಪ್ರಾಣದ ಚೈತನ್ಯ ಒಳಗಿಂದ ತುಳುಕಿ ಹೊರಗೆ ಬಂದು ಪೂಜೆ ಮಾಡಿದರೆ, ಆ ಕ್ರಿಯೆ ದೇಹದ ಕ್ರಿಯೆಯೂ ಅಲ್ಲ, ಪ್ರಾಣದ ಕ್ರಿಯೆಯೂ ಅಲ್ಲ. ಅದು ಲಿಂಗದ ಸೋಂಕಿನಿಂದ ಹೊಮ್ಮಿದ ಕ್ರಿಯೆ, ಲಿಂಗದ ಕ್ರಿಯೆ, ಲಿಂಗ. ಇಲ್ಲಿ, ಲಿಂಗವೇ ಲಿಂಗಪೂಜಾ

ಕ್ರಿಯೆಯಾಗಿ ತನ್ನನ್ನು ತಾ ಪೂಜಿಸುಕೊಳ್ಳುತ್ತಿದೆ, ಎಂಬ ಮಾತು ಯಥಿತಾರ್ಥವಾಗುತ್ತದೆ. 'ನ ಅಶಿವಸ್ಯ ಶಿವೋಪಾಸ್ತಿಃ ಘಟತೇ....' ಎಂಬ ಮಾತು ಮತ್ತೆ ಕಳೆಯೇರುತ್ತದೆ. ಶಿವನಲ್ಲಿ ಶಿವನ ಭಕ್ತಿ ಎಂಬ ಶಿವಾದ್ವೈತ ಭಕ್ತಿಯ ಹೃದಯ ಪ್ರಕಾಶವಾಗುತ್ತದೆ. ಸುಜ್ಞಾನದಲ್ಲಿ ಮಾನುಷಪ್ರಕೃತಿಯಿಂದ ಮುಕ್ತನಾದ ಶಿವಮಾನವನೇ ಶಿವನನ್ನು ಇಂಥ ಶಿವಭಕ್ತಿಯಿಂದ ಪೂಜಿಸಬಲ್ಲ ಎಂಬ ಮಾತೂ ಇಲ್ಲಿ ಸ್ವಯಂಸ್ಪಷ್ಟವಾಗುತ್ತದೆ.

ಉರಿಲಿಂಗದೇವ ಹೇಳುವ 'ಲಿಂಗವು ಪ್ರಾಣವು ಅವಿರಳಾತ್ಮಕವಾಗಿ' ಎಂಬ ಮಾತಿನ ಜಾಡನ್ನು ಹಿಡಿದು, ಶರಣದೇಹದೊಳಗೆ ಹೊಕ್ಕು ಪ್ರಾಣದಲ್ಲಿಗೆ ಬಂದರೆ, ಪ್ರಾಣಲಿಂಗ ಕಾಣಬರುವುದು. ಇಲ್ಲಿ ಪ್ರವೇಶ ದೊರೆವುದು ಹೇಗೆ ಎಂಬುದನ್ನು ಷಣ್ಮುಖಸ್ವಾಮಿಗಳು ನಿರೂಪಿಸಿದ, ನಿರ್ದೇಶಿಸಿದ ಹಾದಿಯನ್ನು ಮತ್ತೆ ನೆನೆಸಿಕೊಳ್ಳಿ: '....ಇಂತೀ ಅಂಗ ಪ್ರಕೃತಿಗುಣಗಳೆಲ್ಲ ನಷ್ಟವಾಗಿ, ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು, ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಾಭಾವವಿಂಬುಗೊಂಡು, ಅನಿಮಿಷ ದೃಷ್ಟಿ ಅಚಲಿತವಾಗಿ ಬಲಿದು, ಆ ಲಿಂಗವು ಅಂತರಂಗಕ್ಕೆ ವೇಧಿಸಿ, ಪ್ರಾಣಲಿಂಗವೆನಿಸಿಕೊಂಡು ಷಡಾಧಾರಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಂಬುದು....' ಆರಿರಲಿ ಅಥವಾ ಆಧಾರ ಮೊದಲು ಆಣು ಕಡೆಯಾದ ಹತ್ತು ಚಕ್ರಗಳಿರಲಿ, ಅಲ್ಲೆಲ್ಲ ಪ್ರತಿಷ್ಠಾಪಿತವಾಗುವುದು ಪ್ರಾಣಲಿಂಗವೆ. ಮತ್ತೆ ಕರಣ ಇಂದ್ರಿಯಗಳಲ್ಲಿ ನೆಲೆಗೊಂಡು, ಚಿದ್‌ಬೆಳಗು ಬೀರುವುದು ಪ್ರಾಣಲಿಂಗವೆ. ಅಂತರಂಗದಲ್ಲಿ ಬೆಳಗುವ ಪ್ರಾಣಲಿಂಗಕ್ಕೂ ಬಹಿರಂಗ ಧರಿಸಿರುವ ಇಷ್ಟಲಿಂಗಕ್ಕೂ ಇರುವ ಸಂಬಂಧವನ್ನು ಇನ್ನೂ ಕೇಳಿ ನೋಡಿ ಪ್ರಭುದೇವರನ್ನು:

> ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನಾರು ಬಲ್ಲರು ಹೇಳಾ ?
> ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು.
> ಬಹಿರಂಗವೆಂಬ ಶಬ್ದಕ್ಕೆ ಅಂತರಂಗ ಮುಂದುಗೊಂಡಿಪ್ಪುದು.
> ಮನವನೆಡೆಗೊಂಡ ಲಿಂಗದ ಅರಿವು ವಿಚಾರವ್ಯಾಕುಲಕ್ಕೊಳಗಾಗಬಾರದೆಂದು
> ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ,
> ಅಂತರಂಗ ಬಹಿರಂಗವೆಂದರಿಯದೆ ಅನಿಮಿಷನಾಗಿಪ್ಪನಾ ಶರಣನು.

ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ
ತೇಜವೆಂಬ ದರ್ಪಣವ ಹಿಡಿದಿಪ್ಪ ನೋಡಯ್ಯ!
ಗುಹೇಶ್ವರಲಿಂಗದಲ್ಲಿ ನಿಜವನೈದಿಹೆನೆಂದಡೆ
ಕುರುಹುವಿಡಿದು ಕುರುಹುಗೆಡಬೇಕು ನೋಡಾ ಸಿದ್ಧರಾಮಯ್ಯ.

ವ.ಸಾ.ಸಂ. ಪು. ೧೪೦, ವ. ೨೪

ಇದೇ ವಿಷಯವನ್ನು ಇನ್ನೂ ಸ್ಫುಟಗೊಳಿಸುವ ಚೆನ್ನಬಸವಣ್ಣನವರ ಮಾತನ್ನೂ ಕೇಳಿ:

ಇಷ್ಟಲಿಂಗ ಪ್ರಾಣಲಿಂಗವೆಂಬುದನಾರು ಬಲ್ಲರು?
ಇಷ್ಟಲಿಂಗವೀಗ ದರ್ಪಣ, ಪ್ರಾಣಲಿಂಗ ಪ್ರತಿಬಿಂಬ.
ದರ್ಪಣ ಮುಸುಳಿಸಿದರೆ ಪ್ರಾಣಲಿಂಗವ ಕಾಣಬಹುದೇ?
ಇಷ್ಟ ಪ್ರಾಣ ತೃಪ್ತಿಯೆಂಬರು ನೋಡಾ!
ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರ
ಮುಸುಳಿಸಿದರೆ, ಪ್ರಾಣಲಿಂಗವ ಕಾಣಬಹುದೇ?
ಸಾಕ್ಷಿ: ಇಷ್ಟಲಿಂಗಮವಿಶ್ವಸ್ಯ ಪ್ರಾಣಲಿಂಗಂ ನ ಪಶ್ಯತಿ
ದರ್ಪಣ ಪ್ರತಿಬಿಂಬಾನಾಂ ಯಥಾರೂಪಂ ತಥಾ ಭವೇತ್
ಎಂದುದಾಗಿ
ಇದು ಕಾರಣ_ಕೂಡಲಚೆನ್ನಸಂಗಮದೇವಾ, ಇಷ್ಟದಲ್ಲಿ
ಪ್ರಾಣ ತೃಪ್ತಿಯಾದವರ ತೋರಿ ಬದುಕಿಸಯ್ಯಾ!

ಲಿಂಗಲೀಲಾವಿಲಾಸ ಚಾರಿತ್ರ, ಪು. ೧೫೫, ವ. ೯೦.

ಹೊರಗೆ ಲಿಂಗವನ್ನು ಏಕೆ ಕಟ್ಟಿಕೊಳ್ಳಬೇಕು? ಹೊರಗೆ ಹೆಂಡತಿಯನ್ನು ಏಕೆ ಲಗ್ನಮಾಡಿಕೊಳ್ಳಬೇಕು?—ಎಂಬಂತಿದೆ, ಸಾಮಾನ್ಯವಾಗಿ ಎಲ್ಲರಲ್ಲಿ ಪ್ರಚಾರವಾಗಿರುವ ಈ ಪ್ರಶ್ನೆ. ನಿಮ್ಮಲ್ಲಿ ನಿಜವಾಗಿ ಪ್ರೀತಿ ನನ್ನ ಒಳಗೆ ಇದ್ದರೆ, ನಿಮ್ಮನ್ನೇಕೆ ನಮ್ಮ ಮನೆಯೊಳಗೆ ಕರೆದೊಯ್ಯಬೇಕು? ಹೊರಗೆ ಏಕೆ ಉಪಚಾರ ಮಾಡಬೇಕು? ಹೊರಗೆ ಸ್ನಾನ ಏಕೆ ಮಾಡಿಸಬೇಕು? ನನ್ನ ಮನದೊಳಗೆ ನಿಮ್ಮನ್ನು ಕುಳ್ಳಿರಿಸಿ, ಅಡಿಗೆ ಅಂಬಲಿ ಇಲ್ಲದೆ, ಒಳಗೆ ಮನದ ಹೋಳಿಗೆ ತುಪ್ಪ ಅನ್ನ ಸಾರು ಯಥೇಚ್ಛ ಉಣಬಡಿಸಿ, ನಿಮ್ಮನ್ನು ಹೊರಗೆ ನಿಮ್ಮ ಮನೆಗೆ ಕಳಿಸಿದರೆ ಸಾಲದೆ? ಲಿಂಗದೇವನನ್ನು ಕಣ್ಣ

ತುಂಬ ನೋಡಿ ಕೈಯಾರೆ ಪೂಜಿಸುವ ಪ್ರತ್ಯಕ್ಷ ಭಕ್ತಿ, ಪ್ರತ್ಯಕ್ಷ ಪೂಜೆ ಪ್ರತ್ಯಕ್ಷ ಆನಂದ ಬೇಕು. ಸಕ್ಕರೆಯು ಮರದಲ್ಲಿ ಜೇನುಹಣ್ಣು ಗೊಂಚಲಿಟ್ಟರೆ, ಆದ ಕೊರತೆ ಏನು? ಮತ್ತೆ ಈ ಬಹಿರಂಗದ ಕಣ್ಣಲ್ಲಿ ಪ್ರತ್ಯಕ್ಷ ಲಿಂಗದರ್ಶನ ಆನಂದ ಭಕ್ತಿ ಪೂಜೆಯ ಪರಿಮಳವನ್ನು ಕರಸ್ಥಲದ ಲಿಂಗಕ್ಕೆ ಕಟ್ಟಿದರೆ, ಈ ಪರಿಮಳ ಅಂತರಂಗದ ಪ್ರಾಣಲಿಂಗದಲ್ಲಿ ವೇಧಿಸಿ ಅಂತರಂಗವೂ ಪರಿಮಳಿಸುತ್ತದೆ,—ಎಳ್ಳಿಗೆ ಪರಿಮಳ ಕಟ್ಟಿದರೆ ಎಣ್ಣೆಗೆ ಪರಿಮಳ ವೇಧಿಸುವಂತೆ, ಕೆಳಗೆ ಉರಿ ಹಚ್ಚಿದರೆ ಒಳಗೆ ನೀರು ಕಾಯುವಂತೆ. ಈ ವಿಚಾರವಲ್ಲದೆ ಇನ್ನೂ ಒಂದು ರಹಸ್ಯವಿದೆ, 'ಪ್ರಾಣಲಿಂಗದ ಪ್ರಸನ್ನ ಮುಖ'ವನ್ನು, ಕಣ್ಣಿನ ನೋಟಕ್ಕೆ ಇಂಬಾಗಿ ಅಂಗೈಯಲ್ಲಿ ಕುಳ್ಳಿರುವ ದಿವ್ಯತೇಜವನ್ನು ತೋರಿಸುವ ಇಷ್ಟಲಿಂಗದಲ್ಲಿ. ಒಳಗೆ ಲಿಂಗದ ಅರಿವು ಮನದ ನೆನಹಿನಲ್ಲಿ ನೆಲೆಗೊಂಡಿದ್ದರೂ, 'ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ಮೈಕ್ಷತ್ ಆವೃತ್ತಚಕ್ಷುಃ ಅಮೃತತ್ವಮಿಚ್ಛನ್' ಎಂಬಂತೆ ಹೊರಗೆ ಎಲ್ಲ ಕಣ್ಣು ಮುಚ್ಚಿ ಅಥವಾ ಹೊರಗನ್ನೆ ಬಿಗಿದು ಬಂದು ಮಾಡಿ ಒಳಗೆ ಪ್ರತ್ಯಗಾತ್ಮವನ್ನು ನೋಡುವ ಧೀರನಾಗಿದ್ದರೂ, ಹೀಗೆಯೆ ಕದ ಮುಚ್ಚಿಕೊಂಡು ದೇಹವನ್ನು ಬೀಗಹಾಕಿ ಎಷ್ಟು ಹೊತ್ತು ಒಳಗೆ ಕುಳ್ಳಿರಬೇಕು? ಕದ ತೆರೆದು ಹೊರಗೆ ಬರಲೆ ಬೇಕು. ಹೊರಗೆ ನೋಡಲೆ ಬೇಕು, ಕೇಳಲೆ ಬೇಕು. ಅಂತರಂಗದಲ್ಲಿ ಪ್ರತ್ಯಗಾತ್ಮನ ಸಾಕ್ಷಾತ್ಕಾರವಾದ 'ಕಶ್ಚಿದ್ಧೀರ'ನು ಮುಚ್ಚಿದ ದೇಹ ತೆಗೆದು ಹೊರಗೆ ನೋಡಿದರೆ, ಆತನ ಅಂತರಂಗದ ಅರಿವು ಬೆಪ್ಪನಾಗುವ ಎಲ್ಲ ಸಂಭವವಿದೆ. ಆದರೆ ಬಹಿರಂಗದ ಮೇಲೂ ಲಿಂಗದೇವನಿದ್ದರೆ ಒಳಗಿರಲಿ ಹೊರಗೆ ಬರಲಿ, ಯಾವ ಸಂಕೋಚ ಇಲ್ಲ. ಒಳಗೆ ಭಾವ ಮನ ಜ್ಞಾನ ನೋಟದ ಪ್ರತ್ಯಗಾತ್ಮನೇ ಹೊರಗೆ ಪ್ರತ್ಯಕ್ಷ. ಒಳಹೊರಗೆ ಕಂದೆರೆದು ಎವೆಯಿಕ್ಕದೆ ನೋಡುವ ಅನಿಮಿಷದೃಷ್ಟಿ. ಈ ದೃಷ್ಟಿಯ ಘನತೆಯೆಂದರೆ, ಇಲ್ಲಿ ಒಳಹೊರಗೆಂಬುದಿಲ್ಲ.

ಒಳಗು ಹೊರಗು ಕೂಡಿ ಒಂದಾಗಿ ನಿಂದು ಉರಿವ ಲಿಂಗದೇವನನ್ನು ಅನಿಮಿಷದೃಷ್ಟಿಯಿಂದ ಕಂಡು, ಉರಿದೇವನನ್ನು ಪೂಜಿಸಬೇಕು. ಈ ದೇವನಿಗೆ ಮಡುವಿನಗ್ಗಣಿಯ ಮಜ್ಜನ, ಗಿಡ ಮರ ಬಳ್ಳಿಯ ಪತ್ರಿ-ಪುಷ್ಪದ ಪೂಜೆ ನಡೆವುದಿಲ್ಲ. ಪ್ರಾಣಸಿಂಹಾಸನದ ಮೇಲೆ ಮಂಡಿಸಿ ಪ್ರಾಣಲಿಂಗಿಯು

ಒಳ ಹೊರಗೆ ಬೆಳಗುವ ದೇವನ ರೀತಿಯನ್ನು ಮೊದಲು ಮತ್ತೂ ನೋಡಿ:

> ಪರಾತ್ಪರವಾದ ವಸ್ತುವನೊಡಗೂಡಿದ ಪ್ರಾಣಲಿಂಗಿಯ ಒಡಲ
> ಬೆಳಗಿನ ಗಡಣವೆಂತಿರ್ಪುದೆಂದಡೆ:
> ಸ್ಫಟಿಕದ ಘಟದೊಳಗೆ ಜ್ಯೋತಿಯನಿರಿಸಿದಂತೆ.
> ಕತ್ತಲೆಯ ಮನೆಯಲ್ಲಿ ರತ್ನವ ಹರಹಿದಂತೆ.
> ರತ್ನದ ಗಿರಿಗೆ ರವಿಕೋಟಿಕಿರಣಂಗಳು ಮುಸುಂಕಿದಂತೆ.
> ಬೆಳಗು ಹಳಚಿದ ಮಹಾಬೆಳಗಿನೊಬ್ಬುಳಿಯನೊಳಕೊಂಡು
> ಘನಗಂಭೀರವಾದ ಪ್ರಾಣಲಿಂಗಿಗಳ ಪಾದಕಮಲದಲ್ಲಿ
> ಸದಮಲ ತುಂಬಿಯಾಗಿರಿಸಯ್ಯಾ ಎನ್ನ ಅಖಂಡೇಶ್ವರಾ.
>
> ವ.ಸಾ.ಸಂ. ಪು. ೩೯೭, ವ. ೨೭

ದೇಹದ ಗುಣಧರ್ಮವಿಲ್ಲದೆ ಸ್ಫಟಿಕದ ಘಟದಂತಿರುವ ಒಡಲಲ್ಲಿ, ಪ್ರಾಣನ ಪ್ರಕೃತಿಯ ಕತ್ತಲೆ ಹರಿದ ಮನೋಮಂದಿರದಲ್ಲಿ, ರತ್ನದ ಪರ್ವತ ದಂತಿರುವ ಅಚಲಭಾವದಲ್ಲಿ ಮಹಾಬೆಳಗಿನೊಬ್ಬುಳಿ ಘನದ ಘಟ್ಟಿಯಾಗಿ ಅಂತರಂಗಬಹಿರಂಗವನ್ನೊಳಕೊಂಡು ಗಂಭೀರವಾಗಿ ಬೆಳಗುತ್ತಿದೆ. ಈ ಮಹಾಬೆಳಗಿನೊಬ್ಬುಳಿಯ ಪೂಜೆಗೆ ಕಲ್ಲುಮಣ್ಣಿನ ದೇವರ ಮನೆಯ ನೀರು ಗಂಧ ಪತ್ರಿ ಪುಷ್ಪ ಧೂಪ ದೀಪ ಗಂಟೆ ಜಾಗಟೆ ನೈವೇದ್ಯ ತಾಂಬೂಲ ಹೇಗೆ ನಡೆಯಬಲ್ಲವು? ಕೈ ಕಾಲು ಕಣ್ಣು ಕಿವಿ ಮಾಡುವ ಭಕ್ತಿ ಕ್ರಿಯೆ ಇಲ್ಲಿಗೆ ಹೇಗೆ ಮುಟ್ಟಬೇಕು? ಬಹಿರಂಗದ ಪ್ರತ್ಯಕ್ಷಲಿಂಗಕ್ಕೆ ಬಹಿರಂಗದ ನೀರು ಹೂವಾದರೆ, ಬಹಿರಂಗವನ್ನೊಳಕೊಂಡು ಅಂತರಂಗದಲ್ಲಿ ಪ್ರತ್ಯಕ್ಷ ವಾಗಿರುವ 'ಮಹಾಬೆಳಗಿನೊಬ್ಬುಳಿ'ಗೆ ಅಂತರಂಗದ ಪೂಜೋಪಕರಣ ಬೇಕು. 'ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ, ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೇ?' (ಪು. ೪೦೬). ಪ್ರಾಣಲಿಂಗಕ್ಕೆ ತಕ್ಕ ಪೂಜೆಯನ್ನು ಪ್ರಾಣಭಕ್ತ ಹೇಗೆ ನೆರವೇರಿಸುತ್ತಾನೆ? ಪ್ರಭುದೇವರನ್ನು ಕೇಳಿ:

> ಎನ್ನ ಹೃದಯಕಮಲದಲ್ಲಿ ಮೂರ್ತಿಗೊಂಡಿಪ್ಪ ಎನ್ನ ಪ್ರಾಣೇಶ್ವರಂಗೆ
> ಎನ್ನ ಕ್ಷಮೆಯೇ ಅಭಿಷೇಕ. ಎನ್ನ ಪರಮವೈರಾಗ್ಯವೇ ಪುಷ್ಪದ ಮಾಲೆ.
> ಎನ್ನ ಸಮಾಧಿಸಂಪತ್ತೇ ಗಂಧ. ಎನ್ನ ನಿರಹಂಕಾರವೇ ಅಕ್ಷತೆ.
> ಎನ್ನ ಸದ್ವಿವೇಕವೇ ವಸ್ತ್ರ. ಎನ್ನ ಸತ್ಯವೇ ದಿವ್ಯಾಭರಣ.

ಎನ್ನ ವಿಶ್ವಾಸವೇ ಧೂಪ. ಎನ್ನ ದಿವ್ಯಜ್ಞಾನವೇ ದೀಪ.
ಎನ್ನ ನಿಭ್ರಾಂತಿಯೇ ನೈವೇದ್ಯ. ಎನ್ನ ನಿರ್ವಿಷಯವೇ ತಾಂಬೂಲ.
ಎನ್ನ ಮೌನವೇ ಘಂಟೆ. ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ.
ಎನ್ನ ಶುದ್ಧಿಯೇ ನಮಸ್ಕಾರ. ಎನ್ನ ಅಂತಃಕರಣದಿಂದ ಮಾಡುವ
ಸೇವೆಯೇ ಉಪಚಾರಂಗಳು. ಈ ಪರಿಯಲ್ಲಿ
ಎಮ್ಮ ಗುಹೇಶ್ವರಲಿಂಗಕ್ಕೆ ಪ್ರಾಣಪೂಜೆಯ ಮಾಡಿ
ಬಾಹ್ಯಕ್ರೀಯ ಮರೆದೆನು ಕಾಣಾ ಸಂಗನ ಬಸವಣ್ಣಾ.

ವ.ಸಾ.ಸಂ. ಪು. ೧೫೧, ವ. ೫೮

ಕ್ಷಮೆ ವೈರಾಗ್ಯ, ಸಮಾಧಿ ನಿರಹಂಕಾರ, ಸದ್ವಿವೇಕ ಸತ್ಯ, ವಿಶ್ವಾಸ ದಿವ್ಯಜ್ಞಾನ, ನಿಭ್ರಾಂತಿ ನಿರ್ವಿಷಯ, ಮೌನ ನಿರ್ವಿಕಲ್ಪನೆ, ಅಂತಃಕರಣದ ಶುದ್ಧಿ, ಮನ ಬುದ್ಧಿ ಚಿತ್ತ ಅಹಂಕಾರಗಳು ಮಾಡುವ ಸೇವೆ—ಅಂತರಂಗದಲ್ಲಿ ಅಣಿಮಾಡಿಕೊಳ್ಳುವ ಪೂಜಾಸಾಮಗ್ರಿ ಮತ್ತು ಮನಸ್ಸು ಬುದ್ಧಿ ಚಿತ್ತ ಅಹಂಕಾರಗಳ ಉಪಚಾರಗಳನ್ನು ಎಲ್ಲಿಂದ ತರಬೇಕು? ಯಾರು ತರಬೇಕು? ಹೇಗೆ ತರಬೇಕು? ಸ್ತುತಿ ನಿಂದೆ, ಮಾನ ಅಪಮಾನ ಬಂದರೆ ಹೃದಯ ಕದಡದ ಕ್ಷಮಾಜಲವನ್ನು ಯಾವ ಜಲಾಶಯ, ಯಾವ ಜಲನಿಧಿಯಿಂದ ತರಬಹುದು? ಪರಮ ವೈರಾಗ್ಯವನ್ನು ಹೂಬಿಡುವ ಮರ ಗಿಡ ಬಳ್ಳಿ ಯಾವ ಭೂಮಿಯ ಮೇಲೆ ಬೆಳೆದಿವೆ? ಮಹಾಬೆಳಗಿನೊಬ್ಬುಳಿಯಾದ ಲಿಂಗದಲ್ಲಿ ಮನ ಮುಳುಗಿ ಸುಳುಹಡಗಿದ ಸಮಾಧಿಯ ಶ್ರೀಗಂಧದ ವೃಕ್ಷ ಯಾವ ದೇಶದಲ್ಲಿ ಎಂಥ ಎಲೆ ಬಿಟ್ಟದೆ? ವಿಶ್ವಾಸದ ಧೂಪ ಯಾವ ಬೆಂಕಿಯ ಮೇಲೆ ಹೊಗೆ ಎದ್ದಿದೆ? ದಿವ್ಯಜ್ಞಾನಕ್ಕೆ ಯಾವ ಪಣತಿ, ಎಷ್ಟು ಎಣ್ಣೆ, ಎಂಥ ಬತ್ತಿ, ಯಾರ ಜ್ಯೋತಿಯನ್ನು ಮುಡಿಸಬೇಕು? ಮೌನದ ಘಂಟೆಯನ್ನು ಲಿಂಗಕ್ಕೆ ನುಡಿಸಬಲ್ಲ, ಲಿಂಗದ ಕಿವಿಯಲ್ಲಿ ಕೇಳಬಲ್ಲ ಅಂತರ್ವಿಜ್ಞಾನಿ ಎಲ್ಲಿ? ವಿಶ್ವದ ಪ್ರಾಣಾಂತರಂಗಕ್ಕೆ ತನ್ನ ಶುದ್ಧಾಂತರಂಗವನ್ನು ಪೂಜಿಸಬಲ್ಲ ಪೂಜಕನಾರು? ಮಹಾಬೆಳಗಿನೊಬ್ಬುಳಿಗೆ ಮಹಾಭಕ್ತಿಯೊಬ್ಬುಳಿಯಾಗಬಲ್ಲ ಭಕ್ತನಾರು?

ಅಂತರಂಗವನ್ನೆಲ್ಲ — ಬಹಿರಂಗವನ್ನೊಳಕೊಂಡು — ಪ್ರಕಾಶಿಸುವ ಅಮೃತಲಿಂಗವನ್ನು ಕಂಡಿದ್ದಾನೆ ಪ್ರಾಣಭಕ್ತ. ಕಂಡು ಪೂಜಿಸಿ, ಉಣಿಸಿ

ಉಪಚರಿಸಿ, ವಾಯುಪ್ರಾಣ ಉಸಿರಾಡಿಸದೆ ನಿಂದರೂ ಲಿಂಗಕ್ಕೆ ಪ್ರಾಣವನ್ನು ಪೂಜಿಸಿ, ಲಿಂಗದಲ್ಲಿ ಪ್ರಾಣವನ್ನು ಅರ್ಪಿಸಿ ಒಂದಾಗಿಸಿ ಲಿಂಗಪ್ರಾಣಿಯಾಗಿ ಬದುಕಿ ಇದ್ದಾನೆ ಲಿಂಗಭಕ್ತ. ಸಾಯುವ ಸಡಗರದಲ್ಲಿರುವ ಮಾನವಪ್ರಾಣಿ ಹುಟ್ಟು ಹೊಂದಿನಾಚೆ ಲಿಂಗಪ್ರಾಣಿಯಾಗಿ, 'ಮೃತ್ಯೋರ್ ಮಾ ಅಮೃತಂ ಗಮಯ' 'ತಮಸೋ ಮಾ ಜ್ಯೋತಿರ್ಗಮಯ' ಎಂಬ ದಿವ್ಯಾಪೇಕ್ಷೆ ಸಂತೃಪ್ತಿ ಹೊಂದಿದೆ, 'ಮಹಾಬೆಳಗಿನೊಬ್ಬುಳಿ'ಯು ಲಿಂಗಪ್ರಾಣದಲ್ಲಿ, ಪ್ರಾಣಪೂಜೆಯಲ್ಲಿ. 'ಎಮ್ಮ ಗೊಹೇಶ್ವರಲಿಂಗಕ್ಕೆ ಪ್ರಾಣಪೂಜೆಯ ಮಾಡಿ ಬಾಹ್ಯಕ್ರೀಯ ಮರೆದೆನು'—ಎಂದು ಪ್ರಭುದೇವರು ಹೇಳುವ ಮಾತಿನ ಅರ್ಥವೇನು? ಪ್ರಾಣಪೂಜೆ ನಡೆದರೆ ಬಾಹ್ಯಪೂಜಾಕ್ರಿಯೆಯನ್ನು ಬಿಡಬೇಕೆ? ಪ್ರಾಣಪೂಜೆಯಲ್ಲಿ ಬಾಹ್ಯಪೂಜೆ ಅಂತರ್ಹಿತವಾಗಿದೆ, ಪ್ರಾಣ ಲಿಂಗದಲ್ಲಿ ಇಷ್ಟಲಿಂಗ ಏಕಾಕಾರವಾಗಿದೆ ಎಂಬುದೇ ಪ್ರಭುದೇವರ ಅಭಿಪ್ರಾಯ. ಬಾಹ್ಯಪೂಜೆ ರೂಪಕ್ಕೆ ಬಂದ ಪೂಜೆ, ಪ್ರಾಣಪೂಜೆ ರುಚಿಗೆ ಬಂದ ಪೂಜೆ. ಒಂದು ಪುಷ್ಪ ಮತ್ತೊಂದು ಪರಿಮಳ. ಒಂದು ದೇಹ ಮತ್ತೊಂದು ಪ್ರಾಣ. ದೇಹವಂತವಾಗಿ ಪ್ರಾಣವಿರುವಂತೆ, ಪ್ರಾಣವಂತವಾಗಿ ದೇಹವಿದೆ. ಪ್ರಾಣಪೂಜೆಯಲ್ಲಿ ಬಾಹ್ಯಪೂಜೆ ಸನ್ನಿಹಿತವಾಗಿದ್ದರೆ, ಇಷ್ಟಪೂಜೆಯಲ್ಲಿ ಪ್ರಾಣಪೂಜೆ ಪ್ರಾಣವನ್ನು ದಯಪಾಲಿಸುತ್ತದೆ. ಲಿಂಗವು ಪ್ರಾಣವು ಸಮರಸವಾಗಿ, 'ಅಮಳ ಸೋಂಕು ತುಳುಕಿ' ಬಾಹ್ಯಕ್ರಿಯೆಯಾಗಿ, ಇಷ್ಟಲಿಂಗದ ಪೂಜೆಯಾಗಿ ಬಂದು ಉತ್ತರಿಸುತ್ತಿದೆ ಎಂದು ಇಷ್ಟ ಪ್ರಾಣಾನುಭಾವಿಯಾದ ಉರಿಲಿಂಗದೇವ ಹೇಳಿದ ಮಾತನ್ನು ಮತ್ತೆ ನೆನೆಸಿಕೊಳ್ಳಬೇಕು ನಾವಿಲ್ಲಿ.

ಅಂತರಂಗ ಬಹಿರಂಗವನ್ನು ಸಮರಸಗೊಳಿಸುವ ಪ್ರಾಣಪೂಜೆಗೆ ಪೂಜೆ ಇನ್ನೂ ಮುಗಿದಿಲ್ಲ. ಇನ್ನೂ ಒಳಗೆ ಇನ್ನೂ ಹೊರಗೆ, ಇನ್ನೂ ಆಳವಾಗಿ ಇನ್ನೂ ಎತ್ತರವಾಗಿ, ಸ್ಥೂಲಕ್ಕೆ ಸ್ಥೂಲವಾಗಿ ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ ಭಾವಬ್ರಹ್ಮದ ಬ್ರಹ್ಮಪೂಜೆಯನ್ನು ನಡೆಸಿದ್ದಾನೆ 'ತಾನು ಎಂತಿರ್ದಂತೆ ಪರಬ್ರಹ್ಮವೆ ಆಗಿ' ಇರುವ 'ಆ ಶರಣನು.' ಷಣ್ಮುಖಸ್ವಾಮಿಗಳ ಈ 'ಆ ಶರಣ'ನನ್ನು ಮತ್ತೆ ಎಚ್ಚರಿಸಿಕೊಳ್ಳಿ. ಕುಲ ಮಾನವಕುಲ, ಜಾತಿ ಮಾನವಜಾತಿಯಾದರೇನು? ಈ ಕುಲ ಈ ಜಾತಿಯ ಹೃದಯದಲ್ಲಿ

ಪರಬ್ರಹ್ಮದ ದಿವ್ಯಬೀಜ ಇದೆ. ಯಾರೂ ಬಿತ್ತದೆ ಹೃದಯದಲ್ಲಿ ನ್ಯಸ್ತವಾಗಿ ಇರುವ ಈ ಬೀಜದಲ್ಲಿ, ಶಿವಕೃಪೆಯಿಂದ ಗುರುಕಾರುಣ್ಯದಿಂದ, ಸುಜ್ಞಾನ ಸದ್ಭಕ್ತಿಯಿಂದ, ಶಿವಯೋಗ ಶಿವಪೂಜೆ ಶಿವಾಚಾರಸಂಪತ್ತನ್ನು ಮುಕ್ಕುಳಿಸುವ ಸತ್ಕ್ರಿಯೆಯಿಂದ ಅಂಕುರಿಸಿ ಪಲ್ಲವಿಸಿ ಹೂವಾಗಿ ಕಾಯಾಗಿ ಹಣ್ಣಾಗಿ ರಸವಾಗಿ, ಆಕಾಶ ಮೀರಿ ಪಾತಾಳ ಮೀರಿ, ದಶದಿಕ್ಕಿಗೆ ಮಿಕ್ಕಿ ಬೆಳೆದು ಮಹಾಂತ ವೃಕ್ಷವಾಗಿ, ಪರಬ್ರಹ್ಮದ ಪರಿಪೂರ್ಣಭವ್ಯವಾಗಿ ನಿಲ್ಲುವ ದಿವ್ಯಶಕ್ತಿ ಸಾಮರ್ಥ್ಯ ಇದೆ. ಈ ಸಾಕಾರ ಸಾಮರ್ಥ್ಯವೆ 'ಆ ಶರಣನು.' ಈ ಶರಣನೊಳಗೆ, ಈತನ ಪ್ರಾಣಪೂಜೆಯ ಇನ್ನೂ ಒಳಗೆ ನಡೆದಿರುವ ಹೃದಯಪೂಜೆಯನ್ನು ನೋಡಿ. ಯಾವ ಕೈಮುಗಿದು ನಿಂತರೆ 'ಪೂಜೆ' ಕಾಣಿಸಬಹುದು, ಹಾಗೆ ಕೈಮುಗಿದು ನಿಂತು ಪ್ರಭುಲಿಂಗದೇವರ ಭಾವ ಲಿಂಗ ಪೂಜೆ ನೋಡಿ :

> ಅನಾದಿಶರಣ ಹೃತ್ಕಮಲಮಧ್ಯದ ತೇಜೋಮಯವನೇನೆಂದುಪಮಿಸುವೆ ? ಜಲವೆ ಪದಶಿಲೆ, ಪೃಥ್ವಿಯೆ ಪಿಂಡಿಗೆ, ಆಕಾಶವೆ ಲಿಂಗ, ಸಪ್ತಸಮುದ್ರಂಗಳೆ ಪಂಚಾಮೃತ, ಮೇಘವೆ ಅಗ್ಘವಣಿಯ ಬಿಂದಿಗೆ, ಮಳೆಗಾಲವೆ ಮಜ್ಜನ, ಚಂದ್ರಮನೆ ನೊಸಲ ಗಂಧ, ನಕ್ಷತ್ರವೆ ಅಕ್ಷತೆ, ತರುಮರಾದಿಗಳೆ ಪತ್ರೆಪುಷ್ಪ, ಮೊಳಗೆ ಪಂಚಮಹಾಶಬ್ದ; ಮಾಗಿಯೆಂಬ ಪರಿಯಾಣವ ಬೆಳಗಿ, ಬೇಸಗೆಯೆಂಬ ಓಗರವ ಗಡಣಿಸಿ, ಸರ್ವಪರಿಮಳವೆಂಬ ತುಪ್ಪವನೆರೆದು, ಪರವೆಂಬ ಮೇಲೋಗರವನಿಕ್ಕಿ, ಬೆಳಗುಕತ್ತಲೆಯೆಂಬ ಕನ್ನಡವ ಕಟ್ಟಿ, ಲಿಂಗವ ಆರೋಗಣೆಯ ಮಾಡಿಸಿ, ಸುಜ್ಞಾನದಲ್ಲಿ ಕೈಗೆರೆದು, ಭಾವವೆಂಬ ವೀಳೆಯವ ಕೊಟ್ಟು, ಆನು ನೀನೆಂಬ ಅನುಲೇಪಗಂಧವ ಪೂಸಿ, ವಾಯುವೆಂಬ ವಸ್ತ್ರವನುಡಿಸಿ— ಎಲೆ ಗುಹೇಶ್ವರನೆಂಬ ಲಿಂಗ ಪರಿಪೂರ್ಣವಾಗಿದ್ದ ಬಳಿಕ ಮಜ್ಜನಕ್ಕೆರವ ಠಾವಾವುದೈ ಸಂಗನಬಸವಣ್ಣ?
>
> ವ.ಸಾ.ಸಂ. ಪು. ೪೬೮, ವ. ೧೪೩

ಲಿಂಗತೇಜ ಮಯವಾಗಿ, ಸರ್ವತಃಸಂಪ್ಲುತವಾಗಿ ಇರುವ ಅನಾದಿ ಶರಣನ ಅಂತುಪಾರವಿಲ್ಲದ ಭಕ್ತಿಯಲ್ಲಿ ನಡೆದಿರುವ ಪರಿಪೂರ್ಣಪೂಜೆ! ಈ ಪರಿಪೂರ್ಣ ಸ್ಥಲದಲ್ಲಿ ನಿಂದು ಇರುವ ಶರಣನ ಇರವು ಪರಿಪೂರ್ಣ, ಅರಿವು ಪರಿಪೂರ್ಣ, ಆನಂದ ಪರಿಪೂರ್ಣ, ಕಾಲ ಆದಿ ಅಂತವಿಲ್ಲದ, ಅಂದು ಇಂದು

ಎಂದೂ ಇಲ್ಲದ ಪರಿಪೂರ್ಣ. ಇಲ್ಲಿ ಬೇರೆ ಪೂಜೆಗೆ ಇಂಬಿಲ್ಲ, ಬೇರೆ ಪೂಜಕನಿಗೆ ಸ್ಥಳ ಇಲ್ಲ, ಬೇರೆ ಪೂಜ್ಯವಸ್ತುವಿಗೆ ತೆರಹಿಲ್ಲ. ತೆರಹಿಲ್ಲದ ಪೂಜೆ, ತೆರಹಿಲ್ಲದ ಭಕ್ತಿ. ಕುರುಹಿಲ್ಲದ ಲಿಂಗ, ತಾನಿಲ್ಲದ ಭಕ್ತ. ಇದೇ ವಚನಕಾರರು ಹೇಳುವ ಐಕ್ಯಸ್ಥಲದ ಲಿಂಗಾಂಗ ಸಾಮರಸ್ಯ. ಹಿಂದೆ ಗಣದಾಸಿ ವೀರಣ್ಣನವರು ತೋರಿಸಿದ 'ಮಹಾಲಿಂಗದ ಪೂಜೆ', ಇಲ್ಲಿ ನಿಮ್ಮ ಕಣ್ಣ ಮುಂದೆ ಬಂದು ನಿಲ್ಲುವುದು ಸಹಜ. ಲಿಂಗಕ್ಕೆ ಲಿಂಗಪೂಜೆ, ಲಿಂಗಭಕ್ತಿ ಅನಾದಿ ಸಹಜ ಎಂಬ ಮಾತನ್ನು ಅನಾದಿಶರಣ ಪೂಜೆ ಮಾಡಿ ತೋರಿಸುತ್ತಾನೆ.

೫

ನೆಲದ ಮರೆಯ ನಿಧಾನ, ಆಕಾಶದ ಮರೆಯ ನಿಧಾನ, ಸಕಲ ತತ್ತ್ವ ಭುವನ ಬ್ರಹ್ಮಾಂಡಗಳ ಮರೆಯ ನಿಧಾನ, ತನ್ನ ಮರೆಯ ನಿಧಾನವಾದ ಸಚ್ಚಿತ್ತಾನಂದ ನಿತ್ಯಪರಿಪೂರ್ಣವನ್ನು ಸುಜ್ಞಾನದಲ್ಲಿ ಕಂಡು, ಪರಮ ಪರಂಜ್ಯೋತಿಯಾದ ಸ್ವಯಂಭುಲಿಂಗವನ್ನು ಶಿವಯೋಗದಿಂದ ಸರ್ವಾಂಗ ದಲ್ಲಿ ಕೂಡಿ ಕಂಡು, ಇಷ್ಟಪ್ರಾಣಭಾವಲಿಂಗವನ್ನು ಸರ್ವಾಂಗದಲ್ಲಿ ಶಿವಾ ದ್ವೈತಭಕ್ತಿ ಉಕ್ಕಿ ಪೂಜಿಸುವ ಕ್ರಿಯೆಯಲ್ಲಿ ಕಂಡು, ಸರ್ವಾಂಗ ಲಿಂಗಾನು ಭಾವದಲ್ಲಿದ್ದರೆ ಇನ್ನೂ ಮುಗಿಯಲಿಲ್ಲ ಮರ್ತ್ಯಲೋಕದಲ್ಲಿ ಮಾನವನ ಮಹಿಮೆ. ಲಿಂಗಾನುಭಾವ ಲಿಂಗಜ್ಞಾನ ಲಿಂಗಯೋಗ ಲಿಂಗಭಕ್ತಿ ಲಿಂಗ ಪೂಜೆ 'ಕರ್ತಾರನ ಕಮ್ಮಟ'ವಾದ 'ಇಲ್ಲಿ' ನಡೆಯಬೇಕು, ಇಲ್ಲಿ ಸಲ್ಲಬೇಕು. ಜ್ಞಾನ ಯೋಗ ಕರ್ಮ ಭಕ್ತಿಮಾರ್ಗಗಳು ಎಷ್ಟೇ ಉತ್ತಮ, ಉತ್ತುಂಗ ವಾಗಿದ್ದರೂ ಅರಣ್ಯದ ಆಶ್ರಮಗಳಲ್ಲಿ, ಪರ್ವತದ ಗುಹೆಗಳಲ್ಲಿ, ಯಜ್ಞ ಯಾಗದ ಕುಂಡಗಳಲ್ಲಿ, ಗುಡಿಗುಂಡಾರ ದೇವರ ಮನೆಗಳಲ್ಲಿ ಅವು ಮುಗಿಯ ತಕ್ಕುವಲ್ಲ, ಮುಗಿಸತಕ್ಕುವಲ್ಲ. ಆಶ್ರಮ ಗವಿ ದೇವರ ಗುಡಿ ದೇವರ ಮನೆ ಗಳೆಲ್ಲ ಸಾಧನ-ಶ್ರಮ ಮಾಡುವ ಗರುಡಿಯ ಮನೆಗಳು.'ಸಾವನ್ನಕ್ಕ ಸರವ ಮಾಡಿ ಕಾದುವ ದಿನವಿನ್ನಾವುದೋ?'—ಎಂಬ ಜೀವನ ಸಂಸಾರದ ಅನುಲ್ಲಂಘನೀಯ ಪ್ರಶ್ನೆ ಜ್ಞಾನಿಗಳನ್ನು ಯೋಗಿಗಳನ್ನು, ಭಕ್ತರನ್ನು ಪೂಜಕರನ್ನು, ಸಾಧಕರನ್ನು ಸಿದ್ಧರನ್ನು ಪ್ರತಿಭಟಿಸುತ್ತದೆ ಮುಂದು ಎದ್ದು ಸೆಟೆದು ನಿಂತು. ಒಂದು ಕಾಲ ಇತ್ತು, ಅರಣ್ಯದಲ್ಲಿ ಗವಿಯಲ್ಲಿ ಇರುವ

ಕಾಲ, ಸಂನ್ಯಾಸಿಗಳಾಗಿ ಭಿಕ್ಷುಕರಾಗಿ ತಿರುಗುವ ಕಾಲ. ಸರ್ವಸಂಗ ಪರಿತ್ಯಾಗ ಮಾಡಿ, ಆತ್ಮಕಲ್ಯಾಣ ಅಥವಾ ಲೋಕಕಲ್ಯಾಣವನ್ನು ಜೀವನದ ಏಕೈಕ ಧ್ಯೇಯವೆಂದು ಭಾವಿಸಿದ್ದ ಒಂದು ಕಾಲದ ಮನೋಭಾವ ಸರ್ವಾಂಗದಲ್ಲಿ ಪಕ್ವವಾಗಿ, ಸರ್ವಾಂಗ ಸುಖವಾಗಿ, ಸರ್ವಾಂಗ ಸುಂದರ ವಾಗಿ ಬೆಳೆದ ಭಾವವೆಂದು ಹೇಳಲಿಕ್ಕೆ ಬರುವುದಿಲ್ಲ. ಈ ಏಕಾಂತ ದೃಷ್ಟಿ, ಈ ಪರಿತ್ಯಾಗದ ಮನೋಭಾವ ವಿಶ್ವೇ ಮಾನವಜೀವನಕ್ಕೆ ಸಹಜವಲ್ಲ, 'ಸ್ವಭಾವ'ವಲ್ಲ, 'ಸ್ವಧರ್ಮ'ವೂ ಅಲ್ಲ.

'....ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀಪರಿ ಯಲಿ : ಸಂಸಾರವ ಸವೆಯ ಬಳಸುವೆನು.' (ಪು. ೬೧೧, ವ. ೪.). ಮನೆ ಮಾರು ಕಟ್ಟಿಕೊಂಡು, ಹೊನ್ನು ಹೆಣ್ಣು ಮಣ್ಣು ಹಿಡಿದುಕೊಂಡು, ಬಂಧು ಬಳಗ ಮಿತ್ರ ಸಮಾಜ ದೇಶ ರಾಷ್ಟ್ರಗಳನ್ನು ಕೂಡಿಕೊಂಡು, ಅಧಿಕಾರ ವ್ಯಾಪಾರ ಉದ್ಯೋಗ ಒಕ್ಕಲುತನ ಮಾಡಿಕೊಂಡು, ಉಂಡುಟ್ಟು ಸುಖ ವಾಗಿ ಇದ್ದುಕೊಂಡು, ಸಂಸಾರವನ್ನು 'ಸವೆಯ ಬಳಸಿ' ಲೌಕಿಕದಲ್ಲಿ ಪಾರಂಗತನಾಗದೆ, ಜ್ಞಾನಿಯ ಜ್ಞಾನ, ಯೋಗಿಯ ಸಮಾಧಿ, ಭಕ್ತನ ಪೂಜೆ ಸಂಸಾರಕ್ಕೆ ನಡುಗಿ, ಆ ಹಾದಿಯೆ ಬೇಡವೆಂದು, ಅದು ತುಚ್ಛ ಕ್ಷಣಿಕ ಹೇಯವೆಂದು, ಇಲ್ಲಿ ಹಾಯದೆ ಆ ಕಡೆ ಹೋದರೆ ಏನು ಗತಿ ? ಉಳಿದವರೂ ಸಂಸಾರ ತ್ಯಾಜ್ಯವೆಂದು ಆ ಹಿರಿಯರ ಹಾದಿಯನ್ನೇ ಹಿಡಿದರೆ? ಹಿಡಿವುದಿಲ್ಲ, ನಿಜ. ಆದರೆ 'ಏಕಾಂತವೀರ'ರ ಆದರ್ಶವನ್ನು ಪರಮಾದರ್ಶವೆಂದು ಸಾಮಾನ್ಯಮಾನವರ ಮುಂದಿಟ್ಟರೆ ಅವರು ಹೇಗೆ ಬಾಳುವೆ ಮಾಡಬೇಕು ? ಬಾಳುವೆ ಬಿಡುವುದಿಲ್ಲ, ನಿಜ. ಆದರೆ ತಾವೇನೋ 'ಅಪರಾಧ' 'ಅಕೃತ್ಯ' 'ಪಾಪ' ಮಾಡುತ್ತಿದ್ದೇವೆ ಎಂದು, ಪಾಪದ ನೆಳಲ ಸಂಸಾರದಲ್ಲಿ ಬೀಳ ಬಹುದು. ಈ ಪಾಪ ಯಾರಿಗೆ?

ಲೌಕಿಕಸಂಸಾರದ ವಿಷಯದಲ್ಲಿ, ಮೊದಲು 'ಜಾಣನು ಲೌಕಿಕ ಪರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹನು....' ಎಂದು ಹೇಳುವ ನಿಜಗುಣ ಶಿವಯೋಗಿಗಳ ಮಾತು ಕೇಳಿ. ಮತ್ತೆ

೧ ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಘನವೇನೋ ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ವಿಷಯವ

ನತಿಗಳೆದಲ್ಲಿ ಫಲವೇನೋ? ಇವೆಲ್ಲವ ಕೊಂದ ಪಾಪ
ನಿಮ್ಮ ತಾಗುವುದು ಗೊಹೇಶ್ವರಾ.

ವ.ಸಾ.ಸಂ. ಪು. ೬೧೪, ವ. ೨೦

೨ ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು ;
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು !
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು ?
ಸತಿಪತಿರತಿಸುಖಭೋಗೋಪಭೋಗವಿಳಾಸವ ಬಿಟ್ಟ[ನೆ ?]
ಸಿಂಧುಬಲ್ಲಾಳನು ? ನಿಮ್ಮ ಮುಟ್ಟಿ ಪರಧನ ಪರಸತಿಯರಿ
ಗೆಳಸಿದರೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಾ !

ಅದೇ. ಪು. ೬೧೫-೬, ವ. ೨೪

೩ ಪಂಕವಿಲ್ಲದೆ ಕಮಲಕ್ಕೆ ಸುಲಲಿತವೆಂತಪ್ಪುದಯ್ಯ !
ಹೊನ್ನು ಹೆಣ್ಣು ಮಣ್ಣು ಇಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯ ?
ಕಮಲ ಪಂಕದಲ್ಲಿ ವರ್ತಿಸಿದಂತೆ ಇಹರು ನಿಮ್ಮ ಶರಣರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಅದೇ. ಪು. ೬೧೬, ವ. ೨೬

೪ ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ ; ಇವ ಮಾಡಲೇ ಬೇಕು.
ಸುಳಿವ ಸುಳುಹುಳ್ಳನ್ನಕ್ಕ ಇವ ಮಾಡಲೇಬೇಕು.
ಗೊಹೇಶ್ವರನೆಂಬ ಆತ್ಮನುಳ್ಳನ್ನಕ್ಕರ ಭಕ್ತಿಯ ಮಾಡಲೇಬೇಕು.

ಅದೇ. ಪು. ೬೧೭, ವ. ೨೯

ಸಂಸಾರ ಮಾಡಬೇಕು. ಬಸವಣ್ಣನವರು ಹೇಳುವಂತೆ ಸಂಸಾರ ವನ್ನು ಸವೆಯ ಬಳಸಬೇಕು. ಯಾವ ಸುಖ ಭೋಗ ಭಾಗ್ಯ ವಿಲಾಸವೂ ಬಳಕೆಗೆ ಹೊರತಾಗಬಾರದು. ಸಂಸಾರಸುಖದ ಯಾವುದೇ ವಾಸನೆ ಯನ್ನಿಟ್ಟುಕೊಂಡು ಸತ್ತುಹೋಗಬಾರದು. ಹಾಗಾದರೆ ಲಿಂಗದ ಹಾದಿ ಯನ್ನು ಬಿಟ್ಟು, ಕಂಡ ಜ್ಞಾನ, ಕೂಡಿದ ಯೋಗ, ಪೂಜಿಸುವ ಭಕ್ತಿಯನ್ನು ಒಳಗೆ ನಡೆಸಿಕೊಂಡು, ಹೊರಗೆ ಸಂಸಾರವನ್ನು ಬಳಸಿಕೊಂಡು ಹೋಗ ಬೇಕೆ? ಹೊರಗೊಂದು ಒಳಗೊಂದು ಇರುವುದು ಸತ್ಯದ ಹಾದಿಯಲ್ಲ, ಸತ್ಯಶರಣರ ನಿಜಪಥವಲ್ಲ. ಲೋಕಸಂಸಾರವನ್ನು ಪರಮಾರ್ಥದ ಮಾರ್ಗ

ದಲ್ಲಿಯೆ ಇರಿಸಿಕೊಂಡು, ಅನುಕೂಲಿಸಿಕೊಂಡು, ಬಲಿಸಿಕೊಂಡು, ಬೆಳೆಸಿಕೊಂಡು ಹೋಗುವುದು ಸಾಧ್ಯವಿದೆಯೆ?—ಎಂದು ಕೇಳಿದರೆ, ಸಂಸಾರವನ್ನು ಸಾಧಿಸದೆ ಹೋದರೆ, ಈ ಲೋಕವನ್ನು ಇಲ್ಲಿಯೆ ಬಿಟ್ಟು ಮೇಲು ಲೋಕಕ್ಕೆ ಹೋದರೆ, ಜ್ಞಾನ ಯೋಗ ಭಕ್ತಿ ಪೂಜೆಗಳ ಕ್ರಮವೇಕೆ, ಸಾಧನೆಯೇಕೆ ಎಂದು ಉತ್ತರ ಕೊಡುತ್ತಾರೆ ಶರಣರು. ಇಲ್ಲಿ ಬಳಸಲಿಕ್ಕೆ ಬಾರದ ಜ್ಞಾನ ಪೂಜೆಗಳನ್ನು ಏಕೆ ಮಾಡಬೇಕು? ಇಲ್ಲಿ ಸಲ್ಲಬೇಕು, ಅಂದರೆ ಅಲ್ಲಿ ಸಲ್ಲುತ್ತಾನೆ ಮಾನವಪ್ರಾಣಿ. 'ಇಲ್ಲಿ ಸಲ್ಲದವರು' ಅಲ್ಲಿಯೂ ಸಲ್ಲುವುದಿಲ್ಲ. ಅಲ್ಲಿಯನ್ನು ಇಲ್ಲಿಗೆ ತಂದು, ಇಲ್ಲಿಯನ್ನು ಅಲ್ಲಿಗೆ ಅರ್ಪಿಸಿ, 'ಇಹ ಪರ' ವೆಂಬುದನ್ನು ನಿಶ್ಶೇಷವಾಗಿ ತೊಡೆದು, ಎಲ್ಲವನ್ನು ಪ್ರಸನ್ನ ಭಕ್ತಿಯಾಗಿ ಪರಿವರ್ತಿಸುತ್ತಿರುವ ಲಿಂಗಭಕ್ತರ ರೀತಿಯನ್ನು ಸಾವಧಾನವಾಗಿ ಪರಿಶೀಲಿಸಿ ನೋಡಿ. ಇದೋ ಇಲ್ಲಿ, ಸರ್ವಾಂಗದಲ್ಲಿ ಲಿಂಗವನ್ನು ಧರಿಸಿಕೊಂಡು, ಸರ್ವಾಂಗಲಿಂಗದ ಬೆಳಗಿನಲ್ಲಿ ಎಚ್ಚತ್ತು, ಲಿಂಗಪೂಜೆ ಲಿಂಗಭಕ್ತಿಯಲ್ಲಿ ನಿರತನಾಗಿರುವ ಲಿಂಗವಂತನ ಮನೆಗೆ ಬನ್ನಿ. ಈಗಾಗಳೆ ಈತನ ಪರಿಚಯ ನಮಗಿದೆ. ಆದರೂ ಆತನ ಮನೆಯೊಳಗೆ ಹೊಲದೊಳಗೆ, ಆತನ ವ್ಯಾಪಾರ ಉದ್ಯೋಗದೊಳಗೆ, ಆತನ ತನು ಮನ ಧನ ಅರ್ಥ ಪ್ರಾಣ ಅಭಿಮಾನ ದೊಳಗೆ, ಆತನ ಹೊನ್ನು ಹೆಣ್ಣು ಮಣ್ಣಿನೊಳಗೆ, ಆತನ ಸಕಲ ಸಂಸಾರ ದೊಳಗೆ, ಆತನೊಳಗೆ ಸಾವಧಾನ ಸದ್‌ಭಕ್ತಿಯಿಂದ ಪ್ರವೇಶಮಾಡಿ ನೋಡಿ. ಆತ ಸಂಸಾರ ಹೇಗೆ ನಡೆಸಿದ್ದಾನೆ? ಲಿಂಗಪೂಜೆ ಹೇಗೆ ನಡೆಸಿದ್ದಾನೆ?

ಮನುಷ್ಯಪ್ರಾಣಿ ನಾನು ಎಂದು, ಪ್ರಾಣಿಯಲ್ಲಿ ಪ್ರಾಣಿಯಾಗಿ ಮಲಗಿ, ಅದೇ ಎಚ್ಚರವೆಂದಿರುವ ಮನುಷ್ಯನಲ್ಲಿ ಲಿಂಗೋದಯ ಪ್ರಜ್ವಲಿಸಿದರೆ ಆಗ ಆತ ಭಕ್ತ, ಆತ ಶರಣ. ನಾವು ಹಿಂದೆ ನೋಡಿದಂತೆ ಸದ್ಗುರುವಿನ ಕೃಪೆಯಿಂದ ಸದ್ಭಕ್ತನ ದೇಹ ಪ್ರಾಣ ಕರಣೇಂದ್ರಿಯವೆಲ್ಲ ಲಿಂಗದ ಮಹಾಬೆಳಗಿಗೆ ಸಿಂಹಾಸನವಾಗಿ, ಅದೇ ಬೆಳಗು ನಾನಿನ ನನ್ನ ಮನೆಯ ಮೇಲೆ, ನನ್ನ ಹೊಲದ ಮೇಲೆ, ನನ್ನ ಅರ್ಥ ಪ್ರಾಣ ಅಭಿಮಾನದ ಮೇಲೆ, ನನ್ನ ಹೊನ್ನು ಹೆಣ್ಣು ಮಣ್ಣಿನ ಮೇಲೆ ಬಿದ್ದಿದೆ. ನನ್ನವರು ನೀವು ಅವರು ಇವರು ಅದು ಇದು ಎಲ್ಲ ಅದೇ ಬೆಳಗಿನಲ್ಲಿ ಕಾಣುತ್ತಿವೆ. ನಾನಿನ

'ನನ್ನ ಸರಂಜಾಮು'ವೆಲ್ಲ ಲಿಂಗದ ಸೊಮ್ಮು, ಲಿಂಗದ ಒಡವೆಯಾಗಿ ಕಂಡು ಬರುತ್ತಿದೆ. ಲಿಂಗದ ಬೆಳಗಿನಲ್ಲಿ ಹೊಳೆದ ನಾನು ಆ ಬೆಳಗಿನ ಕಳೆಯೇ. ಚಿದ್‌ಬೆಳಗಿನ ಕಳೆಯಾದ ಈ ನಾನು, ಈ ಚಿದಂಗ ತನ್ನ ಸ್ವಸ್ವರೂಪವಾದ ಚಿದ್‌ಘನಲಿಂಗದ ಭಕ್ತಿಯ ಪೂಜೆಯಲ್ಲಿ ತೊಡಗಿದೆ. ಬೆಳಗಿನ ಈ ಪೂಜೆಯಲ್ಲಿ, ಬೆಳಗಿನ ಈ ಭಕ್ತಿಯಲ್ಲಿ ಸರ್ವಾಂಗದಲ್ಲಿ ಭಕ್ತನಾಗಿ ದೇವನ ಸೊಮ್ಮನ್ನು ಮೊದಲು ದೇವನಿಗೆ ಪೂಜಿಸುತ್ತಾನೆ, ಅರ್ಪಿಸುತ್ತಾನೆ ನಿಜಭಕ್ತ. ಆತನ 'ಒಕ್ಕ ಮಿಕ್ಕ' ಪ್ರಸಾದವನ್ನು ಆಮೇಲೆ ತಾನು ಉಪ ಭೋಗಿಸುತ್ತಾನೆ, ಲಿಂಗಭೋಗೋಪಭೋಗಿ ಎನಿಸುವ ಪ್ರಸಾದ ಜೀವಿ.

ನಾನು ನನ್ನದು ಎಂದು ಉಂಡರೆ ಅಂಗಭೋಗ. ಅಂಗಭೋಗ ಅನರ್ಪಿತ; ಅನರ್ಪಿತ ವಿಷಯಸುಖದ ಸಂಸಾರ. ನೀನು ನಿನ್ನದು ಎಂದು ಲಿಂಗಕ್ಕೆ ಕೊಟ್ಟರೆ ಲಿಂಗಭೋಗ; ಕೊಟ್ಟುಕೊಂಡರೆ ಪ್ರಸಾದ. ಸ್ವತಂತ್ರ ಸಿದ್ಧಲಿಂಗೇಶ್ವರನ ಪ್ರಸಾದಗೀತವನ್ನು ಕೇಳಿ :

ದೇವಾ, ನಿಮ್ಮ ಭಕ್ತನು ಶ್ರೋತ್ರಮುಖದಲ್ಲಿ
ಶಬ್ದಪದಾರ್ಥವ ನಿಮಗೆ ಕೊಡುವನು ;
ಆತಂಗೆ ನೀವು ಶಬ್ದಪ್ರಸಾದವ ಕೊಡುವಿರಿ.
ತನ್ನ ತ್ವಕ್ಕಿನ ಮುಖದಲ್ಲಿ ಸ್ಪರ್ಶನಪದಾರ್ಥವ ನಿಮಗೆ ಕೊಡುವನು ;
ಆತಂಗೆ ನೀವು ಸ್ಪರ್ಶನಪ್ರಸಾದವ ಕೊಡುವಿರಿ.
ನೇತ್ರಮುಖದಲ್ಲಿ ರೂಪುಪದಾರ್ಥವ ನಿಮಗೆ ಕೊಡುವನು ;
ನೀವು ಆತಂಗೆ ರೂಪುಪ್ರಸಾದವ ಕೊಡುವಿರಿ.
ಜಿಹ್ವೆಯ ಮುಖದಲ್ಲಿ ರಸಪದಾರ್ಥವ ನಿಮಗೆ ಕೊಡುವನು ;
ಆತಂಗೆ ನೀವು ರುಚಿಪ್ರಸಾದವ ಕೊಡುವಿರಿ.
ಘ್ರಾಣಮುಖದಲ್ಲಿ ಗಂಧಪದಾರ್ಥವ ನಿಮಗೆ ಕೊಡುವನು ;
ಆತಂಗೆ ನೀವು ಗಂಧಪ್ರಸಾದವ ಕೊಡುವಿರಿ.
ಇಂತು ಭಕ್ತ ಸರ್ವಪದಾರ್ಥವ ಕೊಟ್ಟರೆ,
ನೀವು ಪ್ರಸಾದವ ಕೊಡುವಿರಿ.
ಭಕ್ತಕಾಯ ಮಮಕಾಯ ಎಂಬ ನಿಮ್ಮ ವಚನ ದಿಟವಾಗಿ,

ನಿಮ್ಮ ಪ್ರಸಾದಿಯನರಿದು ಸಲಹುತಿಪ್ಪೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

ಸ್ವತಂತ್ರಸಿದ್ಧಲಿಂಗೇಶ್ವರನ ವಚನಗಳು ಪು. ೫೮, ವ. ೨೨೫

ಕಣ್ಣು ಕಿವಿ ಮೂಗು ಬಾಯಿ ತೊವಲು, ಲಿಂಗದೇವ ಉಣ್ಣುವ ಪರಿಯಾಣ ಗಳು. ಅಲ್ಲಲ್ಲಿಗೆ ಬಂದ ಅಥವಾ ತಂದ ರೂಪ ಶಬ್ದ ಗಂಧ ರಸ ಸ್ಪರ್ಶ ಪದಾರ್ಥಗಳನ್ನುಆಯಾ ಪರಿಯಾಣಗಳಲ್ಲಿ ಗಡಣಿಸಿ, ದೇವನಿಗೆ ಎಡೆಮಾಡಿ, ಆತನಿಂದ ಬಂದ ಪದಾರ್ಥವನ್ನು ಅಂದರೆ ಪ್ರಸಾದವನ್ನು ತಾನು ಉಣ್ಣು ತ್ತಾನೆ ಭಕ್ತ. ಹೊರಗಿಂದ ಬಂದ ಅಥವಾ ತಂದ ಪದಾರ್ಥವೆಲ್ಲ ನಿಮ್ಮ ಸೊಮ್ಮು, ಮೊದಲು ನಿಮಗೆ ಅರ್ಪಿತವಾಗಬೇಕು; ನಾನು ಎಂಜಲಿಸ ಬಾರದು, ಅವನ್ನು ತುಡುಕಿ ಹಿಡಿದು ನಾನು ತಿನ್ನಬಾರದು; ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ ಎಂಬ ಲಿಂಗದೆಚ್ಚರ, 'ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು ಮನವೆಂಬ ಪೀಠದ ಮೇಲೆ ಮೂರ್ತಿ ಗೊಂಡು....' (ಪು. ೩೭೨, ವ. ೨೪) ಕುಳಿತಿರುವ ಅನುಭವದೆಚ್ಚರ ಅಂದರೆ ಸಾವಧಾನ ಎಂಥದಿರಬೇಕು ಭಕ್ತನದು? ದೇವನ ಭಕ್ತನಾಗಿ ಕಿಂಕರನಾಗಿ, ಕಿಂಕರರ ಕಿಂಕರನಾಗಿ, ತೊತ್ತಿನ ತೊತ್ತು ಪಡಿದೊತ್ತಾಗಿ, 'ದಾಸೋಹಂ' ಭಾವದಲ್ಲಿ ಇದ್ದು, ದೇವನ ಸೊಮ್ಮನ್ನು, ಶಬ್ದಸ್ಪರ್ಶ ರೂಪಾದಿಗಳನ್ನು ತಾನು ತಿಂದರೆ ಹೇಗೆ? ಮನೆಯೊಡೆಯ ಮನೆಯಲ್ಲಿ ಹೊಲದಲ್ಲಿ ಅಂಗಡಿಯಲ್ಲಿ ಕಚೇರಿಯಲ್ಲಿ, ಆಳುಮಗ ಇದ್ದಲ್ಲೆಲ್ಲ ಮೂರ್ತಿಗೊಂಡಿದ್ದರೆ, ಒಡೆಯನಿಗೆಂದೆ ಮಾಡುವೆ ಒಡೆಯನಿಗೆಂದೆ ನೋಡುವೆ ದುಡಿವೆ ದುಃಖಪಡುವೆ, ಒಡೆಯನಿ ಗೆಂದೆ ಪ್ರಾಣಿಸುವೆ ಒಡೆಯನಿಗಾಗಿಯೆ ಇರುವೆನೆಂಬ ಛಲದ, ಅಚಲ ನಿಷ್ಠೆಯ ಆಳುಮಗ ತಾನಾಗಿದ್ದರೆ, ಒಡೆಯನ ಆಸ್ತಿಯಲ್ಲಿ ಒಂದು ಕಡ್ಡಿ ಕೊಂಕಬಹುದೆ? ಕೊಂಕಿದರೆ ಭಕ್ತನಲ್ಲ. ಒಡೆಯನನ್ನು ವಂಚಿಸಿ, ದೇವನ ಸೊಮ್ಮಿನ ಮುದ್ರೆಯನ್ನು ತುಡುಗುತನದಿಂದ ಒಡೆದು, ತಾನು ತಿಂದರೆ, ತನ್ನ ವಂಚಕ ಇಂಥ ಅರೆಭಕ್ತ. ಮನದ ಕೊನೆಯ ಮೇಲೆ ಮೂರ್ತಿಗೊಂಡಿರುವ ಮಹಾಲಿಂಗದೇವನನ್ನು ವಂಚಿಸಿ, 'ನಾನು' ಉಂಡರೆ ಯಾರನ್ನು ಯಾರು ವಂಚಿಸಿದರು? 'ನೆಲ ತಳವಾರ'ನಾದರೆ, ವಂಚಿಸಿ ಹೋಗಲಿಕ್ಕೆ ಕಳ್ಳನಿಗೆ ಎಡೆ ಎಲ್ಲಿದೆ? 'ಮನವರಿಯದ ಕಳ್ಳತನ' ಇಲ್ಲ

ದಿದ್ದರೆ, ಮನದೊಡೆಯುನರಿಯದ ಕಳ್ಳತನ, ವಂಚನೆ, 'ಎರಡಿಟ್ಟು' ಮಾಡು ವುದು ಸಾಧ್ಯವಿದೆಯೆ ಈ ಪ್ರಸಾದಪಥದಲ್ಲಿ?

> ಕಣ್ಣು ಮೀಸಲು ಶಿವನ. ಕೈ ಮೀಸಲು ಶಿವನ. ಕಾಲು ಮೀಸಲು ಶಿವನ.
> ನಾಲಿಗೆ ಮೀಸಲು ಶಿವನ. ಕಿವಿ ಮೀಸಲು ಶಿವನ. ನಾಸಿಕ ಮೀಸಲು ಶಿವನ.
> ತನು ಮೀಸಲು ಮನನೆಲ್ಲ ಮೀಸಲು ಶಿವನ. ಈ ಮೀಸಲು
> ಬೀಸರವೋಗದಂತಿದ್ದರೆ, ಆತನೆ ಜಗದೀಶ ಕಾಣಾ ರಾಮನಾಥಾ.
>
> ವ.ಸಾ.ಸಂ. ಪು. ೩೭೨, ವ. ೨೨

ದೇವರಿಗೆಂದು ಹಾಲು ತುಪ್ಪ ಮೀಸಲು ಹಾಕುತ್ತಾರೆ. ಅದು ನಿಮಗೆ ಗೊತ್ತಿರಬಹುದು. ಕಣ್ಣಲ್ಲಿ ಬರುವ ರೂಪದ ಪ್ರಪಂಚ, ಕೈಯಲ್ಲಿ ಮಾಡುವ ಕ್ರಿಯಾಪ್ರಪಂಚ, ಶಬ್ದ ಸ್ಪರ್ಶ ರಸ ಗಂಧಪ್ರಪಂಚವನ್ನೆಲ್ಲ ಆಯಾ ಭಾಂಡ ದಲ್ಲಿ ಶಿವನಿಗೆ ಮೀಸಲು ಹಾಕಿದ್ದಾನೆ ಶಿವನ ಭಕ್ತ. ದೇಹ ಮನದಲ್ಲಿ ಹುಟ್ಟುವ ಎಲ್ಲ ಸೋಂಕಿನ ಅನುಭವ ಎಲ್ಲ ರುಚಿಸುವ ಸುಖದುಃಖದ ಪ್ರಪಂಚ ವನ್ನೆಲ್ಲ ತನುವಿನ ಭಾಂಡದಲ್ಲಿ ಮನದ ಭಾಜನದಲ್ಲಿ ಮೀಸಲು ಹಾಕಿ, ಲಿಂಗದೇವನ ಎಡೆಗೆ ಸಲ್ಲಿಸುತ್ತಾನೆ ಸರ್ವಾಂಗ ದಾಸೋಹಿ, ಭಕ್ತ. ತನಗಾಗಲಿ ತನ್ನ ಮಡದಿ ಮಕ್ಕಳಿಗಾಗಲಿ, ಮತ್ತಾರಿಗಾಗಲಿ ಯಾವ ಕಾರಣಕ್ಕಾಗಿಯೆ ಆಗಲಿ, ಕಣ್ಣು ಕಿವಿ ಕೈ ಕಾಲು ತನು ಮನದ ಮೀಸಲು ಮುರಿಯದೆ, ಮೀಸಲುಪ್ರಪಂಚವನ್ನು 'ಮನದ ಮಹಾಲಿಂಗ'ಮೂರ್ತಿಗೆ ಸರ್ವಾಂಗ ಸದ್ಭಕ್ತಿಯಿಂದ ಸಮರ್ಪಿಸಿ ತಾನು ಉಂಡರೆ ಆತ ಭಕ್ತ, ಸರ್ವಾಂಗ ಭಕ್ತ. ಸರ್ವಾಂಗವಲ್ಲಿ ಲಿಂಗ ಬೆಳಗಿ, ಮಹಾಲಿಂಗದೆಚ್ಚರದಲ್ಲಿದ್ದು 'ಮನೆ ಯೊಡೆಯ'ನಿಗೆ ಮನೆಯೊಡವೆಯನ್ನೆಲ್ಲ, ತನು ಮನ ಧನ, ಅರ್ಥ ಪ್ರಾಣ ಅಭಿಮಾನವನ್ನೆಲ್ಲ ಉಣಿಸಿ ತಾನುಣಬಲ್ಲ ಭಕ್ತ ಲಿಂಗಕ್ಕೆ ಅಂಗವಾಗಿ ಇದ್ದು, ಲಿಂಗದ ಪ್ರಸಾದವನ್ನುಂಡು ಪ್ರಸಾದದಲ್ಲಿ ಬೆಳೆವ ಪ್ರಸಾದಕಾಯ. ಈ ಪ್ರಸಾದಕಾಯ ಅವಶ್ಯವಾಗಿ ಮಮಕಾಯ, ಅಂದರೆ ಲಿಂಗದ ಕಾಯ. ಭಕ್ತನ ಕಾಯದಲ್ಲಿ ದೇವ ಸಾಕಾರವಾಗಿ ರೂಪುಗೊಂಡಿದ್ದಾನೆ. ಭಾವಕ್ಕೆ ಲೇಪವಾದ ಜೀವಭಾವ ತೊಳೆದು, ಸರ್ವಾಂಗದಲ್ಲಿ 'ದಾಸೋಹಂ ಭಾವ' ಎಚ್ಚತ್ತು ಬದುಕಿರುವ ಭಕ್ತನಿಗೆ ಹೆಂಡತಿ ಬೇಡ, ಮಕ್ಕಳು ಬೇಡ,

ಧನ ಕನಕ ವಸ್ತ್ರ ವಾಹನಾದಿ ಭೋಗಭಾಗ್ಯವಿಲಾಸ ಬೇಡ ಎಂದು ಹೇಳುವ ಕಾರಣ ಎಲ್ಲಿ ಉಳಿಯಿತು? ಭಕ್ತನ ಈ ಸತಿ ಸುತ ಬಂಧು ಬಾಂಧವ ದೇಶ ಮಾನವ ಸಮಾಜ ರಾಷ್ಟ್ರದ ಸಂಸಾರ ಮನೆಯೊಡೆಯನಿಗೆ 'ಅರ್ಪಿತ'ವಾಗಿ ನಡೆದಿದ್ದರೆ, 'ಮೀಸಲು ಬೀಸರವೋಗದಂತೆ' ನಡೆದಿದ್ದರೆ, ಸಂಸಾರವೆ ಶೃಂಗಾರ ಭಕ್ತನಿಗೆ. ಕಣ್ಣು ನೋಡಿದರೆ ಹೆದರಿ, ಕೈ ಮುಟ್ಟಿದರೆ ಹೆದರಿ, ಕಿವಿ ಕೇಳಿ ಎಲ್ಲಿ ಅಡ್ಡದಾರಿ ಬೀಳುವುದೋ ಎಂದು ಹೆದರಿ, ದೇಹಕ್ಕೆ ಮನಸ್ಸಿಗೆ ಹೆದರಿ ಕಟ್ಟಿಹಾಕಿ, ಕೈ ಕಾಲು ಮುರಿದು ರೆಕ್ಕೆ ಹರಿದು ಕಟ್ಟಿಹಾಕಿ, ದೇಹದ ನಿಗ್ರಹ, ಇಂದ್ರಿಯ ನಿಗ್ರಹ, ಕರಣಗಳ ನಿಗ್ರಹ–ಎಂಬ 'ನಿಗ್ರಹ'ದಲ್ಲಿ ಮನುಷ್ಯನನ್ನು ಬಿಗಿದು, ಅರಿವನ್ನು ನಿರ್ವಾಣಕ್ಕೆ ಮೋಕ್ಷಸುಖಕ್ಕೆ ನಿಜಾನಂದಕ್ಕೆ ಕಳಿಸಿಕೊಟ್ಟರೆ, 'ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು ಗೊಹೇಶ್ವರಾ.' ತನ್ನ ಲಿಂಗಗಂಭೀರದಲ್ಲಿ, ಹಗಲಿರುಳಿಲ್ಲದ ಬೆಳಗಿನಲ್ಲಿ ತಾನು ಎಚ್ಚತ್ತು ಇದ್ದರೆ, ಅಲ್ಲಿಯೆ ಉಂಡುಟ್ಟು ಸುಖವಾಗಿ, ಜ್ಞಾನ ಗಂಭೀರವಾಗಿ ಭಕ್ತಿಗಂಭೀರವಾಗಿ ಪ್ರಸಾದಗಂಭೀರವಾಗಿ ಇದ್ದರೆ, ಅದು ಲಿಂಗಪ್ರಸನ್ನ ಜೀವನ, ಪ್ರಸಾದ ಜೀವನ. ಪ್ರಸಾದ ಜೀವನ ಸಂಸಾರ ಜೀವನವಲ್ಲ, 'ಭಕ್ತಕಾಯ ಮಮಕಾಯ' ಜೀವನ, ಲಿಂಗ ಜೀವನ, ದಿವ್ಯ ಜೀವನ.

ಕಾರಣವಿಲ್ಲ ಕಟ್ಟುವುದಕ್ಕೆ, ಕಿವಿ ಕಣ್ಣು ನಾಲಗೆ ಮನ ಬುದ್ಧಿ ಭಾವಗಳನ್ನು. ಬಂದ ಬಂದ ಶಬ್ದ ಸ್ಪರ್ಶಾದಿಗಳನ್ನು, ವಿಚಾರ ಭಾವ ಕಲ್ಪನೆಗಳನ್ನು ಅಲ್ಲಲ್ಲಿ ಮೀಸಲು ಹಾಕಿ ಶಿವಕ್ಕೆ, ನಿಜಗಂಭೀರ ಶಿವಲಿಂಗಕ್ಕೆ ಎಡೆಮಾಡಿಕೊಂಡು ಒಯ್ಯಲು ತಕ್ಕ ಪರಿಯಾಣ ಬಟ್ಟಲುಗಳಾಗಿರುವ ಕರಣೇಂದ್ರಿಯಗಳನ್ನು, ದೇಹ ಪ್ರಾಣಾದಿಗಳನ್ನು ಏಕೆ ನಿಗ್ರಹಿಸಬೇಕು? ಶಿವನಿಗೆ ಮೀಸಲು ಹಾಕುವಲ್ಲಿ ಇನ್ನೂ ಒಂದು ವಿಶೇಷ ರಹಸ್ಯವಿದೆ. ಕಣ್ಣು ನೋಡುತ್ತವೆ. ನೋಡಿದ ರೂಪರಾಶಿಯನ್ನು ಮೀಸಲು ಸೂಸದಂತೆ ಲಿಂಗದೇವನಿಗೊಯ್ದು ಮುಟ್ಟಿಸಬೇಕು ಕಣ್ಣು. ಆದರೆ ಕಣ್ಣಿನಲ್ಲಿ ನಾನು ಕುಳಿತು, ನಾನು ರೂಪವನ್ನು ಅರಿದು ನೋಡಿ, ಅದನ್ನು ಲಿಂಗಕ್ಕರ್ಪಿಸುವೆನೆಂದರೆ ಅದು ಲಿಂಗಭೋಗ್ಯವಲ್ಲ. ಏಕೆ? ನಾನು ಕಣ್ಣಲ್ಲಿ ನೋಡಿದ ರೂಪ ನನ್ನ ಅಥವಾ ನಾನಿನ ಎಂಜಲಾಯ್ತು. ನಾನು ನೋಡಿ ಎಂಜಲಿಸಿದ ರೂಪವನ್ನು

ಮೀಸಲು ಹಾಕಿ ನೈವೇದ್ಯಮಾಡಿದರೂ ಅದು ಲಿಂಗಾರ್ಪಿತ ಅಲ್ಲ. ಈ ವಿಷಯದಲ್ಲಿ 'ಪ್ರಸಾದ'ದ ಪರಮರಹಸ್ಯವನ್ನು ಬಲ್ಲ ಚೆನ್ನಬಸವಣ್ಣನನ್ನು ಕೇಳಿ ನೋಡಿ:

> ಕಂಗಳು ನೋಡಿದ ಪದಾರ್ಥ ಲಿಂಗಾರ್ಪಿತವಲ್ಲ.
> ಕಿವಿಗಳು ಕೇಳಿದ ಪದಾರ್ಥ ಲಿಂಗಾರ್ಪಿತವಲ್ಲ.
> ನಾಸಿಕ ಮುಟ್ಟಿದ ಪದಾರ್ಥ ಲಿಂಗಾರ್ಪಿತವಲ್ಲ.
> ಜಿಹ್ವೆ ಸೋಂಕಿದ ಪದಾರ್ಥ ಲಿಂಗಾರ್ಪಿತವಲ್ಲ.
> ತನು ಸೋಂಕಿದ ಪದಾರ್ಥ ಲಿಂಗಾರ್ಪಿತವಲ್ಲ.
> ಸಂಕಲ್ಪ ವಿಕಲ್ಪ ವಿರಹಿತನಾಗಿ, ರೂಪು ರುಚಿ ಗಂಧ ಸ್ಪರ್ಶನ ಶಬ್ದವನು-
> ಕೂಡಲಚೆನ್ನಸಂಗಯ್ಯಾ, ನೀನರಿಯಲು ಪ್ರಸಾದವೆನಗೆ.

ಲಿಂಗಲೀಲಾವಿಲಾಸ ಚಾರಿತ್ರ ಪು. ೨೩೪, ವ. ೨೧

ಈ ವಚನದ ರಹಸ್ಯವನ್ನು ಬಯಲಿಗೆ ತಂದು, ಪ್ರಸಾದತತ್ತ್ವದ ಗಂಭೀರವನ್ನು ಕಲ್ಲಮಠದ ಪ್ರಭುದೇವರು ತಮ್ಮ ಟೀಕಿನಲ್ಲಿ ಹೀಗೆ ಬೆಳಗಿ ಕೊಡುತ್ತಾರೆ:

> ತನು ಭೋಗ ವಿಷಯಸುಖಂಗಳ ಪಂಚೇಂದ್ರಿಯಂಗಳಿಂದ ತಾನರಿದು
> ಭುಂಜಿಸಿದ ಬಳಿಕ ಲಿಂಗಕ್ಕೆ ಅರ್ಪಿತವೆಂದಡೆ, ಅದು ಲಿಂಗಕ್ಕೆ
> ಅರ್ಪಿತವಾಗದು.
> ಅಂತು ಲಿಂಗಕ್ಕೆ ಅರ್ಪಿತವಾಗದಾಗಿ ಪ್ರಸಾದವಿಲ್ಲ. ಅಂತು ಇಂದ್ರಿಯ-
> ಮುಖಂಗಳಲ್ಲಿ ಬಂದ ಪದಾರ್ಥಂಗಳು ಲಿಂಗಕ್ಕೆ ಅರ್ಪಿತವಾಗದು.
> ಆಯಿತ್ತೆಂಬ ಸಂಕಲ್ಪ ವಿಕಲ್ಪವಿಲ್ಲದೆ, ತನು ಮನ ಪ್ರಾಣೇಂದ್ರಿಯಂಗಳೆಲ್ಲಾ
> ಲಿಂಗವೆಯಾಗಿ, ಸರ್ವಸುಖಂಗಳ ಲಿಂಗವೆ ಅರಿದು ಭೋಗಿಸುತ್ತಿಪ್ಪ
> ಲಿಂಗದ ಮರ್ಮವ ತಿಳಿದು, ಅಭಿನ್ನಭಾವ ಘಟಿಸಿದ ಶರಣಂಗೆ
> ಪ್ರಸಾದ ಸಾಧ್ಯವಾಯಿತ್ತು....

ಇಲ್ಲಿ ಮತ್ತೆ ನೆನೆಸಿಕೊಳ್ಳಿ, 'ಭಕ್ತಕಾಯ ಮಮಕಾಯ' ಎಂಬ ಮಾತನ್ನು. 'ಅಂಗೇಂದ್ರಿಯ ಕರಣ ಹರಣದಲ್ಲಿ ಲಿಂಗವ ಧರಿಸಿ ಲಿಂಗಾಂಗಿಯಾದನಯ್ಯಾ ನಿಮ್ಮ ಶರಣ' ಎಂದು ಹೇಳಿ, ಘ್ರಾಣ ಲಿಂಗದ ಘ್ರಾಣ, ಜಿಹ್ವೆ ಲಿಂಗದ ಜಿಹ್ವೆ, ಲಿಂಗದ ತ್ವಕ್ಕು, ಲಿಂಗದ ಶ್ರೋತ್ರ, ಲಿಂಗದ ಮನ

ಶರಣನಿಗೆ ಆದ ಪರಿಯನ್ನು ಸ್ವತಂತ್ರಸಿದ್ಧಲಿಂಗೇಶ್ವರನು ಹಿಂದೆ ವಿವರವಾಗಿ ಹೇಳಿದ ಮಾತನ್ನೂ ಮತ್ತೊಮ್ಮೆ ನೆನೆಸಿಕೊಳ್ಳಿ. ಶರಣನ, ಅಥವಾ ಲಿಂಗಕ್ಕೆ ಅಂಗವಾದ 'ಮಮಕಾಯ' ಭಕ್ತನ ಕಣ್ಣಿನ ಬಾಗಿಲಲ್ಲಿ ಕುಳಿತು ನೋಡುವವರಾರು? ಕಿವಿಯ ಬಾಗಿಲಲ್ಲಿ ಯಾರು ಕುಳಿತು ಕೇಳುತ್ತಿದ್ದಾರೆ? ನಾಲಗೆಯ ಮುಖದಲ್ಲಿ ರುಚಿಸುವ ಅರಿವು ಯಾರದು? ಸಂಚರಿಸುವ ಮನದ ಒಳಬಾಗಿಲಲ್ಲಿ, ವಿಚಾರಿಸುವ ಬುದ್ಧಿಯ, ಭಾವಿಸುವ ಭಾವದ ಮಹಾದ್ವಾರದಲ್ಲಿ ಇದ್ದುಕೊಂಡು ಕರಣೇಂದ್ರಿಯಗಳೊಳಗೆ ಹಾಯ್ದಾಡಿ ಹೊರಗಿನ ಸೋಂಕು ಸಂಬಂಧಗಳನ್ನು ಒಳಗೆ ಎಡೆಮಾಡಿಕೊಳ್ಳುತ್ತಿರುವ ಅರಿವಿನ ಮೂರ್ತಿ ಯಾರು? ನಾನೋ, ಲಿಂಗವೋ? ಚೆನ್ನಬಸವಣ್ಣನವರು ಹೇಳುವಂತೆ ನಾನರಿದರೆ, ನಾನಿದ್ದರೆ ಅರ್ಪಿತ ಲಿಂಗಕ್ಕಿಲ್ಲ, ಪ್ರಸಾದ ಭಕ್ತನಿಗಿಲ್ಲ. ನಾನು ಅರಿದು ಭುಂಜಿಸಿದರೆ ಅನರ್ಪಿತ, ಅಂಗಭೋಗ ಅನರ್ಪಿತ. ನೀನರಿದು ಭುಂಜಿಸಿದರೆ ಅರ್ಪಿತ, ಲಿಂಗಭೋಗ ಪ್ರಸಾದ. ಜಗತ್ತನ್ನು ಉಣ್ಣಬೇಕು ತಿನ್ನಬೇಕು, ನೋಡಬೇಕು ಕುಡಿಯಬೇಕು. 'ಉಣಲಾಗದು' ಎಂಬ ಶಾಸ್ತ್ರ ಇಲ್ಲ 'ಲಿಂಗವಂತ'ನಿಗೆ. ಆದರೆ ಲಿಂಗವಂತನಾಗಿ ಲಿಂಗಕ್ಕೆ ಉಣಿಸಿ ಲಿಂಗವಂತನಾಗಿ ಉಣಬೇಕು ಎಂಬುದೇ ಲಿಂಗದ ಶಾಸ್ತ್ರ.

ಲಿಂಗಶರಣನಿಗೆ ಲಿಂಗದ ಎಚ್ಚರ ಮೈತುಂಬ. ನೋಡುವ ಕಣ್ಣಲ್ಲಿ ಕೇಳುವ ಕಿವಿಯಲ್ಲಿ, ನೆನೆವ ಮನದಲ್ಲಿ ವಿಚಾರಿಸುವ ಬುದ್ಧಿಯಲ್ಲಿ, ಪ್ರಾಣಿಸುವ ಪ್ರಾಣದಲ್ಲಿ ಭಾವಿಸುವ ಭಾವದಲ್ಲಿ ಲಿಂಗದ ಎಚ್ಚರ. ಲಿಂಗಕ್ಕೆ ಕಾಯವಾದ ಭಕ್ತನಲ್ಲಿ ಕರಣೇಂದ್ರಿಯಗಳ ಮುಖವಾಗಿ ಹೊರಗಿಲ್ಲದ ಹೊರಗೆ ಬಂದರೆ ಲಿಂಗದೇವ, ಒಳಗಿಲ್ಲದ ಒಳಗೆ ನಡೆದರೆ ಲಿಂಗದೇವ. ಈ ದೇವನಿಗೆ 'ಉಣಲಾಗದು' ಎಂಬ ನಿಷೇಧದ ನಿಗ್ರಹವಿಲ್ಲ; ಈ ದೇವನುಂಡು ಕೊಟ್ಟ, ಉಂಡು ಬಿಟ್ಟ ಶೇಷ ಪ್ರಸಾದವನ್ನು 'ಉಣಲಾಗದು' ಎಂಬ ನಿಗ್ರಹ ದೇವನಿಗೆ ದೇವಾಲಯವಾಗಿ ಇರುವ ದೇವಭಕ್ತನಿಗಿಲ್ಲ. ಲಿಂಗಭೋಗೋಪಭೋಗದಲ್ಲಿ, ಲಿಂಗಪ್ರಸಾದದ ಆರೋಗಣೆಯಲ್ಲಿ ವಿಧಿನಿಷೇಧವಿಲ್ಲದಿರಲು ಇನ್ನೂ ಒಂದು ಘನಕಾರಣವಿದೆ. ಲಿಂಗದ ನೆಲದಲ್ಲಿ ಹುಟ್ಟಿ ಬೆಳೆದ ಆಕಾಶ, ಲಿಂಗದಲ್ಲಿ ಅಂಕುರಿಸಿ ಪಲ್ಲವಿಸಿ ಹಬ್ಬಿರುವ ತೇಜ ವಾಯು ಜಲ ಭೂಮಿ.

ಇಲ್ಲಿ ಬೆಳೆದ ಯಾವುದೇ ಲಿಂಗದ ಬೆಳಸನ್ನು ಲಿಂಗಕ್ಕೆ ಏಕೆ ಅರ್ಪಿಸ ಬಾರದು? ಲಿಂಗದೇವ ಏಕೆ ಅರ್ಪಿಸಿಕೊಳ್ಳಬಾರದು? ಹೀಗೆ ದೇವನಿಗೆ ದೇವನ ಬೆಳೆಯನ್ನು ಸಮರ್ಪಣಮಾಡಿ, ದೇವನ ಬಾಗಿಲುಗಾಹಿಯಾಗಿ ರುವ ಭಕ್ತ, ದೇವನಿಂದ ಬಂದ ವಿಶ್ವಪ್ರಸಾದವನ್ನು ಏಕೆ ಉಪಭೋಗಿಸ ಬಾರದು? 'ಲಿಂಗಸಂಗತತ್ಪರಶರಣಂಗೆ ಸರ್ವವಿಧ ಭೋಗಸುಖಂ' ಎಂದು ಮಗ್ಗೆಯ ಮಾಯಿದೇವರ ವಾಕ್ಯ 'ಶಿವಾಧವ'ನ ಬ್ರಹ್ಮಸೂತ್ರವೆ. ಆದರೆ ಭಕ್ತನಲ್ಲಿ 'ನಾನು' ನಷ್ಟವಾಗಿ, ಲಿಂಗ ದೃಷ್ಟವಾಗಿ, ಭಾವದಲ್ಲಿ ಎಳ್ಳನಿಸು ಭ್ರಮೆಯಿಲ್ಲದೆ ಅಖಂಡ ಬೆಳಗಾಗಿರುವ ಲಿಂಗಸ್ಥಲದಲ್ಲಿ, ಲಿಂಗದ ನಾಡಿನಲ್ಲಿ ತಾನಿದ್ದು, ಲಿಂಗದ ನಾಡಿನಲ್ಲಿ ಜಗತ್ ಪ್ರಪಂಚವೆಲ್ಲ ಲಿಂಗ ಪ್ರಸನ್ನವಾಗಿದ್ದು, ಅಲ್ಲಿಯ ಬೆಳೆಯನ್ನು ಲಿಂಗಯ್ಯನಿಗರ್ಪಿಸಿ, ಆತನ ಪ್ರಸಾದವನ್ನೇ ಉಂಡು ಉಟ್ಟು ಹಾಸಿ ಹೊದೆದುಕೊಂಡಿರುವ ಭಕ್ತಿ, ಪ್ರಸಾದೈಕನಿಷ್ಠೆ, 'ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ' ಎಂಬ ಪ್ರಸಾದಾವಧಾನ ಭಕ್ತನ ಸರ್ವಾಂಗದಲ್ಲಿ 'ಅನಿಮಿಷಲಿಂಗ'ವಾಗಿ ಎಚ್ಚರದಲ್ಲಿರಬೇಕು. ಲಿಂಗಕ್ಕೆ ಅಂಗವಾಗಿರುವ ದೇವಭಕ್ತ ದೇವನಿಗಾಗಿ ಕೊಯ್ದು ಒಯ್ಯುತ್ತಿರುವ ಲಿಂಗದ 'ಬೆಳೆ ಭೂಮಿ'ಯಲ್ಲಿ ಅಡ್ಡಾಡಿ ನೋಡಿ:

> ಇಪ್ಪತ್ತೊಂದು ಯುಗದವರೆಲ್ಲರು ಲಿಂಗವ ಪೂಜಿಸಿ,
> ದೃಷ್ಟವಾವುದು ನಷ್ಟವಾವುದೆಂದರಿಯದೆ, ಭಾವಭ್ರಮಿತರಾದರು,
> ಜೀವಸಂಕಲ್ಪಿತರಾದರು. ಜೀವನಾಹುತಿಯೆನೆ ಲಿಂಗಾರ್ಪಿತವೆಂಬುವರು,—
> ಭವದ ಬಳ್ಳಿಯ ಹರಿಯಲರಿಯರಾಗಿ. ಇಂತಹರೆ ಭಕ್ತರು?
> ಇಂತಹರೆ ಪ್ರಸಾದಿಗಳು? ಅಲ್ಲಲ್ಲ ಕೇಳಿ ಭೋ! ಭಕ್ತನ ಮಹಿಮೆ
> ಯನು, ಪ್ರಸಾದಿಯ ಘನವನು. ಪೃಥ್ವಿಯ ಸಾರದಲಾದ ಪದಾರ್ಥವ
> ಲಿಂಗಕ್ಕೆ ಕೊಡಬಾರದ ಭಾಷೆ. ಅಪ್ಪುವಿನಿಂದ ಲಿಂಗಕ್ಕೆ
> ಮಜ್ಜನಕೆರೆಯದ ಭಾಷೆ.
> ತೇಜದಿಂದಲಾದ ನಿವಾಳಿಯ ಲಿಂಗಕ್ಕೆತ್ತಬಾರದ ಭಾಷೆ.
> ವಾಯುವಿನಿಂದಾದ ಪರಿಮಳವ ಲಿಂಗಕ್ಕೆ ನಿವೇದಿಸಬಾರದ ಭಾಷೆ.
> ಆಕಾಶದಿಂದಾದ ಶೂನ್ಯವ ಲಿಂಗಕ್ಕೆ ಭಾವಿಸಬಾರದ ಭಾಷೆ.
> ಅದೆಂತೆಂದೊಡೆ: ಮತ್ತೊಂದು ಪೃಥ್ವಿ ಉಂಟಾಗಿ ಮತ್ತೊಂದಪ್ಪು
> ಉಂಟಾಗಿ ಮತ್ತೊಂದು ತೇಜ ಉಂಟಾಗಿ ಮತ್ತೊಂದು ವಾಯು ಉಂಟಾಗಿ

> ಮತ್ತೊಂದು ಆಕಾಶ ಉಂಟಾಗಿ, ಇಂತಿವರಲ್ಲಿ ಉಂಟಾದ ಪದಾರ್ಥಪ್ರ
> ವ್ಯಂಗಳ ಲಿಂಗಕ್ಕೆ ನೀಡಿ ಮಾಡುವದೆ ಭಕ್ತಿ. ಇದು ಕಾರಣವಾಗಿ
> ಕೂಡಲ ಚೆನ್ನಸಂಗಯ್ಯ, ಅರ್ಪಿತದ ಮುಖವ ನಿಮ್ಮ ಶರಣರೆ ಬಲ್ಲರು,
> ನೀವೆ ಬಲ್ಲಿರಿ. ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ.
>
> ವ.ಸಾ.ಸಂ.ಪು. ೩೭೧, ವ. ೧೪

ಎಲ್ಲಿದೆ ಮತ್ತೊಂದು ಪೃಥ್ವಿ? ಎಲ್ಲಿದೆ ಮತ್ತೊಂದು ಅಪ್ಪು? ಮತ್ತೊಂದು ತೇಜ ವಾಯು ಆಕಾಶ? ಇಲ್ಲಿ ಉಂಟಾಗುವ, ಇಲ್ಲಿ ಬೆಳೆದು ನಿಲ್ಲುವ ಪದಾರ್ಥ ದ್ರವ್ಯ! ಅವು ಹೇಗಿವೆ? ಈ ಪದಾರ್ಥ ದ್ರವ್ಯಗಳನ್ನು ಲಿಂಗಕ್ಕೆ ನೈವೇದ್ಯ ಮಾಡಿ ತಾನು ಉಣ್ಣುವ ಭಕ್ತಿ ಯಾವ ಭಾವದಲ್ಲಿ ಬೆಳೆದು ನಿಂತಿದೆ? 'ನಿಮ್ಮ ಶರಣರೆ ಬಲ್ಲರು. ನೀವೆ ಬಲ್ಲಿರಿ.'

ಭಕ್ತ ನಡೆದಾಡುವುದು ನೆಲದ ಮೇಲೆ, ಲಿಂಗಕ್ಕೆ ಸಲುವಳಿಯಾಗುವ ಪೂಜೆಯು ನೆಲದ ಮೇಲೆ. ಭಕ್ತ ಮನೆ ಕಟ್ಟಿಕೊಂಡಿರುವುದು ಆಕಾಶದಲ್ಲಿ, ಲಿಂಗದ ಪೂಜೆ ಅರ್ಪಣ ಲಿಂಗಾಂಗ ಸಾಮರಸ್ಯ ಅಖಂಡವಾಗಿ ನಡೆದಿರುವ ಚಿದ್‌ಬಯಲಲ್ಲಿ. ಎಲ್ಲ ಭೋಗ ಎಲ್ಲ ಸುಖ ಎಲ್ಲ ರಸವಿಲಾಸ ಎಲ್ಲ ಪೂಜೆ ಎಲ್ಲ ಭಕ್ತಿ ನಡೆದಿರುವುದು ಇದೇ ಲಿಂಗದ ಮಹಾಮನೆಯ ಮುಂದಣ ಬೆಳಗುವ ಬಯಲಲ್ಲಿ. ಲಿಂಗ ಪ್ರಸನ್ನವಾಗಿರುವ ಈ ಬಯಲಲ್ಲಿ ಭೂತ ಬ್ರಹ್ಮಾಂಡದ 'ಭೂತ' ಚೆದುರಿ ಹೋಗಿ, ಉಳಿದಿರುವುದು ಚಿದ್‌ಬ್ರಹ್ಮಾಂಡ. ಆಕಾಶ ಲಿಂಗಪ್ರಸನ್ನವಾಗಿ, ಲಿಂಗಗಂಭೀರವಾಗಿದೆ. ಪ್ರಕಾಶಕೋಟಿ ಲಿಂಗಪ್ರಸನ್ನವಾಗಿ, ಲಿಂಗಪ್ರಕಾಶದ ಗಂಭೀರವನ್ನು ಬೆಳಗುತ್ತಿದೆ. ಗಾಳಿ ಲಿಂಗಪ್ರಸನ್ನವಾಗಿ, ಲಿಂಗಗಂಭೀರಗತಿಯಲ್ಲಿ ಆಡ್ಡಾಡುತ್ತಿದೆ. ನೀರು, ಅದೂ ಪ್ರಸನ್ನವಾಗಿ, ಲಿಂಗದ ಗಂಭೀರದಲ್ಲಿ ಹರಿಯುತ್ತಿದೆ. ನೆಲವೂ ಲಿಂಗ ಪ್ರಸನ್ನವಾಗಿ, ಲಿಂಗದ ನೆಲವಾಗಿ ಹೊತ್ತುಕೊಂಡು ನಿಂತಿದೆ ಎಲ್ಲ ಸಂಪತ್ತನ್ನು. ಇದೋ ಈ ಸೀಮೆಯಲ್ಲಿಗೆ ಎಚ್ಚತ್ತು ಬಂದು, ಉಂಡುಟ್ಟು ಸುಖವಾಗಿದ್ದಾನೆ ಲಿಂಗಭಕ್ತ, ಅಥವಾ ಲಿಂಗದ ಆಶ್ರಯದಲ್ಲಿರುವ ಲಿಂಗ ಶರಣ.

ಉಣಬೇಕು ಉಡಬೇಕು, ಇಡಬೇಕು, ತೊಡಬೇಕು, ಎಲ್ಲ ಸುಖವಾಗಿ ಇರಬೇಕು. ಆದರೆ 'ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ'

ಎಂಬ ಪ್ರಸಾದ ಸೂತ್ರವನ್ನು ಮರೆದು ನಿಮಿಷ ನಿಮಿಷಾರ್ಧವಿರಲಾಗದು ನಿಜಭಕ್ತ. ಉಂಡುಟ್ಟು ಸುಖವಾಗಿರಬೇಕು—ಇದರ ಪೂರ್ಣ ಅರ್ಥ ಕಾಯ ಕಷ್ಟಮಾಡಿ ಹೊಡೆದು ದುಡಿಯಬೇಕು ಉಣಬೇಕು ಎಂದು. ದುಡಿಯದೆ ದುಃಖಪಡದೆ ಅನ್ಯರ ಕಾಯಕಷ್ಟವನ್ನು, ಕಷ್ಟದ ಫಲವನ್ನು ನಾನು ನನ್ನ ದೇವರಿಗೆ ಕೊಟ್ಟು, ಅಲ್ಲಿಂದ ಬಂದ ಪ್ರಸಾದವನ್ನು ನಾನು ಉಪಭೋಗಿಸು ತ್ತೀನೆ ಎಂದು, ದೇವರಲ್ಲಿಗೆ ಅನ್ಯರ ಸೊಮ್ಮನ್ನು ಕೊಂಡೊಯ್ದರೆ, ಅದು ಲಿಂಗದೇವ ಒಪ್ಪದ ಮಾತು, ಆ ಸೊಮ್ಮು ಆ ಪದಾರ್ಥ ದೇವನಿಗೆ ಎಂದೂ ಅರ್ಪಿತವಾಗದು. ಅರ್ಪಿತವಾಗದ ಪದಾರ್ಥ ವಿಷಯ ಪದಾರ್ಥ, ಲಿಂಗ ಪ್ರಸಾದವಲ್ಲ ಎಂಬುದು ನಿಮಗೆ ಗೊತ್ತೇ ಇದೆ. ಲಿಂಗದಿಂದ ಬಂದ ಪ್ರಸಾದಕ್ಕಲ್ಲದೆ ಬಾಯ್ದೆರೆದರೆ ಕಂದೆರೆದರೆ ಕಿವಿದೆರೆದರೆ, ಮನದ ಆಸೆ ಬುದ್ಧಿಯ ವಂಚನೆ ಭಾವದ ಬಯಕೆ ಬಾಯ್ದೆರೆದರೆ, ಅದೋ ಅಲ್ಲಿಯೆ ಭಕ್ತಿಗೆ 'ಮುಕ್ಕು' ಬಂದಿದೆ, ಅಲ್ಲಿಯೆ ತನ್ನ ಲಿಂಗದೆಚ್ಚರಕ್ಕೆ ನಿದ್ರೆ ಬಂದಿದೆ, ತನ್ನ ನಿರ್ಮಲ ಸುಜ್ಞಾನಕ್ಕೆ ಕತ್ತಲೆ ಕವಿದುಕೊಂಡು ಬಂದಿದೆ. ಕಾಡಿ ಬೇಡಿ ವಂಚಿಸಿ ಮೋಸಮಾಡಿ ಸುಲಿದುಕೊಂಡು ಬಂದ ದ್ರವ್ಯ ಪದಾರ್ಥವನ್ನು ದೇವನಿಗೆ ಮೋಸಮಾಡಿ ನೀಡುವೆನೆಂದರೆ, ಕೊಡದಲ್ಲಿ ಕತ್ತಲೆ ತುಂಬಿ ಕೊಂಡು ಸೂರ್ಯನಿಗೆ ಉಣಬಡಿಸುವೆನೆಂಬ ಸಾಹಸವೆ. ಇಂಥ ಹುಚ್ಚು ಭಕ್ತನಿಗೆ ಹೊಲ್ಲ. ನುಲಿಯಚಂದಯ್ಯನ ವಿಚಾರವನ್ನು ಕೇಳಿ. ಈ ವಿಷಯ ದಲ್ಲಿ:

> ಕಂದಿಸಿ ಕುಂದಿಸಿ, ಬಂಧಿಸಿ ನೋಯಿಸಿ, ಕಂಡಕಂಡವರ ಬೇಡಿ ತಂದು,
> ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗಕ್ಕೆ
> ನೈವೇದ್ಯ ಸಲ್ಲದು. ತನು ಕರಗಿ ಮನ ಬಳಲಿ ಬಂದ ತೆರದನುವ
> ನರಿದು, ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವೆ
> ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು
> ಲಿಂಗಕ್ಕರ್ಪಿತವಲ್ಲದೆ, ದುರಾಶೆಯಿಂದ ಬಂದುದು ಅನರ್ಪಿತ.
> ಇದು ಕಾರಣ ಸತ್ಯಶುದ್ಧಕಾಯಕದ ನಿತ್ಯದ್ರವ್ಯವಾದರೆ
> ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ.

ವ.ಸಾ.ಸಂ. ಪು. ೨೬೨, ವ. ೬೨

ಕಷ್ಟಪಟ್ಟು ದುಡಿದು, 'ತನು ಕರಗಿ' ನೀರಾಗುವಂತೆ ದುಡಿದು, 'ಮನ ಬಳಲಿ' ಬೆಂಡಾಗುವಂತೆ ದುಡಿದು ಬಂದ ಪಡಿಪದಾರ್ಥ ಲಿಂಗಕ್ಕೆ ನೈವೇದ್ಯವಾಗ ಬಲ್ಲುದಲ್ಲದೆ ಮೈಯಲ್ಲಿ ಕಳ್ಳತನ ಮಾಡಿ ಮೈಯುಳಿಸಿಕೊಂಡು, ಅನ್ಯರ ಸೊತ್ತನ್ನು ವಂಚಿಸಿ ತಂದ ದ್ರವ್ಯ ಪದಾರ್ಥ ದೇವನಿಗೆ ಸಲ್ಲಲಾರದು. ಇಷ್ಟೇ ಅಲ್ಲ ತನಗಾದರೂ ಸಲ್ಲುವುದೆ? ತನ್ನ ಹೊಟ್ಟೆಗಾದರೂ ಹತ್ತುವುದೆ ಅನ್ಯರ ಬೆವರಿನಲ್ಲಿ ಬೆಳೆದ ಅನ್ನ ಫಲ? ತಾನು ದುಡಿದರೆ ತನಗೆ ಉಣ್ಣುವ ಅಧಿಕಾರ, ತನಗೆ ನೀಡಿ ಮಾಡುವ ಅಧಿಕಾರ. ಪರವಧುವಿನಲ್ಲಿ ಮನವೆಳಸಿದರೆ ಹೇಗೆ ಪಾಪ, ಹಾಗೆ ಪರದ್ರವ್ಯದಲ್ಲಿ ಮನವೆಳಸಿ ಕೈ ಮುಟ್ಟಿಕೊಂಡರೆ ಅದೂ ಪಾಪ, ಮಹಾಪಾಪ—ಎಂಬ ಸತ್ಯಶ್ರಮದ ಶುದ್ಧಪ್ರಜ್ಞೆ ಇನ್ನೂ ಎಚ್ಚರವಾಗಿಲ್ಲ 'ನಮ್ಮ' ಜಾತಿಯಲ್ಲಿ. ಅನ್ಯರ ಧನವನ್ನು ತಿನ್ನುವುದಕ್ಕೆ 'ಜಾಣತನ'ವೆಂದು ಹೆಸರಿಟ್ಟಿದ್ದೇವೆ ನಾವು. ಅನ್ಯರನ್ನು ದುಡಿಸಿಕೊಂಡರೆ 'ದೊಡ್ಡವ'ರೆಂದು ಬಿರುದು ಕೊಡುತ್ತೇವೆ ನಾವು. ಮನುಷ್ಯಕುಲದ ಜೀವನದಲ್ಲಿ ದುಡಿಯದೆ ದುಃಖಪಡದೆ ಕಾಯಕಷ್ಟಮಾಡದೆ ಪಕ್ವಾನ್ನ ಉಂಡು, ವಿಲಾಸ ಸುಖದಲ್ಲಿ ಸುಳಿದು, ಸುಪ್ಪತ್ತಿಗೆಯಲ್ಲಿ ಮಲಗಿ, ಮೇಲಾಗಿ ಮೆರೆದರೆ ಅದೇ 'ಮಹಾವಿದ್ಯೆ', ಅದೇ 'ಬ್ರಹ್ಮವಿದ್ಯೆ', ಅದೇ 'ಸಾ ಕಾಷ್ಠಾ ಸಾ ಪರಾಗತಿಃ' ಆಗಿದೆ ನಮ್ಮ ಕುಲಕ್ಕೆ. ಆದರೆ ಇದರಲ್ಲಿ ನಿಜವಾದ ಜಾಣ್ಮೆ ಇದೆಯೆ? ಸತ್ಯವಾದ ಸುಖವಿದೆಯೆ? ಶಾಶ್ವತವಾದ ಸಮಾಜ ಸ್ವಾಸ್ಥ್ಯವಿದೆಯೆ? ಎಲ್ಲರೂ ಇದೇ ವಿದ್ಯೆಯ ಹಾದಿಯನ್ನು ಹಿಡಿದು ಮುಂದೆ ಮುಂದೆ ನಡೆದರೆ, ಅವರು ಮುಟ್ಟುವ ಊರು ಎಂಥದಿರಬಹುದು? ನನ್ನ ಕಲ್ಪನೆ ಕುಂಟುತ್ತದೆ. ನಿಮ್ಮದು?

'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತ'— ಇದು ಶರಣರ ಕಾಯಕಸೂತ್ರ. ಕೈ ದುಡಿಯಬೇಕು, ಕಾಲು ದುಡಿಯಬೇಕು, ಮೈ ಮುರಿದು ದುಡಿಯಬೇಕು, ಹಣ್ಣು ಹಣ್ಣಾಗುವಂತೆ ದುಡಿಯಬೇಕು. ಕಣ್ಣು ಕಿವಿ ಎದೆ ನಾಲಿಗೆ ಮನ ಬುದ್ಧಿ, ಮನುಷ್ಯನ ಸರ್ವಾಂಗ ತಮತಮಗೆ ತಕ್ಕ 'ಕಾಯಕ'ದಲ್ಲಿ ನಿರುತವಾಗಿ ದುಡಿಯಬೇಕು, ನಿರ್ಧರಿಸಿ ಕೆಲಸದಲ್ಲಿ ಮುಳುಗಿರಬೇಕು. ಕಾಯಕದಲ್ಲಿ ಮುಳುಗಿ ದುಡಿದು 'ಕಾಯಕಷ್ಟ'ದಲ್ಲಿರುವ ಸುಖವನ್ನು, ಕಾಯಕದಲ್ಲಿರುವ ಕೈಲಾಸ

ವನ್ನು ಪ್ರತ್ಯಕ್ಷ ಕಾಣಬೇಕು; ಕಷ್ಟದಿಂದ ಬಂದ ಫಲವನ್ನು, ಸತ್ಯವಾದ ಶ್ರಮದಿಂದ ಶುದ್ಧವಾದ ಹೃದಯದಿಂದ ನಡೆಸಿದ ಕಾಯಕದ ಕಾರೆಯ ಸೊಪ್ಪನ್ನು, ನುಚ್ಚು ಅಂಬಲಿಯನ್ನು ಮೊದಲು ಕೊಡಬೇಕು ಲಿಂಗಕ್ಕೆ. ಮೊದಲು ನೀಡಬೇಕು, ಸರ್ವಾಂಗದಲ್ಲಿ ಲಿಂಗಸಂಬಂಧವನ್ನು ತನಗೆ ಕರುಣಿಸಿ ಕೊಟ್ಟ ಶ್ರೀಗುರುಲಿಂಗಕ್ಕೆ. ಮೊದಲು ಎಡೆ ಮಾಡಬೇಕು ನಿರಾಳ ಜಂಗಮಲಿಂಗಕ್ಕೆ. ತಾನು ಕಾಯಕ ಮಾಡಿದರೂ ತನಗೆ ಬೇಕೆಂದು, ಹೆಂಡತಿ ಮಕ್ಕಳು ಬಂಧು ಬಳಗಕ್ಕೆ ಬೇಕೆಂದು ತನುವಿನಲ್ಲಿ ಉಳಿಸಿಕೊಂಡು, ಮನದಲ್ಲಿ ಮನವನ್ನು ವಂಚಿಸಿ ಇಟ್ಟುಕೊಂಡು, ಧನದಲ್ಲಿ ಕಳವುಮಾಡಿ ಹೂಳಿಟ್ಟುಕೊಂಡು ಲಿಂಗಕ್ಕೆ ಮಾಡುವೆನೆಂದರೆ ವಂಚನೆಯ ಭಕ್ತಿ. ಅದು ತನಗೆ ಕೇಡು, ಆತ್ಮವಂಚನೆ, ಆತ್ಮಘಾತಕ. ಪರವಂಚನೆ ಅಥವಾ ಆತ್ಮವಂಚನೆಯಲ್ಲಿ ಭಕ್ತಿಯಿಲ್ಲ, ಯುಕ್ತಿಯಿಲ್ಲ.

'ಕಾಯಕವೆ ಕೈಲಾಸ', ಕಾಯಕದಲ್ಲಿ ಕೈಲಾಸ ಸ್ವರ್ಗ ನಂದನ, ಕಾಮಧೇನು ಕಲ್ಪವೃಕ್ಷ ಚಿಂತಾಮಣಿ, ಕಾಯಕದಲ್ಲಿ ಕಾಯದ ಮೋಕ್ಷ, ಆದರಲ್ಲಿರುವ ಆನಂದ ದುಡಿಯದೆ ಉಣ್ಣುವ 'ಧೀರ'ರಿಗೆ, ನಮಗೆ ಕಂಡಿಲ್ಲ. ಹೇಗೆ ಕಾಣಬೇಕು? 'ಸತಿಯರ ಸಂಗ' 'ಅತಿಶಯದ ಗ್ರಾಸ' 'ಪೃಥ್ವಿಗೀಶ್ವರನ ಪೂಜೆ'ಯನ್ನು ಹೆರರ ಕೈಯಿಂದ ಮಾಡಿಸಬೇಕೆ? ಎಂದು ಮನುಷ್ಯ ಕುಲಕ್ಕೆ 'ಸವಾಲು' ಹಾಕುತ್ತಾರೆ ದೇವರ ದಾಸಿಮಯ್ಯನವರು. ಸಂಗ ಮಾಡಿದವರಿಗೆ ಸಮರತಿಯ ಸುಖ, ಸುಗ್ರಾಸಭೋಜನ ಮಾಡಿದವರಿಗೆ ಷಡ್ರಸದ ಸುಖ. ಲಿಂಗಪೂಜೆ ಮಾಡಿದವರಿಗೆ ಭಕ್ತಿಯ ಆನಂದ. ಇವರಂತೆಯೆ ಇದೆ ಕಾಯಕದಲ್ಲಿ ಕೈಲಾಸದ ಸುಖ. ನಾನು ಹರಗಿ ನಾನು ಬಿತ್ತಿ, ನಾನು ಬೆಳೆದ ಬೆಳೆಯನ್ನು ನೋಡಿದರೆ ಯಾವ ಆನಂದದ ರಾಶಿ ನನ್ನ ಕಣ್ಣಲ್ಲಿ ಉಕ್ಕಲೇರುತ್ತದೆ? ಹರ್ಷದ ರಾಶಿ ಎಷ್ಟು ಖಂಡುಗ ನನ್ನ ಎದೆಯಲ್ಲಿ? ನಟ್ಟು ಕಡಿದು, ಕಸ ತೆಗೆದು, ಎಡೆ ಹೊಡೆದ ಕೈಯಲ್ಲಿ ಯಾವ ಕೈಲಾಸ ಹೊಳೆಯುತ್ತದೆ? ನಡೆದ ಕಾಲು ದುಡಿದ ರಟ್ಟೆಯಲ್ಲಿ, ಹರಿವ ಬೆವರು ಹಣ್ಣು ಹಣ್ಣಾದ ಮೈಯಲ್ಲಿ ಮೂಡುವ ಮೋಕ್ಷ. ಮಾಡದ ಯೋಗಿಗೆ ದುಡಿಯದ ಜ್ಞಾನಿಗೆ ಕಷ್ಟಪಡದ ದೇವರ ಭಕ್ತನಿಗೆ ಹೇಗೆ ಲಭಿಸೀತು? ನನ್ನ ಪೂಜೆಯ ಸುಖ ನನಗೆ, ನನ್ನ ರತಿಸುಖ ನನಗೆ, ನನ್ನ ಊಟದ

ಸುಖ ನನಗೆ, ನನ್ನ ಕಾಯಕಷ್ಟದ ಕಷ್ಟದಾನಂದ ನನಗೆ. ದುಡಿದ ನನ್ನ ಅನುಭವ ಈ ಆನಂದ. ನನ್ನ ಜೋಳದ ರಾಶಿಯನ್ನು ನಿಮ್ಮ 'ಜಾಣತನ' ದಿಂದ ಒಯ್ದು ನಿಮ್ಮ ಮನೆಯಲ್ಲಿ ಮಾಯಮಾಡಿ ಇಟ್ಟುಕೊಳ್ಳಬಹುದು. ಆದರೆ ನಾನು ಬೆಳೆದ ಜೋಳ, ಜೋಳದ ರೊಟ್ಟಿ ನನಗೆಷ್ಟು ಸವಿ, ನನ್ನ ಹೊಟ್ಟೆಗೆಷ್ಟು ಹಿತ, ನನ್ನ ಎದೆಗೆ ಯಾವ ಸತ್ಯ ಶುದ್ಧ ಸಂತೋಷ, ಅದು ನಿಮ್ಮ ಅನುಭವಕ್ಕೆ ಎಂದಿಗೂ ಹೊರತು.

ಸತ್ಯ ಶುದ್ಧವಾದ ಕಾಯಕ, ಒಂದು ಹಾಗ, ಒಂದು ಹಣದಷ್ಟು ದುಡಿದು ಒಂದು ಗುಂಜಿ ತೂಕ ಹೆಚ್ಚು ಪಡೆಗೆ ಆಸೆ ಮಾಡದ ಕಾಯಕ, ಶರಣರು ನಡೆದು ತೋರಿಸುವ ಸುಜ್ಞಾನ ಸದ್ಭಕ್ತಿಯ ಮಾರ್ಗದಲ್ಲಿ ಅನಿವಾರ್ಯವಾದ ಕರ್ತವ್ಯ. ಮಾನವಕುಲದ ಜಾತಿ ವರ್ಣ ಆಶ್ರಮ ಲಿಂಗ ಭೇದವನ್ನು ತೊಡೆದು ಹಾಕಿ ಎಲ್ಲರನ್ನು ಶಿವಪಥಕ್ಕೆ ಹಚ್ಚಿ, ಸತ್ಯಶಿವಕ್ಕೆ ಸುಂದರಶಿವಕ್ಕೆ ಕರೆದೊಯ್ಯಲು ಹವಣಿಸಿದ ಶರಣರು ಲಿಂಗಮುಖವಾಗಿ, ಶಿವದೇವ ಗುರಿಯಾಗಿ ಮಾಡುವ ಕಾಯಕದ ಜಾತಿಯನ್ನು ತೊಡೆದು ಹಾಕಿದರು. ಅರಸನಾಗಲಿ ಅಧಿಕಾರಿಯಾಗಲಿ, ವ್ಯಾಪಾರಿಯಾಗಲಿ ಉದ್ಯೋಗಿಯಾಗಲಿ, ಒಕ್ಕಲಿಗನಾಗಲಿ ಮೊಚ್ಚೆಗಾರನಾಗಲಿ, ಅಂಬಿಗ ನಾಗಲಿ ಹಡಪಿಗನಾಗಲಿ, ಲೇಖಕನಾಗಲಿ ಲೆಕ್ಕಿಗನಾಗಲಿ ದಾಸೋಹಕ್ಕೆ ಸಲುವಳಿಯಾಗುವ ಕಾಯಕದಲ್ಲಿ ಒಂದು ಹೆಚ್ಚು ಒಂದು ಅಧಮ ಅಲ್ಲ; ಇದನ್ನು ಮಾಡಬೇಕು ಅದನ್ನು ಬಿಡಬೇಕು ಎಂಬ ನಿಯಮ ಇಲ್ಲ. 'ಕೃಷಿಕೃತ್ಯ ಆವ ಕಾಯಕದಿಂದಾದೊಡೇನು? ತನು ಮನ ಬಳಲಿಸಿ ಗಳಿಸಿ ತಂದು, ಗುರು ಲಿಂಗ ಜಂಗಮಕ್ಕೆ ಮೆಚ್ಚಿಸಿ ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ....' (ಪು. ೨೪೫, ವ. ೧). ಈ ಸಂದರ್ಭದಲ್ಲಿ ಮೋಳಿಗೆಯ ಮಾರಯ್ಯ ಮಾಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ ಭಂಡಾರಿ ಶಾಂತರಸ, ಮಾದಾರ ಧೂಳಯ್ಯ ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣ ಮೊರನ ವೇಮಯ್ಯ, ಕದಿರ ರೆಮ್ಮವ್ವೆ ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ ವೈದ್ಯಸಂಗಣ್ಣ, ಗಾಣದ ಕನ್ನಪ್ಪ ಸುಂಕದ ಬಂಕಣ್ಣ, ಬಾಚಿ ಕಾಯಕದ ಬಸವಣ್ಣ ಸೂಜಿ ಕಾಯಕದ ರಾಮಿ ತಂದೆ—ಮುಂತಾದ ಶರಣರ ಹೆಸರನ್ನು ನೋಡಿದರೆ, ಹಿಂದೆ ಹಚ್ಚಿದ

ಅವರವರ ಕಾಯಕದ ಹೆಸರು ಸ್ಪಷ್ಟವಾಗಿ ಕಂಡುಬರುತ್ತವೆ.

ಕಾಯಕ ಬೇಕು, ಅವಶ್ಯವಾಗಿ ಬೇಕು ಅನಿವಾರ್ಯವಾಗಿ ಬೇಕು, ಶಿವಪಥದಲ್ಲಿ ನಡೆವ ಶಿವಭಕ್ತರಿಗೆ. ಧರ್ಮದ ಹೆಸರಿನಲ್ಲಿ ಭಕ್ತಿ ಜ್ಞಾನ ಯೋಗ ಅನುಭವ ಮಾಡುವೆನೆಂದು, ದೇವರ ಹೆಸರಿನಲ್ಲಿ 'ಸೋಮಾರಿ'ಯ ಪಟ್ಟ ಕಟ್ಟಿಕೊಂಡು, ಕಾಯಕಷ್ಟಕ್ಕೆ ಹೆದರಿ, ಅನ್ಯರ ಶ್ರಮದ ಫಲವನ್ನು ದೇವರಿಗೆ ಅರ್ಪಿಸಿ ನಾನು ಉಂಡು ಪ್ರಸಾದಿಯಾದೆನೆಂದರೆ ಎಲ್ಲಿದೆ ಪ್ರಸಾದ? ಎಲ್ಲಿಯ ಪ್ರಸಾದಿ? ಕಾಯಕದಿಂದ ಬಂದ ಪದಾರ್ಥ ಗುರು ಲಿಂಗ ಜಂಗಮಕ್ಕೆ ಅರ್ಪಿತ, ಅದು ಸತ್ಯ ಶುದ್ಧ ಭಕ್ತನ ನಿತ್ಯ ದಾಸೋಹ. ಗುರುವಿಗಾಗಿ ದುಡಿಯದೆ ಲಿಂಗಕ್ಕಾಗಿ ದುಡಿಯದೆ ಸುಜ್ಞಾನ ಚೈತನ್ಯ ಮೂರ್ತಿ ಜಂಗಮಕ್ಕೆ ದುಡಿಯದೆ, ಮಾಡದೆ ನೀಡದೆ 'ದಾಸೋಹಂ', ನಾನು ನಿಮ್ಮ ಆಳು ನಿಮ್ಮ ಭಕ್ತ ನಿಮ್ಮ ಲೆಂಕರ ಲೆಂಕ ಕಿಂಕರರ ಕಿಂಕರ ನೆಂದು ನುಡಿದು ನಾಲಗೆ ಸವೆದರೆ 'ದಾಸೋಹ' ಮಾಡಿದಂತಾಯ್ತೆ? ತನು ಮನ ಧನವನ್ನು, ಅರ್ಥ ಪ್ರಾಣ ಅಭಿಮಾನವನ್ನು, ಒಡೆಯರ ಒಡವೆ ಯನ್ನು ಅರ್ಪಿಸಿದಂತಾಯ್ತೆ ಒಡೆಯರಿಗೆ? ನುಡಿಯ 'ದಾಸೋಹ' ಮೈಯಲ್ಲಿ ಮಡಿದು ಮೂರ್ತಿಯಾಗಬೇಕು. ಈ ಮಾತು, ಕಾಯಕಷ್ಟಮಾಡಿ ದುಡಿಯ ಬೇಕೆಂಬ ಮಾತು ಭಕ್ತನಿಗಷ್ಟೇ ಅಲ್ಲ; ನುಲಿಯ ಚಂದಯ್ಯನ ವಿಚಾರದಂತೆ, ಗುರು ಕಾಯಕ ಮಾಡಬೇಕು, ಲಿಂಗದೇವರು ದುಡಿಯಬೇಕು, ಜಂಗಮ ಕಾಯದಲ್ಲಿ ಕಷ್ಟಪಡಬೇಕು. ಇಲ್ಲವಾದರೆ ಗುರುವಿನಲ್ಲಿ ಗುರು ಇಲ್ಲ, ದೇವರಲ್ಲಿ ಕಲ್ಲು ಅಲ್ಲದೆ ದೇವತ್ವ ಇಲ್ಲ, ಜಂಗಮದಲ್ಲಿ ವೇಷ ಇದೆ, ಜಂಗಮ ಇಲ್ಲ.

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ.
ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು.
ಜಂಗಮವಾದರೂ ಕಾಯಕದಿಂದವೆ ವೇಷದ ಪಾಶ ಹರಿವುದು.
ಗುರುವಾದರೂ ಚರಸೇವೆಯ ಮಾಡಬೇಕು.
ಲಿಂಗವಾದರೂ ಚರಸೇವೆಯ ಮಾಡಬೇಕು.
ಜಂಗಮವಾದರೂ ಚರಸೇವೆಯ ಮಾಡಬೇಕು.
ಇದು ಚಂದೇಶ್ವರಲಿಂಗದ ಅರಿವು ಕೇಳಾ ಪ್ರಭುವೆ.

ವ.ಸಾ.ಸಂ. ಪು. ೨೬೬, ವ. ೬೭

ಚಂದಯ್ಯ ಹೇಳುವ ಕಾಯಕದಲ್ಲಿ ಮತ್ತು ದಾಸೋಹದಲ್ಲಿರುವ ಲಿಂಗಪ್ರಜ್ಞೆ ದುಡಿಮೆಯನ್ನು ತ್ರಿವಿಧವೆನಿಸುವ ಲಿಂಗದಿಂದ ದುಡಿಸುತ್ತದೆ; ದಾಸೋಹ ವನ್ನು ಲಿಂಗದಿಂದ ಮಾಡಿಸುತ್ತದೆ. ದೇವನಿಗೆ ದುಡಿವುದು ದೇವರು, ದೇವನಿಗೆ ಮಾಡುವುದು ದೇವರು.

ಸತ್ಯಕ್ಕೆ ಶಿವಕ್ಕೆ, ಜ್ಞಾನಕ್ಕೆ ಅನಂತಕ್ಕೆ, ನಿತ್ಯಪರಿಪೂರ್ಣ ಅಖಂಡದ ಇರವಾದ ಲಿಂಗ, ಅರಿವಾದ ಗುರು ಆನಂದಸ್ವರೂಪವಾದ ಜಂಗಮಕ್ಕೆ ಕಾಯಕಷ್ಟ ಮಾಡಿ ದುಡಿದು, ದಾಸೋಹಭಾವದಿಂದ ನೀಡಿ ಮಾಡಿ ಅವರ ಪ್ರಸಾದವನ್ನುಂಡು ಲಿಂಗಪ್ರಸನ್ನ ಜೀವನವನ್ನು ನಡೆಸಿರುವ 'ದಾಸೋಹಿ'ಯ ಕಾಯಕದಲ್ಲಿ, ಲಿಂಗಕ್ಕೆಂದೆ ದುಡಿವ ಲಿಂಗಭಕ್ತನ ವ್ಯವಹಾರದಲ್ಲಿ ಇನ್ನೂ ಒಂದು ಮಹತ್ವದ ವಿಚಾರವಿದೆ. ಅದನ್ನು ನೋಡದೆ ನಾವು ತಿರುಗಿ ಬಂದರೆ, ಹಂಪೆಗೆ ಹೋಗಿ ವಿಜಯವಿಠ್ಠಲನ ಗುಡಿಯನ್ನು ನೋಡದೆ ಬಂದಂತಾ ದೀತು. ಲಿಂಗಭಕ್ತನ ಬಹಿರಂಗದಲ್ಲಿ ಅಂತರಂಗದಲ್ಲಿ ಸರ್ವಾಂಗದಲ್ಲಿ ಅಖಂಡಜ್ಯೋತಿರ್ಮಯ ಲಿಂಗ ನೆಲೆಗೊಂಡು, ಅಖಂಡಿತ ಪೂಜೆಯನ್ನು ಕೈಕೊಂಡು, ಭಕ್ತನ ಸರ್ವಾಂಗದಲ್ಲಿ ಲಿಂಗಮುಖವಾಗಿ ಬರುವ ಸರ್ವ ವಿಷಯ ಪದಾರ್ಥವನ್ನು ಆತನ ದೇಹ ಇಂದ್ರಿಯ ಕರಣಗಳ ಪರಿಯಾಣ ಎಡೆಬಟ್ಟಲುಗಳಲ್ಲಿ ಎಡೆ ಮಾಡಿಸಿಕೊಂಡು, ಲಿಂಗ-ತಾನು ಉಂಡು, ಲಿಂಗ ಕಾಯನಾದ ಭಕ್ತನ ಅಂಗಾಂಗದಲ್ಲಿ ಲಿಂಗ ಪ್ರಸಾದವನ್ನು ಕರುಣಿಸಿ, ಕರುಣಪ್ರಸಾದದ ಅನಂತಸುಖಾನುಭಾವದಲ್ಲಿ ಲಿಂಗಭಕ್ತನನ್ನು ಇರಿಸಿ ಕೊಂಡು ಭಕ್ತಲಿಂಗ ಇರುವಂತೆ, ಮಾನವ-ಭಕ್ತ ಲಿಂಗದೇವನಲ್ಲಿ ಸತ್ತು ಲಿಂಗಾಂಗನಾಗಿ ಬದುಕಿ ಇರುವಂತೆ, ಭಕ್ತನ ಕಾಯಕದ ಕ್ರಿಯಾಪ್ರಪಂಚ ದಲ್ಲಿಯೂ ದೇವನ ದಿವ್ಯಾನುಭಾವ ಖಂಡಿತವಲ್ಲದೆ ಹರಿಯುತ್ತಿದೆ. ಇದೋ ಇಲ್ಲಿ ಮೊದಲು ನಮ್ಮ ಮನೆಗೆ ದಯಮಾಡಿಸಿ. ನಾನು ಮಾಡುತ್ತಿರುವ 'ಕಾಯಕ'ವನ್ನು ಎತ್ತಿ ನೋಡಿ. ನಾನು ಬರೆಯುತ್ತಿದ್ದೇನೆ, ಕಲಿಸುತ್ತಿದ್ದೇನೆ, ಒಕ್ಕಲುತನ ಮಾಡಿಸುತ್ತಿದ್ದೇನೆ. ಮತ್ತೆ ಬೇರೆ ಬೇರೆ ಕೆಲಸ ಮಾಡುತ್ತಿ ದ್ದೇನೆ. ಬರೆವುದು ಯಾರಿಗೆ? ಕಲಿಸುವದು ಏಕೆ? ಒಕ್ಕಲುತನ ಯಾರ ಸಲುವಾಗಿ? ಇಂಥ ಪ್ರಶ್ನೆ ಕೇಳಲೇ ಬೇಕಿಲ್ಲ. ನಾನು ನನಗೆ ದುಡಿಯು ತ್ತೇನೆ; ಹೆಂಡತಿಗೆ ಬೇಕು ಮಕ್ಕಳಿಗೆ ಬೇಕು, ದುಡಿಯುತ್ತೇನೆ. ಬಂಧು

ಬಾಂಧವರಿಗೆ ಆಪ್ತಮಿತ್ರರಿಗೆ ಪರಿಜನ ಪುರಜನರಿಗೆ ಸರಕಾರಕ್ಕೆ ಕೊಡಬೇಕು, ಸಹಾಯ ಮಾಡಬೇಕು, ಉಪಕಾರ ಮಾಡಬೇಕು ಅದಕ್ಕೆ ದುಡಿಯುತ್ತೇನೆ. ಅವರೆಲ್ಲ ನನಗೆ ಬೇಕು, ಅಂತೆಯೆ ಅವರಿಗೆ ದುಡಿಯುತ್ತೇನೆ. ನನ್ನ ಕಾಯಕವನ್ನು ಪೂರ್ಣ ತೆರೆದು ನೋಡಿದರೆ 'ನನಗೆ ಬೇಕು' ದುಡಿಯುತ್ತಿದೆ. 'ನನಗೆ ಬೇಕು' ಎರಡು ಕೈ ಸಾವಿರ ಕೈಯಾಗಿ, ಎರಡು ಕಾಲು ಸಾವಿರ ಕಾಲಾಗಿ, ಒಂದು ತಲೆ ಸಾವಿರ ಬುದ್ಧಿಯಾಗಿ ದುಡಿಯುತ್ತಿದೆ. ದುಡಿಯದೆ ನಾನು ಅಲಸಿಯಾಗಿದ್ದರೆ, ದುಡಿದವರ ಫಲವನ್ನು ಕನ್ನಹಾಕಲು ದುಡಿಯುತ್ತದೆ ಆ 'ಬೇಕು.' ನಾನು ಬೇರೆ ನೀವು ಬೇರೆ ಇರಲಿಕ್ಕಿಲ್ಲ. ನನಗೆಂದು ನಾನು ದುಡಿಯುತ್ತೇನೆ, ನಿಮಗೆಂದು ನೀವು ದುಡಿಯುತ್ತೀರಿ. ಅವರು ಅವರಿಗೆ. ತನಗೆ ತಾ 'ಕಾಯಕ' ಮಾಡುವದು ಲೋಕದ ನಿಯಮ, ಪ್ರಪಂಚದ ಧರ್ಮ. ಈ ಮಾಡುವ ಮಾಟದಲ್ಲಿ ನನ್ನ 'ಬೇಕು'ಸದಾ ಜಾಗ್ರತವಾಗಿರುವಂತೆ, ಮಾಡುವ ನಾನು, ಅದೂ ಹಗಲಿರುಳು ಎಚ್ಚರವಿದ್ದು ನಿದ್ರೆಯಲ್ಲಿ ಕನಸಿನಲ್ಲಿ ತನ್ನ ಕಾಯಕ ನಡೆಸಿದೆ. ನನ್ನನ್ನು ನೋಡಿಯಾದ ಮೇಲೆ ಅದೋ ಅಲ್ಲಿ ಲಿಂಗಭಕ್ತ ಆಯ್ದಕ್ಕಿ ಮಾರಯ್ಯನ ಮನೆಗೆ ಬನ್ನಿ. ಇಲ್ಲಿಯೂ ಕಾಯಕ ನಡೆದಿದೆ. ಅದನ್ನು ತೆರೆದು ನೋಡಿ. ಏನಿದೆ ಅಲ್ಲಿ ಒಳಗೆ? ಮಾರಯ್ಯನ ಮಾತು ಕೇಳಿ :

> ಮನದಲ್ಲಿ ಹುಟ್ಟಿದ ಅರಿವು ಮಾಡುವ ಮಾಟದಲ್ಲಿ ಕಾಣಬಹುದು.
> ಶರಣರ ಸಂಗಕ್ಕೆಳಸಿದ ಚಿತ್ತದ ಅನುಭಾವದಲ್ಲಿ ಕಾಣಬಹುದು.
> ಒಳಹೊರಗೆ ತೆರಹಿಲ್ಲದ ಕೂಟ ನಿನ್ನದು. ಅಮರೇಶ್ವರಲಿಂಗದಲ್ಲಿ—
> ಸಂಗನ ಬಸವಣ್ಣಾ, ನಿನ್ನ ಪಾದಕ್ಕೆ ನಮೋ ನಮೋ ಎಂಬೆನು.

ವ.ಸಾ.ಸಂ. ಪು. ೧೬೫, ವ. ೧೧೦

'ಅಮರೇಶ್ವಲಿಂಗದ ಒಡಲು ಸಂಗನ ಬಸವಣ್ಣ' (ಶೂನ್ಯ ಸಂಪಾದನೆ, ಪು. ೨೭೧, ವ. ೫೧)ನನ್ನು ಕುರಿತಿರುವ ಮಾತು ಇದು. ಇವರ ಸಂದರ್ಭವೆಲ್ಲ ನಮಗಿಲ್ಲಿ ಅಪ್ರಸ್ತುತ. ನಮಗೆ ಪ್ರಸ್ತುತ ಅರಿವು, ಮಾಟ, ಒಳಹೊರಗೆ ತೆರಹಿಲ್ಲದ ಕೂಟ.

ಪ್ರಾಣಲಿಂಗದ ಪ್ರಸನ್ನಮುಖವನ್ನು ಕರಸ್ಥಲದ ದರ್ಪಣವಾದ ಇಷ್ಟಲಿಂಗದಲ್ಲಿ ಕಾಣಬಹುದು. ಅದರಂತೆ ಅಂತರಂಗದ ಅರಿವು ಲಿಂಗ

ಭಕ್ತನ ಬಹಿರಂಗದ ಕ್ರಿಯೆಯಲ್ಲಿ ಕಾಣಬರುವುದು. ಒಳಗೆ ಲಿಂಗದ ಅರಿವು ಹೊರಗೆ ಲಿಂಗಕ್ಕೆಂದು ಕಾಯಕ. ಕಾಯಕದ ಮರೆಯಲ್ಲಿ ಲಿಂಗಾರ್ಥವಿದೆ, ಲಿಂಗವಿದೆ. ಇಷ್ಟಪೂಜೆ ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗದ ಸುಜ್ಞಾನ ಪ್ರಕಾಶ ಪ್ರಜ್ವಲಿಸುವಂತೆ, ಕಾಯದಲ್ಲಿ ಮಾಡುವ ಕಾಯಕ, ಅದೂ ಅಂತರಂಗದಲ್ಲಿ ನಾಟಿ, ಶಿವಜ್ಞಾನ ಪ್ರಕಾಶದಲ್ಲಿ ಅರಿವು ಮಾಡುವ ಕಾಯಕ ಒಳಗೂ ನಡೆಯುತ್ತದೆ. ಶೂನ್ಯಸಂಪಾದನೆಯಲ್ಲಿ ಬರುವ ಒಂದು ಪ್ರಸಂಗ. ಅಲ್ಲಮ ಪ್ರಭುದೇವರು ಅನಿಮಿಷಯ್ಯನಿಂದ ಗುರುಕಾರುಣ್ಯ ಪಡೆಯಬೇಕೆಂದು ಬರುತ್ತಿರುವಾಗ, ಗೊಗ್ಗಯ್ಯನೆಂಬ ಮಹಾಶರಣ ತನ್ನ ತೋಟದಲ್ಲಿ ಕೃಷಿ ಮಾಡುತ್ತಿದ್ದಾನೆ. ಲಿಂಗಶರಣನ ಕೃಷಿ ಹೊರಗೆ ನಡೆದಂತೆ ಒಳಗೂ ನಡೆದಿದೆಯೇ? ಹೊರಗೆ ತೋಟ ಬೆಳೆದರೆ ಒಳಗಣ ತೋಟ ಲಿಂಗ ಸಂಪತ್ತನ್ನು ಬೆಳೆಯುತ್ತಿದೆಯೆ? ಬಹಿರಂಗ ಕೃಷಿಯಾದಂತೆ ಅಂತರಂಗವೂ ಲಿಂಗಕ್ಕೆ ಕೃಷಿಯಾಗುತ್ತಿದೆಯೆ? ಇದು ಪ್ರಭುವಿನ ಪ್ರಶ್ನೆ ಗೊಗ್ಗಯ್ಯನಿಗೆ. ತಾನು ಕೃಷಿ ಮಾಡುತ್ತಿರುವ ಲಿಂಗದ ತೋಟವನ್ನು ಬಿಚ್ಚಿ ಆತನಿಗೆ ತೋರಿಸುತ್ತಾನೆ ಅಲ್ಲಮಪ್ರಭು :

> ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ,
> ಅಗೆದು ಕಳೆದೆನಯ್ಯ ಭ್ರಾಂತಿನ ಬೇರ. ಒಡೆದು ಸಂಸಾರದ
> ಹೆಂಟೆಯ, ಬಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವ.
> ಅಖಂಡ ಮಂಡಲವೆಂಬ ಬಾವಿ, ಪವನವೇ ಜಾಟಾಳ,
> ಸುಷುಮ್ನನಾಳದಿಂದ ಉದಕವ ತಿದ್ದಿ, ಬಸವಗಳೈವರು
> ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
> ಆವಾಗಳು ಈ ತೋಟದಲ್ಲಿ ಜಾಗರವಿದ್ದು
> ಸಸಿಯ ಸಲಹಿದೆನು ಕಾಣಾ ಗೊಹೇಶ್ವರಾ

ವ.ಸಾ.ಸಂ. ಪು. ೬೨೫, ವ. ೬೦

ತನುವಿನ ತೋಟದಲ್ಲಿ [illegible] ಕೃಷಿ ನಡೆಸಿರುವ ಪ್ರಭುದೇವರು ಕಾಯಕದ ಒಳಹೊರಗನ್ನು ಗೊಗ್ಗಯ್ಯನಿಗೆ ತೋರಿಸುತ್ತಾನೆ. ಶರಣನ ಲಿಂಗಪೂಜೆ ಹೊರಗೆ ಒಳಗೆ ಸರ್ವಾಂಗದಲ್ಲಿ ಅಖಂಡವಾಗಿ ನಡೆವಂತೆ, ಅದೇ ಪೂಜೆಯು, ಅದೇ ಶಿವಾದ್ವೈತ ಭಕ್ತಿಯ ಅವಿಚ್ಛಿನ್ನ

ಅಭಿನ್ನ ಅಂಗವಾದ ಕಾಯಕ ಸರ್ವಾಂಗದಲ್ಲಿ ನಡೆಯಬೇಕು. ಹೊರಗೆ ಒಳಗೆ ಒಂದೆ ಸಮನೆ ನಡೆಯಬೇಕು. ಕಾಯಕವಿಲ್ಲದೆ ಪೂಜೆಯು ಅಂಗ ವಿಕಲ. ಕಾಯಕವಿಲ್ಲದೆ ಭಕ್ತಿಯು ಅಂಗ ವಿಕಲ. ಜ್ಞಾನದ ರೂಪ ವಿರೂಪ, ಯೋಗದ ಸಮಾಧಿ ಅದೊಂದು ದಿವ್ಯಭ್ರಾಂತಿ. 'ಅಮರೇಶ್ವರಲಿಂಗ'ಕ್ಕೆ ತಾನು ಅಂಗವಾಗಿದ್ದರೆ, ಶಿವಜ್ಞಾನದಲ್ಲಿ ಶಿವಯೋಗದಲ್ಲಿ ಶಿವಭಕ್ತಿಯಲ್ಲಿ ಪೂಜೆಯಾಗಿ ತಾನೆಂಬ ಅಂಗ ಲಿಂಗದತ್ತ ಹರಿದು, ಒಳ ಹೊರಗೆ ತೆರೆಹಿಲ್ಲದೆ ಕೂಟವಾಗುತ್ತಿದ್ದರೆ, ಈ ಸಮರಸಾನಂದದ ಕೂಟವನ್ನು ಕೈಯಲ್ಲಿ ಮಾಡಿ ಮೈಯಲ್ಲಿ ದುಡಿದು ಏಕೆ ಕಾಣಬಾರದು ? ಏಕೆ ಅನುಭವಿಸಬಾರದು ? ಶರಣರ ನಿರ್ಣಯದಂತೆ ಕಾಯಕ ಕೈಲಾಸ, ಕಾಯಕ ಪೂಜೆ. ಈ ಪೂಜೆ ಇಲ್ಲದೆ ಎಂಥ ಪೂಜೆಯೂ ಪೂರ್ಣವಾಗಲಾರದು. ಅವರ ನಿರ್ಣಯ :'....ಜ್ಞಾನವಿಲ್ಲದಿರ್ದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು. ಇದು ಕಾರಣ ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.'

ಇನ್ನು, ನೀತಿ ನಡತೆಯ ವಿಚಾರ ತುಂಬಿ ತುಳುಕುತ್ತಿದೆ ವಚನ ಸಾಹಿತ್ಯದಲ್ಲಿ. ಮೊದಲು ನಮ್ಮ ನೀತಿ ನಮ್ಮ ವರ್ತನೆಯ ವಿಚಾರ. ನಮ್ಮ ದೇವರು ನಮ್ಮ ಭಕ್ತಿ ನಮ್ಮ ಜ್ಞಾನ ನಮ್ಮ ಪೂಜೆಯ ಮನೆಯಲ್ಲಿ ಒಳಹೊಕ್ಕು ನೋಡಿದರೆ, ಪೂಜೆಮಾಡಿ ದೇವರನ್ನು ದೇವರ ಮನೆಯೊಳಗೆ, ಗುಡಿಯೊಳಗೆ ಮುಚ್ಚಿ ಕದ ಹಾಕಿ ನಮ್ಮ ವೃತ್ತಿಯಲ್ಲಿ ನಮ್ಮ ಉದ್ಯೋಗ ಕಾಯಕದಲ್ಲಿ, ನಮ್ಮ ಲೋಕದ ಅನಂತ ವ್ಯವಹಾರದಲ್ಲಿ ತೊಡಗುತ್ತೇವೆ, ಅಥವಾ ಮುಳುಗುತ್ತೇವೆ. ಅಂಗದ ಮೇಲೆ ಲಿಂಗವಿರಲಿ ವಿಭೂತಿ ರುದ್ರಾಕ್ಷಿ ಇರಲಿ, ಕೊರಳಲ್ಲಿ ಜನಿವಾರ ಹಣೆಯಲ್ಲಿ ನಾಲಗೆಯಲ್ಲಿ ನಾಮವಿರಲಿ. ಕ್ರೈಸ್ತ ಮಹಮದೀಯ ಮುಂತಾದ ಯಾವುದೇ ಧರ್ಮ ಮತತತ್ತ್ವದವರಿಗೆ ಅವರವರ ಚಿಹ್ನಗಳಿರಲಿ, ಏನಿದ್ದರೂ ಯಾರಿದ್ದರೂ ತಂತಮ್ಮ ವ್ಯವಹಾರದಲ್ಲಿ ದೇವರನ್ನು ಹಿಂದಿಟ್ಟು ತಾವೆ ಮುಂದೆ ನಿಂತು ವ್ಯವಹಾರ ನಡೆಸುತ್ತಾರೆ. ಜಗತ್ತಿನ ವ್ಯವಹಾರದಲ್ಲಿ 'ದೇವರು' 'ಧರ್ಮ' 'ತತ್ತ್ವ' 'ನೀತಿ'ಗಳು ನಡೆಯದ ನಾಣ್ಯಗಳೆ. ದೇವರು ಬೇಕು, ದೇವರಿಲ್ಲದಿದ್ದರೂ ಧರ್ಮ ಬೇಕು, ಧರ್ಮವಿಲ್ಲದಿದ್ದರೂ ನೀತಿ ನಡತೆ ಇರಬೇಕು ಎಂದು ಎಲ್ಲರೂ ಹೇಳುತ್ತೇವೆ,

ಕೇಳುತ್ತೇವೆ. ಆದರೆ ವ್ಯವಹಾರಕ್ಕಿಳಿದರೆ ಯಾರು ದೇವರು ? ಎಲ್ಲಿಯ ಧರ್ಮ? ಎಂಥದು ತತ್ತ್ವ? ಏನು ನೀತಿ ? ದೇವರು ದೇವರು, ವ್ಯವಹಾರ ವ್ಯವಹಾರ. ದೇವರು ಗುಡಿಯೊಳಗೆ, ವ್ಯವಹಾರ ಲೋಕದೊಳಗೆ. ದೇವರ ಭೀತಿ ಇದೆ, ತತ್ತ್ವಧರ್ಮಗಳು ಹೇಳುವ ನೀತಿ ಇದೆ, ನಿಜ.ಆದರೆ ದೇವರನ್ನು ಪೂಜಿಸುತ್ತ ದೇವರನ್ನು ಕೊಲ್ಲದೆ, ತತ್ತ್ವಧರ್ಮಗಳ ಪುರಾಣ ಕೇಳುತ್ತ ತತ್ತ್ವಧರ್ಮ ಗಳನ್ನು ಸಂಹರಿಸದೆ, ನೀತಿಯ ಮಾತನ್ನು ಓದಿ ಕೇಳಿ, ನೀತಿಯ ಮಂತ್ರ ಜಪವನ್ನು ಜಗತ್ತಿಗೆ ಕೂಗಿ ಹೇಳುತ್ತ, ನೀತಿಯನ್ನು ನಿರ್ನಾಮ ಮಾಡದೆ ಲೋಕದ ವ್ಯವಹಾರ ಹೇಗೆ ನಡೆದೀತು? ಲೋಕದಲ್ಲಿ ನನ್ನ ವ್ಯವಹಾರ ನಡೆಯದೆ ಹೋದರೆ, ನಾನು ಬದುಕುವುದು ಹೇಗೆ? ನನ್ನ ಹೆಂಡತಿ ಮಕ್ಕಳು, ಮೊಮ್ಮಕ್ಕಳು ಮರಿಗಿರಿ ಮಕ್ಕಳು, ನನ್ನ ಸಂತತಿ ಸಂಬಂಧಿಕರ ಗತಿ ಏನು? ನನ್ನ ಪ್ರಸಿದ್ಧಿ ನನ್ನ ಪ್ರಖ್ಯಾತಿ ನನ್ನ ಕೀರ್ತಿ ನನ್ನ ಪ್ರಭಾವ ನನ್ನ ಸಂಪತ್ತು ನನ್ನ ಸುಖಭೋಗ ಮುಗಿಲೆತ್ತರವಲ್ಲದಿದ್ದರೂ ಮಾಳಿಗೆಯೆತ್ತರ ಬೆಳೆಯಬೇಕಾದರೂ ಅಸತ್ಯ ಬೇಕು, ಅನ್ಯಾಯ ಬೇಕು, ಮೋಸ ಕಪಟ ವಂಚನೆ ಬೇಕು, ಕಾಮಕ್ರೋಧ ಲೋಭ ಮೋಹ ಮದ ಮತ್ಸರಗಳು ಅವಶ್ಯ ಬೇಕು. ಇವೆಲ್ಲ ನನ್ನ 'ಪರಿಪೂರ್ಣ ಜೀವನ'ದಲ್ಲಿ ಅನಿವಾರ್ಯವಾಗಿ ಬೇಕು, ಬೇಕು. ಇಷ್ಟೇ, ಜಗತ್ತಿನೊಡನೆ ನಾನು ವ್ಯವಹರಿಸುತ್ತಿರುವಾಗ ಇವರ ಹೆಸರನ್ನು ಒಡೆದು ಹೇಳಬಾರದು. ಹೆಸರಿಡುವಾಗಳೆ ಅಸತ್ಯಕ್ಕೆ ಸತ್ಯ, ಅಧರ್ಮಕ್ಕೆ ಧರ್ಮ, ಅನ್ಯಾಯಕ್ಕೆ ನ್ಯಾಯ, ಮೋಸ ಕಪಟ ವಂಚನೆಗೆ ಲೋಕಹಿತ ಸೇವೆ ಉಪಕಾರ ಜನತೆಯ ಕಲ್ಯಾಣ ಅಭಿವೃದ್ಧಿ ಎಂದೇ ಹೆಸರು 'ದಾಖಲು' ಮಾಡಿ ಬಿಡಬೇಕು. ಹೀಗೆ ಹೆಸರಿಟ್ಟರೆ ಯಾರು ನಂಬಬೇಕು? ಜಗತ್ತಿರುವವರೆಗೆ ನಂಬುವ ಮೂರ್ಖರು ಇದ್ದೇ ಇರುತ್ತಾರೆ. ಇಂಥವರಲ್ಲದೆ, ಜಗತ್ತಿನಲ್ಲಿ ದೇವರು ಧರ್ಮ ನೀತಿ ನ್ಯಾಯಗಳನ್ನು ಇನ್ನೂ ಆಕಾಶ ನಕ್ಷತ್ರದಷ್ಟು ಸತ್ಯವೆಂದು ಸ್ಥಿರವಾಗಿ ನಂಬಿಕೊಂಡು ದೇವರ ಮೇಲೆ, ಧರ್ಮ ನೀತಿಯ ಮೇಲೆ ನಿಂತಿರುವ 'ಪುರಾತನ ಮಾನವ'ರಿದ್ದಾರೆ. ನಂಬಿ ನಂಬದ ನಮ್ಮಂಥ 'ಆಧುನಿಕ'ರೂ ಇದ್ದಾರೆ. ಅವರೂ ನಾವೂ ವಿಜಾತೀಯರು ಮತ್ತು ಸಜಾತೀಯರು. ಜಗತ್ತಿನ ಉದ್ಧಾರ ನಮ್ಮ ಆದ್ಯ ಕರ್ತವ್ಯ. ಜಗತ್ತಿನ ಉದ್ಧಾರ ಅಂದರೆ ಆದರರ್ಥ ನಮಗೆ ಗೊತ್ತು.

ಇಂದಿನ ಜೀವನದ ಎಲ್ಲ ಎಲ್ಲ ಕ್ಷೇತ್ರದಲ್ಲಿ ಹಬ್ಬಿ ಹರವಿಕೊಂಡಿರುವ ಈ ಮನೋಭಾವದ ಕಠೋರಜಾಲದಲ್ಲಿ ಧರ್ಮ ನೀತಿ ಆಚಾರ ಶೀಲ ಸಿಕ್ಕು ಸತ್ತು ಸತ್ತು ಸಾವನ್ನು ಬದುಕುತ್ತಿವೆ. ಮಾನವಕುಲದ ಪ್ರತಿನಿತ್ಯದ ವ್ಯವಹಾರದಲ್ಲಿ ಮರಣವನ್ನು ನರಳುತ್ತಿರುವ ದೇವರು ಧರ್ಮ ನೀತಿ ತತ್ತ್ವಗಳನ್ನು ನೋಡಿದರೆ, ಒಮ್ಮೆಲೆ ಒಂದು ಪ್ರಶ್ನೆ ಸಿಡಿದೆದ್ದು ನಿಲ್ಲುತ್ತದೆ ದೇವರ ಮುಂದೆ, ನೀತಿ ಧರ್ಮಗಳ ಮುಂದೆ. ದೇವರಿದ್ದರೆ, ದೇವರಲ್ಲಿ ಸತ್ತ್ವವಿದ್ದರೆ, ಧರ್ಮನೀತಿ ಆಚಾರ ಶೀಲದಲ್ಲಿ ಶಕ್ತಿ ಇದ್ದರೆ ಜೀವನದ ವ್ಯವಹಾರದಲ್ಲಿ ಇವರೇಕೆ ನಡೆಯುವದಿಲ್ಲ?

ಇದ್ದ ಸತ್ಯವನ್ನು ಇದ್ದಂತೆ ಹೇಳಬೇಕೆಂದರೆ, ಇವರಲ್ಲಿ ಪ್ರಾಣಸತ್ತ್ವ ಉಳಿದಿಲ್ಲ, ಪ್ರಾಣಕಳೆ ಇಲ್ಲ. ಹಿಂದೆ ಹೇಳಿದ ಲೋಕದ ನೀತಿವಂತರ ಕಥೆಯನ್ನು ಬಿಟ್ಟು, ದೇವರು ಧರ್ಮ ನೀತಿ ಆಚಾರ ಶೀಲಗಳಲ್ಲಿ ನಂಬಿಗೆಯಿದ್ದವರನ್ನು ನಾವು ಅಭ್ಯಾಸಮಾಡಿ ಪರೀಕ್ಷೆಮಾಡಿ ನೋಡಿದರೆ, ಅವರ ನಂಬಿಗೆಯ ಉಗಮಸ್ಥಾನ ವೇದ ಆಗಮ ಶಾಸ್ತ್ರ ಪುರಾಣ ಪುಣ್ಯಕಥೆ ಬಾಯಿಬಲ್ ಕುರಾಣ ಮುಂತಾದ ಧರ್ಮ ನೀತಿ ಗ್ರಂಥಗಳಿಂದ; ಮನೆಯಲ್ಲಿ ಗುಡಿ ಮಠದಲ್ಲಿ ಸಮಾಜ ಸಂಸ್ಥೆಗಳಲ್ಲಿ ಗುರು ಹಿರಿಯರು ಹೇಳುವ ಪಾಠಗಳಿಂದ; ಮಾನವ ಸಮಾಜ ಸಮಯ ಸಂಪ್ರದಾಯಗಳು ಕಲಿಸುತ್ತಿರುವ ಗರುಡಿಯ ಸಾಧನದಿಂದ. ಇನ್ನೂ ಮುಂದೆ ಹೋಗಿ ನೀತಿ ನಡತೆಯುಳ್ಳವರನ್ನು ಪರೀಕ್ಷಿಸಿ ನೋಡಿದರೆ, ಅವರ ನೀತಿಯ ರೀತಿ ಸರಕಾರದ ಕಾಯಿದೆ ಕಾನೂನು ಶಿಕ್ಷೆ ದಂಡಗಳು ಹೊಡೆದು ಬಡಿದು ಬುದ್ಧಿ ಕಲಿಸುವ ರೀತಿಯವು. ನಮ್ಮ ಧರ್ಮ ಪುರಾಣಗಳ ಸ್ವರ್ಗ ನರಕಗಳ ಅವತಾರಗಳೇ ಈ ಕಾಯಿದೆ ಕಾನೂನುಗಳು, ರಕ್ಷೆ ಶಿಕ್ಷೆಗಳು. ವೇದ ಪುರಾಣಗಳ 'ಸತ್ಯಂ ವದ' 'ಧರ್ಮಂ ಚರ'ಗಳು, ವಿಧಿ ನಿಷೇಧಗಳು ಸ್ವರ್ಗ ನರಕಗಳು, ಗುರುಹಿರಿಯರ 'ಇದನ್ನು ಮಾಡು' 'ಅದನ್ನು ಬಿಡು'ಗಳು, ಸಮಾಜ ಸಮಯ ಸಂಪ್ರದಾಯದ ಹಸಿಬಿಸಿ ಉದಾಹರಣೆಗಳು, ಸರಕಾರದ ಕಾಯಿದೆಯ 'ಖಬರ್‌ದಾರ್'ಗಳು. ಇವೇ ನಮ್ಮ ನೀತಿ ಆಚಾರ ಶೀಲ ವರ್ತನೆಗಳ ಆಧಾರ ಸ್ತಂಭಗಳು. ಇನ್ನೂ ಹಲಕೆಲವು ಆಧಾರಗಳಿರಬಹುದು. ಅವನ್ನು ನೀವೇ ಅವಧಾನವಾಗಿ ನೋಡಿಕೊಳ್ಳಿ.

ಹೊರಗಿಂದ ತಂದ ಹೊರಗಿಂದ ಬಂದ, ಹೊರಗಿಂದ ಕಲಿತ ಹೊರಗಿಂದ ಗಿಳಿಪಾಠ ಮಾಡಿದ, ಹೊರಗಿಂದ ಹೇರಿದ ಹೊರಗಿಂದ ಹೊರಿಸಿದ ಇಂಥ ನೀತಿ ಇಂಥ ತತ್ತ್ವಗಳು, ಇಂಥ ಮಾತು ಇಂಥ ಉಪದೇಶಗಳು, ಇಂಥ ದೇವರು ಇಂಥ ಧರ್ಮ ಆಚಾರ ಶೀಲ ವರ್ತನೆಗಳು ಎಷ್ಟು ದಿವಸ ನಡೆಯಬೇಕು? ಈ ದೇವರು ಧರ್ಮ ನೀತಿ ತತ್ತ್ವಗಳನ್ನು ಎಷ್ಟು ಕಾಲ ಹೊತ್ತುಕೊಂಡು ನನಗೆ ಭಾರವಾಗಿ, ಭೂಮಿಗೆ ಭಾರವಾಗಿ ನಡೆಯಬೇಕು? ಒಂದು ಒಂದು ತಿಳಿಯದೆ, ಎರಡು ಎಂದು ಎಷ್ಟು ದಿನ ಬಾಯಿಪಾಠ ಮಾಡಬೇಕು? ಆಕಾಶವನ್ನು ನೋಡದೆ, ನಕ್ಷತ್ರಗಳನ್ನು ಕಾಣದೆ, ಆಕಾಶದಲ್ಲಿ ಕೋಟಿ ಕೋಟಿ ನಕ್ಷತ್ರಗಳು ಪ್ರಜ್ವಲಿಸಿ ಥಳಥಳನೆ ಹೊಳೆಯುತ್ತವೆ ಎಂಬುದನ್ನು ಎಷ್ಟು ವರ್ಷ ನೆನಪಿಟ್ಟುಕೊಂಡು ನಿಮಗೆ ಒಪ್ಪಿಸಬೇಕು? ಕಟ್ಟಿದ ಬುತ್ತಿ, ಕಲಿಸಿದ ಮಾತು ಎಷ್ಟು ದಿನ ಹಳಸದೆ ಇರಬೇಕು? ತಾಳಬೇಕು? ಬಾಳಬೇಕು?

ಇದೋ ಈ ಸಂದರ್ಭದಲ್ಲಿ ಒಬ್ಬ ಜರ್ಮನ್ ಮಹಾಘನ ಪಂಡಿತರ ಮಾತೊಂದು ನೆನಪಾಗುತ್ತದೆ: "Thou shalt love thy neighbour as thy-self" is the requirement of the Bible. But on what grounds is this demand to be based, since feeling is in myself alone and not in another? "Because," the Veda here adds in explanation, "thy neighbour is in truth thy very self, and what separates you from him is mere illusion. (Paul Deussen: The Philosophy of the Upanishads. p. 49). ಯೇಸುಕ್ರಿಸ್ತನ ಪ್ರೇಮದ ಅಮರ ಸಂದೇಶವನ್ನು ಕುರಿತು ಪಂಡಿತರು ಪ್ರಶ್ನೆ ಹಾಕುತ್ತಾರೆ: ನಿನ್ನ ನೆರೆಹೊರೆಯವನನ್ನು ನಿನ್ನಂತೆ ಪ್ರೀತಿಸು ಎಂದು ಪ್ರೇಮದ ತಂದೆ ಕ್ರಿಸ್ತ ಹೇಳುತ್ತಾನೆ. ಆದರೆ ನೀನು ಅವನನ್ನು ಏಕೆ ಪ್ರೀತಿಸಬೇಕು—ಎಂಬ ಪ್ರಶ್ನೆಗೆ ಉತ್ತರವೇನು? ಕ್ರೈಸ್ತ ಧರ್ಮದಲ್ಲಿ ಆ ಪ್ರಶ್ನೆಗೆ ಉತ್ತರ ದೊರೆವಂತಿಲ್ಲ. ಆದರೆ ವೇದಾಂತವೆನಿಸುವ ಉಪನಿಷತ್ತುಗಳಲ್ಲಿ ಉತ್ತರ ಬರುತ್ತದೆ: 'ನಿಜದಲ್ಲಿ ನಿನ್ನ ನೆರೆಹೊರೆ ನಿನ್ನ ನಿಜಾತ್ಮವೇ, ನೀನೇ. ಆತನಿಂದ ನಿನ್ನನ್ನು ಬೇರ್ಪಡಿಸುವುದು ಬರಿಯ ಭ್ರಮೆ.' ಈ ವಿಚಾರಸರಣಿಯಲ್ಲಿ ಸತ್ತ್ವಪೂರ್ಣವಾದ ಅರ್ಥವಿದೆ.

ನೀತಿಗೆ ಏಕಾತ್ಮಜ್ಞಾನದ, 'ಸರ್ವಂ ಖಲು ಇದಂ ಬ್ರಹ್ಮ' 'ತತ್ ತ್ವಮ್ ಅಸಿ', 'ಅಹಂ ಬ್ರಹ್ಮಾಸ್ಮಿ', 'ನಿನ್ನ ನೆರೆಹೊರೆ ನೀನು', 'ನಿನಗೆ ನೀನು ಬೇರೆಯವನಲ್ಲ', 'ತನಗೆ ತಾನು ಅನ್ಯವಲ್ಲ'–ಎಂಬ ಸರ್ವಾತ್ಮಗಳ ಐಕ್ಯಜ್ಞಾನದ 'ಅಖಂಡಿತ'ವಾದ ವಿಶ್ವಭದ್ರ ನೆಲಗಟ್ಟಿದೆ. ಕಟ್ಟಿದ ಬುತ್ತಿ ಕಲಿಕೆಯು ಮಾತ್ರವಲ್ಲದ ನೀತಿಗೆ ಜ್ಞಾನದ ಅನಂತ ಅಪಾರ ಆಧಾರ ಇದೆ. ಆದರೆ ಇಲ್ಲಿ ಮತ್ತೆ ನಾವು ಎಂದೂ ಮರೆಯದೆ ನೆನಪಿಟ್ಟುಕೊಳ್ಳತಕ್ಕ ಸಂಗತಿಯೆಂದರೆ ಜ್ಞಾನಕ್ಕೆ ಆಧಾರ ಅನುಭಾವ, ಸ್ವಾನುಭಾವ. ಮೊದಲು ನೋಡಿದಂತೆ ಸ್ವ-ಅನುಭಾವ ದೇವರು. ಅಂದರೆ ನಾನಿನ ಗಂಭೀರದ ಹರವಾಗಿ ಬೆಳಗುವ ಅನುಭವದ ತಾನು–ದೇವರು. ಈ ದೇವರ ಮೇಲೆ ನಿಲ್ಲಬೇಕು ನೀತಿ. ಈ ದೇವರಿಂದ ಹರಿಯಬೇಕು ನೀತಿ ಧರ್ಮ. ಈ ದೇವರ ಬೆಳಗಿನಲ್ಲಿ ಆಡ್ಡಾಡಬೇಕು ಆಚಾರ ಶೀಲ ಗುಣ ವರ್ತನೆಗಳು. ಇಲ್ಲಿ ಹುಟ್ಟಿ, ಇಲ್ಲಿಂದ ಇಲ್ಲಿಗೆ ಹರಿವ ನೀತಿ ಹಿಡಿತಂದ ನೀತಿ ಪ್ರೇಮ ಶೀಲ ಸದಾಚಾರ ಸದ್ವರ್ತನೆ ಅಲ್ಲ. ಅದು 'ಸ್ವಯಂಭು', 'ಅದಕ್ಕದು ಸಹಜ.'

ಶರಣನ ನೀತಿ ನಡತೆ, ಕಾಯಕ ದಾಸೋಹ, ಸದ್ಗುಣ ಸದ್ವರ್ತನೆ ಹುಟ್ಟಿ ಹರಿವ 'ಸ್ವಯಂಭು' 'ಸಹಜ' ಸ್ಥಲವನ್ನು, ಕತ್ತಲೆಯ ಮಹಾ ಮುಸುಕವಳಿದು ನಿತ್ಯ ಬೆಳಗುವ ಮಾನವನ ನಿಜಸ್ಥಲವನ್ನು ಇನ್ನೂ ಒಮ್ಮೆ ನೋಡಿ. ಪಾವನವನ್ನು ಪವಿತ್ರವನ್ನು, ಪ್ರಜ್ವಲಿಸುವ ಪರಮಶಾಂತಿಯನ್ನು ಮಾನವನ ಸರ್ವಾಂಗಕ್ಕೆ ದೀವಿಗೆ ಮುಡಿಸಿ, ವಿಶ್ವವಿಸ್ತಾರವನ್ನೂ ತನ್ನ ಸ್ವಯಂಪ್ರಭೆಯಿಂದ ಜ್ಯೋತಿರ್ಮಯ ಮಾಡುವ ಸ್ವಯಂಲಿಂಗದ ನಿಸ್ಸೀಮ ನಾಡನ್ನು, ಐಕ್ಯಜ್ಞಾನದ ಅವಿರಳಾನುಭವದ ಅಖಂಡಿತವಾದ ಮಹದಾಕಾಶವನ್ನು ಮತ್ತೆ ಮತ್ತೆ ನೋಡಿದರೆ, ಪ್ರತಿದಿನ ಪ್ರತಿನಿಮಿಷ ಕಣ್ಣು 'ಅನಿಮಿಷ'ವಾಗಿ ಒಳಹೊರಗೆ ನೋಡಿದರೆ, ಕಿವಿ 'ಅನಿಮಿಷ'ವಾಗಿ ಕೇಳಿದರೆ, ಒಳಗಿಗೆ ಮುಚ್ಚಿದ ಬಾಗಿಲು ತೆಗೆದು ಮೂಗು 'ಅನಿಮಿಷ'ವಾಗಿ ಸ್ವಯಂಜ್ಯೋತಿಯನ್ನು ಮೂಸಿ ನೋಡಿದರೆ, ನಾನು ನೀವು ಅವರು ಇವರು, ಗುಡ್ಡ ಪರ್ವತ, ಹೊಳೆ ಸಮುದ್ರ, ಗಗನಮಂದಿರ ನಕ್ಷತ್ರಕೋಟಿ, ಹೆಂಡತಿ ಮಕ್ಕಳು, ಅಣ್ಣ ತಮ್ಮ, ಮನೆ ಮಾರು, ನೆರೆ ಹೊರೆಯವರು, ದೂರ ಪರದೇಶದವರು, ಎಲ್ಲ ಪ್ರಾಣಿ ಜಾತಿ, ಎಲ್ಲ ಮರ ಗಿಡ ಬಳ್ಳಿ ಕಲ್ಲು ಮಣ್ಣಿನ

ಜಾತಿ, ಎಲ್ಲ ಎಲ್ಲಾ ಒಂದಾಗಿ, ತುಂಬಿ ತುಳುಕುವ 'ಲಿಂಗಮಯ'ವಾಗಿ 'ಲಿಂಗವಂತ'ವಾಗಿ, ಒಬ್ಬ ದೇವ ಒಂದು ಬೆಳಗು 'ಸರ್ವತಃ ಸಂಪ್ಲುತ'ವಾಗಿ ಇರುವ ಇರುವ, ಹೆಸರು ದೆಸೆಯಿಲ್ಲದೆ ಇರುವ ಇರುವ, ಯಾವ ಜಾತಿ ಯಾವ ಕುಲ ಯಾವ ವರ್ಣ ಯಾವ ಆಶ್ರಮ, ಯಾವ ಲಿಂಗ ಯಾವ ವಯಸ್ಸು, ಯಾವ ದೇಶ ಯಾವ ಕಾಲ, ಯಾವ ಭಾಷೆ ಯಾವ ಅರ್ಥ, ಯಾವ ರೂಪ ಯಾವ ಆಕಾರ ಪ್ರಕಾರ ಒಂದೂ ಒಂದೂ ಇಲ್ಲದೆ ಇರುವ ಇರುವ, ಇರುವ ಇರುವ ಇರವನ್ನು ಕಣ್ಣಿಲ್ಲದೆ ನೋಡಿ ಕಿವಿಯಿಲ್ಲದೆ ಕೇಳಿ, ಕಾಲಿಲ್ಲದೆ ನಡೆದು ಕೈಯಿಲ್ಲದೆ ಮುಟ್ಟಿ, ಮನವಿಲ್ಲದೆ ನೆನೆದು ಪ್ರಾಣವಿಲ್ಲದೆ ಪ್ರಾಣಿಸಿ, ಬುದ್ಧಿಯಿಲ್ಲದೆ ಜ್ಞಾನಿಸಿ ಭಾವವಿಲ್ಲದೆ ಅನುಭವಿಸಿದರೆ, ನಮ್ಮ ಹೊತ್ತು ವ್ಯರ್ಥವಾದೀತೇ ? ಕಣ್ಣು ಕಾಲು ಮನ ಭಾವ ಅರ್ಥವಿಲ್ಲದೆ ಸವೆದು ಹೋಗಬಹುದೇ ? ಅಂದು ಇಂದು ಎಂದು ಇದ್ದ ಇರವು ಅರುಹಿನ ಜ್ಯೋತಿ ಯಾಗಿ ಎದ್ದು, ಸೂರ್ಯ ಚಂದ್ರ ನಕ್ಷತ್ರ ಕೋಟಿಯ ಕತ್ತಲೆಯೂ ಹಿಂಗಿ ಹೋಗುವ ಸ್ವ-ಅನುಭಾವವಾದ ದೇವರು ಅತೀತವಾಗಿ ಬೆಳಗುವ ಐಕ್ಯಾನು ಭಾವ ತುಂಬಿ ಬಂದರೆ ಹಾನಿ ಏನು ? ಲಾಭ ಎಂಥದು ? ಅದೋ ಜ್ಯೋತಿ ಎದ್ದು ಹರಿದು ಬರುವ ತೋಂಟದ ಸಿದ್ಧಲಿಂಗದೇವರ ಮಾತನ್ನು ನೋಡಿ :

> ಅರುಹಿನ ಜ್ಯೋತಿ ಎದ್ದಿತ್ತು. ಶರೀರವನೆಲ್ಲ ತುಂಬಿತ್ತು.
> ಮರವೆಯ ತಮ ಹರಿಯಿತ್ತು. ಕರಣಂಗಳ ತುಂಡಿಸಿತ್ತು.
> ವಿಷಯಂಗಳ ಶಿರವನು ಹರಿಯಿತ್ತು. ದಶವಿಧೇಂದ್ರಿಯಂಗಳ
> ದಾಳಿಯ ನಿಲಿಸಿತ್ತು. ಪಂಚಮಹಾಭೂತಂಗಳ ಪ್ರಪಂಚವ
> ಪರಿಹರಿಸಿತ್ತು. ಬ್ರಹ್ಮವೇ ತಾನೆಂಬ ಕುರುಹ ಮೈಗಾಣಿಸಿತ್ತು.
> ತಾನೆಂಬ ಕುರುಹನಳಿದ ಅವಿರಳ ಸಹಜನು ಭಕ್ತನು ನೋಡಾ
> ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ವ.ಸಾ.ಸಂ. ಪು. ೩೦೭, ವ. ೫೧

ಇದೋ ಈ ಸಹಜದಿಂದ ಇರುತ್ತಾನೆ ಭಕ್ತ-ಮಾನವ. ಈ ಜ್ಯೋತಿಯಲ್ಲಿ ಇರುತ್ತಾನೆ ತಾನು—ಬ್ರಹ್ಮ ಮಾನವ. ಈ ಮಾನವಬ್ರಹ್ಮದಲ್ಲಿ, ಮಾನವ-ಲಿಂಗದಲ್ಲಿ ಹೊಮ್ಮುವ ನೀತಿ ನಡತೆ, ಆಚಾರ ವಿಚಾರ, ವರ್ತನೆ ಶೀಲ ಎಂಥದಿರಬಹುದು ?

ಅರಿವ ಬೆಳಗು ಮಯವಾದ ಪರಮಾಕಾಶಕ್ಕೆ ಕೈಕಾಲು ಮೂಡಿದರೆ? ಕಣ್ಣು ಕಿವಿ ನಾಲಗೆ ತಲೆ ಬಂದರೆ? ದೇವರು ಆಕಾರವಾಗಿ ಭಕ್ತಲಿಂಗನಾದರೆ? ಆತನಿಗೆ ಕತ್ತಲೆ ಇಲ್ಲ. ಒಳಹೊರಗೆ ತೆರಹಿಲ್ಲದೆ ಬೆಳಗುವ ಬಯಲಲ್ಲಿ ಭಿನ್ನ ವಿಭಿನ್ನ ಖಂಡ ಖಂಡಿತ ನಾನು ನೀನು ಅದು ಇದು ಎಂಬ ದ್ವೈತಭಾವದ ಕತ್ತಲೆ ಮನೆಗಟ್ಟಿಕೊಂಡು ಇರಬೇಕೆಂದರೆ ಸಾಧ್ಯವಿದೆಯೆ? ಸೂರ್ಯನ ಮನೆಯಲ್ಲಿ ದೀಪ ಆರಿಸಿ, ಕತ್ತಲೆಯಲ್ಲಿ ಮಲಗಬಹುದೇ? ಭಕ್ತಲಿಂಗನಲ್ಲಿ ಬುದ್ಧಿ ಮುಂತಾದ ಕರಣಗಳ ಉರವಣೆಯಿಲ್ಲ; ಆತನ ಕಣ್ಣು ಕಿವಿಯಲ್ಲಿ ವಿಷಯಗಳ ಸವಿಸುಖದ ಸಂಭ್ರಮವಿಲ್ಲ. ಭೂತಪ್ರಪಂಚ ಲಿಂಗಪ್ರಪಂಚ, ವಿಷಯರಾಶಿ ಲಿಂಗಪ್ರಸಾದವಾರಾಶಿ. ಭಕ್ತ ನಡೆದರೆ ಲಿಂಗ ನಡೆಯಿತು, ಭಕ್ತ ನುಡಿದರೆ ನಾಲಗೆಯಲ್ಲಿದ್ದ ಲಿಂಗ ನುಡಿಯಿತು. ಭಕ್ತ ನೋಡಿದರೆ ಲಿಂಗದ ಕಣ್ಣು ನೋಡಿತು, ಭಕ್ತನ ಮನ ಹರಿದರೆ ಮನದ ಮೇಲೆ ಲಿಂಗದೇವ ಕುಳಿತು ಹರಿದಾಡಿದ. ಭಕ್ತ ಉಂಡರೆ ಲಿಂಗದ ಹೊಟ್ಟೆಗೆ, ಭಕ್ತ ಭೋಗಿಸಿದರೆ ಲಿಂಗದ ಪ್ರಸಾದಕ್ಕೆಂದು. ಆತನ ನೀತಿ ಲಿಂಗದ ರೀತಿ, ಆತನ ಗುಣ ಲಿಂಗದ ಜಾತಿ. ಆತನ ಶೀಲ ಸದಾಚಾರ ಸದ್ವರ್ತನೆ ಲಿಂಗವರ್ತನೆ. ಇಲ್ಲಿ ವೇದ ಶಾಸ್ತ್ರ ಬೇಕಿಲ್ಲ, ಪುರಾಣ ಪುಣ್ಯ ಕಥೆಗಳ ಅವಶ್ಯವಿಲ್ಲ. ಸಂಪ್ರದಾಯ ಪರಂಪರೆ ಗುಡಿ ಮಠಗಳ ಮಾಡುಬಿಡುಗಳ ಮಾತಿಲ್ಲ. ಸರಕಾರ ಹೇರುವ ಕಾಯಿದೆ ಕಟ್ಟು 'ಪರದೇಶ'ದ ಸುದ್ದಿ. ಇದೋ ಇಲ್ಲಿದೆ ಬೆಲ್ಲ ಜೇನು ಕಬ್ಬಿನ, ಹಣ್ಣು ಹಂಪಲದ ನೀತಿ ನಡತೆ; ಶ್ರೀಗಂಧ ಸಂಪಗೆ ಮಲ್ಲಿಗೆ ಗುಲಾಬಿ ಮಂದಾರಗಳ ಮಕರಂದ ವಾಸನೆಯ ಸದಾಚಾರ ಶಿವವರ್ತನೆ ಬ್ರಹ್ಮಶೀಲದ ಮಹಾಭವ್ಯ. ಇಲ್ಲಿದೆ ಲಿಂಗಜ್ಞಾನ ಲಿಂಗಯೋಗ ಲಿಂಗಕ್ರಿಯೆ ಲಿಂಗಭಕ್ತಿಯ ಪರಮಶಿವವಾದ ದೇವನ ದಿವ್ಯಸಾಮ್ರಾಜ್ಯ. ಕೊರೆದರೆಂದು ಕಡಿದರೆಂದು ಕಬ್ಬು ಸವಿಯನ್ನಲ್ಲದೆ ಕಹಿಯನ್ನು ಉಗುಳಲಿಲ್ಲ. ಬಡಿದರೆಂದು ಕಾಸಿದರೆಂದು ಬಂಗಾರದ ಮುಖ ಕಪ್ಪಾಗಲಿಲ್ಲ. ಬೆಳಗಿನ ಭಕ್ತ ಒಂದೆ ಸಮ. ವಂದಿಸಲಿ ನಿಂದಿಸಲಿ ಒಂದೆ ಸಮ. ಹೊಗಳಲಿ ತೆಗಳಲಿ ಒಂದೆ ಸಮ. ಪ್ರೀತಿ ದ್ವೇಷ ಬಂದರೆ ಅದಕ್ಕೆ ಒಂದೇ ಉತ್ತರ ಪ್ರೇಮ, ಲಿಂಗಪ್ರೇಮ. ಜಗತ್ತಿನ ಮೋಸ ಅನ್ಯಾಯ ಕಪಟ ವಂಚನೆಗೆ ಒಂದೇ ಉತ್ತರ, ನಿರಂಜನ ಸತ್ಯ. ಆತ

ನುಡಿದರೆ ಮೃದುವಚನ, ಭೂತಹಿತ. ನಡೆದರೆ ಸದಾಚಾರದ ಗೊಂಚಲು, ನೋಡಿದರೆ ಕಾರುಣ್ಯದ ಗೊನೆ. ನಮ್ಮ ಲೋಕವ್ಯವಹಾರದ ಯಾವ ನೀತಿ ನಡತೆಯೆ ಇರಲಿ, ಶೀಲ ಶಿವಾಚಾರಗಳೆ ಇರಲಿ, ಅವೆಲ್ಲ ಆವಿರ್ಭವಿಸಿದುದು ಇದೇ ದಿವ್ಯಭಕ್ತನ ಹೃದಯದಲ್ಲಿ; ಇದೇ ಕ್ರೈಸ್ತ ಇದೇ ಮಹಮ್ಮದ ಇದೇ ವ್ಯಾಸ ಇದೇ ಆಚಾರ್ಯನ ಎಂದೆಂದಿಗು ಇದ್ದ ದೇವಭಕ್ತನ ಹೃದಯ ದಲ್ಲಿ. ಈ ಹೃದಯ ಕ್ರಿಶ್ಚಿಯನ್ ಮುಸಲ್ಮಾನ ಅಲ್ಲ; ಜೈನ ಬೌದ್ಧ ಅಲ್ಲ; ಶೈವ ವೈಷ್ಣವ ಅಲ್ಲ. ಕುಲಜಾತಿಯ ವೀರಶೈವ ಲಿಂಗಾಯತ ಅಲ್ಲ, ಶೂದ್ರ ಬ್ರಾಹ್ಮಣ ಅಲ್ಲ. ನಿಜವಾದ ಒಬ್ಬ ದೇವನಿಗೆ ಕುಲ ಜಾತಿ ಇಲ್ಲದಿರುವಂತೆ, ನಿಜವಾದ ನೀತಿಗೆ ಕಾಲ ದೇಶ ಕುಲ ಜಾತಿ ಇಲ್ಲ.

ನಿಜವಾದ ನೀತಿ ಹರಿವುದು ಎಲ್ಲಿಂದ? ಲಿಂಗದಿಂದ. ಲಿಂಗಕ್ಕೆ ಅಂಗ ವಾದ ಲಿಂಗಾಂಗದಿಂದ. ಲಿಂಗದ ದೇಹದಿಂದ ಲಿಂಗದ ಪ್ರಾಣದಿಂದ, ಲಿಂಗದ ಮನದಿಂದ ಲಿಂಗದ ಭಾವದಿಂದ. ಪೂರ್ವಾಶ್ರಯವಾದ ಪ್ರಾಕೃತ ದೇಹ ಇಂದ್ರಿಯ ಮನ ಭಾವದ ಜಾತಿ, ವಿಷಯ ಸುಖ ಇಂದ್ರಿಯ ವಿಲಾಸದ ವಂಶ ನಿರ್ವಂಶವಾಗಿದೆ. ಮಾವು ಬೇವು, ತೇಗು ಹೆದ್ದೇಗು, ಆಲ ಜಾಲಿ ಬಸರಿ ಬನ್ನಿಯ ಕಟ್ಟಿಗೆ ಉರಿವ ಮಹಾಜ್ವಾಲೆಯ ಕೈಯಲ್ಲಿ ಸಿಕ್ಕರೆ, ಪೂರ್ವಾಶ್ರಯದ ಮಾವು ಬೇವಿನ ಜಾತಿ, ತೇಗು ಹೆದ್ದೇಗಿನ ಕುಲದ ಕೆಚ್ಚು, ಜಾಲಿ ಬಸರಿಯ ಅಂಟು ಉಳಿಯಿತೆಲ್ಲಿ? ಉಳಿದಿರುವುದು ಉರಿವ ಬೆಂಕಿ. ಕಟ್ಟಿಗೆಯಂತೆ ವ್ಯವಹರಿಸುವ ಪೂರ್ವಚರಿತ್ರ ಅವಕ್ಕೆ ಉಳಿದಿಲ್ಲ. ಹಾಗೆ ಅಂಗದ ಅವಗುಣ ನಷ್ಟವಾಗಿ, ಲಿಂಗಜ್ವಾಲೆ ಉರಿದು, ಲಿಂಗವೆ ಬೆಳಗುವ ಲಿಂಗಚಾರಿತ್ರ, ಲಿಂಗನೀತಿ, ಲಿಂಗನಿಯಮ. ಲಿಂಗ ದಗ್ಧವಾದ ಅಂಗಕ್ಕೆ, ಲಿಂಗಾಶ್ರಯದಲ್ಲಿ ಇರುವ ಲಿಂಗಾಂಗಕ್ಕೆ, ಅಂದರೆ ಶರಣನಿಗೆ ಮತ್ತೆ ಕಟ್ಟಿಗೆಯ ಕೆಚ್ಚು, ಕಟ್ಟಿಗೆಯ ಗಂಧ ವಾಸನೆ, ಕಟ್ಟಿಗೆಯ ಕತ್ತಲೆ, ಕತ್ತಲೆಯ ವರ್ತನೆ ,ಕತ್ತಲೆಯ ಚರಿತ್ರ ಎಲ್ಲಿಂದ ಬರಬೇಕು? ಕೇಳುತ್ತಾರೆ ಪ್ರಭುದೇವರು: 'ಮುತ್ತು ರತ್ನ ಸಿತಕೆ ಘೃತಕೆ ಮತ್ತೆ ಪೂರ್ವ ಕ್ರೀ ಗಳುಂಟೆ? ನಿತ್ಯಮುಕ್ತ ಶರಣಗುಂಟೆ ಮತ್ತೆ ಪೂರ್ವಚರಿತವು?' (ಶೂನ್ಯ ಸಂಪಾದನೆ, ಪು. ೩೧೮, ಪ. ೩.): ಮುತ್ತಿಗೆ ಸ್ವಾತಿಯ ಜಲಬಿಂದುವಿನ ಗುಣಧರ್ಮ ಕ್ರಿಯಾವರ್ತನೆ ಇಲ್ಲ. ರತ್ನ ಶಿಲೆಯಲ್ಲ, ಕಾಂತಿಯ ಅರಮನೆ.

ಶುಭ್ರಕ್ಕೆ ಬಣ್ಣದ ಕುಲವಿಲ್ಲ, ತುಪ್ಪಕ್ಕೆ ಬೆಣ್ಣೆಯ ಹುಳಿ ಉಳಿದಿಲ್ಲ. ಬೇಡಿದರೂ ಬರುವಂತಿಲ್ಲ ನೀರು ಕಲ್ಲು ಬಣ್ಣ ಹುಳಿಗಳು. ಈ ಸಂದರ್ಭದಲ್ಲಿ ಪ್ರಭುದೇವರು ಹೇಳುವ ಮಾತು ಇನ್ನೂ ಕೇಳಿ ನೋಡಿ :

ದೇಹಗುಣಗಳಳಿದು ಲಿಂಗದೇಹಿಯಾದ ಶರಣನು
ಬಹಿರಂಗದ ಬಳಕೆ ಮಾಯಾಮೋಹವನ್ನು ಜಜಿುದನು.

ಲಿಂಗಶರಣನಿಗೆ ಭೂತದೇಹದ ಗುಣ! ಎಲ್ಲಿಂದ ಬರಬೇಕು? ವಾಯು ಪ್ರಾಣದ ಧರ್ಮ ಎಲ್ಲಿ ಉಳಿದಿದೆ? ಸುಟ್ಟು ಹೋಗಿ ಭಸ್ಮವಾಗಿದೆ. ಕರಣ ಇಂದ್ರಿಯ ವಿಷಯಗಳ ಪೂರ್ವವಾಸನೆ ನಿರ್ವಾಸನೆಯಾಗಿ, ಲಿಂಗವಾಸನೆ, ಲಿಂಗದ ಮಕರಂದ, ಲಿಂಗದ ಪರಿಮಳ ಹರವಿಕೊಳ್ಳುತ್ತಿದೆ ಶರಣ ಸುಳಿದಾಡಿದ ಕಡೆಯೆಲ್ಲ.

ಮಾನವ ತನುವಿನಲ್ಲಿ ಬೆಳೆವ ಹುಸಿ, ಮನದಲ್ಲಿ ಬೆಳೆವ ವಿಷಯ, ಪ್ರಾಣದಲ್ಲಿ ಬೆಳೆವ ಮರಣ, ಭಾವದಲ್ಲಿ ಬೆಳೆವ 'ಬಹಿರಂಗದ ಬಳಕೆ ಮಾಯಾಮೋಹ'ವನ್ನು ಕಿತ್ತು, ನಟ್ಟು ಕಡಿದು, ಹರಗಿ ಹಸನಮಾಡಿ ಅಂತರಂಗ ಬಹಿರಂಗವೆನ್ನದೆ ಸರ್ವಾಂಗದಲ್ಲಿ, ಎಲ್ಲ ಕಾಲಕ್ಕೆ ಎಲ್ಲ ದೇಶಕ್ಕೆ ಎಲ್ಲ ಜಾತಿ ಎಲ್ಲ ಜನಾಂಗಕ್ಕೆ, ಒಂದು ಮನುಷ್ಯಕುಲಕ್ಕೆ ಬೇಕೆಂದು ಬೆಳೆದ ಲಿಂಗನೀತಿಯ ಬೆಳೆಯ ನಿಲವನ್ನು ನೋಡಿಕೊಂಡು ಬರೋಣವೆ? ನೋಡಿ, ಕೇಳಿ :

೧ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.
೨ ದೇವಲೋಕ ಮರ್ತ್ಯಲೋಕ ಬೇರಿಲ್ಲ, ಒಂದು.
ಸತ್ಯವ ನುಡಿವರೆ ದೇವಲೋಕ, ಮಿಥ್ಯವ ನುಡಿದರೆ ಮರ್ತ್ಯಲೋಕ.
ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ, ಅಸತ್ಯದ ಮನೆಯಲ್ಲಿ ಶಿವನಿರ್ಪನೆ?
೩ ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ,
ನಡೆ ನುಡಿ ಎರಡನು ಪರಿಪೂರ್ಣ ತುಂಬಿ,
ಲಿಂಗವ ಕೂಡಬಲ್ಲಾತನೆ ಶರಣ.
೪ ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ,

ಹಿಡಿದಿರ್ದ ಲಿಂಗ ಘಟಸರ್ಪ.

೫ ದಯವಿಲ್ಲದ ಧರ್ಮವದಾವುದು ?
ದಯವೇ ಬೇಕು ಸಕಲಪ್ರಾಣಿಗಳಲ್ಲಿ.
ದಯವೇ ಧರ್ಮದ ಮೂಲ.

೬ ಸಕಲಜೀವಾತ್ಮರಿಗೆ ಲೇಸನೇ ಬಯಸುವವರು
ದೇವನ ಕುಲದವರು, ಕುಲವಂತರು.

೭ ಭಕ್ತನು ಶಾಂತನಾಗಿರಬೇಕು. ಭೂತಹಿತವಚನವ ನುಡಿಯಬೇಕು.
ಸಕಲಪ್ರಾಣಿಗಳ ತನ್ನಂತೆ ಭಾವಿಸಬೇಕು. ಸಕಲ ಇಂದ್ರಿಯಗಳು
ತನ್ನ ವಶಗತವಾಗಿರಬೇಕು.
ಭಕ್ತನು ತಾನು ತಾನಾಗಿರಬೇಕು.
ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು.

೮ ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ.

೯ ಕಂಡ ಭಕ್ತರಿಗೆ ಕೈಮುಗಿವಾತ ಭಕ್ತ.
ಮೃದುವಚನವೇ ಸಕಲ ಜಪ.
ಮೃದುವಚನವೇ ಸಕಲ ತಪ.
ಸದುವಿನಯವೆ ಸದಾಶಿವನ ಒಲುಮೆ.

೧೦ ಎನಗೆ ನಾನೇ ಹಗೆ; ಎನಗೆ ನಾನೇ ಕೆಳೆ.
ಬಾಗಿದ ತಲೆಯ ಮುಗಿದ ಕೈಯಾಗಿರಿಸು
ಕೂಡಲಸಂಗಮದೇವಾ.

೧೧ ಆಚಾರವೆ ಸ್ವರ್ಗ, ಅನಾಚಾರವೆ ನರಕ.

೧೨ ಪರವಧುವ ಮಹಾದೇವಿಯೆಂದು ಕಾಂಬೆ

೧೩ ಶಿವಪೂಜೆ ಎತ್ತ? ವಿಷಯದ ಸವಿ ಎತ್ತ?

೧೪ ತನುವಿನ ಕೋಪ ತನ್ನ ಹಿರಿಯತನದ ಕೇಡು.
ಮನದ ಕೋಪ ತನ್ನ ಅರಿವಿನ ಕೇಡು

೧೫ ಹೊಯಿದವರೆನ್ನ ಹೊರೆದವರೆಂಬೆನು.
ಬಯಿದವರೆನ್ನ ಬಂಧುಗಳೆಂಬೆನು.

೧೬ ಆಶೆಯುಳ್ಳಾತ ಒಬ್ಬರಧೀನದಲ್ಲಿಪ್ಪನು.
ಆಶೆಯ ಮನದ ಕೊನೆಯನರಿದಾತ
ಕೈಲಾಸದಾಚೆಯಲ್ಲಿಪ್ಪನು.

೧೭ ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು

೧೮ ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ

೧೯ ಕಳಬೇಡ. ಕೊಲಬೇಡ. ಹುಸಿಯ ನುಡಿಯಲುಬೇಡ.
ಮುನಿಯಬೇಡ. ಅನ್ಯರಿಗೆ ಅಸಹ್ಯ ಪಡಬೇಡ.
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ.

೨೦ ದೇಹವೆ ದೇಗುಲ. ಮನವೆ ಲಿಂಗ.

೨೧ ವಿಶ್ವವ ತಿಳಿದು ನೋಡಲು
ಚಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ.

೨೨ ಶಿವಕ್ಕೆ ಪೂಜೆಯಾಗುವಾತನೆ ಭಕ್ತ

೨೩ ಕಾಯಕವೆ ಕೈಲಾಸ.

೨೪ ಅರಸಿಂಗೆ ಬಡತನವಲ್ಲದೆ ಭಕ್ತಂಗೆ ಬಡತನ ಉಂಟೆ ?

೨೫ ಉಣಲಾಗದೆಂಬ ಶಾಸ್ತ್ರವಿಲ್ಲ ಲಿಂಗವಂತನಿಗೆ.

೨೬ ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ.

ಇನ್ನೂ ಇಂತಹ ಮುತ್ತು ರತ್ನ ವಜ್ರ ವೈಡೂರ್ಯಗಳ ತೆನೆಗಳನ್ನು ಕಾಣಬಹುದು, ಶರಣರು ತಮ್ಮಲ್ಲಿ ಬೆಳೆದ ನೀತಿಯ ನಿಲವಿನಲ್ಲಿ.

ವಚನಕಾರರು ನಡೆದು ನುಡಿದು ತೋರಿಸಿದ ಸದಾಚಾರ ಸದ್ವರ್ತನೆಯಲ್ಲಿ, ನುಡಿಗೊಳಗಾಗಿ ನಡೆದು ತೋರಿಸಿದ 'ಕೈಲಾಸ'ದಲ್ಲಿ 'ಸ್ವರ್ಗ'ದಲ್ಲಿ, ಕರ್ತಾರನ ಕಮ್ಮಟವಾದ 'ಮರ್ತ್ಯ'ದಲ್ಲಿ ಇನ್ನೂ ಒಳಗೊಳಗೆ ಪೂಜೆಯ ರಹಸ್ಯವಿದೆ. ಸ್ವಲ್ಪ ಹೊತ್ತು ಮತ್ತೆ ಹಿಂದುರುಗಿ ನೋಡಿ, ಷಣ್ಮುಖಸ್ವಾಮಿಗಳು 'ತಾನು ಎಂತಿರ್ದಂತೆ ಪರಬ್ರಹ್ಮವೆ ಆಗಿ' ಇರುವ ಶರಣನ ಕಡೆ. ಈ ಪರಬ್ರಹ್ಮದ ಸ್ಥಲಕ್ಕೆ ಬರಬೇಕಾದರೆ ಆ ಶರಣನು ಏನೇನು ಮಾಡಿ ಬಂದಿದ್ದಾನೆ? ತನಗೆ ಹೊಲಿದುಕೊಂಡಿದ್ದ ಕಾಯದ ಜೀವದ ಹೊಲಿಗೆಯನ್ನು ಬಿಚ್ಚಿ, 'ಪಂಚಭೂತಂಗಳ ಪೂರ್ವಾಶ್ರಯವನಳಿದು'....'ಇಂತೀ ಅಂಗಪ್ರಕೃತಿಗುಣಗಳೆಲ್ಲವ ನಷ್ಟವ' ಮಾಡಿ, ಮೊದಲು ದೇಹ ಪ್ರಾಣ ಮನ ಭಾವದ ಅವಲೋಹವನ್ನು, ಅವಗುಣಗಳನ್ನು ಸುಟ್ಟು ಧ್ವಂಸಮಾಡಿ, ಮುಂದೆ ಮುಂದೆ ಪರಬ್ರಹ್ಮದ ಮಹಾಪಥದಲ್ಲಿ ನಡೆದು, ತನ್ನ ನಿಜಸ್ಥಲಕ್ಕೆ

ನಿಲುಕಿದ್ದಾನೆ. ಈ ತನ್ನ 'ನಿಜವನೆಯ್ದುವ ಮಾರ್ಗ' ಷಟ್ಸ್ಥಲಮಾರ್ಗ. ಇದರ ಮತ್ತೊಂದು ಹೆಸರು ಎರಡಲ್ಲದ ಪೂಜೆ, 'ಎರಡಿಲ್ಲದ ಕೂಟ'ವಾದ ಸುಜ್ಞಾನ ಸದ್ಭಕ್ತಿಯ ಮಾರ್ಗ. ಹೊರಗೆ ಒಳಗೆ, ತೆರಹಿಲ್ಲದ ಹೊರಗೊಳಗೆ ಭಕ್ತ ಲಿಂಗಕ್ಕೆ ಪೂಜೆಮಾಡುತ್ತ, ಪೂಜೆಯಾಗುತ್ತ ನಿಜಸ್ಥಲಕ್ಕೆ ನಡೆಯ ಬೇಕು ಎಂಬ ಮಾತು ನಿಮಗೆ ಗೊತ್ತಿದೆ. ವಿಶ್ವಜೀವನದ ಪರಮೋದ್ದೇಶ ಪೂಜೆ ಎಂಬ ಸಂಗತಿಯೂ ನಿಮಗೆ ಕಂಡು ಬಂದಿದೆ. ಹಿಂದೆ ಈ ಪೂಜೆ ಯನ್ನು ನೋಡುವ ಸಂದರ್ಭದಲ್ಲಿ ಹೊರಗೆ ಕರಸ್ಥಲದ ಇಷ್ಟಲಿಂಗ ಪೂಜೆ ನಡೆದರೆ, ಇದೇ ಬಹಿರಂಗದ ಪೂಜೆ ಅಂತರಂಗದಲ್ಲಿ ವೇಧಿಸಿ, ಒಳಗೆ ಪ್ರಾಣ ಲಿಂಗದ ಪೂಜೆ ಪ್ರಜ್ವಲಿಸುತ್ತ ನಡೆದ ವಿಚಾರವೂ ನಿಮಗೆ ಕಂಡಿದೆ. ಮತ್ತೆ ಪ್ರಭುದೇವರು ತಮ್ಮ ಹೃದಯಕಮಲದಲ್ಲಿ ಮೂರ್ತಿಗೊಂಡಿದ್ದ 'ಪ್ರಾಣೇಶ್ವರ'ನ ಪೂಜೆ ಮಾಡುವಾಗ, ಅವರ ಪೂಜಾಸಾಮಗ್ರಿಯಲ್ಲಿ ಕ್ಷಮೆಯ ಅಭಿಷೇಕಜಲ, ವೈರಾಗ್ಯದ ಹೂಮಾಲೆ, ಸಮಾಧಿ ಸಂಪತ್ತಿನ ಗಂಧ, ವಿವೇಕದ ವಸ್ತ್ರ, ವಿಶ್ವಾಸದ ಧೂಪ, ಸತ್ಯದ ಆಭರಣ, ನಿರಹಂಕಾರದ ಅಕ್ಷತೆ ಮುಂತಾದುವನ್ನು ಕಣ್ಣಾರೆ ಕಂಡಿದ್ದೀರಿ. ಪ್ರಭುದೇವರಂತೆ ಪ್ರಾಣ ಲಿಂಗ ಪೂಜೆಯಲ್ಲಿ ನಿರತರಾದ ಶರಣರ ಅಂತರಂಗದೊಳಗೆ ಹೊಕ್ಕು ನೋಡಿದರೆ, ಅಲ್ಲಿಯೂ ಇದೇ ಮಾದರಿಯ ಪೂಜಾಸಾಮಗ್ರಿ ಕಂಡು ಬರುತ್ತವೆ. ಅದನ್ನು ನೀವೇ ನೋಡಿಕೊಳ್ಳಿ. ನಮಗಿಲ್ಲಿ ವಿಚಾರಿಸಬೇಕಾದ ವಿಷಯ, ಪೂಜೆಯಲ್ಲಿ ಸನ್ನಿಹಿತವಾಗಿರುವ ನೀತಿ ಗುಣ ಶೀಲ ಸದಾಚಾರ ಗಳು, ಶಾಂತಿ ಸಮಾಧಾನ ಕ್ಷಮೆ ದಮೆ ವಿವೇಕ ವೈರಾಗ್ಯ ವಿಶ್ವಾಸಗಳು. ನೀತಿ ನಡತೆ ಇಲ್ಲದೆ, ಆಚಾರ ವಿಚಾರವಿಲ್ಲದೆ, ಶಾಂತಿ ಸೈರಣೆ ಇಲ್ಲದೆ ಪೂಜೆ ಇಲ್ಲ; ಪೂಜೆಯಿಲ್ಲದೆ ದೇವನಿಲ್ಲ. ದೇವನಲ್ಲದೆ ಮಾನವಜೀವನಕ್ಕೆ, ವಿಶ್ವ ಬ್ರಹ್ಮಾಂಡಗಳು ಗತಿಗೊಂಡಿರುವ ಜಗಜ್ಜೀವನಕ್ಕೆ ಅರ್ಥವಿಲ್ಲ. ದೇವನಿಗೆ ಪೂಜೆಯಾಗಬಲ್ಲ ಜೀವನದ ಕಾಯಕ ವ್ಯವಹಾರ ನೀತಿ, ಅದೂ ಅಷ್ಟವಿಧಾ ರ್ಚನೆ ಷೋಡಶೋಪಚಾರವೆ. ಕರಸ್ಥಲದ ಇಷ್ಟಲಿಂಗ ಹೃದಯದಿಂದ ಭಾವಸ್ಥಲಕ್ಕೆ, ಭಾವದಿಂದ ಮನಕ್ಕೆ, ಮನದಿಂದ ಕಣ್ಣು, ಕಣ್ಣೊಳಗಿಂದೆ ಕರಸ್ಥಲಕ್ಕೆ ಬಂದಂತೆ, ನಿಜವಾದ ನೀತಿ ವ್ಯವಹಾರ ವೃತ್ತಿಗಳು ಅದೇ ದೇವನೊಡನೆ ಹೃದಯಸ್ಥಲದಿಂದ ಉಕ್ಕಿ ಬಂದ ಪೂಜೆಗಳೆ. ನಮ್ಮ ಲೋಕ

ವ್ಯವಹಾರವೆಲ್ಲ ಪೂಜೆಯಲ್ಲಿ ತೊಯ್ದು ಬಂದರೆ, ಶಿವಪೂಜೆಯಲ್ಲಿ ನನೆದು ಮೃದುವಾಗಿ ಬಂದರೆ, ಶಿವಜ್ಞಾನದಲ್ಲಿ ಬೆಳಗಿ ಬಂದರೆ, ಶಿವಭಕ್ತಿಯಲ್ಲಿ ಪ್ರಾಣಿಸಿ ಬಂದರೆ, ಆಗ ಇಲ್ಲಿ ಏನು? ಅಲ್ಲಿ ಏನು? ವ್ಯವಹಾರವೆಲ್ಲ ಲಿಂಗಾರ್ಥ, ಲಿಂಗ ಉದ್ದೇಶ. ಲಿಂಗಗಂಭೀರದಿಂದ ಬಂದ ಸತ್ಯ ಪ್ರೇಮ, ಶಾಂತಿ ದಾಂತಿ, ದಯೆ ದಾಕ್ಷಿಣ್ಯ, ಸಹಾಯ ಉಪಕಾರ, ನಡೆ ನುಡಿ, ನಿರ್ಮಲ ನಿರ್ಮಮ ನಿರಹಂಭಾವ, ಸದುವಿನಯ ಸದಾಚಾರ ಸದ್ವರ್ತನೆ ಸಚ್ಛೀಲವೆಲ್ಲ ಮಾನವಲಿಂಗವನ್ನು ಮಹಾಲಿಂಗಕ್ಕೆ ಒಯ್ದು ಮುಟ್ಟಿಸುವ ಶಿವಪೂಜೆ; ಸರ್ವಮಂಗಲವಾದ ಲಿಂಗಪೂಜೆ. ವಿಶ್ವಬ್ರಹ್ಮಾಂಡ ಲಿಂಗಮಯ. ಸುಮ್ಮನೆ ಇರುವುದು ಲಿಂಗ, ನಡೆದಿರುವುದು ಪೂಜೆ.

ಕೊನೆಯ ಮಾತು, ವಚನಸಾಹಿತ್ಯದ ವಿಚಾರ. ಕನ್ನಡದಲ್ಲಿ ಹುಟ್ಟಿದ ವಚನಗಳ ವಿಶೇಷವೇನು? ಘನತೆಯೇನು? ಉಪನಿಷತ್ತು ಭಗವದ್‌ಗೀತೆ ಕುರಾಣ ಬಾಯಿಬಲ್ ಮುಂತಾದ ವಿಶ್ವಮಾನ್ಯ ಗ್ರಂಥಗಳೊಡನೆ ಸರಿ ದೊರೆಯಾದ ಸ್ಥಾನ ಮಾನ ವಚನಸಾಹಿತ್ಯಕ್ಕೆ ಇದೆಯೆ? ವಿಶ್ವಸಾಹಿತ್ಯ ದಲ್ಲಿ ಕನ್ನಡದ ವಚನಸಾಹಿತ್ಯಕ್ಕೆ ಯಾವ ಮಾನ, ಎಷ್ಟು ಮನ್ನಣೆ ಇದೆ? —ಎಂದು ಮುಂತಾಗಿ ನೀವು ಪ್ರಶ್ನೆ ಎತ್ತಬಹುದು. ಇಂದಿನ ಕಾಲಮಾನ ವಿಚಿತ್ರ. ಉತ್ತರ ಕೊಡುವುದು ಕಷ್ಟ. ಜಾತಿ ಮತ ದೇಶ ಭಾಷೆ ಬುದ್ಧಿ ಭಾವಗಳ ಸಂಕೋಚದಲ್ಲಿ ಮನೆಮಾಡಿಕೊಂಡು, ತಂತಮ್ಮ 'ಸಂಕೋಚ' ವನ್ನು ಅದೇ 'ವಿಶ್ವವಿಸ್ತಾರ'ವೆಂದು ತಿಳಿದುಕೊಂಡು, ಕುರಾಣ ಬಾಯಿಬಲ್ಲು ಗಳ, ಗೀತೆ ಉಪನಿಷತ್ತುಗಳ 'ಬ್ರಹ್ಮದೇವರು' ಬಂದು ಹೇಳಿದರೂ ಅಲು ಗಾಡದೆ, ತಮ್ಮ ನಂಬಿಗೆಯಲ್ಲಿ ತಾವು ಬೇರುಬಿಟ್ಟವರಿಗೆ ಯಾರು ಏನು ಹೇಳಿದರೇನು? ವೇದ ಉಪನಿಷತ್ತುಗಳ ಭಕ್ತರು, ಗೀತೆ ಬಾಯಿಬಲ್ಲುಗಳ ಭಕ್ತರು, ಅದರಂತೆ ವಚನಸಾಹಿತ್ಯ ಸಂತಸಾಹಿತ್ಯದ ಭಕ್ತರು, ಮತ್ತೆ 'ದಿವ್ಯಾನುಭಾವದ ಅಪಾರವಾರಾಶಿಯಲ್ಲಿ ಮೂಡಿ, ಮೇಲೆ ನುಡಿಯಾಗಿ ಬಂದು ವಿಶ್ವಭಾಷೆಯಲ್ಲಿ ಪ್ರಕಾಶಿಸುತ್ತಿರುವ ವಿವಿಧ ಸಾಹಿತ್ಯದ ಭಕ್ತರು ಪೂಜಿಸಲಿ ತಂತಮ್ಮ ಮನವೊಲಿದ ಸಾಹಿತ್ಯ ಗ್ರಂಥಗಳನ್ನು. ಹಾಡಲಿ ಅವೇ ಬ್ರಹ್ಮಸಾಹಿತ್ಯವೆಂದು. ಆದರೆ ಬಯ್ಯದಿರಲಿ, ಕೀಳು ಮಾಡದಿರಲಿ ಅನ್ಯ ಜನಾಂಗ ಅನ್ಯ ಜಾತಿ, ಅನ್ಯ ದೇಶ ಭಾಷೆಯ ಸ್ವಾನುಭಾವದ

ಸಾಹಿತ್ಯವನ್ನು. ಒಬ್ಬಿಬ್ಬರನ್ನು ನೋಡಿ ಮಹಾಕವಿ ವಿಶ್ವಕವಿಯೆಂದು, ಒಂದೆರಡು ಸಾಹಿತ್ಯ ಗ್ರಂಥಗಳನ್ನು ನೋಡಿ ವಿಶ್ವಸಾಹಿತ್ಯ ಬ್ರಹ್ಮಾಂಡ ಸಾಹಿತ್ಯವೆಂದು ಕರೆವ 'ಅಲ್ಪ' ಬುದ್ಧಿ 'ಅಲ್ಪ' ವಿಚಾರ ಇಲ್ಲವಾಗಲಿ. ಬುದ್ಧಿ ಭೂಮವಾಗಲಿ, ಹೃದಯ ಬ್ರಹ್ಮವಾಗಲಿ. ಇಂದಿನ ಕಾಲಕ್ಕೆ ಮುಂದೆ ಕಾಲವಿದೆ; ಒಂದಾಗುವ ಕಾಲ ಬಂದಿದೆ; ಒಟ್ಟಾಗಿ ನೋಡುವ ಕಾಲ ಸನ್ನಿಹಿತವಾಗಿದೆ. ಸಂಕೋಚದ ಬಾಗಿಲು ಕಿಡಿಕಿಗಳನ್ನು ತೆರೆದು, ಅನಾದ್ಯ ನಂತವಾದ ಬ್ರಹ್ಮವಿಸ್ತಾರವನ್ನು ನೋಡುವ ಇರುವ, ತಿನ್ನುವ ಉಣ್ಣುವ, ಬ್ರಹ್ಮವಿಸ್ತಾರದಲ್ಲಿ ಮಲಗುವ ಏಳುವ ವ್ಯವಹರಿಸುವ ಕಾಲ ಮನುಷ್ಯ ಕುಲಕೋಟಿಯನ್ನು ತನ್ನತ್ತ ಕೈಮಾಡಿ ಕರೆಯುತ್ತಿದೆ. ಎದೆ 'ಓ' ಎನ್ನುತ್ತಿದೆ. ವಿಸ್ತಾರದತ್ತ ನಡೆದರೆ, ಸ್ವಾನುಭಾವಸಾಹಿತ್ಯದ 'ಮರ್ತ್ಯದ ಮಣಿಹ' ಪೂರೈಸಿದಂತೆ. ವಚನಸಾಹಿತ್ಯದ ವಿಮರ್ಶೆ ಮಾಡುವವರು ಮಾಡಲಿ. ಮಾಡುವಾಗ ಶರಣರ ವಚನಗೀತಗಳ ಪಾತಾಳದ ಆಳವನ್ನು, ದೇವಲೋಕದ ಎತ್ತರವನ್ನು ಕಂಡ ಚೆನ್ನಬಸವಣ್ಣನವರ ಈ ಮಾತನ್ನು ಕೇಳಿ, ಗಂಭೀರವಾಗಿ ಮನನಮಾಡಿ ನಿದಿಧ್ಯಾಸಮಾಡಿ, ತಮ್ಮ ನಿರ್ಮಲ ಬುದ್ಧಿಯಿಂದ ನಿರಂಜನಭಾವದಿಂದ, ಜಾತಿ ಕಾಲ ದೇಶ ಭಾಷೆಗಳ ಸಂಕೋಚವನ್ನು ಬದಿಗಿರಿಸಿದ ವಿಶ್ವವಿಶಾಲ ಹೃದಯದಿಂದ ವಿಮರ್ಶೆ ನಡೆಸಲಿ :

> ಪಾತಾಳದಗ್ಗಣಿಯು ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ
> ತೆಗೆಯಬಹುದೇ ? ಶಬ್ದಸೋಪಾನವ ಕಟ್ಟಿ ನಡೆಸಿದವರು ಪುರಾತನರು.
> ದೇವಲೋಕಕ್ಕೆ ಬಟ್ಟೆ ಕಾಣಿರೋ.
> ಮರ್ತ್ಯಲೋಕದವರ ಮನದ ಮೈಲಿಗೆಯು ಕಳೆಯಲೆಂದು,
> ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು
> ಕೂಡಲಚೆನ್ನಸಂಗನ ಶರಣರು.

ವ.ಸಾ.ಸಂ. ಪು. ೩, ವ. ೧೯

ಮತ್ತು ಈ ಸ್ವಾನುಭಾವಗೀತಗಳು ದೇಶವನ್ನು ದಾಟಿ, ಕಾಲವನ್ನು ಮೀರಿ, ಕನ್ನಡ ಭಾಷೆಯನ್ನು ಕಳೆದು, ವೀರಶೈವ ಜಾತಿ ಧರ್ಮದ ಮುಸುಕನ್ನು ಓಸರಿಸಿ ಮುಂದೆ ಮುಂದೆ ನಡೆದು, ಮಾನವನ ಪಾತಾಳದಿಂದ ದೇವ

ಲೋಕದ ಅನಂತಕ್ಕೆ ಕಟ್ಟಿದ ಸೋಪಾನವಾಗಿ ನಿಂತಿವೆಯೆ? ಮಾನವನ ಹೃದಯದ, ವಿಶ್ವಭೂತ ಬ್ರಹ್ಮಾಂಡಗಳ ಹೃದಯದ ಹೃದಯವಾದ, 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ' ಎಂದು ಭಗವದ್ಗೀತೆ ಹೇಳುವ ಹೃದ್ದೇಶದ ಈಶ್ವರನಿಗೆ, ಮನುಷ್ಯನ ಭೂತಕೋಟಿಯ ಪರಮೈಶ್ವರ್ಯವಾದ ಪರಬ್ರಹ್ಮಕ್ಕೆ, ಪರಿಪೂರ್ಣಕ್ಕೆ, ಪರಬ್ರಹ್ಮದತ್ತಾಚೆ ಏನೂ ಏನೂ ಎನಲಿಲ್ಲದ ನಿರವಯಲ ಸ್ಥಲಕ್ಕೆ ಮಾನವಕುಲವನ್ನು ನಿಲುಕಿಸಬಲ್ಲುವೇ ಶರಣರ ಗೀತಗಳು? ನೆಲವನ್ನು ದಿವ್ಯವಾದ ಆಕಾಶವನ್ನು ಮಾಡುವ ಪ್ರಾಣಸತ್ತ್ವ ಪ್ರಾಣಸಾಮರ್ಥ್ಯವಿದೆಯೆ ವಚನಸಾಹಿತ್ಯದಲ್ಲಿ? ಇಂತಹ ಪ್ರಶ್ನೆಗಳಿಗೆಲ್ಲ ಪರೀಕ್ಷಕರೆ ಉತ್ತರ ಕೊಡಲಿ. ಆ ಗೊಡವೆ ನಮಗೆ ಬೇಡ. 'ನಮ್ಮ ಚಿಂತೆ ನಮಗೆ ಹಾಸಲುಂಟು, ಹೊದೆಯಲುಂಟು'. ಇನ್ನು ಮೇಲೆ ನೀವು ಮುಂದೆ ಒಳಗೆ ನಡೆಯಿರಿ. ನಾನು ನಿಮ್ಮ ಹಿಂದೆ ಬರುತ್ತೇನೆ. ಶರಣಾರ್ಥಿ.

ಕೊನೆಯ ಮಾತಿಗೆ ಮುಕ್ತಾಯದ ಮಾತು ಕೃತಜ್ಞತೆ. ತುಂಬಿದ ಹೃದಯದಿಂದ ಉಪಕಾರ ಸಹಾಯ ಸಹಕಾರವನ್ನು ತನಗೆ ನೀಡಿದವರ ಅರಿವಿಟ್ಟುಕೊಂಡು, ಅವರನ್ನು ನೆನೆಸಿಕೊಳ್ಳುವುದು ಎಂಥ ನಿರ್ಭರಾನಂದ! ಮಾನವಕುಲದ ದೃಷ್ಟಿಯಿಂದ ಒಂದು ಅತ್ಯಂತ ಮಹತ್ವದ 'ದರ್ಶನ' ವೆನಿಸಬಹುದಾದ ಶರಣರ 'ಸ್ವಯಂದರ್ಶನ'ವನ್ನು ಅವರ ಗೀತಗಳಿಂದ ಸಂಗ್ರಹಿಸಿ ಜೋಡಣೆಗೊಳಿಸಿ, ಒಂದು ಪ್ರಾಣಸಮಗ್ರತೆಯನ್ನು ತರುವ ಈ ಪ್ರಯತ್ನಕ್ಕೆ ಮೂಲ ಕಾರಣ ಪುರುಷರು ಶ್ರೀ ಕೆ. ಎಸ್. ಧರಣೇಂದ್ರಯ್ಯನವರು. ಮೈಸೂರು ಸರಕಾರದ ಸಾಹಿತ್ಯ-ಸಂಸ್ಕೃತಿ ಅಭಿವೃದ್ಧಿ ಶಾಖೆಯ ಅಧಿಕಾರಿಗಳಾಗಿರುವ ಅವರು ನನ್ನಲ್ಲಿ ತೋರಿದ ವಿಶ್ವಾಸ ಆತ್ಮೀಯ ಭಾವ, ಸಲುಗೆ ಸೌಜನ್ಯ ಅವರವೇ. ಈ ವಚನ ಸಾಹಿತ್ಯ ಸಂಗ್ರಹದ ಕಾರ್ಯವನ್ನು ಕೈಕೊಳ್ಳಬೇಕೋ ಬೇಡವೋ ಎಂದು ಅರೆಮನಸ್ಸಿನಲ್ಲಿರುವಾಗ ಅರ್ಧಮನಸ್ಸನ್ನು ಪೂರ್ಣಗೊಳಿಸಿ ಕೆಲಸದಲ್ಲಿ ತೊಡಗಿಸಿದವರು ಶ್ರೀ ಸಿದ್ಧಯ್ಯನವರು ಪುರಾಣಿಕ. ಅವರು ನನ್ನ ಹೃದಯದಲ್ಲಿ ಬರೆದ ಪ್ರೇರಣೆ ಇನ್ನೂ ಅಚ್ಚಳಿಯದಂತಿದೆ. ಅವರಿಲ್ಲದಿದ್ದರೆ 'ಸಂಗ್ರಹ' ಬೆಳಗಾಗುತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಶ್ರೀ ಬಿ. ಕೆ. ಮೆಣಶಿಯವರು 'ಸಂಗ್ರಹ'ದ

ರೂಪರಚನೆಯವಿಷಯವಾಗಿ ಅರ್ಥಭರಿತವಾದ ಸಲಹೆ ಸೂಚನೆ ಕೊಟ್ಟರು. ಮತ್ತೂ ಪ್ರತ್ಯಕ್ಷ, ಪರೋಕ್ಷವಾಗಿ ಸಹಕಾರ ನೀಡಿದರು. ಶ್ರೀ ವ್ಹಿ. ಸಿ. ಮಾಲಗತ್ತಿಯವರು ಕೊಟ್ಟ ಧೈರ್ಯ, ಮಾಡಿದ ಪ್ರೋತ್ಸಾಹ ನೆನಪಿಡ ತಕ್ಕುವು. ಶ್ರೀ ಬಸವರಾಜ ಜಿಗಜಿನ್ನಿ ಇವರು 'ಸಂಗ್ರಹ'ದ ಬಹುಭಾಗ ವನ್ನು, ಒಳ್ಳೆ ಆಸ್ಥೆಯಿಂದ ಎಂದು ಹೇಳುವುದಕ್ಕಿಂತ ಭಕ್ತಿಯಿಂದ ಪ್ರತಿ ಮಾಡಿಕೊಟ್ಟರು. ಅವರ ವಿದ್ಯೆ ಅವರ ಅನುಭವ ಅವರ ಶ್ರಮ ಕಾರ್ಯದಕ್ಷತೆ ಅಭಿವಂದನೀಯ. ಮತ್ತೆ ನಮ್ಮ ಕಾರ್ಯಕರ್ತರ 'ಕಮ್ಮಟ'ದೊಳಗೆ ಕೆಲಸ ಮಾಡಿದವರು ಡಾ. ಎಸ್. ಎಸ್. ಬಸುಪಟ್ಟದ, ಎಂ.ಎ., ಪಿಎಚ್.ಡಿ., ಪ್ರೊ. ಭುಜೇಂದ್ರ ಮಹೀಶವಾಡಿ, ಎಂ.ಎ., ಪ್ರೊ. ಆರ್. ಎಂ. ಕವೀಶ್ವರ ಎಂ.ಎ., ಪ್ರೊ. ಚಂದ್ರಶೇಖರ, ಬಿ. ಕಂಬಾರ, ಎಂ.ಎ., ಇವರು. ಇವರು ಎಂದು ಹೇಳುವುದಕ್ಕಿಂತ ನಾನು-ಇವರು ಎಂದು ಹೇಳಿದರೆ, ಸತ್ಯಾರ್ಥಕ್ಕೆ ಸಮೀಪ ಬಂದಂತೆ. ತಮ್ಮ ಕೆಲಸಬೊಗಸೆ ಬಿಟ್ಟು, ಯಾವ ಪ್ರೇಮದಿಂದ ಎಂಥ ನಿಷ್ಠೆಯಿಂದ ಸಹಕರಿಸಿದರು ಇವರೆಲ್ಲ! ಕೂಡಿ ಕೆಲಸ ಮಾಡಿದ ದಿನ ಗಳ ನೆನಪಾದರೆ, ಹೃದಯ ಉಕ್ಕಿ ಕಣ್ಣು ತುಂಬುವ ಅನುಭವ. ಇವರಲ್ಲಿ ಶ್ರೀ ಚಂದ್ರಶೇಖರ, ಬಿ. ಕಂಬಾರ ಅವರು ಮೊದಲಿಂದ ತುದಿಯವರೆಗೆ ತೋರಿದ ಕಾರ್ಯಶ್ರದ್ಧೆ, ಅಚಲನಿಷ್ಠೆ ನಿಸ್ಸೀಮ. ಹಿಂದೊಮ್ಮೆ ವಿದ್ಯಾರ್ಥಿ ಗಳಾಗಿ ಇಂದು ಪ್ರಾಧ್ಯಾಪಕರಾಗಿರುವ ಇವರೆಲ್ಲ 'ಇಲ್ಲಿಗೆ ಸಲ್ಲುವವರು, ಅಲ್ಲಿಗೂ ಸಲ್ಲತಕ್ಕವರು'—ಎಂದು ನನ್ನ ಸದುಹೃದಯದ ಹಾರೈಕೆ. ಇವರಿಗೆಲ್ಲ ಆಭಾರಿಯಾಗಿದ್ದೇನೆ, ಕೃತಜ್ಞನಾಗಿದ್ದೇನೆ ಎಂಬ ಉಪಚಾರದ ದಂದುಗ ಬೇಡ. ಏಕೆಂದರೆ ಈ 'ಒಳಗೆ ಪ್ರವೇಶ'ಕ್ಕೆ ದಾರಿ ತೋರಿದ ನನ್ನ ಬುದ್ಧಿಗೂ, ಬರೆದ ಕೈಗೂ ನಾನು ಆಭಾರಿ, ಕೃತಜ್ಞ ಎಂದು ಹೇಳುವ ಪ್ರಸಂಗ ಬಂದೀತು? ಶ್ರೀ ಕೆ. ಎಸ್. ಧರಣೇಂದ್ರಯ್ಯನವರೊಡನೆ ಮೈಸೂರು ಮುದ್ರಣ ಪ್ರಕಾಶನಾಲಯದ ಒಡೆಯರಾದ ಶ್ರೀ ಜಿ. ಹೆಚ್. ರಾಮರಾಯರಿಗೆ ಹೃದಯದಿಂದ ಹೊಮ್ಮಿ ಬರುವ ಕೃತಜ್ಞತೆಗಳು. ಅವರ ತಾಳ್ಮೆ, ಸಹಕಾರಭಾವ, ಎಲ್ಲಕ್ಕೂ ಮಿಗಿಲಾದ ಅವರ ಸಜ್ಜನಿಕೆ ಮನವನ್ನು ಮಾರುಗೊಂಡಿವೆ. ಮತ್ತೇನು?

ಇಲ್ಲಿಗೆ ಮಾತಿನ ಮಥನಕ್ಕೆ ಮಂಗಲ. ಬುದ್ಧಿಯ ಮಥನಕ್ಕೆ ಭದ್ರ. ಭಾವದ ಮಥನಕ್ಕೆ ಶೋಭನ. ನಿಶ್ಶಬ್ದಕ್ಕೆ ಶಬ್ದ ಪೂಜೆ.

ಲಿಂಗರಾಜ ಕಾಲೇಜ ಸಂ. ಶಿ. ಭೂಸನೂರಮಠ
ಬೆಳಗಾವಿ
೩೦–೧–೬೫

ವಚನ ಸಾಹಿತ್ಯ ಸಂಗ್ರಹ

೧

ಸ್ವಾನುಭಾವ ದೇವರು

೧. ಸ್ವಾನುಭಾವ

೧

ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲಸಂಗಮದೇವಾ.

೨

ನೆನಹ ನೆನೆವ ಮನದಲ್ಲಿಲ್ಲ, ತನುವಿನಲ್ಲಿ ಆಸೆ ಮುನ್ನಿಲ್ಲ. ನೆನೆವ ಮನ ವನತಿಗಳೆದ ಘನಕ್ಕೆ ಘನವನೆಂತೆಂಬೆ? ತನ್ನಲ್ಲಿ ತಾನಾಯಿತ್ತು. ಭಿನ್ನವಿಲ್ಲದೆ ನಿಂದ ನಿಜವನೇನೆಂಬೆ? ಅನಾಯಾಸದನುವ ಕಂಡು ಆನು ಬೆರಗಾದೆನಯ್ಯ. ಎಂತಿದ್ದುದು ಅಂತೆ ಅದೆ ಚಿಂತೆಯಿಲ್ಲದನುಭಾವ ಗೊಹೇಶ್ವರ.

೩

ಮರ ಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು. ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ, ತನುಗುಣಾದಿಗಳ ಸುಡಲಾಯಿತ್ತು. ಇದು ಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ, ಎನ್ನೊಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ.

೪

ಅಂಗವಿಲ್ಲದನುಭವಕ್ಕೆ ನೇಮವಿಲ್ಲದ ನೆನಹಯ್ಯ! ತಾಗು ಕಡೆಯಿಲ್ಲದ ಸುಮ್ಮಾನದ ಸುಖ ಕಂಡಾ! ಗೊಹೇಶ್ವರ ನಿರಾಳ ಕಂಡಾ!

೫

ಅನುಭಾವದಿಂದ ಹುಟ್ಟಿತ್ತು ಲಿಂಗ. ಅನುಭಾವದಿಂದ ಹುಟ್ಟಿತ್ತು ಜಂಗಮ. ಅನುಭಾವದಿಂದ ಹುಟ್ಟಿತ್ತು ಪ್ರಸಾದ. ಅನುಭಾವದನುವಿನಲ್ಲಿ ಗೊಹೇಶ್ವರಲಿಂಗವನುಪಮ ಸುಖಿ.

೬

ಅನುಭಾವ ನೆಲೆಗೊಂಡಲ್ಲದೆ ಅಂಗಲಿಂಗದ ಹೊಲಬನರಿಯಬಾರದು. ಅನುಭಾವ ನೆಲೆಗೊಂಡಲ್ಲದೆ ಭಕ್ತಿ ವಿರಕ್ತಿ ನೆಲೆಗೊಳ್ಳದು. ಅನುಭಾವ ನೆಲೆಗೊಂಡಲ್ಲದೆ ಜ್ಞಾನಸುಜ್ಞಾನದ ನೆಲೆಯ ಕಾಣಬಾರದು. ಅನುಭಾವ ನೆಲೆಗೊಂಡಲ್ಲದೆ ತಾನದಾರೆಂಬುದು ತಿಳಿಯದು. ಅನುಭಾವ ನೆಲೆಗೊಂಡಲ್ಲದೆ ತಾನು ತಾನಾಗಬಾರದು. ಇದು ಕಾರಣ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಅನುಭಾವದ ಅನುವಿನಲ್ಲಿಪ್ಪವರ ನೀವೆಂದೇ ಕಾಂಬೆನು.

೭

ಅಡವಿಯೊಳಗರಸುವಡೆ ಸಿಡಿಗಂಟೆ ತಾನಲ್ಲ. ಮಡುವಿನೊಳಗರಸುವಡೆ ಮತ್ಸ್ಯಮಂಡುಕನಲ್ಲ. ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ. ಅಷ್ಟತನುವಿನೊಳಗೆ ಹುದುಗಿರ್ಪ ಲಿಂಗವ ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ.

೮

ಅನುಭಾವವ ನುಡಿವ ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವದು. ಅನುಭಾವವೆಂಬುದು ನಿಜವಾಸದಲ್ಲಿ ಇರಿಸುವದು. ಇಂತಪ್ಪ ಅನುಭಾವದ ಅನುವನರಿಯದೆ, ಶಾಸ್ತ್ರಜಾಲದ ಪಸಾರವನಿಕ್ಕಿ, ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ, ನೀವೆತ್ತ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ.

೯

ಅನುಭಾವ ಅನುಭಾವವೆಂದೆಂಬಿರಿ. ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ. ಅನುಭಾವವೆಂಬುದೇನು ರಚ್ಚೆಯ ಮಾತೆ? ಅನುಭಾವವೆಂಬುದೇನು ಸಂತೆಯ ಸುದ್ದಿಯೆ? ಅನುಭಾವವೆಂಬುದೇನು

ಬೀದಿಯ ಪಸಾರವೆ? ಏನ ಹೇಳುವೆನಯ್ಯಾ ಅನುಭಾವದ ಘನವನು? ಆನೆಯು ಮಾನದೊಳಗಿಕ್ಕಿದೊಡೆ ಅಡಗುವದೆ, ದರ್ಪಣದೊಳಗಲ್ಲದೆ? ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ, ನಿಂದ ನಿಂದಲ್ಲಿ ಬಂದ ಬಂದಲ್ಲಿ ಅನುಭಾವವ ಮಾಡುವ ಪಾತಕರನೆನಗೊಮ್ಮೆ ತೋರದಿರಯ್ಯಾ ಕೂಡಲ ಚೆನ್ನಸಂಗಮದೇವಾ.

೧೦

ಉಲಿಗರ ಮಾತು ಉಲಿಗರ ತೋಟಿ ಎತ್ತ? ಲಿಂಗಾನುಭಾವದ ರಹಸ್ಯದ ವಾಕ್ಯವೆತ್ತ? ಸಂತೆಯೊಳಗೆ ಸಮಾಧಿಯುಂಟೆ ಮರುಳೆ? ಲಿಂಗಾನುಭಾವದ ಮಹಾನುಭಾವ ಸದ್ಭಕ್ತ ವಿರಕ್ತ ವೀರಮಾಹೇಶ್ವರರೆಂಬ ಶಿವಯುತರಿಗಲ್ಲದೆ, ಹೊರವೇಷದಲ್ಲಿ ನಾಮ ರೂಪು ಕ್ರಿಯೆವಿಡಿದು, ವಾಗ್ಬ್ರಹ್ಮಿಗಳೆನಿಸುವ ವಾಚಾಳಕರಿಗೆಲ್ಲಿಯದೊ? ಅದೆಂತೋ? ಅದೆತ್ತಣ ಸುದ್ದಿಯೋ ಕೂಡಲಚೆನ್ನಸಂಗಮದೇವಾ?

೧೧

ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗದ ಅನುಭಾವವೇಕೋ? ಮಾತಿನ ಮಾತಿನ ಮಹಂತರು ಹಿರಿಯರು. ಗೊಹೇಶ್ವರನೆಂಬ ಲಿಂಗಸಾರಾಯವು ತೋರದು ತೋರದು ಬಹುಮುಖಿಗಳಿಗೆ.

೧೨

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯ! ಅನುಭಾವವೇ ತನುವಿಂಗೆ ಆಧಾರ. ಅನುಭಾವಿಗಳ ಅನುಭಾವ ಮನವಾರೆ ವೇಧಿಸಿದವರಿಗೆ ಜನನವಿಲ್ಲ ಕಾಣಾ ರಾಮನಾಥಾ.

೧೩

ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿರೋ. ಎಲ್ಲರೂ ಅಲ್ಲವೆಂಬುದೂ ಪ್ರಮಾಣವಲ್ಲ ಕಾಣಿರೋ. ಅದೇನು ಕಾರಣವೆಂದರೆ ಶಿವ

ಶರಣರ ಹೃದಯುದ ಅಂತಸ್ಥವನರಿಯುರಾಗಿ. ಎನ್ನ ಅಹುದೆಂಬುದನೂ ಅಲ್ಲ ಎಂಬುದನೂ ಎನ್ನ ಮನೋಮೂರ್ತಿ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ, ನೀನೆ ಬಲ್ಲೆ.

೧೪

ಮಳೆ ಹೊಯ್ದರೆ ಆಕಾಶ ನೆನೆವುದೇ ? ಬಿರುಗಾಳಿ ಬೀಸಿದರೆ ಆಕಾಶ ಅಲುಗುವುದೇ ? ಕಿತ್ತಲಗಿನಿಂದ ಇರಿದರೆ ಆಕಾಶ ಹರಿವುದೇ ? ಬಚ್ಚಬರಿಯ ಬಯಲು ಕಟ್ಟು ಕುಟ್ಟಿಗೆ ಒಳಗಾಗಬಲ್ಲುದೇ ? ನಿಶ್ಚಿಂತ ನಿರಾಳನಾದ ನಿಜೈಕ್ಯನ ತಥ್ಯಮಿಥ್ಯದಿಂದ ನುಡಿವ ತುಚ್ಛರ ನುಡಿ ತಟ್ಟಬಲ್ಲುದೇ ? ವಸ್ತುವ ವಾಕುಶಾಸ್ತ್ರ ಖಂಡಿಸಬಲ್ಲುದೇ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ?

೨. ವಚನಗಳು ಸ್ವಾನುಭಾವ

೧೫

ಕರಿಯನಿತ್ತಡೆ ಒಲ್ಲೆ. ಸಿರಿಯನಿತ್ತಡೆ ಒಲ್ಲೆ. ಹಿರಿದಪ್ಪ ರಾಜ್ಯವ ನಿತ್ತಡೆ ಒಲ್ಲೆ. ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ, ನಿಮ್ಮ ನಿತ್ತೆ ಕಾಣಾ ರಾಮನಾಥಾ !

೧೬

ಆದ್ಯರ ವಚನ ಪರುಷ ಕಂಡಣ್ಣಾ ! ಸದಾಶಿವನೆಂಬ ಲಿಂಗವ ನೆರೆ ನಂಬುವುದು ; ನಂಬಲೊಡನೆ ನೀ ವಿಜಯಿ ಕಂಡಣ್ಣಾ. ಅಧರಕ್ಕೆ ಕಹಿ, ಉದರಕ್ಕೆ ಸಿಹಿ,—ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

೧೭

ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ

ಲಿಂಗ ಮೆಚ್ಚಿ 'ಅಹುದಹುದೆ'ನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯಾ?

೧೮

ಎರಡೆಂಬತ್ತು ಕೋಟಿ ವಚನವ ಹಾಡಿ, ಹಲವ ಹಂಬಲಿಸಿತ್ತೆನ್ನ ಮನವು. ಮನ ಘನವನರಿಯದು, ಘನ ಮನವನರಿಯದು. ಗೊಹೇಶ್ವರ ನೆಂಬ ಲಿಂಗವನರಿದ ಬಳಿಕ, ಗೀತವೆಲ್ಲಾ ಒಂದು ಮಾತಿನೊಳಗು.

೧೯

ಪಾತಾಳದಗ್ಗಣಿಯ ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ ತೆಗೆಯ ಬಹುದೇ? ಶಬ್ದಸೋಪಾನವ ಕಟ್ಟಿ ನಡೆಸಿದವರು ಪುರಾತನರು. ದೇವ ಲೋಕಕ್ಕೆ ಬಟ್ಟೆ ಕಾಣಿರೋ. ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು ಕೂಡಲಚೆನ್ನ ಸಂಗನ ಶರಣರು.

೨೦

ಮಾತೆಂಬುದು ಜ್ಯೋತಿರ್ಲಿಂಗ! ಸ್ವರವೆಂಬುದು ಪರತತ್ವ! ತಾಳೋಷ್ಟ ಸಂಪುಟವೆಂಬುದೇ ನಾದಬಿಂದುಕಳಾತೀತ! ಗೊಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ.

೨೧

ತನ್ನ ತಾನರಿದಡೆ ನುಡಿಯೆಲ್ಲ ತತ್ವ ನೋಡಾ! ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ! ಅರಿದು ಮರೆದ ಶಿವಯೋಗಿಯ ಶಬುದವೆಲ್ಲಾ ಉಪದೇಶವಲ್ಲದೆ ಭಿನ್ನವುಂಟೆ? ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ, ಎನ್ನ ಮನದೊಳಗೆ ಕಂದುಕಲೆಯೆಂಬುದಿಲ್ಲ ನೋಡಾ! ನಮ್ಮ ಗೊಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ ಬಾಯ್ತೆಗೆದೆನಲ್ಲದೆ ಭಿನ್ನ ಉಂಟೆ ಹೇಳಾ ಮರುಳೆ?

೨೨

ಶಬ್ದ ಸೂತಕವೆಂಬರು. ಶಬ್ದಕ್ಕೆ ಸೂತಕವುಂಟೆ, ತನ್ನಯ ಸಂದೇಹವಲ್ಲದೆ? ಗಾಳಿಗೆ ಧೂಳಿ ಲೇಪವಪ್ಪುದೇ? ಗೊಹೇಶ್ವರಲಿಂಗಕ್ಕೆ ಆ ಭಾವವಿಲ್ಲ ಸಂಗನಬಸವಣ್ಣ.

೨೩

ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಚೆ ಚಿಪ್ಪುಗಳು ಕಾಣಬಹುದು. ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು. ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೆ ಕಾಣಬಹುದು!

೨೪

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು. ಭಕ್ತದೇಹಿಕದೇವ ಅನಿಮಿಷನಾಗಿ, ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿರ್ಪನು.

೨೫

ಸಕಲ ಗಣಂಗಳು ತಮ್ಮ ವಚನಾನುಭಾವವೆಂಬ ಪರಮಾಮೃತವನು ಎನ್ನ ಕರ್ಣವೆಂಬ ಕರುಹ ಕಟ್ಟಿ ಎರಕವೆರೆಯಲು, ಅದು ಮನದಲ್ಲಿ ಮೂರ್ತಿಯಾಗಿ ಒಳಗೆ ಪ್ರಾಣಲಿಂಗವಾಯಿತ್ತು; ಹೊರಗೆ ಇಷ್ಟಲಿಂಗವಾಯಿತ್ತು. ಎನ್ನೊಳಹೊರಗೆ ಭರಿತವಾದ ಅಖಂಡೇಶ್ವರನೆಂಬ ಪರಶಿವನು ನುಡಿಸಿದಂತೆ ನುಡಿದೆನಲ್ಲದೆ, ಎನ್ನ ಮನಕ್ಕೆ ಬಂದಂತೆ ನುಡಿಯಲಿಲ್ಲ ಕೇಳಿರೆ.

೨೬

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪು ನೀರನುಂಬವನ ವಿಧಿಯಂತೆ ಆಯಿತ್ತೆನ್ನ ಮತಿ ಕೂಡಲಸಂಗಮದೇವಾ.

೨೭

ಶಬ್ದ ಸ್ಪರ್ಶ ರೂಪ ರಸ ಗಂಧ ಪಂಚೇಂದ್ರಿಯ ಸಪ್ತಧಾತು ಅಷ್ಟಮದದಿಂದ ಮುಂದುಗಾಣದವರು ನೀವು ಕೇಳಿರೇ! ಲಿಂಗವಾರ್ತೆಯ ವಚನ ರಚನೆಯ ಮಾಡುವರಯ್ಯ. ಸಂಸಾರದ ಮಚ್ಚು ಬಿಡದನ್ನಕ್ಕರ ಸೂಕ್ಷ್ಮ ಶಿವಪಥವು ಸಾಧ್ಯವಾಗದು. ಗೊಹೇಶ್ವರಲಿಂಗದಲ್ಲಿ ವಾಕು ಪಾಕವಾದಡೇನು, ಮನ ಪಾಕವಾಗದನ್ನಕ್ಕರ?

೨೮

ಕಂಡುದ ಹೇಳಿಹೆನೆ? ಸಮಯಕ್ಕೆ ದೂರ. ಎನ್ನ ಇರವನರಿಯರು. ಲೆಂಡನೆಂಬರು. ಸುಮ್ಮನಿದ್ದೇನೆ? ಇವರೆನ್ನ ಆರೈದು ಕಂಡುದ ನುಡಿವರು. ಎನ್ನ ಮುಟ್ಟದವರ ಎನ್ನಂತೆ ಮಾಡಿಕೊಂಬೆ. ಎನ್ನ ಅರಿಯದವರ ಹಾದಿಯ ಹೋಗೆ. ಎನ್ನನರಿತ ಜಂಗಮದ ಸಂಗವ ಮಾಡುವೆ. ಜಗದ ಸಂಗವನೊಲ್ಲೆ. ನಿಗಮಾಗಮ ಶಾಸ್ತ್ರವನೊಲ್ಲೆ. ಅವೆಲ್ಲವು ಸ್ಥಲನೆಲೆ ಇಟ್ಟು ಹೇಳುವವು. ಎಮ್ಮ ಶರಣರು ನುಡಿದ ಶಾಸ್ತ್ರಕ್ಕೆ ಸ್ಥಲ ನೆಲೆ ಇಲ್ಲ. ಇಂತಿವೆಲ್ಲವ ಬಲ್ಲೆನಾಗಿ, ಎನ್ನಂಗಕ್ಕೆ ಪ್ರಾಣಕ್ಕೆ ಭವವಿಲ್ಲ, ಬಂಧನವಿಲ್ಲ. ಅದೇಕೆಂದರೆ ಲಿಂಗವೆಂದ ಕಾರಣ. ನಾನೆಂಬುದಿಲ್ಲ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೨೯

ಪರವನರಿದ ಸತ್ಪುರುಷರ ಸಂಗದಿಂದ ಶಿವಯೋಗದ ವಚನಾಮೃತವನು ಸದ್ಭಕ್ತಿಯುಳ್ಳ ಮಾಹೇಶ್ವರನು ತನ್ನ ಶ್ರೋತ್ರಮುಖದಲ್ಲಿ ಕೇಳಿ, ಮನೋಮುಖದಲ್ಲಿ ಹಾರೈಸಿ, ತೃಪ್ತಿಮುಖದಲ್ಲಿ ಸಂತೋಷವನೆಯ್ದು ಬಲ್ಲಡೆ, ಆ ಸುಖವು ಪರಿಣಾಮವನೊಡಗೂಡುವದು. ಹೀಂಗಲ್ಲದೆ ಸಂಸಾರ ವಿಷಯ ರಸವ ತನ್ನ ಹೃದಯ ಕೂಪದಲ್ಲಿ ತುಂಬಿಕೊಂಡಿಪ್ಪ ಜೀವರ ಕಾಯದಲ್ಲಿ ವಚನಾಮೃತವ ತುಂಬಿದರೆ, ಭಿನ್ನಘಟದಲ್ಲಿ ಉದಕವ ಹೊಯ್ದಂತೆ ಕಾಣಾ ಗೊಹೇಶ್ವರಾ.

೩೦

ಕಡೆಗೀಲಿಲ್ಲದ ಬಂಡಿ ಹೊಡಗೆಡೆವುದ ಮಾಬುದೆ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥಾ.

೩. ವೇದಾಗಮಶಾಸ್ತ್ರಗಳು

೩೧

ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರ ಗೋಷ್ಠಿ. ತರ್ಕವೆಂಬುದು ತಗರ ಹೋರಟೆ. ಭಕ್ತಿಯೆಂಬುದು ತೋರುಂಬ ಲಾಭ. ಗುಹೇಶ್ವರನೆಂಬುದು ಮೀರಿದ ಘನವು.

೩೨

ನಾದದ ಬಲದಿಂದ ವೇದಂಗಳಾದವಲ್ಲದೆ, ವೇದ ಸ್ವಯಂಭುವಲ್ಲ ನಿಲ್ಲು. ಮಾತಿನ ಬಲದಿಂದ ಶಾಸ್ತ್ರಂಗಳಾದವಲ್ಲದೆ, ಶಾಸ್ತ್ರ ಸ್ವಯಂಭುವಲ್ಲ ನಿಲ್ಲು. ಪಾಷಾಣದ ಬಲದಿಂದ ಸಮಯಂಗಳಾದವಲ್ಲದೆ, ಸಮಯ ಸ್ವಯಂಭುವಲ್ಲ ನಿಲ್ಲು. ಇಂತೀ ಮಾತಿನ ಬಣಬೆಯ ಮುಂತಿಟ್ಟುಕೊಂಡು ಆತನ ಕಂಡಿಹೆನೆಂದಡೆ, ಆತನತ್ಯತಿಷ್ಠದ್ದಶಾಂಗುಲ. ಆತನೆಂತು ಸಿಲುಕುವನೆಂದಾತ ನಂಬಿಗ ಚೌಡಯ್ಯ.

೩೩

ಅನಂತ ವೇದ ಶಾಸ್ತ್ರ ಆಗಮ ಪುರಾಣ ತರ್ಕ ತಂತ್ರಂಗಳನ್ನು ಆತ್ಮ ಮಾಡಿದನಲ್ಲದೆ, ಆತ್ಮನನವು ಮಾಡಿದುದಿಲ್ಲ. ಎನ್ನಂತರಂಗದ ಅರಿವಿನ ಮೂರ್ತಿಯಾಗಿ, ಎನ್ನ ಉರಿಲಿಂಗದೇವರು ಸಂಕಲ್ಪಿಸಿ ಆಗೆಂದರಾದವು.

೩೪

ವೇದ ವೇಧಿಸಲರಿಯದೆ ಕೆಟ್ಟವು. ಪುರಾಣ ಪೂರೈಸಲರಿಯದೆ ಕೆಟ್ಟವು. ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು. ಹಿರಿಯರು ತಮ್ಮ ತಾವರಿಯದೆ ಕೆಟ್ಟರು. ತಮ್ಮ ಬುದ್ಧಿ ತಮ್ಮನೆ ತಿಂದಿತ್ತು ; ನಿಮ್ಮನೆತ್ತ ಬಲ್ಲರು ಗೊಹೇಶ್ವರ ?

೩೫

ವೇದಂಗಳು ನಿಮ್ಮ ಭೇದಿಸಲರಿಯವು ನೋಡಾ ! ಆಗಮಂಗಳು ನಿಮ್ಮ ಹೊಗಳಲರಿಯವು ನೋಡಾ ! ಶ್ರುತಿತತಿಗಳು ನಿಮ್ಮ ಸ್ತುತಿಸಲರಿಯವು ನೋಡಾ ! ಶಾಸ್ತ್ರಂಗಳು ನಿಮ್ಮ ಸಾಧಿಸಲರಿಯವು ನೋಡಾ ಅಖಂಡೇಶ್ವರಾ !

೩೬

ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳು ಇತ್ತಿತ್ತ ಲಲ್ಲದೆ, ಅತ್ತಲಾರು ಬಲ್ಲರು ? ಇವರೆತ್ತಲೆಂದರಿಯರು. ಗಿಳಿವಿಂಡುಗೆಡೆವರು ನಿಮ್ಮನೆತ್ತ ಬಲ್ಲರು ಗೊಹೇಶ್ವರ ?

೩೭

ರಾಗ ರಚನೆಯ ಬಲ್ಲೆನೆಂಬ ವ್ಯಂಗಿ ಮನುಜರಿರಾ, ನೀವು ಕೇಳಿ. ರಾಗವಾವುದು ? ರಚನೆಯಾವುದು ? ಬಲ್ಲರೆ ನೀವು ಹೇಳಿರೋ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ,—ಈ ರಾಗದ್ವೇಷವ ಹಿಡಿದು ಕೂಗಿಡುವುದೆಲ್ಲವು ರಾಗವೇ ? ವೇದ ಪುರಾಣಾಗಮ ಶಾಸ್ತ್ರವನೋದಿ ಕಂಡವರ ಬೋಧಿಸುವುದೆಲ್ಲ ರಚನೆಯೆ ? ಅಲ್ಲ. ಇನ್ನು ರಾಗವಾವುದು ಎಂದರೆ ಝೇಂಕಾರದ ಪ್ರಣಮದ ನಾದವನರಿಯಬಲ್ಲರೆ ರಾಗ. ಇನ್ನು ರಚನೆಯಾವುದು ಎಂದರೆ ಯೋಗಿ ಜೋಗಿ ಶ್ರವಣ ಸಂನ್ಯಾಸಿ ಕಾಳಾಮುಖಿ ಪಾಶುಪತ ಷಡುದರ್ಶನಕ್ಕೆ ಶ್ರುತವ ತೋರಿ ನುಡಿದು, ದೃಷ್ಟವ ತೋರಿ ನಡೆದು, ಅಲ್ಲದಿರ್ದರೆ ನೀತಿಯ ತೋರಿ ಮೆರೆವುದೀಗ ರಚನೆ. ಇದನರಿಯದೆ

ನಾನು ರಾಗ ರಚನೆಯ ಬಲ್ಲೆನೆಂದು ನುಡಿವ ಮೂಗು ಹೋದ ಮೂಕೊರೆಯರ ಮೆಚ್ಚುವನೇ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ ?

೩೮

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ ನೋಡಯ್ಯಾ. ಮಹಾದಾನಿ ಕೂಡಲಸಂಗಮದೇವಾ, ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ.

೩೯

ಆದಿ ಅನಾದಿ ಎಂದು ಗಾದೆಯ ಮಾತು ನುಡಿದಾಡುವರೆಲ್ಲ ಇವೆರಡರ ಮಧ್ಯದಲ್ಲಿಪ್ಪ ಮಾಯಾಪ್ರಪಂಚವನೆ ಅಳಿವುತ್ತ ಸುರಿವುತ್ತಿಪ್ಪರಲ್ಲದೆ, ಆದಿಯಿಂದತ್ತತ್ತಲಾರು ಬಲ್ಲರು ? ಅನಾದಿಯಿಂದತ್ತತ್ತಲಾರು ಬಲ್ಲರು ? ಇದರ ಭೇದಾದಿ ಭೇದವ ಮುನ್ನಿನ ಆದ್ಯರು ಬಲ್ಲರಲ್ಲದೆ ಸಾಧಕರಿಗಳವಲ್ಲ. ವೇದಶಾಸ್ತ್ರಾಗಮ ಪುರಾತರ ವಚನ ಬಹು ಶ್ರುತಿಯ ಇದಿರಿಟ್ಟುಕೊಂಡು, ಕೂಗಿಯಾಡಿ, ಗೋಡೆ ಹಾಯಿಸುವ ಜಡವಾದಿಗಳ ಮಾತ ಮೆಚ್ಚರು ನಮ್ಮ ಶರಣರು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೪೦

ಅಂಗ ಲಿಂಗವೆಂದರಿದಾತಂಗೆ ಆ ಅಂಗದಲ್ಲಿ ಐಕ್ಯ. ಕಂಗಳು ಲಿಂಗವೆಂದರಿದಾತಂಗೆ ಕಂಗಳಲ್ಲಿ ಐಕ್ಯ. ಕರವೆ ಲಿಂಗವೆಂದರಿದಾತಂಗೆ ಕರದಲ್ಲಿ ಐಕ್ಯ. ಈ ತ್ರಿವಿಧದ ನೆಲೆಯ ಶ್ರುತಿಸ್ಮೃತಿಗಳರಿಯವು. ಎನ್ನ ಬಸವಪ್ರಿಯ ಕೂಡಲಚೆನ್ನಬಸವಣ್ಣನ ನೆಲೆಯ ಶರಣರೆ ಬಲ್ಲರು.

೪೧

ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು, ಎಲ್ಲಿ ಚುಂಬಿಸಿದರೂ ಇನಿದಹುದು. ಒಳ್ಳೆಯ ಜೇವಿನ ಹಣ್ಣ ಮೆಲ್ಲನೆ ಚುಂಬಿಸಿದರೆ ಇನಿದಹುದೆ?

ಎಲ್ಲಾ ವಿದ್ಯವನೂ ಬಲ್ಲೆವೆಂದೆಂಬರು; ಅವರು ಸಲ್ಲದೆ ಹೋದರಯ್ಯ ಗೊಹೇಶ್ವರ.

೪೨

ಅಕ್ಷರ ಲೆಕ್ಕ ಗಂಧರ್ವ ಜ್ಯೋತಿಷ್ಯ ಆತ್ಮವಿದ್ಯೆ ತರ್ಕ ವ್ಯಾಕರಣ ಅಮರಸಿಂಹ ಛಂದಸ್ಸು ನಿಘಂಟು ಶಾಲಿಗೋತ್ರ ಗೃಹವಾದ ಗಾರುಡಿ ದ್ಯೂತ ವೈದಿಕಶಾಸ್ತ್ರ ಸಾಮುದ್ರಿಕಶಾಸ್ತ್ರ ಲಕ್ಷಣಶಾಸ್ತ್ರ ಅಶ್ವಪರೀಕ್ಷೆ ಗಜಶಿಕ್ಷೆ ಗೋಕರ್ಣ ದಾಡಾಬಂಧ ಮೂಲಿಕಾಸಿದ್ಧಿ ಭೂಚರತ್ವ ಖೇಚರತ್ವ ಅತೀತ ಅನಾಗತ ವರ್ತಮಾನ ಸ್ಥೂಲ ಸೂಕ್ಷ್ಮ ಇಂದ್ರ ಜಾಲ ಮಹೇಂದ್ರಜಾಲ ಉಡ್ಯಾಣಚೇಷ್ಟೆ ಪರಕಾಯಪ್ರವೇಶ ದೂರ ದೃಷ್ಟಿ ದೂರಶ್ರವಣ ಋಗ್ಯಜುಸ್ಸಾಮಾಥರ್ವಣ ಶ್ರುತಿ ಸ್ಮೃತಿ ಆಯು ರ್ದಾಯ, ನಷ್ಟಮುಷ್ಟಿ, ಚಿಂತನೆ, ಚೋರವಿದ್ಯೆ, ಅಮೃತೋದಯ, ಭಾಷಾ ಪರೀಕ್ಷೆ ವೀಣಾವಿದ್ಯೆ ಅಗ್ನಿಸ್ತಂಭನ ಜಲಸ್ತಂಭನ ವಾಯುಸ್ತಂಭನ ವಾದ ವಶ್ಯ ಅಂಜನಾಸಿದ್ಧಿ ಘುಟಿಕಾಸಿದ್ಧಿ ಮಂತ್ರತಂತ್ರಸಿದ್ಧಿ,—ಇವೆಲ್ಲವ ಕಲಿತಡೇನೋ? ಚೌಷಷ್ಟಿವಿದ್ಯಾಕಳಾವಿದನೆನಿಸಿಕೊಂಬನಲ್ಲದೆ, ಲಿಂಗವಂತ ನೆನಿಸಿಕೊಂಬುದಿಲ್ಲ. ಲಿಂಗವುಳ್ಳ ಶಿವಭಕ್ತಂಗೆ ಇವರೆಲ್ಲ ಕೂಡಿ ಸರಿಬಾರ ರೆಂದ ಕಲಿದೇವರದೇವ.

೪೩

ವೇದವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ, ಸೋಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ, ಅನಾಮಿಕರಾಗಿ ಹೋದರು. ಶಾಸ್ತ್ರವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿ ಯದೆ, ಶ್ರವಣ ಸಂನ್ಯಾಸಿ ಯೋಗಿ ಜೋಗಿಯಾಗಿ ಹೀಗೆ ಕೆಲಬರು ಕೆಟ್ಟರು. ಆಗಮವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿ ಯದೆ, ಕ್ರಿಯಾಪಾದ ಚರ್ಯಾಪಾದ ಜ್ಞಾನಪಾದವೆಂದು ನಾನಾ ಪರಿಯ ಕರ್ಮಭಕ್ತಿಯ ಮಾಡಿ, ಲಿಂಗಜಂಗಮದ ಮರ್ಮವನರಿಯದೆ ಅಧರ್ಮಿ ಗಳಾಗಿ ಹೋದರು. ಪುರಾಣವನೋದಿದವರೆಲ್ಲ ನಮ್ಮ ಪುರಾತರು ಹೋದ

ಹಾದಿಯನರಿಯದೆ, ಪುರದ ಬೀದಿಯೊಳಗೆ ಮಾತುಕಥೆಯ ಪಸಾರವನಿಕ್ಕಿ ಮಾಡಿ ಫಲಪದ ಮುಕ್ತಿಗೆ ಸಲ್ಲದೆ ಹೋದರು. ಇದು ಕಾರಣ ಈ ಚತುರ್ವಿಧ ದೊಳಗಾವಂಗವು ಅಲ್ಲ. ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಶರಣನ ಪರಿ ಬೇರೆ.

೪೪

ಅಯ್ಯಾ, ಲಿಂಗವ ಪೂಜಿಸಿಹೆನೆಂದು ಅಂಗದ ಕುರುಹ ಮರೆದೆ. ಜಂಗಮವ ಪೂಜಿಸಿಹೆನೆಂದು ಪ್ರಾಣದ ಕುರುಹ ಮರೆದೆ. ಪ್ರಸಾದವ ಕೊಂಡಿಹೆನೆಂದು ಪರವ ಮರೆದೆ. ಈ ತ್ರಿವಿಧದ ಭೇದವನು ಶ್ರುತಿ ಸ್ಮೃತಿಗಳರಿಯವು. ಹರಿ ಹರ ಬ್ರಹ್ಮ ದೇವ ದಾನವ ಮಾನವರು ಅರಿಯರು. ನಮ್ಮ ಶರಣರೆ ಬಲ್ಲರು. ಇವ ಬಲ್ಲ ಶರಣ ಚೆನ್ನಮಲ್ಲೇಶ್ವರ ಹೋದ ಹಾದಿಯಲ್ಲದೆ ಎನಗೆ ಬೇರೊಂದು ಹಾದಿ ಇಲ್ಲವಯ್ಯ. ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ, ಇದಕ್ಕೆ ಮರ್ತ್ಯಲೋಕದ ಮಹಾಗಣಂಗಳೇ ಸಾಕ್ಷಿ.

೪೫

ಅಜಾತನನೊಲಿಸದೊಡೆ ಅದೇತರ ಮಂತ್ರ, ಅದೇತರಾಗಮ ಹೇಳಿರೊ? ಅದಾವ ಮುಖದಲ್ಲಿ ಲಿಂಗ ಬಂದಿಪ್ಪುದೋ? ರೂಪಿಲ್ಲದಾತ ನಿಮ್ಮ ಮಾತಿಂಗೆ ಬಪ್ಪನೇ? ಅದೇತರ ಮಾತೆಂದನಂಬಿಗ ಚೌಡಯ್ಯ.

೪೬

ವೇದಂಗಳ ಹಿಂದೆ ಹರಿಯದಿರು ಹರಿಯದಿರು. ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು. ಪುರಾಣಂಗಳ ಹಿಂದೆ ಬಳಸದಿರು ಬಳಸದಿರು. ಆಗಮಂಗಳ ಹಿಂದೆ ತೊಳಲದಿರು ತೊಳಲದಿರು. ಸೌರಾಷ್ಟ್ರ ಸೋಮೇಶ್ವರನ ಕೈ ಹಿಡಿದು, ಶಬ್ದ ಜಾಲಂಗಳಿಗೆ ಬಳಲದಿರು ಬಳಲದಿರು.

೪೭

ವೇದ ಶಾಸ್ತ್ರ ಪುರಾಣಾಗಮಂಗಳೆಲ್ಲ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿ ಭೋ. ಇವ ಕುಟ್ಟಲೇಕೆ? ಅತ್ತಲಿತ್ತ ಹರಿವ ಮನದ ಶಿರವ ನರಿದಡೆ ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ.

೪೮

ವೇದ ವಿಪ್ರರ ಬೋಧೆ. ಶಾಸ್ತ್ರ ಸಂತೆಯ ಮಾತು. ಪುರಾಣ ಪುಂಡರ ಗೋಷ್ಠಿ. ಆಗಮ ಅನೃತದ ನುಡಿ. ತರ್ಕವ್ಯಾಕರಣಕವಿತ್ವ ಪ್ರೌಢಿಮೆ. ಇದು ಕಾರಣ ತನ್ನೊಳಗನರಿದ ಅನುಭವದಿಂದ ಘನವಿಲ್ಲೆಂದ ಕಲಿದೇವರ ದೇವ.

೪೯

ಚಿನ್ನವ ಕೊಂಬಲ್ಲಿ ಅದರ ಬಣ್ಣವ ಕಂಡು, ಬಣ್ಣದ ವಾಸಿಯ ಕುರುಹಿಟ್ಟು, ಅದು ತನಗೆ ಚೆನ್ನಾದಡೆ ಕೊಂಬ; ಅಲ್ಲದೊಡೊಲ್ಲ. ಇದಕ್ಕೆ ಗೆಲ್ಲ ಸೋಲವೇಕೆ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆನು.

೪. ದೇವನ ಪ್ರಮಾಣ ಮಾನವದೇವ ಬಲ್ಲ

೫೦

ವೇದಂಗಳಿಗಭೇದ್ಯವಾದ ಶಿವನ ಭೇದಿಸಿ ಕಂಡರು ನೋಡಾ ಶರಣರು. ಶಾಸ್ತ್ರಂಗಳಿಗಸಾಧ್ಯವಾದ ಶಿವನ ಸಾಧಿಸಿ ಕಂಡರು ನೋಡಾ ಶರಣರು. ಆಗಮಂಗಳಿಗತಿರಹಸ್ಯವಾದ ಶಿವನ ಅರಿದು ಕಂಡರು ನೋಡಾ ಶರಣರು. ಅಗಮ್ಯ ಅಗೋಚರವಾದ ಪರಶಿವನ ಪ್ರಮಾಣಿಸಿ ಕಂಡು ಒಳಪೊಕ್ಕು ಬೆರಸಿದರು ನೋಡಾ ನಮ್ಮ ಅಖಂಡೇಶ್ವರನ ಶರಣರು.

೫೧

ವೇದ ವೇಧಿಸಲರಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು. ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತೈದಾವೆ. ತರ್ಕ ತರ್ಕಿಸಲರಿಯದೆ ಅತರ್ಕ್ಯಲಿಂಗವೆಂದು ಮನಂಗೊಳ್ಳವು. ಆಗಮ ಅಗಮ್ಯಲಿಂಗವೆಂದು ಗಮನಿಸಲರಿಯದೆ ಹೋದುವು. ನರರೂ ಸುರರೂ ಅಂತುವ ಕಾಣರು. ನಮ್ಮ ಕೂಡಲಸಂಗನ ಪ್ರಮಾಣ ಶರಣ ಬಲ್ಲ!

೫೨

ಕಂಡಿಹೆ ಹೇಳಿಹೆನೆಂದು ಮುಂದುಗಾಣದೆ, ಸಂದೇಹದಲ್ಲಿ ಮುಳುಗಿ, ಕಳವಳಿಸಿ ಕಾತರಿಸುವ ಅಣ್ಣಗಳಿರಾ, ನೀವು ಕೇಳಿರೋ ಹೇಳಿಹೆನು. ಕಾಣಬಾರದ ಘನವ ಹೇಳಬಾರದಾರಿಗೆಯು. ಹೇಳುವುದಕ್ಕೆ ನುಡಿ ಇಲ್ಲ; ನೋಡುವುದಕ್ಕೆ ರೂಪಿನ ತೆರಹಿಲ್ಲ. ಇಂತಹ ನಿರೂಪದ ಮಹಾಘನವು ಶರಣರ ಹೃದಯದಲ್ಲಿ ನೆಲೆಗೊಂಬುದಲ್ಲದೆ, ಈ ಜನನ ಮರಣಕ್ಕೊಳಗಾಗುವ ಮನುಜರೆತ್ತ ಬಲ್ಲರು ಈ ಮಹಾಘನದ ನೆಲೆಯ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ ?

೫೩

ಅಜ್ಞಾನಿಯಾದವಂಗೆ ಅರಿವು ತಾನೆಲ್ಲಿಯದೋ ? ಸುಜ್ಞಾನಿಯಾದವಂಗೆ ಮರಹು - ತಾನೆಲ್ಲಿಯದೋ ? ನಾನರಿದೆನೆಂಬಾತ ಇದಿರ ಕೇಳಲುಂಟೆ ? ಭ್ರಾಂತಿನ ಭ್ರಮೆಯೊಳಗೆ ಬಳಲುತ್ತಿರಲು, ಮಾತಿನ ಮಾಲೆಯೊಳಗೆ ಅರಿವೆಂಬುದುಂಟೆ ? ಸೂತಕವ ಹಿಂಗದೆ, ಸಂದೇಹವನಳಿಯದೆ, ಮುಂದಣ ಸೂಕ್ಷ್ಮವ ಕಾಂಬ ಪರಿಯೆಂತೋ ? ಜ್ಯೋತಿಯ ಬಸಿರೊಳಗೆ ಜನಿಸಿದ ಕಾಂತಿಯುತ ಪ್ರಭೆಯ ಬೆಳಗು,— ಗೊಹೇಶ್ವರ, ನಿಮ್ಮ ಶರಣ.

೫೪

ಹುಲ್ಲ ಕಿಚ್ಚುವ, ಕಲ್ಲ ಬೀಜವ, ನೀರ ನೆಳಲುವ, ಗಾಳಿಯ ನಾರುವ, ಅಗ್ನಿಯ ಹಗಿನವ, ಬಿಸಿಲಿನ ರುಚಿಯ, ತನ್ನ ಬೆಳಗುವನಾರು ಬಲ್ಲರು ಗೊಹೇಶ್ವರಾ, ನಿಮ್ಮ ಶರಣರಲ್ಲದೆ ?

೫೫

ನೆನೆವ ಮನದಲಿಲ್ಲ, ತನುವಿನಲಿ ಮುನ್ನಿಲ್ಲ. ನೆನೆವ ಮನವನೊಳಕೊಂಡ ಘನಕ್ಕೆ ಘನವನೇನೆಂಬೆ ? ತನ್ನಲ್ಲಿ ತಾನೆಯಾಯಿತ್ತು ಭಿನ್ನವಿಲ್ಲದೆ ನಿಂದ ನಿರಾಳ ! ಅನಾಯಾಸದನುವ ಕಂಡು ಆನು ಬೆರಗಾದೆನು. ಅಂತು

ಇಂತು ಎನಲಿಲ್ಲ. ಚಿಂತೆಯಿಲ್ಲದ ಮಹಾಘನವು! ಗೊಹೇಶ್ವರಲಿಂಗವ ಹೊರಗರಸಲಿಲ್ಲಯ್ಯ.

೫೬

ದೂರದ ತುದಿಗೊಂಬನಾರಯ್ಯ ಗೆಲುವರು? ಮೀರಲಿಲ್ಲದ ನಿರಾಳದ ನಿಲವನು ಮೀರಿ ಕಾಬ ಘನವನು ಬೇರೆ ತೋರಲಿಲ್ಲ. ತೋರಿ ಕಾಬಡೆ ತನ್ನ ಹಿಡಿಯಲಿಲ್ಲಯ್ಯ. ಒದೆಯಾವಿನ ಹಾಲನಾರಯ್ಯ ಕರೆವರು? ಮೂರು ಲೋಕದೊಳಗೆ ತಾನಿಲ್ಲ ಗೊಹೇಶ್ವರ.

೫೭

ಚರಾಚರವೆಂಬುದೊಂದು ಕಿಂಚಿತ್. ಚತುರ್ಯುಗವೆಂಬುದೊಂದು ಕಿಂಚಿತ್. ಅಪ್ಪುದೆಂಬುದೊಂದು ಕಿಂಚಿತ್. ಆಗದೆಂಬುದೊಂದು ಕಿಂಚಿತ್. ತಾನು ಶುದ್ಧವಾದ ಶರಣಂಗೆ ಗೊಹೇಶ್ವರನೆಂಬುದೊಂದು ಕಿಂಚಿತ್.

೫೮

ನಾ ದೇವನಲ್ಲದೆ ನೀ ದೇವನೇ? ನೀ ದೇವನಾದರೆ ಎನ್ನನೇಕೆ ಸಲಹೆ? ಆರೈದು ಒಂದು ಕುಡಿತೆ ಉದಕವನೆರೆವೆ. ಹಸಿದಾಗ ಒಂದು ತುತ್ತು ಓಗರವನಿಕ್ಕುವೆ. ನಾ ದೇವ ಕಾಣಾ ಗೊಹೇಶ್ವರಾ.

೫೯

ಬಿತ್ತದೆ ಬೆಳೆಯದೆ ತುಂಬಿದ ರಾಸಿಯ ಕಂಡಲ್ಲಿ ಸುಖಿಯಾಗಿ ನಿಂದವ ರಾರೋ? ಇದ ಹೇಳಲು ಬಾರದು! ಗೊಹೇಶ್ವರ, ನಿಮ್ಮ ಶರಣನು ಲಚ್ಚಣ ವಳಿಯದೆ ರಾಸಿಯನಳೆವನು.

೬೦

ನಾನೆಂಬುದು ಪ್ರಮಾಣ. ನೀನೆಂಬುದು ಪ್ರಮಾಣ. ಸ್ವಯವೆಂಬುದು ಪ್ರಮಾಣ. ಪರವೆಂಬುದು ಪ್ರಮಾಣ. ಪ್ರಮಾಣವೆಂಬುದು ಪ್ರಮಾಣ. ಗೊಹೇಶ್ವರನೆಂಬುದು ಅಪ್ರಮಾಣ!

೬೧

ಗಗನಕ್ಕೆ ನಿಚ್ಚಣಿಗೆಯನಿಕ್ಕಿದವರುಂಟೆ? ವಾಯುವಿನ ಸ್ಥಳವನರಿದವರುಂಟೆ? ಅಂಬುನಿಧಿಯ ಗುಣ್ಪನಳೆದವರುಂಟೆ? ಲಿಂಗದ ಪ್ರಮಾಣ ಹೇಳಬಹುದೇ? ಚಂದ್ರಮಂಡಲ ತಾರಾಮಂಡಲ ಸೂರ್ಯಮಂಡಲವಿತ್ತಿತ್ತಲಯ್ಯ! ಪಂಚಮುಖನಾಗಿ, ನೊಸಲ ಕಣ್ಣು ಚತುರ್ಭುಜ ಅಣುಮಾತ್ರವೆ ಒಬ್ಬನೆಯಾಗಿ, ಶರಣನಾಗಿ, ಗೊಹೇಶ್ವರನೆಂಬ ಘನ ನೆಲೆಗೊಂಡಡೆ ಅಲ್ಲಿಂದತ್ತ ಶರಣು ಶರಣು!

೫. ಪರವಸ್ತು-ಪರಶಿವಲಿಂಗ-ದೇವರು

೬೨

ಆದಿ ಅನಾದಿ ಇಲ್ಲದಂದು, ಶೂನ್ಯ ಮಹಾಶೂನ್ಯವಿಲ್ಲದಂದು, ಸಾಧ್ಯಾಸಾಧ್ಯವಿಲ್ಲದಂದು, ರೂಪು ನಿರೂಪು ಇಲ್ಲದಂದು, ಸ್ಥೂಲ ಸೂಕ್ಷ್ಮವಿಲ್ಲದಂದು, ಸಾಕಾರ ನಿರಾಕಾರವಿಲ್ಲದಂದು, ವಾಕ್ಕು ಹುಟ್ಟದಂದು, ದ್ವೈತಾದ್ವೈತವಿಲ್ಲದಂದು, ಶಂಕರ ಶಶಿಧರ ಈಶ್ವರರೆಂಬ ಗಣಾಧೀಶ್ವರರಿಲ್ಲದಂದು, ವರ್ತನೆ ನಿರ್ವರ್ತನೆ ಇಲ್ಲದಂದು, ಉಮೆಯ ಕಲ್ಯಾಣವಿಲ್ಲದಂದು, ಇವರಾರೊಬ್ಬರ ನಾಮಸೀಮೆ ಇಲ್ಲದಂದು ನೀನುಲುಹಡಗಿದ್ದೆಯಲ್ಲಾ ಕಲಿದೇವಯ್ಯಾ!

೬೩

ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅನಂತ ವಿಚಿತ್ರ ಭುವನಂಗಳಯ್ಯ,—"ಆಲಯಃ ಸರ್ವಭೂತಾನಾಂ" ಎಂದುದಾಗಿ. ಅನಂತಕೋಟಿ ಬ್ರಹ್ಮಾಂಡಂಗಳು ನಿಮ್ಮ ರೋಮಕೂಪದೊಳಗಡಗಿಪ್ಪವೆಂದರೆ, ಬ್ರಹ್ಮ ವಿಷ್ಣು ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು. ಇವರೆತ್ತಬಲ್ಲರು ಲಿಂಗದ

ನಿಜವ? ಅಪ್ರಮಾಣ ಅಗೋಚರ ಮಹಂತ, ನಿಮ್ಮ ನಿಜದೊಳಗನಾರು ಬಲ್ಲರಯ್ಯಾ ಸೌರಾಷ್ಟ್ರಸೋಮೇಶ್ವರಾ?

೬೪

ಪೃಥ್ವಿ ಅಪ್ಪು ಅಗ್ನಿ ವಾಯು ಆಕಾಶ ಚಂದ್ರ ಸೂರ್ಯ ಸೋಮ ಮಂಗಳ ಬುಧ ಬೃಹಸ್ಪತಿ ಶುಕ್ರ ಶನಿ,—ಇವು ಮೊದಲಾದ ಪಂಚತತ್ವ ನವಗ್ರಹಂಗಳಿಲ್ಲದಂದಿನ, ನಕ್ಷತ್ರಂಗಳಿಲ್ಲದಂದಿನ, ಸಪ್ತ ಸಮುದ್ರಂಗಳಿಲ್ಲದಂದಿನ, ಸಪ್ತ ಕುಲಪರ್ವತಂಗಳು ಇಲ್ಲದಂದಿನ, ಸಪ್ತ ಮುನಿವರ್ಗಂಗಳು ಇಲ್ಲದಂದಿನ, ಹರಿ ಬ್ರಹ್ಮ ಕಾಲ ಕರ್ಮ ದಕ್ಷಾದಿಗಳಿಲ್ಲದಂದಿನ, ರುದ್ರಕೋಟಿ ಸದಾಶಿವನಿಲ್ಲದಂದಿನ, ಏನೂ ಏನೂ ಇಲ್ಲದಂದಿನ ಶೂನ್ಯ ನಿಶ್ಶೂನ್ಯಕ್ಕೆ ನಿಲುಕದ ಮಹಾಘನವ ನಾನು ಬಲ್ಲೆ ತಾನು ಬಲ್ಲೆನೆಂದು ನುಡಿವ ಹೀನ ಮನುಜರ ಕೂಗಾಟ ಬೆಟ್ಟಕ್ಕೆ ನಾಯಿ ಬೊಗುಳಿದಂತಾಯಿತ್ತು. ಆ ತುಟ್ಟತುದಿಯಲ್ಲಿಪ್ಪ ಘನವ ಮುಟ್ಟಿ ಹಿಡಿದು ಬಂದ ಶರಣರು ಬಲ್ಲರಲ್ಲದೆ, ಬಹು ವಾಕ್ಕು ಜಾಲವ ಕಲಿತುಕೊಂಡು ಗಟ್ಟಿಗತನದಲ್ಲಿ ಬೊಗುಳಿಯಾಡುವ ಮಿಟ್ಟೆಯ ಭಂಡರೆತ್ತ ಬಲ್ಲರು ನಮ್ಮ ಶರಣರ ಸುದ್ದಿಯ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ?

೬೫

ಆದಿ ಅನಾದಿ ಒಂದಾದಂದು, ಸೂರ್ಯ ಚಂದ್ರರೊಂದಾದಂದು, ಧರೆಯಾಕಾಶ ಒಂದಾದಂದು ಗೊಹೇಶ್ವರಲಿಂಗ ನಿರಾಳನು.

೬೬

ಆಕಾರವಿಲ್ಲ ನಿರಾಕಾರವಿಲ್ಲ, ಅಡಿಯಿಲ್ಲ ಅಂತರವಿಲ್ಲ, ಎಡನಿಲ್ಲ ಬಲನಿಲ್ಲ, ಹಿಂದಿಲ್ಲ ಮುಂದಿಲ್ಲ, ಒಳಗಿಲ್ಲ ಹೊರಗಿಲ್ಲ, ಈರೇಳರಲ್ಲಿಲ್ಲ ಮಧ್ಯದಲ್ಲಿಲ್ಲ. ಮತ್ತೆಲ್ಲಿಹುದು? ಎರಡಳಿದು ಒಂದಿಲ್ಲದೆ ನಿರಾಳದಲ್ಲಿಹುದು ಎಂದನಯ್ಯಾ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೆ.

೬೭

ಅಸುರರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ, ಬ್ರಹ್ಮಕಪಾಲ ವಿಲ್ಲ. ಭಸ್ಮಭೂಷಣನಲ್ಲ, ವೃಷಭವಾಹನನಲ್ಲ, ಋಷಿಗಳೊಡನೆ ಇದ್ದಾತ ನಲ್ಲ. ಎಸಗುವ ಸಂಸಾರದ ಕುರುಹಿಲ್ಲದಾತಂಗೆ ಹೆಸರಾವುದು ಇಲ್ಲವೆಂದ ನಂಬಿಗ ಚೌಡಯ್ಯ.

೬೮

ಅಯ್ಯಾ ಜಲ ಕೂರ್ಮ ಗಜ ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲ ದಂದು, ಗಗನವಿಲ್ಲದಂದು, ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರ ದಂದು, ತರುಗಿರಿತೃಣಕಾಷ್ಠಾದಿಗಳಿಲ್ಲದಂದು, ಯುಗಜುಗ ಮಿಗಿಲೆನಿಸಿದ ಹದಿನಾಲ್ಕು ಭುವನ ನೆಲೆಗೊಳ್ಳದಂದು, ನಿಜವನರಿದಿಹೆನೆಂಬ ತ್ರಿಜಗಾಧಿ ಪತಿಗಳಿಲ್ಲದಂದು ತೋರುವ ಬೀರುವ ಭಾವದಲ್ಲಿ ಭರಿತ ಅಗಮ್ಯ ಗೊಹೇಶ್ವರ ಲಿಂಗವು.

೬೯

ಧರೆಯಾಕಾಶವಿಲ್ಲದಂದು, ಎಂಬತ್ತುನಾಲ್ಕು ಲಕ್ಷ ಜೀವಜಂತು ಗಳಿಲ್ಲದಂದು, ಸಚರಾಚರಂಗಳು ಪಸರಕ್ಕೆ ಬಾರದಂದು, ಇಹಪರ ಸ್ವರ್ಗ ನರಕಾದಿಗಳಿಲ್ಲದಂದು, ಸುರಾಳ ನಿರಾಳಂಗಳೇನೂ ಇಲ್ಲದಂದು, ಸೌರಾಷ್ಟ್ರ ಸೋಮೇಶ್ವರಾ, ಆನು ನೀನು ಇಲ್ಲದಂದು, ಅಂದೇನೊ ಇಂದೇನೊ ?

೭೦

ಕಾಲಕಲ್ಪಿತಂಗಳಿಲ್ಲದಂದು, ಲೀಲೆ ಇಪ್ಪತ್ತೈದ ನಟಿಸದಂದು, ಬಾಲಚಂದ್ರನ ಸೂಡದಂದು, ಸಾಲು ಮಸ್ತಕಮಾಲೆಯ ಧರಿಸದಂದು, ಕಾಲ ಕಾಮ ಮಾಯಾ ದಕ್ಷಾದಿಗಳಿಲ್ಲದಂದು,–ಅಖಂಡೇಶ್ವರಾ, ನಿಮ್ಮ ನೀವರಿಯದೆ ಅನಂತಕಾಲವಿರ್ದಿರಂದು.

೭೧

ಹಗಲಿರುಳ್ಗಳಿಲ್ಲದಂದು, ಯುಗಜುಗಂಗಳು ಮರಳಿ ಮರಳಿ ತಿರುಗದಂದು, ಗಗನ ಮೇರು ಕೈಲಾಸಂಗಳಿಲ್ಲದಂದು, ಖಗ ಮೃಗ ಶೈಲ ವೃಕ್ಷಂಗಳಿಲ್ಲದಂದು, ಅಜ ಹರಿ ಸುರಾಸುರ ಮನು ಮುನಿಗಳಿಲ್ಲದಂದು, ಜಗದ ಲೀಲಾ ವೈಭವಂಗಳೇನೂ ಇಲ್ಲದಂದು,—ಅಖಂಡೇಶ್ವರಾ, ನಿಮ್ಮ ನೀವರಿಯದೆ ಅನಂತಕಾಲವಿರ್ದಿರಂದು.

೭೨

ಚಿತ್ತ ಬುದ್ಧಿ ಅಹಂಕಾರ ಹುಟ್ಟದಂದು, ಮನ ಜ್ಞಾನ ಭಾವಂಗಳು ಉತ್ಪತ್ತಿ ಇಲ್ಲದಂದು, ಜ್ಞಾತೃ ಜ್ಞಾನ ಜ್ಞೇಯಂಗಳು ಹುಟ್ಟದಂದು, ಜ್ಞಾನ ಸುಜ್ಞಾನ ಮಹಾಜ್ಞಾನ ಎಂಬ ವೃತ್ತಿಜ್ಞಾನಂಗಳು ಇಲ್ಲದಂದು, ಅಖಂಡ ಪರಿಪೂರ್ಣ ಅದ್ವಯ ನಿಷ್ಕಲ ನಿಜಜ್ಞಾನಮೂರ್ತಿ ನೀನೆಯಯ್ಯಾ, ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೭೩

ಧರೆಯಾಕಾಶವಿಲ್ಲದಂದು, ತ್ರೈಮಂಡಲ ನೆಲೆಗೊಳ್ಳದಂದು, ಹೋಮ ನೇಮ ಜಪ ತಪವಿಲ್ಲದಂದು ನಿಮ್ಮನಾರು ಬಲ್ಲರು? ಹರಿಬ್ರಹ್ಮರಿಗೆ ಅಗೋಚರ. ನಿರ್ಲೇಪ ನಿಃಪತಿ ನಿರಂಜನನಾಗಿ ವೇದಂಗಳರಿಯವು. ಶಾಸ್ತ್ರ ಶ್ರುತಿ ಸ್ಮೃತಿಗಳು ನಿಮ್ಮನರಿಯವು. ಗಗನ ಕಮಲ ಕುಸುಮ ಪರಿಮಳದಿಂದತ್ತಲು,—ಗೊಹೇಶ್ವರಾ, ನಿಮ್ಮ ನಿಲವನಾರು ಬಲ್ಲರು?

೭೪

ಆದಿವಸ್ತು ಅನಾದಿವಸ್ತು ಎಂದೆರಡು ಭೇದವ ಮಾಡಿದಲ್ಲಿ ತನ್ನಿರವಿನ ಭೇದವೋ? ವಸ್ತುವಿನ ಸ್ವರೂಪದಂಗವೋ? ಇಕ್ಷುದಂಡಕ್ಕೆ ಕಡೆ ನಡು ಮೊದಲಲ್ಲದೆ ಸಕ್ಕರೆಗುಂಟೇ? ಆದಿಯನಾದಿವಸ್ತುವೆಂಬುದು ತನ್ನಯ ಚಿತ್ತದ ಗೊತ್ತಲ್ಲದೆ, ಅದು ನಿಶ್ಚಯವಲ್ಲ. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ಏಕಮೂರ್ತಿ, ಸ್ವಯಂಭು.

೭೫

ಲಿಂಗವೆಂಬುದು ಪರಶಿವಶಕ್ತಿಯ ನಿಜನಿವಾಸ. ಲಿಂಗವೆಂಬುದು ಪರಶಿವನ ಪರಮಜ್ಞಾನತೇಜ. ಲಿಂಗವೆಂಬುದು ಅಖಂಡ ಸ್ವರೂಪು. ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ ಜ್ಯೋತಿರ್ಲಿಂಗ. ಲಿಂಗವೆಂಬುದು ಚರಾಚರ ಲಯ ಗಮನ ಸ್ಥಾನ. ಲಿಂಗವೆಂಬುದು ಪಂಚಸಂಜ್ಞೆಯನುಳ್ಳುದು. ಅದೆಂತೆಂದೊಡೆ: "ಜ್ವಾಲಾಮಾಲಾವೃತಂ ಜ್ವಲನಸ್ತಂಭರೂಪಿಣೇ | ನಮಃ ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ || ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ | ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ವ ಪರಾಯಣೈಃ || ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿಮತ್ | ಯಥಾ ದಿವ್ಯಮೀಶ್ವರತೇಜಂ | ತಲ್ಲಿಂಗಂ ಪಂಚಸಂಜ್ಞಿಕಂ"| ಎಂದುದಾಗಿ, ಇದು ಲಿಂಗದ ಮರ್ಮ. ಈ ಲಿಂಗವನರಿದಾತನೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

೭೬

ಅಷ್ಟತನುಮೂರ್ತಿ ಎಂಬ ಮಾತಿನ ಪಾತಕವ ಕೇಳಲಾಗದು. ಅದೆಂತೆಂದೊಡೆ: ಪೃಥ್ವಿಯಂತೆ ಕಠಿಣ ಉಳ್ಳಾತನೇ? ಅಪ್ಪುವಿನಂತೆ ರಸಭರಿತ ಉಳ್ಳಾತನೇ? ತೇಜದಂತೆ ತೃಣಕಾಷ್ಠವಿಲ್ಲದಿರ್ದೊಡೆ ನಂದುವಾತನೇ? ವಾಯುವಿನಂತೆ ಚಲನೆಯುಳ್ಳಾತನೇ? ಆಕಾಶದಂತೆ ಬಟ್ಟಬಯಲಾದಾತನೇ? ಚಂದ್ರಸೂರ್ಯರಂತೆ ದಿವಾರಾತ್ರಿಯ ನಡೆಸುವ ಕೃತ್ಯದಾತನೇ? ಜೀವಾತ್ಮನಂತೆ ಜನನ ಮರಣಕ್ಕೊಳಗಹನೇ? ಇದು ಕಾರಣವಾಗಿ, ಕೂಡಲಚೆನ್ನಸಂಗಮದೇವಾ, ನೀವು ನಿಮ್ಮಂತೆ, ಉಳಿದವೆಲ್ಲವೂ ನೀವಿರಿಸಿದಂತೆ.

೭೭

ಭೂಮಿಯೊಳಗಿಲ್ಲ, ಆಕಾಶದೊಳಗಿಲ್ಲ, ಚತುರ್ದಶ ಭುವನದೊಳಗಿಲ್ಲ. ಏನೆಂದರಿಯರು ಎಂತೆಂದರಿಯರು. ಹೇಳಿರಯ್ಯ! ಕೃತಯುಗದಂದಿನ ಮಾತು ಬೇಡ. ಗೊಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲ.

೭೮

ಆಕಾಶವ ಮೀರುವ ತರುಗಿರಿಗಳುಂಟೆ? ನಿರಾಕಾರವ ಮೀರುವ ಸಾಕಾರವುಂಟೆ? ಗೊಹೇಶ್ವರಲಿಂಗವ ಮೀರುವ ಒಡೆತನ ಉಂಟೆ ಸಂಗನ ಬಸವಣ್ಣ?

೭೯

ಎಲೆ ನಿರಾಳ ನಿರ್ಮಾಯ ಘನವಸ್ತುವೇ, ನಿನ್ನ ಬೆಳಗನುಗುಳಿದಡೆ ಎಂಜಲಾಯಿತ್ತಲ್ಲಾ! ನುಂಗಿದವನುಗುಳಿದುದುಂಟೇ? ಇದು ಕರಚೋದ್ಯ ಚೋದ್ಯ. ನಿನ್ನುಗುಳಿನ ಬಿಂದುವಿನಲ್ಲಿ ಅಕ್ಷರಂಗಳು ಮೂರು ಹುಟ್ಟಿದವು. ನಿನ್ನುಗುಳಿನ ಸಿಲುಕಿನಿಂದ ನಾದ ಬಿಂದು ಕಳೆಗಳಾದವು. ನಿನ್ನುಗುಳಿನ ಬಸುರಿಂದೆ ಇಬ್ಬರು ಗಂಡು ಹೆಣ್ಣಾದರು. ಆ ಗಂಡು ಹೆಣ್ಣಿಂದ ದೇವರು ಮಕ್ಕಳಾದರು. ನಿನ್ನುಗುಳು ಎಂಜಲೆಂದವರ ಕಣ್ಣು ಕಪ್ಪಾದವು. ನಿನ್ನ ಗುಳಿನಗೆ ಪ್ರಸಾದವೆಂದರಿದೆನಯ್ಯ ಕಾಣಾ ಕಲಿದೇವರದೇವಾ.

೮೦

ನಿಜವಸ್ತುವೊಂದೇ. ತನ್ನ ಲೀಲೆಯಿಂದ ಎರಡಾಗಬಲ್ಲುದದೊಂದೇ. ಬೇರೆ ತೋರಬಲ್ಲುದದೊಂದೇ. ತನ್ನ ಮರೆಯುಬಲ್ಲುದದೊಂದೇ. ಆ ಮರ ವೆಯ ಬಲ್ಲುದದೊಂದೇ. ತಾನಲ್ಲದನ್ಯವಿಲ್ಲೆಂದರಿದರಿವು ತಾನೆ ಚೆಮ್ಮಲಿಗೆಯ ಚೆನ್ನರಾಮನು.

೮೧

ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೆ ಹುಟ್ಟಿದೆಯಲ್ಲಾ! ನಿನ್ನ ಪರಿಣಾಮವೆ ನಿನಗೆ ಪ್ರಾಣತೃಪ್ತಿಯಾಗಿರ್ದೆಯಲ್ಲಾ! ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೆ ಬೆಳಗುತ್ತಿರ್ದೆಯಲ್ಲಾ! ನಿನ್ನ ಚಾರಿತ್ರ ನಿನಗೆ ಸಹಜ ಗೊಹೇಶ್ವರಾ.

೮೨

ಶಬ್ದವೆಂಬೆನೆ ? ಶ್ರೋತ್ರದೆಂಜಲು. ಸ್ಪರ್ಶವೆಂಬೆನೆ ? ತ್ವಕ್ಕಿನೆಂಜಲು. ರೂಪೆಂಬೆನೆ ? ನೇತ್ರದೆಂಜಲು. ರುಚಿಯೆಂಬೆನೆ ? ಜಿಹ್ವೆಯೆಂಜಲು. ಪರಿಮಳವೆಂಬೆನೆ ? ಘ್ರಾಣದೆಂಜಲು. ನಾನೆಂಬೆನೆ? ಅರಿವಿನೆಂಜಲು. ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗೊಹೇಶ್ವರಲಿಂಗವು.

೮೩

ಅನಂತಕೋಟಿ ಪ್ರಕಾಶವೆಂದು ಗಣಿಸಬಾರದ ಬ್ರಹ್ಮದ ಬೆಳಗು, ನೋಡಬಾರದ ಘನವು, ತೆರಹಿಲ್ಲದ ಬೆಳಗು ಮಹಾಬೆಳಗು, ತನ್ನಿಂದ ತಾನಾದ ಸ್ವಯಸುಖದ ನಿಜದ ನಿತ್ಯ ನಿಜರೂಪು, ನಿರಂಜನ, ನಿಗಮಕ್ಕತೀತ, ಹರಿಯಜರಿಗೆಟ್ಟದ ಜ್ಯೋತಿರ್ಮಯ ತಾನೆ ಲೀಲೆಗೆ ಮೂಲವಾದ ಗೊಹೇಶ್ವರಲಿಂಗದ ಘನಕ್ಕೆ ಘನವಾವುದು ?

೮೪

ಚಿತ್ತುವೆಂಬ ಬಿತ್ತು ಬಲಿದು ಎರಡಾದಲ್ಲಿ, ಲಿಂಗವೆಂಬ ಕಳೆ ಅಂಕುರಿಸಿ ಮೂರ್ತಿಯಾಯಿತ್ತು. ಆ ಮೂರ್ತಿಯ ಘನತೆಯನೇನೆಂದುಪಮಿಸಬಾರದು. ನೋಡಿದಡೆ ಮೂರ್ತಿ, ಹಿಡಿದಡೆ ಬಯಲು. ಆ ಮೂರ್ತಿಯೊಳಗದೆ ಈರೇಳು ಲೋಕದ ಪ್ರಾಣಕಳೆ. ಆ ಕಳೆಯ ಬೆಳಗು ತಾನೆ ನಮ್ಮ ಗೊಹೇಶ್ವರಲಿಂಗದ ಲೀಲಾಮೂಲದ ಪ್ರಥಮ ಭಿತ್ತಿ.

೮೫

ಮರನೊಳಗಣ ಪತ್ರೆ ಫಲಂಗಳು ಮರಕಾಲವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿಸ್ವಭಾವಂಗಳು ಹರಭಾವದಿಚ್ಛೆಗೆ ತೋರುವವು. ಲೀಲೆಯಾದಡುಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗೊಹೇಶ್ವರ.

೮೬

ಓಂಪ್ರಥಮದಲ್ಲಿ ದಿವ್ಯ ನಿರಾಲಂಬಮೂರ್ತಿ ಜಗತ್‌ಸೃಷ್ಟ್ಯರ್ಥ ಕಾರಣವಾಗಿ ತತ್ತ್ವದಲ್ಲಿ, ಪಂಚಬ್ರಹ್ಮ ಸಾಕಾರಮೂರ್ತಿಯಾದ ಲೀಲಾ

ಸಂಭವವಾದಲ್ಲಿ ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತು, ಅಂಗ ಕರಂಡ ಆತ್ಮ ಸುಗಂಧ ನೀನಾದೆಯಲ್ಲಾ ಏಣಾಂಕಧರ ಸೋಮೇಶ್ವರಾ.

೮೭

ಬಯಲು ವೊಳಗಿ ಮಳೆ ಸೃಜಿಸಿ, ಆ ಬಯಲು ಆ ಮಳೆಯನೊಡಗೂಡಿ ದೃಷ್ಟವಪ್ಪ ವಾರಿಕಲ್ಲಾಗಿ ತೋರಿದಂತೆ, ನಿನ್ನ ನೆನಹೆ ನಿನಗೆ ಶಕ್ತಿಯಾಯಿತ್ತಲ್ಲಾ. ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮಸೂಚನೆಯಾಯಿತ್ತಲ್ಲಾ. ಮಹಾಲಿಂಗಕಲ್ಲೇಶ್ವರಾ, ನಿಮ್ಮ ಆದಿಗೆ ಇದೇ ಪ್ರಥಮವಾಯಿತ್ತಲ್ಲಾ.

೨

ವಿಶ್ವಪ್ರಪಂಚ

೧. ಸೃಷ್ಟಿ

೧

ಅನಾದಿಯ ಮಗನು ಆದಿ. ಆದಿಯ ಮಗನತೀತ. ಅತೀತನ ಮಗನು ಆಕಾಶ. ಆಕಾಶನ ಮಗನು ವಾಯು. ವಾಯುವಿನ ಮಗನಗ್ನಿ. ಅಗ್ನಿಯ ಮಗ ಅಪ್ಪು. ಅಪ್ಪುವಿನ ಮಗ ಪೃಥ್ವಿ. ಪೃಥ್ವಿಯಿಂದ ಸಕಲ ಜೀವ ರೆಲ್ಲರೂ ಉದ್ಭವ ಗೊಹೇಶ್ವರಾ.

೨

ಏನೆಂದೆನಲಿಲ್ಲದ ಮಹಾಘನವು ತನ್ನ ಲೀಲೆಯಿಂದ ತಾನೇ ಸ್ವಯಂ ಭುಲಿಂಗವಾಯಿತ್ತು. ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ. ಆ ಶಿವ ಶಕ್ತ್ಯಾತ್ಮಕದಿಂದಾದುದು ಆತ್ಮ. ಆತ್ಮನಿಂದಾದುದು ಆಕಾಶ. ಆಕಾಶದಿಂದಾದುದು ವಾಯು. ವಾಯುವಿನಿಂದಾದುದು ಅಗ್ನಿ. ಅಗ್ನಿಯಿಂದಾದುದು ಅಪ್ಪು. ಅಪ್ಪುವಿನಿಂದಾದುದು ಪೃಥ್ವಿ. ಪೃಥ್ವಿಯಿಂದಾದುದು ಸಕಲ ಜೀವವೆಲ್ಲಾ. ಇವೆಲ್ಲಾ ನಿಮ್ಮ ನೆನಹು ಮಾತ್ರದಿಂದಾದುವು ಚೆಮ್ಮಲಿಗೆಯ ಚೆನ್ನರಾಮಾ.

೩

ನೀವು ನಿಮ್ಮ ಸ್ವಲೀಲೆಯಿಂದೆ ಜಗದ ಲೀಲಾವೈಭವಂಗಳ ನಟಿಸ ಬೇಕೆಂದು ನಿಮ್ಮಲ್ಲಿ ನೆನಹುದೋರಲು, ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು. ಆ ಚಿತ್ತಿನಿಂದೆ ಚಿನ್ನಾದ ಚಿದ್‌ಬಿಂದು ಚಿತ್‌ಕಳೆಗಳೊಗೆದವು. ಆ ಚಿನ್ನಾದ ಚಿದ್‌ಬಿಂದು ಚಿತ್‌ಕಳೆ ಆ ಮೂಲಚಿತ್ತು ಸಹವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವೇ ಪಂಚಮುಖವನೈದಿಹ ಸದಾಶಿವನೆಂದೆನಿಸಿತ್ತು. ಆ ಸದಾಶಿವನಿಂದೆ ಬ್ರಹ್ಮ ವಿಷ್ಣು ರುದ್ರರೆಂಬ ತ್ರೈಮೂರ್ತಿಗಳುದಯಿಸಿದರು. ಆ ತ್ರೈಮೂರ್ತಿಗಳಿಂದೆ ಸ್ವರ್ಗ ಮರ್ತ್ಯ ಪಾತಾಳಂಗಳೆಂಬ ತ್ರೈಲೋಕಂ

ಗಳು ಜನಿಸಿದುವು. ಆ ತ್ರೈಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಣ್ಣು ಗಂಡು ನಾಮ ರೂಪು ಕ್ರಿಯಾದಿ ಸಕಲ ವಿಸ್ತಾರವಾಯಿತ್ತು. ಇಂತಿವೆಲ್ಲವೂ ನಿಮ್ಮ ನೆನಹು ಮಾತ್ರದಿಂದಾದವಯ್ಯಾ ಅಖಂಡೇಶ್ವರಾ.

೪

ನಿರಾಕಾರ ಪರವಸ್ತು ತನ್ನ ಲೀಲಾವಿನೋದಕ್ಕೋಸ್ಕರವಾಗಿ ಎರಡು ಮುಖದಿಂದ ಸೃಷ್ಟಿಯ ಮಾಡಿದರು. ಒಂದು ಊರ್ಧ್ವಸೃಷ್ಟಿ, ಒಂದು ಅಧೋಸೃಷ್ಟಿ. ಅಧೋಸೃಷ್ಟಿ ಎಂತೆಂದೊಡೆ: ಅಂಡಜ ಪಿಂಡಜ ಜರಾಯುಜ ಉದ್ಭಿಜ,—ಇವು ನಾಲ್ಕು ಕೂಡಿ ಎಂಬತ್ತುನಾಲ್ಕುಲಕ್ಷ ಜೀವರಾಶಿಯ ಮಾಡಿದರು. ಸ್ವರ್ಗ ನರಕ ಇಹ ಪರ ಪುಣ್ಯ ಪಾಪ ಧರ್ಮ ಕರ್ಮ ಸತ್ಯ ಅಸತ್ಯ ಜ್ಞಾನ ಅಜ್ಞಾನ ಹೆಣ್ಣು ಗಂಡು ಹಿರಿದು ಕಿರಿದು ಉತ್ಪತ್ತಿ ಸ್ಥಿತಿ ಲಯಕ್ಕೆ ಅಧಿಕಾರರಾದ ಬ್ರಹ್ಮ ವಿಷ್ಣು ರುದ್ರರ ಮಾಡಿಟ್ಟರು. ಇನ್ನು ಊರ್ಧ್ವಸೃಷ್ಟಿ ಎಂತೆಂದೊಡೆ: ಅಸಂಖ್ಯಾತ ಮಹಾಗಣಂಗಳು. ಇವರಿಗೆ ಸ್ವರ್ಗ ನರಕವಿಲ್ಲ, ಇಹ ಪರವಿಲ್ಲ, ಪುಣ್ಯ ಪಾಪವಿಲ್ಲ, ಧರ್ಮಕರ್ಮವಿಲ್ಲ, ಸತ್ಯಾಸತ್ಯವಿಲ್ಲ, ಜ್ಞಾನಾಜ್ಞಾನವಿಲ್ಲ, ಹೆಣ್ಣು ಗಂಡು ಇಲ್ಲ, ಹಿರಿದು ಕಿರಿದು ಇಲ್ಲ, ಉತ್ಪತ್ತಿ ಸ್ಥಿತಿ ಲಯಕ್ಕೆ ಕರ್ತರಾದ ಬ್ರಹ್ಮ ವಿಷ್ಣು ರುದ್ರರು ಇಲ್ಲ. ಆ ನಿರಾಕಾರ ಪರವಸ್ತು ತಾನೆ ಗುರು ಲಿಂಗ ಜಂಗಮವಾಗಿ, ಗುರುವಿನಲ್ಲಿ ಉತ್ಪತ್ತಿ, ಲಿಂಗದಲ್ಲಿ ಸ್ಥಿತಿ, ಜಂಗಮದಲ್ಲಿ ನಿಜೈಕ್ಯವ ಮಾಡಿ, ಮತ್ತೆ ಆ ಪರಶಿವಮೂರ್ತಿ ತನ್ನ ವಿನೋದಕ್ಕೆ ಆಟವಾಡಬೇಕಾಗಿ, ಮಹದಾಕಾಶವನೇ ಮಂಟಪವ ಮಾಡಿ, ಆಕಾಶವನೇ ಪರದೆಯ ಕಟ್ಟಿ, ಅಸಂಖ್ಯಾತ ಮಹಾಗಣಂಗಳ ಮೂರ್ತವ ಮಾಡಿಸಿ, ಎಂಬತ್ತುನಾಲ್ಕುಲಕ್ಷ ಜೀವರಾಶಿಗಳಿಗೆ ಸೂತ್ರವ ಮಾಡಿ, ತನ್ನ ಕೈಯಲ್ಲಿ ಪಿಡಿದುಕೊಂಡು ಚಿತ್ರವಿಚಿತ್ರದಾಟವ ಆಡಿಸುತ್ತಿಹುದಕ್ಕೆ ಲೆಕ್ಕವಿಲ್ಲ. ಅದನ್ನು ಹೇಳುವದಕ್ಕೆ ಅಸಾಧ್ಯವು. ಆ ಪ್ರಮಥಗಣಂಗಳು ನೋಡಿ, 'ಆ ಬೊಂಬೆಗಳೇನು ಆಡಿಹವು? ಸೂತ್ರಕನಾಡಿಸಿದ ಹಾಗೆ ಆಡುವವು. ಆ ಬೊಂಬೆಗಳಿಗೆ ಶಿವನಿಲ್ಲದಿರ್ದೊಡೆ ಆಡುವುದು ಹ್ಯಾಗೆ? ತನ್ನ ಕೈಯಲ್ಲಿ ಸೂತ್ರವಿಡಿದು ಆಡಿಸುವನಲ್ಲದೆ ಇವೆಲ್ಲವು ಅನಿತ್ಯ'ವೆಂದು ತಿಳಿದು, ಪ್ರಮಥಗಣಂಗಳು ತಮ್ಮ ಲಿಂಗದಲ್ಲಿ ನಿಜ ಮೋಕ್ಷಿ

ಗಳಾಗಿ ಶಾಂಭವಪುರಕ್ಕೆ ಹೋದ ಭೇದವ ಎನ್ನೊಳರುಹಿದಾತ ನಮ್ಮ ಶಾಂತಕೂಡಲಸಂಗಮದೇವ.

೫

ಗಂಧವ ವಾಯು ಕೊಂಬಾಗ ಅದ ತಂದು ಊದಿದವರಾರು ? ಮರಕ್ಕೆ ಸುಗಂಧ ನಿಂದುದಾಗ ಅದ ಬಂಧಿಸಿ ತಂದು ಇರಿಸಿದವರಾರು ? ಅವು ತಮ್ಮ ಲಿಂಗದ ಭಾವದಂತೆ ನಿಂದ ನಿಜವೆ ತಾವಾಗಿ, ಬೇರೊಂದು ಸಂಧಿಸಲಿಲ್ಲೆಂದಾತ ನಮ್ಮ ಅಂಬಿಗರ ಚೌಡಯ್ಯನು.

೬

ಶರಧಿಯು ಮೇಲೆ ಧರೆಯು ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ವೃಡನೇ, ನೀನಲ್ಲದೆ ಉಳಿದ ದೈವಂಗಳಿ ಗಹುದೇ ರಾಮನಾಥಾ ?

೭

ಇಂತೆಂದ ಭೂಮಿಯು, ಇಂತೆಂದ ಗಗನವನಿಂತೆಂದ ಸಪ್ತಸಾಗರವ, ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಚಿಂತ್ಯನನಾರು ಬಲ್ಲರೈ ರಾಮನಾಥಾ ?

೮

ಮನೆಯಲ್ಲಿ ಮನುಜರು ಅಡಗುವರಲ್ಲದೆ ಮನುಜರಲ್ಲಿ ಮನೆ ಅಡಗಿರುವುದುಂಟೇ ? ಮಾಡುವುದಕ್ಕೆ ಕರ್ತನಲ್ಲದೆ ಆ ಘಟವ ಘಟಿಸುವುದಕ್ಕೆ ಅಗೋಚರ ಐಘಟದೂರ ರಾಮೇಶ್ವರಲಿಂಗವು.

೯

ಮಣಿಗಳ ಸೂತ್ರದಂತೆ ತ್ರಿಣಯನ ನೀನಿಪ್ಪೆಯಯ್ಯಾ. ಎಣಿಸುವಡೆ ತನು ಭಿನ್ನ, ಆತ್ಮನೊಬ್ಬನೇ. ಅಣುರೇಣುಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿಪ್ಪೆನಯ್ಯಾ ರಾಮನಾಥಾ.

೧೦

ಬೀಜದೊಳಗಣ ವೃಕ್ಷ ಅಂಕುರ ಪಲ್ಲವ ಪತ್ರ ಕುಸುಮ ಫಲ ವ್ಯೆ ದೋರದಂತೆ, ಕಾಷ್ಠದೊಳಗಡಗಿ ಉಷ್ಣದೋರದಂತೆ, ಪತಂಗನ ಕರದೊಳಗಡಗಿಪ್ಪ ಮರೀಚಿ ಪ್ರವಹಿಸದಂತೆ, ಬಿಂದುವಿನೊಳಗಡಗಿಪ್ಪ ನಾದ ದನಿದೋರದಂತೆ ಪಿಂಡಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರ ಲಿಂಗವನಾರು ಭೇದಿಸಬಾರದಯ್ಯ.

೧೧

ತತ್ವಮೂವತ್ತಾರ ಮೀರಿ ನಾದ ಬಿಂದು ಕಳಾತೀತನಾದರೇನು? ಜಗನ್ಮಯನಾದ. ಆಗಿಯೂ ಜಗದ ಸ್ಥಿತಿ ಗತಿ ಇಲ್ಲ. ಅದೆಂತೆಂದೊಡೆ, ಶ್ಲೋಕ: "ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ। ಏಕ ಏವ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್।" ಎಂದುದಾಗಿ, ಜಲದೊಳಗೆ ಸೂರ್ಯನ ಪ್ರತಿಬಿಂಬ ವಿಕಾರಿಸುತ್ತಿದ್ದರೇನು? ಆ ವಿಕಾರ ಜಲಕಲ್ಲದೆ ಸೂರ್ಯಂಗಿಲ್ಲದಂತಿಪ್ಪನಯ್ಯ ಸೌರಾಷ್ಟ್ರಸೋಮೇಶ್ವರನು.

೧೨

ಸರ್ವಜಗದಲ್ಲಿ ಶಿವನಿಲ್ಲವೆಂದಡೆ ಆ ಜಗವು ಶಿವನಿಂದಲ್ಲದೆ ಬೇರೆ ತೋರಲರಿಯದಾಗಿ, ಪದ್ಮಪತ್ರಜಲದಂತೆ ವಿಶ್ವಪರಿಪೂರ್ಣನಾಗಿ ಹೊದ್ದಿಯೂ ಹೊದ್ದದಿರ್ಪನು ನಮ್ಮ ಅಖಂಡೇಶ್ವರ.

೧೩

ಜಲದೊಳಗಣ ಸೂರ್ಯನಂತೆ ಇರ್ಪನಯ್ಯಾ ಶಿವನು. ಲೋಕಾದಿ ಲೋಕಂಗಳೊಳಗಿರ್ದೊಡೇನು? ಜಗದ ಪುಣ್ಯ ಪಾಪ ಸ್ವರ್ಗ ನರಕ ಬಂಧ ಮೋಕ್ಷಕ್ಕೆ ಒಳಗಾದಾತನೇ? ಅಲ್ಲ. ಅದೆಂತೆಂದೊಡೆ: ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ, ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ ಶಿವಂಗಿಲ್ಲವಾಗಿ. ಅನಂತಕೋಟಿ ಬ್ರಹ್ಮಾಂಡಂಗಳು ತನ್ನ

ಒಡಲೊಳಗಿರ್ಪವೆಂದೊಡೆ, ತಾ ಹೊರಗಾಗಿ ಅಡಗಲೆಡೆಯುಂಟೇ? ಇದು ಕಾರಣ, ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ, ವಿಶ್ವಾಧಿಪತಿಯಾಗಲೂ ಬಲ್ಲ.

೧೪

ಜಗತ್‌ಪ್ರಪಂಚವ ಮಾಡಿ, ಆ ಜಗದಲ್ಲಿ ಜೀವರೂಪಿಂದ ಬಳಿಸಂದನೆಂದು ಹೇಳುವ ಶ್ರುತಿಯುಂತಿರಲಿ. ಜೀವನೆ ಶಿವನಾದರೆ, ಶೋಕ ಮೋಹ ಋಣರೋಗ ಪುಣ್ಯ ಪಾಪ ಕಾಲಕಲ್ಪಿತ ಪ್ರಳಯ ಪ್ರಕೃತಿ ಸಂಸಾರ ಪಾಶಬದ್ಧ ಉಂಟೆ ಶಿವಂಗೆ? ಇವೆಲ್ಲವೂ ಜೀವಂಗಲ್ಲದೆ ಶಿವಂಗಿಲ್ಲವಾಗಿ, ತ್ರಿಗುಣರಹಿತ ಸೌರಾಷ್ಟ್ರಸೋಮೇಶ್ವರನು.

೧೫

ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರನೆರೆದವರಾರಯ್ಯಾ? ಕಬ್ಬು ಬಾಳೆ ಹಲಸು ನಾರಿಕೇಳಕ್ಕೆ ಸಿಹಿ ನೀರನೆರೆದವರಾರಯ್ಯಾ? ಕಳವೆ ಶಾಲಿಗೆ ಓಗರದ ಉದಕವನೆರೆದವರಾರಯ್ಯಾ? ಮರುಗ ಮಲ್ಲಿಗೆ ಪಚ್ಚೆಗೆ ಪರಿಮಳದುದಕವನೆರೆದವರಾರಯ್ಯಾ? ಇಂತೀ ಜಲವು ಒಂದೆ, ನೆಲವು ಒಂದೆ, ಆಕಾಶವು ಒಂದೆ. ಒಂದೇ ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದರೇನು? ತನ್ನ ಪರಿ ಬೇರೆ.

೧೬

ಮೃತ್ತಿಕೆ ಒಂದರಲ್ಲಿ ಆದ ಭಾಂಡದಂತೆ, ಚಿನ್ನ ಒಂದರಲ್ಲಿ ಆದ ಬಂಗಾರದಂತೆ, ಉದಕ ಒಂದರಲ್ಲಿ ಆದ ವಾರಿಕಲ್ಲಂತೆ, ಬ್ರಹ್ಮದಿಂದಲಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯಾ?

೧೭

ವಿಶ್ವದೊಳಗೆಲ್ಲ ನೀನೆ ದೇವಾ. ವಿಶ್ವಭರಿತನು ನೀನೆ ದೇವಾ. ವಿಶ್ವ

ರೂಪನು ನೀನೆ ದೇವಾ. ವಿಶ್ವಪತಿ ನೀನೆ ದೇವಾ. ವಿಶ್ವಾತೀತನು ನೀನೆ ದೇವಾ ಅಖಂಡೇಶ್ವರಾ.

೧೮

ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು. ರಚಿಸಿ ಏನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ, ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ ವಿಶ್ವದುತ್ಪತ್ತಿ ಸ್ಥಿತಿ ಲಯಕ್ಕೊಳಗಾದನೇ? ಇಲ್ಲ. ಅದೇನು ಕಾರಣವೆಂದೊಡೆ, ಅಜಾತನಾಗಿ ಉತ್ಪತ್ತಿ ಇಲ್ಲ. ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ. ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳು ಹೊದ್ದಲರಿಯವು. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯಾ.

೧೯

ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ. ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

೨೦

ಪೃಥ್ವಿಯನತಿಗಳೆದು ಅಪ್ಪುವಿಲ್ಲ. ಅಪ್ಪುವನತಿಗಳೆದು ಅಗ್ನಿಯಿಲ್ಲ. ಅಗ್ನಿಯನತಿಗಳೆದು ವಾಯುವಿಲ್ಲ. ವಾಯುವನತಿಗಳೆದು ನಾದವಿಲ್ಲ. ನಾದವನತಿಗಳೆದು ಬಿಂದುವಿಲ್ಲ. ಬಿಂದುವನತಿಗಳೆದು ಕಳೆಯಿಲ್ಲ. ಕಳೆಯನತಿಗಳೆದು ಆತ್ಮವಿಲ್ಲ. ಆತ್ಮವನತಿಗಳೆದು ಗೊಹೇಶ್ವರನೆಂಬ ಲಿಂಗವಿಲ್ಲ.

೨೧

ಘನಗಂಭೀರ ಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ ಫೇನ ತರಂಗಗಳು ತೋರಿತ್ತಲ್ಲಾ ಎಂದಡೆ, ಅವು ಬೇರಾಗಬಲ್ಲವೆ? ಪರಶಿವನೆಂಬ

ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಂಗಳಾದವಲ್ಲದೆ ಬೇರಾಗಬಲ್ಲವೆ? ಇದ ಬೇರೆಂಬ ಅರೆಮರುಳರ ನಾನೇನೆಂಬೆ? ವಿಶ್ವವ ತಿಳಿದು ನೋಡಲು ಚಿನ್ಮೂಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ.

೨೨

ಅಯ್ಯಾ, ನೀನು ನಿರಾಳ ನಿರ್ಮಾಯನಾಗಿಪ್ಪೆಯಾಗಿ, ಆಕಾಶ ಪ್ರಕಾಶವಿಲ್ಲದಂದು, ಸಾಕ್ಷಿಸಭೆಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು, ಆಧಾರದೊಳಗಣ ವಿಭೂತಿಯನೆ ತೆಗೆದು ಭೂಮಿಯ ನೆಲೆಗೊಳಿಸೆ, ಪಂಚಾಶತ್ಕೋಟಿ ವಿಸ್ತೀರ್ಣ ಭೂಮಂಡಲಕ್ಕೆ ಸುತ್ತಿ ಹರಿದವು ಸಪ್ತ ಸಾಗರಂಗಳು. ಎಂಬತ್ತಾರು ಕೋಟಿಯುಂ ತೊಂಬತ್ತೇಳು ಲಕ್ಷ ಕಾಲ ಭುವನಮಂಡಲಕ್ಕೆ ಉದಯ ಬ್ರಹ್ಮಾಂಡ. ಐವತ್ತಾರುಕೋಟಿ ತಾರಾ ಮಂಡಲವೆಂದಡೆ ಬೆಳಗಿ ತೋರಿದ ಹನ್ನೆರಡು ಜ್ಯೋತಿಯ; ನಿಲಿಸಿ ತೋರಿದ ಹದಿನಾಲ್ಕು ಭುವನವ! ಈ ಜಗದ ಜಂಗುಳಿಯ ಕಾವ ಗೋವಳ ತಾನಾಗಿ, ಚೌರಾಸಿ ಲಕ್ಷ ಜೀವರಾಸಿಗಳಿಗೆ ರಾಸಿವಾಳ ತಾನಾಗಿ, ಸಕಲದ ಅಳಿವಿನ ಉಳಿವಿನ ನಿಂದ ನಿಜದ ನಿಲವ ನೋಡಿ ಕಂಡೆನು ; ಗೊಹೇಶ್ವರಾ, ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೨೩

ಧರಣಿಯ ಪಸರಿಸಿ ಉರಗನನಡಿಯಿಟ್ಟು, ಶರಧಿ ಏಳಕ್ಕೆ ಎರೆದನು ಒಕ್ಕುಡಿತೆ ಉದಕವ. ಹರಿಯಜಸುರರಿಗೆ ಪರಿಪರಿಯ ಲೋಕವ ಕೊಟ್ಟು ಅರಿಯದಂತಿರ್ದ ಕಾಣಾ ರಾಮನಾಥ.

೨೪

ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದರೆ : ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಮುಗಿಲ ಮರೆಯ ಮಿಂಚಿನಂತೆ, ನೀರೊಳಗಣ ಕಿಚ್ಚಿನಂತೆ, ಕಾಷ್ಠದೊಳಗಣ ಅಗ್ನಿಯಂತೆ, ತೃಣದೊಳಗಡಗಿದ ಚೈತನ್ಯದಂತೆ. ಈ ವಿಶ್ವದೊಳು ಇದ್ದು ಇಲ್ಲದಂತಿಪ್ಪ

ಮಹಾಘನವ ನಿಮ್ಮ ಶರಣರು ಬಲ್ಲರಲ್ಲದೆ, ಮರ್ತ್ಯದ ಮರಣಬಾಧೆಗೊಳಗಾದ ಮನುಜರೆತ್ತಬಲ್ಲರು ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

೨೫

ಕಂಗಳಾಲಿಯ ಕರಿಯ ನಾಳದಲ್ಲಿ ಈರೇಳು ಭುವನಂಗಳಡಗಿದವು, ನಾಟಕ ನಾಟಕವ ನಟಿಸುತ್ತ ಆಡಿಸುವ ಸೂತ್ರದ ಪರಿ. ಗೊಹೇಶ್ವರಲಿಂಗ ನಿರಾಳ ಚೈತನ್ಯ.

೨. ದೇವರು – ದೇವತೆಗಳು

೨೬

ಶಿವಶಿವ ಮಹಾದೇವಾ, ಉರಿಲಿಂಗದೇವನೆ ಚೆಲುವನು. ಶಿವಶಿವ ಮಹಾದೇವಾ, ಉರಿಲಿಂಗದೇವನೆ ಗರುವನು. ಶಿವಶಿವ ಮಹಾದೇವಾ, ಉರಿಲಿಂಗದೇವನೆ ಹಿರಿಯನು. ಶಿವಶಿವ ಮಹಾದೇವಾ, ಉರಿಲಿಂಗ ದೇವನೆ ಪುರುಷನು. ಶಿವಶಿವ ಮಹಾದೇವಾ, ಉರಿಲಿಂಗದೇವನೆ ದೇವನು.

೨೭

ದೇವನೊಬ್ಬ, ನಾಮ ಹಲವು. ಪರಮಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿಮೂಗ ಕೊಯ್ವನು! ಹಲವು ದೈವದ ಎಂಜಲ ತಿಂಬವರನೇನೆಂಬೆ ಕೂಡಲಸಂಗಮದೇವಾ ?

೨೮

ಎತ್ತನೇರಿದ ಕರ್ತನೊಬ್ಬನೆ ಜಗಕೆಲ್ಲ. ಎತ್ತು ಬೆಳೆದ ಧಾನ್ಯವನುಂಬ ದೇವತೆಗಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ ರಾಮನಾಥಾ.

೨೯

ಪೃಥ್ವಿ ಲಿಂಗವೆಂದು ಹತರಾದರು ಕೆಲಬರು. ಅಪ್ಪು ಲಿಂಗವೆಂದು ತಪ್ಪಿದರು ಶಿವನನರಿಯದೆ ಹಲಬರು. ತೇಜ ಲಿಂಗವೆಂದು ವಾದಿಸಿ ಕೆಟ್ಟರು

ಕೆಲಬರು. ವಾಯು ಲಿಂಗವೆಂದು ಘಾಸಿಯಾದರು ಹಲಬರು. ಆಕಾಶ ಲಿಂಗವೆಂದು ಶೂನ್ಯವಾದಿಗಳಾದರು ಹಲಬರು. ಚಂದ್ರಸೂರ್ಯರು ಲಿಂಗವೆಂದು ಭ್ರಮಣೆಯಲ್ಲಿ ತಿರುಗುತ್ತಿಪ್ಪರು ಹಲಬರು. ಆತ್ಮಲಿಂಗವೆಂದು ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳ ಯೋನಿಗಳೊಳಗೆ ಜನಿಸುತ್ತಿಪ್ಪರು ಹಲಬರು,– ಇಂತೀ ಶಿವನ ಲೀಲಾಸಂಚವನರಿಯದೆ. ಶಿವನು ಜಗತ್ತಿಗೆ ಮರವೆಯನಿಕ್ಕಿ ಆಡಿಸುವನು. ಜಗತ್ತಿನ ಹುಸಿ ವಚನವ ತೊಡೆದು, ನಿಜಗುರು ಲಿಂಗ ಜಂಗಮದ ನಿತ್ಯ ಪ್ರಸಾದವ ತೋರಿದಾತ ಸಂಗನಬಸವಣ್ಣ ಕಾಣಾ ಕಲಿದೇವರದೇವಯ್ಯಾ.

೩೦

ಜಗದಗಲ ಮುಗಿಲಗಲ! ಪಾದ ಪಾತಾಳದಿಂದತ್ತತ್ತ; ಮಕುಟ ಬ್ರಹ್ಮಾಂಡದಿಂದತ್ತತ್ತ. ವಿಶ್ವಬ್ರಹ್ಮಾಂಡವನು ತನ್ನ ಕುಕ್ಷಿಯೊಳು ನಿಕ್ಷೇಪವ ಮಾಡಿಕೊಂಡಿಪ್ಪ ದೇವನೀಗ ಎನ್ನ ದೇವ. ಆ ದೇವನೊಳಗೆ ನಾನಡಕ, ನನ್ನೊಳಗೆ ಆ ದೇವನಡಕ. ಇಂತಪ್ಪ ಆ ದೇವನ ನಂಬಿ, ನಾ ಕೆಟ್ಟು ಬಟ್ಟಬಯಲಾದೆ. ಈ ದೇವನನರಿಯದೆ ಜಗವೆಲ್ಲ ಕಲ್ಲುದೇವರು, ಮಣ್ಣು ದೇವರು, ಮರ ದೇವರು ಎಂದು ಇವನಾರಾಧಿಸಿ ಕೆಟ್ಟರಲ್ಲ! ಸ್ವರ್ಗ ಮರ್ತ್ಯ ಪಾತಾಳದವರೆಲ್ಲರು ಎನ್ನ ದೇವನನರಿದು ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ. ಇದು ಕಾರಣ, ಆವ ಲೋಕದವರಾದರು ಆಗಲಿ ಎನ್ನ ದೇವನನರಿದರೆ ಭವವಿಲ್ಲ, ಬಂಧನವಿಲ್ಲ. ನೆರೆ ನಂಬಿದರೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೩೧

ಕಿಚ್ಚಿನ ದೇವನು, ಕೆಂಡದ ದೇವನು, ಮಾರಿಯ ದೇವನು, ಮಸಣದ ದೇವನು, ತಿರುಕ ಗೊರವನೆಂದು ಅಲ್ಲಲ್ಲಿ ಒಂದೊಂದನಾಡುತ್ತಿಪ್ಪರಯ್ಯಾ. ನಾ ನಿಮ್ಮ ಪೂಜಿಸಿ, ನಷ್ಟ ಸಂತಾನವಾಗಿ, ಬಟ್ಟಬಯಲಲ್ಲಿ ಬಿದ್ದು ಕೆಟ್ಟೆನು ಗೊಹೇಶ್ವರಾ.

೩೨

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲ ನಾರಿ ದೈವ ಕಾಣಿರೋ! ಕೊಳಗ ದೈವ, ಗಿಣ್ಣಿಲು ದೈವ ಕಾಣಿರೋ! ದೈವ ದೈವವೆಂದು ಕಾಲಿಡಲಿಂಬಿಲ್ಲಾ!! ದೈವನೊಬ್ಬನೇ ಕೂಡಲ ಸಂಗಮದೇವ.

೩೩

ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ? ಅವಸರ ಬಂದರೆ ಮಾರುವ ದೈವವ ನೆಂತು ಸರಿಯೆಂಬೆನಯ್ಯಾ? ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ? ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ.

೩೪

ಎತ್ತೆತ್ತ ನೋಡಿದತ್ತತ್ತ ನೀನೆ ದೇವಾ. ಸಕಲ ವಿಸ್ತಾರದ ರೂಹು ನೀನೆ ದೇವಾ. ವಿಶ್ವತೋಚಕ್ಷು ನೀನೆ ದೇವಾ. ವಿಶ್ವತೋಮುಖ ನೀನೆ ದೇವಾ. ವಿಶ್ವತೋಬಾಹು ನೀನೆ ದೇವಾ. ವಿಶ್ವತೋಪಾದ ನೀನೆ ದೇವಾ ಕೂಡಲಸಂಗಮದೇವಾ!

೩೫

ಬ್ರಹ್ಮ ವಿಷ್ಣು ಕುಮಾರ, ಲೆಕ್ಕವಿಲ್ಲದ ರುದ್ರರು ನೋಡಾ. ದೇವರ್ಕಳೆಲ್ಲ ಗರ್ವದಲ್ಲೈದಿಹರು. ಅವರೆತ್ತ ಬಲ್ಲರು ಶಿವನಾದಿಯಂತುವ? ಶಾಶ್ವತ ಪದಕ್ಕೆ ಸಲ್ಲದ ಕಾರಣ, ಇವರು ವೇಷಧಾರಿಗಳೆಂದಾತ ಅಂಬಿಗರ ಚೌಡಯ್ಯ.

೩೬

ಹರಿ ಹೊಲಬನರಿಯ. ಬ್ರಹ್ಮ ಮುಂದನರಿಯ. ರುದ್ರ ಲೆಕ್ಕವ ಮರೆದು ಜಪವನೆಣಿಸುತ್ತೈದಾನೆ. ಈಶ್ವರ ಪವನಯೋಗದಲ್ಲಿ ಮಗ್ನನಾದ.

ಸದಾಶಿವನು ಭಾವದಲ್ಲಿ ಭ್ರಮಿತನಾದ. ಒಂದಂಡಜದೊಳಗಣ ಬಾಲಕ ರೈವರು ನಿಮ್ಮನೆತ್ತ ಬಲ್ಲರು ಗೊಹೇಶ್ವರಾ ?

೩೭

ಮಜ್ಜನಕ್ಕೆರೆವಡೆ ಭೂತವಿಕಾರ. ಪ್ರಮಥಗಣಂಗಳೆಲ್ಲರೂ ಪ್ರೇತರು. ವೀರಭದ್ರಗಣಂಗಳೆಲ್ಲರೂ ಬ್ರಹ್ಮರಾಕ್ಷಸರು. ಅರ್ಧನಾರೀಶ್ವರರೆಲ್ಲರೂ ಚಿಕ್ಕ ಮಕ್ಕಳ ಮೇಲೆ ತಪ್ಪ ಸಾಧಿಸಿ ಕಾಡಿ ಉಂಬರು. ಈ ನಾಲ್ಕು ಸ್ಥಲ ದೊಳಗೆ ಆವುದೂ ಅಲ್ಲ ಗೊಹೇಶ್ವರಲಿಂಗೈಕ್ಯವು.

೩೮

ಅತಿರಥ ಸಮರಥರೆನಿಪ ಹಿರಿಯರು ಮತಿಗೆಟ್ಟು ಮರುಳಾದರಲ್ಲಾ ! ದೇವ ಸತ್ತ, ಬ್ರಹ್ಮ ಹೊತ್ತ, ವಿಷ್ಣು ಕಿಚ್ಚ ಹಿಡಿದ; ಗಂಗೆ ಗೌರಿಯರಿಬ್ಬರು ಬರುಮುಂಡೆಯರಾದರು. ಇದ ಕಂಡು ಬೆರಗಾದೆ ಗೊಹೇಶ್ವರಾ!

೩೯

ರುದ್ರನೆಂಬಾತನೊಬ್ಬ ಗಣೇಶ್ವರನು. ಭದ್ರನೆಂಬಾತನೊಬ್ಬ ಗಣೇಶ್ವರನು. ಶಂಕರನೆಂಬಾತನೊಬ್ಬ ಗಣೇಶ್ವರನು. ಶಶಿಧರನೆಂಬಾತನೊಬ್ಬ ಗಣೇಶ್ವರನು. ಪೃಥ್ವಿಯೆ ಪೀಠ, ಆಕಾಶವೆ ಲಿಂಗ—ಅಂಥಾತನೊಬ್ಬ ಗಣೇಶ್ವರನು. ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು. ಸಿರಿಯಾಳನ ಮಗಳ ಬೇಡಿದಾತನೊಬ್ಬ ಗಣೇಶ್ವರನು. ಕಾಮದಹನವ ಮಾಡಿದಾತನೊಬ್ಬ ಗಣೇಶ್ವರನು. ಬ್ರಹ್ಮಕಪಾಲ ವಿಷ್ಣುಕಂಕಾಳವನಿಕ್ಕಿ ಆಡುವಲ್ಲಿ ನೀಲಕಂಠನೆಂಬಾತನೊಬ್ಬ ಗಣೇಶ್ವರನು. ಇವರೆಲ್ಲರು ನಮ್ಮ ಗೊಹೇಶ್ವರಲಿಂಗದಲ್ಲಿ ಅಡಗಿಪ್ಪರು.

೪೦

ಗಂಗಾದೇವಿ ಮುಂಡೆಯಾದಳು, ಗೌರೀದೇವಿ ಓಲೆಯ ಕಳೆದಳು. ಚಂದ್ರಸೂರ್ಯರಿಬ್ಬರೂ ನೀರಿಳಿದರಲ್ಲಾ ! ವಾಯುದೇವ ವಿಮಾನವ

ಹೊತ್ತ, ವಾಸುದೇವ ತಲೆಗೊಳ್ಳಿಯನಿರಿದ. ಅಲ್ಲಿಂದತ್ತ ಗೊಹೇಶ್ವರ ಸತ್ತನೆಂಬ ಸುದ್ದಿ !

೪೧

ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ, ಅಡವಿಯಲೊಬ್ಬ ದೇವ, ಮಡಿಲಲೊಬ್ಬ ದೇವ. ನೀರು ನೀರ ಕೂಡಿ, ಬಯಲು ಬಯಲ ಕೂಡಿ, ನರನೆಂಬ ದೇವ ತಾ ನಿರಾಳವೋ ! ಲಿಂಗವೆಂಬುದೊಂದು ಅನಂತದ ಹೆಸರು. ಗೊಹೇಶ್ವರನೆಂಬುದದೇನೊ ?

೩. ಮಾನವರು – ಜೀವಾತ್ಮರು

೪೨

ಗಗನದ ಮೇಘಂಗಳೆಲ್ಲಾ ಸುರಿದವು ಭೂಮಿಯ ಮೇಲೆ. ಭೂಮಿ ದಣಿಯುಂಡು ಸಸಿಗಳೆಲ್ಲಾ ಬೆಳೆದವು. ಬಹುವಿಕಾರದಿಂದ ಬೆಳೆದ ಸಸಿಯ ವಿಕಾರದಿಂದ ಗ್ರಹಿಸುವ ಕಾಮವಿಕಾರಿಗಳು ಲಿಂಗವನೆತ್ತ ಬಲ್ಲರು ಗೊಹೇಶ್ವರಾ ?

೪೩

ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ, ಬಣ್ಣ ಮೂಜಗಕೆ ಮುಕ್ಕಣ್ಣ ತಾನು. ಬಣ್ಣಕರು ಬಣ್ಣದೊಳಗಾಳುವದನೇ ಕಂಡು, ಅಣ್ಣ ನಗುತಿರ್ದನೈ ಯೋಗಿನಾಥಾ !

೪೪

ನೀರ ಬೊಂಬೆಯ ಚೋಹವ ತೊಟ್ಟು, ಅಗ್ನಿಯ ಬಣ್ಣದ ಹೊದಕೆಯ ಹೊದ್ದು, ಗಾಳಿಯ ಗತಿಯಲ್ಲಿ ಸುಳಿದಾಡುವ ಪ್ರಾಣಿಗಳು ದೇವರನೆತ್ತ ಬಲ್ಲರು ಗೊಹೇಶ್ವರಾ ?

೪೫

ಹಿಂದನರಿಯದದು ಮುಂದನೇನ ಬಲ್ಲುದೋ? ಉದಯ ಮುಖದಲ್ಲಿ ಹುಟ್ಟಿದ ಪ್ರಾಣಿಗಳು ಅಸ್ತಮಾನಕ್ಕೆ ಅಳಿದರಲ್ಲಾ ! ಅಂದಂದಿನ ಘಟಜೀವಿಗಳು ಬಂದ ಬಟ್ಟೆಗೆ ಹೋದರಲ್ಲಾ! ಗೊಹೇಶ್ವರಲಿಂಗವು ಆರಿಗೂ ಇಲ್ಲವಯ್ಯ.

೪೬

ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ. ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲವೂ! ಕತ್ತಲೆ ಕವಿಯಿತ್ತು ಮೂರುಲೋಕದೊಳಗೆ. ಇದರಚ್ಚುಗವೇನು ಹೇಳಾ ಗೊಹೇಶ್ವರಾ ?

೪೭

ಅಜ್ಞಾನವೆಂಬ ಕತ್ತಲೆ ಆವರಿಸಿತ್ತಯ್ಯ ಜಗವೆಲ್ಲವ. ಅಂಧಕಾರದ ಗುಹೆಯೊಳಗಿದ್ದವರಂತೆ ಇದ್ದರಯ್ಯ ಜೀವರೆಲ್ಲಾ. ಹೊಲಬುದಪ್ಪಿ ತಿಳಿವಿಲ್ಲದೆ ಕಳವಳಗೊಳ್ಳುತ್ತಿದ್ದರಯ್ಯ ಅಡವಿಯ ಹೊಕ್ಕ ಶಿಶುವಿನಂತೆ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಕರುಣವಾಗುವನ್ನಕ್ಕ ಬಳಲುತ್ತಿದ್ದರಯ್ಯಾ ಹೊಲಬನರಿಯದೆ.

೪೮

ತತ್ತಿಯೊಳಗಣ ಪಕ್ಷಿಯಂತೆ ಎತ್ತಲೆಂದರಿಯದೆ, ಅಜ್ಞಾನದ ಕತ್ತಲೆಯೊಳಗೆ ಸಿಕ್ಕಿ ದುಃಖಗೊಳುತ್ತಿಹರೆಲ್ಲರೂ. ದಿವಾರಾತ್ರಿಯೆನ್ನದೆ ಇಂತು ದುಃಖವನನುಭವಿಸುತ್ತ, ಕಾಯುವ ಹೊತ್ತು ಬಳಲುವ ಜೀವರುಗಳು ತಾವಾರೆಂದರಿಯದೆ, ನೋವುತ್ತ ಬೇವುತ್ತ ಸಾವುತ್ತಿಪ್ಪವರಿಗೆ ಇನ್ನೆಂದಿಗೆ ಮುಕ್ತಿಯಹುದು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ?

೪೯

ಇರುಳೆಂದೇನೋ ಕುರುಡಂಗೆ, ಹಗಲೆಂದೇನೊ ಕುರುಡಂಗೆ? ತಾಳವ ಬಾರಿಸಿದರೇನೋ, ಪಂಚಮಹಾಶಬ್ದವ ಬಾರಿಸಿದರೇನೋ ಕಿವುಡಂಗೆ,—ಕೂಡಲಸಂಗಯ್ಯನ ಪಥವಿನ್ನಾವುದೆಂದರಿಯದವಂಗೆ?

೫೦

ನಾನೆಂಬಹಂಕಾರ ತಲೆದೋರಿದಲ್ಲಿ ಅಟಮಟ ಕುಟಿಲಕುಹಕವೆಂಬ ಬಿರುಗಾಳಿ ಹುಟ್ಟಿತ್ತು. ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ, ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರು ತಾಮಸಕ್ಕೊಳಗಾಗಿ ಸೀಮೆದಪ್ಪಿ ಕೆಟ್ಟರು ಕಾಣಾ ಗೊಹೇಶ್ವರಾ!

೫೧

ಮಹಿಯೆಂಬ ಕುಟ್ಟಿಮದ ಭಿತ್ತಿಯ ಮೇಲೆ ಮುಚ್ಚಿದಂಡ ಕಟಾಹ. ಅಜನ ತತ್ತಿಯೊಳಗಣ ಪಶುಜೀವರೆಲ್ಲರೂ ನೆರೆದು, ಕರ್ಮವೆಂಬುದೊಂದು ಬಟ್ಟಲೊಳಗೆ ಮೋಹ ರಾಗ ದ್ವೇಷ ತಾಪ ಶೋಕ ಹರುಷ ವೈಚಿಂತ್ಯವೆಂಬ ಏಳು ಮಲಂಗಳನೊಂದಾಗಿ ಕಲಸಿ ತಿನ್ನುತ್ತ, ಮೂರು ಮಲಂಗಳ ಬೇರೆ ಬೇರೆ ಅಗಿವುತ್ತ, ವಿಷಯವೆಂಬ ರಸವ ಕುಡಿದು, ಅಜ್ಞಾನವೆಂಬುದೊಂದೆ ಹಾಸಿಕೆಯಲ್ಲಿ ಮಲಗಿ ಮೂರ್ಛೆ ತಿಳಿಯದೆ ಇಪ್ಪುದ ಕಂಡು ನಾಚಿತ್ತಯ್ಯಾ ಎನ್ನ ಮನ! ನಿಮ್ಮಂತರಂಗವೆಂಬ ಚಿದಂಬರದಲ್ಲಿ ನಿಶ್ಶೂನ್ಯವಾಗಿರಿಸೆನ್ನ ಸೌರಾಷ್ಟ್ರಸೋಮೇಶ್ವರಾ.

೫೨

ಹೊತ್ತಾರೆಯಿಂದ ಅಸ್ತಮಯತನಕ ಸುತ್ತಿರ್ದ ಮಾಯಾಪ್ರಪಂಚವನೆ ಅಳಿವುತ್ತ ಸುರಿವುತ್ತಲಿರ್ದು, ಕತ್ತಲೆಯಾದರೆ ಕಾಳು ವಿಷಯದೊಳಗೆ ಮುಳುಗಿತ್ತು, ಸತ್ತು ಹುಟ್ಟಿತ್ತು. ಮತ್ತೆ ಬೆಳಗಾಗಿರ್ದು ನಾನು ತತ್ವವ ಬಲ್ಲೆನೆಂದು ನುಡಿವ ಕತ್ತಲೆ ಮನುಜರು! ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೫೩

ಧರೆಯ ಮೇಲೊಂದು ಪಿರಿದಪ್ಪ ಸಂತೆಯ ನೆರವಿಗೆ ಬಂದವರ ನೇನೆಂಬೆನು? ಪರಿಪರಿಯ ಭಂಡದ ವ್ಯವಹಾರದೊಳಗೆ ಕೊಡಲಿಲ್ಲ ಕೊಳಲಿಲ್ಲ! ವೃಥಾ ವಿಳಾಸವಿದೇನೋ? ಅರೆಮರುಳೆಂಬ ಶಿವನು ನೆರೆ ಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು ಬೆರಗಾದೆ ಗೊಹೇಶ್ವರಾ!

೫೪

ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೆ? ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ, ಬೇರೆ ಮತ್ತೊಂದೆಡೆ ಯುಂಟೆ? ಗೊಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆರಗಾದೆನು!

೫೫

ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ. ತಮಂಧ ಗುರಿಯಾಗಿ ಲಯವಾಗಿ ಹೋದವರ ಕಂಡೆ. ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ. ನೀ ಗುರಿಯಾಗಿ ಹೋದವರನಾರನೂ ಕಾಣೆ ಗೊಹೇಶ್ವರಾ.

೫೬

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ. ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ. ಗೊಹೇಶ್ವರಾ, ನಿಮಗಾಗಿ ಸತ್ತವರ ನಾರನೂ ಕಾಣೆ.

೫೭

ಬಡತನಕ್ಕೆ ಉಂಬುವ ಚಿಂತೆ. ಉಣಲಾದರೆ ಉಡುವ ಚಿಂತೆ. ಉಡಲಾದರೆ ಇಡುವ ಚಿಂತೆ. ಇಡಲಾದರೆ ಹೆಂಡಿರ ಚಿಂತೆ. ಹೆಂಡಿರಾದರೆ ಮಕ್ಕಳ ಚಿಂತೆ. ಮಕ್ಕಳಾದರೆ ಬದುಕಿನ ಚಿಂತೆ. ಬದುಕಾದರೆ ಕೇಡಿನ

ಚಿಂತೆ. ಕೇಡಾದರೆ ಮರಣದ ಚಿಂತೆ. ಇಂತೀ ಹಲವು ಚಿಂತೆಯಲಿ ಇಪ್ಪವರನು ಕಂಡೆನು. ಶಿವನ ಚಿಂತೆಯಲಿದ್ದವರೊಬ್ಬರನು ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

೫೮

ಜಗದಗಲದ ಬಲೆಯನಗಲಬಲ್ಲವರ ಕಾಣೆ. ಮುಗಿಲುದ್ದಂಬರವನು ಗಿಯಬಲ್ಲವರ ಕಾಣೆ. ತಗದಿಪ್ಪ ಶುನಕನ ಬಗೆಯ ಬಲ್ಲವರ ಕಾಣೆ. ಅಗಡಾನೆ ಬಿಗಿದು ಬಲ್ಪಿಡಿಯಿತ್ತಲ್ಲಾ ಜಗವೆಲ್ಲವ! ಸೌರಾಷ್ಟ್ರಸೋಮೇಶ್ವರನ ನಿಜವನರಿಯದೆ ಮುಳುಗಿದರಲ್ಲಾ ಮುಪ್ಪುರದಲ್ಲಿ!

೫೯

ತ್ರಿಭುವನವೆಂಬ ಪಂಜರದೊಳಗೆ, ಸಂಸಾರಚಕ್ರದಲ್ಲಿ ಹೊನ್ನು ಪ್ರಾಣವೆ ಪ್ರಾಣವಾಗಿ, ಹೆಣ್ಣು ಪ್ರಾಣವೆ ಪ್ರಾಣವಾಗಿ, ಮಣ್ಣು ಪ್ರಾಣವೆ ಪ್ರಾಣವಾಗಿ, ಈ ಸುಖದ ಸೊಕ್ಕಿನಲ್ಲಿ ಈಸಿಯಾಡುತ್ತಿರ್ದರಲ್ಲಾ ಬಹುವಿಧದ ವ್ಯವಹಾರ ವೇಧಿಸಿದವರು ಗೊಹೇಶ್ವರಾ!

೬೦

ಆನೆಯನೇರಿಕೊಂಡು ಹೋದಿರೆ ನೀವು, ಕುದುರೆಯನೇರಿಕೊಂಡು ಹೋದಿರೆ ನೀವು. ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ! ಸತ್ಯದ ನಿಲವನರಿಯದೆ ಹೋದಿರಲ್ಲಾ! ಸದ್‌ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ! ಅಹಂಕಾರವೆಂಬಸದ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ! ನಮ್ಮ ಕೂಡಲಸಂಗಮ ದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ!

೬೧

ಮುಂದಳೂರಿಗೆ ಬಟ್ಟೆಯಿದೇ ಹೋಗೆಂದಡೆ, ಅಂಧಕನೇನ ಬಲ್ಲನು ಹೇಳಾ? ಸಂಗ್ರಾಮದಲ್ಲಿ ಓಡಿದ ಹಂದೆ ಗೆಲ್ಲಬಲ್ಲನೆ ಹೇಳಾ? ನಿಂದ ನಿಲವಿನ

ಮಡುವ ಕಂದನೀಸಾಡಬಲ್ಲನೆ ಹೇಳಾ? ಗೊಹೇಶ್ವರನೆಂಬ ನಿರಾಳದ ಘನವ ಪಂಚೇಂದ್ರಿಕನೆತ್ತ ಬಲ್ಲನು ಹೇಳಾ?

೬೨

ಎಲುವಿನ ಪಂಜರ, ಕರುಳಿನ ಜಾಳಿಗೆ, ಅಮೇಧ್ಯದ ಹುತ್ತು, ಮೂತ್ರದ ಬಾವಿ, ಶ್ಲೇಷ್ಮದ ಕೆಸರು, ಕೀವಿನ ಸೋನೆ, ನೆತ್ತರ ಮಡು, ನಾಡಿಗಳ ಸುತ್ತುವಳಿ, ನೆರವಿನ ನೆಣಜಂತ್ರ, ಮಾಂಸದ ಪುಟ್ಟಿಯ ತೆಪ್ಪ, ಕಿಸುಕುಳದ ಹೇಸಿಕೆ, ಅತಿಹೇಯದ ಮಲಿನ, ಅಸ್ಥಿ ರೋಮ ತೊಗಲ ಪಾಕುಳ, ಕ್ರಿಮಿಯ ಸಂಕುಳ, ಉತ್ಪತ್ತಿ ಸ್ಥಿತಿ ಲಯದ ಬೀಜ, ರೇತ ರಜಸ್ಸಿನಲ್ಲಿ ಜನಿತ, ಆಧಿವ್ಯಾಧಿಯ ತವರುಮನೆ, ವಿಷಯದ ಭಯ, ದುಃಖ ದಾಗರ, ಮೋಹದ ಬಲೆ,—ತೋರಿ ಕೆಡುವ ತನು ಇದು ನೀನೆಂದು ನಿನ್ನ ದೆಂದು, ಮಾಡಬಾರದ ಪಾಪವ ಮಾಡಿ ಮುಚ್ಚಿ ಹೂಸಿ ಹೊದಿಸಿ ಈ ದೇಹಂಗೊಂಡು ಮರುಗುವೆ. ಅಘೋರನರಕದಲ್ಲಿಕ್ಕುವಾಗ ಅಡ್ಡ ಬಪ್ಪ ರಾರೋ? ಅಹಂಮಮತೆಯ ಬಿಟ್ಟು ಸೋಹಂ ಬ್ರಹ್ಮಾಸ್ಮಿ ಎಂದು ಕೇಡಿಲ್ಲದ ಪದವಿಯ ಮಾಡಿಕೊಳ್ಳಾ ಮರುಳೇ! ಬೇಡ ಕೆಡುವೆ, ನಿನ್ನ ನೀ ತಿಳಿದು ನೋಡಾ ಚಿಮ್ಮಲಿಗೆಯ ಚೆನ್ನರಾಮಾ.

೬೩

ಕಾಳು ದೇಹದೊಳಗೊಂದು ಕೀಳ ಜೀವ ಹುಟ್ಟಿತ್ತಾಗಿ ಆಪ್ಯಾಯ ನವಡಗದು, ಸಂದೇಹ ಹಿಂಗದು. ಇದೇನೊ? ಇದೇನೊ? ಹಂದೆಗಳ ಮುಂದೆ ಬಂದು ಕಾಡುತಲಿದ್ದುದೆ ಇದೇನೊ? ಇದೇನೊ? ಕಾಲಾಳು ಮೇಲಾಳುಗಳು ಬೇಳುವೆಗೊಳಗಾದರು,—ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬರು.

೬೪

ಒಡಕ ಮಡಿಕೆಯಂತೆ ಒಡೆದು ಹೋಗುವ ಹಡಿಕೆ ಕಾಯುವ ನೆಚ್ಚಿ, ತಟತಟನೆ ತಾಗಿ, ಮಠದ ಬೆಕ್ಕಾಗಿ ತಿಟ್ಟನೆ ತಿರುಗಿ, ಬಟ್ಟೆಯಲಿಕ್ಕಿ ಕದಿವ

ಕಳ್ಳನನರಿಯದೆ, ತಿಂಬ ಹುಲಿಯನರಿಯದೆ, ಒಡವೆಯ ಗಳಿಸಿಹೆನೆಂದು ಒಡೆಯನ ಮರೆದು, ತನ್ನ ಮಡದಿ ಮಕ್ಕಳಿಗೆಂದು ಅವರ ಒಡವೆರೆದು ಹೋಗುವ ಒಡೆಯರೊಡನೆ ನುಡಿಯರು ನಮ್ಮ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣ.

೬೫

ಹಾಲ ಕಂಡ ಬೆಕ್ಕು ಮೆಲ್ಲಲೆ ತೆಗೆದು ಕುಡಿಯುತ್ತಿರಲು, ಬಾಲನಿಗಿರ್ದ ಹಾಲ ಬೆಕ್ಕು ಕುಡಿಯುತ್ತಿದೆ ಎಂದು ನಾರಿ ಕಂಡು ಗುದಿಗೆಯಲಿ ಹೊಡೆದರೆ, ಏಳುತ್ತ ಬೀಳುತ್ತ ಕಾಲ್ಗೆಡೆದು ಓಡುವಂತೆ,—ಏನ ಹೇಳುವೆನಯ್ಯ ?—ಮರ್ತ್ಯದ ಮನುಜರು ಕರಣಂಗಳ ಹರಿಯ ಬಿಟ್ಟು, ತಮ್ಮ ಬಾಳುವೆಯ ಮರೆದು, ಕಾಲನ ಬಾಯಲ್ಲಿ ಆಳುತ್ತ ಮುಳುಗುತ್ತಿಪ್ಪುದನಾರು ಅರಿಯರು ನೋಡಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೬೬

ಗುಬ್ಬಿ ಹೆರವರ ಮನೆಯ ತನ್ನ ಮನೆಯೆಂಬಂತೆ, ಧರೆ ಧನ ವನಿತೆಯರು ಎನ್ನವರು ತನ್ನವರೆಂದು ಹೋರಿ ಹೋರಿ ಸಾವುತ್ತಿದೆ ಜೀವ. ಸರ್ವಕರ್ತ ಕೂಡಲಸಂಗಯ್ಯನೊಬ್ಬನೆ ಎಂದರಿಯದೆ ಕೆಟ್ಟರು.

೬೭

ಆಟದಲಿ ಕೆಲ ಹೊತ್ತುಗಳೆದು, ಕೂಟದಲಿ ಕೆಲ ಹೊತ್ತುಗಳೆದು, ನೋಟದಲಿ ಕೆಲ ಹೊತ್ತುಗಳೆದು, ಊಟದ ಹೊತ್ತಿಗೆ ಲಿಂಗವ ಕೂಡಿಹೆನೆಂಬವನೊಬ್ಬ. ಊಟ ಮಾಟ ಕೂಟದಲಿ ಕೋಟಲೆಗೊಳುತಿದ್ದೆನೆಂಬವನೊಬ್ಬ ಪೋಟ. ಇವರಿಬ್ಬರ ನೋಟ ಬೇಟಕ್ಕೆ ಸಿಕ್ಕದೆ ದಾಂಟ ಹೋದನು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೬೮

ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ. ಹೋಗುತಿವೆ ದಿನ ವಾರ ಮಾಸ ಸಂವತ್ಸರವು. ಸಾವುತಿವೆ ಆಯುಷ್ಯ ಭಾಷೆ. ಇವರೊಳು

ಬೇಗದಿ ತಿಳಿದು ನೀಗಿ ನಿಷ್ಪತ್ತಿಯಾದರೆ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

೬೯

ಕಾಮಿಸುವ ಕಲ್ಪಿಸುವ ಬ್ರಹ್ಮನೆಂಬವ ವ್ರತಗೇಡಿ; ವಿಷ್ಣುವೆಂಬವ ಸತ್ತು ಬಿದ್ದ; ರುದ್ರನೆಂಬವ ಅಬದ್ಧ ಅವಿಚಾರಿ. ಅವಿಚಾರದಲ್ಲಿ ಎಲ್ಲರ ಕೊಂದ ಕೊಲೆ ನಿಮ್ಮ ತಾಗುವುದು ಗೊಹೇಶ್ವರಾ.

೭೦

ಸಾವಾಗ ದೇವನೆಂದರೆ ಸಾವು ಬಿಡುವುದೇ? ಇದಾವ ಮಾತೆಂದು ನುಡಿವಿರಿ ಎಲೆಯಣ್ಣಗಳಿರಾ? ಬಾಳುವಲ್ಲಿ ಬದುಕುವಲ್ಲಿ ಗುರು ಲಿಂಗ ಜಂಗಮುವನರಿಯದೆ, ಹಾಳು ಹರಿಯ ತಿಂದ ಶುನಕನಂತೆ ಕಾಲ್ಗೆಡೆದು ಓಡಾಡಿ, ಏಳಲಾರದೆ ಬಿದ್ದಾಗ ಶಿವ ಶಿವ ಎಂದರೆ ಅಲ್ಲಿ ದೇವನಿಪ್ಪನೇ? ಇದ ನೋಡಿ ನಾಚಿ ನಗುತಿರ್ದ ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

೭೧

ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯಾ! ಗಾಳಿ ನಿನ್ನಧೀನವಲ್ಲವಯ್ಯಾ! ನಾಳೆ ತೂರಿಹೆನೆಂದಡೆ ಇಲ್ಲವಯ್ಯಾ! ಶಿವಶರಣ ಎಂಬುದೊಂದು ಗಾಳಿ ಬಿಟ್ಟಲ್ಲಿ ಬೇಗ ತೂರೆಂದ ಅಂಬಿಗರ ಚೌಡಯ್ಯ.

೭೨

ಬಟ್ಟೆಗೊಂಡುವೋಗುತ್ತಿಪ್ಪ ಮನುಜನೊಬ್ಬ ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು ನಾಲ್ಕುದೆಸೆಯಟ್ಟುತ್ತ ಬರೆ ಕಂಡು, ಭರದಿಂದ ಹೋಗದೆಸೆಯಿಲ್ಲದೆ ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ, ಹಾವ ಕಂಡು, ಇಲಿ ಕಡಿದ ಬಳ್ಳಿಯ ಹಿಡಿದು ನಿಲೆ, ಜೇನ ಹುಳುಗಳು ಮೈಯ ಸೂರುವಾಗ ಮೂಗಿನ ತುದಿಯಲ್ಲಿ ಒಂದು ಹನಿ ಮಧುಬಿಂದು ಬೀಳೆ, ಆ

ಮಧುವ ಕಂಡು ಹಿರಿದಪ್ಪ ದುಃಖವನೆಲ್ಲಾ ಸೈರಿಸಿ ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ ಈ ಸಂಸಾರಸುಖ, ವಿಚಾರಿಸಿ ನೋಡಿದಡೆ ದುಃಖದಾಗರ. ಇದನರಿದು ಸಕಲ ವಿಷಯಂಗಳಲ್ಲಿ ಸುಖವಿಂತುಂಟೆಂದು ನಿರ್ವಿಷಯನಾಗಿ ನಿಂದ ನಿಲವು ಚಿಮ್ಮಲಿಗೆಯ ಚೆನ್ನರಾಮ.

೭೩

ಐಶ್ವರ್ಯ ದುಃಖದಲ್ಲಿ ಬೇಯುವ ಹೊಲೆ ಸಂಸಾರವನೆ ಕಚ್ಚಿ ಕೊಲೆಗೀಡಾಗದೆ, ಸಲೆ ಸತ್ಯಸದಾಚಾರದಲ್ಲಿ ನಡೆ, ಸಟೆಯನು ಬಿಡು, ದಿಟವನೆ ಹಿಡಿ. ಈ ಘಟವುಳ್ಳನಕ ಕಾಲದಲ್ಲಿ ಶಿವಭಕ್ತಿಯ ನಟಿಸಿ ನಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯನು.

೭೪

ನೆಳಲ ಹೂಳಿಹೆನೆಂದು ಬಳಲುತ್ತಿದೆ ಜಗವೆಲ್ಲ! ನೆಳಲು ಸಾಯ ಬಲ್ಲುದೆ ಅಂಗಪ್ರಾಣಿಗಳಿಗೆ? ಸಮುದ್ರದಾಚೆಯ ತಡಿಯಲ್ಲಿ ಕಳ್ಳನ ಕಂಡು, ಇಲ್ಲಿ ಮುನಿದು ಬೈದರೆ ಅವ ಸಾಯಬಲ್ಲನೆ? ಭಾವದಲ್ಲಿ ಹೊಲಿದ ಹೊಲಿಗೆಯ ಭೇದವನರಿಯರು. ಕಾಮಿಸಿದರುಂಟೆ ನಮ್ಮ ಗೊಹೇಶ್ವರ ಲಿಂಗವು.

೭೫

ಕಣ್ಣೊಳಗೆ ಕಣ್ಣಿದ್ದೂ ಕಾಣಲೇಕರಿಯರಯ್ಯಾ? ಕಿವಿಯೊಳಗೆ ಕಿವಿಯಿದ್ದೂ ಕೇಳಲೇಕರಿಯರಯ್ಯಾ? ಘ್ರಾಣದೊಳಗೆ ಘ್ರಾಣವಿದ್ದೂ ವಾಸಿಸಲೇಕರಿಯರಯ್ಯಾ? ಜಿಹ್ವೆಯೊಳಗೆ ಜಿಹ್ವೆಯಿದ್ದೂ ರುಚಿಸಲೇಕರಿಯರಯ್ಯಾ? ಸ್ಪರ್ಶನದೊಳಗೆ ಸ್ಪರ್ಶನವಿದ್ದೂ ಮುಟ್ಟಲೇಕರಿಯರಯ್ಯಾ? ಪ್ರಾಣದೊಳಗೆ ಪ್ರಾಣವಿದ್ದೂ ನೆನೆಯಲೇಕರಿಯರಯ್ಯಾ? ಕಾಯದೊಳಗೆ ಕಾಯವಿದ್ದು ಬಿಡದು, ಬೇರಾಗದು! ನೀನಿಕ್ಕಿದ ಅಣಕದ ಭೇದವ ಭೇದಿಸ ಬಾರದಯ್ಯಾ ಕೂಡಲಸಂಗಮದೇವಾ.

೭೬

ಸಾವು ತಡವಲ್ಲ, ನರಕ ದೂರವಲ್ಲ. ಕೆಮ್ಮನೆ ಕೆಡಬೇಡಾ. ವಿಷಯವ ಬಿಡು, ಗುರುಭಕ್ತಿಯಲ್ಲಿ ನಂಬು, ಸುಖಿಯಪ್ಪೆ ಚಿಮ್ಮಲಿಗೆಯ ಚೆನ್ನರಾಮಾ.

೭೭

ಎಣ್ಣೆ ಬೇರೆ, ಬತ್ತಿ ಬೇರೆ; ಎರಡೂ ಕೂಡಿ ಸೊಡರಾಯಿತ್ತು! ಪುಣ್ಯ ಬೇರೆ, ಪಾಪ ಬೇರೆ; ಎರಡೂ ಕೂಡಿ ಒಡಲಾಯಿತ್ತು. ಮಿಗಬಾರದು, ಮಿಗದಿರಬಾರದು. ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು. ಕಾಯಗುಣ ವಳಿದು, ಮಾಯಾಜ್ಯೋತಿ ವಾಯುವ ಕೂಡದ ಮುನ್ನ, ಭಕ್ತಿಯ ಮಾಡ ಬಲ್ಲಾತನೇ ದೇವ ಗೊಹೇಶ್ವರ.

೭೮

ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ ದರ್ಪಣ ಬೇರೆ ಕಂಚಲ್ಲ. ಭಾಂಡ ಒಂದೆ, ಭಾಜನ ಒಂದೆ, ಬೆಳಗೆ ಕನ್ನಡಿಯೆನಿಸಿತ್ತಯ್ಯಾ! ಅರಿದರೆ ಶರಣ, ಮರೆದರೆ ಮಾನವ. ಮರೆಯದೆ ಪೂಜಿಸು ಕೂಡಲ ಸಂಗಯ್ಯನ.

೭೯

ಮನವೇ ಸರ್ಪ, ತನುವೇ ಹೇಳಿಗೆ; ಹಾವಿನೊಡತಣ ಹುದುವಾಳಿಗೆ! ಇನ್ನಾವಾಗ ಕೊಂದಹುದೆಂದರಿಯೆ, ಇನ್ನಾವಾಗ ತಿಂದಹುದೆಂದರಿಯೆ! ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ ಅದೇ ಗಾರುಡ ಕೂಡಲಸಂಗಮದೇವಾ.

೮೦

ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯುದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ನಮ್ಮ ಕೂಡಲಸಂಗಮದೇವನ.

೮೧

ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ! ಇದ ನೆಚ್ಚಿ ಕೆಡಬೇಡ ಸಿರಿಯೆಂಬುದ! ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೮೨

ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ. ಕಾಳ ಬೆಳುದಿಂಗಳ ಸಿರಿ ಸ್ಥಿರವಲ್ಲ! ಕೇಡಿಲ್ಲದ ಪದವಿ ಕೂಡಲಸಂಗಮದೇವನ ಮರೆಯದೆ ಪೂಜಿಸೋ.

೮೩

ಆಗ ಹುಟ್ಟಿ ಬೇಗ ಸಾವ ಕಾಯಗೊಂಡ ಮಾನವ, ನೀ ದೇವರೆನಿಸಿ ಕೊಂಬುದಾವುದಂತರ ಹೇಳಾ? ದೇವರು ಸಾವರೆ, ದೇವರಿಗೂ ಸಾವರಿಗೂ ಆವುದಂತರ ಹೇಳಾ? ದೇವರಿಗೆ ದೇವಲೋಕ, ಮಾನವರಿಗೆ ಮರ್ತ್ಯ ಲೋಕ, ಗೊಹೇಶ್ವರಲ್ಲಯ್ಯಂಗೆ ಇನ್ನಾವ ಲೋಕವೂ ಇಲ್ಲ.

೮೪

ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವ. ಸಂಗದೊಳಗೆ ಶರಣರ ಸಂಗವೆ ಚೆಲುವ. ಕಾಯಗೊಂಡು ಹುಟ್ಟಿದ ಮೂಢರೆಲ್ಲ ಸಾಯದ ಸಂಚವನರಿವುದೆ ಚೆಲುವ ಗೊಹೇಶ್ವರಾ.

೮೫

ಸನಕ ಸನಂದಾದಿ ಮುನಿಜನಂಗಳೆಲ್ಲರೂ, ಭಸ್ಮಾಂಗಿಗಳೆಲ್ಲರೂ ಇವರು ಸತ್ಯರೆಂಬುದು ಹುಸಿ, ನಿತ್ಯರೆಂಬುದು ಹುಸಿ; ಸತ್ತರೆಂಬುದು ದಿಟ ಗೊಹೇಶ್ವರಾ.

೮೬

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು, ತೆರನನರಿಯದೆ ತನಿರಸದ ಹೊರಗಣೆಲೆಯನೆ ಮೇದುವು! ನಿಮ್ಮನರಿವ ಮದಕರಿಯಲ್ಲದೆ ಕುರಿ ಬಲ್ಲುದೆ ಕೂಡಲಸಂಗಮದೇವಾ?

೮೭

ತೀವಿ ಕುಳ್ಳಿರ್ದ ಸಭೆಯೀಯಬಲ್ಲುದೆ ದಾನವ? ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ? ಇರಿಯಬಲ್ಲರೆ ನೂರಕ್ಕೊಬ್ಬ, ಸಹಸ್ರಕ್ಕೊಬ್ಬ. ಹುಣಿಸೆಯ ಹೂವೆಲ್ಲ ಕಾಯಾಗಬಹುದೇ ರಾಮನಾಥಾ?

೮೮

ಬಟ್ಟಬಯಲೆಲ್ಲ ಗಟ್ಟಿಗೊಂಡೊಡೆ, ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಹುದೊ? ಮೇಘಜಲವೆಲ್ಲ ಮುತ್ತಾದೊಡೆ, ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಹುದೊ? ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದೊಡೆ, ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಹುದೊ? ಸಾಕ್ಷಿ: 'ಗುರುಭಕ್ತಿಂ ಪರಿತ್ಯಜ್ಯ ಸದ್ಯೋಽಪಿ ನರಕಂ ವ್ರಜೇತ್'—ಇಂತೆಂದುದಾಗಿ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.

೩

ಅಜ್ಞಾನ—ಮಾನವ ಜೀವನ

೧. ಮರವು—ಮಾಯೆ

೧

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ, ಸಕಲವೇದಶಾಸ್ತ್ರವೆಂಬ ನೇಣ ಕಟ್ಟಿ, ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ. ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ ಗುಹೇಶ್ವರನೆಂಬ ಲಿಂಗವ ಕಾಣಬಾರದು.

೨

ಕಂಗಳ ಮುಂದಣ ಕತ್ತಲೆಯಿದೇನೋ? ಮನದ ಮುಂದಣ ಮರವೆಯಿದೇನೋ? ಒಳಗಣ ರಣರಂಗ, ಹೊರಗಣ ಶೃಂಗಾರ, ಬಳಕೆಗೆ ಬಂದ ಬಟ್ಟೆಯಿದೇನೋ ಗುಹೇಶ್ವರಾ?

೩

ಜ್ಯೋತಿ ಕಂಡಾ, ಇರಲು ಕತ್ತಲೆ ಕಂಡಾ! ನಿಧಾನ ಕಂಡಾ, ಇರಲು ಬಡತನ ಕಂಡಾ! ಪ್ರಸಾದ ಕಂಡಾ, ಕೊಂದಡೆ ಪ್ರಳಯ ಕಂಡಾ! ಗುಹೇಶ್ವರ ಕಂಡಾ, ಇದು ಭ್ರಾಂತು ಕಂಡಾ!

೪

ನಿರ್ಣಯವನರಿಯದ ಮನವೇ ದುಗುಡವನಾಹಾರಂಗೊಂಡೆಯಲ್ಲಾ! ಮಾಯಾಸೂತ್ರವಿದೇನೋ? ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ! ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಗುಹೇಶ್ವರಾ!

೫

ಅಡವಿಯ ಹೊಗಿಸಿತ್ತು; ನೀರಲದ್ದಿತ್ತು; ಜಡೆಗಟ್ಟಿ ಭಸ್ಮವ ತೊಡಿಸಿತ್ತು; ಹಿಡಿದೆತ್ತಿ ಕೇಶವ ಕೀಳಿಸಿತ್ತು; ಹುಡಿಹುಚ್ಚುಗೊಳಿಸಿತ್ತು ಊರೊಳಗೆಲ್ಲ. ಬೆಡಗಿನ ಮಾಯೆಗೆ ನಾಚುವೆನೆಂದನಂಬಿಗರಚೌಡಯ್ಯ.

೬

ಅಡವಿಗೆ ಹೋಗಿ ಏವೆನು ? ಮನದ ರಜ ತಮ ಬಿಡದು. ಆಡ ಕಾವನ ತೋರಿ ಗಿಡವ ಕಡಿವನ ಬೈದೆ. ಆಶ್ರಮವ ಕೆಡಿಸಿತ್ತಲ್ಲಾ. ಸಕಳೇಶ್ವರ ದೇವಾ, ನಿನ್ನ ಮಾಯೆ ಎತ್ತ ಹೋದರೆ ಬೆನ್ನ ಬಿಡದು.

೭

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ. ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ. ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ. ಚೆನ್ನಮಲ್ಲಿಕಾರ್ಜುನಾ, ನೀನೊಡ್ಡಿದ ಮಾಯೆಯನಾರೂ ಗೆಲಲಾರರು.

೮

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ. ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ. ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ. ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ.

೯

ಕಾಲನೆಂಬ ಜಾಲಗಾರನು ಕರ್ಮವೆಂಬ ಬಲೆಯ ಬೀಸಿ, ಸಂಸಾರ ಶರಧಿಯಲ್ಲಿರ್ಪ ಸಕಲ ಪ್ರಾಣಿಗಳೆಂಬ ಮೀನುಗಳ ಹಿಡಿದು ಕೊಲ್ಲುತ್ತಿದ್ದಾನೆ. ಕಾಮನೆಂಬ ಬೇಟೆಗಾರನು ಕಂಗಳ ತೋಹಿನಲ್ಲಿ ನಿಂದು, ಕಳವಳದ ಬಾಣ ವನೆಸೆದು, ಭವವೆಂಬ ಭಲೆಯಲ್ಲಿ ಸಕಲ ಪ್ರಾಣಿಗಳ ಕೆಡಹಿಕೊಂಡು ಕೊಲ್ಲುತ್ತಿದ್ದಾನೆ. ಮಾಯೆಯೆಂಬ ರಕ್ಕಸಿ ಸಕಲ ಪ್ರಾಣಿಗಳ ಸಾರವ ಹೀರಿ ಹಿಪ್ಪೆಯ ಮಾಡಿ ಉಃಫೆಂದು ಊದುತ್ತಿದ್ದಾಳೆ. ಇಂತೀ ತ್ರಿವಿಧಮುಖದಲ್ಲಿ ಕಾಡುವ ನಿಮ್ಮ ಮಾಯೆಯ ಗೆಲುವೊಡೆ ಆರಳವಲ್ಲವಯ್ಯಾ ಅಖಂಡೇಶ್ವರಾ, —ನೀವು ಕರುಣಿಸದನ್ನಕ್ಕ.

೧೦

ಜಗದಗಲದ ಮಾಯಾಜಾಲವ ಹಿಡಿದು, ಕಾಲನೆಂಬ ಜಾಲಗಾರ ಮಾಯಾಜಾಲವ ಬೀಸಿದ ನೋಡಯ್ಯ. ಆ ಜಾಲಕ್ಕೆ ಹೊರಗಾದರ ನೊಬ್ಬರನೂ ಕಾಣೆ. ಬಲ್ಲ ಬಲ್ಲಿದರೆಂಬುವರೆಲ್ಲರ ಬಲೆಯು ಕಲ್ಲಿಯೊಳಗೆ ತುಂಬಿದ ಕಾಲ. ಆ ಕಾಲನ ಬಲೆಯೊಳಗೆ ಸಿಕ್ಕಿ ಬೀಳುತ್ತೇಳುತ್ತಿದೆ ಜಗವೆಲ್ಲ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತನ್ನವರಿಗೆ ತಾ ಮೇಲಾ ರೈಕೆಯಾಗಿಹನು.

೧೧

ಬಲ್ಲೆನೆಂಬುದು ಮಾಯೆ. ಅರಿಯೆನೆಂಬುದು ಮಾಯೆ. ಒಲ್ಲೆ ನೆಂಬುದು ಮಾಯೆ, ಒಲಿವೆನೆಂಬುದು ಮಾಯೆ. ಜೀವನೆಂಬುದು ಮಾಯೆ, ಮುಕ್ತನೆಂಬುದು ಮಾಯೆ. ಸತಿ ಸುತ ಪಿತ ಮಾತೆ ಇವರೆಲ್ಲರು ಮಾಯೆ, ಭೃತ್ಯ ಭ್ರಾತ್ರಾದಿಗಳೆಲ್ಲ ಮಾಯೆ. ಆನೆಂಬುದು ಮಾಯೆ, ನೀನೆಂಬುದು ಮಾಯೆ. ಸೌರಾಷ್ಟ್ರಸೋಮೇಶ್ವರ ತಾನೆಂಬುದು ಮಾಯೆ.

೧೨

ಹಲವಂದ ಚಂದದಲಿ ಹಾಡಿದರೇನಯ್ಯ, ಲಿಂಗದ ನೆಲೆಯನರಿಯದ ನ್ನಕ್ಕ? ಕಲಿಯಾಗಿ ವೈರಾಗ್ಯ ತಲೆಗೇರಿ ಹರಿದಾಡಿದರೇನಯ್ಯ? ಮಾಯೆಯ ಬಲೆಯ ನುಸುಳಿಸಿದಲ್ಲದೆ ನಿಮ್ಮ ನೆಲೆಯ ಕಾಣಬಾರದು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೩

ಇಂದಿಗೆಂತು ನಾಳಿಗೆಂತು ಎಂದು ಬೆಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ! ಹಿಂದೆ ನಾನಾಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ! ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ! ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ ಕೂಡಲ ಸಂಗಮದೇವಾ.

೧೪

ನಾನೊಂದು ನೆನೆದೊಡೆ ತಾನೊಂದ ನೆನೆವುದು; ನಾನಿತ್ತಲೆಳೆದೊಡೆ ತಾನತ್ತಲೆಳೆವುದು; ತಾ ಬೇರೆಯೆನ್ನನಳಲಿಸಿ ಕಾಡಿತ್ತು; ತಾ ಬೇರೆಯೆನ್ನ ಬಳಲಿಸಿ ಕಾಡಿತ್ತು; ಕೂಡಲ ಸಂಗನ ಕೂಡಿಹೆನೆಂದೊಡೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ!

೧೫

ಕಾಡುಗಿಚ್ಚೆದ್ದರೆ ಅಡವಿಯೆ ಗುರಿ; ನೀರುಗಿಚ್ಚೆದ್ದರೆ ಸಮುದ್ರವೆ ಗುರಿ. ಒಡಲುಗಿಚ್ಚೆದ್ದರೆ ಆ ತನುವೆ ಗುರಿ; ಕಾಲಾಗ್ನಿ ಎದ್ದರೆ ಲೋಕಂಗಳೆ ಗುರಿ. ಶಿವಶರಣರ ಮನದಲ್ಲಿ ಕೋಪಾಗ್ನಿಯೆದ್ದರೆ ನಿಂದಕರೆ ಗುರಿ. ಗೊಹೇಶ್ವರಾ, ನಿಮ್ಮ ಮಾಯದ ಹೊಡೆಗಿಚ್ಚಿಂಗೆ ನಾನು ಗುರಿಯಲ್ಲ ಕೇಳಾ.

೧೬

ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನು. ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಂಗಳಲ್ಲಿ. ಇಂತೆನ್ನ ಚೆನ್ನಮಲ್ಲಿಕಾರ್ಜುನದೇವನೆಂಬ ಪರಶಿವನು ತನ್ನ ಜಗದ್ವಿಲಾಸ ಸಾಕಾದಡೆ ಮತ್ತೆ ತಾನೇ ಪರಿವನದರ ಮಾಯಾಪಾಶವನು.

೧೭

ಹುಲಿಯ ಬಾಯಲ್ಲಿ ಸಿಲ್ಕಿದ ಹುಲ್ಲೆಯಂತೆ, ಸರ್ಪನ ಬಾಯಲ್ಲಿ ಸಿಲ್ಕಿದ ಕಪ್ಪೆಯಂತೆ, ಸಕಲ ಲೋಕಾದಿಲೋಕಂಗಳು ಮಾಯೆಯ ಬಲೆಯಲ್ಲಿ ಸಿಲ್ಕಿ ಸೆರೆಹೋಗುವುದ ಕಂಡು ನಾನಂಜಿ ನಿಮ್ಮ ಮರೆಹೊಕ್ಕೆ. ಕಾಯಯ್ಯ ಕಾರುಣ್ಯನಿಧಿಯೇ ಅಖಂಡೇಶ್ವರಾ.

೧೮

ಬ್ರಹ್ಮ ಘನವೆಂದಡೆ ಬ್ರಹ್ಮನ ನುಂಗಿತ್ತು ಮಾಯೆ! ವಿಷ್ಣು ಘನವೆಂದಡೆ ವಿಷ್ಣುವ ನುಂಗಿತ್ತು ಮಾಯೆ! ರುದ್ರ ಘನವೆಂದಡೆ ರುದ್ರನ

ನುಂಗಿತ್ತು ಮಾಯೆ! ತಾ ಘನವೆಂದಡೆ ತನ್ನ ನುಂಗಿತ್ತು ಮಾಯೆ! ಸರ್ವವು ನಿನ್ನ ಮಾಯೆ!! ಒಬ್ಬರನೊಳಕೊಂಡಿತ್ತೆ ಹೇಳಾ ಗೊಹೇಶ್ವರಾ?

೧೯

ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ! ಹರಹರಾ, ಮಾಯೆಯಿದ್ದೆಡೆಯ ನೋಡಾ! ಶಿವಶಿವಾ, ಮಾಯೆಯಿದ್ದೆಡೆಯ ನೋಡಾ! ಎರಡೆಂಬತ್ತು ಕೋಟಿ ಪ್ರಮಥಗಣಂಗಳು, ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು, ನಂದಿವಾಹನರುದ್ರರು ಇವರೆಲ್ಲರು ಮಾಯೆಯ ಕಾಲು ಗಾಹಿನ ಸರಮಾಲೆ ಕಾಣಾ ಗೊಹೇಶ್ವರಾ!

೨೦

ಹರಿಯ ನುಂಗಿತ್ತು ಮಾಯೆ. ಅಜನ ನುಂಗಿತ್ತು ಮಾಯೆ. ಇಂದ್ರನ ನುಂಗಿತ್ತು ಮಾಯೆ. ಚಂದ್ರನ ನುಂಗಿತ್ತು ಮಾಯೆ. ಬಲ್ಲೆನೆಂಬ ಬಲುಗಯ್ಯರ ನುಂಗಿತ್ತು ಮಾಯೆ. ಅರಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ. ಈರೇಳು ಭುವನವನಾರಡಿಗೊಂಡಿತ್ತು ಮಾಯೆ. ಚೆನ್ನಮಲ್ಲಿ ಕಾರ್ಜುನಯ್ಯಾ, ಎನ್ನ ಮಾಯೆಯ ಮಾಣಿಸಾ ಕರುಣಿ.

೨೧

ಬಿಟ್ಟೆನೆಂದರೆ ಬಿಡದೀ ಮಾಯೆ. ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ. ಸವಣಗೆ ಸವಣಿಯಾಯಿತ್ತು ಮಾಯೆ. ಯತಿಗೆ ಪರಾಕಿಯಾಯಿತ್ತು ಮಾಯೆ. ನಿನ್ನ ಮಾಯೆಗೆ ನಾನಂಜುವಳಲ್ಲ, ಚೆನ್ನಮಲ್ಲಿಕಾರ್ಜುನದೇವಾ ನಿಮ್ಮಾಣೆ.

೨. ಜೀವನ - ಸಂಸಾರ

೨೨

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯ

ನಿದ್ದಾನೊ ಇಲ್ಲವೊ ? ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ.

೨೩

ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಸೂಲವನೇರುವ ಕಳ್ಳನು ಹಾಲುತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೊ ? ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವರ ಕೂಡಲಸಂಗಮದೇವನವರನೊಲ್ಲ ಕಾಣಿರಣ್ಣಾ.

೨೪

ಸುಡುಸುಡು, ಈ ದೇಹದ ರೂಪು ನೋಡಿದರೇನೂ ಹುರುಳಿಲ್ಲ ವಯ್ಯ. ಎಲುವು ಚರ್ಮ ನರ ಮಾಂಸ ಮಲ ಮೂತ್ರ ಯುಕ್ತವಾದ ಅನಿತ್ಯ ದೇಹವ ನಚ್ಚಿ, ನಿಮ್ಮ ನಿಜವ ಮರೆದು ಭವಭಾರಿಯಾದೆನಯ್ಯಾ ಅಖಂಡೇಶ್ವರಾ.

೨೫

ನೆಣದ ಕೊಳ, ರಕ್ತದ ಹುತ್ತು, ಕೀವಿನ ಬಾವಿ, ರೋಮದ ಸೀಮೆ, ತ್ವಕ್ಕಿನ ಇಕ್ಕೆ, ಮಾಂಸದ ವಾಸ, ಕರುಳಿನ ತಿರುಳು, ನರದ ಕರವತಿಗೆ, ಮಲಮೂತ್ರಂಗಳ ನೆಲೆವನೆ, ಕ್ರಿಮಿಯ ಸಮೂಹ, ಕೀಟಕದ ಕೋಟಾರ, ಶುಕ್ಲದ ಕೋಶ, ಎಲುವಿನ ಬಲುಹಿಂದಿಪ್ಪುದೀ ಕಾಯ ಹೇಯವಯ್ಯ. ಇಂತಾಗಿ ತೋರಿ ಹಾರುವ ದೃಶ್ಯಾದೃಶ್ಯವೀ ದೇಹವಯ್ಯ. ಇದ ನನ್ನದೆಂದು ನಚ್ಚಿ ಮಚ್ಚಿ ಹೆಚ್ಚಿ ಕೆಚ್ಚುಗೊಂಡು ಒಚ್ಚತ ಹೋದ ಎನ್ನ ಮನಕ್ಕೆ ಇನ್ನಾವುದು ಗತಿಯೊ ಸೌರಾಷ್ಟ್ರಸೋಮೇಶ್ವರಾ ?

೨೬

ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ,—ಸುಡಲೀ ದೇಹವನು. ಒಡಲುವಿಡಿದು ಕೆಡದಿರು. ಚೆನ್ನಮಲ್ಲಿಕಾರ್ಜುನನರಿ ಮರುಳೇ.

೨೭

ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೆ? ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೆ? ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ. ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥಾ.

೨೮

ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ. ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ! ಮೊಲನಿಂದ ಕಡುಕಷ್ಟ ನರನ ಬಾಳುವೆ! ಸಲೆ ನಂಬೋ ನಮ್ಮ ಕೂಡಲ ಸಂಗಮದೇವನ.

೨೯

ರೂಪಚಕ್ರ ನಯನದಿಂ ನಡೆವುದು; ಶಬ್ದಚಕ್ರ ಶ್ರೋತ್ರದಿಂ ನಡೆವುದು; ರುಚಿಚಕ್ರ ಜಿಹ್ವೆಯಿಂದೆ ನಡೆವುದು; ಸೌರಭಚಕ್ರ ಘ್ರಾಣದಿಂ ನಡೆವುದು; ಸ್ಪರ್ಶಚಕ್ರ ತ್ವಕ್ಕಿನಿಂದೆ ನಡೆವುದು. ಈ ಐದರಿಂದ ನಡೆಯುತ್ತ ಲೋಕಾದಿಲೋಕಗಳೆಲ್ಲವು ಹೀಗೆಯೆ ಕೆಟ್ಟುಹೋದುವು ಈಐದರ ಕಥನದಲ್ಲಿ. ಈ ಸಂಸಾರವೆಂಬ ವಿಧಿಯ ಕೈಯಲ್ಲಿ ಹರಿ ಬ್ರಹ್ಮ ಸುರರು ಮೊದಲಾದವರೆಲ್ಲರೂ ಕೆಟ್ಟುಹೋದರು ನೋಡಾ ಕೂಡಲಸಂಗಮದೇವಾ.

೩೦

ಘ್ರಾಣೇಂದ್ರಿಯ ವಿಷಯದಿಂದೆ ಭ್ರಮರ ಕೆಡುವುದು, ಸಂಪಿಗೆಯ ಪುಷ್ಪದಲ್ಲಿ. ರಸನೇಂದ್ರಿಯ ವಿಷಯದಿಂದೆ ಮತ್ಸ್ಯ ಕೆಡುವುದು, ಜಾಲಗಾರನ ಬಲೆಯಲ್ಲಿ. ನಯನೇಂದ್ರಿಯ ವಿಷಯದಿಂದೆ ಪತಂಗ ಕೆಡುವುದು, ದೀಪದ ಜ್ವಾಲೆಯಲ್ಲಿ. ತ್ವಗಿಂದ್ರಿಯ ವಿಷಯದಿಂದೆ ಗಜವು ಕೆಡುವುದು, ರಾಜನ ಕೃತಕದಲ್ಲಿ. ಶ್ರವಣೇಂದ್ರಿಯ ವಿಷಯದಿಂದೆ ಎರಳೆ ಕೆಡುವುದು, ಬೇಟೆಗಾರನ ಸರಳಿನಲ್ಲಿ. ಇಂತೀ ಪ್ರಾಣಿಗಳು ಒಂದೊಂದು ವಿಷಯದಿಂದೆ ಬಂಧನಕ್ಕೊಳ

ಗಾದುವು. ಇಂತಪ್ಪ ಪಂಚೇಂದ್ರಿಯ ವಿಷಯವ್ಯಾಪಾರದಲ್ಲಿ ಲಂಪಟರಾದ ಮನುಜರು ಕೆಟ್ಟ ಕೇಡನೇನೆಂಬೆನಯ್ಯಾ ಅಖಂಡೇಶ್ವರಾ ?

೩೧

ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು. ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು. ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು. ಕುರಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು. ಮತ್ಸ್ಯವು ರಸನೇಂದ್ರಿಯದಿಂದ ಬಂಧನವಡೆದಳಿಯಿತ್ತು. ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿಯು ಪ್ರಳಯವಾಯಿತ್ತು. ಪಂಚೇಂದ್ರಿಯಂಗಳ ಒಂದು ಘಟದಲ್ಲಿ ತಾಳಿಹ ಮನುಷ್ಯಪ್ರಾಣಿಗಳಿಗೆ ಮರವೆ ಎಡೆಗೊಂಡು, ದೇಹಮೋಹ ಭ್ರಾಂತು ಮುಸುಕಿ, ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಾ ಗೊಹೇಶ್ವರಾ ?

೩೨

ಕಾಲುಗಳೆರಡೂ ಗಾಲಿ ಕಂಡಯ್ಯ ! ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ ! ಬಂಡಿಯ ಹೊಡೆವವರೈವರು ಮಾನಿಸರು ! ಒಬ್ಬರಿಗೊಬ್ಬರು ಸಮವಿಲ್ಲಯ್ಯ ! ಅದರಿಚ್ಚೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು ಗೊಹೇಶ್ವರಾ.

೩೩

ಊರ ಮಧ್ಯದ ಕಣ್ಣ ಕಾಡಿನೊಳಗೆ ಬಿದ್ದೈದಾವೆ ಐದು ಹೆಣನು. ಬಂದು ಬಂದು ಅಳುವರು ಬಳಗ ಘನವಾದ ಕಾರಣ. ಹೆಣನೂ ಬೇಯದು, ಕಾಡೂ ನಂದದು, ಮಾಡ ಉರಿಯಿತ್ತು ಗೊಹೇಶ್ವರಾ !

೩೪

ಸಂಸಾರವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಂಗಳೇ ಶಾಖೆಗಳು, ಪಂಚಕ್ಲೇಶಂಗಳೇ ಫಲಂಗಳು, ಪಂಚವಿಷಯಂಗಳೇ ರಸವು. ಈ ಫಲವ

ಬಯಸಿ ಮೆದ್ದವರೆಲ್ಲ ಮರಣಕ್ಕೊಳಗಾದರು. ಅದನರಿದು, ಆ ಫಲವ ನಾನು ಮುಟ್ಟೆನು ಕಾಣಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೩೫

ಹಗಲು ಹಸಿವೆಗೆ ಕುದಿದು, ಇರುಳು ನಿದ್ರೆಗೆ ಕುದಿದು, ಉಳಿದಾದ ಹೊತ್ತೆಲ್ಲ ಅಶನ ವ್ಯಸನಕ್ಕೆ ಕುದಿದು,—ಅಯ್ಯ, ನಿಮ್ಮನರಿಯದ ಪಾಪಿ ನಾನಯ್ಯ. ಅಯ್ಯ, ನಿಮ್ಮನರಿಯದ ಕರ್ಮಿ ನಾನಯ್ಯ. ಮಹಾಲಿಂಗ ಕಲ್ಲೇಶ್ವರಾ, ಅಸಗ ನೀರಡಿಸಿ ಸತ್ತ ತೆರನಂತಾಯಿತ್ತೆನ್ನ ಯುಕ್ತಿ.

೩೬

ಆವಾಗಳು ಎನ್ನ ಮನ ಉದರಕ್ಕೆ ಹರಿವುದು. ಕಾಣಲಾರೆನಯ್ಯ ನಿಮ್ಮುವನು. ಭೇದಿಸಲರಿಯೆನಯ್ಯ! ಮಾಯದ ಸಂಸಾರದಲ್ಲಿ ಸಿಲುಕಿದೆನು. ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಹೊದ್ದುವಂತೆ ಮಾಡಾ, ನಿಮ್ಮ ಧರ್ಮ!

೩೭

ರಾತ್ರಿಯೆಂಬ ಹುತ್ತಿನೊಳಗೆ ನಿದ್ರೆಯೆಂಬ ರಾಹು ಹೆಡೆಯನೆತ್ತಿ ಕಚ್ಚಲೊಡನೆ, ಅಂಜನಸಿದ್ಧರ ಅಂಜನವು ಹಾರಿತ್ತು. ಘುಟಿಕಾಸಿದ್ಧರ ಘುಟಿಕೆಯುರುಳಿತ್ತು. ಯಂತ್ರಿಗಳ ಯಂತ್ರ ಎದ್ದು ಹೋಯಿತ್ತು. ಮಂತ್ರಿಗಳ ಮಂತ್ರ ಮರೆತು ಹೋಯಿತ್ತು. ಔಷಧಿಗಳ ಔಷಧವನಾರಡಿಗೊಂಡಿತ್ತು. ಸರ್ವವಿದ್ಯಾಮುಖದ ಜ್ಯೋತಿ ನಂದಿತ್ತು. ಈ ವಿಷದ ಲಹರಿಯಲ್ಲಿ ಮೂರು ಲೋಕದವರೆಲ್ಲರೂ ಮೂರ್ಛಿತರಾದರು ಕಾಣಾ ಗೊಹೇಶ್ವರಾ.

೩೮

ನಿದ್ರೆಯಿದ್ದೆಡೆಯಲ್ಲಿ ಬುದ್ಧಿಯೆಂಬುದಿಲ್ಲ ನೋಡಾ! ಕಾಯವೊಂದೆಸೆ, ಜೀವವೊಂದೆಸೆ! ಗೊಹೇಶ್ವರಲಿಂಗ ತಾನೊಂದೆಸೆ!!

೩೯

ತನುವೆಂಬುದೊಂದು ಹುತ್ತಕ್ಕೆ ಒಂಬತ್ತು ಬಾಗಿಲು. ತಾಮಸವೆಂಬ ಸರ್ಪಂಗೆ ತಲೆ ಹದಿನಾಲ್ಕು, ಒಡಲಾರು. ಬಾಲವ ಬ್ರಹ್ಮಲೋಕಕ್ಕೆ ಇಟ್ಟು ಶಿರವ ಹರಿದ್ವಾರದಲ್ಲಿರಿಸಿ ಕರಣೇಂದ್ರಿಯಂಗಳೆಂಬ ಕಾಳಕೂಟ ವಿಷವನೆ ಉಗುಳುತ್ತಿದೆ ನೋಡಾ. ಆ ವಿಷವು ಶಿವಶರಣರಲ್ಲದವರನೆಲ್ಲರ ಸುಡುವುದ ಕಂಡೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೪೦

ವಿಷಯವೆಂಬ ಕಾಳುಗಿಚ್ಚಿನ ಜ್ವಾಲೆಯಲ್ಲಿ ಈರೇಳು ಲೋಕವೆಲ್ಲ ಹತವಾಗುತಿರ್ಪುದು ನೋಡಾ. ಅದೆಂತೆಂದೊಡೆ: ಕುಂಡಲಿಯೆಂಬ ಮಾಯಾ ಸರ್ಪನು ತನ್ನ ಬಾಲವ ಬ್ರಹ್ಮರಂಧ್ರಕ್ಕೇರಿಸಿ, ನಾಭಿಚಕ್ರವ ಸುತ್ತಿಕೊಂಡು, ಅಧೋಮುಖವಾಗಿ ಇಂದ್ರಿಯವೆಂಬ ವಿಷವ ಕಾರುತಿಪ್ಪುದು ನೋಡಾ! ಆ ವಿಷದ ನಂಜು ತಲೆಗೇರಿದಲ್ಲಿ ಅಸಿಯ ಜವ್ವನೆಯರ ಸಂಗಸುಖ ಬಹುಸವಿ ಯೆಂದು ತಲೆದೂಗುತಿಪ್ಪುದು ನೋಡಾ ಸಕಲ ಪ್ರಾಣಿಗಳು. ಇದು ಪಶುಪತಿಯು ಮಾಡಿದ ಮಾಯದ ವಿಧಿಯೆಂದು ತಿಳಿಯದೆ, ಹಸಗೆಟ್ಟು ಹೋಯಿತ್ತು ನೋಡಾ ಮೂಜಗವೆಲ್ಲ ಅಖಂಡೇಶ್ವರಾ!

೪೧

ಮೋಹನ ಮೊಲೆ ಮುದ್ದುಮೊಗದ ಭಾವಕಿಯರ ಲಲ್ಲೆನುಡಿ ಯೆಂಬ ನಯಗತ್ತಿ ಎಲ್ಲರ ಹೃದಯವ ಕೊರೆವುತ್ತಿದೆ ನೋಡಾ. ಇನ್ನೆಲ್ಲಿಯ ಅರುಹೊ ಶಿವಶಿವಾ! ಇವರ ಬಲ್ಲತನ ಬರುದೊರೆ ಹೋಯಿತ್ತು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೪೨

ಲಲನೆಯರ ನಟಣೆ ಎಂಬ ಕುಟಿಲಕ್ಕೆ ಸಿಲ್ಕಿ ಕೊಟಲೆಗೊಳ್ಳದಿರಾ ಮರುಳು ಮಾನವಾ. ನಿಟಿಲ ತಟದಲ್ಲಿ ಮಠವ ಮಾಡಿಕೊಂಡು, ನಿಶ್ಚಿಂತ

ನಿರಾಳವಾಗಿರಾ. ಹುಸಿಯು ಮಾಯಾಘಾತಮಕ್ಕೆ ದಿವಾಕರ ಎನ್ನೊಡೆಯ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭು ತಾನೆ ಕಾಣಿರೋ.

೪೩

ಬ್ರಹ್ಮಪಾಶ ವಿಷ್ಣುಮಾಯೆಯೆಂಬ ಬಲೆಯ ಬೀಸಿ, ಹೊನ್ನು ಹೆಣ್ಣು ಮಣ್ಣು ತೋರಿ, ಮುಕ್ಕಣ್ಣನಾಡಿದ ಬೇಂಟೆಯು. ಆಶೆಯೆಂಬ ಕುಟುಕನಿಕ್ಕಿ ಹೇಸದೆ ಕೊಂದೆಯಲ್ಲಾ ಗೊಹೇಶ್ವರಾ!

೪೪

ತನುವಿಕಾರ ಮನವಿಕಾರ ಜನನ ಮರಣ ಸ್ಥಿತಿ ಕಾರಣ, ಹೊನ್ನ ತೋರಿದೆ ಜಗದ ಕಣ್ಣ ಮೊದಲಿಗೆ; ಹೆಣ್ಣ ಸುಳಿಸಿದೆ ಜಗದ ಕಣ್ಣ ಮೊದಲಿಗೆ; ಮಣ್ಣ ಹರವಿದೆ ಜಗದ ಕಣ್ಣ ಮೊದಲಿಗೆ. ತನ್ನುವ ತಪ್ಪಿಸಿ ಜಗವ ಸಂಸಾರ ಕೊಪ್ಪಿಸಿ ನುಣ್ಣನೆ ಹೋದನುಪಾಯದಿ ಸೊಡ್ಡಳ!

೪೫

ಊರ ಸೀರೆಗೆ ಅಸಗ ತಡಬಡಗೊಂಬಂತೆ ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ನೆನೆನೆನೆದು, ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯ ಚೆನ್ನಮಲ್ಲಿಕಾರ್ಜುನಯ್ಯ.

೪೬

ಎನ್ನ ಮನಸ್ಸು ಹೊನ್ನು ಹೆಣ್ಣು ಮಣ್ಣು ಧ್ಯಾನಿಸಿ ನಿಮ್ಮ ಮರೆದೆನಯ್ಯ. ನಾ ಮರೆದ ಕಾರಣ ನೀನೆನ್ನ ಮರೆದೆ. ನೀ ಮರೆದ ಕಾರಣ ನಿನ್ನ ಮೋಹ ತಪ್ಪಿ ನಾನು ಕೆಟ್ಟೆನಯ್ಯ. ಹೊನ್ನು ಹೆಣ್ಣು ಮಣ್ಣೆಂಬ ಆಶೆ ಎನ್ನ ಘಾಸಿ ಮಾಡುತ್ತಿವೆಯಯ್ಯ. ಶಿವಧೋ ಶಿವಧೋ ಮಹಾದೇವಾ, ಈ ಹೊನ್ನು ಹೆಣ್ಣು ಮಣ್ಣಿಂಗೆ ಕರ್ತ ನೀನು. ಶ್ರುತಿ: ತೇನ ವಿನಾ ತೃಣಾಗ್ರಮಪಿ ನ ಚಲತಿ ಎಂಬುದನರಿದು ಮನದಲ್ಲಿ ಇರ್ದು ಕೆಟ್ಟೆ. ಈ ಕೇಡ

ಲ್ಲದೆ ಹಸಿವು ತೃಷೆ ವ್ಯಸನ ವಿಷಯ ಪಂಚೇಂದ್ರಿಯ ಷಡ್ವರ್ಗಂಗಳು ಕಾಡುತ್ತಿವೆ. ಶಿವಧೋ ಮಹಾದೇವಾ, ಈ ಹೊನ್ನು ಹೆಣ್ಣು ಮಣ್ಣಿನಾಶೆಯಿಂದ ಈ ಅವಸ್ಥೆಗೊಳಗಾದೆನು. ಇನ್ನಿವಕ್ಕಾಸೆ ಮಾಡಿ ನಿಮ್ಮ ಮರೆಯದಂತೆನಗೆ ಕೃಪೆಯ ಮಾಡಯ್ಯ. ನಿಮಗೆ ಎನ್ನಾಣೆ. ಭಕ್ತವತ್ಸಲ ಭಕ್ತದೇಹಿಕದೇವ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೪೭

ಕಾಮದಿಂದ ಕರಗಿದೆನಯ್ಯ. ಕ್ರೋಧದಿಂದ ಕೊರಗಿದೆನಯ್ಯ. ಲೋಭಮೋಹಂಗಳಿಂದ ಅತಿನೊಂದೆನಯ್ಯ. ಮದಮತ್ಸರಂಗಳಿಂದ ಬೆದಬೆದನೆ ಬೆಂದೆನಯ್ಯ. ಅಹಂಕಾರ ಮಮಕಾರಂಗಳಿಂದ ಮತಿಮಂದನಾಗಿದ್ದೆನಯ್ಯ. ಇದು ಕಾರಣ ಎನ್ನ ಕಾಮಾದಿ ಷಡ್ವರ್ಗಂಗಳಂ ಕಳೆದು, ಅಹಂಕಾರ ಮಮಕಾರಂಗಳಂ ಮಾಣಿಸಿ, ನಿರಹಂಕಾರಿ ಎಂದೆನಿಸಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೪೮

ಭವಕ್ಕೆ ಬೀಜವಾದುದು ತನುವೋ ಮನವೋ ಎಂದು ವಿವರಿಸಿ ನೋಡಲು, ಮನವೇ ಕಾರಣವಾಗಿಪ್ಪುದರಿಂದೆ, ಈ ಕೆಟ್ಟ ಮನದ ಸಂಗದಿಂದೆ ಮರ್ತ್ಯಲೋಕದಲ್ಲಿ ಹುಟ್ಟಿ, ತಾಪತ್ರಯಾಗ್ನಿಯಿಂದೆ ಕಂದಿ ಕುಂದಿ ನೊಂದು ಬೆಂದೆನಯ್ಯ. ಈ ಮನದ ಸಂಗದಿಂದೆ ಭವಭವಂಗಳಲ್ಲಿ ತೊಳಲಿ ಬಳಲಿದೆನಯ್ಯ. ಈ ಮನದ ಸಂಗದಿಂದೆ ಅನಂತ ಮರವೆಯ ಮೋಹಂಗಳಲ್ಲಿ ಸೆರೆ ಸಿಕ್ಕಿದೆನಯ್ಯ. ಈ ಮನದ ಸಂಗವ ಬಿಡಿಸಿ ನಿಮ್ಮ ನೆನಹಿನ ಸಂಗದಲ್ಲಿರಿಸಿ ಸಲಹಯ್ಯಾ ಎನ್ನ, ಅಖಂಡೇಶ್ವರಾ.

೪೯

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ! ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹುಮಾಡಿ ನೀವಿರಿಸಿದಿರಿ ಕೂಡಲಸಂಗಮದೇವಾ.

೫೦

ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ, ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ ಬೇವುತ್ತಿದ್ದೇನೆ. ಅಯ್ಯಾ! ಎನ್ನ ಮನದ ದುರಾಶೆಯ ಮಾಣಿಸಿ, ನಿಮ್ಮತ್ತ ತೋರಾ ಚೆನ್ನ ಮಲ್ಲಿಕಾರ್ಜುನಾ.

೫೧

ಮರನನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯುತಲಿದೆ; ಬೆಂದ ಮನವ ನಾನೆಂತು ನಂಬುವೆನಯ್ಯಾ? ಎಂತು ನಚ್ಚುವೆನಯ್ಯಾ? ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ!

೫೨

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ, ಇಂದ್ರಿಯಂಗಳೆಂಬ ಶಾಖೆಶಾಖೆಗೆ ಹಾರಿ, ವಿಷಯಂಗಳೆಂಬ ಹಣ್ಣು ಫಲಂಗಳ ಗ್ರಹಿಸಿ, ಭವದತ್ತ ಮುಖವಾಗಿ ಹೋಗುತಿದೆ ನೋಡಾ. ಈ ಮನವೆಂಬ ಮರ್ಕಟನ ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ.

೫೩

ಶಿವ ಶಿವಾ! ಎನ್ನ ಮನವು ನಿಮ್ಮ ನೆನೆಯಲೊಲ್ಲದೆ, ಅನ್ಯಕ್ಕೆ ಹರಿವುತಿರ್ಪುದು ನೋಡಾ. ಗುರು ಚರ ಲಿಂಗದ ಸೇವೆಯೆಂದೊಡೆ ಹಿಂದುಳಿವುತಿರ್ಪುದು ನೋಡಾ. ಅನ್ಯರ ಒಡವೆಯಾದ ಹೊನ್ನು ಹೆಣ್ಣು ಮಣ್ಣೆಂದೊಡೆ ಮುಂದುವರಿದು ಓಡುತಿರ್ಪುದು ನೋಡಾ. ಈ ಮನದ ಉಪಟಳವು ಘನವಾಯಿತ್ತು. ಇನ್ನೇನು ಗತಿಯಯ್ಯಾ ಎನಗೆ ಅಖಂಡೇಶ್ವರಾ?

೫೪

ಓತಿ ಬೇಲಿವರಿದಂತೆ ಎನ್ನ ಮನವಯ್ಯಾ. ಹೊತ್ತಿಂಗೊಂದು ಪರಿಯಪ್ಪ ಗೋಸುಂಬೆಯಂತೆನ್ನಮನವು! ಬಾವುಲ ಬಾಳುವೆಯಂತೆನ್ನ

ಮನವು! ನಡುವಿರುಳೊಳಿದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ ನಾನಿಲ್ಲದ ಭಕ್ತಿಯ ಬಯಸಿದರುಂಟೆ ಕೂಡಲಸಂಗಮದೇವಾ ?

೫೫

ತನು ತನ್ನ ಹೊರೆಯಲಿದ್ದರೇನು ಎಷ್ಟು ದಿನ ? ಮನ ತನ್ನ ಹರಿದತ್ತ ಹರಿದ ಬಳಿಕ, ಕೆನೆ ಇಲ್ಲದ ಮೊಸರ ಕಡೆದರೆ ಅಲ್ಲಿ ಒಂದು ಹನಿ ತುಪ್ಪವಿಲ್ಲ ಕಾಣಾ ರಾಮನಾಥಾ.

೫೬

ಏರಿದ ವಾಜಿ ಓಹೋ ಎಂದು ಕರದೋರಿದಲ್ಲಿ ನಿಂದಿತ್ತು,-ವಾಹನ ವಾಹಕನ ಹೃದಯವನರಿತು. ವಸ್ತುವ ಮುಟ್ಟೆ ಆಡುವ ಚಿತ್ತ ನಿಜವಸ್ತುವಿನ ಗೊತ್ತನರಿಯದೆ, ತನ್ನ ಇಚ್ಛೆಯಲ್ಲಿ ಹರಿದಾಡುತ್ತಿದೆ ನೋಡಾ. ಇದಕ್ಕೆ ಒಂದು ಕಟ್ಟಣೆಯ ಗೊತ್ತ ಲಕ್ಷಿಸಿ, ಕಟ್ಟುವಡೆವಂತೆ ಮಾಡು ಗೋಪತಿನಾಥ ವಿಶ್ವೇಶ್ವರಲಿಂಗಾ.

೫೭

ಕೇಳು ಕೇಳಯ್ಯಾ ಆತ್ಮನೇ, ಎರಡು ಪ್ರಕಾರದ ಆದಿಮಧ್ಯಾವಸಾನವ. ತಿಳಿದು ತಿಳಿದು ನೋಡು. ಕೆಡಬೇಡ, ಕೆಡಬೇಡ. ತಂದೆಯ ದೆಸೆಯಿಂದ ತಾಯಿಯ ಯೋನಿಚಕ್ರದಲ್ಲಿ ಬಂದುದೇ ಆದಿ. ಹೊನ್ನು ಹೆಣ್ಣು ಮಣ್ಣು ನನ್ನದೆಂದು ಹಿಡಿದು, ಷಟ್ಕರ್ಮವನಾಚರಿಸಿ, ಸುಖದುಃಖಂಗಳಲ್ಲಿ ಮುಳುಗಿಪ್ಪುದೇ ಮಧ್ಯ. ಅಂತಕನ ಕೈಯಿಂದ ಅರೆದು ಸಣ್ಣಿಸಿಕೊಂಡು ಭವಕ್ಕೆ ನೂಂಕಿಸಿಕೊಂಬುದೇ ಅವಸಾನ. ಇದನರಿದು ಇವಕ್ಕೆ ಹೇಯವುಂ ಮಾಡು. ಮತ್ತೆ ಆದಿ ಮಧ್ಯಾವಸಾನವುಂ ತಿಳುಹುವೆನು. ನಾನು ಮಹಾಲಿಂಗದ ಗರ್ಭಾಬ್ಧಿಯಲ್ಲಿ ಬಂದೆನೆಂಬುದೇ ಆದಿ. ಲೋಕದ ವ್ಯವಹಾರವ ಸಾಕುಮಾಡಿ, ಇಷ್ಟಲಿಂಗದಲ್ಲಿ ನೈಷ್ಠೆಯಾಗಿ, ಪ್ರಾಣಲಿಂಗದಲ್ಲಿ ಪರಿಣಾಮಿಯಾಗಿ, ಕ್ಷುತ್ತಿಂಗೆ ಭಿಕ್ಷೆ ಸೀತಕ್ಕೆ ರಗಟೆಯಾಗಿ, ಮೋಕ್ಷಕಾಮಿಯಾಗಿಪ್ಪುದೇ ಮಧ್ಯ. ತನುವ ಬಿಡುವಲ್ಲಿ, ಮನವ ಪರಬ್ರಹ್ಮಕ್ಕೆ ಸಮರ್ಪಣೆಯ

ಮಾಡಿ, ಜನನ ಮರಣವ ಗೆಲುವುದೇ ಅವಸಾನ. ಇದನರಿದು, ಇವಕ್ಕೆ ಮೆಚ್ಚಿ ಲಿಂಗವನೆ ಸಾಧಿಸು, ವೇಧಿಸು. ಇಂತಲ್ಲದೆ ಕಪಿಯ ಕೈಯ ಕನ್ನಡಿಯಂತೆ ಕುಣಿದರೆ ಕುಣಿದು, ಏಡಿಸಿದರೆ ಏಡಿಸಿ, ಹಲುಗಿರಿದರೆ ಹಲುಗಿರಿದು, ಮನವಾಡಿದಂತೆ ನೀನಾಡಬೇಡ. ಮನವಾಡಿದಂತೆ ಆಡಿದವಂಗೆ ಭಕ್ತಿ ಎಲ್ಲಿಯದು ? ಜ್ಞಾನವೆಲ್ಲಿಯದು ? ವೈರಾಗ್ಯವೆಲ್ಲಿಯದು ? ವಿರಕ್ತಿ ಎಲ್ಲಿಯದು ? ಮುಕ್ತಿಯೆಲ್ಲಿಯದಯ್ಯಾ ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನಾ ?

೫೮

ಜೇನುತುಪ್ಪದಲ್ಲಿ ಬಿದ್ದು ಸಾವ ನೊಣನಂತೆ, ಕೀಳು ಮಾಂಸದ ಸವಿಗೆ ಗಂಟಲ ಗಾಣದಲ್ಲಿ ಸಿಕ್ಕಿ ಸಾವ ಮೀನಿನಂತೆ, ಹೀನ ವಿಷಯವ ನಚ್ಚಿ ಮಚ್ಚದಿರಾ ಎಲೆಲೆ ಹುಚ್ಚು ಮನವೇ! ಅಲ್ಪಸುಖಕ್ಕೆ ಮಚ್ಚಿ, ಅನಂತ ಭವಭಾರಕ್ಕೆ ಒಳಗಾಗಿ ದುರ್ಗತಿಗಿಳಿಯದಿರಯ್ಯೋ ಜೆಂದ ಮನವೇ ! ಶಿವಶಿವಾ ಹರಹರಾ ಎಂಬುದನು ಮರೆಯದಿರು, ಮರೆದೊರಗದರು. ನೀ ಮರೆದರೆ ನಾಯ ಸಾವ ಸಾವೆ. ಬಿಡು ಕಂಡಾ ಎಲೆಲೆಲೆ ಮನವೆ!! ಈ ಮರುಳುತನವ ಬಿಟ್ಟು, ಎನ್ನ ಒಡೆಯ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವಿಗೆ ಶರಣು ಶರಣೆನ್ನ ಕಲಿಯಾ,-ನೀನು ಸುಖಿಯಾಗಬಲ್ಲರೆ ಎಲೆಲೆಲೆ ಮನವೆ !!!

೫೯

ಕನಕ ಕಾಮಿನಿ ಭೂಮಿಗಾಗಿ ಹೊಡೆದಾಡಿ ಕೆಟ್ಟಿತೀ ಜಗವೆಲ್ಲ. ಇದ ಕಂಡು ಕೇಳಿ, ನೀನೇತಕೆ ಇಚ್ಛಿಸುವೆ ಎಲೆ ಹುಚ್ಚು ಮನವೆ? ಹಗಲು ಕಂಡ ಕಮರಿಯ ಇರುಳು ಬೀಳುವರೆ ಎಲೆ ಮರುಳು ಮನವೆ ? ಕೆಡಬೇಡ ಕೆಡಬೇಡ. ನಿನಗೊಂದು ಉಪಾಯವ ಹೇಳುವೆ ಕೇಳು ಎಲೆ ಮರುಳು ಮನವೆ. ಜಗದ ಆಗುಹೋಗನರಿತು, ಜಗದೀಶ ಅಖಂಡೇಶ್ವರನ ನೆರೆನಂಬಿದೆಯಾದಡೆ, ನಿನಗೆ ಜನನ ಮರಣಂಗಳು ವಿರಹಿತವಾಗಿ, ಪರಮ ಪದವು ದೊರಕೊಂಬುದು ನೋಡಾ !

೬೦

ಅಟಮಟವೇ ಆಧಾರ, ಕಪಟವೇ ಸದಾಚಾರ, ಕುಟಿಲವೇ ಘನವಾಯಿತ್ತು ಕೆಲಬರಿಗೆ. ಹುಸಿಯ ಮುಸಕವೇ ವರ್ತನೆಯಾಯಿತ್ತು ಕೆಲಬರಿಗೆ. ಯಂತ್ರತಂತ್ರವೇ ವ್ಯವಹಾರವಾಯಿತ್ತು ಕೆಲಬರಿಗೆ. ಸಟೆಯ ಸಾಗರದೊಳಗೆ ತೇಂಕಾಡುತಿರ್ಪರು ಕೆಲಬರು,–ಸಕಳೇಶ್ವರ ದೇವರ ನೆರೆ ನಂಬಲರಿಯದವರೆಲ್ಲರು.

೬೧

ಹೊನ್ನ ತೆತ್ತಲ್ಲದೆ ಹೊಲ ಮಾಡಬಾರದು. ಬಿಟ್ಟಿ ಬೇಗಾರವಿಲ್ಲದೆ ಊರೊಳಗಿರಬಾರದು. ಸರಕಾರಕ್ಕೆ ರುಜು ಇಲ್ಲದೆ ರೈತನಾಗಬಾರದು. ಅದೆಂತೆಂದೊಡೆ: ಇಷ್ಟುಳ್ಳಾತನೇ ಪಾಚ್ಛಾ ರೈತ. ಇಲ್ಲದಾತ ದುಬ್ಬುಳುಕ ಎಂದನಯ್ಯಾ ನಿಮ್ಮ ಶರಣ, ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬ ಲಿಂಗ ನಿರ್ಮಾಯಪ್ರಭುವೇ.

೬೨

ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಘಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ! ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ ಬಿನ್ನಾಣ ತಪ್ಪಿತ್ತು ಗೊಹೇಶ್ವರಾ.

೬೩

ಹಳ್ಳದೊಳಗೊಂದು ಹುಳ್ಳಿ ಬರುತ್ತಿರಲು, ನೊರೆತೆರೆಗಳು ತಾಗಿದವಲ್ಲಾ! ಸಂಸಾರವೆಂಬ ಸಾಗರದೊಳಗೆ ಸುಖದುಃಖಂಗಳು ತಾಗಿದವಲ್ಲಾ! ಇದಕ್ಕಿದು ಮೂರ್ತಿಯಾದ ಕಾರಣ ಪ್ರಳಯವಾಯಿತ್ತು ಗೊಹೇಶ್ವರಾ.

೬೪

ಎನ್ನಾತ್ಮನದೊಂದು ಅರಸುತನದ ಅನ್ಯಾಯವ ಕೇಳಯ್ಯ ಗುರುವೇ. ಪಂಚಭಕ್ಷ ಪರಮಾಮೃತವ ಸದಾ ದಣಿಯಲುಂಡು, ಒಂದು ದಿನ ಸವಿಯೂಟ

ತಪ್ಪಿದರೆ, ಹಲವ ಹಂಬಲಿಸಿ ಹಲ್ಲುಗಿರಿದು ಎನ್ನ ಕೊಂದು ಕೂಗುತ್ತಿದೆ ನೋಡಾ. ಶ್ವಪಚನುತ್ತಮನು ಕೂಡೆ ಸಂಕೋಲೆಯನಿಕ್ಕುವರೆ ಅಯ್ಯಾ? ಕಲಸಿ ಕಲಸಿ ಕೈಬೆರಳು ಮೊಂಡಾದವು. ಅಗಿದಗಿದು ಹಲ್ಲು ಚಪ್ಪಟಾದವು. ಉಂಡುಂಡು ಬಾಯಿ ಬೀಡಾಯಿತ್ತು. ತನು ಹಳದಾಗಿ ಅಲ್ಲಿಗಲ್ಲಿಗೆ ಕಣ್ಣು ಪುಟ್ಟಿತ್ತು. ಮನ ಹೊಸತಾಗಿ ಹನ್ನೆರಡು ವರುಷದ ರಾಜಕುಮಾರನಾದೆನು. ಇನ್ನೇವೆನಿನ್ನೇವೆನಯ್ಯಾ? ಎನ್ನ ಕೇಡಿಂಗೆ ಕಡೆ ಇಲ್ಲ. ಕಾಯವಿಕಾರವೆಂಬ ಕತ್ತಲೆಗವಿಯಿತ್ತು. ಮನೋವಿಕಾರವೆಂಬ ಮಾಯೆ ಸೆರೆವಿಡಿದಳು. ಇಂದ್ರಿಯ ವಿಕಾರವೆಂಬ ಹುಚ್ಚು ನಾಯಿಗಳು ಕಚ್ಚಿ ಕಚ್ಚಿ ಒದರುತ್ತಿವೆ. ಸಾವನ್ನಬರ ಸರಸ ಉಂಟೆ ಲಿಂಗವೆ? ಅನ್ಯಸಮಯದ ಗುಮ್ಮಟನ ಕೈವಿಡಿದೆತ್ತಿಕೊಂಡು, ನಿನ್ನ ಸಮಯದ ಶಿಶುವು ಬಾವಿಯಲ್ಲಿ ಬೀಳ್ವರೆ ನೋಡುತಿರ್ಪಿರೆ ಕರುಣಿ? ಮುಕ್ತಿಗಿದು ಪಯಣವಲ್ಲ ತಂದೆ. ನೀನಿಕ್ಕಿದ ಮಾಯಾಸೂತ್ರಮಂ ಹರಿದು, ದಶೇಂದ್ರಿಯಂಗಳ ಗುಣವ ನಿವೃತ್ತಿಯಂ ಮಾಡಿ, ಅಂಗಭೋಗ ಆತ್ಮ ಭೋಗಂಗಳನಡಗಿಸಿ, ಲಿಂಗದೊಳು ಮನವ ನೆಲೆಗೊಳಿಸಿ, ಎನ್ನ ಪಟದೊಳ ಗಣ ಚಿತ್ರದಂತೆ ಮಾಡಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿ ಕಾರ್ಜುನಾ.

೬೫

ಗುಣದೋಷ ಸಂಪಾದನೆಯ ಮಾಡುವನ್ನಕ್ಕರ, ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ, ಮೋಹದ ಮಂದಿರ, ಮದದಾವರಣ, ಮತ್ಸರದ ಹೊದಿಕೆ. ಆ ಭವವರತಲ್ಲದೆ ಚೆನ್ನಮಲ್ಲಿಕಾರ್ಜುನನರಿವುದಕ್ಕೆ ಇಂಬಿಲ್ಲ ಕಾಣಿರಯ್ಯ.

೬೬

ಜಾತಸ್ಯ ಮರಣಂ ಆವಂಗೆಯೂ ತಪ್ಪದು. ಅರಿದು ಮರೆಯ ಬೇಡಯ್ಯಾ. ಉರಗನ ಬಾಯ ಕಪ್ಪೆಯಂತೆ ಸಂಸಾರ ಹೆರೆಗೊಳುತ್ತಿರ್ದು ದಲ್ಲಾ. ರೋಮಜರು ಮೀನಜರು ಕಾಲಕಲ್ಪಿತಕ್ಕೊಳಗಾದರು. ಮಹಾಲಿಂಗ ಗಜೇಶ್ವರಯ್ಯನೊಬ್ಬನೆ ಶಾಶ್ವತನು.

೬೭

ರೋಗಿಗೆ ಹಾಲು ಸಿಹಿಯಪ್ಪುದೆ? ಗೂಗೆಗೆ ರವಿ ಲೇಸಪ್ಪುದೆ? ಚೋರಂಗೆ ಬೆಳಗು ಗುಣವಪ್ಪುದೆ? ಭವಸಾಗರದ ಸಮುಯದಲ್ಲಿದ್ದವಂಗೆ ನಿರ್ಭಾವನ ಭಾವವನೆತ್ತ ಬಲ್ಲರು? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೬೮

ಸರ್ಪ ಸಂಸಾರಿಯೊಡನಾಡಿ ಕಟ್ಟುವಡೆಯಿತ್ತು. ಮನದ ತಮಂಧ ಬಿಡದು, ಮನದ ಕಪಟ ಬಿಡದು. ಸಟೆಯೊಡನೆ ದಿಟವಾಡಿ ಬಯಲು ಬಡಿವಡೆಯಿತ್ತು. ಕಾಯದ ಸಂಗದ ಜೀವ ಉಳ್ಳನ್ನಕ್ಕರ ಎಂದೂ ಭವ ಹಿಂಗದು ಗೊಹೇಶ್ವರಾ.

೬೯

ಕುಡಿವ ನೀರೆನ್ನಬಹುದೇ ನೀರಲದ್ದುವಾಗ? ಅಡುವ ಕಿಚ್ಚೆನ್ನ ಬಹುದೆ ಮನೆಯ ಸುಡುವಾಗ? ಒಡಲು ತನ್ನದೆನ್ನಬಹುದೇ ಪುಣ್ಯಪಾಪ ವನುಂಬಾಗ? ಜೀವ ತನ್ನದೆನ್ನಬಹುದೆ ಮಿಕ್ಕು ಹೋಹಾಗ? ಇವನೊಡೆ ಬಡಿದು ಕಳೆ ಎಂದಾತ ಅಂಬಿಗರ ಚೌಡಯ್ಯ.

೭೦

ತೋಟವ ಬಿತ್ತಿದರೆಮ್ಮವರು; ಕಾಹ ಕೊಟ್ಟರು ಜವನವರು! ನಿತ್ಯ ವಲ್ಲದ ಸಂಸಾರ ವೃಥಾ ಹೋಯಿತ್ತಲ್ಲಾ! ಗೊಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು, ಅಟ್ಟುಣ್ಣಲಿಲ್ಲ.

೭೧

ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯಾ! ಏವೆನೇವೆನಯ್ಯಾ! ಅಂದಂದಿನ ದಂದುಗಕ್ಕೆ ಏವೆನೇವೆನಯ್ಯಾ! ಬೆಂದ ಒಡಲ ಹೊರೆವುದಕ್ಕೆ ನಾನಾರೆ. ಚೆನ್ನಮಲ್ಲಿಕಾರ್ಜುನಯ್ಯ, ಕೊಲ್ಲು ಕಾಯಿ ನಿಮ್ಮ ಧರ್ಮ.

೭೨

ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ. ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ. ಭಾಪು ಸಂಸಾರವೇ! ಬೆನ್ನಿಂದ ಬೆನ್ನ ಹತ್ತಿ ಬಂದೆ! ಚೆನ್ನಮಲ್ಲಿಕಾರ್ಜುನಯ್ಯಾ, ಇನ್ನೇವೆನಿನ್ನೇವೆ!!

೭೩

ಸಂಸಾರವೆಂಬ ಹಗೆಯಯ್ಯ ತಂದೆ. ಎನ್ನ ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ! ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ! ನಿಮ್ಮ ಮರೆವೊಕ್ಕೆ ಕಾಯಯ್ಯ! ಎನ್ನ ಬಿನ್ನಪವನವಧಾರು ಚೆನ್ನಮಲ್ಲಿಕಾರ್ಜುನಾ.

೭೪

ಎನ್ನ ಮಾಯದ ಮದವ ಮುರಿಯಯ್ಯ! ಎನ್ನ ಕಾಯದ ಕತ್ತಲೆಯ ಕಳೆಯಯ್ಯ! ಎನ್ನ ಜೀವದ ಜಂಜಡವ ಮಾಣಿಸಯ್ಯ! ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವಯ್ಯ, ಎನ್ನ ಸುತ್ತಿದ ಪ್ರಪಂಚವ ಬಿಡಿಸು ನಿಮ್ಮ ಧರ್ಮ.

೭೫

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು. ತೇಲಲೀಯದು ಗುಂಡು, ಮುಳುಗಲೀಯದು ಬೆಂಡು. ಇಂತಪ್ಪ ಸಂಸಾರಶರಧಿಯ ದಾಂಟಿಸಿ, ಕಾಲಾಂತಕನೆ ಕಾಯೋ ಕೂಡಲಸಂಗಯ್ಯ.

೭೬

ಒಲೆ ಹತ್ತಿಯುರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿಯುರಿದೊಡೆ ನಿಲಬಾರದು. ಏರಿ ನೀರುಣ್ಬೊಡೆ, ಬೇಲಿ ಕೆಯ್ಯ ಮೇವೊಡೆ, ನಾರಿ ತನ್ನ ಮನೆಯಲ್ಲಿ ಕಳುವೊಡೆ, ತಾಯ ಮೊಲೆವಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

೭೭

ಶೂಲದ ಮೇಲಣ ವಿಭೋಗವೇನಾದೊಡೇನೊ? ನಾನಾವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ! ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೇ ಮಹಾದಾನಿ ಕೂಡಲಸಂಗಮದೇವಾ?

೭೮

ಸಂಸಾರವೆಂಬ ಹೆಣ ಬಿದ್ದಿರೆ ತಿನಬಂದ ನಾಯ ಜಗಳವ ನೋಡಿರೇ! ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ. ಗೊಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ!

೭೯

ಕರೆಯದೆ ಬಂದುದ, ಹೇಳದೆ ಹೋದುದನಾರೂ ಅರಿಯರಲ್ಲಾ! ಅಂದಂದಿಗೆ ಬಂದ ಪ್ರಾಣಿಗಳು ಆರೂ ಅರಿಯರಲ್ಲಾ! ಗೊಹೇಶ್ವರಲಿಂಗ ಉಣ್ಣದೇ ಹೋದುದನಾರೂ ಅರಿಯರಲ್ಲಾ!

೮೦

ಸಾವುದು ದಿಟ ದಿಟ ನೋಡಾ. ಅದು ಸಟೆ ಎಂದು, ನಿತ್ಯವೆಂದ ನಿತ್ಯವ ನಂಬಿ, ಹೊನ್ನು ಹೆಣ್ಣು ಮಣ್ಣು ನಿನ್ನವೆಂದು ನಂಬಿರಲು, ಅದು ನಿನ್ನ ವಂಚಿಸಿ ಅನ್ಯರಿಗೆ ಹೋದುದನರಿಯಿರೆ? ಅಯ್ಯೋ ಅಯ್ಯೋ ಕೆಡದಿರಿ. ಸತ್ಪಾತ್ರಕ್ಕೆ ಸಲಿಸಿ ಬದುಕಿರಯ್ಯಾ. ಗುರು ಲಿಂಗ ಜಂಗಮಕ್ಕೆ ಸದ್ಭಕ್ತಿಯಿಂ ದಾಸೋಹವಂ ಮಾಡಲು ನಿತ್ಯವು. ಇದು ಸಟೆ ಎಂದು ನರಕಕ್ಕಿಳಿದು ಕೆಡದಿರಿ ಕೆಡದಿರಿ. ಇದನರಿದು ಸಟೆಯ ದಿಟ ಮಾಡದಿರಿ. ಗುರು ಲಿಂಗ ಜಂಗಮಕ್ಕೆ ದಾಸೋಹವ ಮಾಡುವುದೇ ದಿಟ. ಇದು ಸತ್ಯ ಇದು ಸತ್ಯ, ಇದೇ ನಿತ್ಯ. ಇದೇ ಯುಕ್ತಿ, ಇದೇ ಭಕ್ತಿ, ಇದೇ ಶಕ್ತಿ, ಇದೇ ಮುಕ್ತಿ. ಇದು ಸತ್ಯ, ಶಿವ ಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೧

ದಿಟ ದಿಟ ಎನಗಿನ್ನೆಂತಯ್ಯ? ಸಾವು ಬಂದಿತ್ತೇ? ಸಾವು ಬಂದಿತ್ತೇ? ಸ್ಥಿರಾಯುಗಳೆಂಬ ದೇವಜಾತಿಗಳು ಸತ್ತುದ ಕೇಳುತ್ತ ಇದ್ದೇನೆ. ಮತ್ತೆ ಎನ್ನ ಅನ್ವಯದವರು ಸತ್ತುದ ಕಾಣುತ್ತಿದ್ದೇನೆ. ಮತ್ತೆಯೂ ನಾಚಿಕೆ ಇಲ್ಲ, ಹೇಸಿಕೆ ಇಲ್ಲ. ಕರ್ಮಿ ನಾನು, ಸದ್ಧರ್ಮಿ ನೀನು. ಬೇಗ ಬೇಗ ಭಕ್ತಿ ಜ್ಞಾನ ವೈರಾಗ್ಯವನಿತ್ತು ರಕ್ಷಿಸಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೨

ಹುಲಿಯ ಬೆನ್ನಿನಲ್ಲಿ ಒಂದು ಹುಲ್ಲೆ ಹೋಗಿ ಮೇದು ಬಂದೆನೆಂದರೆ, ಇದ ಕಂಡು ಬೆರಗಾದೆ! ರಕ್ಕಸಿಯ ಮನೆಗೆ ಹೋಗಿ ನಿದ್ರೆಗೆಯ್ದು ಬಂದೆನೆಂದರೆ, ಇದ ಕಂಡು ಬೆರಗಾದೆ! ಜವನ ಮನೆಗೆ ಹೋಗಿ ಸಾಯದೆ ಬದುಕಿ ಬಂದೆನೆಂದರೆ, ಇದ ಕಂಡು ಬೆರಗಾದೆ ಗೊಹೇಶ್ವರಾ!

೮೩

ಮದ ಮತ್ಸರ ಬಿಡದು. ಮನದ ಕನಲು ನಿಲ್ಲದು. ಒಡಲ ಗುಣ ಹಿಂಗದು. ಇವ ಮೂರನು ಬಿಡದೆ ನಡೆಸುವನ್ನಕ್ಕ ಘನವ ಕಾಣಬಾರದು. ಘನವ ಕಾಂಬುದಕ್ಕೆ ಮದ ಮತ್ಸರವನೆ ಬಿಟ್ಟು, ಮನದ ಕನಲ ನಿಲಿಸಿ, ಒಡಲ ಗುಣವನೆ ಹಿಂಗಿಸಿ, ತಾ ಮೃಡರೂಪಾದಲ್ಲದೆ ಘನವ ಕಾಣಬಾರದೆಂದರು ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೮೪

ಹೊರಗಣ ಮಲತ್ರಯಕ್ಕೆ ಒಳಗಣ ಅರಿವ ನೀಗಾಡಲೇಕೆ? ಅಲ್ಪ ಸುಖಕ್ಕೆ ಮಚ್ಚಿ ಕುಕ್ಕುರನಂತೆ ಸಿಕ್ಕಿ ಸಾಯಲೇಕೆ,–ನಿಶ್ಚಯವಾಗಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗನನರಿಯಬಲ್ಲಡೆ?

೮೫

ಎತ್ತ ಸುತ್ತಿ ಬಂದಡೂ ಊರಿಗೆ ಬಪ್ಪುದು ತಪ್ಪದು. ಹಲವು ಮಾತನಾಡಿದಡೇನು? ಮೂರು ಮಲನ ಮರೆದಿರಬೇಕು. ಹೊಲಬುದಪ್ಪಿದ ಮೃಗ

ಬಲೆಯೊಳಗೆ ಬಿದ್ದಂತಾಗಬೇಡ. ಇದನರಿತು ಬದುಕೆಂದ ಅಂಬಿಗ ಚೌಡಯ್ಯ.

೮೬

ಸಂಸಾರದ ಸುಖವೆತ್ತ? ನಿಮ್ಮ ನಿಜ ಸುಖವೆತ್ತ? ಕತ್ತಲೆಯತ್ತ? ಬೆಳಗೆತ್ತ? ಎನ್ನಂತರಂಗದೊಳಗಿದ್ದು ತೋರುವೆ, ಅಡಗುವೆ. ಇದೇನು ಗಾರುಡಿತನ? ನನಗೆ ಸವಿಪಾಲು ಸಕ್ಕರೆಯನುಣಕಲಿಸಿ, ಬೇವನುಣಿಸಿಹೆನೆಂದರೆ, ಅದು ಹಿತವಹುದೇ? ನಿನ್ನ ನಿಜಸುಖವನುಣಗಲಿಸಿ ಸಂಸಾರ ಸುಖವನುಣಿಸಿಹೆನೆಂದರೆ ಮನ ಕೊಂಬುದೆ? ಎನ್ನೊಡನೆ ವಿನೋದವೇ ನಿನಗೆ? ಬೇಡ ಬೇಡ. ಎನ್ನ ನೀನರಿದು ಸಲಹು. ನಿನಗೆ ಎನ್ನಾಣೆಯಯ್ಯ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೮೭

ಸಂಸಾರವೆಂಬ ಘೋರಾರಣ್ಯದೊಳಗೊಬ್ಬಳು ಜಗವ ನುಂಗಿ ಉಗುಳುವ ಬಲುರಕ್ಕಸಿಯಿದ್ದಾಳೆ. ಗಜ ವ್ಯಾಘ್ರ ಕ್ರೂರಮೃಗಂಗಳ ಭಯ ಘನ. ಹುಲ್ಲ ಬಿಲ್ಲಿನವ, ಕೈಯ ಹಗ್ಗದವ, ಇವರಿಬ್ಬರು ಬಲು ಚೋದ್ಯರು ಕಣುವೆಯ ಕಟ್ಟಿ ಐದಾರೆ. ಆ ಕಡೆಗಡಿಯಿಡದಿರಣ್ಣಾ. ಭಕ್ತಿ ಗ್ರಾಮದತ್ತ ನಡೆಯಿರಣ್ಣಾ. ಎಡರಾಪತ್ತುಗಳಲ್ಲಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಭಕ್ತಿಗ್ರಾಮದಲ್ಲಿ ಸುಖವಿಹಿರಣ್ಣಾ.

೪

ಮಾನವನ ಮರೆಯಲ್ಲಿ ಮಹಾದೇವ

೧. ಒಳಗೆ ಎಚ್ಚರ

೧

ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ. ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥಾ !

೨

ಅಡಗಿನೊಳಗಣ ಹಾಲು ಅಡಗಿಪ್ಪ ಭೇದವನು, ಬೆಡಗಪ್ಪ ತುಪ್ಪದ ಕಂಪಿನ ಪರಿಯನು, ಎಲೆ ಮೃಡನೇ, ನೀನು ಪ್ರಾಣ ಪ್ರಕೃತಿಗಳೊಳಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ ?

೩

ಎಣ್ಣೆ ಇದ್ದು ಎಳ್ಳು ನನೆಯದ ಭೇದವ, ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ, ಕಾಮವಿದ್ದುರ್ ಕನ್ನೆಯನನುಭವಿಸದ ಭೇದವ, ಪರನಿದ್ದು ಪ್ರಾಣನ ಪ್ರಕೃತಿಯು ಹರಿಯದ ಭೇದವ ನರರೆತ್ತ ಬಲ್ಲರೈ ರಾಮನಾಥಾ ?

೪

ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೋ ? ಬೆಳಗೂ ಅದೆ, ಕತ್ತಲೆಯೂ ಅದೆ ! ಇದೇನು ಚೋದ್ಯವೋ ? ಒಂದಕ್ಕೊಂದಂಜದು. ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು ಬೆರಗಾದೆನು ಕಾಣಾ ಗೊಹೇಶ್ವರಾ !

೫

ಜಲದೊಳಗಿದ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತ್ತು ನೋಡಾ ! ನೆಲೆಯನರಿದು ನೋಡಿಹೆನೆಂದಡೆ ಅದು ಜಲವು ತಾನಲ್ಲ. ಕುಲ

ದೊಳಗಿದ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರು? ಹೊರಗೊಳಗೆ ತಾನಾಗಿದ್ದು ಮತ್ತೆ ತಲೆದೋರದಿಪ್ಪುದು,–ಗೊಹೇಶ್ವರಾ, ನಿಮ್ಮ ನಿಲವು ನೋಡಾ.

೬

ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ? ಬೀಜದೊಳಗಣ ವೃಕ್ಷ ಉಲಿಯ ಬಲ್ಲುದೆ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು. ಗೊಹೇಶ್ವರಾ, ನಿಮ್ಮ ನಿಲವನನುಭವಸುಖಿ ಬಲ್ಲ.

೭

ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿದ ಮಿಂಚಿನಂತೆ, ಬಯಲ ಮರೆಯಲಡಗಿದ ಮರೀಚಿಯಂತೆ, ಕಂಗಳ ಮರೆಯಲಡಗಿದ ಬೆಳಗಿನಂತೆ,–ಗೊಹೇಶ್ವರಾ, ನಿಮ್ಮ ನಿಲವು.

೮

ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಕನೊಳಡಗಿದ ಚಿತ್ರಪಟದಂತಿದ್ದಿತ್ತು. ಆಲಿಯೊಳಗಣ ತೇಜದ ಗೋಪ್ಯದಂತಿದ್ದಿತ್ತು. ನುಡಿಯೊಳಡಗಿದ ಅರ್ಥದಂತೆ ಇದ್ದಿತ್ತು,–ಕೂಡಲಸಂಗಯ್ಯಾ, ನಿಮ್ಮ ನಿಲವು.

೯

ಸಣ್ಣ ನನೆಯೊಳಗಣ ಪರಿಮಳವ ಹೊರಸೂಸಿ ಇದಿರಿಂಗರುಹಿಸ ಬಲ್ಲುದೇ ವಾಯು? ಕೊಡಗೂಸಿನೊಳಗಣ ಮೊಲೆ ಮುಡಿಯ, ಹಡೆದ ತಾಯಿ ತಂದೆಗಳೆಂದರೆ ಕಾಣಿಸಿಕೊಡಬಲ್ಲರೇ ಕಾಂಬವರ ಕಣ್ಣಿಂಗೆ? ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ರಾಮನಾಥಾ.

೧೦

ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನಾರು ಅರಿಯ ಬಾರದು.

೧೧

ಕಾಯಕ್ಕೆ ಕಾಯವಾಗಿ, ಜೀವಕ್ಕೆ ಜೀವನಾಗಿ, ಭಾವಕ್ಕೆ ಭಾವವಾಗಿ ಇದ್ದುದನಾರು ಬಲ್ಲರೋ? ಆದನು ದೂರವೆಂದು, ಸಮೀಪವೆಂದು, ಮಹಾಂತ ಗೊಹೇಶ್ವರನ ಒಳಗೆಂದು ಹೊರಗೆಂದು, ಅರಿಯದೆ ಬರುಸೂರೆ ವೋದರು.

೧೨

ಕಣ್ಣೊಳಗೆ ಕಣ್ಣಿರ್ದು ಕಾಣಲರಿಯರಯ್ಯಾ! ಕಿವಿಯೊಳಗೆ ಕಿವಿ ಇರ್ದು ಕೇಳಲರಿಯರಯ್ಯಾ! ಘ್ರಾಣದೊಳಗೆ ಘ್ರಾಣವಿರ್ದು ಘ್ರಾಣಿ ಸಲರಿಯರಯ್ಯಾ! ಜಿಹ್ವೆಯೊಳಗೆ ಜಿಹ್ವೆ ಇರ್ದು ರುಚಿಸಲರಿಯರಯ್ಯಾ! ತ್ವಕ್ಕಿನೊಳಗೆ ತ್ವಕ್ಕಿರ್ದು ಸ್ಪರ್ಶನವ ಮಾಡಲರಿಯರಯ್ಯಾ! ಪ್ರಾಣದೊಳಗೆ ಪ್ರಾಣವಿರ್ದು ಪ್ರಾಣನ ಪರಿಯನರಿಯರಯ್ಯಾ! ಕಾಯದೊಳಗೆ ಕಾಯ ವಿರ್ದು ಬಿಡದು, ಬೇರಾಗದು. ಕೂಡಲಚೆನ್ನಸಂಗಮದೇವಾ, ನೀವಿಕ್ಕಿದ ಅಣಕದ ತೊಡಕಿನ ಭೇದವ ಭೇದಿಸಬಾರದಯ್ಯಾ.

೧೩

ಆಡಬಾರದ ಬಯಲು ನೋಡಬಾರದ ಬಯಲು, ನುಡಿಯಬಾರದ ಬಯಲು ಹಿಡಿಯಬಾರದ ಬಯಲು. ಈ ಒಡಲಿಲ್ಲದ ಬಯಲೊಳಗಡಗಿಪ್ಪ ಭೇದವ ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

೧೪

ಎನ್ನ ನಾನರಿಯದಂದು ಮುನ್ನ ನೀನೆಲ್ಲಿರ್ದೆ ಹೇಳಯ್ಯ! ಚಿನ್ನದೊಳಗಣ ಬಣ್ಣದಂತೆ, ಎನ್ನೊಳಗಿರ್ದೆಯಯ್ಯ! ಎನ್ನೊಳಗೆ ಇರ್ದು ವೈದೋರದ ಭೇದವ ನಿಮ್ಮಲ್ಲಿ ಕಂಡೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

೧೫

ಅಂಗ ಲಿಂಗ ಸಂಬಂಧದಿರವು ಬೀಜವೊಡೆದು ಮೊಳೆದೋರುವಂತೆ, ಕುಸುಮ ಬಲಿದು ದೆಸೆಗೆ ವಾಸನೆ ಪಸರಿಸುವಂತೆ, ಭೂಜಲ ಉಣ್ಮಿ ಪರಿವಂತೆ. ಘನಲಿಂಗ ಘಟಕುರುಹಿನಲ್ಲಿ ನಿಜದೋರುತ್ತಿದೆ. ಐಘಟದೂರ ರಾಮೇಶ್ವರ ಲಿಂಗಮೂರ್ತಿ ಅಮೂರ್ತಿ ಆಗುತ್ತಿದೆ.

೧೬

ಅಂಗದ ಮೇಲಣ ಲಿಂಗವ ಹಿಂಗಿದಾತನ ಭವಿಯೆಂಬರು, ಅಂಗದ ಮೇಲೆ ಲಿಂಗವಿಪ್ಪಾತನ ಭಕ್ತನೆಂಬರು,-ಅಂಗದೊಳಗೆ ನೆಲಸಿಪ್ಪ ಲಿಂಗದ ಹೊಲಬನರಿಯದೆ. ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿದುದುಂಟೆ ಜಗದೊಳಗೆ? ಅಂಗದೊಳಗಣ ಲಿಂಗವನು ಹಿಂಗಿದವರಿಗೆ ಭವಮಾಲೆಯುಂಟು; ಹಿಂಗದವರಿಗೆ ಭವಮಾಲೆಯಿಲ್ಲ ಗೊಹೇಶ್ವರಾ.

೧೭

ಉಲಿವ ತರುವಲಿಗಳೆಲ್ಲ ಗಿಳಿವಿಂಡುಗೆಡೆದಿಹರು. ಅರಿಯದ ಮೌನಿಯ ಮುಕ್ತಿಯದೇನೋ? ಅರಿದರದೇನು, ಅರಿಯದಿದ್ದರೇನು, ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕ? ಅಂಗದಲ್ಲಿ ಒದಗಿದ ಲಿಂಗವನರಿಯದೆ ಭಂಗಬಟ್ಟರು ಕಾಣಾ ಗೊಹೇಶ್ವರಾ.

೧೮

ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ, ಒಡಲ ಬೆಳಗುವ ಪರಿಯ ನೋಡಾ! ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ! ಪರಮ ಚೈತನ್ಯ ನಿರಾಳ ಗೊಹೇಶ್ವರಲಿಂಗವು ನೋಡಾ.

೧೯

ಪರಮಾತ್ಮನ ಪ್ರತಿಲಹರಿಯಿಂದ ಅಂತರಾತ್ಮನುತ್ಪತ್ಯ. ಅಂತ ರಾತ್ಮನ ಪ್ರತಿಲಹರಿಯಿಂದ ಜೀವಾತ್ಮನುತ್ಪತ್ಯ. ಅಂತಪ್ಪ ಜೀವಾಂತ ರಾತ್ಮಾದಿಗಳು ಅಂಗ ಪ್ರಾಣವಾದಲ್ಲಿ ಒಂದೆಯೆನಿಸಿದರು. ಆ ಒಂದೆಯೆಂಬ ತಾಮಸ ಜೀವನು ಅಂಗನೆಯರ ಸಂಗ ಮೊದಲಾದ ನಾನಾ ದುಃಖಂಗಳಲ್ಲಿ ನೋವುತ್ತ, ನಾನಾ ಯೋನಿಗಳಲ್ಲಿ ಜನಿಸುತ್ತ, ರೌರವನರಕದಲ್ಲಿ ಆಳುತ್ತ ಮುಳುಗುತ್ತಲಿಹನು. ಆ ಪರಮಾತ್ಮನು ಜೀವಾತ್ಮನ ಶಿರೋಮಧ್ಯದಲ್ಲಿರ್ದು ನಾಹಂ ಎನ್ನದೆ ಸೋಹಂ ಎನ್ನುತ್ತ, ಚಿಮ್ಮಲಿಗೆಯ ಚೆನ್ನರಾಮನೆಂಬ ಅಖಂಡ ಲಿಂಗದೊಳಗೆ ನಿತ್ಯತ್ವವನೆಯ್ದಿ, ಎಡೆಬಿಡುವಿಲ್ಲದೆ ಪರಮಸಂತೋಷ ದೊಳಿದ್ದಿತ್ತು.

೨೦

ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ. ಜಲವೊಂದೆ ಶೌಚಾಚ ಮನಕ್ಕೆ. ಕುಲವೊಂದೆ ತನ್ನ ತಾನರಿದವಂಗೆ. ಫಲವೊಂದೆ ಷಡುದರುಶನ ಮುಕ್ತಿಗೆ. ನಿಲವೊಂದೆ,–ಕೂಡಲಸಂಗಮದೇವಾ, ನಿಮ್ಮನರಿದವಂಗೆ.

೨೧

ನೆಲದೊಳಗಿನ ಮಧುರದಂತೆ, ಶಿಲೆಯೊಳಗಣ ಜ್ಯೋತಿಯಂತೆ, ಶಬ್ದದೊಳಗಣ ನಿಶ್ಶಬ್ದದಂತೆ, ಕಪ್ಪಿನೊಳಗಣ ರೂಪಿನಂತೆ ಇರ್ದಿರಯ್ಯ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೆ.

೨೨

ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಗೊಹೇಶ್ವರಾ, ನಿಮ್ಮ ಶರಣ ಸಂಬಂಧ.

೨೩

ಪಿಂಡ ಪಿಂಡವೆಂದೇನು? ತನು ಪಿಂಡವೆ? ಮನ ಪಿಂಡವೆ? ವಾಯು ಪಿಂಡವೆ? ಅಲ್ಲ. ಆದಿಪಿಂಡವಿಡಿದು ಬಂದ ಜ್ಞಾನಪಿಂಡವೇ ಪಿಂಡ. ಅದನರಿಯಲಿಲ್ಲಾ,—ಅದು ಕ್ಷೀರದೊಳಗಣ ಆಜ್ಯದಂತೆ, ಪಾಷಾಣದೊಳಗಣ ಪಾವಕದಂತೆ ಅಡಗಿಪ್ಪುದಾಗಿ. ಅಂತಪ್ಪ ನಿರ್ಮಲಪಿಂಡ ನಿಮ್ಮ ಶರಣಂಗಾಯಿತ್ತು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೨೪

ಎನ್ನ ತನುವಿನ ಮರೆಯಲ್ಲಿರ್ದ ಚಿನುಮಯನ ಅರಸುವ ಬನ್ನಿರೇ. ಎನ್ನ ಮನದ ಮರೆಯಲ್ಲಿರ್ದ ಮಹಾಘನವಸ್ತುವ ಹುಡುಕುವ ಬನ್ನಿರೇ. ಎನ್ನ ಪ್ರಾಣದ ಮರೆಯಲ್ಲಿರ್ದ ಪರಬ್ರಹ್ಮವೆಂಬ ಅಖಂಡೇಶ್ವರನ ನೋಡುವ ಬನ್ನಿರೇ.

೨೫

ಕುಂಭಸಹಸ್ರ ಉದಕದೊಳಗೆ ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ ಮತ್ತೆ ಹಲಬರುಂಟೆ ಅಯ್ಯಾ? ಸಕಲ ದೇಹದೊಳಗೆ ಸಂಭ್ರಮಿಸಿ ತುಂಬಿರ್ಪ ಪರವಸ್ತು ನೀನೊಬ್ಬನಲ್ಲದೆ ಮತ್ತಾರನು ಕಾಣೆನಯ್ಯಾ ಅಖಂಡೇಶ್ವರಾ.

೨. ಯಾರು ನಾನು?

೨೬

ತನ್ನ ಮರೆದು ದೇವರ ಕಂಡಿಹೆನೆಂದೆಂಬರು. ತನ್ನುವ ಮರೆದು ದೇವರ ಕಂಡಿಹೆನೆಂಬ ಕಾರಣ, ಹರಿ ಸುರ ಬ್ರಹ್ಮಾದಿಗಳೆಲ್ಲರೂ ತಲೆ ಕೆಳಗಾಗಿ ಹೋದರು. ಆ ದೇವರ ಮರೆದು ತನ್ನುವನರಿದರೆ ತಾನೇ ನಿಜವೆಂದನಂಬಿಗರ ಚೌಡಯ್ಯ.

೨೭

ತನ್ನ ಹುಸಿ ಮಾಡಿ ಇನ್ನೊಂದ ದಿಟ ಮಾಡುವ ಅಣ್ಣಂಗೆ ನಂಬುಗೆ ಇನ್ನಾವುದೋ? ತನ್ನೊಳಗಣ ಘನವ ತಾ ತಿಳಿಯಲರಿಯದೆ, ಪರಬ್ರಹ್ಮಕ್ಕೆ ತಲೆವಾರನಿಕ್ಕಿ ಸೆಳೆದಿಹೆನೆಂಬಣ್ಣ ಗಾವಿಲನೆಂದಾತನಂಬಿಗ ಚೌಡಯ್ಯ.

೨೮

ಅಜ್ಞಾನ ಸುಜ್ಞಾನಗಳೆರಡೂ ಶಿವನೆಂದರೆ, ಶಿವಜ್ಞಾನಿಗಳು ಮೆಚ್ಚು ವರೆ? ಶಿವ ಶಕ್ತಿಗಳೆರಡೂ ನೀನೆ ಎಂದರೆ, ಮಹಾನುಭಾವಿಗಳು ಪರಿಣಾಮಿ ಸುವರೆ? ತನ್ನ ತಾನಾರೆಂಬುದನರಿಯದೆ, ಅನ್ಯವೆಲ್ಲವೂ ಬೊಮ್ಮವೆಂಬ ಈ ಕರ್ಮದ ನುಡಿಯ ಮೆಚ್ಚುವನೆ ನಮ್ಮ ಗೊಹೇಶ್ವರಲಿಂಗವು?

೨೯

ತನುವಿಂಗೆ ತನುವಾಗಿ, ಮನಕ್ಕೆ ಮನವಾಗಿ, ಜೀವಕ್ಕೆ ಜೀವವಾಗಿ ಇದ್ದುದನಾರು ಬಲ್ಲರೋ? ಅದು ದೂರವೆಂದು, ಸಮೀಪವೆಂದು, ಮಹಂತ ಗೊಹೇಶ್ವರನೊಳಗೆಂದು, ಹೊರಗೆಂದು, ಬರುಸೂರೆವೋದರು.

೩೦

ಓದಿ ಬೋಧಿಸಿ ಇದಿರಿಂಗೆ ಹೇಳುವನ್ನಬರ ಚದುರತೆಯಲ್ಲವೆ? ತಾ ತನ್ನನರಿದಲ್ಲಿ, ಅರಿಕೆ ಇದಿರಿಗೆ ತೋರದಲ್ಲಿ ಅದೇ ದೇವತ್ವವೆಂದನಂಬಿಗ ಚೌಡಯ್ಯ.

೩೧

ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತೆ, ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು, ಇಂದ್ರಿಯಂಗಳ ಇಚ್ಛೆ ಯಲ್ಲಿ ತ್ರಿವಿಧವ ಹಿಡಿದಿರುವವರ ಸಂದಿಯಲ್ಲಿ ನುಸುಳದೆ, ವಸ್ತುವಿನ ಅಂಗ ದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ ಮಹಾನಿಜದ ನೆಲೆ. ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಇದೆ ಬಟ್ಟೆ.

೩೨

ಅರಿದೆನೆಂದರೆ ಅರಿಯಬಾರದು ನೋಡಾ! ಘನಕ್ಕೆ ಘನ ತಾನೆ ನೋಡಾ! ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಪೋದೆನು.

೩೩

ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೇ? ಸೂರ್ಯಕಾಂತಿಯಲ್ಲಿದ್ದ ಗ್ನಿಯನಾರು ಭೇದಿಸಬಲ್ಲರು? ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನಾ, ನೀನೆನ್ನೊಳಡಗಿರ್ದ ಪರಿಯ ಬೇರಿಲ್ಲದೆ ಕಂಡು ಕಣ್ದೆರೆದೆನು.

೩೪

ನಾದ ಮುನ್ನವೋ, ಬಿಂದು ಮುನ್ನವೋ? ಜೀವ ಮುನ್ನವೋ, ಕಾಯ ಮುನ್ನವೋ? ಜೀವ ಕಾಯದ ಕುಳಸ್ಥಳಂಗಳ ಬಲ್ಲವರು ನೀವು ಹೇಳಿರೇ? ಗೊಹೇಶ್ವರ, ನೀನು ಮುನ್ನವೋ, ನಾನು ಮುನ್ನವೋ, ಬಲ್ಲವರು ನೀವು ಹೇಳಿರೇ?

೩೫

ನಾನೆಂಬುದು ಅಹಂಕಾರ, ನೀನೆಂಬುದು ಮಾಯೆ; ನಾನು ನೀನೆಂಬ ಉಭಯವಳಿದರೆ ನಾನೆಂಬವನೂ ನೀನೆಂಬವನೂ ನೀನೇ ಅಯ್ಯ. ಇವೆರಡರ ಭೇದವೆಲ್ಲಿಯದೋ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೩೬

ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮನಾಯಿತ್ತು. ಪರಮಾತ್ಮನೇ ಲಿಂಗ, ಜೀವಾತ್ಮನೇ ಅಂಗ, ಸಂಗವೇ ಏಕಾತ್ಮ. ತತ್ ಪದವೇ ಪರಮಾತ್ಮ, ತ್ವಂ ಪದವೇ ಜೀವಾತ್ಮ, ಅಸಿ ಪದವೇ ತಾದಾತ್ಮ್ಯ ವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩೭

ನಿತ್ಯನಿರಂಜನ ತಾನೆಂದರಿಯದೆ, ತತ್ವಮಸಿಯೆಂದು ಹೊರಗನೆ ಬಳಸಿ, ಸತ್ತಿತ್ತಲ್ಲಾ ಜಗವೆಲ್ಲಾ ನಾಯ ಸಾವ! ತಮ್ಮ ತಾವರಿಯದೆ, ಸತ್ತವರ ಹೆಸರ ಪತ್ರವನೋದಿದಡೆ ಆದೆತ್ತಣ ಮುಕ್ತಿ ಗೊಹೇಶ್ವರಾ?

೩೮

ಪಿರಹದಲುತ್ಪತ್ಯವಾದವರ ಮಾಯದ ಬೇಳುವೆ ಹತ್ತಿತ್ತಲ್ಲಾ! ಸ್ವರೂಪ ನಿರೂಪೆಂದರಿಯರು. ಹೆಸರಿಟ್ಟು ಕರೆವ ಕಷ್ಟನೋಡಾ ಗೊಹೇಶ್ವರಾ!

೩೯

ಅಗ್ನಿ ಮುಟ್ಟಲು ತೃಣ ಭಸ್ಮವಾದುದನೆಲ್ಲರೂ ಬಲ್ಲರು. ತೃಣದೊಳಗೆ ಅಗ್ನಿ ಉಂಟೆಂಬುದ ತಿಳಿದು ನೋಡಿರೇ! ಅಗ್ನಿ ಜಲವ ನುಂಗಿತ್ತು, ಜಲ ಅಗ್ನಿಯ ನುಂಗಿತ್ತು. ಪೃಥ್ವಿಯೆಲ್ಲವ ನುಂಗಿತ್ತು, ಆಕಾಶವನೆಯ್ದೆ ನುಂಗಿತ್ತು. ಅರಿದೆನೆಂಬ ಜಡರುಗಳು ನೀವು ತಿಳಿದು ನೋಡಿರೇ! ತಿಳಿಯಬಲ್ಲಡೆ ಗೊಹೇಶ್ವರನ ನಿಲವು ತಾನೇ.

೪೦

ಅರಸಿ ಅರಸಿ ಹಾಹಾ ಎನುತಿದ್ದೆನು. ಬೆದಕಿ ಬೆದಕಿ ಬೆದಬೆದ ಬೇವುತ್ತಿದ್ದೆನು. ಗೊಹೇಶ್ವರ, ಕಣ್ಣ ಮೊದಲಲ್ಲಿದ್ದವನ ಕಾಣೆನು!

೪೧

ತನ್ನೊಳಗಣ ಅರಿವು ತನ್ನಲ್ಲಿ ತೋರಿದಲ್ಲದೆ ಅನ್ಯರಲ್ಲಿ ತೋರಬಲ್ಲುದೇ? ತನ್ನಲ್ಲಿ ತಾನೆ ಇದ್ದಂತೆ ಇದ್ದಿತ್ತು. ತನ್ನ ತಾನೇ ಪಕ್ವಕ್ಕೆ ಬಂದು, ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯಾ ರಾಮನಾಥಾ?

೪೨

ಘಟವನೊಡೆದು ಬಯಲ ನೋಡಲದೇಕೆ? ಆ ಘಟದೊಳಗಿಪ್ಪುದೆ ಬಯಲೆಂದರಿದೊಡೆ ಸಾಲದೇ? ಪಟವ ಹರಿದು ತಂತುವ ನೋಡಲದೇಕೆ?

ಆ ಪಟವೇ ತಂತುವೆಂದರಿದೊಡೆ ಸಾಲದೇ? ಕಟಕವ ಮುರಿದು ಕಾಂಚನವ ನೋಡಲದೇಕೆ? ಆ ಕಟಕವೇ ಕಾಂಚನವೆಂದರಿದೊಡೆ ಸಾಲದೇ? ತನ್ನ ನಳಿದು ಘನವ ನೋಡಲದೇಕೆ? ತಾನೇ ಘನವೆಂದರಿದೊಡೆ ಸಾಲದೆ ಹೇಳಾ ರಾಮನಾಥಾ?

೪೩

ಎಲ್ಲ ಎಲ್ಲವನರಿದು ಫಲವೇನಯ್ಯ, ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೇ? ಚೆನ್ನಮಲ್ಲಿಕಾರ್ಜುನ, ನೀ ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದಲರಿದೆನಯ್ಯ ಪ್ರಭುವೇ.

೪೪

ನಿಮ್ಮಲ್ಲಿ ನೀವು ತಿಳಿದು ನೋಡಿರೇ! ಅನ್ಯವಿಲ್ಲ ಕಾಣಿರಣ್ಣ! ಅರಿವು ನಿಮ್ಮಲ್ಲಿಯೇ ತದ್ಗತವಾಗಿಯದೆ! ಅನ್ಯಭಾವವ ನೆನೆಯದೆ, ತನ್ನೊಳಗೆ ತಾನೆಚ್ಚರ ಬಲ್ಲಡೆ ತನ್ನಲ್ಲಿಯೆ ತನ್ಮಯ ಗೊಹೇಶ್ವರ ಲಿಂಗವು.

೪೫

ಈಶ್ವರನನ್ನು ಕಾಂಬುವುದೊಂದಾಸೆಯುಳ್ಳೊಡೆ ಪರದೇಶಕ್ಕೆ ಹೋಗಿ ಬಳಲದಿರು. ಕಾಶಿಯಲ್ಲಿ ಕಾಯುವ ವಿನಾಶವ ಮಾಡಲು ಬೇಡ. ನಿನ್ನಲ್ಲಿ ನೀ ತಿಳಿದು ನೋಡಾ. ಜಗವು ನಿನ್ನೊಳಗೆಂದಾತ ನಮ್ಮ ಅಂಬಿಗರ ಚೌಡಯ್ಯನು.

೪೬

ಅನುದಿನಂಗಳೆಂಬುವು ಪ್ರಣಿತೆಯಾಗಿ, ವರುಷಂಗಳೆಂಬುವು ಬತ್ತಿಯಾಗಿ, ಜೀವಜಾತಿಯ ಬೆಳಗಿನ ಬೆಳಗ ಬೆಳಗಿನಲರಸಬೇಕು. ಬೆಳಗುಳ್ಳಲ್ಲಿ ಆತ ನಡೆಸಿದಂತೆ ನಡೆಯಬೇಕು. ಬೆಳಗುಳ್ಳಲ್ಲಿ ಆತನಿರಿಸಿದಂತೆ ಇರ

ಬೇಕು. ಎಣ್ಣೆಯೆಂಬ ಜವ್ವನ ಸವೆಯದ ಮುನ್ನ, ಬೆಳಗು ಕತ್ತಲೆಯಾಗದ ಮುನ್ನ, ರೇಕಣ್ಣಪ್ರಿಯ ನಾಗಿನಾಥನ ಬೆಳಗ ಬೆಳಗಿನಲರಸಬೇಕು.

೪೭

ನನ್ನಿಂದ ಅರಿದೆನೆಂಬೆನೇ, ನನ್ನಿಂದ ಅರಿದವನಲ್ಲ. ನಿಮ್ಮಿಂದ ಅರಿದೆನೆಂಬೆನೇ ನಿಮ್ಮಿಂದ ಅರಿದವನಲ್ಲ. ಅದೇನು ಕಾರಣವೆಂದರೆ, ಕಣ್ಣಬೆಳಗು ಸೂರ್ಯ ಬೆಳಗು ಕೂಡಿ ಕಾಂಬಂತೆ, ನನ್ನ ನಿನ್ನರುವಿನ ಸಂಬಂಧ ಬೆಂಬಳಿಯುಲಿ ಅರಿದೆನು ಕಾಣಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೪೮

ಒಂದ ಬಿಟ್ಟೊಂದ ಹಿಡಿದಿಹೆನೆಂದಲ್ಲಿ ಸಿಕ್ಕಿತ್ತು ಅರಿವು,-ತಮಂಧವೆಂಬ ಮಂದಿರದಲ್ಲಿ. ಹಿಡಿದುದ ಬಿಟ್ಟು, ವಾರಿಯಲ್ಲಿ ಹೊಳಹುದೋರಿದ ಮಚ್ಚಕ್ಕೆ ಹೋಹ ಶಿವಬುದ್ಧಿಯಂತಾಗಬೇಡ. ಹಿಡಿದಲ್ಲಿ ಕಂಡು, ಕಂಡಲ್ಲಿ ನಿಂದು, ನಿಂದಲ್ಲಿ ಕೂಡಿ, ಕೂಡಿದಲ್ಲಿಯೇ ಉಭಯ ಬಯಲಾಯಿತ್ತು. ಐಘಟದೂರ ರಾಮೇಶ್ವರಲಿಂಗವು ತಾನು ತಾನೇ.

೪೯

ಅರಿವು ಅರಿವೆನ್ನುತ್ತಿಪ್ಪಿರಿ, ಅರಿವು ಸಾಮಾನ್ಯವೆ? ಹಿಂದಣ ಹಜ್ಜೆಯ ನೋಡಿ ಕಂಡಲ್ಲದೆ, ನಿಂದ ಹಜ್ಜೆಯನರಿಯಬಾರದು. ಮುಂದಣ ಹಜ್ಜೆಯನಿಳಿದಲ್ಲದೆ, ಒಂದು ಪಾದ ನೆಲೆಗೊಳ್ಳದು. ನೆಲನ ಬಿಟ್ಟು, ಆಕಾಶದಲ್ಲಿ ನಿಂದು, ಮುಗಿಲೊಳಗೆ ಮಿಂಚಿದಲ್ಲದೆ ತಾನಾಗಬಾರದು. ಗೊಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ?

೫೦

ಹಿಡಿದಾಚಾರವ ಬಿಡದನ್ನಕ್ಕರ, ಎನ್ನ ಅರಿವು ಮರೆಯದನ್ನಕ್ಕರ, ಎನ್ನ ಮನವ ಸುಡದನ್ನಕ್ಕರ, ಎನ್ನ ಬೆಡಗಿನ ಗುರುವ ತೊರೆಯದನ್ನಕ್ಕರ,

ಸುಸುರವೆಂತಪ್ಪುದೊ ಹೇಳಾ ? ಹೋಹ ಬಟ್ಟೆಯನರಿಯದನ್ನಕ್ಕರ ತಾನಾಗ ಬಾರದು ಕಾಣಾ ಎನ್ನ ಅಜಗಣ್ಣತಂದೆಯಂತೆ.

೫೧

ಬೆಳಗಿನ ಬೀಜ ಮಹಾಬೆಳಗು ಕತ್ತಲೆಯನೊಳಕೊಂಡು ಕಣ್ದೆರೆವ ಪರಿಯ ನೋಡಾ ! ತಿಳಿವಡೆ ಬೆಳಗಲ್ಲ. ಒಳಗೊಳಗೆ ಹೊಳೆವ ಕಳೆ ಇದೇನೋ ! ಅದೆಲ್ಲಿಂದ ಹುಟ್ಟಿ, ಅದೆಲ್ಲಿಂದ ತೋರಿತ್ತು ? ಅಲ್ಲಿಯೆ ಆಗಾಗಿ ಅಲ್ಲಿಯೆ ಬೆಳೆಯಿತ್ತು. ಚಿಮ್ಮಲಿಗೆಯ ಚೆನ್ನರಾಮನೆಂಬ ಮಹಾಘನ ಲಿಂಗದಲ್ಲಿಯೆ ಕಾಲೂರಿ ನಿಂದ ಪರಿಯನೇನೆಂಬೆ ?

೫೨

ಕ್ರೀ ಶುದ್ಧತೆಯಾದಲ್ಲಿ ಭಾವ ಶುದ್ಧವಾಗಿಪ್ಪುದು. ಭಾವ ಶುದ್ಧವಾಗಿಪ್ಪಲ್ಲಿ ಸರ್ವೇಂದ್ರಿಯಂಗಳು ಏಕೇಂದ್ರಿಯವಾಗಿ ಚಿತ್ತ ಶುದ್ಧವಾಗಿಪ್ಪುದು. ಚಿತ್ತಶುದ್ಧಿ ಸಿದ್ಧಿಯಾದಲ್ಲಿ ಸರ್ವಜ್ಞಾನಸಂಪನ್ನನಪ್ಪನು. ಆ ಗುಣ ನಿಜ ನೆಲೆಯಾದಲ್ಲಿ, ಗೋಪತಿನಾಥ ವಿಶ್ವೇಶ್ವರಲಿಂಗವು ಬೆಚ್ಚಂತಿಪ್ಪನು.

೫೩

ಅಯ್ಯಾ, ತನ್ನ ತಾನರಿದು, ತನ್ನ ಅಜ್ಞಾನ ಆಶಾಪಾಶ ಅನಾಚಾರ ಅಸತ್ಯ ನಡೆನುಡಿಗಳ ತಾನರಿದು, ತನ್ನ ದುರ್ಗುಣಗಳ ನೀಗಿ ನಿಜದಲ್ಲಿ ನಿಂದಡೆ, ತಾನೇ ಮಾಯಾತೀತ, ತಾನೇ ಗುಣಾತೀತ, ತಾನೇ ಸಗುಣ ನಿರ್ಗುಣಕ್ಕಾಧಾರ ಮೂರ್ತಿ, ತಾನೇ ಸಾಕಾರ ನಿರಾಕಾರಕ್ಕೆ ಚೈತನ್ಯ ಮೂರ್ತಿ ನಿಜವಸ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೫೪

ನೀವು ಹೊತ್ತಿಪ್ಪ ವೇಷದಲ್ಲಿ ತತ್ವವ ತಿಳಿದು ನೋಡಿರಣ್ಣಾ. ಜ್ಞಾನ ಬಿತ್ತಿಗೆಯ ಮೇಲೆ ನಿಂದು, ಅಂಗದ ನಿಚ್ಚಣಿಕೆಯನಿಕ್ಕಿ ಒತ್ತಿ ನಿಂದರೆ, ಉತ್ತರಜ್ಞಾನವೆಂಬುದು ನಿಮ್ಮ ಒತ್ತಿನಲ್ಲಿಪ್ಪುದು. ಇದ ನೋಡಿದರೆ ನಿಶ್ಚಯ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೫೫

ಅಯ್ಯಾ, ಅರಗಿನ ಮರದ ಮೇಲೆ ಗಿರಿ ಹುಟ್ಟಿತ್ತಯ್ಯ. ಆ ಗಿರಿಯ ತಪ್ಪಲಲ್ಲಿ ಸಪ್ತ ಶರಧಿಯಿಪ್ಪುವು. ಆ ಶರಧಿಯ ನಡುವೆ ತರು ಮರ ಗಿರಿ ಗಹ್ವರ ಖಗಮೃಗಂಗಳಿಪ್ಪುವು. ಆ ಭಾರವ ತಾಳಲಾರದೆ, ಅರಗಿನ ಮರದಡಿಯಲಿರ್ದ ಪರಮಜ್ಞಾನವೆಂಬ ಉರಿ ಎದ್ದು ಅರಗಿನ ಮರ ಮುರಿದೊರಗಿತ್ತು. ಗಿರಿ ನೆಲಕೆ ಬಿದ್ದಿತ್ತು. ಸಪ್ತ ಶರಧಿಗಳು ಬತ್ತಿದವು. ಇದ ಕಂಡು ನಾನಿವ್ರೊಳು ಬೆರಗಾಗಿ ನೋಡುತಿರ್ದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ !

೫೬

ಆತ್ಮಂಗೆ ಕಾಯವೆ ರೂಪು, ಆ ಕಾಯಕ್ಕೆ ಆತ್ಮನೆ ಹಾಹೆ. ಆ ಹಾಹೆಗೆ ಅರಿವೆ ಬೀಜ, ಆ ಬೀಜಕ್ಕೆ ಗೋಪತಿನಾಥ ವಿಶ್ವೇಶ್ವರಲಿಂಗವೆ ನಿರ್ಬೀಜ.

೫೭

ತಮಂಧಕಾರದೊಳು ಮೋಡವಿಲ್ಲದ ನಿರ್ಮಲವಾದ ಆಕಾಶದಂತೆ, ಎಲೆ ಇಲ್ಲದ ವೃಕ್ಷದಂತೆ, ರೆಕ್ಕೆ ಇಲ್ಲದ ಪಕ್ಷಿಯಂತೆ, ಗಾಳಿ ಇಲ್ಲದ ದೀಪದಂತೆ, ನೊರೆ ತೆರೆ ಬುದ್ಬುದಾಕಾರವಿಲ್ಲದ ಸಮುದ್ರದಂತಿರುವದೇ ಸಹಜ ಜ್ಞಾನವೆಂದು ಎನ್ನೊಳರುಹಿದಾತ ನಮ್ಮ ಶಾಂತಕೂಡಲಸಂಗಮದೇವ.

೫೮

ನಿಜದಿಂದ ಕ್ಷತ್ರಿಯನೆಂದು ತನ್ನ ನಿಜವನರಿದ ಕರ್ಣನ ವ್ಯಾಧಭಾವ ಬಿಡದಂತೆ, ತಾನು ತನ್ನ ನಿಜವನರಿದರೂ ಜಾತಿಯಾಶ್ರಮ ಗುಣಧರ್ಮ ಜೀವಾದಿ ಭೇದಂಗಳೊಳಗಾದ ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲರಿಯದ ಬಡಮನದ ಮನುಜರೆಲ್ಲರೂ ನಿಜಗುಣನ ನಿಜಭಾವದಲೂ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೆ ಹೇಳಾ ಚಿಮ್ಮಲಿಗೆಯ ಚೆನ್ನರಾಮಾ ?

೫೯

ಕಾಯುವ ಹೊತ್ತು ತಿರುಗಾಡುವನ್ನಬರ ನಾನರಿದೆನೆಂಬುದು ಹುಸಿಯಾಯಿತ್ತು. ಅರಿದಡೆ ತಾವರೆಯೆಲೆಯ ಬಿಂದುವಿನಂತೆ ಅಂಗಲೇಪವಿಲ್ಲದೆ ಗೊಹೇಶ್ವರಲಿಂಗವನರಿಯಬೇಕು ಸಂಗನ ಬಸವಣ್ಣಾ.

೬೦

ಮಾಯಾಮಲಿನ ಮನದಿಂದಗಲದೆ, ಕಾಯದ ದಂದುಗ ಕಳೆಯಿಂದಗಲದೆ, ಅರಿವು ಬರಿದೆ ಬಪ್ಪುದೆ? ನಿಜವು ಬರಿದೆ ಸಾಧ್ಯವಪ್ಪುದೆ ಮರುಳೆ? ಗೊಹೇಶ್ವರಲಿಂಗವನರಿಯಬಲ್ಲಡೆ, ನಿನ್ನ ನೀ ತಿಳಿದು ನೋಡಾ.

೬೧

ಆನು ನೀನೆಂಬುದು ತಾನಿಲ್ಲ. ತಾನರಿದ ಬಳಿಕ ಮತ್ತೇನೂ ಇಲ್ಲ ಇಲ್ಲ. ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪುದೋ? ಅನುವನರಿದು ತನುವ ಮರೆದು ಭಾವರಹಿತ ಗೊಹೇಶ್ವರ.

೬೨

ಬಂದುದನೆಲ್ಲವ ನುಂಗಿ, ಬಾರದುದನೆಲ್ಲವ ಹಿಂಗಿ, ಆರಿಗಿಲ್ಲದವಸ್ಥೆ ಎನಗಾಯಿತ್ತು. ಆ ಅವಸ್ಥೆ ಆರತು, ನೀನು ನಾನೆಂದರಿದೆ ಗೊಹೇಶ್ವರ.

೬೩

ಇಲ್ಲವೆಯ ಮೇಲೊಂದು ಉಂಟೆಂಬ ಪರಿಭಾವ. ಅಲ್ಲಿ ಇಲ್ಲಿ ಎನ್ನದೆ ತಾನೆ ನಿಂದಿತ್ತು ನೋಡಾ. ತನ್ನಲ್ಲಿಯ ಪ್ರಕೃತಿಯ ತಾನೆ ಹಿಂಗಿಸಲು, ಅಲ್ಲಿಯೆ ಸುಜ್ಞಾನ ಉದಯಿಸಿತ್ತು. ಎಲ್ಲಾ ಎಡೆಯಲ್ಲಿಯು ನಿಂದ ನಿಜಪದವ ಗೊಹೇಶ್ವರಾ, ನಿಮ್ಮ ಶರಣ ಬಲ್ಲ.

೬೪

ಪಂಚಮಹಾಪಾತಕಂಗಳು ಬೇವ ಠಾವ ಕಂಡೆ. ಸರ್ವದುಃಖಂಗಳು ಹೋಹ ಠಾವ ಕಂಡೆ. ಕಾಮನ ಕಯ್ಯ ಕೊಯ್ವ ಠಾವ ಕಂಡೆ. ಮಾಯೆಯ ಬಾಯ ಕಟ್ಟುವ ಠಾವ ಕಂಡೆ,–ಗೊಹೇಶ್ವರಲಿಂಗದಲ್ಲಿ ಕಣ್ಣು ತುಂಬಿ.

೬೫

ಹುಟ್ಟುವಾತ ನಾನಲ್ಲಯ್ಯ. ಹೊಂದುವಾತ ನಾನಲ್ಲಯ್ಯ. ಏನೆಂಬೆನಯ್ಯ ? ಅದೆಂತೆಂಬೆನಯ್ಯ? ನಿಜವನರಿದ ಬಳಿಕ, ಮರಳಿ ಹುಟ್ಟಲುಂಟೆ ಗೊಹೇಶ್ವರಾ ?

೬೬

ಜ್ಞಾನದ ಉಬ್ಬು ಕೊಬ್ಬಿನಲ್ಲಿ ಉಲಿವುತ್ತಿಪ್ಪವರೆಲ್ಲರು! ನಾಮ ನಾಸ್ತಿಯಾಗದು, ತನುಗುಣ ನಾಸ್ತಿಯಾಗದು; ಕರಣಂಗಳು ನಾಸ್ತಿಯಾಗವು, ಕರಸ್ಥಲ ನಾಸ್ತಿಯಾಗದು. ಇದೆತ್ತಣ ಉಲುಹೋ ಗೊಹೇಶ್ವರಾ ?

೬೭

ಅರಿದೆವರಿದೆವೆಂಬಿರಿ! ಅರಿದ ಪರಿಯೆಂತು ಹೇಳಿರೆ? ಅರಿದರರಿದೆವೆಂಬರೇ? ಅರಿಯಬಾರದ ಘನವನರಿದವರು ಅರಿಯದಂತಿಪ್ಪರು ಗೊಹೇಶ್ವರಾ.

೬೮

ತಟಾಕ ಒಡೆದಡೆ ಕಟ್ಟುವಡೆವುದಲ್ಲದೆ, ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಂಗೆ ಹಿಂಗಿ ನಿಂದುದುಂಟೆ? ಅರಿಯದವಂಗೆ ಅರಿಕೆಯ ಹೇಳಿದಡೆ

ಅರಿವನಲ್ಲದೆ, ಅರಿದು ಮರೆದವಂಗೆ ಬೇರೊಂದೆಡೆಯ ಹೇಳಿಹೆನೆಂದಡೆ ಕಡೆ ನಡು ಮೊದಲಿಲ್ಲವೆಂದನಂಬಿಗ ಚೌಡಯ್ಯ.

೬೯

ಅರಿವನರಿದಲ್ಲಿ ತಾನೆನ್ನದೆ ಇದಿರೆನ್ನದೆ, ಮತ್ತೇನುವ ಸಂಪಾದಿಸದೆ, ಅರುಣನ ಕಿರಣದಲ್ಲಿ ಅರತ ಸಾರದಂತೆ, ಕಾದ ಹಂಚಿನ ಮೇಲೆ ಬಿಟ್ಟ ನೀರಿನಂತೆ, ಬಧಿರನ ಕಾವ್ಯದಂತೆ, ಚದುರನ ಒಳ್ಪಿನಂತೆ ತಲೆದೋರದೆ ನಿಂದಾತ ನಡಿಗೆರಗುವೆನೆಂದನಂಬಿಗರ ಚೌಡಯ್ಯ.

೭೦

ಏನಾದರೆಯೂ ಸಾಧಿಸಬಹುದು ; ಮತ್ತೇನನಾದರೆಯೂ ಸಾಧಿಸಬಹುದಯ್ಯಾ. ತಾನಾರೆಂಬುದ ಸಾಧಿಸಬಾರದು,–ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ !

೭೧

ವಾಯುಗುಣವ ಸರ್ಪ ಬಲ್ಲುದು. ಮಧುರ ಗುಣವನಿರುಹೆ ಬಲ್ಲುದು. ಗೋತ್ರದ ಗುಣವ ಕಾಗೆ ಬಲ್ಲುದು. ವೇಳೆಯ ಗುಣವ ಕೋಳಿ ಬಲ್ಲುದು. ಇದು ಕಾರಣ ಮನುಷ್ಯಜನ್ಮದಲ್ಲಿ ಬಂದು ಶಿವಜ್ಞಾನವನರಿಯದಿದ್ದರೆ, ಆ ಕಾಗೆ ಕೋಳಿಗಳಿಂದ ಕರಕಷ್ಟ ಕಾಣಾ ಕಲಿದೇವರದೇವಾ.

೭೨

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ. ವಿಚಾರಿಸುವನ್ನಕ್ಕರ ನೀನಾನೆಂಬುದನೆತ್ತ ಬಲ್ಲೆ ? ಮರುಳೆ, ವಾಙ್ಮನೋತೀತವಾದ ಘನವು ವಿಚಾರಕ್ಕೆ ನಿಲುಕುವದೇ ? ಗೊಹೇಶ್ವರಲಿಂಗವು ತನ್ನ ತಿಳಿದು ನೋಡಿಹೆನೆಂಬವರ ವಿಚಾರವೆಂಬ ಬಲೆಯಲ್ಲಿ ಕೆಡಹಿದನು.

೭೩

ಸುಳಿವ ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ, ಅರಿಯೆನರಿಯೆ ನೆರೆ ಶಿವಪಥವ. ಗೊಹೇಶ್ವರಲಿಂಗದ ನಿಜವನರಿದ ಬಳಿಕ, ಅರಿಯೆನರಿಯೆ ಲೋಕದ ಬಳಕೆಯ.

೭೪

ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ? ಕಾಮಿಸಿ, ಕಲ್ಪಿಸಿ, ಭಾವಿಸಿದಡೆ ಅದೇ ಭಂಗ! ಭಾವಿಸುವ ಭಾವನೆಗಿಂತ ಸಾವುದೇ ಲೇಸು ಕಾಣಾ ಗೊಹೇಶ್ವರಾ.

೭೫

ಭಾವದಲೊಬ್ಬ ದೇವರ ಮಾಡಿ, ಮನದಲೊಂದು ಭಕ್ತಿಯ ಮಾಡಿದರೆ, ಕಾಯದ ಕೈಯಲ್ಲಿ ಕಾರ್ಯವುಂಟೆ? ವಾಯುಕ್ಕೆ ಬಳಲುವರು ನೋಡಾ! ಎತ್ತನೇರಿ ಎತ್ತನರಸುವರು ಎತ್ತ ಹೋದರೈ ಗೊಹೇಶ್ವರಾ?

೭೬

ಕಾಯದ ಕಳವಳಕ್ಕಂಜಿ ಪ್ರಾಣ ಹೋದಲ್ಲಿ ಭವ ಹಿಂಗದು, ಪ್ರಕೃತಿ ಬಿಡದು. ವಾಯುಕ್ಕಾದರೆ ಸತ್ತು ದೇವರ ಕೂಡಿದೆವೆಂಬರು. ಈ ವಾಯದ ಮಾತಿಂಗಾನು ಬೆರಗಾದೆನು. ಕಾಯವಿದ್ದಲ್ಲಿ, ಸಾಯದ ಸಾವ ಬಲ್ಲರೆ, ಬೇರಿಲ್ಲ ಗೊಹೇಶ್ವರ ತಾನೆ.

೭೭

ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು. ಸಾಯದ ಮುನ್ನ ಸ್ವಯವನರಿದಡೆ ದೇವನೊಲಿವ ನಮ್ಮ ಗೊಹೇಶ್ವರ.

೭೮

ಕೋತಿಗೆ ಕೊಂಬು ಹುಟ್ಟಬಲ್ಲುದೆ? ನುಚ್ಚಕ್ಕಿ ವೊಳೆಯಬಲ್ಲುದೆ? ಸತ್ತ ಮರ ಎಳಕ ಬಲ್ಲುದೆ? ಆರೆಯ ಮೇಲೆ ತಾವರೆ ಬೆಳೆಯ ಬಲ್ಲುದೆ ಅಯ್ಯಾ? ದುರ್ಬುದ್ಧಿ ಮಾನವರ ಭಾವದಲ್ಲಿ ಶಿವಜ್ಞಾನ ಕರಿಗೊಳ್ಳ ಬಲ್ಲುದೇ ಅಯ್ಯ? ಶಿವಜ್ಞಾನವಿಲ್ಲದವಂಗೆ ಶಿವಕೃಪೆ ಎಲ್ಲಿಯದೋ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ?

೫

ದೇವರ ಕೃಪೆ, ಗುರುಕಾರುಣ್ಯ

೧. ಪ್ರಾರ್ಥನೆ–ಧ್ಯಾನ

೧

ಪುಣ್ಯಪಾಪಂಗಳನರಿಯದ ಮೊದಲು, ಅನೇಕ ಭವಂಗಳಲ್ಲಿ ಬಂದೆನಯ್ಯಾ! ನಂಬಿ ಶರಣುವೊಕ್ಕೆನಯ್ಯ! ನಿಮ್ಮನೆಂದೂ ಅಗಲದಂತೆ ಮಾಡಿ ನಡೆಸಯ್ಯ! ನಿಮ್ಮ ಧರ್ಮ, ನಿಮ್ಮ ಧರ್ಮ. ನಿಮ್ಮನೊಂದನೇ ಬೇಡುವೆನು. ಎನ್ನ ಬಂಧನವ ಬಿಡುವಂತೆ ಮಾಡಯ್ಯ ಶ್ರೀ ಚೆನ್ನ ಮಲ್ಲಿಕಾರ್ಜುನಾ.

೨

ಕಪಿ ಕಳ್ಳ ಕುಡಿದು, ಕಡಲ ದಾಂಟುವೆನೆಂದು ಲಂಘಿಸಿ ನಡುನೀರಲ್ಲಿ ಬಿದ್ದು, ಮೀನ ಮೊಸಳೆಗಾಹಾರವಾದಂತಾಯಿತ್ತಯ್ಯಾ ಎನ್ನ ಬಾಳುವೆ. ಆದಿಯಲ್ಲಿ ನಿನ್ನ ಗರ್ಭಾಬ್ಧಿಯಲ್ಲಿ ಜನಿಸಿ, ನಿನ್ನ ನೆನಹಿಲ್ಲದೆ ಇಷ್ಟಲಿಂಗವನರಿಯದ ಕಷ್ಟಜೀವಿಗಳ, ಪ್ರಾಣಲಿಂಗವನರಿಯದ ಪರಮ ಪಾತಕರ, ಭಾವಲಿಂಗವನರಿಯದ ಭವಕ್ಕೊಳಗಾದ ಹುಲುಮಾನವರ ತಂದೆ ತಾಯಿ ಬಂಧು ಬಳಗವೆಂದು ಭಾವಿಸಿದ ಬಲುಪಾತಕವೆನ್ನನಂಡಲೆದು, ಅಮರ್ದಪ್ಪಿ ಅಗಲದ ಕಾರಣ ನಿಂದ ಠಾವಿಂಗೆ ನೀರ್ದಳಿವರಯ್ಯಾ. ಕುಳಿತ ಠಾವಿಂಗೆ ಹೋಮವನಿಕ್ಕಿಸುವರಯ್ಯಾ. ನಾನು ಬಂದ ಬಟ್ಟೆಯೊಳಗೆ ಒರ್ವರು ಬಾರರಯ್ಯಾ. ಕಾಲನಾಳಿಂಗೆ ಕಾಲ್ದುಳಿಯಾದೆನಯ್ಯ. ಶುನಕ ಸೂಕರಾದಿಗಳ ಬಸಿರಲ್ಲಿ ಬರುವಂತೆ ಮಾಡಿತ್ತಯ್ಯ ಎನ್ನ ಮಾಯೆ. ಒರ್ವರಿಗೆ ಹುಟ್ಟಿ ಮತ್ತೊರ್ವರ ಅಪ್ಪ ಎಂಬ ನಾಣ್ಣುಡಿಯು ದೃಷ್ಟ ಎನಗಾಯಿತ್ತಯ್ಯ ಗುರುವೆ. ಈ ದೋಷಮಂ ಕರುಣದಿಂದ ಕಳೆದು, ಶುದ್ಧನ ಮಾಡಿ, ನಿನ್ನನೆ ಜನನಿ ಜನಕನೆಂದು, ನಿನ್ನ ಭಕ್ತರನೆ ಬಂಧು ಬಳಗವೆಂಬ ಸುಜ್ಞಾನಮಂ ಕೊಟ್ಟು, ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ನಿನ್ನತ್ತಲೆ ಸಮ್ಮುಖಮಾಡಿ, ಅಕ್ಕರಿಂದೆ ರಕ್ಷಿಪುದಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೩

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವ ಗ್ರಾಸಿಯಾಗಿ ನುಂಗಿತ್ತಯ್ಯಾ! ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ ?

೪

ಎಂದೋ ಸಂಸಾರದ ದಂದುಗ ಹಿಂಗುವುದು? ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ, ಎಂದೋ ? ಕೂಡಲಸಂಗಮದೇವಾ, ಇನ್ನೆಂದೋ ಪರಮಸಂತೋಷದಲ್ಲಿಹುದೆನಗೆಂದೋ ?

೫

ದೇಹಧರ್ಮದಾಸೆ ಬೇರೆ, ಭಕ್ತಿ ಇಲ್ಲದ ಬಗೆ ಬೇರೆ. ಎನಗೆಂದು ಮಾಡಿದಿರೀ ಸಕಲ ಪ್ರಪಂಚವನು? ಎನಗೆಂದು ಮಾಡಿದಿರೀ ಸಕಲ ವ್ಯಾಪಾರಂಗಳನು? ಎನಗೆ ನಿಶ್ಚಿಂತ ಪದವಿಯನಿನ್ನೆಂದಿಗೀವೆಯಯ್ಯಾ ಸಕಳೇಶ್ವರದೇವಾ ?

೬

ಅಯ್ಯಾ, ಹುಲ್ಲುಮೊರಡಿಯೊಳಗೆ ಕಲ್ಪತರುವನರಸುವರೆ ? ಅಯ್ಯಾ, ಹಾವುಮೆಕ್ಕೆಯಲ್ಲಿ ದ್ರಾಕ್ಷಾಫಳವನರಸುವರೆ? ಅಯ್ಯಾ, ಗೋರಿಕಲ್ಲುಗಳೊಳಗೆ ಚಿಂತಾಮಣಿಯನರಸುವರೆ? ಅಯ್ಯಾ, ರಿತಿಕೆಯಲ್ಲಿ ಅಪರಂಜಿಯನರಸುವರೆ? ಅಯ್ಯಾ, ಬಯಲಲ್ಲಿ ಅರವಿಂದವನರಸುವರೆ? ಅಯ್ಯಾ, ಹೆಮ್ಮರದಲ್ಲಿ ಸುಗಂಧವನರಸುವರೆ? ಅಯ್ಯಾ, ಸರ್ವಪ್ರಪಂಚಿಯಾನು. ಎನ್ನೊಳಗದಾವ ಗುಣವನರಸದೆ, ನೀವೆ ಕರುಣಿಸಯ್ಯ ಕಾರುಣ್ಯಮೂರ್ತಿಯೆ ಸೌರಾಷ್ಟ್ರ ಸೋಮೇಶ್ವರಾ.

೭

ಬೆಳೆಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು! ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗ ತಂದೆ. ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

೮

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ, ಎನ್ನ ಬಿಡು ತನ್ನ ಬಿಡೆಂಬುದು ಕಾಯ ವಿಕಾರ; ಎನ್ನ ಬಿಡು ತನ್ನ ಬಿಡೆಂಬುದು ಮನೋ ವಿಕಾರ. ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ ಮನ ನಿಮ್ಮ ನೆಯ್ದುವುದೆ ಕೂಡಲಸಂಗಮದೇವಾ?

೯

ಬಡಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ? ಶಿವ ಶಿವಾ! ಹೋದಹೆ ಹೋದಹೆನಯ್ಯಾ!! ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ. ಪಶುವಾನು ಪಶುಪತಿ ನೀನು! ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ, ಒಡೆಯ, ನಿಮ್ಮ ಬಯ್ಯದಂತೆ ಮಾಡು ಕೂಡಲಸಂಗಮದೇವಾ.

೧೦

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ. ಪಶುವೇನ ಬಲ್ಲುದು? ಹಸುರೆಂದೆಳಸುವುದು. ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ, ಸುಬುದ್ಧಿಯೆಂಬುದಕವನೆರೆದು, ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

೧೧

ಎಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿಡದಯ್ಯ! ಈ ಉಪಾಧಿಗೆ ಅಪಾಯವನಿತ್ತು ನಿರುಪಾಧಿಯಲ್ಲಿ ನಿಲಿಸಯ್ಯ! ಎಲ್ಲ ಬಯಕೆಯರತ ಬಟ್ಟೆಯ ತೋರಯ್ಯ! ಸಹಜ ಸಮ್ಯಕ್ತ್ವವನಿತ್ತು ಸಲಹಯ್ಯ ಸೌರಾಷ್ಟ್ರ ಸೋಮೇಶ್ವರಾ.

೧೨

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ; ಚಂದ್ರ ಕುಂದೆ ಕುಂದುವುದಯ್ಯಾ. ಚಂದ್ರಂಗೆ ರಾಹುವಡ್ಡಬಂದಲ್ಲಿಯಂಬುಧಿ ಬೊಬ್ಬಿ

ಟ್ಟಿತ್ತೆ? ಅಂಬುಧಿಯ ಮುನಿಯಾಪೋಷಣವ ಕೊಂಬಲ್ಲಿ, ಚಂದ್ರಮನಡ್ಡ ಬಂದನೆ? ಆರಿಗಾರೂ ಇಲ್ಲಾ, ಕೆಟ್ಟವಂಗೆ ಕೆಳೆಯಿಲ್ಲಾ! ಜಗದ ನಂಟ ನೀನೆ ಅಯ್ಯಾ ಕೂಡಲಸಂಗಮದೇವಾ.

೧೩

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ. ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ. ಕೂಡಲಸಂಗಮ ದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ.

೧೪

ಎನ್ನ ವಾಮ ಕ್ಷೇಮ ನಿಮ್ಮದಯ್ಯಾ; ಎನ್ನ ಹಾನಿ ವೃದ್ಧಿ ನಿಮ್ಮ ದಯ್ಯಾ; ಎನ್ನ ಮಾನಾಪಮಾನ ನಿಮ್ಮದಯ್ಯಾ. ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ?

೧೫

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ 'ಶಿವ ಶಿವಾ' ಎಂದೋದಿಸಯ್ಯಾ. ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು ಕೂಡಲ ಸಂಗಮದೇವಾ.

೧೬

'ಅಯ್ಯಾ ಅಯ್ಯಾ' ಎಂದು ಕರೆಯುತ್ತಲಿದ್ದೇನೆ; 'ಅಯ್ಯಾ ಅಯ್ಯಾ' ಎಂದೊರಲುತ್ತಿದ್ದೇನೆ: 'ಓ' ಎನ್ನಲಾಗದೇ ಅಯ್ಯಾ? ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ. ಮೌನವೇ ಕೂಡಲಸಂಗಮದೇವಾ?

೧೭

ಒಳಗೆ ಶೋಧಿಸಿ ಹೊರಗಳವಡಿಸಿ ಭಾವದಿಂದ ಗುಡಿ ತೋರಣವ ಕಟ್ಟುವೆನಯ್ಯಾ. ಎನ್ನ ಲಿಂಗವೇ ಬಾರಯ್ಯಾ! ಎನ್ನ ದೇವ ಬಾರಯ್ಯಾ!

ಎನ್ನಂತರಂಗದ ಪರಂಜ್ಯೋತಿಲಿಂಗವನಿದಿರುಗೊಂಬೆನು ಬಾರಯ್ಯಾ. ಮಹಾಲಿಂಗ ಕಲ್ಲೇಶ್ವರ, ನಿಮ್ಮ ಧರ್ಮವು ಬಾರಯ್ಯಾ.

೧೮

ಬಾರಯ್ಯ ಬಾರಯ್ಯ ಭಕ್ತದೇಹಿಕದೇವನೆ. ಬಾರಯ್ಯ ಬಾರಯ್ಯ ಭಕ್ತವತ್ಸಲನೆ. ಬಾರಯ್ಯ ಬಾರಯ್ಯ ಭಕ್ತಜನ ಪ್ರಿಯನೆ. ಬಾರಯ್ಯ ಬಾರಯ್ಯ ಭಕ್ತಜನ ಬಂಧುವೆ. ಬಾರಯ್ಯ ಬಾರಯ್ಯ ಭಕ್ತಜನ ಮನೋ ವಲ್ಲಭನೆ. ಬಾರಯ್ಯ ಬಾರಯ್ಯ ಅಖಂಡೇಶ್ವರಾ,—ನೀ ಎನ್ನ ಪರಮ ಹೃದಯಮಂದಿರಕ್ಕೆ.

೧೯

ನೀರ ಕ್ಷೀರದಂತೆ ನೀನಿಪ್ಪೆಯಾಗಿ, ಆವುದು ಮುಂದು ಆವುದು ಹಿಂದು ಎಂದರಿಯೆನು. ಆವುದು ಕರ್ತೃ, ಆವುದು ಭೃತ್ಯನೆಂದರಿಯೆನು. ಆವುದು ಘನ ಆವುದು ಕಿರಿದೆಂದರಿಯೆನು. ಚೆನ್ನಮಲ್ಲಿಕಾರ್ಜುನಯ್ಯಾ, ನಿನ್ನನೊಲಿದು ಕೊಂಡಾಡಿದರೆ, ಇರುಹೆ ರುದ್ರನಾಗದೆ ಹೇಳಯ್ಯ?

೨೦

ಎಲವೊ ಎಲವೋ, ಪಾಪಕರ್ಮವ ಮಾಡಿದವನೇ, ಎಲವೊ ಎಲವೋ ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ 'ಶರಣೆ'ನ್ನೆಲವೋ! ಒಮ್ಮೆ 'ಶರಣೆ'ಂದರೆ ಪಾಪಕರ್ಮ ಓಡುವುವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು. ಒರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ!

೨೧

ಲಿಂಗವನು ಪುರಾತನರನು ಅನ್ಯರ ಮನೆಗೆ ಹೋಗಿ ಹೊಗಳುವರು,- ತಮ್ಮದೊಂದುರ ಕಾರಣ. ಲಿಂಗವು ಪುರಾತನರು ಅಲ್ಲಿಗೆ ಬರಬಲ್ಲರೇ? ಅನ್ಯವನೆ ಮರೆದು ನಿಮ್ಮ ನೆನೆವರ ಎನಗೊಮ್ಮೆ ತೋರಾ ಚೆನ್ನಮಲ್ಲಿ ಕಾರ್ಜುನಾ.

೨೨

ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ? ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ? ನೂರನೋದಿ ಏವೆನಯ್ಯ, ನಮ್ಮ ಕೂಡಲಸಂಗಮದೇವರ ಮನ ಮುಟ್ಟಿ ನೆನೆಯದನ್ನಕ್ಕ?

೨೩

ಅಂಕ ಕಳನೇರಿ ಕೈಮರೆದಿರ್ದೊಡೆ, ಮಾರಂಕ ಬಂದಿರಿವುದ ಮಾಣ್ಬನೇ? ನಿಮ್ಮ ನೆನಹ ಮತಿ ಮರೆದಿರ್ದೊಡೆ, ಪಾಪ ತನುವನಂಡಲೆವುದ ಮಾಣ್ಬುದೆ? ಕೂಡಲಸಂಗಯ್ಯನ ನೆನೆದರೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ.

೨೪

ಅಂದಣವನೇರಿದ ಸೊಣಗನಂತೆ, ಕಂಡೊಡೆ ಬಿಡದು ಮುನ್ನಿನ ಸ್ವಭಾವವನು. ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು, ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ!

೨೫

ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ. ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ! ಕಂದ, ನೀನಿತ್ತ ಬಾ ಎಂದು ನೀವು ನಿಮ್ಮಂದವ ತೋರಯ್ಯ ಚೆನ್ನಮಲ್ಲಿಕಾರ್ಜುನಾ.

೨೬

ದೇಶ ದೇಶಾಂತರವ ತೊಳಲಿ ಬಳಲಿ, ಕೆಲರ ಹಳಿದು ಕೆಲರ ಹೊಗಳಿ, ವೃಥಾ ಹೋಯಿತ್ತೆನ್ನ ಸಂಸಾರ. ಗಿರಿಯ ಶಿಖರದ ಮೇಲೆ ಲಿಂಗ ಧ್ಯಾನದಲ್ಲಿ ಮೌನಿಯಾಗಿರಿಸು ಸಕಳೇಶ್ವರದೇವಾ.

೨೭

ಪರಚಿಂತೆ ಎನಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲ ಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು!

೨೮

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನು ದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ.

೨೯

ಎನ್ನ ಜನನಮರಣಂಗಳೆಲ್ಲ ಜಾರಿಹೋದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ಪುಣ್ಯಪಾಪಂಗಳೆಲ್ಲ ಪಲ್ಲಟವಾದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ಕಾಲ ಕಲ್ಪಿತಂಗಳೆಲ್ಲ ಕರಗಿ ಹೋದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ಪಂಚೇಂದ್ರಿಯ ಸಪ್ತವ್ಯಸನಂಗಳೆಲ್ಲ ಸಣ್ಣಿಸಿ ಹೋದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ಅಷ್ಟಮದ ಅರಿಷಡ್ವರ್ಗಂಗಳೆಲ್ಲ ನಷ್ಟವಾದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ತನುಕರಣೇಂದ್ರಿಯಂಗಳೆಲ್ಲ ತರಹರವಾದುವಯ್ಯ ನಿಮ್ಮ ನೆನಹಿನ ಬಲದಿಂದೆ. ಎನ್ನ ಮನ ಪ್ರಾಣಭಾವಂಗಳೆಲ್ಲ ಬರಿದಾಗಿ ಹೋದುವಯ್ಯ ನಿಮ್ಮ ನೆನಹಿನ ಬಲದಿಂದೆ ಅಖಂಡೇಶ್ವರಾ.

೩೦

ಎತ್ತೆತ್ತ ನೋಡಿದತ್ತತ್ತ ನಿಮ್ಮನೆ ಕಾಂಬೆ. ಎದ್ದು ನೋಡಿ ನಿಮ್ಮನೆ ಕಾಂಬೆ. ನಿದ್ರೆಗೆಯ್ದು ನಿಮ್ಮನೆ ಕಾಂಬೆ. ಅಹೋರಾತ್ರಿಯಲ್ಲಿ ನಿಮ್ಮ ಧ್ಯಾನದಲ್ಲಿರಿಸು ಮಹಾಲಿಂಗಕಲ್ಲೇಶ್ವರಾ.

೩೧

ಶಿವ ಶಿವಾ ಎನ್ನಿರೋ! ಶಿವನ ಧ್ಯಾನಕ್ಕೆ ತನ್ನಿರೋ! ಶಿವನು ಕೈಲಾಸ ಮೇರು ಮಂದಾರದಲ್ಲಿಲ್ಲ ನೋಡಿರೋ! ಶಿವನು ಭಕ್ತಿಗೆ ಸೋತು ನಿಮ್ಮೊಳಗಿಪ್ಪನು ಕಾಣಿರೋ! ಅದೆಂತೆಂದೊಡೆ, ಶಿವನ ವಾಕ್ಯ:

ನಾಹಂ ವಸಾಮಿ ಕೈಲಾಸೇ ನ ಮೇರೌ ನ ಚ ಮಂದರೇ
ಮದ್ ಭಕ್ತಾ ಯತ್ರ ತಿಷ್ಠಂತಿ ತತ್ರ ತಿಷ್ಠಾಮಿ ಪಾರ್ವತಿ

ಎಂದುದಾಗಿ, ಆಲಸ್ಯವಿಲ್ಲದೆ ಒಲಿಸಿರೋ ನಮ್ಮ ಅಖಂಡೇಶ್ವರನೆಂಬ ಪರಶಿವನ!

೨. ಕೃಪೆ–ದಾನ

೩೨

ಒಂದು ಯೋನಿಯಲ್ಲಿ ಬಂದ ದುಃಖವ ನಾನು ಎಂದೆಂದಿಗೂ ಕಳೆಯಲಾರೆ. ಇನ್ನು ಎಂಬತ್ತುನಾಲ್ಕು ಲಕ್ಷವೆಂದರೆ ನಾನಿನ್ನೇವೆನಯ್ಯಾ? ಒಂದು ವನರಿಯದ ಶಿಶು ನಾ ನೊಂದೆನಯ್ಯಾ! ಎನ್ನ ಕಂದ ಬಾ ಎಂದು ಕಂಬನಿಯ ತೊಡೆದೆತ್ತಿ, ಆನಂದದಿಂದ ಕಣ್ದೆರೆ ಉಳಿಯುಮೇಶ್ವರಾ.

೩೩

ನೀನೊಲಿದರೆ ಕೊರಡು ಕೊನರುವುದಯ್ಯಾ. ನೀನೊಲಿದರೆ ಬರಡು ಹಯನಹುದಯ್ಯಾ. ನೀನೊಲಿದರೆ ವಿಷವೆ ಅಮೃತವಹುದಯ್ಯಾ. ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿರ್ಪವು ಕೂಡಲಸಂಗಮದೇವಾ.

೩೪

ಹರಸೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬರ್ಕು,–ಹರಿದು ಹೆದ್ದೊರೆಯೆ ಕೆರೆ ತುಂಬಿದಂತಯ್ಯಾ! ನೆರೆಯದ ವಸ್ತು ನೆರೆವುದು ನೋಡಯ್ಯಾ.

ಅರಸು ಪರಿವಾರ ಕೈವಾರ ನೋಡಯ್ಯಾ! ಪರಮ ನಿರಂಜನನೆ ಮರೆದ ಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ ಕೂಡಲಸಂಗಮ ದೇವಾ!

೩೫

ತನುವ ಕೊಟ್ಟು ನಿಮ್ಮನೊಲಿಸಿಹೆನೆಂದಡೆ ಆ ಭಾವವೆನಗೆ ತಿಳಿಯದು. ಮನವ ಕೊಟ್ಟು ನಿಮ್ಮನೊಲಿಸಿಹೆನೆಂದಡೆ ಆ ಭಾವವೆನಗೆ ತಿಳಿಯದು. ಧನವ ಕೊಟ್ಟು ನಿಮ್ಮನೊಲಿಸಿಹೆನೆಂದಡೆ ಆ ಭಾವವೆನಗೆ ತಿಳಿಯದು. ಸತಿ ಇದ್ದ ಮನೆಗೆ ಪತಿಯೊಲಿದು ಬರುವಂತೆ, ಪತಿ ಒಲಿದು ಬಂದು ಎನ್ನ ತನು ಮನ ಧನದಲ್ಲಿ ಭರಿತನಾಗಯ್ಯ ಅಖಂಡೇಶ್ವರಾ.

೩೬

ಅಡವಿಯಲ್ಲಿರ್ದ ಗೋವು ಮನೆಯಲ್ಲಿರ್ದ ಕರುವಿಂಗೆ ಚಿಂತಿಸಿ ಬಂದು, ಹಾಲನೂಡಿ ಮೋಹ ಮಾಡುವುದಲ್ಲದೆ ಆ ಕರುವೆತ್ತ ಬಲ್ಲುದಯ್ಯ? ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು, ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವ ತೊಲಗಿಸಿ, ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲೆನಯ್ಯ ಅಖಂಡೇಶ್ವರಾ?

೩೭

ಅರಸಿ ತೊಳಲಿದರಿಲ್ಲ. ಬಯಸಿ ಹೊಕ್ಕರಿಲ್ಲ. ತಪಸ್ಸು ಮಾಡಿದರಿಲ್ಲ. ಅದು ತನ್ನ ಬಹ ಕಾಲಕ್ಕಲ್ಲದೆ ಸಾಧ್ಯವಾಗದು. ಶಿವನೊಲಿದಲ್ಲದೆ ಕೈಗೂಡದು. ಚೆನ್ನಮಲ್ಲಿಕಾರ್ಜುನನಿಗೊಲಿದೆನಾಗಿ, ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು.

೩೮

ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ? ನೀನು ಬಹಿರಂಗವ್ಯವಹಾರ ದೂರಸ್ಥನು. ಅಯ್ಯ, ಅಂತರಂಗದಲ್ಲಿ ಧ್ಯಾನವ ಮಾಡಿ

ಒಲಿಸುವೆನೆ ಅಯ್ಯ? ನೀನು ವಾಙ್ಮನೋತೀತನು. ಅಯ್ಯ, ಜಪಸ್ತೋತ್ರದಿಂದೊಲಿಸುವೆನೇ? ನೀನು ನಾದಾತೀತನು. ಭಾವಜ್ಞಾನದಿಂದೊಲಿಸುವೆನೆ ಅಯ್ಯ? ನೀನು ಮತಿಗತೀತನು. ಹೃದಯಕಮಲದಲ್ಲಿಂಬಿಟ್ಟುಕೊಂಬೆನೆ ಅಯ್ಯ? ನೀನು ಸರ್ವಾಂಗ ಪರಿಪೂರ್ಣನು. ಅಯ್ಯ ನಿನ್ನ ಒಲಿಸಲಿನ್ನಳವಲ್ಲ. ನೀನೊಲಿವುದೆ ಸುಖವಯ್ಯ ಚೆನ್ನಮಲ್ಲಿಕಾರ್ಜುನಾ.

೩೯

ನಿನ್ನರಿಕೆಯ ನರಕವೆ ಮೋಕ್ಷ ನೋಡಯ್ಯ! ನಿನ್ನರಿಯದ ಮುಕ್ತಿಯೆ ನರಕ ಕಂಡಯ್ಯ! ನೀನೊಲ್ಲದ ಸುಖವೆ ದುಃಖ ಕಂಡಯ್ಯ! ನೀನೊಲಿದ ದುಃಖವೆ ಪರಮಸುಖ ಕಂಡಯ್ಯ! ಚೆನ್ನಮಲ್ಲಿಕಾರ್ಜುನಯ್ಯ, ನೀ ಕಟ್ಟಿ ಕೆಡಹಿದ ಬಂಧನವೆ ನಿರ್ಬಂಧನವೆಂದಿಪ್ಪೆನು.

೪೦

ಹಾವ, ಕಿಚ್ಚ ಮುಟ್ಟಹ ಶಿಶುವೆಂದು ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ, ಎನ್ನೊಡನೊಡನೆ ಕೂಡಲಸಂಗಮದೇವ ಕಾಯ್ದುಕೊಂಡಿಪ್ಪನಯ್ಯ!

೪೧

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ?

೪೨

ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ?

೪೩

ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ. ಕಾಯ ಜೀವವುಳ್ಳಲ್ಲಿಯೆ ನಿಮ್ಮ ಪೂಜಿಸದ ನಾಯಿಗಳನೇನೆಂಬೆ ಹೇಳಾ ರಾಮನಾಥಾ ?

೪೪

ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು. ಅರವಟಿಗೆ ಛತ್ರವು ತಮ್ಮದೆಂಬರು. ಪಯಿರ್ಬೆದದಿರೆ, ಸುರಿವ ಮಳೆಯ ಸುರಿಸದಿದ್ದರೆ, ಅವರೇತೆರದಲ್ಲಿ ನೀಡುವರಯ್ಯಾ ರಾಮನಾಥಾ ?

೪೫

ನೀನೀಶನೀಯದೆ ಮಾನೀಶನೀವನೆ? ನೀನೀಸುವ ಕಾರಣ ಮಾನೀಶನೀವನು. ಆ ಮಾನೀಶನ ಹೃದಯದೊಳು ಪೊಕ್ಕು ನೀನೀಸುವ ಕಾರಣದಿಂದೆ, ನೀನೆ ಶರಣೆಂಬೆನಯ್ಯಾ ರಾಮನಾಥಾ.

೪೬

ಬಹಾಗ ಕೊಂಡು ಬಂದ ಪ್ರಾಪ್ತಿಯಲ್ಲದೆ ಬೇರೊಂದ ಗಳಿಸಲಿಲ್ಲ; ಬೇರೊಂದ ಕೆಡಿಸಲಿಲ್ಲ. ಬಂದುದು ನಿಂದುದು. ಮಾರಯ್ಯಪ್ರಿಯ ಅಮರೇಶ್ವರ ಲಿಂಗ ಕೊಟ್ಟಲ್ಲದಿಲ್ಲ.

೩. ಸದ್ಗುರು ತಂದೆ, ಉಪದೇಶ

೪೭

ಕೈದು ಮರೆದು ಕಾದುವಂಕವಿದೇಕೋ ? ಭಾವವ ಮರೆದು ನೋಡುವ ನೋಟವಿದೇಕೋ ? ಭಯವ ಮರೆದು ಮಾಡುವ ಭಕ್ತಿಯಿದೇಕೋ ? ಏಕಾಂತದ ಸುಖವು ಲೋಕಾಂತವದೇಕೋ? ರೇಕಣ್ಣಪ್ರಿಯ ನಾಗಿನಾಥನಲ್ಲಿ ಗುರುವ ಮರೆದು ಲಿಂಗವನೊಲಿಸಿಹೆನೆಂಬುದದೇಕೋ ?

೪೮

ಘಟದೊಳಗೆ ತೋರುವ ಸೂರ್ಯನಂತೆ, ಸರ್ವರಲ್ಲಿ ಶಿವನ ಚೈತನ್ಯ ವಿಪ್ಪುದು. ಇದ್ದರೇನು? ಸರ್ವರಿಗೆ ಸಾಧ್ಯವಲ್ಲ. ಮುಟ್ಟಿ ಮುಟ್ಟದು. ಅದ ಕೂಡುವರೆ ಗುರುವಿನಿಂದಲ್ಲದಾಗದು ಕಾಣಾ ರಾಮನಾಥಾ.

೪೯

ಕಲ್ಲೊಳಗೆ ಹೊನ್ನುಂಟು, ಉದಕದೊಳಗೆ ಅಗ್ನಿಯುಂಟು, ಹಾಲೊಳಗ ತುಪ್ಪವುಂಟು, ಅಂತರ್ಯಾಮಿಯಲ್ಲಿ ಶಿವನಿಹನು. ಇದೇನು ಕತ್ತಲೆ ಕಾಣ ಬಾರದು. ತೋರಬಲ್ಲ ಗುರು ಸುಳಿಯನು ಕೂಡಲಸಂಗಮದೇವಾ.

೫೦

ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತ ದೊಳಗಣ ರುಚಿಯ ನಾಲಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲ ವಿಲ್ಲದ ರೂಪ ಕಳೆಯಲ್ಲಿ ವೇಧಿಸುವವನ ಪರಿ ರಾಮನಾಥಾ.

೫೧

ತನುವಿನೊಳಗೆ ತನುವಾಗಿ, ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ, ಕೆಲಬರಿಗೆ ಅರಿಯಬಪ್ಪುದೆ? ಅಂತರಂಗದೊಳಗೆ ಅದೆ ಎಂದರೇನು ಹೇಳಾ? ಮನ ಮುಟ್ಟಿ ಕಾಣಬಾರದು. ಬಹಿರಂಗದಲ್ಲಿ ಅದೆ ಎಂದರೆ ಪೂಜಿಸುವನ್ನಕ್ಕರ ಕಾಣಬಾರದು. ಸಾಕಾರವಲ್ಲದ ನಿರಾಕಾರ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು. ಎನ್ನ ಮನದೊಳಗೆ ಘನವ ನನುಗೊಳಿಸಿ ತೋರುವರಿಲ್ಲದ ಕಾರಣ, ಎನ್ನ ಅಜಗಣ್ಣ ನಿಕ್ಕಿದ ದಸರಿದೊಡ ಕಿಂಗೆ ಬೆರಗಾದೆನು ಕಾಣಾ ಪ್ರಭುವೆ!

೫೨

ಕಂಡುದ ಹಿಡಿಯಲೊಲ್ಲದೆ, ಕಾಣದುದನರಸಿ ಹಿಡಿದಿಹೆನೆಂದು ಸಿಕ್ಕದೆಂಬ ಬಳಲಿಕೆಯ ನೋಡಾ! ಕಂಡುದನೆ ಕಂಡು, ಗುರುಪಾದವ ಹಿಡಿದಲ್ಲಿ, ಕಾಣದುದ ಕಾಣಬಹುದು ಕಾಣಾ ಗೊಹೇಶ್ವರಾ!

೫೩

ತನ್ನ ತಾನರಿದವಂಗೆ ಅರಿವೆ ಗುರು. ಅರಿವರತು ಮರಹು ನಷ್ಟವಾದಲ್ಲಿ, ದೃಷ್ಟನಷ್ಟವೆ ಗುರು. ದೃಷ್ಟನಷ್ಟ ಈ ಗುರು ತಾನಾದಲ್ಲಿ ಮುಟ್ಟಿ ತೋರಿ ದವರಿಲ್ಲದಡೇನು? ಸಹಜವ ನೆಲೆಗೊಳಿಸುವ ನಿರ್ಣಯನಿಃಪತಿಯೆ ಗುರು ನೋಡಾ. ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ.

೫೪

ಗುರುವಚನದಿಂದಲ್ಲದೆ ಲಿಂಗವನರಿಯಬಾರದು. ಗುರುವಚನದಿಂದ ಲ್ಲದೆ ಜಂಗಮವನರಿಯಬಾರದು. ಗುರುವಚನದಿಂದಲ್ಲದೆ ಪ್ರಸಾದವನರಿಯ ಬಾರದು. ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು. ಹಿಂದಣ ಜನ್ಮ ದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದರೆ, ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೇ? ತನ್ನಲ್ಲಿ ತಾನು ಸನ್ನಹಿತವಾದಹೆನೆಂದರೆ ಗುರುವಿಲ್ಲದೆ ಆಗದು ಕೇಳಾ. ಎನ್ನ ಅಜಗಣ್ಣನೆಂಬ ಗುರುವಿಲ್ಲದೆ ಆರೂಢಿಯ ಕೂಟ ಸಮನಿಸದು ಕೇಳಾ.

೫೫

ಗುರುದೀಕ್ಷೆಯಿಲ್ಲದ ಲಿಂಗವು ಧರೆಯ ಕಲ್ಲೆನಿಸಿತ್ತು. ಗುರುದೀಕ್ಷೆ ಯಿಲ್ಲದ ನರನು ಶರಣರ ಸಮಯಕ್ಕೆ ಸಲ್ಲ. ಅದೆಂತೆಂದೊಡೆ: ಸುಟ್ಟ ಮಡಕೆ ಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದಲ್ಲದೆ ಹಸಿಯ ಮಡಕೆಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದೆ ಹೇಳಾ? ಇದು ಕಾರಣ, ಗುರು ದೀಕ್ಷೆಯಿಲ್ಲದವ ಎಷ್ಟು ಜ್ಞಾನಿಯಾದಡು ಅವನ ಜ್ಞಾನವು ಪ್ರಯೋಜನಕ್ಕೆ ಬಾರದು. ಅವನು ಎಷ್ಟು ಕ್ರಿಯೆಯನಾಚರಿಸಿದಡು ಅವನ ಕ್ರಿಯೆಯು ನಿಷ್ಫಲ ನೋಡಾ ಅಖಂಡೇಶ್ವರಾ.

೫೬

ನಡೆನುಡಿಯಿಲ್ಲದ ಗುರುವ ಕಂಡು ಉಪದೇಶವ ಪಡೆಯಲೆಂದು ಹೋದರೆ ಒಡನೆ ನುಡಿಯ; ನುಡಿಸಿದರೆ ಕೇಳ. ಕಡೆ ಮೊದಲ ಕಾರ್ಯ

ವೆಂತಪ್ಪುದೋ ಅಯ್ಯ ? ಮೂಗರ ಮೂಗರ ಪ್ರಸಂಗದಂತೆ ಇದೆ ಎನ್ನೊಳಗೆ ಅರಿವಿನ ಪರಿಮಳ. ಹೊರಗೆ ನೋಡಿದರೆ ಮುಗ್ಧವಾಯಿತ್ತು. ಇದನೆಂತುಪ ಮಿಸುವೆ ಅನಿಯಮದ ಬೆಡಗ! ಇದು ತನ್ನಿಂದ ತಾನಪ್ಪುದಲ್ಲದೆ ಭಿನ್ನದ ಲುಂಟೇ ಗೊಹೇಶ್ವರಾ ?

೫೭

ಅಯ್ಯ, ನೀನೆನಗೆ ಗುರುವಪ್ಪಡೆ ನಾ ನಿನಗೆ ಶಿಷ್ಯನಪ್ಪಡೆ, ಎನ್ನ ಕರಣಾದಿ ಗುಣಂಗಳ ಕಳೆದು, ಎನ್ನ ಕಾಯದ ಕರ್ಮವ ತೊಡೆದು, ಎನ್ನ ಪ್ರಾಣನ ಧರ್ಮವ ನಿಲಿಸಿ, ನೀನೆನ್ನ ಕಾಯದಲಡಗಿ, ನೀನೆನ್ನ ಪ್ರಾಣದಲಡಗಿ, ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗೊಹೇಶ್ವರಾ.

೫೮

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ, ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ. ಇದೇ ಎನಗೆ ಇಹದ ಸುಖ, ಪರದ ಗತಿ ನಡೆದು ಬಂದಂತಾಯಿತ್ತೆನಗೆ. ಚೆನ್ನಮಲ್ಲಿಕಾರ್ಜುನನೆಂಬ ಗುರುಪಾದವ ಕಂಡು ಧನ್ಯಳಾದೆನು.

೫೯

ಅರಸುವ ಬಳ್ಳಿ ಕಾಲ ಸುತ್ತಿತೆಂಬಂತೆ, ಬಯಸುವ ಬಯಕೆ ಕೈಸಾರಿ ದಂತೆ, ಬಡವ ನಿಧಾನವನೆಡಹಿ ಕಂಡಂತೆ, ನಾನರಸುತ್ತಲರಸುತ್ತ ಬಂದು, ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ. ಎನ್ನ ಅರಿವಿನ ಹರುವ ಕಂಡೆ ನೋಡಾ. ಎನ್ನ ಒಳಹೊರಗೆ ಎಡೆದೆರಹಿಲ್ಲದೆ ಥಳಥಳಿಸಿ ಹೊಳೆವುತ್ತಿಪ್ಪ ಅಖಂಡಜ್ಯೋತಿಯ ಕಂಡೆ ನೋಡಾ. ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ ಗೊಹೇಶ್ವರಾ.

೬೦

ಸಾವ ಜೀವಕ್ಕೆ ಗುರು ಬೇಡ. ಸಾಯದ ಜೀವಕ್ಕೆ ಗುರು ಬೇಡ. ಗುರುವಿಲ್ಲದೆ ಕೂಡಲಿಕ್ಕೆ ಬಾರದು. ಇನ್ನಾವ ಠಾವಿಂಗೆ ಗುರು ಬೇಕು? ಸಾವು ಜೀವ ಸಂಬಂಧದ ಠಾವ ತೋರಬಲ್ಲಾತನೇ ಗುರು ಗೊಹೇಶ್ವರನು.

೬೧

ಕಾಯ ಲಿಂಗೈಕ್ಯವೇ? ಅಲ್ಲ ನಿಲ್ಲು. ಜೀವ ಲಿಂಗೈಕ್ಯವೇ? ಅಲ್ಲ ನಿಲ್ಲು. ಕಾಯ ಜೀವ ಸಂಬಂಧವ ಬಲ್ಲಡೆ ಆತ ಲಿಂಗೈಕ್ಯ. ಒಂಬತ್ತನೆಯ ದ್ವಾರಮಂ ಕಳೆದು, ಹತ್ತನೆಯ ದ್ವಾರದಲ್ಲಿ ನಿಲ್ಲಬಲ್ಲಡೆ ಆತನೆ ಗುರು ಕಾಣಾ ಗೊಹೇಶ್ವರಾ!

೬೨

ಒಳಗೆ ಶೋಧಿಸಿ ಹೊರಗೆ ಶುದ್ಧವಿಸಿ, ಒಳಹೊರಗೆಂಬ ಉಭಯ ಶಂಕೆಯ ಕಳೆದು, ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ, ಸುಕ್ಷೇತ್ರ ವನರಿದು ಬೀಜವ ಬಿತ್ತುವಂತೆ, ಶಿಷ್ಯನ ಸರ್ವಪ್ರಪಂಚ ನಿವೃತ್ತಿಯಂ ಮಾಡಿ, ನಿಜೋಪದೇಶವನಿತ್ತು, ಆ ಶಿಷ್ಯನ ನಿಜದಾದಿಯನೈದಿಸುವನೀಗ ಜ್ಞಾನಗುರು. ಆ ಸಹಜಗುರುವೀಗ ಜಗದಾರಾಧ್ಯರು. ಅವರ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ.

೬೩

ಸದ್ಗುರುವೇ ಪ್ರಸಾದ ಲಿಂಗವು. ಸದ್ಗುರುವೇ ಸದ್ಭಕ್ತನು ಎಂದೆಂಬ ಮಹಾಜ್ಞಾನ ಜ್ಯೋತಿ ಪ್ರಕಾಶವಾದ ಜ್ಯೋತಿರ್ಮಯ ಲಿಂಗವೇ ಗುರುವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೪

ಗುರುವೆ ಪರತತ್ವವು ತಾನೆ ನೋಡಾ. ಗುರುವೆ ಪರವಸ್ತುವು ತಾನೆ ನೋಡಾ. ಗುರುವೆ ಪರಬ್ರಹ್ಮವು ತಾನೆ ನೋಡಾ. ಗುರುವೆ ಪರಶಿವನು

ತಾನೆ ನೋಡಾ. ಗುರುವಿನಿಂದೆ ಪರವಿಲ್ಲವೆಂದು ಸಕಲ ಶ್ರುತಿಗಳು ಹೊಗಳ ತಿಪ್ಪುವು ನೋಡಾ. ಇಂತಪ್ಪ ಶ್ರೀಗುರುವಿಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.

೬೫

ಗುರುಚರಣವ ಪೂಜಿಸಿ ಎನ್ನ ಹಸ್ತಂಗಳು ಪರುಷವಾದುವು. ಗುರು ಚರಣವ ನೋಡಿ ಎನ್ನ ಕಂಗಳು ಪರುಷವಾದುವು. ಗುರುಚರಣವ ಹಾಡಿ ಹರಸಿ ಎನ್ನ ಜಿಹ್ವೆ ಪರುಷವಾಯಿತ್ತು. ಗುರುಚರಣವ ನೆನೆದು ಎನ್ನ ಮನ ಪರುಷವಾಯಿತ್ತು. ಗುರುಚರಣವ ಧ್ಯಾನಿಸಿ ಎನ್ನ ಭಾವ ಪರುಷ ವಾಯಿತ್ತು ನೋಡಾ ಅಖಂಡೇಶ್ವರಾ.

೬೬

ನಿರೂಪ ಕಾಣಬಾರದು ; ಪೂಜಿಸುವ ಪರಿಯೆಂತಯ್ಯ ? ರೂಪಿಂಗೆ ಕೇಡುಂಟು; ಪೂಜಿಸುವ ಪರಿಯಿನ್ನೆಂತಯ್ಯ ? ಸಕಲ ನಿಃಕಲವು ಪೂಜೆಗೆ ಕಾರಣವಲ್ಲ ; ಇನ್ನೆಂತಯ್ಯ ಲಿಂಗವಂತರಿಗೆ ಪೂಜಿಸುವ ಪರಿ ? ಲಿಂಗದ ಪರಿಯಿನ್ನೆಂತಯ್ಯ ? ಗೊಹೇಶ್ವರಯ್ಯ ಅರಿಯ ಬಾರದ ಲಿಂಗವ ಅರಿವಂತೆ ಮಾಡಿಕೊಟ್ಟನು ಶ್ರೀಗುರು.

೬೭

ಶ್ರೀಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಳೇ ಎನ್ನ ಭವಂ ನಾಸ್ತಿಯಾಯಿತ್ತು. ಎನ್ನ ತನ್ನಂತೆ ಮಾಡಿದ. ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿದನು ನೋಡಾ! ತನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನೆನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಭಾವಸ್ಥಲದಲ್ಲಿ ಮೂರ್ತಿ ಗೊಳಿಸಿದ. ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಸರ್ವಾಂಗದೊಳಹೊರಗೆ ತೆರಹಿಲ್ಲದಳವಡಿಸಿದ ನಮ್ಮ ಶ್ರೀಗುರುಲಿಂಗ ದೇವ ಚೆನ್ನಮಲ್ಲಿಕಾರ್ಜುನ.

೬೮

ಕಾಣಬಾರದ ಗುರು ಕಣ್ಗೆ ಗೋಚರವಾದಡೆ ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ, ಪೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣಮಂತ್ರ, ತುಂಬಿ ತುಳುಕದ ಕಳಶಾಭಿಷೇಕ. ಆಗವುವಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ ಸ್ವಯಮಪ್ಪನುಗ್ರಹವ ಅನುಗೊಂಬಂತೆ ಮಾಡಾ ಗೊಹೇಶ್ವರಾ.

೬೯

ಎನ್ನ ತನುವ ಶೋಧಿಸಿ ಚಿನುಮಯಲಿಂಗವ ಮಾಡಿ ತೋರಿದನಯ್ಯ ಸದ್‌ಗುರು. ಎನ್ನ ಮನವ ಶೋಧಿಸಿ ಮನಘನಲಿಂಗವ ಮಾಡಿ ತೋರಿದನಯ್ಯ ಸದ್‌ಗುರು. ಎನ್ನ ಭಾವವ ಶೋಧಿಸಿ ಭಾವಭರಿತ ಲಿಂಗವ ಮಾಡಿ ತೋರಿದನಯ್ಯ ಸದ್‌ಗುರು. ಎನ್ನ ಕರಣಂಗಳ ಕಳೆದು ಲಿಂಗ ಕರಣಂಗಳ ಮಾಡಿದ ಸದ್‌ಗುರುದೇವಂಗೆ ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ.

೭೦

ಶ್ರೀಗುರು ಕರುಣಿಸಿ ಅಂಗದ ಮೇಲೆ ಲಿಂಗವ ಧರಿಸಿದ ಕಾರಣ, ಸರ್ವಾಂಗವು ಲಿಂಗವಾಯಿತ್ತು. ಅದೆಂತೆಂದೊಡೆ: ಅಗ್ನಿಯಿಂದ ತಪ್ತವಾದ ಲೋಹದ ಪುತ್ಥಳಿಯಂತೆ ಒಳಗೂ ಹೊರಗೂ ಏಕವಾಗಿ ಲಿಂಗವೇ ಬೆಳಗುತ್ತಿದ್ದ ಕಾರಣ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಶರಣ ಸರ್ವಾಂಗಲಿಂಗಿಯಾದನು.

೭೧

ಶಿವನೇ ತಾನೆನಗೆ ಗುರುವಾಗಿ ಬಂದು, ಎನ್ನ ಸಂಸಾರಸಾಗರವ ದಾಂಟಿಸಿ, ಅಖಂಡ ಪರಮಚೈತನ್ಯ ಶಿವಲಿಂಗವ ವಿಶ್ವದೊಳಗೆಲ್ಲಿಯೂ ಕಾಂಬಂತೆ ತೋರಿಸಿ, ವಿಶ್ವವ ಲಿಂಗದೊಳಗೆ ತೋರಿ, ಲಿಂಗವನೆನ್ನಂಗದೊಳ ಹೊರಗೆ ತೋರಿ, ಅಂಗವ ಲಿಂಗದೊಳಗಿರಿಸಿ ರಕ್ಷಿಸಿದನಯ್ಯ, ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.

೭೨

ಲಿಂಗದೊಳಗೆ ಅಖಿಳಾಂಡಕೋಟಿಬ್ರಹ್ಮಾಂಡಂಗಳಡಗಿಹವು. ಲಿಂಗವು ತಾನೇ ಬ್ರಹ್ಮಾಂಡದೊಳಡಗಿ, ಆ ಬ್ರಹ್ಮಾಂಡವು, ಲಿಂಗವು ತನ್ನೊಳಡಗಿದ ಭೇದವು ಶಾಸ್ತ್ರಬಲ್ಲವರಿಗೆ ಕಾಣಿಸದು; ಆಗಮಯುಕ್ತರಿಗೆ ತಿಳಿಯದು; ಕರ್ಮಭೂಭಾರಿಗಳಿಗೆ ಸಲ್ಲದು. ಇದನ್ನು ಭಕ್ತಗಣಂಗಳಿಗೆ ಗುರುವು ಪ್ರತ್ಯಕ್ಷವಂ ಮಾಡಿ ತೋರಿಸಿದ ಭೇದವು ಎಂತೆಂದೊಡೆ: ಕರಿ ಕನ್ನಡಿಯೊಳಡಗಿದಂತೆ, ನೇತ್ರದ ಕೊನೆಯೊಳಗೆ ಆಕಾಶವಡಗಿದ ಹಾಗೆ, ಬೀಜದೊಳಡಗಿದ ವೃಕ್ಷದ ಹಾಗೆ. ಈ ಭೇದವು ಗುರುಭಕ್ತರಂಶಿಕರಿಗೆ ಸಾಧ್ಯವಲ್ಲದೆ ಉಳಿದ ಭಿನ್ನಜ್ಞಾನಿಗಳೆತ್ತ ಬಲ್ಲರು ಎಂದಾತ ನಮ್ಮ ಶಾಂತ ಕೂಡಲಸಂಗಮದೇವ.

೭೩

ಈರೇಳು ಲೋಕವನೊಳಕೊಂಡ ಮಹಾಘನಲಿಂಗವು ಭಕ್ತನ ಕರಸ್ಥಳಕ್ಕೆ ಬಂದು ಪೂಜೆಗೊಂಬ ಪರಿಯ ನೋಡಾ! ಅಗಮ್ಯ ಅಗೋಚರ ಅಪ್ರಮಾಣ ಲಿಂಗಸಂಗದಲ್ಲಿ ಇರಬಲ್ಲಾತನೇ ಭಕ್ತನು. ಹೀಗಲ್ಲದೆ ಕೇಡಿಲ್ಲದ ಲಿಂಗಕ್ಕೆ ಕೇಡ ಕಟ್ಟಿ, ಹೋದೀತೋ ಇದ್ದೀತೋ, ಹ್ಯಾಗೋ ಎಂತೋ ಎಂದು ಚಿಂತಿಸಿ ನುಡಿದರು ಭಿನ್ನಜ್ಞಾನಿಗಳು. ಆ ಲಿಂಗದೊಳಗೆ ಅಖಿಳಾಂಡಕೋಟಿಬ್ರಹ್ಮಾಂಡಂಗಳಡಗಿಹವು. ಸಾಕ್ಷಿ: ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ। ಲಿಂಗಬಾಹ್ಯೇ ಪರಂ ನಾಸ್ತಿ ತಸ್ಮಾತ್ ಲಿಂಗಂ ಪ್ರಪೂಜಯೇತ್॥ ಎಂದುದಾಗಿ, ಇಂತಪ್ಪ ಘನಲಿಂಗವ ಶ್ರೀಗುರು ಭಕ್ತಂಗೆ ಕರಮನಭಾವಕ್ಕೆ ಪ್ರತ್ಯಕ್ಷವಾಗಿ ಮಾಡಿ ಕೊಟ್ಟ ಬಳಿಕ ಅಗಲಲುಂಟೆ? ಹೀಗೆ ಆವ ಶಾಸ್ತ್ರ ಆವ ಆಗಮ ಆವ ವಚನ ಹೇಳಿಲ್ಲವಾಗಿ, ಮತ್ತಂ ಸಂಪಿಗೆಯ ಪುಷ್ಪದ ಪರಿಮಳವು ಎಳ್ಳೆಣ್ಣೆಯ ಬೆರೆದ ಮೇಲೆ, ಆ ಸಂಪಿಗೆಯ ಪುಷ್ಪದ ಪರಿಮಳ ಬೇರೆ ಅಗಲಲುಂಟೆ? ಹಾಗೆ ಭಕ್ತನ ಅಂಗದಲ್ಲಿ ಬೆರೆದ ಬಳಿಕ ಲಿಂಗವ ಅಗಲಲುಂಟೆ? ಇಂತಪ್ಪ ಮಹಾಘನಲಿಂಗವು ಹೇಗಿಪ್ಪುದೋ ಎಂದೊಡೆ, ಅವರವರ ಮನಭಾವ ಹೇಗಿಪ್ಪುದೋ ಹಾಗಿಪ್ಪುದು. ಇದಕ್ಕೆ ದೃಷ್ಟ: ಉದಕ ಒಂದೇ ಹಲವು

ವೃಕ್ಷದಲ್ಲಿ ಹೊಕ್ಕು ಮಧುರ ಕಾರ ಒಗರು ಹುಳಿ ಉಪ್ಪು ಕಹಿ ಮೊದಲಾದ ಹಲವು ಪ್ರಕಾರದ ಹಣ್ಣು ಫಲಂಗಳು; ಉದಕ ಒಂದೇ. ಶ್ವೇತ ಪೀತ ಹರಿತ ಮಾಂಜಿಷ್ಠ ಕಪೋತ ಮಾಣಿಕ್ಯ ಈ ಆರು ವರ್ಣಂಗಳಲ್ಲಿ ಬೆರೆದುದು ಅಭ್ರಕ ಒಂದೇ. ಈ ಅಭ್ರಕ ಹ್ಯಾಗೋ ಮನ ಹಾಗೆ ಘನಮಹಾಲಿಂಗ. ಹೀಗೆಂದರುಹಿದಾತ ನಮ್ಮ ಶಾಂತಕೂಡಲ ಸಂಗಮದೇವ.

೭೪

ವಸ್ತುವೆಂದೊಡೆ ಪರಬ್ರಹ್ಮದ ನಾಮವು. ಅದು ಹೇಗೆಂದೊಡೆ, ಹರಿ ಸುರ ಬ್ರಹ್ಮಾದಿಗಳಿಗೆ ಅಗೋಚರವಾಗಿಪ್ಪುದು. ಸಾಧ್ಯಕ್ಕಸಾಧ್ಯವಾಗಿಪ್ಪುದು. ಭೇದ್ಯಕ್ಕಭೇದ್ಯವಾಗಿಪ್ಪುದು. ಕೋಟಿ ಸೋಮ ಸೂರ್ಯ ಪ್ರಕಾಶಕ್ಕೆ ಮಿಗಿಲಾಗಿಪ್ಪುದು. ಈರೇಳು ಭುವನವ ತುಂಬಿಕೊಂಡಿಪ್ಪುದು. ಅಪ್ರಮಾಣ ಅಗೋಚರವಾದ ವಸ್ತುವು ಎನ್ನ ಕರ ಮನ ಭಾವದೊಳಗಿಪ್ಪ ಭೇದವ ತಿಳುಹಿದಾತ ನಮ್ಮ ಶಾಂತಕೂಡಲಸಂಗಮದೇವ.

೭೫

ಎನ್ನ ಗುರು ಮಾಡಿದ ಕರುಣಕ್ಕಿನ್ನಾವುದು ಕಡೆ ? ಏನೆಂದುಪಮಿಸುವೆನಯ್ಯ ? ಕಾಣಬಾರದ ಲಿಂಗವ ಕಾಣಿಸಿ ಕೊಟ್ಟನೆನ್ನ ಕರದಲ್ಲಿ. ತಿಳಿಯಬಾರದ ಜ್ಞಾನವ ತಿಳುಹಿಸಿ, ಮನದಲ್ಲಿ ನೆಲೆಗೊಳಿಸಿದ. ಒಳಹೊರಗೆ ತಳವೆಳಗು ಮಾಡಿ, ಆಚಾರವನನುಗೊಳಿಸಿ, ಅಂಗದಲ್ಲಿ ಸ್ಥಾಪಿಸಿ, ಹಿಂದ ಮರೆಸಿ, ಮುಂದ ತೋರಿಸಿದನಯ್ಯ ಶ್ರೀಗುರು ಕರುಣಿಸಿ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.

೭೬

ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ. ಆ ಲಿಂಗದೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ ಮಹಾಗುರುವಿಂಗೆ ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ !

೭೭

ಎನ್ನ ಕರಕಮಲಮಧ್ಯದಲ್ಲಿ ಪರಮ ನಿರಂಜನದ ಕುರುಹ ತೋರಿದ. ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ. ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ. ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆ ಎನ್ನ ನಿಂಬಿಟ್ಟುಕೊಂಡ ಮಹಾಗುರುವಿಂಗೆ ನಮೋ ನಮಃ ಎನುತಿರ್ದೆನಯ್ಯ ಅಖಂಡೇಶ್ವರಾ!

೭೮

ಎಂಬತ್ತುನಾಲ್ಕುಲಕ್ಷ ಜೀವರಾಶಿಯ ಯೋನಿಯಲ್ಲಿ ಜನಿಸಿ ನಾನಾ ಯಾತನೆಯಲ್ಲಿ ತೊಳಲಿ ಬಳಲುತ್ತಿಹನು. ಆ ಪರಿಭವಂಗಳಂ ಕಳೆದು, ಅಯೋನಿಜನಂ ಮಾಡಿ, ಶ್ರೀಗುರು ತನ್ನ ಕರುಣಾಕಟಾಕ್ಷ ನಿರೀಕ್ಷಣೆಯಿಂದ ಕರಕಮಲದಲ್ಲಿ ಬೆಸಲಾದನಾಗಿ, ಅಂತಹ ಅನಂತ ಯೋನಿಮುಖ ಜನ್ಮಂಗಳಂ ಕಳೆದುಳಿದ ಶರಣಂಗೆ ಇನ್ನು ಭವಮಾಲೆಯುಂಟೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?

೭೯

ಗುರುವಿನ ಕರುಣದಿಂದ ಲಿಂಗ ಜಂಗಮುವ ಕಂಡೆ. ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ. ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ. ಚೆನ್ನಮಲ್ಲಿಕಾರ್ಜುನಯ್ಯ, ನಾ ಹುಟ್ಟ ಲೊಡನೆ ವಿಭೂತಿಯ ಪಟ್ಟವ ಕಟ್ಟಿ, ಸದ್ಗುರುಸ್ವಾಮಿ ಲಿಂಗಸ್ವಾಯತ ಮಾಡಿದನಾಗಿ ಧನ್ಯಳಾದೆನು.

೮೦

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು, ಮಾಯಾ ಪ್ರಪಂಚ ಬಿಟ್ಟಿತ್ತು, ಹುಟ್ಟರತು ಹೋಯಿತ್ತು. ನೆಟ್ಟಗೆ ಗುರುಪಾದವ ಮುಟ್ಟಿ ಭವ ಗೆಟ್ಟೆನು ಕಾಣಾ ರಾಮನಾಥಾ.

೮೧

ಬಿಸಿಲ ಮುಂದಣ ಮಂಜಿನಂತಾಯಿತ್ತು. ದಿಟದ ಮುಂದಣ ಸಟೆಯಂತಾಯಿತ್ತು. ಪುಣ್ಯದ ಮುಂದಣ ಪಾಪದಂತಾಯಿತ್ತು. ಯೋಗಿಯ ಮುಂದಣ ಸಂಸಾರದಂತಾಯಿತ್ತು. ಧೀರನ ಮುಂದಣ ಹೇಡಿಯಂತಾಯಿತ್ತು. ಉರಗನ ಮುಂದಣ ಭೇಕನಂತಾಯಿತ್ತು. ಹರಿಯ ಮುಂದಣ ಕರಿಯಂತಾಯಿತ್ತು. ವಿವೇಕಿಯ ಮುಂದಣ ದುಃಖದಂತಾಯಿತ್ತು. ಪುಣ್ಯಾರಣ್ಯದಹನ ಭೀಮೇಶ್ವರನೆಂಬ ಸದ್‌ಗುರು ಕಾರುಣ್ಯವಾಗಲೊಡನೆ ಎನ್ನ ಸುತ್ತಿಹ ಪ್ರಪಂಚ ಸರ್ವವೂ ಓಡಿದವಯ್ಯಾ!

೮೨

ದರ್ಪಣದೊಳಗಣ ರೂಹಿಂಗೆ ಆ ದರ್ಪಣವೆ ಉತ್ಪತ್ತಿ ಸ್ಥಿತಿ ಲಯವಲ್ಲದೆ, ಮರ್ತ್ಯಲೋಕದೊಳಗಣಾಕೃತಿಯಲ್ಲಿಲ್ಲವೇಕಯ್ಯ? ಆ ಲೋಕ ದೊಳಗೆ ಉತ್ಪತ್ತಿ ಸ್ಥಿತಿ ಲಯವಿದೇನಯ್ಯ ಕರ್ಮಬದ್ಧರು! ಒಂದರ ಪರಿ ಒಂದಕ್ಕಿಲ್ಲ ಕಂಡಿರೆ! ದೃಷ್ಟವಹ ಗುರುಹಸ್ತದೊಳಗಣ ಸದ್ಭಕ್ತಂಗೆ ಅಲ್ಲಿಯೆ ಉತ್ಪತ್ತಿ ಸ್ಥಿತಿ ಲಯ. ಇದೆಂತಹ ಕರ್ಮದ ಪರಿಯೋ? ಮತ್ತಾವ ಪರಿಯೂ ಅಲ್ಲ; ಲಿಂಗದ ಪರಿಯ ಮಾಡಿದ ಗೊಹೇಶ್ವರ.

೮೩

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ ಆ ತೃಣವನಾ ಕೆಂಡ ನುಂಗಿದಂತೆ, ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ ಆತನ ಸರ್ವಾಂಗವೆಲ್ಲ ಲಿಂಗ ಕಾಣಾ ರಾಮನಾಥಾ.

೮೪

ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿದಲ್ಲಿ ಬಯ ಲಾಯಿತ್ತು. ಶುಕ್ಲಶೋಣಿತದಿಂದಾದ ಸೂತ ಲಿಂಗ ಮುಟ್ಟಲೊಡನೆ ಬಯಲಾಯಿತ್ತು. ತಟ್ಟಿದ ಮುಟ್ಟಿದ ಸುಖಂಗಳ ಲಿಂಗ ಮುಖಕ್ಕೆ ಅರ್ಪಿಸಿದೆನಾಗಿ, ಎನ್ನ ಪಂಚೇಂದ್ರಿಯಂಗಳು ಬಯಲಾಯಿತ್ತು. ಎನ್ನಂತ

ರಂಗದಲ್ಲಿ ಜ್ಞಾನಜ್ಯೋತಿ ಎಡೆಗೊಂಡಿತ್ತಾಗಿ, ಒಳಗೂ ಬಯಲಾಯಿತ್ತು ಸಂಸಾರ ಸಂಗವಾದ ಅವಸ್ಥೆ ಮೀರಿದ ಕ್ರೀಯಲ್ಲಿ ತರಹರವಾಯಿತ್ತಾಗಿ ಬಹಿರಂಗ ಬಯಲಾಯಿತ್ತು. ಅಭಿನವ ಮಲ್ಲಿಕಾರ್ಜುನಾ, ನಿಮ್ಮ ಮುಟ್ಟಿದ ಕಾರಣ ನಾನು ಬಯಲಾದೆನು.

೮೫

ಇನನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ. ವಾಯುವಿನ ಕೈಯಲ್ಲಿಪ್ಪ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ. ಉರಿಯ ಮುಖದೊಳಗಿರ್ಪ ಕರ್ಪುರದಿರವಿನಂತಾಯಿತ್ತೆನ್ನ ಗುರುವಿನುಪದೇಶ. ಮಹಾಘನ ಸೌರಾಷ್ಟ್ರಸೋಮೇಶ್ವರ ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆ ಮಾಡಿದ ಕಾರಣ ಸಕಲ ಪ್ರಪಂಚ ಬಿಟ್ಟೋಡಿತ್ತು.

೮೬

ಸಂಸಾರ ಸಾಗರದೊಳಗೆ ಬಿದ್ದೆ ನೋಡಾ ನಾನು. ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು. ಅಂಗವಿಕಾರದ ಸಂಗವ ನಿಲಿಸಿ, ಲಿಂಗವ ನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು. ಹಿಂದಣ ಜನ್ಮವ ತೊಡೆದು ಮುಂದಣ ಪಥವ ತೋರಿದನೆನ್ನ ತಂದೆ. ಚೆನ್ನಮಲ್ಲಿಕಾರ್ಜುನನ ನಿಜವನರುಹಿದನೆನ್ನ ಗುರು.

೮೭

ಹಿಂದನರುಹಿ ಹಿಂದ ಹರಿದಿರಿ. ಮುಂದನರುಹಿ ಮುಕ್ತನ ಮಾಡಿದಿರಿ. ಸಂದು ಸಂಶಯವನಳಿದಿರಿ. ಗುರು ಲಿಂಗ ಜಂಗಮುವ ಒಂದೇ ಎಂದು ತೋರಿದಿರಿ. ಪ್ರಸಾದವೇ ಪರವೆಂದರುಹಿದಿರಿ. ಇಂತಿವರ ಪೂರ್ವಾಶ್ರಯುವ ಕಳೆದು ಎನಗೆ ಏಕವ ಮಾಡಿ ತೋರಬೇಕಾಗಿ, ನೀವು ಒಂದು ಸಾಕಾರವ ತಾಳಿ ಬಂದಿರಿ. ಇದು ಕಾರಣ ನಿಮ್ಮ ಲೋಕಾರಾಧ್ಯರೆಂದು ನೆರೆನಂಬಿ ಸಲೆ ನಿಂದು ನಿಮ್ಮ ಪಾದದೊಳು ಏಕವಾದೆನಯ್ಯ ಚೆನ್ನಮಲ್ಲೇಶ್ವರ! ಇದ ನಿಮ್ಮನರಿದ ಶರಣರೇ ಬಲ್ಲರು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೮೮

ನಿತ್ಯ ಅನಿತ್ಯವೆಂಬುದ ತೋರಿದಿರಿ, ಸತ್ಯ ಅಸತ್ಯವೆಂಬುದ ತೋರಿದಿರಿ. ಆಚಾರ ವಿಚಾರ ವೆಂಬುದ ತೋರಿದಿರಿ. ಅಯ್ಯ, ಸೋಹಂ ದಾಸೋಹಂ ಎಂಬುದ ತೋರಿದಿರಿ. ಇದು ಎಂಬುದ ತೋರಿದಿರಿ. ಆಯ್ಯಾ, ಮುಕ್ತಿ ಎಂಬುದ ತೋರಿದಿರಿ. ಅಂಗ ಲಿಂಗವೆಂಬುದ ತೋರಿದಿರಿ. ಪ್ರಾಣವೇ ಜಂಗಮುವೆಂಬುದ ತೋರಿದಿರಿ. ಪ್ರಸಾದವೇ ಪರವೆಂದು ತೋರಿದಿರಿ. ಇಂತಿವರ ಭೇದಾದಿಭೇದವನೆಲ್ಲ ತೋರಿದಿರಿ. ನಿಮ್ಮ ಹಾದಿಯ ಹತ್ತಿಸಿದಿರಿ. ಮೂದೇವರೊಡೆಯ ಚೆನ್ನಮಲ್ಲೇಶ್ವರ, ನಿಮ್ಮ ಹಾದಿಗೊಂಡು ಹೋಗುತ್ತಿರ್ದು ನಾನೆತ್ತ ಹೋದೆನೆಂದರಿಯೆನಯ್ಯ! ಬಸವಪ್ರಿಯ ಕೂಡಲಚೆನ್ನಬಸವಣ್ಣ, ನಾ ಹೋದ ಹಾದಿಯ ನೀವೆ ಬಲ್ಲಿರಿ.

೮೯

ಅಯ್ಯ, ಏನು ಏನು ಇಲ್ಲದಂದು, ಧರೆ ಬ್ರಹ್ಮಾಂಡಂಗಳು ಇಲ್ಲದಂದು, ಸಚರಾಚರ ರಚನೆಗೆ ಬಾರದಂದು, ಅಂದು ನೀವಿಪ್ಪ ಭೇದವ ಎನಗೆ ತೋರಿದಿರಾಗಿ, ಅದು ಹೇಗೆಂದರೆ: ನಾನು ಪುಷ್ಪದ ಹಾಗೆ ನೀವು ಪರಿಮಳದ ಹಾಗೆ, ನಾನಾಲಿಯ ಹಾಗೆ ನೀವು ನೋಟದ ಹಾಗೆ, ನಾ ಬ್ರಹ್ಮಾಂಡದ ಹಾಗೆ ನೀವು ಬಯಲಿನ ಹಾಗೆ ಒಳಹೊರಗೆ ಪರಿಪೂರ್ಣವಾಗಿಪ್ಪಿರಿಯಾಗಿ, ಆ ಭೇದವನು ಎನಗೆ ನೀವೆ ಅರುಹಿದಿರಾಗಿ, ಉರಿ ಕರ್ಪೂರದ ಸಂಯೋಗದಂತೆ ಎರಡು ಒಂದೆ ಎಂಬ ಭೇದವ ಎನ್ನ ಗುರುತಂದೆ ನೀವು ತೋರಿದಿರಲ್ಲ ಚೆನ್ನಮಲ್ಲೇಶ್ವರ–ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ, ನೀವೆನ್ನ ಪರಮಾರಾಧ್ಯರಾದ ಕಾರಣ.

೯೦

ಪಾತಾಳದಿಂದತ್ತ ಮಾತ ಬಲ್ಲವರಿಲ್ಲ. ಗಗನದಿಂದ ಮೇಲೆ ಅನುಭಾವ ತಾನಿಲ್ಲ. ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ. ಹೊರಗಣ ಹೊರಗನು ಅರಿಯಬಲ್ಲವರಿಲ್ಲ. ಹಿಂದಣ ಹಿಂದನು, ಮುಂದಣ ಮುಂದನು, ತಂದೆ ತೋರಿದನು ನಮ್ಮ ಗೊಹೇಶ್ವರನು.

೯೧

ಎನ್ನ ಭಾವವ ಸಿಂಹಾಸನವ ಮಾಡಿದನಯ್ಯ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಮನವ ಸಿಂಹಾಸನವ ಮಾಡಿದನಯ್ಯ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಕಂಗಳ ಸಿಂಹಾಸನವ ಮಾಡಿದನಯ್ಯ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಕರಸ್ಥಲವ ಸಿಂಹಾಸನವ ಮಾಡಿದ ಮಾಡಿದನಯ್ಯ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಪರಿಭವವ ತಪ್ಪಿಸಿದ ಶ್ರೀಗುರುವಿಂಗೆ ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ!

೯೨

ಶ್ರೀಗುರುವಿನಿಂದಧಿಕರು ಆವ ಲೋಕದೊಳಗಿಲ್ಲವಯ್ಯಾ. ಶ್ರೀಗುರುವಿನಂತೆ ಪರೋಪಕಾರಿಗಳ ಮತ್ತಾರನು ಕಾಣೆನಯ್ಯಾ. ಅದೆಂತೆಂದೊಡೆ: ಎನ್ನ ಕಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಕಿವಿಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ನಾಸಿಕ ನಾಲಗೆಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ತನು ಮನ ಪ್ರಾಣಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮ ಶಿವಲಿಂಗಕ್ಕೆ. ಎನ್ನ ಸಕಲ ಕರಣೇಂದ್ರಿಯಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು ಪರಮ ಶಿವಲಿಂಗಕ್ಕೆ. ಇಂತಿವು ಮೊದಲಾಗಿ ಎನ್ನ ಸರ್ವ ಅವಯವಂಗಳನ್ನೆಲ್ಲ ಸದ್‌ಭಕ್ತರ ಮಾಡಿ ಲಿಂಗಾರ್ಪಿತಕ್ಕೆ ಅನುಗೊಳಿಸಿದ ಶ್ರೀಗುರುವಿನ ಮಹಾಘನ ನಿಲವಿಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ!

೯೩

ಗುರುವಿನಿಂದ ಉಪದೇಶವ ಪಡೆದು, ಗುರುಪುತ್ರನೆನಿಸಿಕೊಂಡು, ಬಳಿಕ ಪೂರ್ವದ ತಂದೆ ತಾಯಿಯೆಂದು, ಬಂಧು ಬಳಗವೆಂದು ಮಲ ಸಂಬಂಧವ ನೆನೆಯಲಾಗದು ಕಾಣಿರೋ. ನೆನೆದಿರಿಯಾದರೆ ಶಿವದ್ರೋಹ ತಪ್ಪದಯ್ಯಾ. ಇನ್ನು ನಿಮಗೆ ತಾಯಿ ತಂದೆಯ ಹೇಳಿಹೆ ಕೇಳಿ. ಗುರುವೇ

ತಾಯಿ, ಗುರುವೇ ತಂದೆ, ಗುರುವೇ ಬಂಧು. ಗುರುವಿನಿಂದ ಪರವಿನ್ನಾರೂ ಇಲ್ಲವೆಂದು ನಂಬಬಲ್ಲರೆ ಶಿಷ್ಯನೆಂಬೆನಯ್ಯಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೇ.

ಗುರು-ಶಿಷ್ಯ ಸಂಬಂಧ—ವಿವೇಚನೆ

೯೪

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ! ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ? ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ! ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ! ಗೊಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

೯೫

ಗುರು ಶಿಷ್ಯ ಸಂಬಂಧವೆಂತಿಪ್ಪುದೆಂದಡೆ ಹೇಳಿಹೆ ಕೇಳಿರೋ, ಅರೆಮರುಳುಗಳಿರಾ. ಕಾಯಗುಣವಳಿದುದೇ ಗುರು, ಜೀವಗುಣವಳಿದುದೇ ಲಿಂಗ, ಪ್ರಾಣಗುಣವಳಿದುದೇ ಜಂಗಮ. ಈ ತ್ರಿವಿಧವನರಿದು ಆ ತ್ರಿವಿಧ ನಿಕ್ಷೇಪವನರುಹಿಸಿ ಕೊಟ್ಟವನೀಗ ಗುರು. ಅಲ್ಲಿ ಉಪದೇಶವ ಕೊಂಡವ ನೀಗ ಶಿಷ್ಯ. ಹೀಗಿರುವನೀಗ ಗುರು ಶಿಷ್ಯ ಸಂಬಂಧ. ಅದಕ್ಕೆ ನಮೋ ನಮೋ ಎಂಬೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೯೬

ಗುರು ಶಿಷ್ಯರ ಸಂಬಂಧವನಾರು ಬಲ್ಲರೋ? ನೆರೆದ ನೆರವಿಗೆ ಹೇಳಲುಂಟೇ ಈ ಮಾತು? ಸ್ತ್ರೀ ಪುರುಷರ ಸ್ನೇಹದ ಕೂಟವ

ಮತ್ತೊಬ್ಬರಿಗರುಹಬಾರದು. ಗುರು ಶಿಷ್ಯ ಸಂಬಂಧವನಿನ್ನಾರು ಬಲ್ಲರಯ್ಯಾ ಕಲಿದೇವಯ್ಯಾ?

೯೭

ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ, ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯ ಹೋಲುವಂತೆ, ಧಾನ್ಯಂಗಳಿಂದ ಬೆಳೆದ ಬೆಳಸು ಧಾನ್ಯಂಗಳ ಹೋಲುವಂತೆ, ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪ ವಲ್ಲದೆ ಬೇರೊಂದು ರೂಪವಲ್ಲವಯ್ಯ ಅಖಂಡೇಶ್ವರಾ.

೯೮

ಜ್ಯೋತಿಯ ಸಂಗದಿಂದ ಕರ್ಪುರವು ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಲವಣವು ಅಪ್ಪುವಪ್ಪಂತೆ, ಶ್ರೀಗುರುವಿನ ಸಂಗದಿಂದ ಶಿಷ್ಯನು ಶ್ರೀಗುರುವಪ್ಪುದು ತಪ್ಪದು. "ಯಥಾ ಬೀಜಂ ತಥಾಂಕುರಂ" ಎಂಬುದು ತಪ್ಪದು, ದಿಟ ದಿಟ ನೋಡಾ. ಕಲ್ಪವೃಕ್ಷದ ಬೀಜದಿಂದಾದ ಸಸಿಯು ಕಲ್ಪ ವೃಕ್ಷವಪ್ಪುದು ತಪ್ಪದು ನೋಡಾ. ಕಾಮಧೇನುವಿನ ಶಿಶು ಕಾಮಧೇನು ವಪ್ಪುದು ತಪ್ಪದು, ದಿಟ ದಿಟ ನೋಡಾ. ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ದಿಟ ದಿಟ ನೋಡಾ. "ಯಥಾ ಬೀಜಂ ತಥಾಂಕುರಂ" ಎಂಬ ವಾಕ್ಯ ತಪ್ಪದು; ಶಿವ ಬಲ್ಲನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೯೯

ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ? ಜ್ಯೋತಿ ಯಿಂದೊದಗಿದ ಜ್ಯೋತಿಯಂತಿರಬೇಕು. ದರ್ಪಣದೊಳಡಗಿದ ಪ್ರತಿ ಬಿಂಬದಂತಿರಬೇಕು. ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಮರೀಚಿಕಾ ಜಲದಂತಿರಬೇಕು.

೧೦೦

ಅರಿವನರಿದಹೆನೆಂಬುದು ಮರವೆ. ಮರಹ ಮರೆದಹೆನೆಂಬುದು ಮರವೆ. ಸಾಕಾರ ನಷ್ಟ ನಿರಾಕಾರ ದೃಷ್ಟವೆಂಬುದು ಭಾವದ ಬಳಲಿಕೆ.

ಗುರುವೆಂಬುದು ಶಿಷ್ಯನೆಂದಲ್ಲಿಯೆ ಹೋಯಿತ್ತು. ಶಿಷ್ಯನೆಂಬುದು ಗುರುವೆಂದಲ್ಲಿಯೆ ಹೋಯಿತ್ತು. ನಿರ್ಣಯದಲ್ಲಿ ನಿಜೈಕ್ಯನಾದಹೆನೆಂದರೆ ಎಚ್ಚರಿಕೆಯಲ್ಲಿ ತಪ್ಪಿತ್ತು. ಸಹಜಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರುವುಂಟೆ? ಗೊಹೇಶ್ವರಲಿಂಗದಲ್ಲಿ ಪರವೆಂದಲ್ಲಿ ಗುರು ಉಂಟಲ್ಲದೆ, ಸ್ವಯವೆಂದಲ್ಲಿ ನುಡಿಯಲಿಲ್ಲ!

೧೦೧

ಗುರುವಿಂಗೂ ಶಿಷ್ಯಂಗೂ ಆವುದು ದೂರ, ಆವುದು ಸಾರೆಯಂಬುದನಾರು ಬಲ್ಲರು? ಗುರುವೆ ಶಿಷ್ಯನಾದ ತನ್ನ ವಿನೋದಕ್ಕೆ; ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ. ಕರ್ಮವೆಂಬ ಕೌಟಿಲ್ಯ ಎಡೆವೊಕ್ಕ ಕಾರಣ, ಭಿನ್ನವಾಗಿ ಇದ್ದಿತೆಂದರೆ ಅದು ನಿಶ್ಚಯವಹುದೇ? ಆದಿಯನಾದಿಯಿಂದತ್ತತ್ತ ಮುನ್ನಲಾದ ಪರತತ್ವವುಂ ತಿಳಿದು ನೋಡಲು, ನೀನೆ ಸ್ವಯಂಜ್ಯೋತಿ ಪ್ರಕಾಶನೆಂದರಿಯಲು, ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವುಪ್ಪ ಗುರುವುಂಟೇ? ಇದು ಕಾರಣ, ಗೊಹೇಶ್ವರಲಿಂಗವು ತಾನೆ ಎಂಬುದನು ನಿನ್ನಿಂದ ನೀನೆ ಅರಿಯ ಬೇಕು ನೋಡಾ!

೧೦೨

ಗುರುವಿನ ಪರಿ ವಿಪರೀತವಾಯಿತ್ತಯ್ಯ! ಭ್ರಮರಕೀಟ ನ್ಯಾಯದಂತಾಯಿತ್ತು. ಗುರು ತನ್ನ ನೆನೆವನ್ನಬರ ಎನ್ನನಾ ಗುರುವ ಮಾಡಿದನು. ಇನ್ನು ಶಿಷ್ಯನಾಗಿ ಶ್ರೀಗುರುವ ಪೂಜಿಸುವರಾರು ಹೇಳಾ ಗೊಹೇಶ್ವರಾ?

೧೦೩

ಅರಿವಿನ ಹೃದಯ ಕಂದೆರೆಯಬೇಕೆಂದು, ಗುರುವೆಂದು ಕಲ್ಪಿಸಿಕೊಂಡರಲ್ಲದೆ, ಗುರುವೆಂದೆನಲುಂಟೆ ಶಿಷ್ಯಂಗೆ, ಶಿಷ್ಯನೆಂದೆನಲುಂಟೆ ಗುರುವಿಂಗೆ? ಗಮನಾಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದು ಹೇಳಾ ಗೊಹೇಶ್ವರಾ?

೧೦೪

ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ, ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ. ಗೊಹೇಶ್ವರ, ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ ಕೊಟ್ಟರೆ ಭಾವ ಬತ್ತಲೆಯಾಯಿತ್ತು.

೧೦೫

ಜ್ಯೋತಿಯೊಳಗಣ ಕರ್ಪುರಕ್ಕೆ, ಅಪ್ಪುವಿನ ಕೈಯಲ್ಲಿಪ್ಪ ಉಪ್ಪುವಿಂಗೆ, ಶ್ರೀ ಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ, ಈ ಮೂರಕ್ಕೆಯು ಬೇರೆ ಕ್ರಿಯಾವರ್ತನೆಯುಂಟೆ ಗೊಹೇಶ್ವರ?

೧೦೬

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ, ತನ್ನ ಪ್ರಾಣಲಿಂಗವ ಕೊಟ್ಟು, ಕರ್ಣದಲ್ಲಿ ಮಂತ್ರವ ನಿಕ್ಷೇಪಿಸಿ, ಬಳಿಕ ಆವ ಬಂದು ಶಿಷ್ಯನ ಮನೆಯ ಹೊಗಲೊಲ್ಲದೆ, ಅಕ್ಕಿ ಪಡಿಯ ತರಿಸಿಕೊಂಡು, ಹೊಸ ಬಳಕೆ ಎಂದು ಮಾಡಿಸಿಕೊಂಡುಂಬವಂಗೇನೆಂಬೆನಯ್ಯಾ? ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ. ಇದು ಕಾರಣವಾಗಿ ಕೂಡಲ ಚೆನ್ನಸಂಗಯ್ಯ, ಲಿಂಗವ ಮಾರಿಕೊಂಡುಂಬ ಭಂಗಗಾರರ ಕಂಡು ನಾಚಿ ಬೆರಗಾದೆನಯ್ಯಾ!

೧೦೭

ಭಿನ್ನಗುರುವಿನ ಕೈಯಿಂದ ಪಡೆಕೊಂಡ ಲಿಂಗವ ಮರಳಿ ಜ್ಞಾನ ಗುರುವಿನ ಕೈಯಲ್ಲಿ ಕೊಟ್ಟು ಲಿಂಗವ ಪಡೆಯುಲು ಬೇಕು. ಇದಕ್ಕೆ ಸಂಶಯ ಮಾಡುವಿರಿ; ಸಂಶಯ ಮಾಡಲಾಗದು. ಅದು ಅಜ್ಞಾನದೊಳಗು. ಅದೆಂತೆಂದೊಡೆ ಇದಕ್ಕೆ ದೃಷ್ಟಾಂತ: ಲೌಕಿಕದಲ್ಲಿ ಪಂಚಾಳ ಕುಲದಲ್ಲಿ ಒಬ್ಬ ಪತ್ತಾರನಿಗೆ ಒಂದು ಸನಗು ಮಾಡಿಕೊಡೆಂದು ಕೊಟ್ಟರೆ, ಅವರು ಮಾಡಿಕೊಟ್ಟ ಸನಗು ತಮಗೆ ಪರಿಣಾಮವಪ್ಪಿದರೆ ಇಟ್ಟುಕೊಂಬುವರು.

ಪರಿಣಾಮವಿಲ್ಲದಾದರೆ, ಮರಳಿ ಮತ್ತೊಬ್ಬ ಜಾಣ ಪತ್ತಾರನ ಕೈಯಿಂದ ಮಾಡಿಸಿ ಇಟ್ಟು ಕೊಂಬುವರು. ಮತ್ತಂ, ಒಬ್ಬ ಬಡಿಗನಿಂದ ಆವುದಾನೊಂದು ಗಳೆಯು ಹಾಸಿಕೊಂಡೊಯಿದು ಹೋಗಿ ಭೂಮಿಯಲ್ಲಿ ಹೊಡಿಹೊಡೆದರೆ, ನೀಟವಾಗಿ ನಡೆದರೆ ಹೂಡುವರು. ಒಬ್ಬ ಸಿಂಪಿಗನಲ್ಲಿ ಆವುದಾನೊಂದು ಉಡಿಗೆ ತೊಡಿಗೆ ಹೊಲಿಸಿಕೊಂಡು ಉಟ್ಟು ತೊಟ್ಟರೆ, ತಮ್ಮಂಗಕ್ಕೆ ಹಿತವಪ್ಪಿದರೆ ಇಟ್ಟು ಕೊಂಬುವರು, ಇಲ್ಲವಾದರೆ ಮರಳಿ ಮತ್ತೊಬ್ಬ ಜಾಣ ಸಿಂಪಿಗನಲ್ಲಿ ಹೊಲಿಸಿಕೊಂಡು ತೊಡುವರಲ್ಲದೆ, ಹಾಗೆ ತೊಡರು. ಇಂತೀ ತ್ರಿವಿಧವು ಮೊದಲೇ ಇದ್ದ ಹಾಗೆ ಆಚರಿಸಿದಡೆ ಅವರಂಗಕ್ಕೆ ದಣುವಲ್ಲದೆ, ಹಿತಕರವಾಗಿ ತೋರದೆಂಬ ಹಾಗೆ, ಅಂತಪ್ಪ ಭಿನ್ನಭಾವದ ಶ್ರೀಗುರುವಿನ ಉಪದೇಶವ ವಿಸರ್ಜಿಸಿ, ಅಭಿನ್ನಭಾವವೆಂಬ ಸ್ವಾನುಭಾವಜ್ಞಾನ ಗುರುಮುಖದಿಂ ತಾರಕಮಂತ್ರೋಪದೇಶವ ಪಡೆದು, ಲಿಂಗಧಾರಣವಾದೊಡೆಯು, ವೀರಶೈವರ ಅಚ್ಚು, ಪುರಾತನರ ಮಚ್ಚು, ಸರ್ವಗಣಂಗಳಿಗೆ ಸಮ್ಮತ. ಇಂತಪ್ಪ ವಿಚಾರವನರಿಯದೆ, ಮೂಢಮತಿಯಿಂದ ಕಾಡಲಿಂಗವ ಕೊಟ್ಟು, ಪೂಜಿಸು ಎಂದು ಹೇಳುವ ಗುರುವು, ಆ ಕಲ್ಲುಲಿಂಗವ ಕೈಯಲ್ಲಿ ಪಿಡಿದು, ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜಿಸುವ ಶಿಷ್ಯನು, ಬಳ್ಳಿಗುರುವಿನ ಕೈ ಬಳ್ಳಿಗುರುಡ ಪಿಡಿದು, ಕಾಣದೆ ಡೊಂಗುರವ ಬಿದ್ದಂತೆ, ಗುರು ಶಿಷ್ಯರೆಂಬುಭಯರು ಯಮಗೊಂಡದಲ್ಲಿ ಬೀಳುವರು ನೋಡೆಂದ ಕಾಡಿನೊಳಗಾದ ಶಂಕರಪ್ರಿಯ ಕದಂಬಲಿಂಗ ನಿರ್ವಾಣಿಯ ಪ್ರಭುವೇ.

೧೦೮

ಏರಿಯ ಕಟ್ಟಬಹುದಲ್ಲದೆ, ನೀರ ತುಂಬಬಹುದೇ? ಕೈದು ಕೊಡಬಹುದಲ್ಲದೆ, ಕಲಿತನವ ಕೊಡಬಹುದೆ? ವಿವಾಹವ ಮಾಡಬಹುದಲ್ಲದೆ, ಪುರುಷತನವನರಸಬಹುದೆ? ಘನವ ತೋರಬಹುದಲ್ಲದೆ, ನೆನಹ ನಿಲಿಸಬಹುದೆ? 'ಓದೊಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಲೋಕದ ಗಾದೆಮಾತಿನಂತೆ, ಸದ್ಗುರು ಕಾರುಣ್ಯವಾದರೂ ಸಾಧಿಸಿದವನಿಲ್ಲ ಸಕಳೇಶ್ವರಾ.

೧೧೯

ಕಟ್ಟಿದ ಬುತ್ತಿ ಎಷ್ಟುದಿನ ಈಡೇರಲಾಪುದು ? ಭಿನ್ನ ಕೊಡದಲ್ಲಿ ಅಮೃತವ ತುಂಬಿದರೆ ಎಷ್ಟು ಹೊತ್ತು ಇರಲಾಪುದು ? ಖ್ಯಾತಿಯ ಭಕ್ತಿ, ಕಲಿಕೆಯ ವಿರಕ್ತಿ ಅದರಂತೆ ಕಂಡಯ್ಯ ! ಸದ್‌ಗುರುನಾಥ ಉದ್ಯೋಗಿಸಿ ಕೊಟ್ಟಂದು ನಿಜವಲ್ಲದೆ ಉಳಿದುದೆಲ್ಲ ಅಬದ್ಧವೆಂಬೆನಯ್ಯ ಅಖಂಡೇಶ್ವರಾ.

೧೧೦

ಅಡ್ಡಬಿದ್ದು ಶಿಷ್ಯನ ಮಾಡಿಕೊಂಬ ದಡ್ಡ ಪ್ರಾಣಿಗಳನೇನೆಂಬೆನಯ್ಯ ? ಏನೇನು ಅರಿಯದ ಎಡ್ಡ ಮಾನವರಿಗೆ ಉಪದೇಶವ ಮಾಡುವ ಗೊಡ್ಡ ಮಾನವನ ಮುಖವ ತೋರದಿರಯ್ಯ. ಅದೇನು ಕಾರಣವೆಂದಡೆ, ಆ ಮೂಢ ಜೀವಿಯ ಪ್ರಪಂಚವ ಕಳೆಯಲಿಲ್ಲ. ಅವನ ಪಂಚೇಂದ್ರಿಯಂಗಳು ಸಪ್ತ ವ್ಯಸನಂಗಳು ಅಷ್ಟ ಮದಂಗಳೆಂಬ ಖೊಟ್ಟಿ ಗುಣಂಗಳ ಬಿಡಿಸಲಿಲ್ಲ. ಸೂತಕ ಪಾತಕಂಗಳ ಕೆಡಿಸಿ, ಮೂರು ಮಲಂಗಳ ಬಿಡಿಸಿ, ಮುಕ್ತಿ ಪಥಂಗಳನರುಹಲಿಲ್ಲ. ಮಹಾಶೂನ್ಯ ನಿರಾಳ ನಿರಂಜನ ಲಿಂಗವ ಕರ ಮನ ಭಾವ ಸರ್ವಾಂಗದಲ್ಲಿ ತುಂಬಿ ನಿತ್ಯನೆಂದೆನಿಸಲಿಲ್ಲ. ಇದನರಿಯದ ವ್ಯರ್ಥ ಕಾಯರುಗಳ ಗುರುವೆಂದಡೆ ಪ್ರಮಥರು ಮೆಚ್ಚುವರೆ ? ಇಂತಪ್ಪ ಗುರು ಶಿಷ್ಯರಿರ್ವರು ಅಜ್ಞಾನಿಗಳು. ಅವರು ಇಹಲೋಕ ಪರಲೋಕಕ್ಕೆ ಹೊರಗೆಂದಾತ ನಂಬಿಗ ಚೌಡಯ್ಯ.

೧೧೧

ಕಬ್ಬುನದ ಶುನಕನ ತಂದು ಪರುಷವ ಮುಟ್ಟಿಸಲೊಡನೆ ಹೊನ್ನ ಶುನಕನಪ್ಪುದಲ್ಲದೆ, ಪರುಷವಾಗಲರಿಯದು ನೋಡಾ ! ಲೋಕದ ಮಾನವನ ತಂದು ಭಕ್ತನ ಮಾಡಿದೊಡೆ, ವೇಷಲಾಂಛನಿಯಹನಲ್ಲದೆ ಭಕ್ತನಾಗಲರಿಯ ನೋಡಾ. ಇದು ಕಾರಣ, ಕೂಡಲಚೆನ್ನಸಂಗನು ದೇವಯ್ಯ, ಮಜ್ಜನಕ್ಕೆರೆವ ಭವಿಗಳನೆಂತು ಭಕ್ತರೆಂಬೆನಯ್ಯಾ ?

೧೧೨

ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ ಕೊಳೆವುದಲ್ಲದೆ ಬಲುಹಾಗಬಲ್ಲುದೇ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ ಭಕ್ತಿ ಎಂತಹುದೋ ಮುನ್ನಿನಂತೆ? ಕೂಡಲಸಂಗಯ್ಯಾ, ಮನನನಹೀ ಮೀಸಲ ಕಾಯ್ದಿರಿಸಿದಂತೆ!

೧೧೩

ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ, ವಿಷಯಸುಖಂಗಳಿಗೆ ಹುಸಿಯನೆ ನುಡಿದು, ಗಸಣಿಗೊಳಗಾಗುವ ಮನುಜರೆತ್ತ ಬಲ್ಲರೋ ಮಹಾಘನಗುರುವಿನ ನೆಲೆಯ? ಮರಣ ಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರೋ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ?

೧೧೪

ಸಗಣೆಯ ಜೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ! ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚನಿಚ್ಚಕ್ಕೆ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ! ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ ಶಿವಭಕ್ತನಹನು ಕೂಡಲಸಂಗಮದೇವಾ?

೧೧೫

ಸ್ವಲ್ಪ ಅಮೃತಾನ್ನವನೊಯ್ದು ಹುತ್ತವೆಂದು ಬಿಲದ್ವಾರದಲ್ಲಿ ಹೊಯ್ವ ತೊತ್ತಿಗೆಲ್ಲಿಯದೋ ಶಿವಾಚಾರ? ಅದು ಎಂತೆಂದೊಡೆ, ಕಲ್ಲ ನಾಗರ ಕಂಡರೆ ಹಾಲ ಹೊಯ್ಯೆಂಬಳು, ಬದುಕಿದ ನಾಗರ ಕಂಡರೆ ಕೊಲ್ಲು ಕೊಲ್ಲು ಎಂಬಳು. ಉಂಬ ದೇವರು ಬಂದರೆ ಇಲ್ಲವೆಂದು ಅಟ್ಟುವಳು, ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣು ಉಣ್ಣು ಎಂಬಳು. ಇಂಥ ವೇಷದ ಡಂಭ ತೊತ್ತಿಗೆ ವಿಚಾರಿಸದೆ ಲಿಂಗವ ಕೊಡಲಾಗದೆಂದಾತ ನಮ್ಮ ಅಂಬಿಗರ ಚೌಡಯ್ಯನು.

೧೧೬

ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರದೊಳಗೆ ಹುಟ್ಟಿದ ಯೋನಿ ಇಲ್ಲ, ಮೆಟ್ಟಿದ ನೆಲನಿಲ್ಲ. ಉಣ್ಣದಾಹಾರವಿಲ್ಲ, ಕಾಣದ ದುಃಖವಿಲ್ಲ. ಇಂತೀ ನಾನಾಜನ್ಮದಲ್ಲಿ ನುಗ್ಗುನುರಿಯಾಗಿ ಬಂದವಂಗೆ, ಪ್ರಾಯಶ್ಚಿತ್ತವಿಲ್ಲದೆ ಗುರುವ ಮುಟ್ಟಬಹುದೆ? ಲಿಂಗವನರ್ಚಿಸಬಹುದೆ? ಪ್ರಸಾದವ ಕೊಳಬಹುದೆ? ಕೂಡಲಚೆನ್ನಸಂಗಮದೇವಾ, ಈ ಹೀಗೆ ತ್ರಿಕರಣಶುದ್ಧವಿಲ್ಲದವಂಗೆ ಉಪದೇಶವ ಕೊಟ್ಟ ಗುರುವಿಂಗೆ ನಾಯಕ ನರಕ ತಪ್ಪದು. ಅಂತಪ್ಪ ಪಾಪಿಗೆ ಎಚ್ಚರವ ಕೊಟ್ಟಡೆಯು ಅದೆ ಸರಿ.

೧೧೭

ಹೊಲಬನರಿಯದ ಗುರುವು ಸುಲಭನಲ್ಲದ ಶಿಷ್ಯನ ಕೆಲಬಲನ ನೋಡಿ ವಿಚಾರಿಸಿ ಮಾಡದುಪದೇಶ, ಅಂಧಕನ ಕಯ್ಯ ಅಂಧಕ ಹಿಡಿದಂತೆ ಕಾಣಾ ರಾಮನಾಥಾ.

೧೧೮

ಅರಿಯದ ಗುರು, ಅರಿಯದ ಶಿಷ್ಯ ಇವರಿಬ್ಬರಿಗೇನಪ್ಪುದೊ? ಕುರುಡ ಕುರುಡನ ಕೈಯ ಪಿಡಿದು ಪಥವ ನಡೆಯಬಲ್ಲರೇ? ತೊರೆಯಲದ್ದಿ ಹೋಹನ ಈಸಲರಿಯದವ ತೆಗೆದಂತಾಯಿತ್ತೆಂದನಂಬಿಗ ಚೌಡಯ್ಯ.

೧೧೯

ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ; ಉಪಚಾರದ ಲಿಂಗ, ಉಪಚಾರದ ಜಂಗಮು. ಉಪಚಾರದ ಪ್ರಸಾದವ ಕೊಂಡು, ಗುರುವಿಂಗೆ ಭವದ ಲೆಂಕನಾಗಿ, ಅಂಧಕನ ಕೈಯ ಅಂಧಕ ಹಿಡಿದಂತೆ ಇವರಿಬ್ಬರು ಹೊಲಬುಗೆಟ್ಟರು ಕಾಣಾ ಗೊಹೇಶ್ವರಾ.

೧೨೦

ಎರಡು ಗ್ರಾಮದ ನಡುವೆ ಕಟ್ಟಿದಸೀಮೆಯ ಕಲ್ಲು! ಆದಿಯನರಿಯದ ಗುರು, ಭೇದಿಸಲರಿಯದ ಶಿಷ್ಯ. ಅದ ಕಟ್ಟಿದಾತ ಗುರುವಲ್ಲ, ಕಟ್ಟಿಸಿ ಕೊಂಡಾತ ಶಿಷ್ಯನಲ್ಲ. ಇವರಿಬ್ಬರು ಭ್ರಷ್ಟರೆಂದಾತ ಅಂಬಿಗರ ಚೌಡಯ್ಯ.

೧೨೧

ಒಂದರ ಮೋರೆಯನೊಂದು ಮೂಸಿ ನೋಡಿ,ಮತ್ತೊಚ್ಚಿ ಹೊತ್ತಿಂಗೆ ಕಚ್ಚಿಯಾಡಿ ಹೋದಂತಾಯಿತ್ತು ನೋಡಿರೇ ಕಲಿಯುಗದೊಳಗಣ ಮೇಳಾಪವ! ಗುರುವೆಂಬಾತ ಶಿಷ್ಯನಂತುವನರಿಯ, ಶಿಷ್ಯನೆಂಬಾತ ಗುರುವಿನಂತುವನರಿಯ. ಭಕ್ತನೆಂಬಾತ ಜಂಗಮದಂತುವನರಿಯ. ಗುರು ಗುರುವಿನಲ್ಲಿ ಸಮವಿಲ್ಲ; ಶಿಷ್ಯ ಶಿಷ್ಯರಲ್ಲಿ ಸಮವಿಲ್ಲ; ಭಕ್ತ ಭಕ್ತರಲ್ಲಿ ಸಮವಿಲ್ಲ; ಜಂಗಮ ಜಂಗಮದಲ್ಲಿ ಸಮವಿಲ್ಲ. ಇದು ಕಾರಣ ಕಲಿಯುಗ ದೊಳಗೆ ಉಪದೇಶವ ಮಾಡುವ ಕಾಳುಗುರಿಕೆ ಮಕ್ಕಳನೇನೆಂಬೆ ಗೊಹೇಶ್ವರಾ?

೧೨೨

ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿದ್ದರೆ, ಆ ಬೆವಸಾಯದ ಘೋರವೇತಕಯ್ಯ? ಕ್ರಯ ವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕ, ಆ ಕ್ರಯ ವಿಕ್ರಯದ ಘೋರವೇತಕಯ್ಯ? ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ,ಆ ಓಲಗದ ಘೋರವೇತಕಯ್ಯ? ಭಕ್ತನಾಗಿ ಭವಂನಾಸ್ತಿಯಾಗದಿದ್ದರೆ, ಆ ಉಪದೇಶವ ಕೊಟ್ಟ ಗುರು, ಕೊಂಡ ಶಿಷ್ಯ, ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ, ಗೊಹೇಶ್ವರಲಿಂಗವತ್ತಲೆ ಹೋಗಲಿ.

೬

ಲಿಂಗ-ಪೂಜೆ

ಕರಸ್ಥಲದ ಜ್ಯೋತಿ—ಇಷ್ಟಲಿಂಗ

೧

ಗುರುಕರುಣವ ಪಡೆದುದಕ್ಕೆ ಚಿಹ್ನವಾವುದೆಂದಡೆ: ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು. ಅಂಗದ ಮೇಲೆ ಲಿಂಗ ಸ್ವಾಯತವಿಲ್ಲದೆ ಬರಿದೆ ಗುರುಕರುಣವಾಯಿತ್ತೆಂದಡೆ ಅದೆಂತೋ? ಲಿಂಗವಿಹೀನನಾಗಿ ಗುರು ಕರುಣವುಂಟೇ? ಇಲ್ಲ. ಆ ಮಾತ ಕೇಳಲಾಗದು. ಇದು ಕಾರಣ ಲಿಂಗಧಾರಣವುಳ್ಳುದೆ ಸದಾಚಾರ, ಇಲ್ಲದಿರೆ ಅನಾಚಾರವೆಂಬೆನಯ್ಯಾ ತೆಲುಗೇಶ್ವರಾ.

೨

ಮೊನೆಯಿರಿವಡೆ ಕರವಿಡಿಯಲ್ಲಿ ಇರಿದಲ್ಲದಾಗದು. ಮನ ಅರಿವಡೆ ಕುರುಹಿನ ನಿರಿಗೆಯಲ್ಲಿ ಸಲೆ ಸಂದು ನಿಂದಲ್ಲದಾಗದು. ಕ್ರೀ ಭಾವ ಶುದ್ಧವಾಗು,—ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೩

ವಾಯುಪಟವಾಡುವಲ್ಲಿ ಹಿಡಿದವನ ಕೈಯಲ್ಲಿ ನೂಲು ಸಿಕ್ಕಿ ಆಡುವಂತೆ, ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ ಎಡೆಬಿಡುವಿಲ್ಲದಾಡ ಬೇಕು,—ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೪

ಚಿನ್ನ ವಿಶೇಷ, ಮಣ್ಣು ಅಧಮವೆಂದಡೆ ಅದು ನಿಂದು ಕರಗುವದಕ್ಕೆ ಮಣ್ಣಿನ ಕೋವೆಯೇ ಮನೆಯಾಯಿತ್ತು. ಮಿಥ್ಯವನರಿದು ವಸ್ತುವ ನೆಮ್ಮುವದಕ್ಕೆ ಇದೇ ದೃಷ್ಟ,—ಐಘಟದೂರ ರಾಮೇಶ್ವರಲಿಂಗವ ನರಿವುದಕ್ಕೆ.

೫

ಬಟ್ಟೆಯಬಡಿವ ಕಳ್ಳಂಗೆ ಬೇಹು ಸಂಚು ಕಳವು ದೊರಕಿದಂತಾಯಿತ್ತು. ಕುರುಡನೆಡೆಹುತ್ತ ತಡಹಿ ಹಿಡಿದು ಕಂಡಂತಾಯಿತ್ತು. ನಿರ್ಧನಿಕ ಧನದ ಬಯಕೆಯಲ್ಲಿ ನಡೆವುತ್ತ ಎಡಹಿದ ಕಲ್ಲು ಪರುಷವಾದಂತಾಯಿತ್ತು. ಅರಸುವಂಗೆ ಅರಕೆ ತಾನಾದಂತಾಯಿತ್ತು. ಎಲೆ ಗೊಹೇಶ್ವರಾ, ನೀನೆನಗೆ ದೊರಕುವುದೆಂಬುದು ನಾ ಮುನ್ನ ಮಾಡಿದ ಸುಕೃತದ ಫಲವನೇನ ಬಣ್ಣಿಪೆ ಹೇಳಾ!

೬

ಕಾಣದುದನರಸುವರಲ್ಲದೆ, ಕಂಡುದನರಸುವರೆ ಹೇಳಾ? ಘನಕ್ಕೆ ಘನವಾದ ವಸ್ತು ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ, ತಾನೆ ಮಂತ್ರವಾದ, ತಾನೆ ಯಂತ್ರವಾದ, ತಾನೆ ಸಕಲ ವಿದ್ಯಾಸ್ವರೂಪನಾದ; ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಗೊಹೇಶ್ವರ.

೭

ವಿಶ್ವತೋ ಮುಖ ವಿಶ್ವತೋ ಪಾದ ವಿಶ್ವತೋ ಬಾಹು ವಿಶ್ವತೋ ಚಕ್ಷು ವಿಶ್ವತೋ ವ್ಯಾಪಕನೆನಿಸಿ ಬಂದಿರಯ್ಯ ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ.

೮

ಅಯ್ಯಾ, ಪಾತಾಳವಿತ್ತಿತ್ತ, ಶ್ರೀಪಾದವತ್ತತ್ತ. ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ. ಅಯ್ಯಾ, ದಶದಿಕ್ಕು ಇತ್ತಿತ್ತ, ದಶಭುಜಗಳತ್ತತ್ತ. ಚೆನ್ನಮಲ್ಲಿಕಾರ್ಜುನಯ್ಯ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ!

೯

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ! ಪಾತಾಳದಿಂದತ್ತತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ!

ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ, ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ!!

೧೦

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಎಂದೆನಿಸುವ ಲಿಂಗವು, "ಅತ್ಯತಿಷ್ಠದ್ದಶಾಂಗುಲಂ" ಎಂದೆನಿಸುವ ಲಿಂಗವು, "ಶ್ರುತಿ ಚಕಿತಮಭಿದತ್ತೇ" ಎಂದೆನಿಸುವ ಲಿಂಗವು, "ಅಣೋರಣೀಯಾನ್ಮಹತೋ ಮಹೀಯಾನ್" ಎಂದೆನಿಸುವ ಲಿಂಗವು, "ಅಯಂ ಮೇ ಹಸ್ತಂ ಭಗವಾನ್ ಅಯಂ ಮೇ ಭಗವತ್ತರಂ" ಎಂದೆನಿಸುವ ಲಿಂಗವು "ಏಕ ಮೂರ್ತಿಃ ತ್ರಿಧಾ ಭೇದಂ" ಎಂದೆನಿಸುವ ಲಿಂಗವು ಶ್ರೀಗುರು ಲಿಂಗ ಜಂಗಮರೂಪಾಗಿ, "ಇಷ್ಟ ಪ್ರಾಣಸ್ತಥಾ ಭಾವಂ ತ್ರಿಧಾಮೇಕಂ ವರಾನನೇ" ಎಂದುದಾಗಿ, ತ್ರಿವಿಧವು ಏಕೀಭವಿಸಿ, ಲಿಂಗರೂಪಾಗಿ ಎನ್ನ ಕರಸ್ಥಲಕ್ಕೆ ಬಂದು ಕರತಳಾಮಳಕವಾಗಿ ತೋರುತ್ತೈದಾನೆ. ಆಹಾ ಎನ್ನ ಪುಣ್ಯವೆ! ಆಹಾ ಎನ್ನ ಭಾಗ್ಯವೆ! ಆಹಾ ಎನ್ನ ಸತ್ಯವೆ! ಆಹಾ ಎನ್ನ ನಿತ್ಯವೆ! ಶಿವ ಶಿವಾ! ಮಹಾದೇವ ಮಹಾದೇವ, ನೀನೇ ಬಲ್ಲೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ!!

೧೧

ವಟಬೀಜ ವಟವೃಕ್ಷಕೋಟಿಯ ನುಂಗಿಪ್ಪಂತೆ, ಸಟೆಯಿಂದಾದ ಅಜಾಂಡ ಬ್ರಹ್ಮಾಂಡ ಕೋಟಿಯನೊಳಕೊಂಡಿಪ್ಪ ಲಿಂಗವೇ, ದಿಟ ಪುಟವಾಗಿ ಎನ್ನ ಕಣ್ಗೆ ಮನ ಕರಸ್ಥಲಕ್ಕೆ ಬಂದು ಪ್ರಕಟವಾದೆ. ಮಝು ಬಾಪು ಮಝು ಬಾಪು ಲಿಂಗವೇ! ನಚರೇಣು ನಚಕ್ಷುವೆಂದೆನಿಸುವ ಲಿಂಗವೇ, ನಿನ್ನುವ ಮುಟ್ಟೆ ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!

೧೨

ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣವಾದ ಪರವಸ್ತುವು ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು, ಬಳಿಕ ಇನ್ನೆಲ್ಲಿಯದಯ್ಯ ಎನಗೆ ಜಪ ತಪದ

ಚಿಂತೆ? ಇನ್ನೆಲ್ಲಿಯದಯ್ಯ ಎನಗೆ ನೇಮನಿತ್ಯದ ಚಿಂತೆ? ಇನ್ನೆಲ್ಲಿಯದಯ್ಯ ಎನಗೆ ಮೌನ ಮುದ್ರೆಯ ಚಿಂತೆ? ಅಖಂಡೇಶ್ವರಲಿಂಗವು ಎನ್ನೊಳಹೊರಗೆ ತಾನಾದ ಬಳಿಕ ಇನ್ನೆಲ್ಲಿಯದಯ್ಯ ಎನಗೆ ಬೇರೆ ತತ್ವವನರಿಯಬೇಕೆಂಬ ಚಿಂತೆ?

೧೩

ಶ್ರುತಿತತಿಗಳ ಶಿರದ ಮೇಲೆ ಒಪ್ಪುತ್ತಿಪ್ಪ ಅತ್ಯತಿಷ್ಠದ್ದಶಾಂಗುಲನ ಕಂಡೆನಯ್ಯ! ಅಣುವಿಂಗೆ ಅಣು ಮಹತ್ತಿಂಗೆ ಮಹತ್ತಾದ ತ್ರಿಣಯನ ಮೂರ್ತಿಯ ಕಂಡೆನಯ್ಯ! ವಾಙ್ಮನಕ್ಕಗೋಚರವಾದ ನಿರವಯ ಬ್ರಹ್ಮವ ಕಂಡೆನಯ್ಯ! ನಿತ್ಯನೇಕೋರುದ್ರನದ್ವಿತೀಯನ ಕಂಡೆನಯ್ಯ! ಎನ್ನ ಕರಸ್ಥಲದೊಳಗೆ ಮಹಾದಾನಿ ಸೊಡ್ಡಳನ ಕಂಡೆನಯ್ಯ!

೧೪

ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದರೆ ಎನಗಿದು ಸೋಜಿಗ! ಅಹುದೆನಲಮ್ಮೆನು, ಅಲ್ಲೆನಲಮ್ಮೆನು; ಗೊಹೇಶ್ವರಲಿಂಗ ನಿರಾಳ ನಿರಾಕಾರ ಬಯಲು ಆಕಾರವಾದರೆ.

೧೫

ನಾನು ಕಾಮಿಸುತಿರ್ಪ ಸಾಲೋಕ್ಯವಿದೆ; ಸಾಮೀಪ್ಯವಿದೆ; ಸಾರೂಪ್ಯವಿದೆ; ಸಾಯುಜ್ಯವಿದೆ; ಧರ್ಮವಿದೆ; ಅರ್ಥವಿದೆ; ಕಾಮವಿದೆ; ಮೋಕ್ಷವಿದೆ; ನಾನೇನರಸುವ ಬಯಕೆ ಎಲ್ಲವೂ ಇದೆ ನೋಡಾ. ಶ್ರೀ ಗುರು ಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆಬಂದ ಬಳಿಕ ಸರ್ವಸುಖಂಗಳೆಲ್ಲವೂ ಇದೆ ನೋಡಾ. ಇನ್ನೆನ್ನ ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯಾ, ನಿಮ್ಮ ಬೇಡಿಕೊಂಬೆನು. ನಿಮಗೆ ಎನ್ನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೬

ಮನಕ್ಕೆ ಮನೋಹರವಾದ ದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ. ಕಂಗಳಿಗೆ ಮಂಗಳವಾದ ದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ. ಪ್ರಾಣಕ್ಕೆ

ಪರಿಣಾಮವಾದ ದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ. ತನುವಿಂಗೆ ತರಹರವಾದ ದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ. ಅಗಮ್ಯ ಅಗೋಚರನಾದ ಅಖಂಡೇಶ್ವರನೆಂಬ ಲಿಂಗಯ್ಯನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ !

೧೭

ಸಾಕಾರವಿಡಿದರ್ಚನೆ ಪೂಜನೆಯ ಮಾಡುವುದಲ್ಲದೆ, ನಿರಾಕಾರವ ನಂಬಲಾಗದು. ಶ್ರೀಗುರುಲಿಂಗವು ಪ್ರಾಣಲಿಂಗವನು ಕರಸ್ಥಲದಲ್ಲಿ ಬಿಜಯಂಗೈಸಿ ಕರುಣಿಸಿದ ಬಳಿಕ, ವಜ್ರದಲ್ಲಿ ಬಯಲನರಸುವರೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ?

೧೮

ಹಾಡಿರೋ ಜಿಹ್ವೆ ದಣಿಯದೆ ಲಿಂಗವ. ನೋಡಿರೋ ಕಂಗಳು ದಣಿಯದೆ ಲಿಂಗವ. ಮಾಡಿರೋ ಪೂಜೆಯ ಹಸ್ತ ದಣಿಯದೆ ಲಿಂಗವ. ಬೇಡಿರೋ ವರವ ಮನ ಬಂದ ಪರಿಯಲ್ಲಿ ನಮ್ಮ ಅಖಂಡೇಶ್ವರಲಿಂಗವ.

೧೯

ಎನ್ನ ಕರಕಮಲಮಧ್ಯದಲ್ಲಿ ಪರಮಶಿವಲಿಂಗವ ತುಂಬಿ, ಆ ಲಿಂಗದ ಮಧ್ಯದಲ್ಲಿ ಕಂಗಳ ತುಂಬಿ, ಆ ಕಂಗಳ ಮಧ್ಯದಲ್ಲಿ ಮನವ ತುಂಬಿ, ಆ ಮನದ ಮಧ್ಯದಲ್ಲಿ ಭಾವವ ತುಂಬಿ ಪರವಶನಾಗಿರ್ದೆನಯ್ಯ ನಿಮ್ಮೊಳಗೆ ಅಖಂಡೇಶ್ವರಾ!

೨೦

ಅಂಗಯ್ಯ ಲಿಂಗದಲ್ಲಿ ಕಂಗಳು ನಟ್ಟು, ಎವೆ ಹಳಚದೆ, ಮನ ಕವಲಿಡದೆ, ಚಿತ್ರದ ರೂಹಿನ ತೆರನಂತೆ ಲಿಂಗವ ನೋಡಿ ನೋಡಿ ಕಂಗಳಲ್ಲಚ್ಚೊತ್ತಿ, ಮನದಲ್ಲಿ ನೆನೆನೆನೆದು ನೆರೆವ ಲಿಂಗಸುಖಸಂಪನ್ನ ನರನೇ ಲಿಂಗವೆಂಬೆನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೨೧

ಅಮೃತಸಾಗರದೊಳಗಿದ್ದು ಆಕಳ ಚಿಂತೆಯೇಕೆ? ಮೇರುಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ? ಶ್ರೀಗುರುವಿನೊಳಗಿದ್ದು ತತ್ವವಿದ್ಯದ ಚಿಂತೆಯೇಕೆ? ಪ್ರಸಾದದೊಳಗಿದ್ದು ಮುಕ್ತಿಯ ಚಿಂತೆಯೇಕೆ? ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆಯೇಕೆ ಹೇಳಾ ಗೊಹೇಶ್ವರಾ?

೨೨

ಭವವುಳ್ಳನ್ನಕ್ಕರ ಥಾವತಿ ಮಾಣದು, ಶರೀರ ಉಳ್ಳನ್ನಕ್ಕರ ಅವಸ್ಥೆ ಮಾಣದು. ಗೊಹೇಶ್ವರನೆಂಬ ನೆನಹುಳ್ಳನ್ನಕ್ಕರ ಲಿಂಗವೆಂಬುದ ಬಿಡಲಾಗದು.

೨೩

ಶ್ರುತಿಯ ನಂಬದಿರೋ, ಶ್ರುತಿಯ ನಂಬದಿರೋ. ಶ್ರುತಿತತಿಗಳು ಮುನ್ನವೇ ಶಿವನಡಿಯ ಕಾಣದೆ 'ಶ್ರುತಿ ಚಕಿತಮಭಿದತ್ತೇ' ಎನುತ, ಮುನ್ನವೇ ಅರಸಿ ತೊಳಲಿ ಬಳಲುತ್ತೈದಾವೆ. ಶ್ರುತಿ ಹೇಳಿದತ್ತ ಹರಿಹರಿದು ಬಳಲದಿರೋ,ಶೂನ್ಯಕ್ಕೆ ತಲೆವಾರನಿಕ್ಕದಿರೋ. ವಸ್ತು ಹೃದಯದಲುಂಟೆಂದು ನೆನೆಯದಿರೋ. ವಸ್ತು ಭೂಮಧ್ಯದಲುಂಟೆಂದು ಭ್ರಮಿಸದಿರೋ. ವಸ್ತು ಬ್ರಹ್ಮರಂಧ್ರದಲುಂಟೆಂದು ಹೊಲಬುಗೆಡದಿರೋ. ವಸ್ತುನಿಶ್ಚಯವ ಕಾಬಡೆ ಎನ್ನ ಸದ್ಗುರು ಅನಿಮಿಷದೇವನಂತೆ ನಿನ್ನ ಕರಸ್ಥಲದಲ್ಲಿ ನಿಶ್ಚಯಿಸಿ, ವಸ್ತು ನಿಶ್ಚಯವ ಕಂಡು, ನಮ್ಮ ಗೊಹೇಶ್ವರಲಿಂಗದಲ್ಲಿ ನಿಬ್ಬೆರಗಾಗೋ ಮರುಳೇ.

೨೪

ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನಾರು ಬಲ್ಲರು ಹೇಳಾ? ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು. ಬಹಿರಂಗವೆಂಬ ಶಬ್ದಕ್ಕೆ ಅಂತರಂಗ ಮುಂದುಗೊಂಡಿಪ್ಪುದು. ಮನವನೆಡೆಗೊಂಡ ಲಿಂಗದ ಅರಿವು ವಿಚಾರವ್ಯಾಕುಲಕ್ಕೊಳಗಾಗಬಾರದೆಂದು ಮನ ಭಾವ

ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ, ಅಂತರಂಗ ಬಹಿರಂಗ ವೆಂದರಿಯದೆ ಅನಿಮಿಷನಾಗಿಪ್ಪನಾ ಶರಣನು. ಪ್ರಾಣಲಿಂಗದ ಪ್ರಸನ್ನ ಮುಖವ ನೋಡಿ ಪರಿಣಾಮಿಸಲೋಸುಗ ತೇಜವೆಂಬ ದರ್ಪಣವ ಹಿಡಿದಿಪ್ಪ ನೋಡಯ್ಯ! ಗೊಹೇಶ್ವರಲಿಂಗದಲ್ಲಿ ನಿಜವನೈದಿಹೆನೆಂದಡೆ ಕುರುಹುವಿಡಿದು ಕುರುಹುಗೆಡಬೇಕು ನೋಡಾ ಸಿದ್ಧರಾಮಯ್ಯ.

೨೫

ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ, ಎಣ್ಣೆಗೆ ಪರಿಮಳ ವೇಧಿಸದು. ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು. ಇದು ಕಾರಣ ಗೊಹೇಶ್ವರಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಾದಲ್ಲದೆ ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ ಸಿದ್ಧರಾಮಯ್ಯ.

೨೬

ಆಚಾರಲಿಂಗವಿಡಿದು ಗುರುಲಿಂಗವ ಕಾಣಬೇಕು. ಗುರುಲಿಂಗವಿಡಿದು ಶಿವಲಿಂಗವ ಕಾಣಬೇಕು. ಶಿವಲಿಂಗವಿಡಿದು ಜಂಗಮಲಿಂಗವ ಕಾಣಬೇಕು. ಜಂಗಮಲಿಂಗವಿಡಿದು ಪ್ರಸಾದಲಿಂಗವ ಕಾಣಬೇಕು. ಪ್ರಸಾದಲಿಂಗ ವಿಡಿದು ಮಹಾಲಿಂಗವ ಕಾಣಬೇಕು. ಇಂತೀ ಷಡುಸ್ಥಲದ ಧಾತುವ ಸಂಬಂಧಿಸಿ ಒಂದು ಮಾಡಿಕೊಂಡಿಪ್ಪ ಈ ಕರಸ್ಥಲದ ಅನುವ ಗೊಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ; ಬೆಸಗೊಂಬ ಬಾರಾ ಸಿದ್ಧರಾಮಯ್ಯ.

೨೭

ರತ್ನ ದೀಪ್ತಿಯಾದಡೇನು? ಬಂಧಿಸಿದ ಕುಂದಣದಲ್ಲಿಯೆ ಸಂದಿರಬೇಕು, ಸ್ವಾದುರಸದ ರುಚಿಯನೀವ ಫಲವೆಂದಡೇನು, ವೃಕ್ಷವಿಲ್ಲದನ್ನಕ್ಕರ? ಚಿತ್ರ ಸೌಂದರ್ಯ ನೋಟಕ್ಕೆ ಸುಖವೆಂದಡೇನು, ಭಿತ್ತಿಯ ಪಟ ಮುಖ್ಯ ಸ್ಥಾನವಿಲ್ಲದನ್ನಕ್ಕರ? ಅಂಜನ ಸಿದ್ಧಿಯ ನಿಧಾನವ ಕಂಡಡೇನು, ಸಾಧನ ಕ್ರೀಯಿಂದ ಸಾಧ್ಯವ ಮಾಡಿಕೊಳ್ಳದನ್ನಕ್ಕರ? ಇದು ಕಾರಣ, ಕಾಯದ ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವಿಲ್ಲದಿದ್ದರೆ ನಿರವಯವಾದ ಜ್ಞಾನಯೋಗದ

ಕೂಟ ಸಾಧ್ಯವಾಗದು. ಇದು ಕಾರಣ ಕ್ರಿಯಾಲಿಂಗ ಸಂಬಂಧವೆ ಭಕ್ತಂಗೆ ಮತವು. ಇದೇ ಬೇಹ ಶೌಚವು. ನಮ್ಮ ಗೊಹೇಶ್ವರನ ಶರಣರ ಮನ ಒಪ್ಪುವಂತೆ ಸಿದ್ಧರಾಮಯ್ಯಂಗೆ ಲಿಂಗಸಾಹಿತ್ಯವ ಮಾಡಾ ಚೆನ್ನಬಸವಣ್ಣ.

೨೮

ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಗಂಗೆ ಹುಟ್ಟಿದ ಮೂರುತಿ, ಮಂತ್ರಕ್ಕೆ ಲಿಂಗವಾಯಿತ್ತಲ್ಲಾ! ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈವಿಡಿವ ಅಜ್ಞ ವ್ರತಗೇಡಿಗಳನೇನೆಂಬೆ ಗೊಹೇಶ್ವರಾ ?

೨೯

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೇ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಭಕ್ತನಾಗಬಲ್ಲನೆ? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ, ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ ಕಂಡಡೆ ನಾಚುವೆನಯ್ಯ ಗೊಹೇಶ್ವರಾ !

೩೦

ಸತ್ತು ಹೋಗುವರೆಲ್ಲ ಸ್ವರ್ಗಪದಸ್ಥರೆ? ಅಲ್ಲಲ್ಲ. ಕೈದುವ ಪಿಡಿವರೆಲ್ಲ ಮಹಾಕಲಿಗಳೆ? ಅಲ್ಲಲ್ಲ. ಲಿಂಗವ ಧರಿಸುವರೆಲ್ಲ ಲಿಂಗಪ್ರಾಣಿಗಳೆ? ಅಲ್ಲಲ್ಲ. ಅದೇನು ಕಾರಣವೆಂದಡೆ: ಕಪಿಯ ಕೈಯಲ್ಲಿ ರತ್ನವ ಕೊಟ್ಟಡೆ ಅದು ಹಣ್ಣೆಂದು ಕಡಿದು ನೋಡಿ, ಕಲ್ಲೆಂದು ಬಿಸುಡುವುದಲ್ಲದೆ, ಆ ರತ್ನದ ದಿವ್ಯ ಬೆಳಗನರಿವುದೆ ಅಯ್ಯಾ? ಇಂತೀ ದೃಷ್ಟದಂತೆ, ಮಡ್ಡಜೀವಿಗಳ ಕೈಯಲ್ಲಿ ದೊಡ್ಡ ಲಿಂಗವಿರ್ದಡೇನು? ಆ ಲಿಂಗದಲ್ಲಿ ಮಹಾಘನ ಪರಮ ಕಳೆಯನರಿಯದ ಬಳಿಕ ಅದು ಒಡ್ಡುಗಲ್ಲಿನಂತೆ ಕಂಡೆಯಾ ಅಖಂಡೇಶ್ವರಾ.

೩೧

ಅರ್ಥರೇಖೆ ಇದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ? ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು? ಅಂಧಕನ ಕೈಯಲ್ಲಿ

ದರ್ಪಣವಿರ್ದು ಫಲವೇನು? ಮರ್ಕಟನ ಕೈಯಲ್ಲಿ ಮಾಣಿಕವಿರ್ದು ಫಲವೇನು? ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ ಲಿಂಗವಿರ್ದು ಫಲವೇನು,-ಶಿವಪಥವನರಿಯದನ್ನಕ್ಕ?

೩೨

ಆಹ್ವಾನಿಸಿ ಕರೆವಲ್ಲಿ ಎಲ್ಲಿರ್ದನೋ, ಈರೇಳು ಲೋಕ ಹದಿನಾಲ್ಕು ಭುವನಂಗಳನೊಳಗೊಂಡಿಪ್ಪ ದಿವ್ಯವಸ್ತು? ಮತ್ತೆ ವಿಸರ್ಜಿಸಿ ಬಿಡುವಾಗ ಎಲ್ಲಿ ಅಡಗಿರ್ದನೋ ಮುಳ್ಳೂರ ತೆರಹಿಲ್ಲದಿರ್ಪ ಅಖಂಡವಸ್ತು? ಬರಿಯ ಮಾತಿನ ಬಳಕೆಯ ತೂತ ಜ್ಞಾನವ ಬಿಟ್ಟು, ನೆಟ್ಟನೆ ತನ್ನ ಕರಸ್ಥಳದೊಳಗಿರುತಿರ್ಪ ಇಷ್ಟಲಿಂಗವ ದಿಟ್ಟಿಸಿ ನೋಡಲು, ಅಲ್ಲಿ ತನ್ನ ಮನಕ್ಕೆ ಮನಸಂಧಾನವಾದ ದಿವ್ಯನಿಶ್ಚಯ ಒದಗೆ, ಈ ದಿವ್ಯನಿಶ್ಚಯದಿಂದ ಕುಳವಡಗಿ ಅದ್ವೈತವಪ್ಪುದು! ಇದು ಕಾರಣ, ನಮ್ಮ ಕೂಡಲಸಂಗನ ಶರಣ ಆಹ್ವಾನ ವಿಸರ್ಜನೆಯೆಂಬುಭಯ ಜಡತೆಯ ಬಿಟ್ಟು ತಮ್ಮ ತಮ್ಮ ಕರಸ್ಥಳದಲ್ಲಿ ನಿಶ್ಚಯಿಸಿದವರಿಗೆ ಸ್ವಯಂ ಲಿಂಗವಾದ ಕಾಣಿರೋ.

೩೩

ಕಾಯಸ್ಥಲ ಕರಸ್ಥಲ ಉರಸ್ಥಲ ಶಿರಸ್ಥಲ ಪ್ರಾಣಸ್ಥಲ ಭಾವಸ್ಥಲವೆಂದು ನುಡಿದಾಡುವರು ಆ ಸ್ಥಲದೊಳಗಣ ಸ್ವಯಸ್ಥಲವನರಿಯರು ಕಾಣಿರೇ. ಸ್ವಯಸ್ಥಲವೆಂತಿಪ್ಪುದೆಂದರೆ: ಕಾಯಸ್ಥಲವನರಿದರೆ, ಅದು ತಾನೇ ಲಿಂಗವಾಯಿತ್ತು. ಕರಸ್ಥಲವನರಿದರೆ, ಕೈಲಾಸ ಮರ್ತ್ಯ ತನ್ನೊಳಗಾಯಿತ್ತು. ಉರಸ್ಥಲವನರಿದರೆ, ಪರವು ತನ್ನೊಳಗಾಯಿತ್ತು. ಶಿರಸ್ಥಲವನರಿದರೆ, ಶಿವನೆಂಬುದಕ್ಕೆ ಇಲ್ಲ. ಪ್ರಾಣಸ್ಥಲವನರಿದರೆ, ಭಯ ಮರಣಾದಿಗಳಿಲ್ಲ. ಭಾವಸ್ಥಲವನರಿದರೆ, ಇನ್ನಾವುದು ನೆನಹಿಲ್ಲ. ಇದರ ಭೇದವನರಿಯದೆ ಸ್ಥಲ ನೆಲೆಯುಂಟೆಂಬಿರಿ. ಅದರ ಭೇದವ ನೀವು ಅರಿಯಿರಿ ಕಾಣಿರೋ. ಸ್ಥಲವೆಂದರೆ ಅಂಗ, ನೆಲೆಯೆಂದರೆ ಪ್ರಾಣ. ಇದನರಿಯದೆ ತಲೆ ಕೆಳಗಾಗಿ ಹೋದರು. ಆರು? ದೇವ ದಾನವರು. ನಿಮ್ಮ ಪಾಡೇನೋ

ನರಗುರಿಗಳಿರಾ? ಇದನರಿದು ಇನ್ನಾದರು ನಮ್ಮ ಶರಣರಿಗೆರಗಿ ಬದುಕಿರೋ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೩೪

ರೂಪನೆ ಕಂಡರು, ನಿರೂಪನೆ ಕಾಣರು. ತನುವನೆ ಕಂಡರು, ಅನುವನೆ ಕಾಣರು. ಆಚಾರವನೆ ಕಂಡರು, ವಿಚಾರವನೆ ಕಾಣರು. ಗೊಹೇಶ್ವರ, ನಿಮ್ಮ ಕುರುಹನೆ ಕಂಡು ಕೂಡಲರಿಯದೆ ಕೆಟ್ಟರು.

ಇಷ್ಟಪೂಜೆ-ಕ್ರಿಯೆ

೩೫

ಸತಿಯರ ಸಂಗವನು, ಅತಿಶಯದ ಗ್ರಾಸವನು, ಪೃಥ್ವಿಗೀಶ್ವರನ ಪೂಜೆಯನು, ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೇ ರಾಮನಾಥಾ?

೩೬

ಹೆಣ್ಣು ಕಂಡು ಹೆಚ್ಚಿ ಹೆಕ್ಕಳಬಡುವಂತೆ, ಕಣ್ಣಿಟ್ಟು ನೋಡಿದಿರಾ ಶಿವಲಿಂಗ ದೇವನ? ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರೆದು, ಬರುದೊರೆ ವೋಗದೆ, ಮರೆಯದೆ ಪೂಜಿಸು ನಮ್ಮ ರಾಮನಾಥನ.

೩೭

ಮಂತ್ರ ಕಲಿತಡೇನು? ಪುನರುಚ್ಚರಣೆ ಮಾಡಿದಲ್ಲದೆ ಸಿದ್ಧಿಸದು. ಮದ್ದನರಿದು ಫಲವೇನು? ಪ್ರಯೋಗಿಸಿ ಕೊಂಡಲ್ಲದೆ ರೋಗ ಮಾಣದು. ಲಿಂಗವನರಿದಡೇನು? ನೆನೆದಲ್ಲದೆ ಸಿದ್ಧಿಸದು ಕಾಣಾ ಗೊಹೇಶ್ವರಾ.

೩೮

ವೊಟ್ಟೆ ವೊಟ್ಟೆ ಪತ್ರಿ ಪುಷ್ಪವ ತಂದು ವಟವಟ ಲಿಂಗವ ಪೂಜಿಸಿದಡೇನು, ತನುಮನದ ಕೆಟ್ಟತನವ ಹಿಂಗದನ್ನಕ್ಕರ? ಹುಸಿ ಕಳವು

ಪರದಾರ ವ್ಯಾಪಾರದಲ್ಲಿ ಹರಿದಾಡುವ ಮರುಳು ಬುದ್ಧಿಯ ದುರಾಚಾರಿ ಗಳಿಗೆ ದೂರನಾಗಿರ್ಪನು ನೋಡಾ ನಮ್ಮ ಅಖಂಡೇಶ್ವರನು.

೩೯

ಹೊಯ್ದರೆ ಹೊಯ್ಗಳು ಕಯ್ಯ ಮೇಲೆ! ಬಯ್ದರೆ ಬಯ್ಗಳು ಕಯ್ಯ ಮೇಲೆ! ಹಿಂದಣ ಜನನವೇನಾದೊಡಾಗಲಿ—ಇಂದಿನ ಭೋಗವು ಕಯ್ಯ ಮೇಲೆ! ಕೂಡಲಸಂಗಮದೇವಯ್ಯಾ, ನಿಮ್ಮ ಪೂಜಿಸಿದ ಫಲ ಕಯ್ಯ ಮೇಲೆ!

೪೦

ಶಿವಶಿವಾ, ಶಿವಲಿಂಗವು ಕೊಟ್ಟ ಆಯುಷ್ಯದಲ್ಲಿ ನಿಮಿಷಾರ್ಧವ ಹೆಚ್ಚಿಸಬಾರದು, ನಿಮಿಷಾರ್ಧವ ಕುಂದಿಸಬಾರದು. ಶಿವಶಿವಾ, ಶಿವ ಲಿಂಗವು ಕೊಟ್ಟ ಭಾಷೆಯಲ್ಲಿ ಕಾಣಿಯ ಹೆಚ್ಚಿಸಬಾರದು, ಕಾಣಿಯ ತಗ್ಗಿಸಬಾರದು. ಹರಿಬ್ರಹ್ಮಾದಿಗಳಿಗಾದರೂ ತೃಣದಂತಪ್ಪ ಕಾರ್ಯವ ಮಾಡಬಾರದು. ಅದೆಂತೆಂದೊಡೆ 'ತೇನ ವಿನಾ ತೃಣಾಗ್ರಮಪಿ ನ ಚಲತಿ' ಇಂತೆಂದುದಾಗಿ, ಉತ್ಪತ್ತಿ ಸ್ಥಿತಿ ಲಯಂಗಳಿಗೆ ಶಿವನೇ ಕರ್ತ ನಲ್ಲದೆ, ಮತ್ತಾರೂ ಇಲ್ಲ. ಇದು ಕಾರಣ, ಅನ್ಯರು ಆಯುಷ್ಯ ಭಾಷೆಯ ಕೊಟ್ಟಹರೆಂಬ ಆಶೆ ಬೇಡ ; ಕೊಡರೆಂಬ ಕ್ಲೇಶ ಬೇಡ. ಸರ್ವವೂ ಶಿವಾಧೀನ ವೆಂದರಿದು ಪರಿಣಾಮಿಸಿ ವಿಶ್ವಾಸದಿಂದ ಲಿಂಗಾರ್ಚನೆಯ ಮಾಡಿದೊಡೆ ಬೇಡಿದ್ದನೀವ ಇಹಪರ ಸಿದ್ಧಿಯ, ನಂಬು ಮನವೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯ

೪೧

ಅಯ್ಯಾ, ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು ; ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ, ನೀ ಒಲಿದರೆ ಒಲಿ, ಒಲಿಯ ದಿರ್ದೊಡೆ ಮಾಣು ; ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ! ಅಯ್ಯಾ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿರ್ದೊಡೆ ಮಾಣು; ನಾ ನಿನ್ನ

ನಪ್ಪಿದಲ್ಲದೆ ಸೈರಿಸಲಾರೆನಯ್ಯಾ! ಅಯ್ಯಾ, ನೀ ನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು; ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ! ಚೆನ್ನಮಲ್ಲಿಕಾರ್ಜುನಯ್ಯಾ, ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯಾ.

೪೨

ಅಯ್ಯಾ, ದೂರದಲಿರ್ದಿಹೆ ಎಂದು ಬಾಯಾರಿ ಬಳಲುತಿರ್ದೆನಯ್ಯಾ ನಾನು. ಅಯ್ಯಾ, ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ, ಇನ್ನಾ ರತಿ ಎಲ್ಲವೂ ಲಿಂಗ; ಆಲಿ ನಿಮ್ಮಲ್ಲಿ ನಟ್ಟವು ನೋಡಯ್ಯ. ಚೆನ್ನ ಮಲ್ಲಿಕಾರ್ಜುನಯ್ಯಾ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೇ ಪ್ರಾಣವಾಗಿರ್ದೆನಯ್ಯಾ.

೪೩

ಮಹಾಬೆಳಗಿನ ಲಿಂಗವ ಕೈಯಲ್ಲಿ ಕೊಟ್ಟರೆ, ಕೊರಳಲ್ಲಿ ಕಟ್ಟಿ ಕೊಳ್ಳಲೇಕೆ? ನೋಡುವ ಕಣ್ಣು ಮುಚ್ಚಿದ ಮತ್ತೆ ತನಗೆಡೆಯಾಟ ಉಂಟೇ? ಲಿಂಗವ ಹಿಂಗದೆ ಅಂಗೈಯಲ್ಲಿ ಕೊಟ್ಟ ಮತ್ತೆ ಚಿತ್ತದಲ್ಲಿ ಹಿಂಗದಿರಬೇಕು. ಉರಿಲಿಂಗತಂದೆಯ ಸಿರಿಯ ಭಾಷೆ.

೪೪

ಅರ್ಚನೆಯ ಮಾಡುವಲ್ಲಿ ವೇಷವರತಿರಬೇಕು. ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು. ಕೊಳುಕೊಡೆಯಲ್ಲಿ ಭೂತಹಿತ ನಾಗಿರಬೇಕು. ಇಂತೀ ಸಡಗರಿಸಿಕೊಂಡಿಪ್ಪಾತನಡಿಗೆರಗುವೆನೆಂದಾತನಂಬಿಗ ಚೌಡಯ್ಯ.

೪೫

ಸಜ್ಜನನಾಗಿ ಮಜ್ಜನಕ್ಕೆರೆವೆ. ಶಾಂತನಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಮ್ಮ ಹಾಡುವೆ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಗಲದ ಪೂಜೆ ಅನುವಾಯಿತ್ತೆನಗೆ.

೪೬

ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದು ಬಾಹ್ಯಕ್ರೀ ಎಂಬ ಭಾವಭ್ರಮಿತರ ಮಾತ ಕೇಳಲಾಗದು, ಕೇಳಲಾಗದು. ಧನವುಳ್ಳಾತ ಅಷ್ಟಸಂಪದೈಶ್ವರ್ಯ ಭೋಗವ ಭೋಗಿಪನಲ್ಲದೆ, ಧನಹೀನ ದರಿದ್ರನೇನ ಭೋಗಿಸುವನೋ? ಲಿಂಗವು ಪ್ರಾಣವು ಅವಿರಳಾತ್ಮಕವಾಗಿ, ಅಮಳ ಸೋಂಕು ತುಳುಕಿ, ಬಾಹ್ಯಕ್ರೀಯಾಗಿ ಕರಸ್ಥಲಕ್ಕೆ ಬಂದುತ್ತರಿಸೆ, ಇದು ಅಂತರಂಗವಲ್ಲ ಬಹಿರಂಗವಲ್ಲ, ಉರಿಲಿಂಗದೇವ.

೪೭

ಬೆಡಗಿನಲ್ಲಿ ಅಗ್ನಿ ಮೈದೋರದಿದ್ದಲ್ಲಿ, ಆಕಾರ ನಾಸ್ತಿಯಾಗದು. ಇಷ್ಟಲಿಂಗಕ್ಕೆ ಕಾಯದ ಕೈ ಮುಟ್ಟಿ ಮಾಡುವ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಬೆಡಗಿನಲ್ಲಿಪ್ಪ ಜ್ಞಾನಾಗ್ನಿ ಮೈದೋರಿದಡೆ, ಆಕಾರ ನಾಸ್ತಿಯಾಯಿತ್ತು. ಅಂಗದ ಮೇಲಣ ಲಿಂಗದ ಜವನಿಕೆ ಬಗೆದೆಗೆದಡೆ ಕಾಯದ ಪರಿ ನಷ್ಟವಾಗಿ, ಜ್ಞಾನಾಗ್ನಿಯಿಂದ ಪ್ರಾಣನ ಭೋಗ ನಷ್ಟ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ಪೂಜಿಸುವ ಶರಣನ ಮರ್ತ್ಯನೆಂದಡೆ ನಾಯಕನರಕ ತಪ್ಪದು.

೪೮

ಕರಸ್ಥಲದ ಜ್ಯೋತಿಯದು. ಕರುವಿಟ್ಟೆರಕವದು. ಆದರ ನೆಲೆಯ ತಿಳಿದರೆ ನಿಜಾನಂದವದು. ಹೊಲಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾತನೆ ಮೃಡನು ಕಾಣಾ ರಾಮನಾಥಾ.

೪೯

ಅಂಗೈಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿವರಿವುತ್ತ ಸುರಿಯುತ್ತ ಎಂದಿಪ್ಪೆನೋ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ? ಕೂಟವೇ ಪ್ರಾಣವಾಗಿ ಎಂದಿಪ್ಪೆನೋ? ಎನ್ನಂಗವಿಕಾರದ ಸಂಗವಳಿದು, 'ಕೂಡಲಸಂಗಯ್ಯಾ, ಲಿಂಗಯ್ಯಾ, ಲಿಂಗ ಲಿಂಗ ಲಿಂಗ' ವೆನ್ನುತ್ತ?

೫೦

ಪರುಷದ ಪರ್ವತದಲ್ಲಿ ಕಬ್ಬುನ ಉಂಟೇ ಅಯ್ಯಾ? ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವಾತಂಗೆ ಅವಗುಣ ಉಂಟೇ ಅಯ್ಯಾ? ಇದು ಕಾರಣವಾಗಿ ಭಕ್ತಕಾಯ ಮಮಕಾಯುವಯ್ಯಾ ಕೂಡಲ ಚೆನ್ನಸಂಗಮದೇವಾ.

೫೧

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು, ಹಾಡಿ ನಾಲಿಗೆ ದಣಿಯದು. ಇನ್ನೇವೆನಿನ್ನೇವೆ? ನಿಮ್ಮ ಕೈಯಾರೆ ಪೂಜಿಸಿ ಮನ ದಣಿಯ ಲೊಲ್ಲದಿನ್ನೇವೆನಿನ್ನೇವೆ? ಕೂಡಲಸಂಗಮದೇವ ಕೇಳಯ್ಯಾ, ನಿಮ್ಮುದರವ ಬಗಿದಾನು ಹೊಗುವ ಭರವೆನಗೆ!

೫೨

ವಾರವೆಂದರಿಯೆ, ದಿನವೆಂದರಿಯೆ; ಏನೆಂದರಿಯೆನಯ್ಯಾ! ಇರುಳೆಂದರಿಯೆ, ಹಗಲೆಂದರಿಯೆ; ಏನೆಂದರಿಯೆನಯ್ಯಾ! ನಿಮ್ಮುವ ಪೂಜಿಸಿ ಎನ್ನುವ ಮರೆದೆ ಕೂಡಲಸಂಗಮದೇವಾ.

೫೩

ಗುರುಪೂಜೆಯ ಮಾಡುವಲ್ಲಿ ಗುರುಪೂಜೆಯಲ್ಲಿಯೆ ಮುಕ್ತರು. ಲಿಂಗಪೂಜೆಯ ಮಾಡುವಲ್ಲಿ ಲಿಂಗಪೂಜೆಯಲ್ಲಿಯೆ ಮುಕ್ತರು. ಜಂಗಮ ಪೂಜೆಯ ಮಾಡುವಲ್ಲಿ ಜಂಗಮಪೂಜೆಯಲ್ಲಿಯೆ ಮುಕ್ತರು. ಈ ಮೂರೊಂದಾಗಲಲ್ಲಿ ಬೇರೊಂದಂಗಪಿಲ್ಲ. ಆಗು ಚೀಗೆ ಮೂರರಲ್ಲಿಯೆ ಅಡಗಿದ ಮತ್ತೆ ಅಮರೇಶ್ವರಲಿಂಗವ ಪೂಜಿಸಲಿಲ್ಲ.

೫೪

ಅಂಗದ ಮೇಲಕ್ಕೆ ಬಂದಾಚಾರಲಿಂಗದ ಹೊಲಬನರಿಯದೆ, ಕೈಲಾಸದ ಮೇಲಿಪ್ಪ ಬಾಲಕೋಟಿಸೂರ್ಯಪ್ರಕಾಶವನುಳ್ಳ ಶಿವನ

ನೊಲಿಸಬೇಕೆಂದು ಒಂದು ವಸ್ತುವ ಎರಡಿಟ್ಟು ನುಡಿವ ಮಂದಮತಿಗಳು ನೀವು ಕೇಳಿರೋ. ಮಹಾಮೇರುಪರ್ವತವೇ ಶರಣ. ಆ ಶರಣನ ಸ್ಥೂಲ ತನುವೇ ರಜತಾದ್ರಿ, ಸೂಕ್ಷ್ಮತನುವೇ ಹೇಮಾದ್ರಿ, ಕಾರಣ ತನುವೇ ಮಂದರಾದ್ರಿ. ಈ ಮೂರು ಪರ್ವತಂಗಳುಳ್ಳ ಅರಮನೆಯಲ್ಲಿ ನೆಲಸಿಪ್ಪ ಶಿವನಾರೆಂದೊಡೆ: ನಿರಾಕಾರ ಶೂನ್ಯಬ್ರಹ್ಮವೇ ಶರಣನ ಕುರಿತು ಪಂಚ ಸಾದಾಖ್ಯಂಗಳನೊಳಕೊಂಡು, ಸಾಕಾರವಾಗಿ ಬಂದ ಇಷ್ಟಲಿಂಗವೇ ಶಿವನು. ಸಾಕ್ಷಿ: ಜ್ವಲತ್ಕಾಲಾನಲಾಭಾಭಾ ತಟಿತ್ಕೋಟಿಸಮಪ್ರಭಾ। ತಸ್ಯೋರ್ಧ್ವಂಚ ಶಿಖಾಸೂಕ್ಷ್ಮಾ ಚಿದ್ರೂಪಾ ಪರಮಾಕಲಾ ॥೧॥ ಏವಂಭೇದ ಕಳಾ ದೇವಿ ಸದ್ಗುರುಃ ಶಿಷ್ಯಮಸ್ತಕೇ। ಹಸ್ತಾಬ್ಜಮಥನಗ್ರಾಹ್ಯಂ ತಸ್ಯ ಭಾವಕರೋದಿತಂ ॥೨॥ ಇಂತೆಂದುದಾಗಿ ಆ ಶಿವನೇ ಶಿವನು. ಆ ಶಿವನ ಧರಿಸಿಪ್ಪ ಶರಣನ ಕಾಯವೇ ಕೈಲಾಸ. ಇದಲ್ಲದೆ ಮತ್ತೊಂದು ಕೈಲಾಸ, ಬೇರೊಬ್ಬ ಶಿವನುಂಟೆಂದು ಭ್ರಮೆಗೊಂಡು, ಮನವನೆರಡು ಮಾಡಿ ಕೊಂಬುದು ಅಜ್ಞಾನ ನೋಡಾ. ಉರದ ಮಧ್ಯದಲ್ಲಿಪ್ಪ ಗಂಡನ ಬಿಟ್ಟು, ಇನ್ನು ನೆರೆಮನೆಯ ಗಂಡರಿಗೆ ಮನವನಿಕ್ಕುವ ಹಾದರಗಿತ್ತಿಗೆ ಪತಿ ಎಲ್ಲಿಯದೋ? ಶ್ರೀಗುರುನಾಥ ಕರುಣಿಸಿ ಕೊಟ್ಟ ಕ್ರಿಯಾಲಿಂಗವನು ಅರ್ಚನೆಪೂಜನೆಯಿಂದ, ಅರ್ಪಿತಾವಧಾನದಿಂದ, ಧ್ಯಾನ ಧಾರಣದಿಂದ, ಸಮತೆಸಮಾಧಾನದಿಂದ, ಧ್ಯಾನ ಮೌನ ಉಪಾವಸ್ಥೆಯಿಂದ, ಮುನಿಸು ಮೂದಲೆಯಿಂದ ಕಾಮಿಸಿ, ಕಂಬನಿದುಂಬಿ, ಕರಸ್ಥಲದಲ್ಲಿಪ್ಪ ಪ್ರಾಣೇಶ್ವರನ ಶ್ರೀಚರಣಕ್ಕೆ ಲಲಾಟ ಪೂಜೆಯಂ ಮಾಡಿ, ಒಲಿಸಿ ಒಡಗೂಡಿ ನಿಜಮುಕ್ತಿ ಪಡೆಯದೆ, ಆಕಾರವ ಮರೆದು ನಿರಾಕಾರವ ಕೂಡಿಹೆನೆಂಬ ಲೋಕದ ಕಾಕುಮಾನವರೆಲ್ಲ ಕಾಲಕಾಮರಿಗೆ ತುತ್ತಾಗಿ, ಕಾಲಾಗ್ನಿ ರುದ್ರನ ಹೊಡೆಗಿರ್ಚಿನೊಳಗಾದರಯ್ಯಾ, ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನಾ.

೫೫

ಸಕಲವ ಪೂಜಿಸಿಹೆನೆಂಬ ಪೂಜಕಂಗೆ ಸಕಲವನು ಲಿಂಗದಲ್ಲಿಯೇ ಪೂಜಿಸುವುದು. ನಿಷ್ಕಲವ ಪೂಜಿಸಿಹೆನೆಂಬ ಪೂಜಕಂಗೆ ನಿಷ್ಕಲವನೂ

ಲಿಂಗದಲ್ಲಿಯೇ ಪೂಜಿಸುವುದು. ಅದೆಂತೆಂದೊಡೆ : ಸಕಲ ನಿಃಕಲಾತ್ಮಕ ಸಕಲ ನಿಃಕಲಾತೀತ ಲಿಂಗ ಬಾಹ್ಯಾತ್ಪರಂ ನಾಸ್ತಿ | ಲಿಂಗಂ ಪೂಜ್ಯಮೇವ ಚ || ಸರ್ವರೂ ಪೂಜಿಸುವರೆಂಬ ಕಾರಣದಿಂದ, ಲಿಂಗಾರ್ಚನೆಯಿಂದ ಪರ ಒಂದೂ ಇಲ್ಲೆಂದುದಾಗಿ, ಒಳಹೊರಗೆಂಬ ಭಾವವಳಿದುಳಿದು ಶರಣನ ಅಂತರಂಗ ಬಹಿರಂಗದಲ್ಲಿ ಭರಿತನು-ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಪರಂಜ್ಯೋತಿರ್ಲಿಂಗ ಶರಣನ ಅಂತರಂಗ ಬಹಿರಂಗ ಸಂಗಿಯಾಗಿ.

೫೬

ಅಖಂಡ ಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದೊಡೆ: ಸದ್ಯೋಜಾತ ಮುಖದಿಂದಾದ ಪೃಥ್ವಿ, ಪತ್ರ ಪುಷ್ಪ ಲಿಂಗಕ್ಕೆ ಬೇಕೆಂದು ಅನಂತ ಪತ್ರಪುಷ್ಪಂಗಳಿಂದ ಅರ್ಚಿಸುತ್ತಿಹುದು. ವಾಮದೇವ ಮುಖ ದಿಂದಾದಪ್ಪು, ಲಿಂಗಕ್ಕೆ ಮಜ್ಜನಕ್ಕೆರೆಯ ಬೇಕೆಂದು ಸಪ್ತಸಮುದ್ರ ದಶ ಗಂಗೆಗಳ ಕುಂಭವ ಮಾಡಿ, ಕೆರೆಬಾವಿಗಳ ಪಂಚಪಾತ್ರೆಯ ಮಾಡಿ ಮಜ್ಜನ ನೀಡಿಸುತ್ತಿಹುದು. ಅಘೋರ ಮುಖದಿಂದಾದಗ್ನಿ, ಲಿಂಗಕ್ಕೆ ಧೂಪ ದೀಪ ಆರುತಿಗಳಾಗಬೇಕೆಂದು ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು. ತತ್ಪುರುಷ ಮುಖದಿಂದಾದ ವಾಯು, ಲಿಂಗಕ್ಕೆ ಜಪವ ಮಾಡಿಸುತ್ತಿಹುದು. ಈಶಾನಮುಖದಿಂದಾದ ಆಕಾಶ, ಲಿಂಗಕ್ಕೆ ಭೇರಿ ಮೊದಲಾದ ನಾದಂಗಳ ಬಾರಿಸುತ್ತಿಹುದು. ಗೋಪ್ಯಮುಖದಿಂದಾದ ಆತ್ಮನು, ಲಿಂಗಕ್ಕೆ ಸಿಂಹಾಸನ ವಾಗಿರ್ಪುದು. ಮನಚಕ್ಷುವಿನಿಂದಾದ ಚಂದ್ರಸೂರ್ಯರು, ದೀವಿಗೆ ಗಳಾಗಿಹರು. ಇಂತಪ್ಪ ಘನವಸ್ತುವು ಎರಡಾಗಿ, ತನ್ನ ವಿನೋದಕ್ಕೆ ಅರ್ಪಿಸಿಕೊಂಬಾತನು ತಾನೇ, ಅರ್ಪಿಸುವಾತನು ತಾನೇ. ಇಂತಪ್ಪ ಘನ ಲಿಂಗವು ಎನ್ನ ಕರಸ್ಥಲದೊಳಗೆ ಚುಳುಕಾಗಿ ನಿಂದ ನಿಲವ ಎನ್ನೊಳರುಹಿ ದಾತ ನಮ್ಮ ಶಾಂತಕೂಡಲಸಂಗಮದೇವ.

೫೭

ಲಿಂಗಾಂಗ ಸಂಬಂಧದ ಭೇದವನರಿಯದೆ, ನಾವು ಲಿಂಗಾಂಗ ಸಂಬಂಧಿ ಗಳೆಂದು ಅಂದಚೆಂದವಾಗಿ ನುಡಿದುಕೊಂಬ ಕ್ರಿಯಾಭ್ರಾಂತರು ನೀವು

ಕೇಳಿರಿ, ಲಿಂಗಾಂಗ ಸಂಬಂಧದ ಉತ್ತರೋತ್ತರದ ನಿರ್ಣಯವ. ಹೊರಗಣ ಹೂವನೆ ತಂದು, ಸ್ಥೂಲ ತನುವಿನ ಮೇಲಿಪ್ಪ ಆಚಾರಲಿಂಗವುಂ ಪೂಜೆಯುಂ ಮಾಡಿ, ತನುವ ಸಮರ್ಪಿಸಿ ಬೇಡಿಕೊಂಡು, ಹೊರಗಣ ಹೊನ್ನು ಹೆಣ್ಣು ಮಣ್ಣು ಷಟ್ಕರ್ಮಂಗಳಂ ಬಿಟ್ಟುದೆ ಇಷ್ಟಲಿಂಗದ ಪೂಜೆ. ಒಳಗಣ ಅಂತಃಕರಣಂಗಳ ಸುಟ್ಟುದೆ ಪ್ರಾಣಲಿಂಗದ ಪೂಜೆ. ಮನೋಮಧ್ಯದೊಳಗಿಪ್ಪ ಭಾವಪುಷ್ಪವನೆ ತಂದು, ಕಾರಣ ತನುವಿನ ಮೇಲಿಪ್ಪ ತೃಪ್ತಿಲಿಂಗವುಂ ಪೂಜೆಯುಂ ಮಾಡಿ, ಸಂತೋಷವುಂ ಸಮರ್ಪಿಸಿ ದೈನ್ಯಂಬಟ್ಟು, ಜ್ಞಾನಕ್ರಿಯೆಗಳಳಿದುದೆ ಭಾವಲಿಂಗದ ಪೂಜೆ. ಈ ಪ್ರಕಾರ ಲಿಂಗಾಂಗದ ಸಾಧಕತ್ವವುಂ ಶಿವರಾತ್ರಿಯ ಸಂಕಣ್ಣಂಗೊಲಿದಂತೆ ಎನಗೊಲಿದು ಕರುಣಿಸಯ್ಯಾ ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನಾ.

೫೮

ಎನ್ನ ಹೃದಯಕಮಲದಲ್ಲಿ ಮೂರ್ತಿಗೊಂಡಿಪ್ಪ ಎನ್ನ ಪ್ರಾಣೇಶ್ವರಂಗೆ ಎನ್ನ ಕ್ಷಮೆಯೇ ಅಭಿಷೇಕ. ಎನ್ನ ಪರಮವೈರಾಗ್ಯವೇ ಪುಷ್ಪದ ಮಾಲೆ. ಎನ್ನ ಸಮಾಧಿಸಂಪತ್ತೇ ಗಂಧ. ಎನ್ನ ನಿರಹಂಕಾರವೇ ಅಕ್ಷತೆ. ಎನ್ನ ಸದ್ವಿವೇಕವೇ ವಸ್ತ್ರ. ಎನ್ನ ಸತ್ಯವೇ ದಿವ್ಯಾಭರಣ. ಎನ್ನವಿಶ್ವಾಸವೇ ಧೂಪ. ಎನ್ನ ದಿವ್ಯಜ್ಞಾನವೇ ದೀಪ. ಎನ್ನ ನಿಭ್ರಾಂತಿಯೇ ನೈವೇದ್ಯ. ಎನ್ನ ನಿರ್ವಿಷಯವೇ ತಾಂಬೂಲ.ಎನ್ನ ಮೌನವೇ ಘಂಟೆ. ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ. ಎನ್ನ ಶುದ್ಧಿಯೇ ನಮಸ್ಕಾರ. ಎನ್ನ ಅಂತಃಕರಣದಿಂದ ಮಾಡುವ ಸೇವೆಯೇ ಉಪಚಾರಂಗಳು. ಈ ಪರಿಯಲ್ಲಿ ಎಮ್ಮ ಗೊಹೇಶ್ವರ ಲಿಂಗಕ್ಕೆ ಪ್ರಾಣಪೂಜೆಯ ಮಾಡಿ ಬಾಹ್ಯಕ್ರೀಯ ಮರೆದೆನು ಕಾಣಾ ಸಂಗನ ಬಸವಣ್ಣ.

೫೯

ಗಗನದ ಗುಂಡಿಗೆ, ಆಕಾಶದ ಗಂಗೆಯ ಅಗ್ಘವಣಿ, ಚಂದ್ರಸೂರ್ಯರಿಬ್ಬರೂ ಪುಷ್ಪ ನೋಡಾ! ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ. ಗೊಹ್ಲೇಶ್ವರಲಿಂಗಕ್ಕೆ ಪೂಜೆ ನೋಡಾ!

೬೦

ಮೇರುವ ಸಾರಿದ ಕಾಗೆ ಹೊಂಬಣ್ಣವಾಗದಿದ್ದರೆ ಆ ಮೇರುವಿಂದತ್ತಣ ಹುಲುವೊರಡಿಯೆ ಸಾಲದೆ? ದೇವ, ನಿಮ್ಮ ಪೂಜಿಸಿ ಧಾವತಿಗೊಂಬಡೆ, ಆ ಧಾವತಿಯಿಂದ ಮುನ್ನಿನ ವಿಧಿಯೇ ಸಾಲದೆ? ಗೊಹೇಶ್ವರ, ನಿಮ್ಮ ಪೂಜಿಸಿ ಸಾವಡೆ, ನಿಮ್ಮಿಂದ ಹೊರಗಣ ಜವನೆ ಸಾಲದೆ?

೬೧

ಅಘಟಿತ ಘಟಿತನೆ, ವಿಪರೀತ ಚರಿತ್ರನೆ, ಸಾವರ ಕೈಯಲ್ಲಿ ಪೂಜೆಗೊಂಬರೆ ಲಿಂಗಯ್ಯ? ಸಾವ ನೋವರ ಕೈಯಲ್ಲಿ ಪೂಜೆಗೊಂಬುದು ಲಜ್ಜೆ ಕಾಣಾ ಗೊಹೇಶ್ವರಾ.

೬೨

ಅಡಿಗಡಿಗೆ ತೊಳೆದು ಕುಡಿದರೆ, ಹೊಟ್ಟೆಯ ಜಲಗರ ಕುತ್ತ ಬೆಳೆಯಿತ್ತೆ! ಅಚ್ಚಪ್ರಸಾದಿಯಾದಡೆ ಹಿಂದೆ ಪರಿಯಾಣ ಉಳಿವುದೆ? ಇವರೆಲ್ಲರೂ ನಿಮ್ಮ ಪೂಜಿಸಿ ವ್ರತಗೇಡಿಗಳಾದರು. ನಾ ನಿಮ್ಮ ಪೂಜಿಸಿ ಬದುಕಿದೆನು ಗೊಹೇಶ್ವರಾ.

೬೩

ಜಾತಿವೇದದಲ್ಲಿ ಶೋಧಿಸಿ ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ! ಅದೆಂತೆಂದೊಡೆ : ||ಶ್ಲೋ.|| 'ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಯಥಾ' ಎಂದುದಾಗಿ, ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೪

ಎಡದ ಕೈಯ ಲಿಂಗವ ಬಲದ ಕೈಯಲ್ಲಿ ಮುಟ್ಟಿ ಸ್ಪರ್ಶವ ಮಾಡುವ ಕರ್ಮಿಯ ನಾನೇನೆಂಬೆ! ಭವ ಭವದಲ್ಲಿ ಬಹ ಕರ್ಮಿಯ ನಾನೇನೆಂಬೆ! ಸತ್ಯವೇನವದಿರ? ಮಿಥ್ಯವೇನವದಿರ? ಹಿಡಿದ ಕೈಯ ತಾನೆ ಎಂದರಿಯರಾಗಿ ಗೊಹೇಶ್ವರಲಿಂಗವು ಬೆರಗಾದನು!

೬೫

ಅಗ್ಘವಣಿಯ ತಂದು ಮಜ್ಜನವ ಮರೆದವನ, ಪುಷ್ಪವ ತಂದು ಪೂಜೆಯ ಮರೆದವನ, ಓಗರವ ತಂದು ಅರ್ಪಿತವ ಮರೆದವನ, ಲಿಂಗವ ಕಂಡು ತನ್ನ ಮರೆದವನ ಮಹಾಘನ ಒಳಕೊಂಡಿತ್ತು ಗೊಹೇಶ್ವರಾ.

೬೬

ಅಂಗದಾಪ್ಯಾಯನವ ಆತ್ಮನರಿವಂತೆ, ಆತ್ಮನ ಸುಖದುಃಖವ ಅಂಗ ತಾಳುವಂತೆ, ಅಂಗಕ್ಕೂ ಆತ್ಮಂಗೂ ಅನ್ಯಭಿನ್ನವಿಲ್ಲ. ಪೂಜಿಸುವ ಭಕ್ತನೂ ಪೂಜಿಸಿಕೊಂಬ ವಸ್ತುವೂ ಈ ಉಭಯವೂ ಸದಾಶಿವಮೂರ್ತಿ ಲಿಂಗವು ತಾನು ತಾನೆ.

ವಿವೇಚನೆ

೬೭

ಈ ಸತ್‌ಕ್ರಿಯೆಗೀ ಫಲ, ಈ ಪುಷ್ಪಕ್ಕೀ ಫಲವೆಂಬ ಕೂಲಿಕಾರರು ಅವರೆಲ್ಲಾ ಕರ್ಮಿಗಳಯ್ಯಾ! ಪುಣ್ಯಪಾಪವನುಂಬ ಕರ್ಮಿಗಳಯ್ಯಾ! ಸ್ವರ್ಗ ನರಕವನುಂಬ ಕರ್ಮಿಗಳಯ್ಯಾ! ಒಡಲೊಡವೆ ಪಡೆದರ್ಥ ವ್ಯಡದೇವ ಸೊಡ್ಡಳನೆಂಬಾತ ಬೆಡಗಿನ ಶಿವಪುತ್ರ, ಉಳಿದವರೆಲ್ಲಾ ಜಗದ ಮಿತ್ರರು.

೬೮

ಕೂಡಿದ ಧನವನೆಲ್ಲವನು ಗುರುಲಿಂಗಜಂಗಮಕ್ಕೆ ವಂಚನೆಯ ಮಾಡಿ ಒಳಗಿಟ್ಟುಕೊಂಡು, ನೆಲವ ತೋಡಿ ಬಚ್ಚಿಟ್ಟುಕೊಂಡು, ಹಲವು ತೆರದ ಆಭರಣಂಗಳ ಮಾಡಿಸಿ, ಕರಚರಣ ಉರಕರ್ಣಂಗಳೊಳಗಿಟ್ಟು, ಮತ್ತಿಷ್ಟು ಬದುಕಾಗಲೆಂದು ತನ್ನ ಕೈಯೊಳಗಿನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡುವ ಲಿಂಗಪೂಜಕನ ಪರಿ ಎಂತೆಂದೊಡೆ: ಆ ಭಕ್ತನು

ಪಂಚಾಭಿಷೇಕದಿಂದ ಲಿಂಗಕ್ಕೆ ಮಜ್ಜನವ ನೀಡಿದರೆ, ಲಿಂಗದ ಚಿತ್ತದಲ್ಲಿ ಸುಣ್ಣದ ನೀರನೆತ್ತಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಪನ್ನೀರಿನಿಂದ ಮಜ್ಜನವ ನೀಡಿದರೆ, ಲಿಂಗದ ಚಿತ್ತದಲ್ಲಿ ತಣ್ಣೀರೊಳಗದ್ದಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ವಿಭೂತಿಯ ಧರಿಸಿದರೆ, ಲಿಂಗದ ಚಿತ್ತದಲ್ಲಿ ಬೂದಿಯ ಬೊಕ್ಕಣವ ಕಟ್ಟಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಗಂಧವ ಧರಿಸಿದರೆ, ಲಿಂಗದ ಚಿತ್ತದಲ್ಲಿ ಚಂಡಿಟ್ಟು ಬಾಜಿಸಿದಂತಾಯಿತ್ತಯ್ಯಾ! ಆ ಭಕ್ತನು ಅಕ್ಷತೆಯನೇರಿಸಿದರೆ, ಲಿಂಗದ ಚಿತ್ತದಲ್ಲಿ ಕಲ್ಲು ಹೊರಿಸಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಪುಷ್ಪವ ಧರಿಸಿದರೆ, ಲಿಂಗದ ಚಿತ್ತದಲ್ಲಿ ಬೆನ್ನ ಮೇಲೆ ಹೇರು ಹೊರಿಸಿದಂತಾಯಿತ್ತಯ್ಯಾ! ಆ ಭಕ್ತನು ಧೂಪವ ಬೀಸಿದರೆ, ಲಿಂಗದ ಚಿತ್ತದಲ್ಲಿ ಆರವನಿಕ್ಕಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ದೀಪಾರತಿಯನೆತ್ತಿದರೆ, ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋರೆಯ ಸುಟ್ಟು ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಸ್ತೋತ್ರಮಂತ್ರವ ನುಡಿದರೆ, ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋರೆಯ ಸುಟ್ಟು ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಸ್ತೋತ್ರ ಮಂತ್ರವ ನುಡಿದರೆ, ಲಿಂಗದ ಚಿತ್ತದಲ್ಲಿ ಕರ್ಣದೊಳಗೆ ತೊನಸಿ ಹೊಕ್ಕು ಗೋಳಿಟ್ಟು ಬಾಧಿಸಿದಂತಾಯಿತ್ತಯ್ಯಾ! ಇಂತಪ್ಪ ಲಿಂಗ ಬಾಧಕರನು ಲಿಂಗಪೂಜಕರೆನಬಹುದೆ? ಆತನ ಅಂಗಳವ ಮೆಟ್ಟಬಹುದೆ? ಇದರ ಇಂಗಿತವ ನಿಜಭಾವವುಳ್ಳ ಶರಣರು ನೀವೆ ತಿಳಿದು ನೋಡಿರೆಂದಾತ ನಮ್ಮ ಅಂಬಿಗರ ಚೌಡಯ್ಯನು.

೬೯

ಜಾಲಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ, ಸೂನೆಗಾರನ ಮನೆಯಲ್ಲಿ ಹೆಣ ಹೋಗಿ ಅಳುವಂತೆ, ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ, ಠಕ್ಕನ ಪೂಜೆಗೆ ಮೆಚ್ಚುವನೆ ನಮ್ಮ ಗೊಹೇಶ್ವರನು?

೭೦

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ; ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯಾ; ಹಸಿವು ತೃಷೆ ವಿಷಯಕ್ಕೆ ಬಳಲುವ

ರಯ್ಯಾ! ಹಸಿವೆಯಾಯಿತ್ತೆಂದು ಅರ್ಪಿತವ ಮಾಡಲಿಲ್ಲ; ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ. ಇದು ಕಾರಣ, ಕೂಡಲಸಂಗನ ಪೂಜಿಸಿ ಪ್ರಸಾದವ ಹಡೆವರೊಬ್ಬರೂ ಇಲ್ಲಾ!

೭೧

ಉದಯವಾಯಿತ್ತ ಕಂಡು ಉದರಕ್ಕೆ ಕುದಿವರಯ್ಯ! ಕತ್ತಲೆಯಾಯಿತ್ತ ಕಂಡು ಮಜ್ಜನಕ್ಕೆರೆವರಯ್ಯ! ಲಿಂಗಕ್ಕೆ ನೇಮವಿಲ್ಲ. ಇರುಳಿಗೊಂದು ನೇಮ, ಹಗಲಿಗೊಂದು ನೇಮ. ಲಿಂಗಕ್ಕೆ ನೇಮವಿಲ್ಲ. ಕಾಯವೊಂದೆಸೆ, ಜೀವವೊಂದೆಸೆ, ಗೊಹೇಶ್ವರನೆಂಬ ಲಿಂಗವು ತಾನೊಂದೆಸೆ.

೭೨

ಅಗ್ಘವಣಿ ಪತ್ರೆ ಧೂಪದೀಪ ನಿವಾಳಿಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತೈದಾರೆ! ಏನೆಂದರಿಯರು ಎಂತೆಂದರಿಯರು. 'ಜನ ಮರುಳೋ ಜಾತ್ರೆ ಮರುಳೋ' ಎಂಬಂತೆ ಎಲ್ಲರೂ ಪೂಜಿಸಿ, ಏನನೂ ಕಾಣದೆ ಲಯವಾಗಿ ಹೋದರು ಗೊಹೇಶ್ವರಾ.

೭೩

ಆರಕ್ಯಾರ ಬಿತ್ತಿದ ಗಿಡದ ಹೂವನೇ ಕೊಯ್ದು, ಊರಲ್ಲಿ ಕಟ್ಟಿದ ನೀರನೆ ತಂದು, ನಾಡೆಲ್ಲ ನೋಡಲೆಂದು ಪೂಜಿಸುವ ಪುಣ್ಯವು ಆ ಹೂವಿಗೋ? ಆ ನೀರಿಗೋ? ನಾಡೆಲ್ಲ ನೋಡಲೆಂದು ಪೂಜಿಸಿದಾತಗೋ? ಇದ ನಾನರಿಯೆ. ನೀವು ಬಲ್ಲಡೆ ಹೇಳೆಂದಾತ ನಮ್ಮ ಅಂಬಿಗರ ಚೌಡಯ್ಯ.

೭೪

ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ! ಅಂಗಸಂಗಿಗಳೆಲ್ಲಾ ಮಹಾಘನವನರಿಯದೆ ನಿಂದಿರೋ! ಹುಸಿಯನೆ ಕೊಯ್ದು ಹುಸಿಯನೆ ಪೂಜಿಸಿ ಗಸಣಿಗೊಳಗಾದರು ಗೊಹೇಶ್ವರಾ.

೭೫

ಅಯ್ಯಾ, ಪಾಷಾಣಕ್ಕೆ ಗಿರಿ ಸವೆದು, ಪತ್ರೆಗೆ ತರು ಸವೆದು, ಸಪ್ತ ಸಾಗರಂಗಳು ಮಜ್ಜನಕ್ಕೆ ಸವೆದು, ಅಗ್ನಿ ಧೂಪಕ್ಕೆ ಸವೆದು, ವಾಯು ಕಂಪಿತಕ್ಕೆ ಸವೆದು, ಉಘೆ ಚಾಂಗುಭಲಾ ಎಂಬ ಸದ್ದು ಸವೆದು, ಎನಗಿನ್ನೆಂತೋ ? ಎನಗಿನ್ನೆಂತೋ ? ಶರಣನ ಮಹಾಮನೆಯಲ್ಲಿ ಅಮರಗಣಂಗಳು ಲಿಂಗಾರ್ಚನೆಯ ಮಾಡುತ್ತ ಇದ್ದಾರೆ. ಅವರ ಪಾದುಕೆಯ ಕಾದಿದ್ದನೆಂದಾತನಂಬಿಗರ ಚೌಡಯ್ಯ.

೭೬

ಕುರುಹು ಉಂಟೇ ಮರುಳೆ ಲಿಂಗಕ್ಕೆ? ತೆರಹು ಉಂಟೇ ಮರುಳೆ ಲಿಂಗಕ್ಕೆ? ಎಲ್ಲೆಡೆಯೊಳು ಪರಿಪೂರ್ಣವಾದ ಪರಾತ್‌ಪರಲಿಂಗದ ನಿಲವನರಿಯದೆ, ಹುಸಿಯನೆ ಕಲ್ಪಿಸಿ ಹುಸಿಯನೆ ಪೂಜಿಸಿ ಹುಸಿಯ ಫಲಪದವನುಂಡು ಹುಸಿಯಾಗಿ ಹೋದವರ ಕಂಡು ನಸುನಗುತಿಪ್ಪನಯ್ಯಾ ನಮ್ಮ ಅಖಂಡೇಶ್ವರನು.

೭೭

ಜಗದೊಳಹೊರಗೆಲ್ಲ ತೆರಹಿಲ್ಲದೆ ಸಂಭ್ರಮಿಸಿ ತುಂಬಿರ್ಪ ಪರವಸ್ತುವ ಆಹ್ವಾನಿಸಿ ಕರೆದು ವಿಸರ್ಜಿಸಿ ಬಿಡುವುದಕ್ಕೆ ಇಂಬುಂಟೇನೋ ಮರುಳೆ? ಇಂತೀ ಅಖಂಡ ಪರಿಪೂರ್ಣವಾದ ಪರಬ್ರಹ್ಮದ ನಿಲವನರಿಯದೆ, ಖಂಡಿತ ಬುದ್ಧಿಯಿಂದ ಕಲ್ಪಿಸಿ ಪೂಜಿಸಿ, ಕರ್ಮದ ಬಲೆಯಲ್ಲಿ ಸಿಲ್ಕಿ ಕಾಲಂಗೆ ಗುರಿಯಾಗಿ ಹೋದವರ ಕಂಡು ಬೆರಗಾದೆನಯ್ಯ ಅಖಂಡೇಶ್ವರಾ!

೭೮

ಹಿಡಿವ ಕೈಯ ಮೇಲೆ ಕತ್ತಲೆಯಯ್ಯ. ನೋಡುವ ಕಂಗಳ ಮೇಲೆ ಕತ್ತಲೆಯಯ್ಯ. ನೆನೆವ ಮನದ ಮೇಲೆ ಕತ್ತಲೆಯಯ್ಯ. ಕತ್ತಲೆ ಎಂಬುದು ಇತ್ತಲೆಯಯ್ಯ, ಗೊಹೇಶ್ವರನೆಂಬುದು ಅತ್ತಲೆಯಯ್ಯ!

೭೯

ಎನಿಸು ಕಾಲ ಕಲ್ಲು ನೀರೊಳಗಿರ್ದರೇನು, ನೆನೆದು ಮೃದುವಾಗಬಲ್ಲುದೇ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿರ್ದ ಬೆಂತರನಂತೆ!—ಅದರ ವಿಧಿಯೆನಗಾಯಿತ್ತು ಕೂಡಲಸಂಗಮದೇವಾ!

೮೦

ಕರಸ್ಥಲದಲ್ಲಿ ಶಿವಲಿಂಗವ ಬಿಜಯಂಗೆಯಿಸಿಕೊಂಡು, ಕಣ್ಣು ಮುಚ್ಚಿ ಬಾಯನ್ನು ತೆರೆದು ಅನ್ಯವ ನೆನೆವನ್ನೆಬರ, ಇನ್ನು ಲಿಂಗದ ಮರ್ಮವನರಿದುದಿಲ್ಲ. ಉಂಟಾದುದ ಹುಸಿ ಮಾಡಿ, ಇಲ್ಲದುದ ನೆನೆದರೆ ಅದು ಸಹಜವಾಗಬಲ್ಲುದೆ? ದೇವದೇಹಿಕ ಭಕ್ತ, ಭಕ್ತದೇಹಿಕ ದೇವನೆಂದುದಾಗಿ, ತನ್ನೊಳಗೆ ಲಿಂಗ, ಲಿಂಗದೊಳಗೆ ತಾನು. ನೆನೆಯಲಿಲ್ಲ, ನೆನೆಹಿಸಿಕೊಳ್ಳಲಿಲ್ಲವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೧

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು. ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚೆನ್ನಮಲ್ಲಿಕಾರ್ಜುನಯ್ಯ?

೮೨

ಲಿಂಗ ಕರಸ್ಥಲಕ್ಕೆ ಬಂದ ಮತ್ತೆ ಕಂಗಳು ತುಂಬಿ ಒರೆಯದಿರ್ದಡೆ, ಆ ಲಿಂಗಪೂಜೆ ಏಕೆ? ಲಿಂಗವ ಜಿಹ್ವೆಯಲ್ಲಿ ನೆನೆವಾಗ ಅಂಗವ ಮರೆಯದಿರ್ದಡೆ, ಆ ಲಿಂಗದ ನೆನಹದೇಕೆ? ಲಿಂಗವಾರ್ತೆಯ ಕಿವಿತುಂಬಿ ಕೇಳಿ

ಸರ್ವಾಂಗ ಝೊಂಪಿಸಿ ಮನ ಮಗ್ನವಾಗದಿರ್ದಡೆ, ಉರಿಲಿಂಗತಂದೆಯ ಸಿರಿಯ ನೆನೆಯಲೇಕೆ ?

೮೩

ಪೂಜಿಸುವನ್ನಕ್ಕರ ಫಲದಾಯಕ ಕಂಡಯ್ಯಾ. ಸಹಜಸಂಬಂಧದರಿವು ಹುಟ್ಟದನ್ನಕ್ಕರ ಎರಡೆನಿಸುವುದು. ಗಮನ ನಿರ್ಗಮನವಾಗಿ, ಆಶೆ ಆಮಿಷ ವಳಿಯದನ್ನಕ್ಕರ ಲಿಂಗದ ಪೂಜೆ ಎಲ್ಲಿಹುದೋ ? ಘಟದೊಳಗೆ ದಿಟ ವಾಗಿರ್ದ ಪಂಚಭೂತದ ಹಂಗಳಿದಲ್ಲದೆ ನಮ್ಮ ಕೂಡಲಚೆನ್ನಸಂಗಯ್ಯನ ಮುಟ್ಟಬಾರದು.

೮೪

ತಾಯಿ ಬಂಜೆಯಾದಲ್ಲದೆ ಶಿಶು ಗತವಾಗದು ; ಬೀಜ ನಷ್ಟವಾದಲ್ಲದೆ ಸಸಿ ಗತವಾಗದು ; ನಾವು ನಷ್ಟವಾದಲ್ಲದೆ ನೇಮ ನಷ್ಟವಾಗದು ; ಮೊದಲು ಗೆಟ್ಟಲ್ಲದೆ ಲಾಭದಾಸೆ ಬಿಡದು. ಗೊಹೇಶ್ವರಲಿಂಗದ ನಿಜವನೆಯ್ದುವಡೆ ಪೂಜೆಯ ಫಲ ಮಾದಲ್ಲದೆ ಭವಂ ನಾಸ್ತಿಯಾಗದು.

ಕ್ರಿಯೆ ಜ್ಞಾನ; ಜ್ಞಾನ ಕ್ರಿಯೆ.

೮೫

ತಾನು ಗುರುಲಿಂಗಜಂಗಮದ ಪಾದಕ್ಕೆರಗಿ ಲೀಯವಾದ ಬಳಿಕ ಇದು ಚಿಹ್ನ ನೋಡಯ್ಯ: ಗುರುಲಿಂಗಜಂಗಮದ ಪಾದವೇ ತನ್ನ ಸರ್ವಾಂಗದೊಳಗೆ ಅಚ್ಚೊತ್ತಿದಂತಾಗಿ, ಅಲ್ಲಿಯೇ ಪಾದಾರ್ಚನೆ, ಅಲ್ಲಿಯೇ ಪಾದೋದಕ ಸೇವನೆ, ಬೇರೆ ಪೃಥಕ್ಕಿಲ್ಲವಯ್ಯ ! ಅದೆಂತೆಂದೊಡೆ : ಪರಮ ಜ್ಞಾನಲಿಂಗಜಂಗಮದ ಸಂಬಂಧ ಸಮರತಿಯ ಸೋಂಕಿನಲ್ಲಿ ಪರಮಾನಂದ ಜಲವೇ ಪ್ರವಾಹವಾಗಿ, ಸರ್ವಾಂಗದಲ್ಲಿ ಪುಳಕವಾಗಿ ಹರಿವುತ್ತಿರಲು, ಆ ಪರಮಸುಖ ಸೇವನೆಯ ಮಾಡುವಲ್ಲಿ ಪಾದೋದಕ ಸೇವನೆ ಎಂದೆನಿಸಿ

ತ್ತಯ್ಯ. ಆ ಪರಮಾಮೃತತೃಪ್ತಿ ಬಸವಣ್ಣಂಗಾಯಿತ್ತು. ಆ ಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಬದುಕಿದೆನಯ್ಯ ಕಲಿದೇವರದೇವಾ.

೮೬

ನೀರಿಂಗೆ ನೆಯ್ದಿಲೆ ಶೃಂಗಾರ; ಸಮುದ್ರಕ್ಕೆ ತೆರೆಯೇ ಶೃಂಗಾರ; ನಾರಿಗೆ ಗುಣವೇ ಶೃಂಗಾರ; ಗಗನಕ್ಕೆ ಚಂದ್ರಮನೇ ಶೃಂಗಾರ; ನಮ್ಮ ಕೂಡಲಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ.

೮೭

ಧರಿಸಿ ಭೋ ಧರಿಸಿ ಭೋ ಮರ್ತ್ಯರೆಲ್ಲರು ಮರೆಯದೆ ಶ್ರೀ ಮಹಾ ಭಸಿತವ. ಲೆಕ್ಕವಿಲ್ಲದ ತೀರ್ಥಂಗಳ ಮಿಂದ ಫಲಕ್ಕಿಂತಲೂ ಕೋಟಿ ಮಡಿ ವೆಗ್ಗಳ. ಧರಿಸಿ ಭೋ ಧರಿಸಿ ಭೋ ಮರ್ತ್ಯರೆಲ್ಲರೂ ಮರೆಯದೆ ಶ್ರೀ ಮಹಾ ಭಸಿತವ. ಲೆಕ್ಕವಿಲ್ಲದ ಯಜ್ಞಂಗಳ ಮಾಡಿದ ಫಲಕ್ಕಿಂತ ಕೋಟಿ ಮಡಿ ವೆಗ್ಗಳ. ಅದೆಂತೆಂದಡೆ ಭೀಮಾಗಮದಲ್ಲಿ: ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ ಕೋಟಿ ಗುಣಿತಂ ಭಸ್ಮಸ್ನಾನಂ ನ ಸಂಶಯಃ" ಎಂದುದಾಗಿ, ಧರಿಸಿ ಭೋ ಧರಿಸಿ ಭೋ ಮರ್ತ್ಯರೆಲ್ಲರೂ ಮರೆಯದೆ ಶ್ರೀಮಹಾಭಸಿತವ. ನಮ್ಮ ಕಲಿದೇವರ ನಿಜಚರಣವ ಕಾಂಬುದಕ್ಕೆ ಶ್ರೀ ಮಹಾಭಸಿತವೇ ವಶ್ಯ ಕಾಣಿ ಭೋ.

೮೮

ಹಿತವಿದೆ ಸಕಲ ಲೋಕದ ಜನಕ್ಕೆ. ಮತವಿದೆ ಶ್ರುತಿ ಪುರಾಣದ ಗತಿ ಇದೆ. ಭಕುತಿಯ ಬೆಳಗಿನುನ್ನತಿ ಇದೆ. ಶ್ರೀವಿಭೂತಿಯನೊಲಿದು ಧರಿಸಿರೇ. ಭವವನು ಪರಿವುದು, ದುರಿತ ಸಂಕುಳವನೊರಸುವದು, ಹರನ ಸಾಲೋಕ್ಯ, ಸಾಮೀಪ್ಯದಲ್ಲಿರಿಸುವದು. ನಿರುತವಿದನೇ ನಂಬು ಮನುಜಾ. ಜವನ ಭೀತಿ ಮರಣಭಯದಿಂದ ಈ ವಿಭೂತಿಯ ಅಗಸ್ತ್ಯ ಕಶ್ಯಪ ಜಮದಗ್ನಿಗಳು ಧರಿಸುವರು ನೋಡಾ! ಶ್ರೀಶೈಲ ಚೆನ್ನಮಲ್ಲಿಕಾರ್ಜುನನೊಲಿಸುವ ಶ್ರೀ ವಿಭೂತಿ.

೮೯

ತನು ಬತ್ತಲೆಯಿದ್ದರೇನೋ, ಮನ ಶುಚಿಯಾಗದನ್ನಕ್ಕರ? ಮಂಡೆ ಬೋಳಾದಡೇನೊ, ಭಾವ ಬಯಲಾಗದನ್ನಕ್ಕರ? ಭಸ್ಮವ ಪೂಸಿದಡೇನೊ, ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತೀ ಆಶೆಯ ವೇಷದ ಭಾಷೆಗೆ,–ಗೊಹೇಶ್ವರಾ, ನೀ ಸಾಕ್ಷಿಯಾಗಿ ಛೀ ಎಂಬೆನು.

೯೦

ಅರಣ್ಯವ ಸುಟ್ಟು ಭಸ್ಮವ ಧರಿಸಬಲ್ಲಡೆ ಭಸ್ಮಧಾರಕರೆಂಬೆ. ಪರ್ವತವ ಸುಟ್ಟು ಭಸ್ಮವ ಧರಿಸಬಲ್ಲಡೆ ಭಸ್ಮಧಾರಕರೆಂಬೆ. ನೀರ ಸುಟ್ಟು ಭಸ್ಮವ ಧರಿಸಬಲ್ಲಡೆ ಭಸ್ಮಧಾರಕರೆಂಬೆ. ವಾಯುವ ಸುಟ್ಟು ಭಸ್ಮವ ಧರಿಸಬಲ್ಲಡೆ ಭಸ್ಮಧಾರಕರೆಂಬೆ. ಸಮುದ್ರವ ಸುಟ್ಟು ಭಸ್ಮವ ಧರಿಸಬಲ್ಲಡೆ ಭಸ್ಮಧಾರಕರೆಂಬೆ. ಇಂತಪ್ಪ ಭಸ್ಮವ ಧರಿಸಬಲ್ಲವರಿಗೆ ಮೋಕ್ಷವೆಂಬುವದು ಕರತಳಾಮಳಕ ನೋಡಾ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

೯೧

ಮುಖದಲ್ಲಿ ರುದ್ರನಿಪ್ಪನಯ್ಯ. ನಾಭಿಯಲ್ಲಿ ವಿಷ್ಣುವಿಪ್ಪನಯ್ಯ. ಮೂಲದಲ್ಲಿ ಬ್ರಹ್ಮನಿಪ್ಪನಯ್ಯ. ಕೇಶದಲ್ಲಿ ದೇವರ್ಕಳೆಲ್ಲ ಇಪ್ಪರಯ್ಯ. ಇಂತು ಪುಣ್ಯವೆ ಪುಂಜವಾಗಿ ಸೌರಾಷ್ಟ್ರಸೋಮೇಶ್ವರನ ಬರಿಸುವ ರುದ್ರಾಕ್ಷಿಯ ಧರಿಸಿರಯ್ಯ ಭಕ್ತರಪ್ಪವರು.

೯೨

ಸಕಲ ಭೋಗವಿಲಾಸ ಲಿಂಗಕ್ಕೆಂದಲ್ಲಿ,ತನ್ನಂಗಕ್ಕೆ ಶೃಂಗಾರ ಉಂಟೆ? ಶ್ರೀರುದ್ರಾಕ್ಷಿ ವಿಭೂತಿಯ ಸ್ವಸ್ಥಾನದಲ್ಲಿ ತನ್ನಂಗಕ್ಕೆ ಶೃಂಗಾರವೆಂದು ಮಾಡಿದೊಡೆ, ಆ ನಿಜಪದದಂಗ ಒಂದೂ ಇಲ್ಲೆಂದನಂಬಿಗರ ಚೌಡಯ್ಯ.

೯೩

ಅಯ್ಯಾ ಎನಗೆ ರುದ್ರಾಕ್ಷಿಯೇ ಪುಣ್ಯದ ಪುಂಜ ನೋಡಾ! ಅಯ್ಯಾ ಎನಗೆ ರುದ್ರಾಕ್ಷಿಯೇ ಭಾಗ್ಯದ ನಿಧಿಯು ನೋಡಾ! ಅಯ್ಯಾ ಎನಗೆ

ರುದ್ರಾಕ್ಷಿಯೇ ಸತ್ಯದ ಸದನ ನೋಡಾ! ಆಯ್ಯಾ ಎನಗೆ ರುದ್ರಾಕ್ಷಿಯೇ ನಿತ್ಯದ ನಿಲವು ನೋಡಾ! ಅಯ್ಯಾ ಎನಗೆ ರುದ್ರಾಕ್ಷಿಯೇ ಭಕ್ತಿಯ ಬೆಳಗು ನೋಡಾ! ಅಯ್ಯಾ ಎನಗೆ ರುದ್ರಾಕ್ಷಿಯೇ ಮುಕ್ತಿಯ ಸೋಪಾನ ನೋಡಾ! ಅಯ್ಯಾ ಎನಗೆ ರುದ್ರಾಕ್ಷಿಯೇ ಶಕ್ತಿಯ ಬಲವು ನೋಡಾ! ಇಂತಪ್ಪ ರುದ್ರಾಕ್ಷಿಯು ಎನ್ನಂತರಂಗ ಶುದ್ಧವಾಗಿ ಅವಿರಳ ಭಕ್ತಿಯಿಂದ ಧರಿಸಿ ನಿಶ್ಚಿಂತ ನಿಭ್ರಾಂತನಾಗಿರ್ದೆನಯ್ಯ ಅಖಂಡೇಶ್ವರಾ!

೯೪

ಕರಿಯಂಜುವುದಂಕುಶಕ್ಕಯ್ಯಾ; ಗಿರಿಯಂಜುವುದು ವಜ್ರಕ್ಕಯ್ಯಾ; ತಮಂಧವಂಜುವುದು ಜ್ಯೋತಿಗಯ್ಯಾ; ಕಾನನವಂಜುವುದು ಬೇಗೆಗಯ್ಯಾ; ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ.

೯೫

ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ, ನಾಲಿಗೆ ನಲಿದಾಡುವನ್ನಕ್ಕ ನಿಮ್ಮ ನಾಮಾಮೃತವ ತಂದೆರಸು ಕಂಡಯ್ಯಾ ಎನಗೆನ್ನ ತಂದೇ! ಬಿರಿಮುಗುಳಂದದಿ ಎನ್ನ ಹೃದಯ ನಿಮ್ಮ ಶ್ರೀ ಚರಣದ ಮೇಲೆ ಬಿದ್ದ ರಳುಗೆ ಕೂಡಲಸಂಗಮದೇವಾ.

೯೬

ಶಿವಮಂತ್ರವೆನಗೆ ಕಾಮಧೇನುವಯ್ಯ! ಶಿವಮಂತ್ರವೆನಗೆ ಕಲ್ಪವೃಕ್ಷ ವಯ್ಯ! ಶಿವಮಂತ್ರವೆನಗೆ ಚಿಂತಾಮಣಿಯಯ್ಯ! ಶಿವಮಂತ್ರವೆನಗೆ ಪರುಷದ ಖಣಿಯಯ್ಯ! ಶಿವಮಂತ್ರವೆನಗೆ ಪುನಃಪ್ರಾಣಮಾಲಿಕೆ ಯಯ್ಯ ಅಖಂಡೇಶ್ವರಾ!

೯೭

ಮಡುವಿನಗ್ಗಣಿ ಗಿಡದ ಹೂವು ಒಡಲಿಗೆ ಅನ್ನ, ನುಡಿನುಡಿಗೆ ಮೃಡನ ಸ್ಮರಣೆ ಇರಲು ಜಡರ ಹಂಗೇಕೆ ಹೇಳಾ ಅಖಂಡೇಶ್ವರಾ?

೯೮

ಪಂಚಾಕ್ಷರವೆಂದರೆ ಪರಬ್ರಹ್ಮ. ಪಂಚಾಕ್ಷರವೆಂದರೆ ಪರಶಿವ. ಪಂಚಾಕ್ಷರವೆಂದರೆ ಪರವಸ್ತುವಿನ ನಾಮ. ಪಂಚಾಕ್ಷರವೆಂದರೆ ಭವದುರಿತ ಬಿಟ್ಟೋಡುವದು. ಪಂಚಾಕ್ಷರವೆಂದರೆ ಬಹುಜನ್ಮದ ದೋಷ ಪರಿಹಾರ ವಾಗುವದು. ಪಂಚಾಕ್ಷರವೆಂದರೆ ಸಕಲತೀರ್ಥಕ್ಷೇತ್ರಯಾತ್ರೆಯಾದ ಪುಣ್ಯ ಫಲಪ್ರಾಪ್ತಿಯಾಗುವದು. ಪಂಚಾಕ್ಷರವೆಂದರೆ ಅಷ್ಟಮಹಾಸಿದ್ಧಿ, ನವ ಮಹಾಸಿದ್ಧಿ, ಅಷ್ಟಾಂಗಯೋಗದ ಫಲ, ಅಷ್ಟೈಶ್ವರ್ಯಸಂಪತ್ತು ದೊರ ಕೊಳ್ಳುವದು ನೋಡಾ. ಇಂತಪ್ಪ ಪಂಚಾಕ್ಷರಿ ಮಂತ್ರದ ಮಹತ್ವ ಕಂಡು, ಮನ ಕರಗಿ, ತನು ಉಬ್ಬಿ, ಪಂಚಾಕ್ಷರಿ ಪಂಚಾಕ್ಷರಿಯೆಂದು ನೆನೆನೆನೆದು, ಭವ ಹರಿದು, ಪರಶಿವಲಿಂಗವ ಕೂಡಿ, ಸುಖಿಯಾಗಿರ್ದೆನಯ್ಯಾ, ಕಾಡಿ ನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯಪ್ರಭುವೇ.

೯೯

ಏಳುಕೋಟಿ ಮಹಾಮಂತ್ರಂಗಳ ಉಪಮಂತ್ರ ಕೋಟ್ಯಾನುಕೋಟಿ ಗಳ ಕಲಿತು ತೊಳಲಿ ಬಳಲುವುದೇಕೋ? ಭಾಳಾಕ್ಷನ ಮೂಲಮಂತ್ರ ಒಂದೇ ಸಾಲದೇ? ಸಕಲ ವೇದಂಗಳ ಮೂಲವಿದು; ಸಕಲ ಶಾಸ್ತ್ರಂಗಳ ಸಾರವಿದು; ಸಕಲಾಗಮಂಗಳ ಅರುಹಿದು; ಸಕಲ ಮಂತ್ರಂಗಳ ಮಾತೆ ಯಿದು. ಇಂತಪ್ಪ ಶಿವಮಂತ್ರವೆಂಬ ಸಂಜೀವನವು ಎನ್ನಂಗಕ್ಕೆ ಸಂಗಿಸಲಾಗಿ ಎನಗೆ ಮರಣದ ಭಯ ಹಿಂಗಿತ್ತಯ್ಯ ಅಖಂಡೇಶ್ವರಾ.

೧೦೦

ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದಗಳೆಂಬ ನಾಲ್ಕು ಶಾಖೆಗಳು, ವೇದಾಂಗಗಳೆಂಬ ಉಪಶಾಖೆ ಗಳು, ಶಾಸ್ತ್ರಂಗಳೆಂಬ ಅಂಕುರ ಪಲ್ಲವಗಳು, ಪುರಾಣಗಳೆಂಬ ಪುಷ್ಪಗಳು, ಆಗಮಗಳೆಂಬ ಕಾಯಿ ಬಲಿದು, ಶ್ರೀ ಪಂಚಾಕ್ಷರಿಯೆಂಬ ಮಧುರಸ ಹಣ್ಣುಗಳು ಅಗಣಿತ ಫಲವನು ಅನಂತ ಕಾಲ ಭೋಗಿಸಲು ಮತ್ತು ಜಿಹ್ವೆಯೊಳಗೆ ಬಂದಿರಲು ಭೋಗಿಸಿ ಸುಖಿಯಹುದಲ್ಲದೆ, ಇತರ ವಿದ್ಯಂ ಗಳೆಂಬ ಸಸಿಯ ಸಾಕಿ ಸಲಹಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೧೦೧

ಓಂಕಾರವೆಂಬ ಮರಕ್ಕೆ ಷಟ್‌ಕೃತಿಗಳೆಂಬ ಶಾಖೆ ಪಸರಿಸಿ, ಷಡಕ್ಷರ ಗಳೆಂಬ ತಳಿರು ಕೊನರಿ, ಷಟ್‌ಸ್ಥಲಂಗಳೆಂಬ ಕುಸುಮಂಗಳಾಗಿ, ಷಡು ಲಿಂಗಂಗಳೆಂಬ ಮೋಕ್ಷದ ಮಧುರ ಫಲಂಗಳ ತಾಳಿರ್ಪುದು ನೋಡಾ. ಇದನು ನಾನು ಶ್ರುತಿ ಗುರುವಚನ ಸ್ವಾನುಭಾವಂಗಳಿಂದರಿದು, ಓಂಕಾರ ವೆಂಬ ವೃಕ್ಷವನೇರಿ 'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ' ಎಂದು, ಆ ಷಡುಲಿಂಗಂಗಳೆಂಬ ಮೋಕ್ಷದ ಮಧುರ ಫಲಂಗಳನು ಸವಿದು ನಿತ್ಯತೃಪ್ತನಾದೆನಯ್ಯ ಅಖಂಡೇಶ್ವರಾ.

೧೦೨

ವಿಪುಳ ವೇದವೇದಾಂತಸಾರ. ಸಕಲಲೋಕಜನ ಹಿತಾಧಾರ. ಸಪ್ತ ಕೋಟಿ ಮಹಾಮಂತ್ರಗಳ ತವರುಮನೆ. ಭಕ್ತಜನ ಜೀವಾನಂದ. ಅಖಿಳಾ ಗಮಸಂತಾನದ ಹರಣ. ಮುಕ್ತಿ ಮೇಲುಪ್ಪರಿಗೆಯ ಸೋಪಾನ. ಪ್ರಣ ವಾಂಕುರ ಪಲ್ಲವ ಫಲರೂಪು. ತ್ರಿಣಯನನೊಲಿಸುವ ಕರ್ಣಾಭರಣ. ಹರನ ನಾಮದ ಸಾಕಾರದ ನಿಲವು. ಪರಮಪಂಚಬ್ರಹ್ಮಾನಂದ. ಪರತತ್ವದ ನಿತ್ಯದ ನೆಲೆ. ಹಂಪೆಯ ವಿರುಪನ ತೋರುವ ಗುರು ಪಂಚಾಕ್ಷರಿ!

೧೦೩

ನಾ ಹುಟ್ಟಿದ ದ್ವಾದಶ ವರ್ಷಕ್ಕೆ ಎನ್ನ ತಂದೆ ದ್ವಾದಶ ಮಂತ್ರವ ಕಲಿಸಿದ! ಒಂದು ಮಂತ್ರದಿಂದ ಮರ್ತ್ಯಲೋಕವ ಸುಟ್ಟೆ! ಒಂದು ಮಂತ್ರ ದಿಂದ ಪಾತಾಳಲೋಕವ ಸುಟ್ಟೆ! ಒಂದು ಮಂತ್ರದಿಂದ ಸ್ವರ್ಗಲೋಕವ ಸುಟ್ಟೆ! ಮೂರು ಮಂತ್ರದಿಂದ ಮುಪ್ಪುರದರಸುಗಳ ಕೊಂದೆ! ಆರು ಮಂತ್ರದಿಂದ ಆರು ವರ್ಣವ ಸುಟ್ಟೆ! ಇಂತೀ ಮಂತ್ರವ ಮಂತ್ರಿಸುವ ವ್ಯಾಳ್ಯೆದಲ್ಲಿ, ನಾ ಸತ್ತು ಕಾಯಕವ ಮಾಡುತಿರ್ದೆನಯ್ಯ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯಪ್ರಭುವೇ!!

೧೦೪

ವಿಷಯದ ಪಿತ್ತ ತಲೆಗೇರಿದಲ್ಲಿ, ವಿವೇಕವೆಂಬ ದೃಷ್ಟಿ ನಷ್ಟವಾಗಿ ಪಶುಪತಿಯ ನೆನಹು ಕೆಟ್ಟು ಮತಿ ಮಂದವಾದಲ್ಲಿ, ಮಂತ್ರದ ನೆನಹುಂಟೆ ಕಾಣಾ ರಾಮನಾಥಾ?

೧೦೫

ತೋಯವಿಲ್ಲದ ಕುಂಭ, ಜ್ಞಾನವಿಲ್ಲದ ಘಟ, ದೇವರಿಲ್ಲದ ಗುಡಿ,— ಇವು ಹಾಳು ದೇಗುಲ ಸಮವು. ಎಲೆ ಪರವಾದಿಗಳಿರಾ, ಗುರುವು ಎಂಬ ನಾಮವು ಪರಶಿವನು. ಪರಶಿವನೆ ಇಷ್ಟಲಿಂಗವು. ಆ ಇಷ್ಟಲಿಂಗದ ಪೂಜೆಯಲ್ಲಿ ಲೋಲುಪ್ತನಾಗಿರಬೇಕು. ಆ ಗುರುಮಂತ್ರದಲ್ಲಿ ಮಗ್ನನಾಗಿರಬೇಕು. ಚರಭಕ್ತಿಯಲ್ಲಿ ಯುಕ್ತನಾಗಿರಬೇಕು. ಈ ತ್ರಿವಿಧವ ಬಿಟ್ಟು, ಮಲತ್ರಯಕ್ಕೆ ಒಳಗಾಗಿ ಬಂಧನಕ್ಕೆ ಹೋಗುವರ ನೋಡಿ, ಮನ ನಾಚಿತ್ತೆಂದ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

೧೦೬

ಕ್ರೀಯ ಮರೆದಲ್ಲಿ ಅರಿವು ಹೀನವಾಗಿಪ್ಪುದು. ಅರಿವ ಮರೆದಲ್ಲಿ ಜ್ಞಾನ ಹೀನವಾಗಿಪ್ಪುದು. ಜ್ಞಾನವ ಮರೆದಲ್ಲಿ ಬೆಳಗಿನ ಕಳೆ ನಷ್ಟವಾಯಿತ್ತು. ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು ಅವರಿಗೆ ಮರೆಯಾಗಿ ತೊಲಗಿದ.

೧೦೭

ಕಣ್ಣು ಕಾಲು ಎರಡುಳ್ಳವ ದೂರವೆಯ್ದುವನಲ್ಲದೆ, ಕಣ್ಣು ಕಾಲು ಎರಡರೊಳಗೊಂದಿಲ್ಲದವನು ದೂರವೆಯ್ದಲರಿಯನೆಂಬಂತೆ, ಜ್ಞಾನವಿರಹಿತನಾಗಿ ಕ್ರಿಯೆ ಏನೆಷ್ಟು ಮಾಡಿದಡೇನು, ಅದು ಕಣ್ಣಿಲ್ಲದವನ ನಡತೆಯಂತೆ. ಕ್ರಿಯಾರಹಿತನಾಗಿ ಜ್ಞಾನಿಯಾದಡೇನು, ಅದು ಕಾಲಿಲ್ಲದವನ ಇರವಿನಂತೆ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವ ಬೆರಸುವೊಡೆ ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

೧೦೮

ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ? ನೆನೆದವಾತ್ರ ದಲ್ಲಿ ಅಹುದೆ, ಕಾರ್ಯದಲಲ್ಲದೆ? ಕುರುಡ ಕಾಣ ಪಥವ, ಹೆಳವ ನಡೆಯಲರಿಯ. ಒಂದಿಲ್ಲದಿರ್ದಡೊಂದಾಗದು. ಜ್ಞಾನವಿಲ್ಲದಿರ್ದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು. ಇದು ಕಾರಣ ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.

೧೦೯

ಅಗ್ನಿ ಸುಡಲಲ್ಲದೆ ಸುಳಿಯಲರಿಯದು. ವಾಯು ಸುಳಿವುದಲ್ಲದೆ ಸುಡ ಲರಿಯದು. ಆ ಅಗ್ನಿ ವಾಯು ಕೂಡಿದಲ್ಲದೆ ಅಡಿ ಇಡಲರಿಯದು. ಈ ಪರಿ ಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ ರಾಮನಾಥಾ?

೧೧೦

ಮನದಲ್ಲಿ ಹುಟ್ಟಿದ ಅರಿವು ಮಾಡುವ ಮಾಟದಲ್ಲಿ ಕಾಣಬಹುದು. ಶರಣರ ಸಂಗಕ್ಕೆಳಸಿದ ಚಿತ್ತವ ಅನುಭಾವದಲ್ಲಿ ಕಾಣಬಹುದು. ಒಳ ಹೊರಗೆ ತೆರಹಿಲ್ಲದ ಕೂಟ ನಿನ್ನದು. ಅಮರೇಶ್ವರಲಿಂಗದಲ್ಲಿ,—ಸಂಗನ ಬಸವಣ್ಣಾ, ನಿನ್ನ ಪಾದಕ್ಕೆ ನಮೋ ನಮೋ ಎಂಬೆನು.

೧೧೧

ಕ್ರಿಯೆಯೇ ಅಧಿಕವೆಂಬ ಗೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯಾ ಎನಗೆ. ಜ್ಞಾನವೇ ಅಧಿಕವೆಂಬ ದಡ್ಡ ವೇದಾಂತಿಗಳ ಮಾತು ಸೊಗಸದಯ್ಯಾ ಎನಗೆ. ಅದೇನು ಕಾರಣವೆಂದೊಡೆ: ಆವುದಾ ನೊಂದು ಪಕ್ಷಿ ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ, ಅಂತರಂಗದಲ್ಲಿ ಸಮ್ಯಗ್ಜ್ಞಾನ ಬಹಿರಂಗದಲ್ಲಿ ಶಿವಸತ್ಕ್ರಿಯಾ ಸನ್ನಿಹಿತವಿಲ್ಲದೆ ಪರ ವಸ್ತುವ ಕೂಡಬಾರದಾಗಿ. ಇದು ಕಾರಣ ಸತ್ಕ್ರಿಯಾಸಮ್ಯಗ್ಜ್ಞಾನ ಸಂಪನ್ನರಾದ ಮಹಾಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೧೧೨

ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ಘೃತ? ಕ್ರಿಯಾಮಥನ ವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದು ಕಾರಣ, ನಮ್ಮ ಗೊಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತಂಗಲ್ಲದೆ, ಸತ್ಕ್ರಿಯಾಚರ ಣೆಯೇ ಸಾಧನ ಕಾಣಿ ಭೋ.

೧೧೩

ಘಟಜಲ ಬಾಹ್ಯಾಗ್ನಿಯುಷ್ಣ ಸೋಂಕಿಯುಷ್ಣೋದಕವಾದಂತೆ, ತಿಲ ಕುಸುಮ ಸಂಗದಿಂದ ಕುಸುಮಸಾರ ತಿಲಸಾರಕ್ಕೆ ವೇಧಿಸಿದಂತೆ, ಅಂಗ ಲಿಂಗಸಂಗದಿಂದ ಪ್ರಾಣಲಿಂಗ ವೇದ್ಯವಾಯಿತ್ತು ನೋಡಾ! ಇಷ್ಟಪ್ರಾಣ ಸಮರಸಾದ್ವೈತವಾದುದೇ ತೃಪ್ತಿ. ಇದು ಕಾರಣ ಸಗುಣಕ್ಕೆ ಸಗುಣ ಬ್ರಹ್ಮವಾಗಿ, ಎನ್ನಂಗ ಪ್ರಾಣ ಮನ ಭಾವ ಕರಣಂಗಳೊಳಹೊರಗೆ ತೆರಹಿಲ್ಲದಿರ್ದೆಯಲ್ಲಾ ಸೌರಾಷ್ಟ್ರಸೋಮೇಶ್ವರಾ!

೧೧೪

ಗತಿ ಮತಿ ಚೈತನ್ಯ ಶಬ್ದ ಉಳ್ಳನ್ನಕ್ಕ ಕ್ರೀಯೆಂತಂತೆ ನಡೆವುದು. ಉರುವಣೆ ಬೇಡ ಕಂಡೆಯಾ ಮನವೇ. ಎಲೆ ಮನವೇ, ಕ್ರೀಯೆಂತಂತೆ ನಡೆ ವುದು. ಹೂಮಿಡಿಯು ಹರಿದಡೆ ಹಣ್ಣಾಗಬಲ್ಲುದೆ? ಲಿಂಗದಲ್ಲಿ ಲೀಯ ವಾಗದನ್ನಕ್ಕ ದೇವ ಸಕಳೇಶ್ವರನೆಂತೊಲಿವ?

೧೧೫

ಆದಿಯನಾದಿಯ ನಿತ್ಯಾನಿತ್ಯವ ತಿಳಿಯಲರಿಯಡೆ, ವಾಯಕ್ಕೆ ಪರ ಬ್ರಹ್ಮವ ನುಡಿವ ವಾಯುಪ್ರಾಣಿಗಳವರೆತ್ತ ಬಲ್ಲರೋ? ಆ ಪರಬ್ರಹ್ಮದ ನಿಜದ ನಿಲವದೆಂತೆಂದೊಡೆ: ಆದಿಯೇ ದೇಹ, ಅನಾದಿಯೇ ನಿರ್ದೇಹ

ಆದಿಯೇ ಸಕಲ, ಅನಾದಿಯೇ ನಿಷ್ಕಲ. ಆದಿಯೇ ಜಡ, ಅನಾದಿಯೇ ಅಜಡ. ಆದಿಗೆ ಒಡಲುಂಟು, ಅನಾದಿಗೆ ಒಡಲಿಲ್ಲ. ಆದಿಯೇ ಕಾಯ, ಅನಾದಿಯೇ ಪ್ರಾಣ. ಈ ಎರಡರ ಯೋಗವ ಭೇದಿಸಿ, ತನ್ನಿಂ ತಾನೆ ತಿಳಿದು ನೋಡಲು ಆದಿಸಂಬಂಧವಪ್ಪ ಭೂತಂಗಳು ನಾನಲ್ಲ. ದಶ ವಿಧೇಂದ್ರಿಯಂಗಳು ನಾನಲ್ಲ. ದಶವಾಯುಗಳು ನಾನಲ್ಲ. ಅಷ್ಟಮದಂಗಳು ಅರಿಷಡ್ವರ್ಗಂಗಳು ಷಡೂರ್ಮಿಗಳು ಷಡ್ಭಾವ ವಿಕಾರಂಗಳು ಷಟ್ ಕರ್ಮಂಗಳು ಷಡ್ಧಾತುಗಳು ಸಪ್ತವ್ಯಸನಂಗಳು ತನುತ್ರಯಂಗಳು ಜೀವತ್ರಯಂಗಳು ಮನತ್ರಯಂಗಳು ಮಲತ್ರಯಂಗಳು ಗುಣತ್ರಯಂಗಳು ಭಾವತ್ರಯಂಗಳು ತಾಪತ್ರಯಂಗಳು ಅಂತಃಕರಣಂಗಳು ಇಂತಿವಾದಿ ಯಾಗಿ ತೋರುವ ತೋರಿಕೆಯೇನೂ ನಾನಲ್ಲ, ನನ್ನವಲ್ಲ. ಎಲ್ಲವೂ ನನ್ನಾಧೀನವಾಗಿಪ್ಪವು; ನಾನವರಾಧೀನವಲ್ಲ. ನಾನು ತುರಿಯ ತುರಿಯಾ ತೀತವಪ್ಪ ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆ ತನ್ನಿರವೆಂದು ತಿಳಿಯೆ, ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆ ಬಿಟ್ಟು ನಿರಾಳದಲ್ಲಿ ನಿರವಯವನೈದಲರಿಯದೆ ಮತ್ತೆಯು ಭೌತಿಕತತ್ವಸಂಬಂಧವಾಗಿ ಇರು ತ್ತಿರಲು, ಈ ತತ್ವದಾದಿ ತಾನೆಂತೆನಲು ಆ ಪರಬ್ರಹ್ಮವಪ್ಪ ನಿತ್ಯನಿರಾಳ ನಿಶ್ಶೂನ್ಯ ಲಿಂಗವೇ ತನ್ನ ಲೀಲಾವಿಲಾಸದಿಂದ ತಾನೆ ಸುನಾದಬಿಂದು ಪ್ರಕಾಶತೇಜೋಮೂರ್ತಿಯಾಗಿ ನಿಂದು ಮಹಾಲಿಂಗವೆನಿಸಿತ್ತು. ಆ ಮಹಾ ಲಿಂಗವೇ ಪಂಚ ಸಾದಾಖ್ಯವೆನಿಸಿತ್ತು. ಆ ಪಂಚ ಸಾದಾಖ್ಯವೇ ಪಂಚ ಲಿಂಗಪ್ರಕಾಶವೆಂದೆನಿಸಿತ್ತು. ಆ ಪಂಚಲಿಂಗಪ್ರಕಾಶವೇ ಪಂಚಮುಖ ವೆಂದೆನಿಸಿತ್ತು. ಆ ಪಂಚಮುಖದಿಂದವೆ ಪಂಚಾಕ್ಷರೋತ್ಪತ್ತಿ. ಆ ಪಂಚಾಕ್ಷರಿಯಿಂದವೆ ಪಂಚಕಲೆಗಳುತ್ಪತ್ತಿ. ಆ ಪಂಚಕಲೆಗಳಿಂದವೆ ಪಂಚಶಕ್ತಿಗಳುತ್ಪತ್ತಿ. ಆ ಪಂಚಶಕ್ತಿಗಳಿಂದವೆ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಂಗಳ ಜನನ. ಆ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳಿಂದವೆ ತನ್ಮಾತ್ರಂಗಳುತ್ಪತ್ತಿ. ಆ ತನ್ಮಾತ್ರಂಗಳಿಂದವೆ ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳೇ ಪಂಚೀಕರಣವನೆಯ್ದಿ ಆತ್ಮಂಗೆ ಅಂಗವಾಯಿತ್ತು. ಆ ಅಂಗಕ್ಕೆ ಜ್ಞಾನೇಂದ್ರಿಯಂಗಳು ಕರ್ಮೇಂದ್ರಿಯಂಗಳು ಪ್ರತ್ಯಂಗ ವೆಂದೆನಿಸಿತ್ತು. ಇಂತು ದೇಹಸಂಬಂಧವುಂ ಶಿವ ತನ್ನ ಚಿದಾಂಶಿಕನಪ್ಪ

ಆತ್ಮಂಗೆ ಸಂಬಂಧಿಸಿದನಾಗಿ ಆ ಸಂಬಂಧಿಸಿದ ಕಾಯದ ಪೂರ್ವಾಶ್ರಯವು ಎಲ್ಲಿಯಾಯಿತ್ತು ಅಲ್ಲಿಯೇ ಅಡಗಿಸಿ, ಆ ಕಾಯಾಶ್ರಯವನಳಿದು, ಮಹಾ ಘನಲಿಂಗವ ವೇಧಿಸಿಕೊಟ್ಟು, ಶಿವ ತಾನೆ ಗುರುವಾಗಿ ಬಂದು, ಆ ಗುರು ತಾನೆ ಮಹಾಘನಲಿಂಗವ ವೇಧಿಸಿಕೊಟ್ಟ ಪರಿಯೆಂತೆಂದೊಡೆ : ಆತ್ಮಗೂಡಿ ಪಂಚಭೂತಂಗಳಿಗೆ ಷಡಂಗವೆಂದೆನಿಸಿ, ಆ ಅಂಗಕ್ಕೆ ಕಲೆಗಳನೆ ಷಡ್ವಿಧ ಶಕ್ತಿಗಳೆಂದೆನಿಸಿ, ಆ ಶಕ್ತಿಗಳಿಗೆ ಷಡ್ವಿಧ ಭಕ್ತಿಯನಳವಡಿಸಿ, ಆ ಭಕ್ತಿ ಗಳಿಗೆ ಭಾವ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಂಗಳನೆ ಷಡ್ವಿಧ ಹಸ್ತಂಗಳೆಂದೆನಿಸಿ, ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ ಪಂಚ ಲಿಂಗಂಗಳನೆ ಷಡ್ವಿಧಲಿಂಗಂಗಳೆಂದೆನಿಸಿ, ಆ ಲಿಂಗಂಗಳಿಗೆ ಷಡಕ್ಷರಿಯನೇ ಷಡ್ವಿಧ ಮಂತ್ರವೆಂದೆನಿಸಿ, ಆ ಮಂತ್ರಲಿಂಗಗಳಿಗೆ ಹೃದಯಗೂಡಿ ಪಂಚೇಂದ್ರಿಯಂಗಳನೆ ಷಡ್ವಿಧ ಮುಖಂಗಳೆಂದೆನಿಸಿ ಆ ಮುಖಂಗಳಿಗೆ ತನ್ಮಾತ್ರಂಗಳನೆ ದ್ರವ್ಯಪದಾರ್ಥಂಗಳೆಂದೆನಿಸಿ, ಆ ದ್ರವ್ಯಪದಾರ್ಥಂಗಳ ಆಯಾಯ ಮುಖದ ಲಿಂಗಂಗಳಲ್ಲಿ ನಿರಂತರ ಸಾವಧಾನದಿಂದ ಅರ್ಪಿತವಾಗಿ ಬೀಗಲೊಡನೆ, ಅಂಗಸ್ಥಲಂಗಳಡಗಿ, ತ್ರಿವಿಧಲಿಂಗಾಂಗಸ್ಥಲಂಗಳುಳಿದು ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ, ಗುರುವಿನಲ್ಲಿ ಶುದ್ಧ ಪ್ರಸಾದ, ಲಿಂಗದಲ್ಲಿ ಸಿದ್ಧಪ್ರಸಾದ, ಜಂಗಮದಲ್ಲಿ ಪ್ರಸಿದ್ಧಪ್ರಸಾದ. ಇಂತೀ ತ್ರಿವಿಧ ಪ್ರಸಾದ ಏಕಾರ್ಥವಾಗಿ ಮಹಾಘನಲಿಂಗ ಪರಿಪೂರ್ಣಪ್ರಸಾದ ಅಳವಟ್ಟ ಶರಣ ಜ್ಞಾನಿಯಲ್ಲ, ಅಜ್ಞಾನಿ ಮುನ್ನವೆಯಲ್ಲ. ಶೂನ್ಯನಲ್ಲ, ನಿಶ್ಶೂನ್ಯನಲ್ಲ. ದ್ವೈತಿಯಲ್ಲ, ಅದ್ವೈತಿಯಲ್ಲ. ಇಂತೀ ಉಭಯಾತ್ಮಕ ತಾನೆ ಯಾಗಿ. ಇದು ಕಾರಣ ಇದರ ಆಗುಹೋಗು ಸಕೀಲ ಸಂಬಂಧವ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರೆ ಬಲ್ಲರು.

೧೧೬

ಅರಿವನರಿದೆನೆಂದು ಕ್ರಿಯೆಯ ಬಿಡಲಾಗದು. ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೆ ? ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನ ಕ್ಕೆಡೆಯುಂಟೆ ? ನೀ ಮಾಡುವ ಮಾಟದಿ ಶಿವಪೂಜೆಯ ನೋಟ ಭಾವ ವಿರಬೇಕು. ಅದು ಕಲಿದೇವರ ದೇವಯ್ಯನ ಕೂಟ.

೧೧೭

ಆಚಾರದ ಅರಿವು ಹೊರಗಾದ ಮೇಲೆ, ಅಂಗದ ಮೇಲೆ ಲಿಂಗವಿದ್ದು ಫಲವೇನು? ಕುರುಡನ ಕಯ್ಯ ಕನ್ನಡಿ ಇದ್ದ ಹಾಗೆ, ಬರಡಾವಿಗೆ ಶಿಶು ಹುಟ್ಟಿದ ಹಾಗೆ, ಕರಡಿಗೆ ಕಣ್ಣ ಬೇನೆ ಬಂದ ಹಾಗೆ ಕುರುಡಿಗೆ ಮಕ್ಕಳಾದ ಹಾಗೆ, ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ ಇವರೇನ ಮಾಡಿದರೇನು?— ತಮ್ಮ ಹಾನಿ ವೃದ್ಧಿಯನರಿಯದನ್ನಕ್ಕ ಕಾಲ ಕಾಮಾದಿಗಳ ಬಾಯೊಳಗೆ ಸಿಕ್ಕಿ ಅಗಿದಗಿದು ತಿನಿಸಿಕೊಳುತಿಪ್ಪರಲ್ಲದೆ, ಎನ್ನದೇವ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೮

ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗಜಂಗಮವ ಬಿಡಬಹುದೆ? ಸಂದು ಸಂಶಯವಳಿದು ಅಖಂಡ ಜ್ಞಾನವಾಯಿತ್ತೆಂದು ಪರಧನ ಪರ ಸ್ತ್ರೀಗೆ ಅಳುಪಬಹುದೇ? "ಯತ್ರ ಜೀವಸ್ತತ್ರ ಶಿವಃ" ಎಂಬ ಅಭಿನ್ನ ಜ್ಞಾನವಾಯಿತ್ತೆಂದು ಶುನಕ ಸೂಕರ ಕುಕ್ಕುಟ ಮಾರ್ಜಾಲಗಳ ಕೂಡಿ ಭುಂಜಿಸಬಹುದೇ? ಭಾವದಲ್ಲಿ ತನ್ನ ನಿಜದ ನೆಲೆಯನರಿಯುತ್ತಿರಬಹುದು. ಸುಜ್ಞಾನಸತ್ಕ್ರಿಯಾ ಸುನೀತಿ ಸುಮಾರ್ಗದಲ್ಲಿ ವರ್ತಿಸುವದು. ಹೀಗಲ್ಲದೆ ಜ್ಞಾನವಾಯಿತ್ತೆಂದು ತನುಮನಕ್ಕೆ ಬಂದ ಹಾಗೆ ಮೀರಿ ನುಡಿದು ನಡೆದೆ ನಾದೊಡೆ ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೇ ಚೆನ್ನಮಲ್ಲಿಕಾರ್ಜು ನಯ್ಯನು?

೧೧೯

ತನು ಮುಟ್ಟಿ ಮನ ಮುಟ್ಟದೆ, ದೂರವಾದರಯ್ಯಾ ಬೆಲೆವೆಣ್ಣಿ ನಂತೆ. ಸೂಳೆ ತನು ಮುಟ್ಟಿ ಅಪ್ಪುವಳಲ್ಲದೆ, ಮನ ಮುಟ್ಟಿ ಅಪ್ಪಳಯ್ಯಾ. ಹಾಗೆ ಅರಿವು ಆಚಾರವನರಿಯದ ಅರೆಮರುಳುಗಳು ಪರಮಾನಂದದ ಶಿವ ಸುಖವನೆತ್ತ ಬಲ್ಲರಯ್ಯಾ? ಕೋಟಿ ಸುಕೃತದ ಫಲವು ಒಂದು ವೇಳೆ ಕೈಸಾರಿದಂತಿರ್ದ ವೀರಶೈವಾಚಾರ ಸಂಪನ್ನರಾದ ಘನಮಹಿಮರೇ ಬಲ್ಲ ರಯ್ಯಾ ಕೂಡಲಚೆನ್ನಸಂಗಮದೇವಾ.

೧೨೦

ಸತ್ಕೃತಿಯೆಂಬುದೇ ಜ್ಞಾನ, ಜ್ಞಾನದೊಡಲೇ ಕ್ರೀ. ಸುಗಂಧವನಿರಿಸಿಕೊಂಡಿಪ್ಪ ಕರಂಡದಂತೆ, ಆ ಒಡಲಿಲ್ಲದೆ ಗಂಧವಿರಬಲ್ಲುದೇ? ಐಘಟದೂರ ರಾಮೇಶ್ವರಲಿಂಗವು ಕುರುಹಾಗಿ ಅರಿವ ಇರಿಸಿಕೊಂಡಿದ್ದಿತು.

೧೨೧

ಅರಿವೆಂಬುದೇ ಕ್ರೀ, ಕ್ರೀಯೆಂಬುದೇ ನಿರವಯ. ಅದೆಂತೆಂದೊಡೆ: ಧರೆಯ ವಾರಿಯ ವಾಯು ಆಕಾಶಕ್ಕೆ ತಂದು ಸುರಿವಂತೆ, ಬಾವಿಯ ನೀರ ಭಾಜನ ತಂದುಕೊಡುವಂತೆ, ಇಷ್ಟಲಿಂಗದ ನಿಷ್ಠೆ ದೃಷ್ಟವಾದಲ್ಲಿ, ವಸ್ತುವ ಕಟ್ಟಿ ತಂದುಕೊಡುವುದು. ಕೊಡುವುದಕ್ಕೆ ಸಂದೇಹವಿಲ್ಲ. ಅದಕ್ಕೆ ದೃಷ್ಟವ ಕೇಳುವುದಕ್ಕೆ ಅನ್ಯ ಭಿನ್ನಕ್ಕೆ ತೆರಪಿಲ್ಲ. ಐಘಟದೂರ ರಾಮೇಶ್ವರಲಿಂಗಕ್ಕೆ ಸಾವಯ ನಿರವಯವೆಂಬುದಿಲ್ಲ.

೧೨೨

ಅಂತರಂಗದಲ್ಲಿ ಅರಿವಾದಡೇನಯ್ಯಾ, ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕರ? ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯವುಂಟೆ? ಕನ್ನಡಿಯಿಲ್ಲದಿರ್ದಡೆ ತನ್ನ ಮುಖವ ಕಾಣಬಹುದೆ? ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲಸಂಗಮದೇವ.

೧೨೩

ಕ್ರೀ ಭಾವ ಶುದ್ಧತೆ ಆದವನಿರವು ಬೆಂಕಿ ಕಾಷ್ಠವ ಕೂಡಿ ದ್ವಂದ್ವವಾಗಿ ಉರಿದು ಹಿಂಗಿ ನಂದಿದಂತಿರಬೇಕು. ಹುಳಿ ಸಿಹಿಯ ಕೂಡಿ, ಕೂಟಸ್ಥದಿಂದ ಉಳುಮೆಯ ಘೃತದಂತಿರಬೇಕು. ವಿಷ ಶರೀರದಲ್ಲಿ ವೇಧಿಸಿ ದೆಸೆಯನಳಿದಂತಿರಬೇಕು. ಅಗ್ನಿಯಲ್ಲಿ ಅರತ ಉದಕದಂತೆ ಬಯಲೊಳಗಡಗಿದ ಶಬ್ದದಂತೆ ಇರು, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

ಮಾಟ ಕೂಟ

೧೨೪

ಹಸಿವಾದೊಡುಂಬುದನು, ಸತಿಯ ಸಂಭೋಗವನು ಆನಾಗಿ ನೀ ಮಾಡೆಂಬವರುಂಟೆ? ಮಾಡುವುದು ಮಾಡುವುದು ಮನಮುಟ್ಟಿ. ಮಾಡುವುದು, ಮಾಡುವುದು ತನುಮುಟ್ಟಿ. ತನುಮುಟ್ಟಿ, ಮನಮುಟ್ಟದಿರ್ದಡೆ ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ!

೧೨೫

ಮಾಡುವರಯ್ಯಾ ಮರುಳುಗೊಂಡಂತೆ. ಮಾಡುವರಯ್ಯಾ ಭವಿ ಸ್ಥಾವರ ದೀಕ್ಷೆ ಶೈವಕರ್ಮದೊಡಗೂಡಿ. ಮರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು, ಸುಯಿಧಾನದ ಕೇಡು. ಕೂಡಲಚೆನ್ನಸಂಗಯ್ಯಾ, ನಿಮ್ಮ ಶರಣರನುವರಿದು ಮಾಡುವ ಮಾಟ ಲಿಂಗಜಂಗಮದ ಕೂಟ, ಭವ ಭಂಗದೋಟ. ಕೂಟವರಿಯದ ಮಾಟವದೇತಕಯ್ಯಾ?

೧೨೬

ಮಾಟವಿಲ್ಲದ ಕೂಟವದೇಕೋ? ಕೂಟವಿಲ್ಲದ ಮಾಟವದೇಕೋ? ಮಾಟಕೂಟವೆರಡರನುವರಿಯಬೇಕು. ಸಟೆಯಿಲ್ಲದೆ ದಿಟವ ರೂಢಿಸಿ ಸಯವಾಗಬೇಕು. ಮಾಟಕೂಟವೆರಡರನುಮತದಿಂದವೆ ಭಕ್ತಿರತಿಯಯ್ಯಾ ಕೂಡಲಚೆನ್ನಸಂಗಮದೇವಾ.

೧೨೭

ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗಹೀನರ ಬೆರಸಲಾಗದು. ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗ ಮುಂತಾಗಿ ಎಲ್ಲ ಕ್ರೀಗಳನು ಗಮಿಸಬೇಕಲ್ಲದೆ, ಅಂಗ ಮುಂತಾಗಿ ಗಮಿಸಲಾಗದು. ಲಿಂಗಸಂಬಂಧಿಯಾಗಿ

ಅಂಗ ಮುಂತಾಗಿ ಇಪ್ಪವರು ಲಿಂಗಕ್ಕೆ ದೂರವಯ್ಯಾ ನಾಗಪ್ರಿಯ ಚೆನ್ನರಾಮೇಶ್ವರಾ !

೧೨೮

ಮಜ್ಜನಕ್ಕೆರೆದು ಫಲವ ಬೇಡುವರಯ್ಯ ; ತಮಗೆಲ್ಲಿಯದೋ ಆ ಫಲವು ಸಿತಾಳಕ್ಕಲ್ಲದೆ ? ಪತ್ರೆ ಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರಯ್ಯ ; ತಮಗೆಲ್ಲಿಯದೋ ಆ ಫಲವು ಗಿಡುಗಳಿಗಲ್ಲದೆ ? ಸಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರಯ್ಯ ; ತಮಗೆಲ್ಲಿಯದೋ ಆ ಫಲವು ಹದಿನೆಂಟು ಧಾನ್ಯಕ್ಕಲ್ಲದೆ ? ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು, ಫಲವ ಬೇಡುವ ಸರ್ವಾನ್ಯಾಯಿಗಳನೇನೆಂಬೆ ಗೊಹೇಶ್ವರಾ !

೧೨೯

ಫಲ ಪದವ ಬಯಸಿ ಮಾಡಲಾಗದು ಗುರುಭಕ್ತಿಯ. ಫಲ ಪದವ ಬಯಸಿ ಮಾಡಲಾಗದು ಲಿಂಗಪೂಜೆಯ. ಫಲ ಪದವ ಬಯಸಿ ಮಾಡಲಾಗದು ಜಂಗಮಾರ್ಚನೆಯ. ಅದೇನು ಕಾರಣವೆಂದೊಡೆ : ಬಯಕೆಯ ಭಕ್ತಿಯ, ಪೂರ್ವ ಪುರಾತನರು ಮಚ್ಚರು. ನಮ್ಮ ಅಖಂಡೇಶ್ವರದೇವನು ಹಂಗಿನ ಭಕ್ತರನೊಲ್ಲ ನೋಡಾ !

೧೩೦

ಧರ್ಮ ಅರ್ಥ ಕಾಮ ಮೋಕ್ಷವೆಂಬ ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ. ಸಾಲೋಕ್ಯ ಸಾಮೀಪ್ಯ ಸಾಯುಜ್ಯವೆಂಬ ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ. ಅಣಿಮಾದ್ಯಷ್ಟಸಿದ್ಧಿಗಳ ನಾನೊಲ್ಲೆನಯ್ಯಾ. ಎಲೆ ಶಿವನೆ ನಾನೊಂದ ಬೇಡುವೆನಯ್ಯ. ನಿಮ್ಮ ಶರಣರು ಉಂಡುಳಿದುದ, ಕೊಂಡು ಮಿಕ್ಕಿದ ಪರಮಪ್ರಸಾದಕ್ಕೆ ಯೋಗ್ಯನ ಮಾಡಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೧೩೧

ಗಿರಿಯ ಕರದಿಂದೆತ್ತಿದಡೇನು? ಹರಿವ ವಾರುಧಿಯನಾಪೋಷಣವ ಮಾಡಿದಡೇನು? ಗಗನಗಮನದಲ್ಲಿ ಸುಳಿದಡೇನು? ಇವರೆಲ್ಲರು ಪವನದ ಬಳಿಯಲಭ್ಯಾಸಿಗಳು. ಅರ್ಚಿಸಿ ಪೂಜಿಸುವ ಮರ್ತ್ಯದ ಲೌಕಿಕರ ಮೆಚ್ಚ ಸಕಳೇಶ್ವರದೇವ ವೇಷಡಂಬಕರ.

೧೩೨

ರಸವಾದಂಗಳ ಕಲಿತಲ್ಲಿ, ಲೋಹಸಿದ್ಧಿಯಲ್ಲದೆ ರಸಸಿದ್ಧಿಯಾದುದಿಲ್ಲ. ನಾನಾಕಲ್ಪಯೋಗ ಅದೃಶ್ಯಕರಣಂಗಳ ಕಲಿತಲ್ಲಿ, ಕಾರ್ಯಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೆ? ನಾನಾ ವಾಗ್‌ವಾದಗಳಿಂದ ಹೋರಿ, ಮಾತಿನ ಮಾಲೆಯಾಯಿತ್ತಲ್ಲದೆ ಆತ್ಮ ನಿಹಿತವಾದುದಿಲ್ಲ. ನೀನಾನೆಂದಲ್ಲಿ ನೀನು ನಾನಾದೆಯಲ್ಲದೆ ನಾನು ನೀನಾದುದಿಲ್ಲ. ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗವಾದೆಯಲ್ಲದೆ, ಲೀಯವಾಗಿ ಆ ಲಿಂಗವೆ ಆದುದಿಲ್ಲ.

೧೩೩

ಘುಟಿಕಾಸಿದ್ಧರ ಘುಟಿಕೆಯುರುಳಿತ್ತು, ಯಂತ್ರಗಳ ಯಂತ್ರ ಎದ್ದುಹೋಯಿತ್ತು. ಮಂತ್ರಗಳ ಮಂತ್ರ ಮರೆತುಹೋಯಿತ್ತು. ಔಷಧಿಗಳ ಔಷಧವನಾರಡಿಗೊಂಡಿತ್ತು. ಸರ್ವವಿದ್ಯಾಮುಖದ ಜ್ಯೋತಿ ನಂದಿತ್ತು. ಈ ವಿಷದ ಲಹರಿಯಲ್ಲಿ ಮೂರುಲೋಕದವರೆಲ್ಲರು ಮೂರ್ಛಿತರಾದರು ಕಾಣಾ ಗುಹೇಶ್ವರಾ.

೧೩೪

ಮೃಗಾದಿಗಳಂತೆ ದಾನಾದಿಗಳ ಕೊಟ್ಟರೇನು ಕ್ಷತ್ರಿಯರಂತೆ? ಅದೆಂತೆಂದಡೆ ಶಿವನ ವಾಕ್ಯ: "ಪಯೋಹಾರೇ ತು ನಗ್ನೋ ಮುಗ್ಧಃ ಪಿಶಾಚವತ್ । ನಿತ್ಯ ಸ್ನಾನಶ್ಚ ಶೀತಶ್ಚ ವಾಲ್ಮೀಕಿಸರ್ಪಜಾತಯಃ ॥ ತೃಣಂಭಕ್ಷ್ಯಂತಿ ಪಶವಃ ವನವಾಸೀ ಮೃಗಸ್ತಥಾ । ಯೇನ ಚೈತಾನಿ

ಕಾರ್ಯಾಣಿ ನ ಕರೋತಿ ಹಿ ಪಾರ್ವತಿ" ಎಂದುದಾಗಿ, ಆವ ಸಿದ್ಧಿಗಳಿಂದಲೂ ಫಲವಿಲ್ಲ ; ಏನನೋದಿ ಏನ ಕೇಳಿ ಏನ ಹೇಳಿಯೂ ಫಲವಿಲ್ಲ. ಇವು ಭಕ್ತಿಯೊಳಗಲ್ಲ. ಮುಕ್ತಿಗೆ ಸಲ್ಲವು. ಇದನರಿದು ಆವನಾನೊಬ್ಬನು ಲಿಂಗವರಿತು ಲಿಂಗಾರ್ಚನೆಯಂ ಮಾಡಿ, ಗುರುಲಿಂಗಜಂಗಮಕ್ಕೆ ತನುಮನಧನವ ಸವೆಸಿದಡೆ ಅದೇ ಚೆಲ್ವ ಭಕ್ತಿ, ಅದೇ ಚೆಲ್ವ ಮುಕ್ತಿ, ಅದೇ ಸರ್ವಸಿದ್ಧಿ, ಅದೇ ಸರ್ವಕಾರಣವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೩೫

ಅಂಜನಸಿದ್ಧಿಯ ಸಾಧಿಸುವ ಅಣ್ಣಗಳ ಕಣ್ಮನಕ್ಕೆ ಮಂಜುಗವಿಸಿ ಹೊರಗಾದನು ನೋಡಾ ಪರಶಿವನು. ಘುಟಿಕಾಸಿದ್ಧಿಯ ಸಾಧಿಸುವ ಅಣ್ಣಗಳ ಕಣ್ಮನಕ್ಕೆ ಸಟೆಯ ತೋರಿಸಿ ಹೊರಗಾದನು ನೋಡಾ ಪರಶಿವನು. ಯಂತ್ರ ಮಂತ್ರ ತಂತ್ರ ಸಿದ್ಧಿ ವಾದ ವಶ್ಯವ ಸಾಧಿಸುವ ಅಣ್ಣಗಳ ಕಣ್ಮನಕ್ಕೆ ಗಾಢ ಕತ್ತಲೆಗವಿಸಿ ಹೊರಗಾದನು ನೋಡಾ ಪರಶಿವನು. ಭಕ್ತಿ ಸಿದ್ಧಿಯ ಸಾಧಿಸುವ ಅಣ್ಣಗಳ ಮನಕ್ಕೆ ಮುಕ್ತಿಯ ಬೆಳಗನೆ ತೋರಿ ಒಳಗಾಗಿರ್ಪನು ನೋಡಾ ನಮ್ಮ ಅಖಂಡೇಶ್ವರನೆಂಬ ಪರಶಿವನು.

೧೩೬

ಧರ್ಮದೊಳಗೆ ಶಿವಧರ್ಮವೇ ಧರ್ಮವೆಂದರಿದೆನಾಗಿ, ಧರ್ಮ ಸಾಧ್ಯವಾಯಿತ್ತೆನಗೆ. ಗುರುಲಿಂಗಜಂಗಮವ ಪಡೆದೆನಾಗಿ, ಅರ್ಥ ಸಾಧ್ಯವಾಯಿತ್ತೆನಗೆ. ಶರಣಸತಿ ಲಿಂಗಪತಿ ಎಂದರಿದೆನಾಗಿ, ಕಾಮ ಸಾಧ್ಯವಾಯಿತ್ತೆನಗೆ. ಮಹಾಪ್ರಸಾದವನಿಂಬುಗೊಂಡು ಧರಿಸಿದೆನಾಗಿ, ಮೋಕ್ಷ ಸಾಧ್ಯವಾಯಿತ್ತೆನಗೆ. ಇಂತೀ ಧರ್ಮಾರ್ಥಕಾಮಮೋಕ್ಷಂಗಳೆಂಬ ಚತುರ್ವಿಧ ಫಲವೆನಗಾಯಿತ್ತು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೩೭

ಸಾಲೋಕ್ಯವೆಂದೇನು ಅಂಗದ ಮೇಲೆ ಲಿಂಗ ಸಂಬಂಧಿಯಾಗಿರುತ್ತಿರಲು ? ಸಾಮೀಪ್ಯವೆಂದೇನು ಗುರುಲಿಂಗಜಂಗಮದ ದಾಸೋಹದ ಸನ್ನಿಧಿಯೊಳಿರುತ್ತಿರಲು ? ಸಾರೂಪ್ಯವೆಂದೇನು ಅನವರತ ಅರ್ಚನೆ

ಯೊಳಿರುತ್ತಿರಲು? ಸಾಯುಜ್ಯವೆಂದೇನು, ಚತುರ್ದಶ ಭುವನವ ಒಳಕೊಂಡ ಮಹಾಘನವ ಮನವನಂಗವಿಸಿ ನೆನೆಯುತ್ತಿರಲು? ಇಂತೀ ಚತುರ್ವಿಧ ಪದವೆಂದೇನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೧೩೮

ಪರಮಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ. ಪರಮಪದವಿಯ ನಿಮ್ಮೆದೆಯಲ್ಲಿ ಇರಿದುಕೊಳ್ಳಿ. ಎನಗೆ ನಿಮ್ಮ ತೊತ್ತುಸೇವೆಯೆ ಸಾಕು. ಮಹಾಲಿಂಗಕಲ್ಲೇಶ್ವರದೇವಾ, ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ.

೧೩೯

ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ? ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ ಕೈಲಾಸವೆಂಬ ಆಸೆ ಬೇಡ. ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ.

೧೪೦

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ಮತ್ತಾವ ಪದವಿಯನೊಲ್ಲೆನಯ್ಯಾ! ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ.

೧೪೧

ಬಯಕೆ ಎಂಬುದು ದೂರದ ಕೂಟ. ಬಯಸೆನೆಂಬುದು ಕೂಟದ ಸಂದು. ಈ ಉಭಯವು ಕಪಟದ ಕನ್ನಡವಲ್ಲದೆ ಸಹಜವಲ್ಲ. ಕೂಡಿ ಕಂಡ ಪರಿಯೆಂತು ಹೇಳಾ ಇನ್ನು ಲಿಂಗೈಕ್ಯವನು? ಕೂಪರ ಠಾವಿನಲ್ಲಿ ಪರವಶವಾದೆನೆಂಬ ಮಾತ ಮೆಚ್ಚುವನೆ ನಮ್ಮ ಗೊಹೇಶ್ವರಲಿಂಗವು?

೧೪೨

'ಮಾಟಕೂಟ ಫಲಪ್ರಾಪ್ತಿ' ಎಂಬ ಮಾತ ಕೇಳಲಾಗದು. ಶಿವ ಶಿವಾ! ನಿಮ್ಮ ಭಕ್ತರಿಗೆ 'ಮಾಡಿದೆ' ನೆನ್ನದಿರೆಂದು ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ, ಅಲ್ಲಿ ಮಾಡುವರೂ ಮಾಡಿಸಿಕೊಂಬವರೂ ನೀವೇ ಕೂಡಲಸಂಗಮದೇವಾ.

೧೪೩

ಮಾಡುವ ಭಕ್ತ ನೀನೆಯೆಂದರಿದೆ, ಮಾಡಿಸಿಕೊಂಬ ದೇವ ನೀನೆ ಯೆಂದರಿದೆ. ಇದು ಕಾರಣ,—ಅಖಂಡೇಶ್ವರಾ, ನಾ ನಿಮ್ಮ ಫಲಪದವ ಬೇಡ ಲಿಲ್ಲ; ನೀವೊಲಿದು ಎನಗೆ ಕೊಡಲಿಲ್ಲ.

೧೪೪

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ; ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ! ಮಾಡುವ ನೀಡುವ ನಿಜಗುಣವುಳ್ಳರೆ ಕೂಡಿಕೊಂಬ ನಮ್ಮ ಕೂಡಲಸಂಗಮದೇವಾ.

೧೪೫

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು ಶಿವನ ಡಂಗುರ! ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ. ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ, ಬೇಡಿತ್ತನೀವ ಕೂಡಲಸಂಗಮ ದೇವಾ.

೧೪೬

ಮಾಡುವ ಭಕ್ತಂಗೆ ಮನವೆ ಸಾಕ್ಷಿ. ಹೊರಹೊಮ್ಮಿ ಬಯಲ ಹೊ ಲೇನು? ಹಮ್ಮಿಲ್ಲದೆ ಮಾಡಿ ಮನದಲ್ಲಿ ಮರುಗದಿರ್ದಡೆ, ಅಲ್ಲಿ ತಾ ಹೆ ಹಿಂಗದಿರ್ಪ ಅಂಬಿಗರ ಚೌಡಯ್ಯ.

೧೪೭

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು, ಮರ್ಮವನರಿಯದ ಮಾಟ ಸಯಿದಾನದ ಕೇಡು! ಬಂದ ಸಮಯೋಚಿತವನರಿಯದಿದ್ದರೆ ನಿಂದಿರಲೊಲ್ಲ ಕೂಡಲಸಂಗಮದೇವ.

೧೪೮

ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು.

೧೪೯

ಪೂಜೆಯುಳ್ಳನ್ನಕ್ಕ ಪುಣ್ಯದ ಗೊತ್ತು ಕಾಣಬಂದಿತ್ತು. ಮಾಟವುಳ್ಳನ್ನಕ್ಕ ಮಹಾಪ್ರಮಥರ ಭಾಷೆ ಭಾಗ್ಯ ದೊರೆಕೊಂಡಿತ್ತು. ಮಾಟವಿಲ್ಲದವನ ಭಕ್ತಿ ಹಾಳೂರ ವಂಕಕ್ಕೆ ಕೋಲ ಹಿಡಿದಂತಾಯಿತ್ತು. ಮಾಡುವಲ್ಲಿ ಉಭಯವಳಿದು ಮಾಡಬಲ್ಲಡೆ ಮಾರಯ್ಯಪ್ರಿಯ ಅಮರೇಶ್ವರಲಿಂಗವ ಕೂಡುವ ಕೂಟ.

೧೫೦

ಮಾಡುವ ಮಾಡಿಸಿಕೊಂಬುವ ಈ ಎರಡರ ನಡುವೆ ಸಂದು ಭೇದವುಂಟೆ ದೇವಾ,—ಕಾಯ ಪ್ರಾಣ ಸಂಗದಂತೆ ಇದ್ದುದಲ್ಲದೆ? ಬಲ್ಲಂತೆ ಮಾಡು, ಬಲ್ಲಂತೆ ನೀಡು, ನಾನರಿಯೆನೆಂಬುದು ನಿನಗುಚಿತವೆ? ಮಾಡುವಲ್ಲಿ ನೀಡುವಲ್ಲಿ ಹೇಳಿಸಿ ಮಾಡಿಸಿಕೊಂಬುದಲ್ಲದೆ, ಕೈ ಕಲಸಿದರೆ ಬಾಯಿಗೆ ಹಂಗುಂಟೆ ಕೂಡಲಸಂಗಮದೇವಾ?

೧೫೧

ಮಾಡುವಾತ ನಾನಲ್ಲಯ್ಯಾ; ನೀಡುವಾತ ನಾನಲ್ಲಯ್ಯಾ. ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ. ಎಲೆ ದೇವಾ, ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ, ನಿನಗೆ ನೀ ಮಾಡಿಕೊ ಕೂಡಲಸಂಗಮದೇವಾ.

೭

ಜಂಗಮ ಲಿಂಗ

೧. ಜಂಗಮದ ಸ್ವ-ರೂಪ

೧

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು, ಶಿವಚಿತ್ತವೆಂಬ ಕೂರಲಗ ಕೊಂಡು, ಶರಣಾರ್ಥಿಯೆಂಬ ಶ್ರವವ ಕಲಿತರೆ, ಆಳುತನಕ್ಕೆ ದೇಸಿಯಪ್ಪೆ ನೋಡಾ. ಮಾರಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು. ಕೂಡಲಸಂಗಮದೇವನನೊಲಿಸುವೊಡಿದು ಚಿಹ್ನ.

೨

ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ! ಉಂಬ ಜಂಗಮ ಬಂದರೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ! ನಮ್ಮ ಕೂಡಲಸಂಗನ ಶರಣರ ಕಂಡುದಾಸೀನವ ಮಾಡಿದರೆ, ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

೩

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ! ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ ಮುಂದೆ ಸಕಲ ಪದಾರ್ಥವನೀವನು! ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ ನರಕ ತಪ್ಪದು ಕಾಣಾ ಕೂಡಲಸಂಗಮದೇವಾ!

೪

ಮಾಡುವ ನೀಡುವ ಭಕ್ತನ ಕಂಡರೆ ನಿಧಿನಿಧಾನವ ಕಂಡಂತಾಯಿತ್ತು. ಪಾದೋದಕ ಪ್ರಸಾದಜೀವಿಯ ಕಂಡರೆ ಹೋದ ಪ್ರಾಣ ಬಂದಂತಾಯಿತ್ತು. ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.

೫

ಕೇಶ ಕಾಷಾಯಾಂಬರವನಿಕ್ಕಿದೊಡೇನು? ವಿಭೂತಿ ರುದ್ರಾಕ್ಷಿ ಧರಿಸಿದೊಡೇನೊ? ಸಾಕಾರದಲ್ಲಿ ಸನ್ಮತನಲ್ಲ, ನಿರಾಕಾರದಲ್ಲಿ ನಿರುತನಲ್ಲ, ಪಾರಮಾರ್ಥದಲ್ಲಿ ಪರಿಣಾಮಿಯಲ್ಲ. ಇದು ಕಾರಣವಾಗಿ ಕೂಡಲ ಚೆನ್ನಸಂಗಮದೇವಾ, ತುರುಬಾಗಲಿ ಜಡೆಯಾಗಲಿ ಬೋಳಾಗಲಿ, ಅರಿವು ಆಚಾರವುಳ್ಳೊಡೆ ಜಂಗಮ.

೬

ಅನಾದಿ ಅಖಂಡ ಪರಿಪೂರ್ಣ ನಿಜಾಚರಣೆಯನಗಲದೆ, ಮಹಾ ವೈರಾಗ್ಯದಿಂದ ಪರಶಿವಲಿಂಗಕ್ಕೂ ಎನಗು ಚಿನ್ನ ಬಣ್ಣದ ಹಾಗೆ, ಪುಷ್ಪ ಪರಿಮಳದ ಹಾಗೆ, ಶಿಖಿ ಕರ್ಪೂರದ ಹಾಗೆ, ಉಪ್ಪು ಉದಕದ ಹಾಗೆ, ಅಗ್ನಿ ವಾಯುವಿನ ಹಾಗೆ, ಕ್ಷೀರ ಕ್ಷೀರವ ಬೆರೆದ ಹಾಗೆ, ವಾರಿ ಶರಧಿಯ ಕೂಡಿದ ಹಾಗೆ, ತಿಳಿದುಪ್ಪ ಹೆರೆದುಪ್ಪದ ಹಾಗೆ, ಹೆಪ್ಪು ನವನೀತದ ಹಾಗೆ, ಸೂಜಿಗಲ್ಲಾದಂತೆ ಮರ್ತ್ಯದಲ್ಲಿರ್ದು, ಕನ್ನಡಿಯ ಪ್ರತಿಬಿಂಬ, ಸೂರ್ಯನ ಕಿರಣದಂತೆ ಕಾಲ ಕಾಮರ ಪಾಶಕ್ಕೆ ಹೊರಗಾಗಿ, ಬಾವನ್ನದಿರವನೊಳಕೊಂಡು, ಸರ್ವಾಚಾರಸಂಪತ್ತಿನಲ್ಲಿ ಎಡೆದೆರಹಿಲ್ಲದೆ ಮಹಾಮೋಹಿಯಾಗಿ ಲೋಕಪಾವನಕ್ಕೋಸ್ಕರ ಸಂಚರಿಸುವಾತನೇ ನಿರಂಜನ ಭಕ್ತಜಂಗಮ ಕಾಣಾ ಕಲಿದೇವರದೇವಾ.

೭

ಬಿಲ್ಲು ಕೋಲ ಹಿಡಿದು ಮನ ಬಂದ ಪರಿಯಲ್ಲಿ ಎಚ್ಚಾಡುವಾತ ಅರ್ಥಿಕಾರನಲ್ಲದೆ ಬಿಲ್ಲುಕಾರನಲ್ಲವಯ್ಯಾ. ಹೊನ್ನು ಹೆಣ್ಣು ಮಣ್ಣು ಬಿಟ್ಟು, ಚೆನ್ನಾಗಿ ಮಂಡೆಯ ಬೋಳಿಸಿಕೊಂಡು, ಹಾಡಿದ ವಚನಂಗಳನೆ ಹಾಡಿಕೊಂಡು, ಮುಂದೆ ವಸ್ತುವ ಸಾಧಿಸಿಕೊಳ್ಳದೆ, ಹಸಿದರೆ ತಿರಿದುಂಡು, ಮಾತಿನ ಮಾಲೆಯನು ಕಲಿತಾತ ವಿರಕ್ತನೆಂಬ ನಾಮಕ್ಕರುಹನಲ್ಲದೆ, ಸಂಧಾನಕ್ಕರುಹನಲ್ಲ. ಅದೇನು ಕಾರಣವೆಂದರೆ, ಮುಕ್ತಿಯೆಂಬ ಬಿಲ್ಲ ಹಿಡಿದು, ಸಮ್ಯಗ್‌ಜ್ಞಾನವೆಂಬ ಹೆದೆಯನೇರಿಸಿ, ಲಿಂಗನೈಷ್ಠೆಯೆಂಬ

ಬಾಣವ ತೊಟ್ಟು, ಆಕಾಶದ ಮೇಲಣ ಮುಪ್ಪುರದ ಮಧ್ಯದ ಮಾಣಿಕದ ಕಂಭ ಮುಳುಗಲೆಸೆದು, ಮಾಯಾಬಲೆಯ ಗೆಲಿದ ಶರಣನೀಗ ಲಿಂಗ ಸಂಧಾನಿಯಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೮

ಹೊನ್ನು ಹೆಣ್ಣು ಮಣ್ಣು ಕುರಿತು ಚರಿಸುವನ್ನಬರ ಉಭಯದ ಕೇಡು. ವರ್ಮವನರಿಯದೆ ಮಾಡುವನ್ನಬರ ದ್ರವ್ಯದ ಕೇಡು. ಇಂತೀ ಉಭಯದ ಭೇದವನರಿತು ಚರಿಸಿ ಮಾಡಿ ಅರಿಯಬೇಕು,—ಚಿಕ್ಕಯ್ಯ ಪ್ರಿಯ ಸಿದ್ಧಲಿಂಗವನರಿಯಬಲ್ಲಡೆ.

೯

ಈಶ್ವರರೂಪವ ತಾಳಿ ಜಗಜ್ಜೀವಜಾಲರುಗಳ ಬಾಗಿಲಲ್ಲಿ ನಿಲ್ಲು ವನ್ನಬರ ಹೋಯಿತ್ತು ವೇಷ. ಈ ಆಶೆಯ ಬಿಟ್ಟು ಈಶನ ರೂಪ ತಾಳಿದಾತ ವಸ್ತು. ಆತ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ.

೧೦

ಬೀಜ ಗುರುವಾಗಿ, ಅಂಕುರ ಲಿಂಗವಾಗಿ, ಅದರ ಫಲರಸಕಳೆ ಜಂಗಮವಾಗಿ, ಮೂರನುಳಿಯೆ ನಿಂದುದು ನಿಜತತ್ವವಾಗಿ, ವಿರಕ್ತಭಾವದಲ್ಲಿ ನಿಂದುದು ಜ್ಞಾನ-ಜಂಗಮ. ಆ ಭಾವ ಐಘಟದೂರ ರಾಮೇಶ್ವರಲಿಂಗವು ತಾನೆ.

೧೧

ಭಕ್ತನಾದರು ಆಗಲಿ, ಗುರುವಾದರು ಆಗಲಿ, ಲಿಂಗವಾದರು ಆಗಲಿ, ಜಂಗಮವಾದರು ಆಗಲಿ, ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದ ಮೇಲೆ ಮಾಯೆಯ ಗೆದ್ದೆನೆಂದರೆ ಸಾಧ್ಯವಲ್ಲ ಕೇಳಿರಣ್ಣಾ! ಗೆಲ್ಲಬಹುದು ಮತ್ತೊಂದು ಭೇದದಲ್ಲಿ. ಅದೆಂತೆಂದರೆ: ಭಕ್ತನಾದರೆ ತನುವ ಗುರುವಿಂಗಿತ್ತು, ಮನವ ಲಿಂಗಕ್ಕಿತ್ತು, ಧನವ ಜಂಗಮಕ್ಕಿತ್ತು ಬೆರೆದರೆ, ಮಾಯಾಪಾಶ

ಹರಿಯಿತ್ತು. ಇದರ ಗೊತ್ತು ಹಿಡಿವೆನೆಂದರೆ ಆತನ ಭಕ್ತನೆಂಬೆ. ಗುರುವಾದರೆ ಸಕಲ ಆಗಮಂಗಳನರಿದು, ತತ್ವಮಸಿ ಎಂದು ನಿತ್ಯವ ನೆಮ್ಮಿ, ತನ್ನ ಒತ್ತುವಿಡಿದ ಶಿಷ್ಯಂಗೆ ಪರತತ್ವವ ತೋರಿ, ಪ್ರಾಣಲಿಂಗವ ಕರದಲ್ಲಿ ಕೊಟ್ಟು, ಆ ಲಿಂಗ ಅಂಗವೆಂಬ ಉಭಯದೊಳಗೆ ತಾನಡಗಿ, ತನ್ನೊಳಗೆ ಶಿಷ್ಯನಡಗಿ, ನಾನು ನೀನು ಎಂಬ ಉಭಯ ಎರಡಳಿದರೆ, ಆತನ ಗುರುವೆಂಬೆ. ಜಂಗಮವಾದರೆ ಬಾಯಿ ಲೆಕ್ಕಕ್ಕೆ ಬಾರದೆ, ಬಂದು ಆಶ್ರಿತವೆನಿಸಿಕೊಳ್ಳದೆ, ಆಸೆಯಳಿದು ಲಿಂಗಜಂಗಮವಾಗಿ ನಿರ್ಗಮನಿಯಾಗಿ 'ಭರ್ಗೋ ದೇವ' ಎಂಬ, 'ಏಕೋ ದೇವನದ್ವಿತೀಯವೆ'ಂಬ ಶ್ರುತಿಗೆ ತಂದು, ತಾ ಪರಮಾನಂದದಲ್ಲಿ ನಿಂದು ಪರಿಪೂರ್ಣನೆನಿಸಿಕೊಂಡು, ಅಣುವಿಂಗಣು ಮಹತ್ತಿಗೆ ಮಹತ್ತು ಘನಕ್ಕೆ ಘನವೆಂಬ ವಾಕ್ಯಕ್ಕೆ ಸಂದು, ತಾ ನಿಂದು ಜಗವನೆಲ್ಲವ ಆಡಿಸುವ ಅಂತರಾತ್ಮಕನಾಗಿ ಅಡಗಿದರೆ ಜಂಗಮವೆಂಬೆ. ಅಂತಾದರೆ ಈ ತ್ರಿವಿಧವು ಏಕವಾದುದನರಿದು, ಈ ಲೋಕದ ಕಾಕುಬಳಕೆಗೆ ಸಿಲ್ಕದೆ ಇಲ್ಲಿ ಹುಟ್ಟಿದವರೆಲ್ಲ ಇವರೊಳಗೆ ಆದರು. ನಾನು ತ್ರಿವಿಧದ ನೆಲೆಯ ಹಿಡಿದುಕೊಂಡು ಇವೆಲ್ಲಕ್ಕೂ ಹೊರಗಾಗಿ ಹೋದೆನಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೧೨

ತನು ಗುರುವಾದುದೆ ಶೀಲ. ಮನ ಲಿಂಗವಾದುದೆ ಶೀಲ. ಧನ ಜಂಗಮವಾದುದೆ ಶೀಲ. ಅಖಂಡೇಶ್ವರನೆಂಬ ಪರಶಿವನು ತಾನೆ ಆಗಿ ಸುಳಿವುದೆ ಮಹಾಶೀಲ ನೋಡಿರಣ್ಣಾ.

೧೩

ಉಪಾಧಿಯನಳಿದು, ನಿರುಪಾಧಿಯ ತಿಳಿದು, ಸಹಜ ಮಾಟದಲ್ಲಿ ಸುಳಿದು, ಜಾತಿಸೂತಕ ಪ್ರೇತಸೂತಕ ಜನನಸೂತಕ ಉಚ್ಛಿಷ್ಟಸೂತಕ ರಜಸ್ಸೂತಕವೆಂಬ ಪಂಚಸೂತಕಂಗಳ ಕಳೆದು, ಸದಾಚಾರ ಲಿಂಗಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರಂಗಳಳವಟ್ಟು, ಪಂಚಭೂತಂಗಳ ಪರಿಹರಿಸಿ, ಪಂಚಪ್ರಾಣವಾಯುಗಳ ಸಂಚಲಗುಣ

ವಳಿದು, ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಂಗಳ ಪ್ರತಿಷ್ಠಿಸಿ, ಪಂಚ ಬ್ರಹ್ಮದ ಮೂಲವನರಿದು, ಮೂಲೋಕದೊಡೆಯನಲ್ಲಿ ಮನವಡಗಿರ್ಪ ಮಹಾಶರಣರ ಶ್ರೀಪಾದಕ್ಕೆ ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ.

೧೪

ಜಂಗಮವಾಗಿ ಹುಟ್ಟದ ಮತ್ತೆ ಹಿಂದಣ ಹಜ್ಜೆಯ ಮೆಟ್ಟಲುಂಟೆ ? ಜಂಗಮವೆಂಬ ಮಾತಿಂಗೊಳಗಾದಲ್ಲಿ ಮೂರು ಮಲತ್ರಯವ ಹಿಂಗಿರ ಬೇಕು; ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು. ಅದು ನಿಜದ ಸಂಗ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ, ಈ ಗುಣ ಆರಿಗೂ ಇಲ್ಲ ಇಲ್ಲ ಎಂದೆ.

೧೫

ಜಂಗಮಕ್ಕೆ ಮಾತಾಪಿತರಿಲ್ಲ. ಜಂಗಮಕ್ಕೆ ಜಾತಿಬಂಧುಗಳಿಲ್ಲ. ಜಂಗಮಕ್ಕೆ ನಾಮರೂಪುಗಳಿಲ್ಲ. ಜಂಗಮಕ್ಕೆ ಸೀಮೆಸಂಗಗಳಿಲ್ಲ. ಜಂಗಮಕ್ಕೆ ಕುಲಗೋತ್ರಗಳಿಲ್ಲ. ಜಂಗಮಕ್ಕೆ ಮಲಮಾಯೆಗಳಿಲ್ಲ ನೋಡಾ ಅಖಂಡೇಶ್ವರಾ.

೧೬

ಮನದಲ್ಲಿ ಹವಣನರಿದು, ಮನನಿರ್ದೇಶವಾಗಿ ದೇಶಾಂತರಿಯಾಗದೆ, ಮನವಿಕಳವಾಗಿ ಹೊರವೊಂಟುದು ವೇಷಾಂತರವಯ್ಯ. ಕಂಡವರ ಕಾಡಿ ನಿಂದವರ ಬೇಡಿ, ಅಜಾತಿ ಎನ್ನದೆ ಆಚಾರವೆನ್ನದೆ ಅನಾಚಾರವೆನ್ನದೆ ತಿರಿದುಂಡು, ವೇಷಡಂಭಕತ್ವದಿಂದ ಲಾಂಛನವ ಹೊತ್ತು ಕಂಡಲ್ಲಿ ಲಜ್ಜೆ ಗೆಡುವುದು ತನ್ನ ಮುನ್ನಿನ ದುಷ್ಕೃತ, ಪೂರ್ವ ಕರ್ಮದ ಫಲವಯ್ಯಾ. ಮತ್ತೆಂತೆಂದಡೆ, ಮನ ನಿರ್ವಾಣವಾಗಿ, ವಿವೇಕ ಜ್ಞಾನ ಪರಮಾರ್ಥದಲ್ಲಿ ಪರಿಣಾಮಿಯಾಗಿ, ಸುಳಿದು ಸೂತಕಿಯಲ್ಲದೆ ನಿಂದು ಬದ್ಧನಲ್ಲದೆ, ಸುಜ್ಞಾನ ದಲ್ಲಿ ಸುಳಿದು ನಿರ್ಮಲದಲ್ಲಿ ನಿಂದವರು ಅವರು ಪರದೇಶಾಂತರಿಗಳು, ಅವರು ನಿಜನಿವಾಸಿಗಳು, ಅವರುಗಳಿಗೆ ನಮೋ ನಮೋ ಎಂಬೆ ಉರಿಲಿಂಗ ಪೆದ್ದಿಪ್ರಿಯವಿಶ್ವೇಶ್ವರಾ.

೧೭

ಜಂಗಮ ಜಂಗಮವೆಂದು ನುಡಿದು, ಜಗದ ಹಂಗಿಗರಾಗಿ ಇರಲಾಗದು. ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಜಂಗುಳಿಗಳ ಬಾಗಿಲ ಕಾಯಲಾಗದು. ಜಂಗಮದ ಸುಳುಹು ಎಂತಿರಬೇಕೆಂದರೆ, ತನ್ನ ನಂಬಿದ ಸಜ್ಜನ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ, ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ, ತಾ ನಿರ್ಗಮನಿಯಾಗಿ ಸುಳಿಯಬಲ್ಲರೆ ಜಂಗಮ ಲಿಂಗವದು. ಇಂತಲ್ಲದೆ ಕಂಡವರ ಕಾಡಿ ಬೇಡಿ, ಕೊಟ್ಟರೆ ಕೊಂಡಾಡಿ ಕೊಡದಿದ್ದಡೆ ಜರಿದು, ತಾನು ನಿರೋಧಕ್ಕೆ ಗುರಿಯಾಗಿ ನೋವುತ್ತ ಬೇವುತ್ತ ಧಾವತಿಗೊಂಬ ಗಾವಿಲರ ಎಂತು ಜಂಗಮವೆಂಬೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

೧೮

ಪಂಚಭೂತವಂಗವಾಗಿಪ್ಪಾತ್ಮಂಗೆ ಪಂಚೇಂದ್ರಿಯಂಗಳೇ ಮುಖಗಳು, ಕರಣಂಗಳೇ ಕೈಗಳು, ಪಂಚವಿಷಯವು ಪೂಜೆ, ಪಂಚಪದಾರ್ಥವೇ ಭೋಗ. ಇದನೆಲ್ಲವ ತನ್ನ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ ಆತ ಸರ್ವ ನಿರ್ವಾಣಿ, ಸಕಲ ನಿಃಕಲಾತ್ಮಕನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೯

ಕಣ್ಣೆ ಕಟ್ಟಿಗೆಯಾಗಿ, ಕೈಯೆ ಖರ್ಪರವಾಗಿ, ಕಿವಿಯೆ ಸಕಲ ಪುರಾತರ ಕಾರುಣ್ಯವೆನುತ ಮನದ ಭಿಕ್ಷವನುಂಡು, ತನು ಪರಿಣಾಮವನೆಯ್ದಿಹ ಘನಮಹಿಮರ ತೋರಾ ಗೊಹೇಶ್ವರಾ.

೨೦

ಹಸಿವಿಲ್ಲದೆ ಉಣಬಲ್ಲಡೆ, ಉಪಾಧಿಯಿಲ್ಲದೆ ಬೇಡಬಲ್ಲಡೆ ಅದು ವರ್ಮ, ಅದು ಸಂಬಂಧ; ಗಮನವಿಲ್ಲದೆ ಸುಳಿಯಬಲ್ಲಡೆ, ನಿರ್ಗಮನಿಯಾಗಿ ನಿಲಬಲ್ಲಡೆ ಅದು ವರ್ಮ, ಅದು ಸಂಬಂಧ. ಅವರ ನಡೆ ಪಾವನ, ಅವರ ನುಡಿ ತತ್ವ; ಅವರ ಜಗದಾರಾಧ್ಯರೆಂಬೆ ಗೊಹೇಶ್ವರಾ.

೨೧

ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿಲ್ಲದ ರುಚಿ. ಭಾವವೆ ಖರ್ಪರವಾಗಿ, ಪರಮದೇಹಿ ಎಂದು ಬೇಡುವ ಪರಮನ ತೋರಯ್ಯ ಗೊಹೇಶ್ವರಾ.

೨೨

ಆದಿಯಾಧಾರವಿಲ್ಲದ ಮುನ್ನ, ನಾದಬಿಂದುಕಳೆಗಳಿಲ್ಲದ ಮುನ್ನ, ಭೇದಾಭೇದಂಗಳಿಂದೆ ತೋರುವ ಬ್ರಹ್ಮಾಂಡ ಕೋಟಾನುಕೋಟಿಗಳಿಲ್ಲದ ಮುನ್ನ ಸರ್ವಶೂನ್ಯ ನಿರಾಕಾರವಾದ ಪರವಸ್ತುವು ಸಾಕಾರವಿಡಿದು, ಸರ್ವ ಲೋಕಂಗಳ ಪಾವನವ ಮಾಡುವ ಪರಮಜಂಗಮದಲ್ಲಿ ಹದಿನಾಲ್ಕು ಲೋಕಂಗಳಡಗಿರ್ಪವು ನೋಡಾ. ಅದೆಂತೆಂದೊಡೆ: ಪಾದತಳದಲ್ಲಿ ಅತಳ ಲೋಕ, ಪಾದೋರ್ಧ್ವದಲ್ಲಿ ವಿತಳಲೋಕ, ಜಂಘೆಯಲ್ಲಿ ಸುತಳಲೋಕ, ಜಾನುವಿನಲ್ಲಿ ಮಹಾತಳಲೋಕ,ಊರುವಿನಲ್ಲಿ ತಳಾತಳಲೋಕ,ಗುಹ್ಯೆಯಲ್ಲಿ ರಸಾತಳಲೋಕ, ಕಟಿಯಲ್ಲಿ ಪಾತಾಳಲೋಕ, ನಾಭಿಯಲ್ಲಿ ಭೂಲೋಕ, ಕುಕ್ಷಿಯಲ್ಲಿ ಭುವರ್ಲೋಕ, ಹೃದಯದಲ್ಲಿ ಸ್ವರ್ಗಲೋಕ, ವಕ್ಷದಲ್ಲಿ ಮಹರ್ಲೋಕ, ಕಂಠದಲ್ಲಿ ಜನರ್ಲೋಕ, ಲಲಾಟದಲ್ಲಿ ತಪರ್ಲೋಕ, ಮೂರ್ಧ್ನಿಯಲ್ಲಿ ಸತ್ಯಲೋಕ. ಇಂತೀ ಈರೇಳು ಲೋಕಂಗಳ ತನ್ನೊಳಗಿಂ ಬಿಟ್ಟುಕೊಂಡು, ವಿಶ್ವಪರಿಪೂರ್ಣವಾಗಿ, ಭಕ್ತಿಹಿತಾರ್ಥವಾಗಿ ಮರ್ತ್ಯಲೋಕ ದಲ್ಲಿ ಸುಳಿವ ಕರ್ತೃ ಜಂಗಮದ ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

೨೩

ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ, ಬ್ರಹ್ಮಾಂಡವೇ ಮಕುಟ, ಗಗನವೆ ಮುಖ, ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕೆ ಬಾಹುಗಳು, ಮಹದಾಕಾಶವೇ ಶರೀರ, ತರುಗಳೇ ತನೂರುಹ, ಶೂನ್ಯವೆ ಕರಸ್ಥಲದಲಿಂಗ, ನಕ್ಷತ್ರವೇ ಪುಷ್ಪ, ನಿತ್ಯವೇ ಪೂಜೆ, ಮೋಕ್ಷವೆ ಜಡೆ, ಬೆಳುದಿಂಗಳೇ ವಿಭೂತಿ, ಪರ್ವತಂಗಳೆ ರುದ್ರಾಕ್ಷಿ, ಪಂಚಬ್ರಹ್ಮವೆ ಪಂಚಾಕ್ಷರ, ತತ್ವಂಗಳೆ ಜಪಮಾಲೆ, ಮೇರುವೆ ದಂಡ, ಸಮುದ್ರವೇ

ಕಮಂಡಲು, ಋತುಗಳಾರಾರೆ ಷಟ್‌ಸ್ಥಲ, ಶೇಷನೆ ಕಟಿಸೂತ್ರ, ಜಗವೇ ಕಂಥೆ, ಅನಂತನೆ ಕೌಪೀನ, ತ್ರಿಗುಣ ಒಂದಾದುದೆ ಕರ್ಪರ, ಚತುರ್ಯುಗವೆ ಗಮನ, ಮಿಂಚೆ ಅಂಗರುಚಿ, ಸಿಡಿಲೆ ಧ್ವನಿ, ವೇದಾಗಮವೇ ವಾಕ್ಯ, ಜ್ಞಾನ ಮುದ್ರೆಯೇ ಉಪದೇಶ, ಪೃಥ್ವಿಯೇ ಸಿಂಹಾಸನ, ದಿವಾರಾತ್ರಿಯೆ ಅರಮನೆ, ಶಿವಜ್ಞಾನವೆ ಐಶ್ವರ್ಯ, ನಿರಾಳವೆ ತೃಪ್ತಿ—ಇಂತಪ್ಪ ಚೈತನ್ಯ ಜಂಗಮಕ್ಕೆ ನಾನು ನಮೋ ನಮೋ ಎನುತಿರ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ.

೨೮

ಸರ್ವಾತ್ಮಚೈತನ್ಯನಪ್ಪ ಜಂಗಮದ ಪರಿಯ ನೋಡಾ! ಅಖಂಡ ಬ್ರಹ್ಮದ ಬಯಲೆಲ್ಲಾ ತಾನಾಗಿ, ಸುಳಿಯಲೆಡೆಯಿಲ್ಲದೆ ನಿಂದು ನಿರ್ಗಮ ನಿಯಾದಲ್ಲಿ, ಒಂದಾಸೆಯೊಳಗಿಲ್ಲದ ಅವಿರಳಜ್ಞಾನಿ ಕುರಿತೊಂದಕ್ಕೆ ಸುಳಿವವನಲ್ಲ! ಭಕ್ತಿಗಮ್ಯನು, ಉಳಿದ ಗಮನದ ತುರಿಯವಿಲ್ಲದ ತನ್ನ ನಿರ್ಗಮನದಿರವು. ಚತುರಾಕಾರ ಭೂಮಿಯೇ ಸುಖತಳ್ಪಮಂಚ, ಆಕಾಶವೇ ಮೇಲುಕಟ್ಟು, ಚಂದ್ರಸೂರ್ಯರೇ ಉಭಯ ಭಾಗದಲ್ಲಿ ಬೆಳಗುವ ಜ್ಯೋತಿ, ಪರಿಣಾಮವೇ ತೃಪ್ತಿ, ದಿಕ್ಕುಗಳೇ ವಸನ, ಸದ್ಗುಣವಾಸನೆಯೇ ಪರಿಮಳ, ನಕ್ಷತ್ರಂಗಳೇ ಪುಷ್ಪ, ಶಿವತತ್ವಕಾಂತಿಯೇ ಆಭರಣ, ತ್ರಿಗುಣಕೂಟವೇ ತಾಂಬೂಲ, ಜ್ಞಾನಶಕ್ತಿಯೇ ಸಂಗ, ಪ್ರಣವಾದಿ ಗೀತ ಕೇಳಿರೇ! ಇಂತೀ ಅಷ್ಟಭೋಗದೈಶ್ವರ್ಯದಲ್ಲಿಪ್ಪ ರಾಜಯೋಗಿ ಚರಲಿಂಗ, ನಿಶ್ಚಿಂತ ನಿರ್ವಾಣಿ ನಿರಂಜನ ನಿರ್ಮಾಯ ನಿರ್ವ್ಯಸನಿ ಪರಮಜಂಗಮ. ಇಂತಲ್ಲದೆ ಕಾಯದಿಚ್ಛೆಗೆ ಸುಳಿದು ಕಳವಳಿಸಿ, ತ್ರಿವಿಧಕ್ಕೆ ಬದ್ಧಕರಪ್ಪವ ರೆಲ್ಲಾ ಜಗತ್ಪಾವನರಪ್ಪರೆ ಹೇಳಾ ಗೊಹೇಶ್ವರಾ?

೨೫

ನಾರಿವಾಣ ತಂದು ನಾಯ ಮುಂದೆ ಹಾಕಿದರೆ ಒಡೆಯಲರಿಯದು, ತಿನಲರಿಯದು. ಅದರೊಲು ಜಂಗಮದೊಳಗೆ ಲಿಂಗವನರಿಯದವ, ಭಂಗಿಯ ತಿಂದಂತೆ. ತನ್ನ ಹೊದ್ದಿದ ತನ್ನ ತಾ ತಿಳಿಯಲರಿಯದಿದ್ದರೆ ತೆಂಗ ತಿನಲರಿಯದ ನಾಯಂತೆ ಎಂದನಂಬಿಗರ ಚೌಡಯ್ಯ.

೩೬

ಆದಿ ಅನಾದಿಗಳಲ್ಲಿ ಸಾಧ್ಯಾಸಾಧ್ಯಂಗಳಿಲ್ಲದಂದು, ಸ್ಥೂಲ ಸೂಕ್ಷ್ಮ ವೆಂಬ ಮೂರ್ತಿಗಳಿಲ್ಲದಂದು, ಸಾಕಾರನಿರಾಕಾರವೆಂಬ ವಾಕ್ಕು ಹುಟ್ಟ ದಂದು, ಶಂಕರ ಶಶಿಧರ ಈಶ್ವರರೆಂಬ ಗಣಾಧೀಶ್ವರರಿಲ್ಲದಂದು, ಉಮೆಯ ಕಲ್ಯಾಣವಿಲ್ಲದಂದು ಶಿವರತಿ ಮಹಾರತಿ ಬಸವಣ್ಣನಿಂದಾಯಿತ್ತು. ಸರ್ವ ವಿಸ್ತೀರ್ಣವ ನಿರಾಕರಿಸಿ ನಿತ್ಯಲಿಂಗಾರ್ಚನೆಯ ತೋರಿದ ಬಸವಣ್ಣನು. ಲಿಂಗಾರ್ಚನೆಯಲ್ಲಿ ಪ್ರಸಾದಧ್ಯಾನ, ಜಂಗಮಾರ್ಚನೆಯಲ್ಲಿ ಪ್ರಸಾದ ಭೋಗೋಪಭೋಗವೆಂಬುದನು ಬಸವಣ್ಣ ಬಲ್ಲನು. ಇಂತೀ ಭಕ್ತಿಯ ಕುಳಸ್ಥಳವನರಿಯದೆ ಎಲ್ಲರೂ ಎಂದಂತೆ ಎಂದರು, ಬಂದಲ್ಲಿ ಬಂದರು. ಇದ ನಿಃಕರಿಸಿ, ಜಂಗಮವೇ ಲಿಂಗವೆಂದು ಸಂಗಸಾಹಿತ್ಯವಾದ ಬಸವಣ್ಣ. ಆ ಬಸವಣ್ಣನಿಂದ ನಿತ್ಯನಯ್ಯ ಕಲಿದೇವರದೇವ.

೩೭

ಜಂಗಮವೆ ಲಿಂಗವೆಂದು ನಂಬಿದ ಬಳಿಕ ಸಂದೇಹವಿಲ್ಲದೆ ಇರಬೇಕು ನೋಡಾ. ಸಂದುಸಂಶಯವಳಿದು ಸಯವಾದ ಭಕ್ತಿ ಹಿಮ್ಮೆಟ್ಟಿ ಹೋಯಿತ್ತಲ್ಲಾ! ಒಪ್ಪಚ್ಚಿ ಬಳಿಕ ಕಿಂಕಿಲವಾಗಿ, ಒಪ್ಪಚ್ಚಿ ಬಳಿಕ ಅಹಂಕಾರಿಯಾದರೆ, ಹೋಗ ನೂಕುವ ಕಾಣಾ ನಮ್ಮ ಗುಹೇಶ್ವರಲಿಂಗವು.

೩೮

ಲಿಂಗದೊಳಗೆ ಜಂಗಮ, ಜಂಗಮದೊಳಗೆ ಲಿಂಗವೆಂದರಿದು ಮರೆದು ಬರುದೊರೆವೋದವರು ಜಂಗಮವನಿನ್ನು ಬೆರಸಲೇತಕ್ಕಯ್ಯ? ಆ ಲಿಂಗದೊಳಗೆ ಜಂಗಮವನರಸಿಕೊಂಬುದು. ಲಿಂಗಾರ್ಚನೆಯವಸರಕ್ಕೆ ಜಂಗಮ ಮನೆಗೆ ಬಂದರೆ, ಲಿಂಗಾರ್ಚನೆಯ ಮಾದು, ಜಂಗಮಕ್ಕೆ ಇದಿರೆದ್ದು ವಂದಿಸಿ ಭಕ್ತಿಯ ಮಾಡಬಲ್ಲಾತನೇ ಭಕ್ತ. ಆ ಜಂಗಮ ಹೊರಗಿರಲು ಲಿಂಗಾರ್ಚನೆಯ ಮಾಡುತ್ತಿರ್ಪಾತನೇತರ ಭಕ್ತ? ಜಂಗಮದ ಮುಂದೆ ಲಿಂಗವ ಕೆಯ್ಯಲ್ಲಿ ಹಿಡಿದುಕೊಂಡು ಸಹಪಂಕ್ತಿಯಲ್ಲಿ ಕುಳ್ಳಿರ್ದು ಪೂಜಿಸುವಾತ ಭೃತ್ಯಾಚಾರದ್ರೋಹನು. ಆ ಭಕ್ತನ ಮನೆಯ ಹೊಗುವ ಜಂಗಮವೆ

ಅಜ್ಞಾನಿ. ನಮ್ಮ ಗೊಹೇಶ್ವರನ ಶರಣರ ಕೂಡೆ ಅಹಂಕಾರವ ಹೊತ್ತಿರ್ಪವರ ಕಂಡಡೆ ನಾನೊಲ್ಲೆ ಕಾಣಾ ಸಂಗನ ಬಸವಣ್ಣಾ.

೨೯

ಜಂಗಮವೆ ಹೊರಗಿರಲು ಲಿಂಗಾರ್ಚನೆಯೇವುದಯ್ಯ? ಪ್ರಾಣನ ಹೊರಗಿರಿಸಿ ಎಡೆಯಾಡುವ ದೇಹವುಂಟೆ? ಶರಣರು ಬಂದು ಬಾಗಿಲಲ್ಲಿ ನಿಂದಿರಲು ತನ್ನ ತಾ ಮರೆದವರ ಕಂಡಡೆ, ನಮ್ಮ ಗೊಹೇಶ್ವರಲಿಂಗ ಒಡೆಯ ಹಾಯ್ಕದೆ ಮಾಣ್ಬನೆ?

೩೦

ಉದಯದಲೆದ್ದು ಪತ್ರೆ ಪುಷ್ಪಗಳಿಗೆ ಹೋಗುವ ಅಣ್ಣಗಳು ನೀವು ಕೇಳಿರೊ. ನೀವು ಗಿಡದ ವೈರಿಗಳೋ? ಗಿಡದ ದಾಯಾದ್ಯರೋ? ಹಸಿಯ ತೊಪ್ಪಲನೆ ತಂದು ಆ ದೇವರ ಮಸ್ತಕದ ಮೇಲೊಟ್ಟುವ ಆ ತೊಪ್ಪಲನೆ ತಂದು ಬಿಸಿಮಾಡಿ ಪಶುಪತಿ ಎಂಬ ಜಂಗಮಕ್ಕೆ ನೀಡಿದೊಡೆ, ಆ ಜಂಗಮದ ಬಸಿರು ತುಂಬಿದೊಡೆ, ಲಿಂಗದ ಹಸುವಡಗಿತೆಂದಾತ ನಮ್ಮ ಅಂಬಿಗರ ಚೌಡಯ್ಯ.

೩೧

ಆದಿಯಲ್ಲಿ ನಿಮ್ಮ ಜಂಗಮವೆಂಬುದನಾರು ಬಲ್ಲರಯ್ಯಾ ಬಸವಣ್ಣನಲ್ಲದೆ? ಎಲ್ಲಿ ಸ್ಥಾವರವಲ್ಲಿ ನೋಡಲಾಗದು. ಮನದಲ್ಲಿ ನೆನೆಯಲಾಗದು. ಲಿಂಗಕ್ಕಾದರೆಯೂ ಜಂಗಮವೆ ಬೇಕು. ಜಂಗಮವಿಲ್ಲದೆ ಲಿಂಗ ಉಂಟೆ? ಗುರುವಿಂಗಾದರೆಯೂ ಜಂಗಮವೆ ಬೇಕು. ಜಂಗಮವಿಲ್ಲದೆ ಗುರು ಉಂಟೆ? ಆ ಜಂಗಮಕ್ಕಾದರು ಜಂಗಮವೆ ಬೇಕು. ಆ ಜಂಗಮವಿದ್ದಲ್ಲಿಯೇ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಅನುಭಾವ ಸನ್ನಿಹಿತವಾಗಿಹುದು. ಇಂತೀ ಜಂಗಮವೇ ಪ್ರಾಣಲಿಂಗವೆಂಬುದು ಬಸವಣ್ಣನೆನಗೆ ತೋರಿದನಾಗಿ, ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿ ಶರಣೆಂದು ಶುದ್ಧನಾದೆ ಕಲಿದೇವರದೇವಾ!

೨. ಭಕ್ತ-ಜಂಗಮ, ವಿವೇಚನೆ

೩೨

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ. ಜಂಗಮವೆನ್ನ ನಿಧಿ ನಿಧಾನ. ಜಂಗಮವೆನ್ನ ಪುಣ್ಯದ ಫಲ. ಜಂಗಮವೆನ್ನ ಹರುಷದ ಮೇರೆ. ಚೆನ್ನಮಲ್ಲಿಕಾರ್ಜುನ, ಜಂಗಮದ ತಿಂಥಿಣಿಯಲ್ಲಿ ಓಲಾಡುವೆ.

೩೩

ಗಂಗೆಯೊಡನಾಡಿದ ಗಟ್ಟಬೆಟ್ಟಂಗಳು ಕೆಟ್ಟ ಕೇಡ ನೋಡಯ್ಯ! ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಯ್ಯ! ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಯ್ಯ! ಜ್ಞಾನಿಯೊಡನಾಡಿದ ಅಜ್ಞಾನ ಕೆಟ್ಟ ಕೇಡ ನೋಡಯ್ಯ! ಇಂತೀ ಪರಶಿವಮೂರ್ತಿ ಹರನೇ, ನಿಮ್ಮ ಜಂಗಮಲಿಂಗದೊಡನಾಡಿ ಎನ್ನ ಭವಾದಿಭವಂಗಳು ಕೆಟ್ಟ ಕೇಡ ನೋಡಾ ಚೆನ್ನಮಲ್ಲಿಕಾರ್ಜುನಾ.

೩೪

ಕರ್ತೃ ಭೃತ್ಯನ ವಾಸಕ್ಕೆ ಐದಿದಲ್ಲಿ, ಆತನ ಭಕ್ತಿಯನರಿತು ತಾ ಒಡಗೂಡಿದಲ್ಲಿ, ಆತ ಕೊಟ್ಟುದ ತಾ ಮುಟ್ಟದೆ, ಆತನಲ್ಲಿ ದುರ್ವಾಕ್ಯ ದುಶ್ಚರಿತ್ರಪರಿಹಾಸಕಂಗಳಂ ಬೀರದೆ, ಆತನ ಚಿತ್ತ ನೋಯದಂತೆ ಮತ್ತಾವ ಬಂಧನದ ಕಟ್ಟನಿಕ್ಕದೆ, ಕೃತ್ಯವ ನೇಮಗೊಂಡು ಮಾಡೆಂದು ನೇಮವ ಲಕ್ಷಿಸದೆ, ಆತ ತನ್ನ ತಾನರಿತು ಮಾಡಿದಲ್ಲಿ ಅದು ತನಗೆ ಮುನ್ನಿನ ಸೋಂಕೆಂಬುದನರಿತು ಮುಟ್ಟದೆ, ಆ ಪ್ರಸನ್ನವಪ್ಪ ವಸ್ತು ಮಹಾಮಹಿಮ ಕಲ್ಲೇಶ್ವರಲಿಂಗವು ತಾನಾದ ಶರಣ.

೩೫

ಕೃಷಿಕೃತ್ಯ ಕಾಯಕದಿಂದಾದಡೇನು? ತನುಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್‌ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂತೆನೆ: ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ

ಶುದ್ಧ, ನುಡಿಯೆಲ್ಲ ಪಾವನವು! ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು. ಅಂತಪ್ಪ ಸದ್‌ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್‌ಪಾವನ. ಇಂತಪ್ಪವರ ನಾನು ನೆರೆ ನಂಬಿ ನಮೋ ನಮಃ ಎಂಬೆನಯ್ಯಾ ಕೂಡಲಸಂಗಮದೇವಾ.

೩೬

ನಾವು ಮೀರಿದ ಸ್ಥಲದ ವಿರಕ್ತರೆಂದು ಹೇಳುವ ಅಣ್ಣಗಳಿರಾ, ಎಂತಾದಿರಿ ಹೇಳಿರಿ, ಅರಿಯದಿರ್ದಡೆ ಕೇಳಿರಿ,—ಮೀರಿ ನಿಂದ ವಿರಕ್ತನ ವಿಚಾರದ ಭೇದವ. ಅನಾದಿ ಚಿದ್ಬಿಂದುವ ಅಧೋದ್ವಾರದಲ್ಲಿ ಬೀಳುಗೊಡದೆ, ಸದ್ಗುರುಕರುಣ ಕಟಾಕ್ಷೆಯಿಂದ ಮಹಾಮಂತ್ರವ ಪಡೆದು, ಆ ಚಿನ್ಮಂತ್ರದ ಬಲದಿಂದ ಊರ್ಧ್ವಕ್ಕೆ ಮುಖವ ಮಾಡಿ, ಮೇಲುಗಿರಿ ಸಿಂಹಾಸನದಲ್ಲಿ ಮೂರ್ತಗೊಂಡಿರುವ ಪರಶಿವಲಿಂಗದ ಮಹಾಬೆಳಗಿನೊಳಗೆ ಏಕಾರ್ಥವ ಮಾಡಬೇಕು. ಜಿಹ್ವೆಯ ತುದಿಯಲ್ಲಿ ಅಜ್ಞಾನದ ಹುಸಿ ಕುಶಬ್ದ ಕುರುಚಿಯ ನೀಗಬೇಕು. ಸದ್ಗುರುಮುಖದಿಂದ ನಿಜನುಡಿ ಘನಪಾದೋದಕ ಪ್ರಸಾದ ಮಂತ್ರವ ಪಡೆದು ಸದ್ಧರ್ಮ ರೂಪದಿಂದಿರಬೇಕು. ಸರ್ವಾಚಾರ ಸಂಯುಕ್ತವಾದ ಭಕ್ತನೆ ನಿಜಮುಕ್ತಿಮಂದಿರವೆಂದು ಭಾವ ಮನ ಕಾಯ ತುಂಬಿ ಪರಿಪೂರ್ಣತೃಪ್ತನಾದಾತನೇ ಮೀರಿದ ಸ್ಥಲದ ವಿರಕ್ತ ನೋಡಾ ಕಲಿದೇವರದೇವಾ.

೩೭

ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲವಾತ ಭಕ್ತನಯ್ಯಾ. ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯಾ. ಆಚಾರವಿಚಾರವೆಂಬುದು ಸ್ವಾನುಭಾವವು ನೋಡಾ ಕೂಡಲಸಂಗಮದೇವಾ.

೩೮

ಹೊತ್ತಾರೆ ಎದ್ದು ಹೂವು ಪತ್ರೆ ಉದಕವ ತಂದು, ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿಹೆನೆಂದು, ಸೊರಟೆಯ ಮೊರಟೆಯ ಹರಡಿ, ಕೈಕಾಲ ಮುಖವ ತೊಳೆದು, ವಿಭೂತಿಯ ಧರಿಸಿ, ರುದ್ರಾಕ್ಷಿಯ ತೊಟ್ಟು,

ತನುಶುದ್ಧವ ಮಾಡಿ, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬಿರಿ. ಈ ಮೊದಲು ತಂದ ಪತ್ರೆ ಪುಷ್ಪ ಉದಕವೆ ದೇವರೋ? ಈ ಹರಡಿಕೊಂಡಿರುವ ಸೊರಟೆ ಮೊರಟೆಗಳೆ ದೇವರೋ? ಈ ತೊಳೆದುಕೊಂಬ ಕೈಕಾಲು ಮುಖವೇ ದೇವರೋ? ಈ ಧರಿಸಿದ ವಿಭೂತಿ ರುದ್ರಾಕ್ಷಿಯೇ ದೇವರೋ? ನಿಮ್ಮ ಕೈಯಲ್ಲಿ ಇಪ್ಪುದೇ ದೇವರೋ? ನೀವೇ ದೇವರೋ? ಇವರೊಳಗೆ ಆವುದು ದೇವರೆಂಬಿರಿ? ಅರಿವುಳ್ಳವರು ನೀವು ಹೇಳಿರೊ. ದೇವರು ದೇವರು ಎಂದು ಒಂದಲ್ಲದೆ ಎರಡುಂಟೆ? ಇಂತಿದನರಿಯದೆ, ಬರಿಸೂರೆ ಹೋದಿರಲ್ಲ. ಇನ್ನಾದರು ಅರಿದು ಬದುಕಿರೋ. ನಾನೊಂದ ಹೇಳಿದೆನು. ಇವೆಲ್ಲವನು ಮಾಡಬೇಕೆಂಬುದೀಗ ಲಿಂಗ, ಮಾಡುವದೀಗ ಜಂಗಮ. ಲಿಂಗಜಂಗಮ ವೆಂದರೆ ಒಂದೇ ಅಂಗಭೇದವು. ನಮ್ಮ ಶರಣರು ಬಲ್ಲರಲ್ಲದೆ ಮರಣ ಬಾಧೆಗೊಳಗಾಗುವ ಮರ್ತ್ಯದ ಮನುಜರು ಅರಿಯರು ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

೩೯

ಅಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ; ಲಾಂಛನಕ್ಕೆ ತಕ್ಕ ಆಚರಣೆಯಿಲ್ಲದಿದ್ದರೆ ಕೂಡಲಸಂಗಮದೇವಾ, ನೀ ಸಾಕ್ಷಿಯಾಗಿ 'ಚೀಃ' ಎಂಬೆ!

೪೦

ವೇಷಕ್ಕಂಜುವೆ, ದೋಷಕ್ಕೆ ಹೇಸುವೆ. ಈಶ್ವರನಾಗಿ ಎನ್ನ ಕಯ್ಯಲ್ಲಿ ಆರಾಧಿಸಿಕೊಳಲೊಲ್ಲದೆ, ಹದಿನೆಂಟು ಜಾತಿಯ ಹೇಸಿಕೆಯ ಕೂಳ ತಿಂಬವರ ನೇನೆಂಬೆನಯ್ಯಾ ರಾಮನಾಥಾ?

೪೧

ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಮನೆಮನೆದಪ್ಪದೆ ತಿರುಗುವ ತುಡುಗುಣಿಯಂತೆ, ಕಾಡಲಾಗದು ಭಕ್ತನ, ಬೇಡಲಾಗದು ಭವಿಯ. ಕಾಡಿ ಬೇಡಿ ಒಡಲ ಹೊರೆದಡೆ, ಬೇಂಟೆಯ ಶ್ವಾನ ಮೊಲಕ್ಕೆ ಬಾಯ್ದೆಗೆದಂತೆ ಗೊಹೇಶ್ವರಾ.

೪೨

ತನುವ ಮರೆಯಬೇಕೆಂದು ಗುರುವ ತೋರಿ, ಮನವ ಮರೆಯಬೇಕೆಂದು ಲಿಂಗವ ತೋರಿ, ಧನವ ಮರೆಯಬೇಕೆಂದು ಜಂಗಮವ ತೋರಿ, ಲೇಸ ಮರೆದು ಕಷ್ಟಕ್ಕೆ ಕಡಿದಾಡುವ ಭಾಷೆಹೀನರ ಕಂಡು ನಾಚಿಕೆಯಾಯಿತ್ತು! ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೪೩

ಕಾಯ ಜೀವವನರಿದೆನೆಂಬವರೆಲ್ಲರೂ ಹೋದರಲ್ಲಾ ಹೊಲಬುದಪ್ಪಿ! ಹೊನ್ನು ಹೆಣ್ಣು ಮಣ್ಣಿಗೆ ಹೋರಿಯಾಡುವರೆಲ್ಲರು! ಬಸವಣ್ಣನ ಬಾಗಿಲಲ್ಲಿ ಬಂಧಿತರಾಗಿ ನೊಂದವರಿಗೇಕೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೪೪

ದೇಶಾಂತರಿ ದೇಶಾಂತರಿ ಎಂದು ನುಡಿವ ಹುಸಿಭ್ರಷ್ಟರನೇನೆಂಬೆನಯ್ಯಾ? "ಏಕಮೂರ್ತಿಸ್ತ್ರಯೋಭಾಗಂ ಗುರುರ್ಲಿಂಗಂ ತು ಜಂಗಮಃ" ಎಂಬುದನರಿಯದೆ ದೇಶಾಂತರಿ ಎಂದರೆ ಆರು ಮೆಚ್ಚುವರಯ್ಯಾ? ಸುಮ್ಮನಿರಿಭೋ ಬರುಕಾಯರುಗಳಿರಾ. ದೇಶಾಂತರಿಯಾದರೆ ಮೂರು ಲೋಕದ ಕರ್ತನಂತೆ ಶಾಂತನಾಗಿರಬೇಕು. ಜಲದಂತೆ ಶೈತ್ಯವ ತಾಳಿರಬೇಕು. ಸೂರ್ಯನಂತೆ ಸರ್ವರಲ್ಲಿ ಪ್ರಭೆ ಸೂಸುತ್ತಿರಬೇಕು. ಪೃಥ್ವಿಯಂತೆ ಸರ್ವರ ಭಾರವ ತಾಳಿರಬೇಕು. ಹೀಗಾದರೆ ಮಹಂತಿನ ಕೂಡಲ ದೇವರೆಂಬೆನಯ್ಯಾ. ಹೀಗಲ್ಲದೆ ತ್ರಿವಿಧಮಲಗಳ ಭುಂಜಿಸುತ್ತ, ಗುರು ಲಿಂಗ ಜಂಗಮಕ್ಕೆ ತನು ಮನ ಧನ ಸವೆಯದೆ, ತಾವೇ ದೇವರೆಂದು ತಮ್ಮುದರವ ಹೊರೆವ ಶ್ವಾನ ಸೂಕರನಂತೆ ಪ್ರಪಂಚಿನ ಗರ್ವಿಗಳ ದೇಶಾಂತರಿ ಮಹಂತೆನಬಹುದೇನಯ್ಯಾ? ಎನಲಾಗದು ಕಾಣಾ ಕಲಿದೇವರ ದೇವಾ.

೪೫

ಮೂರು ಸ್ಥಲದ ಮೂಲವನರಿಯರು. ಪುಣ್ಯಪಾಪವೆಂಬ ವಿವರವನರಿಯರು. ಇಹಪರವೆಂಬುದನರಿಯರು. ಇವರನೆಂತು ಮಹಂತಿನ ದೇವ

ಕೆಂಬೆನಯ್ಯ? ಹೊನ್ನು ವಸ್ತ್ರದವನ ಬಾಗಿಲು ಕಾಯ್ವ ಪಶುಪ್ರಾಣಿಗಳ ದೇವರೆನ್ನಬಹುದೇನಯ್ಯ? ಜಗದ ಕರ್ತನ ವೇಷವ ಧರಿಸಿಕೊಂಡು ಸರ್ವರಿಗೆ ಬೇಡಿ ಕೊಟ್ಟರೆ ಒಳ್ಳೆಯವ, ಕೊಡದಿರ್ದಡೆ ಕೆಟ್ಟವನು, ಪಾಪಿ ಚಾಂಡಾಲಿ ಅನಾಚಾರಿ ಎಂದು ದೂಷಿಸಿ ಒಳಹೊರಗೆಂದು ಬೊಗಳುವ ಮೂಳ ಮಾನವರಿಗೆ ಮಹಂತಿನ ಆಚರಣೆ ಎಲ್ಲಿಯದೊ? ಇಲ್ಲವೆಂದ ಕಲಿದೇವರ ದೇವ.

೪೬

ಕೋಪ ತಾಪವಂ ಬಿಟ್ಟು, ಭ್ರಾಂತಿಭ್ರಮೆಯಂ ಬಿಟ್ಟು ಜಂಗಮವಾಗಬೇಕು ಕಾಣಿರೇ ಮರುಳುಗಳಿರಾ! ಇಂತೀ ಷಡುಲೋಭದ ರುಚಿ ಹಿಂಗಿ, ಜಂಗಮವಾದಲ್ಲದೆ ಭವ ಹಿಂಗದು ಕಾಣಾ ಗೊಹೇಶ್ವರಾ.

೪೭

ಹಸಿವು ತೃಷೆ ವ್ಯಸನಕ್ಕೆ ಕುದಿಕುದಿದು, ಚರಾಚರದೊಳಗೆ ಲಯವಾಗಿ ಹೋದರಲ್ಲಾ! ಉದರವ ಹೊರೆವ ಕೋಟಿ ವೇಷಧಾರಿಗಳೆಲ್ಲ ಜಂಗಮವಪ್ಪರೆ? ಅಲ್ಲ. ಲಿಂಗಸ್ಥಲವನರಿಯರು, ಜಂಗಮಸ್ಥಲವನರಿಯರು, ಪ್ರಸಾದಸ್ಥಲವನರಿಯರು. ಇಂತೀ ತ್ರಿವಿಧಸ್ಥಲವನರಿಯದ ಕಾರಣ, ಅವರ ಗಾವಿಲರ ಮಕ್ಕಳೆಂಬೆ ಕಲಿದೇವಾ.

೪೮

ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ, ಹಂದಿಯು ತಂದು ಅಂದಣವನೇರಿಸಿದಂತೆ, ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ? ನಾನು ಗುರು ಕೊಟ್ಟ ಇಷ್ಟಲಿಂಗವ ಮರೆದು, ಅನ್ಯದೈವಕ್ಕೆರಗಿ ಲಿಂಗದ್ರೋಹಿಯಾದೆನಯ್ಯ. ಜಂಗಮವ ಕೆಡೆನುಡಿದೆ. ಕೈವಿಡಿದ ಸ್ತ್ರೀಯಳ ಕಡಿಖಂಡವ ಮಾಡಿದೆ. ಒಡನಾಡಿದ ಕಡುಗೂಪನನಿರಿದು ಕೊಂದೆ. ನಂಬಿದ ಹಳೆಯರ ಪ್ರಾಣಕ್ಕೆ ಮುನಿದೆ. ಪಶುವಿನ ಶಿಶುವ ತಲೆಯೊಡೆಯಲಿಕ್ಕಿದೆ. ಪರಧನವ ಕದ್ದೆ. ಪರಸ್ತ್ರೀಯರಿಗಳುಪಿದೆ. ಭವಿ ಹೆಣ್ಣುಗಳ ಕೂಡುಂಡ ಬಾಯ ಹುಳುಕನಯ್ಯ ನಾನು. ಇಂತಪ್ಪ ಮಹಾಪಾತಕಂಗಳ ಮಾಡಿದ ಹೊಲೆಯನಿವನೆಂದು ನೀನರಿದ ಬಳಿಕ, ಎನಗೆ ವಿರಕ್ತಿ ಎಂಬ ಲಾಂಛನವ

ಕೊಟ್ಟುದು ಕೋಪದ ಕಾರಣವಲ್ಲದೆ, ಕೃಪೆಯಲ್ಲವಯ್ಯ. ಅದೇನು ಕಾರಣವೆಂದೊಡೆ, ಬಟ್ಟೆಯು ಬಡಿವ ಕಳ್ಳಬಂಟನ, ಭೂಪಾಲ ಬೇಹನಿಕ್ಕಿ ಹಿಡಿತರಿಸಿ ನಾಳೆ ಶೂಲಕ್ಕೆ ತೆಗೆಸುವರೆ, ಇಂದು ಆ ಕಳ್ಳಬಂಟಂಗೆ ಪುನುಗು ಜವ್ವದಿಯು ಲೇಪಿಸಿ, ಪುಷ್ಪಿನ ದಂಡೆ ಕೊರಳು ಮುಂಡೆ ಉರದೊಳಗೆ ಅಡ್ಡಹಾಕಿ ಹಾಲು ತುಪ್ಪ ಹಣ್ಣುಗಳ ಉಣಕೊಟ್ಟು, ಅಡಿಗಡಿಗೆ ಅಡಿಕೆಲೆಯ ಮೆಲಕೊಟ್ಟು, ವೀರವಂಡದ ಹರೆಕಹಳೆಯಿಂ ಅವನ ಮುಂದೆ ಸಂಭ್ರಮಿಸುವ ಬರಿಯ ಉಪಚಾರದಂತೆ, ನಾನು ಮಾಡಿದ ಸರ್ವದ್ರೋಹಕ್ಕೆ ನಿನ್ನ ಮನ ನೊಂದು, ಎನ್ನನೆಕ್ಕಲನರಕಕ್ಕೆ ನೂಂಕುವದಕ್ಕೆ ಕೊಟ್ಟ ಸಟೆಯ ಉಪಚಾರದ ಲಾಂಛನವಲ್ಲದೆ, ದಿಟದೊಲವಲ್ಲವಯ್ಯ ದೇವನೇ. ನಾನು ಮುಂದನರಿಯದ ಅಂಧಕನಯ್ಯ. ನಿನ್ನ ಬಾಗಿಲ ಕಾಯ್ವ ಗೊಲ್ಲನಯ್ಯ. ನಿನ್ನ ಕುದುರೆಯ ಕಾವ ಗೋಪನಯ್ಯ. ನಿನ್ನ ಚಮ್ಮಾವುಗೆಯ ಹೊತ್ತು ಬದುಕುವ ಜೋವರ ಲೆಂಕನಯ್ಯ. ನಿನ್ನ ಪಡಿಗವ ಹಿಡಿವ ದಿಂಡೆಯಯ್ಯಾ. ನೀನುಗುಳ್ದ ತಾಂಬೂಲವನುಂಬ ನಿನ್ನಾದಿಯ ಹಳೆಯನಯ್ಯಾ. ನಿನ್ನಂಗಣದಲ್ಲಿ ಜೊಗಳುವ ಶ್ವಾನನಯ್ಯಾ. ನಿನ್ನ ಮನೆಯ ನಡೆಸೊಡರಯ್ಯಾ. ಎನ್ನ ತಪ್ಪ ಕಾಯಯ್ಯಾ ಕಾಯಯ್ಯಾ ಶಿವಧೋ ಶಿವಧೋ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೪೯

ಹಲವು ವೇಷವ ಧರಿಸಿ, ಹಲವು ಭಾಷೆಯ ಕಲಿತು, ಹಲವು ದೇಶಕ್ಕೆ ಹರಿದಾಡಿದಡೇನು? ಕಾಲಾರಿಯಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ. ಅದೇನು ಕಾರಣವೆಂದೊಡೆ,—ತನುವಿನ ಆಶೆಯಾಮಿಷ ಹಿಂಗದಾಗಿ. ಊರಾಶ್ರಯವ ಬಿಟ್ಟು ಕಾಡಾಶ್ರಮ ಗಿರಿಗಹ್ವರದಲ್ಲಿರ್ದಡೇನು? ಹಗಲು ಕಣ್ಣು ಕಾಣದ ಗೂಗೆಯಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ. ಅದೇನು ಕಾರಣವೆಂದೊಡೆ,—ಮನದ ಮಾಯವಡಗದಾಗಿ. ಹಸಿವು ತೃಷೆಯ ಬಿಟ್ಟು ಮಾತನಾಡದೆ ಮೌನವಾಗಿರ್ದಡೇನು? ಕಲ್ಲು ಮರ ಮೋಟ ಗುಲ್ಮಂಗಳಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ. ಅದೇನು ಕಾರಣವೆಂದೊಡೆ,—ವಿಷಯ ವ್ಯವಹಾರ ಹಿಂಗದಾಗಿ. ನಿದ್ರೆಯ ತೊರೆದು ಎದ್ದು ಕುಳ್ಳಿರ್ದಡೇನು? ಕಳ್ಳ ಊರ ಹೊಕ್ಕು

ಉಲುಹು ಅಡಗುವನ್ನಬರ ಮರೆಯಲ್ಲಿ ಕುಳಿತಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ. ಅದೇನು ಕಾರಣವೆಂದೊಡೆ, ಅಂತರಂಗದ ಘನಗಂಭೀರ ಮಹಾ ಬೆಳಗಿನ ಶಿವಸಮಾಧಿಯನರಿಯದ ಕಾರಣ. ಇಂತಪ್ಪ ಹೊರವೇಷದ ಡಂಭಕ ಜೊಳ್ಳುಮನದವರ ವಿರಕ್ತರೆಂದೊಡೆ ಮಚ್ಚರಯ್ಯ ನಿಮ್ಮ ಶರಣರು ಅಖಂಡೇಶ್ವರಾ.

೫೦

ನಡೆವ ಗತಿಯಲ್ಲಿ ಲಿಂಗದ ನಡೆಯ ತುಂಬಿ ನಡೆಯಬಲ್ಲಡೆ ವಿರಕ್ತ ರೆಂಬೆನು. ನುಡಿಯ ಕೊನೆಯಲ್ಲಿ ಲಿಂಗದ ನುಡಿಯ ತುಂಬಿ ನುಡಿಯಬಲ್ಲಡೆ ವಿರಕ್ತರೆಂಬೆನು. ಕಂಗಳ ಕೊನೆಯಲ್ಲಿ ಲಿಂಗದ ನೋಟವ ತುಂಬಿ ನೋಡ ಬಲ್ಲಡೆ ವಿರಕ್ತರೆಂಬೆನು. ಮನದ ಕೊನೆಯಲ್ಲಿ ಲಿಂಗದ ನೆನಹು ತುಂಬಿ ನೆನೆಯಬಲ್ಲಡೆ ವಿರಕ್ತರೆಂಬೆನು. ಭಾವದ ಕೊನೆಯಲ್ಲಿ ಲಿಂಗದ ಬೆಳಗ ತುಂಬಿ ಸುಳಿಯಬಲ್ಲಡೆ ವಿರಕ್ತರೆಂಬೆನು. ಇಂತೀ ಲಿಂಗಾಂಗಸಮರಸದ ಪರಮಸುಖವನರಿಯದೆ, ಅರುಹುಹೀನನಾಗಿ ಮರಹು ಮುಂದುಗೊಂಡು ದುರಾಚಾರದಲ್ಲಿ ನಡೆವ ಭವಭಾರಿಗಳ ಮುಖವ ನೋಡಲಾಗದಯ್ಯ ಅಖಂಡೇಶ್ವರಾ.

೫೧

ಈಶಲಾಂಛನವ ತೊಟ್ಟು, ಮನದ ವೇಷಲಾಂಛನವ ತೊಡಲೇತಕ್ಕೆ? ಇದು ನಿಮ್ಮ ನುಡಿ ನಡೆಗೆ ನಾಚಿಕೆಯಲ್ಲವೆ? ಅಂದಣ ಛತ್ರಾಭರಣ ಕರಿ ತುರಗಂಗಳ ಗೊಂದಣವೇತಕ್ಕೆ ? ಅದು ಘನಲಿಂಗದ ಮೆಚ್ಚಲ್ಲೆಂದನಂಬಿಗ ಚೌಡಯ್ಯ.

೫೨

ಅರಿವೇ ಗುರು, ಆಚಾರವೇ ಶಿಷ್ಯ. ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆ ಎಂಬುದೇ ಯೋಗ ನೋಡಾ. ಈಸುವನರಿಯದೆ ಲೋಚು ಬೋಳಾದರೇನು ? ಮಹಾಲಿಂಗಕಲ್ಲೇಶ್ವರದೇವರು ನಗುವರು.

೫೩

ಜಡೆ ಬೋಳು ಲೋಚು ದಿಗಂಬರವನು ಅಳವಡಿಸಿಕೊಂಡು ನಟಿಸುವ ಅಣ್ಣಗಳಿರಾ, ನಿಮ್ಮ ಜಡೆಯಾವುದು, ಬೋಳಾವುದು? ಲೋಚವಾವುದು, ದಿಗಂಬರವಾವುದು? ಬಲ್ಲರೆ ಹೇಳಿರೋ, ಅರಿಯದಿರ್ದಡೆ ನೀವು ಕೇಳಿರೋ. ಭಕ್ತಿ ಜ್ಞಾನ ವೈರಾಗ್ಯದ ಪುಂಜವೇ ಜಡೆ. ತನುವಿನ ಆಸೆಯು ಮನದ ವಾಸನೆಯು ಧನದ ಭ್ರಮೆಯು ಅಳಿದುದೇ ಬೋಳು. ಸಚರಾಚರ ಪ್ರಾಣಿಗಳ ಮೇಲಣ ಕರುಣವೇ ಲೋಚು. ಸೃಷ್ಟಿ ಸ್ಥಿತಿ ಪ್ರಳಯಂಗಳು ನಷ್ಟವಾದುದೇ ದಿಗಂಬರ. ಇಂತೀ ಭೇದವನರಿಯದೆ, ತನುವಿನ ವೇಷವ ಧರಿಸಿ, ಮನದ ಪ್ರಕೃತಿಯಲ್ಲಿ ಹರಿದಾಡುವ ಬಿನುಗು ಜೀವಗಳ್ನರ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ.

೫೪

ಉಡಲು ಸೀರೆಯ ಕಾಣದೆ ಬತ್ತಲೆ ಇಪ್ಪರಯ್ಯ. ಉಣಲಶನವ ಕಾಣದೆ ಹಸಿದಿಪ್ಪರಯ್ಯ. ಮೀಯಲೆಣ್ಣೆಯ ಕಾಣದೆ ಮಂಡೆ ಬೋಳಾಗಿಪ್ಪರಯ್ಯಾ? ದಿಟದಿಂ ಬಿಡಿಸಬಾರದಂತೆ ಈ ಸಟೆಯ ಸಂಸಾರವ ಧರಿಸಿಪ್ಪವರಿಗಂಜುವೆ ಕಾಣಾ ಸಕಳೇಶ್ವರಾ.

೫೫

ಮಂಡೆಯ ಬೋಳಿಸಿಕೊಂಡು ನುಡಿದು ಗೋಷ್ಠಿಯ ಕಟ್ಟಿದಡೇನು? ಕಂಡಕಂಡವರಿಗೆ ಕೈಯೊಡ್ಡಿ ಬೇಡುವ ಭಂಡರನೊಲ್ಲ ನಮ್ಮ ರಾಮನಾಥ.

೫೬

ಅಯ್ಯಾ ಸರ್ವ ಮೂಲಾಹಂಕಾರವಿಡಿದು, ಕುಲಭ್ರಮೆ ಛಲಭ್ರಮೆ ಜಾತಿಭ್ರಮೆ ನಾಮ ವರ್ಣ ಆಶ್ರಮ ಮತಶಾಸ್ತ್ರಭ್ರಮೆ, ರಾಜ್ಯಭ್ರಮೆ, ಧನ ಧಾನ್ಯ ಪುತ್ರ ಮಿತ್ರ ಐಶ್ವರ್ಯ ತ್ಯಾಗ ಯೋಗಭ್ರಮೆ, ಕಾಯ ಕರಣ ವಿಷಯ ಭ್ರಮೆ, ವಾಯು ಮನ ಭಾವ ಜೀವ ಮೋಹ ಭ್ರಮೆ, ನಾಹಂ ಕೋಹಂ ಭ್ರಮೆ, ಶಿವೋಹಂ ಭ್ರಮೆ, ಮಾಯಾ ಭ್ರಮೆ ಮೊದಲಾದ ಮೂವತ್ತೆರಡು ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು,

ಶಿವಭಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ ಶಿವಜಂಗಮವೆಂದು ನುಡಿಯಲಾರದೆ, ಎನ್ನ ಮನ ನಾಚಿ ನಿಮ್ಮಡಿಗಭಿಮುಖವಾಯಿತ್ತಯ್ಯ ಚೆನ್ನಮಲ್ಲಿಕಾರ್ಜುನಾ.

೫೭

ಮಂಡೆ ಬೋಳಾದರೇನೊ, ಹುಟ್ಟು ಬೋಳಾಗದನ್ನಕ್ಕರ? ತನು ನಿರ್ವಾಣವಾದರೇನೋ, ಆಶೆ ನಿರ್ವಾಣವಾಗದನ್ನಕ್ಕರ? ಇಂದ್ರಿಯ ನಿಗ್ರಹವ ಮಾಡಿದೊಡೇನೋ, ಷಟ್‌ಸ್ಥಲಾನುಗ್ರಹವಾಗದನ್ನಕ್ಕರ? ಸೌರಾಷ್ಟ್ರ ಸೋಮೇಶ್ವರಲಿಂಗ ಬರಿದೆ ಒಲಿವನೇ?

೫೮

ನಿಜಗುಣ ಚಂದಿಮರಸರು ಕರಸ್ಥಲದ ನಾಗಿದೇವರೊಳಗಾದ ಎಲ್ಲ ವಿರಕ್ತರು ಆವ ಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರೆಂದು ಕೆಟ್ಟು ನುಡಿವ ಭವಹೇತುಗಳು ನೀವು ಕೇಳಿರೋ. ಅವರು ತುಂಬಿದ ತೊರೆಯ ಸಂಭ್ರಮ ದಿಂದ ಹಾಯ್ದರು. ಶಕ್ತಿಯ ಮುಂದೆ ಹಾಲು ಬೋನ ಹಣ್ಣು ಕಜ್ಜಾಯ ವಿಕ್ಕಿರಲು, ಆ ಶಕ್ತಿಯ ಮಾತನಾಡಿಸಿ ಉಂಡರು. ವಿಷವ ಪದಾರ್ಥವೆಂದು ಕೊಡಲು ಉಂಡು ದಕ್ಕಿಸಿಕೊಂಡರು. ಪಚ್ಚೆಯದ ಕಡಗವಂ ತಿರುಗುಣಿಯ ಮಡುವಿಗಿಟ್ಟು, ತಿರುಗಿ ಕರೆದುಕೊಂಡರು. ಕೆಂದೆಂಗಿನ ಎಳನೀರ ಭಾವಾರ್ಪಣವ ಮಾಡಿದರು. ದೇವೇಂದ್ರನ ಭೋಗವಂ ಬಿಟ್ಟರು. ತಮವ ನಿಲಿಸಿ, ಪ್ರಾಣವ ಕೊಂಡೊಯ್ದರು. ಉಂಗುಷ್ಠದಲ್ಲಿ ಧರಿಸಿದ ಲಿಂಗವಂ ತೆಗೆಯಲು, ಆ ಲಿಂಗದ ಕೂಡೆ ಪ್ರಾಣವ ಕಳುಹಿದರು. ಮಿಡಿವಿಲ್ಲಿನೊಳಗೆ ಲಿಂಗವನೆಚ್ಚು, ಆ ಲಿಂಗದೊಡನೆ ನಿರ್ವಯಲಾದರು. ಉಪಾಧಿಕೆಯ ಒಡಲಾಸೆಯಂ ಸುಟ್ಟರು. ಚಳಿ ಮಳೆ ಎನ್ನದೆ ಅರಣ್ಯ ದಲ್ಲಿದ್ದರು. ಹಸಿದರೆ ಕೆಸರ ಮೆದ್ದರು. ಅವರು ಲಿಂಗಾಂಗ ರೂಢರಾಗಿ ಲಿಂಗದಲ್ಲಿ ಐಕ್ಯರಾದರು. ನೀವು ಅವರಂತೆ ಲಿಂಗಾಂಗವ ತೋರಬೇಕು. ಆದಲ್ಲದಿದ್ದೊಡೆ, ಜ್ಞಾನ ಕ್ರಿಯೆಗಳಿಂದಿರಬೇಕು. ಅಲ್ಲದಿದ್ದೊಡೆ ಸುಮ್ಮನಿರ್ದು ಶಿವಶರಣರ ಮನಸಿಂಗೆ ಬರಬೇಕು. ಹೀಗಲ್ಲದೆ ಹೊಟ್ಟೆಯ

ಕಿಚ್ಚಿನ ಬಾಯಬಡುಕತನವೇತಕಯ್ಯಾ ನಿಮಗೆ? ಆನೆ ಮದವೆದ್ದು ಸೋಮಬೀದಿಯ ಸೂರೆ ಮಾಡಿತ್ತೆಂದು, ಆಡು ಮದವೆದ್ದು ಬೇಡಗೇರಿಗೆ ಹೋಗಿ ಕೊರಳ ಮುರಿಸಿಕೊಂಬಂತೆ, ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು ಇಂದಿನ ಕಾಲದ ಕಪಿ ಹಳ್ಳವ ದಾಂಟಿದಂತೆ, ಅರ್ಥಿಯಿಂದ ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು ತೊತ್ತು ತಿಪ್ಪೆಯನೇರಿದಂತೆ, ಕುಮಾರ ಕುದುರೆಯನೇರಿದನೆಂದು ಗುಲಾಮ ಕುನ್ನಿಯನೇರಿದಂತೆ, ಬಲಮುರಿ ಶಂಖ ಧಿಗಿಲು ಭುಗಿಲೆಂದು ಝೇಂಕರಿಸಿತೆಂದು ಕೆರೆಯೊಳಗಣ ಗುಳ್ಳೆ ಕಿಚುಕಿಚು ಎಂಬಂತೆ, ತಮ್ಮಿರವ ತಾವರಿಯದೆ ಬಾಳುವ ಕಾಲದಲ್ಲಿ ಮರಣದ ಮದ್ದ ಕೊಂಬ ಈ ಖೂಳ ಮಾನವರ ಎನಗೊಮ್ಮೆ ತೋರದಿರಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೫೯

ಅಯ್ಯಾ, ನಾವು ಪರಮವಿರಕ್ತರು ಪಟ್ಟದೊಡೆಯರು ಅತೀತ ಚರಮೂರ್ತಿಗಳೆಂದು, ಶಂಖ ಗಿಳಿಲು ದಂಡಾಗ್ರವ ಪಿಡಿದು, ಕಾವಿ ಕಾಷಾಯಾಂಬರವ ಹೊದ್ದು, ಮಹಾಘನಲಿಂಗ ಚರಮೂರ್ತಿಗಳೆಂದು ಚೆನ್ನಾಗಿ ನುಡಿದುಕೊಂಡು, ತೊನ್ನ ಹೊಲೆಮಾದಿಗರ ಪ್ರಸಂಗಕ್ಕೆ ಮನ ವೆಳಸದೆ, ಮುಖವೆತ್ತಿ ನೋಡದೆ, ಶಬ್ದ ಮುಗ್ಧನಾಗಿ ಸುಮ್ಮನೆ ಕುಳಿತಿರ್ದನು ಕಾಣಾ ನಿಮ್ಮ ಶರಣ. ಅದೇನು ಕಾರಣವೆಂದಡೆ, ತನ್ನ ತಾನಾರೆಂದರಿಯದೆ, ತನ್ನ ಇಷ್ಟಮಹಾಘನಲಿಂಗದ ಗೊತ್ತ ಮುಟ್ಟದೆ, ತನುಮನಧನವೆಂಬ ತ್ರಿವಿಧ ಪದಾರ್ಥವನರ್ಪಿಸಿ, ತ್ರಿವಿಧಪ್ರಸಾದವ ಗರ್ಭೀಕರಿಸಿಕೊಂಡ ಪ್ರಸನ್ನ ಪ್ರಸಾದವ ಸ್ವೀಕರಿಸಿ, ಪರತತ್ವ ಪ್ರಸಾದಮೂರ್ತಿ ತಾನಾಗ ಲರಿಯದೆ, ಉಚ್ಚಂಗಿ ದುರ್ಗಿಗೆ ಬಿಟ್ಟ ಪೋತರಾಜನಂತೆ, ಮಾರುಮಾರು ಜಡೆಮುಡಿಗಡ್ಡಗಳ ಬಿಟ್ಟುಕೊಂಡು, ಡೊಂಬಜಾತಿಕಾರರಂತೆ ವೇಷವ ತೊಟ್ಟು, ಸಂಸ್ಕೃತಾದಿ ನಾನಾ ಶಾಸ್ತ್ರವ ಹೇಳಿ, ಸುಡುಗಾಡ ಸಿದ್ಧಯ್ಯಗಳಂತೆ ಕುಟಿಲ ಕುಹಕ ಯಂತ್ರ ತಂತ್ರಗಳ ಕಟ್ಟುತ, ಪುರಜನರ ಮೆಚ್ಚಿಸಬೇಕೆಂದು ಅಯ್ಯ, ನಾವು ಕೆರೆಬಾವಿ ಮಠಮಾನ್ಯ ಮದುವೆ ಮಾಂಗಲ್ಯ ದೀಕ್ಷೆ ಪಟ್ಟ ಪ್ರಯೋಜನ ಔತಣ ಅನ್ನಕ್ಷೇತ್ರ ಅರವಟ್ಟಿಗೆ ದಾಸೋಹ ಪುರಾಣ

ಪುಸ್ತಕ ಮಾಡಿಸಬೇಕೆಂದು, ಗುರು ಲಿಂಗ ಜಂಗಮಕ್ಕಲ್ಲದೆ ನಿರಾಭಾರಿ ವೀರಶೈವಕ್ಕೆ ಹೊರಗಾಗಿ, ದುರಾಸೆ ಮುಂದುಗೊಂಡು ನಾನಾ ದೇಶವ ತಿರುಗಿ, ಹುಸಿಯ ಬೊಗಳಿ, ವ್ಯಾಪಾರದ ಮರೆಯಿಂದ ನಡು ಊರ ಬೀದಿ ನಡುವೆ ಕುಳಿತು ಪರರೊಡವೆಯ ಅಪಹರಿಸುತ, ಸೆಟ್ಟಿ ಮುಂತಾದ ಸಮಸ್ತ ಕಳ್ಳರ ಮಕ್ಕಳ ಕಾಡಿ ಬೇಡಿ, ಅವರು ಕೊಟ್ಟರೆ ಹೊಗಳಿ ಕೊಡದಿರ್ದಡೆ ಬೊಗಳಿ, ಆ ಭ್ರಷ್ಟ ಹೊಲೆಮಾದಿಗರು ಕೊಟ್ಟ ದ್ರವ್ಯಗಳ ಕೊಂಡು ಬಂದು ಚೋರರೊಯ್ದರೆಂದು ಮಠದೊಳಗೆ ಮಡಗಿಕೊಂಡು, ಇಂತಹ ದುರ್ಗುಣ ದುರಾಚಾರಿಗಳ ಶ್ರೀಗುರುಲಿಂಗಜಂಗಮವೆಂದು ಕರೆತಂದು ತೀರ್ಥ ಪ್ರಸಾದವ ತೆಗೆದು ಕೊಂಬವರಿಗೆ ಇಪ್ಪತ್ತೆಂಟುಕೋಟಿ ಯುಗ ಪರಿಯಂತರ ದಲ್ಲಿ ನರಕ ಕೊಂಡದಲ್ಲಿಕ್ಕುವ ಕಾಣಾ ನಮ್ಮ ಶರಣ ಕಲಿದೇವರ ದೇವ.

೬೦

ಜಂಗಮ ಘನವೆಂಬೆನೆ? ಬೇಡಿ ಕಿರಿದಾಯಿತ್ತು! ಲಿಂಗ ಘನ ವೆಂಬೆನೆ? ಕಲುಕುಟಿಗನ ಕೈಯಲ್ಲಿ ಮಾಡಿಸಿಕೊಂಡು ಕಿರಿದಾಯಿತ್ತು! ಭಕ್ತ ಘನವೆಂಬೆನೆ? ತನುಮನಧನದಲ್ಲಿ ವಂಚಕನಾಗಿ ಕಿರಿದಾದ. ಇಂತೀ ತ್ರಿವಿಧದಲ್ಲಿ ಪರಿಣಾಮವಿಲ್ಲ, ಪರಮಾರ್ಥವಿಲ್ಲ; ಘನವ ಬಲ್ಲವರಾರೋ ಗೊಹೇಶ್ವರ?

೬೧

ಬೇಡುವವ ಜಂಗಮವೆ? ಬೇಡಿಸಿಕೊಂಬುವವ ಸದ್ಭಕ್ತನೆ? ಈ ವರ್ಮವನರಿಯದ ಹಿರಿಯರು ನರಮಾಂಸಭಕ್ಷಕರಯ್ಯಾ. ತನುವೆತ್ತಿ ಮನ ಉಬ್ಬಿ ಮಾಡಿದೊಡೆ ಲಿಂಗಾರ್ಪಿತವಾಯಿತಯ್ಯ. ಮಾಡಿ ಮನವಿಲ್ಲ ದಿರ್ದೊಡೆ, ನೀಡಿ ನಿಜವಿಲ್ಲದಿರ್ದೊಡೆ, ಕೊಟ್ಟು ಕುದಿಗೊಂಡೊಡೆ, ಮಾಡಿ ನೀಡಿ ಕೊಟ್ಟು ಕೊಂಡುದು ಅನರ್ಪಿತವಾಯಿತ್ತು. ಮಾಡಿದಷ್ಟಿಷ್ಟೇನು ಇಲ್ಲದೆ ಅನರ್ಥವಾಗಿ ಹೋಗಿ ಮುಂದೆ ನರಕವಪ್ಪುದು ತಪ್ಪದಯ್ಯಾ. ಇದು ಕಾರಣ ಕೂಡಲಚೆನ್ನಸಂಗಮದೇವ, ಲಕ್ಷಕ್ಕಾದಡೂ ಒಬ್ಬ ಭಕ್ತನುಂಟು, ಕೋಟಿಗಾದಡೆಯು ಒಬ್ಬ ಜಂಗಮವಿಲ್ಲ.

೬೨

ಹೊತ್ತುಹೊತ್ತಿಗೆ ಲಿಂಗಪೂಜೆಯ ಮಾಡಿಯೂ, ಮತ್ತೆಯೂ ಸತ್ಯವಾವುದು, ನಿತ್ಯವಾವುದೆಂದರಿಯದೆ, ಕೆಟ್ಟರೆಲ್ಲ ಜಗವು. ಸತ್ಯವಾಗಿ ನುಡಿವ ಶರಣರ ಕಂಡರೆ, ಕತ್ತೆ ಮಾನವರೆತ್ತ ಬಲ್ಲರೋ? ಅಸತ್ಯವನೆ ನುಡಿದು, ಹುಸಿಯನೆ ಬೋಧಿಸುವ ಹಸುಕರ ಕಂಡರೆ, ಇತ್ತ ಬನ್ನಿ ಎಂಬರು. ಇಂತಪ್ಪ ಅನಿತ್ಯ ದೇಹಿಗಳ ಭಕ್ತರೆಂದು ಜಂಗಮವೆಂದು ನೋಡಿದರೆ, ನುಡಿಸಿದರೆ, ಮಾತನಾಡಿದರೆ, ನೀಡಿದರೆ, ಅಘೋರ ನರಕವೆಂದು ನಮ್ಮ ಆದ್ಯರ ವಚನ ಸಾರುತಿದೆ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೬೩

ಜಂಗಮಕ್ಕೆ ಅರಿವ ಮರೆದಾಗಲೆ ಅಪಮಾನ ಹೋಯಿತ್ತು. ಭಕ್ತಂಗೆ ಸತ್ಯ ಸದಾಚಾರವ ಬಿಟ್ಟಾಗಲೆ ಅಪಮಾನ ಹೋಯಿತ್ತು. ಈ ಅಪಮಾನವಲ್ಲದೆ ದ್ವಾದಶ ಮಲಭಾಂಡಕ್ಕೆ ಹೋರಿಯಾಡುವರಿಗೇಕೆ ಚಿತ್ತಶುದ್ಧಿ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೬೪

ಅರಸಿನ ಹೆಸರಿಟ್ಟನಾಮಿಕನಂತೆ, ನಾಮುಕ್ಕರುಹನಲ್ಲದೆ ಪಟ್ಟಕ್ಕರುಹನಲ್ಲ. ಅದೆಂತೆಂದೊಡೆ, ಲಿಂಗ ಜಂಗಮದ ಪ್ರಸಾದದನುಭಾವದ ಹೆಸರ ಹೇಳಿಕೊಂಡು ಬದುಕುವರಲ್ಲದೆ, ವೇಷವ ಧರಿಸಿಪ್ಪಾಸೆಯ ಲಾಂಛನಧಾರಿಗಳೆಲ್ಲರು ಸತ್ಯಸಂಬಂಧ ಸಜ್ಜನಗುಣಕ್ಕೆ ಯೋಗ್ಯರೇ? ಅಲ್ಲ. ಇದು ಕಾರಣ ಕೂಡಲ ಚೆನ್ನಸಂಗಯ್ಯ, ಸಹಜ ಸಜ್ಜನಸಂಬಂಧಿಗಳಲ್ಲದ ಭಕ್ತ ಮಹೇಶ್ವರರಂತಿರಲಿ.

೬೫

ಬಿರುಗಾಳಿ ಬೀಸಿ ಮರ ಮುರಿವಂತಹ ಸುಳಿಹ ಸುಳಿಯದೆ, ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು. ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ನಿಂದರೆ ನೆಟ್ಟನೆ ಭಕ್ತನಾಗಿ ನಿಲಬೇಕು. ಸುಳಿದು ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ ಉಭಯಭ್ರಷ್ಟರನೇನೆಂಬೆ ಗೊಹೇಶ್ವರ?

೮

ವಿಶ್ವೀ ಮಾನವ ನೀತಿ

೧. ಸತ್ಯ–ನಡೆಯಲ್ಲಿ ನುಡಿಯಲ್ಲಿ

೧

ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ, ಅಸತ್ಯದ ಮನೆಯಲ್ಲಿ ಶಿವನಿರ್ಪನೇ? ಇಲ್ಲಿಲ್ಲ ನೋಡಿರೋ! ಇದು ಕಾರಣ, ನಮ್ಮ ಅಖಂಡೇಶ್ವರಲಿಂಗವನೊಲಿಸಬೇಕಾದಡೆ ಸತ್ಯವನೆ ಸಾಧಿಸಬೇಕು ಕಾಣಿರೋ!

೨

ಸತ್ಯವಿಲ್ಲದವರೊಡನೆ ಸಹಸ್ರಕೊಮ್ಮೆ ನುಡಿಯಲಾಗದು; ಲಕ್ಷಕೊಮ್ಮೆ ನುಡಿಯಲಾಗದು; ಕೋಟಿಗೊಮ್ಮೆ ನುಡಿಯಲಾಗದು. ಸುಡಲ ವಂದಿರೊಡನೆ ಮಾರಿ ಹೋರಲಿ. ಗೊಹೇಶ್ವರ, ನಿಮ್ಮ ಶರಣರಲ್ಲದವರೊಡನೆ ಬಾಯಿದೆರೆಯಲಾಗದು.

೩

ದಿಟವ ನುಡಿವುದು, ನುಡಿದಂತೆ ನಡೆವುದು. ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವ.

೪

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ದ ಲಿಂಗವು ಘಟಸರ್ಪನಂತೆ! ನುಡಿಯಲು ಬಾರದು, ನಡೆಯಲು ಬಾರದು. ಲಿಂಗದೇವನೆ ದಿವ್ಯವೊ ಅಯ್ಯಾ! ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ, ಕಡೆದಾಂಟದು ಕಾಣಾ ಕೂಡಲಸಂಗಮದೇವಾ.

೫

ಕ್ರೀಯಲ್ಲಿ ಬಲ್ಲಿದರು, ಜ್ಞಾನದಲ್ಲಿ ಸಂಪನ್ನರು ಎಂದು ಹೇಳಲೇತಕೊ? ನಡೆನುಡಿಯಲ್ಲಿ ಕಾಣಬಹುದು. ನಡೆನುಡಿ ಶುದ್ಧವಿಲ್ಲದವರಲ್ಲಿ ಇರಲೊಲ್ಲ ನೋಡಾ ನಮ್ಮ ಅಖಂಡೇಶ್ವರ.

೬

ಎನ್ನ ನಡೆಯೊಂದು ಪರಿ. ಎನ್ನ ನುಡಿಯೊಂದು ಪರಿ. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆಯ ಕಂಡೊಡೆ, ಕೂಡಲ ಸಂಗಮದೇವನೊಳಗಿರ್ಪನಯ್ಯಾ.

೭

ತೊಡೆಯಲ್ಲಿ ಮುದ್ರೆಯನೊತ್ತಿದಡೇನೋ, ಅದು ನಡೆಯಲ್ಲಿ ಶುಚಿಯಾಗಬಲ್ಲದೇ? ಮಡಿಲಲ್ಲಿ ಲಿಂಗವ ಕಟ್ಟಿದೊಡೇನೋ, ಲೋಕದ ಅಜ್ಞಾನಿತನ ಬಿಡುವುದೇ? ನಡೆ ನುಡಿ ಸತ್ಯ ಸದಾಚಾರಿಗಳು ಎಡೆಯೆಡೆಗೊಬ್ಬರು ಕಾಣಾ ರಾಮನಾಥಾ.

೮

ಸಟೆ ದಿಟವೆಂಬುವೆರಡುವಿಡಿದು ನಡೆವುದೀ ಲೋಕವೆಲ್ಲವು. ಸಟೆ ದಿಟವೆಂಬುವೆರಡುವಿಡಿದು ನಡೆವ ಲೋಕದೊಡನೆ ಶರಣನು ಗುರು ಲಿಂಗ ಜಂಗಮದಲ್ಲಿ ಸಟೆಯ ಬಳಸಿದೊಡೆ, ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ, ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ. ಹುಸಿ ಎಂಬುದೇ ಹೊಲೆ. ಶಿವಭಕ್ತಂಗೆ ಹುಸಿ ಎಂಬುದುಂಟೆ ಅಯ್ಯಾ? ಹುಸಿಯನಾಡಿ ಲಿಂಗವ ಪೂಜಿಸಿದೊಡೆ, ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ ಚೆನ್ನಮಲ್ಲಿಕಾರ್ಜುನಾ.

೯

ಹೆಣನ ಕಂಡರೆ, ನಾಯಿ ಕಚ್ಚಿದಲ್ಲದೆ ಮಾಣ್ಬುದೇ? ಹಣವ ಕಂಡರೆ, ಮನ ಕರಗಿದಲ್ಲದೆ ಮಾಣ್ಬುದೇ? ಬಿಸಿಯ ಕಂಡರೆ, ಬೆಣ್ಣೆ ಕರಗಿದಲ್ಲದೆ ಮಾಣ್ಬುದೇ? ಹುಸಿಯ ಕಂಡರೆ ಲೋಕ ಮೆಚ್ಚುವದು, ನಚ್ಚುವದು ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೧೦

ಹುಸಿಯಂಕುರಿಸಿತ್ತು ಹೊಲೆಯನಲ್ಲಿ. ಹುಸಿ ಎರಡೆಲೆಯಾಯಿತ್ತು ಮಾದಿಗನಲ್ಲಿ. ಹುಸಿ ನಾಲ್ಕೆಲೆಯಾಯಿತ್ತು ಸಮ್ಮಗಾರನಲ್ಲಿ. ಹುಸಿ ಆರೆಲೆ

ಯಾಯಿತ್ತು ಅಸಗನಲ್ಲಿ. ಹುಸಿ ಎಂಟಿಲೆಯಾಯಿತ್ತು ವ್ಯವಹಾರಿಯಲ್ಲಿ. ಹುಸಿ ಸಸಿಯಾಯಿತ್ತು ಹಾದರಿಗನಲ್ಲಿ. ಹುಸಿ ಗಿಡವಾಯಿತ್ತು ಮದ್ಯಪಾನಿಯಲ್ಲಿ. ಹುಸಿ ಮರನಾಯಿತ್ತು ಜೂಜುಗಾರನಲ್ಲಿ. ಹುಸಿ ಹೂವಾಯಿತ್ತು ಡೊಂಬನಲ್ಲಿ. ಹುಸಿ ಕಾಯಾಯಿತ್ತು ಅಕ್ಕಸಾಲಿಗನಲ್ಲಿ. ಹುಸಿ ಹಣ್ಣಾಯಿತ್ತು ಸೂಳೆಯಲ್ಲಿ. ಹುಸಿ ಹಣ್ಣಾಗಿ ತೊಟ್ಟು ಬಿಟ್ಟಿತ್ತು ಅರಸನಲ್ಲಿ. ಇಂತೀ ಹುಸಿಯ ನುಡಿವವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕಪ್ರಸಾದ ವಿಲ್ಲವಾಗಿ, ಅವರಿಗೆ ಮೋಕ್ಷವಿಲ್ಲಾದ ಕಾರಣ, ನಮ್ಮ ಕೂಡಲಚೆನ್ನ ಸಂಗಯ್ಯನ ಶರಣರು ಹುಸಿಯು ಬಿಟ್ಟು ಕಳೆದು ನಿಜಲಿಂಗೈಕ್ಯರಾದರು.

೧೧

ದೇವಾ, ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ, ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವ ಕಂಡೆ. ಆ ಮಾನವಜನ್ಮಕ್ಕೆ ಲಿಂಗ ಬಂದುದ ಕಂಡೆ. ಎನಗಿದು ಚೋದ್ಯವಯ್ಯಾ ! ಎನಗಿದು ವಿಪರೀತವಯ್ಯಾ ! ಇದಕ್ಕೆ ನುಡಿದಂತೆ ನಡೆಸು, ನಡೆದಂತೆ ನುಡಿಸು. ನುಡಿನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು. ನಿಮ್ಮ ಶರಣರೊಪ್ಪದಲ್ಲಿಯೇ ನೀನೊಪ್ಪೆ. ನೀನೊಪ್ಪದಲ್ಲಿಯೇ ಎನಗೆ ಬಂದಿತ್ತು ಹಿಂದಣ ಭವದ ಹೆಮ್ಮಾರಿ. ಅದಕ್ಕೆ ನಾನಂಜುವೆನಯ್ಯಾ ; ನಾನಳುಕುವೆನಯ್ಯಾ. ನುಡಿನಡೆ ಎರಡಾಗದಂತೆ ನಡೆಸಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೧೨

ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆನುಡಿ ಎರಡನು ಪರಿಪೂರ್ಣ ತುಂಬಿ, ಲಿಂಗವ ಕೂಡಬಲ್ಲಾತನೇ ಶರಣ ನೋಡಾ ಅಖಂಡೇಶ್ವರಾ.

೨. ಅಹಿಂಸೆ ದಯೆ ಧರ್ಮದ ಮೂಲ

೧೩

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಮರುಗುವಂತೆ ಅವಕೇಕೆ ಮರುಗನು? ಅದೆಂತೆಂದೊಡೆ: 'ಸ್ವಾತ್ಮನಾವಿತರಂಚೈವ ದೃಷ್ಟ್ವಾಪ್ಯ ನಿತ್ಯಾಧಿಭಿನ್ನತೇ| ಸರ್ವಂ ಚಿಜ್ಜ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ||' ಎಂದುದಾಗಿ ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ. ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿದ್ದು ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?

೧೪

ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ, ಗೋರಿಗೊಳಿಸಿ ಕುರಿಯ ಕೊರಳನೆ ಕೊಯಿದುಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೆ? ಆರಯ್ಯದೆ ಅವರ ಮನೆಯಲುಂಡ ಭಕ್ತನು ಅಘೋರನರಕಕ್ಕಿಳಿವ ಕಾಣಾ ರಾಮನಾಥಾ.

೧೫

ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು—ಕೊಂದಹರೆಂಬುದನರಿಯದೆ, ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ! ಅದಂದೇ ಹುಟ್ಟಿತ್ತು, ಅದಂದೇ ಹೊಂದಿತ್ತು; ಕೊಂದವರುಳಿದರೆ ಕೂಡಲಸಂಗಮದೇವಾ?

೧೬

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೇ, ಅಳು ಕಂಡಾ! ವೇದವನೋದಿದವರ ಮುಂದೆ ಅಳು ಕಂಡಾ! ಶಾಸ್ತ್ರವ ಕೇಳ

ದವರ ಮುಂದೆ ಆಳು ಕಂಡಾ!! ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.

೧೭

ಇರಿವುದು ಕಡಿವುದು ಕೊಲುವುದು ಮಲದೇಹಿಗಳಿಗಲ್ಲದೆ ನಿರ್ಮಲ ದೇಹಿಗಳಿಗುಂಟೆ? ಸಮಯ ಸಮುದ್ರದಂತಿರಬೇಕು. ತಪ್ಪನರಸಿ ಶಿಕ್ಷಿಸುವನ್ನಬರ ನರಭೂತಕುಲಕ್ಕೆ ಪರಶಿವ ರೂಪುಂಟೆ? ಆ ಹರವರಿಯ ನುಡಿದಡೆನಗೇನು? ಚಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೧೮

ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟದಂತಿಪ್ಪವೆ? ವಿವರಿಸಿ ನೋಡಿದಡೆ ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೆ? ಕಷ್ಟರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳನಟ್ಟಿ ಹಿಡಿದು ಕೊಂದರೆ, ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ? ಒಡೆಯರಿಲ್ಲೆಂದು ಹಲವು ಪ್ರಾಣಿಗಳ ಹರಿಹರಿದು ಕೊಂದರೆ, ಹರನಿಕ್ಕದಿಪ್ಪನೇ ಅಘೋರ ನರಕದಲ್ಲಿ? ಸಕಲ ಪ್ರಾಣಿಗಳಿಗೆ ಮೇಲಾರೈಕೆ ನಮ್ಮ ಸಕಳೇಶ್ವರನಲ್ಲದೆ ಮತ್ತೊಬ್ಬರುಂಟೆ?

೧೯

ಅರಿದರಿದು! ಸಮಗಾಣಿಸಬಾರದು. ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದರೆ ಈಶ್ವರನೊಡೆಯಿಕ್ಕದೆ ಮಾಣುವನೆ? ಪಾತ್ರ ಅಪಾತ್ರವೆಂದು ಕಂಡರೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮವ ಸರಿಯೆಂದು ಕಂಡರೆ ಸಮವೇದಿಸದಿಪ್ಪನೆ ಶಿವನು? ತನ್ನ ಮನದಲ್ಲಿ "ಯತ್ರ ಜೀವಸ್ತತ್ರ ಶಿವ"ನೆಂದು ಸರ್ವಜೀವದಯಾಪಾರಿಯಾದಲ್ಲಿ ಕೂಡಲಸಂಗಮದೇವನು ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ?

೨೦

ನಾನೊಂದು ಸುರಿಗೆಯನೇನೆಂದು ಹಿಡಿದೆನು? ಏನು ಕಿತ್ತೇನ ನಿರಿವೆನು? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥಾ.

೨೧

ಒಂದಾಗಿಹವೈದು ಭೂತ. ಚಂದ್ರಸೂರ್ಯರು, ನಂದಿವಾಹನ, ನಿಮ್ಮ ತನುವಲ್ಲವೇ ? ನಿಂದು ನೋಡಲು ಜಗಭರಿತನಾಗಿಪ್ಪೆ. ಇನ್ನು ನೋಯಿಸುವೆ ನಾರನಯ್ಯ ರಾಮನಾಥಾ ?

೨೨

ದಯವಿಲ್ಲದ ಧರ್ಮವದೇವುದಯ್ಯಾ ? ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ. ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

೨೩

ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯಾ? ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲವಲ್ಲವೇ ಚರಾಚರವೆಲ್ಲಾ? ಅದು ಕಾರಣ, ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು.

೨೪

ಜೀವ ತಪ್ಪಿಸಿ ಜೀವಿಸಬಾರದಾರಿಗೆಯೂ 'ಅಹಿಂಸಾ ಪರಮೋ ಧರ್ಮಃ' ಎಂಬ ಶ್ರಾವಕರ ನಾನಾರನೂ ಕಾಣೆ. ಪೃಥ್ವೀ ಬೀಜಂ ತಥಾ ಮಾಂಸಂ ಅಪ್‌ದ್ರವ್ಯಂ ಸುರಾಮಯಂ | ಆತ್ಮಾ ಜೀವಸಮಾಯುಕ್ತಂ ಜೀವಂ ಜೀವೇನ ಭಕ್ಷಯೇತ್ || ಇಂತೆಂದುದಾಗಿ, ಲಿಂಗಾರ್ಪಿತ ಶುದ್ಧ; ಮಿಕ್ಕುದು ಜೀವಮಯ ಗೊಹೇಶ್ವರಾ.

೩. ಮೃದು ವಚನ-ವಿನಯ

೨೫

ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ. ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ ಹತ್ತಿಪ್ಪೆ ಕಾಣಾ ರಾಮನಾಥಾ.

೨೬

"ಏನಿ ಬಂದಿರಿ ಹದುಳವಿದ್ದಿರೆ?" ಎಂದರೆ ನಿಮ್ಮ ವೈಸಿರಿ ಹಾರಿ ಹೋಹುದೆ? "ಕುಳ್ಳಿರೆಂ"ದರೆ ನೆಲ ಕುಳಿಹೋಹುದೆ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ, ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು?

೨೭

ಪುಣ್ಯ ಪಾಪವೆಂಬುವು ತಮ್ಮಿಷ್ಟ ಕಂಡಿರೇ. 'ಅಯ್ಯಾ' ಎಂದಡೆ ಸ್ವರ್ಗ, 'ಎಲವೋ' ಎಂದಡೆ ನರಕ! "ದೇವಾ, ಭಕ್ತ ಜಯಾ ಜೀಯಾ" ಎಂಬ ನುಡಿಯೊಳಗೆ ಕೈಲಾಸವಿದ್ದುದೇ, ಕೂಡಲಸಂಗಮದೇವಾ.

೨೮

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ. ಮೃದುವಚನವೇ ಸಕಲ ಜಪಂಗಳಯ್ಯಾ, ಮೃದುವಚನವೇ ಸಕಲ ತಪಂಗಳಯ್ಯಾ, ಸದುವಿನಯವೇ ಸದಾಶಿವನೊಲುಮೆಯಯ್ಯಾ ; ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

೨೯

ಕುಲಸ್ವಾಮಿ ನಿಮ್ಮುವನರಿವುದ ಕಂಡಡೆ ತಲೆವಾಗುವೆ, ಕಾತ ಕಳವೆಯಂತೆ. ಕುಲಜ ನಾನೆಂದು ತಲೆವಾಗದಿದ್ದಡೆ, ತಲೆ ಶೂಲದ ತಲೆಯಯ್ಯಾ ರಾಮನಾಥಾ.

೩೦

ಎನಗೆ ನಾನೇ ಹಗೆ ನೋಡಯ್ಯ, ಎನಗೆ ನಾನೇ ಕೆಳೆ ನೋಡಯ್ಯಾ! ನಿಮ್ಮ ಸದ್‌ಭಕ್ತರೊಡನೆ ವಿರೋಧ ಮಾಡಿದೊಡೆ ಎನ್ನ ಕೊಲುವುದಾಗಿ, ನಿಮ್ಮ ಪುರಾತನರಿಗಂಜಿ ಬೆಸಗೊಂಡೊಡೆ ಎನ್ನ ಕಾಯ್ವುದಾಗಿ, ಅನ್ಯ ಹಗೆ ಎಲ್ಲಿ? ಕೆಳೆಯಲ್ಲಿ? ಬಾಗಿದ ತಲೆಯ, ಮುಗಿದ ಕೈಯಾಗಿರಿಸು ಕೂಡಲ ಸಂಗಮದೇವಾ.

೪. ಅರಿಷಡ್ವರ್ಗ

೩೧

ನೋಡಲಾಗದು ನುಡಿಸಲಾಗದು ಪರಸ್ತ್ರೀಯ. ಬೇಡ ಕಾಣಿರೋ! ತಗರ ಬೆನ್ನಲಿ ಹರಿವ ಸೊಣಗನಂತೆ, ಬೇಡ ಕಾಣಿರೋ! ಒಂದಾಶೆಗೆ ಸಾಸಿರ ವರುಷ ನರಕದೊಳದ್ದುವ ಕೂಡಲಸಂಗಮದೇವ.

೩೨

ಅಡಗ ತಿಂಬರು ಕಣಕದಡಿಗೆ ಇರಲ್ಕೆ. ಸುರೆಯ ಕುಡಿವರು ಹಾಲಿರಲ್ಕೆ. ಮುಕ್ಕುವರು ಭಂಗಿಯ ಸಕ್ಕರೆ ಇರಲ್ಕೆ. ಸ್ವಸ್ತ್ರೀ ಇದ್ದಂತೆ ಪರಸ್ತ್ರೀಯರಿಗೆ ಅಳುಪುವರು. ಸತ್ತ ನಾಯ ಭಕ್ಷಿಸುವ ಹಡಕಿಗರನೇನೆಂಬೆನಯ್ಯಾ ರಾಮನಾಥಾ ?

೩೩

ಗಂಡನುಳ್ಳವ್ಮನ ಗೌರಿ ಎಂದು ಕಂಡಡೆ, ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತನು. ಗಂಡನುಳ್ಳವ್ಮನ ಒಡವೆರೆದಾತ ನರಕದಲ್ಲಿ ದಿಂಡುಗೆಡೆದಿಪ್ಪನೈ ರಾಮನಾಥಾ ?

೩೪

ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದರೆ, ಅವರರಸಿಯು ಪಾರ್ವತಿಯ ಸರಿ ಎಂದು ಕಾಣಲುಬೇಕು. ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ ಮಾತನಾಡುವ ನರಕಿಗಳನೇನೆಂಬೆ ರಾಮನಾಥಾ ?

೩೫

ಮೊಲೆ ಮುಡಿ ಮುದ್ದು ಮುಖದ, ಅಸಿಯ ನಡುವಿನವಳ ಕಂಡಡೆ, ನಾನು ಮನದೊಳಗಳುಪದಿಪ್ಪೆನೆ ಅಯ್ಯ? ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ? ಸಕಳೇಶ್ವರದೇವನೇನರ್ಧನಾರಿಯಲ್ಲವೆ ?

೩೬

ಬ್ರಹ್ಮದ ಮಾತನಾಡಿ ಕನ್ನೆಯರ ಕಾಲ ದೆಸೆಯಲ್ಲಿ ಕುಳಿತಲ್ಲಿ, ಪರ ಬೊಮ್ಮದ ಮಾತು ಅಲ್ಲಿ ನಿಂದಿತ್ತೆಂದನಂಬಿಗ ಚೌಡಯ್ಯ.

೩೭

ಈಶನ ಶರಣರು ವೇಶಿಯ ಹೋದರೆ, ಮೀಸಲೋಗರವ ಹೊರಗಿರಿಸಿದಡೆ, ಹಂದಿ ಮೂಸಿ ನೋಡಿದಂತೆ ಕಾಣಾ ರಾಮನಾಥಾ.

೩೮

ವೇಶಿಯ ಎಂಜಲ ತಿಂದು, ಈಶ್ವರ ಪ್ರಸಾದವ ಭುಂಜಿಸಿದೊಡೆ ಓಸರಿಸಿತ್ತಯ್ಯ ಲಿಂಗವು. ಆತ ದ್ರೋಹಿ, ಭಾಷೆ ತಪ್ಪುಕನವನು, ಭವದಲ್ಲಿ ಬಳಲುವನು. ಅಂತಹನ ಕಂಡು ಹೇಸಿ ಕಡೆಗೆ ತೊಲಗಿದೆನು ಕಾಣಾ ರಾಮನಾಥಾ.

೩೯

ಶಿವ ಪೂಜೆ ಎತ್ತ ? ವಿಷಯದ ಸವಿ ಎತ್ತ ? ಆ ವಿಷಯದ ಸವಿ ತಲೆಗೇರಿ, ಶಿವಪೂಜೆಯ ಬಿಟ್ಟು ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳ ನೇನೆಂಬೆನೈ ರಾಮನಾಥಾ ?

೪೦

ದಾಸಿಯರ ಸಂಗ, ಕಸ ನೀರು ಹೊರಿಸಿತ್ತು. ವೇಶಿಯರ ಸಂಗ ಎಂಜಲವ ತಿನಿಸಿತ್ತು. ಪರಸ್ತ್ರೀಯರ ಸಂಗ ಪಂಚ ಮಹಾಪಾತಕವ ತಂದಿತ್ತು. ಈ ತ್ರಿವಿಧವುನಾಸ್ತಿಯಾದಲ್ಲದೆ ಭಕ್ತನಲ್ಲ. ಭಕ್ತಿ ಇಲ್ಲದೆ ಮುಕ್ತಿಗೆ ಸಲ್ಲ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೪೧

ದಾಸಿಯ ಸಂಗ ಎರಡನೆಯ ಪಾತಕ. ವೇಶಿಯ ಸಂಗ ಮೂರನೆಯ ಪಾತಕ. ಮೀಸಲಳಿದ ಪರಸ್ತ್ರೀಯರ ಸಂಗ ಪಂಚ ಮಹಾಪಾತಕ. ಇನಿಸು

ಶಿವಭಕ್ತರಿಗೆ ಸಲ್ಲವು. ಇವನರಿದರಿದು ಮಾಡಿದನಾದರೆ ಯಮಪಟ್ಟಣವೆ ವಾಸವಾಗಿಪ್ಪರಲ್ಲದೆ, ಈ ದೇಶಕ್ಕೆ ಮರಳಿ ಬರಲಿಲ್ಲ ನೋಡಾ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೪೨

ಅಮರಾವತಿಯ ಪಟ್ಟಣದೊಳಗೆ ದೇವೇಂದ್ರನಾಳುವ ನಂದನವಯ್ಯ. ಅತ್ತ ಸಾರೆಲೆ ಕಾಮ, ಮೋಹವೆ ನಿನಗೆ? ಲೋಕಾದಿ ಲೋಕವನೆಲ್ಲವ ಮರುಳು ಮಾಡಿದೆ ಕಾಮ. ಗೊಹೇಶ್ವರಲಿಂಗವನರಿ ಭೋ.

೪೩

ಎಲ್ಲಿ ನೋಡಿದಡಲ್ಲಿ ಮನವೆಳಸಿದರೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ಪರವಧುವನು ಮಹಾದೇವಿಯೆಂಬೆ ಕೂಡಲಸಂಗಮ ದೇವಾ.

೪೪

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ ? ತನಗಾದ ಆಗೇನು? ಅವರಿಗಾದ ಚೇಗೇನು ? ತನುವಿನ ಕೋಪ ತನ್ನ ಹಿರಿಯತನದ ಕೇಡು! ಮನದ ಕೋಪ ತನ್ನರುಹಿನ ಕೇಡು! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲಸಂಗಮದೇವಾ!

೪೫

ಕಾಣದ ಠಾವಿನಲಿ ಜರಿದರೆಂದರೆ, ಕೇಳಿ ಪರಿಣಾಮಿಸಬೇಕು. ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ! ಎನ್ನ ಮನದ ತದ್ದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೪೬

ಹೊಯಿದವರೆನ್ನ ಹೊರೆದವರೆಂಬೆನು; ಬಯಿದವರೆನ್ನ ಬಂಧುಗಳೆಂಬೆನು. ನಿಂದಿಸಿದವರೆನ್ನ ತಾಯಿತಂದೆಗಳೆಂಬೆ; ಆಳಿಗೊಂಡವರೆನ್ನ ಆಳ್ದರೆಂಬೆ.

ಜರಿದವರೆನ್ನ ಜನ್ಮಬಂಧುಗಳೆಂಬೆ; ಕೊಂಡಾಡಿದವರೆನ್ನ ಹೊನ್ನ ಶೂಲದಲ್ಲಿಕ್ಕಿದವರು ಕೂಡಲಸಂಗಮದೇವಾ.

೪೭

ಎಡದ ಕಾಲಲೊದ್ದರೆ ಬಲದ ಕಾಲ ಹಿಡಿವುದು. ಬಲದ ಕಾಲಲೊದ್ದರೆ ಎಡದ ಕಾಲ ಹಿಡಿವುದು. ತ್ರಾಹಿ ತ್ರಾಹಿ ತಪ್ಪೆನ್ನದೆಂದು ಗೊಹೇಶ್ವರನ ಶರಣರನೊಡಗೊಂಡು ಬಾರೈ ಸಂಗನ ಬಸವಣ್ಣ.

೪೮

ಎಡದ ಪಾದದಲೊದ್ದರೆ ಬಲದ ಪಾದವ ಹಿಡಿವೆ; ಬಲದ ಪಾದದಲೊದ್ದರೆ ಎಡದ ಪಾದವ ಹಿಡಿವೆ! ತ್ರಾಹಿ, ತ್ರಾಹಿ; ತಪ್ಪೆನ್ನದು, ಕ್ಷಮೆ ನಿಮ್ಮದು! ಕೂಡಲಸಂಗಮದೇವಾ, ನಿಮ್ಮ ಕರುಣದ ಕಂದ ನಾನು!

೪೯

ಕಾಂಚನವೆಂಬ ನಾಯ ನಚ್ಚಿ, ನಿಮ್ಮ ನಾನು ಮರೆದೆನಯ್ಯಾ! ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆಯಿಲ್ಲಾ! ಹಡಿಕೆಗೆ ಮೆಚ್ಚಿದ ಸೊಣಗ ಅಮೃತದ ಸವಿಯ ಬಲ್ಲುದೆ ಕೂಡಲಸಂಗಮದೇವಾ?

೫೦

ಎಲವದ ಮರ ಹೂತು ಫಲವಾದ ತೆರನಂತೆ, ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ? ಫಲವಾದರೇನು ಹಾವುಮೆಕ್ಕೆಯ ಕಾಯಿ? ಕುಲವಿಲ್ಲದ ರೂಹು ಎಲ್ಲಿದ್ದರೇನು? ಬಚ್ಚಲ ನೀರು ತಿಳಿದಲ್ಲಿ ಫಲವೇನು? ಅವಗುಣಿಗಳ ಮೆಚ್ಚ ಕೂಡಲಸಂಗಮದೇವ.

೫೧

ಗರ ಹೊಡೆದಂತೆ ಬೆರೆತುಕೊಂಡಿಪ್ಪರು, ಮರನನೇರಿ ಬಿದ್ದಂತೆ ಹಮ್ಮದಂಬೋಗಿಪ್ಪರು, ಉರಗನ ವಿಷವಾವರಿಸಿದಂತೆ, ನಾಲಗೆ ಹೊರಳದಂತೆ, ಕಂಗಾಣದಂತೆ, ನಿಮ್ಮ ಕರುಣವೆ ಕರ ಚೆಲುವ ಸಕಳೇಶ್ವರಯ್ಯ,—ಸೊಕ್ಕಿನವನ ಪರಿ ಬೇರೆ ತಂದೆ.

೫೨

ಹಾವು ತಿಂದವರ ನುಡಿಸಬಹುದು; ಗರ ಹೊಡೆದವರ ನುಡಿಸಬಹುದು. ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ! ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರು ಕೂಡಲಸಂಗಮದೇವಾ.

೫೩

ಆದಿಮಧ್ಯಾವಸಾನದಲ್ಲಿ ಎನ್ನನಾಸೆಯೇ ಅವಗ್ರಹಿಸುತ್ತಿದೆ. ಶಿವಶಿವಾ, ಆಸೆಯಿಂದವೆ ಗಾಸಿಯಾಗುತ್ತಿದೇನೆ. ಶಿವಶಿವಾ, ಈ ಆಸೆಯ ಕೆಡಿಸಿ ನಿಮ್ಮ ಶ್ರೀಪಾದದಾಸೆಯೇ ನಿವಾಸವಾಗಿರಿಸಯ್ಯಾ ಎನ್ನನುರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೫೪

ಆಶೆಯುಳ್ಳನ್ನಕ್ಕ ಒಬ್ಬರ ಆಶ್ರಯಿಸುವ ಆಶ್ರಯದಾಶೆ ಕರಕಷ್ಟ ಕಾಣಿರೋ ಅಯ್ಯ. ಆಸೆಯೇ ದಾಸ ಕಾಣಿರೋ, ನಿರಾಸೆಯೇ ಈಶ ಕಾಣಿರಣ್ಣ! ದಾಸತ್ವದ ಈಶತ್ವದ ಅನುವ ವಿಚಾರಿಸಿ, ಆಶೆಯುಡಗಿದರೆ ಅದೇ ಈಶಪದವು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೫೫

ತನ್ನವರನ್ಯರಹರು ಹೆಣ್ಣು ಹೊನ್ನು ಮಣ್ಣು ಹಿಡಿದು. ಹೊರತಾಗಿ ಆ ಮೂರ ಬಿಟ್ಟಡೆ ಅನ್ಯರು ತನ್ನವರಹರು. ಅರಿದವಂಗೂ ಸರಿ, ಜಗದ ಒಡಲಾದವಂಗೂ ಸರಿ. ಆಸೆ ಒಂದೇ ಭೇದ. ಉಭಯಕ್ಕೆ ಹೊರಗಾಗು,— ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೫೬

ಆಶೆಯುಳ್ಳಾತ ಒಬ್ಬರಧೀನದಲ್ಲಿಪ್ಪನು. ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ ಅಂಬಿಗರ ಚೌಡಯ್ಯ.

೫೭

ಬ್ರಹ್ಮ ವಿಷ್ಣು ಮೊದಲಾದ ದೇವದಾನವಮಾನವರೆಲ್ಲರ ಆಶೆಯೆ ಘಾಸಿಮಾಡಿ ಕಾಡಿತ್ತು. ಮಹತ್ವ ತಪ ವ್ರತ ನಿಯಮವುಳ್ಳ ಗುರುತ್ವವುಳ್ಳವರುಗಳ ತಪ ವ್ರತ ನಿಯಮ ಮಹತ್ವ ಗುರುತ್ವಂಗಳ ಕೆಡಿಸಿ, ಲಘು ಮಾಡಿ, ನಗೆಗೆಡೆಮಾಡಿತ್ತು. ಇಂತಪ್ಪ ಸಾಮರ್ಥ್ಯಪುರುಷರ ಘಾಸಿಮಾಡಿ ಸೋಲಿಸಿ, ತಾ ಗೆಲುವ ಸಾಮರ್ಥ್ಯವುಳ್ಳ ಆಶೆ ಇದೇನೋ ಎಂದು ವಿಚಾರಿಸಲು, ಈಯಾಶೆ ಶಿವಸಂಬಂಧಿಯಾದ ಇಚ್ಛಾಶಕ್ತಿ. ಶಿವನೊಪ್ಪದವರನ್ನು ಶಿವನಾಜ್ಞೆಯಿಂದ ಈಯಾಸೆ ಎಂಬ ವಿಧಿ ಕಾಡಿ ತಿಂಬುದು. ಈಯಾಸೆ ಎಂಬ ವಿಧಿ ಶಿವನೊಲಿದವರನು ಹೊದ್ದಲಮ್ಮದಾಗಿ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಶರಣರು ನಿರಾಶಾಸಂಪನ್ನರು.

೫೮

ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ! ಎನ್ನ ಹೊಗಳತೆ ಎನ್ನನಿಮ್ಮೆಯ್ದೊಂಡಿತ್ತಲ್ಲಾ! ಅಯ್ಯಾ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ! ಅಯ್ಯೋ ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ ಧರ್ಮೀ!

೫. ಪರೋಪಕಾರಾದಿ ಸಕಲನೀತಿ

೫೯

ಪರಪುರುಷಾರ್ಥವನರಿಯದೆ ಕೆಟ್ಟ ನರಗುರಿಗಳು ನೀವು ಕೇಳಿರೋ. ಪರಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು. ಮರಳಿ ಕೊಟ್ಟದ್ದಕ್ಕೆ ಕೀರ್ತಿದೇಹವ ಪಡೆದವರ ಪರಿಯ ಕೇಳು ಎಲೆ ಮನವೇ. ಪರಪುರುಷಾರ್ಥಿಯಾದರೆ, ವೀರ ವಿಕ್ರಮನಂತಾಗಬೇಕು. ಪರಪುರುಷಾರ್ಥಿಯಾದರೆ ಬಸವಕುಮಾರನಂತಾಗಬೇಕು. ಪರಪುರುಷಾರ್ಥಿಯಾದರೆ ಕಪೋತಪಕ್ಷಿ

ಯಂತಾಗಬೇಕು. ಇಂತೀ ಪರಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು. ಹಣವೇನು ದೊಡ್ಡಿತ್ತು ? ಹೆಣ್ಣೇನು ದೊಡ್ಡಿತ್ತು ? ಮಣ್ಣೇನು ದೊಡ್ಡಿತ್ತು ? ಅನ್ನವೇನು ದೊಡ್ಡಿತ್ತು ? ಇಂತಿವುಗಳೊಳು ಒಂದನಾದರು ಪರಪುರುಷಾರ್ಥಕ್ಕೆ ನೀಡದೆ ಮಾಡದೆ, ತನ್ನ ಶರೀರವ ಹೊರೆದುಕೊಂಡು ಒದುಕುವೆನೆಂಬ ಹೊಲೆಮಾದಿಗರುಗಳಿಗೆ ಇಹ ಪರ ನಾಸ್ತಿ ಎಂದಾತ ನಮ್ಮ ಅಂಬಿಗರ ಚೌಡಯ್ಯ.

೬೦

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್‌ಪಾತ್ರಕ್ಕೆ ಸಲ್ಲದಯ್ಯ! ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ ! ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯಾ !

೬೧

ಅಂಗವ ಅಂದ ಮಾಡಿಕೊಂಡು ತಿರುಗುವ ಭಂಗಗೇಡಿಗಳು ನೀವು ಕೇಳಿರೋ. ಅಂಗಕ್ಕೆ ಅಂದವಾವುದೇನೆಂದರೆ, ಗುರುವಿಗೆ ತನುವ ಕೊಟ್ಟಿರುವದೇ ಚಂದ, ಲಿಂಗಕ್ಕೆ ಮನವ ಕೊಟ್ಟಿರುವದೇ ಚಂದ, ಜಂಗಮಕ್ಕೆ ಧನವ ಕೊಟ್ಟಿರುವದೇ ಚಂದ. ಅಷ್ಟಾವರಣದಲ್ಲಿ ನಿಬ್ಬೆರಗಿನಿಂದೆ ಕೂಡಿ, ಭಕ್ತಿ ಎಂಬ ಸಮುದ್ರದಲ್ಲಿ ಈಸಾಡುವದೇ ಚಂದ. ಶಿವನ ಪಾದವ ಹೊಂದುವುದೆ ಚಂದ. ಈ ಮಾರ್ಗವ ಬಿಟ್ಟು ಸಂಸಾರವೆ ಅಧಿಕವೆಂದು ತನ್ನ ಹೆಂಡಿರು ಮಕ್ಕಳು ಸಂಪತ್ತು ಇವು ನನಗೆ ಶಾಶ್ವತವೆಂದು ತಿಳಿದು, ಒಂದು ಕಾಸನಾದರು ಪರರಿಗೆ ಕೊಡದೆ ತಾವೆ ತಿಂದು, ನೆಲದಲ್ಲಿ ಮಡಗಿ, ಕಡೆಗೆ ಯಮನ ಕೆಯ್ಯಲ್ಲಿ ಸಿಲ್ಕಿ ನರಕ ಕೊಂಡದಲ್ಲಿ ಮುಳುಗೇಳುವುದೇ ನಿಶ್ಚಯ. ಇಂತಹ ಅಂದಗೇಡಿಗಳ ಮುಖವ ನೋಡಲಾಗದು ಎಂದಾತ ಅಂಬಿಗರ ಚೌಡಯ್ಯ ನಿಜಶರಣನು.

೬೨

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ! ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ ! ಆರಡದಿರಿಂ ಭೋ, ನಿಮ್ಮ ಧರ್ಮ! ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ! ಕೂಡಲಸಂಗಮದೇವ ಏಕೋಭಾವ.

೬೩

ಉಂಡರೆ ಭೂತನೆಂಬರು, ಉಣದಿರ್ದಡೆ ಚಕೋರಿ ಎಂಬರು. ಊರೊಳಗಿರ್ದಡೆ ಸಂಸಾರಿ ಎಂಬರು, ಅಡವಿಯೊಳಗಿರ್ದಡೆ ಮರ್ಕಟನೆಂಬರು. ಮಾತನಾಡಿದರೆ ಪಾಪಕರ್ಮಿ ಎಂಬರು, ಮಾತನಾಡದಿರ್ದಡೆ ಮುಸುಕಕರ್ಮಿ ಎಂಬರು. ಮಲಗದಿರ್ದಡೆ ಚೋರನೆಂಬರು, ಮಲಗಿರ್ದಡೆ ಜಡದೇಹಿ ಎಂಬರು. ಇಂತೀ ವಸುಧೆಯೊಳಗೆ ಎಂಟು ವಿಧವ ಕಳೆಯಲಳವಲ್ಲ. ಕಾಣಾ ಕಲಿದೇವರ ದೇವಾ.

೬೪

ಜನ ಮೆಚ್ಚು ಶುದ್ಧನಲ್ಲದೆ ಮನ ಮೆಚ್ಚು ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ. ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯ. ಏಕಾಂತದ್ರೋಹಿ ಗುಪ್ತಪಾತಕಿ ಯುಕ್ತಿಶೂನ್ಯಂಗೆ ಸಕಳೇಶ್ವರದೇವರು ಒಲಿ ಒಲಿ ಎಂದರೆ ಎಂತೊಲಿವನಯ್ಯ?

೬೫

ಕಾಮಿಸಿ, ಕಲ್ಪಿಸಿ, ಭಾವಿಸಿ, ಬರಿದೆ ಬಳಲಿದರು. ಚಿಂತೆ ಮರುಳುತನ. ಅದೆಂತು ಬಂದುದನಂತೆ ಕಾಂಬುದು. ಚಿಂತೆ ಮರುಳುತನ. ಅಚಿಂತ್ಯ ಸಕಳೇಶ್ವರ ಮಾಡಿದಂತೆಯಲ್ಲದೆ ಎಂತು ಆಗದು. ಚಿಂತೆ ಮರುಳುತನ.

೬೬

ನೂರನೋದಿ ನೂರ ಕೇಳಿದರೇನು? ಆಸೆ ಹರಿಯದು, ರೋಷ ಬಿಡದು, ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವ.

೬೭

ತನುಮನ ಶುದ್ಧವಾದರೆ ಸ್ವಲ್ಪದ್ರವ್ಯ ಘನತರವಾಯಿತ್ತು ನೋಡಿರೇ, ಆ ಮೋಳಿಗೆಯ ಮಾರಿತಂದೆಗೆ ನುಲಿಯಚಂದಯ್ಯಂಗೆ ಆ ಢಕ್ಕೆಯ

ಮಾರಣ್ಣಗಳಿಗೆ. ತನುಮನ ಶುದ್ಧವಿಲ್ಲದೊಡೆ ಬಹಳತರ ಮಹದೈಶ್ವರ್ಯ ಸ್ವಲ್ಪವಾಗಿ ಕರಗಿ ಕೆಟ್ಟು ಹೋಗದೆ? ರಾವಣಂಗೆ ಇಂಗಿ ಹೋಗದೆ? ಉರಿದು ಉರಿದು ಹೋಗದೆ ತ್ರಿಪುರ ದಾನವರಿಗೆ? ಇದನರಿತು ತನುಮನ ಶುದ್ಧವಾಗಲು ತೃಣ ಮಹಾಮೇರುವಪ್ಪುದಯ್ಯಾ. ಇಹದಲ್ಲಿ ಪರದಲ್ಲಿ ಮಹಾ ಮುಕ್ತಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೮

ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತಯ್ಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ.

೬೯

ವೇದದಲುಳ್ಳೊಡೆ ಪ್ರಾಣವಧೆಯಪ್ಪುದೆ? ಶಾಸ್ತ್ರದಲುಳ್ಳೊಡೆ ಸಮ ವಾಗದಿಪ್ಪುದೆ? ಪರ್ವತದಲ್ಲಿ ಉಳ್ಳೊಡೆ ಹೋದವರು ಮರಳಿ ಬಪ್ಪರೇ? ನಿರ್ಬುದ್ಧಿ ಮಾನವರನೇನೆಂಬೆನು? ಮನ ವಚನ ಕಾಯ ಶುದ್ಧವಾಗಿರ್ಪಾತನ ಹೃದಯದಲ್ಲಿ ನಿಮ್ಮ ಕಂಡೆನೆಂದ ಅಂಬಿಗರ ಚೌಡಯ್ಯ.

೭೦

ತಾ ಒಳ್ಳಿಯವನಾದರೆ ಸರ್ವರೂ ತನಗೆ ಒಳ್ಳಿಯವರಾಗಿರ್ಪರು. ತಾ ಹೀನನಾದರೆ ಸರ್ವರೂ ತನಗೆ ಹೀನರಾಗಿರ್ಪರು. ತಾ ಒಳ್ಳಿಯವನಾಗಿ ಸರ್ವರೂ ತನಗೆ ಹೀನವಾದರೆ, ಅದು ತನ್ನ ಪೂರ್ವದ ಕರ್ಮ. ತಾ ಹೀನ ನಾಗಿ ಸರ್ವರೂ ತನಗೆ ಒಳ್ಳಿಯವರಾದರೆ, ಅದು ತನ್ನ ದೈವದ ಬಲವು ನೋಡಾ ಅಖಂಡೇಶ್ವರಾ.

೭೧

ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದರೆ ಹೊಲೆ ಹೊಲೆ ಎಂಬುದೀ ಲೋಕವೆಲ್ಲ. ಹಲವೆಲುವಿದ್ದ ಬಾಯಲ್ಲಿ ಒಲವರವ ನುಡಿದಡೆ, ಅದು ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ ರಾಮನಾಥಾ.

೭೨

ಎನ್ನ ನುಡಿಯೆ ಎನಗೆ ನಂಜಾಯಿತ್ತು; ಎನ್ನನಾಲಗೆ ಎನ್ನ ಕೊಂದಿತ್ತು! ಆನು ಪಾಪಿಯಯ್ಯ, ಆನು ಕೋಪಿಯಯ್ಯಾ! ತರಳತನದಲ್ಲಿ ಕೆಟ್ಟೆನಯ್ಯಾ! ಭಕ್ತಿಯುಕ್ತಿಯ ಹೊಲಬನರಿಯದೆ ಆನು ಮರುಳಾದೆನಯ್ಯಾ! ಆಳು ಮುನಿದರೆ ಆಳೆ ಕೆಡುವುದು; ನೀವು ಮುನಿದರೆ ನಾನೇ ಕೆಡುವೆನಯ್ಯಾ ಕೂಡಲಸಂಗಮದೇವಾ!

೭೩

ಆಸೆಯಿಂದ ಬಿಟ್ಟು ಕಿರಿಯರಿಲ್ಲ; ನಿರಾಸೆಯಿಂದ ಬಿಟ್ಟು ಹಿರಿಯರಿಲ್ಲ. ದಯದಿಂದ ಬಿಟ್ಟು ಧರ್ಮವಿಲ್ಲ; ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ. ಸಚರಾಚರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ.

೭೪

ಶಿವನೇ ದೈವ, ಶಿವಭಕ್ತನೇ ಕುಲಜ. ಷಡಕ್ಷರಿಯೇ ಮಂತ್ರ, ಕೊಲ್ಲದಿಪ್ಪುದೇ ಧರ್ಮ. ಅಧರ್ಮದಿಂದ ಬಂದುದನೊಲ್ಲದಿಪ್ಪುದೇ ನೇಮ. ಆಶೆ ಇಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ. ವಂಚನೆ ಇಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ. ಇದು ಸತ್ಯ, ಶಿವ ಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೭೫

ಮಾತುಗಂಟುಕತನದಿಂದೆಷ್ಟು ಮಾತನಾಡಿದಡೇನು? ಕಾಮಿನಿಯರ ಕಾಲ ದೆಸೆಯಲ್ಲಿ ಸಿಕ್ಕಿ, ಕ್ರೋಧದ ದಳ್ಳುರಿಯಲ್ಲಿ ಬೆಂದು, ಆಶೆ ಎಂಬ ಪಾಶ ಕೊರಳಲ್ಲಿ ಸುತ್ತಿ, ಆದೇಕೋ ಆದೇತರ ಮಾತೆಂದನಂಬಿಗರ ಚೌಡಯ್ಯ.

೭೬.

ಕರ್ತನೊಬ್ಬನೆ ದೇವ, ಸತ್ಯವೆ ಸುಭಾಷೆ, ಭೃತ್ಯಾಚಾರವೇ ಆಚಾರವಯ್ಯ. ಮತ್ತೆ ದೇವರಿಲ್ಲ, ಮತ್ತೆ ಆಚಾರವಿಲ್ಲ, ಮತ್ತೆ ಸುಭಾಷೆ ಎಂಬುದಿಲ್ಲ. ಮಹಂತ ಸಕಳೇಶ್ವರದೇವರನೊಲಿಸಿದ ಪುರಾತನ ಪಥವಿದು. ಅವಿತಥವಿಲ್ಲದೆ ನಂಬುವುದು.

೭೭

ಬಲೀಂದ್ರನ ಸಿರಿಯಿಂದಲಧಿಕರ ನಾನಾರನೂ ಕಾಣೆ. ಅಂತಹ ಸಂಪತ್ತು ಮೂರಡಿಗೈದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ? ಮಡಿವಂತಿದ್ದಿತೇ ರಾವಣನ ಬಲ್ಲಾಳಿಕೆ? ಪರಸ್ತ್ರೀ ಲಕ್ಷ್ಮೀದೇವಿ ಗೊಲಿದು ಒಂದು ನಿಮಿಷದಲ್ಲಿ ಮಡಿದ. ಇದು ಸತ್ಯ. ಸಿರಿಸೌಕರ್ಯವೆಂಬುದು ಆಕಾಶದ ರಚನೆ. ಇದನರಿದು, ದೇಹದಿಚ್ಛೆಯನತಿಗಳೆದು ನಮ್ಮ ಸಕಳೇಶ್ವರ ದೇವಂಗೋತು, ನಾನೆಂಬ ಭ್ರಮೆಯಳಿಯಾ ಮರುಳೆ.

೭೮

ಕತ್ತಲೆ ಬೆಳಗೆನಬೇಡ. ಸತ್ಯ ತಾನೆನಬೇಡ. ಚಿತ್ತವ ಸುಯಿಧಾನವ ಮಾಡಿ ಮೊತ್ತಾದ ಹೆಣ್ಣು ಹೊನ್ನು ಮಣ್ಣು ಗೆದ್ದರೆ, ನಿರ್ಮುಕ್ತ ಬಸವ ಪ್ರಿಯ ಕೂಡಲಚೆನ್ನಬಸವಣ್ಣ.

೭೯

ಗುರುನಿರೂಪವ ಮಾಡರು; ಪರವಧುವ ನೆರೆವರು, ಪರಧನವನಳು ಪುವರು. ಗುರುವಿಲ್ಲವವರಿಗೆ ಪರವಿಲ್ಲವವರಿಗೆ. ಇಂತಪ್ಪ ನರಕಿಗಳನೆನ ಗೊಮ್ಮೆ ತೋರದಿರಾ ರಾಮನಾಥಾ.

೮೦

ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆ ಗಂಜೆ! ಒಂದಕ್ಕಂಜುವೆ, ಒಂದಕ್ಕಳುಕುವೆ: ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ! ಮುನ್ನಂಜದ ರಾವಣನೇವಿಧಿಯಾದ! ಅಂಜುವೆ ನಯ್ಯಾ ಕೂಡಲಸಂಗಮದೇವಾ.

೮೧

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ, ಒಲ್ಲೆ ನಯ್ಯಾ ಪರಸತಿಯರ ಸಂಗವ. ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ! ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲ್ಲಿಸಯ್ಯಾ ಕೂಡಲಸಂಗಮದೇವಾ.

೮೨

ಕಾಡಬೇಡ ಕಂಡವರ. ಬೇಡಬೇಡ ನರರುಗಳ. ಆಡಬೇಡ ಅನೃತವ. ನೋಡಬೇಡ ಪರಸ್ತ್ರೀಯರ. ಗಾಢಗಂಭೀರ ಲಿಂಗಾರೂಢವಾದ ಬಸವ ಪ್ರಿಯ ಕೂಡಲಚೆನ್ನಬಸವಣ್ಣ.

೮೩

ಹಸಿವಿನಾಸೆಗೆ ಅಶನವ ಕೊಂಬರು. ವಿಷಯದಾಸೆಗೆ ಹುಸಿಯ ನುಡಿವರು. ಹಸನಾಗಿ ವ್ಯಸನವ ಹೊತ್ತು, ಭಸಿತವ ಹೂಸಿ ವಿಶ್ವವ ತಿರುಗಿ ದರು. ಈ ಹುಸಿಯ ಬಿಟ್ಟು ಮಾಯೆಯ ಮುಸಕವ ಮಾಣ್ದಲ್ಲದೆ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡಾ.

೮೪

ಕಟ್ಟಬೇಕು ಮನವ. ಮೆಟ್ಟಬೇಕು ಮದವ. ಸುಟ್ಟುರುಹಬೇಕು ಸಪ್ತವ್ಯಸನಗಳ. ಆ ತೊಟ್ಟಿಲ ಮುರಿದು ಕಣ್ಣಿಯ ಹರಿದು ಆ ಬಟ್ಟ ಬಯಲಲ್ಲಿ ನಿಂದಿರೆ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

೮೫

ಭಕ್ತನು ತಾನು ತಾನಾಗಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು. ತನುಮನ ಧನವ ಗುರುಲಿಂಗಜಂಗಮಕ್ಕೆ ಸವೆಯಿಸಬೇಕು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವ ಮಾಡ ಬೇಕು. ಇದೆ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವಂ ಪಡೆವಡೆ, ಇದೆ ಸಾಧನ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೮೬

ಕಳಬೇಡ, ಕೊಲಬೇಡ; ಹುಸಿಯ ನುಡಿಯಲುಬೇಡ; ಮುನಿಯ ಬೇಡ, ಅನ್ಯರಿಗೆ ಅಸಹ್ಯಬಡಬೇಡ; ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ!

೮೭

ಮಾತು ಮಾತಿಗೆ ಮಥನವ ಮಾಡುವಾತನೆ ಜಾತ. ಮಾತಿನ ಮೊದಲ ಕಂಡಾತನೆ ಅಜಾತ. ಕಾತರಕ್ಕೆ ಕಂಗೆಟ್ಟು ಕಳವಳಿಸದಿಪ್ಪನೆ ಪರಮಾತ್ಮ. ನೀತಿ ನಿಜ ನೆಲೆಗೊಂಡಾತನೆ ಜಗನ್ನಾಥ. ಇವೇತರೊಳಗು ಸಿಕ್ಕದಿಪ್ಪಾತನೆ ಗುರುನಾಥ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೮೮

ಲೇಸೆನಿಸಿಕೊಂಡು ಐದು ದಿನ ಬದುಕಿದರೇನು? ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು? ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು? ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?

ಶ್ಲೋಕ|| ಜೀವಿತಂ ಶಿವಭಕ್ತಾನಾಂ | ವರಂ ಪಂಚದಿನಾನಿ ಚ ||
ನಾಜಕಲ್ಪಸಹಸ್ರಂ ತು | ಭಕ್ತಿಹೀನಂ ತು ಶಂಕರೀ ||

ಎಂದುದಾಗಿ, ಕೂಡಲಸಂಗನ ಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನೊ?

೮೯

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ, ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ. ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ, ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ. ಲಿಂಗಭಕ್ತನು ಲಿಂಗ ಪಥವ ಹೇಳಿದರೆ ಮಚ್ಚರಿಸುವರ ಮೆಚ್ಚ ಕೂಡಲಸಂಗಮದೇವ.

೬

ಸಜ್ಜನಸಂಗ-ಶರಣಗೋಷ್ಠಿ

೧. ಸಜ್ಜನಸಂಗ – ಶರಣ ಗೋಷ್ಠಿ

೧

ಮಡಕೆಯ ಮಾಡುವರೆ ಮಣ್ಣೇ ಮೊದಲು; ತೊಡಗೆಯ ಮಾಡುವರೆ ಹೊನ್ನೇ ಮೊದಲು; ಶಿವಪಥವನರಿವರೆ ಗುರುಪಥವೆ ಮೊದಲು; ಕೂಡಲ ಸಂಗಮದೇವರನರಿವರೆ ಶರಣರ ಸಂಗವೆ ಮೊದಲು.

೨

ಹಡೆವುದರಿದು ನರಜನ್ಮವ. ಹಡೆವುದರಿದು ಗುರುಕಾರುಣ್ಯವ. ಹಡೆವುದರಿದು ಲಿಂಗಜಂಗಮದ ಸೇವೆಯ. ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಸಂಗದಲ್ಲಿ ನಲಿದಾಡು ಕಂಡೆಯಾ ಎಲೆ ಮನವೇ.

೩

ಹುಟ್ಟಲೇಕೋ ನರರ ಜನ್ಮದಲ್ಲಿ? ಕಟ್ಟಲೇಕೋ ಕೊರಳಲ್ಲಿ ಲಿಂಗವ? ಕಟ್ಟಿಯೂ ಕಾಣದೆ, ತೊಟ್ಟನೆ ತೊಳಲಿ, ಅರಸಲೇಕೋ ಧರೆಯ ಮೇಲೆ? ಅರಸಿಯೂ ಕಾಣದೆ ಸತ್ತು ಮೆಟ್ಟಿ ಮೆಟ್ಟಿ ಹೂಳಿಸಿಕೊಳಲೇಕೋ? ಇದನರಿದರಿದು, ಹುಟ್ಟು ಹೊಂದಳಿದ ಶರಣರ ನಿತ್ಯ ನಿತ್ಯ ನೆನೆದು ಬದುಕಿದೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೪

ಉದಯ ಮಧ್ಯಾಹ್ನ ಅಸ್ತಮಯ ಕತ್ತಲೆ ಬೆಳಗು ದಿನ ವಾರ ಲಗ್ನ ತಿಥಿ ಮಾಸ ಸಂವತ್ಸರ ಹೋಗುತ್ತ ಬರುತ್ತಲಿವೆ. ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ ಬರುತ್ತ ಇದ್ದಾರೆ. ಜಗಕ್ಕೆ ಇವೀಗ ಇಷ್ಟವಾಗಿಪ್ಪವು. ಎನ್ನ ದೇವಂಗೆ ಇವೊಂದು ಇಲ್ಲ. ದಿನ ಕಾಲ ಯುಗ ಜುಗ ಪ್ರಳಯಕ್ಕೆ ಹೊರಗಾದ ಆ ದೇವನ ಅಂಗವಿಸಿ ಮುಟ್ಟಿ ಹಿಡಿದ ಕಾರಣ ಎಮ್ಮ ಶರಣರು ಪ್ರಳಯಕ್ಕೆ ಹೊರಗಾದರು. ಇದನರಿದು ಅಂತಪ್ಪ ಶರಣರ ಪಾದವ ನಂಬಿ ಕೆಟ್ಟು ಬಟ್ಟ ಬಯಲಾದೆನಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೫

ಹೊಲೆಯ ಹೊಲಬಿಗನಾದರೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ. ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ; ಹೊಲಬುಗೆಡಬೇಡ, ಶಿವಶರಣೆನ್ನಿರಯ್ಯಾ. ನಮ್ಮ ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ.

೬

ಅರಿಯದವರೊಡನೆ ಸಂಗವ ಮಾಡಿದರೆ, ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ. ಬಲ್ಲವರೊಡನೆ ಸಂಗವ ಮಾಡಿಹರೆ, ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ ಕರ್ಪುರ ಗಿರಿಯ ಉರಿ ಕೊಂಡಂತೆ.

೭

ಸಾರ! ಸಜ್ಜನರ ಸಂಗವ ಮಾಡುವುದು. ದೂರ! ದುರ್ಜನರ ಸಂಗ ಬೇಡವಯ್ಯಾ! ಆವ ಹಾವಾದರೇನು? ವಿಷವೊಂದೆ. ಅಂತವರ ಸಂಗ ಬೇಡವಯ್ಯಾ. ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳಕೂಟ ವಿಷವೊ ಕೂಡಲಸಂಗಮದೇವಾ!

೮

ನೆರೆ ಹೊಲ್ಲ ದುರಾಚಾರಿಗಳ; ನೆರೆ ಹೊಲ್ಲ ಜಾರ ಚೋರಕರ; ನೆರೆ ಹೊಲ್ಲ ಬ್ರಹ್ಮೇತಿಕಾರರ; ನೆರೆ ಹೊಲ್ಲ ಸುರೆಯ ಭುಂಜಕರ; ನೆರೆ ಹೊಲ್ಲ ಗುರುತಲ್ಪಕರ; ನೆರೆ ಹೊಲ್ಲ ಹಸಿಯ ಡಂಭಕರ. ಅದೇನು ಕಾರಣವೆಂದೊಡೆ: ಬಿರುಗಾಳಿಯ ಸಂಗದಿಂದೆ ಜ್ಯೋತಿ ಅಳಿದು ಹೋಗುವಂತೆ. ಇಂತಪ್ಪ ಪಂಚ ಮಹಾಪಾತಕರ ನೆರೆಹೊರೆಯ ಸಂಗದಲ್ಲಿರ್ದವಂಗೆ ಅನಂತಕಾಲ ಮಾಡಿದ ಪುಣ್ಯವು ಕೆಟ್ಟು, ಮುಂದೆ ಪಾಪವು ಬೆಂಬತ್ತಿ ಕಾಡುವುದಯ್ಯ ಅಖಂಡೇಶ್ವರಾ.

೯

ನುಡಿಯಲಾಗದು ನುಡಿಯಲಾಗದು ಸ್ವಯಜ್ಞಾನವಿಲ್ಲದವರೊಡನೆ ಶಿವಾನುಭಾವವ! ಅದೇನು ಕಾರಣವೆಂದೊಡೆ: ತನ್ನ ಅರುಹಿಂಗೆ ಹಾನಿ,

ಮಹಾಪರಿಣಾಮ ಕೆಡುವುದು. ಇದು ಕಾರಣ, ಕಡುಪಾತಕ ಜಡಜೀವಿಗಳೊಡನೆ ಲಕ್ಷಕ್ಕೊಮ್ಮೆ ಕೋಟಿಗೊಂದು ವೇಳೆಯಾದಡೂ ನುಡಿಯಲಾಗದಯ್ಯ ಅಖಂಡೇಶ್ವರಾ.

೧೦

ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ? ಜೊಳ್ಳು ತೂರಿದಲ್ಲಿ ಬತ್ತ ಉಂಟೇ? ಕಳ್ಳಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಕಾಣಾ ರಾಮನಾಥಾ.

೧೧

ಒಬ್ಬರೊಬ್ಬರ ಸಂಗವ ಬಯಸುತಿರ್ಪವರು ನೀವು ಕೇಳಿರೋ! ಮನಕ್ಕೆ ಮನ ತಾರ್ಕಣ್ಯವಾಗದವರ ಸಂಗವದೇತರ ಸಂಗ? ಬುದ್ಧಿ ಬುದ್ಧಿ ಕೂಟಸ್ಥವಾಗದವರ ಸಂಗವದೇತರ ಸಂಗ? ಶೀಲ ಶೀಲ ಒಂದಾಗದವರ ಸಂಗವದೇತರ ಸಂಗ? ಭಾವ ಭಾವ ಏಕಾರ್ಥವಾಗದವರ ಸಂಗವದೇತರ ಸಂಗ ದುಸ್ಸಂಗವಲ್ಲದೆ. ಇಂತಪ್ಪ ದುಸ್ಸಂಗಿಗಳ ಸಂಗ ದೋಷಕ್ಕೆ ಈಡು, ಮುಕ್ತಿಯ ಕೇಡು ಕಂಡೆಯಾ ಅಖಂಡೇಶ್ವರಾ.

೧೨

ಮನ ಮನವೇಕಾರ್ಥವಾಗದವರಲ್ಲಿ, ತನುಗುಣ ನಾಸ್ತಿಯಾಗದವರಲ್ಲಿ, ಶೀಲಕ್ಕೆ ಶೀಲ ಸಮಾನವಿಲ್ಲದವರಲ್ಲಿ, ಬುದ್ಧಿಗೆ ಬುದ್ಧಿ ಕೂಟಸ್ಥವಾಗದವರಲ್ಲಿ, ಭಾವಕ್ಕೆ ಭಾವ ತಾರ್ಕಣೆಯಾಗದವರಲ್ಲಿ, ಅವರೊಡನೆ ಕುಳ್ಳಿರಲಾಗದು, ಗಡಣದಲ್ಲಿ ಮಾತನಾಡಲಾಗದು. ಅದೇನು ಕಾರಣವೆಂದಡೆ: "ಸಂಸರ್ಗದೋಷಗುಣಾ ಭವಂತಿ" ಎಂದುದಾಗಿ, ಮಹಂತ ಸಕಳೇಶ್ವರದೇವ ಸಾತ್ವಿಕ ಸದುಭಕುತಿಯನರಿಯದವರ ಸಂಗದಿಂದ ಕೈಲಾಸಕ್ಕೆ ದೂರಾಗಿಪ್ಪರು.

೧೩

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನ ತುಪ್ಪವ ಹೊಯ್ದರೆ ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ? ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು ಕೂಡಲಸಂಗಮದೇವಾ.

೧೪

ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋರದು. ಸಂಗದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವಸುಖದೋರದು. ಚೆನ್ನಮಲ್ಲಿಕಾರ್ಜುನದೇವಯ್ಯ, ನಿಮ್ಮ ಶರಣರ ಅನುಭಾವ ಸಂಗದಿಂದಾನು ಪರಮಸುಖಿಯಾದೆನು.

೧೫

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ; ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ ; ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ ; ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ ಕೂಡಲಸಂಗನ ಶರಣರ ಅನುಭಾವದಿಂದ ಎನ್ನ ಮನದ ಕೇಡ ನೋಡಯ್ಯಾ!

೧೬

ಸಂಗ ಲೇಸು ಸಾಧು ಸತ್‌ಪುರುಷರ. ಸಂಗ ಲೇಸು ಸದ್‌ಭಕ್ತ ಶರಣಜನಂಗಳ. ಸಂಗ ಲೇಸು ಸುಜ್ಞಾನ ಸಹವಾಸಿಗಳ. ಸಂಗ ಲೇಸು ಅಖಂಡೇಶ್ವರಲಿಂಗವ ಕೂಡಿದ ಸದ್‌ಭೋಗಿಗಳ.

೧೭

ಆಡುವುದು, ಪಾಡುವುದು, ಕೇಳುವುದು, ಹೇಳುವುದು, ನಡೆವುದು, ನುಡಿವುದು, ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ. ಚೆನ್ನಮಲ್ಲಿಕಾರ್ಜುನಯ್ಯ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ, ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು.

೧೮

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ? ಸುಂಡಿಲು ಮುರಿದರೆ ಗಜವೇನು ಬಾತೆ? ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ? ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ? ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಕೂಡಲಸಂಗಮ ದೇವಾ?

೧೯

ಪರಿಣಾಮ ಪರಿಮಿತ ದೊರಕೊಂಡಾತಂಗೆ, ಬರುಮಾತಿನವರೊಡನೆ ಗೋಷ್ಠಿ ಬಳಿಕೇಕೊ? ಬರಿಯ ಸಂಭ್ರಮಿಗಳೊಡತಣದನುಭಾವ ಐವತ್ತೆರಡಕ್ಷರ ತಮ್ಮಲ್ಲಿ ತಾವು ಉಲಿದಂತೆ ಉಲಿದುವು. ಗುಹೇಶ್ವರನೆಂಬ ಲಿಂಗವನರಿದಾತಂಗೆ ಬಳಿಕೇಕೋ?

೨೦

ಮೆಳೆಯ ಮೇಲೆ ಕಲ್ಲನಿಕ್ಕಿ ಮೆಳೆ ಭಕ್ತನಾಗಬಲ್ಲುದೆ? ಮೇಹನಿಕ್ಕಿ ಮೆಯ್ಯನೊರಸಿದೊಡೆ ಪಶುಗಳು ಮೆಚ್ಚುವವು. ಅನ್ನವನಿಕ್ಕಿ ಹಿರಣ್ಯವ ಕೊಟ್ಟರೆ ಜಗವೆಲ್ಲ ಹೊಗಳುವದು. ಒಳಗನರಿದು, ಹೊರಗೆ ಮರೆದವರ ಎನಗೆ ನೀ ತೋರಾ ಸಕಳೇಶ್ವರಾ.

೨೧

ಭಕ್ತನಾದರೆ ಎಂತಿರಬೇಕೆಂದರೆ, ಉಲುಹಡಗಿದ ವೃಕ್ಷದಂತಿರಬೇಕು, ಶಿಶು ಕಂಡ ಕನಸಿನಂತಿರಬೇಕು, ಗಲಭೆಗೆ ನಿಲ್ಲದ ಮೃಗದಂತಿರಬೇಕು. ತಾಯ ಹೊಲಬುದಪ್ಪಿದ ಎಳೆಗರುವಿನಂತೆ, ತ್ರಿಕಾಲದಲ್ಲಿಯು ಲಿಂಗವನೆ ನೆನೆವ ಶರಣರ ಎನಗೊಮ್ಮೆ ತೋರಯ್ಯ ಶಿವನೆ ಬಸವಪ್ರಿಯಕೂಡಲ ಚೆನ್ನಬಸವಣ್ಣಾ.

೨೨

ದೊರೆಕೊಂಡಂತೆ ಮನದಣಿದಿಪ್ಪವರ, ದುಃಖಕ್ಕೆ ದೂರಾಗಿಪ್ಪವರ, ಒಳಗನರಿದು ಹೊರಗೆ ಮರೆದಿಪ್ಪವರ, ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ. ಸಕಳೇಶ್ವರದೇವಾ, ಎನಗಿದೇ ವರವನೀವುದು ಕಂಡೆಯಾ ತಂದೆ.

೨೩

ಚೈತನ್ಯಕ್ಕೆ ಚೈತನ್ಯ ನೀನಾಗಿ, ನಿನ್ನೊಳಗೆ ಪ್ರಾಣ, ಪ್ರಾಣನೊಳಗೆ ನೀನಿಪ್ಪ ಭೇದವ ನಿಮ್ಮ ಜ್ಞಾನದಿಂದವೆ ಕಂಡು, ನೀನಾನೆಂಬ ಭೇದವ ಮರೆದು, ನಿಜ ಲಿಂಗಪ್ರಾಣಸಂಗಸುಖಿಯಾಗಿಪ್ಪ ಶರಣರ ತೋರಿಸಾ ಎನಗೆ; ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ.

೨೪

ನಾಸಿಕಾಗ್ರ ಭ್ರೂ ನಿಟಿಲಮಧ್ಯದೊಳ್ ಪ್ರಜ್ವಲಿಸಿ ಬೆಳಗುವ ಸ್ವಯಂ ಪ್ರಕಾಶ ಲಿಂಗಕ್ಕೆ ಆಕಾಶದಿಂದೊಸರ್ದ ಅಗ್ಗವಣಿಯಿಂ ಮಜ್ಜನವಂ ಮಾಡಿ, ಸ್ವಾನುಭವದಿಂ ಸವೆದ ನಿಜತತ್ವದ ಗಂಧವನಿತ್ತು, ಪಕ್ವಾಪಕ್ವಂಗಳಳಿದ ಅಕ್ಷತೆಯಂ ಧರಿಸಿ, ನೆನಹು ನಿರ್ವಾಣವಾದ ಮನೋಲಯವೆಂಬ ಪುಷ್ಪವನರ್ಪಿಸಿ, ಭಾವ ನಿರ್ಭಾವಂಗಳ ಸುಳುಹು ನಷ್ಟವಾದ ಸದ್ಭಾವದ ಧೂಪವನಿಕ್ಕಿ, ಸಮ್ಯಗ್‌ಜ್ಞಾನದಿಂ ಪ್ರಕಾಶಿಸಿ ತೋರ್ಪ ದೀಪವಂ ಬೆಳಗಿ, ಬ್ರಹ್ಮರಂಧ್ರದಿಂದೊಸರ್ದ ಹರಿತಪ್ಪ ಪರಮಾಮೃತವನಾರೋಗಣೆಯನವಧರಿಸಿ, ಉಲುಹಡಗಿದ ನಿಃಶಬ್ದವೆಂಬ ತಾಂಬೂಲವನಿತ್ತು,—ಇಂತಪ್ಪ ಅಷ್ಟವಿಧಾರ್ಚನೆಯಿಂದರ್ಚಿಸಿ, ಪರಮ ಪರಿಣಾಮವಿಂಬುಗೊಂಡು, ಪರಮ ಪ್ರಸಾದವನವಗ್ರಹಿಸಿ ಪರಮಸುಖಿಯಾಗಿಪ್ಪ ಮಹಾಶರಣರ ತೋರಿಸೆನ್ನ ಬದುಕಿಸಾ ಸೌರಾಷ್ಟ್ರಸೋಮೇಶ್ವರಾ; ನಿಮ್ಮಲ್ಲಿ ಅಭಿನ್ನವಾಯಿತ್ತೆನಗೆ.

೨೫

ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು, ಅರುಹಿನ ಮರಹು, ಭಕ್ತಿಯ ಭಿನ್ನಜ್ಞಾನದ ಕಳಂಕು, ಪ್ರಾಣ ಪ್ರಕೃತಿ, ಸ್ಥಾನಮಾನವೆಂಬ ಲಕ್ಷ, ಇಹಪರಂಗಳ ತೃಷ್ಣೆ, ಭವರೋಗಂಗಳ ಬಂಧನ, ಇಂದ್ರಿಯಂಗಳ ಇಚ್ಛೆ, ತಾಪತ್ರಯಂಗಳ ಸುಖ ದುಃಖ, ಮಲತ್ರಯಂಗಳಾಸೆ, ಪಂಚಮಲಂಗಳ ಸಂಚ, ಅಷ್ಟಮದಂಗಳ ಘಟ್ಟಿ, ಷಡೂರ್ಮಿಗಳ ವಿಕಾರ,—ಇಂತಪ್ಪ ಸಕಲ ಪ್ರಪಂಚಿನೊಳು ಸಿಲುಕದ ಅಕಳಂಕರಪ್ಪ, ಸಮ್ಯಗ್‌ಜ್ಞಾನ ಸಮತೆ ಸಮಾಧಾನ ಸಹಜಾನಂದ ಯೋಗದೊಳಿಪ್ಪ ಮಹಾಶರಣರ ತೋರಿ ಬದುಕಿಸಾ ಎನ್ನ. ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ.

೨೬

ನಿಶ್ಚಿಂತವಾದವಂಗೆ ಮತ್ತಾರ ಹಂಗುಂಟು? ಚಿತ್ತ ಸುಯಿಧಾನಿಯಾದವಂಗೆ ತತ್ವವ ಕಂಡಿಹೆನೆಂಬುದುಂಟೆ? ತಾನು ತಾನಾದವಂಗೆ ಮಾನವರ ಹಂಗುಂಟೆ? ಭಾವ ಬಯಲಾದವಂಗೆ ಬಯಕೆ ಎಂಬುದುಂಟೆ? ಗೊತ್ತ ಕಂಡವಂಗೆ ಅತ್ತಿತ್ತ ಅರಸಲುಂಟೆ? ಇಂತು ನಿಶ್ಚಿಂತವಾಗಿ, ನಿಜವ ನಂಬಿದ ಶರಣರ ಎನಗೊಮ್ಮೆ ತೋರಿಸಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೨೭

ಶಿವ ಶಿವಾ, ಮಹಾಪ್ರಸಾದ; ಎನ್ನ ಮನವು ನಿಮ್ಮಲ್ಲಿ ಒಂದ ಬಯಸಿ ಬಡವಾಗುತಿರ್ಪುದು ಅವಧರಿಸಯ್ಯ ದೇವ. ಶಿವನಡೆ ಶಿವನುಡಿ ಶಿವನೋಟ ಶಿವಭಾವ ಶಿವಾಚಾರ ಶಿವಭಕ್ತಿ ಶಿವಜ್ಞಾನ ಶಿವಾನುಭಾವ ಶಿವಶರಣರ ಸಂಗವನೆ ಕರುಣಿಸಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೨೮

ತನ್ನ ಮನೆಯನರಿಯದೆ ತವರ ಮನೆಗೆ ಹಾರುವ ಹೆಣ್ಣಿನಂತೆ, ಭಿನ್ನವಿಟ್ಟು ನೋಡಿಹೆನೆಂದು ನಿಮ್ಮನರಿಯದೆ ಕೆಟ್ಟಿತು ಜಗವೆಲ್ಲ. ಅದಂತಿರಲಿ. ಇನ್ನು ತನ್ನ ತಾನರಿದವಂಗೆ ತನುವೇ ಲಿಂಗ, ಮನವೇ ಪುಷ್ಪ. ಈ ಅನುವನರಿದು, ಘನವ ನೆಮ್ಮಿದ ಶರಣರ ಎನಗೊಮ್ಮೆ ತೋರಯ್ಯ, ನಿಮ್ಮ ಧರ್ಮ ನಿಮ್ಮ ಧರ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೨೯

ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ ಕಳಹಂಸೆ, ಸುಧಾಕಿರಣನಿಂ ಬೆಳಗಿದ ಬೆಳುದಿಂಗಳ ರುಚಿಯ ಚಕೋರ ಬಯಸುವಂತೆ, ಕಾರ್ಗಾಲ ಮುಂಬನಿಯ ಸುಖವ ಚಾದಗೆ ಬಯಸುವಂತೆ, ಆನು ನಿಮ್ಮ ಶರಣರ ಬರವ ಹಾರಿ ಹಾರಿ ಹಂಬಲಿಸುತ್ತಿದ್ದೇನೆ ಕರುಣಿಸಯ್ಯಾ! ಎಲೆ ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ.

೩೦

ದೇವದೇವಾ, ಶರಣಾರ್ಥಿ, ಅವಧರಿಸಯ್ಯಾ. ಕೇಳಿದ ಸುಖ ಕಿವಿಗೆ ಬೇಟವಾಯಿತ್ತು. ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು. ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತ್ತು. ಶಿವಶರಣರ ದರುಶನದ ಸುಖವನೇನೆಂದೆನಬಹುದು! ಮದವಳಿದು ಮಹವನೊಡಗೂಡಿದ ಎನ್ನ ಅಜಗಣ್ಣನನಗಲಿದ ದುಃಖ, ನಿಮ್ಮ ಸಂಗದಲ್ಲಿ ಸಯವಾಯಿತ್ತು ಕಾಣಾ ಪ್ರಭುವೆ.

೩೧

ಸಾಸವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ; ಆನಂದದಿಂದ ನಲಿನಲಿದಾಡುವೆ, ಆನಂದದಿಂದ ಕುಣಿಕುಣಿದಾಡುವೆ! ಕೂಡಲಸಂಗನ ಶರಣರು ಬಂದರೆ, ಉಬ್ಬಿ ಕೊಬ್ಬಿ ಹರುಷದಲೋಲಾಡುವೆ!

೩೨

ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರಮನುದಯ ನೆಯ್ದಿಲೆಗೆ ಜೀವಾಳ, ಕೂಪರ ಠಾವಿನಲ್ಲಿ ಕೂಟ ಜೀವಾಳ, ಒಲಿದ ಠಾವಿನಲ್ಲಿ ನೋಟ ಜೀವಾಳವಯ್ಯಾ! ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ!!

೩೩

ವೇದ ವೇದಾಂತ ಶಾಸ್ತ್ರ ಸಂಪದರ, ಆಗಮುಕ್ಕತೀತರ, ಪರಬ್ರಹ್ಮ ಸ್ವರೂಪರ, ಪರಮವಿರಕ್ತರ ಕೂಡಿಕೊಂಡಿರುವ, ತಾನರಿವಲ್ಲಿ ಅರಿವ, ಕೇಳುವಲ್ಲಿ ಎಡೆದೆರಪಿಲ್ಲದ, ಪದ ಪದಾರ್ಥಂಗಳಿಂದೆ ಕ್ರಿಯಾರ್ಥದಿಂದೆ ತತ್ವ ತತ್ವಾರ್ಥಂಗಳಲ್ಲಿ ಪದಚ್ಛೇದವ ಮಾಡುವ ಪಾರಮಾರ್ಥಿಕರ ಪಾದವೇ ಪದವೆಂದನಂಬಿಗಚೌಡಯ್ಯ.

೩೪

ಹಾಲ ಕಂದಲು, ತುಪ್ಪದ ಮಡಕೆಯ 'ಬೋಡು ಮುಕ್ಕೆ'ನ ಬೇಡ. ಹಾಲು ಸಿಹಿ, ತುಪ್ಪ ಕಮ್ಮನೆ; ಲಿಂಗಕ್ಕೆ ಬೋನ! ಕೂಡಲಸಂಗನ ಶರಣರ ಅಂಗಹೀನರೆಂದರೆ ನಾಯಕನರಕ!

೩೫

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲೆಯಾಡುವಂತೆ, ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

೩೬

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯಾ. ಭಕ್ತಿಯ ಕುಳವ ನಾನರಿಯದೆ ಮತಿಗೆಟ್ಟ ಪರಿಯ ನೋಡಯ್ಯಾ. ಕೂಡಲಸಂಗನ ಶರಣರ ಸಂಗದಿಂದಲರಿದರೆ ನಾನು ಬದುಕುವೆನಯ್ಯಾ.

೩೭

ಅರಿದಿಹೆನೆಂದರೆ ಅರಿವಿಂಗಸಾಧ್ಯ, ನೆನೆದಿಹೆನೆಂದರೆ ನೆನಹಿಂಗಸಾಧ್ಯ, ಭಾವಿಸಿಹೆನೆಂದರೆ ಭಾವಕ್ಕಸಾಧ್ಯ! ವಾಙ್ಮನಕ್ಕಗೋಚರಲಿಂಗವನರಿವ ಪರಿಯೆಂತಯ್ಯಾ, ಗುರು ತೋರದನ್ನಕ್ಕರ? ಗುರುಶಿಷ್ಯಮಥನದಲ್ಲಿ ಸ್ವಯಂಜ್ಯೋತಿಲಿಂಗ ಉದಯವಪ್ಪುದೆಂಬ ಶ್ರುತಿ ಹುಸಿಯೆ? ಕೂಡಲಸಂಗಮದೇವಾ, ನಿಮ್ಮ ಮಹಾನುಭಾವರ ಮಥನದಿಂದೆ ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೆ.

೩೮

ಎಲೆ ಶಿವನೆ, ನಿಮ್ಮಲ್ಲಿ ನಾನೊಂದ ಬೇಡಿಕೊಂಬೆನು; ನೀವೊಲಿದು ಕರುಣಿಸಯ್ಯಾ ಎನಗೆ. ನಿಮ್ಮ ಶರಣರ ಸುಚರಿತ್ರದ ಘನಮಹಿಮೆಯ ಕೇಳುವಲ್ಲಿ, ಎನ್ನ ಹೃದಯಕಮಲವು ಅರಳುವಂತೆ ಮಾಡಯ್ಯಾ. ನಿಮ್ಮ ಶರಣರ ನಿಜಮೂರ್ತಿಗಳ ಕಂಡಲ್ಲಿ ಎನ್ನ ಸರ್ವಾಂಗವು ಗುಡಿಗಟ್ಟಿ, ಕಂಗಳಲ್ಲಿ ಪರಿಣಾಮಜಲವುಕ್ಕಿ ಅವರ ಚರಣಕಮಲದ ಮೇಲೆ ಸುರಿವಂತೆ ಮಾಡಯ್ಯಾ. ನಿಮ್ಮ ಶರಣರು ಶಿವಾನುಭವಸಂಪಾದನೆಯ ಮಾಡುವಲ್ಲಿ, ಎನ್ನ ಕರ್ಣದ್ವಯದಲ್ಲಿ ಸಕಲಕರಣಂಗಳು ನಾ ಮುಂಚೆ ತಾ ಮುಂಚೆ ಎಂದಾಗ್ರಹಿಸುವಂತೆ ಮಾಡಯ್ಯಾ. ನಿಮ್ಮ ನಿಜವನಿಂಬುಗೊಂಡ ಶರಣರ ಸಂಗದಲ್ಲಿ ಹೆರಹಿಂಗದಿರುವಂತೆ ಮಾಡಯ್ಯಾ ಎನ್ನ ಅಖಂಡೇಶ್ವರಾ.

೩೯

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ; ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ; ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ; ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

೪೦

ಮಂಗಳಮಯಲಿಂಗವ ಮನ ಹಿಂಗದೆ ಸುಸಂಗಿಯಾಗಿ, ಮಹಾಲಿಂಗದ ಪ್ರಸಂಗಿಯಾಗಿಪ್ಪಾತನಂಗವೆನಗೆ ಮಂಗಳ ತರಂಗ. ಆತನ ಪ್ರಸಂಗದಲ್ಲಿ ರಿಸಾ ಉರಿಲಿಂಗದೇವ.

೪೧

ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ, ಲಿಂಗದ ಬೇಟ, ಲಿಂಗದ ಕೂಟ. ಲಿಂಗದಲ್ಲಿ ಮನವಡಗಿರ್ದ ಲಿಂಗಾನುಭಾವಿಗಳ ಸಂಗದಲ್ಲಿರಿಸಿ ಸಲಹಯ್ಯಾ ಎನ್ನ ಅಖಂಡೇಶ್ವರಾ.

೪೨

ಲಿಂಗ ನಯನದಲ್ಲಿ ನೋಡುತ್ತ, ಲಿಂಗ ಜಿಹ್ವೆಯಲ್ಲಿ ನುಡಿವುತ್ತ, ಲಿಂಗ ಹಸ್ತದಲ್ಲಿ ಮುಟ್ಟುತ್ತ, ಲಿಂಗ ನಾಸಿಕದಲ್ಲಿ ವಾಸಿಸುತ್ತ, ಲಿಂಗ ಸ್ತ್ರೋತ್ರವ ಕೇಳುತ್ತ, ಲಿಂಗ ಪಾದದಲ್ಲಿ ನಡೆವುತ್ತ, ಸರ್ವಾಂಗ ಲಿಂಗಮಯ ವಾದ ಶರಣಸಂಗಸುಖದೊಳಗೆನ್ನನಿರಿಸಯ್ಯಾ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

೪೩

ನಚ್ಚು ಮಚ್ಚಿನ ಲಿಂಗವ ಗ್ರಹಿಸಿ, ಮಚ್ಚು ಒಳಕೊಂಡಿತ್ತಯ್ಯ! ಕರ್ಪುರದ ಕರಡಗೆಯ ಘಾಸಿಮಾಡಿದಂತಾಯಿತ್ತು. ಲಿಂಗಾನುಭಾವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗೊಹೇಶ್ವರಾ.

೪೪

ಅಗ್ನಿಯ ಸಂಗದಿಂದೆ ಕಾನನ ಕೆಟ್ಟಂತೆ, ಜ್ಯೋತಿಯ ಸಂಗದಿಂದೆ ಕತ್ತಲೆ ಕೆಟ್ಟಂತೆ, ಪರುಷದ ಸಂಗದಿಂದೆ ಕಬ್ಬಿಣ ಕೆಟ್ಟಂತೆ, ಲಿಂಗಾನು ಭಾವಿಗಳ ಸಂಗದಿಂದೆ ಎನ್ನ ಹುಟ್ಟುಹೊಂದುಗಳು ನಷ್ಟವಾಗಿ ಕೆಟ್ಟು ಹೋದುವು ನೋಡಾ ಅಖಂಡೇಶ್ವರಾ.

೪೫

ವಜ್ರದ ಮನೆಯೊಳಗಿರ್ದು, ಗೊರಲೆ ಮುಟ್ಟೀತೆಂಬ ಸಂದೇಹವೇಕೆ? ಭದ್ರಗಜದ ಮೇಲೆ ಬರುತಿರ್ದು, ಕೆಳಗಿರ್ದ ಗುಜ್ಜನಾಯಿ ಮುಟ್ಟಿತ್ತೆಂಬ ಸಂದೇಹವೇಕೆ? ಸಂಜೀವನತ್ವೆಯ ಸಾರಿರ್ದು, ಇಂದಿಗೆ ನಾಳಿಗೆಂಬ ಸಂದೇಹ

ವೇಕೆ? ಸಜ್ಜನ ಸದ್ಭಕ್ತರ ಸಂಗದೊಳಗಿರ್ದು, ಸತ್ತೆನೋ ಬದುಕಿದೆನೋ ಎಂಬ ಸಂದೇಹವೇಕೆ? ಹತ್ತರಡಿಯು ಬಿದ್ದ ಹಾವು ಸಾಯದೆಂದು ಗಾದೆಯ ಮಾತ ನುಡಿವರು. ನಿತ್ಯರಪ್ಪ ಶರಣರ ಸಂಗದೊಳಗಿರ್ದು, ಮತ್ತೊಂದು ಉಂಟೆಂದು ಭಾವಿಸಿ ನೋಡುವ ಕತ್ತೆಮನುಜರತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೪೬

ಕೀಡೆ ತುಂಬಿಯ ಬಿಡದೆ ನೆನೆಯೆ, ನೋಡಲಾಕ್ಷಣ ತುಂಬಿಯಾಗಿ ಹುದು. ರೂಢಿಯೊಳು ಅಗಮ್ಯ ಶರಣರ ಪಾದವೇ ಗೂಡಾಗಿ ನಿಂದಿರೆ ಬಸವ ಪ್ರಿಯ ಕೂಡಲಚೆನ್ನಸಂಗನಬಸವ.

೪೭

ಬಂಜೆ ಬೇನೆಯನರಿಯದಂತೆ ಒಬ್ಬರೊಂದ ನುಡಿವಿರಿ, ಕೇಳಿರಯ್ಯಾ. ಎನ್ನಾಯುಷ್ಯ ಭವಿಷ್ಯ ಎನ್ನ ಭಕ್ತರು ಕಂಡಯ್ಯಾ; ಎನ್ನಾಯುಷ್ಯ ಭವಿಷ್ಯ ಎನ್ನಾ ಪ್ರಮಥರು ಕಂಡಯ್ಯಾ! ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯಾ!

೪೮

ಮನೆದೈವ ಕುಲದೈವ ಎನಗೆ ನಿಮ್ಮವರಯ್ಯಾ! ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನಾ,—ಕೂಡಲಸಂಗಮದೇವಾ, ನಿಮ್ಮ ಶರಣರಿಗೆ.

೪೯

ಆಡಿನ ಕೊರಳಲ್ಲಿ ಮೊಲೆಯಿದ್ದರೇನು, ಅಮೃತವದಕುಂಟೇ? ಭಕ್ತ ನಾದಲ್ಲಿ ಫಲವೇನು, ಶಿವಪಥವನರಿಯದನ್ನಕ್ಕ? ದಕ್ಕಾಲಿ ಬಿದ್ದ ಕಣ್ಣಿನಂತೆ ಜಂಗಮದ ಮೇಲೆ ಹರುಷವಿಲ್ಲದ ನೋಟ, ಕೂಡಲಸಂಗನ ಶರಣರ ಬೆರಸದ ಹರುಷ, ಅರಸಿಯ ನೋಟದಂತೆ.

೫೦

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ, ನಿಮ್ಮಾಣೆ! ನಿಮ್ಮ ಪುರಾತರಾಣೆ! ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ.

೫೧

ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖವೆನ್ನ ಸುಖ; ಅವರ ದುಃಖವೆನ್ನ ದುಃಖ! ಕೂಡಲಸಂಗನ ಶರಣರ ಮನ ನೊಂದರೆ ಆನು ಬೆಂದೆನಯ್ಯಾ!

೫೨

ಭಕ್ತಿರತಿಯ ವಿಕಳತೆಯ ಯುಕ್ತಿಯನೇನ ಬೆಸಗೊಂಬಿರಯ್ಯಾ? ಕಾಮಿಗುಂಟೆ ಲಜ್ಜೆ, ನಾಚಿಕೆ? ಕಾಮಿಗುಂಟೆ ಮಾನಾಪಮಾನವು? ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯಾ?

೫೩

ಅಯ್ಯಾ, ನಿಮ್ಮಾ ಮಹಂತರ ಕೂಡಿದ ಸುಖವನುಪಮೆಗೆ ತರಬಾರದಯ್ಯ. ಅಯ್ಯಾ, ನಿಮ್ಮಾ ಮಹಂತರ ಕೂಡಿ ಅಗಲುವ ಥಾವತಿಯಿಂದ ಸಾವುದೇ ಕರಲೇಸಯ್ಯ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಿಜವನರಿದ ಮಹಾಮಹಿಮರನಗಲಿ ನಿಲಲಾರೆನಯ್ಯ.

೫೪

ಅಯ್ಯಾ, ನಿಮ್ಮ ಶರಣರ ಕೂಡಿದ ಸುಖವನುಪಮೆಗೆ ತರಬಾರದಯ್ಯ! ಅಯ್ಯಾ, ನಿಮ್ಮ ಮಹಂತರ ಕೂಡಿಯಗಲುವ ಥಾವತಿಯಿಂದ ಸಾವುದೇ ಕರಲೇಸು ಕಂಡಯ್ಯ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನರುಹಿದ ಮಹಿಮರನಗಲಿ ಆನು ನಿಲಲಾರೆನಯ್ಯಾ.

೫೫

ಅಯ್ಯ, ನಿಮ್ಮನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು. ಅಯ್ಯ, ನಿಮ್ಮನುಭಾವಿಗಳ ಸಂಗದಿಂದ ಎನ್ನ ಮನ ಶುದ್ಧವಾಯಿತ್ತು. ಅಯ್ಯ, ನಿಮ್ಮನುಭಾವಿಗಳೆನ್ನನೊರೆದೊರೆದು ಆಗುಮಾಡಿದ ಕಾರಣ, ಚೆನ್ನಮಲ್ಲಿಕಾರ್ಜುನ, ನಿಮಗಾನು ತೊಡಿಗೆಯಾದೆನು.

೫೬

ಕಾಯದೊಳಗೆ ಅಕಾಯವಾಯಿತ್ತು. ಜೀವದೊಳಗೆ ನಿರ್ಜೀವವಾಯಿತ್ತು. ಭಾವದೊಳಗೆ ನಿರ್ಭಾವವಾಯಿತ್ತು. ನೆನಹಿನೊಳಗೆ ಮನ

ವಾಯಿತ್ತು. ಎನ್ನ ತಲೆ ನೊಲೆಯ ನೋಡಿ ಸಲಹಿದ ಕಾರಣ, ಚೆನ್ನಮಲ್ಲಿಕಾರ್ಜುನಾ, ನಿಮ್ಮ ಧರ್ಮದವಳಾದೆನಯ್ಯ.

೫೭

ಕಾಯದ ಮದವಳಿದಲ್ಲದೆ ಮಾಯಾವಿಕಾರವಳಿಯದು. ಮಾಯಾವಿಕಾರವಳಿದಲ್ಲದೆ ಭಾವ ನಾಶವಾಗದು. ಭಾವ ನಾಶವಾದಲ್ಲದೆ ಲಿಂಗಸಂಬಂಧವಳವಡದು. ಲಿಂಗಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು. ಪರಮಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೆ ಬೇಕು. ಮಹಾನುಭಾವಿಗಳ ಸಂಗದಿಂದಲ್ಲದೆ ವಿಶ್ರಾಮವಿಲ್ಲ. ಇಂತಪ್ಪ ಮಹಾನುಭಾವದ ಮೂರ್ತಿ ಸಂಗನಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣಬಂದಿತ್ತು. ಇದು ಕಾರಣ, ನಿಜಗುರು ಶಂಕರದೇವರ ಶರಣ ಪ್ರಭುದೇವರ ಶ್ರೀಪಾದವ ಕಂಡು ನಿಶ್ಚಿಂತನಾದೆನಯ್ಯಾ!

೫೮

ಅಂಗಕ್ಕೆ ಆಚಾರವೆ ಚೆಲುವು. ಮನಕ್ಕೆ ಮಹಾನುಭಾವವೆ ಚೆಲುವು. ಆತ್ಮಂಗೆ ಅರುಹೆ ಚೆಲುವು. ಅಖಂಡೇಶ್ವರನೆಂಬ ನಿಜವಿಂಬುಗೊಂಡವಂಗೆ ಶರಣರ ಸಂಗವೆ ಚೆಲುವು.

೫೯

ಉಟ್ಟರೆ ತೊಟ್ಟರೇನಯ್ಯ ನಟ್ಟುವರಂತೆ? ಕೊಟ್ಟರೆ ಕೊಂಡರೇನಯ್ಯ ವೇಶಿಯರಂತೆ? ಬಿಟ್ಟರೆ ಕಟ್ಟಿದರೇನಯ್ಯ ಬೈರೂಪನಂತೆ? ಇವಾವಂಗವ ಮಾಡಿದರೇನಯ್ಯ? ಮುಟ್ಟಿ ನಮ್ಮ ಶರಣರೊಡನೆ ಒಡವೆರೆಯದಿದ್ದವರು ಉಟ್ಟಿದ್ದರೇನು, ಬಿಟ್ಟಿದ್ದರೇನು ಹೇಳಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ?

೬೦

ನಂಬುವುದು, ಶರಣರನೆ ನಂಬುವುದು. ಕೊಂಬುವುದು, ಶರಣರ ಪ್ರಸಾದವನೆ ಕೊಂಬುವುದು. ಕೊಡುವುದು, ಶರಣರಿಗೆ ಕೊಡುವುದು. ಉಡುವುದು, ಶರಣರುಟ್ಟ ಮೈಲಿಗೆಯನೆ ಉಡುವುದು. ಇಂತಪ್ಪ ಶರಣರ ಬರವು, ಎನ್ನ ಪ್ರಾಣದ ಬರವು. ಅವರ ಹೋತೆ ಎನ್ನ ಪ್ರಾಣದ ಹೋತು. ಇಂತಪ್ಪ ಶರಣರ ಸಂಗವ ಮಾಡಿದ ಕಾರಣ ಏಕವಾಗಿ ಹೋದೆ ಅವರ ಪಾದ

ದಲ್ಲಿ. ಇನ್ನು ಬೇಕು ಬೇಡೆಂಬ ಸಂದೇಹ ಹುಟ್ಟಿದರೆ, ಇಹಲೋಕಕ್ಕೂ ಅಲ್ಲ, ಪರಲೋಕಕ್ಕೂ ಅಲ್ಲ. ಇದಕ್ಕೆ ನೀವೇ ಸಾಕ್ಷಿ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೬೧

ಅಂಗ ಲಿಂಗ ಸಂಬಂಧವಾದ ಬಳಿಕ ಮನ ಹಿಂಗದಿಪ್ಪುದು. ತನುವನು ಬಿಟ್ಟು, ಸಂಗಸುಖದ ಶರಣರ ಗೋಷ್ಠಿಯೊಳು ಇಪ್ಪಾತ ಮಂಗಳಾತ್ಮಕ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೬೨

ಅಹುದಹುದು ಗೆದ್ದಲು ಮನೆಯ ಮಾಡೆ ಸರ್ಪಂಗೆ ಇಂಬಾದಂತೆ, ನಾನತ್ತಣ ದ್ರವ್ಯವ ತಂದು ಇತ್ತ ಮಾಡಿದರೆ ನನಗಿನ್ನೆತ್ತಣ ಮುಕ್ತಿ? ಘನ ಮಹಿಮ ಶರಣರ ಸಂಗದಿಂದ ಘನಕ್ಕೆ ಘನ ವೇದ್ಯವಾದ ಬಳಿಕ, ಅರಿವರತು ಮರಹು ನಷ್ಟವಾಗಿ, ಅಮರೇಶ್ವರಲಿಂಗದಲ್ಲಿ ನಿಜಪದವ ಬೆರಸಿ, ಪ್ರಭು ದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೬೩

ಕರಕನಿಷ್ಠ ಕಬ್ಬಿಣವ ನೆರಹಿರೆ, ಪರುಷ ಮುಟ್ಟಲು ಚಿನ್ನವಾಗದೆ? ಗುರುಕಾರುಣ್ಯ ಪಡೆವರು ಇಂದು ಶರಣರೊಳು ಬೆರೆದರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೬೪

ನಚ್ಚುಮೆಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು ಎನ್ನ ತನುವ ಬಗಿದು ತನುವಿನೊಳಗೆ ಇಟ್ಟುಕೊಂಬೆನು; ಎನ್ನ ಮನವ ಬಗಿದು ಮನದೊಳಗೆ ಇಟ್ಟುಕೊಂಬೆನು; ಎನ್ನ ಕಂಗಳ ಬಗಿದು ಕಂಗಳೊಳಗಿಟ್ಟು ಕೊಂಬೆನು; ಕೂಡಲ ಸಂಗನ ಶರಣರೆನ್ನ ಒಡೆಯರಾಗಿ, ಎನ್ನ ಮನೆಗೆ ಬಂದರೆ ಭಕ್ತಿಯ ಮಾಡುವೆನು ಕಾಣಾ ಅಪ್ಪಣ್ಣಾ.

೬೫

ಕಾಣಬಹುದೆ ಪರುಷದ ಗಿರಿಯಂಧಕಂಗೆ? ಅರಿಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ? ತೆಗೆಯಬಹುದೆ ಕಡವರವು ದರಿದ್ರಂಗೆ? ಕರೆಯಬಹುದೆ ಕಾಮಧೇನುವಶುದ್ಧಂಗೆ? ಹೊನ್ನ ಹುಳುವ ಕಂಡು ನರಿ ತನ್ನ ಬಾಲವ ಹುಣ್ಣ ಮಾಡಿಕೊಂಡರೆ ಹೋಲಬಹುದೆ? ಎನ್ನೊಡೆಯ ಕೂಡಲ ಸಂಗನ ಶರಣರನು ಪುಣ್ಯವಿಲ್ಲದೆ ಕಾಣಬಹುದೆ?

೧೦

ಕಾಯಕ-ದಾಸೋಹ

೧. ಸತ್ಯ ಶುದ್ಧ ಕಾಯಕ

೧

ಕೃಷಿ ಕೃತ್ಯ ಆವ ಕಾಯಕದಿಂದಾದೊಡೇನು? ತನು ಮನ ಬಳಲಿಸಿ ಗಳಿಸಿ ತಂದು, ಗುರುಲಿಂಗಜಂಗಮಕ್ಕೆ ಮೆಚ್ಚಿಸಿ ದಾಸೋಹವ ಮಾಡುವ ಪರಮಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂತೆಂದೊಡೆ, ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ ಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೆ ಪರಮಸದ್ಗುರು. ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪ ಗುರು ಶಿಷ್ಯ ಜಂಗಮಕ್ಕೆ ನಾನು ನೆರೆನಂಬಿ ನಮೋ ನಮೋ ಎಂಬೆನಯ್ಯಾ ಕೂಡಲಚೆನ್ನಸಂಗಮದೇವಾ.

೨

ಅಸಿಯಾಗಲಿ ಕೃಷಿಯಾಗಲಿ ಯಾಚಕ ವಾಣಿಜ ಮಸಿಯಾಗಲಿ, ಮಾಡುವಲ್ಲಿ ಹುಸಿಯಿಲ್ಲದಿರಬೇಕು. ಅದು ಅಸಮಾಕ್ಷನ ಬರವು, ಪಶುಪತಿಯ ಇರವು. ಐಘಟದೂರ ರಾಮೇಶ್ವರಲಿಂಗವು ತಾನೆ.

೩

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು. ನಾನು ಬೆವಹಾರ ಮಾಡುವೆನಯ್ಯಾ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು. ನಾನಾವ ಕರ್ಮಂಗಳ ಮಾಡಿದರೆಯೂ ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರೀಯ ಮಾಡೆನು; ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ ಕೂಡಲಸಂಗಮದೇವಾ.

೪

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ, ಎನ್ನೊಡಲಿಂಗೆ ಎನ್ನೊಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ ಎನ್ನ ಮನಕ್ಕೆ ಮನವೇ ಸಾಕ್ಷಿ! "ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ | ಸಂಚ

ರಂತಿ ಮಹಾಘೋರೇ ನರಕೇ ಕಾಲಮಕ್ಷಯಂ" ಎಂಬ ಶ್ರುತಿಯ ಬಸವಣ್ಣ ನೋದುವನು ಎಂಬರು. 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆ'ಂದು ನುಡಿವರಯ್ಯಾ ಪ್ರಮಥರು. ಕೊಡುವೆನುತ್ತರವನವರಿಗೆ, ಕೊಡಲ [ವ್ಮುವೆ]: ಹೊಲೆಯ ಹೊಲೆಯರ ಮನೆಯ ಹೊಕ್ಕು, ಸಲೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದರೆ ತಲೆ ದಂಡ ಕೂಡಲಸಂಗಮದೇವಾ.

೫

ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ, ಬೇಡಿ ಕಾಡಿ ಮಾಡುವುದು ದಾಸೋಹವೇ? ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ, ದ್ರವ್ಯ ಕಡೆಯಾಗಿ, ಚಿತ್ತಶುದ್ಧದಲ್ಲಿ ಬಂದುದಕ್ಕೆ ಸರಿಗಂಡು, ದೇಹಿಗಳಿಗೆ ಒಂದೇ ಪ್ರಮಾಣದಲ್ಲಿ ಸರಿಗಂಡುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ.

೬

ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೊ? ಬಸವಣ್ಣನ ಅನುಮಾನದ ಚಿತ್ತವೊ? ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲದ ಬೋನ. ಅಲ್ಲಿಯೆ ಸುರಿದು ಬನ್ನಿ ಮಾರಯ್ಯಾ.

೭

ಕಾಯಕದಲ್ಲಿ ನಿರುತನಾದರೆ, ಗುರುದರುಶನವಾದಡೂ ಮರೆಯಬೇಕು; ಲಿಂಗಪೂಜೆಯಾದಡೂ ಮರೆಯಬೇಕು; ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು. ಕಾಯಕವೆ ಕೈಲಾಸವಾದ ಕಾರಣ, ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

೮

ಹಾಗದ ಕಾಯಕವ ಮಾಡಿಕೊಂಡು, ಹಣವಡ್ಡ ತಾ ಎಂಬಲ್ಲಿ ಸತ್ಯಕಾಯಕವುಂಟೆ? ಭಕ್ತರಲ್ಲಿ ಕಾಯಕಕ್ಕೆ ಕಡಮೆಯಾಗಿ ತಾ ಎಂಬುದು ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧಕಾಯಕ.

೯

ಮತ್ತಂ ನೇಮವ ಮಾಡಿಕೊಂಡು, ಭಕ್ತರ ಭವನಂಗಳ ಹೊಕ್ಕು, ಕಾಯಕ ಸತ್ತು ಹಣ ಹೊನ್ನ ಬೇಡಿಹೆನೆಂಬುದು ಕಷ್ಟವಲ್ಲವೆ ಸದ್ಭಕ್ತಂಗೆ? ಆ ಗುಣ ಅಮರೇಶ್ವರಲಿಂಗಕ್ಕೆ ದೂರ.

೧೦

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ. ಭಾವ ಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ. ಬೇಗ ಹೋಗು ಮಾರಯ್ಯಾ.

೧೧

ಅಂಗವರತ ಆರುವೆಯ ಅಂಗದಲ್ಲಿ, ಬಯಕೆಯರತ ಕೈಯಲ್ಲಿ ತಂಡುಲವನಾಯ್ದುಕೊಂಡು, ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ ಕೊಂಡು ಬಾ ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಮಾರಯ್ಯ.

೧೨

ಸಂದಣಿಗೊಂಡು ಮನಹರುಷದಿಂದ ಬಸವಣ್ಣನ ಅಂಗಳಕ್ಕೆ ಹೋಗಿ, ತಿಪ್ಪೆಯ ತಪ್ಪಲಲ್ಲಿ ಬಿದ್ದಿರ್ದ ತಂಡುಲವ ಕಟ್ಟಿಕೊಂಡು ಎಯ್ದಾಗಿ ತರಲು ಎಯ್ದಾಗಿ ಬಂದಿತ್ತಲ್ಲಾ! ಎಂದಿನಂದವೆ ಸಾಕು. ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ. ಮಾರಯ್ಯಪ್ರಿಯ ಅಮರೇಶ್ವರಲಿಂಗ ಕೊಟ್ಟ ಕಾಯಕವೆ ಸಾಕು ಮಾರಯ್ಯಾ.

೧೩

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ, ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ.

೧೪

ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ, ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು,—ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ.

೧೫

ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ? ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ, ಇಮ್ಮನವಾಗದ ಮುನ್ನವೆ ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲಬೇಕು ಮಾರಯ್ಯ.

೧೬

ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ, ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ. ಹಿಡಿದ ಲಾಳಿ ಮುಳ್ಳು ಕಂಡಿಕೆಯ ನುಂಗಿತ್ತು. ಈ ಸೀರೆಯ ನೆಯ್ದವ ನಾನೋ ನೀನೋ ರಾಮನಾಥಾ ?

೧೭

ನೇಮದಿಂದ ಶರಣರ ಬಾಗಿಲಲ್ಲಿ ಹೋಗಿ, ಕಟ್ಟಿದ ಹಸು ಕೂಡಿದ ಎತ್ತು ಬಿಡಿರೋ ಎಂದು ಕೂಗುತ್ತಿದೇನೆ. ಎನ್ನ ಕೂಗಿನ ದನಿಯಿಂದ ಮಹಾಶರಣರ ಸತಿ ಬಂದು ಕಟ್ಟಿದ ಹಸುವ ಬಿಟ್ಟು, ಕೂಡಿದ ಎತ್ತ ಕಡಹಿ ನಾಳೆ ಕೆದಡಿ ಎಂದು ಹೊಡೆವುತ್ತಿದೇನೆ ಗೋಪತಿನಾಥ ವಿಶ್ವೇಶ್ವರಲಿಂಗ ದಡಿಗಾಗಿ.

೧೮

ಉದಯದಲ್ಲಿ ಬ್ರಹ್ಮನ ಕಾವೆ, ಮಧ್ಯಾಹ್ನಕ್ಕೆ ವಿಷ್ಣುವ ಕಾವೆ, ಅಸ್ತಮಯದಲ್ಲಿ ರುದ್ರನ ಕಾವೆ. ಕತ್ತಲೆಯಾದ ಮತ್ತೆ ತಮ್ಮ ತಮ್ಮ ಮಂದೆಗೆ ಹೊಡೆದು, ಈ ಕಾವ ಕಟ್ಟಿಗೆಯನಿನ್ನೆಂದಿಂಗೆ ಬಿಡುವೆ? ಗೋಪತಿನಾಥ ವಿಶ್ವೇಶ್ವರಲಿಂಗವು ನಷ್ಟವಹನ್ನಕ್ಕ ಎನ್ನ ಕೈಯ ಕಟ್ಟಿಗೆ ಬಿಡದು.

೧೯

ಹಸುವಿಗೆ ಹಾಗ, ಎತ್ತಿಗೆ ಹಣವಡ್ಡ, ಕರುವಿಗೆ ಮೂರು ಹಣ; ಎಮ್ಮೆ ಕೋಣ ಕುಲವ ನಾ ಕಾಯಲಿಲ್ಲ. ಅವು ಎನ್ನ ತುರುವಿಗೆ ಹೊರಗು. ತೊಂಡು ಹೋಗದಂತೆ ಕಾದೊಪ್ಪಿಸುವೆ ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ.

೨೦

ಆವಾವ ಭೇದಂಗಳಿಂದ ಬಂದಡೂ ಕಾವುದೊಂದೆ ಭೇದ. ಹೆಣ್ಣು ಹೊನ್ನು ಮಣ್ಣು ಕಾವಲ್ಲಿ ಸಜ್ಜನಂಗಲ್ಲದೆ ಅಶಕ್ಯ ನೋಡಾ. ಆವ ಕಾವಲ್ಲಿ

ಯಾದಡೂ ಭಾವ ಶುದ್ಧವಾಗಿರಬೇಕು. ಈ ಗುಣ ಅರಿವಿನ ತುರುವಿನ ಹಾದಿ, ತುರುಗಾಹಿ ರಾಮನ ಪಥ, ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಶಪಥದ ಪಥ.

೨೧

ಒಂದು ಕೈಯ ಬಯಲು ಎನಗೆ ಕೊಟ್ಟನು. ಒಂದು ಕೈಯ ಬಯಲು ಚೆನ್ನಬಸವಣ್ಣಂಗೆ ಕೊಟ್ಟನು. ನೀವು ಬಂದಿಹಿರೆಂದು ಎಂಟು ಸಾವಿರ ವರುಷ ಒಗೆದೊಗೆದು ಬಿಳಿದು ಮಾಡುತಿರ್ದೆನು. ಒಂದು ಬಿಳಿದ, ಬಸವಣ್ಣ, ನಿನ್ನ ಲಿಂಗಕ್ಕೆ ಕೊಡು ಎಂದು ಕೊಟ್ಟರೆ, ಲಿಂಗಕ್ಕೆ ಕೊಡಲೊಲ್ಲದೆ ತಲೆಗೆ ಸುತ್ತಿಕೊಂಡನು. ಮಡಿಯ ಕೂಲಿಯ ಬೇಡಹೋದರೆ ಬಿಳಿದ ಹರಿದು ಎನ್ನ ಮೇಲೆ ಬೀಸಾಟನು. ನೀನುಟ್ಟ ಬಿಳಿದನು ಚೆನ್ನಬಸವಣ್ಣನ ಕೈಯಲ್ಲಿ ನಿರಾಳವೆನಗೆ ಕೊಡಿಸಾ ಕಲಿದೇವರದೇವಾ.

೨೨

ತಡೆ ನೆಲೆ ಇಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗ ಬಂದಿದ್ದೇನೆ. ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ, ಕಡೆಗಣಿಸಿ ಹಾಯಿಸುವೆ ಮಹಾ ಹೊಳೆಯ . ನುಡಿ ಇಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತನಂಬಿಗ ಚೌಡಯ್ಯ.

೨೩

ಸಂಸಾರವೆಂಬ ಸಾಗರವ ದಾಂಟುವರೆ ಅರುಹೆಂಬ ಹರಿಗೋಲನಿಕ್ಕಿ, ಜ್ಞಾನವೆಂಬ ಅಂಬಿಗ ಈ ಹರಿಗೋಲೊಳಗೆ ಕುಳ್ಳಿರ್ದು, ಸುಜ್ಞಾನವೆಂಬ ಸಟ್ಟುಗವ ಪಿಡಿದು, ಮಹಾಜ್ಞಾನವೆಂಬ ಘಾತಗಳೆಯಂ ಪಿಡಿದು, ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ, ನಾ ನಿನ್ನ ಹಾಯಿಸಿಕೊಟ್ಟೇನೆಂದನು. ನಾನು ನಿನ್ನ ನಂಬಿ ಹರಿಗೋಲನೇರಿದೆನು ಕಾಣಾ ಅಂಬಿಗರಣ್ಣಾ. ಇಂದು ನಾನು ಹರಿಗೋಲಲ್ಲಿ ಕುಳ್ಳಿರ್ದು ನಡುಹೊಳೆಯಲ್ಲಿ ಹೋಗಲಿಕೆ, ಕಾಮವೆಂಬ ಕೊರಡು ಅಡ್ಡಬಿದ್ದಿತ್ತು, ಕ್ರೋಧವೆಂಬ ಸುಳುಹಿನೊಳಗೆ ಸಿಕ್ಕಿತ್ತು, ಅಹಂಕಾರವೆಂಬ ಮೀನು ಬಂದು ನಿಂದಿತ್ತು, ಮಾಯವೆಂಬ ಮೊಸಳೆ ಬಾಯ ಬಿಡುತ್ತಿದ್ದಿತ್ತು, ಮೋಹವೆಂಬ ನೊರೆತೆರೆ ಹೆಚ್ಚಿ ಬರುತ್ತಿದ್ದಿತ್ತು, ಲೋಭವೆಂಬ ಕಡಲು ಎಳೆದೊಯಿವುತ್ತಿದ್ದಿತ್ತು, ಮದವೆಂಬ

ಮರಹು ನೂಕುತ್ತಿದ್ದಿತ್ತು, ಮತ್ಸರವೆಂಬ ಗಾಳಿ ತಲೆಕೆಳಗೆ ಮಾಡುತ್ತಿದ್ದಿತ್ತು. ಇವೆಲ್ಲವನೂ ಪರಿಹರಿಸಿ ಎನ್ನ ಹೊಳೆಯ ದಾಂಟಿಸಿದನು ಅಂಬಿಗರಣ್ಣನು. ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದರೆ, ಕೂಲಿಯ ಕೊಡಲೇನು ಇಲ್ಲಾ ಎಂದರೆ, ಕೈಸೆರೆಯಾಗಿ ಎನ್ನನೆಳೆದೊಯ್ದನಯ್ಯಾ! ಅರುವೆಯ ಕೊಟ್ಟ ಕೂಲಿಗೆ ಕರುವ ಕಾಯಿಸಿಕೊಂಡನಯ್ಯಾ. ಅರಿಯದೆ ಹರುಗೋಲನೇರಿ ತೊರೆಯ ದಾಂಟಿದ ಕೂಲಿಗೆ ಕರುವ ಕಾದೆ ಕಾಣಾ! ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ, ನಿಮ್ಮ ನಂಬಿ ನಾನು ಕೆಟ್ಟು ಬಟ್ಟಬಯಲಾಗಿ ನಿಂದೆನಯ್ಯಾ. ನಿಮ್ಮ ಧರ್ಮ, ನಿಮ್ಮ ಧರ್ಮ!

೨. ದಾಸೋಹಂಭಾವ

೨೪

ಸೋಹಂ ಎಂದಡೆ ಅಂತರಂಗದ ಗರ್ವ; ಶಿವೋಹಂ ಎಂದಡೆ ಬಹಿರಂಗದ ಅಹಂಕಾರ. ಈ ಉಭಯವನಳಿದು ದಾಸೋಹಂಭಾವವನೆ ಕರುಣಿಸಿ ಬದುಕಿಸಯ್ಯಾ ಅಖಂಡೇಶ್ವರಾ.

೨೫

ಪಣಿತೆಯೂ ಇದೆ, ಬತ್ತಿಯೂ ಇದೆ. ಜ್ಯೋತಿಯು ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ? ಗುರುವಿದೆ, ಲಿಂಗವಿದೆ. ಶಿಷ್ಯನ ಸುಜ್ಞಾನ ವಂಕುರಿಸದನ್ನಕ್ಕರ ಭಕ್ತಿಯೆಲ್ಲಿಯದೋ? ಸೋಹವೆಂಬುದ ಕೇಳಿ, ದಾಸೋಹವ ಮಾಡದಿದ್ದರೆ, ಅತಿಗಳೆದೆನು ಗೊಹೇಶ್ವರಾ.

೨೬

ವೇದವನೋದಿ ಕೇಳಿ, ವೇದದ ಮರ್ಮವನರಿದ ಫಲ ದಾಸೋಹವಯ್ಯ. ಶಾಸ್ತ್ರವನೋದಿ ಕೇಳಿ, ಶಾಸ್ತ್ರದ ಮರ್ಮವನರಿದ ಫಲ ದಾಸೋಹವಯ್ಯ. ಆಗಮವನೋದಿ ಕೇಳಿ, ಆಗಮದ ಮರ್ಮವನರಿದ ಫಲ ದಾಸೋಹವಯ್ಯ. ಪುರಾತನರ ವಚನವನೋದಿ ಕೇಳಿ, ಪ್ರಸಂಗಾನುಭವದಲ್ಲಿದ್ದು ಅರಿದ ಫಲ

ದಾಸೋಹವಯ್ಯ. ವೇದ ಶಾಸ್ತ್ರ ಪುರಾಣಾಗಮಂಗಳ ಪುರಾತನರ ವಚನ ಪ್ರಸಂಗವನರಿದು ದಾಸೋಹವಿಲ್ಲದಿರ್ದಡೆ, ಆ ಓದು ಗಿಳಿಯೋದಿನಂತೆ, ಕೇಳುವೆ ಮರುಳನ ಕೇಳುವೆಯಂತೆ. ಅವನೇತಕ್ಕೆ ಬಾತೆಯಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?

೨೭

ಕುಳಿತಾಗ ಭಕ್ತ, ಮುನಿದಾಗ ಮಾನವ. ಗೋಸುಂಬೆಯಂತೆ ಎನ್ನ ಮನವು ಗಳಿಗೆಗೊಂದು ಪರಿ. ಈಶ್ವರಾ, ನಿಮ್ಮ ಜಂಗಮವನುದಾಸೀನವ ಮಾಡಿ, ದಾಸೋಹವಿಲ್ಲದ ಅತಿದೋಷಕ, ದ್ರೋಹಿ ನಾನಯ್ಯಾ. ಬೇಸತ್ತೆನೀ ಮನಕ್ಕೆ. ಸುಬುದ್ಧಿಯ ಹೇಳಿ, ಈಶ್ವರಾ, ಸಂತಯಿಸಯ್ಯಾ ಉರಿಲಿಂಗದೇವಾ.

೨೮

ಅರಿದಡೆ ಶರಣ, ಮರೆದಡೆ ಮಾನವ. ಪಾತಕನು ಹೊಲೆಯ ನಾನೇತಕ್ಕೆ ಬಾತೆ,—ಹೊತ್ತಿಗೊಂದು ಪರಿಯ ಗೋಸುಂಬೆಯಂತೆ? ಈಶನಶರಣರ ಕಂಡು ಉದಾಸೀನವ ಮಾಡುವ, ದಾಸೋಹವನರಿಯದ ದೂಷಕನು ನಾನಯ್ಯ. ಈ ಬುದ್ಧಿಯ ಹೇಳಿ ಬೇಸತ್ತೆನೀ ಮನಕ್ಕೆ. ಈಶ ನೀ ಸಲಹಯ್ಯ ಉರಿಲಿಂಗತಂದೆ.

೨೯

ಪರವಧುವ ನೆರೆಯದೆ, ಪರಧನವ ತುಡುಕದೆ, ಪರದೈವದಿಚ್ಛೆ ನಡೆಯದೆ, ಗುರುಲಿಂಗಜಂಗಮಕ್ಕೆ ವರದಾಸನಾದಾತನೆ ಧರೆ ಮೂರಕ್ಕೆ ಗುರುವಾಗಿಪ್ಪನೈ ರಾಮನಾಥಾ.

೩೦

ಮನ ಮುಟ್ಟಿ ನೆನೆವಲ್ಲಿ ತನು ನಿಮ್ಮದಾಯಿತ್ತು. ತನು ಮುಟ್ಟಿ ಅಪ್ಪಿ, ಮನ ಮುಟ್ಟಿ ನೆರೆದು, ವನಿತೆಯರ ಕೂಟಕ್ಕೆ ತೆರಪಿಲ್ಲದಾಯಿತ್ತು. ಜನನ ಮರಣದ ಬಾಧೆ ಹರಿಯಿತ್ತು,—ಈಶ್ವರಾ, ನಿಮ್ಮ ಪಾದಸೇವೆಯಿಂದ ಕಾಣಾ ರಾಮನಾಥಾ.

೩೧

ಕಾಣಕಾಣುತ್ತ ಕಡೆಗಣಿಸಿ ಅರಸುವ ಮತಿಭ್ರಷ್ಟ ನಾನು ಲಿಂಗಯ್ಯಾ! ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿತ್ತೆನ್ನ. ತನು ಮನ ಧನವ ಶಿವಂಗೆ ನಿವೇದಿಸಿದ ಭಕ್ತರ ಮನೆಯ ಮಗ ನಾನಯ್ಯಾ ಕೂಡಲಸಂಗಮದೇವಾ.

೩೨

ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲಾ. ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ. ಕೂಡಲಸಂಗಮದೇವಾ, ಎನಗಿದೇ ದಿಬ್ಯ!

೩೩

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ. ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ. ಕರ್ತಾರ, ನಿನಗೆ ಕರವೆತ್ತಿ ಪೊಡೆವಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನೈ ರಾಮನಾಥಾ.

೩೪

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ! "ತಾರೋ ಅಗ್ಘವಣಿಯ, ನೀಡೋ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೋ" ಎಂಬರು; "ಕೂಡಲ ಸಂಗನ ಮಹಾಮನೆಯಲ್ಲಿ ಒಕ್ಕುದನುಣ್ಣೋ ತೊತ್ತೇ" ಎಂಬರು.

೩೫

ಅಯ್ಯಾ, ನಿಮ್ಮಲ್ಲಿ ಆಯುವ ಬೇಡುವೆನೆ? ಸಂಸಾರಕ್ಕಾನಂಜುವೆ. ಅಯ್ಯಾ, ನಿಮ್ಮಲ್ಲಿ ಶ್ರೀಯ ಬೇಡುವೆನೆ? ಪರಾಂಗನೆಯ ಪಾಪ. ಅಯ್ಯಾ, ನಿಮ್ಮಲ್ಲಿ ಮುಕ್ತಿಯ ಬೇಡುವೆನೆ? ಅದು ನಿಮ್ಮ ಪದವಿ. ಸಕಳೇಶ್ವರದೇವಾ, ನಾನೇನುವನು ಒಲ್ಲೆ, ನಿಮ್ಮ ಶ್ರೀಪಾದಸೇವೆಯೇ ಸಾಕು.

೩೬

ಭಕ್ತನ ಮಠವೆಂದು ಭಕ್ತ ಹೋದಡೆ, ಆ ಭಕ್ತ ಭಕ್ತಂಗೆ ಅಡಿ ಇಟ್ಟು ಇದಿರೆದ್ದು ನಡೆದು, ಹೊಡೆಗೆಡೆದು ಒಡಗೊಂಡು ಬಂದು, ವಿಭೂತಿ ವೀಳೆಯ ನಿಕ್ಕಿ ಪಾದಾರ್ಚನೆಯ ಮಾಡಿ, ಸಮಯುವನರಿತು ಲಿಂಗಾರ್ಚನೆಯ

ಮಾಡಿಸಿ, ಒಕ್ಕುದ ಕೊಂಡು ಓಲಾಡುತಿಪ್ಪುದೇ ಭಕ್ತಿ. ಹೀಗಲ್ಲದೆ ಬೆಬ್ಬನೆ ಬೆರೆತು ಬಿಬ್ಬನೆ ಬೀಗಿ ಅಹಂಕಾರಭರಿತನಾಗಿಪ್ಪವನ ಮನೆಯ ಲಿಂಗಸನು ಮತರು ಹೊಗರು ಕಾಣಾ ರಾಮನಾಥಾ.

೩೭

ಲಿಂಗಜಂಗಮವ ಪೂಜಿಸಿ ಭಕ್ತನಾದೆನೆಂದರೆ, ಭೃತ್ಯಾಚಾರ ಸದಾಚಾರವೆ ಮೊದಲು ನೋಡಾ. ವಿಶ್ವಾಸವುಳ್ಳ ಭಕ್ತಿಗೆ ಹೊರೆಯಿಲ್ಲ. ಅಹಂಕಾರವೆಂಬ ಅಲಗ ಹಿಡಿದು ಮಾಡುವ ಭಕ್ತಿ ತನ್ನನೆ ಇರಿವುದು. ಗೊಹೇಶ್ವರನೆಂಬ ಹಗೆಯ ಗೆಲುವರೆ, ಅರಿವೆಂಬ ಅಲಗ ಅವಧಾನ ತಪ್ಪದೆ ಹಿಡಿಯಬೇಕು ನೋಡಾ ಬಸವಣ್ಣಾ.

೩೮

ತೊಟ್ಟು ಬಿಡದನ್ನಕ್ಕ ಮತ್ತಾ ಬುಡದಾಸೆ ಬೇಕು. ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ, ನಿತ್ಯ ಜಂಗಮಸೇವೆ ಕೃತ್ಯವಿರಬೇಕು, —ಅಮರೇಶ್ವರಲಿಂಗವನರಿವುದಕ್ಕೆ.

೩೯

ಆಯತ ಸ್ವಾಯತ ಅನುಭಾವವ ನಾನೆತ್ತ ಬಲ್ಲೆನಯ್ಯಾ? ಗುರು ಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವನಿತ್ತ ಭಕ್ತರ ಭೃತ್ಯರ ಭೃತ್ಯರಿಗಾಳಾಗಿಪ್ಪೆನಯ್ಯಾ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರಲ್ಲದನ್ಯವ ತೋರದಿರಯ್ಯ.

೪೦

ಅಯ್ಯಾ, ತನ್ನಾದಿ ಮಧ್ಯಾವಸಾನವ ತಿಳಿದು, ಭವಿ ಭಕ್ತ, ಆಚಾರ ಅನಾಚಾರ, ಯೋಗ್ಯ ಅಯೋಗ್ಯ, ಅರ್ಪಿತ ಅನರ್ಪಿತ, ಸುಸಂಗ ದುಸ್ಸಂಗ, ಸುಚಿತ್ತ ಕುಚಿತ್ತ, ಸುಬುದ್ಧಿ ಕುಬುದ್ಧಿ, ಅಹಂಕಾರ ನಿರಹಂಕಾರ, ಸುಮನ ಕುಮನ, ಸುಜ್ಞಾನ ಅಜ್ಞಾನ, ಸದ್ಭಾವ ದುರ್ಭಾವ, ಪಾಪ ಪುಣ್ಯ, ಧರ್ಮ ಕರ್ಮ, ಸ್ವರ್ಗ ನರಕ, ಇಹಪರವೆಂಬ ಭೇದಾಭೇದವ ತಿಳಿದು ಶೈವ ಮಾರ್ಗದಷ್ಟಾಂಗ ಯೋಗವನುಳಿದು, ವೀರಶೈವ ಶಿವಯೋಗಸಂಪನ್ನನಾಗಿ, ಭಕ್ತಿ ಜ್ಞಾನ ವೈರಾಗ್ಯದಲ್ಲಾಚರಿಸಿ, ಬಕಧ್ಯಾನವನುಳಿದು ರಾಜಹಂಸನ ಹಾಗೆ ಅಸತ್ಯವನುಳಿದು ಸತ್ಯದಲ್ಲಾಚರಿಸುವ ಭಕ್ತ ಜಂಗಮವೇ ದ್ವಿತೀಯ

ಶಂಭುವೆಂದು, ಅವರಂಗಣವ ಕಾಯ್ದು ಅವರುಟ್ಟುದ ತೊಳೆದು, ಅವರೊಕ್ಕುದ ಕೈಕೊಂಡು ಅವರುಗಳ ಹಾರೈಸಿ, ಅವರ ಕಡೆಬಾಗಿಲ ಕಾಯ್ದು ಅವರ ತೊತ್ತಿನ ತೊತ್ತಾಗಿ ಬದುಕಿದೆ ಕಾಣಾ ಕಲಿದೇವರದೇವಾ.

೪೧

ವಂಚಿಸುವ ಸತಿಸುತ ಬಂಧುಗಳು ಮೊದಲಾದ ಲೋಕವ ನಂಬಿ, ನಿರ್ವಂಚಕರಪ್ಪ ಗುರುಲಿಂಗಜಂಗಮವ ವಂಚಿಸಿ ನರಕಕ್ಕಿಳಿವರನೇನೆಂಬೆನಯ್ಯಾ? ಅಕ್ಕಟಕ್ಕಟಾ! ಹೀಗೆಯೇ ಶಿವಾಚಾರ? ಹೀಗೆಯೇ ಸದಾಚಾರ? ಹೀಗೆಯೇ ಭೃತ್ಯಾಚಾರ? ಭಕ್ತಿಯುಕ್ತಿಯನರಿಯದೆ, ತನುಮನಧನಂಗಳು ಕೆಟ್ಟು ಹೋದಾವೆಂಬ ಯುಕ್ತಿಯನರಿಯದೆ, ಮರ್ಮವನರಿದು ವಂಚಿಸುವವರ ವಂಚಿಸಿ, ನಿರ್ವಂಚಕರಾಗಿ ಗುರುಲಿಂಗಜಂಗಮಕ್ಕೆ ದಾಸೋಹವ ಮಾಡಲು, ತನು ಕೆಡದು ಮನ ಕೆಡದು ಧನ ಕೆಡದು. ಶಿವಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೪೨

ಎನ್ನ ತನು, ಎನ್ನ ಧನ, ಎನ್ನ ಮನೆ, ಎನ್ನ ಸತಿ ಸುತರೆಂಬ ಮನಕ್ಕೆ ಈಶ್ವರ ಭಕ್ತಿ ಭಿನ್ನವಾಯಿತ್ತು ನೋಡಾ! ತನ್ನ ಮರೆದು ಇದಿರನರಿದು, ಒಡವೆಯಾತಂಗೆ ಒಡವೆಯ ಒಪ್ಪಿಸಿದರೆ ಕೂಡಿಕೊಂಡಿರ್ಪನು ನೋಡಾ ನಮ್ಮ ಅಖಂಡೇಶ್ವರನು!

೪೩

ಗುರು ಲಿಂಗ ಜಂಗಮದಲ್ಲಿ ಬೆರಸಿ ದಾಸೋಹವ ಮಾಡುವಲ್ಲಿ, ಹೊನ್ನು ಹೆಣ್ಣು ಮಣ್ಣು ಇವೆ ಮೂಲ ಮೊದಲು. ಮಾಟ ಸ್ವಸ್ಥವಾದಲ್ಲಿ ಮೂರ ಮರೆಯಬೇಕು,—ಅಮರೇಶ್ವರಲಿಂಗವನರಿವುದಕ್ಕೆ.

೪೪

ಮನದ ಮತ್ಸರವ ಕಳೆದು, ಮನದ ಕೊನೆಯ ಮೊನೆಯ ಮೇಲೆ ಲಿಂಗವ ಕುಳ್ಳಿರಿಸಬೇಕು. ತನುಗುಣವ ಕಳೆದು ಪ್ರಸಾದಕಾಯವ ಮಾಡಬೇಕು. ಧನಗುಣವ ಕಳೆದು ಮಮಕಾಯವೆನಿಸಬೇಕು. ಈ ತ್ರಿವಿಧಗುಣಂಗಳ ಕಳೆದು, ತ್ರಿವಿಧ ದಾಸೋಹಿಯಾಗಿರಬೇಕಯ್ಯಾ ನಮ್ಮ ಕೂಡಲಚೆನ್ನಸಂಗಮದೇವರಲ್ಲಿ.

೪೫

ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು. ಸತ್ವರಜತಮಂಗಳು ನಿಮ್ಮ ಭೃತ್ಯರಯ್ಯಾ! ಅಂತಃಕರಣಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯಾ! ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ! ಅರಿಷಡ್ವರ್ಗಂಗಳು ನಿಮ್ಮ ತೊತ್ತಿರು. ಸಪ್ತಧಾತುಗಳು ಬಾಣಸಿಗರಯ್ಯಾ! ಅಷ್ಟಮದಂಗಳು ನಿಮ್ಮ ದಳವಾಯಿಗಳು. ನವರಸಂಗಳು ನಿಮ್ಮ ಭಂಡಾರಿಗಳಯ್ಯಾ! ದಶ ವಾಯುಗಳು ನಿಮ್ಮ ಛತ್ರಚಾಮರಸೀಗುರಿಗರು. ಷೋಡಶಕಳೆಗಳು ನಿಮ್ಮ ರಾಣಿವಾಸ. ಶಂಭುಸೋಮನಾಥಲಿಂಗ, ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯಾ!

೪೬

ಏನೆಂಬೆನೇನೆಂಬೆನಯ್ಯಾ! ಮತಿಗೆಟ್ಟು ಮಾನವಲೋಕಕ್ಕೆ ಬಂದೆ. ಬಂದ ಬರವಿನಲ್ಲಿಯೇ ಭವವೆಂಬ ಭೂಪತಿ ಎನ್ನ ಸೆರೆವಿಡಿದು ಕಾಲ ಕಾಮರ ವಶಕ್ಕೆ ಕೊಟ್ಟನಯ್ಯಾ. ಕಾಲಂಗೆ ಕಾಯವ ದಂಡವ ತೆತ್ತುದು ಲೆಕ್ಕವಿಲ್ಲ. ಮನಸಿಜಂಗೆ ಮನವ ದಂಡವ ತೆತ್ತುದು ಲೆಕ್ಕವಿಲ್ಲ. ಹೋದಿಹೆ ನೆಂದರೆ ಒಳಕಾವಲರು ಹೊರಕಾವಲರು ಹೋಗಲೀಸರು. ನನ್ನ ಸೆರೆಯ ನಾನು ಬಿಡಿಸಿಕೊಂಡು ಹೋದಿಹೆನೆಂದರೆ, ನಾನು ದರಿದ್ರನಯ್ಯಾ. ಎನ್ನ ಸೆರೆಯ ಬಿಡಿಸಿಕೊಳ್ಳಿರಯ್ಯಾ ಬಸವಾದಿ ಪ್ರಮಥರಿರಾ. ನಿಮ್ಮ ಸೆರಗೊಡ್ಡಿ ಬೇಡಿಕೊಂಬೆನಯ್ಯಾ. ಭಕ್ತಿಗೆ ಭಂಡಾರವಾಗಿಪ್ಪ ಸಂಗನಬಸವಣ್ಣ, ಎನಗೆ ಹಾಗತೂಕ ಭಕ್ತಿಯ ಕೊಡಯ್ಯಾ. ಪ್ರಸಾದವೇ ಚಿತ್ಪಿಂಡಸ್ವರೂಪ ವಾಗಿಪ್ಪ ಚೆನ್ನಬಸವಣ್ಣ, ಎನಗೆ ಹಾಗತೂಕ ಜ್ಞಾನವ ಕೊಡಯ್ಯಾ. ಮಾಯಾಕೋಳಾಹಳನಪ್ಪ ಅಲ್ಲಮಪ್ರಭುವೇ, ಎನಗೆ ಹಾಗತೂಕ ವೈರಾಗ್ಯವ ಕೊಡಯ್ಯಾ. ಬೆಟ್ಟದ ಗುಂಡ ತಂದು ಇಷ್ಟಲಿಂಗದಲ್ಲಿ ಐಕ್ಯವ ಮಾಡಿದ ಗಟ್ಟಿವಾಳಲಿಂಗವೇ, ಎನಗೆ ಹಾಗತೂಕ ಲಿಂಗವ ಕೊಡಯ್ಯಾ. ಇವು ನಾಲ್ಕು ಹಾಗ ಕೂಡಿದಲ್ಲಿಯೇ ಮನ ಲಿಂಗದಲ್ಲಿ ಅಂದಣವಪ್ಪುದು. ಮನ ಲಿಂಗದಲ್ಲಿ ಅಂದಣವಾದಲ್ಲಿಯೇ ಎನಗೆ ಚಂದ್ರಾಯುಧ ದೊರೆ ಕೊಂಬುದು. ಆ ಚಂದ್ರಾಯುಧಮಂ ಪಿಡಿದು, ಒಳಕಾವಲ ನಾಲ್ವರ ಕೊರಳ ಕೊಯ್ದು, ಹೊರಕಾವಲೈವರ ಹರಿಹಂಚು ಮಾಡಿ, ಕೂಟದ

ಕಾವಲರ ಪಾಚಿಮಾಡದೆ, ಭವದ ಬಳ್ಳಿಯ ಕೊಯ್ದು, ಕಾಲಕಾಮರ ಕಣ್ಣ ಕಳೆದು, ಎಡಬಲದ ಹಾದಿಯ ಹೊದ್ದದೆ, ನಡುವಣ ಸಣ್ಣಬಟ್ಟೆಗೊಂಡು ಬಂದು, ರತ್ನಾಚಲವನೇರಿ ಅಲ್ಲಿಪ್ಪ ಲಿಂಗಮಂ ಬಲಗೊಂಡು, ನೀವಿರ್ದ ಉನ್ಮನಿಯಪುರಕೆ ಬಂದು, ನಿಮ್ಮ ಪಡಿಗ ಪಾದರಕ್ಷೆಯ ಪಿಡಿದು, ನಿಮ್ಮ ಬಾಗಿಲ ಕಾಯ್ದಿಪ್ಪುದೆ ಎನಗೆ ಭಾಷೆ. ಎನ್ನ ಬಿನ್ನಪಮಂ ನೀವು ಮನ ವೊಲಿದು ಕರುಣಿಪುದಯ್ಯಾ. ಇದಕ್ಕೆ ನೀವೆ ಸಾಕ್ಷಿಯಯ್ಯಾ, ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೩. ಪ್ರತ್ಯಕ್ಷ ದರ್ಶನ

ನುಲಿಯ ಚಂದಯ್ಯಗಳ ಸಂಪಾದನೆ

೪೭

ಕಂದ: ನುಲಿಯ ಚಂದಯ್ಯನೆಂದೆಂ
ಬಲಘುತರದ ಶರಣ ತನ್ನ ಲಿಂಗದ ಕೈಯಲಿ
ಸಲೆ ಕಾಯಕ ಮಾಡಿಸಿದ
ಗ್ಗಳ ಚರಿತವ ಪೇಳ್ವೆನಿಳೆಯೊಳಾನಂದದೊಳಂ ೧

ಅದೆಂತೆಂದೊಡಾ ಮೋಳಿಗೆಯ ಮಾರತಂದೆಗಳು ಘನಲಿಂಗದಲ್ಲಿ ಸಮರಸಭಾವವನೆಯ್ದಿ ನಿಶ್ಚಯಿಸಲಿತ್ತ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಸಿದ್ಧರಾಮಯ್ಯದೇವರು ಅಪ್ಪಣ್ಣಗಳು ಸೊಡ್ಡಳಬಾಚರಸರು ಮೊದಲಾದ ಅಸಂಖ್ಯಾತ ಪ್ರಮಥಗಣಂಗಳೆಲ್ಲರು ಮಹಾನುಭಾವದ ನಿಜಾನಂದಶರಧಿಯೊಳೋಲಾಡುತ್ತಮಿರಲು, ಮತ್ತೋರ್ವ ಶರಣನುಲಿಯ ಚಂದಯ್ಯನ ಮಹಾತ್ಮೆ ಎಂತೆಂದೊಡೆ: ಮೊದಲು ಶಿವರೂಪದಿಂ ಈ ಗಣಂಗಳೆಲ್ಲರು ಜಗದ್ಧಿತಾರ್ಥವಾಗಿ ವೀರಶೈವ ನಿಜವರ್ತನಾ ಸಂಬಂಧಮಂ ಮರ್ತ್ಯದಲ್ಲಿ ಪಸರಿಸಲೆಂದು ಭೂಮಿಗೆ ಬಿಜಯಂಗೆಯ್ವಾಗ, ತಾನೊಬ್ಬ

ಶರಣನಾಗಿ ಜನಿಸಿ, ಚಂದಯ್ಯನೆಂಬ ನಾಮದಿಂ ಜಂಗಮದಾಸೋಹಕ್ಕೆ ಸತ್ಯ ಶುದ್ಧ ನಿಜಕಾಯಕದಿಂ ನುಲಿಯ ಮಾಡಿ, ಹಾಗಕ್ಕೆ ಮಾರಿ, ತಂದ ದ್ರವ್ಯದಿಂ ಪದಾರ್ಥಮಂ ತಂದು, ಜಂಗಮಕ್ಕೆ ನೀಡಿ,ತತ್‌ಪ್ರಸಾದಮಂ ಲಿಂಗ ಭೋಗೋಪಭೋಗಿಯಾಗಿರುತ್ತಂ, ಬಸವಣ್ಣನ ಭಕ್ತಿ, ಮಡಿವಾಳಯ್ಯನ ನಿಷ್ಠೆ, ಚೆನ್ನಬಸವಣ್ಣನ ಸಾವಧಾನಜ್ಞಾನ, ಸತ್ಯಣ್ಣನ ಸ್ವಾನುಭಾವಪ್ರಭೆ, ಪ್ರಭುದೇವರ ಸದಾನಂದಪರಮಕಾಷ್ಠೆ, ಅಜಗಣ್ಣನ ಸಮರಸದೈಕ್ಯತ್ವ, ಇಂತಿವರು ಮೊದಲಾದ ಗಣಂಗಳ ನಿಜವೆ ರೂಪಾದಂತೆ ಜಂಗಮಭಕ್ತಿಯೇ ಅಧಿಕ, ಜಂಗಮಪೂಜೆಯೇ ಲಿಂಗಪೂಜೆ, ಜಂಗಮಭಕ್ತಿಯೇ ಲಿಂಗಭಕ್ತಿ, ಜಂಗಮತೃಪ್ತಿಯೇ ಲಿಂಗತೃಪ್ತಿ, ಜಂಗಮದಾಸೋಹವೆ ಪರಮಪದ ವೆಂದರಿದು, ಎಲ್ಲಾ ಕ್ರೀಗಳನು ಜಂಗಮದಾಸೋಹದಲ್ಲಿಯೆ ತಿಳಿದು ಅಲ್ಲಿಯೇ ಮನ ಮಗ್ನವಾಗಿ, ಅದೇ ತನ್ನ ನಿಜಪದವಾಗಿರುತ್ತಂ, ಒಂದು ದಿನ ತನ್ನ ನಿಜಕಾಯಕಕ್ಕೈತಂದು, ಹುಲ್ಲಂ ಕೊಯ್ದು ಹೊರೆಯಂ ಕಟ್ಟುವ ಕಾಲದಲ್ಲಿ, ತನ್ನ ಇಷ್ಟಲಿಂಗವು, ಈತನು ಜಂಗಮದಾಸೋಹವೆ ಪರಮವೆಂಬುದು ನಿಜವೋ? ಅಲ್ಲವೋ? ಎಂದು ನೋಡುವುದು ನಿಮಿತ್ತಂ, ಮತ್ತೆ ಈತನಂ ಅಸಂಖ್ಯಾತರ ಮುಂದೆ ಪ್ರಜ್ವಲಿಸಿ ಅರಿಕೆಯ ಮಾಡುವುದು ನಿಮಿತ್ತಂ, ಈತನಲ್ಲಿ ತಾವು ಸೇವೆಯ ಮಾಡಬೇಕೆಂಬುದು ನಿಮಿತ್ತಂ, ಈ ಮೂರುಭಾವದಿಂ ಸರಿದು ಜಲದಲ್ಲಿ ಬೀಳಲು, ನುಲಿಯ ಚಂದಯ್ಯಗಳು ಈ ಲಿಂಗದ ಮನೋಭಾವದಿಚ್ಛೆಯನರಿದು, ಚರಸೇವೆ ಬೇಕಾದಡೆ ಲಿಂಗ ತಾನೆ ಬಂದಿತ್ತೆಂಬುದರಿಂ, ಪರಿಪೂರ್ಣವಹ ವಸ್ತು ಎಲ್ಲಿದ್ದರೇನು? ಎಂಬ ಭಾವದಿಂ, ಜಂಗಮದಾಸೋಹದಲ್ಲಿಯೆ ಲಿಂಗವುಂಟೆಂದರಿದು, ಆ ಚಂದಯ್ಯಂ ಬಿಟ್ಟು ಪೋಗುತ್ತಿರೆ, ಆ ಲಿಂಗವು ಆತನ ಮನದ ಜಂಗಮಸೇವಾನಿಷ್ಠೆಯಂ ಕಂಡು, ಎಲೆ ಚಂದಯ್ಯಾ, ನಾವು ಬಂದೆವೆಂದು ಮೇಲಕ್ಕೆ ಬಂದು ಧ್ವನಿಯ ಮಾಡ ಲಾತಂ ನಿಮ್ಮ ಭಾವ ಹೇಂಗೆ ಇದ್ದಿತ್ತು ಹಾಂಗೆ ಇರಿ. ನನಗೆ ನಮ್ಮ ಒಡೆಯರ ಸೇವೆ ಉಳಿದಿತ್ತು ಎಂದು ಪೋಗುತ್ತಿರೆ, ಆ ಲಿಂಗವು ತಾನೆ ವೃತ್ತಗೋಳಕ ಗೋಮುಕಾಖಾರವಂ ಉಳಿದು, ಪುರುಷಾಕಾರಮಂ ತಳೆದು, ನಾನು ಬಂದೆನು ಬಿಟ್ಟು ಹೋಗದಿರಯ್ಯಾ ಎನಲಾ ಚಂದಯ್ಯಂ ಕೇಳ್ದು, ಮೊದಲು ಹೋಗಿ ಈಗ ಬಂದಹೆನೆಂದರೆ ನಾನೊಲ್ಲೆನೆನಲು, ಆ ಲಿಂಗವು ನೀನೊಲ್ಲೆ

ನೆಂದಡೆ ನಾನು ಬಿಡೆನೆಂದು ಸೆರಗಂ ಸುತ್ತಿಕೊಂಡು ಬಿಡದಿರಲು, ಆ ಚಂದಯ್ಯ ನೀವು ಸುಮ್ಮನೆ ಬಂದಹೆನೆಂದರೆ ನಾನೊಪ್ಪೆನು, ಮುಂದೆ ನಾವು ಹೋಹ ದಾರಿಯಲ್ಲಿ ಮಡಿವಾಳಯ್ಯಗಳು ಸೀರೆಯ ಪ್ರಕ್ಷಾಲಿಸುತ್ತಿದ್ದಾರು. ಅಲ್ಲಿಗೆ ಹೋಗಿ ಇನ್ನು ಒಡೆಯರ ಸೇವೆ ಮಾಡಿಕೊಂಡಿದ್ದೆಹೆನೆಂದು ಆತನ ಹೊಣೆಯಂ ಕೊಟ್ಟು ಬಾ, ಅಲ್ಲದಿರ್ದಡೆ ನಿನ್ನ ನಾನೊಲ್ಲೆನೆಂದಡಾ ಲಿಂಗವು ತಾನು ಮಡಿವಾಳಯ್ಯಗಳ ಮುಂದೆ ಬಂದು ನಮಸ್ಕರಿಸಿ ನಿಂದಿರೆ, ಆ ಮಡಿವಾಳಯ್ಯಗಳು ನಮಸ್ಕರಿಸಿ ಏನು ಬಂದಿರಿ? ಎಂದು ಕೇಳಲಾಗಿ, ಆ ಲಿಂಗವು ಮಡಿವಾಳಯ್ಯಂಗೆ ತಮ್ಮ ಸ್ಥಿತಿಯನು ಹೇಳಲಾಗಿ, ಆ ಮಡಿವಾಳಯ್ಯಗಳು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೪೮

ಬಂದಹೆನೆಂಬ ಸುಖವ ಹೆರಹಿಂಗಿದವರುಂಟೆ? ಕಂಡ ನಿಧಾನವ ನಡೆ ಎಂದವರುಂಟೆ? ಸುಖಕ್ಕೆ ಸುಖ ಒದಗಿದರೆ ಒಲ್ಲೆನೆಂಬವರುಂಟೆ? ಕಲಿದೇವಯ್ಯ ಬಂದಹೆನೆಂದೊಡೆ ಬೇಡವೆನಲೇಕೆ ಚಂದಯ್ಯಾ?

ಇದಕ್ಕೆ ಚಂದಯ್ಯಗಳ ಪ್ರತ್ಯುತ್ತರ:

೪೯

ಅಂದು ಹೋಗಿ ಇಂದು ಬಂದಹೆನೆಂಬಾಗ ಈ ದಂದುಗದೊಡಲು ತನಗುಂಟೆ? ಘನಲಿಂಗವೆಲ್ಲಿರ್ದಡಲ್ಲಿಯೆ ಪರಿಪೂರ್ಣ. ಲಿಂಗ ಹೋಯಿತ್ತೆಂಬ ಸಂದೇಹವೆನಗುಂಟಾದರೆ ಅಂಗ ಉಳಿಯಬಲ್ಲುದೆ? ಆತ್ಮ ಹೋದಲ್ಲಿ ಘಟವೆಷ್ಟು ದಿನವುಳಿವುದು? ಜಂಗಮ ಉಳ್ಳನ್ನಕ್ಕರ ಚಂದೇಶ್ವರಲಿಂಗಕ್ಕೆ ಸಂದಿಲ್ಲ ಕಾಣಾ ಮಡಿವಾಳಯ್ಯಾ.

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೫೦

ದಾಸೋಹವೆಂಬನ್ನಕ್ಕರ ಈಶ್ವರಪೂಜೆಯ ಆಚಾರದಲ್ಲಿ ಇರಬೇಕು. ಮಾಡೆನೆಂಬ ನೇಮ ಬೇಡಾ. ಮಾಡಿಹೆನೆಂಬ ಕೃತ್ಯ ಬೇಡಾ. ಈ ಉಭಯ

ಸನ್ಮತವಳವಟ್ಟಲ್ಲಿ ಕಲಿದೇವಯ್ಯಂಗೆ ಭಾವ ಶುದ್ಧವಾಯಿತ್ತು ಕಾಣಾ ಚಂದಯ್ಯಾ.

ಇದಕ್ಕೆ ಚಂದಯ್ಯಗಳ ಬಿನ್ನಹ:

೫೧

ಆವಾವ ಕಾಯಕದಲ್ಲಿ ಬಂದರೂ ಭಾವ ಶುದ್ಧವಾಗಿ ಗುರುಲಿಂಗ ಜಂಗಮಕ್ಕೆ ಮಾಡುವುದೆ ಶಿವಪೂಜೆ. ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲವೆ ಮಡಿವಾಳಯ್ಯ?

೫೨

ಮತ್ತಂ, ಲಿಂಗವೆಂಬುದು ಗುರುವಿನ ಹಂಗು. ಗುರುವೆಂಬುದು ಲಿಂಗದ ಹಂಗು. ಈ ಉಭಯಕ್ಕತೀತ ಜಂಗಮಲಿಂಗದಾಸೋಹ. ಅದೆ ಚಂದೇಶ್ವರಲಿಂಗಕ್ಕೆ ಕಟ್ಟುಗೊತ್ತು ಕಾಣಾ ಮಡಿವಾಳಯ್ಯಾ.

ಇದಕ್ಕೆ ಮಡಿವಾಳಯ್ಯಗಳ ವಚನ:

೫೩

ಗುರುವಾದರೂ ಲಿಂಗವ ಪೂಜಿಸಬೇಕು. ಲಿಂಗವಾದರೂ ದೇವತ್ವವಿರಬೇಕು. ಜಂಗಮವಾದರೂ ಲಿಂಗವ ಪೂಜಿಸಬೇಕು. ಜಂಗಮಕ್ಕೆ ಲಿಂಗವಿಲ್ಲದೆ ಪ್ರಮಾಣವಿಲ್ಲ. ಆದಿಯಾಧಾರವಿಲ್ಲದೆ ಜಗವೇನೂ ಇಲ್ಲ. ಅರಿದಹೆನೆಂದರೆ ಅಂಗದಲ್ಲಿ ಲಿಂಗವಿರಬೇಕು. ಕಲಿದೇವಯ್ಯನನರಿವುದಕ್ಕೆ ಇದೆ ಮಾರ್ಗ ಚಂದಯ್ಯಾ.

ಇದಕ್ಕೆ ಚಂದಯ್ಯಗಳ ಬಿನ್ನಹ:

೫೪

ಭಾವ ಶುದ್ಧವಾಗಿಪ್ಪುದೆ ಗುರುಪೂಜೆ. ಜ್ಞಾನ ಶುದ್ಧವಾಗಿಪ್ಪುದೆ ಲಿಂಗಪೂಜೆ. ತ್ರಿಕರಣ ಶುದ್ಧವಾಗಿ, ತ್ರಿವಿಧಮಲ ಶುದ್ಧವಾಗಿ ನಿಂದುದೆ ಜಂಗಮಪೂಜೆ. ಆ ತ್ರಿವಿಧಭೇದದಲ್ಲಿ ತ್ರಿವಿಧಾರ್ಪಣವನರ್ಪಿಸಿ ನಿಂದುದೆ ಚಂದೇಶ್ವರಲಿಂಗಕ್ಕರ್ಪಿತವಯ್ಯಾ ಮಡಿವಾಳಯ್ಯಾ.

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೫೫

ಅರಿವನರಿದಹೆನೆಂದು ಕ್ರೀಯ ಬಿಡಬಹುದೆ? ಮಧುರಕ್ಕೆ ಮಧುರ ಒದಗಲಾಗಿ, ಆ ಸವಿಗೆ ಸವಿ ಕೊರತೆಯುಂಟೆ? ದ್ರವ್ಯಕ್ಕೆ ದ್ರವ್ಯ ಒದಗಲಾಗಿ, ಬಡತನಕಡಹುಂಟೆ? ಮಾಡುವ ಮಾಟ ಶಿವಪೂಜೆಯ ನೋಟ ಭಾವ ವಿರಬೇಕು. ಅದು ಕಲಿದೇವಯ್ಯನ ಕೂಟವಲ್ಲವೆ ಚಂದಯ್ಯಾ?

ಇದಕ್ಕೆ ಚಂದಯ್ಯಗಳ ಬಿನ್ನಹ:

೫೬

ಕಪಿತ್ಥ ಕಾಯ ಹಿಡಿದು ಜಲವನೀಸಬಹುದೇ? ಲಿಂಗಪೂಜೆಗೆ ಷೋಡಶೋಪಚಾರ ಬೇಕು. ಅದ ಮಾಡುವನ್ನಕ್ಕರ ಕಾಯಕ ನಿಂದಿತ್ತು. ಕಾಯಕದೊದೊದಗೆ ಮೂರರ ಕೂಟ ಚಂದೇಶ್ವರಲಿಂಗಕ್ಕೆ ಮಡಿವಾಳಯ್ಯಾ.

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೫೭

ಕಿಂಚಿತ್ತಾದರೂ ನೇಮವ ಮಾಡುವಲ್ಲಿ ಶೂನ್ಯವಿಲ್ಲದಿರಬೇಕು. ಸತ್ವಕ್ಕೆ ತಕ್ಕ ಸಮರ್ಥತ್ವ. ಒಚ್ಚಿ ಹೊತ್ತಾದರೆಯೂ ಶಿವಪೂಜೆಯ ನಿಶ್ಚಯ ವಾಗಿ ಮಾಡಬೇಕು. ಅದು ತನಗೆ ಸುಚಿತ್ತದ ಹಾದಿ. ಕಲಿದೇವರ ದೇವನ ಒದಗು ಕಾಣಾ ಚಂದಯ್ಯಾ.

ಇದಕ್ಕೆ ಚಂದಯ್ಯಗಳ ಬಿನ್ನಹ:

೫೮

ಗೋಡೆಯ ತೊಳೆದು ಕೆಸರ ಕೆಡಿಸಿಹೆನೆಂದರೆ ಆದಾರ ವಶ? ನಿಯ ಮಕ್ಕೆ ಕಡೆ ನಡು ಮೊದಲಿಲ್ಲ. ಒಂದ ಬಿಟ್ಟು ಒಂದ ಹಿಡಿದಿಹೆನೆಂದರೆ ಸಂದಿಲ್ಲದ ಸಂಶಯ. ಅದು ಚಂದೇಶ್ವರಲಿಂಗಕ್ಕೆ ಮಾಟ ಕಾಣಾ ಮಡಿವಾಳಯ್ಯಾ.

ಇದಕ್ಕೆ ಮಡಿವಾಳಯ್ಯಗಳ ವಚನ:

೫೯

ಜಂಗಮಸೇವೆ ಲಿಂಗವಿರಹಿತವಾಗಿರಬೇಕೆ? ಲಿಂಗವೆಂಬುದು ಜಂಗಮದಂಗ. ಆ ಅಂಗವಿಲ್ಲದೆ ಪ್ರಾಣವುಂಟೆ? ಹಣ್ಣಿಲ್ಲದ ರುಚಿಯು

ಬಯಸುವಂತೆ, ನಿನ್ನ ಕಾಯಕದ ಕ್ರೀಯೆಲ್ಲವು ಲಿಂಗವಾದ ಬಳಿಕ ಮತ್ತೇನು ಭಾವಭೇದ? ನೀನೆಂದಂತೆ ಇರಲಿ. ಆರೇನೆಂದರೆ ನಿನ್ನ ಮನವ ತಿಳಿಹಿ ಕೊಳು. ಇದಕ್ಕೆ ಕಲಿದೇವಯ್ಯ ಹೊಣೆ. ಕರಕೊಳ್ಳಾ ಎನ್ನೊಡೆಯನ ಚಂದಯ್ಯಾ.

ಈ ಹೀಗೆಂದು ಮಡಿವಾಳ ತಂದೆಗಳು ನಿರೂಪಿಸಲು, ಇದಕ್ಕೆ ತಮ್ಮ ಲಿಂಗಮಂ ಕಣ್ಣಿಯ ಮಾಡಿಕೊಂಡಿರಬಲ್ಲರೆ ಬಾರೆಂದು ಚಂದಯ್ಯಗಳು ಕರೆವ ಪ್ರಸ್ತಾವದ ವಚನ:

೬೦

ಇಷ್ಟವೆಂಬುದು ಗುರುವಿನ ಹಂಗು. ಆ ಗುರುವಿಗೆಯೂ ಇಷ್ಟಕ್ಕೆಯೂ ಜಂಗಮವೆ ಪ್ರಾಣವೆಂದರಿದ ಬಳಿಕ, ಆ ಗುರುವೂ ಇಷ್ಟವೂ ಜಂಗಮದಲ್ಲಿಯೆ ಅಡಕ ನೋಡಾ. ಆ ಗುರುವೂ ಲಿಂಗವೂ ಜಂಗಮದ ಹಂಗಿಗಳು. ಇದು ಕಾರಣ ಚಂದೇಶ್ವರಲಿಂಗಕ್ಕೆ ಕಣ್ಣಿಯ ಮಾಡಬಲ್ಲರೆ ಬಾರಾ ಎನ್ನ ತಂದೆ.

ಇದಕ್ಕೆ ಮಡಿವಾಳಯ್ಯಗಳಿಗೆ ನಮಸ್ಕರಿಸಿ, ಹೊಣೆಯಕೊಂಡು ತನ್ನ ಲಿಂಗ ಸಹಿತ ಬೀಳ್ಕೊಂಡು, ನಿಜಗೃಹಕ್ಕೆ ಬಂದು, ಆ ಲಿಂಗದ ಕಯ್ಯಲ್ಲಿ ಕಾಯಕವ ಮಾಡಿಸಿ, ಆ ಕಣ್ಣಿಯಂ ಮಾರಿ ಹಾಗವ ಕೊಂಡು ಬಾರೆಂದು ಕಳುಹಲು, ಆ ಲಿಂಗವು ಸಂಗನಬಸವಣ್ಣನ ಮಠಕ್ಕೆಯ್ದಿ ಕಣ್ಣಿಯಂ ಕೊಡಲು, ಇತ್ತ ಬಸವರಾಜದೇವರು ಶಿವಪೂಜೆಯ ಮಾಡುತ್ತ ಈ ವೃತ್ತಾಂತವಂ ತಮ್ಮ ಲಿಂಗದಲ್ಲಿ ಕಂಡು ಇದಿರೆದ್ದು, ಕಣ್ಣಿಯ ತಂದಯ್ಯಂಗೆ ಶರಣೆಂದು, ಸಾವಿರಹೊನ್ನಂ ಕೊಟ್ಟು ಆ ನುಲಿಯಂ ತೆಗೆದುಕೊಂಡು ಬೀಳ್ಕೊಡಲಾ ಲಿಂಗವು ಮರಳಿ ಬಂದಾ ಚಂದಯ್ಯಂಗೆ ಹೊನ್ನಂ ಕೊಡೆ, ಕಂಡಾತ ಇದೆಲ್ಲಿಂದ ತಂದೆಯಯ್ಯಾ? ಕಳವಿಂದ ತಂದೆಯೋ? ಎಂದು ಕೋಪದಿಂದ ನುಡಿವ ಪ್ರಸ್ತಾವದ ವಚನ:

೬೧

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯೆಂದಿನ ನಿತ್ಯನೇಮದಲ್ಲಿ ಸಂದಿರಬೇಕು.

ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ ನಷ್ಟವಯ್ಯಾ! ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು. ನನಗೆ ನನ್ನ ಜಂಗಮದ ಪ್ರಸಾದದಾಗೆ ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ.

೬೨

ಮತ್ತಂ, ಕಂದಿಸಿ ಕುಂದಿಸಿ, ಬಂಧಿಸಿ ನೋಯಿಸಿ, ಕಂಡ ಕಂಡವರ ಬೇಡಿ ತಂದು, ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗಕ್ಕೆ ನೈವೇದ್ಯ ಸಲ್ಲದು. ತನು ಕರಗಿ, ಮನ ಬಳಲಿ ಬಂದ ತೆರದನುವ ನರಿದು, ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವೆ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ, ದುರಾಶೆಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯ ಶುದ್ಧ ಕಾಯಕದ ನಿತ್ಯ ದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ.

ಈ ಹೀಗೆಂದು ಚಂದಯ್ಯಗಳು ತಮ್ಮ ಲಿಂಗದೇವರ ನೋಡಿ, ನೀ ತಂದ ಅನ್ಯದ್ರವ್ಯ ಸಹಿತ ನೀನೆಲ್ಲಿಯಾದರೂ ಹೋಗು. ಮೊದಲು ಗುರುವಾಜ್ಞೆ ಗೆಟ್ಟುದೊಂದು, ಮತ್ತೆ ಹೋದ ಅಪರಾಧಕ್ಕೆ ಒಡೆಯರ ಸೇವೆಯ ಮಾಡಿಹೆ ನೆಂದು ಅವಗಡೆಯ ಶರಣ ಮಡಿವಾಳಯ್ಯನ ಹೊಣೆಯ ಕೊಟ್ಟುದೊಂದು, ಈ ಎರಡಕ್ಕೂ ನೀನೆ ಗುರಿಯಾಗು ಹೋಗೆಂದು ಝುಂಕಿಸಿ ನುಡಿದು ಹೊರ ಡಿಸಲು, ಆ ಲಿಂಗವು ಚಂದಯ್ಯ ಸಹಿತವಾಗಿ ಮಡಿವಾಳಯ್ಯನ ಮಠಕ್ಕೆಯ್ದಿ ಈ ವೃತ್ತಾಂತವೆಲ್ಲವನು ಹೇಳಲು, ಆ ಮಾಚಯ್ಯಗಳು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೬೩

ಕಾಯಕದಲ್ಲಿ ನಿಂದ ಶರಣಂಗೆ ಸೇವೆಯವರ ತಪ್ಪ ಹಿಡಿದಹೆನೆಂದರೆ ಕಾಯಕವೆಂತು ನಡೆವುದಯ್ಯಾ? ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛ ನಕ್ಕೆ ಮುನಿಯಬಹುದೆ? ಮುಗ್ಗಿದ ತುರಗವ ಕಾಲ ಕತ್ತರಿಸಿದವರುಂಟೆ? ಕಚ್ಚುವ ತಿಗುಣೆಗಾಗಿ ಮನೆಯ ಸುಟ್ಟವರುಂಟೆ? ಕಲಿದೇವರ ದೇವನಲ್ಲಿ ತಪ್ಪ ಹಿಡಿಯಲಿಲ್ಲ ಕೇಳಾ ಚಂದಯ್ಯಾ.

ಇಂತು ಶಿವಲಿಂಗದಲ್ಲಿ ತಪ್ಪ ಹಿಡಿಯಬಹುದೆ? ಎಂದು ಮಡಿವಾಳಯ್ಯಗಳು ನುಡಿಯೆ ಇದಕ್ಕೆ ಚಂದಯ್ಯನ ಪ್ರತ್ಯುತ್ತರ :

೬೪

ನುಡಿದ ಮಾತಿಂಗೆ ತಡಬಡ ಬಂದಲ್ಲಿ ನುಡಿದ ಭಾಷೆಗೆ ಭಂಗ ನೋಡಾ. ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ ಒಡಲನಿರಿಸುವುದೆ ಭಂಗ ನೋಡಯ್ಯಾ. ಇದು ಕಾರಣ ನಡೆ ನುಡಿ ಶುದ್ಧವಿಲ್ಲದಿದ್ದರೆ ಚಂದೇಶ್ವರ ಲಿಂಗವಾದರೂ ತಪ್ಪನೊಳಕೊಳ್ಳೆ ಕಾಣಾ ಮಡಿವಾಳಮಾಚಯ್ಯಾ.

ಈ ಹೀಗೆಂದು ಚಂದಯ್ಯಗಳು ಬಿನ್ನೈಸಲು, ಆತನ ತಿಳುಹುವುದಕ್ಕೆ ಅನುಭಾವಮಂಟಪದಲ್ಲಿ ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಂತಾದ ಗಣಂಗಳ ಕಯ್ಯಲಲ್ಲದೆ ಆಗದೆಂದು, ಶರಣರ ಸಂಗವೆ ಮುಖ್ಯವೆಂದು ಅಲ್ಲಿಗೆ ಕರೆವ ಪ್ರಸ್ತಾವದ ವಚನ:

೬೫

ಗುರುಪೂಜೆಯನರಿದಿಹೆನೆಂದು ಲಿಂಗಪೂಜೆಯ ಬಿಡಲಾಗದು. ಲಿಂಗಪೂಜೆಯನರಿದಿಹೆನೆಂದು ಜಂಗಮಪೂಜೆಯ ಮರೆಯಲಾಗದು. ಜಂಗಮಪೂಜೆಯನರಿದಿಹೆನೆಂದು ಶರಣರ ಸಂಗವ ಮರೆಯಲಾಗದು. ಇದು ಕಾರಣ ಶರಣರ ಸಂಗದ ಸಮ್ಯಗ್‌ಜ್ಞಾನದಲಲ್ಲದೆ ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು, ಹೋಹ ಬಾರಾ ಚಂದಯ್ಯಾ.

ಈ ಹೀಗೆಂದು ಮಡಿವಾಳತಂದೆಗಳು ಆ ಚಂದಯ್ಯಗಳನು, ಆತನಂಗದ ಮೇಲಣ ಲಿಂಗವೆ ಚರಸೇವೆಯ ಮಾಡಬೇಕೆಂಬ ಮೋಹದಿಂ ಲಿಂಗಮೂರ್ತಿಯನು ಅನುಭಾವಮಂಟಪಕ್ಕೆ ಬಿಜಯಂಗೈಸಿಕೊಂಡು ಬರಲು, ಆ ಲಿಂಗಭಕ್ತಮೂರ್ತಿಯು ಮೊದಲು ಕಣ್ಣಿಯ ಬಸವಣ್ಣಂಗೆ ಕೊಡಲು ಅದಕ್ಕೆ ಕೂಲಿಯಾಗಿ ಕೊಟ್ಟ ಸಾವಿರಹೊನ್ನಂ ಮರಳಿ ಬಸವಣ್ಣಂಗೆ ಇತ್ತು, ಈ ವೃತ್ತಾಂತಮಂ ಹೇಳಲು, ಆ ಪ್ರಸ್ತಾವದೊಳು ಗಣಂಗಳಿಗೆ ಚಂದಯ್ಯ ನಮಸ್ಕರಿಸಿ, ತನ್ನ ಕಾಯಕದ ಕ್ರಮವನೂ ದಾಸೋಹದ ನೆಲೆಯನೂ ನಿಷ್ಠೆಯ ಬಗೆಯನೂ ಎಲ್ಲಾ ಪ್ರಮಥರು ಕೇಳುವ ಹಾಗೆ ಬಿನ್ನೈಸುವ ಪ್ರಸ್ತಾವದ ವಚನ:

೬೬

ಕೈದ ಹಿಡಿದಾಡುವರೆಲ್ಲಾ ಇರಿವರೆ? ಸಾಧನೆಯ ಮಾಡಬಲ್ಲವರೆಲ್ಲರೂ ಕಾದಬಲ್ಲರೆ? ಅರ್ಥಿಗೆ ಮಾಡುವ ಕೃತ್ಯವಂತರೆಲ್ಲ ಭಕ್ತರಪ್ಪರೆ? ಅದು ಚಂದೇಶ್ವರಲಿಂಗಕ್ಕೆ ಮುಟ್ಟದ ಮಾಟ.

೬೭

ಮತ್ತಂ, ರಣವ ನಿಶ್ಚೈಸಿದ ಸುಭಟಂಗೆ ಮನೆಯ ಮೇಲಣ ಮೋಹ ವುಂಟೆ? ಅರ್ಥ ಪ್ರಾಣಾಭಿಮಾನ ಮೂರನು ಕರ್ತಂಗಿತ್ತ ಮತ್ತೆ ಹೊತ್ತು ಹೋರುವಂಗೆ ಸದ್‍ಭಕ್ತಿಯುಂಟೇ? ಅದು ಚಂದೇಶ್ವರ ಲಿಂಗವ ಮುಟ್ಟದ ಮಾಟ.

೬೮

ಗುರುವಿಂಗೆ ತನುವೆಂದಲ್ಲಿ, ಲಿಂಗಕ್ಕೆ ಮನವೆಂದಲ್ಲಿ, ಜಂಗಮಕ್ಕೆ ಧನ ವೆಂದಲ್ಲಿ, ಮತ್ತೊಂದರಾಸೆಗೆ ಕೊಂಡಾಡಲೇಕೆ? ಅದು ಚಂದೇಶ್ವರಲಿಂಗಕ್ಕೆ ದೂರ.

೬೯

ಮತ್ತಂ, ಇದಿರ ಭೂತಹಿತಕ್ಕೆ ಗುರುಪೂಜೆಯ ಮಾಡಲಿಲ್ಲ. ಅರ್ಥಿ ಗಾರಿಕೆಯಲ್ಲಿ ಲಿಂಗವ ಬಿಟ್ಟು ಪೂಜಿಸಲಿಲ್ಲ. ರಾಜಚೋರರ ಭಯಕ್ಕಂಜಿ ಜಂಗಮದಾಸೋಹವ ಮಾಡಲಿಲ್ಲ. ಆವ ಕೃತ್ಯವಾದರೂ ಮನ ಶುದ್ಧ ವಾಗಿರಬೇಕು,-ಚಂದೇಶ್ವರಲಿಂಗವನರಿಯಬಲ್ಲರೆ.

೭೦

ಮತ್ತಂ, ಗುರು ಇಷ್ಟವ ಕೊಟ್ಟ ಕೂಲಿಗೆ ಮುಟ್ಟಿ ಪೂಜಿಸಲು, ಅದಕ್ಕೆ ದೃಷ್ಟವ ತೋರಿ ತನ್ನ ಬೆಳ್ಳಿಯ ಬೆಟ್ಟದ ಮೇಲೆ ಇರಿಸಿದ. ಇಂತು ಗುರುವಿಂದ ಲಿಂಗಕ್ಕೆ ಮಾಡಿ ಹಿಂದಣ ಮುಂದಣ ಸಂದೇಹಕ್ಕೀಡಾಗದೆ ಪ್ರಸಿದ್ಧಮಪ್ಪ ಜಂಗಮಲಿಂಗಕ್ಕೆ ಮನ ಸಂದು ಧನವ ಕೊಟ್ಟು ಸರ್ವಪದಾರ್ಥವ ಅರ್ಪಿತವ ಮಾಡಲಾಗಿ ಚಂದೇಶ್ವರಲಿಂಗಕ್ಕೆ ಹಿಂದುಮುಂದೆಂಬುದಿಲ್ಲ.

೭೧

ಮತ್ತಂ, ಸಂಸಾರಸಾಗರದ ಮಧ್ಯದೊಳಗೆ ಬೆಳೆದ ಹೊಡೆಕೆಯ ಹುಲ್ಲ ಕೊಯಿತಂದು, ಮತ್ತಮಾ ಕಣ್ಣ ತೆಗೆದು ಕಣ್ಣಿಯ ಮಾಡಿ, ಇಹಪರ

ವೆಂಬ ಉಭಯದ ಗಂಟನಿಕ್ಕಿ, ತುದಿಯಲ್ಲಿ ಮಾಟಕೂಟವೆಂಬ ಮನದ ಕುಣಿಕೆಯೊಳಗೆ ಕಾಯಕವಾಯಿತ್ತು. ಇದು ಕಾರಣ ಚಂದೇಶ್ವರಲಿಂಗವೆಂಬ ಭಾವವೆನಗಿಲ್ಲ.

ಈ ಹೀಗೆಂದು ಚಂದಯ್ಯಗಳು ತಮ್ಮ ಕಾಯಕದ ವಿವರವನು, ದಾಸೋಹದ ನಿಷ್ಠೆಯನು ಗಣಂಗಳ ಮುಂದೆ ಬಿನ್ನೈಸಲು, ಆ ಪ್ರಸ್ತಾವದೊಳು ಪ್ರಭುದೇವರು ಲಿಂಗವ ಬಿಡಲಾಗದೆಂದು ನಿರೂಪಿಸಿದ ಪ್ರಸ್ತಾವದ ವಚನ:

೭೨

ಪರುಷವಾದರೂ ಒಂದರಲ್ಲಿ ಇರಿಸಿರಬೇಕು. ರತ್ನವಿಶೇಷವಾದರೂ ಕುಂದಣದಲ್ಲಿ ಬಂಧಿಸಿ ಸಂದಿರಬೇಕು. ಲಿಂಗವ ಹಿಡಿದಲ್ಲಿ ಪೂಜಿಸುವ ಅಂಗವಿರಬೇಕು. ಇದು ಕಾರಣ ಗೊಹೇಶ್ವರಲಿಂಗವನರಿದು ಮರೆಯಲಿಲ್ಲ ಕಾಣಾ ಚಂದಯ್ಯಾ.

ಈ ಹೀಗೆಂದು ಪ್ರಭುದೇವರು ಜಂಗಮದಾಸೋಹವಾದರೂ ಲಿಂಗವ ಬಿಡಲಾಗದೆಂದು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಬಿನ್ನೈಸುವ ಪ್ರಸ್ತಾವದ ವಚನ:

೭೩

ಗುರುಸೇವೆಯ ಮಾಡಿದರೆ ಇಹದಲ್ಲಿ ಸುಖ. ಲಿಂಗಸೇವೆಯ ಮಾಡಿದರೆ ಪರದಲ್ಲಿ ಸುಖ. ಜಂಗಮಸೇವೆಯ ಮಾಡಿದರೆ ಇಹಪರವೆಂಬುಭಯ ನಾಸ್ತಿ. ಇದು ಚಂದೇಶ್ವರಲಿಂಗದ ಭಾವ ಕಾಣಾ ಪ್ರಭುವೆ.

ಇದಕ್ಕೆ ಪ್ರಭುದೇವರ ನಿರೂಪ:

೭೪

ಅಂಗವುಳ್ಳನ್ನಬರ ಲಿಂಗಪೂಜೆಯೆ ಬೇಕು. ಲಿಂಗವೆಂಬ ಮೂರ್ತಿಯುಳ್ಳನ್ನಬರ ಸಂದಿಲ್ಲದೆ ಅರ್ಪಿಸಬೇಕು. ಅಂಗವಳಿದ ಮತ್ತೆ ಲಿಂಗವೆಂಬ ಭಾವ ಹಿಂಗದಿರಬೇಕು. ಅದು ಗೊಹೇಶ್ವರಲಿಂಗದ ಇರವು ಚಂದಯ್ಯಾ.

ಇದಕ್ಕೆ ಚಂದಯ್ಯಗಳ ಬಿನ್ನಹ:

೭೫

ಗುರುಪೂಜಕರು ಲಿಂಗವನೆತ್ತ ಬಲ್ಲರು? ಲಿಂಗಪೂಜಕರು ಜಂಗಮವ ನೆತ್ತ ಬಲ್ಲರು? ಜಂಗಮದಾಸೋಹ ಉಭಯಸಂಗ ನಾಸ್ತಿ. ಅದು ಚಂದೇಶ್ವರ ಲಿಂಗದ ಅರಿವು ಕಾಣಾ ಪ್ರಭುವೆ.

ಇದಕ್ಕೆ ಪ್ರಭುದೇವರ ನಿರೂಪ:

೭೬

ಐದಿಂದ್ರಿಯವನರಿದಲ್ಲದೆ ಒಂದಿಂದ್ರಿಯಕ್ಕೆ ಸಂದ ಗುಣವನರಿಯ ಬಾರದು,—ಆ ಗುಣ ಏಕಮೂರ್ತಿ ತ್ರಿವಿಧರೂಪಾದ ಕಾರಣ. ಪೂಜೆ ಯೆಂಬುದು ಪುಣ್ಯವೆಂಬ ಭಾವವಿಲ್ಲದೆ ಮಾಡಿದರೆ, ನಮ್ಮ ಗೊಹೇಶ್ವರ ಲಿಂಗಕ್ಕೆ ಅನ್ಯವಿಲ್ಲ ಕಾಣಾ ಚಂದಯ್ಯ.

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಗುರುವಾದರೂ ಲಿಂಗವಾದರೂ ಜಂಗಮವಾದರೂ ಜಂಗಮದಾಸೋಹವೆ ಬೇಕು. ನನಗೆ ಹೇಳುವಾಗ ನಿನಗೆ ಬೇಡವೆ ಎಂದು ಬಿನ್ನೈಸುವ ಪ್ರಸ್ತಾ ವದ ವಚನ:

೭೭

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ. ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು. ಜಂಗಮವಾದರೂ ಕಾಯಕ ದಿಂದವೆ ತನ್ನ ವೇಷದ ಪಾಶ ಹರಿವುದು. ಗುರುವಾದರೂ ಚರಸೇವೆಯ ಮಾಡಬೇಕು. ಲಿಂಗವಾದರೂ ಚರಸೇವೆಯ ಮಾಡಬೇಕು. ಜಂಗಮ ವಾದರೂ ಚರಸೇವೆಯ ಮಾಡಬೇಕು. ಇದು ಚಂದೇಶ್ವರಲಿಂಗದ ಅರಿವು ಕೇಳಾ ಪ್ರಭುವೆ.

೭೮

ಮತ್ತಂ, ಗುರುವ ತಾನರಿದು ವರಗುರು ತಾನಾಗಬೇಕು. ಲಿಂಗವಾ ದರೂ ನಿಷ್ಠೆಯಾಗಿ ಪೂಜೆಗೊಳ್ಳಬೇಕು. ಜಂಗಮವಾದರೂ ತ್ರಿವಿಧವ

ಮರೆದು, ಜಂಘೆ ನಾಸ್ತಿಯಾಗಿ ಜಂಗಮವಾಗಬೇಕು. ಜಂಗಮವಾದರೂ ಜಂಗಮುಕ್ಕೆ ನೀಡಿ ಮಾಡಿ, ಸಂದಳಿದು ಚಂದೇಶ್ವರಲಿಂಗವನರಿಯಬೇಕು. ಕೇಳಾ ಪ್ರಭುವೆ.

ಇದಕ್ಕೆ ಪ್ರಭುದೇವರ ನಿರೂಪ:

೭೯

ಆರಾರ ಭಾವ ತೋರಿದಂತೆ ಆ ಕುಳಕ್ಕೆ ಸುಖವಾಗಿಪ್ಪನು. ಹಿಡಿದ ವ್ರತ ನಿಯಮಂಗಳಲ್ಲಿ ಬಿಡುಗಡೆ ಇಲ್ಲದಿರಬೇಕು. ತಾ ಮಾಡುವ ಎಂದಿನ ನಿತ್ಯನೇಮಂಗಳಲ್ಲಿ ಭಾವ ಶುದ್ಧವಾಗಿಪ್ಪಡೆ, ಗೊಹೇಶ್ವರಲಿಂಗಕ್ಕೆ ಅನ್ಯ ಭಿನ್ನವಿಲ್ಲ ಮಡಿವಾಳಮಾಚಯ್ಯಾ.

ಇದಕ್ಕೆ ಮಡಿವಾಳಯ್ಯಗಳ ವಚನ:

೮೦

ಅಂಗದ ಕ್ರೀಯೆ ಲಿಂಗದ ನಿಜ. ಲಿಂಗದ ನಿಜವೆ ಜಂಗಮ; ಆ ಜಂಗಮದ ಕ್ರೀಯೆಲ್ಲಾ ಲಿಂಗಮಯ. ಜಂಗಮದ ಸೇವೆಯೆ ಲಿಂಗದ ಕಳೆ. ಲಿಂಗದ ಕಳೆಯೆ ಜಂಗಮ. ಜಂಗಮದಿಂದೊದಗಿದುದೆ ಪ್ರಸಾದ. ಆ ಪ್ರಸಾದದೊದವೆ ಲಿಂಗೈಕ್ಯವು. ಈ ಗುರು ನಾನು ನಿಜವ ಸಾಧಿಸಿದೆನು. ನಮ್ಮ ಕಲಿದೇವರದೇವನ ಬಸವಣ್ಣನಿಂದ ಕೇಳಯ್ಯಾ ಚಂದಯ್ಯಾ.

ಇದಕ್ಕೆ ಚಂದಯ್ಯಗಳ ವಚನ:

೮೧

ಒಂದ ಬಿಟ್ಟು ಒಂದ ಹಿಡಿದಲ್ಲಿ, ಆ ಮೂರಂಗ ಒಂದೂ ಇಲ್ಲ. ಹಿಡಿದ ಭಾವ ಒಂದುಂಟಾಯಿತ್ತಾದರೆ, ಉಭಯದ ಸಂಗ ಸಲೆ ಸಂದಿತ್ತು. ಅದು ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಸಂದಿತ್ತು ಮಡಿವಾಳಯ್ಯಾ.

೮೨

ಮತ್ತಂ, ಶಿಷ್ಯಂಗೆ ಗುರು ಬೋಧಿಸುವಲ್ಲಿ, ತನ್ನನಳಿದು ಲಿಂಗವ ತೋರಿಸಬೇಕು. ಲಿಂಗದ ಸಂಗ ನೆನಹಾದಲ್ಲಿ, ಆ ಲಿಂಗಕ್ಕೆ ಉಂಬ ಬಾಯಿ

ಜಂಗಮವಾದ ಕಾರಣ, ಆ ಜಂಗಮಲಿಂಗದ ದಾಸೋಹದಿಂದ ಬೇರೊಂದಂಗವಿಲ್ಲ. ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವ ಹಿಂಗದ ಭಾವ ಕಾಣಾ ಮಡಿವಾಳಯ್ಯಾ.

೮೩

ಮತ್ತಂ, ತನುಭಾವವನರಿದಿಪ್ಪುದು ಗುರುಭಕ್ತಿ. ಮನಭಾವವನರಿದಿಪ್ಪುದು ಲಿಂಗಭಕ್ತಿ. ಎರಡು ಭಾವವನೂ ಮರೆದು, ತ್ರಿವಿಧ ಮಲತ್ರಯಂಗಳ ಮರೆದಿಪ್ಪುದು ಜಂಗಮಭಕ್ತಿ. ಈ ಗುಣ ನಿಶ್ಚಯವಾಗಿ ನಿಂದುದು ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವನರಿದುದು.

ಈ ಹೀಗೆಂದು ಚಂದಯ್ಯಗಳು ತಮ್ಮ ಭಕ್ತಿಕ್ರಿಯೆ ಜ್ಞಾನಾಚಾರದ ದಾಸೋಹವು ಸಂಗನ ಬಸವಣ್ಣಂಗೆ ಪ್ರಿಯವೆಂದು ಬಿನ್ನೈಸಲು, ಆ ಪ್ರಸ್ತಾವದೊಳು ಪ್ರಭುದೇವರು ಮತ್ತಂ ಬಸವಣ್ಣನ ಸ್ವರೂಪವುಂ ಹೇಳಿ, ಆತನ ಕೇಳಿ ಬದುಕೆಂದು ನಿರೂಪಿಸಿದ ಪ್ರತ್ಯುತ್ತರ:

೮೪

ಅಂಗದಲ್ಲಿ ಅಳವಟ್ಟಿರ್ಪ ಆಚಾರವೆ ಲಿಂಗವೆಂದರಿದನು. ಮನದಲ್ಲಿ ಬೆಳಗುತ್ತಿರ್ಪ ಅರಿವೆ ಜಂಗಮವೆಂದರಿದನು. ಈ ಎರಡರ ಸಂಗವೆ ತಾನೆಂದರಿದನು. ಮಾಡುವ ದಾಸೋಹವೆ ಲಿಂಗಜಂಗಮವೆಂದರಿದನು. ನಮ್ಮ ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ನಿಲವನರಿಯಬೇಕು ಕೇಳಾ ಚಂದಯ್ಯಾ.

ಈ ಹೀಗೆಂದು ಪ್ರಭುದೇವರು ಬಸವರಾಜದೇವರ ನೋಡಿ ತಿಳಿದು ಬದುಕೆಂದು ನಿರೂಪಿಸಲು, ಅದಕ್ಕೆ ಬಸವರಾಜದೇವರು ಆ ಚಂದಯ್ಯಗಳ ಜಂಗಮದಾಸೋಹನಿಷ್ಠೆಗೆ ಶರಣೆಂಬ ಪ್ರಸ್ತಾವದ ವಚನ:

೮೫

ಜಂಗಮಸೇವೆಯೆ ಗುರುಪೂಜೆ ಎಂದರಿದ. ಜಂಗಮಸೇವೆಯೆ ಲಿಂಗಪೂಜೆ ಎಂದರಿದ. ಜಂಗಮಸೇವೆಯೆ ತನ್ನರಿವೆಂದರಿದ. ಜಂಗಮಸೇವೆಯೆ ತನ್ನ ನಿಜವೆಂದರಿದ. ಜಂಗಮಸೇವೆಯೆ ಸ್ವಯವೆಂದರಿದ.

ಜಂಗಮಸೇವೆಯೆ ನಿತ್ಯಪದವೆಂದರಿದ. ಇದು ಕಾರಣ ನಮ್ಮ ಕೂಡಲ ಸಂಗಮದೇವರಲ್ಲಿ ಜಂಗಮಪ್ರಾಣಿಯಾದ ಚಂದಯ್ಯನ ಹಳೆಯ ಮಗನಾಗಿ, ಆತನ ಶ್ರೀಚರಣಕ್ಕೆ ಶರಣೆಂದು ಶುದ್ಧನು. ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ ಪ್ರಭುವೆ?

ಇದಕ್ಕೆ ಪ್ರಭುದೇವರು ಬಸವಣ್ಣಾ, ನೀನು ಅರಿಯೆನೆನಬಹುದೆ? ಕುರಿತು ಬಂದ ತಾವಿನಲ್ಲಿ ಮರೆಯ ಮಾಡಿ ನುಡಿವುದುಚಿತವೆ? ಚಂದಯ್ಯಂಗೆ ನೀನೇನು ಮಾಡಿಯು ನಿಜವ ಹೇಳೆಂದು ನಿರೂಪಿಸಿದ ಪ್ರಸ್ತಾವದ ವಚನ:

೮೬

ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ. ಆದಿಯಲ್ಲಿ ನೀನೆ ಲಿಂಗವಾದ ಕಾರಣ ನಿನ್ನಿಂದ ಹುಟ್ಟಿತ್ತು ಜಂಗಮ. ಆದಿಯಲ್ಲಿ ನೀನೆ ಜಂಗಮವಾದ ಕಾರಣ ನಿನ್ನಿಂದ ಹುಟ್ಟಿತ್ತು ಪ್ರಸಾದ. ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ ನಿನ್ನಿಂದ ಹುಟ್ಟಿತ್ತು ಪಾದೋದಕ. ಇಂತೀ ಗುರು ಲಿಂಗ ಜಂಗಮ ಪ್ರಸಾದ ಪಾದೋದಕಸ್ವರೂಪ ನೀನೆಯಾದ ಕಾರಣ, ಜಂಗಮಪ್ರಾಣಿಯಾಗಿ ಸದಾಚಾರಿಯಾದೆ. ಆದು ಕಾರಣ ನೀನೆ ಸರ್ವಾಚಾರಸಂಪನ್ನನಾಗಿ ಪೂರ್ವಾಚಾರಿ ನೀನೆಯಾದ ಕಾರಣ, ಗೊಹೇಶ್ವರಲಿಂಗದಲ್ಲಿ ಚಂದಯ್ಯಂಗೆ ಲಿಂಗದ ನಿಜವ ತಿಳುಪಾ ಸಂಗನ ಬಸವಣ್ಣಾ.

ಈ ಹೀಗೆಂದು ಪ್ರಭುದೇವರು ಆ ಬಸವರಾಜದೇವರ ಅನಾದಿಯನೆತ್ತಿ, ಗುರು ಲಿಂಗ ಜಂಗಮ ಪ್ರಸಾದ ಪಾದೋದಕಸ್ವರೂಪ ಬ್ರಹ್ಮವೆ ನೀನೆಂದು, ಪೂರ್ವಾಚಾರಿಯೂ ನೀನೆ ಎಂದು ಕೊಂಡಾಡಿ ಚಂದಯ್ಯನ ತಿಳುಹೆನಲು, ಬಸವರಾಜದೇವರು ನಾನೇನ ಬಲ್ಲೆನು? ಎನಗೆ ನಿಜವ ತಿಳುಹಿದಾತ ಚೆನ್ನಬಸವಣ್ಣ, ಆತನ ಕೇಳುವುದೆಂದು ಬಿನ್ನೈಸಿದ ಪ್ರಸ್ತಾವದ ವಚನ:

೮೭

ಮೆಲ್ಲಮೆಲ್ಲನೆ ಭಕ್ತಾದ್ಯೈಕ್ಯಾಂತವಾದಹೆನೆಂದು ತಾಮಸಜ್ಞಾನದಲ್ಲಿರಲು, ಅದಕ್ಕೆ ನೀನು ನಿತ್ಯವ ಪಡೆದು ಬಂದೆಯಾ? ಎಂದು ನಿಂದ ಸ್ಥಲ

ದಲ್ಲಿಯೆ ನಿಜ ಷಡುಸ್ಥಲವಡಗದಿರ್ದಡೆ ಜಂಗಮದಾಸೋಹವೇಕೆಂದು ಹೇಳಿ, ನಿಜವ ಕರುಣಿಸಿದನಾಗಿ, ಲಿಂಗಜಂಗಮದ ಭೇದವ ಚೆನ್ನಬಸವಣ್ಣ ಬಲ್ಲ. ನಾನು ಆತನಿರಿಸಿದಂತಿರ್ಪೆನಯ್ಯಾ. ಇದು ಕಾರಣ ಕೂಡಲಸಂಗಮ ದೇವರಲ್ಲಿ ಚಂದಯ್ಯಂಗೆ ಶರಣೆಂದು ಶುದ್ಧನಯ್ಯಾ ಪ್ರಭುವೆ.

ಈ ಹೀಗೆಂದು ಬಸವರಾಜದೇವರು ನಾನರಿಯೆ, ಚೆನ್ನಬಸವಣ್ಣನ ಕೇಳಿ ಎಂದು ಬಿನ್ನೈಸಲು, ಆದಕ್ಕೆ ಚಂದಯ್ಯಗಳು ತಮ್ಮ ಸುಜ್ಞಾನಾಚಾರ ಜಂಗಮದಾಸೋಹ ನಿರ್ಣಯವೆಲ್ಲವು ಚೆನ್ನಬಸವಣ್ಣಂಗೆ ಪ್ರಿಯವೆಂದು ಬಿನ್ನೈಸುವ ಪ್ರಸ್ತಾವದ ವಚನ:

೮೮

ಜಂಗಮಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ, ಗುರುಪೂಜೆ ಸಂದಿತ್ತು. ಜಂಗಮಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ, ಲಿಂಗಪೂಜೆ ಸಂದಿತ್ತು. ಜಂಗಮದಾಸೋಹದಿಂದ ಸರ್ವಸಂಪದವಾಯಿತ್ತು. ಆ ಗುಣವ ನರಿತು ಮಾಡಲಾಗಿ, ಬಟ್ಟಬಯಲು ಕಾಣಬಂದಿತ್ತು. ಹುಟ್ಟುವ ಹೊಂದುವ ನೆಲೆ ಇತ್ತಲೆ ಉಳಿಯಿತ್ತು,—ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವನ ರಿಯಲಾಗಿ.

೮೯

ಮತ್ತಂ, ಜಂಗಮನಮಸ್ಕಾರವೆ ಗುರುಪೂಜೆ. ಜಂಗಮಪೂಜೆಯೆ ಲಿಂಗಪೂಜೆ. ಜಂಗಮತೃಪ್ತಿಯೆ ತನಗೆ ಪ್ರಸನ್ನ. ತನಗೆ ಪ್ರಸಾದವಾದುದೆ ನಿತ್ಯ ಪ್ರಸಾದದಾಗು. ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಕಟ್ಟು ಗೊತ್ತು ಕಾಣಾ ಸಂಗನಬಸವಣ್ಣ ಪ್ರಭುವೆ.

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೯೦

ಕಣ್ಣು ಕಂಡಲ್ಲದೆ ಮನ ನೆನೆಯದು. ಆ ಮನ ನೆನೆದಲ್ಲಿಗೆ ಕಾಲು ನಡೆವುದು. ಕಾಲು ನಡೆದಲ್ಲದೆ ಕಾರ್ಯವಾಗದು. ಕಾಲೆಂದರೆ ನೀ ಚರಿಸುವ ವರ್ತನೆ. ಆ ವರ್ತನಾಚಾರವೆಲ್ಲವೂ ಲಿಂಗವು. ಇದು ಕಾರಣ ಲಿಂಗವ

ಹಿಂಗಿದ ಮಾಟ, ಮೀಸಲಿಲ್ಲದ ಮನೆದೇವರ ಹಬ್ಬದಂತೆ. ನಮ್ಮಗೊಹೇಶ್ವರ ಲಿಂಗಕ್ಕೆ ಇದೆ ಬೇಹ ಶೌಚ ಕೇಳಾ ಚಂದಯ್ಯಾ.

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಆ ಚಂದಯ್ಯಗಳು ಲಿಂಗ ಜಂಗಮದ ನಿಜವನು ಚೆನ್ನಬಸವಣ್ಣನಿಂದ ತಿಳುಹಿಕೊಡೆಂದು ಪ್ರಭುದೇವರ ಬೆಸಗೊಂಬ ಪ್ರಸ್ತಾವದ ವಚನ:

೯೧

ಎನ್ನ ಸತ್‌ಕ್ರೀಯೆ ಬಸವಣ್ಣನು. ಎನ್ನ ಸುಜ್ಞಾನವೆ ಚೆನ್ನ ಬಸವಣ್ಣನು. ಎರಡರ ಏಕೋಭಾವದ ಪ್ರಭೆಯೆ ನೀವು. ನಿಮ್ಮೆಲ್ಲರ ನಿಷ್ಠೆಯ ನಿಜವೆ ಮಡಿವಾಳಯ್ಯನು. ಇಂತೀ ಚತುರ್ವಿಧವೆನಗೆ ಬೇಕಾದ ಕಾರಣ, ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗದಲ್ಲಿ ಇಷ್ಟಲಿಂಗದ ನಿಜವೆ ದಾಸೋಹವೆಂಬುದ ಚೆನ್ನಬಸವಣ್ಣನಿಂದ ತಿಳುಹಿ ಕೊಡಾ ಪ್ರಭುವೆ.

ಈ ಹೀಗೆಂದು ಚಂದಯ್ಯಗಳು ನಿಶ್ಚೈಸಲು ಆ ಪ್ರಭುದೇವರು ಚೆನ್ನ ಬಸವಣ್ಣ ನೀನೆ ಹೇಳೆಂದು ನಿರೂಪಿಸಿದ ಪ್ರಸ್ತಾವದ ವಚನ:

೯೨

ಅಂಗದ ಲಿಂಗವೆ ಮನದ ಲಿಂಗ, ಮನದ ಲಿಂಗವೆ ಭಾವದ ಲಿಂಗ, ಭಾವದ ಲಿಂಗವೆ ಜಂಗಮದಾಸೋಹ. ದಾಸೋಹವೆಂಬುದು ಸಂದಿಲ್ಲದ ನಿಜ ನೋಡಾ! ಅದರಂದವನೆ ತಿಳಿದು ನಿಂದ ನಿಲುಕಡೆಯ ಭೇದವನೆ ಕೇಳ ಬೇಕೆಂದು ಬಂದಲ್ಲಿಯೆ ತಿಳುಹಬೇಕಯ್ಯಾ. ಇಂತೀ ಪ್ರಕಾರದಲ್ಲಿ ಸಂದ ಸೌಖ್ಯದ ಭೇದವನು, ಸಂದಿಲ್ಲದ ಲಿಂಗದ ನಿಜವನು, ಇಂದು ನಮ್ಮ ಗೊಹೇಶ್ವರಲಿಂಗದಲ್ಲಿ ಚಂದಯ್ಯಂಗೆ ತಿಳುಹಿ ಕೊಡಾ ಚೆನ್ನಬಸವಣ್ಣಾ.

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚೆನ್ನಬಸವರಾಜ ದೇವರು ನಿರ್ವಾಹವಾಗಿ ನಿರೂಪಿಸಿದ ಪ್ರಸ್ತಾವದ ವಚನ:

೯೩

ಶ್ರೀಗುರುಕರುಣವೆ ಲಿಂಗ. ಲಿಂಗದ ನಿಜವೆ ಜಂಗಮ. ಇಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೆ ಜಂಗಮ. ಆ ಜಂಗಮದ ನಡೆವ ಸತ್‌ಕ್ರೀಯೆ ಲಿಂಗ. ಆ ಉಭಯದ ಏಕತ್ವಸಿದ್ಧಿಯೆ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮದಾಸೋಹ. ಜಂಗಮದಾಸೋಹವಿಲ್ಲದಡೆ ಲಿಂಗತೃಪ್ತಿ ಇಲ್ಲ. ಅಂಗದ ಮೇಲೆ ಲಿಂಗವಿಲ್ಲದಿರ್ದಡೆ ಆ ಜಂಗಮ ಸೇವೆಯ ಕೈಕೊಳ್ಳ. ಅದು ಕಾರಣ ಒಂದ ಬಿಟ್ಟು ಒಂದರಲ್ಲಿ ನಿಂದರೆ ಅಂಗವಿಲ್ಲದ ಆತ್ಮನಂತೆ, ಶಕ್ತಿ ಇಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ. ಒಂದಂಗ ಶೂನ್ಯವಾಗಿ ಭಕ್ತಿಯುಂಟೆ? ಅವಯವಹೀನನು ರಾಯಪಟ್ಟಕ್ಕೆ ಸಲುವನೆ? ಲಿಂಗಹೀನನು ಭಕ್ತ್ಯಾಚಾರಕ್ಕೆ ಸಲುವನೆ? ಅದು ದೇವತ್ವಕ್ಕೆ ಸಲ್ಲದು. ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ತ್ರಿವಿಧ ಸನ್ಮತವೆ ಚರಸೇವೆಯಯ್ಯಾ ಚಂದಯ್ಯ ಪ್ರಭುವೆ.

೯೪

ಮತ್ತಂ, ಜಂಗಮವೆ ಪರವೆಂದರಿದಡೇನು? ಆ ಜಂಗಮದಂಗವಲ್ಲವೆ ಲಿಂಗ? ಆ ಲಿಂಗಚೈತನ್ಯದರಿವೆಲ್ಲವು ಜಂಗಮವಲ್ಲವೆ? ಅಂಗವಿಲ್ಲದ ಜೀವ, ಆತ್ಮನಿಲ್ಲದಂಗಕ್ಕೆ ಸರ್ವಭೋಗದ ಸುಖ ಉಂಟೆ? ಮಣ್ಣಿಲ್ಲದ ಮರನುಂಟೆ? ಮರನಿಲ್ಲದ ಹಣ್ಣುಂಟೆ? ಹಣ್ಣಿಲ್ಲದ ಸ್ವಾದವುಂಟೆ? ಹೀಂಗರಿವುದಕ್ಕೆ ಕ್ರಮ. ಅಂಗವೆ ಮಣ್ಣು, ಲಿಂಗವೆ ಮರನು, ಫಲವೆ ಜಂಗಮ, ರುಚಿಯೆ ಪ್ರಸಾದ. ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಸಾಕಾರಲಿಂಗವೆ ಜಂಗಮದಂಗವಯ್ಯಾ ಪ್ರಭುವೆ!

ಈ ಹೀಗೆಂದು ಚೆನ್ನಬಸವರಾಜದೇವರು ನಿರೂಪಿಸಲು, ಅದಕ್ಕೆ ಪ್ರಭುದೇವರು ಸಮ್ಯಕ್ಕಾಗಿ ನುಡಿದು, ಚೆನ್ನಬಸವಣ್ಣನ ಪ್ರಸಾದವಾಕ್ಯವ ಕೇಳೆಂದು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೯೫

ಆಚಾರವೆ ಲಿಂಗ, ಆ ಆಚಾರದರಿವೆ ಜಂಗಮ. ಆ ಅಂಗವೆ ಲಿಂಗ, ಚೈತನ್ಯವೆ ಜಂಗಮ. ಆ ಜಂಗಮದ ಸೇವೆಯೆ ಲಿಂಗ, ಕೊಂಬುದೆ ಜಂಗಮ. ನಮ್ಮ ಗೊಹೇಶ್ವರನ ಶರಣರು ಮಚ್ಚುವಂತೆ ಮಡಿವಾಳನ ಕಾಯಕದಂತೆ ನಿರೂಪಿಸಿದ ಚೆನ್ನಬಸವಣ್ಣನ ಕರುಣದಲ್ಲಿ ಬದುಕಾ ಚಂದಯ್ಯಾ.

ಈ ಹೀಗೆಂದು ಪ್ರಭುದೇವರು ಚೆನ್ನಬಸವಣ್ಣನ ನಿರೂಪವ ಕೇಳಿ ಬದುಕೆಂದು ಹೇಳಲಾ ಚಂದಯ್ಯಗಳು ಆ ನಿರೂಪಕ್ಕೆ ಒಪ್ಪಿ ಒಡಂಬಟ್ಟು, ತಮ್ಮ ಇಷ್ಟ ಲಿಂಗಮಂ ಧರಿಸಿಕೊಂಡು, ಚಿತ್ತ ನಿಸ್ತರಂಗವನೆಯ್ದಿ, ಬಸವಣ್ಣ ಮೊದಲಾದ ಶರಣರ ಸಮ್ಯಗ್‌ಜ್ಞಾನವೆನಗಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ:

೯೬

ಎನ್ನಂಗದ ಸತ್‌ಕ್ರೀಯೆ ಬಸವಣ್ಣನು. ಎನ್ನ ಲಿಂಗದ ಸತ್‌ಕ್ರೀಯೆ ಚೆನ್ನಬಸವಣ್ಣನು. ಎನ್ನ ಅರಿವಿನ ಸತ್‌ಕ್ರೀಯೆ ಪ್ರಭುವೆ ನೀವು. ಎನ್ನ ದಾಸೋಹದ ನಿಷ್ಠೆಯೆ ಮಡಿವಾಳಯ್ಯನು. ಇದು ಕಾರಣ ಎನ್ನಂಗ ಲಿಂಗ ಜ್ಞಾನ ದಾಸೋಹ ಇವು ಮುಂತಾದ ಸಮಸ್ತವೂ ನಿಮ್ಮ ಪುರಾತನರಾದ ಕಾರಣ, ಚೆನ್ನಬಸವಣ್ಣನ ಕರುಣ ಇಂತು ಮಾಡಲಾಗಿ, ನಾನು ನಿಮ್ಮ ಪಾದವ ಬೆರೆದು ಬೇರಿಲ್ಲದೆ ನಿಜವನೆಯ್ದಿದೆ ಚೆನ್ನಬಸವಣ್ಣಾ. ಚಂದೇಶ್ವರ ಲಿಂಗದಲ್ಲಿ ಶರಣರ ಸಮ್ಯಗ್‌ಜ್ಞಾನವೆನಗಾಯಿತ್ತಯ್ಯಾ ಪ್ರಭುವೆ.

೧೧

ಭಕ್ತಿಯ ಸಂಪತ್ತು

೧. ಸದ್ಭಕ್ತಿ

೧

ಘನತರ ಚಿತ್ರದ ರೂಹ ಬರೆಯುಬಹುದಲ್ಲದೆ, ಪ್ರಾಣವ ಬರೆಯ ಬಹುದೇ? ಅಯ್ಯ, ದಿವ್ಯಾಗಮಂಗಳು ಹೇಳಿದ ಕ್ರಿಯೆಯಲ್ಲಿ ದೀಕ್ಷೆಯ ಮಾಡಬಹುದಲ್ಲದೆ, ಭಕ್ತಿಯ ಮಾಡಬಹುದೆ? ಅಯ್ಯ, ಪ್ರಾಣವಹ ಭಕ್ತಿಯ ತನ್ಮಯ ನೀನು. ಈ ಗುಣವುಳ್ಳಲ್ಲಿ ನೀನಿಹೆ; ಇಲ್ಲದಲ್ಲಿ ನೀನಿಲ್ಲ ಗೊಹೇಶ್ವರಾ.

೨

ಗಾಳಿ ಬೀಸುವ ವೇಳೆಯಲ್ಲಿ ತೂರಿಕೊಳ್ಳಿರೋ ಬೇಗ ಬೇಗ! ಗಾಳಿ ನಿಮ್ಮಿಚ್ಛೆಯಲ್ಲ ಕೇಳಿರೋ ಜಾಳಮನುಜರಿರಾ! ಅಂಗಕ್ಕೆ ಅಳಿವು ಬರುವುದು ದೂರವಿಲ್ಲ ನೋಡಿರೋ! "ತ್ವರಿತಂ ಜೀವಿತಂ ಯಾತಿ ತ್ವರಿತಂ ಯಾತಿ ಯೌವನಮ್ । ಯಾತಿ ಪ್ರಖ್ಯಾತಿಸ್ತ್ವರಿತಂ ತಸ್ಮಾತ್ ಪೂಜಯ ಶಂಕರಮ್ ॥" ಇದನರಿದು ಬೇಗ ಬೇಗ ಲಿಂಗವ ಪೂಜಿಸಿರೋ! ಬೇಗ ಬೇಗ ಜಂಗಮವನೊಲಿಸಿರೋ! ಅರಿವುಳ್ಳ ಕಾಲಕ್ಕೆ ಬೇಗ ಬೇಗ ನಮ್ಮ ಅಖಂಡೇಶ್ವರಲಿಂಗವ ಕೂಡಿರೋ!

೩

ಮುಂದುಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತ ಸಮಯದಲ್ಲಿ ಶಿವಭಕ್ತರ ಮುಖವ ನೋಡುವುದು. ಹುಟ್ಟಿದುದಕ್ಕಿದೆ ಸಫಲ ನೋಡಾ! ಸತ್ಯವಚನವಿಂತೆಂದುದು. ಇವಿಲ್ಲದವರ ನಾನೊಲ್ಲೆ ಗೊಹೇಶ್ವರಾ.

೪

ಆಲಸ್ಯವೇತಕೋ ಲಿಂಗಪೂಜೆ ಮಾಡುವುದಕ್ಕೆ? ಆಲಸ್ಯವೇತಕೋ ಜಂಗಮವನರ್ಚಿಸುವುದಕ್ಕೆ? ಆಲಸ್ಯವೇತಕೋ ನಮ್ಮ ಅಖಂಡೇಶ್ವರ ಲಿಂಗವನೊಲಿಸುವುದಕ್ಕೆ?

೫

ಕೊಡುವ ಲಿಂಗವ ಬೇಡಿಕೊಳಲರಿಯದೆ, ಕೊಡಲರಿಯದ ಮಾನವರ ನಾಶೆಮಾಡಿ ಕೆಡಬೇಡ ಕೆಡಬೇಡ ಕೇಳಿರಣ್ಣಾ. ಪುರಾತನರು ಗುರುಲಿಂಗ ಜಂಗಮುವನರ್ಚಿಸಿ, ದಾಸೋಹವ ಮಾಡಿ, ಕೇವಲ ವಿಶ್ವಾಸದಿಂದೆ ಲಿಂಗವನೆ ಬೇಡಿ, ಲಿಂಗದಲ್ಲಿ ವರವ ಪಡೆದುದಕ್ಕೆ ದೃಷ್ಟವ ನೋಡಿರೇ. ಅದು ಎಂತೆಂದೊಡೆ, ಲಿಂಗವು ಮಾರ್ಕಂಡೇಯ ಮಳೆಯರಾಜರಿಗೆ ಆಯುಷ್ಯವ ಕೊಟ್ಟ ನೋಡಿರೇ. ಸುರಗಿಯ ಚೌಡಯ್ಯ ಬಸವರಾಜದೇವರ ಹೋದ ಪ್ರಾಣಂಗಳ ಬೇಡಿದೊಡೆ, ಕೊಟ್ಟ ನೋಡಿರೇ. ಇನ್ನು ಲಿಂಗವು ಭಾಷೆಯ ಕೊಟ್ಟುದಕ್ಕೆ ದೃಷ್ಟವ ನೋಡಿರೇ. ಚೋಳಂಗೆ ಹೊನ್ನ ಮಳೆಯ ಕರೆಸಿದ. ದಾಸಂಗೆ ತವನಿಧಿಯ ಕೊಟ್ಟ. ದೇವ ದಾನವ ಮಾನವರಿಗೆಯೂ ಅವರವರು ಬೇಡಿದ ಪದಂಗಳ ಕೊಟ್ಟ ನೋಡಿರೇ. ಇಂತಿವು ಮೊದಲಾದ ಆಯುಷ್ಯ ಭಾಷೆಯ, ಪ್ರಾಣಂಗಳು ಮತ್ತೇನೇನು ಪದಂಗಳಂ ಬೇಡಿದೊಡೆ ಕೊಡುವಂತಹ ಮಹಾದಾನಿಯನೆ ಬೇಡಿಕೊಳ್ಳಿರೆ. ಅನಾಥನಾಥನನು, ಅನಾಥಬಂಧುವನು, ಕರುಣಾಕರನನು, ವರಮೂರ್ತಿಯನು, ದಾನಗುಣಶೀಲನನು, ಭಕ್ತದೇಹಿಕ ದೇವನನು, ಭಕ್ತದೇಹಿಕ ಚಿಂತಾಮಣಿಯನು, ಭಕ್ತದೇಹಿಕ ಕಾಮಧೇನುವನು, ಭಕ್ತದೇಹಿಕ ಕಲ್ಪವೃಕ್ಷವನು ಬೇಡಿಕೊಳ್ಳಿರೇ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನನು.

೬

ಒಡಲ ಕಳವಳಕ್ಕಾಗಿ ಅಡವಿಯ ಪೊಕ್ಕೆ. ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು. ಅವು ನೀಡಿದವು ತಮ್ಮ ಲಿಂಗಕ್ಕೆಂದು. ಆನು ಬೇಡಿ ಭವಿಯಾದೆನು, ಅವು ನೀಡಿ ಭಕ್ತರಾದವು. ಇನ್ನು ಬೇಡಿದೆನಾದರೆ ಚೆನ್ನ ಮಲ್ಲಿಕಾರ್ಜುನಯ್ಯಾ ನಿಮ್ಮಾಣೆ.

೭

ಅದು ಬೇಕು ಇದು ಬೇಕು ಎಂದೆಂಬ ಎದೆಗುದಿಹತನ ಬೇಡ. ಹದುಳಿಗನಾಗಿದ್ದರೆ ಸಾಕು. ಪಡಿಪದಾರ್ಥ ತನ್ನಿದ್ದೆಡೆಗೆ ಬಹುದು. ನಿಧಿ ನಿಕ್ಷೇಪ

ತನ್ನಿದ್ದೆಡೆಗೆ ಬಹುದು. ಹೃದಯಶುದ್ಧನಾಗಿ ಸಕಳೇಶ್ವರದೇವ ಶರಣೆಂದರೆ ನಿಜಪದವನೀವನು.

೮

ಲಿಂಗವು ಸರ್ವಾಂಗದಲ್ಲಿ ಭರಿತವಾಗಿರಲು ಮನವರಿಯದು, ತನು ಸೋಂಕದು; ಜ್ಞಾನ ಕಾಣಿಸದು, ಭಾವ ಮುಟ್ಟದು. ಶಿವಶಿವಾ! ವಿಶ್ವಾಸದಿಂದ ಗ್ರಹಿಸಿ ಹಿಡಿಯದು. ಶಿವಶಿವಾ ! ಕೆಟ್ಟೆ ಕೆಟ್ಟೆ. ಅಂತರಂಗ ಬಹಿರಂಗ ಭರಿತವಾಗಿ ಲಿಂಗವಿದ್ದಾನೆ. ಮನ ವಿಶ್ವಾಸದಿಂಡ ಗ್ರಹಿಸಿದಡೆ ಸತ್ಯನಪ್ಪೆ, ನಿತ್ಯನಪ್ಪೆ, ಮುಕ್ತನಪ್ಪೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೯

ಬಯಲು ಬೆಳಗುಳ್ಳನ್ನಕ್ಕ ಮುಂದೊಂದು ಕುರುಹಿನ ಕುಲ ಬಿಡದು. ಕುರುಹುಳ್ಳನ್ನಕ್ಕ ಅರಿದಿಹೆನೆಂಬ ಭಾವ. ಆ ಅರಿಕೆಯೆಂಬುದು ವಿಶ್ವಾಸದಿಂದಲ್ಲದೆ ಕಾಣಬಾರದು. ಇದು ಸಂಗನಬಸವಣ್ಣನು ಸಂಧಿಸಿದ ಸಂಬಂಧ. ಬ್ರಹ್ಮೇಶ್ವರಲಿಂಗವ ವಿಶ್ವಾಸದಿಂದಲ್ಲದೆ ಸಂಬಂಧಿಸಬಾರದು.

೧೦

ಬಾಯ ಮುಚ್ಚಿ ನಾಸಿಕದಲ್ಲಿ ಉಣಬಹುದೇ? ನಾಸಿಕವ ಮುಚ್ಚಿ ಬಾಯಲ್ಲಿ ವಾಸಿಸಬಹುದೇ? ಕಣ್ಣ ಮುಚ್ಚಿ ಕಿವಿಯಲ್ಲಿ ಕಾಣಬಹುದೇ? ಕಿವಿಯ ಮುಚ್ಚಿ ಕಣ್ಣಲ್ಲಿ ಕೇಳಬಹುದೇ? ಇಂತಿವಕ್ಕೆ ಆತ್ಮವೊಂದೆಂದಡೆ ತಮ್ಮ ತಮ್ಮ ಸ್ವಸ್ಥಾನಂಗಳಲ್ಲಿ ಅಲ್ಲದೆ ದೃಷ್ಟವ ಕಾಣಬಾರದು. ಆವ ಸ್ಥಲವನೆಮ್ಮಿದರೂ ಆ ಸ್ಥಲಕ್ಕೆ ವಿಶ್ವಾಸ ಬೇಕು. ಇದು ಸಂಗನಬಸವಣ್ಣನ ಭಕ್ತಿ, ಬ್ರಹ್ಮೇಶ್ವರಲಿಂಗವನರಿವುದಕ್ಕೆ ಇಕ್ಕಿದ ಭಕ್ತಿ.

೧೧

ಕಾಯವಳಿದ ಠಾವಿನಲ್ಲಿ ಜೀವದ ಎಡೆಯಾಟವುಂಟೇ? ಭಾವ ಶುದ್ಧವಿಲ್ಲದ ಭಕ್ತಿ ಹೋಯಿತ್ತು,—ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದೆ.

೧೨

ಆವ ಸ್ಥಲವ ಸಾಧಿಸಿ ಬಂದು ನಿಂದಡೂ ಭಾವ ಶುದ್ಧಾತ್ಮನಾಗಿ ವೇಧಿಸುವದೊಂದೇ ವಸ್ತು. ಅದು ಭಕ್ತಿಯ ಬೇರು, ಅದು ಶ್ರದ್ಧೆಯ ಶಾಖೆ, ವಿಶ್ವಾಸದ ಫಲ, ನಿಜತತ್ವದ ರಸ, ಸ್ವಯದ ಸ್ವಾದು. ಅದು ಸಂಗನಬಸವಣ್ಣ ನಿಂದ ಬಂದ ಬೆಳೆ ಬ್ರಹ್ಮೇಶ್ವರಲಿಂಗದಲ್ಲಿ ಐಕ್ಯವಾಯಿತ್ತು.

೧೩

ಇಮ್ಮನ ಭಕ್ತಂಗೆ ಕರ್ಮದ ವಿಧಿ ಕಾಡುತಿರ್ಪುದು ನೋಡಾ! ಆ ಇಮ್ಮನವಳಿದು ಒಮ್ಮನವಾಗಿ ನಿಮ್ಮನರಿತರೆ, ಕರ್ಮದ ವಿಧಿ ಬಿಟ್ಟೋಡಿತ್ತು ನೋಡಾ ಅಖಂಡೇಶ್ವರಾ.

೧೪

ವಿಶ್ವಾಸವೇ ಭಕ್ತಿ, ಗುರು ಲಿಂಗ ಜಂಗಮ ಒಂದೆಂದರಿವುದೇ ಜ್ಞಾನ, ತ್ರಿವಿಧದಲ್ಲಿ ನಿರ್ವಂಚನೆಯೇ ವೈರಾಗ್ಯ, ಪ್ರಸಾದವೇ ಮುಕ್ತಿ. ಇದು ಸತ್ಯ, ಶಿವ ಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೫

ಪುತ್ರ ಮಿತ್ರ ಕಳತ್ರಕ್ಕೆ ಮೋಹಿಸುವಂತೆ ಗುರು ಲಿಂಗ ಜಂಗಮಕ್ಕೆ ಮೋಹಿಸಬೇಕು ಕಾಣಿರೋ. ಕನ್ನಪ್ಪ ಚೆನ್ನಯ್ಯ ಚೋಳಿಯಕ್ಕನ ಮೋಹವ ನೋಡಿರೇ. ಮೋಹವೇ ಭಕ್ತಿ, ಭಕ್ತಿಯೇ ಮುಕ್ತಿ. ಮುಕ್ತಿಯೇ ಸುಖ, ಸುಖವೇ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯ ತಾನೆ ಕಾಣಿರೋ.

೧೬

ಹಾಡಿದರೆ ಹಾಡುವೆನಯ್ಯ ಶಿವಶರಣರ, ಎನ್ನ ಮನವೊಲಿದು. ನೋಡಿದರೆ ನೋಡುವೆನಯ್ಯ ಸದ್ಭಕ್ತಸ್ತ್ರೀಯರ, ಎನ್ನ ಹೆತ್ತತಾಯಿಗಳೆಂದು. ಬೇಡಿದರೆ ಬೇಡುವೆನಯ್ಯ ಎನ್ನ ಶ್ರೀಗುರುವಿನಲ್ಲಿ, ನಿತ್ಯ ನಿಜಮುಕ್ತಿಯ. ಕೂಡಿದರೆ ಕೂಡುವೆನಯ್ಯ ಅಖಂಡೇಶ್ವರಾ, ನಿಮ್ಮ ಶ್ರೀಚರಣವನೊಡಗೂಡುವ ಅವಿರಳ ಸಮರಸಭಕ್ತಿಯಲ್ಲಿ.

೧೭

ನಿಮ್ಮ ನೋಡಿ ನೋಡಿ ಎನ್ನ ಕಂಗಳು ದಣಿಯವಯ್ಯ. ನಿಮ್ಮ ಹಾಡಿ ಹಾಡಿ ಎನ್ನ ಜಿಹ್ವೆ ದಣಿಯದಯ್ಯ. ನಿಮ್ಮ ಪೂಜೆಯ ಮಾಡಿ ಮಾಡಿ ಎನ್ನ ಕೈಗಳು ದಣಿಯವಯ್ಯ. ನಿಮ್ಮ ನೆನೆನೆನೆದು ಎನ್ನ ಮನವು ದಣಿಯದಯ್ಯ ಅಖಂಡೇಶ್ವರಾ!

೧೮

ತಾಳ ಮಾನ ಸರಿಸವನರಿಯೆ, ಓಜೆಬಜಾವಣೆಯ ಲೆಕ್ಕವನರಿಯೆ, ಅಮೃತಗಣ ದೇವಗಣವನರಿಯೆ! ಕೂಡಲಸಂಗಮದೇವಾ, ನಿನಗೆ ಕೇಡಿಲ್ಲ ವಾಗಿ ಆನುವೊಲಿದಂತೆ ಹಾಡುವೆ!

೧೯

ನಚ್ಚಿದೆನೆಂದರೆ, ಮಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇದಕ್ಕೆಲ್ಲ ಅಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ.

೨೦

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ. ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ. ದೃಢವಿಲ್ಲದ ಭಕ್ತಿ, ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ,—ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದ ಭಕ್ತಿ.

೨೧

ಹೊರಗೆ ಹೊನ್ನ ಬಿಟ್ಟೆನೆಂದು ನುಡಿವುತಿರ್ಪೆನಲ್ಲದೆ ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು. ಹೊರಗೆ ಹೆಣ್ಣು ಬಿಟ್ಟೆನೆಂಬು ನುಡಿವುತಿರ್ಪೆ ನಲ್ಲದೆ ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು. ಹೊರಗೆ ಮಣ್ಣು ಬಿಟ್ಟೆ ನೆಂದು ನುಡಿವುತಿರ್ಪೆನಲ್ಲದೆ ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು. ಇಂತಪ್ಪ ಏಕಾಂತದ್ರೋಹಿ, ಗುಪ್ತಪಾತಕಂಗೆ ಅಖಂಡೇಶ್ವರನು ಒಲಿ ಎಂದೊಡೆ ಎಂತೊಲಿವನಯ್ಯ ಎನಗೆ?

೨೨

ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ, ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಬಾರದು. ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು,—ಲಿಂಗಮುಖದಲ್ಲುದಯವಾದ ಶರಣಂಗಲ್ಲದೆ. ಅಯ್ಯಾ, ಕೂಡಲಸಂಗನ ಶರಣರ ಭಕ್ತಿಭಂಡಾರವು ಎನಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೇ.

೨೩

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲವಯ್ಯಾ. ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲವಯ್ಯಾ. ನಾದವ ಮಾಡಿದ ರಾವಳಂಗೆ ಅರೆಯಾಯುಷ್ಯವಾಯಿತ್ತು; ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು! ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ. ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.

೨೪

ಭಕ್ತಿಯ ಭಾವ ನಿಷ್ಠೆ ನಿಬ್ಬೆರಸಲಾಗಿ, ಶಿವನ ತನ್ನ ವಶವ ಮಾಡಿತ್ತು ಭಕ್ತಿ. ಶಿವನ ನಡೆಸಿತ್ತು ಭಕ್ತಿ, ನುಡಿಸಿತ್ತು ಭಕ್ತಿ. ಶಿವನನುಣಿಸಿ ಉಡಿಸಿ ತೊಡಿಸಿತ್ತು ಭಕ್ತಿ. ಶಿವನ ಹಾಡಿಸಿ ಕುಣಿದಾಡಿಸಿತ್ತು ಭಕ್ತಿ. ಇಂತಲ್ಲದೆ ವಿರಕ್ತಿಯಿಲ್ಲ, ಜ್ಞಾನವಿಲ್ಲ. ದೇವಾ, ಇದು ಕಾರಣ ಭಕ್ತಿಯೇ ಮುಕ್ತಿಜನನಿ ತಾನೆ, ಬೇರಿಲ್ಲ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವನೈದುವಡೆ ಭಕ್ತಿಯಿಂದಲ್ಲದಾಗದು.

೨೫

ಭಕ್ತಿ ಎಂತಹುದಯ್ಯಾ? ದಾಸಯ್ಯ ಮಾಡಿದಂತಹುದಯ್ಯಾ. ಭಕ್ತಿ ಎಂತಹುದಯ್ಯಾ? ಸಿರಿಯಾಳ ಮಾಡಿದಂತಹುದಯ್ಯಾ. ಭಕ್ತಿ ಎಂತಹುದಯ್ಯಾ? ನಮ್ಮ ಸಿಂಧುಬಲ್ಲಾಳ ಮಾಡಿದಂತಹುದಯ್ಯಾ. ಭಕ್ತಿ ಎಂತಹುದಯ್ಯಾ? ಕೂಡಲಸಂಗಮದೇವಾ, ನೀ ಬಾಣನ ಬಾಗಿಲ ಕಾಯ್ದಂತಹುದಯ್ಯಾ.

೨೬

ಭಕ್ತರೆ ಸಮರ್ಥರು, ಅಸಮರ್ಥರೆನಿಸಲುಂಟೆ? ಚೆನ್ನನೆತ್ತ, ಚೋಳನೆತ್ತ? ಚೆನ್ನನೊಡನುಂಡ ಶಿವ. ಅಹಾ! ಅಯ್ಯಾ, ಚೆನ್ನ ಚೋಳನ ಮನೆಯ ಕಂಪಣಿಗನಯ್ಯಾ! ಕೂಡಲಸಂಗಮದೇವ ಭಕ್ತಿಲಂಪಟನಯ್ಯಾ!

೨೭

ಸತ್ಯದ ಭೂಮಿಯಲ್ಲಿ ಭಕ್ತಿಯ ಬೆಳಸು. ಕರಣದ ಕತ್ತಲೆ ಎಂಬ ಕಳೆಯ ಕಳೆದು, ಶಕ್ತಿ ಭಕ್ತಿಯನೊಳಕೊಂಡು ನಿಂದ ಮುಕ್ತ್ಯಂಗನೆ ಸಚ್ಚಿದಾನಂದಸ್ವರೂಪೆ ನೋಡಾ. ನಿತ್ಯ ನಿಜತತ್ವವ ನೆರೆದು, ಉತ್ಪತ್ತಿ ಸ್ಥಿತಿ ಪ್ರಳಯವ ಮೀರಿದ ಶರಣನ ಪರಮ ಭಕ್ತಿಯನು ಏನೆಂದು ಉಪಮಿಸುವೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ!

೨೮

ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ. ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೆ. ಹೇಳಿ ಕೇಳಿ ಮಾಡುವುದು ಯುಕ್ತಿಭಕ್ತಿ. ಸಾಧಕಾಂಗದಿಂದ ಮಾಡುವುದು ಅಭ್ಯಾಸಭಕ್ತಿ. ಮನ ಕೂರ್ತು ಮಾಡುವುದು ಮುಕ್ತಿಭಕ್ತಿ. ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ. ಇದ್ದಂತಿದ್ದು ನಿಜವಪ್ಪುದು ನಿಜಭಕ್ತಿ. ಈ ನಿಜಭಕ್ತಿಯಲ್ಲಿ ಭರಿತರು,—ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಶರಣರು.

೨೯

ಭವವಿರಹಿತಂಗೆ ಭಕ್ತಿಯ ಮಾಡುವರು ನೀವು ಕೇಳಿರಣ್ಣಾ! ಭವಬಾಧೆಯೊಳಗೆ ನೀವಿದ್ದು, ಅಭವಭಕ್ತಿಯ ಮಾಡುವ ಪರಿಯಿನ್ನೆಂತೋ? ತಾನಭವನಾದಲ್ಲದೆ ಸಹಜಭಕ್ತಿಯ ಮಾಡಬಾರದು ಗೊಹೇಶ್ವರಾ.

೩೦

ಭಕ್ತಿಯಿಲ್ಲದ ಬಡವ ನಾನಯ್ಯಾ. ಕಕ್ಕಯ್ಯನ ಮನೆಯಲು ಬೇಡಿದೆ; ಚೆನ್ನಯ್ಯನ ಮನೆಯಲು ಬೇಡಿದೆ; ದಾಸಯ್ಯನ ಮನೆಯಲೂ ಬೇಡಿದೆ. ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದರೆ, ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

೨. ವಿವೇಚನೆ

೩೧

ಮಸಿಯನೇಸುಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ? ಕರ್ಮಸ್ಥಿ[ತಿ] ಬೆನ್ನ ಬಿಡದು. ಅನಂತಕೋಟಿ ಸನ್ಮಾನವ ಮಾಡಿದರೇನು? ನಿಮಿಷದು[ ]ದಾಸೀನ ಕೆಡಿಸಿತ್ತು! ನಿಮ್ಮ ನಂಬಿಯೂ ನಂಬದ ಡಂಭಕ ನಾನಯ್ಯಾ[ ] ಕೂಡಲಸಂಗಮದೇವಾ.

೩೨

ಹೃದಯದ ಕತ್ತರಿ, ತುಡಿನಾಲಿಗೆಯ ಬೆಲ್ಲೇಂ ಬೊ! ಆಡಿಹೆ [ನೇಂ] ಬೋ, ಹಾಡಿಹೆ [ನೇಂ] ಬೋ, ನಿಚ್ಚ ನಿಚ್ಚ ಶಿವರಾತ್ರಿಯ[ ] ಮಾಡಿಹೆ [ನೇಂ] ಬೊ!! ಆನು ಎನ್ನಂತೆ, ಮನ ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ!!!

೩೩

ತನ್ನಿಚ್ಛೆಯ ನುಡಿದರೆ ನಚ್ಚುವುದೀ ಮನವು. ಇದಿರಿಚ್ಛೆಯ ನುಡಿದರೆ ಮೆಚ್ಚದೀ ಮನವು. ಕೂಡಲಸಂಗನ ಶರಣರ ನಚ್ಚದ ಮನವ ಕಿಚ್ಚಿನೊಳಗಿಕ್ಕುವೆ!

೩೪

ತನ್ನ ವಿಚಾರಿಸಲೊಲ್ಲದು, ಇದಿರ ವಿಚಾರಿಸಹೋಹುದೀ ಮನವು! ಏಸು ಮಾಡುವೆನೀ ಮನವನು ? ಎಂತು ಮಾಡುವೆನೀ ಮನವನು? ಕೂಡಲಸಂಗಮದೇವನ ಶರಣರ ನಚ್ಚದ ಮಚ್ಚದ ಬೆಂದ ಮನವನು?

೩೫

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ! ಒರೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ! ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲಸಂಗಮದೇವಾ!

೩೬

ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದಿನಿತಿಲ್ಲ. ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು! ನಾನೇನು ಪಾಪವ ಮಾಡಿದೆನೊ? ಬೆಳೆಯದ ಮುನ್ನವೆ ಕೊಯ್ವರೆ ಹೇಳಾ ಅಯ್ಯಾ? ಇರಿಯದ ವೀರ, ಇಲ್ಲದ ಸೊಬಗುವ ಎಲ್ಲಾ ಒಡೆಯರು ಏರಿಸಿ ನುಡಿವರು! ಎನಗಿದು ವಿಧಿಯೆ ಕೂಡಲಸಂಗಮದೇವಾ?

೩೭

ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ? ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ಶುದ್ಧವಲ್ಲವಯ್ಯಾ. ಮನ ಮುಟ್ಟಿ ಪೂಜಿಸುವರೆ, ಎನ್ನ ಮನ ಶುದ್ಧವಲ್ಲವಯ್ಯಾ. ಭಾವ ಶುದ್ಧವಾದೊಡೆ ಕೂಡಲಸಂಗಯ್ಯನು 'ಇತ್ತಬಾ' ಎಂದೆತ್ತಿಕೊಳ್ಳನೇಕಯ್ಯಾ?

೩೮

ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ! ಮನದ ತಾಮಸ ಬಿಡದು, ಮನದ ಕಪಟ ಬಿಡದಯ್ಯಾ! 'ಶಿವಶರಣೆ'ಂಬುದು ಒಪ್ಪಚಿಯುಳ ವಡದಯ್ಯಾ. ಎನ್ನ ಮನದಲ್ಲಿ ಎರಡುಳ್ಳನ್ನಕ್ಕ ಕೂಡಲಸಂಗಮದೇವರೆಂ ತೊಲಿವ?

೩೯

ಎನ್ನಂತರಂಗದಲ್ಲಿ ಕುಮಂತ್ರ ಕುಡಿವರಿದ ಭೇದವ ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯಾ ಒಡೆಯನೇ. ಜಾಗ್ರದವಸ್ಥೆಯಲ್ಲಿ ಲೋಕೋಪಚಾರಬಿಡದು; ಜಿಹ್ವಾಲಂಪಟತನ ಉಡುಗದು. ಸುಖದುಃಖಕ್ಕೆ ಎನ್ನ ಮನ ಅಳುತ್ತ ನಗುತ್ತ ಇದ್ದ ಬಳಿಕ, ಎನಗೆ ಇಷ್ಟಲಿಂಗದ ಪೂಜೆ ಎಲ್ಲಿಯದೋ? ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ ಕಡೆಮೊದಲಿಲ್ಲದ ದುರ್ವಿಕಾರ ಸ್ವಪ್ನದಲ್ಲಿ ಹರಿದಾಡುವ ಜೀವಂಗೆ, ಪ್ರಾಣಲಿಂಗದ ಪೂಜೆ ಎಲ್ಲಿಯದೋ? ಸುಷುಪ್ತಾವಸ್ಥೆಯಲ್ಲಿ ಲಿಂಗವ ಕೂಡಿ ಮೈಮರೆದಿರದೆ, ಕನಸಿನ ಸ್ತ್ರೀಯ ಕೂಡಿ ಆನಂದಿಸುವ ಕಾಮವಿಕಾರಿಗೆ, ಭಾವಲಿಂಗಪೂಜೆ ಎಲ್ಲಿಯದೋ? ಈ

ಪ್ರಕಾರದ ದುರ್ಗುಣಂಗಳ ನಾನು ಮರೆಮಾಡಿಕೊಂಡು, ಶರಣನೆಂದು ವಚನಂಗಳ ಹಾಡಿದ ಗೀತ, ತಿಂಗಳ ಬೆಳಗಿನ ಸಿರಿಯು ಕಂಡು ನಾಯಿ ಹರುಷಂಗೊಂಡು ಗೋಳಿಟ್ಟು ಬೊಗಳಿದಂತಾಯಿತ್ತು. ಅದೇನು ಕಾರಣವೆಂದೊಡೆ, ನೀನೆನ್ನಂಗದ ಮೇಲಕ್ಕೆ ಬಂದೆಯೆಂಬ ಸಂತೋಷಕ್ಕೆ ಉಬ್ಬಿ ಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ, ನುಡಿದಂತೆ ನಡೆ ಇಲ್ಲ. ಇದು ಕಾರಣ, ಎನ್ನ ಮನದ ಕಾಳಿಕೆಯಂ ಕರುಣದಿಂದೆ ಕಳೆದು, ಅವಸ್ಥಾತ್ರಯಂಗಳಲ್ಲಿ ನಿನ್ನ ಅಪ್ಪಿ ಅಗಲದಿಪ್ಪಂತೆ ಎನ್ನ ಪರಮಕಾಷ್ಠೆಯ ಮಾಡಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೪೦

ಮಾತಿನ ಮಾಲೆಯ ಗೀತಂಗಳಿಂದ ಸುಜಾಣನಾಗಬಹುದು. ಸ್ತೋತ್ರದ ಸೊಗಸಿನ ಪ್ರಾಜ್ಞತೆಯಿಂದೆ ಜಾಣನೆನಿಸಬಹುದು. ಅಂತರಂಗ ಬಹಿರಂಗವನರಿಯಬಹುದು. ಆಗಮ ಪುರಾಣಂಗಳ ಗಣನೆಯ ಗಣಿತವ ತಿಳಿದು, ಶ್ರುತಿ ಸ್ಮೃತಿಗಳಿಂದೆ ಶ್ರೇಷ್ಠನೆನಿಸಬಹುದು. ಭೂತವಿಕಾರದ ಪ್ರಕೃತಿಯ ಸ್ವಭಾವವ ತಿಳಿದು, ಅದರ ಭ್ರಾಂತಿಯನಳಿದಿರಬಹುದು. ಕಾಂತೆಯರ ರತಿಕ್ರೀಡೆಯ ಗುಣವ ವರ್ಜಿತನಾಗಿರಬಹುದು. ಕಾಶಿ ಕೇದಾರ ರಾಮೇಶ್ವರ ಶ್ರೀಶೈಲ ಮೊದಲಾದನಂತಕ್ಷೇತ್ರತೀರ್ಥಂಗಳಲ್ಲಿ ಗುಹಾವಾಸಿಗಳಾಗಿರಬಹುದು. ನಮ್ಮ ಕೂಡಲಚೆನ್ನಸಂಗಯ್ಯನೆಂಬ ಮಹಾದಾನಿ ಲಿಂಗದ ಇಚ್ಛಾವಾಸಿಯಾಗಿರಬಾರದು. ಆ ಮಹಾಲಿಂಗದಲುದ್ಭವಿಸಿದ ದಿವ್ಯಜ್ಞಾನಿಗಳಲ್ಲದೆ ಇತರರ್ಗೆ ಸಾಧ್ಯವೇ?

೪೧

ಅಯ್ಯಾ, ಏನನಹುದೆಂಬೆ? ಏನನಲ್ಲಾ ಎಂಬೆ? ಕಾಯವುಳ್ಳನ್ನಕ್ಕ ಕರ್ಮ ಬಿಡದು; ಜೀವವುಳ್ಳನ್ನಕ್ಕ ಕಾರ್ಪಣ್ಯ ಕೆಡದು. ಆರ ಕೇಳಿ ಆರಿಗೆ ಹೇಳಿಹೆನೆಂದಡೂ ಭಾವದ ಭ್ರಮೆ ಬಿಡದು. ಮಹಾಸಮುದ್ರವನೀಜುವ ನಂತೆ ಕರ ಕಾಲು ಆಡುವನ್ನಕ್ಕ ಜೀವನ ಭ್ರಮೆ. ನಿಂದಲ್ಲಿ ನಿಂದಿತ್ತು ಭಾವದ ಭ್ರಮೆ. ಒಂದನರಿತು ಒಂದನರಿದಿಹೆನೆಂಬನ್ನಕ್ಕ ಬಂದಿತು ದಿನ ಅಂಗವ

ಹರಿವುದಕ್ಕೆ. ಈ ಸಂದೇಹದ ಸಂದಿಯಲ್ಲಿ ಕೆಡಹದೆ, ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರಲಿಂಗ.

೪೨

ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ? ತೊತ್ತು ಬಲ್ಲಳೆ ಗುರು ಹಿರಿಯರುತ್ತಮರೆಂಬುದ? ಭಕ್ತಿಯನರಿಯದ ವ್ಯರ್ಥ ಜೀವಿಗಳು ನಿಮ್ಮನೆತ್ತ ಬಲ್ಲರೈ ರಾಮನಾಥಾ?

೪೩

ತನುಮನಧನವ ಹಿಂದಿಕ್ಕಿಕೊಂಡು, ಮಾತಿನ ಬಣಬೆಯ ಒಳ ಲೊಟ್ಟೆಯ ನುಡಿವರು ನೀವೆಲ್ಲಾ ಕೇಳಿರೇ. ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ, ಗುರಿಯ ತಾಗಬಲ್ಲುದೆ? ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮದೇವನೆಂತೊಲಿವನಯ್ಯಾ?

೪೪

ಕಾಮವುಳ್ಳವಂಗೆ ಲಿಂಗದ ಪ್ರೇಮವಿನ್ನೆಲ್ಲಿಯದೊ? ಕ್ರೋಧವುಳ್ಳ ವಂಗೆ ಜಂಗಮದ ಪ್ರೇಮವಿನ್ನೆಲ್ಲಿಯದೊ? ಮದಮತ್ಸರವುಳ್ಳವಂಗೆ ಪ್ರಸಾದಪ್ರೇಮವಿನ್ನೆಲ್ಲಿಯದೊ? ಇಂತೀ ಗುಣವಂತರಲ್ಲದೆ ಸಹಜ ಸದ್ಭಕ್ತಿ ನೆಲೆಗೊಳ್ಳದಯ್ಯ ಅಖಂಡೇಶ್ವರಾ.

೪೫

ತನುವಿಡಿದೆನಾಗಿ ಆನುವನರಿಯದೆ ಕೆಟ್ಟೆನು. ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು. ಭಾವದ ಬಯಕೆ ಹಿಂಗದಾಗಿ ವಿಯೋಗಿ ಯಾಗಿ ಕೆಟ್ಟೆನು. ಅರಿವ ನುಡಿದು ಮರಹಿಗೊಳಗಾದೆನು. ಎನ್ನ ಕಾಣದೆ ಭಿನ್ನಜ್ಞಾನಿಯಾದೆನು. ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ, ಎನ್ನ ಮತಿಗೆ ಮರವೆಯ ಮಾಡಿ ಹೋದನು.

೪೬

ಇನ್ನು ಮುಕ್ತನೆಂಬನ್ನಬರ ಮುನ್ನಲೇನು ಬದ್ಧನೆ? ಮುನ್ನ ಮುನ್ನವೇ ಮುಕ್ತನು. ಒಂದು ಕಾರಣದಿಂದ ಬದ್ಧನಾದರೆ ಗುರುಕರುಣದಿಂದ ಗುರು

ವಾದ ಬಳಿಕ, ಬದ್ಧ ಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೪೭

ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು. ಬ್ರಾಹ್ಮಣನ ಭಕ್ತಿ ಮುಟ್ಟುತಟ್ಟಿನಲ್ಲಿ ಹೋಯಿತ್ತು. ಶೀಲವಂತನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು. ಸೆಟ್ಟಿಯ ಭಕ್ತಿ ಕುಟಿಲವ್ಯಾಪಾರದಲ್ಲಿ ಹೋಯಿತ್ತು ನೀವು ಕೇಳಿರೋ. ಇಂಥವರ ಭಕ್ತಿಗೆ ಊರಿಂದ ಹೊರಗಣ ಡೊಂಬನೇ ಸಾಕ್ಷಿ ಕಾಣಾ ಕಲಿದೇವರದೇವಾ.

೪೮

ತನಗನ್ಯವಾದುದ ನೋಡಿದಡೆ ಭವಿಸಂಗ. ಸತ್ಯರು ಒಪ್ಪಿದುದನೊಪ್ಪದಿರ್ದೊಡೆ ಭವಿಸಂಗ. ಮಾಡಿಕೊಂಡ ವ್ರತವ ಮೀರಿದಡೆ ಭವಿಸಂಗ. ತಾ ಮಾಡಿದ ಭಕ್ತಿಯನಾಡಿಕೊಂಡಲ್ಲಿ ಭವಿಸಂಗ. ಇಂತಿವನರಿದಡೆ ಸದ್ಭಕ್ತಿ ಕಲಿದೇವರದೇವಾ.

೪೯

ಹಣ್ಣು ಮೆದ್ದ ಬಳಿಕ ಆ ಮರವನಾರು ತರಿದರೇನು? ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು? ಮಣ್ಣು ಬಿಟ್ಟ ಬಳಿಕ ಆ ಕೆಯ್ಯನಾರುತ್ತರೇನು? ಚೆನ್ನಮಲ್ಲಿಕಾರ್ಜುನನರಿದ ಬಳಿಕ, ಆ ಕಾಯುವ ನಾಯಿ ತಿಂದರೇನು? ನೀರ ಕುಡಿದರೇನು?

೫೦

ಅಗಣಿತನದ್ವಯನನುಪಮನಪ್ಪ ಅಭವಂಗೆ ಭವವಿರಹಿತನಾಗಿ ಭಕ್ತಿಯ ಮಾಡಬೇಕಲ್ಲದೆ, ತಾನು ಭವದೊಳಿರ್ದು, ಬಂಧನಕ್ಕೊಳಗಾಗಿ, ಮರ್ತ್ಯರಿಗೆ ತೊತ್ತಾಗಿ, ಮಾಯಾಪಾಶದ ಕಾಲುಕಣ್ಣಿಯೊಳು ಸಿಲ್ಕಿ, ಕಾಮಂಗೆ ಗುರಿಯಾಗಿ, ಕಾಲಂಗೆ ವಶವಾಗಿ ಮಾಡುವ ಭಕ್ತಿಗೆ ನಾಚರು ನೋಡಾ. ಮರ್ಮವನರಿತು ಮಾಡದ ಭಕ್ತಿ, ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯ ಸೌರಾಷ್ಟ್ರಸೋಮೇಶ್ವರಾ!

೫೧

ಕಾಮ ತೃಷೆಯು ಮರೆಯಿತ್ತು, ದೇಹ ಮುಂದುಗೆಟ್ಟಿತ್ತು, ಆಮಿಷ ತಾಮಸವೆಲ್ಲಾ ಎಳತಟವಾದವು,-ಅಕ್ಕಟಾ ಅಯ್ಯಲಾ ನಿಮ್ಮ ಕಂಡವಂಗೆ! ಅಳಿವಿಲ್ಲದ ಸ್ನೇಹಕ್ಕೆ ಮರಣವೇ ಮಹಾನವಮಿ ಗೊಹೇಶ್ವರಾ.

೧೨

ಭಕ್ತಜೀವನ-ಚಾರಿತ್ರ

೧. ಸದ್ಭಕ್ತ

೧

ಆದಿಯಲ್ಲಿ ನೀನೇ ದೇವನು ನಾನೇ ಭಕ್ತನಯ್ಯ; ಅನಾದಿಯಲ್ಲಿ ನೀನೇ ದೇವನು ನಾನೇ ಭಕ್ತನಯ್ಯ; ಆದಿಯನಾದಿಯಿಂದತ್ತಲು ನೀನೇ ದೇವನು ನಾನೇ ಭಕ್ತನಯ್ಯಾ. ನಿಮ್ಮೊಳಗೆ ಅಡಗಿರ್ದೆನಯ್ಯಾ ಅಖಂಡೇಶ್ವರಾ.

೨

ವನದ ಕೋಗಿಲೆ ಮನೆಗೆ ಬಂದರೆ, ತನ್ನ ವನವ ನೆನೆವುದ ಮಾಣ್ಬುದೆ? ಮಲೆಯ ಗಜವು ಮನೆಗೆ ಬಂದರೆ, ತನ್ನ ಮಲೆಯ ನೆನೆವುದ ಮಾಣ್ಬುದೆ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ, ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ?

೩

ಭಕ್ತನಾಗಬೇಕು ಭವವ ಹರಿದು. ಭಕ್ತನಾಗಬೇಕು ಸಕಲ ಪ್ರಪಂಚವ ಮರೆದು. ಭಕ್ತನಾಗಬೇಕು ಆಶಾಪಾಶವನೆಲ್ಲ ಹರಿದು. ಭಕ್ತನಾಗಬೇಕು ನಮ್ಮ ಅಖಂಡೇಶ್ವರನ ದಿವ್ಯ ಪಾದವ ನಂಬಿ.

೪

ಸಟೆಯನಾಡದಾತ ಭಕ್ತ. ಕುಟಿಲ ಕುಹಕವ ಮಾಡದಾತ ಭಕ್ತ. ನಿಟಿಲಾಕ್ಷನ ಧ್ಯಾನದಲ್ಲಿ ಇದ್ದಾತ ಭಕ್ತ. ನಮ್ಮ ಅಖಂಡೇಶ್ವರನ ಭಕ್ತಿ ಭಾವದಲ್ಲಿದ್ದಾತನೇ ಸದ್‌ಭಕ್ತ ನೋಡಾ.

೫

ಸತ್ಯನೆಂದೆನಿಸಯ್ಯ ಎನ್ನ; ನಿತ್ಯನೆಂದೆನಿಸಯ್ಯ ಎನ್ನ. ಭಕ್ತನೆಂದೆನಿಸಯ್ಯ ಎನ್ನ; ಮುಕ್ತನೆಂದೆನಿಸಯ್ಯ ಎನ್ನ. ನಿಮ್ಮ ಪೂರ್ಣ ಒಲುಮೆಯ ಲೆಂಕನೆಂದೆನಿಸಯ್ಯಾ ಎನ್ನ ಅಖಂಡೇಶ್ವರಾ.

೬

ಕಾಯದ ಕಳವಳದಿಂದ, ಕರಣದ ಕಳವಳದಿಂದ, ಇಂದ್ರಿಯ ಕಳವಳದಿಂದ, ವಿಷಯದ ಕಳವಳದಿಂದ, ಮೋಹದ ಕಳವಳದಿಂದ ಮಾಯಾಪಾಶಪಾಕುಳದಲ್ಲಿ ಜನ್ಮ ಜರೆ ಮರಣಕ್ಕೊಳಗಾದ ಭವಿಗೆ ಅನಂತ ದೈವವಲ್ಲದೆ ಭವರಹಿತ ಸದ್ಭಕ್ತಂಗೆ ಅನಂತ ದೈವ ಉಂಟೆ ಹೇಳಾ? ಸೂಳೆಗೆ ಅನಂತ ಪುರುಷರ ಸಂಗವಲ್ಲದೆ, ಗರತಿಗೆ ಅನಂತ ಪುರುಷರ ಸಂಗ ಉಂಟೇ? ಪರಮಪಾತಕಂಗೆ ಹಲವು ತೀರ್ಥ ಹಲವು ಕ್ಷೇತ್ರವಲ್ಲದೆ, ಪರಮಸದ್ಭಕ್ತಂಗೆ ಉಂಟೆ? ಗುರುದ್ರೋಹಿ ಲಿಂಗದ್ರೋಹಿ ಮಾತೃಪಿತೃದ್ರೋಹಿಗಳಿಗೆ ಕಾಲ ಕಾಮ ಕರ್ಮದ ಭಯವಲ್ಲದೆ, ಸತ್ಯ ಸದಾಚಾರ ಸದ್ಭಕ್ತಿ ಸತ್ಕ್ರಿಯೆ ಸಮ್ಯಗ್‍ಜ್ಞಾನ ಸತ್ಕಾಯಕ ಸದ್ಧರ್ಮಿಗಳಿಗೆ ಉಂಟೆ ಹೇಳಾ ಕಲಿದೇವರದೇವಾ?

೭

ಸತ್‍ಕಾಯಕದಿಂದೆ ತಂದ ದ್ರವ್ಯಂಗಳ ಅಂದಂದಿಗೆ ಗುರುಲಿಂಗ ಜಂಗಮಕ್ಕೆ ಸವೆಸಿ, ಹಿಂದು ಮುಂದನೆಣಿಸದೆ, ಇಂದಿಗೆ ನೂರುವರುಷ ತುಂಬಿತ್ತೆಂಬ ಆನಂದಭಕ್ತರ ತೋರಿ ಎನ್ನ ಬದುಕಿಸಯ್ಯ ಅಖಂಡೇಶ್ವರಾ.

೮

ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಚನವ ನುಡಿಯಬೇಕು. ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು. ಸಕಲಪ್ರಾಣಿಗಳ ತನ್ನಂತೆ ಭಾವಿಸಬೇಕು. ತನು ಮನ ಧನವ ಗುರು ಲಿಂಗ ಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರದಾನಗೆಯ್ಯದಿರಬೇಕು. ಸಕಲ ಇಂದ್ರಿಯಂಗಳೂ ತನ್ನ ವಶಗತವಾಗಿರಬೇಕು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೆ ಸಾಧನವು ನೋಡಾ ಕೂಡಲಸಂಗಮದೇವಾ.

೯

ಭಕ್ತನಾದರೆ ಬಾಳೆಹಣ್ಣಿನಂತಿರಬೇಕು. ಭಕ್ತನಾದರೆ ಬೆಲ್ಲದ ಕುಳ್ಳಿನಂತಿರಬೇಕು. ಭಕ್ತನಾದರೆ ಮಾವಿನ ಫಲದಂತೆ ಇರಬೇಕು. ಇಂತಪ್ಪ

ತನೇ ಸದ್ಭಕ್ತ, ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬ ಲಿಂಗ ನಿರ್ಮಾಯಪ್ರಭುವೇ.

೧೦

ಶಿವಶರಣೆಂದು ಪೂರ್ವಾರ್ಜಿತವನುಂಡರೆ ಭಂಗ. ಹರಶರಣೆಂದು ಭವ ಮಾಲೆಗೊಳಗಾದರೆ ಭಂಗ. ಹರವಶವೆನಿಸಿ ವಿಧಿವಶವೆನಿಸಿದರೆ, ಅದು ನಿಮ್ಮ ಭಂಗ ಕಾಣಾ ಶಂಭುಜಕ್ಕೇಶ್ವರದೇವಾ.

೧೧

ಹರ ಹರಾ, ಎನ್ನ ಬಡಮನದ ಅಳಿಯಾಸೆಯ ನೋಡಾ! ಸುರ ಧೇನುವಿದ್ದು ಬರಡಾಕಳಿಗೆ ಆಸೆಮಾಡುವಂತೆ, ಕಲ್ಪವೃಕ್ಷವಿದ್ದು ಕಾಡ ಮರಕ್ಕೆ ಕೈಯಾನುವಂತೆ, ಚಿಂತಾಮಣಿಯಿದ್ದು ಗಾಜಿನಮಣಿಯ ಬಯಸುವಂತೆ ಎನ್ನ ಕರಮನಭಾವದಲ್ಲಿ ನೀವು ಭರಿತರಾಗಿರ್ದುದ ಮರೆತು ನರರಿಗಾಸೆಯ ಮಾಡಿ ಕೆಟ್ಟೆನಯ್ಯ ಅಖಂಡೇಶ್ವರಾ.

೧೨

ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂ ದರೆ ಉಳಿಯ ಮೊನೆಯಲ್ಲಿ ಬಡತನವಿದ್ದರೆ ಒಡೆಯದೆ? ಘನಶಿವಭಕ್ತರಿಗೆ ಬಡತನವಿಲ್ಲ. ಸತ್ಯರಿಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯಪ್ರಿಯ ಅಮರೇ ಶ್ವರಲಿಂಗವುಳ್ಳನ್ನಕ್ಕ ನನಗಾರ ಹಂಗಿಲ್ಲ ಮಾರಯ್ಯಾ.

೧೩

ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ? ಭಕ್ತರು ಬಡವ ರೆಂದು ಮತ್ತೊಂದ ಕೊಟ್ಟೆಹೆನೆಂದರೆ, ಮಾರಯ್ಯಪ್ರಿಯ ಅಮರೇಶ್ವರ ಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ.

೧೪

ಗೃಹ ಗ್ರಾಮ ನಾಡು ದೇಶಗಳೆಂಬ ಆಳುವಿಚ್ಛೆಗೆ ಭೂಮಿ ಏಕೆ? ಅಲ್ಪಭೂಮಿ ಅಲ್ಪಂಗಲ್ಲದೆ, ಪಂಚಾಶತ್‌ಕೋಟಿ ಭೂಮಿಯನು ಒಳ ಕೊಂಡುದು ಬ್ರಹ್ಮಾಂಡ. ಅಂತಹ ಬ್ರಹ್ಮಾಂಡವನು ಆಭರಣವ ಮಾಡಿ

ಕೊಂಡಿಪ್ಪ ಆದಿಶೇಷನು. ಅಂತಹ ಆದಿಶೇಷಾಭರಣದಿಂ ಪೂಜೆಗೊಂಡಿಪ್ಪ ಲಿಂಗವೇ ಪ್ರಾಣವಾಗಿ ಭೂಮಿಯಲ್ಲಿ ನಿಂದ ಲಿಂಗೈಕ್ಯಂಗೆ ಭೂಮಿಯಾ ಕಾಂಕ್ಷೆ ಇನ್ನೆಲ್ಲಿಯದೋ ಅಯ್ಯಾ? ಕ್ಷೋಣಿ ಕೊಟ್ಟ ಕ್ಷಿತಿಪತಿಯಂತರ ಧನವ ಪಡೆವ ತಾಗುನಿರೋಧ ಆಗುವಿಚ್ಛೆಗೆ ಸುಖದುಃಖಂಗಳು ತನುಮನ ಧನ ಕಾಂಕ್ಷೆ ಅಲ್ಪಂಗಲ್ಲದೆ, ಮಹಾಲಕ್ಷ್ಮದೊಡೆಯನಾಗಿ ಮಹದೈಶ್ವರ್ಯ ಸಂಪನ್ನನಾಗಿ, ಹಿರಣ್ಯಪತಿಯೆ ಕಾಯವಾಗಿ ಹಿರಣ್ಯಪತಿಯೆ ಪ್ರಾಣ ವಾಗಿರ್ದ ಮಹಾಲಿಂಗೈಕ್ಯಂಗೆ ಧನದ ಕಾಂಕ್ಷೆ ಇನ್ನೆಲ್ಲಿಯದಯ್ಯಾ? ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟವೆಂಬ ಜಾತಿವಿಕಾರಂಗಳ ಮೀರೆದಪ್ಪಿದ ದಾಸಿ ವೇಶಿ ಪರಸ್ತ್ರೀ ವಿಧವೆ ಕನ್ನಿಕೆಯರಲ್ಲಿ ಕಂಗೆಟ್ಟು ವರ್ತಿಸುವ ಪಾಪ ದೃಷ್ಟಿಯ ಕ್ರೂರಾತ್ಮಂಗೆ ಹೆಣ್ಣಿನ ಚಿಂತೆಯಲ್ಲದೆ, ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಯ ವರ್ತನೆಯ ಮೀರಿದ ಮಹಾಶಕ್ತಿ ತಾನಾಗಿ, ಮಹಾಪುರು ಷನಲ್ಲಿ ಮಹಾಸಂತೋಷವುಳ್ಳ ಮಹಾಶರಣಂಗೆ ಹೆಣ್ಣಿನ ಕಾಂಕ್ಷೆ ಇನ್ನೆಲ್ಲಿ ಯದಯ್ಯಾ? ವೇದ ಶಾಸ್ತ್ರ ಪುರಾಣಾಗಮಾದಿಯಾದ ಅಷ್ಟಾದಶ ವಿದ್ಯಂ ಗಳನೋದುವ ಹೇಳುವ ಕೇಳುವ ವಿಚಾರಿಸುವ ವಿದ್ಯೆಯ ಬಯಕೆ ಅಲ್ಪ ಮತಿಯಂಗಲ್ಲದೆ, ವಾಗ್ದೇವತೆಗೆ ಅಧಿದೈವವಪ್ಪ ಮಹಾಘನವಿದ್ಯೆಯೇ ದೇಹವಪ್ಪ ವಿದ್ಯಾರೂಪನು ಮಹಾದೇವನೆ ಕಾಯವಾಗಿ, ಆ ಮಹಾ ದೇವನೆ ಜಿಹ್ವೆಯಾಗಿ, ಆ ಮಹಾ ವಾಗ್ದೇವತೆಯೇ ಮನವಾದ ಮಹಾಘನ ಲಿಂಗೈಕ್ಯಂಗೆ ಉಳಿದಾದ ವಿದ್ಯೆಯ ಬಯಕೆ ಇನ್ನೆಲ್ಲಿಯದಯ್ಯಾ? ಭಕ್ತ ಕಾಯ ಶಿವನಾದನಾಗಿ, ಶಿವನೇ ಪ್ರಾಣವಾಗಿ ನಿಂದ ಸದ್ಭಕ್ತಂಗೆ ಸಕಲಾಗ ಮಂಗಳಾವವೂ ಇಲ್ಲ. ಆತ ನಿಶ್ಚಿಂತನು, ಆತ ಪರಿಣಾಮಿ, ಆತ ಸದ್ಭಕ್ತ ನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೫

ಅಮೃತಕ್ಕೆ ಹಸಿವುಂಟೇ? ಜಲಕ್ಕೆ ತೃಷೆಯುಂಟೆ? ಘನಪುರುಷಂಗೆ ವಿಷಯವುಂಟೆ? ಸದ್ಗುರುಕಾರುಣ್ಯವಂ ಪಡೆದು ಲಿಂಗಾರ್ಚನೆಯ ಮಾಡುವ ಮಹಾಶರಣಂಗೆ ಮುಕ್ತಿಯ ಬಯಕೆಯುಂಟೆ? ಅವರುಗಳಿಗೆ ಅದು ಸ್ವಯಂಭು, ಸಹಜ ಸ್ವಭಾವ. ಇನ್ನು ತೃಪ್ತಿ ಆಪ್ಯಾಯನ ಅರಸ ಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೧೬

ಹಂದಿ ಶ್ರೀಗಂಧವ ಹೂಸಿದಡೇನು, ಗಂಧರಾಜನಾಗಬಲ್ಲುದೇ? ನವಿಲು ನಲಿಯಿತ್ತೆಂದಡೆ, ಕಾಡ ಕೋಳಿ ಪುಚ್ಛವ ತೆರೆಕೊಂಡಂತೆ ಕರ್ಮಿಗಳ ಭಕ್ತಿ. ಹೊರವೇಷದಲ್ಲಿ ವಿಭೂತಿ ರುದ್ರಾಕ್ಷಿಯ ಹೂಸಿದಡೇನು? ತಿರನ ನರಿದು, ಮರವೆಯ ಕಳೆದು, ಮಾತಿನಂತೆ ನೀತಿಯುಳ್ಳೊಡೆ ಅವರನಜಾತರೆಂಬೆ ಕಾಣಾ ರಾಮನಾಥಾ.

೧೭

ವೀರವ್ರತಿ ಭಕ್ತನೆಂದು ಹೊಗಳಿಕೊಂಬಿರಿ, ಕೇಳಿರಯ್ಯಾ; ವೀರನಾದರೆ ವೈರಿಗಳು ಮೆಚ್ಚಬೇಕು, ವ್ರತಿಯಾದರೆ ಅಂಗನೆಯರು ಮೆಚ್ಚಬೇಕು, ಭಕ್ತನಾದರೆ ಜಂಗಮ ಮೆಚ್ಚಬೇಕು. ಈ ನುಡಿಯೊಳಗೆ ತನ್ನ ಬಗೆಯಿರೆ ಬೇಡಿದ ಪದವಿಯನೀವ ಕೂಡಲಸಂಗಮದೇವ.

೧೮

ನಾವು ಶಿವಭಕ್ತರೆಂದು ಹೇಳುವ ಅಣ್ಣಗಳಿರಾ, ನೀವು ಶಿವಭಕ್ತರೆಂತಾದಿರಿ ಹೇಳಿರಣ್ಣಾ. ಅರಿಯದಿರ್ದರೆ ಕೇಳಿರಣ್ಣಾ. ಆರು ವೈರಿಗಳ ಮುರಿಯ ಕಟ್ಟಿ, ಅಷ್ಟಮದವ ತೂರಿ, ಸಪ್ತವ್ಯಸನಂಗಳ ಮುರಿದು, ಸದ್ಭಕ್ತಿಯ ನೆಲೆಕಲೆಗಳ ತಿಳಿದು, ಅಷ್ಟಾವರಣಗಳ ಗೊತ್ತ ಮುಟ್ಟಿ ನೋಡಿ, ಪಂಚಾಚಾರದ ಭೇದವ ತಿಳಿದು, ಷಡ್ವಿಧ ಲಿಂಗಾಂಗದ ಮೂಲವನರಿದು, ಷಡ್ವಿಧ ಅರ್ಪಿತಾವಧಾನವನಾಚರಿಸಿ, ಷಟ್‌ಸ್ಥಲಮಾರ್ಗವಿಡಿದಾಚರಿಸುವ ಸದ್ಭಕ್ತರಿಗೆ ಅತಿಭೃತ್ಯನಾಗಿ, ಹಮ್ಮುಬಿಮ್ಮುಗಳಿಲ್ಲದೆ ನಡೆನುಡಿ ಸಂಪನ್ನರಾದವರೇ ಶಿವಭಕ್ತರು ಕಾಣಾ ಕಲಿದೇವರದೇವಾ.

೧೯

ಶಿವಗಣಂಗಳ ಮನೆಯಂಗಣ ವಾರಣಾಸಿ ಎಂಬುದು ಹುಸಿಯೆ?— ಪುರಾತನರ ಮನೆಯ ಅಂಗಣದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿಪ್ಪವಾಗಿ. ಅದೆಂತೆಂದೊಡೆ, ಸಾಕ್ಷಿ:

||ಶ್ಲೋ.|| ಕೇದಾರಸ್ಯೋದಕಂ ಪೀತ್ವಾ ವಾರಾಣಸ್ಯಾಂ ಮೃತಿರ್ಧ್ರುವಂ
ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ

ಎಂಬ ಶಬ್ದವಧಿಕವು. ಸುತ್ತಿ ಬರಲು ಶ್ರೀಶೈಲ, ಕೆಲಬಲದಲ್ಲಿ ಕೇದಾರ, ಅಲ್ಲಿಂದ ಹೊರಗೆ ವಾರಣಾಸಿ. ವಿರಕ್ತಿ ಬೀಡಾಗಿ, ಭಕ್ತಿ ಮೋಹಯಾಗಿ, ಎನ್ನ ದೇವ ಚೆನ್ನಮಲ್ಲಿಕಾರ್ಜುನ, ನಿಮ್ಮ ಭಕ್ತರ ಮನೆಯಂಗಣ ಪ್ರಯಾಗ ದಿಂದಧಿಕ ನೋಡಾ.

೨೦

ಮಾದಾರ ಚೆನ್ನಯ್ಯನ ಬಾಯ ತಾಂಬೂಲವ ಮೆಲುವೆ. ಡೋಹರ ಕಕ್ಕಯ್ಯನ ಒಕ್ಕುಮಿಕ್ಕುದನುಂಬೆ. ಚೋಳಿಯಕ್ಕನ ಊಳಿಗದವನಾಗುವೆ. ಶ್ವಪಚಯ್ಯನ ಆಳಾಗಿರುವೆ. ಇನ್ನುಳಿದ ಸಕಲಗಣಂಗಳ ತೊತ್ತು ಬಂಟ ಲೆಂಕನಾಗಿ ರಾಜಾಂಗಣ ಬಳಿಯುವೆನಯ್ಯಾ ಅಖಂಡೇಶ್ವರಾ.

೨೧

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು? ಕೋಳಿ ಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತ ನಾಗಿ ಭಕ್ತಿಪಕ್ಷವಿಲ್ಲದಿದ್ದರೆ, ಕಾಗೆ ಕೋಳಿಯಿಂದ ಕರಕಷ್ಟ ಕೂಡಲಸಂಗಮ ದೇವಾ!

೨೨

ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೇ? ಮೆಳೆ ಶಿವಭಕ್ತ ನಾಗಬಲ್ಲುದೇ? ನಿಮ್ಮ ತನು ಮನ ಧನವನರಿಯದಿರ್ದಡೆ ಸದುಭಕ್ತರಹರೇ ರಾಮನಾಥಾ?

೨೩

ಗುರು ಲಿಂಗ ಜಂಗಮದಲ್ಲಿ ಭಯ ಭಕ್ತಿ ಕರುಣ ಕಿಂಕುರುವಾಣ ನಯ ನುಡಿ ನಮಸ್ಕಾರ ಕ್ಷಮೆ ದಮೆ ಶಾಂತಿ ಸೈರಣೆ ದಯಾಗುಣ ವಿಶ್ವಾಸ ನಂಬುಗೆ ನಿಷ್ಠೆ ಸಮರಸವನುಳ್ಳ ಸದ್‌ಭಕ್ತರ ತೋರಿ ಬದುಕಿಸಯ್ಯಾ ಎನ್ನ, ಅಖಂಡೇಶ್ವರಾ.

೨೪

ಗುರುವ ನೋಡಿರೋ, ಲಿಂಗವ ಹಾಡಿರೋ, ಜಂಗಮಕ್ಕೆ ನೀಡಿರೋ, ಅಂಗಜವೈರಿ ಅಖಂಡೇಶ್ವರನ ಕೂಡಿರೋ!

೨೫

ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು ತನುವೆನ್ನದು ಮನವೆನ್ನದು ಧನವೆನ್ನದು ಎಂದು ಭಿನ್ನಭಕ್ತಿಯ ಮಾಡಿ, ಬಡ್ಡಿಕಾರನಂತೆ ಒಂದು ಕೊಟ್ಟು ಎರಡು ಪಡೆವ ಜಡಜೀವಿಗಳ ಭಕ್ತರೆನಬಹುದೇನಯ್ಯ ಅಖಂಡೇಶ್ವರಾ?

೨೬

ತನುವ ನಿಮಗೊಪ್ಪಿಸಿ ತನುಶುದ್ಧನಾಗಿರಲರಿಯೆನಯ್ಯ ನಾನು. ಮನವ ನಿಮಗೊಪ್ಪಿಸಿ ಮನಶುದ್ಧನಾಗಿರಲರಿಯೆನಯ್ಯ ನಾನು. ಧನವ ನಿಮಗೊಪ್ಪಿಸಿ ಧನಶುದ್ಧನಾಗಿರಲರಿಯೆನಯ್ಯ ನಾನು. ಈ ತನು ಮನ ಧನದಲ್ಲಿ ಶುದ್ಧನಲ್ಲದ ಪ್ರಪಂಚಿನ ಡಂಭಕ ನಾನಯ್ಯ ಅಖಂಡೇಶ್ವರಾ.

೨೭

ಗುರುವಿಂಗೆ ತನುವನರ್ಪಿಸಿದಲ್ಲದೆ ತನುವಿನ ವಾಸನೆ ಹರಿಯದು. ಲಿಂಗಕ್ಕೆ ಮನವನರ್ಪಿಸಿದಲ್ಲದೆ ಮನದ ವಾಸನೆ ಹರಿಯದು. ಜಂಗಮಕ್ಕೆ ಧನವನರ್ಪಿಸಿದಲ್ಲದೆ ಧನದ ವಾಸನೆ ಹರಿಯದು. ಇದು ಕಾರಣ ತ್ರಿವಿಧಕ್ಕೆ ತ್ರಿವಿಧವನರ್ಪಿಸಿ ತ್ರಿವಿಧವಾಸನೆಯ ಹರಿದು, ತ್ರಿವಿಧವು ಒಂದಾದ ಘನವನೊಡಗೂಡಬಲ್ಲರೆ ಸದ್‌ಭಕ್ತನೆಂಬೆನಯ್ಯ ಅಖಂಡೇಶ್ವರಾ.

೨೮

ತನುವ ಕೊಟ್ಟು ಭಕ್ತರಾದೆವೆಂಬರು. ಮನವ ಕೊಟ್ಟು ಭಕ್ತರಾದೆವೆಂಬರು. ಧನವ ಕೊಟ್ಟು ಭಕ್ತರಾದೆವೆಂಬರು. ತನು ಮನ ಧನವನೆಂತು ಕೊಟ್ಟರಿ ಹೇಳಿರಣ್ಣಾ? ನಿಮ್ಮ ಒಡವೆ ನಿಮ್ಮಲ್ಲಿ ಇದೆ. ಅದು ಹೇಗೆಂದರೆ ಬಲ್ಲವರು ನೀವು ಕೇಳಿ. ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವದಕ್ಕೇನು? ಮನವ ನೀವು ಕೊಟ್ಟರೆ ನಿಮಗೆ ನಡೆ ನುಡಿ ಚೈತನ್ಯ

ವೇನು? ಧನವ ನೀವು ಕೊಟ್ಟರೆ ಕ್ಷುತ್ತಿಂಗೆ ಭಿಕ್ಷ ಸೀತಕ್ಕೆ ರಗಟೆ ಏನು
ಅಂತಲ್ಲ ಕೇಳಿರಣ್ಣಾ! ತನುವ ಕೊಟ್ಟುದಾವುದೆಂದರೆ: ಹುಸಿ ಹೋದ
ಉಟ್ಟೇನು, ತೊಟ್ಟೇನೆಂಬ ಗುಣವಳಿದರೆ, ತನುವೆ ಗುರುವಾಯಿತ್ತು. ಮನವ
ಕೊಟ್ಟುದಾವುದೆಂದರೆ: ವ್ಯಾಕುಳವೆಲ್ಲ ಅಳಿದು ನಿರಾಕುಳವಾಗಿ ನಿಂದರೆ
ಮನವೆ ಲಿಂಗವಾಯಿತ್ತು. ಧನವ ಕೊಟ್ಟಿಹೆನೆಂಬುದಾವುದೆಂದರೆ: ಇಂದಿಗೆ
ನಾಳಿಗೆ ಎಂಬ ಸಂದೇಹದ ಭಾವಕ್ಕೆ ಭಯಕ್ಕೆ ಭವವಳಿದುದೇ ಜಂಗಮ
ವಾಯಿತ್ತು. ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ, ಮಾಟಕೂಟ.
ಇದನರಿಯದೆ ಏನೊಂದು ಮಾಡಿದರೂ ನೀಡಿದರೂ ಕೊಟ್ಟರೂ ಕೊಂಡ
ರೆಯೂ ವಾಯಕ್ಕೆ ವಾಯ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೨೯

ಅಯ್ಯ, ಏನೇನು ಇಲ್ಲದ ಬಯಲ ದೇಹಕ್ಕೆ ತಾಮಸವ ಮುಂದು
ಮಾಡಿ, ಹೀಗೆ ಕೆಟ್ಟಿತ್ತಲ್ಲಾ ಜಗವೆಲ್ಲ. ಅದೇನು ಕಾರಣವೆಂದರೆ, ಸುಮುಖವ
ಕಡೆಗಿತ್ತು, ಜಗದ ರಚನೆಯ ನೋಡಿತ್ತು. ಇಚ್ಛೆಯ ಮುಚ್ಚಿತ್ತು, ಅಂಗ
ಸುಖವ ಬಯಸಿತ್ತು. ಕಂಗಳ ಕಾಮವನೆ ಮುಂದು ಮಾಡಿತ್ತು. ಇದರಿಂದ
ಲಿಂಗವ ಮರೆಯಿತ್ತು, ಜಂಗಮವ ತೊರೆಯಿತ್ತು. ಇದು ಕಾರಣದಿಂದ
ಜಗದ ಮನುಜರು ಭವಬಂಧನಕ್ಕೊಳಗಾದರು. ಇವೆಲ್ಲವನು ಹಿಂಗಿಸಿ, ನಮ್ಮ
ಶಿವಶರಣರು ಲಿಂಗದಲ್ಲಿಯೆ ಬೆರೆದರು. ಜಂಗಮ ಪ್ರಾಣವೆಂದು, ಪಾದೋ
ದಕ ಪ್ರಸಾದವ ಕೊಂಡು, ಆ ಜಂಗಮದ ಪಾದದಲ್ಲಿ ನಿಜಮುಕ್ತರಾದರಯ್ಯಾ
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೩೦

ಒಡೆಯರನೊಡಗೊಂಡು ಬಂದು ಕೈಗಡಿಗೆಯ ನೀರ ಕೈಯಲಿ
ಕೊಟ್ಟು, ಒಡೆಯರೇ, ಕಾಲ ತೊಳೆಕೋ ಎಂಬವರ ಮನೆಗೆ ಅಡಿ ಇಡಲಾಗ
ದಯ್ಯ ಮೃಡಶರಣರು. ಒಡಲಿಚ್ಛೆಗೆ ಬಡಮನವ ಮಾಡಿ ಹೊಕ್ಕುಂಬುವರ
ಎನಗೊಮ್ಮೆ ತೋರದಿರಾ ರಾಮನಾಥಾ.

೩೧

ಸದ್ಭಕ್ತನ ಸಹಜ ಸ್ವಭಾವದ ನಡೆ ಹೇಗಿರಬೇಕೆಂದಡೆ: ಮನೆಗೆ ಬಂದ ಜಂಗಮವ ಕಂಡು, ಮನದಲ್ಲಿ ಸಂತೋಷವ ತಾಳಬೇಕು. ಮದುವೆ ಮಾಂಗಲ್ಯ ಒಸಗೆ ಉತ್ಸಾಹದಂತೆ ಹರ್ಷಾಬ್ಧಿ ತುಂಬಿ ತುಳುಕಿ ಹೊರಸೂಸಬೇಕು. ಇಂದು ಎಮ್ಮ ಮನೆಗೆ ಮಹಾಪುಣ್ಯದ ಫಲವು ಬಂದು ತುಂಬಿತೆಂದು ಕುಣಿಕುಣಿದು ನೋಡಿ ಹಾಡಿ ಹರಸಬೇಕು. ಸತಿಸುತರು ಸಹವಾಗಿ ಒಡಗೂಡಿ, ಭಕ್ತಿಯ ಮಾಡಿ ನಮ್ಮ ಅಖಂಡೇಶ್ವರಲಿಂಗವನೊಲಿಸಬೇಕು.

೩೨

ಸ್ವರ್ಗಕ್ಕೆ ಏಳು ಸೋಪಾನವಿರ್ಪುದನು ಆರೂ ಅರಿಯರಲ್ಲ! ಅದು ಹೇಗೆಂದೊಡೆ: ಜಂಗಮವ ಕಾಣುತ್ತ ಸದ್ಭಕ್ತನು ಕುಳಿತಾಸನವ ಬಿಟ್ಟು ಇದಿರೆದ್ದು ನಡೆವುದೇ ಒಂದನೆಯ ಸೋಪಾನ. ಮನ ಕರಗಿ ತನು ಉಬ್ಬಿ ಕಂಗಳಲ್ಲಿ ಪರಿಣಾಮಜಲವುಕ್ಕಿ, ಆವರ ಚರಣಕಮಲದ ಮೇಲೆ ಸುರಿವಂತೆ ಸಾಷ್ಟಾಂಗದಿಂದೆ ನಮಸ್ಕರಿಸುವುದೇ ಎರಡನೆಯ ಸೋಪಾನ. ಆ ಜಂಗಮವ ತನ್ನ ಮಠಕ್ಕೆ ಬಿಜಯಂಗೈಸಿ, ಉನ್ನತಾಸನದ ಗದ್ದುಗೆಯ ಮೇಲೆ ಕುಳ್ಳಿರಿಸಿ, ಪಾದಪ್ರಕ್ಷಾಲನವ ಮಾಡುವುದೇ ಮೂರನೆಯ ಸೋಪಾನ. ಆ ಜಂಗಮದೇವರ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದರ್ಚಿಸಿ ಪಾದತೀರ್ಥವ ಕೊಂಬುವುದೇ ನಾಲ್ಕನೆಯ ಸೋಪಾನ. ಆ ಜಂಗಮಕ್ಕೆ ಷಡ್ರಸಾನ್ನಪಾನಂಗಳಿಂದೆ ತೃಪ್ತಿಪಡಿಸುವುದೇ ಐದನೆಯ ಸೋಪಾನ. ಆ ಜಂಗಮದ ಒಕ್ಕುಮಿಕ್ಕ ಪ್ರಸಾದವ ಕೊಂಬುವುದೇ ಆರನೆಯ ಸೋಪಾನ. ಆ ಜಂಗಮದಲ್ಲಿ ಅನುಭಾವವ ಬೆಸಗೊಂಬುವುದೇ ಏಳನೆಯ ಸೋಪಾನ. ಇಂತೀ ಸಪ್ತಸೋಪಾನಂಗಳ ಬಲ್ಲ ಸದ್ಭಕ್ತಂಗೆ ಕೈಲಾಸ ಕರತಳಾಮಳಕವಲ್ಲದೆ, ತನುವ ಸವೆಸದೆ, ಮನವ ದಂಡಿಸದೆ, ಧನವ ಸಮರ್ಪಿಸದೆ ಮಿಥ್ಯಾಸಂಸಾರದಲ್ಲಿ ಸಿಲ್ಕಿ ಹೊತ್ತುಗಳೆದು ಹೊಡೆದಾಡಿ ಸತ್ತು ಹೋಗುವ ವ್ಯರ್ಥಜೀವಿಗಳಿಗೆ ಇನ್ನೆತ್ತಣ ಕೈಲಾಸವಯ್ಯ ಅಖಂಡೇಶ್ವರಾ?

೩೩

ಅನುಭಾವವಿಲ್ಲದವನ ಭಕ್ತಿ ತಲೆಕೆಳಗಪ್ಪುದಯ್ಯಾ! ಅನುಭಾವವೇ ಭಕ್ತಿಗಾಧಾರ. ಅನುಭಾವವೇ ಭಕ್ತಿಗೆ ನೆಲೆವನೆ. ಅನುಭಾವವುಳ್ಳವರ ಕಂಡರೆ

ತೂರ್ಯಾತೂರ್ಯ ಸಂಭಾಷಣೆಯು ಮಾಡದಿರ್ದರೆ ನರಕದಲಿಕ್ಕಯ್ಯಾ ರಾಮನಾಥಾ.

೩೪

ಸಜ್ಜನ ಸನ್ನಿಹಿತವಾದ ಭಕ್ತಿ ಹೊತ್ತಿಗೊಂದು ಪರಿಯುಂಟೆ ಅಯ್ಯಾ? ಒಮ್ಮೆ ಅಹಂಕಾರ, ಒಮ್ಮೆ ಕಿಂಕಿಲವೆ? ಮನಕ್ಕೆ ಮನ ಸಾಕ್ಷಿಯಾಗಿ ಮಾಡುವ ಭಕ್ತರಲ್ಲಿ ಗೊಹೇಶ್ವರನಿಪ್ಪನಲ್ಲದೆ, ಪ್ರಪಂಚಿನೊಳಗಿಲ್ಲ ಕಾಣಾ ಸಂಗನಬಸವಣ್ಣಾ.

೩೫

ಮೇರುಗಿರಿಗಳೆಲ್ಲವು ಪ್ರಮಥರೊಡನೆ. ರಜತ ಗಿರಿಗಳೆಲ್ಲವು ಪುರಾತರೊಡನೆ. ಚತುರ್ದಶಭುವನವೆಲ್ಲವು ಲಿಂಗದೊಡನೆ. ಪೃಥ್ವಿಯೆಂಬುದು ಕರ್ತಾರನ ಕಮ್ಮಟ, ಅಟ್ಟಿನ ಮೊಳೆ, ಬಾಣಸದ ಮನೆ, ತನುಮನಧನಂಗಳೆಲ್ಲವು ನಮ್ಮ ಗೊಹೇಶ್ವರಲಿಂಗದ ಸೊಮ್ಮು. ನೀನೇನ ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣ ?

೩೬

ತನುವರ್ಪಿತವೆಂದರೆ ಗುರುದ್ರೋಹ. ಮನವರ್ಪಿತವೆಂದರೆ ಲಿಂಗದ್ರೋಹ. ಧನವರ್ಪಿತವೆಂದರೆ ಜಂಗಮದ್ರೋಹ. ಇಂತೀ ತನುಮನಧನಂಗಳೆಂಬ ಅನಿತ್ಯವನು ನಿತ್ಯಕ್ಕರ್ಪಿಸಿ ಭಕ್ತನಾದೆನೆಂದರೆ ಅದು ಅಜ್ಞಾನ ನೋಡಾ! ಒಡೆಯರಿಗೆ ಉಂಡೆಯ ಮುರಿದಿಕ್ಕಿ ನಾ ಭಕ್ತನೆಂಬ ಮಾತ ಸಮ್ಯಕ್‌ಶರಣರು ಮೆಚ್ಚುವರೆ? ನಮ್ಮ ಗೊಹೇಶ್ವರಲಿಂಗಕ್ಕೆ ನೀನಾವುದರಲ್ಲಿ ಏನನರ್ಪಿಸಿ ಭಕ್ತನಾದೆ ಹೇಳಾ ಸಂಗನಬಸವಣ್ಣ ?

೩೭

ಸೂಳೆ ಹಲಬರನುಳಿದಳೆಂದು ನಿಂದಿಸುವರಿಲ್ಲ ಕೇಳಾ! ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದರೆ, ಅವಳ ಚಂಡಾಲಗಿತ್ತಿ ಎಂಬರು ಲೋಕವೆಲ್ಲ. ಕೀರ್ತಿವಾರ್ತೆಗೆ ಮಾಡುವ ಭಕ್ತಿ ತಪ್ಪಿದರೆ ಅದ ಮನಕ್ಕೆ ತರಲಿಲ್ಲ. ಸಜ್ಜನ ಸದ್ಭಕ್ತನೆಡಹಿದರೆ ಅದ ಸೈರಿಸಬಾರದು

ಕೇಳಾ! ನಮ್ಮ ಗೊಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೆ ಭಕ್ತನಾದ ಕಾರಣ, ಮನನೊಂದಿತ್ತು ಕಾಣಾ ಸಂಗನಬಸವಣ್ಣ.

೩೮

ಭಕ್ತ ಜಂಗಮದ ಸಕೀಲ ಸಂಬಂಧವನಾರು ಬಲ್ಲರು ಹೇಳಾ? ಅರ್ಥವನೊಪ್ಪಿಸಿದಾತ ಭಕ್ತನಲ್ಲ. ಪ್ರಾಣವನೊಪ್ಪಿಸಿದಾತ ಭಕ್ತನಲ್ಲ. ಅಭಿಮಾನವನೊಪ್ಪಿಸಿದಾತ ಭಕ್ತನಲ್ಲ. ಅದೇನು ಕಾರಣವೆಂದರೆ, ಸತ್ಯಸದಾಚಾರಕ್ಕೆ ಸಲ್ಲನಾಗಿ. ಆ ಭಕ್ತನ ಮನೆಯ ಹೊಕ್ಕು ಪಾದಾರ್ಚನೆಯ ಮಾಡಿಸಿಕೊಂಡು ಒಡಲ ಕಕ್ಕುಲತೆಗೆ ಅಶನವನುಂಡು, ವ್ಯಸನದ ಕಕ್ಕುಲತೆಗೆ ಹಣವ ಬೇಡಿ, ಕೊಟ್ಟಡೆ ಕೊಂಡಾಡಿ, ಕೊಡದಿರ್ದರೆ ದೂರಿಕೊಂಡು ಹೋಹಾತ ಜಂಗಮವಲ್ಲ. ಆದಿಯನಾದಿಯಿಂದತ್ತತ್ತ ಮುನ್ನಲಾದ ಮಹಾಘನವ ಭೇದಿಸಿ ಕಂಡರಿದು, ಕಾಯದ ಜೀವದ ಹೊಲಿಗೆಯ ಬಿಚ್ಚಿ ಬೀಸಾಡಿ, ತನ್ನನೆ ಅರ್ಪಿಸಿ ಇರಬಲ್ಲಾತ ಭಕ್ತ. ಸುಳುಹಿನ ಸೂತಕ ಮೈದೋರದೆ, ಒಡಲ ಕಳವಳದ ರುಚಿಗೆ ಹಾರೈಸದೆ, ಅರಿವೆ ಅಂಗವಾಗಿ, ಆಪ್ಯಾಯನವೆ ಭಕ್ತಿಯಾಗಿ, ಕಿಂಕುರ್ವಾಣವೆಂಬ ಶಿವಮಂತ್ರಕ್ಕೆ ನಮೋ ನಮೋ ಎನಬಲ್ಲರೆ ಆತ ಜಂಗಮ. ಆ ಜಂಗಮದ, ಆ ಭಕ್ತನ ಸಮ್ಮೇಳವೆ ಸಮ್ಮೇಳ. ಮಿಕ್ಕಿನ ಅರೆಭಕ್ತರೊಡತಣ ಸಂಗ ನಮ್ಮ ಗೊಹೇಶ್ವರಲಿಂಗಕ್ಕೆ ಸೊಗಸದು.

೩೯

ದಿನ ದಿನಕ್ಕೆ ದೀನ ಮಾನವನಂತೆ ಹೀನಾಶ್ರಯದಲ್ಲಿ ಹುಟ್ಟಿ, ಏನನು ಅರಿಯದೆ, ಜ್ಞಾನವು ಇಲ್ಲದೆ, ನಾನು ನೀನೆಂಬ ಉಭಯವು ಅಳಿಯದೆ, ನಾನು ಭಕ್ತ ನಾನು ಜಂಗಮವೆಂಬವರ ನೋಡಿ ನಾಚಿತ್ತೆನ್ನ ಮನವು. ಅಂಗಕ್ಕೆ ಆಚಾರವಿಲ್ಲ, ಮನಸಿಂಗೆ ಅರುಹಿಲ್ಲ, ಪ್ರಾಣಕ್ಕೆ ಗೊತ್ತು ಇಲ್ಲ, ಭಾವಕ್ಕೆ ಹೇಯವಿಲ್ಲದೆ ಇನ್ನಾವ ಬಗೆಯಲ್ಲಿ ಭಕ್ತಜಂಗಮವಾದಿರಿ ಹೇಳಿರಣ್ಣ? ಭಕ್ತನಾದರೆ ಎಂತಿರಬೇಕೆಂದರೆ: ಮಾಡಿಹೆನೆಂಬುದು ಮನದೊಳಗೆ ಹೊಳೆಯದೆ, ನೀಡಿಹೆನೆಂಬ ಅರಿಕೆ ಇಲ್ಲದೆ, ಬೇಡುವದಕ್ಕೆ ಮುನ್ನವೆ ಆ ಜಂಗಮದ ನಿಲುಕಡೆಯನರಿದು ಮಾಡಬಲ್ಲರೆ ಭಕ್ತ. ಮಾಡಿದ ಭಕ್ತಿಯ ಕೈಕೊಂಡು, ಆ ಭಕ್ತನ ಕರಸ್ಥಲಕ್ಕೆ ಲಿಂಗವಾಗಿ, ಮನಸ್ಥಲಕ್ಕೆ ಅರಿವಾಗಿ,

ಭಾವಸ್ಥಲಕ್ಕೆ ಜಂಗಮವಾಗಿ ಅಡಗಿದಡೆ ಐಕ್ಯನೆಂಬೆ, ಜಂಗಮವೆಂಬೆ, ಲಿಂಗವೆಂಬೆ, ಗುರುವೆಂಬೆ. ಆ ಭಕ್ತ ಜಂಗಮ ಎರಡಕ್ಕು ಫಲಂ ನಾಸ್ತಿ, ಪದಂ ನಾಸ್ತಿ, ಭವಂ ನಾಸ್ತಿ. ಆ ನಿಲವಿಂಗೆ ನಮೋ ನಮೋ ಎಂದು ಬದುಕಿದೆ ನೀವು ಸಾಕ್ಷಿಯಾಗಿ ಬಸವಪ್ರಿಯ ಕೂಡಲಚೆನ್ನಬಸವಣ್ಣ !

೪೦

ಎನ್ನ ಭಕ್ತಿ ಎಲವದ ಕಾಯ ಫಲದಂತೆ ನೋಡಯ್ಯಾ! ಹೊರಗೆ ಹೆಂಪು, ಒಳಗೆ ಬೂರವಯ್ಯ. ನಿಮ್ಮ ದೇವರೆಂದು ಪೂಜಿಸಿ, ಮಾನವರೆಂದು ಮರೆವೆನು: ಸಗುಣ ನಿರ್ಗುಣವೆರಡೂ ಅಳವಡದ ಸಂದೇಹಿ ನಾನಯ್ಯ! ಕೂಡಲಸಂಗಮದೇವಾ, ಎನ್ನಪರಾಧವ ಸೈರಿಸುವರೆ ನೀವಲ್ಲದೆ ಮತ್ತಾರನೂ ಕಾಣೆನು. ಶರಣಾರ್ಥಿ, ಕೃಪೆಯಿಂದ ಕರುಣಿಸಯ್ಯಾ !

೪೧

ಒಡೆಯರು ಮನೆಗೆ ಬಂದುದ ಕಂಡು ತೆರಹುಮರಹಾಗಿಪ್ಪನೆ ಭಕ್ತನು? ಹೊನ್ನುಳ್ಳ ದೊರೆಯಂತೆ ಭಾವಿಸಿಕೊಂಡು ಬಿಮ್ಮಿನಲ್ಲಿ ಇಪ್ಪನೆ ಭಕ್ತ? ಜಂಗಮಪ್ರೇಮಿಗೆ ಜಡಮತಿಯುಂಟೆ ಅಯ್ಯ? ನಿಮ್ಮೊಕ್ಕುದ ಕೊಂಡು ಮಿಕ್ಕುದನರಿಯದಿರ್ಪ ಮಹಾಮಹಿಮರ ಪಾದವ ತೋರಯ್ಯ ಕೂಡಲ ಚೆನ್ನಸಂಗಮದೇವಾ.

೪೨

ಎನ್ನ ತನುವೆಂಬವಂಗೆ ಬ್ರಹ್ಮನಿಕ್ಕಿದ ಕೋಳವಾಯಿತ್ತಯ್ಯಾ. ಎನ್ನ ಸ್ತ್ರೀ ಎಂಬವಂಗೆ ವಿಷ್ಣುವಿಕ್ಕಿದ ಸಂಕೋಲೆಯಾಯಿತ್ತಯ್ಯಾ. ಎನ್ನ ಧನವೆಂಬವಂಗೆ ರುದ್ರನಿಕ್ಕಿದ ಆಶೆರೋಷವೆಂಬ ಜಂಜುರಿ ಬೀಗಿತ್ತಯ್ಯಾ. ಎನ್ನ ಕುಲವೆಂಬವಂಗೆ ರುದ್ರನಿಕ್ಕಿದ ಸೆರೆ ಸಂಕೋಲೆಯ ಬಂದಿಖಾನೆಯೊಳು ಬಿದ್ದನು ನೋಡಾ ! ಇಂತೀ ಕೊರಳುದ್ದಕ್ಕೆ ಹೂಳಿಸಿಕೊಂಡು, ಮುಗಿಲುದ್ದಕ್ಕೆ ಹಾರುವೆನೆಂಬುವರು ನಾನು ಭಕ್ತ ನಾನು ಮಹೇಶ್ವರನೆಂಬ ನುಡಿಗೆ ನಾಚರು ನೋಡಾ. ಆ ಭಕ್ತನ ಮಠಕ್ಕೆ ಜಂಗಮ ನಿರಂತರ ಬರುತ್ತಿರಲು, ಬ್ರಹ್ಮನಿಕ್ಕಿದ ಕೋಳ ಕಡಿಯಿತ್ತು. ಆ ಭಕ್ತನ ಸ್ತ್ರೀಯಳು ನಿರಂತರ

ಜಂಗಮದಾಸೋಹವ ಮಾಡುತ್ತಿರಲು, ವಿಷ್ಣುವಿಕ್ಕಿದ ಸಂಕೋಲೆಯು ಕಡಿಯಿತ್ತಯ್ಯಾ. ಆ ಭಕ್ತನು ಧನವ ನಿರಂತರ ಜಂಗಮಕ್ಕೆ ಸವೆಸುತ್ತಿರಲು ರುದ್ರನಿಕ್ಕಿದ ಆಶಿರೋಷದ ಜಂಜುರಿ ಬಿಟ್ಟಿತ್ತಯ್ಯ. ಆ ಭಕ್ತನು ತನ್ನ ಜಾತಿಸೂತಕವ ಕಳೆದು, ಶಿವಭಕ್ತರ ಕುಲವ ವಿಚಾರಿಸದೆ, ಜಾತಿ ಶಿವಜಾತಿ, ಕುಲ ಶಿವಕುಲವೆಂದರಿದು ನಿರಂತರ ಬೆರಸಿಕೊಂಡಿರುತ್ತಿರಲು, ಈಶ್ವರನಿಕ್ಕಿದ ಸೆರೆ ಸಂಕೋಲೆಯ ಬಂದೀಖಾನೆಯಿಂದ ಹೊರಹೊರಟ ನೋಡಯ್ಯ! ಇಂತು ಇದಲ್ಲದೆ ಸಹಜರಾದ ಸದ್ಭಕ್ತರ ಶ್ರೀಪಾದವನೆನಗೆ ತೋರಿಸಿ ಬದುಕಿಸಯ್ಯಾ ಕೂಡಲಚೆನ್ನಸಂಗಮದೇವಾ.

೪೩

ಗುರುಸೇವೆಯಲ್ಲಿ ತನು ಸವೆದು ಲಿಂಗಪೂಜೆಯಲ್ಲಿ ಮನ ಸವೆದು ಜಂಗಮ ದಾಸೋಹದಲ್ಲಿ ಧನ ಸವೆದು, ಇಂತೀ ತ್ರಿವಿಧ ಸಂಪತ್ತು ನೆಲೆಗೊಂಡ ಸದ್‌ಭಕ್ತಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.

೪೪

ಮಾಡುವ ತನುವು ನೀವೆ ಆದಿರಿ. ಕೂಡುವ ಮನವು ನೀವೆ ಆದಿರಿ. ನೀಡುವ ಧನವು ನೀವೆ ಆದಿರಿ. ಅಖಂಡೇಶ್ವರಾ, ನಾನೂ ಇಲ್ಲ; ನೀವೂ ಇಲ್ಲ; ಏನೇನೂ ಇಲ್ಲ.

೪೫

ಆರೂ ಇಲ್ಲದಾರಣ್ಯದೊಳಗೆ ಮನೆಯ ಕಟ್ಟಿದರೆ, ಕಾಡುಗಿಚ್ಚು ಎದ್ದು ಬಂದು ಹತ್ತಿತಲ್ಲಾ! ಆ ಉರಿಯೊಳಗೆ ಮನೆ ಬೇವಲ್ಲಿ ಮನೆಯೊಡೆಯನೆತ್ತ ಹೋದನೋ? ಆ ಉರಿಯೊಳಗೆ ಬೆಂದ ಮನೆ ಬೇಗೆಯಾಗದುದ ಕಂಡು ಮನೆಯೊಡೆಯನಳಲುತ್ತ ಬಳಲುತ್ತೈದಾನೆ. ಗೊಹೇಶ್ವರ, ನಿಮ್ಮ ಒಲವಿಲ್ಲದ ಠಾವ ಕಂಡು ಮನದಲ್ಲಿ ಹೇಸಿ ತೊಲಗಿದೆನಯ್ಯ.

೪೬

ಹಸಿವು ತೃಷೆ ವಿಷಯ ವ್ಯಸನ ಕಾಮ ಕ್ರೋಧ ಲೋಭ ಮದ ಮತ್ಸರವಾದಿಯಾದ ತನುಗುಣಂಗಳು ದೇವ ದಾನವ ಮಾನವರಂತಾದರೆ ಲಿಂಗ

ವಂತನಾದ ಪರಿ ಎಂತಯ್ಯಾ? ಲಿಂಗಗುಣ ಲಿಂಗಚಿಹ್ನ ಇಲ್ಲದಿರ್ದೊಡೆ ಲಿಂಗ ದೇಹಿಯಾದ ಪರಿ ಎಂತಯ್ಯಾ? ಹಸಿವು ತೃಷೆ ವಿಷಯ ವ್ಯಸನವಡಗಿದೊಡೆ ಲಿಂಗಚಿಹ್ನ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾದಿಯಾದ ದೇಹಗುಣಂಗಳಳಿದರೆ ಲಿಂಗಚಿಹ್ನ. ಇಂತಲ್ಲದೆ ದೇಹಗುಣಂಗಳು ತನ್ನ ಬಿಡದೆ, ತಾನವ ಕೂಡಿಕೊಂಡು ಬಿಡದಿರ್ದು, ತಾ ಲಿಂಗದೇಹಿ ಎಂದಡೆ ಆ ಲಿಂಗವೆಂತು ಒಲಿವುದು? ಸದ್ಭಕ್ತರೆಂತು ಮೆಚ್ಚುವರಯ್ಯ? ಇಂತಹ ಅವಗುಣಂಗಳೆಲ್ಲವೂ ಅಳಿದು, ಗುರು ಲಿಂಗ ಜಂಗಮದಲ್ಲಿ ತನುಮನಧನವ ಲೀಯವ ಮಾಡಿದರೆ ಸರ್ವಾಂಗಲಿಂಗಿಯಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೪೭

ಶಿವಭಕ್ತಿಯುಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ, ಲೋಭ ಬೇಡ, ಮೋಹ ಬೇಡ, ಮದ ಬೇಡ, ಮತ್ಸರ ಬೇಡ. ಶಿವಭಕ್ತಿಯುಳ್ಳವಂಗೆ ಕಾಮ ಬೇಕು, ಕ್ರೋಧ ಬೇಕು, ಲೋಭ ಬೇಕು, ಮೋಹ ಬೇಕು, ಮದ ಬೇಕು, ಮತ್ಸರಬೇಕು. ಬೇಕೆಂಬುದಕ್ಕಾವ ಗುಣ? ಬೇಡೆಂಬುದಕ್ಕಾವ ಗುಣ? ಕಾಮ ಬೇಕು ಲಿಂಗದಲ್ಲಿ. ಕ್ರೋಧ ಬೇಕು ಕರಣಂಗಳಲ್ಲಿ. ಲೋಭ ಪಾದೋದಕ ಪ್ರಸಾದದಲ್ಲಿ. ಮೋಹ ಬೇಕು ಗುರುಲಿಂಗಜಂಗಮದಲ್ಲಿ. ಮದ ಬೇಕು ಶಿವಾಚಾರ ಘನವೆಂಬಲ್ಲಿ. ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ. ಇಂತೀ ಷಡ್ಗುಣವಿರಬೇಕು. ಬೇಡೆಂಬುದಕ್ಕಾವಗುಣ? ಕಾಮ ಬೇಡ ಪರಸ್ತ್ರೀಯರಲ್ಲಿ. ಮದ ಬೇಡ ಶಿವಭಕ್ತರಲ್ಲಿ. ಕ್ರೋಧ ಬೇಡ ಗುರುವಿನಲ್ಲಿ. ಲೋಭ ಬೇಡ ತನುಮನದಲ್ಲಿ. ಮೋಹ ಬೇಡ ಸಂಸಾರದಲ್ಲಿ. ಮದ ಬೇಡ ಶಿವಭಕ್ತರಲ್ಲಿ. ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ. ಇಂತೀ ಷಡ್ವಿಧ ಗುಣವನರಿದು ಮರೆಯಬಲ್ಲಡೆ ಆತನೆ ಸದ್ಭಕ್ತ ಕಾಣಾ ಕೂಡಲಚೆನ್ನ ಸಂಗಮದೇವಾ.

೪೮

ತನು ನಿಮಗೆ ಸಮರ್ಪಿಸಿಹೆನೆಂದಡೆ, ತನುವಿಲ್ಲವಯ್ಯ ಎನಗೆ. ಅದೇನು ಕಾರಣವೆಂದೊಡೆ: ನೀವು ಗುರುವಾಗಿ ಬಂದೆನ್ನ ತನುವನೊಳಕೊಂಡಿರ್ಪಿರಿ. ಮನವ ನಿಮಗರ್ಪಿಸಿಹೆನೆಂದಡೆ, ಮನವಿಲ್ಲವಯ್ಯ ಎನಗೆ. ಅದೇನು ಕಾರಣ

ವೆಂದೊಡೆ: ನೀವು ಲಿಂಗವಾಗಿ ಬಂದೆನ್ನ ಮನವನೊಳಕೊಂಡಿರ್ಪಿರಿ. ಧನವ ನಿಮಗರ್ಪಿಸಿಹೆನೆಂದಡೆ, ಧನವಿಲ್ಲವಯ್ಯ ಎನಗೆ. ಅದೇನು ಕಾರಣವೆಂದೊಡೆ: ನೀವು ಜಂಗಮವಾಗಿ ಬಂದೆನ್ನ ಧನವನೊಳಕೊಂಡಿರ್ಪಿರಾಗಿ. ಎನ್ನ ತನುವೇ ಗುರು, ಮನವೇ ಲಿಂಗ, ಧನವೇ ಜಂಗಮವಾಯಿತ್ತಾಗಿ, ಅಖಂಡೇಶ್ವರಾ, ನಿಮ್ಮೊಳಿಪ್ಪೆನು.

೪೯

ಶಿವಶಿವಾ, ನೀವೆನ್ನ ನಡೆಯೊಳಗೆ ನಡೆರೂಪವಾಗಿರ್ದು, ನಡೆಪರುಷವ ಕರುಣಿಸಯ್ಯ ದೇವ. ಎನ್ನ ನುಡಿಯೊಳಗೆ ನುಡಿರೂಪಾಗಿರ್ದು, ನುಡಿಪರುಷವ ಕರುಣಿಸಯ್ಯ ದೇವ. ಎನ್ನ ನೋಟದೊಳಗೆ ನೋಟರೂಪಾಗಿರ್ದು, ನೋಟಪರುಷವ ಕರುಣಿಸಯ್ಯ ದೇವ. ಎನ್ನ ಹಸ್ತದೊಳಗೆ ಹಸ್ತರೂಪಾಗಿರ್ದು, ಹಸ್ತಪರುಷವ ಕರುಣಿಸಯ್ಯ ದೇವ. ಎನ್ನ ಮನದೊಳಗೆ ಮನರೂಪಾಗಿರ್ದು, ಮನಪರುಷವ ಕರುಣಿಸಯ್ಯ ದೇವ. ಎನ್ನ ಭಾವದೊಳಗೆ ಭಾವರೂಪಾಗಿರ್ದು, ಭಾವಪರುಷವ ಕರುಣಿಸಯ್ಯ ದೇವಾ! ಅಖಂಡೇಶ್ವರಾ.

೫೦

ಎನ್ನ ಸ್ಥೂಲತನುವೆಂಬ ಮನೆಯಲ್ಲಿ ಲಿಂಗವೆಂಬ ಜ್ಯೋತಿಯ ತುಂಬಿದೆನಯ್ಯ. ಎನ್ನ ಸೂಕ್ಷ್ಮತನುವೆಂಬ ಮನೆಯಲ್ಲಿ ಮಂತ್ರವೆಂಬ ಜ್ಯೋತಿಯ ತುಂಬಿಪೆನಯ್ಯ. ಎನ್ನ ಕಾರಣತನುವೆಂಬ ಮನೆಯಲ್ಲಿ ಜ್ಞಾನವೆಂಬ ಜ್ಯೋತಿಯ ತುಂಬಿದೆನಯ್ಯ. ಎನ್ನ ಒಳಹೊರಗೆ ತುಂಬಿ ಬೆಳಗುವ ಜ್ಯೋತಿಯ ಬೆಳಗಿನೊಳಗೆ ಸುಳಿವುತಿರ್ದೆನಯ್ಯ ಅಖಂಡೇಶ್ವರಾ.

೫೧

ಅರುಹಿನ ಜ್ಯೋತಿ ಎದ್ದಿತ್ತು. ಶರೀರವನೆಲ್ಲ ತುಂಬಿತ್ತು. ಮರವೆಯ ತಮ ಹರಿಯಿತ್ತು. ಕರಣಂಗಳ ತುಂಡಿಸಿತ್ತು. ವಿಷಯಂಗಳ ಶಿರವನು ಹರಿಯಿತ್ತು. ದಶವಿಧೇಂದ್ರಿಯಂಗಳ ದಾಳಿಯ ನಿಲಿಸಿತ್ತು. ಪಂಚಮಹಾಭೂತಂಗಳ ಪ್ರಪಂಚವ ಪರಿಹರಿಸಿತ್ತು. ಬ್ರಹ್ಮವೇ ತಾನೆಂಬ ಕುರುಹ ನೈಗಾಣಿಸಿತ್ತು. ತಾನೆಂಬ ಕುರುಹನಳಿದ ಅವಿರಳ ಸಹಜನು ಭಕ್ತನು ನೋಡಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೫೨

ಮರ್ತ್ಯದಲ್ಲಿ ಹುಟ್ಟಿ ಕಂಗಳ ಮುಂದಣ ಕತ್ತಲೆಯ ಕಳೆಯದೆ, ನಾವು ಗುರು ಜಂಗಮ, ನಾವು ಭಕ್ತರು ಎಂಬ ನುಡಿಗೆ ಏಕೆ ನಾಚರೋ ? ಭಕ್ತನಾದರೆ, ಸತ್ತುಚಿತ್ತಾನಂದವನೊತ್ತಿ ಮೆಟ್ಟಿ, ತತ್ವಮಸಿ ವಾಕ್ಯವೆಂದು ಕಂಡು ಬಿಟ್ಟು, ಲಿಂಗದ ಗೊತ್ತುವಿಡಿದು, ಹಿಂದೆ ಹರಿದು, ಗುರುವಿನ ಗೊತ್ತನರಿದು, ಜಗದೊಳಗಣ ಗುಂಗುದಿಯನೆಲ್ಲವ ಹರಿದು, ಜಂಗಮದ ಗೊತ್ತನರಿದು, ಮುಂದಣ ಮುಕ್ತಿ ಎಂಬುದ ಮರೆದು. ಎಂತಿರ್ದಂತೆ ಬ್ರಹ್ಮವು ತಾನೆ ಎಂಬುದನರಿದು, ಪರಿಣಾಮದಲ್ಲಿ ಪರವಶನಾಗಿ ನಿಂದು, ಮತ್ತೆ ಆರ ನೆನೆಸಲಿಲ್ಲ, ಮೂರು ಮುಟ್ಟಲಿಲ್ಲ, ಬೇರೊಂದುಂಟೆನಲಿಲ್ಲ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನಿಗೆ ಸೂರೆಹೋದ ಶರಣನು.

೫೩

ಭಕ್ತನ ನಡೆ ಶುದ್ಧ; ಭಕ್ತನ ನುಡಿ ಶುದ್ಧ. ಭಕ್ತನ ತನು ಶುದ್ಧ; ಭಕ್ತನ ಮನ ಶುದ್ಧ. ಭಕ್ತನ ಭಾವ ಶುದ್ಧ; ಭಕ್ತನ ಸರ್ವಕ್ರಿಯೆಯೆಲ್ಲ ಶುದ್ಧ. ಅಖಂಡೇಶ್ವರಾ, ನೀ ಒಲಿದ ಸದ್‌ಭಕ್ತನ ಕಾಯವೇ ಕೈಲಾಸವಯ್ಯಾ.

೫೪

ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ಶ್ರುತಿ ಹುಸಿ ! ಲಿಂಗವಿದ್ದ ಠಾವಿಂಗೆ ಪ್ರಳಯವುಂಟೆ ? ಭಕ್ತರ ಭಾವದಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗೊಹೇಶ್ವರ.

೫೫

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ! ನೀನು ಜಗಕ್ಕೆ ಬಲ್ಲಿದನು, ಆನು ನಿನಗೆ ಬಲ್ಲಿದನು ಕಂಡಯ್ಯಾ ! ಕರಿಯು ಕನ್ನಡಿಯೊಳಗಡಗಿದಂತಯ್ಯಾ ; ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ !

೫೬

ಷಟ್‌ತ್ರಿಂಶತ್ತತ್ವಂಗಳೆ ದೇಹವಾಗಿ, ಪರಶಿವನದಕ್ಕೆ ದೇಹಿಯಾಗಿಪ್ಪುದರಿಂದ, ತತ್ವಮಯವಾದ ಭಕ್ತನಂಗದಲ್ಲಿ ಪ್ರಾಣಮಯವಾದ ಶಿವನಿಪ್ಪನಯ್ಯ! ತತ್ವಂಗಳು ತತ್ವಂಗಳನೈದುವಲ್ಲಿ, ಭಕ್ತನು ಜ್ಞಾನಕಾಯವಾಗಿಪ್ಪನಯ್ಯ! ಆ ಕಾಯದಲ್ಲಿ ಕಳಾಸ್ವರೂಪವಾಗಿಪ್ಪನಯ್ಯ ಶಿವನು. ಇಂತು ಆವಾಗಳೂ ಅಗಲನಯ್ಯ ಶಿವನು. ಭಕ್ತದೇಹಿಕನಯ್ಯ ನಮ್ಮ ಸೌರಾಷ್ಟ್ರ ಸೋಮೇಶ್ವರ.

೫೭

ಬ್ರಹ್ಮಸೃಷ್ಟಿ ಪಂಚಭೂತ ಸಮ್ಮಿಶ್ರದಿಂದಾದ ಕಾಯವು ಭೂತಕಾಯವು. ವಾಯುಪ್ರಾಣಿ, ಉತ್ಪತ್ತಿ ಸ್ಥಿತಿ ಲಯ ಕಾರಣ ಕಾಯವು. ಈ ಪರಿಯ ಉತ್ಪತ್ತಿಯು ದೇವ ದಾನವ ಮಾನವರಿಗೆಯೂ ಒಂದೇ ಪರಿ. ಶ್ರೀ ಗುರುವಿನ ಸೃಷ್ಟಿಯಿಂದಲೂ ಮಹಾಪ್ರಸಾದದಿಂದಲೂ ಮಹಾಮಂತ್ರ ಸಮ್ಮಿಶ್ರದಿಂದಾದ ಕಾಯವು ಪ್ರಸಾದಕಾಯವು, ಮಹಾಮಂತ್ರಪಿಂಡವು, ಭಕ್ತಿಕಾಯವು. ಲಿಂಗಪ್ರಾಣಿಗೆ ಉತ್ಪತ್ತಿ ಸ್ಥಿತಿ ಲಯವಿಲ್ಲ, ಸತ್ಯನು ಸದ್ಯೋನ್ಮುಕ್ತನು. ಈ ಪರಿಯು ಶ್ರೀ ಗುರುಕಾರುಣ್ಯವ ಪಡೆದ ಮಹಾತ್ಮರಿಗೆ ಒಂದೇ ಪರಿ, ಶ್ರೀ ಗುರುಕಾರುಣ್ಯದ ಪರಿ. ಶಿವಭಕ್ತನ ಇರವಿನ ಪರಿ ಇಂತುಟಯ್ಯಾ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ಶರಣರಿಗೆ ಲೋಕದ ಮಾನವರು ಸರಿ ಎಂದರೆ ನಾಯಕನರಕ ತಪ್ಪದು.

೫೮

ಭಕ್ತನ ಕಾಯವೇ ಶಿವನ ಕಾಯ. ಶಿವನ ಕಾಯವೇ ಭಕ್ತನ ಕಾಯ. ಶಿವ ಶಿವ, ಭಕ್ತ ಬೇರೆ? ಶಿವ ಬೇರೆ? ಒಂದೇ ಕಾಣಿರಣ್ಣಾ. ಅದೆಂತೆಂದೊಡೆ: ಭಕ್ತದೇಹಿಕ ದೇವ, ದೇವದೇಹಿಕ ಭಕ್ತನೆಂದು ಶ್ರುತಿಗಳು ಹೊಗಳುವ ಕಾರಣ, ಭಕ್ತಂಗೂ ದೇವಂಗೂ ಕಾಯವೊಂದೆ, ಪ್ರಾಣ ಒಂದೆ; ಎರಡೆಂಬ ಪರಿಭಾಷೆಯ ನುಡಿಯಲಾಗದು ಶಿವಭಕ್ತರಾದವರು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೫೯

ಪಾಪ ನನ್ನದೇ, ಪುಣ್ಯ ನಿನ್ನದೇ ಅಯ್ಯ? ದ್ವಂದ್ವಕರ್ಮ ಎನಗೆ ಬೇರಾದ ಪರಿ ಎಂತಯ್ಯಾ? ವಿಚಾರವಾದ ಬಳಿಕ ನಾನು ಲಿಂಗಪ್ರಾಣಿ, ನೀನು ಭಕ್ತಕಾಯನು. ಇದು ಕಾರಣ ದ್ವಂದ್ವಕರ್ಮ ಮುನ್ನವೇ ನಾಸ್ತಿ. ಇನ್ನು ಭಾವಭೇದವೆಂದಡೆ ನಗೆಗೆಡೆಯಪ್ಪುದು. ಹೆಚ್ಚು ಕುಂದು ಎನ್ನದಲ್ಲ, ನಿನ್ನದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೦

ಎನಗೆ ನೀನು ಪ್ರಾಣ, ನಿನಗೆ ನಾನು ಪ್ರಾಣ. ಇನ್ನೇನೊ ಇನ್ನೇನೊ? ಹಂಗಿಲ್ಲ ಹರಿ ಇಲ್ಲ ಮತ್ತೇನು? ಪ್ರಪಂಚಿಲ್ಲವಾಗಿ, ನೀ ನಡಿಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ. ನೀ ನೋಡಿಸಿದಂತೆ ನೋಡಿದೆ. ನೀನಾಡಿಸಿದಂತೆಯಾಡಿದೆ. ನೀ ಮಾಡಿಸಿದಂತೆ ಮಾಡಿದೆ. ಈ ಪುಣ್ಯಪಾಪ ಸುಖದುಃಖಾತ್ಮಕನು ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೧

ಕಾಯವಿಲ್ಲದ ಭಕ್ತ, ಜೀವವಿಲ್ಲದ ಭಕ್ತ, ಭಾವವಿಲ್ಲದ ಭಕ್ತ. ಅಖಂಡೇಶ್ವರಾ, ನಿಮ್ಮನೊಡಗೂಡಿದ ಮಹಾಭಕ್ತನು ಉಪಮೆಗೆ ಉಪಮಾತೀತನು ನೋಡಾ!

೬೨

ಅಂದಿನವರಿಗೆ ಅಷ್ಟಾವರಣವು ಸಾಧ್ಯವಪ್ಪುದಲ್ಲದೆ ಇಂದಿನವರಿಗೆ ಸಾಧ್ಯವಾಗದೆಂಬರು. ಅದೇನು ಕಾರಣ ಸಾಧ್ಯವಲ್ಲ ಶ್ರೀಗುರುವೇ? ಅಂದಿನ ಸೂರ್ಯ ಚಂದ್ರ ಆತ್ಮ ಆಕಾಶ ವಾಯು ಅಗ್ನಿ ಅಪ್ಪು ಪೃಥ್ವಿಯೆಂಬ ಅಷ್ಟತನುಮೂರ್ತಿಗಳು, ಅಂದಿನ ಹದಿನೆಂಟು ಧಾನ್ಯಂಗಳು, ಅಂದಿನ ವಾರ ತಿಥಿನಕ್ಷತ್ರಂಗಳು ಸಂವತ್ಸರಂಗಳು ಇಂದು ನಡೆವುದುಂಟು. ಅಂದಿನ ಅಷ್ಟಾವರಣಸ್ವರೂಪ ಇಂದುಂಟು. ಅಂದು ಇಂದೆಂಬ ಸಂದೇಹದ ಕೀಲ ಕಳೆದು ದಯಮಾಡೋ ಸದ್ಗುರುವೇ. ಕೇಳೈ ಮಗನೇ, ದೃಢವಿಡಿದು

ಏಕಚಿತ್ತದಲ್ಲಿ ನಡೆವ ನಂಬಿಗೆಯುಳ್ಳ ಶಿವಭಕ್ತಂಗೆ ಅಂದೇನು? ಇಂದೇನು? ಶಿವಾಚಾರದಲ್ಲಿ, ವಿಭೂತಿರುದ್ರಾಕ್ಷಿಯಲ್ಲಿ ವಿಶ್ವಾಸವಿದ್ದವರಲ್ಲಿ, ದೃಢವಿದ್ದವರಲ್ಲಿ, ಶಿವಮಂತ್ರವಲ್ಲದೆ ಅನ್ಯಮಂತ್ರವಿಲ್ಲೆಂಬುವರಿಗೆ ಅಂದೇನು? ಇಂದೇನು? ಪಂಚಾಚಾರವೆ ಪ್ರಾಣವಾಗಿ, ಅಷ್ಟಾವರಣವೆ ಅಂಗವಾಗಿಪ್ಪವರಿಗೆ ಅಂದೇನು? ಇಂದೇನು? ಪುರಾತನರ ವಚನವಿಡಿದು ನಡೆಯುವವರಿಗೆ, ಆದಿಮಧ್ಯಾವಸಾನ ತಿಳಿದವರಿಗೆ ಅಂದು ಇಂದೆಂಬ ಸಂದೇಹವಿಲ್ಲ ಸ್ವಾಮಿ. ಎನ್ನಲ್ಲಿ ನೋಡಿದೊಡೆ ಹುರುಳಿಲ್ಲ. ಎನ್ನ ತಪ್ಪಿಂಗೇನೂ ಎಣೆ ಇಲ್ಲ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಮೇರುಗುಣವನರಸುವದೇ ಕಾಗೆಯಲ್ಲಿ? ಪರುಷ ಗುಣವನರಸುವದೇ ಕಬ್ಬುನದಲ್ಲಿ? ನೀನು ಎನ್ನ ಗುಣವನರಸುವರೆ ಎಂತು ಜೀವಿಸುವೆನಯ್ಯ ಶಾಂತಕೂಡಲಸಂಗಮದೇವಾ? ನಿಮ್ಮ ಧರ್ಮ, ನಿಮ್ಮ ಧರ್ಮ.

೬೩

ಎನ್ನ ತನುವೆ ಶ್ರೀ ಗುರುಸ್ಥಾನವಯ್ಯ. ಎನ್ನ ಮನವೆ ಲಿಂಗಸ್ಥಾನವಯ್ಯ. ಎನ್ನ ಆತ್ಮವೆ ಜಂಗಮಸ್ಥಾನವಯ್ಯ. ಎನ್ನ ಪ್ರಾಣವೆ ಪ್ರಸಾದಸ್ಥಾನವಯ್ಯ. ಎನ್ನ ಭಾವವೆ ಪಾದೋದಕಸ್ಥಾನವಯ್ಯ. ಎನ್ನ ಲಲಾಟವೆ ವಿಭೂತಿಸ್ಥಾನವಯ್ಯ. ಎನ್ನ ಗರಳೆ ರುದ್ರಾಕ್ಷಿಸ್ಥಾನವಯ್ಯ. ಎನ್ನ ಜಿಹ್ವೆಯೆ ಶಿವಮಂತ್ರಸ್ಥಾನವಯ್ಯ. ಎನ್ನ ಕಂಗಳೆ ಲಿಂಗಾಚಾರಸ್ಥಾನವಯ್ಯ. ಎನ್ನ ಶ್ರೋತ್ರವೆ ಭೃತ್ಯಾಚಾರಸ್ಥಾನವಯ್ಯ. ಎನ್ನ ಹಸ್ತವೆ ಗಣಾಚಾರಸ್ಥಾನವಯ್ಯ. ಎನ್ನಚರಣವೇ ಸದಾಚಾರಸ್ಥಾನವಯ್ಯ. ಎನ್ನ ಷಡ್ಭೂತಂಗಳೆ ಷಟ್‌ಸ್ಥಲಸ್ಥಾನಂಗಳಯ್ಯ. ಎನ್ನಸುಜ್ಞಾನವೆ ಶಿವಾನುಭಾವಸ್ಥಾನವಯ್ಯ. ಇಂತೀ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಶಿವಾನುಭಾವವನೊಳಗೊಂಡ ಎನ್ನ ಚಿದಂಗವೇ ಮಹಾಕೈಲಾಸವಯ್ಯ ನಿಮಗೆ ಅಖಂಡೇಶ್ವರಾ.

೬೪

ಒಳಗೆ ಲಿಂಗದ ಕೂಟದಲ್ಲಿ ಮನವೊಡಗೂಡಿರಬೇಕು. ಹೊರಗೆ ಜಂಗಮದ ಮಾಟದಲ್ಲಿ ತನುವಡಗಿರಬೇಕು. ಈ ಉಭಯವ ಒಂದರೊಳಗೊಂದು

ವೇಧಿಸಿಕೊಂಡು, ತನುವಳಿದು ಮಾಡುವ ಭಕ್ತನ ಕೂಡಿಕೊಂಡಿರ್ಪನು ನೋಡಾ ನಮ್ಮ ಅಖಂಡೇಶ್ವರ.

೬೫

ಭಕ್ತಂಗೆ ಉತ್ಪತ್ತಿಯಿಲ್ಲಾಗಿ ಸ್ಥಿತಿಯಿಲ್ಲ. ಸ್ಥಿತಿಯಿಲ್ಲಾಗಿ ಲಯವಿಲ್ಲ. ಮುನ್ನೆಲ್ಲಿಂದ ಬಂದನಲ್ಲಿಗೆ ಹೋಗಿ ನಿತ್ಯನಾಗಿಪ್ಪ ಗೊಹೇಶ್ವರ.

೬೬

ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯಾ. ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ. ನಾನೊಬ್ಬನೆ ಭಕ್ತನು. ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ ಲಿಂಗ ನೀನೆ ಅಯ್ಯಾ ಕೂಡಲಸಂಗಮದೇವಾ!

೨. ವಿವೇಚನೆ

೬೭

ವಿದ್ಯೆಯ ಬಹಳ ಕಲಿತಡೇನು, ಭಕ್ತಿಯಲ್ಲಿ ಶುದ್ಧಿಯಿಲ್ಲದಾತನು? ಬುದ್ಧಿಯಲ್ಲಿ ವಿಶೇಷವೆನಿಸಿದಡೇನು, ಭಕ್ತಿಯಲ್ಲಿ ಬಡವಾದವನು? ಅರ್ಥದಲ್ಲಿ ಅಧಿಕನಾದಡೇನು ಕರ್ತೃಶಿವನ ನೆನೆಯದವನು? ಮದ್ದುಗುಣಿಕೆಯಿಂದ ಮದೋನ್ಮತ್ತರ ಎನ್ನತ್ತ ತೋರದಿರಯ್ಯ ಅಖಂಡೇಶ್ವರಾ.

೬೮

ಕೈಯ ಲಿಂಗ ಕೈಯಲ್ಲಿ. ಮೈಯ ಲಿಂಗ ಮೈಯಲ್ಲಿ. ತಲೆಯ ಲಿಂಗ ತಲೆಯಲ್ಲಿ. ಮತ್ತೆ ಹೊಲಬನರಸಲೇತಕ್ಕೆ? ಹೊಲಬುದಪ್ಪಿ ಬಿದ್ದಿರಿ ಮೂರರ ಬಲೆಯಲ್ಲಿ. ಬಲುಹೇತಕ್ಕೆ? ಸಾಕು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೬೯

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು; ಕಂಗಳಿಚ್ಛೆಗೆ ಪರ ವಧುವ ನೆರೆವರು. ಲಿಂಗಲಾಂಛನಧಾರಿಯಾದಲ್ಲಿ ಫಲವೇನು? ಲಿಂಗಪಥವ ತಪ್ಪಿ ನಡೆವರು. ಜಂಗಮ ಮುಖದಿಂದೆ ನಿಂದೆ ಬಂದರೆ, ಕೊಂಡ ಮಾರಿಂಗೆ ಹೋಹುದು ತಪ್ಪದು ಕೂಡಲಸಂಗಮದೇವಾ!

೭೦

ತಮ್ಮ ಮಲವ ತಾವು ಮುಟ್ಟವು ಆವ ಜಾತಿಯೂ. ತ್ರಿವಿಧ ಮಲಕ್ಕೆ ಹೊರಗಾಗಿ ಮತ್ತೆ ಮಲತ್ರಯಕ್ಕೆ ಬೀಳುವ ಮಲಭಾಂಡದೇಹಿಗೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಒಲವರ ಇಲ್ಲ ಇಲ್ಲಾ ಎಂದೆ.

೭೧

ಆಣವಮಲ ಮಾಯಾಮಲ ಕಾರ್ಮಿಕಮಲದೊಳಗಣ ಆಟ ಕೋಟಲೆ ಅಡಗದೆ, ಕಂಡ ಕಂಡವರೊಳಗಣ ನುಡಿ ನೋಟ ಹಿಂಗದೆ, ಮಾಟ ಕೂಟ ಜಪ ಕೋಟಲೆಯಿಂದ ನಟಿಸಿ, ಲಿಂಗವ ನೋಡಿ ಕೂಡಿಹೆ ನೆಂಬುವರ ಬದುಕೆಂತಾಯಿತೆಂದರೆ, ಮೋಟಗಂಡನ ಮೂಕೊರತೆ ಹೆಂಡತಿ ಬೇಟವ ಮಾಡಿದಂತಾಯಿತ್ತು ಕಾಣಾ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೭೨

ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ ಬಲ್ಲ ನೊಲ್ಲನಯ್ಯಾ ಲಿಂಗವು! ಅವರು ಸತ್‌ಪಥಕ್ಕೆ ಸಲ್ಲರು ಸಲ್ಲರಯ್ಯಾ. ಒಳಹೊರಗೊಂದಾಗದವರಿಗೆ ಅಳಿಯಾಸೆದೋರಿ ಬೀಸಾಡುವನವರ ಜಗ ದೀಶ ಕೂಡಲಸಂಗಮದೇವ!

೭೩

ಬರುಶಠಗನ ಭಕ್ತಿ ದಿಟವೆಂದು ನಚ್ಚಲು ಬೇಡ. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥಾ.

೭೪

ಹೊರಗೆ ಚಿಲುವೆ ಒಳಗೆ ಮೂತ್ರದ ಕುಳಿ, ಹೊರಗೆ ಸ್ವಯಂಪಾಕ ಒಳಗೆ ಅಧರಪಾನ, ಹೊರಗೆ ಭವಿನಿರಸನ ಒಳಗೆ ಭವಿಸಂಗಕೂಟ,— ಇಂತೀ ಗುಣವನೊಪ್ಪ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು.

೭೫

ಹೊನ್ನ ಬಿಟ್ಟೆ ಹೆಣ್ಣ ಬಿಟ್ಟೆ ಮಣ್ಣ ಬಿಟ್ಟೆ ಎಂದು ಜಗದ ಕಣ್ಣ ಕಟ್ಟೆ ಮೆರೆವ ಕಣ್ಣಬೇನೆಯ ಅಣ್ಣಗಳು ನೀವು ಕೇಳಿ ಭೋ. ಮಾತಿನಲ್ಲಿ ಬಿಟ್ಟರೋ, ಮನದಲ್ಲಿ ಬಿಟ್ಟರೋ? ಈ ನೀತಿಯ ಹೇಳಿರಿ ಎನಗೊಮ್ಮೆ. ತನು ಮನದ ಮಧ್ಯದಲ್ಲಿ ಇವರ ನೆನಹು ಕೆಟ್ಟು, ಲಿಂಗದ ನೆನಹಿನ ಆಯುತವೇ ಸ್ವಾಯತವಾಗಿ ಇರಬಲ್ಲರೆ ಇವ ಬಿಟ್ಟರೆಂದೆಂಬೆನಯ್ಯ. ಮಾತಿನಲ್ಲಿ ಬಿಟ್ಟು ಮನದಲ್ಲಿ ಉಳ್ಳರೆ, ಭವದಲ್ಲಿ ತಂದು ಇವ ಕಚ್ಚಿಸಿದಲ್ಲದೆ ಮಾಣವು ಕಾಣಿರಯ್ಯ. ಹಿಡಿದು ಸಂಸಾರಿಗಳಲ್ಲ, ಬಿಟ್ಟು ನಿಸ್ಸಂಸಾರಿಗಳಲ್ಲ. ಎರಡೂ ಅಲ್ಲದ ಎಟುವರನು ಏನೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ!

೭೬

ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು. ಎಡರಡಸಿದ ವಿಪತ್ತು ಕಡೆಯಾಗಲೊಡನೆ, ಮೃಡ, ನಿಮ್ಮನೆಡಹಿಯೂ ಕಾಣರು ರಾಮನಾಥಾ.

೭೭

ಮಕ್ಕಳು ಮರಿಗಳು ಸತ್ತು ನಷ್ಟವಾಗಿ ಕಷ್ಟದುಃಖ ನೆಲೆಗೊಂಡಿತ್ತೆಂದು, ತನ್ನಿಷ್ಟ ಲಿಂಗಪೂಜೆಯನಗಲಿಸಿ ಬಿಟ್ಟೆಯ ಮಾಡಬಹುದೇನಯ್ಯ? ಜಂಗಮವು ಬಂದು ತನ್ನ ವ್ರತನೇಮಕ್ಕೆ ಬೇಡಿದರೆ, ನಿಮ್ಮ ಉಪದ್ರವೇನೆಂದು ಭಕ್ತಿಯ ಮಾಡದಿರಬಹುದೇನಯ್ಯ? ಸಕಲದುಃಖವೆಲ್ಲ ತಮ್ಮಿಂದ ತಾವೇ ಬರಲರಿಯವು. ಭಕ್ತಿಯನ್ನು ಮರೆದು, ಮರವೆಯಲ್ಲಿ ಬೆರೆದು, ಭವಭವದಲ್ಲಿ ಬರುವುದು ಅದೇ ದುಃಖವು ನಿಶ್ಚಯವೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

೭೮

ಅರ್ಥ ಉಂಟೆಂದು ಅಹಂಕರಿಸಿ ಮಾಡುವನ ಭಕ್ತಿ ತೊತ್ತಿನ ಕೂಟದ ತೂರ್ಯ ಮೇಳದಂತೆ. ತನು ಮನ ಧನದಲ್ಲಿ ವಂಚನೆಯುಳ್ಳ ಪ್ರಪಂಚಿಯ

ಮನೆಯ ಕೊಳು ಶುನಕನ ಬಾಯ ಎಲುವ ಪ್ರತಿ ಶುನಕ ತಿಂದಂತೆ ಕಾಣಾ ರಾಮನಾಥಾ.

೭೯

ಕರದಲ್ಲಿ ಲಿಂಗವ ಪಿಡಿದುಕೊಂಡು, ಕಣ್ಣುಮುಚ್ಚಿ ಸರಜಪಮಾಲೆಯ ಬೆರಳಿಂದ ಎಳೆದೆಳೆದು ಎಣಿಸುತ್ತ, ಗುರುಮೂರ್ತಿಯ ಧ್ಯಾನಿಸುತ್ತ ಕಂಡೆ ನೆಂಬುತ್ತ ಇರುವರೆ ಮೂಳರಿರಾ? ನಿಮಗೆಲ್ಲಿಯದೋ ಗುರುಧ್ಯಾನ? ವರ ಪರವಸ್ತುವಿಂಗೆ ಸರಿ ಎನಿಸಿಕೊಂಬ ಗುರುಸ್ವಾಮಿ ನಿಮ್ಮ ನೆರೆಹೊರೆ ಸರಿ ಸಮೀಪ ಗ್ರಾಮದಲ್ಲಿರಲು, ಅವರನು ಲೆಕ್ಕಿಸದೆ ಉದಾಸೀನವ ಮಾಡಿ ಕಂಡು, ನಿನ್ನ ಉಂಬ ಉಡುವ ಸಿರಿ ಸಂಪತ್ತಿನೊಳು ಅವರನು ಸತ್ಕರಿಸದೆ, ಕರದಲ್ಲಿ ನೋಡಿ ಕಂಡಿಹೆನೆಂದು ಸಿರವಂ ಬಿಗಿದು ಕಣ್ಣನೆ ತೆರೆಯದೆ ಸ್ವರ ದಲಾಗ ಪಿಟಿಪಿಟಿ ಎನ್ನುತ್ತ ಅರಿದೆನೆಂಬ ಅರುವಿಂಗೆ ಸಿರದೂಗಿ ಬೆರಗಾಗಿ ನಗುತಿರ್ದ ನಮ್ಮ ಅಂಬಿಗರ ಚೌಡಯ್ಯನು.

೮೦

ಇಷ್ಟಲಿಂಗವ ತೋರಿ ಮೃಷ್ಟಾನ್ನವ ಹೊಡೆವವರಿಗೆ ಇಷ್ಟಾರ್ಥ ಸಿದ್ಧಿಯದೆಲ್ಲಿಯದೋ? ಅದೆಲ್ಲಿಯದೋ ಲಿಂಗ? ಅದೆಲ್ಲಿಯದೋ ಜಂಗಮ? ಅದೆಲ್ಲಿಯದೋ ಪಾದೋದಕ ಪ್ರಸಾದ? ಅಲ್ಲದಾಟವನಾಡಿ ಎಲ್ಲರೂ ಮುಂದುಗೆಟ್ಟರು, ಗೊಹೇಶ್ವರ, ನಿಮ್ಮಾಣೆ.

೮೧

ಹಸಿದು ಬಂದ ಗಂಡನಿಗೆ ಉಣಲಿಕ್ಕದೆ ಬಡವಾದನೆಂದು ಮರುಗುವ ಸತಿಯ ಸ್ನೇಹದಂತೆ—ಬಂದುದನರಿಯಳು, ಇದ್ದುದ ಸವಿಸಳು! ದುಃಖ ವಿಲ್ಲದ ಅಕ್ಕೆ ಹಗರಣಿಗನ ತೆರನಂತೆ ಕೂಡಲಸಂಗಮದೇವಾ!

೮೨

ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ! ಕಂಗಳಲ್ಲೊಬ್ಬನ ಕರೆವಳು, ಮನದಲ್ಲೊಬ್ಬನ ನೆರೆವಳು! ಕೂಡಲಸಂಗಮ ದೇವ ಕೇಳಯ್ಯಾ, ಮಾನಿಸಗಳ್ಳಿಯ ನಂಬದಿರಯ್ಯಾ.

೮೩

ತೊಂಡಿಲ ಮುಡಿದುಕೊಂಡು ತಮ್ಮ ತಮ್ಮ ಗಂಡರ ಹಿಂದುಗೊಂಡು ನಾಡುಮಿಂಡರ ನೋಡುತ್ತಲಿ ಇಂದು ನಮ್ಮ ಹುಲಿ ಹೋಯಿತ್ತು; ಬನ್ನಿರೇ! ಗಂಡರ ಗಂಡನಪ್ಪ ಕೂಡಲಸಂಗ ಕಂಡರೆ ಮೂಗ ಕೊಯ್ವ.

೮೪

ಹಾದರಕ್ಕೆ ಹೋದರೆ ಕಳ್ಳದಮ್ಮವಾಯಿತ್ತು; ಹಾಳುಗೋಡೆಗೆ ಹೋದರೆ ಚೇಳೂರಿತ್ತು. ಅಬ್ಬರವ ಕೇಳಿ ತಳವಾರನುಟ್ಟ ಸೀರೆಯ ಸುಲಿದ; ನಾಚಿ ಹೋದರೆ ಮನೆಯ ಗಂಡ ಬೆನ್ನಬಾರನೆತ್ತಿದ; ಅರಸು ಕೂಡಲಸಂಗಮದೇವ ದಂಡವ ಕೊಂಡ!

೮೫

ನಿಚ್ಚ ಸಾವಿರ ನೋಂಪಿಯ ನೋಂತು, ಒಂದು ದಿನ ಹಾದರವನಾಡಿದರೆ, ಆ ನೋಂಪಿ ತನಗೆ ಫಲಿಸುವದೆ ಅಯ್ಯಾ? ಹಲವು ಕಾಲ ಗುರು ಲಿಂಗ ಜಂಗಮ:ವನರ್ಚಿಸಿ, ಆರಾಧಿಸುತ್ತಾ ಒಮ್ಮೆಯಾದರೂ ದೂಷಣೆಯ ಮಾಡಿದೊಡೆ ಆ ಫಲ ತನುಗೆ ಸಿದ್ಧಿಸುವದೆ? ಸಿದ್ಧಿಸದಾಗಿ, ಅನೇಕ ಆಯಾಸದಲ್ಲಿ ಗಳಿಸಿದ ಧನವ ನಿಮಿಷದಲ್ಲಿ ಅರಸು ದಂಡವ ಕೊಂಡಂತಾಯಿತ್ತು ಇವರ ಭಕ್ತಿ,—ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಬಲವಿಲ್ಲದ ಕಾರಣ.

೮೬

ನಂಬರು, ನೆಚ್ಚರು, ಬರಿದೆ ಕರೆವರು; ನಂಬಲರಿಯರೀ ಲೋಕದ ಮನುಜರು! ನಂಬಿ ಕರೆದೊಡೆ ಓ ಎನ್ನನೆ ಶಿವನು? ನಂಬದೆ ನಚ್ಚದೆ ಬರಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ ನಮ್ಮ ಕೂಡಲಸಂಗಮದೇವ.

೮೭

ಒಲವಿಲ್ಲದ ಭಕ್ತಿ, ಲವಲವಿಕೆ ಇಲ್ಲದ ಪೂಜೆ, ಸಲೆ ನಿಮ್ಮ ನಂಬಿ ನಂಬದವನ ಬಾಳುವೆ, ಹೊಲೆಯರ ನಾಯಿ, ಹುಲು ಸರವಿಯಿಂದ ಕರಕಷ್ಟ ಕಾಣಾ ರಾಮನಾಥಾ!

೮೮

ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ! ಆ ಪೂಜೆಯು, ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ!! ಅಪ್ಪಿದರೆ ಸುಖವಿಲ್ಲ, ಮೆಲಿದರೆ ರುಚಿಯಿಲ್ಲ,-ಕೂಡಲಸಂಗಮದೇವಾ, ನಿಜವಿಲ್ಲದವನ ಭಕ್ತಿ!!

೮೯

ಸತಿ ಸುತ ಮಾತಾ ಪಿತರಂದದಿ ಮೋಹದಲಿ ಮನ ಮಗ್ನವಾದರೆ, ಅವನಿಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ. ಅದೇನು ಕಾರಣವೆಂದರೆ ಆತನ ಧ್ಯಾನ ಸತಿಯ ಮೇಲೆ ಸುತರ ಮೇಲೆ ಮಾತಾಪಿತರ ಮೇಲೆ ಇಪ್ಪುದಲ್ಲದೆ, ಲಿಂಗದ ಮೇಲಿಲ್ಲ.ಅದು ಕಾರಣ ಆತ ಕಟ್ಟಿದುದು ಲಿಂಗವಲ್ಲ, ತೊಟ್ಟದ್ದುದು ವಿಭೂತಿ ರುದ್ರಾಕ್ಷಿಯಲ್ಲ. ಅದು ಕಾರಣ ಆತನಾಚಾರಕ್ಕೆ ದೂರ ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

೯೦

ತನು ಮುಟ್ಟಿ ಮನ ಮುಟ್ಟದೆ ದೂರವಾದರಯ್ಯಾ ಬೆಲೆವೆಣ್ಣಿನಂತೆ! ಸೂಳೆ ತನು ಮುಟ್ಟಿ ಅಪ್ಪುವಳಲ್ಲದೆ ಮನ ಮುಟ್ಟಿ ಅಪ್ಪಳಾಗಿ, ಆಚಾರವರಿಯದ ಅತಿಮರುಳುಗಳು ಸುಖವನೆತ್ತ ಬಲ್ಲರು ಕೂಡಲಸಂಗಮದೇವಾ?

೯೧

ಮನ ಮುಟ್ಟದ ಪೂಜೆ, ಮಣ್ಣಗೋಡೆಯ ತೊಳೆದು ನಿರ್ಮಲವನರಸುವನಂತೆ. ವಸ್ತುವ ಮುಟ್ಟದ ಅರ್ಪಿತ, ಕುಕ್ಕುರ ಅಸ್ಥಿಯ ಕಡಿದು ತನ್ನಯ ಶೋಣಿತಕ್ಕೆ ಚಪ್ಪರಿವಂತೆ. ಇದು ನಿಶ್ಚಯದ ಮುಟ್ಟಲ್ಲ, ಆ ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೯೨

ಹುಟ್ಟದ ಬೀಜವಿದ್ದಡೇನು ಧರೆಯೊಳಗೆ? ಅಟ್ಟುಣಬಾರದ ಮಡಿಕೆ ಇದ್ದಡೇನಯ್ಯ ಮನೆಯೊಳಗೆ? ಶಿವ, ನಿಮ್ಮ ಮುಟ್ಟದ ಮನವಿದ್ದಡೇನಯ್ಯ ತನುವಿನೊಳಗೆ? ಕೆಚ್ಚಲ ಕಚ್ಚಿದ ಉಣ್ಣೆ ಬಲ್ಲುದೇ ಕ್ಷೀರದ ರುಚಿಯನು?

ಬಚ್ಚಲೊಳಗಣ ಬಾಲಹುಳು ಬಲ್ಲುದೇ ನಿಚ್ಚಳದ ನೀರಿನನುಭವವ? ನಿಚ್ಚನಿಚ್ಚಲೋದುವ ಗಿಳಿ ಬಲ್ಲುದೇ ತನಗೆ ಬಹ ಬೆಕ್ಕಿನ ಬಾಧೆಯ? ಪುಚ್ಚಗೊಂಡ ನಾಯಿ ಬಲ್ಲುದೇ ಸಾಕಿದೊಡೆಯನ? ಇದು ಕಾರಣ ಒಡಲ ಪಡೆದರೇನು? ಮಡದಿಯರ ನೆರಹಿದರೇನು? ಒಡವೆಯ ಗಳಿಸಿದರೇನು? ಶಿವನೇ, ನಿಮ್ಮನರಿಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೈಯ ಒಡೆದ ಸೋರೆಯಂತೆ ಕಾಣಾ ಕಲಿದೇವರದೇವಾ.

೯೩

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ. ಇರುಳೆಲ್ಲ ನಡೆದನಾ ಸುಂಕಕ್ಕಂಜಿ. ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು. ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥಾ.

೯೪

ಚೀಳಿಂಗೆ ಬಸುರಾಯಿತ್ತೆ ಕಡೆ; ಬಾಳೆಗೆ ಫಲವಾಯಿತ್ತೆ ಕಡೆ ನೋಡಾ! ರಣರಂಗದಲ್ಲಿ ಕಾದುವ ಓಲೆಯಕಾರಂಗೆ ಓಸರಿಸಿತ್ತೆ ಕಡೆ! ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ ಕೂಡಲಸಂಗಮದೇವಾ!

೯೫

ಹೊಯಿದ ಹರೆಗೆ ಕುಣಿದಾಡುವರೆಲ್ಲ, ಹಾಡಿದ ಗೀತಕ್ಕೆ ತಲೆದೂಗುವರೆಲ್ಲ, ಪಂಜರದೊಳಗಣರಗಿಳಿಯಂತೆ. ಅದು ಆಡುವುದು, ಹಾಡುವುದು. ಸಕಳೇಶ್ವರದೇವರಲ್ಲಿ ಅಭ್ಯಾಸಕ್ಕೆ ಮಜ್ಜನಕ್ಕೆರೆವರೆಲ್ಲ ಭಕ್ತರೆ?

೯೬

ಸತ್ಯವಿಲ್ಲದ ಭಕ್ತಿ ಹತ್ತುಸಾವಿರ ಕಾಲ ಮಾಡಿದಡೇನು? ನಿಷ್ಠೆ ಇಲ್ಲದ ಪೂಜೆಯನೇಸುಕಾಲ ಮಾಡಿದಡೇನು ಭಾವನೆಲೆಗೊಳ್ಳದನ್ನಕ್ಕರ? ನಿಜವಿಲ್ಲದ ಪ್ರಸಾದವನೇಸುಕಾಲ ಕೊಂಡಡೇನು? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ, ಸಮ್ಮತವಲ್ಲ. ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ ಅಜ್ಞಾನಿ

ಗಳಿಗೆ ಭಕ್ತ ಮಹೇಶ್ವರರೆನಲಾಗದಯ್ಯ. ಕೂಡಲಚೆನ್ನಸಂಗಮದೇವಾ, ನೀ ಸಾಕ್ಷಿಯಾಗಿ ಛೀ ಎಂಬೆನು.

೯೭

ದೇವ ಕಂಡಾ, ಭಕ್ತ ಕಂಡಾ, ಮರಳಿ ಮರಳಿ ಶರಣೆಂಬ ಕಂಡ! ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಸಾವನ್ನಕ್ಕರ ಸರಸ ಉಂಟೆ ಗೊಹೇಶ್ವರ?

೯೮

ಅಳಿಯುತ್ತ ಅಳಿಯುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ? ನಡೆಯುತ್ತ ನಡೆಯುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ? ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ? ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೇ? ಕೂಡಲಸಂಗಮದೇವಾ, ಅರಸರಿಯದ ಬಿಟ್ಟಿಯೋ!

೯೯

ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೆ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೆ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೆ? ಕೂಡಲಸಂಗನ ಶರಣರು ಬಂದ ಬರವ ನಿಂದ ನಿಲವ ಅನಂಗಸಂಗಿಗಳೆತ್ತ ಬಲ್ಲರು?

೧೦೦

ಆ ಮಾತು ಈ ಮಾತು ಹೋ ಮಾತೆಲ್ಲವು ನೆರೆದು ಹೋಯಿತ್ತಲ್ಲಾ! ಭಕ್ತಿ ನೀರಲ್ಲಿ ನೆರೆದು ಜಲವ ಕೂಡಿ ಹೋಯಿತ್ತಲ್ಲಾ! ಸಾವನ್ನಕ್ಕರ ಸರಸವುಂಟೆ ಗೊಹೇಶ್ವರ?

೧೦೧

ಮಜ್ಜನಕ್ಕೆರೆವರೆಲ್ಲಾ ಇದ್ದಲ್ಲಿ ಫಲವೇನು? ಮುದ್ರೆಧಾರಿಗಳಪ್ಪರಯ್ಯ! ಲಿಂಗದಲ್ಲಿ ನಿಷ್ಠೆಯಿಲ್ಲ, ಜಂಗಮದಲ್ಲಿ ಪ್ರೇಮಿಗಳಲ್ಲ! ವೇಷಲಾಂಛನಧಾರಿಗಳಪ್ಪರಯ್ಯ! ನೋಡಿ ಮಾಡುವ ಭಕ್ತಿ ಸಜ್ಜನ ಸಾರಾಯವಲ್ಲ. ಗೊಹೇಶ್ವರ ಮೆಚ್ಚನಯ್ಯ.

೧೦೨

ಆಡಿದರೇನೊ, ಹಾಡಿದರೇನೊ, ಓದಿದರೇನೊ,–ತ್ರಿವಿಧ ದಾಸೋಹ ವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? ಭಕ್ತಿಯಿಲ್ಲ ದವರನೊಲ್ಲ ಕೂಡಲಸಂಗಮದೇವ.

೧೦೩

ಲಿಂಗ ಜಂಗಮಕ್ಕೆ ಮಾಡಿದ ಭಕ್ತಿ, ಮನಕ್ಕೆ ಮನವೆ ಸಾಕ್ಷಿಯಾಗಿರ ಬೇಕಲ್ಲದೆ ಇದಿರಿಟ್ಟು ನುಡಿಯಲಾಗದು. ಅದೇನು ಕಾರಣವೆಂದರೆ: ಬಡ ವಂಗೆ ಭಾಗ್ಯ ದೊರೆಕೊಂಡಂತಿರಬೇಕಲ್ಲದೆ ಎನ್ನ ಪದಾರ್ಥವ ನಾನು ಮಾಡಿ ದೆನು ಅವರು ಕೈಕೊಂಡರೆಂದು ತನ್ನ ಖ್ಯಾತಿಭಕ್ತಿಯನು ಮನ ಹಿಗ್ಗಿ ಅನ್ಯ ರೊಡನೆ ಹೇಳಿಕೊಂಡರೆ ಶಿವನೊಪ್ಪಿಕೊಳ್ಳನು; ಪುರಾತನರು ಮೆಚ್ಚರು. ಅಂತಪ್ಪ ಖ್ಯಾತಿ ಭಕ್ತನ ಡಂಭಕದ ಭಕ್ತಿಯೆಂತಾಯಿತ್ತೆಂದರೆ: ಹಾವಸೆಗಲ್ಲ ಮೆಟ್ಟ ಜಾರಿ ಬಿದ್ದು ಕೊಡನೊಡೆದಂತಾಯಿತ್ತು ಕಾಣಾ ಅಖಂಡೇಶ್ವರಾ.

೧೦೪

ಕಳ್ಳಗಂಜಿ ಕಾಡ ಹೊಕ್ಕಡೆ, ಹುಲಿ ತಿಂಬುದ ಮಾಬುದೆ? ಹುಲಿ ಗಂಜಿ ಹುತ್ತವ ಹೊಕ್ಕಡೆ, ಸರ್ಪ ತಿಂಬುದ ಮಾಬುದೆ? ಕಾಲಕ್ಕಂಜಿ ಭಕ್ತ ನಾದಡೆ, ಕರ್ಮ ತಿಂಬುದ ಮಾಬುದೆ? ಇಂತೀ ಮೃತ್ಯುವಿನ ಬಾಯ ತುತ್ತಾದ ವೇಷಡಂಭಕರನೇನೆಂಬೆ ಗೊಹೇಶ್ವರ?

೧೦೫

ಭಕ್ತಿ ಹೋಯಿತ್ತು ಜಂಗಮದಲ್ಲಿ ಸಂದೇಹವ ಮಾಡಲಿಕ್ಕೆ. ಭಕ್ತಿ ಹೋಯಿತ್ತು ಲಿಂಗದ ಅಂಗದ ಸಂಗವನರಿಯದೆ. ಅರ್ಥಿಗಾರಿಕೆಯಲ್ಲಿ ಮಾಡುವ ವ್ಯರ್ಥರ ಭಕ್ತಿ ಇತ್ತಲೆ ಉಳಿಯಿತ್ತು,–ಐಘಟ ದೂರ ರಾಮೇಶ್ವರ ಲಿಂಗವನರಿಯದೆ.

೧೦೬

ಲಿಂಗಪೂಜೆಯ ಮಾಡುತ್ತ, ತನ್ಮಾಂಗ ಸುಖದ ಸಲುವಾಗಿ ಹಂಪೆಯ ಕಂಗಳರ ಹಾಗೆ ಕೂಗುತ್ತ ಕೊರಚುತ್ತ ಅರಚುತ್ತ ಸತಿಸುತರೊಳಗೆ

ಹೊಡೆದಾಡುತಿಪ್ಪರಲ್ಲದೆ, ಆ ಲಿಂಗಕ್ಕೆ ತನಗೆ ಒಡೆಯರಾಗಿದ್ದ ಜಂಗಮ ಬಂದರೆ, ಎತ್ತಲೆಂದರಿಯರು. ಇಂತಪ್ಪ ಕತ್ತಲೆಯ ಮನುಜರು ಲಿಂಗವ ಕಟ್ಟಿದರೇನು? ಜಂಗಮಕಿಕ್ಕಿದರೇನು? ಗುರುವಿಂಗೆ ಶರಣೆಂದರೇನು? ತಮ್ಮ ಮರಣಬಾಧೆಯ ಗೆಲುವನಕ, ಹುರುಳಿಲ್ಲ ಹುರುಳಿಲ್ಲ! ಮಾಡಿದ ಭಕ್ತಿ ಅತ್ತಿಯ ಹಣ್ಣು ಬಿಚ್ಚಿದಂತೆ. ಅವರು ಹೊತ್ತಿಪ್ಪ ವೇಷ ದೊಡ್ಡದು. ಎಮ್ಮ ಸಮಯ ಸಾನದನರಿದು, ನಿಮ್ಮಲ್ಲಿ ನಿರ್ಮುಕ್ತನಾದ ಬಳಿಕ ಈ ಜಗವೇನಾದರೇನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣ?

೧೦೭

ಈರೇಳು ಭುವನವನೊಳಕೊಂಡ ಮಹಾಘನಲಿಂಗವು ಶಿವಭಕ್ತನ ಕರಸ್ಥಲದಾಯತಕ್ಕೆ ಬಂದು ಪೂಜೆಗೊಂಬ ಪರಿಯ ನೋಡಾ. ಅಪ್ರಮಾಣ ಅಗೋಚರವಾದ ಲಿಂಗದಲ್ಲಿ ಸಂಗವ ಬಲ್ಲಾತನೆ ಸದಾಚಾರ ಸದ್ಭಕ್ತನು. ಹೀಗಲ್ಲದೆ ಹಣದಾಸೆಗೆ ಹಂಗಿಗನಾಗಿ, ಜಿಹ್ವಾಲಂಪಟಕ್ಕೆ ಅನಾಚಾರದಲ್ಲಿ ಉದರವ ಹೊರೆದು ಬದುಕುವಂತಹ ಭಂಡರು ಭಕ್ತರಾದವರುಂಟೆ ಹೇಳಯ್ಯ? ಅಂತಹ ಅನಾಚಾರಿ ಶಿವದ್ರೋಹಿಗಳ ಮುಖವ ನೋಡಲಾಗದು. ಅದೆಂತೆಂದೊಡೆ: ಕತ್ತೆ ಭಕ್ತನಾದಡೆ ಹಡಿಕೆಗೆ ಹರಿವುದ ಮಾಣ್ಬುದೆ? ಶುನಕಂಗೆ ಪಂಚಾಮೃತವ ನೀಡಲು ಅಡಗ ತಿಂಬುದ ಮಾಣ್ಬುದೆ? ಇಂತೀ ಅಂಗದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ ಮರಳಿ ತನ್ನ ಜಾತಿಯವರ ಕೂಡಿದರೆ, ಆ ಕತ್ತೆ ಹಂದಿ ಬೆಕ್ಕು ಶುನಕಗಳಿಂದತ್ತತ್ತ ಕಾಣಿರೋ. ಚಿನ್ನಬೆಟ್ಟವನೇರಿ ಕಣ್ಣುಗಾಣದಲ್ಪನಂತೆ, ಗಣಿಯನೇರಿದ ಡೊಂಬ ಮೈಮರೆದಿಪ್ಪಂತೆ, ಅಂಕವನೇರಿದ ಬಂಟ ಕೈಮರೆದಿಪ್ಪಂತೆ, ಇಂತಿವರು ಮಾಡುವ ಭಕ್ತಿ ಎಲ್ಲವು ನೀರೊಳು ಹೋಗುವ ಹರಿಗೋಲು ಹೊಡೆಗೆಡೆದಂತಾಯಿತ್ತು ಎಂದಾತ ಅಂಬಿಗರ ಚೌಡಯ್ಯ.

೧೦೮

ಆಚಾರವರಿಯದೆ, ವಿಭವವಳಿಯದೆ, ಕೋಪವಡಗದೆ, ತಾಪ ಮುರಿಯದೆ, ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ ನಾನು ಮರುಗುವೆನು ಕಾಣಾ ಗೊಹೇಶ್ವರಾ.

೧೧೯

ತಂದೆಯ ಸದಾಚಾರ ಮಕ್ಕಳದೆಂಬರು. ಗುರುಮಾರ್ಗಾಚಾರ ಶಿಷ್ಯನದೆಂಬರು. ಮೇಲುಪಂಕ್ತಿಯ ಕಾಣರು ನೋಡಾ! ತತ್ವದ ಮೇಲುಪಂಕ್ತಿಯತ್ತಲೆ ಉಳಿಯಿತ್ತು. ಕತ್ತಲೆಯ ಮರೆಯಲ್ಲಿ ಕಾಣರು ನೋಡಾ ತತ್ವದ ಹಾದಿಯನು. ಭಕ್ತಿಯ ಭೇದವನು ಇವರೆತ್ತ ಬಲ್ಲರು ಗುಹೇಶ್ವರ?

೧೧೦

ಅಯ್ಯಾ, ನಾವು ಗುರುಲಿಂಗಜಂಗಮದ ಪಾದೋದಕ ಪ್ರಸಾದ ಸಂಬಂಧಿಗಳೆಂದು ನುಡಿದುಕೊಂಬ ಪಾತಕರ ಮುಖವ ನೋಡಲಾಗದು. ಅದೇಕೆಂದಡೆ, ಪಾದೋದಕವ ಕೊಂಡ ಬಳಿಕ ಜನನದ ಬೇರ ಕಿತ್ತೊರಸಬೇಕು. ಪ್ರಸಾದವ ಕೊಂಡ ಬಳಿಕ ಪ್ರಳಯುವ ಗೆಲಿಯಬೇಕು. ಇಂತಪ್ಪ ಚಿದ್ರಸ ಪಾದೋದಕ ಚಿತ್‌ಪ್ರಕಾಶ ಪ್ರಸಾದ ತನ್ನ ಚಿನ್ಮನ ಸ್ವರೂಪವಾದ ಹೃದಯಮಂದಿರ ಮಧ್ಯದಲ್ಲಿ ನೆಲೆಸಿರುವ ಸಕೀಲ ಸಂಬಂಧವ ಚಿದ್ಘನ ಗುರುವಿನ ಮುಖದಿಂದ ಸಂಬಂಧಿಸಿಕೊಳಲರಿಯದೆ, ಅರ್ಥದಾಸೆಗಾಗಿ ಬಡ್ಡಿಯ ತೆಗೆದುಕೊಂಡು ಬಡವರ ಬಂಧನಕಿಕ್ಕಿ, ತುಡುಗುವ್ಯಾಪಾರವ ಮಾಡಿ, ಸದಾಚಾರದಿಂದ ಆಚರಿಸಲರಿಯದೆ, ತನುಮನಧನದಲ್ಲಿ ವಂಚನೆಯಿಲ್ಲದ ಭಕ್ತಿಯನರಿಯದೆ, ತೀರ್ಥ ಪ್ರಸಾದದಲ್ಲಿ ನಂಬುಗೆ ವಿಶ್ವಾಸವಿಲ್ಲದೆ, ಕಂಡವರ ಕಂಡು ಕೈಯೊಡ್ಡಿ ಇಕ್ಕಿಸಿಕೊಂಡು ವಿಶ್ವಾಸವಿಲ್ಲದವರಿಗೆ ಅಷ್ಟಾವರಣ ಎಂತು ಸಿದ್ಧಿಯಹುದೋ? ಅದೇನು ಕಾರಣವೆಂದಡೆ: ಸಕಲ ವೇದಾಗಮ ಪುರಾಣ ಸಪ್ತಕೋಟಿಮಹಾಮಂತ್ರ, ಉಪಮಂತ್ರ ಕೋಟ್ಯಾನುಕೋಟಿಗೆ ಮಾತೃಸ್ಥಾನವಾದ ಪಂಚಾಕ್ಷರಿಯ ಮಂತ್ರ ಸಟೆಯಾಯಿತ್ತು. ಅನಂತಕೋಟಿ ಬ್ರಹ್ಮಾಂಡಂಗಳನೊಳಗೊಂಡಂಥ ಗುರು ಕೊಟ್ಟ ಇಷ್ಟಲಿಂಗ ಸಟೆಯಾಯಿತ್ತು. ದೇಗುಲದೊಳಗಣ ಕಲ್ಲು ಕಂಚು ಕಟ್ಟಿಗೆ ಬೆಳ್ಳಿ ತಾಮ್ರ ಬಂಗಾರದ ದೇವರ ಪೂಜಿಸುವ ಪೂಜಾರಿಗಳ ಮಾತು ದಿಟವಾಯಿತ್ತು. ಆದಿ ಅನಾದಿಯಿಂದತ್ತತ್ತಲಾಗಿ ಮೀರಿ ತೋರುವ ಮಾಯಾಕೋಳಾಹಳ ನಿರಂಜನಜಂಗಮದ ಪಾದೋದಕ ಪ್ರಸಾದ ಸಟೆಯಾಯಿತ್ತು. ಕ್ಷೇತ್ರಾದಿಗಳ ತೀರ್ಥ ಪ್ರಸಾದ ದಿಟವಾಯಿತ್ತು. ಅಂತಪ್ಪ

ಅಗಮ್ಯ ಅಗೋಚರವಾದ ಅಷ್ಟಾವರಣ ಇಂತವರಿಗೆ ಎಂತು ಸಾಧ್ಯ ವಹುದು? ಆಗದೆಂದಾತ ನಮ್ಮ ಶರಣರ ಕಲಿದೇವರದೇವ.

೧೧೧

ತಾಯ ಗರ್ಭದಲ್ಲಿ ಶಿಶು ತಾಯ ಕುರುಹನರಿಯದು. ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು. ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು. ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ ರಾಮನಾಥಾ.

೧೧೨

ಶಿವಾಚಾರವೆಂಬುದೊಂದು ಬಾಳ ಬಾಯ ಧಾರೆ. ಲಿಂಗ ಮೆಚ್ಚ ಬೇಕು, ಜಂಗಮ ಮೆಚ್ಚಬೇಕು, ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತ ವಾಗಿರಬೇಕು! ಬಿಚ್ಚಿ ಬೇರಾದರೆ ಮೆಚ್ಚುವನೆ ನಮ್ಮ ಕೂಡಲಸಂಗಮದೇವ?

೧೧೩

ಅಯ್ಯಾ ಸದಾಚಾರವೆಂದಡೆ ಚಿದ್ಘನ ಮಹಾಲಿಂಗಧ್ಯಾನ, ಪರದ್ರವ್ಯ ನಿರಸನ. ಇಂತಿದು ಸತ್ಯವೆಂದು ತಿಳಿದು ಭಿನ್ನವಿಲ್ಲದೆ ಆಚರಿಸುವದೇ ಆಚಾರ ವಲ್ಲದೆ ಶುದ್ಧಶೈವರ ಹಾಗೆ ನಂದಿ ವೀರಭದ್ರ ದುರ್ಗೆ ಪಾವುಗೆ ಕಂಥೆ ಕಮಂಡಲು ಮತ್ತೆ ಲಿಂಗಂಗಳೆಂದು ಇದಿರಿಟ್ಟು ಪೂಜಿಸುವನ ಮನೆಯ ಪಾಕ ಅಮೇಧ್ಯ, ಮಾಂಸ ಕಾಣಾ ಕಲಿದೇವರದೇವಾ.

೧೧೪

ದೇವಂಗಾಗಲಿ ಭಕ್ತಂಗಾಗಲಿ ಲಿಂಗಕ್ಕಾಗಲಿ ಜಂಗಮಕ್ಕಾಗಲಿ ಸದಾಚಾರ ಬೇಕಲ್ಲದೆ, ಆ ಸದಾಚಾರವುಳ್ಳವರಿಗೆ ಅನಾಚಾರ ಹೊದ್ದಲಾ ಗದು. ಅನಾಚಾರವೆಂದೊಡೆ ಅನಾಯತ, ಅನಾಯತವೆಂದೊಡೆ ಅನುಸರಣೆ, ಅನುಸರಣೆ ಎಂಬುದೆ ಅಂಗದಿಚ್ಛೆ, ಅಂಗದಿಚ್ಛೆ ಎಂಬುದೆ ಅನಾಚಾರ, ಅನಾ ಚಾರವೆಂಬುದೆ ಪಂಚಮಹಾಪಾತಕ. ಇದು ಕಾರಣವಾಗಿ, ಕೂಡಲಚೆನ್ನ ಸಂಗಯ್ಯನಲ್ಲಿ ಆಚಾರವಂತರೆನಿಸಿಕೊಂಡ ಬಳಿಕ, ಅನಾಚಾರಕ್ಕೆ ಅನುಸರ ಣೆಯ ಮಾಡಿದರೆ, ಆಚಾರಭ್ರಷ್ಟರಿಗೆ ಅನುಸರಿಸಿ ನಡೆದೊಡೆ, ಅಘೋರ ನರಕ ತಪ್ಪದು ನೋಡಿರೆ.

೩. ಭಕ್ತ-ಭವಿ

೧೧೫

ಉಂಬಲ್ಲಿ ಉಡುವಲ್ಲಿ ಕ್ರಿಯೆಯಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಇವರಿಗೆ ನಾನೇನೆಂಬೆನಯ್ಯಾ? ಒಚ್ಚೊಚ್ಚಿ ಭಕ್ತರು, ಒಚ್ಚೊಚ್ಚಿ ಭವಿಗಳು. ಇದು ಕಾರಣವಾಗಿ ಕೂಡಲಚೆನ್ನಸಂಗಯ್ಯ, ಇವರಿಗೆ ಭಕ್ತಕಾಯ ಮಮಕಾಯವೆಂದೆನ್ನಬಹುದೆ?

೧೧೬

ಅಂಗದ ಮೇಲಣ ಲಿಂಗ ಹಿಂಗಿದಾತ ಭವಿ ಎಂಬರು. ಅಂಗದ ಮೇಲಣ ಲಿಂಗ ಹಿಂಗದಾತ ಭಕ್ತನೆಂಬರು. ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲಬನಾರೂ ಅರಿಯರು. ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೆ? ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲರೆ ಹಿಂಗುವುದು ಭವಮಾಲೆ ಸೌರಾಷ್ಟ್ರಸೋಮೇಶ್ವರಾ.

೧೧೭

ಭವಿಯ ಕಳೆದೆವೆಂಬ ಅಪ್ರಮಾಣಿಗಳು ನೀವು ಕೇಳಿರೇ, ಭವಿಯ ಕಳೆದೆವೆಂಬ ಭವಭಾರಿಗಳು ನೀವು ಕೇಳಿರೇ. ಭವಿಗೆ ಕೊಡಲಾಗದೆಂಬ ಭಕ್ತನ ಮಾತ ಕೇಳಲಾಗದು. ನಾನು ಭವಿವಿಡಿದು ಭಕ್ತಿಯಿಂದ ಸುಖಿಯಾದೆ ಗೊಹೇಶ್ವರಾ.

೧೧೮

ತನ್ನನರಿದವಂಗೆ ಇದಿರೆಂಬುದಿಲ್ಲ. ತನ್ನನರಿಯದವಂಗೆ ಇದಿರೆಂಬುದುಂಟು. ಅರಿವು ಮರವು ಕುರುಹಳಿಯಿತ್ತು. ಬೆರಗಾಯಿತ್ತು ಬೆರಗು; ಬೆರಗಿನೊಳಗೆ ಕರಿಗೊಂಡಿತ್ತಿದೇನೋ?–ಇಂತು ಭ್ರಾಂತು ಭ್ರಾಂತನೆನುಂಗಿ, ಗೊಹೇಶ್ವರ ಭವಿಯ ಬೆಂಬತ್ತಿ ಭವಿಯಾದ ಕಾರಣ.

೧೧೯

ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೇ. ಭವಿಯಲ್ಲವೇ ನಿಮ್ಮ ತನುಗುಣಾದಿಗಳು? ಭವಿಯಲ್ಲವೇ ನಿಮ್ಮ ಮನ ಗುಣಾದಿಗಳು? ಭವಿಯಲ್ಲವೇ ನಿಮ್ಮ ಪ್ರಾಣಗುಣಾದಿಗಳು? ಇವರೆಲ್ಲರು ಭವಿಗಳ ಹಿಡಿದು ಭವಭಾರಿಗಳಾದರು. ನಾನು ಭವಿಯ ಪೂಜಿಸಿ ಭವಂ ನಾಸ್ತಿಯಾದೆನು ಗೊಹೇಶ್ವರ.

೧೨೦

ಭಕ್ತನೊಂದು ಕುಲ, ಭವಿಯೊಂದು ಕುಲವೆಂಬರು. ಭಕ್ತನೆಂತಿಪ್ಪ, ಭವಿಯೆಂತಿಪ್ಪನೆಂದರೆ, ಆರು ಅರಿಯರು. ಇದು ಬಲ್ಲವರು ತಿಳಿದು ನೋಡಿ. ಭಕ್ತನೆಂದರೆ ಅಂಗ, ಭವಿ ಎಂದರೆ ಲಿಂಗ. ಈ ಎರಡರ ಸಕೀಲ ಸಂಬಂಧವ ನರಿದರೆ, ಆತನೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೨೧

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ? ಬಯಲು ಬತ್ತಲೆ ಯಿದ್ದರೆ ಏನನುಡಿಸುವರಯ್ಯ? ಭಕ್ತನು ಭವಿಯಾದಡೆ ಏನನುಪಮಿಸು ವೆನಯ್ಯ ಗೊಹೇಶ್ವರಾ?

೧೩

ಏಕನಿಷ್ಠೆ- ಮಾಹೇಶ್ವರ

೧. ಅಚಲಭಕ್ತಿ

೧

ಒಂದು ಮಾತಿನ್ನಬಹುದೆ ಶಬ್ದಸಾರಾಯವನು? ಒಂದು ಮಾತಿನ್ನಬಹುದೆ ಶರಣಸಂಬಂಧವನು? ಕೂಡಲಸಂಗಮದೇವ ನಂಬಿಗೆ 'ಓ' ಎಂದುದನೊಂದು ಮಾತಿನ್ನಬಹುದೆ?

೨

ವಿಶ್ವಾಸ ನೋಟ ಜಾರಿದಡೆ ಜಾರುವನಯ್ಯಾ ಶ್ರೀಗುರುವು. ವಿಶ್ವಾಸ ನೋಟ ಜಾರಿದಡೆ ಜಾರುವನಯ್ಯಾ ಶಿವಲಿಂಗವು. ವಿಶ್ವಾಸ ನೋಟ ಜಾರಿದಡೆ ಜಾರುವನಯ್ಯಾ ಪರಮಜಂಗಮವು. ವಿಶ್ವಾಸ ನೋಟ ಜಾರಿದಡೆ ಜಾರುವವಯ್ಯಾ ಪಾದೋದಕ ಪ್ರಸಾದಂಗಳು. ಇಂತೀ ಪಂಚ ವಿಧವು ಪರಬ್ರಹ್ಮವೆಂದು ನಂಬಿದ ಭಕ್ತರ ಹೃದಯದಲ್ಲಿ ಹೆರಹಿಂಗದೆ ನಿರಂತರ ನೆಲಸಿರ್ಪನು ನಮ್ಮ ಅಖಂಡೇಶ್ವರನು.

೩

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲಾ! ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ! ಕೂಡಲಸಂಗಮದೇವಯ್ಯಾ, ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣನೆ ಸಾಕ್ಷಿ!

೪

ಶಿವ ಶಿವ ಎಂಬ ವಚನವ ಬಿಡದಿರು. ಮಡದಿಯರೊಲುಮೆಯ ಮೆಚ್ಚದಿರು. ದರ್ಪಣದೊಪ್ಪವ ತಪ್ಪದಿರು. ವಾಯುವ ಕಡೆಕಡೆಗೆ ತಿದ್ದದಿರು. ಹಿಡಿದರೆ ದೃಢವಾಗಿ ಹಿಡಿಯಿರೆಲವೋ! ಗೊಹೇಶ್ವರ ಸಿಲುಕಿದಲ್ಲ ಮಂಗೆ.

೫

ನಿಷ್ಠೆಯೆಂಬುವದು ತನುವಿನ ಪ್ರಕೃತಿಯ ಕೆಡಿಸುವುದು. ನಿಷ್ಠೆಯೆಂಬುವದು ಮನದ ಮಾಯುವನಳಿವುದು. ನಿಷ್ಠೆಯೆಂಬುವದು ಜ್ಞಾನದ ಬಟ್ಟೆಯ ತೋರುವುದು. ನಿಷ್ಠೆಯೆಂಬುವದು ಅಖಂಡೇಶ್ವರಲಿಂಗವನೊಲಿಸುವುದು.

೬

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು? ಅದು ಪಟ್ಟಣವೆಂದೆನ್ನಿಸುವದು. ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಕಾಣಾ ರಾಮನಾಥಾ.

೭

ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದು ಕುದುರೆಯ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ ನೆರೆ ಮೂರುಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ. ಗೊಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ?

೮

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ. ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ. ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೆ ಎಂಬ. ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ. ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ.

೯

ಛಲವಿರಬೇಕು ಶಿವಭಕ್ತಿಯ ಮಾಡುವಲ್ಲಿ, ಹಿಡಿದು ಬಿಡೆನೆಂಬ. ಛಲವಿರಬೇಕು ನಿತ್ಯನೇಮದಲ್ಲಿ, ಹಿಡಿದು ಬಿಡೆನೆಂಬ. ಛಲವಿರಬೇಕು ಶೀಲವ್ರತದಲ್ಲಿ, ಹಿಡಿದು ಬಿಡೆನೆಂಬ. ಛಲವಿರಬೇಕು ನಮ್ಮ ಅಖಂಡೇಶ್ವರಲಿಂಗವ ಕೂಡಿ, ಎಂದೆಂದೂ ಅಗಲಬಾರದೆಂಬ ನೈಷ್ಠೆಯಲ್ಲಿ.

೧೦

ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೀಸರ ಹೋಗದೆ, ಹಿಡಿದ ಭಕ್ತಿಯ ಕಡೆತನಕ ಬಿಡದೆ, ಬಡತನ ಎಡರು ಕಂಟಕ ಬಂದಲ್ಲಿ ಚಿಂತೆಯಿಂದ ಕಾಂತಿಗುಂದದೆ, ಅಡಿಗಡಿಗೆ ಶಿವನೆಂಬ ನುಡಿಯ ಮರೆಯದೆ ಇರ್ಪ ಸದ್ಭಕ್ತಂಗೆ ಬೇಡಿದ ಪದವ ಕೊಡುವ ನಮ್ಮ ಅಖಂಡೇಶ್ವರ.

೧೧

ಹುಸಿ ಕಳವು ಪರದಾರ ಪರಹಿಂಸೆಯ ಬಿಟ್ಟು, ಲೋಕದ ನಚ್ಚು ಮಚ್ಚು ಸುಟ್ಟು, ಸಚ್ಚಿದಾನಂದ ಲಿಂಗದಲ್ಲಿ ಮನವು ಬೆಚ್ಚಂತಿರ್ಪ ಅಚ್ಚ ಮಹೇಶ್ವರರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೧೨

ಲಿಂಗಾಂಗಿಗಳೆಂದು ನುಡಿವ ಅಪ್ಪಗಳಿರಾ, ಲಿಂಗಾಂಗಿಗಳೆಂತಾದಿರಿ ಹೇಳಿರಣ್ಣಾ. ಅರಿಯದಿರ್ದರೆ ಕೇಳಿರಣ್ಣಾ, ಲಿಂಗಾಂಗದ ಭೇದವ. ಪರದೈವವ ನೆನೆಯದೆ, ಪರಸ್ತ್ರೀಯರ ಮುಟ್ಟದೆ, ಪರದ್ರವ್ಯವನಪಹರಿಸದೆ, ಪರನಿಂದೆಯನಾಡದೆ, ಪರಹಿಂಸೆಗೊಡಂಬಡದೆ, ಪರವಾದವ ಕಲ್ಪಿಸದೆ, ಸತ್ಯಶುದ್ಧ ಕಾಯಕವ ಮಾಡಿ, ನಿರ್ವಂಚಕತ್ವದಿಂದ ಸಮರ್ಪಿಸಿ, ಅತಿ ಭೃತ್ಯನಾಗಿ ಆಚರಿಸುವರೇ ಲಿಂಗಾಂಗಿಗಳು ನೋಡಾ ಕಲಿದೇವರದೇವಾ.

೧೩

ಮಂಡಲ ಸುತ್ತಿದ ಹಾವಿನಂತೆ, ಮಡಿಲಲ್ಲಿ ಕಟ್ಟಿದ್ದರೇನು? ಕೊರಳ ಸುತ್ತಿದ ಹಾವಿನಂತೆ, ಕೊರಳಲ್ಲಿ ಸುತ್ತಿದ್ದರೇನು? ಹುಸಿ ಕಳವು ಪರದಾರ ಅನ್ಯದೈವಭಜನೆ ಭವಿ-ಬಳಕೆ ಬಿಡದನ್ನಕ್ಕರ ಲಿಂಗಭಕ್ತನೆನಿಸಬಾರದು, ಭಕ್ತ ಲಿಂಗವೆನಲಿಲ್ಲ. ಆಚಾರಸಹಿತ ಭಕ್ತ, ಅನಾಚಾರಸಹಿತ ನರರು. ಇಂತೆನಲಾಗಿ ಆಚಾರಭ್ರಷ್ಟರಾದ ಅನಾಮಿಕರ ನಮ್ಮ ಕೂಡಲಚೆನ್ನಸಂಗಮಯ್ಯ ಬಲ್ಲನಾಗಿ ಒಲ್ಲನು.

೧೪

ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು, ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ. ಕೊಟ್ಟೊಡೆ ಮುಟ್ಟದ ಭಾಷೆ. ಪರಧನ ಪರಸತಿಗೆ ಅಳುಪದ ಭಾಷೆ. ಇಂತಿದಕ್ಕಳುಪಿದೆನಾದೊಡೆ ಸೌರಾಷ್ಟ್ರ ಸೋಮೇಶ್ವರಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.

೧೫

ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ. ಆಸೆಮಾಡ ನೋಡಾ, ಅನ್ಯದೈವಂಗಳಿಗೆ. ದೇಶದ ಪಿಶಾಚಿಗಳಿಗೆ ಆಸೆಮಾಡ ನೋಡಾ. ಆಸೆ

ಮಾಡಿದನಾದಡೆ ಆವ ದಾಸನ ಕುಲವಲ್ಲ, ಆವನನ್ಯಕುಲ ಕಾಣಾ ರಾಮನಾಥಾ.

೧೬

ಮಾಡುವ ಭಕ್ತಂಗೆ, ಕೊಡುವ ದೇವಂಗೆ ಎಂದೆಂದಿಗೂ ಕೇಡಿಲ್ಲ. ಮಾಡಿರೋ ಮಾಡಿರೋ. ಎನಗೆ ಆಯಿತ್ತು ಹೋಯಿತ್ತೆಂಬ ಚಿಂತೆ, ಇದೆ ಎಂಬ ಸಂತೋಷ ಬೇಡ,-ಸಕಳೇಶ್ವರದೇವರವರನರಿದು ಸಲುಹುವನಾಗಿ.

೧೭

ಇಂದಿಗೆಂತು ನಾಳಿಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೆ ರಾಮನಾಥಾ?

೧೮

ಇಂದು ನಾಳೆ ಎಂಬ ಸಂದೇಹವ ಬಿಟ್ಟು, ನಿಂದ ನಿಜಾನಂದದಿಂದ ನೋಡಿ, ಹಿಂದುಮುಂದು ಕುಂದುಹೆಚ್ಚು ದಂದುಗಥಾವತಿಯು ಕೊಂದು ನಿಂದರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೯

ಸಜ್ಜನಸದ್ಭಾವಿ ಅನ್ಯರ ಕೈಯಾಂತು ಬೇಡ. ಲಿಂಗವ ಮುಟ್ಟಿದ ಕೈ ಮೀಸಲು. ಕಂಗಳಲ್ಲಿ ಒಸೆದು ನೋಡ ಪರವಧುವ. ಮನದಲ್ಲಿ ನೆನೆಯ ಪರ ಹಿಂಸೆಯ. ಮಾನವರ ಸೇವೆಯ ಮಾಡ. ಲಿಂಗವ ಪೂಜಿಸಿ ಲಿಂಗವ ಬೇಡ. ಆ ಲಿಂಗದ ಹಂಗನೊಲ್ಲ, ಕೂಡಲಚೆನ್ನಸಂಗಮನೆ, ನಿಮ್ಮೊಳು ಸಮರ ಸೈಕ್ಯವನರಿದ ನಿಜಶರಣನು.

೨೦

ತನುವಿನ ಕೊರತೆಗೆ ಸುಳಿಸುಳಿದು, ಮನದ ಕೊರತೆಗೆ ನೆನೆನೆನೆದು, ಭಾವದ ಕೊರತೆಗೆ ತಿಳಿತಿಳಿದು, ಶಬ್ದದ ಕೊರತೆಗೆ ಉಲಿಉಲಿದು,-ಗೊಹೇಶ್ವರನೆಂಬ ಲಿಂಗ ಮನದಲ್ಲಿ ನೆಲೆಗೊಳ್ಳದಾಗಿ.

೨೧

ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು, ಓರೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲ ಸಂಗಮದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯಾ?

೨೨

ಆಯುಷ್ಯ ತೀರಿದಲ್ಲದೆ ಮರಣವಿಲ್ಲ, ಭಾಷೆ ತಪ್ಪಿದಲ್ಲದೆ ದಾರಿದ್ರ್ಯ ವಿಲ್ಲ. ಅಂಜಲದೇಕೋ ಲೋಕ ವಿಗುರ್ಬಣೆಗೆ? ಅಂಜಲದೇಕೋ ಕೂಡಲ ಸಂಗಮದೇವಾ, ನಿಮ್ಮಾಳಾಗಿ?

೨೩

ನಾಳೆ ಬಪ್ಪುದು ನಮಗಿಂದೆ ಬರಲಿ; ಇಂದು ಬಪ್ಪುದು ನಮಗೀಗಲೆ ಬರಲಿ. ಇದಕಾರಂಜುವರು? ಇದಕಾರಳುಕುವರು? "ಜಾತಸ್ಯ ಮರಣಂ ಧ್ರುವಂ" ಎಂದುದಾಗಿ, ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವರೆ ಹರಿಬ್ರಹ್ಮಾದಿಗಳಿಗಳವಲ್ಲಾ!

೨೪

ಆರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ; ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ! ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ, –ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

೨೫

ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ. ಲೋಕವಿರೋಧಿ ಶರಣನಾರಿಗಂಜುವನಲ್ಲ,-ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.

೨೬

ಜಗವೆಲ್ಲ ಮುನಿದಡಂಜೆ. ಆಧಿವ್ಯಾಧಿಗಳು ಬಂದು ತನುವನಂಡಲೆದಡಂಜೆ. ರಾಜಭಯ ಚೋರಭಯ ಮೃಗಭಯ ಗ್ರಹಭಯಂಗಳು ಬಂದು ನಾಲ್ದೆಸೆಯಲ್ಲಿ ಮುಸುಕಿದಡಂಜೆ. ಮತ್ತೊಂದಕ್ಕಂಜಿ ಅಳುಕುವೆನಯ್ಯ,–

ಪರರೊಡವೆ ಪರಸ್ತ್ರೀ ಪರಧನವ ಮುಟ್ಟಲಮ್ಮದೆ, ಅಖಂಡೇಶ್ವರಾ, ನೀ ಸಾಕ್ಷಿಯಾಗಿ.

೨೭

ಸಬಳದ ತುದಿಯಲ್ಲಿ ಬಿರಿದ ಕಟ್ಟಿದ ಮತ್ತೆ, ಅದರ ತಲೆವಿಡಿಯುತೊಡಗಿದರೆ–ನಾನಲ್ಲ, ಸಬಳಕ್ಕೆ ಬಿರಿದೆಂಬವನಂತೆ. ಹಾಂಗೆಂದ ಮತ್ತೆ ತೊಡಗುವ ನೆಗ್ಗ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು.

೨೮

ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು, ಖಂಡೆಯವ ಪಿಡಿದು ತಂಡತಂಡದ ಜನರ ಮುಂದೆ ಮೆರೆದುಕೊಂಡು ಬಂದು, ಕಿಚ್ಚಿನ ಹೊಂಡವ ಕಂಡು ಹೆದರಿ ಹಿಮ್ಮೆಟ್ಟಿದಡೆ, ಅವಳಿಗಡೇ ಭಂಗವಲ್ಲದೆ ಶೃಂಗಾರ ಮೆರೆವುದೇ ಅಯ್ಯ? ಪತಿ ಲಿಂಗ; ಸತಿ ಶರಣ–ತನ್ನ ಪತಿವ್ರತಾಭಾಷೆಯ ನುಡಿದು ನಡೆಯಲ್ಲಿ ತಪ್ಪಿದಡೆ, ಅವನ ಭಂಗಕ್ಕೆ ತುದಿ ಮೊದಲಿಲ್ಲ ನೋಡಾ ಅಖಂಡೇಶ್ವರಾ.

೨೯

ಮೂರ ಬಿಟ್ಟವಂಗಲ್ಲದೆ ಸತ್ಯ ಸಾಗಿಸಬಾರದು. ಆರ ಬಿಟ್ಟವಂಗಲ್ಲದೆ ಆಧರಿಸಬಾರದು. ಎಂಟ ಬಿಟ್ಟವಂಗಲ್ಲದೆ ಸಾಕಾರದ ಕಂಟಕವನರಿಯಬಾರದು. ರಣದಲ್ಲಿ ಓಡಿ ಮನೆಯಲ್ಲಿ ಬಂಟನಾಡುವಂತೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು.

೩೦

ಒಡಲುಗೊಂಡವ ಹಸಿವ. ಒಡಲುಗೊಂಡವ ಹುಸಿವ. ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ. ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ!

೩೧

ಹಸಿವಾದೊಡೆ ಭಿಕ್ಷಾನ್ನಗಳುಂಟು. ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು. ಚೆನ್ನಮಲ್ಲಿಕಾರ್ಜುನಯ್ಯ, ಆತ್ಮಸಂಗಾತಕ್ಕೆ ನೀನೆನಗುಂಟು.

೩೨

ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ. ಬೇಡಿದೊಡೆ ಇಕ್ಕದಂತೆ ಮಾಡಯ್ಯ. ಇಕ್ಕಿದೊಡೆ ನೆಲಕ್ಕೆಬೀಳುವಂತೆ ಮಾಡಯ್ಯ. ನೆಲಕ್ಕೆ ಬಿದ್ದೊಡೆ, ನಾನೆತ್ತಿಕೊಂಬುದಕ್ಕೆ ಮುನ್ನವೆ ಶುನಿ ಎತ್ತಿಕೊಂಬಂತೆ ಮಾಡಯ್ಯ ಚೆನ್ನಮಲ್ಲಿಕಾರ್ಜುನಯ್ಯ.

೩೩

ಹರ ತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ ಸುವರ್ಣದ ಚಿನ್ನದಂತೆ. ಅರೆದು ನೋಡುವ ಚಂದನದಂತೆ. ಅರಿದು ನೋಡುವ ಕಬ್ಬಿನ ಕೋಲಿನಂತೆ. ಬೆದರದೆ ಬೆಚ್ಚದೆ ಇದ್ದಡೆ, ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ.

೩೪

ಅರೆವನಯ್ಯಾ ಸಣ್ಣವಹನ್ನಕ್ಕ, ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ. ಅರೆದರೆ ಸಣ್ಣವಾಗಿ, ಒರೆದರೆ ಬಣ್ಣವಾದರೆ, ಕೂಡಲಸಂಗಮದೇವನೊಲಿದು ಸಲಹುವನು.

೩೫

ಚಂದನವ ಕಡಿದು ಕೊರೆದು ತೇದಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ ಕಡಿದೊರೆದೊಡೆ, ಬೆಂದು ಕಳಂಕ ಹಿಡಿದಿತ್ತೆ? ಸಂದುಸಂದನು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ, ಬೆಂದು ಪಾಕಗೊಳ ಸಕ್ಕರೆಯಾಗಿ, ನೊಂದೆನೆಂದು ಸಿಹಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ. ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ, ಕೊಂದಡೆ ಶರಣೆಂಬುದ ಮಾಣೆ.

೩೬

ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡಯ್ಯ. ಏನು ಮಾಡಿದಡೆಯೂ ನಾನಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಗಿಯ

ಮೇಲೊರಗಿ ನಾನಿಹೆನು. ಚೆನ್ನಮಲ್ಲಿಕಾರ್ಜುನಯ್ಯ, ಕರ ಕೆಡೆ ನೋಡಿದೊಡೆ, ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು.

೩೭

ಕಾಯ ಕರ್‍ರನೆ ಕಂದಿದರೇನು? ಕಾಯ ಮಿರ್‍ರನೆ ಮಿಂಚಿದರೇನು? ಅಂತರಂಗ ಶುದ್ಧವಾದ ಬಳಿಕ ಕಾಯವೇನಾದಡೇನಯ್ಯ? ಚೆನ್ನಮಲ್ಲಿಕಾರ್ಜುನನೊಲಿದ ಕಾಯವೇನಾದಡೆ ನಿಮಗೇನಯ್ಯ?

೩೮

ಎನಿಸೆನಿಸೆಂದೊಡೆ ನಾ ಧೃತಿಗೆಡೆನಯ್ಯಾ. ಎಲುದೋರಿದರೆ, ನರ ಹರಿದರೆ, ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ. ಸಿರ ಹರಿದು ಅಟ್ಟೆ ನೆಲಕ್ಕೆ ಬಿದ್ದರೆ ನಾಲಗೆ "ಕೂಡಲಸಂಗಾ, ಶರಣೆ"ನ್ನುತ್ತಿದ್ದೀತಯ್ಯಾ!

೩೯

ಕಿಡಿಕಿಡಿ ಕೆದರಿದಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದು ಬಿದ್ದಡೆ, ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದಡೆ, ಎನಗೆ ಪುಷ್ಪವೆಂಬೆನು. ಚೆನ್ನಮಲ್ಲಿಕಾರ್ಜುನಯ್ಯ, ಶಿರ ಹರಿದು ಬಿದ್ದಡೆ, ಪ್ರಾಣ ನಿಮಗರ್ಪಿತವೆಂಬೆನು.

೪೦

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ; ಕೇಳು ಕೂಡಲಸಂಗಮದೇವಾ, ಮರಣವೆ ಮಹಾನವಮಿ!

೪೧

ಭಕ್ತರ ಮನವ ಶಿವನು ನೋಡಲಿಕ್ಕೆ ಕಂಟಕವನೊಡ್ಡುವನು, ಅಪರಾಧಗೊಡುವನು, ಭಾಗ್ಯವೆಲ್ಲ ಬಯಲ ಮಾಡುವನು, ಬಂಧುಗಳೆಲ್ಲ ವೈರಿಗಳ ಮಾಡುವನು, ದೇಶತ್ಯಾಗವ ಮಾಡಿಸುವನು, ಅಲ್ಲಿ ಮಹಾವ್ಯಾಧಿಗಳ ತೋರಿಸುವನು. ಸಾಕ್ಷಿ:

ಪುಣ್ಯಮೇಕೋ ಮಹಾಬಂಧುಃ ಪಾಪಮೇಕೋ ಮಹಾರಿಪುಃ |
ಅಸಂತೋಷೋ ಮಹಾವ್ಯಾಧಿಃ ಧೈರ್ಯಂ ಸರ್ವತ್ರ ಸಾಧನಂ ||
ಅಪರಾಧಾರ್ಥನಾಶಂ ಚ, ವಿರೋಧನಂ ಚ ಬಾಂಧವೈಃ |
ದೇಶತ್ಯಾಗಮಹಾವ್ಯಾಧಿಃ ಮದ್ಭಕ್ತಸ್ಯ ಸುಲಕ್ಷಣಂ ||

ಎಂದುದಾಗಿ, ಇಂತಿವೆಲ್ಲ ದುಃಖವನು ಶಿವನಾಜ್ಞೆಯಿಂದ ಬಂದವೆಂದು ತಿಳಿದು, ನೀವೇ ಗತಿ, ನೀವೇ ಮತಿ, ಹಾಲಲದ್ದು ನೀರಲದ್ದು ಎಂಬ ಭಾವದಲ್ಲಿಪ್ಪವರನು ಶಿವ ತನ್ನ ಗರ್ಭದಲ್ಲಿ ಇಂಬಿಟ್ಟುಕೊಂಬನು. ನಮ್ಮ ಶಾಂತ ಕೂಡಲಸಂಗಮದೇವ ತನ್ನ ನಂಬಿದವರ ಹೃದಯದಲ್ಲಿಪ್ಪನು.

೪೨

ಮನದೊಡೆಯ ಮನವ ನೋಡುವೆನೆಂದು ನಾಲ್ದೆಸೆಯಲ್ಲಿ ಭಯವ ನೊಡ್ಡಿದಡೆ, ಹೆದರದಿರು ಮನವೆ! ಹೆದರಿ ಹಿಮ್ಮೆಟ್ಟದಿರು ಮನವೆ! ಕಳವಳಗೊಳ್ಳದೆ ಸಂಚಲವಳಿದು ಅತಿ ಕಲಿವಂತನಾದೆಯಾದಡೆ, ಅಘಹರ ಅಖಂಡೇಶ್ವರ ನಗುತ ಬಂದೆತ್ತಿಕೊಂಡು ಮುದ್ದಾಡಿ ತನ್ನೊಳಗಿಟ್ಟುಕೊಂಬನು ಕೇಳಾ ಎಲೆ ಮನವೆ!

೪೩

ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು, ಬೇಡಲಾಗದು ಭಕ್ತನು. ಓಡೆನಯ್ಯಾ, ಬೇಡೆನಯ್ಯಾ ಕೂಡಲಸಂಗಮದೇವಾ.

೪೪

ಭಕ್ತಂಗೆ ಬೇಡದ ಭಾಷೆ, ನಿನಗೆ ಕೊಡದ ಭಾಷೆ. ಭಕ್ತಂಗೆ ಬಿಡದ ಭಾಷೆ, ನಿನಗೆ ಕಾಡುವ ಭಾಷೆ. ಭಕ್ತಂಗೆ ಸತ್ಯದ ಬಲ, ನಿನಗೆ ಶಕ್ತಿಯ ಬಲ. ಇಬ್ಬರ ಗೆಲ್ಲಕ್ಕೆ ಕಡೆ ಇಲ್ಲ. ಈ ಇಬ್ಬರಿಗೆಯೂ ಒಡೆಯರಿಲ್ಲದ ಅಂಕ. ಇನ್ನು ಭಕ್ತನು ಭಕ್ತಿಯ ಛಲವ ಬಿಡನಾಗಿ, ಭಕ್ತ ಸೋತಡೆ ಭಕ್ತನಡಿಗೆ ಗೆಲವು, ಭಕ್ತ ಗೆದ್ದಡೆಂತು ಗೆಲವು. ಇದ ನೀನೇ ವಿಚಾರಿಸಿಕೊಳ್ಳಾ ಭಕ್ತದೇಹಿಕದೇವ ಸಕಳೇಶ್ವರಾ.

೪೫

ಎನಗೆ, ನೀನು ಮಾಡಿದ ಸಂಸಾರದ ಬಳಲಿಕೆ. ನಿನಗೆನ್ನ ಕಾಡುವ ಸಂಸಾರದ ಬಳಲಿಕೆ. ಬಳಲಿಕೆ ಇಬ್ಬರಿಗೆಯೂ ಸರಿ. ನಿನ್ನ ಹೆಚ್ಚೇನು? ಎನ್ನ ಕುಂದೇನು? ನೀನು ಭಕ್ತದೇಹಿಕದೇವನಾದ ಬಳಿಕ, ಸಕಳೇಶ್ವರ ದೇವಾ, ನೀನೂ ಬಲ್ಲೆ ನಾನೂ ಬಲ್ಲೆ.

೪೬

ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ, ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯ? ಮಾಡಲಾಗದು ಅಳಿಮನವ. ಮಾಡಿದೊಡೆ ಮನದೊಡೆಯ ಬಲ್ಲನೈಸೆ. ವಿರಳವಿಲ್ಲದ ಮಣಿಯ ಪೋಣಿಸಿಹೆನೆಂದೊಡೆ, ಮರುಳ ಚೆನ್ನಮಲ್ಲಿಕಾರ್ಜುನಯ್ಯನೆಂತೊಲಿವನಯ್ಯ?

೪೭

ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವು ಕೊಂಬೆಗೆ ಹಾರದಿರು ಮರುಳೇ. ಅಟ್ಟಿ ನೋಡುವ, ಮುಟ್ಟಿನೋಡುವ, ತಟ್ಟಿ ನೋಡುವ, ಒತ್ತಿ ನೋಡುವ. ಅಟ್ಟಿದಡೆ ಒತ್ತಿದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗಕಲ್ಲೇಶ್ವರ.

೪೮

ಶಿವಭಕ್ತನಾಗಿ ತನ್ನ ಹಿಡಿದಹೆನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ; ಮಣ್ಣ ಮಾಡುವ, ಮಸಿಯ ಮಾಡುವ. ಕೂಡಲ ಸಂಗಮದೇವರ ನೆರೆನಂಬಿದನಾದರೆ ಕಡೆಗೆ ತನ್ನಂತೆ ಮಾಡುವ.

೪೯

ತಂದೆ ನೀನು, ತಾಯಿ ನೀನು; ಬಂಧು ನೀನು, ಬಳಗ ನೀನು; ನೀನಲ್ಲದೆ ಮತ್ತಾರೂ ಇಲ್ಲಯ್ಯಾ! ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು!

೫೦

ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ; ಬೇಡು, ಬೇಡೆಲೆ ಹಂದೇ! ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ;

ಕೂಡಲಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತರ ಮನೆಯಲ್ಲಿ.

೫೧

ಎಂಬತ್ತುನಾಲ್ಕುಲಕ್ಷ ಮುಖದೊಳಗೊಂದೇ ಮುಖವಾಗಿ ಕಾಡಿ ನೋಡೆನ್ನನು, ಬೇಡಿ ನೋಡೆನ್ನನು. ಬೇಡದಿದ್ದರೆ, ಅಯ್ಯಾ, ನಿಮಗೆ ಪ್ರಮಥರಾಣೆ! ನೀನಾವ ಮುಖದಲು ಬಂದು ಬೇಡಿದಡೀವೆ ಕೂಡಲ ಸಂಗಮದೇವಾ.

೫೨

ಬರಬರ ಭಕ್ತಿಯುರೆಯಾಯಿತ್ತು ಕಾಣಿರಣ್ಣಾ. ಮೊದಲ ದಿನ ಹಣೆ ಮುಟ್ಟೆ, ಮರುದಿನ ಕೈಯ ಮುಟ್ಟೆ ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿ ರಣ್ಣಾ! ಹಿಡಿದುದ ಬಿಡದಿದ್ದರೆ ಕಡೆಗೆ ಚಾಚುವ; ಅಲ್ಲದಿದ್ದರೆ ನಡುನೀರಲ್ಲ ದ್ದುವ ನಮ್ಮ ಕೂಡಲಸಂಗಮದೇವ.

೫೩

ಹಾಡುವೆನಯ್ಯ ನಿಮ್ಮ. ನೋಡುವೆನಯ್ಯ ನಿಮ್ಮ. ಪೂಜೆಯ ಮಾಡುವೆನಯ್ಯ ನಿಮ್ಮ. ಭಕ್ತಿಯ ಬೇಡುವೆನಯ್ಯ ನಿಮ್ಮ. ಎರಡಳಿದು ಕೂಡುವೆನಯ್ಯ ನಿಮ್ಮ ಅಖಂಡೇಶ್ವರಾ.

೫೪

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದರೇನೋ ಶಿವಶಿವಾ! ಹೋದರೇನೋ? ಕೂಡಲಸಂಗಮ ದೇವಯ್ಯಾ, ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ!

೫೫

ಕೆಂಚ ಕರಿಕನ ನೆನೆದರೆ ಕರಿಕನಾಗಬಲ್ಲನೆ? ಕರಿಕ ಕೆಂಚನ ನೆನೆದರೆ ಕೆಂಚನಾಗಬಲ್ಲನೆ? ದರಿದ್ರ ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೆ? ಸಿರಿವಂತ ದರಿದ್ರನ ನೆನೆದರೆ ದರಿದ್ರನಾಗಬಲ್ಲನೆ? ಮುನ್ನಿನ ಪುರಾತರ ನೆನೆದು ಧನ್ಯನಾದಹೆನೆಂಬ ಮಾತಿನ ರಂಜಕರನೇನೆಂಬೆ ಕೂಡಲಸಂಗಮ ದೇವಾ?

೫೭

ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ? ಆ ಸುರೂಪಿ, ಕುರೂಪಿಯ ನೆನೆದಡೆ ಕುರೂಪಿಯಪ್ಪನೆ? ಧನವುಳ್ಳವರ ನೆನೆದಡೆ ದರಿದ್ರ ಹೋಹುದೆ? ಪುರಾತರ ನೆನೆದು ಕೃತಾರ್ಥರಾದೆವೆಂಬರು; ತಮ್ಮಲ್ಲಿ ಭಕ್ತಿ ನಿಷ್ಠೆಯಿಲ್ಲದವರ ಕಂಡಡೆ ಮೆಚ್ಚನು ಗೊಹೇಶ್ವರನು.

೫೭

ಪರುಷದ ಗೃಹದೊಳಗಿರ್ದು ಶಿರಿವನೇ ಮನೆಮನೆಯ? ತೊರೆಯೊಳ ಗಿದ್ದವನು ತೃಷೆಯಾಗಲು ಅರಸುವನೇ ಕೆರೆಯುುದಕವ? ಮಂಗಳಲಿಂಗ ವಂಗದ ಮೇಲೆ ಇದ್ದು, ಅನ್ಯಲಿಂಗಂಗಳ ನೆನೆವನೆ ನಿಮ್ಮ ಭಕ್ತನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?

೫೮

ಶಿವನೇ, ನಿಮ್ಮ ನಾ ಬಲ್ಲೆನು. 'ಗುರುದೇವೋ ಮಹಾದೇವೋ' ಎಂದು ದಾಗಿ, ಶ್ರೀಗುರುರೂಪಾಗಿ ಬಂದು ದೀಕ್ಷೆಯ ಮಾಡಿ, ಶಿವಲಿಂಗವ ಬಿಜ ಯಂಗೆಯಿಸಿ ಕೊಟ್ಟಿರಿ, ಜಂಗಮವ ತೋರಿದಿರಿ. ಇದು ಕಾರಣ ನಿಮ್ಮ ನಾ ಬಲ್ಲೆನು. ಎನ್ನ ನೀವೇ ಬಲ್ಲಿರಿ. ನಿಮ್ಮ ಶಿಶುವೆಂದು ಪ್ರಸಾದವನಿಕ್ಕಿ ರಕ್ಷಿಸಿ ದಿರಿ. ಇದು ಕಾರಣದಿಂದಲಿ ನಿಮ್ಮ ನಾ ಬಲ್ಲೆನು. ಎನ್ನನು ನೀವೇ ಬಲ್ಲಿರಿ. ಮತ್ತೆ ಮರೆಯ ಮಾಡಿ ಜ್ಞಾನವನು ಅಜ್ಞಾನವನು, ಭಕ್ತಿಯನು ಅಭಕ್ತಿ ಯನು, ಸುಖವನು ದುಃಖವನು ಒಡ್ಡಿ ಕಾಡದಿರಯ್ಯ. ಇವೆಲ್ಲವಕ್ಕೆಯು ನೀವೇ ಕಾರಣ. ಇದು ಕಾರಣ ನಿಮ್ಮ ಬೇರ ಬಲ್ಲವರಿಗೆ ಎಲೆಯ ತೋರಿ ಅಳಿವಾಡಿ ಕಾಡುವಿರಿ. ಕಾಡದಿರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೫೯

ಸುಖ ಬಂದಲ್ಲಿ ನಿಮ್ಮ ಹಾಡಿ ಹರಸುವೆನಯ್ಯ. ದುಃಖ ಬಂದಲ್ಲಿ ನಿಮ್ಮ ಕೋಪಿಸಿ ಬಯ್ವೆನಯ್ಯ. ಅದೇನು ಕಾರಣವೆಂದೊಡೆ: ಎನ್ನ ಸುಖ ದುಃಖಗಳಿಗೆ ನೀವೆ ಆಧಾರವಾದ ಕಾರಣ. ನಿಮ್ಮನೆ ಹಾಡುವೆನಯ್ಯ; ನಿಮ್ಮನೆ ಹೊಗಳುವೆನಯ್ಯ. ನಿಮ್ಮ ಮುಂದೆ ಎನ್ನ ಒಡಲ ಕಡುದುಃಖವ ನೀಡಾಡುವೆನಯ್ಯ ಅಖಂಡೇಶ್ವರಾ.

೬೦

ಶಿವಶಿವಾ ಮಹಾಪ್ರಸಾದ! ಎನ್ನ ಚರಣವು ನಿಮ್ಮ ಶಿವಾಚಾರ ಮಾರ್ಗದಲ್ಲಲ್ಲದೆ ಅನ್ಯಮಾರ್ಗದಲ್ಲಿ ಚರಿಸದಂತೆ ಮಾಡಯ್ಯ. ಎನ್ನ ಹಸ್ತವು ನಿಮ್ಮನಲ್ಲದೆ ಅನ್ಯವ ಮುಟ್ಟದಂತೆ ಮಾಡಯ್ಯ. ಎನ್ನ ಕಂಗಳು ನಿಮ್ಮನಲ್ಲದೆ ಅನ್ಯವ ನೋಡದಂತೆ ಮಾಡಯ್ಯ. ಎನ್ನ ಶ್ರೋತ್ರವು ನಿಮ್ಮ ಕೀರ್ತಿಯನಲ್ಲದೆ ಅನ್ಯವ ಕೇಳದಂತೆ ಮಾಡಯ್ಯ. ಎನ್ನ ಜಿಹ್ವೆಯು ನಿಮ್ಮನಲ್ಲದೆ ಅನ್ಯರ ಹೊಗಳದಂತೆ ಮಾಡಯ್ಯ. ಎನ್ನ ಮನವು ನಿಮ್ಮನಲ್ಲದೆ ಅನ್ಯವ ನೆನೆಯ ದಂತೆ ಮಾಡಯ್ಯ. ಎನ್ನ ಭಾವವು ನಿಮ್ಮನಲ್ಲದೆ ಅನ್ಯವ ಬಯಸದಂತೆ ಮಾಡಯ್ಯ ಅಖಂಡೇಶ್ವರಾ.

೬೧

ಲಿಂಗಕ್ಕಲ್ಲದೆ ಮಾಡೆನೀ ಮನವನು. ಜಂಗಮಕ್ಕಲ್ಲದೆ ಮಾಡೆನೀ ಧನವನು. ಪ್ರಸಾದಕ್ಕಲ್ಲದೆ ಮಾಡೆನೀ ತನುವನು. ಲಿಂಗ ಜಂಗ ಮದ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ. ಅನರ್ಪಿತ ವಾದರೆ ತಪ್ಪೆನ್ನದು, ಮೂಗ ಕೊಯಿ ಕೂಡಲಸಂಗಮದೇವಾ.

೬೨

ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ ತಲೆದಂಡ, ತಲೆ ದಂಡ! ಹುಸಿಯಾದರೆ, ದೇವ, ತಲೆ ದಂಡ ತಲೆ ದಂಡ! ಕೂಡಲಸಂಗಮ ದೇವಾ, ನೀನಲ್ಲದೆ ಅನ್ಯವ ನೆನೆದೊಡೆ ತಲೆ ದಂಡ, ತಲೆ ದಂಡ!

೬೩

ತೈಲ ಬತ್ತಿ ಜ್ಯೋತಿಯ ಮುಟ್ಟೆ ಜ್ಯೋತಿಯಪ್ಪುವು ನೋಡಾ. ಸದ್ಭಕ್ತಿ ಸ್ನೇಹ ಮೋಹದಿಂದ ಲಿಂಗ ಸ್ಪರ್ಶನವ ಮಾಡಿ, ಆ ಭಕ್ತನ ದೇಹ ಮನ ಕರಣಂಗಳೆಲ್ಲವೂ ಲಿಂಗವಾದವು ನೋಡಾ. ಲಿಂಗವ ಮುಟ್ಟೆ ಮತ್ತೊಂ ದೇನುವ ಮುಟ್ಟದ ನಿರ್ಮೋಹಿಯನು ಮಾಹೇಶ್ವರನೆಂಬೆನು ಕಾಣಾ ಮಹಾ ಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೬೪

ಸಂಗ ಸಹಿತ ಶರಣರು ಬಂದರೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು! ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು? ಅಂಗ ಲಿಂಗಸಹಿತವಾಗಿ ಬಂದರೆ ಸಂಗ ನೀನೆಂದು, ಮತ್ತೆ ಮನದಲ್ಲಿ ಸಂದೇಹ ಹೊಳೆದರೆ ಬೆಂದೆನಲ್ಲಾ ನಾನು ಕೂಡಲಸಂಗಮದೇವಾ!

೬೫

ಎನ್ನ ಜನನಸೂತಕ ಹೋಯಿತ್ತು,–ಶ್ರೀ ಗುರುವಿನ ಪಾಣಿಪದ್ಮದಲ್ಲಿ ಜನಿಸಿದೆನಾಗಿ. ಎನ್ನ ಜಾತಿಸೂತಕ ಹೋಯಿತ್ತು,–ಅಜಾತಲಿಂಗ ಸಂಗದಿಂದ. ಎನ್ನ ಕುಲಸೂತಕ ಹೋಯಿತ್ತು,–ಶಿವನಲ್ಲದೆ ಅನ್ಯದೈವವನರಿಯೆನಾಗಿ. ಎನ್ನ ಛಲಸೂತಕ ಹೋಯಿತ್ತು,–ಜೀವಭಾವವಿಲ್ಲವಾಗಿ. ಎನ್ನ ಮನಸೂತಕ ಹೋಯಿತ್ತು,–ನಿಮ್ಮ ನಾಮವ ನೆನೆನೆನೆದು. ಎನ್ನ ಕಂಗಳ ಸೂತಕ ಹೋಯಿತ್ತು,–ನಿಮ್ಮ ಮಂಗಳಸ್ವರೂಪವ ನೋಡಿ ನೋಡಿ. ಎನ್ನ ಕೈಯ ಸೂತಕ ಹೋಯಿತ್ತು,–ನಿಮ್ಮ ಮುಟ್ಟಿ ಪೂಜಿಸಿ ಪೂಜಿಸಿ. ಎನ್ನ ಕಿವಿಯ ಸೂತಕ ಹೋಯಿತ್ತು,–ನಿಮ್ಮ ಕೀರ್ತಿಯ ಕೇಳಿ ಕೇಳಿ. ಎನ್ನ ಜಿಹ್ವೆಯ ಸೂತಕ ಹೋಯಿತ್ತು,–ನಿಮ್ಮ ಪರಮಪ್ರಸಾದವ ಸವಿ ಸವಿದು. ಇಂತೀ ಸರ್ವಸೂತಕವ ಹರಿದು, ಪೂರ್ವಕಲ್ಪಿತಂಗಳ ಮೀರಿ, ನಿಮ್ಮೊಳಗೆ ನಿಜ ನಿಶ್ಚಿಂತ ನಿವಾಸಿಯಾಗಿರ್ದೆನಯ್ಯ ಅಖಂಡೇಶ್ವರಾ.

೬೬

ನೀರು ಘಟ್ಟಿಗೊಂಡು ಮುತ್ತಪ್ಪುದಲ್ಲದೆ, ಮುತ್ತು ನೀರಪ್ಪುದೇ ಅಯ್ಯ? ಹಾಲು ಹೆಪ್ಪುಗೊಂಡು ತುಪ್ಪವಪ್ಪುದಲ್ಲದೆ, ತುಪ್ಪ ಹಾಲಪ್ಪುದೇ ಅಯ್ಯ? ಹೀನಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವಜಾತಿಕ ಶರಣನಾದ ಬಳಿಕ, ಮರಳಿ ನರನಪ್ಪನೇ ಅಯ್ಯ ಅಖಂಡೇಶ್ವರಾ?

೬೭

ಭಕ್ತರ ಮನೆಯನರಸಿಕೊಂಡು ಹೋಗಿ, ಭಕ್ತದೇಹಿಕದೇವನೆಂಬ ಶ್ರುತಿವಚನವ ಕೇಳಿ, ಭಕ್ತನೇ ದೇವನೆಂದರಿದು, ಮತ್ತೆಯು ಮುಕ್ತಿಯನರಸುವ ಪಾತಕರ ವಿಧಿ ಎಂತೋ? ಭಕ್ತರ ಮಠಕ್ಕೆ ಹೋಗಿ ಅದು ಇದು ಎಂಬ

ಸಂದೇಹಿ, ಪಾತಕಿ ನೀ ಕೇಳು. ಆ ಭಕ್ತರ ಮಠದೊಳಗೆ ಭಕ್ತಿರತಿಯ ಬೆಳಸು, ಲಿಂಗದ ಕಳೆಯು, ಪ್ರಸಾದದ ರಾಶಿ,-ಇಂತಪ್ಪ ಪ್ರಸಾದವಿದ್ದಲ್ಲಿಗೆ ಹೋಗಿ, ಸೂತಕವನರಸುವ ಪಾತಕರ ಮೆಚ್ಚುವನೆ ನಮ್ಮ ಕೂಡಲಚೆನ್ನ ಸಂಗಮದೇವ?

೬೮

ಆಗಮಪುರುಷರಿರಾ, ನಿಮ್ಮ ಆಗಮ ವಾಯುವಾಗಿ ಹೋಯಿತಲ್ಲಾ! ವಿದ್ಯಾಪುರುಷರಿರಾ, ನಿಮ್ಮ ವಿದ್ಯೆ ಅವಿದ್ಯೆಯಾಗಿ ಹೋದಲ್ಲಿ ಬರುಮುಖ ರಾಗಿದ್ದಿರಲ್ಲಾ! ವೇದಪುರುಷರಿರಾ, ನಿಮ್ಮ ವೇದ ಹೊಲಬುದಪ್ಪಿ ಹೋದಲ್ಲಿ, ವೇದವೆ ದೈವವೆಂದು ಕೆಟ್ಟರಲ್ಲಾ! ಪುರಾಣಪುರುಷರಿರಾ, ನಿಮ್ಮ ಪುರಾಣ ವಿಚಾರ ಭ್ರಷ್ಟವಾಗಿ ಹೋದಲ್ಲಿ, ನೀವು ಒಡನೆ ಭ್ರಷ್ಟರಾಗಿ ಹೋದಿರಲ್ಲಾ! ಶಾಸ್ತ್ರಪುರುಷರಿರಾ, ನಿಮ್ಮ ಶಾಸ್ತ್ರ ಮಹಾಪಥದ ಹೊಸಲಲ್ಲಿ ಹೋದಲ್ಲಿ, ಭಕ್ತದೇಹಿಕದೇವನೆಂದರಿಯದೆ ಕೆಟ್ಟರಲ್ಲಾ! 'ಯತ್ರ ಶಿವಸ್ತತ್ರ ಮಾಹೇಶ್ವರ'ನೆಂದು ಹೇಳಿತ್ತು ಮುನ್ನ. ಅಂತು ಭಕ್ತ ನಿತ್ಯ ಸತ್ಯ ಸನ್ನಿಹಿತ, ಗೊಹೇಶ್ವರಾ, ನಿಮ್ಮ ಶರಣ.

೬೯

ಎಲೆ ಶಿವನೆ, ನೀವು ಭಕ್ತದೇಹಿಕದೇವನೆಂಬುದು ಎನಗೆ ನಿಶ್ಚಲವಾಗಿ ಕಾಣಬಂದಿತ್ತು. ಅದೆಂತೆಂದೊಡೆ: ಎನ್ನ ತನುವೆ ನಿಮ್ಮ ತನುವಾಯಿತಾಗಿ, ಈ ತನುವಿಡಿದು ಗುರುವ ಕಂಡೆ. ಈ ತನುವಿಡಿದು ಲಿಂಗವ ಕಂಡೆ. ಈ ತನು ವಿಡಿದು ಜಂಗಮವ ಕಂಡೆ. ಈ ತನುವಿಡಿದು ಪಾದೋದಕ ಪ್ರಸಾದವ ಕಂಡೆ. ಈ ತನುವಿಡಿದು ವಿಭೂತಿ ರುದ್ರಾಕ್ಷಿಯ ಕಂಡೆ. ಈ ತನುವಿಡಿದು ಮಂತ್ರದ ಮೂಲವ ಕಂಡೆ. ಈ ತನುವಿಡಿದು ನಿಮ್ಮ ಶರಣರ ಮಹಾನು ಭಾವವ ಕಂಡೆ. ಈ ತನುವಿಡಿದು ನೀವೇ ನಾನಾದ ಪರಿಯ ಕಂಡು ಬೆರಗಾದೆ ನಯ್ಯ ಅಖಂಡೇಶ್ವರಾ!

೭೦

ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನಡೆ ಯೊಳಗೆ ನುಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ

ಕೈಯಲ್ಲಿ; ಒಂದು ಜವೆ ಕೊರತೆಯಾದರೆ ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ.

೭೧

ನುಡಿಯಲ್ಲಿ ಎರಡು ನುಡಿಯನು; ನಡೆಯಲ್ಲಿ ಎರಡು ನಡೆಯನು. ನುಡಿಯಂತೆ ನಡೆಯ ವಿಸ್ತರಿಸುವ; ನಡೆಯಂತೆ ನುಡಿಯ ವಿಸ್ತರಿಸುವ. ಹಿಡಿವನು ಗುರು ಲಿಂಗ ಜಂಗಮ ದಾಸೋಹವ; ಬಿಡುವನು ಹೊನ್ನು ಹೆಣ್ಣು ಮಣ್ಣೆಂಬ ತ್ರಿಮಲದಾಸೆಯ. ಇಂತಪ್ಪ ವೀರಮಾಹೇಶ್ವರನನೇನೆಂಬೆನಯ್ಯ ಅಖಂಡೇಶ್ವರಾ?

೭೨

ಮಾತಿನಲ್ಲಿ ಕರ್ಕಶ, ಮನದಲ್ಲಿ ಘಾತಕತನವುಳ್ಳವನ ಕನಿಷ್ಠನೆಂಬರು. ಮಾತಿನಲ್ಲಿ ಲೀಲೆ, ಮನದಲ್ಲಿ ಕತ್ತರಿಯುಳ್ಳವನ ಮಧ್ಯಮನೆಂಬರು. ಮಾತಿನಲ್ಲಿ ಮೃದು, ಮನದಲ್ಲಿ ಪ್ರೀತಿಯುಳ್ಳವನ ಉತ್ತಮನೆಂಬರು ನೋಡಾ ಈ ಜಗದವರು. ಮಾತಿನಲ್ಲಿ ಮಂತ್ರ, ಮನದಲ್ಲಿ ಮಹಾನುಭಾವ, ಆತ್ಮನಲ್ಲಿ ಜ್ಯೋತಿ ಬೆಳಗುತ್ತಿಪ್ಪುದಾಗಿ, ಉತ್ತಮನಲ್ಲ ಮಧ್ಯಮನಲ್ಲ ಕನಿಷ್ಠನಲ್ಲ ನೋಡಾ,–ಅಖಂಡೇಶ್ವರಾ, ನಿಮ್ಮ ಶರಣನು.

೭೩

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೊ? ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೋ? ಮನ ಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೋ? ಭಾವ ಶುದ್ಧವುಳ್ಳಾತಂಗೆ ಪುಷ್ಪದ ಹಂಗೇಕೋ? ಕೂಡಲಚೆನ್ನಸಂಗಯ್ಯ, ನಿಮ್ಮನರಿದಾತಂಗೆ ಇದಿರಿಟ್ಟರಿಯಬೇಕೆಂಬ ಹಂಗೇಕೋ?

೭೪

ಸಾಧುಗುಣಕ್ಕೆ ಸಲೆ ಸಂದ ವಾರಣ ಬಂದು, ಹುಟ್ಟುಗುರುಡರ ಸಭಾ ಮಧ್ಯದಲ್ಲಿ ನಿಲ್ಲಲು, ಕೆಲದೊಳೊಬ್ಬ ಕಣ್ಣುಳ್ಳಾತ ಆನೆ ಬಂದಿತ್ತೆಂದು ನುಡಿಯಲೊಡನೆ, ಅತಿಪ್ರೇಮದಿಂದ ಕಂಗಳರು ಆ ಆನೆಯ ಮುಟ್ಟಿ ನೋಡಿ, ಆನೆ ಕೊಳಗದಾಕಾರವೆಂದು ಕಾಲ ಮುಟ್ಟಿದಾತ, ಆನೆ ಒನಕೆಯಾಕಾರವೆಂದು

ಸೊಂಡಿಲು ಮುಟ್ಟಿದಾತ, ಆನೆ ಹರವೆಯಾಕಾರವೆಂದು ಕುಂಭಸ್ಥಳವ ಮುಟ್ಟಿದಾತ, ಆನೆ ಮೊರದಾಕಾರವೆಂದು ಕಿವಿಯ ಮುಟ್ಟಿದಾತ, ಆನೆ ಕೋಲಾಕಾರವೆಂದು ಬಾಲವ ಹಿಡಿದಾತ,—ಇಂತಿವರೆಲ್ಲರು ಆನೆಯ ನೆಲೆಯ ನರಿಯದೆ, ತಮ್ಮೊಳಗೆ ತಾವು ಕೊಂಡಾಡುತ್ತಿರ್ದರು. ಆನೆಯ ನೆಲೆಯ ಆನೆಯನೇರುವ ಪಟ್ಟದರಸು ಬಲ್ಲನಲ್ಲದೆ ಹುಟ್ಟುಗುರುಡರೇನು ಬಲ್ಲರಯ್ಯಾ? ಈ ಪ್ರಕಾರದಲ್ಲಿಪ್ಪ ಪಶುಪ್ರಾಣಿಗಳು ನಿಜೈಕ್ಯದ ಆಚರಣೆಯನರಿಯದೆ, ಮೂಗಿನಾಭರಣವ ಕಿವಿಗಿಕ್ಕಿ, ಕಿವಿಯಾಭರಣವ ಮೂಗಿಗಿಕ್ಕುವಂತೆ, ನುಡಿದು ನಡೆವುತಿಪ್ಪರು. ಅದು ಶಿವಜ್ಞಾನಿಗಳ ಮತವಲ್ಲ. ಅದು ಹೇಗೆಂದೊಡೆ: ಪ್ರತ್ಯಕ್ಷಜ್ಞಾನವ ಪ್ರಮಾಣಿಸಿ, ಅಪರೋಕ್ಷಜ್ಞಾನವ ಆಲೋಚಿಸಿ, ಸಹಜಜ್ಞಾನವ ಸಂಪಾದಿಸಿ, ಈ ಜ್ಞಾನತ್ರಯಂಗಳನೊಂದುಮಾಡಿ, ಬಿಡುವ ಹಿಡಿವ ಆಚರಣೆಯ ನೆಲೆಗೊಳಿಸಿಕೊಂಡು, ಹಿಡಿದಾಚರಣೆಯಲ್ಲಿ ಪರಾಕ್ರಮಿಯಾಗಿ, ಆದಿ ಅನಾದಿಯ ಮೇಲಣ ಜ್ಯೋತಿರ್ಮಯವಪ್ಪ ಸೂಕ್ಷ್ಮ ಲಿಂಗಮಂ ಬೆರಸಿ ಭಿನ್ನವಿಲ್ಲದಿರ್ಪ ಆಚರಣೆಯ ವಿವರಮಂ ಮಾಹೇಶ್ವರ ಬಲ್ಲನಲ್ಲದೆ, ಅಜ್ಞಾನಿ ಬಾಯಿಬಡುಕರವರೆತ್ತ ಬಲ್ಲರಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ?

೭೫

ಅಗ್ನಿಗೆ ತಂಪುಂಟೆ? ವಿಷಕ್ಕೆ ರುಚಿಯುಂಟೆ ಹೇಳಾ? ಕಂಗಳಿಗೆ ಮರೆಯುಂಟೆ ಹೇಳೈ ಲಿಂಗವೆ? ದಾಳಿಕಾರಂಗೆ ಧರ್ಮವುಂಟೆ? ಕಂಗಳಿಗೆ ಕರುಳುಂಟೆ? ಗೊಹೇಶ್ವರ, ನಿಮ್ಮ ಶರಣರು ಮೂರು ಲೋಕವರಿಯೆ ನಿಶ್ಚಟರಯ್ಯ.

೨. ಕುಲ ಜಾತಿ ವರ್ಣ ಆಶ್ರಮವಿಲ್ಲ ಭಕ್ತನಿಗೆ

೭೬

ಮೊಲೆ ಮುಡಿ ಬಂದರೆ ಹೆಣ್ಣೆಂಬರು. ಗಡ್ಡಮೀಸೆ ಬಂದರೆ ಗಂಡೆಂಬರು. ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥಾ.

೭೭

ನಿಡಿದೊಂದು ಕೋಲನು ಕಡಿದು ಎರಡು ಮಾಡಿ, ಅಡಿಯ ಹೆಣ್ಣ ಮಾಡಿ, ಒಡೆತನವ ಗಂಡು ಮಾಡಿ, ನಡುವೆ ಹೊಸೆದೊಡೆ, ಹುಟ್ಟಿದ ಕಿಚ್ಚು ಹೆಣ್ಣೋ ಗಂಡೋ ರಾಮನಾಥಾ ?

೭೮

ಶುಕ್ಲಶೋಣಿತ ಪಿಂಡದಲ್ಲಿಯೇ ಉತ್ಪತ್ತಿ. ಚಿತ್ತ ವಾಯು ಪ್ರಾಣ ಅಷ್ಟದಳಪದ್ಮದಲ್ಲಿಹುದು. ಮೊಲೆ ಮುಡಿ ಮೂಡಿದರೆ ಹೆಣ್ಣೆಂಬರು. ಗಡ್ಡ ಮೀಸೆಯಾಗಲು ಗಂಡೆಂಬರು. ನಡುವೆ ಸುಳಿವಾತ್ಮನು ಹೆಣ್ಣಲ್ಲ, ಗಂಡಲ್ಲ. ಇದರಂತುವ ತಿಳಿಯಲ್ಕೆ ಶ್ರುತಿಗಗೋಚರವೆಂದಾತನಂಬಿಗರ ಚೌಡಯ್ಯ.

೭೯

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ ?

೮೦

ಆವನಾದರೇನು, ಶ್ರೀ ಮಹಾದೇವನ ನೆನೆವವನ ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ ಕೂಡಲಸಂಗಮದೇವಾ.

೮೧

ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ. ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾ ಪಾತಕ, ನರಕ ಕಾಣಾ ಕೂಡಲಸಂಗಮದೇವಾ.

೮೨

ಕುಲ ಎಷ್ಟು, ಎಂದರೆ ಎರಡು ಕುಲ. ಅವಾವೆಂದೊಡೆ, ಭವಿ ಒಂದು ಕುಲ, ಭಕ್ತ ಒಂದು ಕುಲ. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿಪ್ಪ ಭಕ್ತರ ಕುಲವನಾರಿಸಿದರೆ ಬಾರದ ಭವಂಗಳಲ್ಲಿ ಬಪ್ಪುದು ತಪ್ಪದು. ನೀರಿಂದಾದ ಮುತ್ತು ಮರಳಿ ಉದಕವಪ್ಪುದೇ? ಆಕಾಶಕ್ಕೆ ಹಾರಿ ಹೋದ ಜ್ಯೋತಿ ಹಿಂದಕ್ಕೆ ಬಪ್ಪುದೆ? ಮೃತ್ತುವಿನಿಂದಾದ ಮಡಕೆ ಮರಳಿ ಮಣ್ಣಪ್ಪುದೆ? ಮತ್ತೆ ವಾಮಮುನಿ ಹಿರಿಯ ಭಕ್ತರ ಮನೆಯ ಬಿನ್ನಹವ ಕೈಕೊಂಡು, ಕುಲಕಂಜಿ ಉಣಲೊಲ್ಲದೆ ಹೋದ ನಿಮಿತ್ತದಿಂದ ಹಾವಿನಹಾಳ ಕಲ್ಲಯ್ಯಗಳ ಮನೆಯಲ್ಲಿ ಶ್ವಾನನಾಗಿ ಹುಟ್ಟಲಿಲ್ಲವೇ? ಅದು ಕಾರಣ ಶಿವಭಕ್ತರೊಕ್ಕುಮಿಕ್ಕ ಪ್ರಸಾದವ ಕೊಳಬೇಕು ಎಂದಾತ ನಮ್ಮ ಶಾಂತ ಕೂಡಲಸಂಗಮದೇವ.

೮೩

ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡರೆ, ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!! ಕೂಡಲಸಂಗಮದೇವಾ, ಭಕ್ತರ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ!

೮೪

ಎಂತಹನಾದರೇನು, ಲಿಂಗ ಮುಟ್ಟದವನೇ ಕೀಳು ಜಾತಿ. ಕುಲವ ಹುದು ತಪ್ಪದು ಲಿಂಗ ಮುಟ್ಟಲೊಡನೆ. ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ. ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ.

೮೫

ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ ಅಯ್ಯಾ,—ಕೂಡಲಸಂಗಮದೇವ "ಭಕ್ತಕಾಯ ಮಮ ಕಾಯ"ವೆಂದನಾಗಿ?

೮೬

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರವೊಂದೇ. ಆಶೆಯಾಮಿಷ ರೋಷ ಹರುಷವಿಷಯಾದಿಗಳೆಲ್ಲಾ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕಾವುದು ದೃಷ್ಟ?

ಸಪ್ತಧಾತು ಸಮಂ ಪಿಂಡಂ ಸಮಯೋನಿಸಮುದ್ಭವಂ
ಆತ್ಮಜೀವ ಸಮುತ್ಪನ್ನಂ ವರ್ಣಾನಾಂ ಕಿಂ ಪ್ರಯೋಜನಂ

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ; ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ! ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದು ಕಾರಣ, ಕೂಡಲಸಂಗಮದೇವಾ, ಲಿಂಗಸ್ಥಲವನರಿದವನೆ ಕುಲಜನು.

೮೭

ದೇವದೇವಾ, ಬಿನ್ನಪವನವಧಾರು: ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೊಂದೇ ಎಂಬೆ. ಈ ಹೀಂಗೆಂದು ನಂಬುವುದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ, ಹಲುದೋರೆ ಮೂಗ ಕೊಯಿ ಕೂಡಲಸಂಗಮದೇವಾ.

೮೮

ಬೇಡಂಗೆ ಜೇಡಂಗೆ ಡೋಹರಂಗೆ ಹೊಲೆಯಂಗೆ ರೂಢಿಗೀಶ್ವರನೊಲಿದ ಪರಿಯ ನೋಡಾ! ಲೋಕದ ಮಾನವರು ಮಾಡುವರು ಸಮಯಂಗಳನು. ಮಾಡಲಿಕ್ಕೆ ಅವರೇನು ಸ್ವತಂತ್ರರೇ? ಇವನೊಡ್ಡಿದ ಠಾವಿನಲ್ಲಿ ಕಲ್ಲು ಮುಳ್ಳು ಮೂಡುವವೆಂದಾತ ನಮ್ಮ ಅಂಬಿಗರ ಚೌಡಯ್ಯನು.

೮೯

ಹೊಕ್ಕಲ್ಲಿ ಹೊಕ್ಕು ನಿರ್ಮ್ಮೊಕ್ಕುದನುಂಬವನ ಕುಲವೇನೊ? ದೇವ, ನೀನೊಲಿದವನ, ಸ್ವಾಮಿ, ನೀ ಹಿಡಿದವನ ಕುಲವೇನೋ? ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ಕೂಡಲಸಂಗಮದೇವಾ.

೯೦

ಕಷ್ಟನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ, ಎತ್ತ ಹೋದವೋ ನಿಮ್ಮ ಶಾಸ್ತ್ರಂಗಳು? ಕೆತ್ತ ಮುಚ್ಚಳು ಬೇಡಂಗೆ ತೆರೆವಾಗ, ಇಕ್ಕಿದ ಜನ್ನಿವಾರ ಬೀಯವಾದವು! ಮುಕ್ಕುಳಿಸಿದ ನೀರ ತಂದೆರೆದಡೆ, ಎತ್ತಲಿದ್ದವು ನಿಮ್ಮ ವೇದಂಗಳು? ನಿಮ್ಮ ದುಃಖ ಬೇಡೆಂದಾತ ಅಂಬಿಗಚೌಡಯ್ಯ.

೯೧

ಸೆಟ್ಟಿಯೆಂದೆಂಬೆನೆ ಸಿರಿಯಾಳನ? ಮಡಿವಾಳನೆಂದೆಂಬೆನೆ ಮಾಚಯ್ಯನ? ಡೋಹಾರನೆಂದೆಂಬೆನೆ ಕಕ್ಕಯ್ಯನ? ಮಾದಾರನೆಂದೆಂಬೆನೆ ಚೆನ್ನಯ್ಯನ? ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯಾ!

೯೨

ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ. ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ; ದಾಸಯ್ಯ ಶಿವದಾನವ ನೆರೆಯ ನೋಡಯ್ಯಾ; ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ; ಉನ್ನತ ಮಹಿಮಾ, ಕೂಡಲಸಂಗಮದೇವಾ, ಶಿವಧೋ! ಶಿವಧೋ!!

೯೩

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ! ಕುಲವೇನೋ, ಅವಂದಿರ ಕುಲವೇನೊ? ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

೩. ವಾಗದ್ವೈತ ಜಾಲ, ಭ್ರಾಂತಿ

೯೪

ಶಬ್ದಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು. ತಮ್ಮ ತಾವರಿಯರು. ಇದು ಕಾರಣ ಮೂರು ಲೋಕವೆಲ್ಲವು ಬರುಸೂರೆವೋಯಿತ್ತು ಗುಹೇಶ್ವರಾ.

೯೫

ಭಾವದಲ್ಲಿ ಭ್ರಮಿತರಾದವರ ಸೀಮೆಯೇನು, ನಿಸ್ಸೀಮೆಯೇನು? ವಚನದ ರಚನೆಯ ರಂಜನೆಯ ಲೀಲೆಯನಾಡುವರು ಗುಹೇಶ್ವರನಿಪ್ಪ ಗುಪ್ತವೆಂತೆಂದರಿಯರು.

೯೬

ಹಗಲನಿರುಳಮಾಡಿ, ಇರುಳ ಹಗಲ ಮಾಡಿ, ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ, ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ ನುಡಿವನ ಮಾತ ಕೇಳಲಾಗದು ಗುಹೇಶ್ವರಾ.

೯೭

ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ. ಗುರುಹಿರಿಯರು ತೋರಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಪರಲ್ಲದೆ, ಆಗುಹೋಗೆಂಬುದನರಿಯರು; ಭಕ್ತಿಯನರಿಯರು; ಮುಕ್ತಿಯನರಿಯರು; ಯುಕ್ತಿಯನರಿಯರು. ಮತ್ತೂ ವಾದಿಗೆಳಸುವರು ಹೋದರು, ಗುಹೇಶ್ವರಾ,—ಸಲೆ ಕೊಂಡ ಮಾರಿಂಗೆ.

೯೮

ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ, ನೂಕುತಾಕುಗೊಳುತಿಪ್ಪವಂಗೆ ಮೋಹದ ಮಾತೇಕೆ? ಕೊರಳುದ್ದಕ್ಕೆ ಹೂಳಿಸಿಕೊಂಡು, ಮುಗಿಲುದ್ದಕ್ಕೆ ನೆಗೆದೆಹೆನೆಂಬವನ ಹಾಂಗೆ, ಶಿವನ ಜೋಕೆಯನರಿಯದೆ

ಮಾತನಾಡುವ ಮಾತೆಲ್ಲವು ಮಾತಿನ ಮಾಲೆಯಲ್ಲದೆ, ಅಲ್ಲಿ ನಿಜವಿಲ್ಲ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ಅವರೆಲ್ಲಾ ಭೂಭಾರಕರಾದರು.

೯೯

ಏನೆಂದರಿಯರು, ಎಂತೆಂದರಿಯರು, ಬರುಮಾತಿನ ಬೊಮ್ಮವನಾಡುತ್ತಿಪ್ಪರು! ರುದ್ರನ ನೊಸಲ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡಲರಿಯದೆ, ಕಾಮನ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡುತ್ತಿಪ್ಪರು. ಭೂಮಿಯಾಕಾಶವ ಮೆಟ್ಟಿ ಕಾಮಗಣಂಗಳ ಕೂಡೆ ಕಾದಿ ಗೆಲಲರಿಯದೆ, ನೀಲಗಿರಿಯ ಮೇಲೆ ನಿಂದು ಉಲಿವ ಉಯ್ಯಾಲೆಯನಾಡುತ್ತಿಪ್ಪರಯ್ಯ. ಗೊಹೇಶ್ವರ, ನಿಮ್ಮ ನರಿದೆನೆಂಬವರೆಲ್ಲಾ ಬರುದೊರೆವೋದರಯ್ಯ!

೧೦೦

ಲೋಹ ಕರಗಿ ಗುಂಡಾದಲ್ಲಿ, ಕಾಯುವನಿರಿಯಬಲ್ಲುದೆ? ಮಾತಿನ ಅದ್ವೈತದಲ್ಲಿ ನುಡಿವರೆಲ್ಲರೂ ಗೊಹೇಶ್ವರಲಿಂಗವನೆತ್ತ ಬಲ್ಲರು ಸಂಗನ ಬಸವಣ್ಣ?

೧೦೧

ಕಾಷ್ಠದಲ್ಲಿ ಅಗ್ನಿ ಉಂಟೆಂದಡೆ, ಕಾಷ್ಠದ ರೂಪು ಸುಡಲರಿಯದು ನೋಡಾ! ದೇಹಮಧ್ಯದಲ್ಲಿ ಪರವಸ್ತು ಉಂಟೆಂದಡೆ, ಹರಿಯದು ನೋಡಾ ಆ ದೇಹದ ಜಡಭಾವ! ಅದೆಂತೆಂದೊಡೆ: ಆ ಕಾಷ್ಠದ ಮಧ್ಯದಲ್ಲಿ ಅಡಗಿರ್ದ ಮಂದಾಗ್ನಿ ಮಥನದಿಂದೆ ಬಹಿಷ್ಕರಿಸಿ ಆ ಕಾಷ್ಠವ ಸುಡುವಂತೆ, ದೇಹದ ಮಧ್ಯದಲ್ಲಿ ಅಡಗಿರ್ದ ಪರವಸ್ತುವನು ಶ್ರೀಗುರುಸ್ವಾಮಿ ತನ್ನ ಕ್ರಿಯಾಶಕ್ತಿಯ ಮಥನದಿಂದೆ ಬಹಿಷ್ಕರಿಸಿ ಬಹಿರಂಗದ ಮೇಲೆ ಇಷ್ಟಲಿಂಗವಾಗಿ ಧರಿಸಲು, ಆ ಲಿಂಗದ ಸತ್‌ಕ್ರಿಯಾಪೂಜೆಯಿಂದೆ ಸ್ಥೂಲಾಂಗದ ಕಾಷ್ಠಗುಣಧರ್ಮಂಗಳೆಲ್ಲ ನಷ್ಟವಾಗಿ, ಆ ಲಿಂಗದ ಚಿತ್‌ಕಳೆಯು ಸರ್ವಾಂಗಕ್ಕೆ ವೇಧಿಸಿ, ಅಂತರಂಗಬಹಿರಂಗದೊಳಾಗಿ, ಆತನ ಅಹಂ ಮಮತೆ ಕೆಟ್ಟು, ಶಿಖಿ ಕರ್ಪುರಸಂಯೋಗದಂತೆ ಪರತತ್ವವನೊಡಗೂಡಿದ ಮಹಾತ್ಮನ ಕಾಯ ನಿರವಯಲಪ್ಪುದಲ್ಲದೆ, ಬರಿಯ ಒಣವಾಗದ್ವೈತದಿಂದೆ ಅಹಂ ಬ್ರಹ್ಮ

ವೆಂದು ನುಡಿದು, ದೇಹಪ್ರಾಣಂಗಳ ಪ್ರಕೃತಿವರ್ತನೆಯಲ್ಲಿ ನಡೆದು, ನಿತ್ಯ ರಾದೆವೆಂಬುವರೆಲ್ಲ ಭವಾಂಬುಧಿಯಲ್ಲಿ ಬಿದ್ದು ಮುಳುಗುತ್ತೇಳುತ್ತ ತಡಿಯ ಸೇರಲರಿಯದೆ ಕೆಟ್ಟು ಹೋದರು ನೋಡಾ ಅಖಂಡೇಶ್ವರಾ.

೧೦೨

ಸತ್ತುರೂಪು ಲಿಂಗ, ಚಿತ್ತುರೂಪು ಜಂಗಮ, ಆನಂದರೂಪು ಪ್ರಸಾದ. ಇಂತೀ ತ್ರಿವಿಧದರಿವನು ಶ್ರೀಗುರು ಇಷ್ಟಲಿಂಗದಲ್ಲಿ ತೋರಿ ಬಿಜಯಂಗೈಸಿ ಕೊಟ್ಟ ಬಳಿಕ, ಸತ್ತು ಚಿತ್ತು ಆನಂದವೆಂಬ ಬಟ್ಟಬಯಲ ಮಾತೇಕಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೧೦೩

ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು ಲಿಂಗವಾರ್ತೆಯ ನುಡಿವರಯ್ಯ. ಕಾಯಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯ. ಮನ ಬಂದ ಪರಿಯಲ್ಲಿ ನುಡಿ ವಿರಿ; ಗೊಹೇಶ್ವರನೆಂಬ ಲಿಂಗ ನಿಮಗೆಲ್ಲಿಯದೋ?

೧೦೪

ಅಯ್ಯಾ, ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ನಿತ್ಯ ನಿರಂಜನ ಗುರು ಲಿಂಗ ಜಂಗಮ ಶಿವಶರಣರ ಸತ್ಯಸನ್ಮಾರ್ಗದ ಗೊತ್ತಿನ ಮರಿಯಾದೆ ಯನರಿಯದೆ, ಮರ್ತ್ಯದ ಜಡಜೀವಿ ಭವಿಪ್ರಾಣಿಗಳ ಹಾಗೆ ಗುಹ್ಯ ಲಂಪಟಕ್ಕಿಚ್ಛೈಸಿ, ದಾಸಿವೇಶಿಯರ ಕೂಡಿಕೊಂಡು ಭುಂಜಿಸಿ, ಷಟ್‌ಸ್ಥಲ ಬ್ರಹ್ಮಾನುಭಾವವ ಕೇಳಿ ಹೇಳುವ ಮೂಳಚುಕ್ಕೆಯರ ಕಂಡು ಎನ್ನ ಮನ ನಾಚಿತ್ತು ಕಾಣಾ! ಅವ್ವ ನೀಲಮ್ಮನ ಮೋಹದ ಮಗಳೇ, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿಯೇ, ನಿಃಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆಯೇ, ಚೆನ್ನಮಲ್ಲಿಕಾರ್ಜುನನರ್ಧಾಂಗಿಯೇ, ಚಿಕ್ಕಯ್ಯಪ್ರಿಯಸಿದ್ಧ ಲಿಂಗನೊಡಹುಟ್ಟಿದಳೇ ಕೇಳವ್ವ, ಇದು ಮರ್ತ್ಯದ ಜಡಜೀವಿ ಭ್ರಷ್ಟರ ಬಾಳುವೆ ಎಂದೆ.

೧೦೫

ಬಲ್ಲರೆ ಬಲ್ಲರೆಂಬೆನು, ಲಿಂಗಜಂಗಮ ಒಂದೇ ಎಂದು ತಿಳಿದು ನಡೆಯ ಬಲ್ಲರೆ. ಬಲ್ಲರೆ ಬಲ್ಲರೆಂಬೆನು ಅಂಗ ಲಿಂಗದ ಕೀಲವನರಿದು ಕೂಡಬಲ್ಲರೆ.

ಬಲ್ಲರೆ ಬಲ್ಲರೆಂಬೆನು,-ಜ್ಞಾನ ಸುಜ್ಞಾನದ ನೆಲೆಯನರಿಯಬಲ್ಲರೆ. ಬಲ್ಲರೆ ಬಲ್ಲರೆಂಬೆನು,-ನಿತ್ಯಾನಿತ್ಯವ ಬೇರ್ಪಡಿಸಿ ನಿಜವ ಹಿಡಿಯಬಲ್ಲರೆ. ಇಂತೀ ಬಲ್ಲವಿಕೆಯ ಬಗೆಯನರಿಯದೆ, ಸೊಲ್ಲುಸೊಲ್ಲಿಗೆ ಮುಚ್ಚರಿಸಿ ಕರಣಮಥನ ಕರ್ಕಶದಿಂದೆ ಹೋರುವವರು ಸಲ್ಲರೆಂಬೆನಯ್ಯ ನಿಜಪಥಕ್ಕೆ ಅಖಂಡೇಶ್ವರಾ.

೧೦೬

ಲೋಕದೊಳಗಿಪ್ಪರು ಲೋಕದಂತೆ ಲೋಕದೊಳಗೆ ಸುಳಿವರು, ಲೋಕದಂತೆ ಲೋಕದ ಹಾಗಿಪ್ಪರು. ಲೋಕದ ಹಂಗಿಗರು ಲಿಂಗದ ಸುದ್ದಿಯನಿವರೆತ್ತ ಬಲ್ಲರೋ? ಜಂಗಮದ ಸುದ್ದಿಯನಿವರೆತ್ತ ಬಲ್ಲರೋ? ಪ್ರಸಾದದ ಸುದ್ದಿಯ ತಾವೆತ್ತಬಲ್ಲರೋ? ಲಿಂಗಜಂಗಮದ ಪ್ರಸಾದವೆಂದು ಬರಿದೆ ಹೋರುವ ವಾಗ್ಭ್ರಮಿತರು ಈ ತ್ರಿವಿಧಕ್ಕೆ ವಿರಹಿತರೆಂಬೆ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೧೦೭

ಅಯ್ಯಾ, ಚಿದಂಗ ಚಿದ್ಘನಲಿಂಗ ಶಕ್ತಿ ಭಕ್ತಿ ಹಸ್ತ ಮುಖ ಪದಾರ್ಥ ಪ್ರಸಾದವೆಂಬಿವಾದಿಯಾದ ಸಮಸ್ತ ಸಕೀಲಂಗಳ ನೆಲೆ ಕಲೆಯನರಿಯದೆ, ಜಿಹ್ವಾಲಂಪಟಕ್ಕೆ ಆಹ್ವಾನಿಸಿ, ಗುಹ್ಯಾಲಂಪಟದಲ್ಲಿ ವಿಸರ್ಜಿಸಿ, ಸಕಲೇಂದ್ರಿಯಮುಖದಲ್ಲಿ ಮೋಹಿಯಾಗಿ, ಸದ್ಗುರುಕರುಣಾಮೃತರಸ ತಾನೆಂದರಿಯದೆ, ಬರಿದೆ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಗುರು ಚರ ಪರವೆಂದು ಬೊಗಳುವ ಕುನ್ನಿಗಳ ನೋಡಿ ಎನ್ನ ಮನ ಬೆರಗು ನಿಬ್ಬೆರಗು ಆಯಿತ್ತಯ್ಯ ಚೆನ್ನಮಲ್ಲಿಕಾರ್ಜುನಾ!

೪. ಶೀಲ

೧೦೮

ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ, ಸತ್ಯ ಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದೇ ಶೀಲ ಕಾಣಿ ಭೋ, ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೧೦೯

ಸಂಸಾರವ ಬಿಟ್ಟುದೇ ಆಚಾರವಯ್ಯಾ. ಕಾಯದಿಚ್ಛೆಗೆ ಕಂಡವರಿಗೆ ಕಾರ್ಪಣ್ಯಬಡದಿಪ್ಪುದೇ ಶೀಲ. ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ. ಮನ ಘನವನಗಲದಿಪ್ಪುದೆ ಭಕ್ತಿ. ಸಕಳೇಶ್ವರದೇವಾ, ನಿಮ್ಮನರಿದವನೆ ಶರಣ.

೧೧೦

ತನುವಿನಿಚ್ಛೆಗೆ ಶೀಲವ ಕಟ್ಟಿಕೊಂಬವರು ಲಕ್ಷೋಪಲಕ್ಷ ಉಂಟು. ಮನದಿಚ್ಛೆಗೆ ಶೀಲವ ಕಟ್ಟಿಕೊಂಬವರು ಅಪೂರ್ವ ನೋಡಾ. ತನುಮನವೆರಡು ಏಕವಾಗಿ, ಧನದಾಸೆಯಂ ಬಿಟ್ಟು, ಮನ ಮಹದಲ್ಲಿ ನಿಂದುದೆ ಶೀಲ ಸಂಬಂಧ. ಇನಿತಲ್ಲದ ದುಶ್ಶೀಲರ ಎನಗೊಮ್ಮೆ ತೋರದಿರು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೧

ಶೀಲ ಶೀಲವೆಂದು ಗರ್ವಿಸಿ ನುಡಿವುತಿಪ್ಪಿರಿ. ಶೀಲವಾವುದೆಂದರಿಯಿರಿ. ಕೇಳಿರಣ್ಣಾ! ಇದ್ದುದ ವಂಚನೆ ಮಾಡದಿರ್ಪುದೇ ಶೀಲ. ಇಲ್ಲದುದಕ್ಕೆ ಕಡನ ಮಾಡದಿರ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ. ಗುರುನಿಂದೆ ಹರನಿಂದೆ ಚರನಿಂದೆಯ ಕೇಳದಿರ್ಪುದೇ ಶೀಲ. ನಮ್ಮ ಕೂಡಲಚೆನ್ನಸಂಗನ ಶರಣರ ಬರವಿಂಗೆ ಮೆಯ್ಯಾಂತುದೆ ಅಚ್ಚಶೀಲ.

೧೧೨

ಶೀಲವಂತರು, ಶೀಲವಂತರು ಎಂದೇನೋ? ಶೀಲವಂತಿಕೆಯನಾರು ಬಲ್ಲರು? ಶೀಲವಾದರೆ ಶಿವನೊಳು ಬೆರೆವುದೆ ಶೀಲ. ಶೀಲವಾದರೆ ಗುರು ಲಿಂಗ ಜಂಗಮವ ತನ್ನೊಳಗರಿವುದೆ ಶೀಲ. ಅದಕ್ಕೆ ಮೀರಿದ ಶೀಲವಾದರೆ, ಹಸಿವು ತೃಷೆ ನಿದ್ರೆ ವಿಷಯವ ಕೆಡಿಸುವದೇ ಶೀಲ. ಅದಕ್ಕೆ ತುರಿಯಾತೀತ ಶೀಲವಾದರೆ, ಬಾಲನಾಗಿ ತನ್ನ ಲೀಲಾವಿನೋದವ ಭೂಮಿಯ ಮೇಲೆ ನಟಿಸುವದೇ ಶೀಲ. ಇದನರಿಯದೆ, ಶೀಲಶೀಲವೆಂದು ಮನೆಮನೆಗೆ ಶೀಲವಲ್ಲದೆ,

ತನ್ನತನಗೆ ಕಾಯಕೃತ್ಯವಲ್ಲದೆ, ಇದನರಿದು ಮಹಾ ಘನವನೆ ಮರೆದು, ಮನವನೆ ಬಳಲಿಸಿ, ಘನವ ಮಾಡಿ, ತನುವ ಹೊರೆದೆನೆಂಬ ಬಿನುಗರ ನುಡಿಯ ಮೆಚ್ಚುವನೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ?

೧೧೩

ಶೀಲ ಶೀಲವೆಂತೆಂಬಿರಯ್ಯ? ಶೀಲದ ನೆಲೆಯ ಬಲ್ಲರೆ ಹೇಳಿರೋ, ಅರಿಯದಿರ್ದಡೆ ಕೇಳಿರೋ. ಕಾಮ ಒಂದು ಭವಿ, ಕ್ರೋಧ ಎರಡನೆ ಭವಿ, ಲೋಭ ಮೂರನೆ ಭವಿ, ಮೋಹ ನಾಲ್ಕನೆ ಭವಿ, ಮದ ಐದನೆ ಭವಿ, ಮತ್ಸರ ಆರನೆ ಭವಿ, ಆಮಿಷ ಏಳನೆ ಭವಿ,—ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು ಲಿಂಗವಿಲ್ಲದವರ ಭವಿ ಭವಿ ಎಂಬರು. ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ, ಅಚ್ಚ ಪ್ರಸಾದಿ, ನಿಚ್ಚ ಪ್ರಸಾದಿ, ಸಮಯ ಪ್ರಸಾದಿಗಳೆಂದು ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ ಹಗಲುಗಳ್ಳರ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ?

೧೧೪

ನದಿಯ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆರೆವ ಶೀಲವಂತರು ಸುಯಿಧಾನಿಗಳಪ್ಪರೆ? ಮದುಮರಳಿಯ ಭವಿಪಾಕ ಪರಪಾಕವನೆ ಭುಂಜಿಸುವ ಉದರಪೋಷಕರೆಲ್ಲರು ಶೀಲವಂತರಪ್ಪರೆ? ಅಲ್ಲಲ್ಲವಯ್ಯಾ! ಮತ್ತೆಂತೆಂದೊಡೆ, ಅಶನವರತು ವ್ಯಸನ ಬೆಂದು ಹುಸಿ ಮಸಣಿಸಿ, ಮಹಾಲಿಂಗದ ವಿಷಯದೊಳಗೆ ತಲ್ಲೀಯವಾಗಿ ಸರ್ವಾಂಗವು ಸಮತೆಯಾಗಿರಬಲ್ಲಡೆ, ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಅವರಚ್ಚಶೀಲವಂತರೆಂಬೆನು. ಅವರೊಕ್ಕುದ ಕೊಂಡು ಸುಖಿಯಾಗಿಪ್ಪೆನಯ್ಯಾ.

೧೧೫

ಶೀಲ ಶೀಲ ಎಂದೊಡೇನೊ? ಮಾಡಿದ ಮನೆ, ಹೂಡಿದ ಒಲೆ, ಅಟ್ಟುಂಬ ಮಡಕೆ, ಕಟ್ಟಿದ ಕೆರೆ, ಬಿತ್ತಿದ ಬೆಳೆ,-ಇಂತಿವಕ್ಕೆ ಶೀಲವೆಲ್ಲಿಹುದೋ? ತನ್ನ ಮನಕ್ಕೆ ಶೀಲವಲ್ಲದೆ, ಶೀಲವಂತರೆಂತಾದಿರೊ? ಶೀಲವಂತರೆಂತೆಂದೊಡೆ, ಕೇಳಿರೋ. ಲಿಂಗವು ಬಂದು ಮನವನಿಂಬುಗೊಂಡುದೆ ಶೀಲ. ಜಂಗಮವು ಬಂದು ಧನವನಿಂಬುಗೊಂಡುದೆ ಶೀಲ. ಪ್ರಸಾದವು

ಬಂದು ತನುವನಿಂಬುಗೊಂಡುದೆ ಶೀಲ. ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆನಯ್ಯಾ. ಇಂತಿದನರಿಯದೆ ಉಳಿದ ದುಶ್ಶೀಲರನೆನಗೊಮ್ಮೆ ತೋರದಿರಯ್ಯಾ ಕೂಡಲಚೆನ್ನಸಂಗಮದೇವಾ.

೧೧೬

ನದಿಯ ಜಲ, ಕೂಪಜಲ, ತಟಾಕಜಲವೆಂದು, ಹಿರಿದು ಕಿರಿದಾದುದನರಿಯರು. ಬೇರೆ ಮತ್ತೊಂದು ಭಾಷೆ ವ್ರತ ನೇಮಂಗಳ ಹಿಡಿವ ಶೀಲ ಸಂಬಂಧಿಗಳು ಜಾತ್ಯಂಧಕರು ನಿಮ್ಮನೆತ್ತ ಬಲ್ಲರು ಗೊಹೇಶ್ವರಾ ?

೧೧೭

ಸುಖವನರಿಯದ ಹೆಣ್ಣು ಸೂಳೆಯಾದಳು. ಲಿಂಗವನರಿಯದಾತ ಶೀಲವಂತನಾದ. ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ. ಮಾಡಲಾಗದು ನೇಮವ, ನೋಡಲಾಗದು ಶೀಲವ. ಸತ್ಯಸಹಜವೇ ಸತ್‌ಶೀಲ ಗೊಹೇಶ್ವರನರಿಯಬಲ್ಲವಂಗೆ.

೫. ಜಪ ತಪ ವ್ರತ ನಿಯಮ ಉಪವಾಸ ಹೊಲ್ಲ

೧೧೮

ಕಣ್ಣು ಮುಚ್ಚಿ ಕನ್ನಡಿಯ ತೋರುವಂತೆ, ಇರುಳು ಹಗಲಿನ ನಿದ್ರೆ ಸಾಲದೆ, ಬೆರಳನೆಣಿಸಿ ಪರಮಾರ್ಥವ ಹಡೆವರೆ ಚೋದ್ಯವಲ್ಲವೆ ಹೇಳಾ? ಮೂಗ ಮುಚ್ಚಿ ಮುಕ್ತಿಯ ಬಯಸುವ ನಾಚಿಕೆಯಿಲ್ಲದವರ ನಾನೇನೆಂಬೆ ಕೂಡಲಸಂಗಮದೇವಾ ?

೧೧೯

ಮಣಿಯನೆಣಿಸಿ ಕಾಲವ ಕಳೆಯಬೇಡ. ಕಣಿಯ ಪೂಜಿಸಿ ಕಾಲವ ಕಳೆಯಬೇಡ. ಕ್ಷಣವಾದಡೆಯೂ ಆಗಲಿ, ನಿಜದ ನೆನಹೇ ಸಾಕು. ಕ್ಷಣಾರ್ಧವಾದಡೆಯೂ ಆಗಲಿ, ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ ಗೊಹೇಶ್ವರಾ ?

೧೨೦

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ? ಅಘೋರ ತಪವ ಮಾಡಿದೊಡೇನು? ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬು ವನಯ್ಯಾ ಕೂಡಲಸಂಗಮದೇವ?

೧೨೧

ಕಾಡ ಪತ್ರೆಯನಾ ಕೀಡಿ ತಿಂದಿರವೆ? ಉಡು ಏಕಾಂತನಿವಾಸಿಯೇ? ತೋಳ ದಿಗಂಬರಿಯೆ? ಎತ್ತು ಬ್ರಹ್ಮಚಾರಿಯೆ? ಬಾವುಲು ತಲೆಕೆಳಗಾಗಿ ರ್ದಡೆ ತಪಸಿಯೆ? ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಶರಣರು ಹೊರಹಂಚು ಒಳಬೊಳ್ಳೆ ; ಒಲ್ಲರು ಲಿಂಗೈಕ್ಯರು.

೧೨೨

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!! ತನುವುದ್ದೇಶ, ಮನ ಉದ್ದೇಶವಾಗಿ ಮಾಡುವ ನೇಮ ಸಲ್ಲವು! ಸಲ್ಲವು!! ಕೂಡಲಸಂಗಮ ದೇವಯ್ಯಾ, ಇವು ನಿಮ್ಮ ನಿಜದೊಳಗೆ ನಿಲ್ಲವು! ನಿಲ್ಲವು!!

೧೨೩

ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ. ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ. ಅಗ್ಘಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ. ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ. ಇವು ಷಟ್ಸ್ಥಲಕ್ಕೆ ಹೊರಗು. ಭಕ್ತಿನಿಷ್ಠೆಯಿಲ್ಲದವರ ಕಂಡಡೆ ಮೆಚ್ಚ ಗೊಹೇಶ್ವರ.

೧೨೪

ಮನವರೋಚಕವಾದಲ್ಲಿ ಲವಣವಾದಿಯಾಗಿ ಪರಪಾಕ ಮುಂತಾದ ರಸದ್ರವ್ಯವನೊಲ್ಲದಿಪ್ಪುದು ವ್ರತವೇ? ಅಲ್ಲ,—ಅದು ಸೌಕರ್ಯವಲ್ಲದೆ. ಅದೆಂತೆಂದಡೆ, ಪರದ್ರವ್ಯ ಪರಸತಿ ಹುಸಿ ಕೊಲೆ ಕಳವು ಅತಿಕಾಂಕ್ಷೆಯಂ ಬಿಟ್ಟು, ಬಂದುದನಿದ್ದಂತೆ ಕೊಂಡು, ಬಾರದುದಕ್ಕೆಕಾಂಕ್ಷೆಯ ಮಾಡದಿಪ್ಪುದೇ ಅರುವತ್ತುನಾಲ್ಕು ಶೀಲ, ಐವತ್ತಾರು ವ್ರತ, ಮೂವತ್ತೆರಡು ನೇಮ ಸಂದಿತ್ತು. ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗದಲ್ಲಿ ಸರ್ವನೇಮ ಸ್ವಯಂ ಭುವಾಯಿತ್ತು.

೧೨೫

ಹಾಲ ನೇಮ, ಹಾಲ ಕೆನೆಯ ನೇಮ; ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ; ಬೆಣ್ಣೆಯ ನೇಮ, ಬೆಲ್ಲದ ನೇಮ! ಅಂಬಲಿಯ ನೇಮದವರನಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮದಾಮಾದಾರಚೆನ್ನಯ್ಯ.

೧೨೬

ಬಂದುದ ಕೈಕೊಳ್ಳಬಲ್ಲರೆ ನೇಮ, ಇದ್ದುದ ವಂಚನೆ ಮಾಡದಿದ್ದರೆ ಅದು ನೇಮ; ನಡೆದು ತಪ್ಪದಿದ್ದರೆ ನೇಮ, ನುಡಿದು ಹುಸಿಯದಿದ್ದರೆ ನೇಮ. ನಮ್ಮ ಕೂಡಲಸಂಗನ ಶರಣರು ಬಂದರೆ ಒಡೆಯರಿಗೊಡವೆಯ ನೊಪ್ಪಿಸುವುದೇ ನೇಮ.

೧೨೭

ಬಾಹ್ಯವ್ರತ ಭ್ರಮೆ ಅಹುದಲ್ಲವೆಂಬ ಸಂದೇಹ ಸಂಕಲ್ಪ—ಇಂತೀ ಸೀಮೆಯೊಳಗಾದವ ಅರುವತ್ತುನಾಲ್ಕು ಶೀಲವನರಿದಡೇನು? ಪರವಧುವಿಂಗೆ ಪಲ್ಲಟಿಸದೆ, ಪರಧನಕ್ಕೆ ಕೈದುಡುಕದೆ, ಅನರ್ಪಿತಕ್ಕೆ ಮನ ಮುಟ್ಟದೆ, ತಾ ಕೊಂಡ ಸೀಮೆಯಲ್ಲಿ ಭಾವಭ್ರಮೆ ಇಲ್ಲದೆ, ಮನ ವಚನ ಕಾಯದಲ್ಲಿ ಕೊಂಡ ವ್ರತಕ್ಕೆ ಉಭಯದೋರದೆ ನಿಂದುದು ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗಕ್ಕೆ ಸಂದುದು.

೧೨೮

ಸೋಮವಾರ ಉಪವಾಸವಿದ್ದು ಶಿವಂಗೆ ಅರ್ಪಿತವೆಂಬರು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಳಿದು, ಗ್ರಾಮದ ಅನ್ಯ ಹೊಲ್ಲ ದೈವವನಾರಾಧಿಸಿ, ಅವಕಿಕ್ಕಿ, ಮಿಕ್ಕ ಕೂಳ ಸೋಮಧರಂಗೆ ಅರ್ಪಿತವೆಂಬರು. ಅದೆಂತೆಂದರೆ, ಗ್ರಾಮದ ಶುನಕ ಗಂಗೆಯನೀಸಾಡಹೋಗಿ ಶುದ್ಧವಾಗಬಲ್ಲುದೇ? ಆ ಶುನಕದ ಮುಖವ ನೋಡಲಾಗದೆಂದಾತ ನಮ್ಮ ಕಲಿದೇವರದೇವಯ್ಯನು.

೧೨೯

ಬಹುಜಲಮಂ ಬಿಟ್ಟು ಚಿಲುಮೆಯ ತೆಗೆದರೆ, ಅದು ನೆಲಶುದ್ಧ ಸೌಕರ್ಯವಲ್ಲದೆ ಅವು ಶೀಲವಲ್ಲ. ಉಪ್ಪ ಬಿಟ್ಟು ಸಪ್ಪೆಯನುಂಡರೆ, ಅದು ಮನದ ಹೇಸಿಕೆಯಲ್ಲದೆ ದೃಢವ್ರತವಲ್ಲ. ವ್ರತ ನಿಶ್ಚಯವಾದರೆ ಪರಸ್ತ್ರೀ ಪರಧನ ಪರದೂಷಣೆಯನರಿತು ಬಿಟ್ಟರೆ, ಅರುವತ್ತಾರು ವ್ರತಗಳಿಗೆ ಕಡೆ ಎಂದೆ ಕಲಿದೇವರದೇವಾ.

೧೩೦

ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ ಲಿಂಗಭಕ್ತಂಗೆಂತು ಸರಿಯೆಂಬೆನಯ್ಯ? ದಿನ ಶ್ರೇಷ್ಠವೊ? ಲಿಂಗಶ್ರೇಷ್ಠವೊ? ದಿನ ಶ್ರೇಷ್ಠವೆಂದು ಮಾಡುವ ದುರಾಚಾರಿಯ ಮುಖವ ನೋಡಲಾಗದು. ಆ ದಿನವೆ ಘನವೆಂದು ದಿನವೆ ದೈವವೆಂದು ಮಾಡುವನಾಗಿ ಆತ ದಿನದ ಭಕ್ತನು. ಲಿಂಗಭಕ್ತನು ಲಿಂಗವೆ ಘನವೆಂದು, ಲಿಂಗ ದೈವವೆಂದು ಮಾಡುವನಾಗಿ, ಆತ ಲಿಂಗಭಕ್ತನು. ಅಂತಾ ದಿನದ ಭಕ್ತಂಗೆಯೂ ಲಿಂಗ ಭಕ್ತಂಗೆಯೂ ಸಮವೆಂದೊಡೆ ಪಂಚ ಮಹಾಪಾತಕ ತಪ್ಪದು. ಅದೆಂತೆಂದೊಡೆ:

ಸೌಮೇ ಭೌಮೇ ವ್ಯತೀಪಾತೇ ಸಂಕ್ರಾಂತಿ ಶಿವರಾತ್ರಯೋಃ
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಮ್

ಎಂದುದಾಗಿ. ಇದು ಕಾರಣ, ದಿನವಾರಂಗಳು ಶ್ರೇಷ್ಠವೆಂದು ಏಕಭುಕ್ತೋಪವಾಸಂಗಳ ಮಾಡುವ ಭಕ್ತಂಗೆ ಕುಂಭೀಪಾಕ ನಾಯಕನರಕ ತಪ್ಪದು ಕೂಡಲಸಂಗಮದೇವಾ.

೧೩೧

ನೇಮಸ್ತನೆಂಬುವ ಕ್ರೂರಕರ್ಮಿ. ಶೀಲವಂತನೆಂಬುವ ಸಂದೇಹಿ. ಭಾಷೆವಂತನೆಂಬುವ ಬ್ರಹ್ಮೇತಿಕಾರ. ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು. ಇವರು ಹೋದ ಬಟ್ಟೆಯ ಹೋಗಲಾಗದು. ಇವರು ಮೂವರಿಗು ಗುರುವಿಲ್ಲ, ಲಿಂಗವಿಲ್ಲೆಂದಾತನಂಬಿಗಚೌಡಯ್ಯ.

೧೩೨

ಪ್ರಾಣ ಲಿಂಗ ಸಂಬಂಧಿಯಾದ ಲಿಂಗವಂತನು ಏಕಭುಕ್ತ ಉಪವಾಸಂಗಳನ್ನು ಮಾಡಲಾಗದು. ಅದೇನು ಕಾರಣವೆಂದಡೆ, ದೇವರಾರೋಗಣೆ ತಪ್ಪುವದಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳು ತಪ್ಪುವದಾಗಿ. ತನಗೆ ಮುಂದೆ ಪ್ರಸಾದವಿಲ್ಲವಾಗಿ, ಮುಕ್ತಿ ಇಲ್ಲ. ದೋಷಕಾರಿಯಪ್ಪನು ಕೇಳಿರಣ್ಣಾ. ಅದೆಂತೆಂದಡೆ,

ಶ್ಲೋ. ಪ್ರಾಣಲಿಂಗ ಸಮಾಯುಕ್ತಸ್ಯೈಕಭುಕ್ತೋಪವಾಸಿನಃ
ಪ್ರಸಾದಂ ನಿಷ್ಫಲಂ ಚೈವ ರೌರವಂ ನರಕಂ ವ್ರಜೇತ್

ಎಂದುದಾಗಿ. ಇದು ಕಾರಣ, ನಿತ್ಯ ನೈಮಿತ್ತಿಕ ಪಂಚಪರ್ವತಿಥಿಗಳಲ್ಲಿ ಆವ ದಿನದಲ್ಲಿಯೂ ಎಂದೆಂದೂ ಅಷ್ಟವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ. ದೇವರಾರೋಗಣೆಯಂ ಮಾಡಿಸಿ, ಪ್ರಸನ್ನತ್ವಮಂ ಪಡೆದು, ಪ್ರಸಾದವಂ ಧರಿಸಿ ಮುಕ್ತರಪ್ಪುದಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೬. ತೀರ್ಥ ಕ್ಷೇತ್ರ ವಾರ ತಿಥಿಯೆಂದಿಲ್ಲ

೧೩೩

ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ! ಬತ್ತುವ ಜಲವನೊಣಗುವ ಮರನ ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

೧೩೪

ಜಂಬುದ್ವೀಪವನೆಲ್ಲ ತಿರುಗಿದಡೇನು? ಜಂಬುಕ ಶಂಭುಧ್ಯಾನದಲ್ಲಿ ನೈವೆರಗಪ್ಪುದೇ? ಕುಂಭಿನಿಯ ತಿರುಗಿ, ಕೋಟಿ ತೀರ್ಥವ ಮಿಂದಡೇನು? ಶಂಭು, ನಿಮ್ಮಲ್ಲಿ ಸ್ವಯವಾಗದವನು ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ ರಾಮನಾಥಾ?

೧೩೫

ತೀರ್ಥಯಾತ್ರೆಯಲ್ಲಿ ಕಂಡೆಹೆನೆಂದೈದಿ ಹೋಹ ಪರಿಯ ನೋಡಾ ಅಯ್ಯಾ! ಮನೆಗೆ ಬಂದ ಜಂಗಮಕ್ಕೆ ಇಲ್ಲ ಎಂದು, ಜಗ ಜಾತ್ರೆಯಲ್ಲಿ ಅನ್ನವ ನಿಕ್ಕಿದರೆ ಪುಣ್ಯವೆಂಬಣ್ಣಗಳಿಗೇಕೆ ಸದಾಚಾರ ಉರಿಲಿಂಗತಂದೆ?

೧೩೬

ತೀರ್ಥ ಯಾತ್ರೆ ಲಿಂಗದರುಶನಕ್ಕೆ ಹೋಗಿ, ಕರ್ಮವ ಹಿಂಗಿಸಿ ಕೊಂಡೆನೆಂಬ ಭಂಗಿತರ ಮಾತ ಕೇಳಲಾಗದು. ಅದೇನು ಕಾರಣವೆಂದರೆ, ತೀರ್ಥವಾವುದು, ಯಾತ್ರೆಯಾವುದು ಬಲ್ಲರೆ ನೀವು ಹೇಳಿರೆ. ಮಹಾಘನ ಗುರುಪಾದತೀರ್ಥದಿಂದ ವೆಗ್ಗಳ ತೀರ್ಥ ಉಂಟೆ? ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ? ಇಂಗಿತವನರಿದ ಬಳಿಕ ತನ್ನ ಅಂಗದ ಮೇಲಿರ್ಪ ಲಿಂಗವಲ್ಲದೆ ಬೇರೆ ಲಿಂಗ ಉಂಟೆ? ಇದನರಿಯದೆ ಇನ್ನು ತೀರ್ಥಯಾತ್ರೆ ಲಿಂಗದರುಶನ ಉಂಟೆಂಬ ಅಂಗಹೀನರ ಮುಖವ ನೋಡ ಲಾಗದು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೩೭

ಆದಿ ಅನಾದಿ ಸುರಾಳ ನಿರಾಳ ಶೂನ್ಯ ನಿಃಶೂನ್ಯದಿಂದತ್ತತ್ತಲಾದ ಘನಮಹಾಲಿಂಗವೆಂಬ ಪರಬ್ರಹ್ಮವು ಗುರುಕರುಣದಿ ಬಹಿಷ್ಕರಿಸಿ ಕರ ಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು, ಆ ಲಿಂಗದಲ್ಲಿ ಕೃಷ್ಣಾ ಭಾಗೀರಥಿ ಮೊದ ಲಾದ ಅನೇಕ ತೀರ್ಥಂಗಳು, ಕಾಶಿ ರಾಮೇಶ್ವರ ಮೊದಲಾದ ಅನೇಕ ಕ್ಷೇತ್ರಂಗಳು, ಹಿಮಾಚಲ ಶ್ರೀಶೈಲಪರ್ವತ ಮೊದಲಾದ ಅನೇಕ ಪುಣ್ಯ ಶೈಲಂಗಳುಂಟೆಂದು ತನ್ನ ಸ್ವಾನುಭಾವ ಮೂಲಜ್ಞಾನದಿಂ ತಿಳಿದು, ಸಕಲ ಸಂಶಯಮಂ ಬಿಟ್ಟು, ನಿಶ್ಚಿಂತನಾಗಿ, ಮನವ ಮಹಾಘನದಲ್ಲಿರಿಸಿ ಇರ ಬಲ್ಲಡೆ, ಆತನೇ ಅನಾದಿ ಸದ್ವೀರಮಾಹೇಶ್ವರನ ಭಕ್ತನು ನೋಡಾ, ಕಾಡಿ ನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯಪ್ರಭುವೇ.

೧೩೮

ಅಚ್ಚಶಿವೈಕ್ಯಂಗೆ ಹೊತ್ತಾರೆ, ಅಮಾವಾಸ್ಯೆ, ಮಟ್ಟಮಧ್ಯಾಹ್ನ, ಸಂಕ್ರಾಂತಿ ಮತ್ತೆ ಅಸ್ತಮಾನ ಪೌರ್ಣಿಮೆ ಎಂಬುವಿಲ್ಲ. ಭಕ್ತನ ಮನೆ ಯಂಗಣವೇ ವಾರಣಾಸಿ ಕಾಣಾ ರಾಮನಾಥಾ.

೭. ಗುಡಿಯ ಲಿಂಗ ಕೆರೆ ದೇಗುಲವೇಕೆ ?

೧೩೯

ಅಂಗದ ಮೇಲೆ ಲಿಂಗದೇವನಿರ್ದಂತೆ ಇತರ ಸ್ಥಾವರಲಿಂಗಕ್ಕೆ ಹೋಗಿ ಹೋಗಿ, ದೇವರ ಕಂಡೆನೆಂದು ಅರಿವುತಿಪ್ಪ ಸಲೆ ಮನುಜರುಗಳಿಗೆ ಉಪದೇಶವ ಮಾಡುವ ಗುರುವಿಂಗೆ ಪುಣ್ಯದ ಬಟ್ಟೆಯ ಕೊಡ ಉರಿಲಿಂಗ ತಂದೆ.

೧೪೦

ತುತ್ತಿನಾಸೆಗೆ ಲಿಂಗವ ಕೊಟ್ಟು ಹೋಗುವ ವ್ಯರ್ಥ ಮೂಳ ನಿನಗೆ ಗುರುವಾದನಲ್ಲದೆ, ಸತ್ಯಸದಾಚಾರ ವ ಬಲ್ಲಡೆ, ತತ್ವಜ್ಞಾನವ ಬೋಧಿಸಿ, ಲಿಂಗಕ್ಕೂ ನಿನಗೂ ಸಂಬಂಧ ಮಾಡದಿಹ ಕತ್ತೆಗುರುವಿನ ಪಾದ ಹಿಡಿದಿಹೆಯಾಗಿ, ಸ್ವಯಲಿಂಗವೇ ನಿನಗೆ ಕಿರಿದಾಯಿತ್ತು; ಕ್ಷೇತ್ರಲಿಂಗವೇ ನಿನಗೆ ಹಿರಿದಾಯಿತ್ತು. ಕಂಕಣಪತಿ ಲಿಂಗವ ಕಿರಿದು ಮಾಡಿ, ಕೊಂಕಣಪತಿ ಲಿಂಗವ ಹಿರಿದು ಮಾಡುವೆ. ಮುಕ್ಕಣ್ಣಲಿಂಗವನು ನಮ್ಮ ಕೈಯಲ್ಲಿ ಕೊಡಲಾರದಿರ್ದೊಡೆ, ಈ ಹರಿಗೋಲ ಹೊರಲಾರದೆ, ಭೋಂಕನೆ ಮುಳುಗುವದೆಂದಾತ ಅಂಬಿಗರ ಚೌಡಯ್ಯನು.

೧೪೧

ತನ್ನ ಲಿಂಗವ ಬಿಟ್ಟು ಅನ್ಯಲಿಂಗಕ್ಕೆ ಶರಣೆಂಬ ಕುನ್ನಿಗಳನೇನೆಂಬೆನಯ್ಯಾ ಕಲಿದೇವರದೇವಾ.

೧೪೨

ಒಟ್ಟಿದ್ದ ಮಣ್ಣಿಗೂ, ನೆಟ್ಟಿದ್ದ ಕಲ್ಲಿಗೂ ಕಟ್ಟಿದ್ದ ಲಿಂಗವಡಿಯಾಗಿ ಬೀಳುವ ಲೊಟ್ಟೆಗುಡಿಹಿಗಳನೇನೆಂಬೆನಯ್ಯಾ ಕಲಿದೇವರದೇವಾ ?

೧೪೩

ಉಡಿಯ ಲಿಂಗವ ಬಿಟ್ಟು, ಗುಡಿಯ ಲಿಂಗಕ್ಕೆ ಶರಣೆಂಬ ಗುಡಿಹಿಗಳನೇನೆಂಬೆನಯ್ಯಾ ಕಲಿದೇವರದೇವಾ ?

೧೪೪

ಬಯಸುವ ಬಯಕೆ ನೀನಾದ ಪರಿಯೆಂತು ಹೇಳಾ? ಅರಸುವ ಅರಕೆ ನೀನಾದ ಪರಿಯೆಂತು ಹೇಳಾ? ಕಾಯವೆ ಲಿಂಗ, ಪ್ರಾಣವೆ ಶರಣನಾದ ಶರಣಂಗೆ ಬೇರೆ ದೇವಾಲಯವ ಮಾಡಿಸಲೇಕೆ ಹೇಳಾ? ಗೊಹೇಶ್ವರಲಿಂಗವು ಸಾಧ್ಯವಾಯಿತ್ತೆಂಬುದ ಮಾತಿನಲ್ಲಿ ಕಂಡೆವಲ್ಲದೆ ಕಾರ್ಯದಲ್ಲಿ ಕಾಣೆ ನೋಡಾ ಸಿದ್ಧರಾಮಯ್ಯಾ.

೧೪೫

ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದಡೆ ಆನು ಬೆರಗಾದೆನಯ್ಯ! ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ ಭೋಗವ ಮಾಡುವರ ಕಂಡು ನಾನು ಬೆರಗಾದೆನು! ಗೊಹೇಶ್ವರ, ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು.

೧೪೬

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ? ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ ಗೊಹೇಶ್ವರಾ.

೧೪೭

ಕೆರೆದೇಗುಲಂಗಳೆಲ್ಲವೂ ಹಿಂದಣ ಅಡಿವಜ್ಜೆಗೆ ರೂಪು, ಕರ್ಮಕಾಂಡ ಯೋಗಂಗಳೆಲ್ಲವೂ ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದನಳಿದು ಗೊಹೇಶ್ವರಲಿಂಗದಲ್ಲಿ ಸಲೆ ಸಂದಿರಬೇಕು ಸಿದ್ಧರಾಮಯ್ಯಾ.

೧೪೮

ಅನ್ನವನಿಕ್ಕಿ ನನ್ನಿಯ ನುಡಿದು, ಅರವಂಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ, ಶಿವನ ನಿಜವು ಸಾಧ್ಯವಾಗದು. ಗೊಹೇಶ್ವರನನರಿದ ಶರಣಂಗೆ ಆವ ಫಲವೂ ಇಲ್ಲ.

೮. ಯಥಾ ಸ್ವೇಚ್ಛೆ

೧೪೯

ಪೃಥ್ವಿಯನತಿಗಳೆದ ಸ್ಥಾವರಂಗಳಿಲ್ಲ. ಅಪ್ಪುವನತಿಗಳೆದ ತೀರ್ಥ ಯಾತ್ರೆಗಳಿಲ್ಲ. ಅಗ್ನಿಯನತಿಗಳೆದ ಹೋಮ ಸಮಾಧಿಗಳಿಲ್ಲ. ವಾಯುವನತಿ ಗಳೆದ ನೇಮನಿತ್ಯಂಗಳಿಲ್ಲ. ಆಕಾಶವನತಿಗಳೆದ ಧ್ಯಾನಮೌನಂಗಳಿಲ್ಲ. ಗೊಹೇಶ್ವರನೆಂದರಿದಂಗೆ ಇನ್ನಾವಂಗವೂ ಇಲ್ಲ.

೧೫೦

ಧ್ಯಾನ ಸೂತಕ, ಮೌನ ಸೂತಕ, ಜಪ ಸೂತಕ, ಅನುಷ್ಠಾನ ಸೂತಕ! ಗೊಹೇಶ್ವರನೆಂಬ ಲಿಂಗವನರಿದ ಬಳಿಕ, ಸೂತಕ ಹಿಂಗಿತ್ತು. ಯಥಾ ಸ್ವೇಚ್ಛೆ.

೧೪

ಸಾವಧಾನ

೧. ಅರ್ಪಣ

೧

ಅನ್ನವನಿಕ್ಕಿದರೇನು? ಹೊನ್ನ ಕೊಟ್ಟರೇನು? ಹೆಣ್ಣು ಕೊಟ್ಟರೇನು ಮಣ್ಣು ಕೊಟ್ಟರೇನು? ಪುಣ್ಯ ಉಂಟೆಂಬರು. ಅವರಿಂದಾದೊಡವೆ ಏನು ಅವರೀವುದಕ್ಕೆ? ಇದಕ್ಕೆ ಪುಣ್ಯವಾವುದು, ಪಾಪವಾವುದು? ನದಿಯ ಉದಕವ ನದಿಗೆ ಅರ್ಪಿಸಿ, ತನತನಗೆ ಪುಣ್ಯ ಉಂಟೆಂಬ ಬಡಹಾರುವರಂತೆ ಸದಮಳ ಶಾಶ್ವತ ಮಹಾಘನಲಿಂಗವನರಿಯದೆ, ಇವೇನ ಮಾಡಿದರು ಕಡೆಗೆ ನಿಷ್ಫಲವೆಂದಾತ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೨

ಲಿಂಗವನರಿವಡೆ ಮನವೆ ನಿಚ್ಚಣಿಕೆ. ಜಂಗಮವನರಿವಡೆ ಧನವೆ ನಿಚ್ಚಣಿಕೆ. ಪ್ರಸಾದವನರಿವಡೆ ತನುವೆ ನಿಚ್ಚಣಿಕೆ. ಈ ತ್ರಿವಿಧವನರಿವಡೆ ತ್ರಿವಿಧ ನಿಚ್ಚಣಿಕೆ. ಇದು ಕಾರಣ, ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣರಿಗಲ್ಲದೆ ತ್ರಿವಿಧಸಂಪತ್ತಿಲ್ಲ.

೩

ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ? ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ? ಕೂಡಲಸಂಗನ ಶರಣರು ಕಾಯವ ನೆವದಿಂದ ಅರ್ಪಿಸುವ ಬೆಡಗ ನಾನೇನೆಂಬೆನಯ್ಯಾ?

೪

ಕಾಯವೆ ಲಿಂಗಾರ್ಪಿತ, ಅರ್ಪಿತವೆ ಪ್ರಸಾದ. ಅದೆ ಮತ್ತೆ ಮತ್ತೆ ಅರ್ಪಿತ ದರುಶನದಿಂದಲಾಯಿತ್ತು, ಸ್ಪರ್ಶನದಿಂದಲಾಯಿತ್ತು. ಅರ್ಪಿಸುವ ಸೋಂಕುಸಂಬಂಧದ ಸುಖವನರ್ಪಿಸಲರಿಯದೆ, ಬರಿದೆ ವಾಗದ್ವೈತವ ನುಡಿವ ಕುಶಬ್ದದವರು ವಾಗ್ರಾಭ್ಯಂತರುಗಳೆನಿಸುವರಯ್ಯಾ ಕೂಡಲಚೆನ್ನ ಸಂಗಮದೇವಾ.

೫

ಒಮ್ಮೆಯಲ್ಲದೆ ಇಮ್ಮೆಯುಂಟೆ ಪೂಜೆ? ಒಮ್ಮೆಯಲ್ಲದೆ ಇಮ್ಮೆಯುಂಟೆ ಅರ್ಪಿತ? ಒಮ್ಮೆಯಲ್ಲದೆ ಇಮ್ಮೆಯುಂಟೆ ಪ್ರಸಾದ? ತನುವರ್ಪಿತವಾದ ಬಳಿಕ, ಮರಳಿ ಮರಳಿ ಅರ್ಪಿತ ಉಂಟೆ ಅಯ್ಯಾ ಕೂಡಲಚೆನ್ನಸಂಗಮದೇವಾ?

೬

ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ; ಆದಿಶಕ್ತಿಯ ಮಗ ವಿಷ್ಣು; ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ. ಎನ್ನ ಮನದೊಡೆಯ ಮಹಾದೇವಾ, ನಿಮ್ಮ ಮನವ ನಿಮಗೊಪ್ಪಿಸಿ ನಾ ಶುದ್ಧ ಕಾಣಾ ಕೂಡಲಸಂಗಮದೇವಾ.

೭

ಸರ್ವಸುಯಿಧಾನಿ ಎಂದೆನಿಸಿಕೊಳಬಲ್ಲಡೆ, ಬಂದ ಕಾಮ ಕ್ರೋಧವ ಲಿಂಗಾರ್ಪಿತವ ಮಾಡಬೇಕು. ಅಲಗಿನ ಕೊನೆಯ ಮೊನೆಯ ಮೇಲಣ ಸಿಂಹಾಸನ ಹೊರಳಿ ಹೋಗಬಾರದು. ಶಿವಾಚಾರದ ಧಾರೆ ಮೇರೆ ಮುಟ್ಟದ ಮುನ್ನ ಅರ್ಪಿತವ ಮಾಡಬಲ್ಲಡೆ ಭಿನ್ನಭಾವವೆಲ್ಲಿಯದೋ ಗುಹೇಶ್ವರಾ?

೮

ಮಾಸಲು ಸೂಸಲಾಗಿ, ದೋಸೆ ಕಡುಬ ಹೊಯ್ದು, ಹಬ್ಬವ ಮಾಡಿಹೆನೆಂಬ ಹೇಸಿಗಳ ಮಾತ ಕೇಳಲಾಗದು. ಅದೇಕೆ ಎಂದರೆ, ಲಿಂಗಜಂಗಮದ ಬಾಸೆಗೆ ಸಲ್ಲದಾಗಿ. ಇನ್ನು ಮಾಸಲಾವುದೆಂದರೆ, ಬಾಸೆಗೇರಿಸಿದ ತನುವೆ ಅಡ್ಡಣಿಗೆ, ಘನವೇ ಪರಿವಾಣ, ಮನ ಮಾಸಲೋಗರ. ಈ ಅನುವನರಿದು, ಮಹಾಲಿಂಗಕ್ಕೆ ಅರ್ಪಿತವ ಮಾಡುವನೆ ಸದ್ಭಕ್ತನು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೯

ಮನಯುಕ್ತಿ ವಿವೇಕವೆಂಬಕ್ಕಿಯನು ಗುಪ್ತವೆಂಬೊರಳೊಳಗಿಕ್ಕಿ, ಅಭಿನ್ನಮಥನವೆಂಬ ಒನಕೆಯಲ್ಲಿ ತಳಿಸಿ, ಕಲ್ಮಷವೆಂಬ ತೌಡು ಹಾರಿಸಿ,

ಸಮತೆಯೆಂಬ ಸಲಿಲದಲ್ಲಿ ಜಾಳಿಸಿ, ಅಳುಪೆಂಬ ಹರಳ ಕಳೆದು, ದಯಾಮೃತವೆಂಬ ಹಾಲಿನಲ್ಲಿ ಬೋನವುಂ ಮಾಡಿ, ಸಮರಸ ರುಚಿಕರವೆಂಬ ಶಾಕಪಾಕಂಗಳಂ ಮಾಡಿ, ನೆನಹಿನ ಅವಲಂಬವೇ ಅಭಿಷೇಕವಾಗಿ, ನಿರ್ಮಲವೆಂಬ ಶಿವದಾನವನಳವಡಿಸಿ ಕಾದಿದ್ದರಯ್ಯಾ ಪಂಚೇಂದ್ರಿಯವೆಂಬ ಶುನಕ ಮುಟ್ಟದಂತೆ; ಕಾದಿದ್ದರಯ್ಯಾ ಷಡುವರ್ಗವೆಂಬ ತೊತ್ತಿರು ಮುಟ್ಟದಂತೆ; ಕಾದಿದ್ದರಯ್ಯಾ ಅಷ್ಟವರ್ಗವೆಂಬ ಮಕ್ಕಳು ಮುಟ್ಟದಂತೆ. ಇನಿತು ಹೀನಂಗಳಿವಾವು ಮುಟ್ಟದಂತೆ ಕಾದಿದ್ದರಾಗಿ, ಈ ಬೋನ ಗೊಹೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು ಕಾಣಾ ಚೆನ್ನಬಸವಣ್ಣಾ.

೧೦

ಲಿಂಗಕ್ಕೆಂದೆ ನೆನೆವೆ, ಲಿಂಗಕ್ಕೆಂದೆ ಮಾಡುವೆ, ಲಿಂಗಕ್ಕೆಂದೆ ಕೊಡುವೆ ನಾನಯ್ಯಾ. ಸಕಲಪದಾರ್ಥಂಗಳ ಲಿಂಗಕ್ಕೆಂದೆ ಭಾವಿಸುವೆ. ಅಂಗಗುಣಂಗಳನರಿಯೆನಯ್ಯಾ. ಲಿಂಗಕ್ಕೆಂದೆ ಕಾಮಿಸುವೆನು ನಿಃಕಾಮಿಯಾಗಿ. ಎನ್ನ ದೇಹೇಂದ್ರಿಯ ಮನಃಪ್ರಾಣಾದಿಗಳು ಲಿಂಗದ ಸತಿಯರಾಗಿ, ಲಿಂಗಕ್ಕೆಂದೆ ಬಯಸಿ ಲಿಂಗಪ್ರಾಣಿಗಳಾದ ಕಾರಣ ಲಿಂಗಕ್ಕೆಂದೆ ಕೈಕೊಂಡೆನು. ಅನರ್ಪಿತವನರಿಯೆ ಕೂಡಲಸಂಗಮದೇವಾ.

೧೧

ಪದಾರ್ಥ ಪದಾರ್ಥವೆಂದೆಂಬಿರಿ. ಪದವಾವುದು, ಅರ್ಥವಾವುದು ಎಂದರಿಯಿರಿ. ಪದವೆ ಲಿಂಗ, ಅರ್ಥವೆ ಭಕ್ತ. ಇದನರಿದು ಪದಾರ್ಥವೆಂದು ತಂದು ಅರ್ಪಿತವ ಮಾಡಬಲ್ಲಡೆ, ಕೂಡಿಪ್ಪನಯ್ಯಾ ನಮ್ಮ ಕೂಡಲಚೆನ್ನಸಂಗಮದೇವ.

೧೨

ನೀ ನಾನೆಂಬ ಭಾವವಾರಿಂದಾಯಿತ್ತು ಹೇಳಾ? ನೀನೆಂಬುದೇ ಅಜ್ಞಾನ, ನಾನೆಂಬುದೇ ಮಾಯಾಧೀನ. ನೀನೆನ್ನದೆ ನಾನೆನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ, ಆ ಸುಖವು ನಿಮಗರ್ಪಿತ ಕಾಣಾ ಗೊಹೇಶ್ವರಾ.

೧೩

ಅನ್ಯರಜವ ಸೋಂಕದೆ, ತನ್ನ ರಜವ ಬಾಧಿಸದೆ, ರವಿಯ ಬೆಳಸ ಬಳಸದೆ, ಲಿಂಗದ ಬೆಳಸ ತಂದು ಜಂಗಮದಲ್ಲಿ ಸವೆಸುತ್ತಿಪ್ಪ ಲಿಂಗಭಕ್ತ. ಆ ಭಕ್ತನಲ್ಲಿ ಗೊಹೇಶ್ವರಲಿಂಗವಿಪ್ಪನು.

೧೪

ಇಪ್ಪತ್ತೊಂದು ಯುಗದವರೆಲ್ಲರು ಲಿಂಗವ ಪೂಜಿಸಿ, ದೃಷ್ಟವಾವುದು ನಷ್ಟವಾವುದೆಂದರಿಯದೆ, ಭಾವಭ್ರಮಿತರಾದರು; ಜೀವಸಂಕಲ್ಪಿತರಾದರು. ಜೀವನಾಹುತಿಯನೆ ಲಿಂಗಾರ್ಪಿತವೆಂಬುವರು,–ಭವದ ಬಳ್ಳಿಯ ಹರಿಯ ಲರಿಯರಾಗಿ. ಇಂತಹರೆ ಭಕ್ತರು? ಇಂತಹರೆ ಪ್ರಸಾದಿಗಳು? ಅಲ್ಲಲ್ಲ ಕೇಳಿ ಭೋ! ಭಕ್ತನ ಮಹಿಮೆಯನು, ಪ್ರಸಾದಿಯ ಘನವನು. ಪೃಥ್ವಿಯ ಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡಬಾರದ ಭಾಷೆ. ಅಪ್ಪುವಿನಿಂದ ಲಿಂಗಕ್ಕೆ ಮಜ್ಜನಕ್ಕೆರೆಯದ ಭಾಷೆ. ತೇಜದಿಂದಲಾದ ನಿವಾಳಿಯ ಲಿಂಗ ಕ್ಕೆತ್ತಬಾರದ ಭಾಷೆ. ವಾಯುವಿನಿಂದಾದ ಪರಿಮಳವ ಲಿಂಗಕ್ಕೆ ನಿವೇದಿಸ ಬಾರದ ಭಾಷೆ. ಆಕಾಶದಿಂದಾದ ಶೂನ್ಯವ ಲಿಂಗಕ್ಕೆ ಭಾವಿಸಬಾರದ ಭಾಷೆ. ಅದೆಂತೆಂದೊಡೆ: ಮತ್ತೊಂದು ಪೃಥ್ವಿ ಉಂಟಾಗಿ ಮತ್ತೊಂದಪ್ಪು ಉಂಟಾಗಿ ಮತ್ತೊಂದು ತೇಜ ಉಂಟಾಗಿ ಮತ್ತೊಂದು ವಾಯು ಉಂಟಾಗಿ ಮತ್ತೊಂದು ಆಕಾಶ ಉಂಟಾಗಿ, ಇಂತಿವರಲ್ಲಿ ಉಂಟಾದ ಪದಾರ್ಥ ದ್ರವ್ಯಂಗಳ ಲಿಂಗಕ್ಕೆ ನೀಡಿ ಮಾಡುವದೆ ಭಕ್ತಿ. ಇದು ಕಾರಣವಾಗಿ ಕೂಡಲ ಚೆನ್ನಸಂಗಯ್ಯ, ಅರ್ಪಿತದ ಮುಖವ ನಿಮ್ಮ ಶರಣರೆ ಬಲ್ಲರು, ನೀವೆ ಬಲ್ಲಿರಿ. ನಾನೆತ್ತಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ.

೧೫

ಅರ್ಪಿತ ಅನರ್ಪಿತವನಾರು ಬಲ್ಲರಯ್ಯಾ? ಅರ್ಪಿಸಿ ಕೊಂಬುದು ಅನರ್ಪಿತ; ಅರ್ಪಿಸದೆ ಕೊಂಬುದು ಅರ್ಪಿತ. ಅರ್ಪಿಸಿ ಅರ್ಪಿಸದೆ ಕೊಳಬಲ್ಲರೆ; ಗೊಹೇಶ್ವರಾ, ನಿಮ್ಮ ಪ್ರಸಾದಿ.

೨. ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ

೧೬

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ, ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ. ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ, ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥಾ.

೧೭

ದೇವರಾರೋಗಣೆಯಂ ಮಾಡಿಸಿ, ಪ್ರಸನ್ನತ್ವಮಂ ಪಡೆದು, ಪ್ರಸಾದಮಂ ಧರಿಸಿ ಮುಕ್ತರಪ್ಪರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೮

ಪ್ರಸಾದವ ನಂಬಿದರೆ ಬಿಲ್ಲಮರಾಯನಂತೆ ನಂಬಬೇಕಯ್ಯಾ! ಪ್ರಸಾದವ ನಂಬಿದರೆ ಬಿಬ್ಬಿ ಬಾಚರಸನಂತೆ ನಂಬಬೇಕಯ್ಯಾ! ಪ್ರಸಾದವ ನಂಬಿದರೆ ವಾಮನಮುನೀಶ್ವರನ ಶಿಷ್ಯನಂತೆ ನಂಬಬೇಕಯ್ಯಾ! ಇಂತು ನಂಬಿಕೊಂಡರೆ ಮಹಾಸಾಧನ. ನಂಬದೆ ಸಮಯದಾಕ್ಷಿಣ್ಯಕ್ಕೆ ಹೋಗಿ ತಾ ಬಂದು ಮನವ ಸಿಕ್ಕಿಕೊಂಡರೆ, ಅದು ತನಗೆ ಸಿಂಗಿ ಕಾಳಕೂಟ ವಿಷವೆಂದಾತ ನಮ್ಮ ಅಂಬಿಗರ ಚೌಡಯ್ಯನು.

೧೯

ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಹುದು ಕಾರ್ಯವಲ್ಲ, ದುರುಳತನ. ಊರೊಳಗಿರ್ದರೆ ನರರ ಹಂಗು, ಅರಣ್ಯದೊಳಗಿರ್ದರೆ ತರುಗಳ ಹಂಗು. ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಂಬ ಶರಣನೆ ಜಾಣ ಸಕಳೇಶ್ವರಾ.

೨೦

ಸತ್ಯವೆಂಬ ತಟ್ಟೆಯಲ್ಲಿ, ಚಿತ್ತಶುದ್ಧವೆಂಬ ವಿಭೂತಿಯ ಬೈಚಿಟ್ಟು, ಸಕಲ ಸಂಪದ ಪ್ರಮಥರು ಮುಂತಾಗಿ ಅಮರೇಶ್ವರಲಿಂಗದ ಆಶ್ರಯದಲ್ಲಿ ಪ್ರಸಾದವ ಕೊಂಬುದಕ್ಕೆ ಬಾರಾ ಸಂಗನ ಬಸವಣ್ಣಾ.

೨೧

ಎನ್ನ ಕರಸ್ಥಲದ ಲಿಂಗಕ್ಕೆ ಬಂದ ಪದಾರ್ಥಂಗಳನರ್ಪಿಸುವೆನೆ? ಅರ್ಪಿಸಲಮ್ಮೆ. ಅದೇನು ಕಾರಣವೆಂದರೆ: ಎನ್ನ ಕಂಗಳು ಕಂಡವಾಗಿ, ಎನ್ನ ಶ್ರೋತ್ರಗಳು ಕೇಳಿದವಾಗಿ, ಎನ್ನ ಕೈಗಳು ಮುಟ್ಟಿದವಾಗಿ, ಎನ್ನ ನಾಸಿಕ ವಾಸಿಸಿತ್ತಾಗಿ, ಎನ್ನ ಜಿಹ್ವೆ ರುಚಿಸಿತ್ತಾಗಿ. ಇಂತಪ್ಪ ಎನ್ನ ಅಂಜಿಕೆಯ ನಿಮ್ಮ ಶರಣರು ಬಿಡಿಸಿದರಾಗಿ, ಅದೆಂತೆಂದರೆ: ಎನ್ನ ಶ್ರೋತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನೇತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದ ರಾಗಿ, ಎನ್ನ ತ್ವಕ್ಕಿನಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ಜಿಹ್ವೆಯಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನಾಸಿಕದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಅಲ್ಲಲ್ಲಿ ಅರ್ಪಿತಂಗಳಾಗುತಿರ್ದವಾಗಿ ಇನ್ನಂಜೆನಂಜೆನುರಿ ಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೨೨

ಕಣ್ಣು ಮೀಸಲು ಶಿವನ. ಕೈ ಮೀಸಲು ಶಿವನ. ಕಾಲು ಮೀಸಲು ಶಿವನ. ನಾಲಗೆ ಮೀಸಲು ಶಿವನ. ಕಿವಿ ಮೀಸಲು ಶಿವನ. ನಾಸಿಕ ಮೀಸಲು ಶಿವನ. ತನು ಮೀಸಲು ಮನವೆಲ್ಲ ಮೀಸಲು ಶಿವನ. ಈ ಮೀಸಲು ಬೀಸರವೋಗದಂತಿದ್ದರೆ, ಆತನೆ ಜಗದೀಶ ಕಾಣಾ ರಾಮನಾಥಾ.

೨೩

ಅಧರ ತಾಗುವ ರುಚಿಯು, ಉದರ ತಾಗುವ ಸುಖವ ಲಿಂಗಾರ್ಪಿತ ವಿಲ್ಲದೆ ಕೊಂಡರೆ ಕಿಲ್ಬಿಷ ನೋಡಾ! ನೇತ್ರ ಶ್ರೋತ್ರ ಜಿಹ್ವೆ ಘ್ರಾಣ ತ್ವಕ್ಕು ಮೊದಲಾದ ಸರ್ವೇಂದ್ರಿಯಂಗಳಲ್ಲಿ ಮುಟ್ಟಿದ ಸಕಲಪದಾರ್ಥಂ ಗಳನ್ನು ಲಿಂಗಕ್ಕೆ ಕೊಟ್ಟು ಕೊಂಡರೆ, ಅದು ಮಹಾಪ್ರಸಾದವಯ್ಯಾ ಕೂಡಲಸಂಗಮದೇವಾ.

೨೪

ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು, ಅಂತಃಕರಣಂಗಳೆಂಬ ಪರಿಚಾರಕರುಗಳ

ಕೈಯಿಂದ ಪಂಚೇಂದ್ರಿಯಂಗಳೆಂಬ ಪರಿವಾಣದಲ್ಲಿ ಶಬ್ದ ಸ್ಪರ್ಶ ರೂಪು ರಸ ಗಂಧಂಗಳೆಂಬ ಪದಾರ್ಥಂಗಳನು ಎಡೆಮಾಡಿಸಿಕೊಂಡು ಸವಿವುತ್ತಿರಲು, ಆನಂದವೇ ಮಹಾಪ್ರಸಾದವಾಗಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಸದಾ ಸನ್ನಿಹಿತ ಕಾಣಿರೇ.

೨೫

ಲಿಂಗಶರಣನ ಪಂಚೇಂದ್ರಿಯಂಗಳು ಲಿಂಗಮುಖವಾಗಿ ನಿಂದು, ಮನಸಹಿತ ಪಂಚವಿಷಯಂಗಳಖಿಲಸುಖಂಗಳ ಲಿಂಗಾರ್ಪಿತದಿಂದ ಚರಿಸುತ್ತ, ಬೇರೆ ಮತ್ತೊಂದು ದೆಸೆ ಇಲ್ಲದೆ ನಿಂದವು, — ಸೌರಾಷ್ಟ್ರ ಸೋಮೇಶ್ವರಲಿಂಗವಾಸಿಯಾದ ಶರಣಂಗೆ.

೨೬

ಅಂಗದಲ್ಲಿ ಲಿಂಗವಿರಲು, ಎನ್ನ ತನು ನಿರ್ಮಳವಾಯಿತ್ತು. ಮನದಲ್ಲಿ ಅರಿವು ಇರಲು, ಎನ್ನ ಮನ ನಿರ್ಮಳವಾಯಿತ್ತು. ಪ್ರಾಣದಲ್ಲಿ ಪ್ರಸಾದವಿರಲು, ಎನ್ನ ಪ್ರಾಣ ನಿರ್ಮಳವಾಯಿತ್ತು. ಎನ್ನ ಪಂಚೇಂದ್ರಿಯಂಗಳಲ್ಲಿ ಪಂಚಲಿಂಗವೆಡೆಗೊಂಡಿರಲು, ಇಂದ್ರಿಯಂಗಳು ನಿರ್ಮಳವಾದವು. ಸೌರಾಷ್ಟ್ರ ಸೋಮೇಶ್ವರನ ಶರಣರ ಸಂಗದಿಂದ ಶಿವಪ್ರಸಾದ ದೊರೆಕೊಂಡಿತ್ತಾಗಿ, ಸರ್ವಾಂಗ ಲಿಂಗವಾಯಿತ್ತು.

೨೭

ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು. ಮನದ ಮುಂಬಾಗಿಲಲ್ಲಿ ಭೋಗಲಿಂಗವಿದ್ದು ಸಕಲಭೋಗಂಗಳ ಭೋಗಿಸಿ, ಪ್ರಸಾದವ ಕರಣಂಗಳಿಗೆ ಕೊಟ್ಟು, ಎನ್ನ ಮನವ ತನ್ನತ್ತ ಸೆಳೆದು, ಮರಹ ಮಾಡಿಸಿ, ಕುರುಹಳಿದು ತೆರಹುಗೊಂಡ ಸೌರಾಷ್ಟ್ರಸೋಮೇಶ್ವರಲಿಂಗವ ಬಲ್ಲರೆ ಬಲ್ಲೆ.

೨೮

ಅರ್ಪಿತದನುವನು, ಪ್ರಸಾದದ ಮಹಿಮೆಯನು ಆರಿಗೆಯೂ ಅರಿಯಬಾರದು ನೋಡಾ. ಬ್ರಹ್ಮ ವಿಷ್ಣು ದೇವಾಧಿದೇವತೆಗಳಿಗೆಯೂ ಅರಿಯಬಾರದು ನೋಡಾ. ಋಷಿಜನಂಗಳಿಗೆಯೂ ಅರಿಯಬಾರದು. ದೇವ

ದಾನವ ಮಾನವರಿಗೆಯೂ ಅರಿಯಬಾರದು. ಕಿಂಚಿತ್ತರಿದಡೆಯೂ ಅರ್ಪಿಸಬಾರದು. ಕಿಂಚಿತ್ತರ್ಪಿಸಿದಡೆಯೂ ಪ್ರಸಾದವ ಪಡೆಯಬಾರದು. ಕಿಂಚಿತ್ಪ್ರಸಾದವ ಪಡೆದಡೆಯೂ ಆ ಪ್ರಸಾದವ ಭೋಗಿಸಿ ಮುಕ್ತರಾಗಬಾರದು. ಅದೆಂತೆಂದರೆ: ತನುವ ಗುರುವಿಂಗರ್ಪಿಸಿ ಗುರುಪ್ರಸಾದವ ಪಡೆಯಲರಿಯರು ನೋಡಾ. ಮನವ ಲಿಂಗಕ್ಕರ್ಪಿಸಿ ಲಿಂಗಪ್ರಸಾದವ ಪಡೆಯಲರಿಯರು ನೋಡಾ. ಧನವ ಜಂಗಮಕ್ಕರ್ಪಿಸಿ ಜಂಗಮಪ್ರಸಾದವ ಪಡೆಯಲರಿಯರು ನೋಡಾ. ತನು ಮನ ಧನವನು ಗುರುಲಿಂಗಜಂಗಮಕ್ಕೆ ಕೊಟ್ಟು, ಆ ತ್ರಿವಿಧಲಿಂಗವ ಏಕೀಕರಿಸಿ ಭಾವಸ್ಥಾನದಲ್ಲಿ ಧರಿಸಿ, ಪರಿಣಾಮಪದಾರ್ಥವನರ್ಪಿಸಿ ಭಾವಲಿಂಗಪ್ರಸಾದವ ಪಡೆಯಲರಿಯರು ನೋಡಾ. ಆ ಮಹಾಭಾವಲಿಂಗಮಂ ಮನೋಮಧ್ಯದಲ್ಲಿರಿಸಿ, ಸಕಲನಿಷ್ಕಲದ್ರವ್ಯಂಗಳನರ್ಪಿಸಿ, ಮನೋಮಯಲಿಂಗಪ್ರಸಾದಮಂ ಪಡೆಯಲರಿಯರು ನೋಡಾ. ಮನೋಮಯ ಲಿಂಗಮೂರ್ತಿಯ ತಂದು ಶ್ರೋತ್ರದ ಬಾಗಿಲಲ್ಲಿ ಕುಳ್ಳಿರಿಸಿ, ಘಂಟಾದಿ ನಾದಂಗಳಂ ಸಮರ್ಪಿಸಿ, ಶಬ್ದಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ತಂದು ತ್ವಕ್ಕಿನ ಬಾಗಿಲಲ್ಲಿ ಕುಳ್ಳಿರಿಸಿ, ಕಠಿನಾದಿ ಸ್ಪರ್ಶನಂಗಳಂ ಸಮರ್ಪಿಸಿ, ಸ್ಪರ್ಶನಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗವಂ ತಂದು ನೇತ್ರದ ಬಾಗಿಲಲ್ಲಿ ಕುಳ್ಳಿರಿಸಿ,ಶ್ವೇತಾದಿವರ್ಣಂಗಳಂ ಅರ್ಪಿಸಿ, ವರ್ಣಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ಜಿಹ್ವೆಯ ಬಾಗಿಲಲ್ಲಿ ಕುಳ್ಳಿರಿಸಿ, ಮಧುರಾದಿರಸಂಗಳನರ್ಪಿಸಿ, ರಸಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ತಂದು ಘ್ರಾಣದ ಬಾಗಿಲಲ್ಲಿ ಕುಳ್ಳಿರಿಸಿ, ಗಂಧಾದಿಪರಿಮಳಂಗಳನರ್ಪಿಸಿ, ಗಂಧಪ್ರಸಾದವ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ತಂದು ವಾಙ್ಮೂರ್ತಿಯಂ ಮಾಡಿ, ಸತ್ಯಸುಭಾಷೆಗಳನರ್ಪಿಸಿ, ವಚನಪ್ರಸಾದಮಂ ಪಡೆಯಲರಿಯರು ನೋಡಾ. ಇಂತಪ್ಪ ಏಕಾದಶ ಸ್ಥಾನದಲ್ಲಿ ಏಕಾದಶಾರ್ಪಣವಂ ಮಾಡಿ ಪ್ರಸಾದಮಂ ಪಡೆಯಲರಿಯದ ಕಾರಣ, ಪ್ರಸಾದಭೋಗದಿಂದಪ್ಪ ಕೇವಲಮುಕ್ತಿ ಯಾರಿಗೆಯೂ ಸಂಭವಿಸದು. ಇದು ಕಾರಣ, ಇಂತಪ್ಪ ಮಹಾಪ್ರಸಾದ ಸ್ಥಳ ಕುಳವನು

ನಿಮ್ಮ ಪ್ರಸಾದಿ ಚೆನ್ನಬಸವಣ್ಣಂಗೊಬ್ಬಂಗಲ್ಲದೆ ಮತ್ತಾರಿಗೆಯೂ ಅರಿಯ ಬಾರದಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೨೯

ಒಕ್ಕುದು ಪ್ರಸಾದವಲ್ಲ. ಮಿಕ್ಕುದು ಪ್ರಸಾದವಲ್ಲ. ಹತ್ತೆ ಕರೆದಿಕ್ಕು ವುದು ಪ್ರಸಾದವಲ್ಲ. ತರ್ಕೈಸಿ ನಿಮ್ಮುವನಪ್ಪಿಕೊಂಡಡೆ, ನಿಶ್ಚಯಪ್ರಸಾದ ಕಾಣಾ ರಾಮನಾಥಾ.

೩೦

ಆಸೆಯನಳಿದು ನಿರಾಸೆಯಲ್ಲಿ ನಿಂದು, ವೇಷವ ಮರೆದು ಜಗದ ಹೇಸಿಯಾಟವ ತೊರೆದು, ಮಿಾಸಲಾಗಿದ್ದ ಮನವನೆ ಲಿಂಗವ ಮಾಡಿ, ಗಾಸಿಗೊಳಗಾಗುವ ತನುವನೆ ಗುರುವ ಮಾಡಿ, ಇವಿಷ್ಟಕ್ಕು ಕರ್ತನಾಗಿರುವ ಪ್ರಾಣವನೆ ಜಂಗಮವ ಮಾಡಿ, ಈ ತ್ರಿವಿಧವನು ಏಕವ ಮಾಡುವ, ಆ ಭಾವವನೆ ಭಾವರುಚಿಪ್ರಸಾದವ ಮಾಡುವೆ. ಈ ತ್ರಿವಿಧವನರಿದು ಅಂಗವಿಸಿದವನೆ ಎನ್ನ ದೇವನೆಂದು ಕಾಂಬೆ ಕಾಣಾ,—ಬಸವಪ್ರಿಯ ಕೂಡಲ ಚೆನ್ನಬಸವಣ್ಣ ನೀವು ಸಾಕ್ಷಿಯಾಗಿ.

೩೧

ಎನಗೆ ಸೋಂಕುವ ಸಕಲರುಚಿಪದಾರ್ಥಂಗಳನು ನಿನಗೆ ಕೊಡುವೆ ನೆಂದವಧಾನಿಸುವನ್ನಬರ ಎನಗೂ ಇಲ್ಲದೆ ಹೋಯಿತ್ತು, ನಿನಗೂ ಇಲ್ಲದೆ ಹೋಯಿತ್ತು. ಇಂತಪ್ಪ ಭೇದಬುದ್ಧಿಯ ಮಾಣಿಸಿ, ಆನರಿದುದೆ ನೀನರಿದು ದೆಂಬಂತೆ ಎನ್ನನೆಂದಿಗೆ ಇರಿಸುವೆಯಯ್ಯಾ ಸಕಳೇಶ್ವರಾ ?

೩೨

ಅಯ್ಯಾ, ನಿಮ್ಮ ಪ್ರಸಾದದ ಮಹಿಮೆಯನೇನೆಂಬೆನಯ್ಯಾ? ವೇದಂ ಗಳರಿಯವು ; ಶಾಸ್ತ್ರಂಗಳರಿಯವು. ಚಲವ ಸಾಧಿಸಿ ತನು ದಂಡಣೆಯ ಮಾಡಿ, ಸಕಲಭೋಗಂಗಳ ಬಿಟ್ಟು, ದುಃಖವನನುಭವಿಸಿ, ತಪ್ಪಿಲ್ಲದೆ ನಡೆದರೆ ಹಡೆವರಯ್ಯಾ ಸ್ವರ್ಗದ ಭೋಗವ. ಒಂದುವನು ಬಿಡಲಿಲ್ಲ, ಸಂದೇಹ ಮಾತ್ರವಿಲ್ಲ. ಆಗ ಬಿತ್ತಿ ಆಗ ಬೆಳೆವಂತೆ, ರೋಗಿ ಬಯಸಿತ್ತ ವೈದ್ಯ

ಕೊಡುವಂತೆ, ಪಾಪದಂತಾದುದನು ಪುಣ್ಯವನೆ ಮಾಡುವುದು. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಎನಿಸುವುದು. ಹಿಡಿದಡೆ ಇಲ್ಲ, ನಡೆದುದೇ ಬಟ್ಟೆಯಾದ ಕಾರಣ. ಪ್ರಸಾದದಿಂದತ್ತ ಪರವಿಲ್ಲ. ಪ್ರಸಾದಿಯಿಂದ ಮುಕ್ತರಿಲ್ಲ. ಇಂತಪ್ಪ ಪ್ರಸಾದವನು ನಿಮ್ಮ ಶರಣ ಬಸವಣ್ಣ ತೋರಿದನಾಗಿ, ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ ಕಲಿದೇವರದೇವಾ.

೩೩

ಹೊತ್ತು ಹೊತ್ತಿಗೆ ನಿತ್ಯರ ಸಂಗವ ಮಾಡಿ, ಕರ್ಮವೆಂಬುದನರಿದೆ. ನಾ ಭೃತ್ಯನೆಂಬುದನರಿದೆ. ಸತ್ಯವೆಂಬುದನರಿದು, ಸದಾಚಾರವಿಡಿದು ತುದಿ ಮೊದಲು ಕಡೆನಡುವೆ ಆದಿಅನಾದಿಗೆ ನಿಲುಕದ ಘನವೇದ್ಯ ಲಿಂಗವ ಕಂಡೆ. ಆ ಲಿಂಗವ ಸೋಂಕಲೊಡನೆ ಲಿಂಗದಂತಾದೆ. ಜಂಗಮುವ ಮುಟ್ಟಿ ಪೂಜಿಸಲೊಡನೆ ಜಂಗಮುದಂತಾದೆ. ಪ್ರಸಾದವ ಕೊಳ್ಳಲಾಗಿ ಆ ಪ್ರಸಾದದಂತಾದೆ. ಇನ್ನು ಪರವಿಲ್ಲವೆಂದು ಪ್ರಸಾದದಲ್ಲಿಯೇ ತಲ್ಲೀಯವಾದೆ. ಇದ ಬಲ್ಲವರು ನೀವು ಕೇಳಿ. ಎನ್ನ ಹಮ್ಮು ಬಿಮ್ಮು ಉಂಟೆನ್ನಬೇಡ. ಇದಕ್ಕೆ ದೃಷ್ಟವ ಹೇಳಿಹೆ ಕೇಳಿರಣ್ಣಾ! ಕೀಡಿ ತುಂಬಿಯ ಸ್ನೇಹದ ಹಾಗೆ ಶರಣನಾದರೆ, ಜ್ಯೋತಿ ಜ್ಯೋತಿಯ ಮುಟ್ಟಿದ ಹಾಗೆ, ದರ್ಪಣ ದರ್ಪಣದೊಳಗೆ ಅಡಗಿದ ಹಾಗೆ ಅದಕೊಪ್ಪವ ಬಲ್ಲವರು ತಪ್ಪದೆ ಎನ್ನಂಗ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೩೪

ಆಡಿಮುಡಿಯಿಲ್ಲದ ಪ್ರಸಾದ; ನಡುಕಡೆಯಿಲ್ಲದ ಪ್ರಸಾದ. ಎಡೆಬಿಡುವಿಲ್ಲದ ಪ್ರಸಾದ. ಅಖಂಡೇಶ್ವರನೆಂಬ ಮಹಾಘನ ಪರಾತ್ಪರ ಪರಿಪೂರ್ಣ ಪ್ರಸಾದದೊಳಗೆ ಮನವಡಗಿ, ನೆನಹು ನಿಷ್ಪತ್ತಿಯಾಗಿ ಏನೆಂದರಿಯದಿರ್ದೆನಯ್ಯಾ.

೩೫

ಅಗ್ನಿ ಮುಟ್ಟಲು ತೃಣವು ಅಗ್ನಿಯಪ್ಪುದು ತಪ್ಪದಯ್ಯ. ಶ್ರೀಗುರು ಪ್ರಸಾದವಂಗವ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪುದು ತಪ್ಪದಯ್ಯಾ. ಲಿಂಗಪ್ರಸಾದ ಮನವ ಸೋಂಕಿದಲ್ಲಿ ಮನ ಲಿಂಗವಪ್ಪುದು ತಪ್ಪದಯ್ಯಾ.

ಜಂಗಮಪ್ರಸಾದ ಅರಿವ ಸೋಂಕಿದಲ್ಲಿ ಅಖಂಡಿತ ಪ್ರಸನ್ನಪ್ರಸಾದ ವಪ್ಪುದು ತಪ್ಪದಯ್ಯಾ. ಶಿವಶಿವಾ! ಮಹಾಪ್ರಸಾದದ ಮಹಿಮೆಯ ನೇನೆಂದುಪಮಿಸಬಹುದಯ್ಯಾ? ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಪ್ರಸಾದವೇ ಪರಮಾನಂದ, ಪ್ರಸಾದವೇ ಪರಮಾಮೃತ, ಪ್ರಸಾದವೇ ಪರಮಜ್ಞಾನ, ಪ್ರಸಾದವೇ ಜ್ಞಾನಾತೀತ, ಪ್ರಸಾದವೇ ನಿತ್ಯಪರಿಪೂರ್ಣ. ಇಂತಪ್ಪ ಪ್ರಸಾದವ ಕೊಂಡು ನಾನು ಬದುಕಿದೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩೬

ಎನ್ನ ಆಧಿವ್ಯಾಧಿಗಳೆಲ್ಲ ಪ್ರಸಾದವಯ್ಯಾ. ಎನ್ನ ಆಗುಹೋಗುಗಳೆಲ್ಲ ಪ್ರಸಾದವಯ್ಯಾ. ಎನ್ನ ತಾಗುನಿರೋಧಗಳೆಲ್ಲ ಪ್ರಸಾದವಯ್ಯಾ. ಎನ್ನ ಅರುಹುಮರಹುಗಳೆಲ್ಲ ಪ್ರಸಾದವಯ್ಯಾ. ಎನ್ನ ಸುಖದುಃಖಂಗಳೆಲ್ಲ ಪ್ರಸಾದ ವಯ್ಯಾ. ಎನ್ನ ಮಾನಾಪಮಾನಂಗಳೆಲ್ಲ ಪ್ರಸಾದವಯ್ಯಾ. ಎನ್ನ ಹಾನಿ ವೃದ್ಧಿಗಳೆಲ್ಲ ಪ್ರಸಾದವಯ್ಯಾ. ಎನ್ನ ಭಯಭೀತಿಗಳೆಲ್ಲ ಪ್ರಸಾದವಯ್ಯಾ. ಎನ್ನ ಲಜ್ಜೆ ಮೋಹಗಳೆಲ್ಲ ಪ್ರಸಾದವಯ್ಯಾ. ಎನ್ನ ಸಜ್ಜನ ಸಮತೆಗಳೆಲ್ಲ ಪ್ರಸಾದವಯ್ಯಾ. ಎನ್ನ ಸುಳುಹು ಸಂಚಾರಗಳೆಲ್ಲ ಪ್ರಸಾದವಯ್ಯಾ. ಎನ್ನ ಚಿತ್ತಸುಚಿತ್ತಗಳೆಲ್ಲ ಪ್ರಸಾದವಯ್ಯಾ. ಎನ್ನ ಬುದ್ಧಿಸುಬುದ್ಧಿಗಳೆಲ್ಲ ಪ್ರಸಾದ ವಯ್ಯಾ. ಎನ್ನ ಅಹಂಕಾರ ನಿರಹಂಕಾರಗಳೆಲ್ಲ ಪ್ರಸಾದವಯ್ಯಾ. ಎನ್ನ ಸುಮನ ಮನಗಳೆಲ್ಲ ಪ್ರಸಾದವಯ್ಯಾ. ಎನ್ನ ಜ್ಞಾನಸುಜ್ಞಾನಗಳೆಲ್ಲ ಪ್ರಸಾದವಯ್ಯಾ. ಎನ್ನ ಭಾವಸದ್‌ಭಾವಗಳೆಲ್ಲ ಪ್ರಸಾದವಯ್ಯಾ. ಎನ್ನ ತತ್ವತೋರಿಕೆಗಳೆಲ್ಲ ಪ್ರಸಾದವಯ್ಯಾ. ಎನ್ನ ಕರಣೇಂದ್ರಿಯಂಗಳೆಲ್ಲ ಪ್ರಸಾದವಯ್ಯಾ. ಎನ್ನ ಒಳಹೊರಗುಗಳೆಲ್ಲ ಪ್ರಸಾದವಯ್ಯಾ. ಎನ್ನ ಕೀಳು ಮೇಲುಗಳೆಲ್ಲ ಪ್ರಸಾದವಯ್ಯಾ. ಎನ್ನ ಎಡಬಲಂಗಳೆಲ್ಲ ಪ್ರಸಾದವಯ್ಯಾ. ಇಂತಾಗಿ—ಅಖಂಡೇಶ್ವರಾ, ನೀನೆಂಬ ಪ್ರಸಾದಶರಧಿಯೊಳಗೆ ನಾನೆಂಬುದು ಮುಳುಗಿ ನೆಲೆದಪ್ಪಿ ಹೋದೆನಯ್ಯಾ!

೩೭

ಪ್ರಸಾದವೆ ಪರಮಜ್ಞಾನ, ಪ್ರಸಾದವೆ ಪರಾಪರ, ಪ್ರಸಾದವೆ ಪರ ಬ್ರಹ್ಮ, ಪ್ರಸಾದವೆ ಪರಮಾನಂದ, ಪ್ರಸಾದವೆ ಗುರು, ಪ್ರಸಾದವೆ ಲಿಂಗ,

ಪ್ರಸಾದವೆ ಜಂಗಮ, ಪ್ರಸಾದವೆ ಪರಿಪೂರ್ಣ. ಸೌರಾಷ್ಟ್ರ ಸೋಮೇಶ್ವರ ಲಿಂಗದ ಪ್ರಸನ್ನತೆಯೆ ಪ್ರಸಾದ. ಇಂತಪ್ಪ ಪ್ರಸಾದಮಹಾತ್ಮೆಗೆ ಆನು ನಮೋ ನಮೋ ಎನುತಿರ್ದೆನು!

೩೮

ಹಾಡಿದರೆ ಹಾಡುವೆನಯ್ಯಾ ನಿಮ್ಮ ಪರಮಪ್ರಸಾದವನೆ. ನೋಡಿದರೆ ನೋಡುವೆನಯ್ಯಾ ನಿಮ್ಮ ಪರಮಪ್ರಸಾದವನೆ. ಬೇಡಿದರೆ ಬೇಡುವೆನಯ್ಯಾ ನಿಮ್ಮ ಪರಮಪ್ರಸಾದವನೆ. ಕೂಡಿದರೆ ಕೂಡುವೆನಯ್ಯಾ ನಿಮ್ಮ ಪರಮಪ್ರಸಾದವನೆ ಅಖಂಡೇಶ್ವರಾ.

೩೯

ಅಶನದಾಪ್ಯಾಯನ ವ್ಯಸನವುಳ್ಳನ್ನಕ್ಕ, ಆ ನಿಮ್ಮ ನೆನೆವುದು ಹುಸಿಯಯ್ಯಾ! ಆ ನಿಮ್ಮ ಪೂಜಿಸುವುದು ಹುಸಿಯಯ್ಯಾ! ಎನ್ನ ಹಸಿವಿಂಗೆ ನೀನೆ ಓಗರವಾದರೆ, ನಾ ನಿಮ್ಮ ನೆನೆವುದು ದಿಟ ಕಾಣಾ ಮಹಾಲಿಂಗ ಕಲ್ಲೇಶ್ವರಾ.

೪೦

ಲಿಂಗಭರಿತ ಶರಣ, ಶರಣಭರಿತ ಲಿಂಗವು. ಅದೆಂತೆಂದರೆ: 'ಶರಣ ಮಧ್ಯೇ ಲಿಂಗಃ ಸ್ಯಾತ್ ಲಿಂಗಮಧ್ಯೇ ಶರಣ್ಯತಾಂ' ಎಂದುದಾಗಿ, ಶರಣ ಬೇರೆ, ಲಿಂಗ ಬೇರೆಯೇ? ಶಿವಶಿವಾ ಒಂದೆ ಕಾಣಿರಣ್ಣಾ! ಅಂತು ಶರಣಕ್ರೀ ಎಲ್ಲವು ಲಿಂಗಕ್ರೀ, ಲಿಂಗಕ್ರೀ ಎಲ್ಲವು ಶರಣಕ್ರೀ. ಆದು ಕಾರಣ, ಶರಣ ಪ್ರಸಾದವು ಲಿಂಗಕ್ಕೆ ನೈವೇದ್ಯ ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೪೧

ಗರಿಯ ಕಟ್ಟದ ಕೋಲು ಗುರಿಯ ತಾಗಬಲ್ಲುದೇ? ಗುರುಲಿಂಗ ಜಂಗಮದ ಪಾದತೀರ್ಥ ಪ್ರಸಾದವನರಿಯದೆ ಪರಮನ ಕಂಡೆನೆಂಬ ದುರಾಚಾರಿಗಳ ಮುಖವ ನೋಡಲಾಗದೆಂದಾತ ನಮ್ಮ ಕಲಿದೇವರದೇವಯ್ಯ.

೪೨

ನಮಗೊಬ್ಬರೆಂಜಲು ಸೇರದೆಂದು ಶುಚಿತನದಲ್ಲಿ ಬದುಕುತಿಹೆನೆಂಬ ಬರಿಯ ಮಾತಿನ ಭುಂಜಕರು ನೀವು ಕೇಳಿರೋ! ನೀವು ತಂದು ಕುಡಿವ

ನೀರು ಜಲಚರದೆಂಜಲು, ಮೃಗಪಕ್ಷಿಗಳೆಂಜಲು, ಬಳಸಹೋದಲ್ಲಿ ಕೈಕಾಲ ತೊಳೆದು ಬಾಯ ಮುಕ್ಕುಳಿಸುವಲ್ಲಿ ನರಮನುಷ್ಯರೆಂಜಲು. ಇಂತೀ ಹಲವೆಂಜಲು ಬೆರಸಿದ ಸಕಲಪದಾರ್ಥವನು ಆ ಜಲದಿಂದ ಪಾಕವನು ಮಾಡಿ, ನಲಿನಲಿದುಂಡು ಕೊಡುವಲ್ಲಿ, ಆ ಎಂಜಲು ಹಿಂಗಿದ ಠಾವು ತೋರಿರಣ್ಣಾ! ಇದ ಬಲ್ಲ ಭಕ್ತರು, ಸರ್ವಪದಾರ್ಥವನು ಶಿವಮಂತ್ರ ಹಸ್ತಸ್ಪರ್ಶ ವಿಭೂತಿಯಿಂದೆ ಶುದ್ಧಮಾಡಿ, ಕೊಟ್ಟು ಕೊಂಬಲ್ಲಿ ಗುರುಪ್ರಸಾದವಾಯಿತ್ತು. ಹೀಗೆ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವನು ಕೊಟ್ಟುಕೊಂಬ ಭಕ್ತನೀಗಲೆ ಸರ್ವರೆಂಜಲ ಹೊಲೆಯ ನೀಗಿದ. ಇದನರಿಯದಿರ್ದೊಡೆ, ಸರ್ವರೆಂಜಲ ಹೊಲೆಯೊಳಗೆ ಮುಳುಗಿ ಹೋದರೆಂದಾತ ನಮ್ಮ ಅಂಬಿಗರ ಚೌಡಯ್ಯನು.

೪೩

ತದ್ದು ತುರಿ ತಲೆಬೇನೆ ಮೈಕೆಟ್ಟು ಸೀತ ವಾತ ಬಹುಜ್ವರ ಹೊಟ್ಟೆಬೇನೆ ಕೆಟ್ಟ ಹುಣ್ಣು ಮೊದಲಾದ ಇಂತೀ ಮುನ್ನೂರರುವತ್ತು ವ್ಯಾಧಿಯನು ಶಿವನು ಹರಿಯಬಿಟ್ಟು ನೋಡುವ. ಇವೆಲ್ಲವು ಶಿವನ ಕರುಣವಾದಲ್ಲದೆ ಹೋಗವು. ಲೋಕದ ಬುದ್ಧಿಗೇಡಿ ಮನುಜರೆಲ್ಲರು ಶುದ್ಧಚಿತ್ತ ಜಂಗಮಲಿಂಗದ ಮಾತ ಕೇಳದೆ, ಅದ್ದನ ಜೋಳ ಅರೆಮಾನ ಎಣ್ಣೆಯ ಕೊಂಡು, ನೋಟಗಾತಿಯರ ಮನೆಗೆ ಹೋಗಿ, ಅವರು ಹೇಳಿದ ತಾತು ಭೂತದ ಕೋಟಲೆಗೊಳಗಾಗಿ ಕೈಕೊಂಡು ಬಂದು, ಅವಕ್ಕೆ ಊಟವನಿಕ್ಕಿ ಮಿಕ್ಕ ಕೂಳ ತಮ್ಮ ಲಿಂಗಕ್ಕೆ ತೋರುವ ಲಿಂಗದ್ರೋಹಿಯ ಮಾತ ಕೇಳಲಾಗದು ಕಲಿದೇವರದೇವಯ್ಯಾ.

೪೪

ಹರಹರಾ! ನೀನಿಪ್ಪ ಠಾವನರಿಯದೆ, ಅಷ್ಟವಿಧಾರ್ಚನೆ ಷೋಡಶೋಪಚಾರವುಂ ಮಾಡಿಹೆನೆಂಬವರ ದಿಟ್ಟತನವ ನೋಡಾ. ಶಿವಶಿವಾ! ನಿಮ್ಮ ಶ್ರೀಮುಖವನರಿಯದೆ ಸಕಲಪದಾರ್ಥಂಗಳ ನಿಮಗರ್ಪಿಸಿ, ಪ್ರಸಾದವ ಕೊಂಡೆನೆಂಬವರ ಎದೆಗಲಿತನವ ನೋಡಾ. ಹಗರಣದ ಹಣ್ಣ ಮೆದ್ದು ಹಸಿವು ಹೋಯಿತ್ತೆಂದಡೆ, ಆರು ಮೆಚ್ಚುವರು ಹೇಳಾ ಗೊಹೇಶ್ವರಾ?

೪೫

ಬೆಕ್ಕು ನಾಯಿ, ಶಿವಭಕ್ತರು ಒಕ್ಕು ಮಿಕ್ಕುದ ಕೊಂಡರೆ ಸದಾಚಾರಿಯಾಗಬಲ್ಲವೇ? ಭೃತ್ಯಾಚಾರಿಯಾಗಬಲ್ಲವೇ? ಜಂಗಮಲಿಂಗದಲ್ಲಿ ನಂಬುಗೆಯಿಲ್ಲದವನು ಕೊಂಡ ಪ್ರಸಾದ ಬೆಕ್ಕು ನಾಯಿ ತಿಂದಂತೆ ಕಾಣಾ ರಾಮನಾಥಾ.

೩. ಪ್ರಸಾದಿ

೪೬

ಬೇಡದ ಮುನ್ನ ಮಾಡಬಲ್ಲಡೆ ಭಕ್ತ! ಬೇಡುವನೆ ಲಿಂಗಜಂಗಮ? ಬೇಡುವರಿಗೆಯೂ, ಬೇಡಿಸಿಕೊಂಬವರಿಗೆಯೂ ಪ್ರಸಾದವಿಲ್ಲ ಗೊಹೇಶ್ವರಾ.

೪೭

ಒಳಗ ತೊಳೆಯಲರಿಯದೆ ಹೊರಗ ತೊಳೆದು ಕುಡಿವುತ್ತಿದ್ದರಯ್ಯ. ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತೈದಾರೆ ಗೊಹೇಶ್ವರಾ.

೪೮

ಹಸಿವಾಯಿತ್ತೆಂದು ಹುಸಿದು ಮಜ್ಜನಕ್ಕೆರೆವರಯ್ಯ. ತೃಷೆಯಾಯಿತ್ತೆಂದು ಅರ್ಪಿತವ ಮಾಡುವರಯ್ಯ. ಇದೆಂತೋ ಭಕ್ತಿಸಂಬಂಧ? ಇದೆಂತೋ ಶರಣಸಂಬಂಧ? ಇದೆಂತೋ ಲಿಂಗಸಂಬಂಧ? ಕಾರಣವಿಲ್ಲದ ಭಕ್ತಿಯ ಕಂಡಡೆ ಹೋಗ ನೂಕುವನು ಗೊಹೇಶ್ವರ.

೪೯

ಮಾಡಿದ ಓಗರ ಮಾಡಿದಂತೆ ಇದ್ದಿತ್ತು. ನೀಡಿದ ಕೈಗಳೆಡೆಯಾಡುತ್ತಿದ್ದವು. ಲಿಂಗಕ್ಕರ್ಪಿತವ ಮಾಡಿದೆನೆಂಬರು. ಒಂದರಲೊಂದು ಸವೆಯದು ನೋಡಾ! ಲಿಂಗವಾರೋಗಣೆಯ ಮಾಡಿದೆನೆಂಬರು. ತಾವುಂಡು ನಿಮ್ಮ ದೂರುವರು ಗೊಹೇಶ್ವರಾ.

೫೦

ತನ್ನ ಮುಟ್ಟಿ ನೀಡಿದುದೆ ಪ್ರಸಾದ; ತನ್ನ ಮುಟ್ಟದೆ ನೀಡಿದುದೆ ಓಗರ. ಲಿಂಗಕ್ಕೆ ಕೊಟ್ಟು ಕೊಂಡಡೆ ಪ್ರಸಾದಿ. ಇದು ಕಾರಣ ಇಂತಪ್ಪ ಭೃತ್ಯಾಚಾರಿಗಲ್ಲದೆ ಪ್ರಸಾದವಿಲ್ಲ ಗೊಹೇಶ್ವರ.

೫೧

ಘನವಪ್ಪ ಬೋನವನು ಒಂದನುವಿನ ಪರಿಯಾಣದಲ್ಲಿ ಹಿಡಿದು, ಗುರುಲಿಂಗವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ. ಈ ತೆರದ ಘನವಪ್ಪ ಲಿಂಗವನು ಒಂದನುವಿನಲ್ಲಿ ತಂದಿರಿಸಿ, ಘನವಪ್ಪ ಬೋನವನು ಲಿಂಗವಾರೋಗಣೆಯ ಮಾಡಿ, ಮಿಕ್ಕುದ ಕೊಳಬಲ್ಲಡೆ ಪ್ರಸಾದಿ. ಇಂತೀ ತೆರನ ಬೆಸಗೊಳಬಲ್ಲಡೆ ಎನ್ನ ಬೆಸಗೊಳ್ಳಿ ಗೊಹೇಶ್ವರಾ.

೫೨

ಮತಿಮಂದನಾಗಿ ಗತಿಯ ಕಾಣದೆ ಇರ್ದೆನಯ್ಯಾ! ಹುಟ್ಟುಗುರುಡನ ಕಯ್ಯ ಕೋಲ ಕೊಟ್ಟು ನಡೆಸುವಂತೆ ನಡೆಸಯ್ಯಾ ಎನ್ನ. ನಿಮ್ಮಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮಚ್ಚಿಸು, ಕೂಡಲಸಂಗಮದೇವಾ.

೫೩

ಅಯ್ಯಾ, ಹುಟ್ಟಿದ ಮನುಜರೆಲ್ಲ ಹೊಟ್ಟೆ ಹೊಟ್ಟೆ ಎಂದು ಹೊಟ್ಟೆಗೆ ಹಸಿದು, ಹೊಟ್ಟೆಗೆ ಕುದಿದು, ಹೊಟ್ಟೆಗೆ ಹೊರೆದು, ಹೊಟ್ಟೆಗೆ ತುಂಬಿ, ತಾವು ಬಂದ ಬಟ್ಟೆಯನೆ ಅರಿಯದೆ ಕೆಟ್ಟಿತ್ತು ಜಗವೆಲ್ಲ. ಅದಂತಿರಲಿ. ಇನ್ನು ಆ ಶರಣರ ಮತವೆಂದರೆ, ಹೊಟ್ಟೆ ಎಂಬುದನೆ ಮೆಟ್ಟಿಟ್ಟು, ತೂರಿ, ಅಲ್ಲಿದ್ದ ಗಟ್ಟಿಯಾಗಿರ್ದ ಪ್ರಸಾದವನೆ ಊಟವೆಂದು ಹಿಡಿದು, ಮುಟ್ಟಿ ನಿರ್ಮೊಳೊಡವೆರೆದು, ಬಟ್ಟಬಯಲಾದರು ಕಾಣಾ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೫೪

ಆಧಿಯಿಲ್ಲದಿದ್ದಡೆ ಲಿಂಗಪ್ರಸಾದಿಯೆಂಬೆ; ವ್ಯಾಧಿಯಿಲ್ಲದಿದ್ದಡೆ ಜಂಗಮಪ್ರಸಾದಿಯೆಂಬೆ; ಲೌಕಿಕವ ಸೋಂಕದಿದ್ದಡೆ ಸಮಯಪ್ರಸಾದಿ

ಯೆಂಬೆ. ಇಂತೀ ತ್ರಿವಿಧಪ್ರಸಾದ ಸಂಬಂಧಿಯಾದಾತನ ಅಚ್ಚಪ್ರಸಾದಿಯೆಂಬೆನು ಕಾಣಾ ಗೊಹೇಶ್ವರಾ.

೫೫

ಬ್ರಹ್ಮನ ಹುಟ್ಟು, ವಿಷ್ಣುವಿನ ಸ್ಥಿತಿ, ರುದ್ರನ ಲಯಕ್ಕೆ ಒಳಗಾದ ಮನುಜರೆಲ್ಲ ತಾವು ಪ್ರಸಾದಿ, ಪ್ರಾಣಲಿಂಗಿಗಳೆಂದು ನುಡಿದುಕೊಂಬಿರಿ. ಪ್ರಸಾದಿಸ್ಥಲ ಎಲ್ಲರಿಗೆಂತಾದುದಣ್ಣಾ? ಪ್ರಸಾದಿಸ್ಥಲ ಪರಮಸುಖ ಪರಿಣಾಮ. ಮನ ಮೇರೆದಪ್ಪಿ ತನುವನೆ ಪ್ರಸಾದವ ಮಾಡುವದೀಗ ಪ್ರಸಾದ. ಇದನರಿಯದೆ ಸದಮದವಾಗಿ ಮುಡಿ ನೋಡಿ ಒಡಲ ಕೆಡಿಸಿಕೊಂಬ ಜಡ ಮನುಜರ ನುಡಿಯ ಕೇಳಲಾಗದು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೫೬

ಲಿಂಗಕ್ಕೆ ರೂಪನರ್ಪಿಸುವೆ, ಜಂಗಮಕ್ಕೆ ರುಚಿಯನರ್ಪಿಸುವೆ. ಕಾಯಕ್ಕೆ ಶುದ್ಧಪ್ರಸಾದವ ಕೊಂಬೆ, ಪ್ರಾಣಕ್ಕೆ ಸಿದ್ಧಪ್ರಸಾದವ ಕೊಂಬೆ. ನಿಮ್ಮ ಪ್ರಸಾದದಿಂದ ಧನ್ಯಳಾದೆನಯ್ಯಾ ಚೆನ್ನಮಲ್ಲಿಕಾರ್ಜುನಾ.

೫೭

ಶಿವಪ್ರಸಾದವನಾರೋಗಣೆಯ ಮಾಡುವಲ್ಲಿ ಕರಣಂಗಳು ಕಡೆಗೆ ತುಳುಕದಿರಬೇಕು. ಚಿತ್ತವು ಅತ್ತಿತ್ತ ಹರಿಯದಿರಬೇಕು. ಶಿವಧ್ಯಾನ ಪರಾಯಣನಾಗಿರಬೇಕು. ಶಿವಪ್ರಸಾದದಲ್ಲಿ ಮನವು ಮಗ್ನವಾಗಿರಬೇಕು. ಪ್ರಸಾದವೆ ಪರಬ್ರಹ್ಮವೆಂಬ ಭಾವ ಬಲಿದಿರಬೇಕು. ತುತ್ತುತುತ್ತಿಗೆ ಶಿವ ಮಂತ್ರವ ಉಚ್ಚರಿಸುತಿರಬೇಕು. ಶಿವಪ್ರಸಾದದ ಘನವ ಕಂಡು ಮನವು ಹಿಗ್ಗಿ ಪರಮಪರಿಣಾಮದೊಳಗೋಲಾಡುತಿರಬೇಕು. ಇಂತೀ ಭೇದವ ನರಿಯಬಲ್ಲಾತನೆ ಅಚ್ಚಪ್ರಸಾದಿಯಯ್ಯಾ ಅಖಂಡೇಶ್ವರಾ.

೫೮

ತನು ಮುಟ್ಟದ ಮುನ್ನವೆ ಲಿಂಗಾರ್ಪಿತವ ಮಾಡಬೇಕು. ಮನ ಮುಟ್ಟದ ಮುನ್ನವೆ ಲಿಂಗಾರ್ಪಿತವ ಮಾಡಬೇಕು. ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕೆಂಬ ಪಂಚೇಂದ್ರಿಯಂಗಳು ಮುಟ್ಟದ ಮುನ್ನವೆ ಲಿಂಗಾರ್ಪಿತವ

ಮಾಡಬೇಕು. ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಪ್ರಸಾದಿಯಾದೊಡೆ ಇಂತಾಗಬೇಕಯ್ಯಾ. ಇಂತಿಲ್ಲದವರು ಬರುಕಾಯರೆನಿಸುವರಯ್ಯಾ.

೫೯

ಆಯತ ಸ್ವಾಯತ ಸನ್ನಿಹಿತದ ಸಂಭ್ರಮದ ಅನಾಯತಂಗಳು ಮುಟ್ಟಲಮ್ಮವು ನೋಡಾ. ಆತ ವಿಪರೀತ ಚಾರಿತ್ರ. ಅದೆಂತೆಂದೊಡೆ: ಶ್ರೋತ್ರದ ಕೈಯಲರ್ಪಿಸುವ, ನೇತ್ರದ ಕೈಯಲರ್ಪಿಸುವ, ಘ್ರಾಣದ ಕೈಯಲರ್ಪಿಸುವ, ಜಿಹ್ವೆಯ ಕೈಯಲರ್ಪಿಸುವ, ತ್ವಕ್ಕಿನ ಕೈಯಲರ್ಪಿಸುವ, ಮನದ ಕೈಯಲರ್ಪಿಸುವ. ಅಲ್ಲಲ್ಲಿಗೆ ತಟ್ಟದ ಮುಟ್ಟದ ಸೋಂಕದ ಸುಖಂಗಳೆಲ್ಲವನು ಆ ಶರಣನು ವಿಚಾರದಿಂದಲ್ಲಲ್ಲಿಗೆ ಲಿಂಗಾರ್ಪಿತವ ಮಾಡುವ ಮರ್ಮವ ಬಲ್ಲನಾಗಿ, ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಆತನೆ ಮಹಾಪ್ರಸಾದಿಯಯ್ಯಾ.

೬೦

ಕೇಳುವ ಸಂಗೀತ, ನೋಡುವ ಸುರೂಪಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ವಾಸಿಸುವ ಸುಗಂಧ ರುಚಿಸುವ ಸುರಸಂಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ತಟ್ಟು ಮುಟ್ಟು ತಾಗುನಿರೋಧ ಸೋಂಕುಸಂಬಂಧಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ಹಲ್ಲುಕಡ್ಡಿ ದರ್ಪಣ ಮೊದಲಾದ ಪದಾರ್ಥಂಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ಚಳಿ ಮಳೆ ಗಾಳಿ ಬಿಸಿಲು ಸಿಡಿಲು ಮಿಂಚು ನೀರು ನೆಳಲುಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ಪೃಥ್ವಿ ಗಗನ ತತ್ವತೋರಿಕೆ ಸೂರ್ಯ ಚಂದ್ರ ಅಗ್ನಿ ತಾರೆ ಪ್ರಕಾಶಂಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು. ಇಂತೀ ಲಿಂಗಾರ್ಪಿತ ಸಕೀಲವನರಿಯದೆ, ಬರಿದೆ ಪ್ರಸಾದಿಗಳೆಂದು ನುಡಿವ ನುಡಿಜಾಣರ ಕಂಡು ನಾಚಿದೆನಯ್ಯಾ ಅಖಂಡೇಶ್ವರಾ.

೬೧

ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಪ್ರಾಣಪ್ರವೇಶವಾದುದಾಗಿ, ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ ನೋಡಯ್ಯಾ. ಭಕ್ತ

ನೊಳಗೆ ಪ್ರಸಾದ, ಪ್ರಸಾದದೊಳಗೆ ಭಕ್ತ ನೋಡಯ್ಯಾ. ಭಕ್ತಕಾಯ ಮಮಕಾಯವೆಂದುದಾಗಿ, ಆ ಭಕ್ತಕಾಯ ಪ್ರಸಾದಕಾಯ ನೋಡಯ್ಯಾ. ವಿಶ್ವತೋಚಕ್ಷುವಿನೊಳಗೆ, ಜ್ಞಾನಚಕ್ಷು ಒಂದೆ ನೋಡಯ್ಯ. ಆ ಜ್ಞಾನ ಚಕ್ಷುವಿನೊಳಗೆ ವಿಶ್ವತೋಚಕ್ಷು ನೋಡಯ್ಯಾ. ವಿಶ್ವತೋಮುಖದೊಳಗೆ ಸೂಸುವ ಜ್ಞಾನಮುಖ ಒಂದೆ ನೋಡಯ್ಯಾ. ವಿಶ್ವತೋ ಬಾಹುಗಳೊಳಗೆ ನಮಸ್ಕಾರಬಾಹು ಒಂದೆ ನೋಡಯ್ಯಾ. ವಿಶ್ವತೋಪಾದದೊಳಗೆ ನಿಮ್ಮ ದಿವ್ಯ ಶ್ರೀಪಾದ ಒಂದೆ ನೋಡಯ್ಯಾ. ಈ ಹೇಂಗಿರ್ದಿತ್ತೆಂಬುದನರಿದು, ಲಿಂಗವ ಮನದಲ್ಲಿ ನೆನೆದು ಜಂಗಮಕ್ಕೆ ಧನವನಿತ್ತು, ಪ್ರಸಾದವ ಮನದಲ್ಲಿ ನೆನೆದು ಪ್ರಸಾದಕ್ಕೆ ತನುವನಿತ್ತು, ಮತ್ತೆ ಲಿಂಗವ ದೃಷ್ಟಿಯಲ್ಲಿ ನೋಡಿ ಲಿಂಗಕ್ಕೆ ನೋಟವನಿತ್ತು, ಲಿಂಗಶ್ರೋತ್ರದಿಂದ ಕೇಳಿ ಆ ಕೇಳಿಕೆಯ ಲಿಂಗಕ್ಕಿತ್ತು, ಲಿಂಗತ್ವಕ್ಕಿನಿಂದ ಸ್ಪರ್ಶಿಸಿ ಲಿಂಗಕ್ಕೆ ಸ್ಪರ್ಶನವಿತ್ತು, ಲಿಂಗ ಜಿಹ್ವೆಯಿಂದೆ ರುಚಿಸಿ ಲಿಂಗಕ್ಕೆ ರುಚಿಸಲಿತ್ತು, ಲಿಂಗಘ್ರಾಣದಿಂದ ಘ್ರಾಣಿಸಿ ಲಿಂಗಕ್ಕೆ ಘ್ರಾಣಿಸಲಿತ್ತು, ಇಂತು ಸರ್ವದ್ರವ್ಯವನು ಲಿಂಗಕ್ಕಿತ್ತು, ಲಿಂಗಕಾಯದಿಂದೆ ಭೋಗಿಸಿ, ಲಿಂಗಕ್ಕೆ ಭೋಗಿಸಲಿತ್ತು, ಆ ಪ್ರಸಾದವ ತಾ ನಿರ್ಧರಿಸಿ, ಪ್ರಸಾದಕಾಯದಿಂದೆ ಸರ್ವಭೋಗೋಪಭೋಗದನುವ ನರಿತು ಭೋಗಿಸುವನಯ್ಯಾ ನಿಮ್ಮ ಪ್ರಸಾದಿ. ಇದು ಕಾರಣವಾಗಿ ಭಕ್ತ ದೇಹಿಕದೇವ ನಮ್ಮ ಕೂಡಲಚೆನ್ನಸಂಗಯ್ಯನೆಂದರಿದು ಪ್ರಸಾದಿ ಪ್ರಸಾದಿ ಯಾದೆನಯ್ಯಾ.

೬೨

ತನುವ ತಾಗದ ಮುನ್ನ, ಮನವ ತಾಗದ ಮುನ್ನ, ಆಪ್ಯಾಯನ ಬಂದು ಎಡೆಗೊಳ್ಳದ ಮುನ್ನ ಅರ್ಪಿತವ ಮಾಡಬೇಕು. ಗುರುವಿನ ಕೈಯಲ್ಲಿ ಎಳತಟವಾಗದ ಮುನ್ನ ಅರ್ಪಿತವ ಮಾಡಬೇಕು. ಎಡದ ಕೈಯಲ್ಲಿ ಕಿಚ್ಚು, ಬಲದ ಕೈಯಲ್ಲಿ ಹುಲ್ಲು, ಉರಿ ಹತ್ತಿತ್ತು ಗೊಹೇಶ್ವರಾ ನಿಮ್ಮ ಪ್ರಸಾದಿಯ.

೬೩

ಉರಗನ ಫಣಾಮಣಿಯ ಬೆಳಗಿನಲ್ಲಿ ನಿಂದ ಪ್ರಸಾದಿ, ಕರಿಯ ಕೊಂದ ಹರಿಯ ಬೆಳಗಿನೊಳಗೆ ನಿಂದ ಪ್ರಸಾದಿ, ಶಿರದ ಮೇಲೆ ನಿಂದ

ಗಂಗೆಯ ಬೆಳಗಿನಲ್ಲಿ ನಿಂದ ಪ್ರಸಾದಿ, ಉರಮಧ್ಯದಲ್ಲಿಪ್ಪ ಪರಂಜ್ಯೋತಿಯ ಬೆಳಗಿನಲ್ಲಿ ನಿಂದ ಪ್ರಸಾದಿ, ಪೂರ್ವ ಪಶ್ಚಿಮ ಏಕವಾದ ಬೆಳಗಿನಲ್ಲಿ ನಿಂದ ಪ್ರಸಾದಿ. ಇಂತೀ ಘನವನೆಲ್ಲವನೊಳಗೊಂಡು, ಮಹಾ ಬೆಳಗಿನಲ್ಲಿ ನಿಂದ ಪ್ರಸಾದಿ. ಚೆನ್ನಮಲ್ಲೇಶ್ವರನ ಪ್ರಸಾದವ ಕೊಂಡು ನಾ ಉರಿಯುಂಡ ಕರ್ಪುರದಂತಾದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೬೪

ನಿರ್ವಾಹವಾಯಿತ್ತು ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ. ಅಕ್ಕ ನಾಗಾಯಿ ಮಿಂಡಮಲ್ಲಿನಾಥ ಹಡಪದಪ್ಪಣ್ಣ ಮೊಗವಾಡದ ಕೇಶಿರಾಜ ಕೋಲಶಾಂತಯ್ಯ ಮೊದಲಾದ ಶಿವಗಣಂಗಳು ಬಸವಣ್ಣನ ಬಯಲ ಪ್ರಸಾದವ ಬೆರಸಿದರು. ಆ ಬಯಲ ಪ್ರಸಾದದಿಂದ ಮೋಳಿಗೆಯ ಮಾರಯ್ಯ ಡೋಹರಕಕ್ಕಯ್ಯ ಪಡಿಹಾರಿಉತ್ತಣ್ಣ ಕಲಕೇತಬ್ರಹ್ಮಯ್ಯ ನುಲಿಯ ಚೆಂದಯ್ಯ ಕನ್ನದ ಮಾರಯ್ಯ ಸುರಿಗಿಯ ಚೌಡಯ್ಯ ಹೆಂಡದ ಮಾರಯ್ಯ ಶಂಕರ ದಾಸಿಮಯ್ಯ ಏಕಾಂತದ ರಾಮಯ್ಯ ಮೇದಾರ ಕೇತಯ್ಯ ಮೊದಲಾದ ಶಿವಗಣಂಗಳ ದಂಡು ನಡೆಯಿತ್ತು ಕೈಲಾಸಕ್ಕೆ. ಬಂದ ಮಣಿಹ ಸಂದಿತ್ತು. ಸಂದ ಪುರಾತರೆಲ್ಲರೂ ಎನ್ನ ಮನದ ಮೈಲಿಗೆಯ ಕಳೆದ ಕಾರಣ ಇವರೆಲ್ಲರ ಒಕ್ಕುಮಿಕ್ಕ ಬಯಲ ಪ್ರಸಾದ ಎನಗಾಯಿತ್ತು ಕಲಿದೇವರ ದೇವಾ.

೬೫

ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗ ಭೋಗ. ಅಂಗಭೋಗವನರ್ಪಿತ, ಲಿಂಗಭೋಗ ಪ್ರಸಾದವಯ್ಯಾ. ಬೇಕೆಂಬುದು ಕಾಯದ ಗುಣ. ಬೇಡೆಂಬುದು ವೈರಾಗ್ಯ. ಬೇಕೆಂಬುವನಲ್ಲ, ಬೇಡೆಂಬುವನಲ್ಲ. ಈ ಉಭಯವನತಿಗಳೆದು ಭೋಗಿಸಬಲ್ಲಡೆ ಕೂಡಲಚೆನ್ನ ಸಂಗಾ, ನಿಮ್ಮ ಶರಣನೆಂಬೆನು.

೬೬

ಅಂಗಸುಖಿಗೆ ಲಿಂಗಸುಖವಳವಡದು. ಲಿಂಗಸುಖಿಗೆ ಅಂಗಸುಖವಳ ವಡದು. ವಾಗದ್ವೈತ, ಕ್ರಿಯಾದ್ವೈತ, ಭಾವಾದ್ವೈತ—ಇಂತೀ ತ್ರಿವಿಧಾ

ದ್ವೈತ ಲಿಂಗಸುಖ ಸಾಹಿತ್ಯವಾದಲ್ಲಿ, ನರಕವಿಲ್ಲ, ಕರ್ಮವಿಲ್ಲ; ಫಲವಿಲ್ಲ, ಪದವಿಲ್ಲ; ಇಹವಿಲ್ಲ ಪರವಿಲ್ಲ. ಸೌರಾಷ್ಟ್ರಸೋಮೇಶ್ವರಾ, ನೀ ಸಾಕ್ಷಿಯಾಗಿ ಅಂಗಸುಖಿಗೆ ಲಿಂಗಸುಖ ದೊರಕೊಳ್ಳದು.

೬೭

ಅಂಗಕ್ಕೆ ಆಚಾರವಳವಟ್ಟಲ್ಲಿ, ಲಿಂಗಕ್ಕೆ ಆ ಅಂಗವೇ ಅರ್ಪಿತ. ಪ್ರಾಣಕ್ಕೆ ಪ್ರಸಾದ ಸಾಧ್ಯವಾದಲ್ಲಿ, ಲಿಂಗಕ್ಕೆ ಆ ಮನವೇ ಅರ್ಪಿತ. ಭಾವಭ್ರಮೆಯನತಿಗಳೆದು ನಿರ್ಭಾವವಾದಲ್ಲಿ, ಲಿಂಗಕ್ಕೆ ಆ ಭಾವನೆಯರ್ಪಿತ. ಜ್ಞಾತೃ ಜ್ಞಾನ ಜ್ಞೇಯವೆಂಬ ಸಂಪುಟವಾಗಿ ಅರಿವು ನಿಶ್ಚೈಸಿ ನಿಷ್ಪತ್ತಿಯಾಗಿ ಕುರುಹುಗೆಟ್ಟಲ್ಲಿ, ಲಿಂಗಕ್ಕೆ ಆ ಅರಿವೆ ಅರ್ಪಿತ. ಇಂತು ಸರ್ವಾಂಗವೆ ಅರ್ಪಿತ. ಈ ಹೀಗೆ ಅರ್ಪಿತವಾಗಿ ಲಿಂಗಕ್ಕೆ ಒಡೆತನವನಿತ್ತ ಕಾರಣ, ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ನಾನೆಂದರಿಯದೆ ನಿಂದ ನಿಲವು ನೋಡಾ ಪ್ರಸಾದಿ.

೬೮

ಕಾಯ ಪ್ರಸಾದವೆನ್ನ, ಜೀವ ಪ್ರಸಾದವೆನ್ನ, ಪ್ರಾಣ ಪ್ರಸಾದವೆನ್ನ, ಭಾವ ಪ್ರಸಾದವೆನ್ನ, ಸುಯಿಧಾನ ಪ್ರಸಾದವೆನ್ನ, ಸಮಯ ಪ್ರಸಾದವೆನ್ನ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮಪ್ರಸಾದವ ಹಾಸಿ ಹೊದೆದುಕೊಂಡಿಪ್ಪೆನು.

೬೯

ಒಮ್ಮೆ ನೀ ದೇವನಾದಲ್ಲಿ ನಾ ಭಕ್ತನಾಗಿರ್ಪೆನು. ಮತ್ತೊಮ್ಮೆ ನಾ ದೇವನಾದಲ್ಲಿ ನೀವು ಭಕ್ತರಾಗಿರ್ಪಿರಿ. ಅದೆಂತೆಂದೊಡೆ: ಎನ್ನ ತನು ಮನ ಪ್ರಾಣೇಂದ್ರಿಯಂಗಳು ನಿಮಗರ್ಪಿತವಾದವು. ನಿಮ್ಮ ಮಹಾಪ್ರಸಾದವೆನ್ನೊಳಗಾಯಿತ್ತಾಗಿ–ಅಖಂಡೇಶ್ವರಾ, ನೀವೇ ಪದಾರ್ಥ, ನಾನೇ ಪ್ರಸಾದವಯ್ಯಾ.

೭೦

ಜೀವಭಾವದಿಂದೆ ಜೀವನ ತಿಂದು ಜೀವಿಸಿ, ಜನನಮರಣಗಳಿಂದೆ ದುಃಖಬಡುತಿರ್ಪುವು ನೋಡಾ ಸಕಲಪ್ರಾಣಿಗಳು. ಅದೆಂತೆಂದೊಡೆ:

ಪೃಥ್ವೀಬೀಜಂ ತಥಾ ಮಾಂಸಂ ಅಪ್‌ದ್ರವ್ಯಂ ಸುರಾಮಯಂ
ಆತ್ಮಜೀವಸಮಾಯುಕ್ತಂ ಜೀವಂ ಜೀವೇನ ಭಕ್ಷಯೇತ್

ಎಂದುದಾಗಿ, ಇಂತಪ್ಪ ಜೀವಮಯವಾದ ಪದಾರ್ಥವನು ಶುದ್ಧಸಂಸ್ಕಾರವ ಮಾಡಿ ಲಿಂಗಜಂಗಮದ ಮುಖಕ್ಕೆ ಸಮರ್ಪಿಸಿ, ಆ ಲಿಂಗಜಂಗಮದ ಮುಖದಲ್ಲಿ ಒದಗಿದ ಪರಮಪ್ರಸಾದವನು ಭೋಗಿಸುವ ಸದ್‌ಭಕ್ತಂಗೆ ಜನನ ಮರಣಂಗಳು ದೂರವಾಗಿರ್ಪುವಯ್ಯಾ ಅಖಂಡೇಶ್ವರಾ.

೧೫

ಅಂತರಂಗದ ಅನುಭಾವ

೧. ಸುಜ್ಞಾನ

೧

ಸರ್ವಜ್ಞಾನಿಗಳಾಗಿಯುಚ್ಚುಗಬಡುವಡೆ, ಹಬ್ಬಿದ ಪಾಪದ ಫಲವ ನುಂಬಡೆ, ಒಬ್ಬಳವನೆ ಬಿತ್ತಿ ಒಬ್ಬಳವನೆ ಬೆಳೆವಡೆ, ಕಬ್ಬುನ ಹುಳಿವಡಿನ್ನೇವೆ ರಾಮನಾಥಾ?

೨

ತನ್ನ ತಾನರಿಯದೆ, ತನ್ನ ತಾ ನೋಡದೆ, ತನ್ನ ತಾ ನುಡಿಯದೆ, ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ. ಅವನು ಸರ್ವಾಪರಾಧಿ. ಅವನ ಮುಖವ ನೋಡಲಾಗದು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೩

ಕ್ರಿಯೆಯನರಿದವಂಗೆ ಗುರುವಿಲ್ಲ. ಆಚಾರವನರಿದವಂಗೆ ಲಿಂಗವಿಲ್ಲ. ಉತ್ಪತ್ತಿ ಸ್ಥಿತಿ ಲಯವನರಿದವಂಗೆ ಜಂಗಮವಿಲ್ಲ. ಪರಬ್ರಹ್ಮವನರಿದವಂಗೆ ಸರ್ವೇಂದ್ರಿಯವಿಲ್ಲ. ತನ್ನನರಿದವಂಗೆ ಹಿಂದುಮುಂದು ಕಾಂಬುವುದೊಂದು ಇಲ್ಲೆಂದನಂಬಿಗಚೌಡಯ್ಯ.

೪

ಗುರುವೆಂದೆಂಬೆನೆ? ಹಲಬರ ಮಗ. ಲಿಂಗವೆಂದೆಂಬೆನೆ? ಕಲುಕುಟಿಗನ ಮಗ. ಪ್ರಸಾದವೆಂದೆಂಬೆನೆ? ಒಕ್ಕಲಿಗನ ಮಗ. ಪಾದತೀರ್ಥವೆಂದೆಂಬೆನೆ? ದೇವೇಂದ್ರನ ಮಗ. ಈಸುವನು ಹಿಡಿಯಲಿಲ್ಲ, ಬಿಡಲಿಲ್ಲ. ತನ್ನೊಳಗೆ ನೋಡೆಂದಾತ ನಮ್ಮಾ ಅಂಬಿಗರ ಚೌಡಯ್ಯನು.

೫

ಅಮರದ ಹೊಲಬನರಿಯದೆ ಜಗವೆಲ್ಲಾ ಬರಡಾಯಿತ್ತು. ಅಂಗದ ಹೊಲಬನರಿಯದೆ ಯೋಗಿಗಳೆಲ್ಲಾ ಭಂಗಿತರಾದರು. ಸಂಗದ ಹೊಲಬನರಿ

ಯದೆ ಶರಣರು ಭಂಗಿತರಾದರು. ಲಿಂಗದ ಹೊಲಬನರಿಯದೆ ಭಕ್ತ, ಶೀಲವಂತನಾದ. ಆದಿಮಧ್ಯಾವಸಾನದಲ್ಲಿ ಗೊಹೇಶ್ವರಲಿಂಗವು ಅರಿವಿನ ಮರೆಯಲ್ಲಿಹುದನಾರೂ ಅರಿಯರಲ್ಲಾ!

೬

ಮನದ ಕತ್ತಲೆಯೊಳಗಣ ಜ್ಯೋತಿಯ ಕೊನೆಯ ಮೊನೆಯ ಮೇಲೆ ಘನವನರಿದಹೆನೆಂಬವರ ಅನುಮಾನಕ್ಕೆ ದೂರ; ತಮತಮಗೆ ಅರಿದಹೆನೆಂಬವರಿಗೆ ಕನಸಿನ ಲಿಂಗ ಗೊಹೇಶ್ವರ.

೭

ಆಕಾರವಲ್ಲದ ನಿರಾಕಾರದ ಲಿಂಗವ ಕೈಯಲ್ಲಿ ಹಿಡಿದು, ಕೊರಳಲ್ಲಿ ಕಟ್ಟಿದೆವೆಂದೆಂಬರು ನರಕಿಜೀವಿಗಳು. ಹರಿಬ್ರಹ್ಮರು, ವೇದಶಾಸ್ತ್ರಂಗಳರಸಿ ಕಾಣದ ಲಿಂಗ. ಭಕ್ತಿಗೆ ಫಲಪದಂಗಳಲ್ಲದೆ ಲಿಂಗವಿಲ್ಲ. ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ. ಇದು ಕಾರಣ ಅದ್ವೈತದಿಂದ ತನ್ನ ತಾನರಿದು ತಾನಾದರೆ ಚೆನ್ನಮಲ್ಲಿಕಾರ್ಜುನ ಲಿಂಗ ತಾನೆ, ಬೇರಿಲ್ಲ.

೮

ಉಂಬರೆ ಬಂದು, ಬಾಯ ಮರೆದೆನೆಂದು ಮೊರೆಯಿಡುತಿರ್ಪ ಅರಿಕೆಹೀನನ ತೆರನಂತಾಯಿತ್ತು. ಅರಿಕೆಯನರಿಯೆಂದು ಕುರುಹ ಕೊಟ್ಟರೆ, ಆ ಕುರುಹ ಮರೆದು, ಅರಿದೆನೆಂಬ ಕುರುಬರ ನೋಡಾ ಜಾಂಬೇಶ್ವರಾ!

೯

ನಿತ್ಯ ನಿರಂಜನ ಜ್ಯೋತಿರ್ಲಿಂಗವು ಪ್ರತ್ಯಕ್ಷವಾಗಿ ಕರಸ್ಥಲಕ್ಕೆ ಬರಲು, ಮತ್ತೆ ನೆನೆನೆನೆದು ಬದುಕಿಹೆನೆಂಬುದು ಅಜ್ಞಾನ ಕಾಣಿರೇ. ಅದು ಏನು ಕಾರಣವೆಂದೊಡೆ, ಸತ್ಯವು ಸರ್ವಾಂಗಲಿಂಗವೆಂದರಿಯದೆ ಮತ್ತೆ ಕಾಯವೆರಸಿ ಕೈಲಾಸಕ್ಕೆ ಹೋಗಬೇಕೆಂಬರು, ಕ್ರಮವಲ್ಲ. ಪಂಚಾಮೃತವು ಮುಂದೆ ಬಂದಿರಲು, ಹಸಿದೆನೆಂದು ಲೋಗರ ಮನೆಯಲ್ಲಿ ಅನ್ನ ಬೇಡುವರೇ? ಕಣ್ಣ ಮುಂದೆ ನಿಧಾನವಿರುತ್ತಿರಲು, ಬಳಸಲರಿಯದೆ ಬಡತನದೊಳಗಿಹರೇ? ಲಿಂಗವಿಲ್ಲದವರು ಮೊದಲೇ ಲಿಂಗವ ನೆನೆದು ಬದುಕಿಹೆವೆಂಬರು. ಇದ

ಕಂಡು ನಂಬದಿಹುದುಚಿತವೇ? ಆಹಾ! ಇದು ಗುಣವಲ್ಲ. ಮುಂಗಯ್ಯ ಕಂಕಣಕ್ಕೆ ಕನ್ನಡಿ ಬೇಡ. ಅಂಗದ ಮೇಲೆ ಲಿಂಗವಿದ್ದುದಕ್ಕೆ ಲಿಂಗದ ಪರಿ ಎಂತೆಂದು ಅನ್ಯರ ಬೆಸಗೊಳಲಿಲ್ಲ. ಬೇರೆ ಮತ್ತೆ ಅರಸಲಿಲ್ಲ. ಕಾಣೆನೆಂದು ಮರುಗಲಿಲ್ಲ. ಮುಂದೆ ಜನ್ಮ ಉಂಟೆಂದು ಮನದಲ್ಲಿ ನೋಯಲಿಲ್ಲ. ಇದು ಕಾರಣ, ತನ್ನ ಕರಸ್ಥಲದಲ್ಲಿದ್ದ ವಸ್ತುವ ತಾನರಿದೊಡೆ, ತಾನೇ ಶಿವನು. ಇದು ಸತ್ಯ, ಶಿವಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೦

ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ. ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ. ಸರ್ವಕಾರಣ ಲಿಂಗವೆಂದುದಾಗಿ, ಲಿಂಗವನೆ ಅರಿದೆ. ಅರಿದರಿದು ಲಿಂಗಸಂಗವನೆ ಮಾಡುವೆ. ಸಂಗಸುಖದೊಳಗೋಲಾಡುವೆ ಗೊಹೇಶ್ವರಾ.

೧೧

ಸಿಡಿಲೊಡನೆ ಕಾದುವಂಗೆ ಕೊಡೆಯೊಂದು ಮರೆಯೆ? ಪರ್ವತವ ಹೊರುವಂಗೆ ಸಿಂಬೆಯೊಂದು ಸಹಾಯವೆ? ಸಕ್ಕರೆಯ ಸವಿವುದಕ್ಕೆ ಬೇವೊಂದು ಪದಾರ್ಥವೇ? ಗೊಹೇಶ್ವರನನರಿವುದಕ್ಕೆ ಕುರುಹು ಮುನ್ನೇಕೆ?

೧೨

ಕಾಣಬಾರದ ಘನವೆಂದು ಜಗವೆಲ್ಲ ಹೇಳುತ್ತಿದೆ. ಈ ಕಾಣಬಾರದ ಘನವ ನಾನಾರ ಕೇಳಲಯ್ಯ? ಗುರು ಹೇಳಲಿಲ್ಲ, ಲಿಂಗ ಹೇಳಲಿಲ್ಲ, ಜಂಗಮ ಹೇಳಲಿಲ್ಲ. ಅದು ಹೇಗೆ ಎಂದರೆ: ಗುರು ಒಂದು ಲಿಂಗವ ಕೊಟ್ಟು, ತನ್ನ ಅಂಗವ ಕುರಿತು, ಆ ಲಿಂಗಕ್ಕೆ ಬೆಲೆಯ ತಕ್ಕೊಂಡು ಹೋದನಲ್ಲದೆ, ಆ ಕಾಣಬಾರದ ಘನವ ಹೇಳಿದುದು ಇಲ್ಲ. ಇದ ಲಿಂಗವೆಂದು ಪೂಜಿಸಿದರೆ, ಕಂಗಳ ಕಾಮ ಘನವಾಯಿತ್ತಲ್ಲ! ಎರಡರ ಸಂಗ ಸುಖವ ಹೇಳಲರಿಯದೆ, ಜಂಗಮವೆಂದು ಪೂಜೆಯ ಮಾಡಿದರೆ, ಈ ಜಗದೊಳಗೆ ಹುಟ್ಟಿದ ಪದಾರ್ಥಕ್ಕೆ ಒಡೆಯನಾದನಲ್ಲದೆ, ಈ ಕಾಣಬಾರದ ಘನವ ಹೇಳಿದುದಿಲ್ಲ. ಅದೇನು ಕಾರಣವೆಂದರೆ, ಆ ಕಾಣಬಾರದ ಘನವ, ತಾನೊಬ್ಬರ ಕೇಳಲು ಬಾರದು, ತಾನೊಬ್ಬರಿಗೆ ಹೇಳಲು ಬಾರದು. ಏಕೆ? ನಾಮರೂಪಿಲ್ಲ

ವಾಗಿ, ನುಡಿಗಿಲ್ಲ. ಇಂತಪ್ಪ ಘನ ತಾನೆ ಒಂದು ರೂಪ ತೊಟ್ಟು, ತನ್ನ ಲೀಲೆಯು ಎಲ್ಲ ಶರಣರೊಳು ನಟಿಸಿ, ತನ್ನ ತಾನೆ ಸಾಕಾರ ನಿರಾಕಾರವಾಗಿ, ಏಕವಾದ ಭೇದವನರಿಯದೆ ಈ ಲೋಕದಲ್ಲಿ ಇದ್ದರೇನು? ಆ ಲೋಕದಲ್ಲಿಗೆ ಹೋದರೇನು? ಹದಿನಾಲ್ಕು ಲೋಕವು ತಾನೆಯಾದ ಚಿನ್ಮಯನ ಹೇಳಿಹೆನೆಂದರೆ ಎನ್ನಳವಲ್ಲ. ಬಸವಪ್ರಿಯ ಕೂಡಲಚೆನ್ನಬಸವಣ್ಣ ನೀವೆ ಬಲ್ಲಿರಿ.

೧೩

ಮನವನರಿದಂಗೆ ಮತದ ಹಂಗೇಕೋ? ನಿತ್ಯವನರಿದಂಗೆ ತೀರ್ಥದ ಹಂಗೇಕೋ? ಪರಮಾರ್ಥವನರಿದಂಗೆ ಪ್ರಸಾದದ ಹಂಗೇಕೋ? ಜ್ಯೋತಿಯನರಿದಂಗೆ ಕತ್ತಲೆಯ ಹಂಗೇಕೋ? ಲೋಕವನರಿದಂಗೆ ವ್ಯಾಕುಲದ ಹಂಗೇಕೋ? ಈ ತೆರನನರಿದಂಗೆ ಮುಂದಾವ ಭೀತಿಯುಂಟು ಹೇಳಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೪

ಕುರುಹೇ ಘಟವಾಗಿ, ಅರಿವೇ ಆತ್ಮನಾಗಿ, ಉಭಯವನರಿವುದು ಆಚಾರದಂಗವಾಗಿ, ಇವು ನಿಂದು ಅಳಿಯೆ ಐಘಟದೂರ ರಾಮೇಶ್ವರಲಿಂಗದ ಇರವು ಬಚ್ಚಬಯಲಾಯಿತ್ತು.

೧೫

ನಾವು ಲಿಂಗೈಕ್ಯ ಲಿಂಗಾನುಭಾವಿಗಳೆಂದು ಹೇಳುವ ಅಣ್ಣಗಳಿರಾ, ನೀವು ಎಂತಾದಿರಿ ಹೇಳಿರಣ್ಣಾ? ಅರಿಯದಿರ್ದರೆ ಕೇಳಿರಿ, ಗುರುಕೃಪೆಯಿಂದ ಹೇಳಿಹೆ. ಸರ್ವಸಂಗ ಪರಿತ್ಯಾಗವ ಮಾಡಬೇಕು. ಲೋಕಾಚಾರವ ಮುಟ್ಟದಿರಬೇಕು. ನುಡಿಯಂತೆ ನಡೆ ದಿಟವಾಗಬೇಕು. ಸರ್ವಾಚಾರ ಸಂಪತ್ತಿನಾಚರಣೆಯ ಸದ್ಗುರುಮುಖದಿಂದಾಚರಿಸಬೇಕು. ನಾನು ಆರು, ನನ್ನ ಜೀವವೇನು, ನಾ ಬಂದ ಮುಕ್ತಿದ್ವಾರವಾವುದು, ನಾ ಹೋಗುವ ನಿಜ ಕೈವಲ್ಯ ಪದವಾವುದು, ನನ್ನ ಇರವೇನು–ಎಂದು ಅರಿದಾಚರಿಸಬಲ್ಲಾತನೇ ನಿಜಲಿಂಗಾನುಭಾವಿ, ಲಿಂಗೈಕ್ಯ ನೋಡಾ ಕಲಿದೇವರದೇವಾ.

೧೬

ನೀರೊಳಗಣ ಕಿಚ್ಚು ತಾಯಲ್ಲಿ ಅಡಗಿತ್ತು. ಶಿಲೆಯೊಳಗಣ ಕಿಚ್ಚು ತಾಯನುಳುಹಿ ಇದಿರ ಸುಟ್ಟಿತ್ತು. ಮರದೊಳಗಣ ಕಿಚ್ಚು ಮರವನು ಸುಟ್ಟು ಇದಿರನು ಸುಟ್ಟು ಪರಿಸ್ಪಂದಕ್ಕೆ ಹರಿಯಿತ್ತು. ಇಂತೀ ತ್ರಿವಿಧದ ಜ್ಞಾನದ ಭೇದವನರಿ,–ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೧೭

ನೀರೊಳಗಣ ಕಿಚ್ಚಿಗೆ ನೀರೇ ತಾಯಿ. ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ. ಮರದೊಳಗಣ ಕಿಚ್ಚಿಗೆ ಮರವೇ ತಾಯಿ. ಅವು ಹೊರಹೊಮ್ಮಿದಾಗ ತಾಯ ತಿಂದು ತಾವು ತಲೆದೋರುವಂತೆ, ಕುರುಹಿಂದ ಅರಿವನರಿತು ಅರಿವು ಕುರುಹ ನಷ್ಟವ ಮಾಡಿ ನಿಂದಲ್ಲಿಯೇ ಐಘಟದೂರ ರಾಮೇಶ್ವರ ಲಿಂಗವು ಅಂಗವರತು ನಿಂದ ನಿಲವು.

೧೮

ಸಸಿಗೆ ನೀರೆರೆದರೆ ಎಳಕುವುದಲ್ಲದೆ, ನಷ್ಟಮೂಲಕ್ಕೆ ಹೊತ್ತು ನೀರ ಹೊಯ್ದರೆ ಎಳಕುವುದೆ ಮಾರಯ್ಯ? ನಿನ್ನ ವಿರಕ್ತಿ ನಷ್ಟವಾಗದ ಮುನ್ನವೆ ಮಾರಯ್ಯಪ್ರಿಯ ಅಮರೇಶ್ವರಲಿಂಗವನರಿಯಿರಯ್ಯಾ.

೧೯

ತಾನಿಲ್ಲದ ಮುನ್ನವೆ ಗುರುವೆಲ್ಲಿಯದೋ? ಲಿಂಗವೆಲ್ಲಿಯದೋ? ಜಂಗಮವೆಲ್ಲಿಯದೋ? ಪ್ರಸಾದವೆಲ್ಲಿಯದೋ? ಪರವೆಲ್ಲಿಯದೋ? ಸ್ವಯುವೆಲ್ಲಿಯದೋ? ತನಗೆ ತೋರಿದ ಗುರು. ತನಗೆ ತೋರಿದ ಲಿಂಗ. ತನಗೆ ತೋರಿದ ಜಂಗಮು. ತನಗೆ ತೋರಿದ ಪ್ರಸಾದ. ತನಗೆ ತೋರಿದ ಪರ. ತನಗೆ ತೋರಿದ ಸ್ವಯು. ಗುರುವೆಂದರಿದವನು ತಾನೇ. ಲಿಂಗವೆಂದರಿದವನು ತಾನೇ. ಜಂಗಮುವೆಂದರಿದವನು ತಾನೇ. ಪ್ರಸಾದವೆಂದರಿದವನು ತಾನೇ. ಪರವೆಂದರಿದವನು ತಾನೇ. ಸ್ವಯುವೆಂದರಿದವನು ತಾನೇ. ಇಂತಿವೆಲ್ಲವ ಹೆತ್ತರಿವು ತಾನೇ ಸ್ವಯುಂಜ್ಯೋತಿ ಮಹಾಲಿಂಗಕಲ್ಲೇಶ್ವರ.

೨೦

ಅಂಗ ಲಿಂಗವಾದರೆ ಮತ್ತೆ ಕಾಳಪ್ಪುದೆ? ಮನ ಲಿಂಗವಾದರೆ ನಿಚ್ಚ ನಿಚ್ಚ ಲಯುವಪ್ಪುದೆ? ಪ್ರಾಣ ಲಿಂಗವಾದರೆ ಪ್ರಕೃತಿಯ ತಳೆವುದೆ? ಅರಿವು

ಲಿಂಗವಾದರೆ ಮರಹಿಂಗೊಳಗಹುದೆ ? ಭಾವ ಲಿಂಗವಾದರೆ ಸಕಲವಿಷಯಂಗಳಿಗೆ ಭ್ರಮಿಸುವುದೆ? ಜ್ಞಾತೃಜ್ಞಾನಜ್ಞೇಯು ಲಿಂಗವಾದರೆ ಅರಿವುದೇನು? ಅರುಹಿಸಿಕೊಂಬುದೇನು ? ಇವು ತಾವು ತಮ್ಮ ತಮ್ಮಂತೆ, ಸೌರಾಷ್ಟ್ರ ಸೋಮೇಶ್ವರಲಿಂಗ ಮುನ್ನಿನಂತೆ.

೨೧

ಘನವ ಕಂಡೆ, ಅನುವ ಕಂಡೆ. ಆಯತವ ಕಂಡೆ, ಸ್ವಾಯತವ ಕಂಡೆ, ಸನ್ನಿಹಿತವ ಕಂಡೆ.ಅರಿವನರಿದು ಮರಹ ಮರೆದೆ, ಕುರುಹಿನ ಮೋಹದ ಮರವೆಯನೀಡಾಡಿದೆ. ಚೆನ್ನಮಲ್ಲಿಕಾರ್ಜುನ, ನಿಮ್ಮನರಿದು ಸೀಮೆಗೆಟ್ಟೆನು.

೨. ಪ್ರಾಣಲಿಂಗಿ

೨೨

ಪ್ರಾಣನ ಕಳೆ ಪ್ರಕೃತಿಯಲ್ಲಿ ಅಡಗಿ, ಪ್ರಕೃತಿಯ ಕಳೆ ಪ್ರಾಣನಲ್ಲಿ ಅಡಗಿ, ಪ್ರಾಣನ ಕಳೆಯು ಪ್ರಕೃತಿಯ ಕಳೆಯು ಲಿಂಗವೆಂದರಿದು, ಅಂಗೈಸಿ ಅನುಭವಿಸಿಬಲ್ಲವರ ಲೆಂಕ ನಾನಾಗಿಪ್ಪೆನಯ್ಯಾ ರಾಮನಾಥಾ.

೨೩

ಅಗ್ನಿ ದಿಟವೆಂದಡೆ, ತಾ ಹುಸಿ ಕಾಷ್ಠವಿಲ್ಲದೆ. ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ ಪ್ರಾಣಲಿಂಗಿ ಎಂದೆಂಬೆನೆಂದನಂಬಿಗಚೌಡಯ್ಯ.

೨೪

ಪ್ರಾಣಲಿಂಗಿ ಪ್ರಾಣಲಿಂಗಿ ಎಂದು ನುಡಿದಾಡುತಿಪ್ಪಿರಿ. ಪ್ರಾಣಲಿಂಗದ ನೆಲೆಯನಾರು ಬಲ್ಲರು? ಪ್ರಾಣಲಿಂಗಿಯಾದರೆ ವಾಯುಪ್ರಾಣವ ನಿಲಿಸಿ, ಲಿಂಗ ಪ್ರಾಣವಾಗುವುದೀಗ ಪ್ರಾಣಲಿಂಗ. ಪ್ರಾಣಲಿಂಗಿಯಾದರೆ, ಗುರುಲಿಂಗಜಂಗಮದ ಪಾದೋದಕ ಪ್ರಸಾದವ ತನ್ನೊಳರಿದು, ಮೈಮರೆದು ಪರವಶನಾಗಿ ಲಿಂಗದೊಳಗೆ ಬೆರಸುವದೀಗ ಪ್ರಾಣಲಿಂಗಿ. ಇದನರಿಯದೆ ವಾಯು ಪ್ರಾಣವಾಗಿ, ಬಾಯ ನುಡಿಯ ಬಲ್ಲಿದರಾಗಿ ಬೊಗುಳಿಯಾಡುವ

ಜಾವಳರ ಮಾತ ಮೆಚ್ಚುವನೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ ?

೨೫

ಲಿಂಗ ಜಂಗಮ ಒಂದೆಂದರಿಯದೆ ಲಿಂಗ ಜಂಗಮವ ಭಿನ್ನವಿಟ್ಟು ಅರ್ಚಿಸುವರು. ಅದೆಂತೆಂದಡೆ, ಆ ದೇಹಕ್ಕೆ ಪ್ರಾಣಕ್ಕೆ ಭೇದ ಉಂಟೇ? ಬೀಜ ವೃಕ್ಷಕ್ಕೆ ಭೇದ ಉಂಟೇ? ಜ್ಯೋತಿ ಪ್ರಭೆಗೆ ಭೇದ ಉಂಟೇ? ಹಾಗೆ ಲಿಂಗ ಜಂಗಮಕ್ಕೆ ಭೇದವಿಲ್ಲ. ಅದೇನು ಕಾರಣವೆಂದಡೆ, ಲಿಂಗವೇ ಅಂಗ, ಜಂಗಮವೇ ಪ್ರಾಣ; ಲಿಂಗವೇ ಬೀಜ, ಜಂಗಮವೇ ವೃಕ್ಷ; ಲಿಂಗವೇ ಜ್ಯೋತಿ, ಜಂಗಮವೇ ಪ್ರಕಾಶ. ಇಂತೀ ನಿರ್ಣಯವ ತಿಳಿದರೆ, ಪ್ರಾಣಲಿಂಗಿ, ತಿಳಿಯದಿದ್ದರೆ ಜಡಲಿಂಗಿಗಳೆಂದನಯ್ಯ ನಿಮ್ಮ ಶರಣ, ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ !!

೨೬

ನಾವು ಪ್ರಾಣಲಿಂಗಿಗಳೆಂದು ಹೇಳುವ ಅಣ್ಣಗಳಿರಾ, ನೀವು ಪ್ರಾಣಲಿಂಗಿಗಳೆಂತಾದಿರಿ ಹೇಳಿರಿ? ಅರಿಯದಿದ್ದರೆ ಕೇಳಿರಣ್ಣಾ. ಕಾಯದ ಕಳವಳದಲ್ಲಿ ಕೂಡದೆ, ಮನದ ಭ್ರಾಂತಿಗೊಳಗಾಗದೆ, ಕರಣಂಗಳ ಮೋಹಕ್ಕೆ ಈಡಾಗದೆ, ಪ್ರಾಣನ ಪ್ರಪಂಚಿನಲ್ಲಿ ಬೆರಸದೆ, ಜೀವನ ಬುದ್ಧಿಯಲ್ಲಿ ಮೋಹಿಸದೆ, ಹಂಸನ ಆಶೆಗೊಳಗಾಗದೆ, ನಿಃಪ್ರಪಂಚುಗಳಾಗಿ ಶ್ರೀಗುರುಲಿಂಗ ಜಂಗಮದ ಪಾದೋದಕ ಪ್ರಸಾದದಲ್ಲಿ ಅತಿಕಾಂಕ್ಷೆಯುಳ್ಳಾತನೇ ಲಿಂಗಪ್ರಾಣ ನೋಡಾ ಕಲಿದೇವರದೇವಾ.

೨೭

ಪರಾತ್ಪರವಾದ ವಸ್ತುವನೊಡಗೂಡಿದ ಪ್ರಾಣಲಿಂಗಿಯ ಒಡಲ ಬೆಳಗಿನ ಗಡಣವೆಂತಿರ್ಪುದೆಂದಡೆ: ಸ್ಫಟಿಕದ ಘಟದೊಳಗೆ ಜ್ಯೋತಿಯ ನಿರಿಸಿದಂತೆ. ಕತ್ತಲೆಯ ಮನೆಯಲ್ಲಿ ರತ್ನವ ಹರಹಿದಂತೆ. ರನ್ನದ ಗಿರಿಗೆ ರವಿಕೋಟಿ ಕಿರಣಂಗಳು ಮುಸುಂಕಿದಂತೆ. ಬೆಳಗು ಹಳಚಿದ ಮಹಾಬೆಳಗಿನೊಬ್ಬುಳಿಯನೊಳಕೊಂಡು ಘನಗಂಭೀರವಾದ ಪ್ರಾಣಲಿಂಗಿಗಳ ಪಾದಕಮಲದಲ್ಲಿ ಸದಮಲ ತುಂಬಿಯಾಗಿರಿಸಯ್ಯಾ ಎನ್ನ ಅಖಂಡೇಶ್ವರಾ.

೩. ಪ್ರಾಣಕ್ಕೆ ಪ್ರಾಣ ಪ್ರಾಣಲಿಂಗ

೨೮

ವ್ರತಗೇಡಿ ವ್ರತಗೇಡಿ ಎಂಬುವ ತಾನೆ ವ್ರತಗೇಡಿ. ವ್ರತಗೆಡಲಿಕೇನು ಹಾಲಂಬಿಲವೆ? ವ್ರತಗೆಟ್ಟ ಬಳಿಕ ಘಟ ಉಳಿಯಬಲ್ಲುದೇ? ಕಾಯದೊಳಗೆ ಜೀವವುಳ್ಳನ್ನಕ್ಕರ ಅದೇ ಪ್ರಾಣಲಿಂಗವು ಕಾಣಾ ಗೊಹೇಶ್ವರಾ.

೨೯

ಲಿಂಗ ಒಳಗೋ ಹೊರಗೋ? ಬಲ್ಲಡೆ ನೀವು ಹೇಳಿರೆ ಲಿಂಗ ಎಡನೋ ಬಲನೋ? ಬಲ್ಲಡೆ ನೀವು ಹೇಳಿರೆ ಲಿಂಗ ಮುಂದೋ ಹಿಂದೋ? ಬಲ್ಲಡೆ ನೀವು ಹೇಳಿರೆ ಲಿಂಗ ಸ್ಥೂಲವೋ ಸೂಕ್ಷ್ಮವೋ? ಬಲ್ಲಡೆ ನೀವು ಹೇಳಿರೆ ಲಿಂಗ ಪ್ರಾಣವೋ? ಪ್ರಾಣ ಲಿಂಗವೋ? ಬಲ್ಲಡೆ ನೀವು ಹೇಳಿರೆ ಗೊಹೇಶ್ವರನ.

೩೦

ಅರಿದರಿವು ಬರುದೊರೆವೋಯಿತ್ತು. ಕುರುಹ ತೋರಿದಡೆಂತು ನಂಬರು. ತೆರಹಿಲ್ಲದ ಘನವ ನೆನೆದು, ಗುರು ಶರಣೆಂಬುದಲ್ಲದೆ, ಮರಹು ಬಂದಿಹುದೆಂದು ಗುರು ಕುರುಹ ತೋರಿದ. ಅರಿಯಬಲ್ಲಡೆ ಗೊಹೇಶ್ವರ ಲಿಂಗವು ಹೃದಯದಲ್ಲೈದಾನೆ.

೩೧

ಅಂತರಂಗ ಬಹಿರಂಗವೆಂದೆಂಬರು. ಆವುದು ಹಿಂದು ಆವುದು ಮುಂದು ಎಂದರಿಯರು. ಎಳ್ಳೊಳಗಣ ಎಣ್ಣೆಯಂತೆ, ಕಲ್ಲೊಳಗಣ ಹೇಮದಂತೆ, ಹಾಲೊಳಗಣ ತುಪ್ಪದಂತೆ, ಕಾಷ್ಠದೊಳಗಣ ಅಗ್ನಿಯಂತೆ, ಪುಷ್ಪದೊಳಗಣ ಪರಿಮಳದಂತೆ ಭಾವದೊಳಗೆ ಶಿವನಿಪ್ಪನೆಂದಡೆ, ಆ ಶಿವನು ತನಗೆ ಕಾಣಿಸಿಕೊಳ್ಳನು, ಮಥನದಿಂದಲ್ಲದೆ. ಅದೆಂತೆಂದೊಡೆ :

ಶ್ಲೋ. ತಿಲಮಧ್ಯೇ ಯಥಾ ತೈಲಂ ಕ್ಷೀರಮಧ್ಯೇ ಯಥಾ ಘೃತಂ
ಪುಷ್ಪಮಧ್ಯೇ ಯಥಾ ಗಂಧೋ ಭಾವಮಧ್ಯೇ ತಥಾ ಶಿವಃ

ಎಂದುದಾಗಿ, ಇಂತಪ್ಪ ಚಿನ್ಮೂರ್ತಿಯನು ಮನ್ಮಸ್ತಕದಲ್ಲಿ ಶ್ರೀಗುರು ತನ್ನ ಹಸ್ತಾಬ್ಜಮಥನದಿಂದ ಆಕರ್ಷಣವ ಮಾಡಿ ತೆಗೆದು, ತಲ್ಲಿಂಗವನಂಗದಲ್ಲಿ ಸ್ಥಾಪ್ಯವ ಮಾಡಿ, ಸುಜ್ಞಾನಕ್ರಿಯೋಪದೇಶವಂ ಮಾಡಲು, ಘಟದ ಹೊರಗಿಹ ಅನಲ ಘಟವ ವೇಧಿಸಿ, ತಜ್ಜಲವ ಹಿಡಿದು ತೆಗೆದುಕೊಂಬಂತೆ, ಬಾಹ್ಯದಲ್ಲಿ ಮಾಡುವ ಸತ್ಕ್ರಿಯಾಮಥನದಿಂದ ಶಿವ ಜೀವ ಸಂಯೋಗ ವಹ ಬಟ್ಟೆಯನರಿಯದೆ ಕೆಟ್ಟರಲ್ಲಾ ಅದ್ವೈತಿಗಳು.
ಅದೆಂತೆಂದೊಡೆ :

ಶ್ಲೋ. ಘಟಮಧ್ಯಸ್ಥಿತಂ ತೋಯಂ ಅಗ್ನಿರ್ಜ್ವಲತಿ ಬಾಹ್ಯತಃ
ಅಗ್ನಿರ್ಜ್ವಲನಸಂಯೋಗೇ ಉಷ್ಣಂ ಭವತಿ ವಾರಿಣಾಂ

ಎಂದುದಾಗಿ ಈ ಮರ್ಮ ಕುಳಸ್ಥಳವನರಿಯದೆ, ಶಿವಲಿಂಗಪೂಜೆಯ ಬಿಟ್ಟು ಅನ್ಯಬಟ್ಟೆಯಲ್ಲಿ ಹರಿವರು, ಕರ್ಮ ನಿರ್ಮೂಲವಾಗದ ಜಡರುಗಳು, ಗುರುವಚನ ಪರಾಙ್ಮುಖರು, ಲಿಂಗನಿಷ್ಠಾವಿರಹಿತರು. ಗುರು ಕೊಟ್ಟ ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂ ಕ್ರಿಯೆವಿಡಿದು ಮಾಡಿ, ಪ್ರಾಣ ವೇಧಿಸಿ ಪ್ರಾಣಲಿಂಗಸಂಬಂಧಿಗಳಾಗಲರಿಯದೆ ಕೆಟ್ಟರಲ್ಲಾ ಅದ್ವೈತಿಗಳು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!

೩೨

ಪ್ರಾಣ ಲಿಂಗದಲ್ಲಿ ಸಮನಿಸದು, ಲಿಂಗ ಪ್ರಾಣದಲ್ಲಿ ಸಮನಿಸದು. ಪ್ರಾಣ ಲಿಂಗ, ಲಿಂಗ ಪ್ರಾಣವೆಂಬುದು ಸಂದು ಸಂಶಯವಲ್ಲದೆ, ನಿಜವಲ್ಲ ಕೇಳಾ! ದಶಪ್ರಾಣವಳಿದು, ಲಿಂಗವೆ ತಾನೆಂದರಿಯಬಲ್ಲಡೆ, ಅದೆ ಪ್ರಾಣ ಲಿಂಗ ಗೊಹೇಶ್ವರ.

೩೩

ಅರಳಿಯ ಮರದ ಮೇಲೆ ಒಂದು ಹಂಸೆ ಗೂಡನಿಕ್ಕಿತ್ತ ಕಂಡೆ. ಆ ಗೂಡಿನೊಳಗೊಬ್ಬ ಹೆಂಗೂಸು ಉಯ್ಯಾಲೆಯಾಡುತ್ತಿದ್ದಳು. ಉಯ್ಯಾಲೆ ಹರಿದು ಹೆಂಗೂಸು ನೆಲಕ್ಕೆ ಬಿದ್ದು ಸತ್ತಡೆ, ಪ್ರಾಣಲಿಂಗವ ಕಾಣಬಹುದು ಕಾಣಾ ಗೊಹೇಶ್ವರಾ.

೩೪

ಅಂಗದೊಳಗಿಪ್ಪುದು ಲಿಂಗವಲ್ಲ. ಅಂಗದ ಹೊರಗಿಪ್ಪುದು ಲಿಂಗವಲ್ಲ. ಎಲ್ಲ ಅಂಗಾಂಗಂಗಳನೊಳಕೊಂಡಿಪ್ಪ ಲಿಂಗ ಹೋಗುತ್ತ ಬರುತ್ತಿಹುದಲ್ಲ. ಚಲನೆ ಇಲ್ಲದ ಅಚಲವಪ್ಪ ಲಿಂಗಕ್ಕೆ ಬಂದಿತ್ತು ಹೋಯಿತ್ತು ಎಂಬ ಸಂದೇಹವಿಲ್ಲವೆಂದನಂಬಿಗಚೌಡಯ್ಯ.

೩೫

ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು. ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಡರು. ನಾನೆನ್ನ ಭಾವಕ್ಕೆ ಪೂಜಿಸ ಹೋದರೆ, ಕೈ ತಪ್ಪಿ ಮನದಲ್ಲಿ ಸಿಲುಕಿತ್ತೆನ್ನ ಲಿಂಗ. ಸಾಧಕನಲ್ಲ, ಭೇದಕನಲ್ಲ. ಗೊಹೇಶ್ವರಲ್ಲಯ್ಯ ತಾನೆ ಬಲ್ಲ.

೩೬

ಆಕಾಶಮಂಡಲದೊಳಗೆ ಲೋಕೇಶನ ಪಟ್ಟಣವಿರ್ಪುದು ನೋಡಾ. ಆ ಪಟ್ಟಣಕ್ಕೆ ನಾಲ್ಕು ಬಾಗಿಲು, ಎಂಟು ಬೀದಿ, ಹದಿನಾರು ಚದುರಂಗದ ಚಾವಡಿ. ಮೂವತ್ತೆರಡು ಕೇರಿ, ಕೇರಿಗಳೊಳಗೆ ಪರಿಕಾರರ ಕಟ್ಟಳೆ ನೋಡಾ. ಆಕಾಶಮಂಡಲವನಡರಿ, ಲೋಕೇಶನ ಕಂಡಾತಂಗಲ್ಲದೆ ಆ ಪಟ್ಟಣವು ಆರಿಗೂ ಸಾಧ್ಯವಿಲ್ಲ ನೋಡಾ ಅಖಂಡೇಶ್ವರಾ.

೩೭

ಅಂತರಂಗದಲ್ಲಿ ಆವರಿಸಿ, ಬಹಿರಂಗದಲ್ಲಿ ತೋರುವೆ. ಕಂಗಳ ಕೊನೆಯಲ್ಲಿ ಮೂರ್ತಿಯಾಗಿ, ಮನದ ಕೊನೆಯಲ್ಲಿ ತೊಳಗುವೆ. ಎನ್ನ ಬ್ರಹ್ಮರಂಧ್ರದಲ್ಲಿ ತೊಳತೊಳಗಿ ಬೆಳಗುತ್ತಿಪ್ಪ ಪರಂಜ್ಯೋತಿ ನೀನೆ ಉರಿಲಿಂಗದೇವಾ.

೩೮

ಜಗದಗಲದ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟಿನಲ್ಲಿ ಚಿತ್ರವಿಚಿತ್ರವ ನೋಡುತ್ತ ನೋಡುತ್ತ, ಧ್ಯಾನವಿಶ್ರಾಮದಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ ನೋಡುತ್ತ, ಗಗನಗಂಭೀರದಲ್ಲಿ ಉದಯವಾಯಿತ್ತ ಕಂಡೆ ಗೊಹೇಶ್ವರಲಿಂಗವು ತಾನೆಯಾಗಿ.

೩೯

ಎನ್ನ ಆಧಾರದಲ್ಲಿ ಅರುವತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಸ್ವಾಧಿಷ್ಠಾನದಲ್ಲಿ ಎಪ್ಪತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಮಣಿಪೂರಕದಲ್ಲಿ ಎಂಬತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಅನಾಹತದಲ್ಲಿ ತೊಂಬತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ವಿಶುದ್ಧಿಯಲ್ಲಿ ನೂರುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಆಜ್ಞೆಯಲ್ಲಿ ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಬ್ರಹ್ಮರಂಧ್ರದಲ್ಲಿ ಅಗಣಿತಕೋಟಿ ಸೂರ್ಯಚಂದ್ರ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಶಿಖಾಚಕ್ರದಲ್ಲಿ ಅಖಂಡ ಬೆಳಗನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಎನ್ನ ಪಶ್ಚಿಮದಲ್ಲಿ ಅಖಂಡ ಪರಿಪೂರ್ಣ ಬೆಳಗನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು. ಇಂತು ಎನ್ನೊಳಗೆ ಥಳಥಳಿಸಿ ಬೆಳಗುವ ಬೆಳಗಿನ ಬೆಳಗು ಮಹಾಬೆಳಗಿನೊಳಗೆ ಮುಳುಗಿ, ಎನ್ನಂಗದ ಕಳೆಯಳಿದಿರ್ದೆನಯ್ಯಾ ಅಖಂಡೇಶ್ವರಾ.

೪೦

ಎನ್ನ ಆರು ಚಕ್ರಂಗಳಲ್ಲಿ ಪೂರೈಸಿ ತುಂಬಿರ್ಪ ಪರಮಾತ್ಮನು ನೀನೆ ಅಯ್ಯಾ. ಎನ್ನ ನವನಾಳಂಗಳಲ್ಲಿ ಹೊಳೆದು ಸುಳಿವ ಪರವಸ್ತುವು ನೀನೆ ಅಯ್ಯಾ. ಎನ್ನ ಕರ ಮನ ಭಾವದ ಒಳಹೊರಗೆ ತೊಳಗಿ ಬೆಳಗುವ ಪರಬ್ರಹ್ಮವು ನೀನೆ ಅಯ್ಯಾ. ಎನ್ನ ಬ್ರಹ್ಮರಂಧ್ರದ ಸಹಸ್ರದಳ ಕಮಲ ಮಧ್ಯದಲ್ಲಿ ನಿರಂತರ ಬೆಳಗುವ ಪರಂಜ್ಯೋತಿ ನೀನೆ ಅಯ್ಯಾ ಅಖಂಡೇಶ್ವರಾ.

೪೧

ನಳಿನಾಸನದಲ್ಲಿ ಕುಳ್ಳಿರ್ದು, ಅತ್ತಿತ್ತ ಕಳವಳಿಸದೆ, ತುಳುಕುವ ಇಂದ್ರಿಯಂಗಳ ಬಂಧಿಸಿ, ಸುಳಿವ ಕರಣಂಗಳ ಬಲಿದು ಒಬ್ಬುಳಿಗೊಳಿಸಿ,

ಉನ್ಮನಿಯ ಮಂಟಪದಲ್ಲಿ ನಿರಂತರ ಬೆಳಗುವ ಪ್ರಾಣಲಿಂಗದಲ್ಲಿ ಮನ ಪವನಾಗ್ನಿಗಳೊಂದಾಗಿ, ಸಾವಿರಕಿರಣಸಹಿತ ಒಡೆದು ಮೂಡಿದ ಪ್ರಭಾಕಾಲದ ಸೂರ್ಯನಂತೆ ಮಹಾಬೆಳಗಿನ ಪ್ರಭಾಪಟಲದಿಂದೆ ಥಳಥಳಿಸಿ ಬೆಳಗುವ ಪ್ರಾಣಲಿಂಗವನು ಕಂಗಳು ತುಂಬಿ ನೋಡಿ, ಮನ ತುಂಬಿ ಸಂತೋಷಿಸಿ, ಸರ್ವಾಂಗ ಗುಡಿಗಟ್ಟಿ, ಪರಮಪರಿಣಾಮ ತಲೆದೋರಿ ಮಹಾಪರಿಣಾಮದೊಳಗೆ ಓಲಾಡಬಲ್ಲರೆ, ಅದೇ ಪ್ರಾಣ ಲಿಂಗ ಸಂಬಂಧ ನೋಡಾ ಅಖಂಡೇಶ್ವರಾ.

೪೨

ಪ್ರಾಣಲಿಂಗಸಂಬಂಧಿಗಳೆಂದು ನುಡಿವವರು ಅನೇಕರುಂಟು. ಪ್ರಾಣಲಿಂಗದ ಕಳೆಯನಾರೂ ಅರಿಯರಲ್ಲಾ! ಪ್ರಾಣಲಿಂಗದ ಕಳೆ ಎಂತೆಂದಡೆ: ಆಧಾರದಲ್ಲಿ ಎಳೆಯ ಸೂರ್ಯನಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಸ್ವಾಧಿಷ್ಠಾನದಲ್ಲಿ ಪೂರ್ಣಚಂದ್ರನಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಮಣಿಪೂರಕದಲ್ಲಿ ಮಿಂಚಿನ ಲತೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಅನಾಹತದಲ್ಲಿ ಸ್ಫಟಿಕದ ಶಲಾಕೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲದಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಆಜ್ಞೆಯಲ್ಲಿ ರತ್ನದ ದೀಪ್ತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಬ್ರಹ್ಮರಂಧ್ರದಲ್ಲಿ ಸ್ವಯಂಜ್ಯೋತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಶಿಖೆಯಲ್ಲಿ ಶುದ್ಧತಾರೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಪಶ್ಚಿಮದಲ್ಲಿ ಉಳುಕನಕ್ಷತ್ರದಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಇಂತಪ್ಪ ಪ್ರಾಣಲಿಂಗದ ಕಳೆಯನರಿಯದೆ, ಪ್ರಾಣನ ಸಂಯೋಗಿಸಿ ಪ್ರಳಯವ ಗೆಲಲರಿಯದೆ, ಮಾತಿನ ಮಾಲೆಯ ನುಡಿದು, ನೀತಿ, ಶಾಸ್ತ್ರ ಘಾತಕದ ಕಥೆಗಳ ಕಲಿತು, ಓತು ಎಲ್ಲರೊಡನೆ ಹೇಳಿ ಚಾತುರ್ಯನೆನಿಸಿಕೊಂಡು ಒಡಲ ಹೊರೆವ ಉದರಘಾತಕರ ಪ್ರಾಣಲಿಂಗಸಂಬಂಧಿಗಳೆಂತೆಂಬೆನಯ್ಯಾ ಅಖಂಡೇಶ್ವರಾ?

೪೩

ನೀರ ಮಂಟಪದೊಳಗೊಂದು ನಿರಾಳ ಕಮಲವಿರ್ಪುದ ಕಂಡೆ. ಆ ಕಮಲಮಧ್ಯದೊಳಗೊಂದು ನಿರಾಲಂಬ ಕೋಶವಿರ್ಪುದ ಕಂಡೆ. ಆ ಕೋಶ ಮಧ್ಯದೊಳಗೊಂದು ನಿರುಪಮ ಮಾಣಿಕ್ಯದ ಸಿಂಹಾಸನವ ಕಂಡೆ. ಆ ಸಿಂಹಾಸನದ ಮೇಲೆ ಮೂರ್ತಿಗೊಂಡು ಬೆಳಗುವ ನಮ್ಮ ಅಖಂಡೇಶ್ವರ ನೆಂಬ ನಿರವಯ ಪರಬ್ರಹ್ಮವ ಕಂಡು ಪರಮಸುಖಿಯಾಗಿರ್ದೆನು!

೪೪

ಅಯ್ಯಾ, ಎನ್ನಂಗದಲಿಪ್ಪ ಅರಿವ ಕಂಡು ತೆಗೆದೆನ್ನ ಅಂಗಕ್ಕೆ ಹೊದಿಸಿದೆ. ಆ ಲಿಂಗದಲಿಪ್ಪ ಅರಿವ ಕಂಡೆನ್ನ ಕಂಗಳು ನುಂಗಿತ್ತು. ಆ ಕಂಗಳೊಳಗಣ ತಿಂಗಳ ತಿರುಳ ಮಂಗಳದ ಮಹಾಬೆಳಗಿನ ಶೃಂಗಾರ ದೊಳು ನಾನೋಲಾಡುತಿಪ್ಪೆನಯ್ಯಾ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೪೫

ಉತ್ತರಗಿರಿಯ ಚಿತ್ರಮಂಟಪದೊಳಗೆ ರತ್ನದ ತೋರಣದ ಪರಿಯ ನೋಡಾ! ಮುತ್ತಿನ ಗದ್ದುಗೆಯ ಮೇಲೆ ಛತ್ತೀಸಕೋಟಿ ಚಂದ್ರಸೂರ್ಯರ ಬೆಳಗನೊಳಕೊಂಡ ನಿತ್ಯಪರಿಪೂರ್ಣವಸ್ತುವ ಕೂಡಬಲ್ಲಾತನೆ ಕರ್ತೃ ಶಿವ ತಾನೆ ನೋಡಾ ಅಖಂಡೇಶ್ವರಾ!

೪೬

ಪಶ್ಚಿಮದ ಗಿರಿಯಲ್ಲಿ ಚಿತ್‌ಸೂರ್ಯನುದಯವಾದುದ ಕಂಡೆ. ಸುತ್ತಿ ಮುತ್ತಿದ ಕತ್ತಲೆಯಲ್ಲಿ ಅತ್ತಿತ್ತ ಹರಿದು ಹೋದುದ ಕಂಡೆ. ಹತ್ತು ದಿಕ್ಕಿನ ಒಳಹೊರಗೆಲ್ಲ ಬೆಳಗಿನ ಮೊತ್ತವೆ ತುಂಬಿದುದ ಕಂಡೆ. ಮುಚ್ಚಿದ ಕಮಲಂಗಳೆಲ್ಲ ಬಿಚ್ಚಿ ಅರಳಾಗಿ, ಹೊಚ್ಚಹೊಸ ಗಂಧ ದೆಸೆದೆಸೆಗೆ ಎಸೆದುದ ಕಂಡೆ. ಇಂತಿದರ ಕುಶಲವ ಕಂಡು ಬೆರಗಾದೆನಯ್ಯಾ ಅಖಂಡೇಶ್ವರಾ!

೪೭

ಅಂಗವೆ ಲಿಂಗವೆಂಬರು, ಲಿಂಗವೆ ಅಂಗವೆಂಬರು. ಅದು ಹುಸಿ, ಇದು ಹುಸಿ. ಅಂಗವೆ ಲಿಂಗವಾದೊಡೆ ಕಾಯದಲ್ಲಿ ಕಳವಳ ಉಂಟೆ?

ಲಿಂಗವೆ ಅಂಗವಾದೊಡೆ ಪ್ರಳಯಕ್ಕೊಳಗಹುದೆ? ಇದು ಕಾರಣವಾಗಿ, ಅಂಗ ಲಿಂಗವಲ್ಲ, ಲಿಂಗ ಅಂಗವಲ್ಲ. ಅಂಗ ಲಿಂಗ ಸಂಬಂಧದ ಸಂದಳಿದಲ್ಲಿ, ಪ್ರಾಣ ಲಿಂಗ ಸಂಬಂಧಿ. ಪ್ರಾಣ ನಿಃಪ್ರಾಣವಾದಲ್ಲಿ, ಲಿಂಗರೂಪಾಗಿ ರೂಪ ಸಾಕ್ಷಿಯಾದಂದು, ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗಸಂಬಂಧಿ.

೪೮

ಅಂಗ ಲಿಂಗವೆಂದರಿದ ಬಳಿಕ, ಲಿಂಗ ಅಂಗವೆಂದರಿದ ಬಳಿಕ, ಇನ್ನೊಂದು ಸಂಗ ಉಂಟೆಂದು ಏಕೆ ಅರಸುವಿರಯ್ಯ? ಸಂಗ ಉಂಟೆಂಬನಕ, ಕಂಗಳ ಪಟಲ ಹರಿದುದಿಲ್ಲ. ಅದು ಮರೆವೆಗೆ ಬೀಜ. ಆ ಮರಹಿಂದಲೆ ನೆರೆ ಮೂರು ಲೋಕವೆಲ್ಲ ಬರಿಸೂರೆಹೋಯಿತ್ತು. ಅರಿದ ಶರಣಂಗೆ ಅಂಗ ಲಿಂಗಸಂಬಂಧವಿಲ್ಲ. ಅಂಗಲಿಂಗಸಂಬಂಧವಳಿದ ಬಳಿಕ ಪ್ರಾಣ ಲಿಂಗ ಸಂಬಂಧ. ಲಿಂಗಪ್ರಾಣಿ ಇವನರಿದರೆ ಲಿಂಗಸಂಬಂಧಿ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೪೯

ಅಯ್ಯಾ ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯ,-ನೀವು ಮೂರ್ತಿ ಲಿಂಗವಾದ ಕಾರಣ. ಅಯ್ಯ, ಎನ್ನ ತನು ಮನ ಶುದ್ಧವಾಯಿತ್ತಯ್ಯ,-ನೀವು ಜಂಗಮಲಿಂಗವಾದ ಕಾರಣ. ಅಯ್ಯ, ಎನ್ನಾಪ್ಯಾಯನ ಶುದ್ಧವಾಯಿತ್ತಯ್ಯ,-ನಿಮ್ಮ ಪ್ರಸಾದವ ಕೊಂಡೆನಾಗಿ. ಅಯ್ಯ, ಎನ್ನ ಕಾಮ ಕ್ರೋಧ ಮೋಹ ಲೋಭ ಮದ ಮತ್ಸರಂಗಳೆಲ್ಲ ಶುದ್ಧವಾದವಯ್ಯ,-ನೀವು ಜ್ಞಾನಲಿಂಗವಾದ ಕಾರಣ. ಇಂತೀ ಎನ್ನ ಸರ್ವಾಂಗದಲ್ಲಿ ಸನ್ನಿಹಿತವಾದೆಯಲ್ಲಾ ಕಲಿದೇವರದೇವಾ!

೫೦

ಅಂಗ ಲಿಂಗ,' ಪ್ರಾಣ ಲಿಂಗ, ಮನ ಲಿಂಗವಾಯಿತ್ತು ನೋಡಾ! ಅಂಗ ಲಿಂಗವಾಗಿ ನಡೆ ನುಡಿ ಗತಿಯನರಿಯದು. ಪ್ರಾಣ ಲಿಂಗವಾಗಿ ನವನಾಳದ ಸುಳುಹನರಿಯದು. ಮನ ಲಿಂಗವಾಗಿ ನೆನಹುಗೆಟ್ಟಿತ್ತು. ಅನುಭಾವ ಲಿಂಗವಾಗಿ ವಿಚಾರವರತಿತ್ತು. ಭಾವ ಲಿಂಗವಾಗಿ ಭಾವನೆಯಳಿಯಿತ್ತು. ಸರ್ವಕ್ರೀಗಳೆಲ್ಲವು ಲಿಂಗವಾಗಿ, ಮಾರ್ಗಕ್ರೀಯ ಹೊಲಬನರಿಯದು.ಅರಿವು

ಲಿಂಗವಾಗಿ, ಅರಿವು ಮರಹುಗೆಟ್ಟಿತ್ತು. ಅಂತರಂಗ ಲಿಂಗವಾಗಿ, ಬಹಿರಂಗ ವೆಂದರಿಯದು. ಬಹಿರಂಗ ಲಿಂಗವಾಗಿ, ಅಂತರಂಗ ಸುದ್ದಿಯನರಿಯದು. ಸರ್ವಾಂಗ ಲಿಂಗವಾಗಿ, ಸರ್ವೇಂದ್ರಿಯ ಗಮನಗೆಟ್ಟಿತ್ತು. ಮಹಾಘನ ವಿಂಬುಗೊಂಡಿತ್ತಾಗಿ, ನಿಷ್ಪತಿ ಕರಿಗೊಂಡಿತ್ತು. ಗೊಹೇಶ್ವರಲಿಂಗದಲ್ಲಿ ಪ್ರಾಣಲಿಂಗ ಸಂಬಂಧ ಸಯಂವಾಯಿತ್ತು ನೋಡಾ ಸಿದ್ಧರಾಮಯ್ಯಾ.

೫೧

ಬೆಳಗು ಕತ್ತಲೆಯ ನುಂಗಿ, ಒಳಗೆ ತಾನೊಬ್ಬನೆಯಾಗಿ, ಕಾಂಬ ಕತ್ತಲೆಯ ಕಳೆದುಳಿದು, ನಿಮಗಾನು ಗುರಿಯಾದೆ ಗೊಹೇಶ್ವರಾ.

೫೨

ಪಿಂಡದೊಳಗೊಂದು ಅಖಂಡಜ್ಯೋತಿ ಥಳಥಳಿಸಿ ಬೆಳಗುತಿರ್ಪುದು ನೋಡಾ. ಆ ಅಖಂಡಜ್ಯೋತಿಯನೊಡಗೂಡಿ ಅವಿರಳ ಶಿವಯೋಗಿಯಾದೆ ನಾಗಿ, ಪಿಂಡದ ಖಂಡಿತವು ಕಡೆಗಾಯಿತ್ತು ನೋಡಾ ಅಖಂಡೇಶ್ವರಾ !

೫೩

ಬೆಕ್ಕು ನುಂಗಿದ ಕೋಳಿ, ಸತ್ತು ಕೂಗಿತ್ತ ಕಂಡೆ. ಕರಿಯ ಕೋಗಿಲೆ ಬಂದು, ರವಿಯ ನುಂಗಿತ್ತ ಕಂಡೆ. ಸೆಜ್ಜೆ ಬೆಂದು ಶಿವದಾರ ಉಳಿಯಿತ್ತು. ಪ್ರಾಣಲಿಂಗವೆಂಬ ಶಬ್ದ ವ್ರತಗೇಡಿಯಾಯಿತ್ತು. ನೀರ ಮೇಲಣ ಹಜ್ಜೆಯ ನಾರೂ ಬಲ್ಲವರಿಲ್ಲ. ಗೊಹೇಶ್ವರನೆಂಬ ಶಬ್ದವಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ.

೫೪

ನಡೆವಲ್ಲಿ ನುಡಿವಲ್ಲಿ ಪ್ರಾಣ ಲಿಂಗವೆಂದೆಂಬರು. ಕೆಡೆಯಲೊಡನೆ ಹೆಣನದೇ ಎಂಬರು. ಹಿರಿಯ ಭೂಮಿಯಲ್ಲಿ ನಿಮ್ಮ ಹೆಸರಿಲ್ಲ ಗೊಹೇಶ್ವರಾ.

೫೫

ಪ್ರಾಣ ಪ್ರಣವವೆಂಬರು. ಪ್ರಾಣಕ್ಕೂ ಪ್ರಣವಕ್ಕೂ ಏನು ಸಂಬಂಧ? ಪ್ರಾಣವೇ ಪ್ರಳಯಕ್ಕೊಳಗಾಗಿ ತಿರುತಿರುಗಿ ಬಪ್ಪುದಕ್ಕೊಡಲಾಯಿತ್ತು. ಪ್ರಣವವೆ ಪ್ರಸನ್ನವಾಗಿಪ್ಪುದೆಂದನಂಬಿಗಚೌಡಯ್ಯ.

೫೬

ಒಡಲುಗೊಂಡೆನಾಗಿ—ವೃಡ, ನಿಮಗೆ ಹಗೆಯಾದೆನಯ್ಯ. ಆನು ಒಡಲುಗೊಂಡಡೇನು? ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ, ಎನ್ನೊಡಲಳಿದು ಹೋದರೇನು? ಪ್ರಾಣ ನಿಮ್ಮ ಎಡೆಯಲಡಗುವುದಯ್ಯ ರಾಮನಾಥಾ.

೫೭

ಆದಿಯಲ್ಲಿ ಶಿವದಾರವ ಕಂಡೆ. ಬೀದಿಯಲ್ಲಿ ಬಿದ್ದ ಸೆಜ್ಜೆಯ ಕಂಡೆ. ಪ್ರಾಣಲಿಂಗವ ಜೈಚಿಟ್ಟುಕೊಂಡೆ. ಕಾಯುವಳಿದು ಜೀವ ನಿಮ್ಮಲ್ಲಿಗೆ ಬಂದರೆ, ಎನ್ನಿಂದ ವ್ರತಗೇಡಿಗಳಿಲ್ಲ ಗೊಹೇಶ್ವರಾ.

೫೮

ತನು ಲಿಂಗವಾದ ಬಳಿಕ ವಿಕಾರ ಉಂಟೇ? ಮನ ಲಿಂಗವಾದ ಬಳಿಕ ಮಾಯೆ ಉಂಟೆ ಅಯ್ಯಾ? ಭಾವ ಲಿಂಗವಾದ ಬಳಿಕ ಭ್ರಮೆಯುಂಟೆ ಅಯ್ಯಾ? ಕಾಯ ಲಿಂಗವಾದ ಬಳಿಕ ಕಳವಳವೆಲ್ಲಿಯದೋ? ಜೀವ ಲಿಂಗವಾದ ಬಳಿಕ ಉಪಾಧಿ ಉಂಟೆ ಅಯ್ಯ? ಪ್ರಾಣ ಲಿಂಗವಾದ ಬಳಿಕ ಪ್ರಳಯವಿಲ್ಲ ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೪. ಪ್ರಾಣಪೂಜೆ

೫೯

ಪ್ರಾಣಲಿಂಗವ ಪರಲಿಂಗವ ಮಾಡಿ, ಇಷ್ಟಲಿಂಗದ ಪೂಜೆಯ ಕಷ್ಟವ ನೋಡಾ! ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೇ? ಬಯಲಾಸೆ ಹಾಸ್ಯವಾಯಿತ್ತು,–ಚಿಕ್ಕಯ್ಯಪ್ರಿಯ ಸಿದ್ಧಲಿಂಗವಿಲ್ಲದ ಕಾರಣ!

೬೦

ಪ್ರಾಣ ಲಿಂಗ, ಲಿಂಗ ಪ್ರಾಣವೆಂಬ ಧ್ಯಾನಾಮೃತದಿಂ, ಪಂಚಾಕ್ಷರಿ ಎಂಬ ಪಂಚಾಮೃತದಿಂ ಲಿಂಗಮಜ್ಜನವೆರೆದು, ಮನವೇ ಪುಷ್ಪ ಬುದ್ಧಿಯೇ

ಗಂಧ ಚಿತ್ತವೇ ನೈವೇದ್ಯ ಅಹಂಕಾರದಿಂದ ಆರೋಗಣೆಯ ಮಾಡಿಸಿ ಪರಿಣಾಮದ ವೀಳೆಯವನಿತ್ತು, ಸ್ನೇಹದಿಂದ ವಂದನೆಯ ಮಾಡಿ, ಪ್ರಾಣಲಿಂಗಕ್ಕೆ ಅಂತರಂಗದ ಪೂಜೆಯ ಪರಿಯಲಿ ಬಹಿರಂಗದ ಪೂಜೆಯ ಮಾಡುವುದು. ಅಂತರಂಗದ ವಸ್ತುಗಳೆಲ್ಲವನು ಬಹಿರಂಗದ ವಸ್ತುವಿನಲ್ಲಿ ಕೂಡಿ ಲಿಂಗಾರ್ಚನೆಯ ಮಾಡಲು ಅಂತರಂಗ ಬಹಿರಂಗದಲ್ಲಿ ಭರಿತನಾಗಿಹನು ಶಿವನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

೬೧

ಬೆಲ್ಲಕ್ಕೆ ಚದುರ ರಸವಲ್ಲದೆ ಸಿಹಿಗೆ ಚದುರ ರಸ ಉಂಟೆ? ಕುರುಹಿಗೆ ಪೂಜೆಯಲ್ಲದೆ ಅರುಹಿಂಗೆ ಪೂಜೆಯುಂಟೆ? ಅರುಹು ಕರಿಗೊಂಡಲ್ಲಿ ಕೈಯ್ಯ ಕುರುಹು ಅಲ್ಲಿಯೇ ಲೋಪವೆಂದನಂಬಿಗಚೌಡಯ್ಯ.

೬೨

ಒಡಲ ಧರ್ಮಂಗಳು ಬಿಡದನ್ನಕ್ಕರ, ಎರಡನರಿಯದ ಪೂಜೆಯ ಮಾಡಿಹೆನೆಂಬ ನರಕಿಗಳವರೆತ್ತ ಬಲ್ಲರೋ? ಉದಯದಲಾದ ಪೂಜೆಯು ಅಸ್ತಮಾನದಲ್ಲಿ ಎಂಜಲೆಂಬ ಭಂಗಿತರ ಮುಖವ ನೋಡಲಾಗದು. ಅಗ್ನಿ ಎಂಜಲವನುಂಡು, ಲಿಂಗದಲ್ಲಿ ಸ್ವಯವನರಸುವ ಭಂಗಿತರನೇನೆಂಬೆನಯ್ಯಾ ಕೂಡಲಚೆನ್ನಸಂಗಮದೇವಾ?

೬೩

ಎಲ್ಲವ ಕಳೆದುಳಿದ ಹೂವ ತಂದು, ಗೆಲ್ಲಸೋಲಕ್ಕೊಳಗಾಗದ ನೀರನೆ ತುಂಬಿ, ಕರಣಂಗಳೆಲ್ಲವು ಕಂಗಳು ತುಂಬಿ ನಿಂದು ನೋಡಿ, ತನ್ನಂಗ ದಿಟ್ಟಿಯ ಮರೆದು ಲಿಂಗವ ಪೂಜಿಸಬೇಕೆಂದನಂಬಿಗಚೌಡಯ್ಯ.

೬೪

ಹೊತ್ತಾರೆ ಎದ್ದು ಹೂ ಪತ್ರೆಯ ಕೊಯ್ತಂದು, ಹೊರ ಉಪಚಾರವ ಮಾಡುವುದೆಲ್ಲ ಬರಿಯ ಭಾವದ ಬಳಲಿಕೆ ನೋಡಾ! ಅಳಲದೆ ಬಳಲದೆ ಆಯಸಂಬಡದೆ, ಒಳಗಣ ಜ್ಯೋತಿಯ ಬೆಳಗಿನ ಕಳೆಯ ಕಮಲವ ಪೂಜಿಸಬಲ್ಲರೆ, ಆ ಶರಣಂಗೆ ಬೆಳಗಾಗಿ ಎದ್ದು ಪೂಜಿಸಿಹೆನೆಂಬ ಕಳವಳವೇನು ಹೇಳಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ?

೬೫

ಉದಯಮುಖದಲ್ಲಿ ಪೂಜಿಸಹೋದರೆ ಹೃದಯಮುಖದಲ್ಲಿ ಕತ್ತಲೆಯಾಯಿತ್ತು. ಹಾರಿಹೋಯಿತ್ತು ಪ್ರಾಣಲಿಂಗ; ಹರಿದು ಬಿದ್ದಿತ್ತು ಸಜ್ಜೆ. ಕಟ್ಟುವ ಬಿಡುವ ಸಂಬಂಧಿಗಳ ಕಷ್ಟವ ನೋಡಾ ಗೊಹೇಶ್ವರಾ!

೬೬

ಹೊತ್ತಾರೆ ಪೂಜಿಸಲು ಬೇಡ ಕಂಡಾ! ಬೈಗೆ ಪೂಜಿಸಲು ಬೇಡ ಕಂಡಾ! ಇರುಳವನೂ ಹಗಲುವನೂ ಕಳೆದು ಪೂಜಿಸಲು ಬೇಕು ಕಂಡಾ! ಇಂತಪ್ಪ ಪೂಜೆಯ ಪೂಜಿಸುವವರ ಎನಗೆ ತೋರಯ್ಯ ಗೊಹೇಶ್ವರ.

೬೭

ದೇಹವೆಂಬ ದೇಗುಲದೊಳಗೆ, ಭಾವಸಿಂಹಾಸನವ ಮಾಡಿ, ಜೀವದೊಡೆಯನ ಪೂಜಿಸಬಲ್ಲಡೆ, ದೇವರಿಗೆ ದೇವರೆಂಬೆನಯ್ಯಾ ಅಖಂಡೇಶ್ವರಾ.

೬೮

ಕಾಯವೆಂಬ ಕೆರೆಗೆ ತನುವೆಂಬ ಏರಿ ಮನವೆಂಬ ಕಟ್ಟೆಯ ಕಟ್ಟಿ, ದೃಢವೆಂಬ ತೂಬನು ಇಕ್ಕಬೇಕಯ್ಯ. ಆನಂದವೆಂಬ ಜಲವ ತುಂಬಿ, ಸ್ವಾನುಭಾವವೆಂಬ ಸೋಪಾನವ ಹೂಡಬೇಕಯ್ಯ. ಆ ಕೆರೆಯ ಏರಿಯ ಮೇಲೆ ಆಚಾರವೆಂಬ ವೃಕ್ಷವ ಬೆಳೆಯಿಸಿ, ಅರುಹೆಂಬ ಹೂವನು ಅದ್ವೈತವೆಂಬ ಹಸ್ತದಿಂದ ಕೊಯಿದು ಅನುಪಮ ಲಿಂಗಕ್ಕೆ ಪೂಜಿಸಬಲ್ಲರೆ, ಲಿಂಗಾರ್ಚಕರೆಂಬೆ. ಈ ಭೇದವನರಿಯದೆ, ಹುಸಿಯನೆ ಪೂಜಿಸಿ ಗಸಣೆಗೊಳಗಾದ ಪಿಸುಣಿಗಳನು ಲಿಂಗಪೂಜಕರೆಂದು ಎಂತೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೬೯

ಕೇಳು ಕೇಳಯ್ಯ ಪ್ರಾಣನಾಥನೆ, ಎನ್ನ ಪ್ರಾಣಪೂಜೆಯ ಬಗೆಯ ಬಣ್ಣಿಸುತಿರ್ಪೆನು. ಅವಧರಿಸಯ್ಯಾ ಸ್ವಾಮಿ. ಎನ್ನ ಕಾಯವೆ ಕೈಲಾಸವಯ್ಯಾ ನಿಮಗೆ. ಎನ್ನ ಮನವೆ ಶೃಂಗಾರ ಮಂಟಪವಯ್ಯಾ ನಿಮಗೆ. ಎನ್ನ ಭಾವವೆ ಶೂನ್ಯಸಿಂಹಾಸನವಯ್ಯಾ ನಿಮಗೆ. ಎನ್ನ ಪರಮಾನಂದವೆ ಮಜ್ಜನವಯ್ಯಾ ನಿಮಗೆ. ಎನ್ನ ಪರಮಶಾಂತಿಯೆ ಗಂಧವಯ್ಯಾ ನಿಮಗೆ.

ಎನ್ನ ನಿರಹಂಕಾರವೆ ಅಕ್ಷತೆಯಯ್ಯಾ ನಿಮಗೆ. ಎನ್ನ ಅವಿರಳವೆ ಪುಷ್ಪದ ಮಾಲೆಯಯ್ಯಾ ನಿಮಗೆ. ಎನ್ನ ಸ್ವಾನುಭಾವವೆ ಧೂಪವಯ್ಯಾ ನಿಮಗೆ. ಎನ್ನ ದಿವ್ಯಜ್ಞಾನವೆ ದೀಪದ ಗಡಣವಯ್ಯಾ ನಿಮಗೆ. ಎನ್ನ ಸುಚರಿತ್ರವೆ ಸರ್ವವಸ್ತ್ರವಯ್ಯಾ ನಿಮಗೆ. ಎನ್ನ ಸುವಿವೇಕವೆ ಸಕಲಾಭರಣವಯ್ಯಾ ನಿಮಗೆ. ಎನ್ನ ಆತ್ಮವೆ ಪರಮಾಮೃತದ ನೈವೇದ್ಯವಯ್ಯಾ ನಿಮಗೆ. ಎನ್ನ ಪರಿಣಾಮವೆ ಹಸ್ತೋದಕವಯ್ಯಾ ನಿಮಗೆ. ಎನ್ನ ಸದ್‌ಭಕ್ತಿ ರಾಗರಸವೆ ತಾಂಬೂಲವಯ್ಯಾ ನಿಮಗೆ. ಎನ್ನ ನಿರ್ಮಲವೆ ದರ್ಪಣವಯ್ಯಾ ನಿಮಗೆ. ಎನ್ನ ಸತ್ಯವೆ ಘಂಟೆಯಯ್ಯಾ ನಿಮಗೆ. ಎನ್ನ ಸದಾನಂದವೆ ಶಂಖವಾದ್ಯವಯ್ಯಾ ನಿಮಗೆ. ಎನ್ನ ಸಮತೆಯೆ ಚಾಮರವಯ್ಯಾ ನಿಮಗೆ. ಎನ್ನ ಕ್ಷಮೆಯೆ ಆಲವಟ್ಟವಯ್ಯಾ ನಿಮಗೆ. ಎನ್ನ ಸುಮನವೆ ವಾಹನಯ್ಯಾ ನಿಮಗೆ. ಎನ್ನ ಸುಬುದ್ಧಿಯೆ ಜಗಜಂಪವಯ್ಯಾ ನಿಮಗೆ. ಎನ್ನ ಸುಚಿತ್ತವೆ ನಂದಿಧ್ವಜವಯ್ಯಾ ನಿಮಗೆ.ಎನ್ನ ಸುಜ್ಞಾನವೆ ಶೃಂಗಾರದ ಪಲ್ಲಕ್ಕಿಯಯ್ಯಾ ನಿಮಗೆ. ಎನ್ನ ನುಡಿಗಡಣವೆ ಮಂಗಳಸ್ತೋತ್ರವಯ್ಯಾ ನಿಮಗೆ. ಎನ್ನ ಸುಳುಹಿನ ಸಂಚಾರವೆ ಪ್ರದಕ್ಷಿಣೆಯಯ್ಯಾ ನಿಮಗೆ. ಎನ್ನ ಮಂತ್ರೋಚ್ಚರಣವೆ ನಮಸ್ಕಾರವಯ್ಯಾ ನಿಮಗೆ. ಎನ್ನ ಸಕಲಕರಣಂಗಳಿಂದೆ ಮಾಡುವ ಸೇವೆಯೆ ನಾನಾ ತೆರದ ಉಪಚಾರವಯ್ಯಾ ನಿಮಗೆ.ಇಂತೀ ಪ್ರಾಣಪೂಜೆಯ ನಿರಂತರ ತೆರಹಿಲ್ಲದೆ ನಿಮಗಳವಡಿಸಿ ನಾ ನಿಮ್ಮೊಳಡಗಿರ್ದೆನಯ್ಯಾ ಅಖಂಡೇಶ್ವರಾ.

೭೦

ಅಂಗದ ಮೇಲೆ ಲಿಂಗವರತು, ಲಿಂಗದ ಮೇಲೆ ಅಂಗವರತು, ಭಾವ ತುಂಬಿ ಪರಿಣಾಮವರತು, ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೊ ಗೊಹೇಶ್ವರಾ ?

೫. ಯೋಗ ಶಿವಯೋಗ

೭೧

ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು. ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು. ನಾನೆಂತು ಬದುಕುವೆನಣ್ಣಾ! ಕತ್ತಲೆ ಬೆಳಗ ಕಾಬ ಸಂದೇಹಿ ನಾನೊಬ್ಬಳು. ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣಾ, ನಿನ್ನ ಯೋಗ!

೭೨

ತನುಗುಣವಳಿದಲ್ಲಿ ತ್ಯಾಗಾಂಗ, ಲಿಂಗದೊಡನೆ ಸಕಲಸುಖಂಗಳ ಭೋಗಿಸುವಲ್ಲಿ ಭೋಗಾಂಗ, ನಿಜದಲ್ಲಿ ಬೆರೆಯಲು ಯೋಗಾಂಗ,—ಇಂತೀ ತ್ರಿವಿಧದಲ್ಲಿಯೂ ಯೋಗಾಂಗ. ಇದಲ್ಲದನ್ಯಯೋಗಂಗಳೆಲ್ಲ ವಿಯೋಗ ವಯ್ಯ ಸೌರಾಷ್ಟ್ರಸೋಮೇಶ್ವರಾ.

೭೩

ಅಯ್ಯಾ, ಎನ್ನ ಹಲ್ಲ ಮರೆಯಲ್ಲಿಪ್ಪ ಬೆಲ್ಲವ ಕಂಡು, ಎಲ್ಲರು ಮೆಲ್ಲ ಬಂದರು. ಈ ಬೆಲ್ಲಗಳಿದ್ದರೆ ನಿಲ್ಲಲೀಸದೆ ಎನ್ನ ಕಾಡುತ್ತಿದ್ದರೆಂದು ಆ ಬೆಲ್ಲವನಲ್ಲಿಯೆ ನುಂಗಿದರೆ, ಆ ಹಲ್ಲು ಮುರಿದು, ಮೆಲ್ಲ ಬಂದವರೆಲ್ಲ ಅಲ್ಲಿಯೆ ಬಯಲಾದರು. ನಾ ನಿಮ್ಮಲ್ಲಿ ಕೂಡಿ ಸುಖಿಯಾಗಿದ್ದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೭೪

ತನ್ನ ತಾನರಿದಿಹವೆ ಪರಮಾತ್ಮಯೋಗ. ತನ್ನ ತಾ ಮರೆದಿಹವೆ ಮಾಯಾಸಂಬಂಧ. ಅಂತರಂಗ ಬಹಿರಂಗ ಪರಮಾಕಾಶಮಧ್ಯದಲ್ಲಿ ಪರಮಾತ್ಮನು ಪರಬ್ರಹ್ಮಸ್ವರೂಪನು, ನಿತ್ಯ ನಿರಂಜನನು, ಉಪಮಾತೀತ, ನಿಃಪತಿ, ಕೇವಲನಿಷ್ಕಲಸ್ವರೂಪನು. ಭ್ರೂಮಧ್ಯದಲ್ಲಿ ಪರಮಾತ್ಮನೇ ಅಂತರಾತ್ಮನಾಗಿ ಸಕಲನಿಷ್ಕಲನಾಗಿಪ್ಪನು. ಹೃದಯಸ್ಥಾನದಲ್ಲಿ ಆ ಪರಮಾತ್ಮನೇ ಜೀವಾತ್ಮನಾಗಿ ಕೇವಲ ಸಕಲನಾಗಿಪ್ಪನು. ಬ್ರಹ್ಮರಂಧ್ರಸ್ಥಾನ

ದಲ್ಲಿ ನಿಷ್ಕಲಗುರುಮೂರ್ತಿಲಿಂಗ, ಭ್ರೂಮಧ್ಯಸ್ಥಾನದಲ್ಲಿ ಸಕಲ ಪರಂಜ್ಯೋತಿರ್ಲಿಂಗ, ಹೃದಯಸ್ಥಾನದಲ್ಲಿ ಕೇವಲ ಸಕಲಜಂಗಮಲಿಂಗ. ಇಂತು ಪರಮಾತ್ಮನೆ ಅಂತರಾತ್ಮ, ಪರಮಾತ್ಮನೆ ಜೀವಾತ್ಮ, ಪರಮಾತ್ಮನೆ ಗುರುಲಿಂಗ, ಪರಮಾತ್ಮನೆ ಶಿವಲಿಂಗ, ಪರಮಾತ್ಮನೆ ಜಂಗಮಲಿಂಗ. ಇಂತು ಪರಬ್ರಹ್ಮವೆ ಪರಮಾತ್ಮ, ಪರಮಾತ್ಮನೆ ಸರ್ವಾತ್ಮ, ಪರಮಾತ್ಮನೆ ಸರ್ವಗತ, ಪರಮಾತ್ಮನೆ ಆತ್ಮಗತ. ಇದು ಕಾರಣ ಪರಮಾತ್ಮನೆ ಅಂತರಂಗಬಹಿರಂಗಭರಿತ ಪ್ರಾಣಲಿಂಗ. ಇಂತು ಅರಿದುದೆ ಪರಮಾತ್ಮಯೋಗ, ಮರವೆಯೇ ಮಾಯಾಸಂಬಂಧವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೭೫

ಅಯ್ಯಾ ಆರು ಇಲ್ಲದ ಅರಣ್ಯದಲ್ಲಿ ನಾನಡಿ ಇಟ್ಟು ನಡೆವುತ್ತಿರ್ದೆನಯ್ಯ! ಮುಂದೆ ಬರಬರ ಮಹಾಸರೋವರವ ಕಂಡೆ. ಆ ಸರೋವರದೊಳಗೊಂದು ಹಿರಿಯ ಮೃಗವ ಕಂಡೆ. ಆ ಮೃಗಕ್ಕೆ ಕೊಂಬುಂಟು, ತಲೆ ಇಲ್ಲ. ಬಾಯುಂಟು, ಕಣ್ಣಿಲ್ಲ. ಕೈಯುಂಟು, ಬೆರಳಿಲ್ಲ. ಕಾಲುಂಟು, ಹೆಜ್ಜೆಯಿಲ್ಲ. ಒಡಲುಂಟು, ಪ್ರಾಣವಿಲ್ಲ. ಇದ ಕಂಡು ನಾ ಹವ್ವನೆ ಹಾರಿ ಹೆದರಿ ಬಿದ್ದೆನಯ್ಯ! ಆಗ ಎನ್ನ ಹೆತ್ತ ತಾಯಿ ಬಂದು ಎತ್ತಿ ಕುಳ್ಳಿರಿಸಿ, ಚಿತ್ತ ಮೂಲಾಗ್ನಿಯ ಒತ್ತಿ ಉರುಹಿದರೆ, ಎಲ್ಲವು ಸುಟ್ಟು ಬಯಲಾದವು. ಬಟ್ಟಬಯಲೊಳಗೆ ಅಡಿ ಇಟ್ಟು ನಡೆವಾಗ, ಮುಂದೆ ಇಟ್ಟಡಿಯ ಬಾಗಿಲೊಳಗೆ ಮತ್ತೊಂದು ಮೃಗವ ಕಂಡೆ. ತಲೆಯುಂಟು, ಕೊಂಬಿಲ್ಲ. ಕಣ್ಣುಂಟು, ಬಾಯಿಲ್ಲ. ಹಸ್ತವುಂಟು, ಕೈಯಿಲ್ಲ. ಹೆಜ್ಜೆಯುಂಟು, ಕಾಲಿಲ್ಲ. ಪ್ರಾಣವುಂಟು, ಒಡಲಿಲ್ಲ. ಇದನು ಕಂಡು ನಾನಪ್ಪಿಕೊಳ್ಳಹೋದರೆ, ಮುಟ್ಟದ ಮುನ್ನವೆ ಎನ್ನನೆ ನುಂಗಿತ್ತು. ನುಂಗಿದ ಮೃಗ ಮಹಾಲಿಂಗದಲ್ಲಿಯೆ ಅಡಗಿತ್ತು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೭೬

ಎನ್ನ ಸತ್ಯಳ ಮಾಡಿ, ನಿತ್ಯವ ತೋರಿ, ತತ್ವವೆಂಬುದನರುಹಿದಿರಿ. ಮತ್ಸರವ ಹಿಂಗಿಸಿದಿರಿ. ಆಶೆರೋಷವನೆ ಹಿಂಗಿಸಿದಿರಿ. ಮಾತು ಮಥನವನೆ

ಕೆಡಿಸಿದಿರಿ. ವ್ಯಾಕುಳವನೆ ಕೆಡಿಸಿ, ಜ್ಯೋತಿಯ ಬೆಳಗ ತೋರಿದಿರಯ್ಯಾ. ಚೆನ್ನಮಲ್ಲೇಶ್ವರನು ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೭೭

ವ್ಯಾಪಾರವ ಬಿಟ್ಟು, ತಾಪತ್ರಯವನೆ ಹಿಂಗಿ, ಲೋಕದ ಹಂಗನೆ ಹರಿದು, ಬೇಕು ಬೇಡೆಂಬುದನೆ ನೂಕಿ, ತಾ ಸುವಿವೇಕಿಯಾದಲ್ಲದೆ, ಜ್ಯೋತಿಯ ಬೆಳಗ ಕಾಣಬಾರದೆಂದರು ನಮ್ಮ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣ.

೭೮

ಕೆಲವರು ಕಂಡೆನೆಂಬರು. ತಾರಾಮಂಡಲವೆ? ಸೂರ್ಯಮಂಡಲವೆ? ಗೊಹೇಶ್ವರನಿಪ್ಪುದು ಚಂದ್ರಗಿರಿಯ ಪಟ್ಟಣವು.

೭೯

ಕುದುರೆಯ ಕುಪ್ಪಟ ಘನವಾಯಿತ್ತು. ಆನೆಯ ಹರಿದಾಟ ನಿಲಬಾರದು. ಒಂಟೆಯ ಕತ್ತು ನೆಟ್ಟಗಾಯಿತ್ತು. ಬಂಟರ ಹರಿದಾಟ ಉಂಟು. ಕಟ್ಟಿಗೆಯವರು ಉಗ್ಗಡಿಸುತ್ತ, ಭಟರುಗಳು ಪೊಗಳುತ್ತ, ಸಕಲವಾದ್ಯ ರಭಸದೊಳಗೆ ಸಂದಳಿಯೆಂಬ ಅಂದಳದ ಮೇಲೆ ಚಂದವಾಗಿ ಮನೋರಾಜ್ಯಂಗೆಯ್ಯುತ್ತಿರಲು, ಈ ಸುಖವನೊಲ್ಲದೆ, ಮುಂದೆ ದುಃಖ ಉಂಟೆಂದು ಶರಣನರಿದು, ತಲೆ ಎತ್ತಿ ನೋಡಿ, ಘನಗುರುವಿನ ಹಸ್ತದಿಂದ ಅನುಜ್ಞೆಯಂ ಪಡೆದು, ಧ್ಯಾನ ಧಾರಣ ಸಮಾಧಿಯಿಂದ ತಿಳಿದು ನೋಡಲಾಗಿ, ಇತ್ತ ಶೂನ್ಯವೆಂಬ ಪಟ್ಟಣದೊಳಗೆ ಅನಾಮಿಕನೆಂಬ ಲಿಂಗ ಅರಸು, ಆ ಅರಸಿನ ಗೊತ್ತುವಿಡಿದು ಇತ್ತಲೆ ಮನವೆಂಬ ಅರಸನು ಹಿಡಿಯಲಾಗಿ, ಹಿಡಿದು ಆನೆ ಕುದುರೆ ಸೇನೆಯನೆಲ್ಲ ಸೂರೆಗೊಂಡು, ಭಂಡಾರ ಬೊಕ್ಕಸ ಅರಮನೆಯನ್ನೆಲ್ಲ ಸುಟ್ಟು ಬಟ್ಟಬಯಲ ಮಾಡಿದ ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

೮೦

ಅಯ್ಯ, ಎನ್ನ ಬಾಳುವೆಯಲ್ಲಿ ಹೇಳದೆ ಕೇಳದೆ ಒಬ್ಬ ಕಾಳರಕ್ಕಸಿ ನುಂಗಿದಳಯ್ಯ. ಆ ಬಾಳುವೆಗೋಸುಗ ಕಾಳರಕ್ಕಸಿಯ ಬಾಯೊಳಗೆ

ಸಿಲ್ಕಿದೆನಯ್ಯ ! ಆ ಕಾಳರಕ್ಕಸಿ ಆವಾಗೆ ಅಗಿದಾಳೆಂದರಿಯೆ. ಆವಾಗೆ ಹುಗಿದಾಳೆಂದರಿಯೆ. ಆ ಕಾಳರಕ್ಕಸಿಯು ಬಾಯಿಂದಲೆ ಹೊರಟು, ಆ ಬಾಳುವೆಯನಲ್ಲಿ ಬಿಟ್ಟು ಆ ಕಾಳರಕ್ಕಸಿಯು ಬಾಯಿಂದಲೆ ಹೊರವಂಟು, ಆ ಮಹಾಜಾಣನಾಳುವ ಪುರವ ಹೊಕ್ಕೆ. ಆ ಜಾಣನಾಳುವ ಪುರದೊಳಗೆ ಕಾಣಬಾರದುದನೆ ಕಂಡೆ. ಕೇಳಬಾರದುದನೆ ಕೇಳಿದೆ. ಕದಳಿಯನೆ ದಾಂಟಿದೆ. ಜ್ಞಾನಜ್ಯೋತಿಯ ಕಂಡೆ. ತಾನು ತಾನಾಗಿಪ್ಪ ಮಹಾಬೆಳಗಿನೊಳು ನಾನು ಓಲಾಡುತಿಪ್ಪೆನಯ್ಯ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ!

೮೧

ಏನೇನು ಇಲ್ಲದಾಗ ನೀವಿಲ್ಲದಿದ್ದರೆ, ನಾನಾಗಬಲ್ಲೆನೇ ಅಯ್ಯ? ಆದಿ ಅನಾದಿ ಇಲ್ಲದಂದು ನೀವಿಲ್ಲದಿದ್ದರೆ, ನಾನಾಗಬಲ್ಲೆನೇ ಅಯ್ಯ? ಮುಳುಗಿ ಹೋದವಳ ತೆಗೆದುಕೊಂಡು, ನಿಮ್ಮ ತೊತ್ತಿನ ಪಡಿದೊತ್ತಿನ ಮಗಳೆಂದು ರಕ್ಷಣೆಯ ಮಾಡಿದ ಶಿಶುವಾದ ಕಾರಣ, ಹಡಪದಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡರು. ಚೆನ್ನಮಲ್ಲೇಶ್ವರನೆ ಎನ್ನ ಮನಸ್ಥಲಕೆ ಪ್ರಾಣವಾಗಿ ಮೂರ್ತಗೊಂಡರು. ಆ ಕರಸ್ಥಲದ ಲಿಂಗವನರ್ಚಿಸಿ ಪೂಜಿಸಿ ವರವ ಬೇಡಿದರೆ, ತನುವ ತೋರಿದರು. ಆ ತನುವಿಡಿದು ಮಹಾಘನವ ಕಂಡೆ. ಆ ಘನವಿಡಿದು ಮನವ ನಿಲ್ಲಿಸಿದೆ. ಮನವ ನಿಲ್ಲಿಸಿ ನೋಡುವನ್ನಕ್ಕ, ಪ್ರಾಣದ ನೆಲೆಯನರಿದೆ. ಪ್ರಾಣವನೊಂದುಗೂಡಿದೆ. ಕಾಣಬಾರದ ಕದಳಿಯನೆ ಹೊಕ್ಕನೂನ ಕದಳಿಯ ದಾಂಟಿದೆ. ಜ್ಞಾನಜ್ಯೋತಿಯ ಕಂಡೆ. ತಾನು ತಾನಾಗಿಪ್ಪ ಮಹಾಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯ, ಚೆನ್ನ ಬಸವಣ್ಣನ ಕರುಣದ ಶಿಶುವಾದ ಕಾರಣದಿಂದ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣಾ.

೮೨

ನಾದ ಬಿಂದುವಿನೊಳಗಣ ಪದ್ಮಾಸನದ ಮೇಲೆ ಕುಳ್ಳಿರ್ದು, ಘಳಿಗೆಗೊಮ್ಮೆ ಸುಳಿದು ಹೋಹ ಕಳ್ಳನನಾರಯ್ಯ ಬಲ್ಲವರು ? ಹಾರುವ ಹಂಸೆಯ ತಲೆಗಿಂಬು ಮಾಡಿದವರ ಬಸವ ಬಲ್ಲ ಕಾಣಾ ಗೊಹೇಶ್ವರಾ.

೮೩

ಬಣ್ಣವಿಲ್ಲದ ಪಕ್ಷಿ, ಕಣ್ಣಿನ ಕೊನೆಯಲ್ಲಿ ಸಣ್ಣ ಗೂಡನಿಕ್ಕಿ ಸುಳಿವುದ ಕಂಡೆ. ಬಣ್ಣ ಮೂವತ್ತಾರ ನುಂಗಿತ್ತ ಕಂಡೆ. ಬಯಲ ಸೀಮೆಯ ವಾಸವಾಗಿರ್ಪ ಪಕ್ಷಿ, ಹೆಣ್ಣೋ ಗಂಡೋ ಎಂದು ಕುರುಹುವಿಡಿವ ಅಣ್ಣಗಳನಾರನೂ ಕಾಣೆನಯ್ಯಾ ಅಖಂಡೇಶ್ವರಾ!

೮೪

ತಿಳಿದಿರ್ದ ಮಡುವಿನೊಳಗೆ ಸುಳಿಸುಳಿದಾಡುತ್ತದೆ ಒಂದು ಸುವರ್ಣದ ಬಿಂದು! ಅದು ಹಿಂದು ಮುಂದಾಗಿ ನೋಡಿದವರಿಗಲ್ಲದೆ ಕಾಣಬಾರದು. ಮಡುವು ತುಳುಕದೆ, ದಡವ ಸೋಂಕದೆ ಹಿಡಿಯಬಲ್ಲಡೆ, ಗೊಹೇಶ್ವರನೆಂಬ ಲಿಂಗವು ಈಗಳೆ ಸಾಧ್ಯ.

೮೫

ಉದಕದೊಳಗೆ ಕಿಚ್ಚು ಹುಟ್ಟಿ ಸುಡುತ್ತಿದ್ದುದ ಕಂಡೆ! ಗಗನದ ಮೇಲೆ ಮಾಮರನ ಕಂಡೆ! ಪಕ್ಕವಿಲ್ಲದ ಹಕ್ಕಿ ಬಯಲ ನುಂಗಿತ್ತ ಕಂಡೆ ಗೊಹೇಶ್ವರಾ!!

೮೬

ಆಕಾಶ ಒಂದಂಡಜ, ಪೃಥ್ವಿ ಒಂದು ಪಿಂಡಜ. ಈ ಎರಡರ ಮಧ್ಯದಲ್ಲಿ ಪಕ್ಷಿ ಮರಿಗಳನ್ನಿಕ್ಕಿತ್ತ ಕಂಡೆ. ತುಪ್ಪುಳು ಬಾರದು. ಅದರೊಪ್ಪವನೇನೆಂದೆಂಬೆನು ಗುರುವೇ! ಬಯಲನೆ ಉಡುಗಿತ್ತು, ನಿರ್ವಲಯನೆ ಗೂಡು ಮಾಡಿತ್ತು. ಉರಿಯನೆ ಉಂಡಿತ್ತು. ಮಧುರಸವನೆ ಹಿಂಡಿತ್ತ ಕಂಡೆ! ಪಕ್ಷಿಗೆ ಪಕ್ಕ ಬಂದಿತ್ತು. ಗಗನಕ್ಕೆ ಹಾರಿತ್ತು. ಹಾರಿ ಹೋಗುತ್ತ ನಮ್ಮ ಗೊಹೇಶ್ವರಲಿಂಗವ ಕೂಡಿತ್ತ ಕಂಡೆ!

೮೭

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆಯ ಮಾತ ಹೇಳಿದೊಡೇನು? ಕೇಳಿದೊಡೇನು? ತನ್ನಲ್ಲಿದ್ದುದ ತಾನರಿಯದನ್ನಕ್ಕ ಹೇಳಿದೊಡೇನು, ಕೇಳಿದೊಡೇನು,-ಉನ್ಮನಿಯ ರಭಸದ ಪವನದಲ್ಲಿದ್ದು ಚೆನ್ನಮಲ್ಲಿಕಾರ್ಜುನಯ್ಯನ ಭೇದಿಸದನ್ನಕ್ಕರ?

೭೮

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞಾ ಚಕ್ರವೆಂಬ ಷಡಾಧಾರ ಚಕ್ರವನರಿದು, ಏರಿ ಏರಿ ಇಳಿದು ಆದಿಯ ನೋಡಿ ಕೊಂಡು ಆದಿ ಅನಾದಿ ಎಂಬ ಭೇದವ ನೋಡಿ, ಶೋಧಿಸಿ, ಸಪ್ತಧಾತುವಿನ ನೆಲೆಯ ಕಂಡು, ಮನ ಬುದ್ಧಿ ಚಿತ್ತವ, ಏಕಹುರಿಯ ಮಾಡಿ, ಉತ್ಪತ್ತಿ ಸ್ಥಿತಿ ಲಯವೆಂಬ, ಕಾಲಮೂಲಾದಿಗಳ ಸುಟ್ಟು, ಧ್ಯಾನದಲ್ಲಿ ನಿಂದು, ಅಂಗ ಲಿಂಗ ಹಸ್ತ ಮುಖ ಅರ್ಪಿತ ಅವಧಾನವೆಂಬ ಷಟ್‌ಸ್ಥಲವ ಮೆಟ್ಟಿ ನಿಂದು, ಆರರಿಂದ ಮೀರಿ ತೋರುವ ಬೆಳಗ ಕಂಡು, ನಾನು ಒಳಹೊಕ್ಕು ನೋಡ ಲಾಗಿ, ಒಳಹೊರಗೆ ತೊಳತೊಳಗಿ ಬೆಳಗುತ್ತ, ಇಳೆ ಬ್ರಹ್ಮಾಂಡ ತಾನೆ ಯಾಗಿರ್ದ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ !

೭೯

ಓಂಕಾರನಾದ ಪಿಂಡಬ್ರಹ್ಮಾಂಡವ ತುಂಬಿಕೊಂಡಿಪ್ಪುದು. ಅದು ಮಹಾಜ್ಞಾನಿಗಳಿಗೆ ಪ್ರತ್ಯಕ್ಷವಾಗಿರ್ಪುದು. ಆ ನಾದವಿಲ್ಲದಿರ್ದೊಡೆ ನಿರ್ಜೀವಿ ಗಳು ಹೇಗೆ ನುಡಿದವು ? ನಿರ್ಜೀವಿ ಯಾವವೆಂದೊಡೆ: ಕೊಡಹಿದ ಶಬ್ದ: ಚರ್ಮವಾದ್ಯ ಭೇರಿ ತಮ್ಮಟ. ಮತ್ತಂ ಲೋಹವಿಡಿದ ಶಬ್ದ: ತಾಳ, ಕಂಸಾಳ ಗಂಟೆ ಕಹಳೆ ಕರ್ನೆ ನಪೂರಿ ಸ್ವನಾಯಿ. ಮತ್ತಂ ತಂತಿವಿಡಿದ ಶಬ್ದ: ಕಿನ್ನರಿ ವೀಣೆ ಕಾಮಾಕ್ಷಿ ತಂಬೂರಿ ರುದ್ರವೀಣೆ. ಇನ್ನು ಆಕಾಶ ದೊಳಗೆ ಶಬ್ದವನಿಕ್ಕಿದರೆ, ಪ್ರತಿಶಬ್ದ ಕುಡುವದು. ಮತ್ತಂ ದೇಗುಲದೊಳಗೆ ಶಬ್ದವಿಕ್ಕಿದೊಡೆ, ನುಡಿದ ಹಾಗೆ ನುಡಿವುದು. ಹಾಗೆ ಪರಿಪೂರ್ಣವಸ್ತುವಿಲ್ಲ ದಿರ್ದೊಡೆ ಈ ನಿರ್ಜೀವಿಗಳು ಹ್ಯಾಗೆ ನುಡಿದವು ? ಈ ನಾದಶಬ್ದವು ಆವ ಘಟದೊಳಗೆ ಪೊಕ್ಕು ಆ ಘಟಶಬ್ದವ ಕುಡುತ್ತಿಹುದು, ಆ ಘಟದ ಗುಣ ವೆಂದು ತಿಳಿವುದು. ನಮ್ಮ ಗಣಂಗಳು ಆ ಘಟವ ಬಿಟ್ಟು, ಪಿಂಡಬ್ರಹ್ಮಾಂಡ ದೊಳಗಿಪ್ಪ ಪರಿಪೂರ್ಣವಸ್ತುವಿನೊಳಗೆ ಬೆರೆದುದ ಎನ್ನೊಳರುಹಿದಾತ ನಮ್ಮ ಶಾಂತಕೂಡಲಸಂಗಮದೇವ.

೯೦

ವಾಮಭಾಗದಲೊಂದು ಶಿಶು ಹುಟ್ಟಿತ್ತ ಕಂಡೆ. ಜೋ ಜೋ ಎಂದು ಜೋಗುಳವಾಡಿತ್ತ ಕಂಡೆ. ಜೋಗುಳವಾಡಿದ ಶಿಶು ಅಲ್ಲಿಯೆ ಲಯವಾಯಿತ್ತು. ಗೊಹೇಶ್ವರನೆಂಬ ಶಬ್ದವಲ್ಲಿಯೆ ಲಯವಾಯಿತ್ತು.

೯೧

ಏಳು ತಾಳ ಮೇಲೆ ಕೇಳುವ ಸುನಾದ. ಸ್ಥೂಲಸೂಕ್ಷ್ಮ ಕೈಲಾಸದ ರಭಸ. ಗಂಗೆವಾಳುಕಸಮಾರುದ್ರರ ಶಿಂಥಿಣಿ. ಗಗನಗಂಭೀರದ ಶಿವ ಸ್ತುತಿಯ ನೋಡಲೊಡನೆ, ಪಿಂಡ ಬ್ರಹ್ಮಾಂಡವಾಯಿತ್ತು. ಅಖಂಡಿತ ನಿರಾಳ ಗೊಹೇಶ್ವರ!

೯೨

ಬಂದೂ ಬಾರದು, ಹೊಂದಿಯೂ ಹೊಂದದು, ನಿಂದೂ ನಿಲ್ಲದ ಪರಿಯ ನೋಡಾ. ಬಿಂದು ನಾದವ ನುಂಗಿತ್ತು. ಮತ್ತೊಂದಧಿಕ ಉಂಟೆ? ನವಖಂಡಪೃಥ್ವಿಯನೊಳಕೊಂಡ ಅಗಮ್ಯ ಸನ್ಮತದ ಸುಖವಿರಲು, ಗೊಹೇಶ್ವರನ ಬೇರೆ ಅರಸಲುಂಟೆ?

೯೩

ಗುದ ಲಿಂಗ ನಾಭಿಕಮಲದಿಂದ ಮೇಲೆ ಷಡಂಗುಲವನೊತ್ತಿದರೆ, ಕಣ್ಣಿಲ್ಲದೆ ಕಾಣಬಹುದು ಲಿಂಗಪ್ರಕಾಶವ. ಕಿವಿಯಿಲ್ಲದೆ ಕೇಳಬಹುದು ಮಹಾನಾದವ. ಸುನಾದವ ಕಂಡು ಕೇಳಿದ ಬಳಿಕ ಮನ ನಂಬದಿದ್ದರೆ, ಮಕ್ಕಳಾಟಿಕೆ ತಪ್ಪದು ಗೊಹೇಶ್ವರಾ.

೯೪

ಕನ್ನಡಿಯೊಳಗಣ ರೂಪವನರಸಿಯೂ ಕಾಣರು. ಹೊಳೆವುತ್ತದೆ ಭ್ರೂಮಂಡಲದೊಳಗೆ! ಇದ ಬಲ್ಲವರೊಳಿಪ್ಪ ಗೊಹೇಶ್ವರ.

೯೫

ಪರುಷದ ಗಿರಿಯಲ್ಲಿ ಚಿಂತಾಮಣಿ ರತ್ನವ ಕಂಡೆನಯ್ಯ. ಅದು ಅನಂತಕೋಟಿ ಸೋಮಸೂರ್ಯರ ಬೆಳಗು ನೋಡಾ! ಅತಿಶಯದ ಬೆಳಗಿನ

ಬೆಳಗಿನೊಳು, ಆನಂದಸುಖದೊಳು ಓಲಾಡುವೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೯೬

ಹಳೆಯ ಹುತ್ತದೊಳಗೆ ಒಂದು ಎಳೆಯ ಸರ್ಪನ ಕಂಡೆ. ಆ ಎಳೆಯ ಸರ್ಪ ಹೊರಟು, ಬೆಳಗು ಕತ್ತಲೆ ಎರಡ ನುಂಗಿತ್ತು. ಆ ಎಳೆಯ ಸರ್ಪನ ಕಂಡು, ಅಲ್ಲಿರ್ದ ತಳಿರ ಮರನ ನುಂಗಿತ್ತು. ಆ ತಳಿರ ಮರನ ಕಂಡು, ಬೆಳಗು ನುಂಗಿತ್ತು. ಆ ಬೆಳಗ ಕಂಡು ನಾ ಒಳಗೆ ಹೊರಗೆ ಹೊಕ್ಕು ನೋಡಿದಡೆ, ಒಳಹೊರಗೆ ತೊಳತೊಳಗಿ ಬೆಳಗುತಿರ್ದೆನಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

೯೭

ಹುತ್ತದ ಮೇಲೊಂದದು ಕಸ್ತುರಿಯ ಮೃಗವ ಕಂಡೆ. ಅದಕ್ಕೆ ಉದಯ ಅಸ್ತಮಯವಿಲ್ಲ. ಒದವಿದ ಅಮೃತವನುಂಬುದು. ಸದಮಲ ವಾಸನೆಯ ತೀಡುವುದು. ಆ ವಾಸನೆಯ ಬೆಂಬಳಿವಿಡಿದು, ನಾನು ಆ ವಾಸಕ್ಕೆ ಹೋಗಿ, ದೇಶದ ಹಂಗು ಮರೆದು, ಸಾಸಿರ ಮುಖವಾಗಿಪ್ಪ ಈಶನೊಳು ಲೇಸಿಂದ ಬೆರೆದು, ವಿಸಾಸಲಳಿಯದೆ ಐಕ್ಯವಾದೆನಯ್ಯ ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

೯೮

ತನುವೆಂಬ ಹುತ್ತದಲ್ಲಿ, ಮನವೆಂಬ ಸರ್ಪ ಹೆಡೆಯನುಡಿಗಿಕೊಂಡಿರಲು, ಜ್ಞಾನಶಕ್ತಿ ಬಂದು ಎಬ್ಬಿಸಲು, ಉರಿ ಭುಗಿಲೆನುತ್ತ ಹೆಡೆಯನೆತ್ತಿ ಊರ್ಧ್ವಕ್ಕೇರಲು, ಅಷ್ಟಮದವೆಲ್ಲ ಹಿಟ್ಟುಗುಟ್ಟಿದವು. ಕರಣಂಗಳೆಲ್ಲ ಉರಿದು ಹೋದವು. ಇದ್ದ ಶಕ್ತಿಯನೆ ಕಂಡು, ಮನ ನಿಶ್ಚಯವಾದುದನೆ ಕಂಡು, ಪಶ್ಚಿಮದ ಕದವ ತೆಗೆದು ಬಚ್ಚಬರಿಯ ಬೆಳಗಿನೊಳಗೆ ಓಲಾಡಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೯೯

ಸರ್ಪನ ಹೆಡೆಯ ಮೇಲಿಪ್ಪ ಎಪ್ಪತ್ತೇಳು ಲೋಕವ ಕಂಡೆ. ಎಪ್ಪತ್ತೇಳು ಲೋಕದೊಳಗಿಪ್ಪ ಎಪ್ಪತ್ತೇಳು ಕರ್ಪುರದ ಗಿರಿಯ ಕಂಡೆ. ಆ

ಎಪ್ಪತ್ತೇಳು ಕರ್ಪುರದ ಗಿರಿಯ ಮೇಲಿಪ್ಪ ಎಪ್ಪತ್ತೇಳು ಉರಿಯ ಕಂಭವ ಕಂಡೆ. ಎಪ್ಪತ್ತೇಳು ಉರಿಯ ಕಂಭದ ಮೇಲಿಪ್ಪ ಎಪ್ಪತ್ತೇಳು ಅರಗಿನ ಪುತ್ಥಳಿಯ ಕಂಡೆ. ಆ ಎಪ್ಪತ್ತೇಳು ಅರಗಿನ ಪುತ್ಥಳಿ ಕರಗಿ ಹೋದವು. ಎಪ್ಪತ್ತೇಳು ಕರ್ಪುರದ ಗಿರಿ ಉರಿದು ಹೋದವು. ಎಪ್ಪತ್ತೇಳು ಲೋಕ ಹಾಳಾದವು. ಆ ಸರ್ಪ ಬೆಂದು ಸತ್ತುಹೋಯಿತ್ತು. ಇನ್ನು ನಿಷ್ಪತ್ತಿ ನಿರಾಳ ವೆಂಬ ನಿಜವೊಳಕೊಂಡ ಬಳಿಕ, ನಾನೆತ್ತ ಹೋದೆನೆಂದರಿಯೆನಯ್ಯಾ! ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯ, ನಿಮ್ಮ ಸರ್ಪನ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ!

೧೦೦

ಈಡಾ ಪಿಂಗಳ ಸುಷುಮ್ನನಾಳದ ಗಾಥೆ ಅಗಮ್ಯವನರಿದು ನೋಡೆ, ಬ್ರಹ್ಮರಂಧ್ರವ ತಟಿ ಹಾಯ್ದು ಕೂಡಾಡಿ ಪಶ್ಚಿಮದೊಳ್ಬೆರೆದರೆ ಬಸವ ಪ್ರಿಯ ಕೂಡಲಚೆನ್ನಬಸವಣ್ಣ.

೧೦೧

ಪಶ್ಚಿಮದ ಕದವ ತೆಗೆದು ಬಚ್ಚಬರಿಯ ಬೆಳಗ ನೋಡಲೊಲ್ಲದೆ, ಕತ್ತಲೆಯ ಬಾಗಿಲಿಗೆ ಮುಗ್ಗಿ ಕಣ್ಣುಗಾಣದ ಅಂಧಕರಂತೆ ಜಾರಿ ಜಾರಿ ಎಡವಿ ಬಿದ್ದು, ಕರ್ಮಕ್ಕೆ ಗುರಿಯಾಗುವ ಮರ್ತ್ಯದ ಮನುಜರಿರಾ, ನೀವು ಕೇಳಿರೋ ಹೇಳಿಹೆನು. ನಮ್ಮ ಶರಣರ ನಡೆ ಎಂತೆಂದರೆ: ಕತ್ತಲೆಯ ಬಾಗಿಲಿಗೆ ಕದವನಿಕ್ಕಿ, ಪಶ್ಚಿಮದ ಕದವ ತೆಗೆದು, ಬಚ್ಚಬರಿಯ ಬೆಳಗಿ ನೊಳಗೆ ಲೋಲಾಡುವ ಶರಣರ ಪಾದಕ್ಕೆ ಮತ್ತೊಂದು ಬಾರಿ ಎರಗಿ ಸುಖಿ ಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೦೨

ಹಾಲ ಸಾಗರದೊಳು ತೇಲಾಡುತ್ತಿದ್ದು, ಚಿಲುಮೆಯ ನೀರಿಗೆ ಹರಿ ದಾಡಬೇಡ. ಮೇಲುಗಿರಿ ಶಿಖರದ ಪಶ್ಚಿಮದಿ ತೇಲಾಡುತಿರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೦೩

ಆನೆಂಬುದಿದೇನೋ? ಇದಿರಿಟ್ಟು ತೋರುವುದಿದೇನೋ? ಇದೆಲ್ಲಿಂದ ಲೊದಗಿತ್ತು? ಇದರಲ್ಲಿ ಲಯವು ತಾನೇ ಎಂದು ಅನುಮಾನಿಸಿ, ಶ್ರೀಗುರು ಚರಣವ ನಂಬಿ, ಅಂತರ್ಮುಖದಲ್ಲಿ ವಿಚಾರಿಸಿ ನೋಡಿ, ಅಲ್ಲಿ ಒಂದು ಮಾರ್ಗವ ಕಂಡು, ಆ ಮಾರ್ಗದ ಬಳಿವಿಡಿದು, ತಲೆಹೊಲಕ್ಕೆ ಹೋಗಿ, ಹಿಂದುಮುಂದು ಮರೆದು, ಮಹಾಬೆಳಗಿನ ಬೆಳಗಿನೊಳು ನಿಂದು, ಪರಮಾನಂದದ ಸಾಗರದೊಳು ಸಮರಸವಾದವಂಗೆ ಇಹಪರವಿಲ್ಲೆಂದನಂಬಿಗ ಚೌಡಯ್ಯ.

೧೦೪

ಕಂಗಳ ಬೆಳಗ ಕಲ್ಪಿಸಬಾರದು! ಕರ್ಣದ ನಾದವ ವರ್ಣಿಸಬಾರದು! ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂದುದು. ಮತಿಗೆ ಮಹಾಘನವಪ್ಪ ಸುಷುಮ್ನಾನಾಳದ ಸುಯಿಧಾನವ ಪ್ರಮಾಣಿಸಬಾರದು. ಅಣುರೇಣುತೃಣಕಾಷ್ಠದೊಳಗೆ ಭರಿತ ಮನೋಹರ ನಿಂದ ನಿರಾಳ ಗೊಹೇಶ್ವರ!

೧೦೫

ಮಿಂಚಿನ ಪ್ರಭೆಯಲ್ಲಿ ಪಂಚವದನನ ಕಂಡೆನಯ್ಯ. ಸಂಚಲವಿಲ್ಲದೆ ನಿರೀಕ್ಷಿಸಲು, ಪಂಚಪಂಚೀಕೃತಿಯ ಪ್ರಪಂಚ ಪರಿಹರವಾಗಿ, ನಿಷ್ಪ್ರಪಂಚ ನಿರ್ಲೇಪಕನಾದೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೧೦೬

ಚಿನ್ನದಿಂದಲಾದ ಹಲವು ಬಂಗಾರವನಳಿದು ಕರಗಿಸಿದರೆ ಮುನ್ನಿನ ಚಿನ್ನವೇ ಆದಂತೆ, ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೇ ಆದಂತೆ, ಚಿನ್ಮಯವಸ್ತುವಿನಿಂದ ಉದಯವಾದ ಚಿತ್‌ಸ್ವರೂಪನಾದ ಶರಣನು, ಆ ಚಿನ್ಮಯವಸ್ತುವನೆ ಬೆರಸಿ, ಪರಮಶಿವಯೋಗಿಯಾದನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೧೦೭

ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ. ಮೊತ್ತದ ಮಾಮರನುಲಿಯಿತ್ತ ಕಂಡೆ. ಕತ್ತಲೆ ಬೆಳಗಾಯಿತ್ತ ಕಂಡೆ. ಹೊತ್ತಾರೆ ಎದ್ದು ಹೊಲಬುದಪ್ಪಿತ್ತ ಕಂಡೆ. ಇದೇನು ಹತ್ತಿತ್ತೆಂದರಿಯೆ ಗೊಹೇಶ್ವರಾ !

೧೦೮

ಮುಚ್ಚಿದ ಕಣ್ಣು ತೆರೆದುದ ಕಂಡೆ. ಕಿಚ್ಚಿನ ಜ್ವಾಲೆ ಕರೆವುದ ಕಂಡೆ. ಮೃತ್ಯುಗಳ ಮೊತ್ತ ಕಿತ್ತೋಡುವುದ ಕಂಡೆ. ಕತ್ತಲೆ ಬೆಳಗಾದುದ ಕಂಡೆ. ಬೆಚ್ಚಿ ಬೇರೆ ಇಲ್ಲದ ಬೆಳಗೆನ್ನನೊಳಕೊಂಡು, ನಿತ್ಯಪ್ರಸನ್ನನಾದೆ ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೧೦೯

ಕನಿಷ್ಠದಲ್ಲಿ ಹುಟ್ಟಿದೆ. ಉತ್ತಮದಲ್ಲಿ ಬೆಳೆದೆ. ಸತ್ಯಶರಣರ ಪಾದ ವಿಡಿದೆ. ಆ ಶರಣರ ಪಾದವಿಡಿದು ಗುರುವ ಕಂಡೆ; ಲಿಂಗವ ಕಂಡೆ; ಜಂಗಮವ ಕಂಡೆ; ಪ್ರಸಾದವ ಕಂಡೆ; ಪಾದೋದಕವ ಕಂಡೆ. ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು. ಕಂಗಳ ಮುಂದಣ ಕತ್ತಲೆ ಹರಿಯಲೊಡನೆ, ಮಂಗಳ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೧೦

ತುಂಬಿದ ಮನೆಯ ಹೊಕ್ಕರೆ ದಂದಳವಾಯಿತ್ತು. ಈ ಸಂದಳಿಗಾರದೆ, ತುಂಬಿದ ಮನೆಯ ಕಿಚ್ಚನಿಕ್ಕಿದರೆ ನಿಶ್ಚಿಂತವಾಯಿತ್ತು. ಬಟ್ಟಬರಿಯ ಮನೆಯೊಳಗೆ ನಿಮ್ಮ ಬೆಳಗನೆ ನೋಡಿ ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೧೧

ಗಿಡುವಿನ ಮೇಲಣ ತುಂಬಿ ಕೂಡೆ ವಿಕಸಿತವಾಯಿತ್ತು, ತುಂಬಿ ನೋಡಾ! ಆತುಮ ತುಂಬಿ ತುಂಬಿ ನೋಡಾ! ಪರಮಾತುಮ ತುಂಬಿ ತುಂಬಿ ನೋಡಾ! ಗೊಹೇಶ್ವರನೆಂಬ ಲಿಂಗಕ್ಕೆರಗಿ ನಿಬ್ಬೆರಗಾಯಿತ್ತು ತುಂಬಿ ನೋಡಾ!!

೧೧೨

ಬೆಟ್ಟ ಬೆಂದಿತ್ತು. ಬಿದಿರುಗಣ್ಣು ಒಡೆಯಿತ್ತು. ಸುತ್ತ ನೋಡಿದರೆ ನಿರಾಳವಾಯಿತ್ತು! ಕತ್ತಲೆ ಹರಿಯಿತ್ತು. ಮನ ಬತ್ತಲೆಯಾಯಿತ್ತು. ಚಿತ್ತ ಮನ ಬುದ್ಧಿ ಏಕವಾದವು. ಎಚ್ಚತ್ತು ನೋಡಿದರೆ, ಬಚ್ಚಬರಿಯ ಬೆಳಗಲ್ಲದೆ ಕತ್ತಲೆಯ ಕಾಣಬಾರದು ಕಾಣಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೧೩

ಮರದೊಳಗಣ ಕಿಚ್ಚು ಮರನ ಸುಡುತ್ತಿದ್ದಿತ್ತಯ್ಯಾ! ಮನೆ ಬೆಂದು ನಿಂದುರಿಯಿತ್ತು. ಮಣ್ಣು ಜರಿದು ಬಿದ್ದಿತ್ತು. ಉರಿ ಹೋಗಿ ನಂದಿತ್ತು. ಸ್ವಯಂ ಪ್ರಕಾಶವಾಗಿಪ್ಪ ಎಲೆ ಉಳಿಯಿತ್ತು. ಉರಿ ಬಂದು ಎನ್ನ ಕರಸ್ಥಲದಲ್ಲಿ ಅಡಗಿತ್ತು. ಇದ ಕಂಡು ನಾ ಬೆರಗಾಗಿ ನೋಡುತಿರ್ದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ!

೧೧೪

ಅಯ್ಯ, ಎನ್ನಂಗದ ಮೇಲಿಪ್ಪ ಲಿಂಗವು ಕರ್ಪುರದಂತಾಯಿತ್ತು. ಎನ್ನ ಪ್ರಾಣದ ಮೇಲಿಪ್ಪ ಲಿಂಗವು ಪರಂಜ್ಯೋತಿಯಂತಾಯಿತ್ತು. ಎನ್ನ ನಿಃಪ್ರಾಣದ ಮೇಲಿಪ್ಪ ಲಿಂಗವು ನಿರಂಜನದಂತಾಯಿತ್ತು. ಈ ತ್ರಿವಿಧವು ಏಕವಾದ ಭೇದವ ಹೇಳಿಹೆನು ಕೇಳಿರಣ್ಣಾ. ಎನ್ನ ಅಂಗದ ಮೇಲಿದ್ದ ಕರ್ಪುರದಂತಿರ್ದ ಲಿಂಗ ಪ್ರಾಣದ ಮೇಲಿಪ್ಪ ಪರಂಜ್ಯೋತಿಲಿಂಗವ ಬೆರೆಯಿತ್ತು. ಎನ್ನ ಪ್ರಾಣದ ಮೇಲಿಪ್ಪ ಪರಂಜ್ಯೋತಿಲಿಂಗ ನಿಃಪ್ರಾಣದ ಮೇಲಿಪ್ಪ ನಿರಂಜನಲಿಂಗವ ಬೆರೆಯಿತ್ತು. ಈ ತ್ರಿವಿಧವು ಏಕವಾದ ಮೇಲೆ, ಒಂದಲ್ಲದೆ ಎರಡುಂಟೆ? ಇದಕ್ಕೆ ಸಂದೇಹ ಬೇರಿಲ್ಲವಯ್ಯ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೧೧೫

ನಾರುಬೇರಿನ ಕುಟಿಲ ಕಪಟದ ಯೋಗವಲ್ಲದು ನಿಲ್ಲಿ ಭೋ! ಕಾಯಸಮಾಧಿ, ಕರಣಸಮಾಧಿ ಯೋಗವಲ್ಲದು ನಿಲ್ಲಿ ಭೋ! ಜೀವಸಮಾಧಿಯೆಂಬುದಲ್ಲ ನಿಜಸಹಜ ಸಮಾಧಿ ಗೊಹೇಶ್ವರ.

೧೧೬

ಗುರುತತ್ವದಲ್ಲಿ ಹುಟ್ಟಿ, ಶಿವತತ್ವದಲ್ಲಿ ಬೆಳೆದು, ಪರತತ್ವದಲ್ಲಿ ಮಗ್ನನಾಗಿ, ಶರಣಂಗೆ ಕಾಯವಿಡಿದಡೇನು, ಕಾಯವಳಿದು ನಿರ್ವಯಲಾದಡೇನು? ಕಾಯಸಮಾಧಿ, ಕರಣಸಮಾಧಿ, ಭಾವಸಮಾಧಿಯಾದ ಬಳಿಕ, ಗೊಹೇಶ್ವರಲಿಂಗದಲ್ಲಿ ಬಯಲಭ್ರಮೆಯಳಿದು ಜ್ಞಾನಸಮಾಧಿಯನೆಯ್ದಬಲ್ಲಡೆ ಅದೇ ನಿಜಸಮಾಧಿ ಕೇಳಾ ಸಿದ್ಧರಾಮಯ್ಯಾ.

೧೧೭

ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ, ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ. ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ, ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದೆನಯ್ಯಾ,—ಎನ್ನ ಅಜಗಣ್ಣನ ಯೋಗಕ್ಕೆ!

೧೧೮

ಕಯ್ಯದು ಕುರುಹು, ಬಾಯದು ಬೊಬ್ಬೆ, ಉಲಿಯದಿರೊ ಭಾವಾ, ಉಲಿಯದಿರೊ ಭಾವಾ! ವಾರಿಕಲ್ಲ ಕೊಡನಲ್ಲಿ ಮುತ್ತುಮಾಣಿಕ್ಯವ ತುಂಬಿ, ಎತ್ತುವರಿಲ್ಲದೆ ಸಖಿಯನರಸುತ್ತಿರ್ಪೆ. ಮನದ ತನುವಿನಲ್ಲಿ, ಆ ತನುವಿನ ಮನದಲ್ಲಿ ತನಗೆ ತಾನೆತ್ತಿಕೊಂಡರೆ, ಮನ ಮೀರೆದಪ್ಪಿ ಕರಗಿ ಉಕ್ಕಿತ್ತು ನಮ್ಮ ಅಜಗಣ್ಣನ ಯೋಗಾ!

೧೧೯

ಸ್ಫಟಿಕಘಟದೀಪದಂತೆ ಒಳಹೊರಗು ಇಲ್ಲ ನೋಡಾ. ವಿಗಡ ಚರಿತ್ರಕ್ಕೆ ನಾ ಬೆರಗಾದೆನು. ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು. ಹೊದ್ದಿದರೆ ಸಮೀಪ, ಹತ್ತೆಸಾರಿದಡತ್ತತ್ತ ತೋರುತ್ತಿದೆ. ಆಕಾರನಿರಾಕಾರವ ನುಂಗಿ, ಬಯಲು ಸಮಾಧಿಯಲ್ಲಿ ಸಿಲುಕಿತ್ತು ನೋಡಾ! ದರುಶನದಿಂದ ಅಮೃತಾಹಾರವಾಯಿತ್ತು, ಬೆರಸಿದಡಿನ್ನೆಂತೊ ಗೊಹೇಶ್ವರಾ!

೬. ಹಿರಿಯರು ಅನುಭಾವಿಗಳು—ವಿವೇಚನೆ

೧೨೦

ಆದ್ಯರಲ್ಲ, ವೇದ್ಯರಲ್ಲ, ಸಾಧ್ಯರಲ್ಲದ ಹಿರಿಯರ ನೋಡಾ! ತನು ವಿಕಾರ, ಮನವಿಕಾರ, ಇಂದ್ರಿಯ ವಿಕಾರದ ಹಿರಿಯರ ನೋಡಾ! ಶಿವಚಿಂತೆ ಶಿವಜ್ಞಾನಿಗಳ ಕಂಡರೆ ಆಳವಾಡಿ ನುಡಿವರು ಗೊಹೇಶ್ವರನನರಿಯದ ಕರ್ಮಿಗಳಯ್ಯ.

೧೨೧

ಕಾಯವೆ ಸತ್ತು, ಮಾಯವೆ ಉಳಿಯಿತ್ತು; ಎರಡರ ಸುಖದುಃಖವನರಿಯರು ನೋಡಾ! ಅದೇನೆಂದರಿಯರು, ಅದೆಂತೆಂದರಿಯರು ನೋಡಾ. ಹಿರಿಯರೆಲ್ಲರು ವೃಥಾ ಹೋದರು ನೋಡಾ! ಕಣ್ಣ ಮುಂದಣ ಕಪ್ಪ ಕಳೆಯಲರಿಯರು ನೋಡಾ! ಗೊಹೇಶ್ವರನೆಂಬ ಶಬ್ದಕ್ಕೆ ನಾಚರು ನೋಡಾ!

೧೨೨

ವೇಷವ ಹೊತ್ತ ಹಿರಿಯರು ಈಶ್ವರಧ್ಯಾನದಲ್ಲಿರಬೇಕು. ವೇಷವ ತೋರಿ ಗ್ರಾಸಕ್ಕಾಗಿ ಆಶೆಮಾಡಿ, ಲೋಗರ ಮನೆಯ ಕಾಯ್ದು, ಗ್ರಾಸವ ಪಡೆದು ಉದರವ ಹೊರೆವ ವೇಷವು ವೇಶಿಯಿಂದಲೂ ಕರಕಷ್ಟ, ಕಾಣಾ ರಾಮನಾಥಾ.

೧೨೩

ಆಶೆಯೆಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಳ್ಳಿರಿಸಿ, ಧರೆಯ ಮೇಲುಳ್ಳ ಹಿರಿಯರು ಹೇಂಗೆ ಸವೆದರು ನೋಡಾ! ಆಶೆಯ ಮುಂದಿಟ್ಟು ಕೊಂಡು ಸುಳಿವ ಹಿರಿಯರ ಕಂಡು ಹೇಸಿಕೆಯಾಯಿತ್ತು ಗೊಹೇಶ್ವರಾ!

೧೨೪

ಆದಿತ್ರೈಯುಗದಲ್ಲಿ ದೇವದಾನವ ಮಾನವರು ಮಾಯಾಮೋಹದಲ್ಲಿ ಹುಟ್ಟಿ, ತೊಳಲಿ ಬಳಲುತ್ತೈದಾರೆ. ಆವ ವೇಷವಾದರೇನು ತಾಮಸ ಧಾರಿಗಳು? ಕಾಮ ಕ್ರೋಧ ಲೋಭ ಮೋಹ ಬಿಡದ ನಾನಾವಿಧದ

ಡಂಭಕರು, ಹೊಳದ ಹುಣ್ಣಿಂಗೆ ಆರಯ್ಯಾ ಮದ್ದನಿಕ್ಕುವರು? ಏನು ಕಾರಣ—ಗೊಹೇಶ್ವರ, ಸೋಗೆಯ ಬಣ್ಣದ ಹಿರಿಯರು?

೧೨೫

ತನ್ನನಿಕ್ಕಿ ನಿಧಾನವ ಸಾಧಿಸಲರಿಯದ ಹಂದೆಗಳಿರ್ದು ಫಲವೇನು? ಹಂದಿ ನಾಯಿ ಮಾರ್ಜಾಲ ಕುಕ್ಕುಟ ಮೊದಲಾಗಿ ಹತ್ತೆಂಟು ಹಡೆದು ಫಲವೇನು? ಸಾವನ್ನು ಸತ್ತು ಇರುವನ್ನು ಇರ್ದು ಫಲವೇನು? ಆ ಪರಿಯಿಂದ ಕೂಡಿದ ಇಂದ್ರಿಯವಿಕಾರದ ನರವಿಂಡುಗಳು ಕೂಡಿರ್ದು ಫಲವೇನು? ತಮ್ಮ ತಮ್ಮ ಕತ್ತಲೆಯ ಕಳೆಯಲರಿಯದೆ, ಇದಿರಿಗೆ ಬುದ್ಧಿಯ ಹೇಳುವ ಉದರಪೋಷಕರೆಲ್ಲರು ಹಿರಿಯರಪ್ಪರೆ? ತನ್ನ ತಪ್ಪಿಸಿ ನಿಧಾನವ ಪಡೆದೆವೆಂಬುವರು, ಲೋಗರ ಮಕ್ಕಳನಿಕ್ಕಿ ನೆಲೆಯ ನೋಡಿಹೆನೆಂಬವರಿಗೆ ಮಹಾಘನವದೆಂತು ಸಾಧ್ಯವಪ್ಪುದೊ ಕೂಡಲಚೆನ್ನಸಂಗಮದೇವಾ?

೧೨೬

ಹೊನ್ನು ಹೆಣ್ಣು ಮಣ್ಣಿಂಗೆ ಹೊಡೆದಾಡುವನ್ನಬರ, ಅವರು ಹಿರಿಯರೆಂತಪ್ಪರೋ? ತ್ರಿವಿಧಮಲಕ್ಕೆ ತ್ರಿವಿಧ ಅಮಲದಿಂದ ಮಲ ಹರಿದಲ್ಲದೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.

೧೨೭

ಇರಿವ ಕೈದಿಂಗೆ ದಯ ಧರ್ಮದ ಮೊನೆಯುಂಟೆ? ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ? ಕೂಟವ ಕೂಡಿ ಸಮಯ ಸೊಂದಲ್ಲಿ ಅಜಾತನ ಬಲ್ಲರೆ? ಎನಗೆ ನಿಮ್ಮೊಳಗಿನ್ನೇತರ ಮಾತು, ವೇಷಧಾರಿಗಳಲ್ಲಿ? ನಿಮ್ಮ ಕೂಟಕ್ಕೆ ಹೊರಗು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೧೨೮

ಆದಿಯನು ಅರಿಯದೆ, ಅನಾದಿಯಿಂದತ್ತತ್ತ ತಾನಾರೆಂಬುದ ತಿಳಿದು ವಿಚಾರಿಸದೆ ಮಾಡಿದ ಫಲವೇನಯ್ಯ? ಸಾವನ್ನಕ್ಕರ ಸಾಧನೆಯಂ ಮಾಡಿದಡೆ, ಕಾದುವ ದಿನವಾವುದಯ್ಯ ಬಸವಣ್ಣಾ? ಬಾಳುವನ್ನಕ್ಕರ ಭಜನೆಯಂ ಮಾಡಿದಡೆ, ತಾನಹ ದಿನವಾವುದಯ್ಯ ಬಸವಣ್ಣಾ? ಇದು ಕಾರಣ, ಮಿಥ್ಯ

ವನೇ ಹಿಡಿದು, ಮಿಥ್ಯವನೇ ಪೂಜಿಸಿ, ಮರ್ತ್ಯಲೋಕದ ಭಕ್ತರೆಲ್ಲ ವ್ಯರ್ಥವಾದರಲ್ಲ! ತಮ್ಮ ತಾವು ಕೆಟ್ಟ ಕೇಡಿಂಗೆ ಬೆರಗಾದೆ! ಕಣ್ಣ ಕಳೆದುಕೊಂಡು, ಹೊಟ್ಟೆ ಸೀಳಿ, ಮಗನ ಬಾಣಸವ ಮಾಡಿ, ಕೈಲಾಸಪುರಕ್ಕೆ ಹೋದವರೆಲ್ಲರು ಭಕ್ತರೇ? ಅವರಿಗೆ ಶಿವಪಥ ಸಾಧ್ಯವಾಯಿತ್ತೆ? ಭವ ಹಿಂಗಿತ್ತೆ? ಅಸುರ ಕರ್ಮಿಗಳ ಮಾತಂತಿರಲಿ. ನರಲೋಕದ ನರಗುರಿಗಳೆಲ್ಲ ನರಸಂಸಾರಕ್ಕೊಳಗಾದರು. ಸುರಲೋಕದ ಸುರರುಗಳೆಲ್ಲ ಸುರಸಂಸಾರಕ್ಕೊಳಗಾದರು. ರುದ್ರಲೋಕದ ರುದ್ರರುಗಳೆಲ್ಲ ರುದ್ರಸಂಸಾರಕ್ಕೊಳಗಾದರು. ಮುನಿಜನಂಗಳೆಲ್ಲ ತಪೋಸಂಸಾರಕ್ಕೊಳಗಾದರು. ಜಂಗಮವ ಅರ್ಚಿಸಿದವರೆಲ್ಲ ಸಾಯುಜ್ಯವೆಂಬ ಸಂಸಾರಕ್ಕೊಳಗಾದರು. ಇಂತೀ ಸಂಸಾರಕ್ಕೊಳಗಾದವರೆಲ್ಲ ಮಾಯೆಯ ಹೊಡೆಗಿಚ್ಚ ಗೆಲಬಲ್ಲರೇ? ಅದೆಂತೆಂದಡೆ: ನಿತ್ಯನಿಜಾತ್ಮ ತಾನೆಂದರಿಯದೆ, ತತ್ವಮಸಿಯೆಂಬ ವಾಕ್ಯ ತಾನೆಂದರಿಯದೆ, ಹೊರಹೊರಗೆ ಬಳಸಿ ಕೆಟ್ಟರೆಲ್ಲ ಹಿರಿಯರು! ಸತ್ತರಲ್ಲ ನಾಯಿ ಸಾವ! ಸತ್ತವರ ಹೆಸರ ಹತ್ರವ ನೋದೆ, ಎತ್ತಳ ಮುಕ್ತಿ ಕಾಣಾ ಗೊಹೇಶ್ವರಾ?

೧೨೯

ಹಿರಿಯರನೆಲ್ಲರ ಹುಟ್ಟಿಸಿದಾತನನರಿಯಿರೋ ಹಿರಿಯರ ಮಕ್ಕಳಿರಾ! ಇಂದೆಂದೇನೋ? ನಾಳೆಂದೇನೋ? ಎಂದೂ ಒಂದೇ ಮಕ್ಕಳಿರಾ, ಗೊಹೇಶ್ವರನೆಂಬ ಲಿಂಗದ ಯೋಗ. ಇದ ಬೆರಸಲರಿಯಿರೋ ಹಿರಿಯರ ಮಕ್ಕಳಿರಾ!

೧೩೦

ಶಿವಲಿಂಗಾರ್ಚನ ಕ್ರಿಯಾಶಕ್ತಿಗೆ ಅಭ್ಯಾಸದ ಯೋಗದವರೆಲ್ಲ ಸರಿಯಲ್ಲ ನೋಡಾ. ಯೋಗಬಲದಿಂದ ಸೇವಿಸುವ ಕ್ಷೀರಾಮೃತವು ಶಿವಪ್ರಸಾದಾಮೃತಕ್ಕೆ ಸರಿಯಲ್ಲ ನೋಡಾ. ಪ್ರಾಣನ ಬ್ರಹ್ಮರಂಧ್ರದಲ್ಲಿ ಬಿಡುವ ಯೋಗವು ಪ್ರಾಣಲಿಂಗೈಕ್ಯ ಸಂಬಂಧ ಸಂಯೋಗಕ್ಕೆ ಸರಿಯಲ್ಲ ನೋಡಾ. ಶಿವಾನುಭವಕ್ಕೆ ಭೋಗಕ್ಕೆ ಎಷ್ಟು ಅಂತರವು ನೋಡಯ್ಯಾ ಸೌರಾಷ್ಟ್ರ ಸೋಮೇಶ್ವರಾ.

೧೩೧

ತನುವಿನ ಮಧ್ಯದಲ್ಲಿ ಹೊಳೆರ್ದ ಇಷ್ಟಲಿಂಗದಲ್ಲಿ ತನುವ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು. ಮನದ ಮಧ್ಯದಲ್ಲಿ ಹೊಳೆರ್ದ ಪ್ರಾಣ ಲಿಂಗದಲ್ಲಿ ಮನವ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು. ಜೀವನ ಮಧ್ಯದಲ್ಲಿ ಹೊಳೆರ್ದ ಭಾವಲಿಂಗದಲ್ಲಿ ಜೀವನ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು. ಇಂತೀ ಅನುಭಾವದ ಅನುವನರಿಯದೆ, ತನುವಿನ ಕೈಯಲ್ಲಿ ಘನಲಿಂಗವ ಹಿಡಿದಿರ್ದಡೇನು? ಅದು ಹುಟ್ಟುಗುರುಡನ ಕೈಯ ಕನ್ನಡಿಯಂತೆ ಕಾಣಾ ಅಖಂಡೇಶ್ವರಾ!

೧೩೨

ಖಂಡಾಖಂಡ ಸಂಯೋಗವಿಲ್ಲದ ಅಖಂಡಿತನ ನಿಲವು ತನ್ನಲ್ಲಿ ಅಲ್ಲದೆ ಮತ್ತೆಲ್ಲಿಯೂ ಇಲ್ಲ. ಬಯಲ ಹಿರಿಯರು ಬಯಲನೆ ಅರಸುವರು; ಅಲ್ಲಿ ಉಂಟೆ ಹೇಳಾ ಗೊಹೇಶ್ವರಾ?

೧೩೩

ಅರಿದೆನರಿದೆನೆಂದರೆ ಅದೇಕೋ ಮುಂದೆ ಮರವೆ? ಅರಿದೆ ನೆಂಬುದು ನಿನ್ನಲ್ಲಿ ಲೇಸಾಗಿ ಉಳ್ಳಡೆ, ನಿನ್ನರಿವೆಲ್ಲವ ಹರಿಹಂಚ ಮಾಡಿ ಹೋದಡರಿ ಮರುಳೆ! ಸ್ವತಂತ್ರಘನದೊಳಗಿದ್ದು ನಿಜವನರಿದೆನೆಂದಡೆ, ಮೂರ್ತಿ ಕಿರಿದಲ್ಲ ನಿಲ್ಲು ಮಾಣು. ಗೊಹೇಶ್ವರನೆಂಬ ಲಿಂಗದ ಘನಘಟ್ಟಿಯ ನರಿವಡೆ, ನಿನ್ನರಿವೆಲ್ಲವ ಹರಿಹಂಚ ಮಾಡಿ ನೀನರಿ ಮರುಳೇ ಅನುಭಾವಿ ಯಾದಡೆ.

೧೩೪

ಕೆಟ್ಟುದನರಸ ಹೋಗಿ ತಾನೆ ಕೆಟ್ಟಿತ್ತು. ಹೇಳಲೆಂತೂ ಬಾರದು, ಕೇಳಲೆಂತೂ ಬಾರದು. ಎಂತಿದ್ದುದಂತೆ ಸಹಜ. ಸ್ವಾನುಭಾವ ಸಮ್ಯಗ್ ಜ್ಞಾನವ ಅಜ್ಞಾನಿ ಬಲ್ಲನೆ ಗೊಹೇಶ್ವರಾ?

೧೩೫

ಜಗದ್ವಂದ್ಯರೆಂದು ನುಡಿದು ನಡೆವರು ನೋಡಾ! ಭವಬಂಧನದ ಕುಣಿಕೆಯ ಕಳೆಯಲರಿಯರು ನೋಡಾ! ಭವ ತಮ್ಮ ತುಳಿತುಳಿದು

ಕೊಂಡಿತ್ತು ನೋಡಾ! ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ! ನಿಶ್ಶಬ್ದ ವೇಧಿಸದಿದ್ದರೆ, ಗೊಹೇಶ್ವರ ನೋಡಿ ನೋಡಿ ನಗುತಿಪ್ಪ ನೋಡಾ!

೧೩೬

ನಾನು ಘನ ತಾನು ಘನವೆಂಬ ಹಿರಿಯರುಂಟೆ? ಜಗದೊಳಗೆ ಹಿರಿಯರ ಹಿರಿಯತನದಿಂದೇನಾಯಿತ್ತು? ಹಿರಿಕಿರಿದೆಂಬ ಶಬ್ದವಡಗಿದಡೆ ಆತನೆ ಶರಣ ಗೊಹೇಶ್ವರ.

೧೩೭

ಬರಿಯ ನಚ್ಚುಮಚ್ಚಿನ ಭಕ್ತಿಯ ಭಕ್ತರು, ಲಿಂಗವ ಮುಟ್ಟಿಯೂ ಮುಟ್ಟದ ಒಳಲೊಟ್ಟೆಗಳು ನೆರೆದು ಗಳಹುತ್ತಿಪ್ಪರು. ತಮತಮಗೆ ಅನುಭಾವವ ನುಡಿವರು. ಅನುಭಾವದ ಆಯತವನರಿಯದಿದ್ದರೆ ಹಿಂದಣ ಅನುಭಾವಿಗಳು? ಗೊಹೇಶ್ವರಲಿಂಗದ ಸುಖವ ಮುಟ್ಟದರೆ, ಮರಳಿ ಭವಕಲ್ಪಿತವೆಲ್ಲಿಯದೋ?

೧೩೮

ಅರಿಯದಂತಿರಲೊಲ್ಲದೆ, ಅರಿದು ಕುರುಹಾದೆಯಲ್ಲಾ! ಹಿರಿಯರೆಲ್ಲರು ನೆರೆದು, ನಿನ್ನ ಕಟ್ಟಿದರೆ ಅಯ್ಯಾ ಉಪಚಾರಕ್ಕೋಸ್ಕರ? ಸಾವಿಂಗೆ ಸಂಗಡವಾದೆಯಲ್ಲಾ ಗೊಹೇಶ್ವರಾ!

೧೩೯

ಇಂದ್ರಿಯಂಗಳಿಗೊಂದು ಮಾತ ಕಲಿತು, ಬಹಳ ಬಲ್ಲೆವು, ಬ್ರಹ್ಮಜ್ಞಾನಿಗಳು ಎಂದು ನುಡಿದುಕೊಂಡು ನಡೆಯುಬಲ್ಲರಲ್ಲದೆ, ಸಾವನರಿದೇನಂದರೆ ದೇವತಾದಿಗಳಿಗಳವಲ್ಲ ಕಾಣಿರಣ್ಣ! ದೇವರ ಮೂರ್ತಿಯ ಭಾವದಲ್ಲಿ ಕಂಡಲ್ಲದೆ ಭವದುಃಖ ಹಿಂಗದು ನೋಡಾ. ಭವದುಃಖವ ಹಿಂಗಿಸದೆ ಶಿವಾನುಭವವೇಕೆ ಹೇಳಿರೋ? ಹುಸಿಯನೆ ಹೊಸೆದು, ಪಸೆಯನೆ ಕೊಚ್ಚಿ, ಪಶುಪತಿಯ ಅನುಭಾವಿಗಳೆಂದು ಪ್ರಳಯಕ್ಕೊಳಗಾಗಿ ಹೋದರು ನೋಡಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೧೪೦

ಇದಿರ ಹಳಿದು ತನ್ನ ಬಣ್ಣಿಸುವನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ? ಹಮ್ಮುಬಿಮ್ಮು ಹೆಮ್ಮೆಹಿರಿತನವುಳ್ಳನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ? ಉದಮದ ಗರ್ವ ಅಹಂಕಾರ ಮಮಕಾರವುಳ್ಳನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ? ಆಸೆ ಆಮಿಷ ಕ್ಲೇಶ ತಾಮಸವುಳ್ಳನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ? ಇಂತೀ ಗುಣಂಗಳುಳ್ಳನ್ನಕ್ಕರ ಶಿವಾನುಭಾವಿಯೆಂತಪ್ಪನಯ್ಯಾ ಅಖಂಡೇಶ್ವರಾ?

೧೪೧

ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹೇಗೆ ಹಡೆವಳಯ್ಯ? ಲಿಂಗಕ್ಕೆ ನಾಚಿದಾತ ಶರಣನೆಂತಪ್ಪನಯ್ಯ? ಈ ಲಜ್ಜೆ ಎಂಬ ಪಾಶವಿದೇನಯ್ಯ? ಸಂಕಲ್ಪವಿಕಲ್ಪದಿಂದ ಸಂದೇಹಿಸುವ ಭ್ರಾಂತಿಯೇ ಲಜ್ಜೆಯಯ್ಯ. ಅಹುದೋ ಅಲ್ಲವೋ, ಏನೋ ಎಂತೋ ಎಂದು ಹಿಡಿವುತ್ತ ಬಿಡುತ್ತಿಪ್ಪ ಲಜ್ಜಾಭ್ರಾಂತಿ ಉಡುಗಿರಬೇಕಯ್ಯ. ಗಂಡನ ಕುರುಹನು ಅರಿಯದಾಕೆಗೆ ಲಜ್ಜೆ ಉಂಟಾದುದಯ್ಯ. ಲಿಂಗವನರಿಯದಾತಂಗೆ ಸಂಕಲ್ಪ ವಿಕಲ್ಪ ಎಂಬ ಸಂದೇಹಭ್ರಾಂತಿ ಉಂಟಾದುದಯ್ಯ. ಈ ಅರುಹು ಕುರುಹು ಎಂಬ ಉಭಯದ ಮುಸುಕ ತೆಗೆದು, ನೆರೆಯರುಹಿನಲ್ಲಿ ಸದಾ ಸನ್ನಿಹಿತವಿಲ್ಲದ ಜಡರುಗಳ ಕೈಯಲಿ ಶಿವಲಿಂಗಾನುಭಾವವ ಬೆಸಗೊಳಲುಂಟೇ ಅಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ?

೧೪೨

ಭಕ್ತಿ ಆಚಾರಪಥವಿಡಿದು ನಲಿನಲಿದುಲಿದರೂ ಲಿಂಗಸಾಹಿತ್ಯವಿಲ್ಲ. ಮನವ ಲಿಂಗದಲ್ಲಿ ನೆಲೆಗೊಳಿಸುವೆನೆಂದು ಧ್ಯಾನ ಮೌನದಲ್ಲಿ ನಿಂತರೂ ಲಿಂಗಸಾಹಿತ್ಯವಿಲ್ಲ. ಸರ್ವಪ್ರಪಂಚವು ವಾಯುವಿಂದ ತೋರುತಿರಲು, ಆ ಪ್ರಪಂಚವನಳಿದು ಲಿಂಗವನೊಡವೆರಸುವೆನೆಂದು ಉಚ್ಛ್ವಾಸ ನಿಶ್ವಾಸಂಗಳಂ ಪಿಡಿದು ನಿಲಿಸಿದರೂ ಲಿಂಗಸಾಹಿತ್ಯವಿಲ್ಲ. ಸದ್ಭಕ್ತಿವೆತ್ತು ಭಾವಪ್ರಸನ್ನತೆಯಿಂ ಕಂಗಳ ಕಳೆದು, ಜಿಹ್ವೆಯ ಕೊಯ್ದು, ಶಿರವನರಿದು, ಹಸ್ತವನುತ್ತರಿಸಿತ್ತರೂ ಲಿಂಗಸಾಹಿತ್ಯವಿಲ್ಲ. ಯಮ ನಿಯಮ ಆಸನ ಪ್ರಾಣಾಯಾಮ

ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ ಎಂಬ ಅಷ್ಟಾಂಗಯೋಗ ಗಟ್ಟಿಗೊಂಡು, ಪ್ರಾಣ ಮನ ಪವನ ಹುರಿಗೂಡಿ, ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂಬ ಷಡಾಧಾರ ಬಳಿವಿಡಿದು, ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು, ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ. ಸತ್ಯ ಸಮತೆ ಸಮಾಧಾನ ಸದ್ಭಾವ ವಿರಕ್ತಿಯಿಂದತ್ಯಾನಂದ ತೋರುತಿರಲು, ಅದು ನೆಲೆಗೊಂಡು ನಿಲ್ಲದಾಗಿ ಹೇಳದೆ ಬಂದಿತ್ತು, ಕೇಳದೆ ಹೋಯಿತ್ತು. ಸೌರಾಷ್ಟ್ರಸೋಮೇಶ್ವರನ ನಿಜವನರಿಯದೆ ಅನುಭಾವವ ಮಾಡಿ ಫಲವೇನಯ್ಯ?

೧೪೩

ಅಭ್ಯಾಸದ ಮಾತಲ್ಲ. ಶ್ರೋತ್ರದ ಸುಖವಲ್ಲ. ಶಾಸ್ತ್ರದನುಭಾವದ ಮಾತು ಮುನ್ನಲ್ಲ. ಒಳಗಣ ಮಾತಲ್ಲ, ಹೊರಗಣ ಮಾತಲ್ಲ. ಇದರಂತರವನರಿಯದೆ ಅನುಭಾವವ ಮಾಡಿ ಫಲವೇನು? ಗೊಹೇಶ್ವರನೆಂಬ ಲಿಂಗ ಉಪಮಾತೀತ ನೋಡಾ!

೧೪೪

ಅಮೃತದೊಳಗೆ ಜನಿಸಿ, ಅಮೃತದೊಳಗೆ ವರ್ತಿಸುವ ಅಮೃತದೇಹಿಗೆ ಹಸಿವು ತೃಷೆಯೇ? ಆ ಅಮೃತವೇ ಆಧಾರ, ಆ ಅಮೃತವೇ ಸೇವನೆ. ಬೇರೊಂದು ವಸ್ತು ಉಂಟೆ? ಇಲ್ಲ. ಆ ಅಮೃತವೇ ಸರ್ವ ಪ್ರಯೋಗಕ್ಕೆ. ಇದಕ್ಕೆ ಕಟ್ಟಳೆಯುಂಟೆ? ಕಾಲವುಂಟೇ? ಆಜ್ಞೆಯುಂಟೆ? ಬೇರೆ ಕರ್ಮ ಉಂಟೆ? ಇಲ್ಲ. ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ. ಶ್ರೀಗುರುಲಿಂಗದಲ್ಲಿ ಜನಿಸಿ, ಶಿವಲಿಂಗದಲ್ಲಿ ಬೆಳೆದು, ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ, ಆ ಚತುರ್ವಿಧವೇಕವಾಗಿ, ಲಿಂಗವೇ ಪ್ರಾಣ, ಪ್ರಾಣವೇ ಲಿಂಗ, ಆ ಲಿಂಗವೇ ಅಂಗ, ಅಂಗವೇ ಲಿಂಗವಾಗಿ ಲಿಂಗ ಸ್ವಾಯತವಾದ ಲಿಂಗೈಕ್ಯಂಗೆ ಜಪ ತಪ ಅರ್ಚನೆ ಪೂಜೆಗೆ ಆಗಮ ಉಂಟೆ? ಕಾಲ ಉಂಟೆ? ಕರ್ಮ ಉಂಟೆ? ಕಲ್ಪಿತ ಉಂಟೆ? ಇಲ್ಲ. ಸರ್ವವು ಲಿಂಗಮಯವಾದ ಆ ಲಿಂಗವಂತಂಗೆ ನಡೆವುದೆ ಆಗಮ, ಪೂಜಿಸುವುದೆ ಕಾಲ, ಮಾಡಿದುದೆ ಕ್ರಿಯೆ, ನುಡಿದುದೆ ಜಪ, ನೆನದುದೆ ಧ್ಯಾನ, ವರ್ತಿ

ಸಿದುದೆ ತಪಸ್ಸು. ಇದಕ್ಕೆ ಅವಧಿಯುಂಟೆ? ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ಪೃಥ್ವಿ ಅಪ್ಪು ತೇಜ ವಾಯು ಆಕಾಶ, ರವಿ ಶಶಿ ಆತ್ಮ, ಮನೋವಾಕ್ಕಾಯ, ಹೊನ್ನು ಹೆಣ್ಣು ಮಣ್ಣು ಸರ್ವಪದಾರ್ಥವನರ್ಪಿಸಿ, ಗುರುಲಿಂಗಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ ಸರ್ವವು ಪ್ರಸಾದವಲ್ಲದೆ ಮತ್ತೊಂದಿಲ್ಲ. ಆ ಪ್ರಸಾದಿಗೆ ಪದಾರ್ಥ ಪ್ರಸಾದವೆಂದು ಬೇರುಂಟೆ? ಅರ್ಪಿತ ಅನರ್ಪಿತವೆಂಬ ಸಂದೇಹ ಉಂಟೆ? ಕೊಂಬಲ್ಲಿ ಕೊಡುವಲ್ಲಿ ಸೀಮೆಯುಂಟೆ? ನಿಸ್ಸೀಮ ಪ್ರಸಾದಿಗೆ ಸರ್ವವೂ ಪ್ರಸಾದ. ಆ ಭೋಗಕ್ಕೆ ಅವಧಿಯುಂಟೆ? ಮೇರೆಯುಂಟೆ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ವೇದ ಶಾಸ್ತ್ರ ಪುರಾಣಾಗಮಂಗಳ ಸರ್ವವಿದ್ಯಂಗಳ ತಾತ್ಪರ್ಯ ಮರ್ಮ ಕಳೆಗಳನರಿದ ಮಹಾ ಜ್ಞಾತೃವಿಂಗೆ ಆ ಮಹಾಜ್ಞಾನವೇ ದೇಹ, ಆ ಜ್ಞಾನವೇ ಪ್ರಾಣ. ಆ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ ಮಹಾಬೆಳಗಿನ ಸುಖ ಸ್ವರೂಪಂಗೆ ಮರ್ತ್ಯ ಸ್ವರ್ಗ ದೇವಲೋಕವೆಂಬ ಫಲಪದದಾಸೆಯುಂಟೆ? ಇಲ್ಲ. ನಿರಂತರತೇಜೋಮಯ ಸುಖಸ್ವರೂಪನು, ನಿತ್ಯಾನಂದಮಯನು. ಆ ಮಹಾಮಹಿಮನ ಸುಖಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ. ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ಆ ಮಹಾಮಹಿಮನು ಅನುಭಾವಿ; ತಾನೇ ನಿರುಪಮ ಜ್ಯೋತಿರ್ಲಿಂಗವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೧೪೫

ಹಿರಿಯರೆಂತಿಪ್ಪರಯ್ಯಾ? ಅಯ್ಯಾ, ದಿಟದ ರಾಸಿಗೆ ಅವರ ಘಟ ಲಕ್ಷಣ. ನಿಸ್ಸೀಮರೆಂತಿಪ್ಪರಯ್ಯಾ? ಅಯ್ಯಾ, ಸೀಮೆಗೆಡೆಗುಡದ ಬಯಲ ನೊಳಕೊಂಡಿಪ್ಪರು. ಭಾವರೆಂತಿಪ್ಪರಯ್ಯಾ? ಅಯ್ಯಾ, ಕಣ್ಣಾಲಿ ದೃಷ್ಟಿಯ ನುಂಗಿದಂತೆ. ನೀರೆಂತು ನನೆವುದೆಂದು ಬೆಸಗೊಂಡಡೆ, ಹೇಳುವ ಶಬ್ದದಂ ತಿಹುದವರ ನಿಲವು. 'ಲಿಂಗಮಧ್ಯೇ ಜಗತ್‌ಸರ್ವಂ' ಲಿಂಗದಂಗ ರೇಕಣ್ಣ ಪ್ರಿಯನಾಗಿನಾಥನಂತಿಪ್ಪರು.

೧೬

ಆನಂದ ಶರಣ

೧. ಶರಣ ಸತಿ, ಲಿಂಗ ಪತಿ

೧

ಕಾಮನ ಕೊಂದಂದು ಪಟ್ಟಕ್ಕೆ ನಿಂದ ಗರುವ! ಕಾಮರಾಜರಾಜನವ್ವಾ, ರಾಜಾಧಿರಾಜ. ಕಂಡವರೆಲ್ಲರ ಹೆಂಡಿರ ಮಾಡಿ ನೆರೆವ ಮಹಾಕಾಮಿಯು ಕೇಳಾ! ಇಂತಪ್ಪ ಕಾಮಿಯನತಿಕಾಮದಿಂದ ಕಾಮಿಸಿದೆನವ್ವಾ ಉರಿಲಿಂಗದೇವನ.

೨

ಇವನೊಬ್ಬನೆ ಗರುವ, ಇವನೊಬ್ಬನೆ ಚೆಲುವನು. ಇವನೊಬ್ಬನೆ ಧನಪತಿ ಕೇಳಾ ಕೆಳದಿ. ಇವಗೆ ಹಿರಿಯರಿಲ್ಲ, ಎನಗೊಡೆಯರಿಲ್ಲ. ಇಂತಪ್ಪ ನಲ್ಲನು ಲೇಸು ಕಾಣೆಲಗೆ. ನಾವೆಲ್ಲರೊಂದಾಗಿ ಹಿಡಿದು ಬಿಡದಿರೆ ಬಿಡಿಸುವರಿಲ್ಲ. ಲೇಸು ಉರಿಲಿಂಗದೇವ.

೩

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ; ರಾಶಿ ಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ; ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ; ನಾಳಿನದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ; ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ!

೪

ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು,–ಚೆನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು.

೫

ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ, ಆನು ಮದುವಳಿಗೆಯಾದೆನು. ವಸುಧೆಯ ಭಕ್ತರೆಲ್ಲ ನಿಬ್ಬಣಿಗರಾದರು. ಕೊಟ್ಟರು

ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ.

೬

ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ, ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ, ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

೭

ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ. ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

೮

ಮಂಗಳವೇ ಮಜ್ಜನವೆನಗೆ. ವಿಭೂತಿಯೇ ಒಳುಗುಂದದರಸಿನವೆನಗೆ. ದಿಗಂಬರವೇ ದಿವ್ಯಾಂಬರವೆನಗೆ. ಶಿವಪಾದರೇಣುವೇ ಅನುಲೇಪನವೆನಗೆ. ರುದ್ರಾಕ್ಷಿಯೇ ವೈದೊಡಿಗೆ ಎನಗೆ. ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ. ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ. ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ. ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

೯

ಎನ್ನಂತೆ ಪುಣ್ಯಂಗೈದವರುಂಟೇ? ಎನ್ನಂತೆ ಭಾಗ್ಯಂಗೆಯ್ದವರುಂಟೇ? ಕಿನ್ನರನಂತಪ್ಪ ಸೋದರನೆನಗೆ. ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ. ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ!

೧೦

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ, ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೇ, ಭವಿ ಎಂಬುದ ತೊಡೆದು

ಭಕ್ತ ಎಂದೆನಿಸಿದ ಗುರುವೇ, ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು.

೧೧

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು. ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತು. ಜಯ ಜಯ ಗುರುವೇ! ನಮೋ ಪರಮಗುರುವೇ, ನಮೋ ನಮೋ. ಚೆನ್ನಮಲ್ಲಿಕಾರ್ಜುನನ ತಂದೆನಗೆ ತೋರಿ ಕೊಟ್ಟ ಗುರುವೇ ನಮೋ ನಮೋ.

೧೨

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣ ದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ! ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ. ವಿವಾಹವ ಮಾಡಿದಿರಿ. ಸಯವಪ್ಪ ಗಂಡಂಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸ ವಣ್ಣ ಮೆಚ್ಚಲು ಒಗತನವ ಮಾಡುವೆ. ಚೆನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮಂಡೆಗೆ ಹುವ್ವ ತಹೆನಲ್ಲದೆ, ಹುಲ್ಲ ತಾರೆನು. ಅವಧರಿಸಿ ನಿಮ್ಮಡಿಗ ಳೆಲ್ಲರು. ಮರಳಿ ಬಿಜಯಂಗೈವುದು. ಶರಣಾರ್ಥಿ.

೧೩

ಎಲೆ ಶಿವನೆ, ನೀನು ಎನ್ನ ಮಚ್ಚಿ ಕೈವಿಡಿದ ಕಾರಣ, ಎಮ್ಮವರು ಸಕಲಗಣಂಗಳ ಸಾಕ್ಷಿಯ ಮಾಡಿ ನಿನಗೆ ಎನ್ನ ಮದುವೆಯ ಮಾಡಿ ಕೊಟ್ಟರು. ನೀನು ಎನ್ನನಗಲಿದಡೆ ಗುರುದ್ರೋಹಿ, ಆನು ನಿನ್ನನಗಲಿದಡೆ ಸಮಯಕ್ಕೆ ಹೊರಗು. ಅದೆಂತೆಂದೊಡೆ: ಮುನ್ನ ಶ್ರೀ ಗುರುಸ್ವಾಮಿ ಎನ್ನ ಪ್ರಾಣದೊಳಗೆ ನಿನ್ನ ಪ್ರಾಣವ ಹುದುಗಿಸಿ, ಎಂದೆಂದೂ ಅಗಲಬೇಡೆಂದು ನಿರೂಪಿಸಿದನು. ಆ ನಿರೂಪವನು ಮಹಾಪ್ರಸಾದವೆಂದು ಕೈಕೊಂಡ ಬಳಿಕ, ನಾವಿಬ್ಬರು ಎಂದೆಂದಿಗೂ ಅಗಲದಿರಬೇಕಯ್ಯಾ ಅಖಂಡೇಶ್ವರಾ.

೧೪

ಆದಿ ಅನಾದಿಯಿಂದತ್ತಣ, ದೂರಕ್ಕೆ ದೂರ, ಭಾವನಿರ್ಭಾವಕ್ಕೆ ಬಾರ ದಿರ್ದ ನಿಃಕಳ ಪರಬ್ರಹ್ಮವೇ, ಮುನ್ನ ನೀನು ಶಾಖೆದೋರುವಲ್ಲಿ

ನಿನ್ನೊಳಂಕುರಿಸಿ ನಾನು ತಾಮಸ ಮುಸುಂಕಿ ಜನನಮರಣಕ್ಕೊಳಗಾಗಿ, ಎಂಬತ್ತುನಾಲ್ಕುಲಕ್ಷ ಪ್ರಾಣಿಗಳ ಗರ್ಭದಿಂ ಬಂದು, ಒಮ್ಮೆ ಮಾನವ ನಪ್ಪಂದಿಂಗೆ ನಾನುಂಡ ಮೊಲೆಹಾಲು ಸಪ್ತಸಮುದ್ರಕ್ಕೆ ಸರಿ ಇಲ್ಲವಯ್ಯಾ. ಇಂತಪ್ಪ ಮಾನವಜನ್ಮದಲ್ಲಿ ಬಂದುಬಂದುದು ಗಣಿತಕ್ಕೆ ಬಾರದಯ್ಯಾ. ಈ ಜನ್ಮದಲ್ಲಿ ನಾನು ಪಿಂಡೋತ್ಪತ್ಯದಲ್ಲಿಯೇ ಶರಣಸತಿ ಲಿಂಗಪತಿ ಎಂಬ ಜ್ಞಾನ ತಲೆದೋರಿ, ಶರಣುವೆಣ್ಣಾಗಿ ಹುಟ್ಟಿದೆನಯ್ಯಾ. ಎನಗೆ ನಿನ್ನ ಬಯಕೆ ಎಂಬ ಸಿಂಗರದ ಸಿರಿಮುಡಿಯಾಯಿತ್ತು. ಎನಗೆ ನಿನ್ನ ನೋಡುವೆನೆಂಬ ಮುಗುಳ್ಮೊಲೆ ಮೂಡಿದವು. ಎನಗೆ ನಿನ್ನೊಳು ನುಡಿಯಬೇಕೆಂಬ ಉರು ವಣೆಯ ಸಂಪದದ ಜವ್ವನ ಕುಡಿವರಿಯಿತ್ತು. ಎನಗೆ ನಿನ್ನನೊಲಿಸಬೇ ಕೆಂಬ ಸಂಭ್ರಮದ ಕಾಂಚೀಧಾಮ, ಕಟಿಸೂತ್ರ, ನೇವುರ, ನಿಡಿಗೊಂಡೆ ಹವೆಂಬ ಆಭರಣ ಅನುಲೇಪನ ವಸ್ತ್ರಂಗಳೆನಗೆ ಅಲಂಕಾರವಾಯಿತ್ತು. ಭಕ್ತಿ ಎಂಬ ವಿರಹಾಗ್ನಿ ಎನ್ನ ಹೃದಯಕಮಲದಲ್ಲಿ ಬೆಳೆದು ಬೀಗಿ ಬೇರುವರಿದು ನಿಂದಲ್ಲಿ ನಿಲ್ಲಲೀಸದಯ್ಯಾ; ಕುಳಿತಲ್ಲಿ ಕುಳ್ಳಿರಲೀಸದಯ್ಯಾ; ಮನದಲ್ಲಿ ಮನೋಹರವಪ್ಪುದಯ್ಯಾ. ಅಂಗ ಮನ ಪ್ರಾಣ ನೇತ್ರ ಚಿತ್ತಂಗಳೊಳು ಪಂಚಮುಖವೆಂಬ ಪಂಚಬಾಣಂಗಳು ನೆಲೆಗೆಟ್ಟವಯ್ಯಾ. ನಾನು ಧರೆಯೊ ಳುಳಿವುದರಿದು. ಪ್ರೇಮದಿಂ ಬಂದು ಕಣ್ತುಂಬಿ ನೋಡಿ, ಮನವೊಲಿದು ಮಾತಾಡಿ, ಕರುಣದಿಂ ಕೈವಿಡಿದು, ಅಕ್ಕರಿಂದಾಲಿಂಗಿಸಿ, ದಿಟ್ಟಿಸಿ, ಲಲ್ಲೆವಾ ತಿನಿಂ ಗಲ್ಲವ ಪಿಡಿದು, ಪುಷ್ಪಪರಿಮಳದಂತೆ ನಾನೀನೆಂಬ ಉಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೇ. ಕೂಡದಿರ್ದಡೆ ಗಲ್ಲವ ಪಿಡಿ, ಗಲ್ಲವ ಪಿಡಿಯದಿರ್ದಡೆ ಕೈವಿಡಿ. ಕೈವಿಡಿಯದಿರ್ದಡೆಮಾತಾಡು,ಮಾತಾಡದಿರ್ದಡೆ ನೋಡು. ನೋಡ ದಿರ್ದಡೆ ಬಾ, ಬಾರದಿರ್ದಡೆ ಪ್ರಮಥಗಣಂಗಳೊಡನೆ ನಿನ್ನವಳೆಂದು ನುಡಿ. ನುಡಿಯದಿರ್ದಡೆ ನಿನ್ನ ಮನದಲ್ಲಿ ನಿನ್ನವಳೆಂದು ಭಾವಿಸು, ಭಾವಿಸದಿರ್ದಡೆ ಪುಣ್ಯ ಕಣ್ದೆರೆಯದು, ಕರ್ಮ ಕಾಂತಿಯಪ್ಪುದು, ಕಾಮ ಕೈದುಗೊಂಬ, ಕಾಲ ಕಲಿಯಪ್ಪ, ಭವಕ್ಕೆ ಬಲ್ಮೆದೋರುವುದು. ಇಂತಿವರು ಎನಗೆ ಅವಾಂತರದೊಳ ಗಾದ ಹಗೆಗಳಯ್ಯ. ಇವರೆನ್ನ ತಿಂದು ತೇಗಿ, ಹಿಂಡಿ ಹಿಪ್ಪೆಯಂ ಮಾಡಿ, ನುಂಗಿ ಉಗುಳ್ದು ಹಿಂದಣ ಬಟ್ಟೆಗೆ ನೂಂಕುವರಯ್ಯಾ. ಹೋಗಲಂಜುವೆ ನಯ್ಯಾ. ಹೋದರೆ ಚಂದ್ರಸೂರ್ಯಾದಿಗಳುಳ್ಳನ್ನಕ್ಕರ ನಿನ್ನ ನೆನೆವ ಮನಕ್ಕೆ,

ನಿನ್ನ ಕೊಂಡಾಡುವ ಬಾಯಿಗೆ, ನಿನ್ನ ನೋಡುವ ಕಂಗಳಿಗೆ ಸೆರೆ ಸಂಕೋಲೆಯುಪ್ಪುದಯ್ಯಾ. ಇಂತಿವಂ ತಿಳಿದು ನಿನ್ನ ಮನದೊಳು ನನ್ನವ ಳೆಂದರೆ, ದಿವಾರಾತ್ರಿಯುಳ್ಳನ್ನಕ್ಕರ ಎನ್ನ ಮನ ಜಿಹ್ವೆ ನೇತ್ರಂಗಳಿಗೆ ಬಂಧನಂಗಳೆಂಬುವು ಮುಂದುಗೆಡುವವಯ್ಯಾ. ನಿನ್ನ ನೆನೆನೆನೆದು ಎನ್ನ ಮನ ಬೀಗಿ ಬೆಳೆದು ತಳಿರಾಗಿ ಹೂಮಿಡಿಗೊಂಬುದಯ್ಯಾ. ನಿನ್ನ ಹಾಡಿ ಹಾಡಿ ಜಿಹ್ವೆ ಅಮೃತಸಾಗರದೊಳೋಲಾಡುತಿಪ್ಪುದಯ್ಯಾ. ನಿನ್ನ ನೋಡಿ ನೋಡಿ ಕಂಗಳು ನಿಜಮೋಕ್ಷವಡೆವುವಯ್ಯಾ. ನಾನು ಈರೇಳು ಭುವನಕ್ಕೆ ಬರುವ ಹಾದಿ ಹಾಳಪ್ಪುದಯ್ಯಾ. ಶತ್ರುಗಳೆನಗೆ ಮಿತ್ರರಪ್ಪರಯ್ಯಾ. ಭವದ ಬಳ್ಳಿ ಅಳಿವುದು, ಕಾಲನ ಕಲಿ ಕೆಡುವುದು, ಕಾಮನ ಕೈದು ಖಂಡಿಸುವುದು. ಕರ್ಮದ ಕಾಂತಿ ಕರಗುವುದು, ಪುಣ್ಯದ ಕಣ್ಣು ಬಣ್ಣಗೆಡುವುದಯ್ಯಾ. ನಿನ ಗೊಲಿದವರ ನಿನ್ನಂತೆ ಮಾಡುವ ಕೃಪಾಕರನೆ, ನಿನಗೆ ಮೆಚ್ಚಿದೆನಯ್ಯಾ. ನಿನ್ನ ಮೆಚ್ಚಿಸಿಕೊಳಲರಿಯದ ಮುಗ್ಧವೆಣ್ಣಿನ ಪತಿಭಕ್ತಿಯಂ ಸಾಧಿಸುವ ಎನ್ನವಸ್ಥೆಯಂ ಲಾಲಿಸು. ನಿನ್ನ ಶ್ರೀಪಾದಪದ್ಮದೊಳಗೆನ್ನ ಒಡಗೂಡಿಸು. ಎನ್ನ ಭಿನ್ನಪಮಂ ಪಾಲಿಸು ಘನಲಿಂಗಿಯ ಮೋಹದ ಚೆನ್ನಮಲ್ಲಿ ಕಾರ್ಜುನಾ!

೧೫

ಆರ ಪರಿಯಲ್ಲ ನಮ್ಮ ನಲ್ಲನು. ವಿಶ್ವವೆಲ್ಲವು ಸತಿಯರು. ಚೋದ್ಯದ ಪುರುಷನು! ಅವರವರ ಪರಿಯಲ್ಲಿ ಅವರವರ ನೆರೆವನು. ಅವರವರಿಗೆ ಅವ ರಂತೆ ಸುಖಮಯ ನೋಡಾ. ಅವರೆಲ್ಲರ ವಂಚಿಸಿ, ಎನ್ನನಗಲದ ಪರಿಯ ಹೇಳಾ ಕೆಳದಿ! ನೀನೊಳ್ಳಿದಳಾದರೆ ಮಹಾಮಂತ್ರವ ಜಪಿಸಲು ನಿನ್ನನಗಲ. ನಿನ್ನಾಣೆ, ಉರಿಲಿಂಗದೇವ ತನ್ನಾಣೆ.

೧೬

ಜಗವೆಲ್ಲ ಅರಿಯಲು ಎನಗೊಬ್ಬ ಗಂಡನುಂಟು. ಆನು ಮುತ್ತೈದೆ, ಆನು ನಿಟ್ಟೈದೆ. ಕೂಡಲಸಂಗಯ್ಯನಂತಪ್ಪ ಎನಗೊಬ್ಬ ಗಂಡನುಂಟು!

೧೭

ಗಿರಿಯಲ್ಲದೆ ಹುಲ್ಲು ಮೊರಡಿಯಲಾಡುವುದೇ ನವಿಲು? ಕೊಳನಲ್ಲದೆ ಕಿರಿವಳ್ಳಕ್ಕೆಳಸುವುದೇ ಹಂಸೆ? ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ?

ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ? ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದೆ, ಅನ್ಯಕ್ಕೆಳಸುವುದೇ ಎನ್ನ ಮನ? ಕೇಳಿರೇ ಕೆಳದಿಯರಿರಾ!

೧೮

ಎರದ ಮುಳ್ಳಿನಂತೆ ಪರಗಂಡರೆನಗವ್ವಾ. ಸೋಂಕಲಮ್ಮೆ, ಸುಳಿಯಲಮ್ಮೆ, ನಂಬಿ ನಚ್ಚಿ ಮಾತಾಡಲಮ್ಮೆನವ್ವಾ. ಚೆನ್ನಮಲ್ಲಿಕಾರ್ಜುನನಲ್ಲದ ಗಂಡನ ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ!

೧೯

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ. ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ. ಎಲೆ ಅವ್ವಾ, ನೀನು ಕೇಳಾ ತಾಯೆ. ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು. ಕುಲ ಸೀಮೆ ಇಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

೨೦

ಆತನ ಬಿರುದೆನ್ನ ಉರದಲ್ಲಿದೆ ನೋಡಿರಯ್ಯಾ! ಏಕೆ ಬಂದಿರೋ, ಎಲೆ ಅಣ್ಣಗಳಿರಾ? ನಿಮಗಪ್ಪುವುದಕ್ಕೆಡೆಯಿಲ್ಲ. ನೀವಪ್ಪುವಡೆ ಅಡ್ಡ ಬಂದಿಹ ನೆನ್ನ ನಲ್ಲ. ಏಕೆ ಬಂದಿರೋ ಉರಿಲಿಂಗದೇವನಪ್ಪಿದ ಹಿಪ್ಪೆಗೆ?

೨೧

ಕಾಮ ಬಲ್ಲಿದನೆಂದರೆ, ಉರುಹಿ ಭಸ್ಮವ ಮಾಡಿದ. ಬ್ರಹ್ಮ ಬಲ್ಲಿದನೆಂದರೆ, ಶಿರವ ಚಿವುಟಿಯಾಡಿದ. ಎಲೆ ಅವ್ವ, ನೀನು ಕೇಳ ತಾಯೆ. ವಿಷ್ಣು ಬಲ್ಲಿದನೆಂದರೆ, ಆಕಳ ಕಾಯ್ದಿರಿಸಿದ. ತ್ರಿಪುರದ ಕೋಟೆ ಬಲ್ಲಿತ್ತೆಂದರೆ, ನೊಸಲ ಕಂಗಳಲುರುಹಿದನವ್ವಾ! ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ. ಜನನ ಮರಣಕ್ಕೊಳಗಾಗದ ಬಲುಹನೇನ ಬಣ್ಣಿಪೆನವ್ವಾ!

೨೨

ಗಂಡನುಳ್ಳ ಗರತಿಯರೆಲ್ಲರು ನಿಮ್ಮ ಗಂಡನ ಕುರುಹ ನೀವು ಹೇಳಿರೆ. ನೀವರಿಯದಿರ್ದಡೆ ನಾವು ನಮ್ಮ ಗಂಡರ ಕುರುಹ ಹೇಳಿಹೆವು ಕೇಳಿರೆ. ಹೊಳೆವ ಕೆಂಜೆಡೆಗಳ, ಬೆಳಗುವ ಭಾಳಲೋಚನದ, ಥಳಥಳಿಪ ಸುಲಿಪಲ್ಲಿನ, ಕಳೆದುಂಬಿ ನೋಡುವ ಕಂಗಳ ನೋಟದ, ಸೊಗಸಿಂದೆ ನಗುವ ಮುಗುಳು ನಗೆಯು, ರತ್ನದಂತೆ ಬೆಳಗುವ ರಂಗುದುಟಿಯು, ಚಂಪಕದ ನನೆಯಂತೆ ಇಂಪಾದ ನಾಸಿಕದ, ಶಶಿಯಂತೆ ಬೆಳಗುವ ಎಸೆವ ಕದಪಿನ, ಮಿಸುಪ ಎದೆ ಭುಜ ಕಂಠದ, ಶೃಂಗಾರದ ಕುಕ್ಷಿಯು, ಸುಳಿದೆಗೆದ ನಾಭಿಯು, ತೊಳಪ ತೊಡೆ ಮಣಿಪಾದ ಹರಡಿನ, ನಕ್ಷತ್ರದಂತೆ ಹೊಳೆವ ನಖದ ಪಂಕ್ತಿಯು, ಚರಣ ಕಮಲದಲ್ಲಿ ಹರಿಯ ನಯನದ ಕುರುಹಿನ, ಸಕಲಸೌಂದರ್ಯವನೊಳಕೊಂಡು ರವಿಕೋಟಿಪ್ರಭೆಯಂತೆ ರಾಜಿಸುವ ರಾಜಾಧಿರಾಜ ನಮ್ಮ ಅಖಂಡೇಶ್ವರನೆಂಬ ನಲ್ಲನ ಕುರುಹು ಇಂತುಟು ಕೇಳಿರವ್ವಾ!

೨೩

ನೀನು ದಂಡು ಮಂಡಲಕ್ಕೆ ಹೋದೆನೆಂದೊಡೆ, ನಾನು ಸುಮ್ಮನಿಹೆನು. ನೀನು ಎನ್ನ ಕೈಯೊಳಗಿರ್ದು, ಎನ್ನ ಮನದೊಳಗಿರ್ದು, ನುಡಿಯದಿರ್ದೊಡಾನು ಎಂತು ಸೈರಿಸುವೆನಯ್ಯ? ನೇಹವೆಂಬ ಕಂಟಣಿ ಚೆನ್ನಮಲ್ಲಿಕಾರ್ಜುನನೊಲಿಸದಿದ್ದರೆ ಇನ್ನೇವೆ ಸಖಿಯೇ?

೨೪

ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವಾ! ಆತನ ಕಂಡು ಬೆರಗಾದೆನವ್ವ,-ಎನ್ನಂತರಂಗದ ಆತುಮನೊಳಗೆ ಅನಿಮಿಷ ನಿಜೈಕ್ಯ ಗೊಹೇಶ್ವರನ ಕಂಡು.

೨೫

ಎನ್ನ ನಲ್ಲನು ಒಲ್ಲೆನೆಂದು ಕಳುಹಿದಡೆ ಇಲ್ಲಿಯೇ ಅರಸುವೆನವನ. ಗಂಗೆಯ ನೋನೆನು. ಗೌರಿಯ ನೋನೆನು. ಇಲ್ಲಿಯೇ ಅರಸುವೆನವ್ವಾ! ಎನ್ನಂತರಂಗದ ಆತ್ಮಜ್ಯೋತಿಯೇ ಉರಿಲಿಂಗದೇವ ಎಂದು, ಇಲ್ಲಿಯೇ ಅರಸುವೆನವ್ವಾ!

೨೬

ನಮ್ಮ ಗಣಂಗಳ ಸಹವಾಸದಿಂದ ಏನೇನು ಫಲ ಪದವಿ ಎಂದೊಡೆ, ಅಷ್ಟಾವರಣಂಗಳು ಸಾಧ್ಯವಾದವು. ಸಾಧ್ಯವಾದ ಕಾರಣ, ಶ್ರೀಗುರುವು ಎನ್ನ ಕರಸ್ಥಲಕ್ಕೆ ಲಿಂಗವ ಕೊಟ್ಟ. ಎಂದೆಂದಿಗೂ ಸತಿ ಪತಿ ಭಾವ ತಪ್ಪ ಬೇಡೆಂದು, ಗಣಸಾಕ್ಷಿಯಂ ಮಾಡಿ, ನೀನು ಅಂಗವಾಗಿ, ಲಿಂಗವೇ ಪ್ರಾಣ ವಾಗಿರಿ ಎಂದು ಇಬ್ಬರಿಗೂ ಆಜ್ಞೆಯ ಮಾಡಿದ ಕಾರಣ, ಎನ್ನಂಗವೇ ನಿನ್ನಂಗ, ನಿನ್ನಂಗವೇ ಎನ್ನ ಪ್ರಾಣ, ಎನ್ನ ಪ್ರಾಣವೇ ನಿನ್ನ ಪ್ರಾಣ. ನಿನ್ನ ಪ್ರಾಣವೇ ಎನ್ನ ಪ್ರಾಣವಾದ ಮೇಲೆ, ಎನ್ನ ಮಾನಾಪಮಾನ ನಿನ್ನದಯ್ಯ. ಎನ್ನ ಹಾನಿ ವೃದ್ಧಿ ನಿಮ್ಮದಯ್ಯ. ನೀವು ಈರೇಳು ಲೋಕದ ಒಡೆಯ ರೆಂಬುದ ನಾನು ಬಲ್ಲೆನಯ್ಯ. ಬಲ್ಲೆನಾಗಿ, ಪುರುಷನ ದೊರೆತನ ಹೆಂಡರಿ ಗಲ್ಲದೆ ಬೇರುಂಟೇ? ಎನ್ನ ಸುಖ ದುಃಖವೇ ನಿನ್ನದಯ್ಯ, ನಿಮ್ಮ ಸುಖ ದುಃಖವೇ ಎನಗಯ್ಯ. ಎನ್ನ ತನು ಮನ ಧನವ ಸೂಸಲೀಯದೆ, ನಿಮ್ಮೊಡ ವೆಯ ನೀವೇ ಜೋಕೆಮಾಡಿಕೊಳ್ಳಿರಿ. ಜೋಕೆ ಮಾಡದಿರ್ದೊಡೆ ಗಣಂಗ ಳಿಗೆ ಹೇಳುವೆನು. ಯಾಕೆಂದರೆ, ಗಣಂಗಳು ಸಾಕ್ಷಿಯಾಗಿರ್ದ ಕಾರಣ. ಆಗ ಮನೆಯ ಮಾತ ಹೇಳಬಹುದೇ ಎಂದೊಡೆ, ಎನಗೆ ಪಾತಿವ್ರತ್ಯವಿಲ್ಲ. ಸ್ವಾಮಿ, ನಿಮ್ಮೊಡವೆಯ ನಿಮಗೊಪ್ಪಿಸೆಂದು ಅರುಹಿದಾತ ನಮ್ಮ ಶಾಂತ ಕೂಡಲಸಂಗಮದೇವ.

೨೭

ಕಾಯಕ್ಕೆ ಕಾಹ ಕೊಡುವರಲ್ಲದೆ, ಮನಕ್ಕೆ ಕಾಹನು ಕುಡುವರೆ ಕೆಳದಿ? ಇಂತಪ್ಪ ನಲ್ಲನನೆಲ್ಲಿಯೂ ಕಾಣೆ. ಇಂತಪ್ಪ ಪುರುಷನನೆಲ್ಲಿಯೂ ಕಾಣೆ. ಇಂತಪ್ಪ ಚೋದ್ಯನನೆಲ್ಲಿಯೂ ಕಾಣೆನು. ಸದ್‌ಗುಣದ ಕಾಹನು ಎನ್ನ ಮನಕ್ಕೆ ಕೊಟ್ಟನುರಿಲಿಂಗದೇವನು!

೨೮

ನಲ್ಲನನೊಲ್ಲೆನೆಂದು ಮುನಿದು ನಾನಗಲಲು, ಅಗಲುವ ಠಾವೆಲ್ಲಾ ತಾನೆಲಗವ್ವಾ! ನಲ್ಲನಿಲ್ಲದೆಡೆ ಇಲ್ಲ, ಅಗಲಿಕೆಗಿಂಬಿಲ್ಲ. ಮುನಿದು ನಾನೇಗು ವೆನು? ಶರಣುಗತಿವೊಗುವೆನು ಉರಿಲಿಂಗದೇವನ.

೨೯

ಅಕ್ಕ ಕೇಳವ್ವ, ಅಕ್ಕಯ್ಯ ನಾನೊಂದು ಕನಸು ಕಂಡೆ. ಅಕ್ಕಿಯಡಕೆ ತೆಂಗಿನ ಕಾಯಿ ಕಂಡೆ. ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

೩೦

ಅಕ್ಕ ಕೇಳಕ್ಕ ಆನೊಂದ ಕನಸ ಕಂಡೆ. ಚಿಕ್ಕ ಚಿಕ್ಕ ಜಡೆ ಸುಲಿಪಲ್ಲ ಗೊರವನು ಬಂದೆನ್ನ ನೆರೆವನು ನೋಡವ್ವಾ! ಆತನನಪ್ಪಿಕೊಂಡು ತಳವೆಳಗಾದೆನೆಲಗೆ! ಚೆನ್ನಮಲ್ಲಿಕಾರ್ಜುನನ ಕೂಡಿ, ಕಣ್ಮುಚ್ಚಿ ತೆರೆದು ತಳವೆಳಗಾದೆನೆಲಗೆ!

೩೧

ಹೊರಗಿರ್ದಹನೆಂದು ನಾನು ಮರೆದು ಮಾತನಾಡಿದೆ. ಅರಿಯಲೀಯದೆನ್ನಂತರಂಗದೊಳಿಪ್ಪ ತೆರಹಿಲ್ಲದಭವನು ನುಡಿಗೆಡೆಗುಡನು. ಆತನ ಬಯಲಿಂಗೆ ಬೇಟಗೊಂಡೆನವ್ವಾ! ಆನೇನ ಮಾಡುವೆನೆಲೆ ತಾಯೀ? ಮರೆದಡೆಚ್ಚರಿಸುವ ಕುರುಹಿಲ್ಲದ ಗಂಡನು ತನ್ನನರಿದಡೊಳ್ಳಿದನವ್ವಾ ಶಂಭುಜಕ್ಕೇಶ್ವರನು.

೩೨

ಉದಯುದಲೆದ್ದು ನಿಮ್ಮ ನೆನೆವೆನಯ್ಯ. ನಿಮ್ಮ ಬರವ ಹಾರುತಿರ್ಪೆನಯ್ಯ. ಹಸೆ ಹಂದರವನಿಕ್ಕಿ, ನಿಮ್ಮಡಿಗಳಿಗೆಡೆಮಾಡಿಕೊಂಡಿಪ್ಪೆನಯ್ಯಾ,— ಚೆನ್ನಮಲ್ಲಿಕಾರ್ಜುನಾ, ನೀನಾವಾಗ ಬಂದಿಹೆ ಎಂದು!

೩೩

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು, ದೇವಾಂಗವನುಟ್ಟು ಪುರುಷ ಬಾರಾ! ನಿನ್ನ ಬರವೆನ್ನಸುವಿನ ಬರವು ಬಾರಯ್ಯ! ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು

೩೪

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು, ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ! ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ, ಶಿವ, ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ! ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ! ನೀನೊಲಿದಂತೆ ಸಲಹಯ್ಯಾ ಕೂಡಲಸಂಗಮದೇವಾ.

೩೫

ಊರ ಮೇಲೆ ಊರ ಕಂಡೆ. ನೀರ ಮೇಲೆ ನೀರ ಕಂಡೆ. ಮರನ ಮೇಲೆ ಮರನ ಕಂಡೆ. ಗಿರಿಯ ಮೇಲೆ ಗಿರಿಯ ಕಂಡೆ. ಉರಿಯ ಮೇಲೆ ಉರಿಯ ಕಂಡೆ. ಈ ಭಾರವ ತಾಳಲಾರದೆ, ಆ ಉರಿ ಎದ್ದು ಊರು ಬೆಂದಿತ್ತು. ಮರನು ಬೆಂದಿತ್ತು. ಆ ಉರಿಯೇ ಉಳಿಯಿತ್ತು. ಆ ಉರಿಯ ನೆರೆದು ಸೀರೆಯ ಸೆಳೆದು ಪರಮಸುಖ ಪರಿಣಾಮದೊಳೋಲಾಡುತ್ತ, ನಿಮ್ಮ ಬರವ ಹಾರುತ್ತಿರ್ದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ!

೩೬

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆ ನೋಡಯ್ಯ. ಇರುಳು ನಾಲ್ಕು ಜಾವ ನಿಮ್ಮ ವಿಕಳಾವಸ್ಥೆಯಲ್ಲಿರ್ಪೆ ನೋಡಯ್ಯಾ. ಇರುಳು ಹಗಲು ನಿಮ್ಮ ಕಳವಳದಲ್ಲಿ ಮರೆದೊರಗಿದೆನಯ್ಯಾ. ಚೆನ್ನಮಲ್ಲಿಕಾರ್ಜುನಾ, ನಿಮ್ಮೊಲುಮೆ ನಟ್ಟು ಹಸಿವು ತೃಷೆ ನಿದ್ರೆಯ ಮರೆತೆನು.

೩೭

ಬಂಜೆ ಬೇನೆಯನರಿಯಳು. ಬಲದಾಯಿ ಮುದ್ದ ಬಲ್ಲಳೇ? ನೊಂದ ನೋವ ನೋಯದವರೆತ್ತ ಬಲ್ಲರು? ಚೆನ್ನಮಲ್ಲಿಕಾರ್ಜುನಾ, ನೀನಿರಿದಲಗು ಒಡಲಲ್ಲಿ ಮುರಿದು ಹೊರಳುವಳ ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ?

೩೮

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ! ಏರಿಲ್ಲದ ಗಾಯದಲ್ಲಿ ನೊಂದೆನವ್ವಾ! ಸುಖವಿಲ್ಲದೆ ಧಾವತಿಗೊಂಡೆನವ್ವಾ! ಚೆನ್ನಮಲ್ಲಿಕಾರ್ಜುನದೇವರಿಗೊಲಿದು ಬಾರದ ಭವಂಗಳಲ್ಲಿ ಬಂದೆನವ್ವಾ!

೩೯

ಒಮ್ಮೆ ಕಾಮನ ಕಾಲ ಹಿಡಿವೆ. ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲೀ ವಿರಹವ. ನಾನಾರಿಗೆ ಧೃತಿಗೆಡುವೆ? ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವಾ.

೪೦

ಅಳಿಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದ ಬೇಡುವೆನು: ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೇ.

೪೧

ಅರಳಿಯ ಮರದೊಳಗಿರುವ ಅರಗಿಳಿಗಳಿರಾ, ನಮ್ಮ ಅಖಂಡೇಶ್ವರನ ಕಂಡಿರೆ ಹೇಳಿರೆ? ಮಾವಿನ ಮರದೊಳಗೆ ಕೂಗುವ ಕೋಗಿಲೆ ಹಿಂಡುಗಳಿರಾ, ನಮ್ಮ ನಾಗಭೂಷಣನ ಕಂಡಿರೆ ಹೇಳಿರೆ? ಕೊಳನ ತೀರದಲಾಡುವ ಕಳಹಂಸಗಳಿರಾ, ನಮ್ಮ ಎಳೆಯ ಚಂದ್ರಧರನ ಕಂಡಿರೆ ಹೇಳಿರೆ? ಮೇಘಧ್ವನಿಗೆ ಕುಣಿವ ನವಿಲುಗಳಿರಾ, ನಮ್ಮ ಅಖಂಡೇಶ್ವರನೆಂಬ ಅವಿರಳ ಪರಶಿವನ ಕಂಡಿರೆ ಹೇಳಿರೆ?

೪೨

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ. ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ. ಕೊಳನ ತಡಿಯೊಳಾಡುವ ಹಂಸೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ. ಗಿರಿಗಹ್ವರದೊಳಾಡುವ ನವಿಲುಗಳಿರಾ, ನೀವು ಕಾಣಿರೇ, ನೀವು ಕಾಣಿರೇ. ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ನೀವು ಹೇಳಿರೇ, ನೀವು ಹೇಳಿರೇ.

೪೩

ಬಾರನೇತಕವ್ವಾ ನಮ್ಮನೆಯಾತ? ತೋರನೇತಕವ್ವಾ ತನ್ನ ದಿವ್ಯರೂಪವ? ಬೀರನೇತಕವ್ವಾ ಅತಿ ಸ್ನೇಹವ? ಇನ್ನೆಂತು ಸೈರಿಸುವೆನವ್ವಾ?

ಹೇಗೆ ತಾಳುವೆನವ್ವಾ? ತನು ತಾಪಗೊಳ್ಳುತಿದೆ; ಮನ ತಲ್ಲಣವಾಗುತಿದೆ. ಅಖಂಡೇಶ್ವರನೆಂಬ ನಲ್ಲನ ತೋರಿಸಿ ಎನ್ನ ಪ್ರಾಣವನುಳುಹಿಕೊಳ್ಳಿರವ್ವಾ.

೪೪

ಇಂದ್ರನೀಲಗಿರಿಯನೇರಿಕೊಂಡು, ಚಂದ್ರಶಿಲೆಗಳ ಮೆಟ್ಟಿಕೊಂಡು, ಕೊಂಬ ಬಾರಿಸುತ, ಹರನೇ ಎನ್ನ ಕುಂಭಕುಚದ ಮೇಲೆ ನಿಮ್ಮನ್ನೈದಿಪ್ಪೆ ಕೊಂಬೆನಯ್ಯ! ಅಂಗಭಂಗ ಮನಭಂಗವಳಿದು, ನಿಮ್ಮನೆಂದಿಂಗೊಮ್ಮೆ ನೆರೆವೆನೋ ಚೆನ್ನಮಲ್ಲಿಕಾರ್ಜುನಾ?

೪೫

ಬಂದಹನೆಂದು ಬಟ್ಟೆಯ ನೋಡಿ, ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ! ತಡವಾದೊಡೆ ಬಡವಾದೆ ತಾಯೆ. ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದೊಡೆ, ತಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವಾ.

೪೬

ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು, ಕನಸಿನಲಿ ಕಳವಳಿಸಿ ಆನು ಬೆರಗಾದೆ. ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ. ಆಪತ್ತಿಗೆ ಸಖಿಯರ ನಾನಾರುವನು ಕಾಣೆ. ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ, ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನಾ.

೪೭

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ ಬರವ ಹಾರುತ್ತಿದ್ದೆನೆಲಗವ್ವಾ. ತರಗೆಲೆ ಗಿರಕೆಂದೊಡೆ ಹೊರಗನಾಲಿಸುವೆ. ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ! ಕೂಡಲಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು 'ಶಿವಾ' ಎಂದರೆ, ಸಂತೋಷಬಟ್ಟೆನೆಲಗವ್ವಾ!

೪೮

ಇಂದೆನ್ನ ಮನೆಗೆ ಗಂಡ ಬಂದಿಹನೆಲಗವ್ವಾ. ನಿಮುನಿಮುಗೆಲ್ಲ ಶೃಂಗಾರವ ಮಾಡಿಕೊಳ್ಳಿ. ಚೆನ್ನಮಲ್ಲಿಕಾರ್ಜುನನೀಗಳೆ ಬಂದಿಹನು, ಇದಿರುಗೊಳ್ಳಬನ್ನಿರೇ ಅವ್ವಗಳಿರಾ.

೪೯

ನೆನಹಿನ ನಲ್ಲನು ಮನೆಗೆ ಬಂದರೆ, ನೆನೆವುದಿನ್ನಾರನು ಹೇಳವ್ವಾ? ನೆರೆವ ಕ್ರೀಯಲ್ಲಿ ನೆರೆದು ಸುಖಿಯಹುದಲ್ಲದೆ ನೆನೆವುದಿನ್ನಾರನು ಹೇಳವ್ವಾ? ನೆನಹಿನ ನಲ್ಲನುರಿಲಿಂಗದೇವನ ಕರಸ್ಥಲದಲ್ಲಿ ಕಂಡ ಬಳಿಕ ನೆನೆವುದಿನ್ನಾರನು ಹೇಳವ್ವಾ?

೫೦

ಒಂದಲ್ಲ, ಎರಡಲ್ಲ, ಮೂವರು ಹೆಣ್ಣುಗಳ ಮರೆಯಲ್ಲಿಪ್ಪವನ ನೆರೆಯಲೆಂತವ್ವ? ಹೆಣ್ಣಿನ ಮರೆಯ ಹೊಗುವ ಕೇಳವ್ವ ಕೆಳದಿ! ಲೋಗರ ಪತಿಯನು ಅರಸಿಕೊಂಡಿಪ್ಪ ಚಂಡಿಯರಿಗೆ ಮತ್ತೆ ನಾಚಿಕೆ ಇಲ್ಲ ಕೇಳವ್ವಾ. ಅವಂದಿರ ಝುಂಕಿಸಿ ತೊಲಗಿಸಿರೆಂದ ಉರಿಲಿಂಗದೇವ.

೫೧

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ? ಅಂಗವಿದ್ಯೆಯನೊಲ್ಲ; ಕಣ್ಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ; ಕೈಯ ತೊಳೆದಲ್ಲದೆ ಮುಟ್ಟಲೀಯ; ಕಾಲ ತೊಳೆದಲ್ಲದೆ ಹೊದ್ದಲೀಯ! ಇಂತೀ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ!

೫೨

ಎಮ್ಮ ನಲ್ಲನವ್ವಾ, ನಲ್ಲರಿಗೆ ನಲ್ಲನು. ವಂಚನೆಗೆ ನೆರೆಯನು. ನಿರ್ವಂಚನೆಗೆ ನೆರೆವನು ಎನ್ನ ಉರಿಲಿಂಗದೇವನು.

೫೩

ತನ್ನನಲ್ಲದೆ ಅನ್ಯವ ನೋಡೆನವ್ವಾ. ತನ್ನನಲ್ಲದೆ ಅನ್ಯವ ಮುಟ್ಟೆನವ್ವಾ. ತನ್ನನಲ್ಲದೆ ಅನ್ಯವ ನೆನೆಯೆನವ್ವಾ. ತನ್ನನಲ್ಲದೆ ಅನ್ಯವ ಬಯಸೆನವ್ವಾ. ತನ್ನನಗಲಿ ಇನ್ನೆಂತು ಬದುಕುವೆನವ್ವಾ? ಅಖಂಡೇಶ್ವರನೆಂಬ ನಲ್ಲನ ಮುನಿಸನು ತಿಳುಹಿರವ್ವಾ.

೫೪

ನಾನೇನೆಂದೆನೆ? ತಾನೇತಕೆ ಮುನಿದನೇ ? ಮಾನಿನಿ, ಹೋಗಿ ಕರೆದು ತಾರೇ ಅಖಂಡೇಶ್ವರನೆಂಬ ಇನಿಯನ.

೫೫

ಗಾಡಿಗ ನಲ್ಲನು ಕಾಡಿಹನೆಲಗೆ. ಕೂಡಿಹನಗಲಿಹನೆನ್ನ. ನೀನದ ಮಾಣಿಸು. ಅವನ ಅಗಲಿ ಕೂಡುವ ಬೇಟದ ಸುಖವನು–ಮುಗುದೆ, ನೀನರಿಯೆ. ಅಗಲಿದ ವಿರಹಿಯ ಕೂಟದ ಸುಖವನು ಉರಿಲಿಂಗದೇವ ಬಲ್ಲನು ಕೆಳದಿ.

೫೬

ಕೂಡಿ ಕೂಡುವ ಸುಖದಿಂದೆ, ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು ಕೆಳದಿ. ಒಚ್ಚತ ಅಗಲಿರೆ, ಕಾಣದೆ ಇರಲಾರೆ. ಎನ್ನ ದೇವ ಚೆನ್ನಮಲ್ಲಿ ಕಾರ್ಜುನನಗಲಿಯಗಲದ ಸುಖವೆಂತಪ್ಪುದೋ ?

೫೭

ಕಳವಳದ ಮನವು ತಲೆ ಕೆಳಗಾದುದವ್ವಾ ! ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ ! ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ ! ಹೊಳಲು ಸುಂಕಿಗನಂತೆ ತೊಳಲುತ್ತಿದ್ದೆನವ್ವಾ! ತಿಳುಹೇ, ಬುದ್ಧಿಯ ಹೇಳಿ ಕರೆತಾ ರೆಲಗೇ ! ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ.

೫೮

ಇನಿಯ ನೀನೆ ಎನಗೆ. ಇನ್ನೇನನೊಂದ ನಾನರಿಯೆ. ನೀ ನುಡಿಸಲು ನುಡಿವೆನು. ನೀ ನಡೆಸಲು ನಡೆವೆನು. ನೀನಲ್ಲದನ್ಯವ ನಾನರಿಯೆನು. ನಲ್ಲ ಕೇಳಾ, ಎನಗೆ ನೀನೇ ಗತಿ, ನೀನೇ ಮತಿ. ನಿನ್ನಾಣೆಯಯ್ಯ ಉರಿಲಿಂಗ ದೇವಾ.

೫೯

ಇಬ್ಬರಿಗೊಂದಂಬ ತೊಡುವೆ ಗಡ ಕಾಮಾ. ಅರಿದರಿದು ಬಿಲ್ಲು ಗಾರನಹೆಯೋ. ನೀ ಎಸೆದಿಬ್ಬರು ಬಂದಿಹರು ಗಡಾ. ಇದು ಹೊಸತು ಚೋದ್ಯವೇ? ಸರಳ ಪರಿಯ ನೋಡಾ ! ಎನಗೆಯೂ ಉರಿಲಿಂಗದೇವ

ನಿಗೆಯೂ ತೊಟ್ಟಿಸು. ನಾವಿಬ್ಬರೊಂದಾಗೆ ನೀ ಬಲ್ಲಾಳನಹೆ ಎಲೋ ಕಾವಮಾ.

೬೦

ನಾಳ ಮರೆಯ ನೂಲು ಸಡಿಲಿ ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿ. ಪ್ರಾಣದೊಡೆಯ ಜಗದೊಳಗೆ ಮುಳುಗುತ್ತ ತೆರಹಿಲ್ಲದಿರಲು ದೇವರ ಮುಂದೆ ನಾಚಲೆಡೆಯುಂಟೆ? ಚೆನ್ನಮಲ್ಲಿಕಾರ್ಜುನಂಗೆ ಜಗವೆಲ್ಲ ಕಣ್ಣಾಗೆ ನೋಡುತ್ತಿರಲು, ಮುಚ್ಚಿ ಮರೆಸುವದ ಹೇಳಯ್ಯಾ?

೬೧

ಲೋಕದ ಗಂಡರ ಪರಿ ಬ್ಯಾರೆ, ಎನ್ನ ಗಂಡನ ಪರಿ ಬ್ಯಾರೆ ಕೇಳಿರವ್ವ. ಲೋಕದ ಗಂಡರು ಉಪಚಾರವ ಮಾಡಿ ಕರೆದರೆ ಬರುವರು, ಇಲ್ಲವಾದರೆ ಮೋರೆಯ ತೋರರು. ಎನ್ನ ಗಂಡ ಉಪಚಾರವಲ್ಲ; ಕರೆದರೆ ಎನ್ನ ಬಿಟ್ಟು ಹೋಗುವ. ಎನ್ನ ಒಡಹುಟ್ಟಿದವರ ಬಿಟ್ಟು ಶಾಲಿಯ ಕಳೆದು ಪೋದೊಡೆ, ಎನ್ನ ಸರ್ವಾಂಗವನು ಬಿಗಿದಪ್ಪಿ ಅಗಲದೆ ಇರುವನವ್ವ, ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭು.

೬೨

ಮಚ್ಚು ಅಚ್ಚುಗವಾಗಿಪ್ಪ ಪರಿಯ ನೋಡಾ! ಎಚ್ಚರೆ ಗರಿದೋರ ದಂತಿರಬೇಕು. ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗಬೇಕು. ಬೆಚ್ಚಡೆ ಬೆಸುಗೆಯುರಿಯದಂತಿರಬೇಕು. ಮಚ್ಚು ಒಪ್ಪಿತ್ತು, ಚೆನ್ನಮಲ್ಲಿಕಾರ್ಜು ನಯ್ಯನ ಸ್ನೇಹ.

೬೩

ಎನ್ನ ಮನವ ಮಾರುಗೊಂಡನವ್ವಾ! ಎನ್ನ ತನುವ ಸೂರೆಗೊಂಡ ನವ್ವಾ! ಎನ್ನ ಸುಖವನೊಪ್ಪುಗೊಂಡನವ್ವಾ! ಎನ್ನಿರವನಿಂಬುಗೊಂಡ ನವ್ವಾ! ಚೆನ್ನಮಲ್ಲಿಕಾರ್ಜುನನ ಒಲುಮೆಯುವಳಾನು.

೬೪

ನಲ್ಲನ ರೂಪೆನ್ನ ನೇತ್ರ ತುಂಬಿತ್ತು. ನಲ್ಲನ ನುಡಿ ಎನ್ನ ಶ್ರೋತ್ರ ತುಂಬಿತ್ತು. ನಲ್ಲನ ಸುಗಂಧವೆನ್ನ ನಾಸಿಕ ತುಂಬಿತ್ತು. ನಲ್ಲನ ಚುಂಬನ

ವೆನ್ನ ಜಿಹ್ವೆ ತುಂಬಿತ್ತು. ನಲ್ಲನ ಆಲಿಂಗನವೆನ್ನ ಸರ್ವಾಂಗ ತುಂಬಿತ್ತು. ನಲ್ಲನ ಪ್ರೇಮವೆನ್ನ ಮನ ತುಂಬಿತ್ತು. ನಲ್ಲನ ಅಂತರಂಗ ಬಹಿರಂಗದಲ್ಲಿ ನೆರೆದು ಸುಖಿಯಾದೆ ಉರಿಲಿಂಗದೇವನ.

೬೫

ಕಾಯಕ್ಕೆ ಕಾಯವಾಗಿ, ಪ್ರಾಣಕ್ಕೆ ಪ್ರಾಣವಾಗಿ, ಮನಕ್ಕೆ ಮನವಾಗಿ ನೆರೆದ ನೋಡೆಲಗವ್ವಾ! ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿಪೆ ಕೆಳದಿ? ಮಹಾಸುಖವ ನಾನೇನೆಂಬೆನೆಲಗೆ? ನಲ್ಲನ ನೋಟದ ಕೂಟದನುವನೇನೆಂದುಪಮಿಸುವೆನವ್ವಾ? ಮಹಾಘನವ ನಾನು ತಾನೆಂದು ವಿವರಿಸಬಾರದಂತೆ ನೆರೆದನೆನ್ನನುರಿಲಿಂಗದೇವನು.

೬೬

ನಲ್ಲನ ಕೂಡಿಹೆನೆಂದು ಮೇಲುವಾಯಿವನ್ನಬರ, ತವಕದಿಂದ ಮೇಲುವಾಯಿದ ನೋಡವ್ವಾ! ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿ, ಕಾಯದೊಳಗೆ ಕಾಯವಾಗಿ ಕೂಡಿದ ನೋಡವ್ವಾ! ತವಕಕ್ಕೆ ತವಕ ಮಿಗೆ ಮೇಲುವರಿದು ಕೂಡಿದಂತೆ ಕೂಡುವೆ ಉರಿಲಿಂಗದೇವನ.

೬೭

ಕೇಳಿ ಕೇಳಿರವ್ವಾ ನಮ್ಮ ಮನೆಯಾತನ ಒಂದು ಬೆಡಗು ಬಿನ್ನಾಣವ: ಎನ್ನ ಕಟ್ಟಿದ ಮುಡಿಯ ಸಡಿಲಿಸಿದ. ಎನ್ನ ಉಟ್ಟುದ ಸೆಳೆದುಕೊಂಡ. ಎನ್ನ ತೊಟ್ಟುದ ಬಿಡಿಸಿದ. ಎನ್ನ ಲಜ್ಜೆ ನಾಚಿಕೆಯ ತೊರೆಸಿದ. ಎನ್ನ ಮೌನದಲ್ಲಿರಿಸಿ, ಎನ್ನ ಕರವಿಡಿದು ಕರೆದುಕೊಂಡು, ತಾನುಂಬ ಪರಿಯಾಣದಲ್ಲಿ ಎನ್ನ ಕೂಡಿಕೊಂಡು ಉಂಡನು ಕೇಳಿರವ್ವಾ ನಮ್ಮ ಅಖಂಡೇಶ್ವರನು.

೬೮

ಎನ್ನ ನಲ್ಲನ ಕೂಡಿದ ಸುಖದ ಸುಗ್ಗಿಯನೇನೆಂಬೆ ಕೇಳಾ ಕೆಳದಿ? ಸುಖದ ಸವಿಗೆ ಸ್ರವಿಸಿ ಹರಿಯಿತ್ತು. ಹೇಳಲು ನಾಚಿಕೆ. ಕೇಳಲು ನಾಚಿಕೆ. ಕೇಳು ಕೆಳದಿ. ಸುಖದ ರಸ ಮಡುಗಟ್ಟಿದಲ್ಲಿ ಉರಿಲಿಂಗದೇವನ ಕೂಡಿ ಸುಖಸಾಗರದಲ್ಲಿ ಕ್ರೀಡಿಸುತಿರ್ದೆ ಕೆಳದಿ!

೬೯

ನಲ್ಲನ ಕೂಡುವ ಭರದಲ್ಲಿ ಎನ್ನುವ ಇದಿರುವನೇನೆಂದರಿಯೆ. ನಲ್ಲನ ಕೂಡುವಾಗಲು ಎನ್ನುವ ನಲ್ಲನ ಏನೆಂದರಿಯೆ. ಉರಿಲಿಂಗದೇವನ ಕೂಡಿದ ಬಳಿಕ ನಾನೋ ತಾನೋ ಏನೆಂದರಿಯೆ.

೭೦

ಹಾಡುವೆ ನಲ್ಲನ, ಬೇಡುವೆ ನಲ್ಲನ, ಕೂಡುವೆ ನಲ್ಲನ ನಿಚ್ಚ ನಿಚ್ಚ ಕೇಳಾ ಕೆಳದಿ. ಅವನೇ ಸುಖನೆನಗೆ, ಅವನೇ ಸುಖನೆನಗೆ. ಅವನೇ ಪ್ರಾಣವು ಕೇಳಾ ಕೆಳದಿ. ಉರಿಲಿಂಗದೇವನೆನಗೆ ಸಂಜೀವನ ಕೇಳಾ ಕೆಳದಿ.

೭೧

ಇಂಬಿನ ಚುಂಬನವಮೃತಾಹಾರ. ಆಲಿಂಗನವೇ ಆಭರಣ. ಸೋಂಕೇ ಸುವಸ್ತ್ರ. ನೋಟವೇ ಕೂಟ. ಒಡನಾಟವೇ ಅಷ್ಟಭೋಗವೆನಗೆ. ಉರಿಲಿಂಗ ದೇವನ ಕೂಟ ಪರಾತ್ಪರ, ವಾಙ್ಮನೋತೀತ, ಪರಮ ಸುಖವನೇನೆಂಬೆನವ್ವಾ!

೭೨

ಪ್ರಾಣವು ಲಿಂಗವ ನುಂಗಿತ್ತೋ, ಲಿಂಗವು ಪ್ರಾಣವ ನುಂಗಿತ್ತೋ ಎಂದರಿಯೆನಯ್ಯ. ಭಾವವು ಲಿಂಗದಲ್ಲಿ ತುಂಬಿತ್ತೋ, ಲಿಂಗವು ಮನದಲ್ಲಿ ಮುಳುಗಿತ್ತೋ ಎಂದರಿಯೆನಯ್ಯ. ಮನವು ಲಿಂಗದಲ್ಲಿ ಮುಳುಗಿತ್ತೋ, ಲಿಂಗವು ಮನದಲ್ಲಿ ಮುಳುಗಿತ್ತೋ ಎಂದರಿಯೆನಯ್ಯ. ಅಖಂಡೇಶ್ವರಾ, ನಿಮ್ಮ ಕೂಡುವ ವಿಕಳಾವಸ್ಥೆಯಲ್ಲಿ ಏನೇನೂ ಅರಿಯದಿರ್ದೆನಯ್ಯ!

೭೩

ಎಲೆ ಅವ್ವಾ, ಎನ್ನ ನಲ್ಲನ ಕೂಡಿದ ಕೂಟವನಿದಿರಿಂಗೆ ಹೇಳಬಾರದವ್ವಾ! ನೀವೆಲ್ಲಾ ನಿಮ್ಮ ನಲ್ಲನ ಕೂಡಿದ ಸುಖವ ಬಲ್ಲಂತೆ ಹೇಳಿ. ಉರಿಲಿಂಗದೇವ ಬಂದೆನ್ನ ಸಿರಿಯ ಸೆರಗ ಹಿಡಿಯಲೊಡನೆ, ನಾನೋ ತಾನೋ ಏನೆಂದರಿಯೆನವ್ವಾ.

೭೪

ನೋಡು ನೋಡಯ್ಯಾ ಗಂಡನೆ, ಎನ್ನ ಕಂಗಳುಪ್ಪರಿಗೆಯ ಮೇಲೆ ಕುಳ್ಳಿರ್ದು ಸಕಲ ವಿಚಿತ್ರವ. ಆಡು ಆಡಯ್ಯಾ ಗಂಡನೆ, ಎನ್ನ ಮನದ ಕೊನೆಯಲ್ಲಿ ಮಹಾಜ್ಞಾನದುಯ್ಯಾಲೆಯ ಕಟ್ಟಿ ಮನ ಬಂದ ಪರಿಯಲ್ಲಿ. ಕೂಡು ಕೂಡಯ್ಯಾ ಗಂಡನೆ, ಎನ್ನ ಸತ್ಕಲೆಗಳಿಂದ ಸವಿತೋರಿಸಿ ಅಖಂಡೇಶ್ವರಾ.

೭೫

ಪಂಚೇಂದ್ರಿಯದ ಉರುವಣೆಯಹುದು. ಮನದ ಭರದ ಜವ್ವನ ದೊಡಲು ವೃಥಾ ಹೋಯಿತ್ತಲ್ಲಾ! ತುಂಬಿ ಪರಿಮಳವನೆ ಕೊಂಡು ಲಂಬಿಸುವ ತೆರನಂತೆ, ಇನ್ನೆಂದಿಂಗೆ ಒಳಕೊಂಬೆಯೋ ಅಯ್ಯಾ ಚೆನ್ನಮಲ್ಲಿಕಾರ್ಜುನಾ?

೭೬

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ. ನಮ್ಮ ನಲ್ಲ ಸುಳಿಯಲಿಲ್ಲ; ಸುಳಿದು ಸಿಂಗಾರವ ಮಾಡಲಿಲ್ಲ! ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ.

೨. ಸ್ವ-ಭಾವ, ಸ್ವ-ಧರ್ಮ

೭೭

ಸತ್ತ ಬಳಿಕ ಮುಕ್ತಿಯ ಹಡೆದಹೆನೆಂದು ಪೂಜಿಸಹೋದರೆ ಆ ದೇವರೇನ ಕೊಡುವರೋ? ಸಾಯದೆ, ನೋಯದೆ, ಸ್ವತಂತ್ರನಾಗಿ ಸಂದುಭೇದವಿಲ್ಲದಿಪ್ಪ—ಗೊಹೇಶ್ವರಾ, ನಿಮ್ಮ ಶರಣ.

೭೮

ಬ್ರಹ್ಮಾದಿಗಳು ಲಿಂಗಕ್ಕೆ ದೂರಾಗಿ ಹೋದರು. ಅಹಮ್ಮಿಲ್ಲದ ಕಾರಣ–ಸಕಳೇಶ್ವರದೇವಯ್ಯಾ, ನಿಮ್ಮ ಶರಣರು ಜಗವಂದ್ಯರಾದರು.

೭೯

ವೇದ ಶಾಸ್ತ್ರ ಆಗಮ ಪುರಾಣ ತರ್ಕ ವ್ಯಾಕರಣ ಇತಿಹಾಸಂಗಳ ಓದಿ ಕೇಳಿ ಹೇಳುವಾತ ಜಾಣನೆ? ಅಲ್ಲಲ್ಲ. ಜಾತಿಗೊಂದು ಮಾತ ಕಲಿತು ಸರ್ವರಿಗೆ ನೀತಿ ಹೇಳುವಾತ ಜಾಣನೇ? ಅಲ್ಲಲ್ಲ. ಮತ್ತಾರು ಜಾಣರೆಂದಡೆ: ಮತ್ತಮತಿಯೆಂಬ ಕತ್ತಲೆಯ ಕಳೆದು, ತಥ್ಯ ಮಿಥ್ಯ ರಾಗ ದ್ವೇಷವನಳಿದು, ನಿತ್ಯ ಲಿಂಗದಲ್ಲಿ ಚಿತ್ತವಡಗಿರ್ಪ ಚಿನ್ಮಯಶರಣನೇ ಜಾಣನಯ್ಯಾ ಅಖಂಡೇಶ್ವರಾ.

೮೦

ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣ? ಶಿವನೇ ಚೈತನ್ಯಾತ್ಮನು, ಶಕ್ತಿಯೆ ಚಿತ್ತು. ಇಂತು ಚೈತನ್ಯಾತ್ಮಕನೆ ಚಿತ್ಸ್ವರೂಪನೆಂದರಿಯಬಲ್ಲಡೆ ಆತನೆ ಶರಣ ಗೊಹೇಶ್ವರ.

೮೧

ಬಯಲು ಬಯಲಲ್ಲಿ ಒಂದು ಮೃಗವು ಹುಟ್ಟಿತ್ತು. ಅದ ಕಂಡಿಹೆನೆಂಬರಿಗೆ ಕಾಣಬಾರದು. ಹೇಳಿಹೆನೆಂಬರಿಗೆ ಹೇಳಬಾರದು. ಅದು ಚಿದ್ರೂಪ ಚಿನ್ಮಯವು. ಅದು ಗೊತ್ತ ಮೆಟ್ಟ ಆಡುವದನರಿಯದೆ, ಕತ್ತಲೆಯಲ್ಲಿ ಮುಳುಗಿ, ಕಾಮನ ಬಾಧೆಗೆ ಸಿಲ್ಕಿ ಎತ್ತಲೆಂದರಿಯದೆ, ಭವಬಂಧನದಲ್ಲಿ ಮುಳುಗಿ, ಕಾಲನ ಬಾಧೆಗೊಳಗಾಗಿ, ಸತ್ತುಹುಟ್ಟುವ ಮನುಜರುಮತ್ತೆ ಶಿವಶರಣರ ಕೂಡಿ, ತತ್ವವ ಬಲ್ಲೆವೆಂದು ತರ್ಕಕ್ಕೆ ಬಾಹರು. ಇದು ಹುಸಿ, ನಮ್ಮ ಶರಣರು ಇದ ಮೆಚ್ಚರು. ತತ್ವವೆಂಬುದನೆ ಮೆಟ್ಟಿ, ಮಿಥ್ಯವ ನುಡಿವರ ತಮ್ಮ ಪುತ್ರರೆಂದು ಭಾವಿಸಿ, ಸತ್ತು ಹುಟ್ಟುವರನೊತ್ತರಿಸಿ, ನಿಶ್ಚಿಂತದಲ್ಲಿ ನಿಜವ ನೆಮ್ಮಿ, ಬಟ್ಟಬಯಲೊಳಗಣ ಮೃಗದ ಗೊತ್ತ ಮೆಟ್ಟಿ ಬಚ್ಚಬರಿಯ ಬೆಳಗಿನೊಳಗಾಡುವ ಶರಣರ, ಆ ಸತ್ತು ಮೆಟ್ಟಿ ಹೂಳಿಸಿಕೊಂಬ ಮಿಥ್ಯಾವಾದಿಗಳೆತ್ತ ಬಲ್ಲರು ನಿಮ್ಮ ನೆಲೆಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ?

೮೨

ನೋಡುವುದ ನೋಡಲರಿಯದೆ ಕೆಟ್ಟತ್ತೀ ಲೋಕವೆಲ್ಲ. ನೋಡುವುದ ನೋಡಬಲ್ಲಡೆ ಕೂಡಲಿಲ್ಲ, ಅಗಲಲಿಲ್ಲ. ನೋಟದ ಕೂಟದ ಅಗಲದ ಸುಖವನು—ಗೊಹೇಶ್ವರ, ನಿಮ್ಮ ಶರಣ ಬಲ್ಲ.

೮೩

ಹರದರಸಿಹೆನೆಂದರೆ ಮನದ ವಿಕಾರ. ಸುಳಿದರಸಿಹೆನೆಂದರೆ ಪವನ ವಿಕಾರ. ನಿಂದರಸಿಹೆನೆಂದರೆ ಕಾಯವಿಕಾರ. ಒಳಗರಸಿಹೆನೆಂದರೆ ಜ್ಞಾನ ವಿಕಾರ. ಅರಸಲಿಲ್ಲದೆ ಬೆರಸಬಲ್ಲಡೆ ಆತನೆ ಶರಣ ಗೊಹೇಶ್ವರ.

೮೪

ಅಂಗ ಲಿಂಗದಲ್ಲಿ ತರಹರವಾಗಿ, ಸಮತೆ ಶಾಂತಿಯಲ್ಲಿ ತರಹರವಾಗಿ, ಮನ ಜ್ಞಾನದಲ್ಲಿ ತರಹರವಾಗಿ, ಭಾವ ನಿರ್ಭಾವದಲ್ಲಿ ತರಹರವಾಗಿರಬಲ್ಲಡೆ ಆತನೇ ಅಚ್ಚ ಶರಣನು ಕಾಣಾ ಗೊಹೇಶ್ವರ.

೮೫

ತಾನಿದ್ದು ತನ್ನನರಿಯದೆ, ಇನ್ನೆಂದಿಂಗೆ ಶರಣನಪ್ಪನಯ್ಯ? ಪವನ ಸ್ಥಾನವನರಿದ ಬಳಿಕ, ಬಂದು ಬಂದು ಸುಳಿಯಲಿಲ್ಲ. ಇದರಂತುವನಾರು ಬಲ್ಲರು,—ಗೊಹೇಶ್ವರ, ನಿಮ್ಮ ಶರಣರಲ್ಲದೆ?

೮೬

ಕಾಯದ ಕಳವಳವ ಗೆಲಿದಡೇನೋ, ಮಾಯದ ತಲೆಯನರಿಯದನ್ನಕ್ಕರ? ಮಾಯೆಯ ತಲೆಯನರಿದಡೇನೋ, ಜ್ಞಾನದ ನೆಲೆಯನರಿಯದನ್ನಕ್ಕರ? ಜ್ಞಾನದ ನೆಲೆಯನರಿದಡೇನೋ, ತಾನು ತಾನಾಗದನ್ನಕ್ಕರ? ತಾನು ತಾನಾದ ಶರಣನ ನಿಲವಿಂಗೆ ಒಂದು ದಾರಿ ಮೇರೆಯುಂಟೆ ಗೊಹೇಶ್ವರ?

೮೭

ಶಿವ ಶಿವಾ, ನೀ ನಡೆಸಿದಂತೆ ನಡೆವೆ. ಶಿವ ಶಿವಾ, ನೀ ನುಡಿಸಿದಂತೆ ನುಡಿವೆ. ನಿಮ್ಮ ಊಳಿಗವ ಮಾಡುವೆ. ನೀವಿರಿಸಿದಲ್ಲಿ ಇರುವೆನಯ್ಯ ಅಖಂಡೇಶ್ವರಾ!

೮೮

ಯೋಗದಿಂದರಿದಿಹೆನೆಂಬಿರಿ. ಓದಿನಿಂದರಿದಿಹೆನೆಂಬಿರಿ. ವೇದದಿಂದರಿದಿಹೆನೆಂಬಿರಿ. ಶಾಸ್ತ್ರದಿಂದರಿದಿಹೆನೆಂಬಿರಿ. ಕೇಳಿರಣ್ಣಾ, ಯೋಗದಂತದು ಅಲ್ಲ, ಓದಿನಂತದು ಅಲ್ಲ, ವೇದದಂತದು ಅಲ್ಲ, ಶಾಸ್ತ್ರದಂತದು ಅಲ್ಲ. ಶರಣಸ್ಥಲ ಬೇರೆ. ಅದೆಂತೆಂದೊಡೆ, ಗಂಡಳಿದು ಹೆಣ್ಣಾಗಬೇಕು, ಹೆಣ್ಣಳಿದು ಗಂಡಾಗಬೇಕು. ಉಂಡೇನುಟ್ಟೇನೆಂಬ ಹಂಗಳಿದು, ಈ ಲೋಕದ ಸಂದೇಹವಳಿದ ಶರಣಂಗೆ ನಮೋ ನಮೋ ಎನುತಿರ್ದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೮೯

ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣವೆಂಬ ಬುದ್ಧೀಂದ್ರಿಯಂಗಳನರಿದು, ವಾಕ್ಕು ಪಾಣಿ ಪಾದ ಪಾಯು ಗುಹ್ಯವೆಂಬ ಕರ್ಮೇಂದ್ರಿಯವ ತೊರೆದು, ಗಂಧ ರಸ ರೂಪು ಸ್ಪರ್ಶನ ಶಬ್ದವೆಂಬ ಪಂಚೇಂದ್ರಿಯವ ಜರಿದು, ಮನ ಬುದ್ಧಿ ಚಿತ್ತ ಅಹಂಕಾರವೆಂಬ ಚತುಷ್ಟಯ ಕರಣಂಗಳ ಮೆಟ್ಟಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಅರಿಷಡ್ವರ್ಗಮಂ ಸುಟ್ಟು, ತನುವ್ಯಸನ ಮನವ್ಯಸನ ಧನವ್ಯಸನ ವಾಹನವ್ಯಸನ ಉತ್ಸಾಹವ್ಯಸನ ಸೇವಕವ್ಯಸನ ಮತ್ಸರವ್ಯಸನವೆಂಬ ಸಪ್ತವ್ಯಸನಂಗಳ ಸ್ವಪ್ನದಲ್ಲಿ ನೆನೆಯದೆ, ಪೃಥ್ವಿ ಅಪ್ಪು ಅಗ್ನಿ ವಾಯು ಆಕಾಶ ಚಂದ್ರ ಸೂರ್ಯರು ಆತ್ಮರೆಂಬ ಇಂತೀ ಅಷ್ಟಮದವ ಹಿಟ್ಟುಗುಟ್ಟಿ, ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ ಕ್ರಕರ ದೇವದತ್ತ ಧನಂಜಯವೆಂಬ ದಶವಾಯುವ ಕೆಡೆಮೆಟ್ಟಿ, ಸಂಸಾರವ ಒಡಹಾಯ್ದು, ಜಗವ ಹೊದ್ದದೆ, ತಾನೊಂದುಕಡೆಯಾಗಿ ನಿಂದು, ಮಾಯೆಗೆ ಒಡೆಯನಾಗಿ, ಆ ಮಹಾಘನವ ಸೂರೆಗೊಂಡ ಶರಣಂಗೆ ನಮೋ ನಮೋ ಎಂದು ಬದುಕಿದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ನಿಮ್ಮ ಧರ್ಮ, ನಿಮ್ಮ ಧರ್ಮ.

೯೦

ಮದ್ಯಮಾಂಸಾದಿಗಳ ಮುಟ್ಟೆವೆಂದೆಂಬಿರಿ, ನೀವು ಕೇಳಿರೇ. ಮದ್ಯವಲ್ಲದೇನು ಅಷ್ಟಮದಂಗಳು? ಮಾಂಸವಲ್ಲದೇನು ಸಂಸಾರಸಂಗ? ಈ ಉಭಯವನತಿಗಳೆದಾತನೆ ಗೊಹೇಶ್ವರಲಿಂಗದಲ್ಲಿ ಲಿಂಗೈಕ್ಯನು.

೯೧

ಎಸೆಯದಿರು ಎಸೆಯದಿರು; ಕಾಮಾ, ನಿನ್ನ ಬಾಣ ಹುಸಿಯಲೇಕೋ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇದು ಸಾಲದೆ ನಿನಗೆ? ಗೊಹೇಶ್ವರಲಿಂಗದ ವಿರಹದಲ್ಲಿ ಬೆಂದವರ ಮರಳಿ ಸುಡಲುಂಟೆ ಮರುಳು ಕಾಮಾ!

೯೨

ಭಕ್ತಿ ಜ್ಞಾನ ವೈರಾಗ್ಯ ತಪ್ಪದೆ, ಷಟ್‌ಸ್ಥಲಮಾರ್ಗದಿರವು ತಪ್ಪದೆ, ಜ್ಞಾನಕ್ರಿಯೆಗಳಲ್ಲಿ ಪ್ರೇಮ ತಪ್ಪದೆ, ಶರಣಸತಿ ಲಿಂಗಪತಿಯಾದ ಭಾವ ತಪ್ಪದೆ, ಇಷ್ಟ ಪ್ರಾಣ ಭಾವಲಿಂಗದ ಪೂಜೆ ತಪ್ಪದೆ, ಷಡ್ವಿಧ ಲಿಂಗಂಗಳಲ್ಲಿ ಅರ್ಪಿತಾವಧಾನ ತಪ್ಪದೆ, ತೀರ್ಥ ಪ್ರಸಾದದಲ್ಲಿ ಒಯ್ಯಾರ ತಪ್ಪದೆ, ಮಂತ್ರಂಗಳಒಡಮೆರೆದು ಲಿಂಗಸಂಧಾನ ತಪ್ಪದೆ, ಹಿಡಿದ ವ್ರತನೇಮಂಗಳಲ್ಲಿ ನಿಷ್ಠೆ ತಪ್ಪದೆ, ನಡೆದಂತೆ ನುಡಿದು ನುಡಿದಂತೆ ನಡೆವ ಭಾಷೆ ತಪ್ಪದೆ, ದ್ವೈತಾದ್ವೈತವ ನೂಂಕಿ, ಬರಿಯ ವೈರಾಗ್ಯವನೊಪ್ಪುಗೊಳ್ಳದೆ, ನಿಜ ವಿರಕ್ತಿಯ ಹೊಲಬು ತಪ್ಪದೆ, ಪಂಚೈವರೊಂದಾಗಿ ಸದ್ಯೋನ್ಮುಕ್ತಿಗೆ ಮನ ವಿಟ್ಟು ಅರ್ಥಿಯಿಂದ ಆಚರಿಸುವರಯ್ಯ ನಿಮ್ಮ ಶರಣರು ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೯೩

ಸರ್ವಸಂಗ ಪರಿತ್ಯಾಗಿ ಎಂದೊಡೆ, ಭೋಗಕ್ಕೆ ಮರುಗಿಸುವೆ. ಪಾಕ ನೇಮಿ ಎಂದೊಡೆ ಷಡ್ರಸಕ್ಕೆ ಆಶಿಸುವೆ. ಮೌನವ್ರತಿ ಎಂದೊಡೆ, ಸನ್ನೆಯಲ್ಲಿ ಬೇಡಿಸುವೆ. ಬ್ರಹ್ಮಚಾರಿ ಎಂದೊಡೆ, ಅಂಗನೆಯರಿಗೆರಗಿಸುವೆ. ಸಕಳೇಶ್ವರ ದೇವಾ, ಎನ್ನನಳಿವಾಡಿ ಕಾಡುವೆ.

೯೪

ನುಡಿವೆನು, ನುಡಿಯಲಂಜುವೆನಯ್ಯಾ! ಲಿಂಗದ ವಿನೋದಾರ್ಥವಾಗಿ ಗಮನವಂಕುರಿಸಿ, ಒಂದಾನೊಂದು ದೇಶಕ್ಕೆ ಹೋಗುತ್ತಿಪ್ಪಾಗ, ಅರಣ್ಯ ಮಧ್ಯದಲ್ಲಿ ಹಸಿವೆದ್ದು ಅಸುವನಂಡಲೆವುತಿರುವಲ್ಲಿ, ತೃಷೆಯೆದ್ದು ಮನವ

ಮತಿಗೆಡಿಸಿ, ಹಲ್ಲು ಹತ್ತಿ, ನಾಲಿಗೆ ತರಗಾಗಿ ಮೂರ್ಛೆಯಾಗುತಿರುವ ಸಮಯದಲ್ಲಿ, ಕರ್ಜೂರ ಮಾವು ಜಂಬೂಫಲಂಗಳೊಳಗಾದ ಎಲ್ಲ ಫಲಂಗಳು, ಕಾಯಮುಕ್ತಿ ಜೀವನ್ಮುಕ್ತಿಯೆಂಬ ಸಂಜೀವನರಸವ ತುಂಬಿ ಕೊಂಡು ವೃಕ್ಷಂಗಳಡಿಯಲ್ಲಿ ಬಿದ್ದಿರಲು, ಕಣ್ಣಿನಲ್ಲಿ ನೋಡಿ, ಮನದಲ್ಲಿ ಬಯಸಿ, ಕೈ ಮುಟ್ಟಿ ಎತ್ತಿದೆನಾದಡೆ, ಎನ್ನ ವಿರಕ್ತಿಯೆಂಬ ಪತಿವ್ರತಾ ಭಾವಕ್ಕೆ ಅದೇ ಹಾನಿ ನೋಡಾ. ಅದೇನು ಕಾರಣವೆಂದೊಡೆ: ಅಂಗ ಭೋಗ ಅನರ್ಪಿತ, ಲಿಂಗಭೋಗ ಪ್ರಸಾದವೆಂದು ಆದ್ಯರ ವಚನ ಸಾರು ತ್ತಿದ್ದಾವೆ ನೋಡಾ. ಇದು ಕಾರಣ, ಅನರ್ಪಿತವ ಭುಂಜಿಸಿ ತನುವ ರಕ್ಷಣವ ಮಾಡಿ, ಶುನಕನ ಬಸಿರಿನಲ್ಲಿ ಬಂದು, ಹೊಲೆಯರ ಬಾಗಿಲ ಕಾಯ್ದು ಹಲವಾಹಾರವನುಂಡು, ನರಕಕ್ಕಿಳಿಯಲಾರದೆ, ಮುಂದನರಿಯದೆ ನುಡಿದೆ ನಯ್ಯ! ಸತಿಯ ಭಾಷೆ ಪತಿಗೆ ತಪ್ಪದಯ್ಯ ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನಾ.

೯೫

ರತಿಯಿಂದ ರತ್ನ, ಗತಿಯಿಂದ ವಾದ್ಯ, ಸದ್ಗತಿಯಿಂದ ಮುಕ್ತಿ, ನಿರ್ಗತಿಯಿಂದ ವಿರಕ್ತಿ—ಈ ನಾಲ್ಕರ ಮತಿಯ ತಿಳಿಯಬೇಕೆಂದನಂಬಿಗ ಚೌಡಯ್ಯ.

೯೬

ಶಿವಯೋಗಿ ಭಿಕ್ಷವ ಕೊಂಬಲ್ಲಿ ಜಾತಿಸೂತಕವಿಲ್ಲದಿರಬೇಕು. ಆಚಾರ ಸಂಕಲ್ಪವಿಲ್ಲದಿರಬೇಕು. ಶಿವಂಗೆ ಸಲ್ಲದ ದ್ರವ್ಯಕ್ಕೆ ಕೈಯಾನದಿರಬೇಕು. ಇಂತೀ ಕ್ರಮವರಿದು, ಲಿಂಗನೈವೇದ್ಯ ಭಿಕ್ಷವ ಕೊಳಬಲ್ಲರೆ ಆತನೇ ಶರಣ ಸಕಳೇಶ್ವರ.

೯೭

ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ, ನೀವು ರಾದ ಭೇದವ ಹೇಳಿರಿ. ಅರಿಯದಿರ್ದಡೆ ಕೇಳಿರಿ. ತನುವಿನ ಕಾಂಕ್ಷೆಯ ಸುಟ್ಟುರುಹಿ, ಮನದ ಲಜ್ಜೆಯ ಮರೆದು, ಭಾವದ ಕ್ರಿಯೆಯ ಹೊಟ್ಟು

ಮಾಡಿ ತೂರಿ, ಸದ್ಭಕ್ತಿಯ ನಿಜನೈಷ್ಠೆಯ ತಿಳಿದು, ಸತಿಸುತಂಗೆ ಸದಾಚಾರ ಸನ್ಮಾರ್ಗವ ತೋರಿ, ನಿರ್ವಂಚಕದಿಂದ ಅರಿದಾಚರಿಸಬಲ್ಲಾತನೇ ಅಚ್ಚ ಶರಣ ನೋಡಾ ಕಲಿದೇವರ ದೇವಾ.

೯೮

ತಮತಮಗೆ ಸಮತೆಯ ಹೇಳಬಹುದಲ್ಲದೆ, ತಮತಮಗೆ ಸಮತೆಯ ನುಡಿಯಬಹುದಲ್ಲದೆ, ಕನಲಿಕೆಯ ಕಳೆದಿಪ್ಪರಾರು ಹೇಳಾ? ಒಬ್ಬರ ನೊಬ್ಬರು ಹಳಿಯದಿಪ್ಪವರಾರು ಹೇಳಾ? ಮುನಿಸ ಮುಂದಿಟ್ಟಿಪ್ಪರು. ಇದು ಯೋಗಿ ಮಹಾಯೋಗಿಗಳಿಗರಿದಪ್ಪುದು ನೋಡಾ. ಸಕಳೇಶ್ವರದೇವಾ, ನೀ ಕರುಣಿಸಿದವರಿಗಲ್ಲದಿಲ್ಲ.

೯೯

ಸದಮಲಭಕ್ತಿಯಿಂದ ಭಕ್ತ ನಮಸ್ಕರಿಸಿ, ಎನ್ನ ಕೈವಿಡಿದು ತನ್ನ ಮಠಕ್ಕೆ ಕರೆದೊಯ್ದು, ತಾನು ಪಟ್ಟಗದ್ದುಗೆಯ ಮೇಲೆ ಕುಳಿತು, ಚಿನ್ನದ ಪರಿಯಾಣದಲ್ಲಿ ಪಂಚಾಮೃತವನುಣುತ, ಎನ್ನ ಕದವಿನ ಮೂಲೆಯಲ್ಲಿ ಕುಳ್ಳಿರಿಸಿ, ಒಡೆದೋಡಿನಲ್ಲಿ ಅಂಬಲಿಯನೆರೆಯಲು-ಎಲೆ ದೇವ, ಎನ್ನ ಮನ ದಲ್ಲಿ ನೊಂದೆನಾದರೆ ನಾನು ಕರಪಾತ್ರನಲ್ಲ, ಅಪಾತ್ರನು. ಆದೇನು ಕಾರಣ ವೆಂದೊಡೆ: ನಾನು ಮೂರಾರು ತಿಂಗಳು ಜನನಿಯ ಜಠರವೆಂಬ ಸೆರೆಮನೆ ಯಲ್ಲಿ ಸಿಕ್ಕಿರುವಾಗ, ಎನಗೆ ಸದಾ ಉಣಲಿಟ್ಟು ಸಲಹಿದವ ನೀನೋ ಅವನೋ? ಆ ಸೆರೆಮನೆಯಿಂದ ಎನ್ನ ಕೈವಿಡಿದು ಕರೆತಂದು ಶಿವಲಾಂಛನ ಮಂ ಕರುಣದಿಂದಿತ್ತು, ಮರ್ತ್ಯಲೋಕದಲ್ಲಿ ಎನ್ನ ಪೂಜ್ಯನ ಮಾಡಿದಾತ ನೀನೋ ಅವನೋ? ಇದು ಕಾರಣ, ಇಕ್ಕುವಾತ ಅವನೆಂಬುದು ನನ್ನಲ್ಲಿಲ್ಲ. ಎಸೆದವನಿದ್ದಂತೆ ಅಂಬಿಗೆ ಮುನಿವರೆ ಅಯ್ಯ? ನಾನು ಉಂಡುಟ್ಟು ಸುಖಿ ಯಾದರೆ, ನಿನ್ನ ಹಾಡುವೆನು. ನಾನು ಹಸಿದು ನೊಂದೆನಾದರೆ, ನಿನ್ನ ಬಯ್ದೇನಲ್ಲದೆ, ಮಾನವರ ಹಂಗು ಎನಗೇತಕಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ ?

೧೦೦

ಸುಖವನನುಭವಿಸಿಯಾನು ಸುಖದ ಹದನ ಕಂಡೆ. ದುಃಖವನನು ಭವಿಸಿಯಾನು ದುಃಖದ ಹದನ ಕಂಡೆ. ಸಾಕೆಂದು ನಿಂದೆ ನಿಭ್ರಾಂತನಾಗಿ,

ಸಾಕೆಂದು ನಿಂದೆ. ಸಕಳೇಶ್ವರದೇವನಲ್ಲದೆ ಪೆರತೇನು ಇಲ್ಲೆಂದು ಸಾಕೆಂದು ನಿಂದೆ.

೧೦೧

ಸರ್ಪಂಗೆ ಪಿಕಂಗೆ ಒಪ್ಪದ ಮನೆಯುಂಟೆ? ಎನಗಾ ಹೆಚ್ಚು ಕುಂದೆಂಬ ಮಿಥ್ಯದ ಭಾವವಿಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೧೦೨

ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಂಗಳಿಗಂಜಿದಡೆಂತಯ್ಯ! ಸಮುದ್ರದ ತಡಿಯಲ್ಲಿ ಮನೆಯ ಮಾಡಿ, ನೊರೆತೆರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದಡೆಂತಯ್ಯ! ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ, ಲೋಕದೊಳಗೆ ಹುಟ್ಟಿರ್ದ ಬಳಿಕ, ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ, ಸಮಾಧಾನಿಯಾಗಿರಬೇಕು.

೧೦೩

ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಲಿ ಬೇಡ. ಹಿಂದುಮುಂದು ಆಡಲಿ ಬೇಡ, ಸಂದೇಹಗೊಳಲುಬೇಡ. ದ್ವಂದ್ವ ಬುದ್ಧಿಯ ಕಳೆದು ನಿಂದಿರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೦೪

ನಾನೆಂಬ ಅಹಂಕಾರದಲ್ಲಿ ನಾನುಂಡೆನಾದಡೆ ಎನಗೆ ಭಂಗ. ಸ್ತುತಿ ನಿಂದೆಗೆ ನೊಂದೆನಾದಡೆ ಎನಗೆ ಭಂಗ; ಅಂಗೈಯೊಳಗಿರ್ದ ಗೊಹೇಶ್ವರ ಲಿಂಗಕ್ಕೆ ದೂರ ಕಾಣಾ ಸಂಗನಬಸವಣ್ಣಾ.

೧೦೫

ನೀರನೀಸುವ ದೇಹ ಬಳಲುವುದಲ್ಲದೆ, ನೀರು ಬಳಲುವುದೆ? ಸಮಯವ ನುಡಿದಡೆ ಸಮಯಕ್ಕೆ ನೋವಲ್ಲದೆ, ಗೊಹೇಶ್ವರಲಿಂಗಕ್ಕೆ ಭ್ರಮೆಯಿಲ್ಲ ಸಂಗನಬಸವಣ್ಣಾ.

೧೦೬

ಸುರಿವ ಜಲಕ್ಕೆ ನೆಲೆಹೊಲೆಯೆಂದು ಪ್ರಮಾಣಿಸಬಹುದೆ? ಉರಿವ ಅನಲಂಗೆ ಶತಡೊಂಕು ಸಸಿನವೆಂಬುದುಂಟೆ? ಗೊಹೇಶ್ವರಲಿಂಗಕ್ಕೆ ಲೇಸು ಕಷ್ಟವೆಂಬುದಿಲ್ಲ ಸಂಗನಬಸವಣ್ಣಾ.

೧೦೭

ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ. ಮನದ ಭಂಗವ ಅರಿವಿನ ಮುಖದಲ್ಲಿ ಗೆಲಿದೆ. ಜೀವನ ಭಂಗವ ಶಿವಾನುಭವದಿಂದ ಗೆಲಿದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ. ಚೆನ್ನ ಮಲ್ಲಿಕಾರ್ಜುನ ಕಾಮನ ಕೊಂದು ಮನುಸಿಜನಾಗುಳುಹಿದರೆ, ಮನಸಿಜನ ತಲೆಯ ಬರಹವ ತೊಡೆದೆನು.

೧೦೮

ಕಾಯದ ಕಳವಳದಲ್ಲಿ ಕಂಗೆಡುವನಲ್ಲ ಶರಣ. ಜೀವನುಪಾಧಿಕೆಯ ಹೊದ್ದುವನಲ್ಲ ಶರಣ. ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ. ಮನದ ಮರವೆಯಲ್ಲಿ ಮಗ್ನನಲ್ಲ ಶರಣ. ಕರಣಂಗಳ ಕತ್ತಲೆಯಲ್ಲಿ ಸುತ್ತಿ ಬೀಳುವ ನಲ್ಲ ಶರಣ. ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ. ಪರತರ ಲಿಂಗದ ಬೆಳಗಿನೊಳಗೆ ಬೆರೆದು, ತೆರಹಿಲ್ಲದೆ ಬೆಳಗುವ ಪರಮಗಂಭೀರ ಶರಣನ ನಿಲವಿಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.

೧೦೯

ಅಂತರಂಗದಲ್ಲಿ ಅಖಂಡ ಪರಿಪೂರ್ಣಜ್ಞಾನದ ನಿಲವನರಿದು, ಬಹಿ ರಂಗದಲ್ಲಿ ಸತ್ಯ ಸದಾಚಾರವನಳವಡಿಸಿಕೊಂಡು, ಹಿಂದುಮುಂದಣ ಶಂಕೆಯ ಹರಿದು, ಆನಂದವೇ ಒಡಲಾಗಿ, ಅಭೇದ್ಯಲಿಂಗದ ಬೆಳಗಿನಲ್ಲಿ ಸುಳಿವ ಅಪ್ರ ಮಾಣ ಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೧೧೦

ದರ್ಪಣದೊಳಗಣ ರೂಪಿಗೆ ಚೇಷ್ಟಾಭಾವ ಉಂಟೆಂದಡೆ, ನೋಡು ವಾತನ ಚೇತನದಿಂದಲ್ಲದೆ ಅದಕ್ಕೆ ಬೇರೆ ಚೇತನ ಉಂಟೆ ಅಯ್ಯ? ಎನ್ನ

ಕರಣೇಂದ್ರಿಯಂಗಳು ಚೇಷ್ಟಿಸಿದುವೆಂದಡೆ, ನಿಮ್ಮ ಚೇತನದಿಂದಲ್ಲದೆ ಅವಕೆ ಬೇರೆ ಚೇತನ ಉಂಟೆ ಅಯ್ಯ ? ಸೂತ್ರದ ಬೊಂಬೆಯಂತೆ, ನೀನಾಡಿಸಿದಂತೆ ನಾನಾಡುತಿರ್ಪೆನಯ್ಯ ಅಖಂಡೇಶ್ವರಾ.

೧೧೧

ಶ್ವೇತ ಪೀತ ಕಪೋತ ಹರಿತ ಕೃಷ್ಣ ಮಾಂಜಿಷ್ಠವೆಂಬ ಷಡುವರ್ಣವೆಂದೆನ್ನ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯೆಂದೆನ್ನ. ಲಿಂಗ ವಿಂತುಟೆನ್ನ. ಲಿಂಗೈಕ್ಯವ ನುಡಿಯ. ಅಭಂಗನ ನಿಲವ ಭಂಗಿತರೆತ್ತಬಲ್ಲರು ಗೊಹೇಶ್ವರಾ ?

೧೧೨

ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಸಂಗವ ಮಾಡನಾ ಶರಣ. ನಯನದ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಅನ್ಯವ ನೋಡನಾ ಶರಣ. ಶ್ರೋತ್ರದ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಅನ್ಯವ ಕೇಳನಾ ಶರಣ. ಘ್ರಾಣದ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಅನ್ಯವ ವಾಸಿಸನಾ ಶರಣ. ಜಿಹ್ವೆಯ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಅನ್ಯವ ರುಚಿಸನಾ ಶರಣ. ಅದೇನು ಕಾರಣವೆಂದೊಡೆ, ಕೂಡಲಚೆನ್ನಸಂಗಯ್ಯ, ನಿಮ್ಮ ಶರಣ ಸರ್ವಾಂಗಲಿಂಗಿಯಾದ ಕಾರಣ.

೧೧೩

ಎನ್ನ ನಡೆವ ನಡೆಗಳೆಲ್ಲ ನಿಮ್ಮ ನಡೆಗಳಯ್ಯಾ. ಎನ್ನ ನುಡಿವ ನುಡಿಗಳೆಲ್ಲ ನಿಮ್ಮ ನುಡಿಗಳಯ್ಯಾ. ಎನ್ನ ನೋಡುವ ನೋಟವೆಲ್ಲ ನಿಮ್ಮ ನೋಟವಯ್ಯಾ. ಎನ್ನ ಕೇಳುವ ಕೇಳಿಕೆಯಲ್ಲ ನಿಮ್ಮ ಕೇಳಿಕೆಯಯ್ಯಾ. ನಾನು ಆವಾವ ಪರಿಯಲ್ಲಿ ಆಡುವ ಆಟಗಳೆಲ್ಲಾ ನಿಮ್ಮ ಬೆಡಗಿನ ರೀತಿಯಯ್ಯಾ ಅಖಂಡೇಶ್ವರಾ !

೧೧೪

ನಡೆವ ಕಾಲದಲ್ಲಿ ನಿಮ್ಮ ಕೂಡೆ ನಡೆವೆನಯ್ಯಾ. ನುಡಿವ ಕಾಲದಲ್ಲಿ ನಿಮ್ಮ ಕೂಡೆ ನುಡಿವೆನಯ್ಯಾ. ಹಿಡಿವ ಕಾಲದಲ್ಲಿ ನಿಮ್ಮ ಕೂಡೆ ಹಿಡಿವೆ

ನಯ್ಯಾ. ಬಿಡುವ ಕಾಲದಲ್ಲಿ ನಿಮ್ಮ ಕೂಡೆ ಬಿಡುವೆನಯ್ಯಾ. ನೋಡುವ ಕಾಲದಲ್ಲಿ ನಿಮ್ಮ ಕೂಡೆ ನೋಡುವೆನಯ್ಯಾ. ಕೇಳುವ ಕಾಲದಲ್ಲಿ ನಿಮ್ಮ ಕೂಡೆ ಕೇಳುವೆನಯ್ಯಾ. ಸೋಂಕುವ ಕಾಲದಲ್ಲಿ ನಿಮ್ಮ ಕೂಡೆ ಸೋಂಕುವೆನಯ್ಯಾ. ವಾಸಿಸುವ ಕಾಲದಲ್ಲಿ ನಿಮ್ಮಕೂಡೆ ವಾಸಿಸುವೆನಯ್ಯಾ. ರುಚಿಸುವ ಕಾಲದಲ್ಲಿ ನಿಮ್ಮಕೂಡೆ ರುಚಿಸುವೆನಯ್ಯಾ. ನೆನೆವ ಕಾಲದಲ್ಲಿ ನಿಮ್ಮ ಕೂಡೆ ನೆನೆವೆನಯ್ಯಾ. ಮರೆವ ಕಾಲದಲ್ಲಿ ನಿಮ್ಮ ಕೂಡೆ ಮರೆವೆನಯ್ಯಾ. ಅರಿವ ಕಾಲದಲ್ಲಿ ನಿಮ್ಮ ಕೂಡೆ ಅರಿವೆನಯ್ಯಾ. ಇನಮಂಡಲಕಿರಣದಂತೆ ಸಕಲ ತೋರಿಕೆಯ ತೋರುವ ಕಾಲದಲ್ಲಿ ನಿಮ್ಮ ಕೂಡೆ ತೋರುವೆನಾಗಿ–ಅಖಂಡೇಶ್ವರಾ, ನಿಮ್ಮಲ್ಲಿ ಎನಗೆ ಸಹಭೋಜನವು ಸಮನಿಸಿತ್ತು ನೋಡಾ.

೧೧೫

ಲಿಂಗಾಂಗ ಸಾಮರಸ್ಯವನರಿಯದೆ, ಖಂಡಿತಬುದ್ಧಿಯಿಂದೆ ಲಿಂಗವ ಬೇರಿಟ್ಟುಕೊಂಡು, ಸಕಲ ಭೋಗೋಪಭೋಗವನು ಅರ್ಪಿಸಿದೆವೆಂಬ ಭಂಗಗೇಡಿಗಳ ಮಾತ ಕೇಳಲಾಗದು. ಅದೆಂತೆಂದೊಡೆ: ಆ ಲಿಂಗಕ್ಕೆ ಶರಣನಂಗದ ಮಜ್ಜನ ಸುಖವಲ್ಲದೆ, ಬೇರೆ ಮಜ್ಜನ ಸುಖವುಂಟೆ? ಆ ಲಿಂಗಕ್ಕೆ ಶರಣನ ಲಲಾಟದ ಶ್ರೀವಿಭೂತಿ ಗಂಧಾಕ್ಷತೆಯ ಶೃಂಗಾರವಲ್ಲದೆ, ಬೇರೆ ಶೃಂಗಾರವುಂಟೆ? ಆ ಲಿಂಗಕ್ಕೆ ಶರಣನ ಕರ್ಣದಲ್ಲಿಯ ಪಂಚಮಹಾವಾದ್ಯದ ಕೇಳಿಕೆಯಲ್ಲದೆ, ಬೇರೆ ಕೇಳಿಕೆಯುಂಟೆ? ಆ ಲಿಂಗಕ್ಕೆ ಶರಣನ ಜಿಹ್ವೆಯಲ್ಲಿಯ ಷಡುರಸಾನ್ನದ ನೈವೇದ್ಯವಲ್ಲದೆ, ಬೇರೆ ನೈವೇದ್ಯವುಂಟೆ? ಆ ಲಿಂಗಕ್ಕೆ ಶರಣನ ಕಂಗಳಲ್ಲಿಯ ನಾನಾವಿಚಿತ್ರರೂಪಿನ ವಿನೋದವಲ್ಲದೆ, ಬೇರೆ ವಿನೋದವುಂಟೆ? ಆ ಲಿಂಗಕ್ಕೆ ಶರಣನ ತ್ವಕ್ಕಿನಲ್ಲಿಯ ವಸ್ತ್ರಾಭರಣದ ಅಲಂಕಾರವಲ್ಲದೆ, ಬೇರೆ ಅಲಂಕಾರವುಂಟೆ? ಆ ಲಿಂಗಕ್ಕೆ ಶರಣನ ಘ್ರಾಣದಲ್ಲಿಯ ಸುಗಂಧಪರಿಮಳವರ್ಪಿತವಲ್ಲದೆ, ಬೇರೆ ಅರ್ಪಿತವುಂಟೆ? ಆ ಲಿಂಗಕ್ಕೆ ಶರಣನ ಪರಮಹೃದಯಕಮಲವೆ ನಿಜವಾಸವಲ್ಲದೆ, ಬೇರೆ ನಿಜವಾಸವುಂಟೆ? ಇಂತೀ ಶರಣಸನ್ನಿಹಿತಲಿಂಗ, ಲಿಂಗಸನ್ನಿಹಿತಶರಣನೆಂಬುದನರಿಯದೆ, ಅನಂತಕಾಲ ಲಿಂಗವ ಧರಿಸಿಕೊಂಡು ಲಿಂಗಾಂಗಿಯೆನಿಸಿಕೊಂಡಡೇನು? ಅದು ಪಶುವಿನ ತೊಡೆಯಲ್ಲಿ ಬರೆದ ಮುದ್ರೆಯಂತೆ ಕಂಡೆಯಾ ಅಖಂಡೇಶ್ವರಾ.

೧೧೬

ಎನ್ನ ತನುವಿನೊಳಗೆ ತನುರೂಪಾಗಿರ್ದಿರಯ್ಯಾ ನೀವು. ಎನ್ನ ಮನದೊಳಗೆ ಮನರೂಪಾಗಿರ್ದಿರಯ್ಯಾ ನೀವು. ಎನ್ನ ಪ್ರಾಣದೊಳಗೆ ಪ್ರಾಣರೂಪಾಗಿರ್ದಿರಯ್ಯಾ ನೀವು. ಎನ್ನ ಭಾವದೊಳಗೆ ಭಾವರೂಪಾಗಿರ್ದಿರಯ್ಯಾ ನೀವು. ಎನ್ನ ಇಂದ್ರಿಯಂಗಳೊಳಗೆ ಇಂದ್ರಿಯಂಗಳ ರೂಪಾಗಿರ್ದಿರಯ್ಯಾ ನೀವು. ಎನ್ನ ವಿಷಯಂಗಳೊಳಗೆ ವಿಷಯಂಗಳ ರೂಪಾಗಿರ್ದಿರಯ್ಯಾ ನೀವು. ಎನ್ನ ತನು ಮನ ಪ್ರಾಣ ಭಾವ ಇಂದ್ರಿಯಂಗಳೆಲ್ಲವು ನಿಮ್ಮವಾಗಿ, ಇಂತು ಎನ್ನೊಳಗೆ ನೀವು ಈ ಪರಿಯಲ್ಲಿರ್ದಿರಾಗಿ, ನಾ ನಿಮ್ಮೊಳಗೆ ಚಿನ್ನಬಣ್ಣದಂತೆ, ರತ್ನ ದೀಪ್ತಿಯಂತೆ, ಜ್ಯೋತಿ ಪ್ರಭೆಯಂತಿರ್ದೆನಯ್ಯಾ ಅಖಂಡೇಶ್ವರಾ.

೧೧೭

ಶರಣ ಲಿಂಗಕ್ಕೆ ನೋಡುವ ಕಣ್ಣು ಒಂದಲ್ಲದೆ, ಎರಡಿಲ್ಲ ಕಾಣಿರೊ. ಶರಣ ಲಿಂಗಕ್ಕೆ ಕೇಳುವ ಶ್ರೋತ್ರ ಒಂದಲ್ಲದೆ, ಎರಡಿಲ್ಲ ಕಾಣಿರೊ. ಶರಣ ಲಿಂಗಕ್ಕೆ ವಾಸಿಸುವ ನಾಸಿಕ ಒಂದಲ್ಲದೆ, ಎರಡಿಲ್ಲ ಕಾಣಿರೊ. ಶರಣ ಲಿಂಗಕ್ಕೆ ರುಚಿಸುವ ಜಿಹ್ವೆ ಒಂದಲ್ಲದೆ, ಎರಡಿಲ್ಲ ಕಾಣಿರೊ. ಶರಣ ಲಿಂಗಕ್ಕೆ ಸೋಂಕುವ ತ್ವಕ್ಕು ಒಂದಲ್ಲದೆ, ಎರಡಿಲ್ಲ ಕಾಣಿರೊ. ಶರಣ ಲಿಂಗಕ್ಕೆ ನೆನೆವ ಮನ ಒಂದಲ್ಲದೆ, ಎರಡಿಲ್ಲ ಕಾಣಿರೊ. ನಮ್ಮ ಅಖಂಡೇಶ್ವರನಲ್ಲಿ ಒಡವೆರೆದ ಶರಣ ಲಿಂಗಕ್ಕೆ ಅಂಗ ಪ್ರಾಣಂಗಳೊಂದಲ್ಲದೆ, ಎರಡಿಲ್ಲ ಕಾಣಿರೊ.

೧೧೮

ವೇದವಾಕ್ಯ ವಿಚಾರಕ್ಕೆ ಬೀಜ. ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ. ಪುರಾಣವಾಕ್ಯ ಪುಣ್ಯಕ್ಕೆ ಬೀಜ. ಭಕ್ತಿಯ ಫಲ ಭವಕ್ಕೆ ಬೀಜ. ಏಕೋಭಾವದ ನಿಷ್ಠೆ ಸಮ್ಯಗ್‌ಜ್ಞಾನಕ್ಕೆ ಬೀಜ. ಸಮ್ಯಗ್‌ಜ್ಞಾನ ಅದ್ವೈತಕ್ಕೆ ಬೀಜ. ಅದ್ವೈತ ಅರಿವಿಂಗೆ ಬೀಜ. ಅರಿವನಾರಡಿಗೊಂಡು, ಕುರುಹಿಲ್ಲದ ಲಿಂಗದಲ್ಲಿ ತೆರಹಿಲ್ಲದಿಪ್ಪುದನರಿಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೧೯

ಹುಸಿಯುಳ್ಳಾತ ಭಕ್ತನಲ್ಲ. ಬಾಧೆಯುಳ್ಳಾತ ಜಂಗಮನಲ್ಲ. ಆಶೆಯುಳ್ಳಾತ ಶರಣನಲ್ಲ. ಇಂತಪ್ಪ ಆಶೆ ಹುಸಿ ಬಾಧೆಯ ನಿರಾಕರಿಸಿ ಇರಬಲ್ಲ–ಗೊಹೇಶ್ವರಾ, ನಿಮ್ಮ ಶರಣ.

೧೨೦

ಆಸೆಯುಳಿದು ನಿರಾಸೆಯಲ್ಲಿ ನಿಂದು, ವೇಷವು ಜರಿದು, ಸರ್ವವು ಮರೆದು, ಈ ಗುಣತ್ರಯವುಂ ತೊರೆದು ನಿರಾಸೆಯ ಮೇಲೆ ನಿಂದರೆ, ಅದೇ ಶರಣಂಗೆ ಸರಿ ಎಂಬೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೨೧

ಶಿವಂಗೆ ಐದು ಮುಖವಿರ್ಪುದ ಸಕಲರು ಬಲ್ಲರು. ಭಕ್ತಂಗೆ ಐದು ಮುಖವಿರ್ಪುದನಾರು ಅರಿಯರಲ್ಲ! ಆ ಭಕ್ತಂಗೆ ಗುರು ಒಂದು ಮುಖ. ಲಿಂಗ ಒಂದು ಮುಖ. ಜಂಗಮ ಒಂದು ಮುಖ. ಪಾದೋದಕ ಒಂದು ಮುಖ. ಪ್ರಸಾದ ಒಂದು ಮುಖ. ಇಂತೀ ಪಂಚಮುಖವನುಳ್ಳ ಸದ್ ಭಕ್ತನೇ ಸಾಕ್ಷಾತ್ ಪರಶಿವನು ತಾನೆ ನೋಡಾ ಅಖಂಡೇಶ್ವರಾ!

೧೨೨

ಲಿಂಗಮುಖವನರಿದವಂಗೆ ಅಂಗವೆಂಬುದಿಲ್ಲ. ಜಂಗಮಮುಖವನರಿದವಂಗೆ ಸಂಸಾರವೆಂಬುದಿಲ್ಲ. ಪ್ರಸಾದಮುಖವನರಿದವಂಗೆ ಇಹಪರವೆಂಬುದಿಲ್ಲ. ಈ ತ್ರಿವಿಧವು ಒಂದಾದವಂಗೆ ಮುಂದೇನು ಇಲ್ಲವಯ್ಯಾ. ಈ ತ್ರಿವಿಧದ ನೆಲೆಯ ಶ್ರುತಿ ಸ್ಮೃತಿ ಪುರಾಣಾಗಮ ಇತಿಹಾಸಂಗಳರಿಯವಯ್ಯಾ. ಎಲೆಲೆ ಕೂಡಲಚೆನ್ನಸಂಗಯ್ಯ, ನಿಮ್ಮ ಶರಣರೆ ಬಲ್ಲರಯ್ಯಾ!

೧೨೩

ದೇಹೇಂದ್ರಿಯ ಕರಣ ಜೀವ ಭಾವ ಅರಿವು, ಶಬ್ದ ಸ್ಪರ್ಶ ರೂಪು ರಸ ಗಂಧ, ಸ್ರಕ್ ಚಂದನ ವನಿತಾದಿ ಅಷ್ಟಭೋಗಂಗಳು ಲಿಂಗದಲ್ಲಿ ಮನಮುಟ್ಟಿ ನೆಟ್ಟಿರಲು, ಅದೇ ಅರ್ಪಿತ. ಅಂಗ ಲಿಂಗಾರ್ಪಿತವಾಗಿ, ಪರಿಣಾಮಪ್ರಸಾದ ಸಾಹಿತ್ಯವಯ್ಯ–ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಶರಣಂಗೆ.

೧೨೪

ವೇಷವನು ವೇಶಿಯುನು ಸರಿಯೆಂಬೆ. ವೇಷವು ಲೋಕವ ಹಾರುವದು, ವೇಶಿಯೂ ಲೋಕವ ಹಾರುವಳು. ವೇಷವ ಹೊತ್ತು ಲೋಕವ ಹಾರದಿದ್ದರೆ, ಆತನು ಈಶ್ವರನೆಂಬೆ ಕಾಣಾ ರಾಮನಾಥಾ.

೧೨೫

ಅಂತರಂಗದಲ್ಲಿ ಭವಿಯನೊಳಕೊಂಡು, ಬಹಿರಂಗದಲ್ಲಿ ಭಕ್ತಿಯನೊಳಕೊಂಡು, ಆತ್ಮಸಂಗದಲ್ಲಿ ಪ್ರಸಾದವನೊಳಕೊಂಡು ಇಪ್ಪ ಭಕ್ತರ ಕಾಣೆನಯ್ಯಾ. ನಾನು ಇಂತಪ್ಪ ಲಿಂಗೈಕ್ಯರ ಕಾಣೆನಯ್ಯ. ಅಂತರಂಗದಲ್ಲಿ ಸುಳಿದಾಡುವ ತನುಗುಣಾದಿಗಳ ಮನಗುಣಾದಿಗಳ ಪ್ರಾಣಗುಣಾದಿಗಳ ಕಳೆದಲ್ಲಿ ಶರಣರಹರೆ? ತನು ಮನ ಧನವ ಕೊಟ್ಟಲ್ಲಿ ಭಕ್ತರಹರೆ? ಉಂಬವರ ಕಂಡು ಕಯ್ಯ ನೀಡಿದಡೆ ಪ್ರಸಾದಿಗಳಹರೆ? ಅಂತರಂಗ ಬಹಿರಂಗ ಆತ್ಮಸಂಗ ಈ ತ್ರಿವಿಧ ಭೇದವ— ಗೊಹೇಶ್ವರಾ, ನಿಮ್ಮ ಶರಣ ಬಲ್ಲ.

೧೨೬

ಐವರ ಸಂಗದಿಂದ ಬಂದೆ ನೋಡಯ್ಯ. ಐವರ ಸಂಗದಿಂದ ನಿಂದೆ ನೋಡಯ್ಯ. ಐವರೂ ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು. ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ ! ಗೊಹೇಶ್ವರನೆಂಬ ನಿತ್ಯ ನಿರಂಜನ ರೂಪಿಲ್ಲದ ಘನವ ಕಂಡೆನಯ್ಯ.

೧೨೭

ಅಹಂಕಾರವನೆ ಮರೆದು, ದೇಹಗುಣಂಗಳನೆ ಜರೆದು, ಇಹಪರವೂ ತಾನೆಂದರಿದ ಕಾರಣ, ಸೋಹಂಭಾವ ಸ್ವಸ್ಥಿರವಾಯಿತ್ತು. ಸಹಜದುದಯದ ನಿಲವಿಂಗೆ ಮಹಾಘನಲಿಂಗದ ಬೆಳಗು ಸ್ವಾಯತವಾದ ಕಾರಣ, ಗೊಹೇಶ್ವರಾ ನಿಮ್ಮ ಶರಣನುಪಮಾತೀತನು.

೧೨೮

ಸ್ಥೂಲ ತನು, ಸೂಕ್ಷ್ಮ ತನು, ಕಾರಣ ತನು. ಸ್ಥೂಲತನುವಿನ ಮೇಲೆ ಇಷ್ಟಲಿಂಗ ಪ್ರತಿಷ್ಠೆ, ಸೂಕ್ಷ್ಮತನುವಿನ ಮೇಲೆ ಪ್ರಾಣಲಿಂಗ ಪ್ರತಿಷ್ಠೆ, ಕಾರಣತನುವಿನ ಮೇಲೆ ಭಾವಲಿಂಗ ಪ್ರತಿಷ್ಠೆ. ಇಂತೀ ಸ್ಥೂಲ ಸೂಕ್ಷ್ಮ

ಕಾರಣವೆಂಬ ಮಹವು, ಆ ಮಹದ ಹೃದಯದಲ್ಲಿ ಕೋನೆದೋರುತಿರ್ಪ ಜ್ಯೋತಿಯು ನಮ್ಮ ಶರಣರ ಸರ್ವಾಂಗದಲ್ಲುಂಟು ನೋಡಯ್ಯ ಕೂಡಲ ಚೆನ್ನಸಂಗಮದೇವಾ!

೧೨೯

ಅಂಗವೆಂದರೆ ಲಿಂಗದೊಳಡಗಿತ್ತು. ಲಿಂಗವೆಂದರೆ ಅಂಗದೊಳಡಗಿತ್ತು. ಅಂಗದೊಳಡಗಿದ ಲಿಂಗವನೆ ಕಂಗಳಲ್ಲಿ ಹೆರಹಿಂಗದೆ ನೋಡಿದರೆ, ಮಂಗಳದ ಮಹಾಬೆಳಗು ಕಾಣಿಸಿತ್ತು. ಇಂತಪ್ಪ ಮಂಗಳದ ಮಹಾಬೆಳಗು ತೋರಿದ ಶರಣನಂಘ್ರಿಗೆರಗಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೩೦

ಮಾಯದ ಬೊಂಬೆಯ ಮಾಡಿ, ಕಂಗಳಿಗೆ ಕಾಮನ ಬಾಣವ ಹೂಡಿ, ನಡೆನುಡಿಯೊಳಗೆ ರಂಜಕದ ತೊಡಿಗೆಯನೆ ತೊಡಿಸಿ, ಮುಂದುಗಾಣಿಸದೆ ಹಿಂದನರಸದೆ, ಲಿಂಗವ ಮರಹಿಸಿ ಜಂಗಮವ ತೋರಿಸದೆ, ಸಂದೇಹದಲ್ಲಿ ಸತ್ತು ಹುಟ್ಟುವ ಈ ಭವಬಂಧನಿಗಳೆತ್ತ ಬಲ್ಲರೋ ಈ ಶರಣರ ನೆಲೆಯ? ಅವರ ನೆಲೆ ತಾನೆಂತೆಂದರೆ: ಹಿಂದನರಿದು, ಮುಂದೆ ಲಿಂಗದಲ್ಲಿ ಬೆರೆವ ಭೇದವ ಕಂಡು, ಜಗದ ಜಂಗುಳಿಗಳ ಹಿಂಗಿ, ಕಂಗಳ ಕರುಳನೆ ಕೊಯಿದು, ಮನದ ತಿರುಳನೆ ಹುರಿದು, ಅಂಗ ಲಿಂಗವೆಂಬ ಉಭಯವಳಿದು, ಸರ್ವಾಂಗ ಲಿಂಗವಾಗಿ, ಮಂಗಳದ ಮಹಾಬೆಳಗಿನಲ್ಲಿ ಓಲಾಡುವ ಶರಣರ ನೆಲೆಯ ಜಗದ ಜಂಗುಳಿಗಳೆತ್ತಬಲ್ಲರು ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ?

೧೩೧

ಆಚಾರಲಿಂಗವಾಗಿ ಬಂದೆನ್ನ ಘ್ರಾಣೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು. ಗುರುಲಿಂಗವಾಗಿ ಬಂದೆನ್ನ ಜಿಹ್ವೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು. ಶಿವಲಿಂಗವಾಗಿ ಬಂದೆನ್ನ ನಯನೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು. ಜಂಗಮಲಿಂಗವಾಗಿ ಬಂದೆನ್ನ ತ್ವಗಿಂದ್ರಿಯವನೊಳಕೊಂಡಿರ್ಪಿರಯ್ಯ ನೀವು. ಪ್ರಸಾದಲಿಂಗವಾಗಿ ಬಂದೆನ್ನ ಶ್ರೋತ್ರೇಂ

ದ್ರಿಯವನೊಳಕೊಂಡಿರ್ಪಿರಯ್ಯ ನೀವು. ಮಹಾಲಿಂಗವಾಗಿ ಬಂದೆನ್ನ ಹೃದಯವನೊಳಕೊಂಡಿರ್ಪಿರಯ್ಯ ನೀವು. ಇಷ್ಟಲಿಂಗವಾಗಿ ಬಂದೆನ್ನ ತನುವನೊಳಕೊಂಡಿರ್ಪಿರಯ್ಯ ನೀವು. ಪ್ರಾಣಲಿಂಗವಾಗಿ ಬಂದೆನ್ನ ಮನವನೊಳಕೊಂಡಿರ್ಪಿರಯ್ಯ ನೀವು. ಭಾವಲಿಂಗವಾಗಿ ಬಂದೆನ್ನ ಆತ್ಮವನೊಳಕೊಂಡಿರ್ಪಿರಯ್ಯ ನೀವು. ಇಂತೆನ್ನ ಸರ್ವೇಂದ್ರಿಯಂಗಳು ನಿಮ್ಮಲ್ಲಿ ಸಮರಸವಾದುವಾಗಿ ನಾನು ನೀವೆಂಬುದಕ್ಕೆ ಭಿನ್ನವಲ್ಲವಯ್ಯ ಅಖಂಡೇಶ್ವರಾ.

೧೩೨

ಎನ್ನಲ್ಲಿ ನಾನು ದೃಷ್ಟವೆಂಬನ್ನಕ್ಕರ, ನಿಮ್ಮಲ್ಲಿ ನೀವು ಮೆಚ್ಚುವಿರೆ? ಸಂದೇಹದಿಂದ ಸವೆಯಿತ್ತು ಲೋಕ. ಕನ್ನಡಿಯುಂಡ ಬಿಂಬ, ಕಬ್ಬುನ ಉಂಡ ನೀರು, ಕಬ್ಬಿಸಿಲುಂಡ ಅರಿಸಿನದಂತೆ—ಗೊಹೇಶ್ವರ, ನಿಮ್ಮ ಶರಣರು.

೧೩೩

ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ, ಹೊನ್ನ ಮಾಡಬಲ್ಲಡೆ ಅದು ಪರುಷ ಕಾಣಿರಣ್ಣ! ಲಿಂಗ ಬಂದುಂಬಡೆ, ಪ್ರಸಾದಕಾಯವಪ್ಪಡೆ, ಅಂದಂದಿಂಗೆ ಭವಕರ್ಮ ಮುಟ್ಟಲಮ್ಮವು ಕಾಣಿರೇ! ಆದಿಯ ಪ್ರಸಾದಕ್ಕೆ ಬಾಧೆಯಿಲ್ಲ ಕಾಣಿರೇ! ಶಶಿಯಲ್ಲಿ ಕರಗದು, ಬಿಸಿಲಲ್ಲಿ ಕೊರಗದು, ರಸ ಉಂಡ ಹೊನ್ನು—ಗೊಹೇಶ್ವರ, ನಿಮ್ಮ ಶರಣ.

೧೩೪

ಅರಿವಿನಲ್ಲಿ ಉದಯಿಸಿ, ಮರಹು ನಷ್ಟವಾಗಿದ್ದ ಶರಣನ ಪರಿಯ ನರಸಲುಂಟೆ? ಗತಿಯ ಹೇಳಲುಂಟೆ? ಶಿಶು ಕಂಡ ಕನಸಿನಂತಿಪ್ಪರು—ಗೊಹೇಶ್ವರ, ನಿಮ್ಮ ಶರಣರು.

೧೩೫

ತನ್ನನರಿದ ಅರಿವೆಂತುಟೋ? ತನ್ನ ಮರೆದ ಮರಹೆಂತುಟೋ? ಅರಿದು ಮರೆದವರು ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ ಗೊಹೇಶ್ವರಾ.

೧೩೬

ಮಿಥ್ಯವನರಿದವರೆಲ್ಲ ತತ್ವಕ್ಕೆ ಅಂದೇ ಹೊರಗು. ತಥ್ಯವನರಿದ ಶರಣರು ಸತ್ತಂತೆ ಇರಬೇಕು. ತಥ್ಯ ಮಿಥ್ಯ ಎರಡಳಿದ ಶರಣಂಗೆ ಮತ್ತೊಂದು ಬಾರಿ ನಮೋ ನಮೋ ಎಂಬೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೩೭

ಕಂಗಳ ನೋಟ ಲಿಂಗಕ್ಕೆ ಭಾರ! ಅಂಗಜೀವಿಗಳ ಕೂಡೆ ನುಡಿವನೆ ಶರಣನು? ನಡೆನುಡಿಮುಗ್ಧ—ಗೊಹೇಶ್ವರ, ನಿಮ್ಮ ಶರಣನು.

೧೩೮

ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪುದಲ್ಲದೆ, ಮರ್ತ್ಯದ ಪಶುವಿನಲ್ಲಿ ಉಂಟೆ ಅಯ್ಯ? ಮಹಾಶೇಷನಲ್ಲಿ ಮಾಣಿಕ್ಯ ಪ್ರಭಾವಿಸುತಿಪ್ಪುದಲ್ಲದೆ, ಕೆರೆಯೊಳಗಣ ಒಳ್ಳೆಯಲ್ಲಿ ಉಂಟೆ ಅಯ್ಯ? ವಾರಣದ ಕುಂಭಸ್ಥಳದಲ್ಲಿ ಮೌಕ್ತಿಕ ಬೆಳಗುತ್ತಿಪ್ಪುದಲ್ಲದೆ, ಊರ ಹಂದಿಯಲ್ಲಿ ಉಂಟೆ ಅಯ್ಯ? ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು, ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ ವಚನವೆಂಬ ಪರಮಾಮೃತವ ಕರೆದು, ಕೆಲಬಲದ ಗಣಂಗಳಿಗೆ ಸವಿದೋರಿ, ಆ ಶರಣರಲ್ಲಿ ಪರಿಪೂರ್ಣವಾಗಿಪ್ಪನಲ್ಲದೆ, ದ್ವೈತಾದ್ವೈತಿಗಳೆಂಬ ಶುನಕ ಸೂಕರರಲ್ಲಿ ಉಂಟೆ ಅಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ?

೧೩೯

ಶರಣನೆನಿಸಿಕೊಂಬುವುದು ಅರಿದರಿದು ನೋಡಯ್ಯಾ. ಸತ್ಯವುಳ್ಳ ಸದ್ಭಕ್ತರೊಳಗಡಗಿರ್ದು, ತನ್ನ ಕುರುಹ ಲೋಕಕ್ಕೆ ತೋರದಂತಿರಬೇಕು. ಸಕಲಪ್ರಾಣಿಗಳ ಮೇಲೆ ರೋಷವಿಲ್ಲದಿರಬೇಕು. ಇಂತಪ್ಪ ಶಿವಶರಣರಲ್ಲಿ ಸನ್ನಿಹಿತನಯ್ಯಾ ನಮ್ಮ ಕೂಡಲಚೆನ್ನಸಂಗಮದೇವ.

೧೪೦

ಶರಣನ ಕಂಗಳೆ ಕಾಮಧೇನುವಿನ ಹಿಂಡು. ಶರಣನ ಹಸ್ತಂಗಳೆ ಕಲ್ಪವೃಕ್ಷದ ವನ. ಶರಣನ ಪಾದಂಗಳೆ ಚಿಂತಾಮಣಿಯ ರಾಶಿ. ಶರಣನ

ಬಾಯಿ ಸಂಜೀವನದ ಬಣವೆ. ನೀವೊಲಿದ ಶರಣನ ಮನವೆ ಪರುಷದ ಪರ್ವತವು ನೋಡಾ ಅಖಂಡೇಶ್ವರಾ!

೧೪೧

ಶರಣನ ಚರಣದಲ್ಲಿ ನಡೆಪರುಷ. ಶರಣನ ಕರದಲ್ಲಿ ಹಸ್ತಪರುಷ. ಶರಣನ ಜಿಹ್ವೆಯಲ್ಲಿ ರುಚಿಪರುಷ. ಶರಣನ ನೇತ್ರದಲ್ಲಿ ನೋಟಪರುಷ. ನಮ್ಮ ಅಖಂಡೇಶ್ವರನ ಶರಣನ ಮನದಲ್ಲಿ ಭಾವಪರುಷವಿರ್ಪುದು ನೋಡಿರೊ.

೧೪೨

ಇಕ್ಷುದಂಡಕ್ಕೆ ಕೀಳುಮೇಲಲ್ಲದೆ, ಸಕ್ಕರೆಯ ದಂಡಕ್ಕೆ ಕೀಳುಮೇಲುಂಟೆ? ಪರುಷಪಾಷಾಣಕ್ಕೆ ಕೀಳುಮೇಲಲ್ಲದೆ, ಕಡೆಯಾಣಿಗುಂಟೆ ಒರೆಗಲ್ಲು? ಉಂಟು ಇಲ್ಲ ಎಂಬ ಸಂದೇಹ ನಿಂದಲ್ಲಿ, ಗೊಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯಾ.

೧೪೩

ಕೈಯಲ್ಲಿ ದೊಣ್ಣೆ, ಮನದಲ್ಲಿ ಕ್ರೋಧ, ವಚನದಲ್ಲಿ ಕಿಂಕಿಲ, ಲಿಂಗದ ವಾರ್ತೆ ನಿನಗೇಕೆ ಹೇಳಾ ಬಸವ? ಜಂಗಮವೆ ಲಿಂಗವೆಂಬ ಶಬ್ದ ಸಂದೇಹ ಸೂತಕಿ ನೀನು, ಸಜ್ಜನ ಸದ್ಭಕ್ತಿಯ ಮಾತು ನಿನಗೇಕೆ ಹೇಳಾ ಬಸವ? ಕಬ್ಬುನದ ರೂಪು ಪರುಷವ ಮುಟ್ಟಿ ಹೊನ್ನಾಯಿತಲ್ಲದೆ, ಪರುಷವಪ್ಪುದೆ ಹೇಳಾ ಬಸವ? ಗೊಹೇಶ್ವರನೆಂಬ ಪರುಷದ ಪುತ್ಥಳಿಯನರಿಯಬಲ್ಲಡೆ, ತಿಳಿದು ನೋಡಾ ಸಂಗನ ಬಸವಣ್ಣಾ!

೧೪೪

ಕರೆಯದೆ ಬಂದುದ, ಹೇಳದೆ ಹೋದುದನಾರು ಬಲ್ಲರು? ಅಂದಂದಿಂಗೆ ಬಂದ ಪ್ರಾಣಿಗಳಾರೂ ಅರಿಯರಲ್ಲ! ಬಂದ ಬಂದವರೆಲ್ಲ ಮಿಂದುಂಡು ಹೋದರು. ಗೊಹೇಶ್ವರಲ್ಲಯ್ಯನುಣ್ಣದೆ ಹೋದುದನಾರೂ ಅರಿಯರಲ್ಲಾ.

೧೪೫

ಸಕಲಭುವನಾದಿ ಭುವನಂಗಳಿಗೆ ತಂದೆ. ಸಕಲ ದೇವಾದಿ ದೇವರ್ಕಳಿಗೆ ತಂದೆ. ಗೊಹೇಶ್ವರಲಿಂಗ ಸಿರಾಳದಲ್ಲಿ ನೀನೆನ್ನ ತಂದೆ.

೩. ಭಾವಪೂಜೆ

೧೪೬

ಮಲಿನದೇಹಕ್ಕೆ ಮಜ್ಜನವಲ್ಲದೆ, ನಿರ್ಮಲದೇಹಕ್ಕೆ ಮಜ್ಜನವೇಕೋ? ವಿಷಯವುಂಟೆ ಲಿಂಗನಿಷ್ಪತಿಯಾದ ಶರಣಂಗೆ? ಅಗಮ್ಯ ಅಗೋಚರ ಅಪ್ರಮಾಣ—ಗೊಹೇಶ್ವರ, ನಿಮ್ಮ ಶರಣ.

೧೪೭

ಅನಾದಿ ಶರಣ ಹೃತ್ಕಮಲಮಧ್ಯದ ತೇಜೋಮಯವನೇನೆಂದು ಪಮಿಸುವೆ? ಜಲವೆ ಪದಶಿಲೆ, ಪೃಥ್ವಿಯೆ ಪಿಂಡಿಗೆ, ಆಕಾಶವೆ ಲಿಂಗ, ಸಪ್ತ ಸಮುದ್ರಂಗಳೆ ಪಂಚಾಮೃತ, ಮೇಘವೆ ಅಗ್ಘವಣಿಯ ಬಿಂದಿಗೆ, ಮಳೆಗಾಲವೆ ಮಜ್ಜನ, ಚಂದ್ರಮನೆ ನೊಸಲುಗಂಧ, ನಕ್ಷತ್ರವೆ ಅಕ್ಷತೆ, ತರುಮರಾದಿಗಳೆ ಪತ್ರೆ ಪುಷ್ಪ, ಮೊಳಗೆ ಪಂಚ ಮಹಾಶಬ್ದ; ಮಾಗಿಯೆಂಬ ಪರಿಯಾಣವ ಬೆಳಗಿ, ಬೇಸಗೆಯೆಂಬ ಓಗರವ ಗಡಣಿಸಿ, ಸರ್ವಪರಿಮಳದ ತುಪ್ಪವನೆರೆದು, ಪರವೆಂಬ ಮೇಲೋಗರವನಿಕ್ಕಿ, ಬೆಳಗು ಕತ್ತಲೆಯೆಂಬ ಕನ್ನಡವ ಕಟ್ಟಿ, ಲಿಂಗವ ಆರೋಗಣೆಯ ಮಾಡಿಸಿ, ಸುಜ್ಞಾನದಲ್ಲಿ ಕೈಗೆರೆದು, ಭಾವವೆಂಬ ವೀಳೆಯವ ಕೊಟ್ಟು, ಆನುನೀನೆಂಬ ಅನುಲೇಪ ಗಂಧವ ಪೂಸಿ, ವಾಯುವೆಂಬ ವಸ್ತ್ರವನುಡಿಸಿ—ಎಲೆ, ಗೊಹೇಶ್ವರನೆಂಬ ಲಿಂಗ ಪರಿಪೂರ್ಣವಾಗಿದ್ದ ಬಳಿಕ, ಮಜ್ಜನಕ್ಕೆರೆವ ಠಾವಾವುದೈ ಸಂಗನ ಬಸವಣ್ಣ?

೧೪೮

ಘನ ಮಹಾಲಿಂಗಕ್ಕೆ ಮನವೆ ಪೀಠವಾಗಿ, ತನುವೆ ಶಿವಾಲಯವಾಗಿ, ನೆನಹೆ ಪೂಜೆಯಾಗಿ, ಧ್ಯಾನವೆ ತೃಪ್ತಿಯಾಗಿ, ಅಂಬುಧಿಯೊಳಗೆ ಮುಳುಗಿದ ಪೂರ್ಣ ಕುಂಭದಂತೆ, ನಿಮ್ಮ ಅವಿರಳ ದಿವ್ಯ ಮಹಾಬೆಳಗಿನೊಳಗೆ ಮುಳುಗಿ, ನಾನು ನೀನೆಂಬುಭಯದ ಕುರುಹ ಮರೆದು, ಏನೇನೂ ಅರಿಯದಿರ್ದೆನಯ್ಯಾ ಅಖಂಡೇಶ್ವರಾ.

೧೪೯

ಮಹಾಮೇರುವಿನ ಮರೆಯಲ್ಲಿದ್ದು, ಭೂತದ ನೆಳಲನಾಚರಿಸುವ ಕರ್ಮಿ ನೀ ಕೇಳಾ! ಮಹಾಲಿಂಗಕ್ಕೆ ಮಜ್ಜನವೆಂದೇನೋ? ಪರಿಮಳ ಲಿಂಗಕ್ಕೆ ಪತ್ರೆ ಪುಷ್ಪವೆಂದೇನೋ? ಜಗಜ್ಯೋತಿ ಲಿಂಗಕ್ಕೆ ಧೂಪ ದೀಪಾ ರತಿಯೆಂದೇನೋ? ಅಮೃತಲಿಂಗಕ್ಕೆ ಆರೋಗಣೆಯೆಂದೇನೋ? ಗೊಹೇಶ್ವರ ಲಿಂಗದಂತುವ ಬಲ್ಲವರಾರೋ?

೧೫೦

ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ. ಮತ್ತೆ ದೇವರ ಪೂಜಿಸುವರಾರೂ ಇಲ್ಲ. ಉತ್ತರಾಪಥದ ದರ್ಶನಾದಿಗಳಿಗೆ ಸುತ್ತಿ ಮುತ್ತಿದ ಮಾಯೆ ಎತ್ತಲಿಕ್ಕೆ ಹೋಯಿತ್ತು. ಮರನೊಳಗಣ ಕಿಚ್ಚು ಮರನ ಸುಟ್ಟುದ ಕಂಡೆ; ಗೊಹೇಶ್ವರನೆಂಬ ಲಿಂಗವಲ್ಲಿಯೆ ನಿಂದಿತ್ತು!

೧೫೧

ಹೊರಗನೆ ಕೊಯ್ದು, ಹೊರಗನೆ ಪೂಜಿಸಿದವರ ಕಂಡು ನಾಚಿ ದೆನಯ್ಯ! ಒಳಗೊಂದು ಅನಿಮಿಷಲಿಂಗವ ಕಂಡು, ಎನ್ನ ಮನೋಪುಷ್ಪ ದಲ್ಲಿ ಪೂಜೆಯ ಮಾಡಿದಡೆ, ನಾಚಿಕೆ ಮಾದು ನಿಸ್ಸಂದೇಹಿಯಾದೆನು ಗೊಹೇಶ್ವರಾ.

೧೫೨

ಮಜ್ಜನಕ್ಕೆರೆವಡೆ, ನೀನು ಶುದ್ಧ ನಿರ್ಮಲದೇಹಿ. ಪೂಜೆಯ ಮಾಡು ವಡೆ, ನಿನಗೆ ಗಗನಕಮಲ ಕುಸುಮದ ಅಖಂಡಿತ ಪೂಜೆ. ಧೂಪ ದೀಪಾರತಿ ಗಳ ಬೆಳಗುವಡೆ, ನೀನು ಸ್ವಯಂಜ್ಯೋತಿ ಪ್ರಕಾಶನು. ಅರ್ಪಿತವ ಮಾಡು ವಡೆ, ನೀನು ನಿತ್ಯ ತೃಪ್ತನು. ಅಷ್ಟವಿಧಾರ್ಚನೆಯ ಮಾಡುವಡೆ, ನೀನು ಮುಟ್ಟಬಾರದ ಘನವೇದ್ಯನು. ನಿತ್ಯನೇಮಂಗಳ ಮಾಡುವಡೆ, ನಿನಗನಂತ ನಾಮಂಗಳಾದವು ಗೊಹೇಶ್ವರಾ.

೧೫೩

ಮನ ಮುಟ್ಟದ ಮಜ್ಜನ, ತನು ತಾಗದ ದೇಹಾರ, ಭಾವ ತಾಗದ ಪೂಜೆ, ಎವೆ ತಾಗದ ನೋಟ, ವಾಯು ತಾಗದ ಲಿಂಗದ ಠಾವ ತೋರಾ ಗೊಹೇಶ್ವರಾ.

೧೫೪

ಸದ್ಯೋಜಾತಮುಖವೇ ಪೃಥ್ವಿ ಎಂದರಿದಲ್ಲಿ, ಸ್ಥಾವರಂಗಳಲ್ಲಿ ಪತ್ರೆ ಪುಷ್ಪದ ಹಂಗೇಕೆ? ವಾಮದೇವಮುಖವೇ ಅಪ್ಪುವೆಂದರಿದಲ್ಲಿ, ಅಗ್ಗವಣಿಯಲ್ಲಿ ಮಜ್ಜನಕ್ಕೆರೆವ ಹಂಗೇಕೆ? ಅಘೋರಮುಖವೇ ಅಗ್ನಿ ಎಂದರಿದಲ್ಲಿ, ಧೂಪದೀಪಾರತಿಗಳ ಹಂಗೇಕೆ? ತತ್ಪುರುಷ ಮುಖವೇ ವಾಯುವೆಂದರಿದಲ್ಲಿ, ಮಂತ್ರತಂತ್ರದ ಹಂಗೇಕೆ? ಈಶಾನಮುಖವೇ ಆಕಾಶವೆಂದರಿದಲ್ಲಿ, ಧ್ಯಾನ ಮೌನದ ಹಂಗೇಕೆ? ಇಂತೀ ಪಂಚಬ್ರಹ್ಮವೇ ಪರಬ್ರಹ್ಮವೆಂದರಿದ ಶರಣಂಗೆ ಸರ್ವ ಉಪಚಾರ ಸಂಕಲ್ಪವೇಕೆ ಹೇಳಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೧೫೫

ಗಗನವೇ ಗುಂಡಿಗೆ, ಆಕಾಶವೆ ಅಗ್ಘವಣಿ! ಚಂದ್ರ ಸೂರ್ಯರಿಬ್ಬರೂ ಪುಷ್ಪ ನೋಡಾ! ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸಯಧಾನ ನೋಡಾ! ಗೊಹೇಶ್ವರಲಿಂಗಕ್ಕೆ ಪೂಜೆ ನೋಡಾ!

೧೫೬

ನಚ್ಚುಮಚ್ಚಿಂಗೆ ಪೂಜಿಸಿ ನಿಶ್ಚಯವೆಂದೆನಲಿಲ್ಲ. ತಾನು ಲಿಂಗವೋ? ಪ್ರಾಣ ಲಿಂಗವೋ? ಆವುದು ಲಿಂಗ ಬಲ್ಲವರು ನೀವು ಹೇಳಿರೆ. ಅಂಗದಲ್ಲಿ ಸಂಗಿಯಲ್ಲ; ಸಂಗದಲ್ಲಿ ವ್ಯಸನಿಯಲ್ಲ. ಅಂಗವಿಲ್ಲದ ಸಂಗ—ಗೊಹೇಶ್ವರ, ನಿಮ್ಮ ಶರಣ.

೧೫೭

ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವ! ತಾಯೆ ಬಾರೆ, ಕುಮಾರನ ತಲೆಗಾಯಿ ಎಂಬಂತೆ, ಕಾಡ ಹೂ ಕೈಯ ಲಿಂಗವ ಪೂಜಿಸುವಾತನ ಭಕ್ತನೆಂಬರು. ಅಲ್ಲ. ತಾನು ಲಿಂಗ, ತನ್ನ ಮನವೆ ಪುಷ್ಪ, ಪೂಜೆಯ ಪೂಜಿಸುವಾತನೆ ಸದ್ಭಕ್ತನು ಗೊಹೇಶ್ವರ.

೧೫೮

ಬಯಲ ಉದಕವ ಹಿಡಿದು ಮಜ್ಜನಕ್ಕೆರೆವೆನಯ್ಯ. ಅಷ್ಟದಳ ಪುಷ್ಪ ಪೂಜೆಯ ಮಾಡುವೆನಯ್ಯ. ಸುಗಂಧ ದುರ್ಗಂಧವ ಕಳೆದು ಧೂಪಾರತಿಯ

ಮಾಡುವೆನಯ್ಯ. ಪರಬ್ರಹ್ಮವ ಹಿಡಿದು ನಿವಾಳಿಯನೆತ್ತುವೆನಯ್ಯ. ಪುಣ್ಯ ಪಾಪವ ಕಳೆದೋಗರವನಿಕ್ಕುವೆನಯ್ಯಾ. ಹದಿನಾಲ್ಕುಭುವನವನೊಳಗು ಮಾಡಿ, ಹೊರಗೆ ನಿಂದು ಸದಾಶಿವನ ಪೂಜಿಸಿದಾತನಂಬಿಗಚೌಡಯ್ಯ.

೧೫೯

ಅಂಗೈಯೊಳಗಣ ಸಿಂಹಾಸನವೆಂದೇನೋ? ಅಂಗೈಯ ಮೇಲೆ ಸಿಂಹಾಸನವೆಂದೇನೋ? ಧೂಪ ದೀಪ ನಿವಾಳಿಯೆಂದೇನೋ? ಶರಣಂಗೆ ಕಳಶದ ಮೇಲೆ ನೆಲೆಗಟ್ಟೆಂಬುದೇನೋ? ಗೊಹೇಶ್ವರನೆಂಬ ನಿರಾಳ!

೧೬೦

ಕಾಯವೇ ಕೈಲಾಸವಾಗಿ, ಮನವೇ ಮಹಾಲಿಂಗವಾಗಿ, ಭಾವವೇ ಅವಿರಳ ಪುಷ್ಪದ ಪೂಜೆಯಾಗಿ, ಅಖಂಡ ಪರಿಪೂರ್ಣ ಜ್ಞಾನದ ಬೆಳಗಿನೊಳಗೆ ಸುಳಿವ ಮಹಾಶರಣರ ತೋರಿಸಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ!

೪. ಸುಳುಹು

೧೬೧

ಸತ್ಯವಚನವ ನುಡಿಯಬಲ್ಲರೆ ಶರಣನೆಂಬೆನು. ಸದಾಚಾರದಲ್ಲಿ ನಡೆಯಬಲ್ಲರೆ ಶರಣನೆಂಬೆನು. ವೃತ್ತಿಜ್ಞಾನವಳಿದು, ಚಿತ್ತದ ಕೊನೆಯ ಮೊನೆಯಲ್ಲಿ ನಿತ್ಯಲಿಂಗದ ನೆನಹು ತುಂಬಿ ಸುಳಿಯಬಲ್ಲರೆ, ಅಚ್ಚ ಶರಣನೆಂಬೆನಯ್ಯ ಅಖಂಡೇಶ್ವರಾ.

೧೬೨

ಸಂಸಾರಸಂಗವ ಭೇದಿಸಿ ನೋಡುವಡೆ ದೂರವೆ? ಕಪಟ ಕನ್ನಡವೆ? ರವಿಯ ತಪ್ಪಿಸಿ ಸುಳಿವ ಗೊಹೇಶ್ವರನೆಂದರಿದ ಶರಣ ಸಂಸಾರಿಯೆ?

೧೬೩

ಸುಳಿಯಬಲ್ಲಡೆ ಸುಳುಹೆ ಲೇಸಯ್ಯ. ಗಮನವಿಲ್ಲದೆ ಸುಳಿಯಬಲ್ಲಡೆ, ನಿರ್ಗಮನಿಯಾಗಿ ನಿಲಬಲ್ಲಡೆ, ಅದಕ್ಕದೆ ಪರಿಣಾಮ; ಅದಕ್ಕದೆ ಸಂತೋಷ. ಗೊಹೇಶ್ವರಲಿಂಗದಲ್ಲಿ ಅವರ ಜಗದಾರಾಧ್ಯರೆಂಬೆನು.

೧೬೪

ಊಷ್ಮದ ಒರತೆಯಂತೆ, ಉರಿಯ ನೆಳಲಂತೆ, ಮಂಜಿನ ಮಳೆಯಂತೆ, ಬಿಸಿಲ ಕುದುರೆಯಂತೆ, ಬೆಟ್ಟದ ಶಬ್ದದಂತೆ ಸುಳಿವ–ಸಿದ್ಧಸೋಮನಾಥ ಲಿಂಗ, ನಿಮ್ಮ ಶರಣ!

೧೬೫

ಕುಲಸ್ವಾಮಿ, ನೀ ನಿಂದ ಹೆಜ್ಜೆಯಲ್ಲದೆ ನಾನೊಂದು ಹೆಜ್ಜೆಯನಿಡೆ ನಯ್ಯ. ಎನಗೊಂದು ಹೆಜ್ಜೆ ಇಲ್ಲ. ನಿನ್ನ ಹೆಜ್ಜೆ ಎನ್ನ ಹೆಜ್ಜೆ ಒಂದಾದ ಭೇದವ ಜಗದನ್ಯಾಯಿಗಳೆತ್ತಬಲ್ಲರೈ ರಾಮನಾಥಾ?

೧೬೬

ಬಯಲ ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ ಸುಳಿವಾತನ ಬೆಡಗ ಬಲ್ಲವರಾರೈ ರಾಮನಾಥಾ?

೧೬೭

ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯಾ? ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದರೇನಯ್ಯಾ? ಸುಚರಿತ್ರರು ಎಂತಿರ್ದರೇನಯ್ಯಾ? ಅವಲೋಹವ ಕಳೆವ ಪರುಷ ಎಂತಿದ್ದ ರೇನಯ್ಯಾ? ಕೂಡಲಸಂಗನ ಶರಣರು, ರಸದ ವಾರುಧಿಗಳು, ಎಂತಿರ್ದ ರೇನಯ್ಯಾ?

೧೬೮

ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ!

೧೬೯

ಪೃಥ್ವಿಯಲೊದಗಿದ ಘಟವು ಪೃಥ್ವಿಯಲಡಗಿದರೆ, ಆ ಪೃಥ್ವಿಯ ಚರಿತ್ರವೆ ಚರಿತ್ರ ನೋಡಾ! ಅಪ್ಪುವಿನಲೊದಗಿದ ಘಟವು ಅಪ್ಪುವಿನಲಡಗಿದರೆ, ಆ ಅಪ್ಪುವಿನ ಚರಿತ್ರವೆ ಚರಿತ್ರ ನೋಡಾ! ತೇಜದಲೊದಗಿದ ಘಟವು ತೇಜದಲಡಗಿದರೆ ಆ ತೇಜದ ಚರಿತ್ರವೆ ಚರಿತ್ರ ನೋಡಾ! ವಾಯುವಿನಲೊದಗಿದ ಘಟವು ವಾಯುವಿನಲಡಗಿದರೆ, ಆ ವಾಯುವಿನ ಚರಿತ್ರವೆ ಚರಿತ್ರ ನೋಡಾ! ಆಕಾಶದಲೊದಗಿದ ಘಟವು ಆಕಾಶದಲಡಗಿದರೆ, ಆ ಆಕಾಶದ ಚರಿತ್ರವೆ ಚರಿತ್ರ ನೋಡಾ! ಗೊಹೇಶ್ವರನೆಂಬ ಲಿಂಗದಲೊದಗಿದ ಘಟವು ಲಿಂಗದಲಡಗಿದರೆ, ಆ ಲಿಂಗದ ಚರಿತ್ರವೆ ಚರಿತ್ರ ನೋಡಾ!!

೧೭೦

ನೋಡಿಹೆನೆಂದರೆ ನೋಟವಿಲ್ಲ. ಕೇಳಿಹೆನೆಂದರೆ ಕಿವಿ ಇಲ್ಲ. ವಾಸಿಸಿಹೆನೆಂದರೆ ನಾಸಿಕವಿಲ್ಲ. ನುಡಿದಿಪೆನೆಂದರೆ ಬಾಯಿಲ್ಲ. ಹಿಡಿದಿಹೆನೆಂದರೆ ಹಸ್ತವಿಲ್ಲ. ನಡೆದಿಹೆನೆಂದರೆ ಮನವಿಲ್ಲ. ಇಂತು ನೆನಹು ನಿಷ್ಪತ್ತಿಯಾಗಿ, ಶರಣರ ಪಾದದಲ್ಲಿಯೆ ಬೆರೆದು ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣಾ.

೧೭೧

ಜ್ಞಾನಚಕ್ರ: ಪರಮತತ್ವ ಪರಮಾರ್ಥ ಪರಮಜ್ಞಾನ ಪರಾಪರ ವಾಙ್ಮನಕ್ಕಗೋಚರ ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವ ಜ್ಞಾನಜ್ಯೋತಿ ಸುಜ್ಞಾನದ ಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಪರಮಾನಂದದ ಮಹಾಮಹಿಮಂಗೆ ಶಿವಜ್ಞಾನವೆ ಶೃಂಗಾರ, ಮಹಾ ಬೆಳಗೆ ವಿಭೂತಿ, ಪಂಚಬ್ರಹ್ಮವೆ ದರುಶನ, ಗಗನಸ್ಥಾನವೆ ಕಂಥೆ, ಆಕಾಶವೆ ಕೊಪ್ಪರ, ಅಜಾಂಡ ಬ್ರಹ್ಮಾಂಡವೆ ಕರ್ಣಕುಂಡಲ, ಆದಿಯಾಧಾರವೆ ಕಕ್ಷಪಾಳ, ಅನಾಹತವೆ ಒಡ್ಯಾಣ, ಅದ್ವೈತವೆ ಯೋಗವಟ್ಟಿಗೆ, ಅಗಮ್ಯವೆ ಯೋಗವಾವುಗೆ, ಅಚಳಿತವೆ ಖರ್ಪರ, ಅಪ್ರಮಾಣವೆ ಲಾಕುಳ, ಅವಿಚಾರವೆ ಸುಳುಹು, ಅಕಲ್ಪಿತವೆ ಭಿಕ್ಷ, ಕೊಂಡುದೆ ಗಮನ, ನಿಂದುದೆ ನಿವಾಸ; ನಿಶ್ಚಿಂತವೆಂಬಾಶ್ರಮದಲ್ಲಿ ನಿರಾಕುಳವೆಂಬ ಸಿಂಹಾಸನವ

ನಿಕ್ಕಿ, ಗಗನಗಂಭೀರದ ಭಾವಿಯೊಳಗೆ ಅಗೋಚರರದ ಅಗ್ಘವಣಿಯ ತಂದು, ಮಹಾಘನಪ್ರಾಣಲಿಂಗಕ್ಕೆ ಮಂಗಳದ ಬೆಳಗಿನಲ್ಲಿ ಮಜ್ಜನಕ್ಕೆರೆದು, ಬಿಂದ್ವಾಕಾಶವೆ ಗಂಧ, ಮಹದಾಕಾಶವೆ ಅಕ್ಷತೆ, ಪರಾಪರವೆ ಪತ್ರೆಪುಷ್ಪ, ನಿರ್ಮಳವೆ ಲಿಂಗಾರ್ಚನೆ, ಮಹಾಪ್ರಕಾಶವೆ ಪೂಜೆ, ನಿತ್ಯನಿರಂಜನವೆ ಧೂಪದಾರತಿ, ಸಕಲಭುವನಾದಿಭುವನಂಗಳೆ ಸಯದಾನ, ಆಚಾರವೆ ಅರ್ಪಿತ, ಮಹತ್ವವೆ ಸಿತಾಳ, ಅಖಂಡಿತವೆ ಅಡಕೆ, ಏಕೋಭಾವವೆ ಎಲೆ, ಶುದ್ಧ ಶಿವಾಚಾರವೆ ಸುಯಿಧಾನದ ಸುಣ್ಣ, ವಿವೇಕವಿಚಾರದಿಂದ ವೀಳೆಯವನವಧರಿಸುವುದು ; ಮಹಾಲಿಂಗದ ಪರಿಣಾಮವೆ ಪ್ರಸಾದ, ಸಮ್ಯಗ್ ಜ್ಞಾನವೆ ಸಂತೋಷ; ಸಹಜ ನಿರಾಭಾರಿಗಳ ಮೇಳದಿಂದ ನಿಸ್ಸೀಮದ ನಿಭ್ರಾಂತಿನ ಸಂಗದಲ್ಲಿ ನಿರಾಶಾಪದವೆ ಅನುಕೂಲ, ನಿಶ್ಶಬ್ದವೆ ಅನುಭಾವ, ಅನುಪಮದ ನಿಶ್ಶೂನ್ಯವೆ ವಿಶ್ರಾಮ, ನಿರಾಕಾರವೆ ಗಮನ, ನಿರಂತರ ಪಾತಾಳ ಊರ್ಧ್ವಪವನ ತ್ರಿಭುವನಗಿರಿಯೆಂಬ ಪರ್ವತವನೇರಿ, ಕಾಯವೆಂಬ ಕದಳಿಯ ಹೊಕ್ಕು ಸುಳಿದಾಡುವ ಮಹಾಮಹಿಮಂಗೆ ಇಹಲೋಕವೇನು ? ಪರಲೋಕವೇನು ? ಅಲ್ಲಿಂದತ್ತ ಅಗಮ್ಯ ನಿರಾಳ ಪರಮಜ್ಞಾನ ಸಿದ್ಧಿ, ಮಹಾಲಿಂಗದ ಬೆಳಗು. ಗೊಹೇಶ್ವರ, ನಿಮ್ಮ ನಿಜವನರಿದ ಮಹಾಮಹಿಮ ಶರಣಂಗೆ ನಮೋ ನಮೋ ಎಂಬೆನು !

೧೭೨

ಕಂಡುದೆಲ್ಲ ಪಾವನ, ಕೇಳಿತ್ತೆಲ್ಲ ಪರಮ ಬೋಧೆ. ಮುಟ್ಟಿತ್ತೆಲ್ಲ ಪರುಷದ ಸೋಂಕು, ಒಡನೆ ನುಡಿದವರೆಲ್ಲರೂ ಸದ್ಯೋನ್ಮುಕ್ತರು. ಸುಳಿದ ಸುಳುಹೆಲ್ಲ ಜಗತ್ಪಾವನ, ಮೆಟ್ಟಿದ ಧರೆಯೆಲ್ಲವೂ ಅವಿಮುಕ್ತಕ್ಷೇತ್ರ. ಸೋಂಕಿದ ಜಲವೆಲ್ಲವೂ ಪುಣ್ಯತೀರ್ಥಂಗಳು, ಶರಣೆಂದು ಭಕ್ತಿಯ ಮಾಡಿದವರೆಲ್ಲರೂ ಸಾಯುಜ್ಯರು. ಗೊಹೇಶ್ವರನ ಶರಣನ ಸುಳುಹಿನ ಸೊಗಸನುಪಮಿಸಬಾರದು.

೫. ಸ್ಥಲ-ನೆಲೆ, ಪುಣ್ಯ-ಪಾಪ, ಹುಟ್ಟು-ಹೊಂದಿಲ್ಲದ ಶರಣ

೧೭೩

ಎಡ ಬಲವೆಂದೇನೊ ನಿಮ್ಮ ಅಡಿಗಳನರಿದವಂಗೆ? ಕಡೆ ನಡುವೆಂದೇನೋ ಮೃಡನ ಹಾಡುವಂಗೆ? ಕುಲ ಛಲವೆಂದೇನೋ ಮನದ ಹೊಲೆಯ ಕಳೆದವಂಗೆ? ತಲೆ ಕಾಲೆಂದೇನೊ ಮಾಯೆಯ ಬಲೆಯ ನುಸುಳಿದವಂಗೆ? ಕಲಿಯುಗದ ಕತ್ತಲೆಯ ದಾಂಟಿದವಂಗೆ? ನಿಮ್ಮ ನೆಲೆಯನರಿದ ಶರಣಂಗೆ ಇನ್ನು ಸ್ಥಲನೆಲೆ ಆವುದುಂಟು ಹೇಳಾ ಬಸವಪ್ರಿಯ ಚೆನ್ನಬಸವಣ್ಣಾ?

೧೭೪

ಹುಟ್ಟಿದಲ್ಲಿಯೆ ಹೊಂದುವುದೆಲ್ಲರಿಗೆಯೂ ಸ್ವಭಾವ. ಪುಣ್ಯಪಾಪವೆಲ್ಲರಿಗೆಯೂ ಸ್ವಭಾವ. ಮಹಾಶಿವತತ್ವದಲ್ಲಿ ಹುಟ್ಟಿದ ಭಕ್ತರು ಆಗಮತತ್ವದಲ್ಲಿ ಹೊಂದಿದಡೇನು? ಆ ಪುಣ್ಯಪಾಪವಿಲ್ಲಾಗಿ ಅವರು ಮಹಾನುಭಾವರು. ಆದಡೇನು ಲೋಕದ ಪರಿಯೆ? ಅಲ್ಲ. ಇದ ಲೋಕದ ಪರಿಯೆಂಬ ಅಜ್ಞಾನಿಗಳನೇನೆಂಬೆನು ಗೊಹೇಶ್ವರ?

೧೭೫

ಮನದೊಳಗೆ ಘನ ವೇದ್ಯವಾಗಿ, ಘನದೊಳಗೆ ಮನ ವೇದ್ಯವಾದ ಬಳಿಕ ಪುಣ್ಯವಿಲ್ಲ ಪಾಪವಿಲ್ಲ, ಸುಖವಿಲ್ಲ ದುಃಖವಿಲ್ಲ, ಕಾಲವಿಲ್ಲ ಕರ್ಮವಿಲ್ಲ, ಜನನವಿಲ್ಲ ಮರಣವಿಲ್ಲ. ಗೊಹೇಶ್ವರ, ನಿಮ್ಮ ಶರಣನು ಘನಮಹಿಮ ನೋಡಯ್ಯಾ.

೧೭೬

ತುಂಬಿದ ತೊರೆಯ ಹಾಯ್ದಹೆವೆಂದು ಹರುಗೋಲನೇರುವ ಅಣ್ಣಗಳು ನೀವು ಕೇಳಿರೇ. ತೊರೆಯೊಳಗಣ ನೆಗಳು ಹರುಗೋಲ ನುಂಗಿದಡೆ ಗತಿಯಿಲ್ಲ. ಎಚ್ಚತ್ತು ನಡೆಸಿರೇ. ನಡುದೊರೆಯಲ್ಲಿ ಹುಟ್ಟು ಹಾಕಿದಡೆ ಹರಿ

ಗೋಲು ಮುಳುಗದೆ, ಏರಿದವರು ಸತ್ತರು. ಇದರೊಳಹೊರಗನರಿದಾತನಲ್ಲದೆ, ಗೊಹೇಶ್ವರಲಿಂಗದಲ್ಲಿ ಅಚ್ಚ ಶರಣನಲ್ಲ.

೧೭೭

ಮರನೊಳಗಣ ಕಿಚ್ಚು ಮರನ ಸುಟ್ಟಂತಾದೆನಯ್ಯ! ಬಯಲ ಗಾಳಿಯ ಪರಿಮಳ ನಾಸಿಕವನಪ್ಪಿದಂತಾದೆನಯ್ಯ. ಕರುವಿನ ಬೊಂಬೆಯು ನುರಿಗೊಂಡು ನಿಂದಂತಾದೆನಯ್ಯ! ಗೊಹೇಶ್ವರನೆಂಬ ಲಿಂಗವ ಪೂಜಿಸಿ ಭವಗೆಟ್ಟೆ ನಾನಯ್ಯ.

೧೭೮

ಅಯ್ಯಾ, ಎನಗೆ ಬಸವಪ್ರಿಯನೆಂದರು ನೀನೆ, ಕೂಡಲಚೆನ್ನಬಸವಣ್ಣನೆಂದರೂ ನೀನೆ. ಗುರುವೆಂದರೂ ನೀನೆ, ಲಿಂಗವೆಂದರೂ ನೀನೆ. ಜಂಗಮವೆಂದರೂ ನೀನೆ, ಪ್ರಸಾದವೆಂದರೂ ನೀನೆ. ಅದೇನು ಕಾರಣವೆಂದರೆ, ನೀ ಮಾಡಲಾಗಿ ಅವೆಲ್ಲವು ನಾಮರೂಪಿಗೆ ಬಂದವು. ಅದು ಕಾರಣ, ನಾನೆಂದರೆ ಅಂಗ, ನೀನೆಂದರೆ ಪ್ರಾಣ. ಈ ಉಭಯವನು ನೀವೆ ಅರುಹಿದಿರಾಗಿ, ಇನ್ನು ಭಿನ್ನವಿಟ್ಟು ನೋಡಿದೆನಾದರೆ, ಚೆನ್ನಮಲ್ಲೇಶ್ವರಾ, ನೀವೆ ಬಲ್ಲಿರಿ. ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನಲ್ಲಿ ಏಕವಾದ ಕಾರಣ, ಎನಗೆ ಭವವಿಲ್ಲ ಬಂಧನವಿಲ್ಲ. ಆದಕ್ಕೆ ನೀವೆ ಸಾಕ್ಷಿ.

೧೭೯

ಪರುಷಕ್ಕೆ ಬೆಲೆಯಿಲ್ಲ, ಪ್ರಾಣಕ್ಕೆ ನಿರ್ಮಾಲ್ಯವಿಲ್ಲ. ರುಚಿಗೆ ಎಂಜಲಿಲ್ಲ, ಸುಖಕ್ಕೆ ಅರೋಚಕವಿಲ್ಲ. ಗೊಹೇಶ್ವರಾ, ನಿಮ್ಮ ಶರಣಂಗೆ ಭವವಿಲ್ಲ ಬಂಧನವಿಲ್ಲವಯ್ಯ.

೧೮೦

ಎಲ್ಲ ಎಲ್ಲವನರಿಯಬಹುದು; ಸಾವನರಿಯಬಾರದು. ಸರ್ವವಿದ್ಯಾ ಸಕಲ ಕಳಾವ್ಯಾಪ್ತಿಯನರಿಯಬಹುದು; ಸಾವನರಿಯಬಾರದು. ಹರಿಬ್ರಹ್ಮ ಕಾಲಕಾಮದಕ್ಷಾದಿ ದೇವದಾನವ ಮಾನವರಿಗೆಲ್ಲ ಸಾವು! ಮಹಾಪುರುಷರಿಗೆಲ್ಲ ಸಾವು! ಶಿವಶಿವಾ, ಈ ಸಾವನರಿದು, ಲೋಕ ಪ್ರಪಂಚ ಮರೆದು,

ಲಿಂಗದಲ್ಲಿ ನೆನಹು ನೆಲೆಗೊಂಡರೆ, ಆ ಮಹಾಮಹಿಮಂಗೆ ಸಾವಿಲ್ಲ! ಈ ಸಾವನರಿಯದ ಅರುಮರುಳುಗಳ ಅರಿವು ಮಾನಹಾನಿ ಕಾಣಾ ಗೊಹೇಶ್ವರಾ!

೧೮೧

ಖೇಚರರಾಗಲಿ ಭೂಚರರಾಗಲಿ ಲಾಂಛನಧಾರಿಯಾಗಲಿ, ಮರಣ ವಾರಿಗೂ ಮನ್ನಣೆಯಿಲ್ಲ! ಸನಕಸನಂದಾದಿಗಳಿಗೂ ಮರಣ ಮನ್ನಣೆಯಿಲ್ಲ! ಇದು ಕಾರಣ—ಗೊಹೇಶ್ವರ, ನಿಮ್ಮ ಶರಣರು ಕಾಲನ ಬಾರಿಗೆ ಕಲ್ಪಿತರಾಗರು.

೧೮೨

ಕೈಲಾಸ ಮರ್ತ್ಯಲೋಕವೆಂಬರು. ಕೈಲಾಸವೆಂದರೇನೋ? ಮರ್ತ್ಯವೆಂದರೇನೋ? ಅಲ್ಲಿಯೂ ನಡೆಯು ಒಂದೆ, ಇಲ್ಲಿಯೂ ನಡೆಯು ಒಂದೆ; ಅಲ್ಲಿಯ ನುಡಿಯೂ ಒಂದೆ, ಇಲ್ಲಿಯ ನುಡಿಯೂ ಒಂದೆ ಕಾಣಿರಯ್ಯ ಎಂಬರು. ಕೈಲಾಸದವರೇ ದೇವರ್ಕಳೆಂಬರು, ಮರ್ತ್ಯಲೋಕದವರೇ ಮಹಾಗಣಂಗಳೆಂಬರು. ಸುರಲೋಕದೊಳಗೆ ಸಾಸಿರ ಕಾಲಕ್ಕಲ್ಲದೆ ಅಳಿವಿಲ್ಲವೆಂಬರು. ನರಲೋಕದೊಳಗೆ ಸತ್ತು ಸತ್ತು ಹುಟ್ಟುತಿಹರೆಂಬರು. ಇದ ಕಂಡು ನಮ್ಮ ಶಿವಶರಣರು ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ, ಭವವ ದಾಂಟಿ, ತಮ್ಮ ತಮ್ಮ ಹುಟ್ಟನರಿದು, ಮಹಾಬೆಳಗನೆ ಕೂಡಿ, ಬೆಳಗಿನಲ್ಲಿ ಬಯಲಾದರಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೧೮೩

ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು. ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು. ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು. ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು; ಗೊಹೇಶ್ವರಲಿಂಗ ತಾನಾಗಿರಬೇಕು.

೬. ನಿಸ್ಸಂಗ ನಿರ್ಲೇಪ

೧೮೪

ಎಲ್ಲರಂತೆ ನುಡಿದು ಎಲ್ಲರಂತೆ ನಡೆದು ಎಲ್ಲರಂತೆ ಸಂಸಾರವ ಬಳಸುತ್ತಿಪ್ಪರೆಂದು, ಎಲ್ಲರಂತೆ ಕಾಣಬಹುದೆ ನಿಜ ದೊರೆಕೊಂಡ ನಿರ್ಮಲ ಜ್ಞಾನಿಗಳ? ಅವರ ಮನೋಮಧ್ಯದಲ್ಲಿ ತೊಳಗಿ ಬೆಳಗುವ ಶಿವಜ್ಞಾನ ಬೀಜವು ಫಲಿಸದೆ ಹೋಗಲ್ಕಪ್ಪುದೆ? ಉರಿಯುದಿದ್ದರೂ ಕಿಚ್ಚನೊರಲೆ ಕೊಂಬುದೆ ಗೊಹೇಶ್ವರ?

೧೮೫

ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೆ? ಸೂರ್ಯನ ಕತ್ತಲೆ ಬಾಧಿಸಲಾಪವೆ ಅಯ್ಯಾ? ಆಕಾಶವು ರಜಧೂಮಗಳಿಂದ ಮಲಿನವಹುದೆ ಅಯ್ಯ? ನಿಮ್ಮನರಿದ ಶಿವಯೋಗಿಗೆ ಸಂಸಾರ ಬಂಧಿಸಬಲ್ಲುದೆ ಹೇಳಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

೧೮೬

ಇಹಪರವೆಂಬ ಇದ್ದೆಸೆಗೆ ಇದ್ದೆಸೆಯಾಗಿರ್ದನ ಪರಿ ಹೊಸತು! ನೆಯಿ ಹತ್ತದ ನಾಲಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಯಂತೆ ಇರ್ದನಯ್ಯಾ. ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸುತ್ತ ಆಚರಿಸದಂತಿರ್ದ ನೋಡಯ್ಯಾ!

೧೮೭

ನಿರ್ಗಮನಿಯಾದ ಶರಣಂಗೆ ಸಂಧಾನವಲ್ಲದೆ, ಗಮನವಾದ ಶರಣಂಗೆ ಸಂಧಾನ ಅನುಗೊಳ್ಳದೆಂಬ ಅಣ್ಣಗಳು ನೀವು ಕೇಳಿರೆ. ಸೂರ್ಯ ರಥವನೇರಿ, ಪರ್ವತಂಗಳ ಚಬುಕು ಮಾಡಿ, ಮನೋವೇಗದಿಂದ ಪಶ್ಚಿಮಸಮುದ್ರಕ್ಕೆ ದಾಳಿ ಇಡಲು, ರವಿಕಿರಣಂಗಳು ಹಿಂದುಳಿದಿಪ್ಪವೇ? ಅದು ಕಾರಣ, ಪುಷ್ಪವಿದ್ದಲ್ಲಿ ಪರಿಮಳವಿಪ್ಪುದು. ಅಂಗವಿದ್ದಲ್ಲಿ ಲಿಂಗವಿಪ್ಪುದು; ಲಿಂಗವಿದ್ದಲ್ಲಿ ಲಿಂಗದ ಮೇಲೆ ಮನವಿಪ್ಪುದು. ಲಿಂಗದ ಮೇಲೆ ಮನವಿಪ್ಪಲ್ಲಿಯೆ

ಶರಣ. ಆ ಶರಣ ನಡೆವಲ್ಲಿಯೇ ಉರಿವ ಅಗ್ನಿಯ ಮೇಲೆ ತಂಗಾಳಿ ಬೀಸಿದಂತೆ, ತ್ರಿಪುಟಿಯ ಮೇಲೆ ಚಿದ್ಬೆಳಗು ಒಲಿದಾಡುತ್ತಿದೆ. ಶರಣ ನುಡಿವಲ್ಲಿಯೇ ಪ್ರಣವದ ಬಳ್ಳಿ ಮನವ ಸುತ್ತುತ್ತಿದೆ. ಶರಣ ನೋಡುವಲ್ಲಿಯೇ ಪಂಚವರ್ಣಂಗಳ ಸ್ವರೂಪು ಲಿಂಗಾರ್ಪಿತವಾಗುತ್ತಿದೆ. ಶರಣ ಕುಂಭಿಸುವಲ್ಲಿಯೇ ಓಂಕಾರ ಒಡಗೂಡುವುದಯ್ಯಾ. ಶರಣ ರೇಚಿಸುವಲ್ಲಿಯೇ ಪಂಚಾಕ್ಷರಂಗಳು ಎಡೆಯಾಡುತ್ತವೆ. ಶರಣ ಸುಳಿವಲ್ಲಿಯೇ ಹಲವು ಪ್ರಕಾರದ ವಸ್ತುಗಳ ತನುಸೋಂಕು ಲಿಂಗಮನವ ತುಂಬುತ್ತಿದೆ. ಇದು ಕಾರಣ, ತೋಂಟದಾರ್ಯನ ಕರುಣಪ್ರಸಾದಮಂ ಪಡೆದು, ತತ್ವಸ್ವರೂಪು ಧ್ಯಾನ ಧಾರಣ ಅರ್ಪಿತಾವಧಾನವನರಿದ ಶರಣಂಗೆ ಗಮನಾಗಮನವೆಂಬ ಉಭಯ ಉಂಟೇ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ?

೧೪೪

ಶರಣ ಗಮನಿಯಾದಡೆ ಕಿರಿದೆಂಬರು; ಶರಣ ನಿರ್ಗಮನಿಯಾದಡೆ ಹಿರಿದೆಂಬರು. ನಾವಿದನರಿಯೆವಯ್ಯಾ. ಶರಣ ಆಶ್ರಮವಂತನಾದಡೆ ಕಿರಿದೆಂಬರು; ಶರಣ ನಿರಾಶ್ರಮವಂತನಾದಡೆ ಹಿರಿದೆಂಬರು. ನಾವಿದನರಿಯೆವಯ್ಯಾ. ಶರಣ ಸರ್ವವ್ಯಾಪಾರಿಯಾದಡೆ ಕಿರಿದೆಂಬರು; ಶರಣ ನಿರ್ವ್ಯಾಪಾರಿಯಾದಡೆ ಹಿರಿದೆಂಬರು. ನಾವಿದನರಿಯೆವಯ್ಯಾ. ಶರಣ ಸಕಲ ಭೋಗೋಪಭೋಗಿಯಾದಡೆ ಕಿರಿದೆಂಬರು; ಶರಣ ನಿರ್ಭೋಗಿಯಾದಡೆ ಹಿರಿದೆಂಬರು. ನಾವಿದನರಿಯೆವಯ್ಯಾ. ಹುರಿದ ಬೀಜ ಮರಳಿ ಹುಟ್ಟಬಲ್ಲುದೆ? ಬೆಂದ ನುಲಿ ಮರಳಿ ಕಟ್ಟುವಡೆವುದೆ? ಹುಟ್ಟುಗೆಟ್ಟ ಶರಣ, ಸಟೆಯ ದೇಹವ ಧರಿಸಿ ಸಾಕಾರವೆನಿಸಿ ಲೋಕದೊಳಡಗಿರ್ದಡೇನು? ಲೋಕದಂತಾತನೆ? ಅಲ್ಲಲ್ಲ. ಆತನ ಪರಿ ಬೇರೆ ಕಾಣಿರೊ. ಅದೆಂತೆಂದೊಡೆ: ಬಿರಿಸಿನೊಳಗಣ ಮದ್ದು ಅಗ್ನಿಯ ಸೋಂಕಿ ಅಗ್ನಿಯ ಸ್ವರೂಪವಾಗಿ ತೋರುವಂತೆ, ಆ ಶರಣನ ತನು ಮನ ಭಾವ ಸರ್ವಕರಣೇಂದ್ರಿಯಂಗಳೆಲ್ಲ ಲಿಂಗವನಪ್ಪಿ ಲಿಂಗಮಯವಾಗಿ ತೋರುತಿರ್ಪವಾಗಿ, ಆತ ಆವಾವ ಕ್ರಿಯೆಯಲ್ಲಿರ್ದಡೇನು? ಆವಾವ ಆಚಾರದಲ್ಲಿರ್ದಡೇನು? ಆವಾವ ಭೋಗದಲ್ಲಿರ್ದಡೇನು? ಕುಂದು ಕೊರತೆಯಿಲ್ಲ. ಹಿಂದೆ ಶಂಕೆಯಿಲ್ಲ; ಮುಂದೆ ಜನ್ಮವಿಲ್ಲ. ಆ

ಶರಣನು ಎಂತಿರ್ದಂತೆ ಸಹಜ ಪರಬ್ರಹ್ಮವೆ ಆಗಿರ್ಪನು ನೋಡಿರೋ ನಮ್ಮ ಅಖಂಡೇಶ್ವರಲಿಂಗದಲ್ಲಿ!

೧೮೯

ಮಠವೇಕೋ ಪರ್ವತವೇಕೋ, ಜನವೇಕೋ ನಿರ್ಜನವೇಕೋ ಚಿತ್ತ ಸಮಾಧಾನವುಳ್ಳ ಶರಣಂಗೆ? ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪತಪವೇಕೋ ತನ್ನ ತಾನರಿದ ಶರಣಂಗೆ ಗೊಹೇಶ್ವರಾ?

೧೯೦

ಪರತತ್ವದೊಳಗಿರಬಲ್ಲಡೆ ಉಣಲಾಗದು, ಉಣದಿರಲಾಗದು. ಎಲ್ಲರ ಸಂಗದಲ್ಲಿರಲಾಗದು, ಬೇರೆ ಮತ್ತೊಬ್ಬನೆ ಇರಲಾಗದು. ತಾಯಿ ಸತ್ತ ಅರು ದಿಂಗಳಿಗೆ ತಾ ಹುಟ್ಟಿದ ಮೂಲ ಗೊಹೇಶ್ವರ.

೧೯೧

ಗುರು ಸ್ವಾಯತವಾಯಿತ್ತು, ಲಿಂಗ ಸ್ವಾಯತವಾಯಿತ್ತು, ಜಂಗಮ ಸ್ವಾಯತವಾಯಿತ್ತು ಬಸವಣ್ಣ ನಿಂದಲೆಂದರೆ, ತನುವಿಲ್ಲದಿರಬೇಕು; ಮನ ವಿಲ್ಲದಿರಬೇಕು; ಅರಿವರತು ಮರಹು ನಷ್ಟವಾಗಿರಬೇಕು. ಗೊಹೇಶ್ವರಲಿಂಗ ದಲ್ಲಿ ನಿರ್ಲೇಪಿಯಾದಲ್ಲದಿಲ್ಲ ಕಾಣಾ ಮಡಿವಾಳ ಮಾಚಯ್ಯಾ.

೧೯೨

ಅಯ್ಯಾ, ನಿಮ್ಮ ಶರಣರ ನಿಲವ ಸ್ವರ್ಗ ಮರ್ತ್ಯ ಪಾತಾಳದೊಳಗೆ ಬಲ್ಲವರಿಲ್ಲವಯ್ಯಾ! ಅಘಟಿತ ಘಟಿತರು, ಅಖಂಡ ಮಹಿಮರು, ನಿಜದಲ್ಲಿ ನಿರ್ಲೇಪ ಭಾವುಕರು! ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವನರಿ ವಡೆ ನಾನೇತರವನಯ್ಯಾ?

೧೯೩

ಕರಸ್ಥಲದ ಲಿಂಗವೇ ಕಾಯಕ್ಕೆ ವೇಧಿಸಿದಲ್ಲಿ, ಕಾಯ ಲಿಂಗ ವಾಯಿತ್ತು. ಅಂತಾದ ಮಹಾಘನಲಿಂಗವೇ ಪ್ರಾಣಕ್ಕೆ ವೇಧಿಸಿದಲ್ಲಿ, ಪ್ರಾಣ ಲಿಂಗವಾಯಿತ್ತು. ಅಂತಾದ ಮಹಾಘನಲಿಂಗವೇ ಭಾವಕ್ಕೆ ವೇಧಿಸಿದಲ್ಲಿ, ಭಾವ ಲಿಂಗವಾಯಿತ್ತು. ಅಂತಾದ ಮಹಾಘನಲಿಂಗವೇ ಜ್ಞಾನಕ್ಕೆ ವೇಧಿಸಿ

ದಲ್ಲಿ, ಜ್ಞಾನ ಲಿಂಗವಾಯಿತ್ತು. ಅಂತಾದ ಕಾರಣ, ನಮ್ಮ ಗೊಹೇಶ್ವರನ ಶರಣಂಗೆ ಅರಿವರತು, ಕುರುಹು ನಿಷ್ಪತಿಯಾಗಿ, ತಾನೆಂಬ ಭಾವವು ಉರಿಯುಂಡ ಕರ್ಪೂರದಂತಾಯಿತ್ತು.

೭. ನಿಜರೂಪ

೧೯೪

ಸರ್ಪದಷ್ಟವಾದವರು ತಮ್ಮ ತಾವರಿಯರು. ಕಾಮದಷ್ಟವಾದವರು ಲಜ್ಜೆ ನಾಚಿಕೆಯ ತೊರೆವರು. ಸಂಸಾರದಷ್ಟವಾದವರು ಪರಮಾರ್ಥವನರಿಯರು. ಲಿಂಗದಷ್ಟವಾದರೆ ಅಂಗವೆನಲಿಲ್ಲ. ಆರಾಧ್ಯಪ್ರಿಯ ಸಕಳೇಶದೇವನಲ್ಲಿ ಸುಖಿಯಾಗಿಪ್ಪರು.

೧೯೫

ಕರಣಾದಿ ಗುಣಂಗಳಳಿದು, ನವಚಕ್ರಂಗಳು ಭಿನ್ನವಾದ ಬಳಿಕೆ ಇನ್ನೇನೋ ಇನ್ನೇನೋ? ಪುಣ್ಯಪಾಪವಿಲ್ಲ, ಇನ್ನೇನೋ ಇನ್ನೇನೋ? ಸ್ವರ್ಗ ನರಕವಿಲ್ಲ, ಇನ್ನೇನೋ ಇನ್ನೇನೋ? ಗೊಹೇಶ್ವರನೆಂಬ ಲಿಂಗ ವೇಧಿಸಿ ಸುಖಿಯಾದ ಬಳಿಕ, ಇನ್ನೇನೋ ಇನ್ನೇನೋ?

೧೯೬

ಲೋಕದ ನಚ್ಚು ಮಚ್ಚು ಬಿಟ್ಟು ನಿಶ್ಚಿಂತವಾಯಿತ್ತು. ಏನು ಹತ್ತಿತ್ತೆಂದರಿಯೆನಯ್ಯ. ಏನು ಹೊದ್ದಿತ್ತೆಂದರಿಯೆನಯ್ಯ. ಗೊಹೇಶ್ವರನೆಂಬ ಗ್ರಹ ಒಳಕೊಂಡಿತ್ತಾಗಿ, ನಾನೇನೆಂದರಿಯೆನಯ್ಯ.

೧೯೭

ಅಮೃತಸೇವನೆಯ ಮಾಡಿ, ಆಪ್ಯಾಯನ ಘನವಾಯಿತ್ತು. ಪರುಷ ವೇಧಿಯ ಸಾಧಿಸಹೋದರೆ, ದಾರಿದ್ರ್ಯ ಘನವಾಯಿತ್ತು. ಮರುಜೇವಣಿಯ

ಹಣ್ಣು ಮೆದ್ದು ಮರಣವಾಯಿತ್ತ ಕಂಡೆ. ಎಲ್ಲವನು ಸಾಧಿಸಹೋದರೆ, ಏನೂ ಇಲ್ಲದಂತಾಯಿತ್ತು. ನಾನು ನಿಜವ ಸಾಧಿಸಿ ಬದುಕಿದೆನು ಗೊಹೇಶ್ವರಾ.

೧೯೮

ಹತ್ತಿ ಕದಿರು ರಾಟೆಯಲ್ಲಿ ಮೊದಲಿಲ್ಲ, ನೂಲುಂಟು. ಸೆಲದಿಯ ಹೃದಯದಲ್ಲಿಯೆ ನೂಲುಂಟು. ಭಕ್ತರ ಭಾವದಲ್ಲಿ ಲಿಂಗವುಂಟು. ರೇಕಣ್ಣ ಪ್ರಿಯನಾಗಿನಾಥನ ಶರಣರ ಮನದ ಕೊನೆಯನೆತ್ತಿದರೆ, ಲಿಂಗದ ಗೊಂಚಲುಂಟು!

೧೯೯

ಹುಟ್ಟಿದ ಕೂಸಿಂಗೆ ಪಟ್ಟವ ಕಟ್ಟಿ, ವಿಭೂತಿಯ ಪೂಸಿ, ಲಿಂಗವ ತೋರಿ, ಜೋ ಜೋ ಎಂದು ಜೋಗುಳವಾಡಿದಳು ಮಾಯಾದೇವಿಯಕ್ಕ! ಜೋ ಜೋ ಎಂಬ ಸರ ಹರಿದು, ತೊಟ್ಟಿಲು ಬಿದ್ದಿತ್ತು; ಕೂಸು ಸತ್ತಿತ್ತು; ಗೊಹೇಶ್ವರನುಳಿದನು.

೨೦೦

ಪರಿಪರಿಯ ಅವಲೋಹ ಪರುಷ ಮುಟ್ಟಲು, ಹೊನ್ನ ಪರಿವರ್ತನಕ್ಕೆ ಬಂದು ಸಲುತಿದ್ದವು ನೋಡಾ! ಪರುಷವ ಮಾಡುವ ಪುರುಷರೆಲ್ಲರೂ ಪರುಷ ಮುಟ್ಟಿದ ಹೊನ್ನಿನಂತಿದ್ದರು ನೋಡಾ! ಪರುಷ ತಾವಾಗಲು, ಪರುಷ ಹರಿಬ್ರಹ್ಮರಳವಲ್ಲ; ಸುರರು ಕಿನ್ನರರೆಲ್ಲರು ನಿಮ್ಮ ವರದಲ್ಲಿ ಸಿಲುಕಿದರು. ಪರುಷದಂತಿದ್ದರು ಗೊಹೇಶ್ವರನ ಶರಣರು.

೨೦೧

ಕಾಯುಗೊಂಡ ಮಾನವರಂತೆ ಕೈಗೆ ಸಿಲುಕ. ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ. ಕಾಂಬಡೆ ಕಂಗಳತೆಯಲ್ಲ. ಕೇಳುವಡೆ ಕಿವಿಗಳತೆಯಲ್ಲ. ಗೊಹೇಶ್ವರನ ನಿಲವು ಬರಿಯ ಸ್ತೋತ್ರಕ್ಕೆ ಸಿಕ್ಕದು ಕಾಣಾ ಸಿದ್ಧರಾಮಯ್ಯಾ.

೨೦೨

ರಂಗವೊಂದೇ, ಕಂಭವೊಂದೇ; ದೇವರೊಂದೇ, ದೇಗುಲ ಒಂದೇ ಗೊಹೇಶ್ವರ, ನಿಮ್ಮ ಮನ್ನಣೆಯ ಶರಣ ದೇವರೆಂಬೆ.

೨೦೩

ಶರನಿಧಿ ರತ್ನವ ಧರಿಸಿದ್ದರೆ, ಆ ಮಹಾನದಿಗೆ ಒಂದು ಬಡತನ ಉಂಟೇ ಅಯ್ಯಾ? ಮೇರುಗಿರಿ ಮೂಲಿಕೆಯ ಧರಿಸಿದ್ದರೆ, ಆ ಪರ್ವತಕ್ಕೆ ಬಡತನ ಉಂಟೇ ಅಯ್ಯಾ? ಅನಾದಿಮಯ ಪರಿಪೂರ್ಣಲಿಂಗವು ಶರಣ ತಾನಾಗಿ ಪ್ರವರ್ತಿಸಿತ್ತು. ಏತಕಯ್ಯ ಎಂದರೆ, ತನ್ನ ಮಹಿಮಾಗುಣ ವೈಭವವ ಪ್ರಕಾಶಿಸಿ ತೋರಲಾಯಿತ್ತಯ್ಯ. ಶರಣ ಲಿಂಗ ಎಂಬ ಅಂತರವೆಲ್ಲಿಯದೋ? ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭು ತಾನೆ ಶರಣ ಲಿಂಗ ಎಂಬಾತ ಕಾಣಿರೋ.

೨೦೪

ಶರಣನ ಒಡಲುಗೊಂಡ ಅಖಂಡಿತಲಿಂಗಕ್ಕೆ ಅರ್ಚನೆಯಿಲ್ಲ. ಶರಣನ ಒಡಲುಗೊಂಡ ಆಚಾರಲಿಂಗಕ್ಕೆ ಅರ್ಪಿತವಿಲ್ಲ. ಶರಣನ ಒಡಲುಗೊಂಡ ಅನುಪಮಲಿಂಗಕ್ಕೆ ಅವಧಾನವಿಲ್ಲ. ಅದೇನು ಕಾರಣವೆಂದಡೆ, ಶರಣನಿಂದಾದ ಅರ್ಚನೆ, ಶರಣನಿಂದಾದ ಅರ್ಪಿತ, ಶರಣನಿಂದಾದ ಅವಧಾನ. ಇದು ಕಾರಣ, ಸಂದಳಿದು ಲಿಂಗವಾದ ಮತ್ತೆ ಆನಂದವಲ್ಲದೆ ಅಣುಮಾತ್ರ ಕ್ರೀಯಿಲ್ಲ ಕಾಣಾ ಗೊಹೇಶ್ವರಾ.

೨೦೫

ಭಕ್ತಿಯೆಂಬುದು ಮುಕ್ತಿಯೊಳಗು. ಪೂಜೆಯೆಂಬುದು ನಿರ್ಮಾಲ್ಯದೊಳಗು. ಪ್ರಸಾದವೆಂಬುದು ಓಗರದೊಳಗು. ಆಚಾರವೆಂಬುದು ಅನಾಚಾರದೊಳಗು. ಧರ್ಮವೆಂಬುದು ಅಧರ್ಮದೊಳಗು. ಸುಖವೆಂಬುದು ದುಃಖದೊಳಗು. ವ್ರತವೆಂಬುದು ವೈರಾಗ್ಯದೊಳಗು. ನೇಮವೆಂಬುದು ಉದ್ಯೋಗದೊಳಗು. ಅಹಿಂಸೆಯೆಂಬುದು ಹಿಂಸೆಯೊಳಗು. ಇವಾವಂಗವು ಇಲ್ಲದೆ–ಗೊಹೇಶ್ವರ, ನಿಮ್ಮ ಶರಣ ಸುಖಿಯಾಗಿದ್ದನು.

೨೦೬

ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನಾಸಿಕವಾಯಿತ್ತು; ತಾನಲ್ಲದನ್ಯವಾಸನೆಯಿಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ಪೃಥ್ವಿಯಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಜಿಹ್ವೆಯಾಯಿತ್ತು; ತಾನಲ್ಲದನ್ಯರುಚಿಯಿಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ಅಪ್ಪುವಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನೇತ್ರವಾಯಿತ್ತು; ತಾನಲ್ಲದನ್ಯರೂಹಿಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ಅಗ್ನಿಯಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ತ್ವಕ್ಕಾಯಿತ್ತು; ತಾನಲ್ಲದನ್ಯಸೋಂಕಿಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ವಾಯುವಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಶ್ರೋತ್ರವಾಯಿತ್ತು; ತಾನಲ್ಲದನ್ಯಶಬ್ದವಿಲ್ಲಾಗಿ, ಅಲ್ಲಿಯೇ ಮಹತ್ತಪ್ಪ ಆಕಾಶವಡಗಿತ್ತು. ಇಂತು ಪಂಚಭೂತಂಗಳಡಗಿದರೆ ಪಂಚಬ್ರಹ್ಮಮಯವಾಯಿತ್ತು. ಅದರೊಳಗೆ ಜಗತ್ತಡಗಿದ ಭೇದ. ಅದೇ ಪಂಚವರ್ಣಾತೀತವಾಗಿ ಮಹತ್ತನೊಳಕೊಂಡ ಆ ಶರಣನ ಭೇದವನೇನೆಂದುಪಮಿಸುವೆನಯ್ಯ ಗೊಹೇಶ್ವರಾ?

೨೦೭

ಹರಿವ ನದಿಗೆ ಮೈಯೆಲ್ಲ ಕಾಲು. ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ. ಬೀಸುವ ಗಾಳಿಗೆ ಮೈಯೆಲ್ಲ ಕೈ. ಇದು ಕಾರಣ, ಗೊಹೇಶ್ವರ, ನಿಮ್ಮ ಶರಣಂಗೆ ಸರ್ವಾಂಗವೆಲ್ಲ ಲಿಂಗಮಯವಯ್ಯ.

೨೦೮

ಲೋಕವಿರಹಿತ ಶರಣ, ಶರಣವಿರಹಿತ ಲೋಕ. ಹದಿನಾಲ್ಕು ಭುವನ ಒಬ್ಬ ಶರಣನ ಕುಕ್ಷಿಯೊಳಗು. ಅರಿವು ಮರಹಿಲ್ಲದ ಘನವು–ಗೊಹೇಶ್ವರ, ನಿಮ್ಮ ಶರಣ.

೨೦೯

ದೇವಲೋಕದ ದೇವಗಣಂಗಳೆಲ್ಲಾ ಎನ್ನ ಹೊರಗೆಂಬರು. ಅದು ದಿಟವೆ. ಸತ್ಯ ಸಾತ್ವಿಕ ಸದ್ಭಕ್ತರು ಎನ್ನ ಹೊರಗೆಂಬರು. ಅದು ದಿಟವೆ.

ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ. ನಾ ನಿಮ್ಮೊಳಗು ಗೊಹೇಶ್ವರಾ.

೨೧೦

ಇಹಲೋಕ ಪರಲೋಕ ತಾನಿದ್ದಲ್ಲಿ. ಗಗನ ಮೇರುಮಂದಿರ ತಾನಿದ್ದಲ್ಲಿ. ಸಕಲ ಭುವನ ತಾನಿದ್ದಲ್ಲಿ. ಸತ್ಯ ನಿತ್ಯ ನಿರಂಜನ ಶಿವತತ್ವ ತಾನಿದ್ದಲ್ಲಿ. ಉತ್ತರೋತ್ತರ ಚತುರ್ವರ್ಗಳಯು ತಾನಿದ್ದಲ್ಲಿ. ಚಂದ್ರ ಸೂರ್ಯ ತಾರಾಮಂಡಲ ತಾನಿದ್ದಲ್ಲಿ. ಅಂತರ ಮಹದಂತರ ತಾನಿದ್ದಲ್ಲಿ. ಸ್ವತಂತ್ರ ಗೊಹೇಶ್ವರಲಿಂಗ ತಾನಿದ್ದಲ್ಲಿ.

೨೧೧

ಜ್ಞಾನವೇ ಪ್ರಸಾದಕಾಯ. ಜ್ಞೇಯವೇ ಚಿನ್ಮಯಲಿಂಗ. ಜ್ಞಾನ ಜ್ಞೇಯ ಸಂಪುಟದಿಂದ ಶರಣನೆನಿಸಿಕೊಂಡ ಜಂಗಮದ ಅಂತರಂಗ ಬಹಿರಂಗದಲ್ಲಿ ನೀನೇ. ಎಂತು ನೋಡಿದರೆ, ಶರಣನ ಕಣ್ಣ ಮೊದಲಲ್ಲಿ ನೀನೇ. ಶಿವಜ್ಞಾನಸಂಪನ್ನನಾದ ಶರಣಂಗೆ ಆಹ್ವಾನ ವಿಸರ್ಜನೆ ಎಲ್ಲಿಯದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

೨೧೨

ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು. ಒಂದು ಆಹ್ವಾನ, ಒಂದು ವಿಸರ್ಜನ; ಒಂದು ವ್ಯಾಕುಳ, ಒಂದು ನಿರಾಕುಳ. ಉಭಯ ಕುಳ ರಹಿತ–ಗೊಹೇಶ್ವರ, ನಿಮ್ಮ ಶರಣ ನಿಶ್ಚಿಂತನು.

೨೧೩

ಕಾಯದಲಾದ ಮೂರ್ತಿಯಲ್ಲ. ಜೀವದಲಾದ ಮೂರ್ತಿಯಲ್ಲ. ಪ್ರಾಣದಲಾದ ಮೂರ್ತಿಯಲ್ಲ. ಪುಣ್ಯದಲಾದ ಮೂರ್ತಿಯಲ್ಲ. ಮುಕ್ತಿಯ ಲಾದ ಮೂರ್ತಿಯಲ್ಲ. ಯುಗದಲಾದ ಮೂರ್ತಿಯಲ್ಲ. ಜುಗದಲಾದ ಮೂರ್ತಿಯಲ್ಲ. ಶಿವನಲಾದ ಮೂರ್ತಿಯಲ್ಲ. ಶಕ್ತಿಯಲಾದ ಮೂರ್ತಿಯಲ್ಲ. ಇದೆಂತಹ ಮೂರ್ತಿಯೆಂದು ಉಪಮಿಸುವೆ? ಕಾಣಬಾರದ ಕಾಯ, ನೋಡಬಾರದ ತೇಜ, ಉಪಮಿಸಬಾರದ ನಿಲವು. ಕಾರಣವಿಡಿದು ಕಂಗೆ ಗೋಚರವಾದ ಸುಖವನೇನೆಂದು ಹೇಳುವೆ ಗೊಹೇಶ್ವರಾ?

೨೧೪

ಶರಣೆಂದು ಪಾದವ ಹಿಡಿದಿಹೆನೆಂದರೆ ಚರಣದ ನಿಲವು ಕಾಣಬಾರದು. ಕುರುಹುವಿಡಿದಿಹೆನೆಂದರೆ ಕೈಗೆ ನಿಲುಕದು. ಬೆರಸಿ ಹೊಕ್ಕಹೆನೆಂದರೆ ಮುನ್ನವೇ ಅಸಾಧ್ಯ. ಅಕಟಕಟಾ! ಅಹಂಕಾರದಲ್ಲಿ ಕೆಟ್ಟೆನಲ್ಲಾ ಗುರುವೆ! ಎನ್ನ ಪರಮಗುರುವೇ ಬಾರಯ್ಯಾ, ಅರಿಯದ ತರಳನವಗುಣವ ನೋಡುವರೆ ಕೂಡಲಸಂಗಮದೇವಾ?

೨೧೫

ನಾ ನೀನೆಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ. ಸಾಲೋಕ್ಯನಲ್ಲ ಸಾಮೀಪ್ಯನಲ್ಲ ಶರಣ. ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ. ಸಕಾಯನಲ್ಲ ಅಕಾಯನಲ್ಲ, ಗೊಹೇಶ್ವರಲಿಂಗ ತಾನೆಯಾಗಿ.

೨೧೬

ವೇದ ಪ್ರಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ, ಶಬ್ದ ಪ್ರಮಾಣವಲ್ಲ ಕಾಣಿ ಭೋ ಲಿಂಗಕ್ಕೆ! ಅಂಗಸಂಗದ ಮಧ್ಯದಲ್ಲಿದ್ದುದ ಬೈಚಿಟ್ಟು ಬಳಸಿದ–ಗೊಹೇಶ್ವರ, ನಿಮ್ಮ ಶರಣ.

೨೧೭

ಪರಮಸುಖದ ಪರಿಣಾಮದ ಇರವ ಬಲ್ಲವರಾರೋ? ಅದು ದೊರಕೊಳ್ಳದು ನೋಡಾ! ತನತನಗೆ ತನ್ನ ಇರವ ಲಿಂಗದಲ್ಲಿರಿಸಿ, ಪರವ ಮನದಲ್ಲಿ ಹಿಡಿದು, ಇಹಪರವೆಂಬುದೊಂದು ಭ್ರಾಂತಳಿದು, ನಿರತಿಶಯ ಸುಖದೊಳಗೆ ನಿಜವಾಗಿರಬಲ್ಲ–ಗೊಹೇಶ್ವರ, ನಿಮ್ಮ ಶರಣನನುಪಮ ಪ್ರಸಾದಿ.

೮. ಮಾನವ-ದೇವ

೨೧೮

ಜಗದ ಮಧ್ಯದಲ್ಲಿ ಶರಣ ಜನಿಸಿದಡೇನು, ಆ ಜಗದ ಸ್ವರೂಪನೆ? ಅಲ್ಲಲ್ಲ. ಅದೇನು ಕಾರಣವೆಂದೊಡೆ : ಕೋಗಿಲೆಯ ತತ್ತಿಯನೊಡೆದು ಕಾಗೆ

ಮರಿಯ ಮಾಡಿ ಸಲಹಿದಡೇನು? ಅದು ತನ್ನ ಕೋಗಿಲೆಯ ಹಿಂಡ ಕೂಡುವುದಲ್ಲದೆ, ಮರಳಿ ಕಾಗೆಯ ಹಿಂಡ ಬೆರೆವುದೆ ಹೇಳಾ? ಲೋಕದ ಮಧ್ಯದಲ್ಲಿ ಅನಾದಿ ಶರಣನು ಲೋಕೋಪಕಾರಕ್ಕಾಗಿ ಜನಿಸಿದಡೇನು? ತನ್ನ ಮುನ್ನಿನ ಶಿವತತ್ವವನೆ ಬೆರೆವನಲ್ಲದೆ, ಮರಳಿ ಲೋಕವ ಬೆರೆಯನು ನೋಡಾ ನಿಮ್ಮ ನರಿದ ಶಿವಜ್ಞಾನಿ ಶರಣನು ಅಖಂಡೇಶ್ವರಾ.

೨೧೯

ನೀರಲಫಲ ಉತ್ಪತ್ತಿ ಮಾವಿನ ಹಣ್ಣಿನಂತೆ ಇರುವರು ಮರ್ತ್ಯರು. ಹಲಸು ತೆಂಗು ದಾಳಿಂಬರದಂತೆ ಇರುವರು ಸ್ವರ್ಗದವರು. ಹಾಲು ಸಕ್ಕರೆ ಬೆಲ್ಲ ತುಪ್ಪದಂತೆ ಇರುವರು ನಿಮ್ಮವರು ಕಾಡಿನೊಳಗಾದ ಶಂಕರ ಪ್ರಿಯ ಚೆನ್ನಕದಂಬಲಿಂಗ ನಿರ್ಮಾಯಪ್ರಭುವೇ.

೨೨೦

ಲಿಂಗದಿಂದುದಿಸಿ ಅಂಗವಿಡಿದಿಪ್ಪ ಪುರಾತನರ ಇಂಗಿತವನೇನೆಂದು ಬೆಸಗೊಂಬಿರಯ್ಯಾ? ಅವರ ನಡೆಯೇ ಆಗಮ, ಅವರ ನುಡಿಯೇ ವೇದ. ಅವರ ಲೋಕದ ಮಾನವರೆಂದೆನ್ನಬಹುದೆ? ಅದೆಂತೆಂದೊಡೆ,

ಶ್ಲೋ. ವೃಕ್ಷಾದ್ಭವಂತಿ ಬೀಜಾನಿ ತದ್ವೃಕ್ಷೇ ಲೀಯತೇ ಪುನಃ
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ

ಎಂದುದಾಗಿ. ಅಂಕೋಲೆಯ ಬೀಜದಂತಾಯಿತ್ತು ವೃಕ್ಷವು. ಆ ವೃಕ್ಷವು ಮರಳಿ ಬೀಜದೊಳಡಗಿತ್ತು. ಆ ಪ್ರಕಾರದಿಂ ಲಿಂಗದೊಳಗಿದ್ದ ಪುರಾತನರು ಆ ಲಿಂಗದೊಳಗೆ ಬೆರಸಿದರು ನೋಡಿರಯ್ಯಾ. ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ ಚೆನ್ನಮಲ್ಲಿಕಾರ್ಜುನಾ.

೨೨೧

ಆಸೆಯನಳಿದು, ರೋಷವ ನಿಲಿಸಿ, ಜಗದ ಪಾಶವನರಿದು ಈಶ್ವರ ನೆನಿಸಿಕೊಂಬ ಶರಣರ, ಜಗದ ಹೇಸಿಗಳೆತ್ತ ಬಲ್ಲರು ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣಾ?

೨೨೨

ಬಿತ್ತಿತ್ತ ಮುಂತಾಗಿ ಬಿತ್ತಿದಡೇನೋ? ಬೀಜ ನಿರಾಳದ ಬೆಳಸು. ಶರಣಚಾರಿತ್ರವೆಂತಿರ್ದಡೇನೋ? ರೇಕಣ್ಣಪ್ರಿಯನಾಗಿನಾಥನ ಶರಣರ ಅವರಿವರೆಂದರೆ ನಾಯಕನರಕ.

೨೨೩

ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿಹುದು. ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿಹುದು. ಲೋಕವೆಂಬ ಮಾಯೆಗೆ ಶಿವಶರಣರ ಚರಿತ್ರ ಮರುಳಾಗಿ ತೋರಿಹುದು. ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆಯೂ ಇಲ್ಲ, ಮರಹೂ ಇಲ್ಲ, ಅಭಿಮಾನವೂ ಇಲ್ಲ.

೨೨೪

ಕಂಗಳ ಮುಂದೆ ಮಾಣಿಕವಿದ್ದು, ಕಾಣಲರಿಯರಯ್ಯ. ಬಾಗಿಲ ಮುಂದೆ ಹಾಲ ಸಾಗರವಿದ್ದು ಒರತೆಯ ನೀರಿಗೆ ಹಾರುವಂತೆ, ಕಂಗಳ ಮುಂದೆ ಮಹಾಶರಣನಿದ್ದು, ಕತ್ತಲೆ ಎನಲೇಕೆ? ಇನ್ನು ಲಿಂಗವನರಸಿಹೆನೆನಲೇಕೋ? ಆ ಮಹಾಶರಣ ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೨೨೫

ಸುಧೆಯೊಳಗೆ ವಿಷವುಂಟೇ? ಮಧುರದೊಳಗೆ ಕಹಿಯುಂಟೇ? ದಿನಮಣಿಯೊಳಗೆ ಕಪ್ಪುಂಟೇ? ಬೆಳುದಿಂಗಳೊಳಗೆ ಕಿಚ್ಚುಂಟೇ? ಅಮೃತಸಾಗರದೊಳಗೆ ಬೇವಿನ ಬಿಂದುವುಂಟೇ? ಮಹಾಜ್ಞಾನಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮಂಗೆ ಸಂಕಲ್ಪ ಭ್ರಮೆಯುಂಟೇ? ಅದೇತರ ವಿಶ್ವಾಸ ಸುಡು, ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೨೨೬

ನೋಟವೇ ಕೂಟ. ಕೂಟವೇ ಪ್ರಾಣ. ಪ್ರಾಣವೇ ಏಕ. ಏಕವೇ ಸಮರಸ. ಸಮರಸವೇ ಲಿಂಗ. ಲಿಂಗವೆ ಪರಿಪೂರ್ಣ. ಪರಿಪೂರ್ಣವೆ ಪರಬ್ರಹ್ಮ. ಪರಬ್ರಹ್ಮವೆ ತಾನು. ಇಂತೀ ನಿಜವ ಗೊಹೇಶ್ವರ ಬಲ್ಲನಲ್ಲದೆ, ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರು ನೋಡೈ!

೨೨೭

ಲೋಕವಿಡಿದು ಲೋಕವ ಹಿಂಗಿದಂತಿಪ್ಪೆನು. ಆಕಾರವಿಡಿದು ಸಾಕಾರ ಸಹಿತ ನಡೆವೆನು. ಹೊರಗೆ ಬಳಸಿ ಒಳಗೆ ಮರೆದಂತಿಪ್ಪೆನು. ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ, ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು.

೨೨೮

ಕೂಟವ ಕೂಡಿಹೆನೆಂದಡೆ ಸಮಯದವನಲ್ಲ. ಮಾಟವ ಮಾಡಿಹೆನೆಂದಡೆ ಹಿಂದು ಮುಂದಣ ದಂದುಗದವನಲ್ಲ. ಸಮಯಕ್ಕೆ ಮುನ್ನವೆ ಅಲ್ಲ. ಆರಾದಡೂ ಎನಲಿ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೨೨೯

ಲೋಕದಂತೆ ಬಾರರು, ಲೋಕದಂತೆ ಇರರು, ಲೋಕದಂತೆ ಹೋಗರು ನೋಡಯ್ಯ. ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು ನೋಡಯ್ಯ. ಉರಿಲಿಂಗದೇವಾ, ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು.

೨೩೦

ಅಯ್ಯಾ, ನಾ ಹುಟ್ಟುವಾಗ ಬಟ್ಟಬಯಲೆ ಗಟ್ಟಿಯಾಯಿತ್ತು. ಆ ಬಟ್ಟಬಯಲು ಗಟ್ಟಿಯಾದ ಬಳಿಯಲ್ಲಿ ನಾ ಜನನವಾದೆ. ಜನನವಾದವರಿಗೆ ಮರಣ ತಪ್ಪದು. ಅದೇನು ಕಾರಣವೆಂದರೆ: ಮರವೆಗೆ ಮುಂದು ಮಾಡಿತ್ತು, ಕರ್ಮಕ್ಕೆ ಗುರಿ ಮಾಡಿತ್ತು, ಕತ್ತಲೆಯಲ್ಲಿ ಮುಳುಗಿಸಿತ್ತು. ಕಣ್ಣುಗಾಣದ ಅಂಧಕರಂತೆ ತಿರುಗುವದ ನೋಡಿ ನಾ ಹೆದರಿಸಿಕೊಂಡು, ಎಚ್ಚತ್ತು ಚಿತ್ತವ ಸುಯಿಧಾನವ ಮಾಡಿ, ನಿಶ್ಚಿಂತವಾಗಿ ನಿಜವ ನೆಮ್ಮಿ ಅರುಹ ಕಂಡೆ, ಅರುಹಿಂದ ಆಚಾರವ ಕಂಡೆ. ಆಚಾರವಿಡಿದು ಗುರುವ ಕಂಡೆ. ಗುರುವಿಡಿದು ಲಿಂಗವ ಕಂಡೆ. ಲಿಂಗವಿಡಿದು ಜಂಗಮವ ಕಂಡೆ. ಜಂಗಮವಿಡಿದು ಪಾದೋದಕ ಪ್ರಸಾದವ ಕಂಡೆ. ಆ ಪಾದೋದಕ ಪ್ರಸಾದವಿಡಿದು ಮಹಾ ಶರಣನ ಕಂಡೆ. ಆ ಮಹಾಶರಣನ ಪಾದವಿಡಿದು ಎನ್ನ ಕಾಯಗುಣ ವಳಿಯಿತ್ತು. ಕರಣಗುಣ ಸುಟ್ಟವು. ಲಿಂಗಗುಣ ನಿಂದಿತ್ತು. ಭಾವ

ಬಯಲಾಯಿತ್ತು. ಬಯಕೆ ಸವೆಯಿತ್ತು. ಮಹಾದೇವನಾದ ಶರಣನ ಪಾದವಿಡಿದು ನಿಜಮುಕ್ತಳಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೨೩೧

ಲಿಂಗದ ನಡೆಯಂತೆ ನಡೆವನಲ್ಲದೆ, ಲೋಕದ ನಡೆಯಂತೆ ನಡೆವನಲ್ಲ ನೋಡಾ ನಿಮ್ಮ ಶರಣ. ಲಿಂಗದ ನುಡಿಯಂತೆ ನುಡಿವನಲ್ಲದೆ, ಲೋಕದ ನುಡಿಯಂತೆ ನುಡಿವನಲ್ಲ ನೋಡಾ ನಿಮ್ಮ ಶರಣ. ಲಿಂಗದ ಮಚ್ಚಿನಲ್ಲಿ ಸುಳಿವನಲ್ಲದೆ, ಲೋಕದ ಮಚ್ಚಿನಲ್ಲಿ ಸುಳಿವನಲ್ಲ ನೋಡಾ ನಿಮ್ಮ ಶರಣ. ಲಿಂಗದ ವ್ಯವಹಾರದಲ್ಲಿರುತ್ತಿಹನಲ್ಲದೆ, ಲೋಕದವ್ಯವಹಾರದಲ್ಲಿರನು ನೋಡಾ ನಿಮ್ಮ ಶರಣ. ಇಂತಪ್ಪ ಲಿಂಗಾಂಗಸಂಗ ಸಮರಸವನರಿದ ಶಿವಶರಣನ ಶಿವನೆನಬೇಕಲ್ಲದೆ, ಲೋಕದವರೆಂದು ನುಡಿವ ಸೂತಕದೇಹಿಗಳಿಗೆ ಪಾತಕ ತಪ್ಪದಯ್ಯಾ ಅಖಂಡೇಶ್ವರಾ.

೨೩೨

ಅಂಗದ ಮೇಲೆ ಲಿಂಗವಿದ್ದವರೆಲ್ಲರು ಸರಿಗಾಣಬೇಕೆಂಬರು. ಲಿಂಗಲಾಂಛನಧಾರಿಗಳೆಲ್ಲ ಶರಣಂಗೆ ಸರಿಯೆ? ಶರಣರ ಸಂಗ ಎಂತಿಪ್ಪುದೆಂದರೆ: ಪರಮಜ್ಞಾನವೆಂಬ ಉರಿಯನೆ ಉಟ್ಟು, ಉರಿಯನೆ ತೊಟ್ಟು, ಉರಿಯನೆ ಉಂಡು, ಉರಿಯನೆ ಹಾಸಿ, ಉರಿಯನೆ ಹೊದ್ದು ನಿರವಯಲಾದ ಶರಣಂಗೆ ನರರುಗಳು ಸರಿ ಎನ್ನಬಹುದೇ? ಹರಿಗೆ ಕರಿ ಸರಿಯೆ? ಉರಗಂಗೆ ಒಳ್ಳೆ ಸರಿಯೆ? ಮರುಗಕ್ಕೆ ಗರುಗ ಸರಿಯೆ? ಇಂತೀ ನಿರ್ವಯಲಾದ ಶರಣಂಗೆ ಮರ್ತ್ಯದ ನರಗುರಿಗಳು ಸರಿ ಎಂದರೆ, ನಾಯಕನರಕದಲ್ಲಿಕ್ಕುವ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೨೩೩

ಅಯ್ಯಾ, ನಿಮ್ಮ ಶರಣರ ಚರಣದ ಭಕ್ತಿಯೇ ಎನಗೆ ಸಾಲೋಕ್ಯಪದವಯ್ಯ. ನಿಮ್ಮ ಶರಣರ ಅರ್ಚನೆ ಪೂಜೆಯೇ ಎನಗೆ ಸಾಮೀಪ್ಯಪದವಯ್ಯ. ಅಯ್ಯಾ, ನಿಮ್ಮ ಗಣಂಗಳ ಧ್ಯಾನವೇ ಎನಗೆ ಸಾರೂಪ್ಯಪದವಯ್ಯ. ಅಯ್ಯಾ, ನಿಮ್ಮ ಪುರಾತನರ ಜ್ಞಾನಾನುಭವ ಸಮರಸಾನಂದವೇ

ಎನಗೆ ಸಾಯುಜ್ಯಪದವಯ್ಯ. ಇಂತೀ ಚತುರ್ವಿಧ ಪದಂಗಳಲ್ಲದೆ ಅನ್ಯವ ನಾನರಿಯೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೯. ವಿವೇಚನೆ

೨೩೪

ಶಬ್ದಿಯಾದಾತ ತರುಗಳ ಹೋತ. ನಿಶ್ಯಬ್ದಿಯಾದಾತ ಪಾಷಾಣವ ಹೋತ. ಕೋಪಿಯಾದಾತ ಅಗ್ನಿಯ ಹೋತ. ಶಾಂತನಾದಾತ ಜಲವ ಹೋತ. ಬಲ್ಲೆ ಬಲ್ಲೆನೆಂಬಾತ ಇಲ್ಲವೆಯ ಹೋತ. ಅರಿಯೆನೆಂಬಾತ ಪಶುವ ಹೋತ. ಇದು ಕಾರಣ, ಅರಿಯೆನೆನ್ನದೆ ಬಲ್ಲೆನೆನ್ನದೆ ಅರಿವಿನ ಕುರುಹ ನಳಿದುಳಿದು, ಗೊಹೇಶ್ವರನೆಂಬ ಲಿಂಗವ ಹೋತವರನಾರನೂ ಕಾಣೆ.

೨೩೫

ಅಶನ ವ್ಯಸನಾದಿಗಳನಂತನಂತ. ಕಾಷಾಯಾಂಬರಧಾರಿಗಳನಂತನಂತ. ಸಕಳೇಶ್ವರದೇವಾ, ನೀನಲ್ಲದೆ ಪೆರತನರಿಯದವರು ಎತ್ತಾನು ಒಬ್ಬರು.

೨೩೬

ಕ್ಷೀರಸಾಗರದೊಳಗಿರುತ ಹಾಲ ಬಯಸುವರೆ? ಪುಷ್ಪದೊಳಗಣ ತುಂಬಿ ಪರಿಮಳವ ಬಯಸುವಂತೆ ನೋಡಾ ಲಿಂಗವೆ! ಅಕಟಕಟ ಕಪಟವೆ! ಕಡಲೊಳಗಣ ಕಪ್ಪೆ ನೀರ ಬಯಸುವಂತೆ ನೋಡಾ ಲಿಂಗವೆ! ತಾವು ಲಿಂಗದೊಳಿರುತ ಹೊರಗ ಬಯಸುವರೆ ಗೊಹೇಶ್ವರ?

೨೩೭

ವೇಷವೆಂಬ ರುದ್ರನ ಪಾಶವ ಹೊತ್ತು, ಈಷಣತ್ರಯಕ್ಕೆ ತಿರುಗಾಡುವ ವೇಷಧಾರಿಗಳಿಗುಂಟೆ ಮಹಾಜ್ಞಾನದ ಸಂಪತ್ತಿನ ಸಂಬಂಧ? ಸ್ವಾದು ಉದಕದಲ್ಲಿ ಉಂಟೆ ಕ್ಷಾರದ ವಾರಿ? ಸಮಯದಲುಂಟೆ ನಿಜಶರಣರ

ನೆಲೆ? ಎನಗಾ ಭ್ರಮೆಯಿಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

೨೩೮

ಅರಿದ ಶರಣಂಗೆ ಆಚಾರವಿಲ್ಲ. ಆಚಾರವುಳ್ಳವಂಗೆ ಲಿಂಗವಿಲ್ಲ. ಲಿಂಗವಿಲ್ಲದ ಶರಣನ ಸುಳುಹು ಜಗಕ್ಕೆ ವಿಪರೀತ ಚರಿತ್ರವದು, ಪ್ರಕಟವಲ್ಲ ನೋಡಾ. ಸಂಸಾರಿ ಬಳಸುವ ಬಯಕೆಯುನೆಂದೂ ಹೊದ್ದನು. ಸಟೆಯ ಹಿಡಿದು, ದಿಟವ ಮರೆದು, ಇಲ್ಲದ ಲಿಂಗವನುಂಟೆಂದು ಪೂಜಿಸುವರಾಗಿ ಆಚಾರವುಂಟು. ಆಚಾರವುಳ್ಳವಂಗೆ ಗುರುವುಂಟು. ಗುರುವುಳ್ಳವಂಗೆ ಲಿಂಗವುಂಟು. ಲಿಂಗಪೂಜಕಂಗೆ ಭೋಗವುಂಟು. ಈ ಬರಿಯ ಬಾಯ ಬಣ್ಣಕರೆಲ್ಲರೂ ಪೂಜಕರಾದರು. ಗೊಹೇಶ್ವರಲಿಂಗವು ಅಲ್ಲಿ ಇಲ್ಲವೆಂಬುದನು ಈ ವೇಷಲಾಂಛನರೆತ್ತ ಬಲ್ಲರು ಹೇಳಾ ಸಂಗನ ಬಸವಣ್ಣಾ ?

೨೩೯

ಲೋಕದವರನೊಂದು ಭೂತ ಹಿಡಿದರೆ, ಆ ಭೂತದಿಚ್ಛೆಯಲ್ಲಿ ನುಡಿವುತ್ತಿಪ್ಪರು. ಲಾಂಛನಧಾರಿ ವೇಷವ ಧರಿಸಿ, ಆಶೆಯಿಂದ ಘಾಸಿಯಾಗಲೇಕಯ್ಯ ? ಆನೆಯ ಚೋಹವ ತೊಟ್ಟು ನಾಯಾಗಿ ಬೊಗಳುವ ಮಾನವರನೇನೆಂಬೆ ಗೊಹೇಶ್ವರಾ ?

೨೪೦

ಕುಲಮದ ಛಲಮದ ವಿದ್ಯಾಮದದವರ ತೋರದಿರಾ! ಅವರ ಆರೂಢಪದವಿಯನೆನಗೆ ತೋರದಿರಾ! ಅವರ ಗರುವ ಗಂಭೀರತನವನೆನಗೆ ತೋರದಿರಾ! ಶಮೆದಮೆಯಳಿದು, ದಶಮುಖ ನಿಂದು, ಲಿಂಗದಲ್ಲಿ ಲೀಯವಾದವರನಲ್ಲದೆ ಎನಗೆ ತೋರದಿರಾ ಗೊಹೇಶ್ವರಾ.

೨೪೧

ದೇವಲೋಕದವರೆಲ್ಲರ ವ್ರತಗೇಡಿಗಳೆಂಬೆ, ಮರ್ತ್ಯಲೋಕದವರೆಲ್ಲರ ಭಕ್ತದ್ರೋಹಿಗಳೆಂಬೆ, ದೇವಸಂಭ್ರಮ ಗಣಪದವಿಯ ಪಡೆದವರೆಲ್ಲರು ಕುಂಭಕರ್ಣನಂತೆ ಅತಿನಿದ್ರಿಗಳೆಂಬೆ, ಅನಂತಶೀಲರ ಕಂಡಡೆ ಕೈಕೂಲಿಕಾರರೆಂಬೆ,–ಗೊಹೇಶ್ವರಾ, ಲಿಂಗೈಕ್ಯವನರಿಯರಾಗಿ.

೨೪೨

ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ. ಸಾಯದ ಮುನ್ನ ಸತ್ತಿದ್ದರೆ ಎಂತಯ್ಯ? ನಿಮ್ಮ ಲಿಂಗೈಕ್ಯದ ಪರಿ ಎಂತಯ್ಯ? ನಿಮ್ಮ ಪ್ರಮಥರ ಪರಿ ಅಂಗದ ಅವಸ್ಥೆಯಲ್ಲದೆ, ಲಿಂಗಾವಸ್ಥೆ ಆರಿಗೂ ಇಲ್ಲ ಗೊಹೇಶ್ವರಾ.

೧೭

ಲಿಂಗಾಂಗ ಸಾಮರಸ್ಯ

೧. ಎರಡು ಒಂದು

೧

ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ. ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ. ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ. ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ. ಸಕಳೇಶ್ವರದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ.

೨

ತನುವೆಂಬ ಹುತ್ತಕ್ಕೆ ಮನವೆಂಬ ಸರ್ಪ ಆವರಿಸಿ ಹೆಡೆ ಎತ್ತಿ ಆಡುತ್ತಿರಲು, ಆ ಸರ್ಪನ ಕಂಡು ನಾ ಹೆದರಿಕೊಂಡು ಗುರುಕರುಣವೆಂಬ ಪರುಷವ ತಂದು ಮುಟ್ಟಿಸಲು ನೋಟ ನಿಂದಿತ್ತು, ಹೆಡೆ ಅಡಗಿತ್ತು, ಗುರುಕರುಣವೆಂಬ ಪರುಷವೆ ನಿಂದಿತ್ತು. ನಿಂದ ಪರುಷವನೆ ಕೊಂಡು ನಿಜದಲ್ಲಿ ನಿರ್ವಯಲಾಗುವ ಶರಣರ ಪಾದವ ನಂಬಿ ಕೆಟ್ಟು, ಬಟ್ಟಬಯಲಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೩

ಅಯ್ಯಾ, ಎನ್ನ ಗುರು ಎನಗೆ ಉಪದೇಶವ ಮಾಡಿದ ಭೇದವ ಎಲ್ಲ ಗಣಂಗಳು ಕೇಳಿ. ತ್ರಿವಿಧ ಮಲತ್ರಯಂಗಳ ಹರಿದು, ಕರ್ಮೇಂದ್ರಿಯಂಗಳ ಜ್ಞಾನೇಂದ್ರಿಯ ಮಾಡಿ, ಕಾಯ ಜೀವ ಪ್ರಾಣ ಈ ತ್ರಿವಿಧವರತ ಭೇದವ ನರುಹಿಸಿದ. ಉರಸ್ಥಲದ ಪರಂಜ್ಯೋತಿ ಲಿಂಗವ ಎನ್ನ ಕರಸ್ಥಲಕ್ಕೆ ಕೊಟ್ಟರು. ಆ ಗುರು ಕೊಟ್ಟ ಲಿಂಗವೆಂಬ ದರ್ಪಣವ ನೋಡಿ ಎನ್ನ ಮನವೆಂಬ ಸರ್ಪ ಆ ದರ್ಪಣದಲ್ಲಿ ಲೀಯವಾಯಿತ್ತು. ಇದು ಕಾರಣ ಎನ್ನ ರೂಪೆಲ್ಲ ಉರಿಯುಂಡ ಕರ್ಪುರದಂತಾಯಿತ್ತು, ಆಲಿ ನುಂಗಿದ ನೋಟದಂತಾಯಿತ್ತು. ಪುಷ್ಪ ನುಂಗಿದ ಪರಿಮಳದಂತೆ, ಬಯಲು ನುಂಗಿದ ಬ್ರಹ್ಮಾಂಡದಂತೆ, ಅಂಗ ಲಿಂಗ ಸಂಗ ಸಂಯೋಗವಾದ ಭೇದ. ಇದ ಹಿಂಗದೆ ಶರಣಸಂಗವ ಮಾಡಿದವರಂಘ್ರಿಯಲ್ಲಿ ಐಕ್ಯವಾದೆನಯ್ಯ. ಬಸವ

ಪ್ರಿಯ ಕೂಡಲಚೆನ್ನಬಸವಣ್ಣಾ, ಇದನು ಕಂಗಳ ಪಟಲ ಹರಿದ ಲಿಂಗೈಕ್ಯರೇ ಬಲ್ಲರು.

೪

ತನು ನಿಮ್ಮ ಪೂಜಿಸುವ ಕೃಪೆಗೆ ಸಂದುದು. ಮನ ನಿಮ್ಮ ನೆನೆವ ಧ್ಯಾನಕ್ಕೆ ಸಂದುದು. ಪ್ರಾಣ ನಿಮ್ಮ ರತಿಸುಖಕ್ಕೆ ಸಂದುದು. ಇಂತು ತನು ಮನ ಪ್ರಾಣ ನಿಮಗೆ ಸಂದಿಪ್ಪ ನಿಸ್ಸಂಗಿಯಾದ ನಿಶ್ಚಟ ನಿಜಲಿಂಗೈಕ್ಯ ಕಾಣಾ ಗೊಹೇಶ್ವರ.

೫

ಸೋಹಂ ಹೊಕ್ಕು ದಾಸೋಹವೆಂಬ ಅಂಜನವ ಹಚ್ಚಿ ಮುಂದೆ ನೋಡಲಾಗಿ, ಅರುಹ ಕಂಡೆ, ಆ ಅರುಹಿಂದ ಆಚಾರವ ಕಂಡೆ, ಆಚಾರದಿಂದ ಗುರುವ ಕಂಡೆ, ಗುರುವಿಂದ ಲಿಂಗವ ಕಂಡೆ, ಲಿಂಗದಿಂದ ಜಂಗಮವ ಕಂಡೆ, ಜಂಗಮದಿಂದ ಪ್ರಸಾದವ ಕಂಡೆ, ಪ್ರಸಾದದಿಂದ ಪರವ ಕಂಡೆ, ಪರದೊಳಗೆ ವಿಪರೀತ ಸ್ವರೂಪವ ಕಂಡೆ, ವಿಪರೀತ ಸ್ವರೂಪದೊಳಗೆ ನಿರ್ಲೇಪವಾದ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೬

ಬೆಚ್ಚು ಬೇರಿಲ್ಲದ ಸುಖವೆನಗಚ್ಚಾದ ಪರಿಯ ನೋಡಯ್ಯಾ! ಅಂಗವಿಲ್ಲದ ಕೂಟ, ಸಂಗವಿಲ್ಲದ ಬೇಟ, ಸಮರತಿ ಇಲ್ಲದಾನಂದ ಸನ್ನಿಹಿತವಾಯಿತ್ತೆನಗೆ. ಸೌರಾಷ್ಟ್ರಸೋಮೇಶ್ವರಲಿಂಗದ ಸಂಗವೇನೂ ಅಲ್ಲದ ನಿಸ್ಸಂಗದ ನಿಜಸುಖವನೇನೆಂಬೆನಯ್ಯಾ?

೭

ಸಾಕಯ್ಯಾ, ಲೋಕದ ಹಂಗು ಹರಿಯಿತ್ತು. ತನುವಿನಾಸೆ ಬಿಟ್ಟಿತ್ತು. ಮನದ ಸಂಚಲ ನಿಂದಿತ್ತು. ನುಡಿಯು ಗಡಣ ಹಿಂಗಿತ್ತು. ಘನವ ಬೆರೆಯಿತ್ತು. ಬೆಳಗ ಕೂಡಿತ್ತು. ಬಯಲೊಳಗೋಲಾಡಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೮

ಅಂಗವಿಲ್ಲದ ಅನಾಮಯನನು ಕಂಗಳಿಲ್ಲದೆ ಕಂಡೆ. ಕಾಯವಿಲ್ಲದೆ ಅಪ್ಪಿದೆ. ಮನವಿಲ್ಲದೆ ನೆರೆದೆ. ಭಾವವಿಲ್ಲದೆ ಭಾವಿಸಿ, ಮಾಯವಿಲ್ಲದೆ ಸಂಗವ ಮಾಡಿ ನಿಸ್ಸಂಗಿಯಾದೆನು ನಿರುಪಾಧಿಕ ನಿಃಕಳಂಕ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೯

ಚಂದ್ರಕಾಂತದ ಶಿಲೆಯಲ್ಲಿ ಬಿಂದುವಡಗಿದಂತೆ, ಗೋವುಗಳಲ್ಲಿ ಗೋರೋಜನ ರಂಜಿಸುವಂತೆ, ಶಿಲೆಕಾಷ್ಠಂಗಳಲ್ಲಿ ಅನಲನಡಗಿಪ್ಪಂತೆ, ಸತ್ಯರ ಹೃದಯದಲ್ಲಿ ಮೌಕ್ತಿಕದ ಉದಕದಂತೆ ಭಾವವಿಲ್ಲದೆ ಅಡಗಿದೆ ಅಮರೇಶ್ವರಲಿಂಗದಲ್ಲಿ!

೧೦

ಅಯ್ಯಾ, ನಿಮ್ಮನೆನ್ನ ಕರಸ್ಥಲದಲ್ಲಿ ಧರಿಸಿದರೆ, ನೀನೆನ್ನ ಮನಸ್ಥಲವ ನೆಲೆಗೊಂಡುದ ನಾನೇನೆಂಬೆನಯ್ಯ? ಅಯ್ಯಾ, ನಿಮ್ಮನೆನ್ನ ಪಂಚಮುಖ ದಲ್ಲಿ ಧರಿಸಿದಡೆ, ನೀನೆನ್ನ ಸರ್ವಾಂಗವನವಗ್ರಹಿಸಿಕೊಂಡುದ ನಾನೇನೆಂಬೆ ನಯ್ಯ? ಅಯ್ಯಾ, ನಿಮ್ಮನೆನ್ನ ಅರಿವಿನಲ್ಲಿ ಬಯ್ಚಿಟ್ಟರೆ, ನೀವೆನ್ನ ನಿರ್ಭಾವ ದಲ್ಲಿ ನೆಲೆಗೊಂಡುದ ನಾನೇನೆಂಬೆನಯ್ಯ? ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಮುಟ್ಟಿ ಹಮ್ಮುಗೆಟ್ಟುದ ನಾನೇನೆಂಬೆನಯ್ಯ?

೧೧

ಅಂಗಸಂಗದಲ್ಲಿ ಲಿಂಗಸಂಗಿಯಾದೆ. ಲಿಂಗಸಂಗದಲ್ಲಿ ಅಂಗಸಂಗಿ ಯಾದೆ. ಉಭಯ ಸಂಗವನು ಅರಿಯದೆ ಪರಿಣಾಮಿಯಾದೆನು. ನುಡಿಯ ಗಡಣವ ಮರೆದು ತೆರಹಿಲ್ಲದಿದ್ದರೇನು? ಎನ್ನ ದೇವ ಚೆನ್ನಮಲ್ಲಿಕಾರ್ಜುನ ದೇವರ ಬೆರಸಿದ ಬಳಿಕ, ಎನ್ನ ನಾನು ಏನೆಂದು ಅರಿಯೆನಯ್ಯಾ.

೧೨

ಮನವು ಘನವ ನುಂಗಿ, ಘನವು ಮನವ ನುಂಗಿ, ಮನ ಘನವೆರಡನು ಪರಬ್ರಹ್ಮವು ನುಂಗಿದ ಬಳಿಕ, ನಾನೆಂಬುದೆಲ್ಲಿಯದಯ್ಯ ಅಖಂಡೇಶ್ವರಾ?

೧೩

ನಿರ್ವಿಕಲ್ಪವೆಂಬ ನಿಜದೊಳಗಯ್ಯ. ನಿರಹಂಭಾವದಲ್ಲಿ ನಾಸಿದ್ದೆನಯ್ಯ. ನೋಡಿಹೆನೆಂದರೆ ನೋಡಲಿಲ್ಲ. ಕೇಳಿಹೆನೆಂದರೆ ಕೇಳಲಿಲ್ಲ. ಘನ ನಿರಂಜನದ ಬೆಳಗಿಂಬಾದುದೇನೆಂಬೆ ಗೊಹೇಶ್ವರಾ!

೧೪

ನಾನೊಂದು ಊರಿಗೆ ಹಾದಿಯ ಕೇಳಿಕೊಂಡು ಹೋಗುತ್ತಿರಲಾಗಿ, ಮುಂದೆ ಅರಣ್ಯದೊಳಗೆ ಮೂರು ಬಟ್ಟೆ ಆಯಿತ್ತು. ಎರಡು ಪಥವ ಬಿಟ್ಟು ಒಂದು ಪಥವ ಹಿಡಿದು ಬರುತಿರಲು, ಮುಂದೆ ಮೂರು ಬಟ್ಟೆಯು ಒಂದಾದುವು. ಆ ಮೂರು ಬಟ್ಟೆಯು ಕೂಡಿದ ಬಳಿಯು ಒಂದು ಬೆಟ್ಟ ಹುಟ್ಟಿತ್ತು. ಆ ಬೆಟ್ಟವನಾರು ಏರಬಾರದು, ಇಳಿಯಬಾರದು. ಈ ಬೆಟ್ಟವ ಬಿಟ್ಟು ಹೋದರೆ, ಎನಗೆ ಪಥವಿಲ್ಲವೆಂದು ಸುತ್ತ ನೋಡಲಾಗಿ, ಆರು ಮೆಟ್ಟಿನದೊಂದು ಏಣಿ ಹಾಕಿರುವದ ಕಂಡೆ. ಆ ಏಣಿಯು ಮೆಟ್ಟ ಮೆಟ್ಟ ಆ ಬೆಟ್ಟದ ತುದಿಯನೇರಿದೆ. ಆ ತುಟ್ಟತುದಿಯನೇರಿ ನೋಡಲಾಗಿ, ಬಟ್ಟಬಯಲಾಗಿದ್ದಿತು. ಆ ಬಟ್ಟಬಯಲೊಳಗೆ ಹೋಗುತ್ತಿರಲಾಗಿ, ನಾ ಎತ್ತ ಹೋದೆನೆಂದರಿಯೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೫

ಅಂಗದ ಮೇಲೆ ಲಿಂಗ, ಲಿಂಗದ ಮೇಲೆ ಅಂಗವಿದೇಸೊ? ಮನದ ಮೇಲೆ ಅರಿವು, ಅರಿವಿನ ಮೇಲೆ ಕುರುಹಿದೇನೋ? ನೀನೆಂಬಲ್ಲಿ ನಾನು, ನಾನೆಂಬಲ್ಲಿ ನೀನು. ನೀ ನಾನೆಂಬುದಕ್ಕೆ ತೆರಹಿಲ್ಲ ಗೊಹೇಶ್ವರ.

೧೬

ಸಿಡಿಲು ಹೊಯಿದ ಬಾವಿಗೆ ಸೋಪಾನವೇಕೋ? ನೆರೆಯರಿದ ಬಳಿಕ ಮತ್ತೆ ಮತಿ ಹುಟ್ಟಲುಂಟೇ? ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೊ? ತನ್ನಲ್ಲಿ ತಾನು ತದ್ಗತವಾದ ಬಳಿಕ, ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ನೋಡಾ ಎನ್ನ ಅಜಗಣ್ಣತಂದೆಗೆ.

೧೭

ವೇದಶಾಸ್ತ್ರಾಗಮಪುರಾಣಂಗಳನೋದಿ, ಆದಿಯ ಪಥವ ಸಾಧಿಸಬೇಕೆಂಬ ಭೇದಬುದ್ಧಿಯ ಭ್ರಾಂತಜ್ಞಾನಿಯಲ್ಲ ನೋಡಾ ಲಿಂಗೈಕ್ಯನು.

ಷಡುದರ್ಶನಂಗಳ ಶೋಧಿಸಿ ಕಡುಮುಕ್ತಿಯ ಪಡೆವೆನೆಂಬ ಜಡಮತಿಯವನಲ್ಲ ನೋಡಾ ಲಿಂಗೈಕ್ಯನು. ಕುಟಿಲವ್ಯಾಪಾರದಿಂದೆ ಸಟೆಯನೆ ಸಂಪಾದಿಸಿ ಘಟವ ಹೊರೆವನಲ್ಲ ನೋಡಾ ಲಿಂಗೈಕ್ಯನು. ಕಾಕುಮನದ ಕಳವಳವನಡಗಿಸಿ, ಲೋಕರಂಜನೆಯನುಡುಗಿಸಿ, ಕುರುಹಿಲ್ಲದ ಬ್ರಹ್ಮದಲ್ಲಿ ತೆರಹಿಲ್ಲದಿರ್ಪನು ನೋಡಾ—ಅಖಂಡೇಶ್ವರಾ, ನಿಮ್ಮ ನಿಜಲಿಂಗೈಕ್ಯನು.

೧೮

ಈ ಜಗದೊಳಗಣ ಆಟವ ನೋಡಿದರೆ, ಎನಗೆ ಹಗರಣವಾಗಿ ಕಾಣಿಸುತ್ತಿದೆ! ಅದೇನು ಕಾರಣವೆಂದರೆ, ಹಿಂದಣ ಮುಕ್ತಿಯನರಿಯರು. ಮುಂದಣ ಮುಕ್ತಿಯನರಿಯರು. ಬಂದ ಬಂದ ಭವದಲ್ಲಿ ಮುಳುಗುತ್ತಲಿದ್ದಾರೆ. ನಾನಿದರಂದವನರಿದು, ದ್ವಂದ್ವವ ಹರಿದು, ಜಗದ ನಿಂದೆ ಸ್ತುತಿಯ ಸಮಗಂಡು, ಹಿಂದ ಹರಿದು ಮುಂದನರಿದು, ಸದಮಳಾನಂದದಲ್ಲಿ ನಿಂದು, ಸಚ್ಚಿದಾನಂದದಲ್ಲಿ ಐಕ್ಯವಾಗಿ, ಸತ್ಯಶರಣರ ಪಾದದಲ್ಲಿ ನಿರ್ಮುಕ್ತಳಾದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೯

ತನುಗುಣ ನಾಸ್ತಿ, ಮನಗುಣ ನಾಸ್ತಿ, ಧನಗುಣ ನಾಸ್ತಿಯಾದಡೇನು? ಭಾವ ನಾಸ್ತಿಯಾಗಬೇಕು. ಭಾವ ನಾಸ್ತಿಯಾದಲ್ಲದೆ ಅರಿವು ನೆಲೆಗೊಳ್ಳದು. ಅರಿವು ನೆಲೆಗೊಂಡಲ್ಲಿ ಕುರುಹಿಂಗೆ ಹೊರಗು. ಕುರುಹಳಿದು ಕೂಡುವ ಪರಮಸುಖವು ಗೊಹೇಶ್ವರಲಿಂಗದಲ್ಲಿ ನಿನಗೆ ಸಾಧ್ಯವಾದ ಪರಿಯ ಹೇಳಾ ಮಡಿವಾಳಮಾಚಯ್ಯಾ.

೨೦

ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ. ಎಂಜಲುಳ್ಳನ್ನಕ್ಕರ ಪ್ರಸಾದಿಯಲ್ಲ. ಸೂತಕವುಳ್ಳನ್ನಕ್ಕರ ಶರಣನಲ್ಲ—ಈ ತ್ರಿವಿಧವುಳ್ಳನ್ನಕ್ಕರ ಲಿಂಗೈಕ್ಯನಲ್ಲ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೨೧

ಸಕಲವ್ಯಾಪಾರವ ಬಿಟ್ಟು, ನಿಮಗೆ ನಾನು ಮರುಳಾಗಿರ್ಪೆನಯ್ಯಾ. ಸಕಲವ್ಯಾಪಾರವ ಬಿಟ್ಟು, ನನಗೆ ನೀವು ಮರುಳಾಗಿರ್ಪಿರಯ್ಯಾ. ನಿಮಿಷಂ

ನಿಮಿಷಾರ್ಧಂ ನಾ ನಿಮ್ಮನಗಲದಿರ್ಪೆನಯ್ಯಾ. ನೀವೆನ್ನ ನಿಮಿಷಂ ನಿಮಿಷಾರ್ಧವಗಲದಿರ್ಪಿರಯ್ಯಾ. ಚಿನ್ನ ಬಣ್ಣದಂತೆ ನಾವಿಬ್ಬರು ಕೂಡಿ ಎಂದೆಂದಿಗೂ ಅಗಲದಂತಿರ್ಪೆವಯ್ಯಾ ಅಖಂಡೇಶ್ವರಾ.

೨೨

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನ ವಿಕಾರವೆಂಬುದಿಲ್ಲ. ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ. ಇಂತೀ ತ್ರಿವಿಧಗುಣವನರಿಯದಾತನು ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವಾ.

೨೩

ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ, ಜಲವರತ ತಟಾಕದಂತೆ, ಬೆಂದ ನುಲಿಯಂತೆ, ಮತ್ತೆ ಹಿಂದಣ ಹಂಗುಂಟೆ ಅಣ್ಣಾ, ಚೆನ್ನಮಲ್ಲಿಕಾರ್ಜುನನೆ ಆಶ್ರಯವಾದವಳಿಗೆ ?

೨೪

ಭಾವಿಸಿ ನೋಡಿದೊಡೆ, ಅಂಗವಾಯಿತ್ತು, ಅಂಗಗುಣವಳಿದುಳಿದ ಬಳಿಕ, ನಾನಿನಗಂಗವಾದೆ. ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದ ಬಳಿಕ, ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ.

೨೫

ಅಂಗ ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ, ಕರುಣರಸ ಭರಿತವಾಗಿಪ್ಪುದೇ ಕುರುಹು. ಕಂಗಳು ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ, ಕಾಮಾದಿಗಳ ಸೃಜಿಸದುದೇ ಕುರುಹು. ಕರವೇ ಲಿಂಗ ವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ, ಇಹ ಪರ ಮೋಕ್ಷವ ಬಯಸ ದಿಪ್ಪುದೇ ಕುರುಹು. ಈ ತ್ರಿವಿಧವು ಏಕವಾದರೆ, ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನಲ್ಲಿ ಮಹಾಲಿಂಗೈಕ್ಯವು.

೨೬

ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ. ಮಾಟ ವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ. ಬಂದ ಭಾವ ಸಲೆ ಸಂದಿತ್ತು.ಎನ್ನಂಗದವಸಾನವ ಹೇಳಾ ಚೆನ್ನಮಲ್ಲಿಕಾರ್ಜುನಯ್ಯ.

೨೭

ಬಂದಿತ್ತು ದಿನ! ಬಸವಣ್ಣ ಕಲ್ಲಿಗೆ, ಚೆನ್ನಬಸವಣ್ಣ ಉಳುವೆಯಲ್ಲಿಗೆ, ಪ್ರಭು ಅಕ್ಕ ಕದಳಿದ್ವಾರಕ್ಕೆ, ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ. ನಾನು ತುರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ ಅಡಗಿಹರೆಲ್ಲರೂ. ಅಡಗಿದುದ ಕೇಳಿ ನಾ ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೆ ಅಡಗುವೆನು.

೨೮

ಮೂಲಾಧಾರದ ಬೇರ ಮೆಟ್ಟಿ, ಭೂಮಂಡಲವನೇರಿದೆ. ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀಪರ್ವತವನೇರಿದೆ. ಕೈವಿಡಿದು ತೆಗೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ.

೨೯

ಕದಳಿ ಎಂಬುದು ತನು. ಕದಳಿ ಎಂಬುದು ಮನ. ಕದಳಿ ಎಂಬುದು ವಿಷಯಂಗಳು. ಕದಳಿ ಎಂಬುದು ಭವಘೋರಾರಣ್ಯ. ಕದಳಿ ಎಂಬುದ ಗೆದ್ದು ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆಟ್ಟ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದರೆ, ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು.

೩೦

ದುಃಖ ಹೋಯಿತ್ತು ತನ್ನಲ್ಲಿ ತಾನಿಲ್ಲದೆ. ಸುಖ ನಿಂದುದು ತನ್ನಲ್ಲಿ ತಾನು ನಿಜವಾಗಿ ನಿಂದವಂಗೆ, ಸಕಳೇಶ್ವರಯ್ಯನು ತಾನಾಗಿ ನಿಂದವಂಗೆ.

೩೧

ಮನವೆ ಲಿಂಗವಾದ ಬಳಿಕ ನೆನೆವುದಿನ್ನಾರನಯ್ಯ? ಭಾವವೆ ಐಕ್ಯವಾದ ಬಳಿಕ ಬಯಸುವುದಿನ್ನಾರನು? ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ಅರಿವುದಿನ್ನಾರನು ಗೊಹೇಶ್ವರಾ?

೩೨

ಪರತತ್ವದಲ್ಲಿ ತದ್ಗತವಾದ ಬಳಿಕ, ಬೇರೆ ಮತ್ತರಿದಹೆನೆಂಬ ಭ್ರಾಂತೇಕೆ? ಅರಿವು ಸಯವಾಗಿ ಮರಹು ನಷ್ಟವಾದ ಬಳಿಕ, ತಾನಾರೆಂಬ

ವಿಚಾರವೇಕೆ? ಗೊಹೇಶ್ವರನ ಬೆರಸಿ ಭೇದಗೆಟ್ಟ ಬಳಿಕ, ಮತ್ತೆ ಸಂಗವ ಮಾಡಿಹೆನೆಂಬ ತವಕವೇಕಯ್ಯ?

೩೩

ಎನ್ನಲ್ಲಿ ನಾನು ನಿಜವಾಗಿ ನಿಮ್ಮನರಿದೆನೆಂದಡೆ, ಅದು ನಿಮ್ಮ ಮತಕ್ಕೆ ಬಪ್ಪುದೆ? ಎನ್ನ ನಾನು ಮರೆದು ನಿಮ್ಮನರಿದಡೆ, ಅದು ನಿಮ್ಮ ರೂಪೆಂಬೆ. ಎನ್ನ ನಿನ್ನೊಳು ಮರೆದರೆ, ಕನ್ನಡಿಯೊಳಗಣ ಪ್ರತಿಬಿಂಬದಂತೆ ಭಿನ್ನವಿಲ್ಲದಿದ್ದೆನು ಕಾಣಾ ಗೊಹೇಶ್ವರಾ.

೩೪

ಕಂಡೆನೆಂಬುದು ಕಂಗೆ ಮರವೆ; ಕಾಣೆನೆಂಬುದು ಮನದ ಮರವೆ. ಕೂಡಿದೆನೆಂಬುದು ಅರಿವಿನ ಮರವೆ; ಅಗಲಿದೆನೆಂಬುದು ಮರಹಿನ ಮರವೆ. ಇಂತು ಕಂಡೆ ಕಾಣೆ, ಕೂಡಿದೆನಗಲಿದೆನೆಂಬ ಭ್ರಾಂತಿಸೂತಕವ ತಿಳಿದು ನೋಡಲು, ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ ಎಲೆ ತಾಯೆ.

೩೫

ಕೂಡಲಿಲ್ಲದ ಘನವ ಕೂಡುವ ಪರಿಯೆಂತವ್ವ? ಹೇಳಿದರೆ ಅದಕ್ಕದೆ ಕೊರತೆ. ಗೊಹೇಶ್ವರಲಿಂಗವ ಬೇರು ಮಾಡಿ ಬೆರಸುವ ಪರಿ ಎಂತು ಹೇಳಾ?

೩೬

ಎನಗಿನ್ನೇನು, ಎಮ್ಮಯ್ಯನೈಕ್ಯವನೈದಿದ ಬಳಿಕ? ಎನಗೆ ಕಾಯವಿಲ್ಲ. ಎನಗೆ ಪ್ರಾಣವಿಲ್ಲ. ಎನಗೆ ಹೃದಯದ ಹಂಗು ಹರಿದು ಪರಿಣಾಮ ಪ್ರಸಾದಿಯಾದೆನಯ್ಯಾ ಸಂಗಯ್ಯಾ.

೩೭

ಅಂಗ ಲಿಂಗವ ವೇಧಿಸಿ, ಅಂಗ ಲಿಂಗದೊಳಗಾಯಿತ್ತು. ಮನ ಲಿಂಗವ ವೇಧಿಸಿ, ಮನ ಲಿಂಗದೊಳಗಾಯಿತ್ತು. ಭಾವ ಲಿಂಗವ ವೇಧಿಸಿ, ಭಾವ ಲಿಂಗದೊಳಗಾಯಿತ್ತು. ಚೆನ್ನಮಲ್ಲಿಕಾರ್ಜುನ, ನಿಮ್ಮೊಲುಮೆಯ ಸಂಗದಲಿರ್ದು ಸ್ವಯಲಿಂಗಿಯಾದೆನು.

೩೮

ಅಂಗವ ಮರೆದಂಗೆ ಲಿಂಗದ ಹಂಗೇಕೋ? ಅರಿವ ಕಂಡವಂಗೆ ಕುರುಹಿನ ಹಂಗೇಕೋ? ತಾನು ತಾನಾದವಂಗೆ ಧ್ಯಾನದ ಹಂಗೇಕೋ? ಮನ ಮುಗ್ಧವಾದವಂಗೆ ಮಾನವರ ಹಂಗೇಕೋ? ಆಶೆಯನಳಿದವಂಗೆ ರೋಷದ ಹಂಗೇಕೋ? ಕಾಮನ ಸುಟ್ಟವಂಗೆ ಕಳವಳದ ಹಂಗೇಕೋ? ನಡೆಗೆಟ್ಟವಂಗೆ ನುಡಿಯ ಹಂಗೇಕೋ? ತನ್ನ ಮರೆದು ನಿಮ್ಮನರಿದ ಶರಣಂಗೆ ಅಲ್ಲೆ ಐಕ್ಯ ಕಂಡೆಯ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೩೯

ನೆನೆವೆನೆ? ಮರೆದವನಲ್ಲ. ನೆನೆವೆನೆ? ಉದಾಸೀನಿಯಲ್ಲ. ಕುರುಹೆಂಬೆನೆ? ತೆರಹಿಲ್ಲವಾಗಿ. ಅರಿಯೆನಿನ್ನಾವ ಭಾವಗಳೆಂಬವನು. ಎರಡಳಿದು ಒಂದುಳಿದ ಕಾರಣ ನೆನೆಯಲಿಲ್ಲಂಬಿಗ ಚೌಡಯ್ಯ.

೪೦

ನೆನೆದಿಹೆನೆಂದರೆ ಏನ ನೆನೆವೆನಯ್ಯ! ಮನ ಮಂಕಾಯಿತ್ತು. ಕಾಯ ಕರಗಿತ್ತು. ದೇಹ ಹಮ್ಮಳಿಯಿತ್ತು. ತಾನು ತಾನಾಗಿ, ಬೆಳಗಿನೊಳಗೋಲಾಡಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ!

೪೧

ಕರ್ಪೂರದ ಗಿರಿಯ ಉರಿ ಹಿಡಿದಡೆ ಇದ್ದಿಲುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ? ಕೆಂಡದ ಗಿರಿಯನರಗಿನ ಬಾಣದಲೆಚ್ಚಡೆ, ಮರಳಿ ಬಾಣವನರಸಲುಂಟೆ? ಗೊಹೇಶ್ವರನೆಂಬ ಲಿಂಗವನರಿದು ಮರಳಿ ನೆನೆಯಲುಂಟೆ?

೪೨

ನೆನೆಯಲರಿಯೆ, ನಿರ್ಧರಿಸಲರಿಯೆ, ಮನವಿಲ್ಲಾಗಿ. ಭಾವಿಸಲರಿಯೆ, ಬಳಸಲರಿಯೆ, ಭಾವ ನಿರ್ಭಾವವಾಯಿತ್ತಾಗಿ. ಧ್ಯಾನ ಮೌನವನರಿಯೆ, ಧ್ಯಾನಾತೀತ ತಾನೆಯಾಯಿತ್ತಾಗಿ. ಜ್ಞಾತೃ ಜ್ಞಾನ ಜ್ಞೇಯಂಗಳಿಲ್ಲವೂ ಮೀರಿ, ಅಭಿನವ ಮಲ್ಲಿಕಾರ್ಜುನನಲ್ಲಿ ಪರಮಸುಖಿಯಾದೆನು.

೪೩

ತನುವಳಿಯಿತ್ತು; ಮನವಳಿಯಿತ್ತು; ಭಾವವಳಿಯಿತ್ತು; ಎನ್ನ ಬಯಕೆಯಳಿಯಿತ್ತು; ನಿಜವೆಂಬುದುಳಿಯಿತ್ತು. ನಾವು ನೀವು ಬಯಲಲ್ಲಿ ಬೆರಸಿ ಕಲಿದೇವರ ದೇವನಲ್ಲಿ ಜೇರಿಲ್ಲದಿರ್ದೆನು.

೪೪

ಹೊಸಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು. ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು. ವಾಯುವಿನ ಸಂಚದ ಪರಿಮಳದ ನಿಲವಿನಂತೆ ಲಿಂಗೈಕ್ಯ ಸಂಬಂಧವದು ಗೊಹೇಶ್ವರ.

೪೫

ಬಯಲೇ ರೂಪಾಯಿತ್ತು. ನಿರ್ವಯಲೇ ನಿರೂಪಾಯಿತ್ತು. ಸರ್ವಾಂಗದೊಳು ಉರಿ ವೇಧಿಸಿತ್ತು. ಅಲ್ಲೊಂದು ಸದಮದಗಜ ಹಯನಾಯಿತ್ತು. ಅಮೃತವನೆ ಉಂಡಿತ್ತು. ಮಧುರಸವನೇ ಉಂಡಿತ್ತು. ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡಿತ್ತು.

೨. ನಿಶ್ಶಬ್ದ ಶಬ್ದ

೪೬

ಅರಳಿದ ಪುಷ್ಪ ಪರಿಮಳಿಸದಿಹುದೇ? ತುಂಬಿದ ಸಾಗರ ತೊರೆನೆರೆಯಾಡದಿಹುದೇ? ಆಕಾಶವ ಮುಟ್ಟುವವ ದೋಂಟಿಗೋಲ ಹಿಡಿವನೇ? ಪರಮ ಪರಿಣಾಮಿ ಕರ್ಮವನತಿಗಳೆಯದಿಹನೇ ಮಹಾಲಿಂಗಕಲ್ಲೇಶ್ವರಾ?

೪೭

ಚಿನ್ನವನೊರೆಯಬಹುದಲ್ಲದೆ, ಬಣ್ಣವನೊರೆಯಬಹುದೆ? ಹೂವ ಮುಡಿಯಬಹುದಲ್ಲದೆ, ಗಂಧವ ಮುಡಿಯಬಹುದೆ? ಕರ್ಮವ ಮಾಡಬಹುದಲ್ಲದೆ, ವಸ್ತುವನರಿಯಬಹುದೆ? ಗೊಹೇಶ್ವರನೆನಬಹುದಲ್ಲದೆ, ಲಿಂಗವು ತಾನಾಗಬಾರದು ಸಿದ್ಧರಾಮಯ್ಯಾ.

೪೮

ಈ ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದಡೆ, ಪೃಥ್ವಿ ಪೃಥ್ವಿಯನೆ ಕೂಡಿ, ಅಪ್ಪು ಅಪ್ಪುವನೆ ಕೂಡಿ, ಅಗ್ನಿ ಅಗ್ನಿಯನೆ ಕೂಡಿ, ವಾಯು ವಾಯುವನೆ ಕೂಡಿ, ಆಕಾಶ ಆಕಾಶವನೆ ಕೂಡಿ, ಪಂಚ ತತ್ವವೆಲ್ಲ ಹಂಚುಹರಿಯಾಗಿ, ಹಿಂಚು ಮುಂಚು ಮಾಡುವ ಮನದ ಸಂಚಲವಡಗಿ, ಕರ್ಮದ ಗೊಂಚಲ ನಿಂದ ನಿಶ್ಚಿಂತ ನಿಜೈಕ್ಯಂಗೆ ನಮೋ ನಮೋ ಎನುತಿರ್ದೆ ಬಸವಪ್ರಿಯ ಚೆನ್ನಬಸವಣ್ಣಾ.

೪೯

ನಾರಿ ಹರಿಯಿತ್ತು, ಬಿಲ್ಲು ಮುರಿಯಿತ್ತು, ಅಂಜೇನ ಮಾಡುವುದು ? ಎಲೆ ಎಲೆ ನೋಡಿರಣ್ಣಾ. ಹೊತ್ತು ಹೋಯಿತ್ತು, ನೇಮ ಸೀರಡಸಿತ್ತು. ಏನು ಕಾರಣ ಹೇಳಾ ಗೊಹೇಶ್ವರಾ ?

೫೦

ನಡೆದು ನಡೆದು ನಡೆಯ ಕಂಡವರು ನುಡಿದು ನುಡಿದು ಹೇಳುತ್ತಿ ಹರೆ? ನುಡಿದು ನುಡಿದು ಹೇಳುವನ್ನಕ್ಕರ ನಡೆದುದೆಲ್ಲಾ ಹುಸಿಯೆಂಬೆನು. ಮಾತಿನ ಮಥನದಿಂದರಿವು ಕರಣಮಥನದಿಂದಾದವಲ್ಲದೆ, ಅನುಪಮ ಸ್ವರ ಭೇದವಾದ ಪರಿ ಎಂತು ಹೇಳಾ? ಇದಿರ ಗೆಲಬೇಕೆಂದು ನುಡಿದುಕೊಂಡ ರೇನು? ಮನಕ್ಕೆ ಮನವೆ ಸಾಕ್ಷಿಯಾಗಿ ನಿಃಪತಿಯಲ್ಲ ನೋಡಾ! ಎನ್ನ ಅಜಗಣ್ಣತಂದೆ ಶಬುದಕ್ಕೆ ಹೇಸಿ ಮುಗುದನಾದನು.

೫೧

ಅದ್ವೈತವ ನೆಲೆಗೊಳಿಸಿ, ಎರಡಳಿದೆನೆಂಬವರು ಶಿಶು ಕಂಡ ಕನಸಿನಂತಿ ರಬೇಕಲ್ಲದೆ, ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ? ಅರಿ ವರತು, ಮರಹು ನಷ್ಟವಾಗಿ ಗುರುವ ತೊರೆದೆನೆಂಬವರು ಇದಿರಿಂಗೆ ಕರುಳ ಕಲೆಯನರುಹುವ ಪರಿಯೆಂತು ಹೇಳಾ? ಮನದ ಕೊನೆಯ ಮೊನೆಯ ಮೇಲಣ ಅರಿವಿನ ಕಣ್ಣ ಮುಂದೆ ಸ್ವಯಂಪ್ರಕಾಶ ತೋರುತ್ತಿರ್ದಡೆ ತಾನಾಗಬಲ್ಲನೇ? ನೆರೆಯರಿತು ಮರೆಯಬಲ್ಲರೆ, ಎನ್ನ ಅಜಗಣ್ಣನಂತೆ ಶಬ್ದ

ಮುಗ್ಧವಾಗಿರಬೇಕಲ್ಲದೆ, ಶಬ್ದಸಂದಣಿಯು ಮಾತು ಸಯವಲ್ಲ ನೋಡಾ ಪ್ರಭುವೆ.

೫೨

ಅರಿದರಿದು ಅರಿವು ಬಂಜೆಯಾಯಿತ್ತು. ಮರೆಮರೆದು ಮರಹು ಬಂಜೆಯಾಯಿತ್ತು. ಗೊಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು.

೫೩

ಹೊರಸಿನೆಕ್ಕೆಯ, ಶಂಖದ ಮಣಿಯ ಪವಣಿಸಬಲ್ಲವರು ನೀವಾರಾದಡೂ ಪವಣಿಸಿರಯ್ಯ. ಇದ ನಾನರಿಯೆನಯ್ಯ! ಒಂದು ತಾಳ ಮರದ ಮೇಲೆ ಮೂರು ರತ್ನವಿಹುದ ನಾ ಬಲ್ಲೆ. ಒಂದು ರತ್ನ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾಯಿತ್ತು. ಒಂದು ರತ್ನ ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು. ಇನ್ನೊಂದು ರತ್ನಕ್ಕೆ ಬೆಲೆಯಿಲ್ಲವೆಂದೂ! ಗೊಹೇಶ್ವರ ಲಿಂಗೈಕ್ಯವು 'ನಿಶ್ಶಬ್ದಂ ಬ್ರಹ್ಮ ಉಚ್ಯತೇ.'

೫೪

ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ–ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀ ನಷ್ಟವಾದೆ. ಕಲಿದೇವರ ದೇವಾ ಎಂಬ ನುಡಿ 'ನಿಃಶಬ್ದಂ ಬ್ರಹ್ಮ ಉಚ್ಯತೇ' ಎನುತಿದ್ದಿತ್ತು.

೫೫

ಪಂಚಭೂತಸಂಗದಿಂದ ಜ್ಯೋತಿಯಾಯಿತ್ತು. ಪಂಚಭೂತಸಂಗದಿಂದ ಕರ್ಪುರವಾಯಿತ್ತು. ಈ ಎರಡರ ಸಂಗವೇನಾಯಿತ್ತು ಹೇಳಾ? ವಾಙ್ಮನಕ್ಕತೀತ ಗೊಹೇಶ್ವರ.

೫೬

ಲಿಂಗವೆನ್ನೆ ಲಿಂಗೈಕ್ಯವೆನ್ನೆ. ಸಂಗವೆನ್ನೆ ಸಮರಸವೆನ್ನೆ. ಆಯಿತ್ತೆನ್ನೆ ಆಗದೆನ್ನೆ. ನೀನೆನ್ನೆ ನಾನೆನ್ನೆ. ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ, ಏನೂ ಎನ್ನೆ.

೫೭

ಏನೇನು ಎನಲಿಲ್ಲ. ಎನ್ನ ಭಕ್ತಿಯಳಿದ ಭಾವಕ್ಕೆ ಇನ್ನೇನು ಏನು ಎನಲಿಲ್ಲ. ಎನ್ನ ಪ್ರಾಣದ ಹಂಗ ಹರಿದ ಬಳಿಕ, ಇನ್ನೇನು ಏನು ಎನಲಿಲ್ಲ. ಎನ್ನೈಕ್ಯದ ಸಮರಸ ಕೈಗೂಡಿದ ಬಳಿಕ, ಇನ್ನೇನು ಏನು ಎನಲಿಲ್ಲ. ಎನ್ನಭಿಮಾನದ ಕರ್ತೃ ನಿರಾಳದಲ್ಲಿ ನಿಂದ ಬಳಿಕ, ಸಯಧಾನ ಸುಯಿಧಾನವಾಯಿತ್ತಯ್ಯಾ ಸಂಗಯ್ಯಾ.

೫೮

ಲಿಂಗವಂತಂಗೆ ಲಿಂಗವಾರ್ತೆಯ ನುಡಿವುದೆ ಭಂಗ. ಹಂಗು ನೋಡಾ! ಹಂಗಿನ ಶಬ್ದ ನೋಡಾ! ಕೊಡನ ತುಂಬಿದ ಹಾಲನೊಡೆಯು ಹಾಯ್ಕಿ, ಇನ್ನು ಉಡುಗಿಹೆನೆಂದರೆ ಉಂಟೆ ಗೊಹೇಶ್ವರ?

೫೯

ಸತ್ತ ಹೆಣ ಕೂಗಿದುದುಂಟು. ಬಯಚಿಟ್ಟ ಬಯಕೆ ಕರೆದುದುಂಟು. ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು. ಇದ ನಿಶ್ಚಯಿಸಿ ನೋಡಿ ಚೆನ್ನಮಲ್ಲಿಕಾರ್ಜುನದೇವರಲ್ಲಿ.

೬೦

ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು. ತನ್ನ ಋಣ ನಿಧಾನ ಎದ್ದು ಕರೆದಿತ್ತು. ಹೆಪ್ಪಿಟ್ಟ ಹಾಲು ಗಟ್ಟಿದುಪ್ಪವಾಗಿ ಸಿಹಿಯಾಯಿತ್ತು. ಇದಕ್ಕೆ ತಪ್ಪ ಸಾಧಿಸಲೇಕೆ ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ?

೬೧

ನಡೆದಡೆ ನಡೆಗೆಟ್ಟ ನಡೆಯ ನಡೆವುದಯ್ಯ. ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ. ಒಡಲ ಹಿಡಿದಡೆ ಹಿಡಿಯದೆ ಹಿಡಿವುದಯ್ಯ. ಕೂಡುವಡೆ ಕೇಡಿಲ್ಲದ ಕೂಟವ ಕೂಡುವುದಯ್ಯ. ಗೊಹೇಶ್ವರ, ನಿಮ್ಮಲ್ಲಿ ನಿಲುವುದಯ್ಯ.

೬೨

ಮೂರರಲ್ಲಿ ಮುಟ್ಟಲಿಲ್ಲ, ಆರರಲ್ಲಿ ತೋರಲಿಲ್ಲ. ಎಂಟರಲ್ಲಿ ಕಂಡುದಿಲ್ಲ, ಒಂದರಲ್ಲಿ ನಿಂದುದಿಲ್ಲ. ಏನೆಂದೆಂಬೆನೆಂತೆಂದೆಂಬೆ! ಕಾಯದಲ್ಲಿ ಅಳಿದುದಿಲ್ಲ, ಜೀವದಲ್ಲಿ ಉಳಿದುದಿಲ್ಲ; ಗೊಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ.

೩. ಐಕ್ಯಪೂಜೆ-ಭಕ್ತಿ

೬೩

ಕ್ರಿಯೆಗಳು ಮುಟ್ಟಲರಿಯವು, ನಿಮ್ಮನೆಂತು ಪೂಜಿಸುವೆ? ನಾದ ಬಿಂದುಗಳು ಮುಟ್ಟಲರಿಯವು, ನಿಮ್ಮನೆಂತು ಹಾಡುವೆ? ಕಾಯ ಮುಟ್ಟು ವಡೆ ಕಾಣಬಾರದ ಘನವು, ನಿಮ್ಮನೆಂತು ಕರಸ್ಥಲದಲ್ಲಿ ಧರಿಸುವೆ? ಚೆನ್ನ ಮಲ್ಲಿಕಾರ್ಜುನಯ್ಯ, ನಿಮ್ಮ ನೋಡಿ ನೋಡಿ ಸೈವೆರಗಾಗುತಿರ್ದೆನು!

೬೪

ತನು ನಿಮ್ಮ ರೂಪಾದ ಬಳಿಕ, ನಾನಾರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ, ನಾನಾರ ನೆನೆವೆ? ಪ್ರಾಣ ನಿಮ್ಮ ರೂಪಾದ ಬಳಿಕ, ನಾನಾರನಾರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ, ನಾನಾರ ನರಿವೆ? ಚೆನ್ನಮಲ್ಲಿಕಾರ್ಜುನಾ, ನಿಮ್ಮಲ್ಲಿ ನೀವಾಗಿ ನಿಮ್ಮಿಂದ ಮರೆದೆನಯ್ಯಾ.

೬೫

ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ? ಬೇಟದ ಮರುಳಿಗೆ ಲಜ್ಜೆ ಮುನ್ನುಂಟೆ? ನಿಮ್ಮನರಿದ ಶರಣಂಗೆ ಪೂಜೆಯ ಹಂಬಲ ದಂದುಗವೇಕೆ? ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ? ಗೊಹೇಶ್ವರಲಿಂಗಕ್ಕೆ ಕುರುಹು ಮುನ್ನುಂಟೆ?

೬೬

ಅರಿದು ನೆನೆಯಲಿಲ್ಲ, ಮರೆದು ಪೂಜಿಸಲಿಲ್ಲ. ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ. ತನಗೆ ಗುರುವಿಲ್ಲ, ಗುರುವಿಗೆ ತಾನಿಲ್ಲ. ಗುರು

ವಿಗೆ ಶಿಷ್ಯನು ಹೊಡವಡುವ ಕಾರಣ ಮುನ್ನಿಲ್ಲ. ಬಯಲ ಬಿತ್ತಲಿಲ್ಲ, ಬೆಳೆಯಲಿಲ್ಲ; ಒಕ್ಕಲಿಲ್ಲ, ತೂರಲಿಲ್ಲ. ಗೊಹೇಶ್ವರನೆಂಬ ಲಿಂಗಕ್ಕೆ ಕುರುಹು ಮುನ್ನಿಲ್ಲ.

೬೭

ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು. ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು. ದೇವರಿಲ್ಲ, ಭಕ್ತರಿಲ್ಲ. ನಾನೂ ಇಲ್ಲ, ನೀನೂ ಇಲ್ಲ. ಗೊಹೇಶ್ವರ, ಪೂಜಿಸುವರೂ ಇಲ್ಲ, ಪೂಜೆಗೊಂಬವರೂ ಇಲ್ಲ.

೬೮

ತೆರೆಯ ಮರೆಯ ಕುರುಹೆಂಬುದೇನೋ? ಒಳಗೆ ಲಿಂಗದ ಅನುವಿಡಿದ ಬಳಿಕ, ಪೂಜಿಸುವನಾರೋ? ಪೂಜಿಸಿಕೊಂಬ ದೇವನಾರೋ? ಹಿಂದು ಮುಂದು, ಮುಂದು ಹಿಂದಾಯಿತ್ತು! ಗೊಹೇಶ್ವರ, ನಾನು ನೀನು, ನೀನು ನಾನಾದ ಬಳಿಕ ಮತ್ತೇನುಂಟು ಹೇಳಾ?

೬೯

ತನುವಿಹ ಪರಿಯಂತರ ನಿಮ್ಮ ಪೂಜಿಸಿದೆನಯ್ಯಾ. ಮನವಿಹ ಪರಿಯಂತರ ನಿಮ್ಮ ನೆನೆದೆನಯ್ಯಾ. ಭಾವವಿಹ ಪರಿಯಂತರ ನಿಮ್ಮ ಬಯಸಿದೆನಯ್ಯಾ. ಇಂತಿವೆಲ್ಲವು ನಿಮ್ಮಲ್ಲಿ ಸಯವಾದ ಬಳಿಕ, ಗಜಭುಕ್ತಕಪಿತ್ಥದಂತಿರ್ದೆನಯ್ಯಾ ಅಖಂಡೇಶ್ವರಾ.

೭೦

ಮನದಲ್ಲಿ ನೆನೆಯೆ, ವಚನಕ್ಕೆ ತಾರೆ. ಪಾಷಾಣವ ಪೂಜಿಸೆ, ಹೊಡೆವಂಟು ಬೇರು ಮಾಡೆ. ತಾಯ ಬಸುರೊಳಗಿರ್ದು ಕಾಲನಿಡುವ ಬುದ್ಧಿ ಕೂಡದು ಕೂಡದೆಂದನಂಬಿಗರ ಚೌಡಯ್ಯ.

೭೧

ಲಿಂಗವೆಂದು ಪೂಜಿಸಿದೊಡೆ, ಅಂಗದೊಡನುಳಿಯಿತ್ತು. ಅಂಗದೊಡನುಳಿವ ಲಿಂಗವ ಹಿಂಗಿ ಪೂಜಿಸಬೇಕು. ಹಿಂಗದ ಪೂಜೆಯನರಿದೊಡೆ, ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೆನಿಸುವನು.

೭೨

ತಾ ನಡೆನಡೆ ನಡೆಗೆಟ್ಟ ನಡೆಯು ನಡೆಯುಬೇಕು. ತಾ ನುಡಿವಡೆ ನುಡಿಗೆಟ್ಟ ನುಡಿಯು ನುಡಿಯುಬೇಕು. ರೂಹಿಲ್ಲದ ಸಂಗವ ಮಾಡಬೇಕು. ಭವವಿಲ್ಲದ ಭಕ್ತಿಯು ಮಾಡಬೇಕು. ತಾನಾವನೆಂದರಿಯದಂತಿಹುದು ಗೊಹೇಶ್ವರ.

೭೩

ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯಾ ಎನಗೆ. ಅದೇನು ಕಾರಣವೆಂದೊಡೆ: ಆ ಪೂಜಿಸುವ ತನು ನೀವೆ ಆದಿರಾಗಿ. ನಿಮ್ಮ ನೆನೆದಿಹೆ ನೆಂದಡೆ ಮನವಿಲ್ಲವಯ್ಯಾ ಎನಗೆ. ಅದೇನು ಕಾರಣವೆಂದೊಡೆ: ಆ ನೆನೆವ ಮನ ನೀವೆ ಆದಿರಾಗಿ. ನಿಮ್ಮ ಅರಿದಿಹೆನೆಂದಡೆ ಅರುಹು ಇಲ್ಲವಯ್ಯಾ ಎನಗೆ. ಅದೇನು ಕಾರಣವೆಂದೊಡೆ: ಆ ಅರುಹು ನೀವೆ ಆದಿರಾಗಿ. ಅಖಂ ಡೇಶ್ವರಾ, ನಿಮ್ಮೊಳಗೆ ನಾನು ಉರಿಯುಂಡ ಕರ್ಪುರದಂತಿರ್ದೆನಯ್ಯಾ ದೇವರ ದೇವಾ.

೭೪

ಮಾಡಿದ ಮಾಟವ ಮರೆದೆನಯ್ಯ ನಿಮ್ಮೊಳಗೆ. ನೋಡಿದ ನೋಟವ ಮರೆದೆನಯ್ಯ ನಿಮ್ಮೊಳಗೆ. ಕೂಡಿದ ಕೂಟವ ಮರೆದೆನಯ್ಯ ನಿಮ್ಮೊಳಗೆ. ಕರ್ಪುರದ ಗಿರಿಯ ಉರಿ ಉಂಡಂತಾದೆನಯ್ಯ ನಿಮ್ಮೊಳಗೆ ಅಖಂಡೇಶ್ವರಾ!

೭೫

ಬಟ್ಟಬಯಲ ತುಟ್ಟತುದಿಯ ನಟ್ಟನಡುವಣ ಕಟ್ಟಕಡೆಯ ಮೆಟ್ಟಿ ನೋಡಿ, ಉಟ್ಟುದನಳಿದು ಬಟ್ಟ ಬತ್ತಲೆಯಾದೆ. ಇನ್ನು ಬಿಟ್ಟುದ ಹಿಡಿಯ ಬಾರದು, ಹಿಡಿದುದ ಬಿಡಬಾರದು. ಇದಕ್ಕೆ ಒಡೆಯನಾವನೆಂದು ನೋಡ ಲಾಗಿ, ನೋಡಿಹೆನೆಂದರೆ ನೋಟಕ್ಕಿಲ್ಲ. ಕೂಡಿಹೆನೆಂದರೆ ಕೂಟಕ್ಕಿಲ್ಲ. ಹಿಡಿ ದಿಹೆನೆಂದರೆ ಹಿಡಿಹಿಗಿಲ್ಲ. ಪೂಜಿಸಿಹೆನೆಂದರೆ ಪೂಜೆಗಿಲ್ಲ. ಇದ ಮೆಲ್ಲಗೆ ಓಜೆಯಿಂದ ನೋಡಲಾಗಿ, ನೋಡುವ ನೋಟವು ತಾನೆ. ಕೂಡುವ ಕೂಟವು ತಾನೆ. ಹಿಡಿವುದು ಆ ಹಿಡಿಗೆ ಸಿಕ್ಕಿಕೊಂಬುದು ತಾನೆ. ಪೂಜಿಸು

ವುದು ಪೂಜಿಸಿಕೊಂಬುದು ತಾನೆ. ನಾನಿದರ ಭೇದವನರಿದು ಆದಿ ಅನಾದಿಯನು ಏಕವ ಮಾಡಿ ನಾನಲ್ಲೇ ಐಕ್ಯನಾದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೭೬

ಆದಿಯಾಧಾರವಾಗಿಹುದೆ ಘನ. ಆ ಘನ ವೇಧಿಸಿಹುದೆ ಮನ. ಆ ಮನವು ಮಹದಲ್ಲಿ ನಿಂದುದೆ ಭಕ್ತಿ. ಭಿನ್ನಭಾವದಿಚ್ಛೆ ತಲೆದೋರದಿಹುದೆ ಆಚಾರ. ತಟ್ಟುಮುಟ್ಟು ತಾಗುನಿರೋಧವಿಲ್ಲದಿಹುದೆ ಪೂಜೆ. ಆಶೆ ರೋಷವಿಲ್ಲದಿಹುದೆ ಪ್ರಸಾದ. ಕರಣಮಥನವಿಲ್ಲದಿಹುದೆ ಅನುಭಾವ. ಇಂತೀ ಸರ್ವಾಂಗದಲ್ಲಿ ಸರ್ವಾಚಾರ ಸನ್ನಿಹಿತವಾದ ನಿಜಲಿಂಗೈಕ್ಯಂಗೆ ನಮೋ ನಮೋ ಎಂಬೆನಯ್ಯಾ ಕೂಡಲಚೆನ್ನಸಂಗಮದೇವಾ.

೭೭

ಮನವೆಂಬ ಒರಳಿಗೆ ಸಕಲ ಕರಣಂಗಳೆಂಬ ತಂಡುಲವ ಹಾಕಿ, ಸುಜ್ಞಾನವೆಂಬ ಒನಕೆಯ ಪಿಡಿದು ಪರಮ ಪರಿಣಾಮದೊಳಗೋಲಾಡುತ್ತ ಕುಟ್ಟಿ, ಅಜ್ಞಾನವೆಂಬ ತೌಡ ಕೇರಿ, ಚಿತ್ಕರಣಂಗಳೆಂಬ ಅಕ್ಕಿಯ ತೆಗೆದುಕೊಂಡು, ಸದ್ಭಾವವೆಂಬ ಭಾಂಡದಲ್ಲಿ ತುಂಬಿ, ಪರಮಾನಂದಜಲವೆಂಬ ಎಸರನಿಟ್ಟು, ತ್ರಿಪುಟಿಯೆಂಬ ಒಲೆಯ ಹೂಡಿ ಚಿದಗ್ನಿಯೆಂಬ ಬೆಂಕಿಯ ಪುಟವನಿಕ್ಕಿ, ಅರಿಷಡ್ವರ್ಗಗಳೆಂಬ ಸೌದೆಯ ಹೊತ್ತಿಸಿ, ಮಹಾಜ್ಞಾನವೆಂಬ ಪಾಕವ ಮಾಡಿ, ಪರಿಪೂರ್ಣವೆಂಬ ಪರಿಯಾಣದಲ್ಲಿ ಗಡಣಿಸಿಕೊಂಡು ಅಖಂಡ ಪರಿಪೂರ್ಣ ಮಹಾಘನಲಿಂಗಕ್ಕೆ ಸಲಿಸ ನೀಡಬಲ್ಲಾತನೆ ಶರಣನು, ಆತನೆ ನಿಜಾನುಭಾವಿ, ಆತನೆ ಲಿಂಗೈಕ್ಯನು. ಇಂತೀ ಭೇದವನರಿಯದೆ ಮಣ್ಣ ಪರಿಯಾಣ ಲೋಹಪಾತ್ರೆಯಲ್ಲಿ ಮನ ಬಂದ ಪರಿಯಲ್ಲಿ ಹಾಯಿ ಹಾಯಿ ಒಟ್ಟಿಸಿಕೊಂಡು ಬಾಯಿಗೆ ಬಂದಂತೆ ತಿಂಬುವ ಜೀವಗಳ್ಳ ಭವಭಾರಕರಿಗೆ ಏಕಭಾಜನವೆಲ್ಲಿಯದಯ್ಯಾ ಅಖಂಡೇಶ್ವರಾ ?

೭೮

ನಿಶ್ಚಲವೆಂಬ ಭಾಜನದಲ್ಲಿ ನಿಜಜ್ಞಾನವೆಂಬ ಅಕ್ಕಿಯ ತುಂಬಿ, ಪರಮಾನಂದವೆಂಬ ಜಲವನೆರೆದು, ಸ್ವಯಂ ಪ್ರಕಾಶವೆಂಬ ಅಗ್ನಿಯಿಂದ ಪಾಕ

ವಾದ ಲಿಂಗದೋಗರವು ಮಹಾಘನದಲ್ಲಿ ನಿಂದು ಘನತೃಪ್ತಿಯನೀವು ತ್ತಿದ್ದಿತ್ತು ಕಾಣಿರೇ. ಆದ ಕಣ್ಣಿಲ್ಲದೆ ಕಂಡು, ಕೈಯಿಲ್ಲದೆ ಕೊಂಡು, ಬಾಯಿ ಲ್ಲದೆ ಉಂಡು, ತೃಪ್ತಿಯ ಅರಿವಿಲ್ಲದರಿವಿಂದರಿದು ಸುಖಿಯಾದೆನು ಕಾಣಾ ಗೊಹೇಶ್ವರಾ.

೭೯

ಅಂಗದಲ್ಲಿ ಮಾಡುವ ಸುಖವದು ಲಿಂಗಕ್ಕೆ ಭೂಷಣವಾಯಿತ್ತು. ಕಾಡುಗಿಚ್ಚಿನ ಕೈಯಲ್ಲಿ ಕರಡ ಕೊಯಿಸುವಂತೆ ಹಿಂದೆ ಮೆದೆಯಿಲ್ಲ, ಮುಂದೆ ಹುಲ್ಲಿಲ್ಲ. ಅಂಗಲಿಂಗವೆಂಬನ್ನಕ್ಕರ ಫಲದಾಯಕ; ಲಿಂಗೈಕ್ಯವದು ಬೇರೆ ಗೊಹೇಶ್ವರ.

೮೦

ನನಗೆ ನಾನೇ ಗುರುವಾದೆನಯ್ಯಾ! ನನಗೆ ನಾನೇ ಲಿಂಗವಾದೆ ನಯ್ಯಾ! ನನಗೆ ನಾನೇ ಜಂಗಮವಾದೆನಯ್ಯಾ! ನನಗೆ ನಾನೇ ಪ್ರಸಾದ ವಾದೆನಯ್ಯಾ! ನನಗೆ ನಾನೇ ಭಕ್ತನಾದೆನಯ್ಯಾ! ರೇಕಣ್ಣಪ್ರಿಯ ನಾಗಿ ನಾಥನಲ್ಲಿ ಆಗುಹೋಗನರಿಯೆನಯ್ಯಾ ನಾನು!

೪. ನಿಜ ನಿರಾಳ

೮೧

ಕಾಯವೆಂಬ ಕದಳಿಯ ಹೊಕ್ಕು, ಜೀವ ಪರಮರ ನೆಲೆಯನರಿದು, ರಸ ರುಧಿರ ಮಾಂಸ ಮಜ್ಜ ಮಿದುಳು ಅಸ್ಥಿ ಶುಕ್ಲ,—ಈ ಸಪ್ತಧಾತುಗಳ ಸಂಚವ ತಿಳಿದು, ಮತ್ತೆ ಮನ ಪವನ ಬಿಂದುವನೊಡಗೂಡಿ ಉತ್ತರಕ್ಕೇರಿ ನೋಡಲು ಬಟ್ಟಬಯಲಾಗಿದ್ದಿತ್ತು. ಆ ಬಯಲಲ್ಲಿಯೇ ನಿಂದು, ನಿರಾಳ ದೊಡಗೂಡಿ, ಮಹಾಬೆಳಗನೆ ಕೂಡಿ, ನಾ ನಿಜ ಮುಕ್ತಳಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೮೨

ಅಂಗದೊಳಗೆ ಅಂಗವಾಗಿ ಅಂಗ ಲಿಂಗೈಕ್ಯವ ಮಾಡಿದೆ. ಮನದೊಳಗೆ ಮನವಾಗಿ, ಮನ ಲಿಂಗೈಕ್ಯವ ಮಾಡಿದೆ. ಭಾವದೊಳಗೆ ಭಾವವಾಗಿ, ಭಾವ ಲಿಂಗೈಕ್ಯವ ಮಾಡಿದೆ. ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ. ಕ್ರಿಯೆಗಳೆಲ್ಲವ ನಿಲಿಸಿ ಕ್ರಿಯಾತೀತವಾಗಿ, ನಿವೃತ್ತಿ ಲಿಂಗೈಕ್ಯ ವಾದೆ. ನಾನೆಂಬುದ ನಿಲಿಸಿ, ನೀನೆಂಬುದ ಕೆಡಿಸಿ, ಉಭಯ ಲಿಂಗೈಕ್ಯವ ಮಾಡಿದೆ. ಚೆನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ, ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನಬಸವಣ್ಣಾ.

೮೩

ಎಮ್ಮ ಶರಣರು ಗುರುಸ್ಥಲ ನಾಸ್ತಿಯಾಯಿತ್ತೆಂಬರು. ಅದೇನು ಕಾರಣವೆಂದರೆ, ತಮ್ಮ ಗುಣಅವಗುಣವಿಲ್ಲವಾಗಿ. ಲಿಂಗಸ್ಥಲ ನಾಸ್ತಿಯಾ ಯಿತ್ತೆಂಬರು, ಅಂಗಗುಣವಳಿಯಿತ್ತಾಗಿ. ಜಂಗಮಸ್ಥಲ ನಾಸ್ತಿಯಾಯಿ ತ್ತೆಂಬರು. ಅದೇನು ಕಾರಣ? ಭಾವ ಬಯಲಾಯಿತ್ತಾಗಿ. ಪ್ರಸಾದಿಸ್ಥಲ ನಾಸ್ತಿಯಾಯಿತ್ತೆಂಬರು, ಪರವು ತಮ್ಮಲ್ಲಿ ನಿಂದ ಕಾರಣ. ಇಂತೀ ಸರ್ವಾ ವಧಾನಿಗಳೆಲ್ಲರು ನಮ್ಮ ಶರಣರು. ಇಂತು ಸರ್ವಾಚಾರ ಸಂಪನ್ನರಯ್ಯಾ ನಮ್ಮ ಶರಣರು. ಇಂತು ಸರ್ವಾಂಗಲಿಂಗಿಗಳಯ್ಯಾ ನಮ್ಮ ಶರಣರು. ಇಂತಪ್ಪ ಶರಣ ಸನ್ನಿಹಿತ ಚೆನ್ನಮಲ್ಲೇಶ್ವರನ ಪಾದವ ನಂಬಿದ ಕಾರಣ, ನಾ ಹೋದ ಹಾದಿಯನಾರು ಅರಿಯರಯ್ಯಾ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೮೪

ಸ್ಥಲವಿಡಿದು ಸರ್ವದಲಾಯತವಾಗಿ, ಸಹಜವಿಡಿದು ನಿಜವಳವಟ್ಟಲ್ಲಿ ಇದದೆಂದೆನಲುಂಟೇ? ಭಾವವಳಿದು ನಿರ್ಭಾವ ಉಳಿದಲ್ಲಿ ಇದದೆಂದೆನ ಲುಂಟೆ,–ಕದಂಬಕಳಾಸ ಕೂಡಲಚೆನ್ನಸಂಗಾ, ಸರ್ವಾಂಗ ಲಿಂಗಮಯ ವಾಗಿರ್ದಲ್ಲಿ?

೮೫

ಅಯ್ಯಾ, ಕಿಚ್ಚಿನೊಳಗೆ ಬೆಂದ ಕಾಯಕ್ಕೆ ಅಚ್ಚುಗ ಉಂಟೆ? ತಾನು ತಾನಾದ ಬಳಿಕ ಮೂವರ ಹಂಗುಂಟೆ? ಮನವು ಮಹದಲ್ಲಿ ನಿಂದ ಬಳಿಕ

ಮರವೆಯುಂಟೆ? ಬೆಳಗ ಕಂಡವರಿಗೆ ಕತ್ತಲೆಯ ಹಂಗುಂಟೆ? ಇವೆಲ್ಲವನು ಹಿಂಗಿಸಿ, ಈ ಮಹದಲ್ಲಿ ಬೆರೆದ ಶರಣಂಗೆ ನಮೋ ನಮೋ ಎಂದು ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೮೬

ಸತ್ತ ಶವ ಕಿಚ್ಚ ಬಲ್ಲುದೆ? ನಿಷ್ಠೆ ನಿಬ್ಬೆರಗಾದ ಕರ್ತು ಮರ್ತ್ಯರ ಹಂಗು ಬಲ್ಲನೆ? ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವುದೆ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು.

೮೭

ಶರಣನ ಅಂಗವು ಎಂತಿಪ್ಪುದೆಂದರೆ: ವಾರಿಕಲ್ಲು ನೀರೊಳಗೆ ಬಿದ್ದಂತೆ, ಸಾರ ಒಲಿದು ಶರಧಿಯ ಕೂಡಿದಂತೆ, ಅರಗಿನ ಬೊಂಬೆಗೆ ಉರಿಯು ಸರವ ಮಾಡಿದಂತೆ, ಪರಿಮಳವ ಕೂಡಿದ ವಾಯುವಿನಂತೆ, ಆಡಂಬರವ ಮಾಡಿ ತೋರಿದ ಆಕಾಶದಂತೆ. ಇದೀಗ ಶರಣರಂಗ, ಇದರಂದವ ತಿಳಿದರೆ ಐಕ್ಯ. ಇದರೊಳು ನಿಶ್ಚಿಂತನಾದರೆ ನಿರವಯವು ಬಸವಪ್ರಿಯ ಕೂಡಲಚೆನ್ನಬಸವಣ್ಣ.

೮೮

ದೃಷ್ಟಿಯ ದೃಷ್ಟದಿಂದ ಮೋಹದ ಲವಲವಿಕೆ; ಮೋಹದ ಲವಲವಿಕೆಯಿಂದ ಸ್ಪರ್ಶನದ ಉಭಯದ ಕೂಟ ಏಕವಾದಲ್ಲಿ, ಹಿಂದಣ ಕುರುಹು ಮುಂದಣ ಲಕ್ಷ ಅಲಕ್ಷವಾಗಿ, ದಂಪತಿ ದ್ವಂದ್ವವಿಲ್ಲದೆ, ನಿಜವೆಂಬ ಕುರುಹು ಅರಿಕೆದೋರದೆ, ಅವಿರಳನಾಮ ಶೂನ್ಯವಾದುದು ಗೋಪತಿನಾಥ ವಿಶ್ವೇಶ್ವರ ಲಿಂಗವು ಹೃತ್ಕಮಲದಲ್ಲಿ ವಿಶ್ರಾಂತಿಯಾದ ಇರವು.

೮೯

ನೋಡಿ ನೋಟವ ಮರೆದು, ಕೂಡಿ ಕೂಟವ ಮರೆದು, ಬಯಲ ಸಮರಸಕ್ಕೆ ಮರುಳಾಯಿತ್ತಲ್ಲ! ಜೀವಪ್ರಾಣನ ಭೇದವಳಿದು ನಿಜವದಾಯಿತ್ತಲ್ಲ! ಅನ್ಯಚಿಹ್ನವಳಿದು ತನ್ನ ತಾ ಮರೆಯಿತ್ತು. ಕೂಡಲಚೆನ್ನಸಂಗಮದೇವಾ, ನೀನೆಂದೆ ನಿಂದಿತ್ತಲ್ಲಾ.

೯೦

ಅರಿಯಲಿಲ್ಲದ ಅರಿವು, ಮರೆಯಲಿಲ್ಲದ ಮರಹು. ನೋಡಲಿಲ್ಲದ ನೋಟ, ಬೆರಸಲಿಲ್ಲದ ಬೆರಗು. ನಿಜ ನಿಂದ ನಿಲವ ನೋಡಾ ಕೂಡಲಚೆನ್ನ ಸಂಗಮದೇವಾ!

೯೧

ಸೊಪ್ಪಡಗಿದ ಸುಷುಮ್ನಾನಿಗಳವರಲ್ಲಿ ಗತಿಯನರಸುವರೆ? ಅಂಗವೆಲ್ಲ ನಷ್ಟವಾಗಿ ಲಿಂಗಲೀಯವಾದವರಲ್ಲಿ ಗತಿಯನರಸುವರೆ? ಅವರಲ್ಲಿ ಮತಿಯ ನರಸುವರೆ ಗೊಹೇಶ್ವರನೆಂಬ ನಿಜ ನಿಂದವರಲ್ಲಿ?

೯೨

ಬೆಣ್ಣೆಯ ಕಂದಲ ಕರಗಲಿಟ್ಟರೆ, ಕಂದಲು ಕರಗಿತ್ತು, ಬೆಣ್ಣೆಯುಳಿ ಯಿತ್ತು! ತುಂಬಿಯಿದ್ದಿತ್ತು, ಪರಿಮಳವಿಲ್ಲ! ಪರಿಮಳವಿದ್ದಿತ್ತು, ತುಂಬಿ ಯಿಲ್ಲ! ತಾನಿದ್ದನು, ತನ್ನ ಸ್ವರೂಪವಿಲ್ಲ! ಗೊಹೇಶ್ವರನಿದ್ದನು, ಲಿಂಗವಿಲ್ಲ!

೯೩

ಪೃಥ್ವಿಯೊಳಗಿಲ್ಲ, ಆಕಾಶದೊಳಗಿಲ್ಲ, ಚತುರ್ದಶ ಭುವನಾದಿಭುವ ನಂಗಳೊಳಗೆಯೂ ಇಲ್ಲ; ಹೊರಗೆಯೂ ಇಲ್ಲ! ಏನಾಯಿತ್ತೆಂದರಿಯೆ ನಯ್ಯ! ಗೊಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲ, ಎಂದೂ ಇಲ್ಲ.

೯೪

ವಾಯು ನಿದ್ರೆಗೆಯ್ದಡೆ ಆಕಾಶ ಜೋಗುಳವಾಡಿತ್ತು. ಬಯಲು ಬಳಲಿದೆನೆಂದಡೆ ನಿರಾಳ ಮೊಲೆಗೊಟ್ಟಿತ್ತು. ಆಕಾಶವಡಗಿತ್ತು, ಜೋಗುಳ ನಿಂದಿತ್ತು. ಗೊಹೇಶ್ವರನೈದಾನೆ ಇಲ್ಲದಂತೆ!

೯೫

ಭಾವಕ್ಕಿಂಬಿಲ್ಲ, ಶಬ್ದ ಮೀಸಲು ನೋಡಾ! ನುಡಿಗೆ ಎಡೆಯಿಲ್ಲ, ಎಡೆಗೆ ಕಡೆಯಿಲ್ಲ — ಗೊಹೇಶ್ವರನೆಂಬ ಶಬ್ದ ವೇಧಿಸಲೊಡನೆ.

೯೬

ಇಪ್ಪೆಯ ಹೂವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು. ಸರ್ಪನ ಶಿರ ಕಂಠದಲ್ಲಿ ಮೂಗುತಿಯ ಸರಗೊಳಿಸಿದೆನಯ್ಯಾ. ನಾವಲ್ಲಿದ್ದರೇನು? ಇಲ್ಲಿ

ದ್ದರೇನು? ನಮ್ಮ ನಿಮ್ಮ ಸಂಸರ್ಗದಲ್ಲಿ ನಿರುಪಮಾಕಾರಮೂರ್ತಿಗಳಾಗಿ, ನಿರವಯುವನೈದಿ ನಿಜಸುಖಿಗಳಾದೆವು. ಬಸವನಲ್ಲಿ ಎಮಗೆ ತೆರಹಿಲ್ಲವಯ್ಯಾ ಅಪ್ಪಣ್ಣಾ. ಭಾವಶೂನ್ಯಳು ನಾನು ಸಂಗಯ್ಯಾ.

೯೭

ಮಧ್ಯಕಲ್ಪ ನಾಸ್ತಿಯಾಯಿತ್ತೆ ಬಸವಾ! ಪ್ರಾಣ ಪ್ರಸಾದದಲ್ಲಿ ಅಡಗಿತ್ತೆ ಬಸವಾ! ಭಕ್ತಿ ಬಯಲಾಯಿತ್ತೆ ಬಸವಾ! ಭಾವ ನಿರ್ಭಾವ ವಾಯಿತ್ತೆ ಬಸವಾ! ಕಲ್ಪಿತಗುಣ ನಷ್ಟವಾಯಿತ್ತೆ ಬಸವಾ! ಮನೋ ಮುಕ್ತಿಯಾಯಿತ್ತೆ ಸಂಗಯ್ಯನ ಗುರು ಬಸವಾ!

೯೮

ಭಸ್ಮವ ಪೂಸಿ, ಬತ್ತಲೆ ಇದ್ದಡೇನು ಬ್ರಹ್ಮಚಾರಿಯೆ? ಅಶನವ ನುಂಡು, ವ್ಯಸನವ ಮರೆದಡೇನು ಬ್ರಹ್ಮಚಾರಿಯೆ? ಭಾವ ಬತ್ತಲೆಯಿದ್ದು, ಮನ ದಿಗಂಬರವಾದಡೆ, ಅದು ಸಹಜ ನಿರ್ವಾಣ ಕಾಣಾ ಗೊಹೇಶ್ವರಾ.

೯೯

ನಾನಿಹ ಪರಿಯಂತರ ನೀನುಂಟು; ನೀನಿಹ ಪರಿಯಂತರ ನಾನುಂಟು. ನಾನು ನೀನೆಂಬುಭಯದ ಸಂದು ಹೊಳಿದ ಬಳಿಕ, ಇನ್ನೇ ನುಂಟು ಹೇಳಾ ಅಖಂಡೇಶ್ವರಾ?

೧೦೦

ನಾಮ ಅನಾಮವಿಲ್ಲ. ನಾನು ತಾನು ಮುನ್ನವೆ ಇಲ್ಲ. ಈ ಉಭಯ ನಾಮವಾವ ಸೀಮೆಯೊಳಗು ಇಲ್ಲ. ಒಡಲು ಇಲ್ಲ, ನೆಳಲು ಇಲ್ಲ. ಏನೆಂಬು ದೇನು ತಾನು ಮುನ್ನಿಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ, ನಾನು ಇಲ್ಲ ನೀನು ಇಲ್ಲ.

೧೦೧

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ. ಅರಿವನ್ನಕ್ಕರ ಹಾಡಿದೆ ಹೊಗಳಿದೆ! ಅರಿವುಗೆಟ್ಟು ಮರಹು ನಷ್ಟವಾಗಿ, ಭಾವ ನಿರ್ಭಾವ

ವಾಗಿ ನಿಜ ಒಳಕೊಂಡಿತ್ತಾಗಿ, ಕೂಡಲಸಂಗಯ್ಯನಲ್ಲಿ ಸರ್ವನಿವಾಸಿ ಯಾಗಿದ್ದೆನು.

೧೦೨

ಅಂಗ ಲಿಂಗಕ್ಕೆ ಗೂಡಾಯಿತ್ತು, ಲಿಂಗ ಅಂಗಕ್ಕೆ ಗೂಡಾಯಿತ್ತು. ಅಂಗ ಲಿಂಗ ಸಂಗವೆಂಬ ಸಂದಳಿದು ನಿಜಲಿಂಗೈಕ್ಯವಾಯಿತ್ತು. ಭಾವ ನಿರ್ಭಾವ ನಿಷ್ಪತಿಯಾದಲ್ಲಿ, ಮಹಾದಾನಿ ಸೊಡ್ಡಳಂಗೆ ಸರ್ವನಿರ್ವಾಣ ವಾಯಿತ್ತು.

೧೦೩

ನಿರ್ಮೂಲವಾಯಿತ್ತಾಹಾ! ನಿರಾಲಂಬವಾಯಿತ್ತಾಹಾ! ನಿರಾಕುಳ ವಾಯಿತ್ತಾಹಾ! ಪುಣ್ಯದ ಫಲ ತೋರಿ ಬಯಲನೆ ಕೂಡಿತ್ತು. ಆ ಬಯಲು ನಿರ್ವಯಲಾಯಿತ್ತು. ಆ ನಿರ್ವಯಲನುಡುಗಿ ನಿಜಸುಖಿಯಾದೆನಯ್ಯಾ ನಾನು. ಸಂಗಯ್ಯನಲ್ಲಿ ನಿಶ್ಶೂನ್ಯವಾಯಿತ್ತಯ್ಯಾ.

೧೦೪

ಕರ್ಪುರದ ಕಳ್ಳನ ಹುಲ್ಲಿನಲ್ಲಿ ಕಟ್ಟಿರಲು, ಅಗ್ನಿ ಎಂಬ ಹಿತವ ಬಂದು ಬಿಡಿಸಲೊಡನೆ, ಪಾಶ ಬೆಂದು ಕಳ್ಳ ತನ್ನಲ್ಲಿಯೆ ಅಡಗಿದನು. ಬಯಲ ಶರಣನ ಬಯಲ ಪಾಶ ಬಂದು ಕಟ್ಟಿರಲು, ಬಯಲ ಲಿಂಗ ಬಂದು ಬಿಡಿಸಲು, ಬಯಲು ಬಯಲೇಕವಾಯಿತ್ತು. ಮಹಾಲಿಂಗಕಲ್ಲೇಶ್ವರನೆಂಬ ಸಂಪತ್ತು ಸರ್ವಶೂನ್ಯವಾಯಿತ್ತು.

೧೦೫

ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನ ವೇದ್ಯವಾದ ಬಳಿಕ ಅರಿಯಲಿಲ್ಲ, ಮರೆಯಲಿಲ್ಲ; ಕೂಡಲಿಲ್ಲ, ಅಗಲಲಿಲ್ಲ. ಮನ ಮೀರಿದಪ್ಪಿ ನಿರವಯಲಾದ ಸುಖವ ಶೂನ್ಯ ನಿಶ್ಶೂನ್ಯವೆಂದು ನುಡಿಯಲುಂಟೇ? ಶಬ್ದ ಮುಗ್ಧವಾಗಿ ಎನ್ನ ಅಜಗಣ್ಣತಂದೆಯ ಬೆರಸಿದ ಬಳಿಕ, ಉರಿಯುಂಡ ಕರ್ಪುರದಂತಾದೆನಯ್ಯಾ!

೧೦೬

ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು ಜನನ ಮರಣವ ನಿಲಿಸಿ, ಜ್ಞಾನಜ್ಯೋತಿಯ ಉದಯ ಭಾನುಕೋಟಿಯ ಮೀರಿ, ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ ಘನವನೇನೆಂಬೆನು ಗೊಹೇಶ್ವರಾ?

೧೦೭

ನಿರುಪಮ ನಿರಾಳನು ನೋಡಾ ಲಿಂಗೈಕ್ಯನು. ನಿಸ್ಸೀಮ ನಿರ್ಜಡನು ನೋಡಾ ಲಿಂಗೈಕ್ಯನು. ನಿಃಕಳಂಕ ನಿಶ್ಶಬ್ದನು ನೋಡಾ ಲಿಂಗೈಕ್ಯನು. ನಿರಾವರಣ ನಿರಂಜನನು ನೋಡಾ—ಅಖಂಡೇಶ್ವರಾ, ನಿಮ್ಮ ನಿಜಲಿಂಗೈಕ್ಯನು.

೧೦೮

ನಿಜವನರಿದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೆ, ಘನವ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ, ಬಯಲಲೊದಗಿದ ಭರಿತನೆ, ಗೊಹೇಶ್ವರಲಿಂಗನಿರಾಳವನೊಳಕೊಂಡ ಸಹಜನೆ.

೫. ಒಂದು ಶೂನ್ಯ–ತುಂಬಿದ ಬಯಲು

೧೦೯

ಅಯ್ಯ, ನೀನಿಲ್ಲದ್ದದಿರೆ ಎನಗೆ ಮುನ್ನ ನಾಮ ರೂಪುಂಟೆ? ನೀ ಮಾಡಲಾನಾದೆನಯ್ಯ. ಅದು ಕಾರಣವಾಗಿ, ನಾ ಬಂದ ಬಂದ ಭವಾಂತರದಲ್ಲಿ ನೀವು ಬರುತ್ತಿದ್ದಿರಾಗಿ, ಇನ್ನೆನ್ನ ಗುರುತಂದೆಗೆ ಬಳಲಿಕೆ ಆಗುತಿದೆ ಎಂದು ನಾ ನೋಡಲಾಗಿ, ನೀವೆನ್ನ ಭವವ ಕೊಂಡಿರಾಗಿ, ಇದು ಕಾರಣ ಅಂದಂದಿಗೆ ನೂರು ತುಂಬಿತ್ತೆಂಬ ಭೇದವನು ನೀವೆ ತೋರಿದಿರಿ. ಇದನರಿದರಿದು ನಾನು ಹಿಂದಣ ಭವವ ಹರಿದು ಮುಂದಣ ಭಾವ ಬಯಕೆಯ ಮುಗ್ಧವ ಮಾಡಿ, ಹೊಂದದ ಬಟ್ಟೆಯನೆ ಹೊಂದಿ, ಸದಮಳಾನಂದ ಚೆನ್ನಮಲ್ಲೇಶ್ವರನ ನಂಬಿ ಕೆಟ್ಟು, ಬಟ್ಟಬಯಲಾದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೦

ಆಯತಲಿಂಗದಲ್ಲಿ ನೀವೆನಗೆ ಆಚಾರವ ತೋರಿದಿರಾಗಿ, ಸ್ವಾಯತ ಲಿಂಗದಲ್ಲಿ ನೀವೆನಗೆ ಅರುಹ ತೋರಿದಿರಾಗಿ, ಸನ್ನಿಹಿತ ಲಿಂಗದಲ್ಲಿ ನೀವೆನಗೆ ಪರಿಣಾಮವ ತೋರಿದಿರಾಗಿ, ಈ ತ್ರಿವಿಧದ ವರನೆಲೆಯ ತೋರಿ, ಈ ತ್ರಿವಿಧದ ಸಂಬಂಧವನು ಹರಿದು, ಎನ್ನ ಭವವ ದಾಂಟಿಸಿದ ಕಾರಣ, ಭವವಿರಹಿತನೆಂದು ಚೆನ್ನಮಲ್ಲೇಶ್ವರನ ನಂಬಿ ಕೆಟ್ಟು, ಬಟ್ಟಬಯಲಾದೆನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೧

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ. ಬಯಲ ಜೀವನ, ಬಯಲ ಭಾವನೆ; ಬಯಲು ಬಯಲಾಗಿ ಬಯಲಾಯಿತ್ತಯ್ಯ. ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗೊಹೇಶ್ವರಾ.

೧೧೨

ಬಟ್ಟೆಗೊಂಡು ಹೋಗುತ್ತೊಂದ ಕೊಟ್ಟು ಹೋದರೆಮ್ಮವರು. ಎಲ್ಲಿಯದು ಲಿಂಗ? ಎಲ್ಲಿಯದು ಜಂಗಮ? ಎಲ್ಲಿಯದು ಪಾದೋದಕ ಪ್ರಸಾದವಯ್ಯ? ಅಲ್ಲದವರೊಡನಾಡಿ ಎಲ್ಲರೂ ಮುಂದುಗೆಟ್ಟರಯ್ಯ. ಆ ನಿಮ್ಮ ನಂಬಿ ಬಯಲಾದೆ ಗೊಹೇಶ್ವರಾ.

೧೧೩

ಬ್ರಹ್ಮಾಂಡದ ಬಯಲ ಪಸರಿಸಿ ಹಿಡಿವರೆ, ಬಯಲಾವುದುಂಟು ಹೇಳಿರಣ್ಣಾ? ಕಂಗಳ ಮುಂದಣ ಕತ್ತಲೆ ಹರಿವುದಕ್ಕೆ ಜ್ಯೋತಿ ಆವುದುಂಟು ಹೇಳಿರಣ್ಣಾ? ಇಂಗಿತವನರಿದ ಬಳಿಕ ತ್ರಿವಿಧಕ್ಕೆ ತ್ರಿವಿಧವನಿತ್ತು, ತ್ರಿವಿಧವನರಿದು, ತ್ರಿವಿಧವ ಮರೆದು, ಕಲಿಯುಗದ ಕತ್ತಲೆಯ ದಾಂಟಿ, ತನ್ನ ಭವವ ದಾಂಟಿದವಂಗೆ ಬ್ರಹ್ಮಾಂಡದ ಬಯಲು ಕೈವಶವಾಯಿತ್ತು. ಕಂಗಳ ಮುಂದಣ ಕತ್ತಲೆ ಹರಿದು ಹೋಯಿತ್ತು,—ನಿಮ್ಮ ಸಂಗಸುಖದೊಳಗಿಪ್ಪ ಲಿಂಗೈಕ್ಯಂಗೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೪

ಒಳಗೆ ನೋಡಿದರೆ ಒಳಗೆ ಬಯಲು, ಹೊರಗೆ ನೋಡಿದರೆ ಹೊರಗೆ ಬಯಲು. ನೆನೆದಿಹೆನೆಂದರೆ ಮನ ಬಯಲು. ನೆನೆಹಿಸಿಕೊಂಡಿಹೆನೆಂದರೆ ನೀನಿಲ್ಲವಾಗಿ ನಾನೂ ಬಯಲು, ನೀನೂ ಬಯಲು ನೋಡಾ. ಭಾವಿಸಿಕೊಂಬ ವಸ್ತುವಿಲ್ಲವಾಗಿ ಭಾವ ಬಯಲೆಂದೆನು ಕಾಣಾ. ಮರಹು ನಷ್ಟವಾಯಿತ್ತಾಗಿ, ಅರುಹು ಶೂನ್ಯವಾಯಿತ್ತು ನೋಡಾ. ಅರುಹು ಶೂನ್ಯವಾದುದೇ ಅಖಂಡ ನಿರಾಳ ನೋಡಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ.

೧೧೫

ಕಂಗಳ ಮಣಿಯ ಬೆಳಗಿನೊಳು ಈರೇಳು ಭುವನದ ಶೃಂಗಾರವಡಗಿತ್ತು. ಆರು ಅರಿಯರಲ್ಲಾ! ಅತಿಶೃಂಗಾರದೊಳಗಣ ಗಂಧವನೊಂದು ಘ್ರಾಣ ನುಂಗಿತ್ತು. ಘ್ರಾಣದೊಳಗಣ ಗಂಧವ ಪ್ರಾಣ ನುಂಗಿತ್ತು. ಪ್ರಾಣದೊಳಗಣ ಗಂಧವ ಭಾವ ನುಂಗಿತ್ತು. ಭಾವದೊಳಗಣ ಗಂಧವ ಬಯಲು ನುಂಗಿತ್ತು. ಬಯಲೊಳಗಣ ಗಂಧವು ಮಹಾಬಯಲ ಕೂಡಿದ ಲಿಂಗೈಕ್ಯಂಗೆ ಭವಬಂಧನವಿಲ್ಲೆಂದಿತ್ತು ಗುರುವಚನ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೧೬

ಮರೆದರೆ ಮಾಯೆ. ಅರಿದರೆ ಮಾಯೆ ಇಲ್ಲ. ಅರಿವು ಮರವೆ ಎರಡ ನೂಂಕಿ ನಿಂದರೆ, ಮುಂದೆ ಕಣ್ಣು ತೆರಪಾಗಿ ತೋರುವ ಬಯಲೇ ಲಿಂಗದ ಬೆಳಗು. ಆ ಲಿಂಗದ ಬೆಳಗೆ ನೆಮ್ಮುಗೆಯಾದರೆ ಲಿಂಗೈಕ್ಯವು. ಆ ಲಿಂಗೈಕ್ಯವು ನಿಜವಾದರೆ ನಿಶ್ಚಿಂತವು. ನಿಶ್ಚಿಂತದಲ್ಲಿ ಲೀಯವಾದರೆ ನಿರವಯವು. ಇದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ. ಇದನರಿಯದೆ ವೇದ ಪುರಾಣ ಶಾಸ್ತ್ರ ಆಗಮ ಇವನೊಂದನು ಓದಿದರೆ ಹಾಡಿದರೆ ಕೇಳಿದರೆ ಕಾಯ ವಾಯುವೆಂದರು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೧೭

ಬಯಲಿಂದಲೆ ಹುಟ್ಟಿ, ಬಯಲಿಂದಲೆ ಬೆಳೆದು, ಬಯಲಮೃತವನೆ ಉಂಡು, ಬಯಲನೆ ಉಟ್ಟು ಬಯಲನೆ ತೊಟ್ಟು, ಬಯಲು ಬಯಲೊಳಗೆ

ಬೆರೆದ ಭೇದವ, ಈ ಭುವನದೊಳಗೆ ಇಪ್ಪ ಭವಭಾರಿಗಳು ಎತ್ತ ಬಲ್ಲರು. ಭವವಿರಹಿತ ಶರಣರ ನಿಲವ ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

೧೧೮

ವಸುಧೆಯಿಲ್ಲದ ಬೆಳಸು, ರಾಜಾನ್ನದ ಹೆಸರಿಲ್ಲದ ಓಗರ, ವೃಷಭ ಮುಟ್ಟದ ಹಯನು, ಬೆಣ್ಣೆಯ ಹೊಸೆವರಿಲ್ಲದೆ ಕಂಡುಂಡೆ. ಶಿಶು ಕಂಡ ಕನಸಿನಂತೆ ಗೊಹೇಶ್ವರನೆಂಬುದು ಹೆಸರಿಲ್ಲದ ಬಯಲು.

೧೧೯

ಬಯಲ ಬೆರಗಿನ ಸುಖದ ಸವಿಯ ಬೆರಗಲ್ಲದೆ ಕಾಣೆ. ಕಾಣೆನೆಂಬ ನುಡಿಗೆಡೆಯ ಕಾಣೆ. ಕುರುಹುಗೆಟ್ಟರಿವ ನೆರೆಯರಿದು, ಬೆರಸಿದೆನೆಂಬ ಬರುನುಡಿಯ ನುಡಿಗೆ ನಾಚಿದೆನಯ್ಯ ಗೊಹೇಶ್ವರಾ.

೧೨೦

ಈ ಬಚ್ಚಬರಿಯ ಬಯಲ ಕಂಡಿಹೆನೆಂದರೆ ಕಾಣಬಾರದು, ಕೇಳಿಹೆನೆಂದರೆ ಕೇಳಬಾರದು, ಹೇಳಿಹೆನೆಂದರೆ ಹೇಳಬಾರದು. ಇವ ಮೂರರ ಕಾಳಿಕೆಯ ಕಳೆದು, ಈ ಹನ್ನೆರಡ ಜಾಣಿಯಲ್ಲಿ ದಾಂಟಿ, ಒಂದರ ಮೇಲೆ ನಿಂದು, ಅಂದವಳಿಯದೆ, ಬಿಂದು ತುಳುಕದೆ, ಅಂದಂದಿನ ಹೊಸಪೂಜೆಯ ನೋಡಿ, ಕಣ್ದೆರೆದು ಕರಗಿ ಒಂದಾದ ಶರಣರಪ್ಪಂದ ಚರಣವ ತೋರಿ ಬದುಕಿಸಯ್ಯಾ ಎನ್ನ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೧೨೧

ಬಟ್ಟಬಯಲ ಮಹಾಮನೆಯೊಳಗೊಂದು ಹುಟ್ಟದ ಹೊಂದದ ಶಿಶುವ ಕಂಡೆ. ಮುಟ್ಟಿ ಪೂಜಿಸಿದರೆ ನೆಟ್ಟನೆಯಾ ಶಿಶು ತನ್ನುವ ನುಂಗಿತ್ತು. ಮುಟ್ಟಲಿಲ್ಲ, ನೋಡಲಿಲ್ಲ. ಪೂಜೆಗೆ ಕಟ್ಟಳೆ ಮುನ್ನಿಲ್ಲ. ಗೊಹೇಶ್ವರ ಬಯಲು.

೧೨೨

ವೇದ ದೈವವೆಂದು ನುಡಿವರು. ಶಾಸ್ತ್ರ ದೈವವೆಂದು ನುಡಿವರು. ಪುರಾಣ ದೈವವೆಂದು ನುಡಿವರು. ಕಲ್ಲು ದೈವವೆಂದು ನುಡಿವರು. ಕಾಷ್ಠ ದೈವವೆಂದು ನುಡಿವರು. ಪಂಚಲೋಹ ದೈವವೆಂದು ನುಡಿವರು. ಇವರೆಲ್ಲ

ಸಕಲಸಂದೇಹವನೆ ಪೂಜಿಸಿ ಸತ್ತು ಹೋದರಲ್ಲಾ! ಸಮಸ್ತ ಪ್ರಾಣಿಗಳೆಲ್ಲರೂ ತಾಯನರಿಯದ ತರ್ಕಿಗಳು, ತಂದೆಯನರಿಯದ ಸಂದೇಹಿಗಳು. ತನು ಪೃಥ್ವಿಯಿಂದಲಾಯಿತ್ತು; ಮನ ವಾಯುವಿನಿಂದಲಾಯಿತ್ತು. ಕಲ್ಲು ಕಾಷ್ಠ ಸಲಿಲ ನಿಷ್ಕಲದಿಂದಲಾಯಿತ್ತು. ವಾಯುವಾಧಾರದ ಪವನಸಂಯೋಗದ ಅನಾಹತಚಕ್ರದಿಂದ ಮೇಲಣ ಆಜ್ಞಾಚಕ್ರದಲ್ಲಿ ನಿಂದು, ಅನಂತಕೋಟಿ ಬ್ರಹ್ಮಾಂಡಂಗಳ ಮೆಟ್ಟಿ, ಕಾಯದ ಕಣ್ಣ ಮುಚ್ಚಿ, ಜ್ಞಾನದ ಕಣ್ದೆರೆದು ನೋಡಲಿಕೆ, ಅಲ್ಲಿ ಒಂದು ನಿರಾಕಾರ ಉಂಟು. ಆ ನಿರಾಕಾರದಲ್ಲಿ ನಿಂದು ನಿರ್ಣಯಿಸಿ ನೋಡಲ್ಕೆ, ಅಲ್ಲಿ ಒಂದು ನಿಶ್ಶೂನ್ಯವುಂಟು. ಆ ನಿಶ್ಶೂನ್ಯದಲ್ಲಿ ನಿಂದು ನಿಶ್ಚಯಿಸಿ ನೋಡಲ್ಕೆ ಕತ್ತಲೆಯಲ್ಲ, ಬೆಳಗಲ್ಲ. ಬಚ್ಚಬಯಲಲ್ಲ ಗೊಹೇಶ್ವರ!

೧೮

ಸ್ವಲೀಲಾನಂದ ಭಕ್ತಿ

೧. ಸ್ವಲೀಲಾನಂದ ಭಕ್ತಿ

ಸೂತ್ರ: ಅಂತು ಮಹಾಘನಲಿಂಗವು ತನ್ನ ಸ್ವಲೀಲೆಯಿಂದ ಲಿಂಗಾಂಗವೆರಡಾಗಿ, ಪೂಜ್ಯ ಪೂಜಕನೆನಿಸಿದ ಭೇದದಿಂದ ಎರಡಾಗಿ ತೋರಿದಲ್ಲಿ, ಆ ಎರಡಾದುದು ಒಂದೇ ವಸ್ತುವೆಂದರಿದು, ಅಂಗ ಲಿಂಗವೆಂಬ ಭೇದವಳಿದ ಜ್ಞಾನಕ್ರೀಯಿಂದ ಅಂಗವೆಲ್ಲಾ ಲಿಂಗವೆಯಾದುದೀಗ ಐಕ್ಯಸ್ಥಲ. ಅಂತು ಲಿಂಗದಲ್ಲಿ ಐಕ್ಯವಾಗಿ ಲಿಂಗವೆಯಾಗಿಪ್ಪ ಶರಣನ ಚಾರಿತ್ರವೆಂತೆಂದಡೆ: ಶರಣ ಲಿಂಗವಾಗಿಪ್ಪನಾಗಿ ಲಿಂಗ ತಾನೆಂಬ ಅರಿವಿನ ಹಂಮಿಲ್ಲದಿಪ್ಪ, ತನ್ನ ನಿಜವ ಮರೆಯದಿಪ್ಪ, ಬೇರೊಂದ ಬಯಸದಿಪ್ಪ. ಒಳಹೊರಗೆನ್ನದೆ ಅಖಂಡ ಲಿಂಗವೆಯಾಗಿಪ್ಪನು ಶರಣ. ಅಂತು ಶರಣ ತಾನೆ ಸ್ವತಂತ್ರಲಿಂಗವಾಗಿಪ್ಪನು. ಅಂತು ಶರಣ ಸ್ವತಂತ್ರಲಿಂಗವಾಗಿರ್ದಲ್ಲಿ ತನ್ನ ಸ್ವಲೀಲೆಯಿಂದ ಕ್ರೀಯಲ್ಲಿ ವಿಶ್ರಮಿಸಿ ತನ್ನ ತಾನರ್ಚಿಸಿ ಪೂಜಿಸಿಕೊಳುತಿಪ್ಪನಾಗಿ ಸ್ವಲೀಲಾನಂದ ಭಕ್ತಿಯೆಂದು ಹೇಳಲಾಯಿತ್ತು.

೧

ಪೂಜೆಯುಳ್ಳನ್ನಕ್ಕ ಲಿಂಗವ ಹಾಡಿದೆ! ಮಾಟವುಳ್ಳನ್ನಕ್ಕ ಜಂಗಮವ ಹಾಡಿದೆ! ಜಿಹ್ವೆಯುಳ್ಳನ್ನಕ್ಕ ಪ್ರಸಾದವ ಹಾಡಿದೆ! ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ!!

ಟೀಕು: ಸತ್ತುಚಿತ್ತಾನಂದವಪ್ಪ ಲಿಂಗ ಜಂಗಮ ಪ್ರಸಾದವೇ ತನ್ನ ನಿಜವೆಂದರಿದು, ಆ ಲಿಂಗ ಜಂಗಮ ಪ್ರಸಾದಕ್ಕೆ ತನು ಮನ ಪ್ರಾಣಂಗಳನರ್ಪಿಸುವನ್ನಕ್ಕ ಶರಣನ ಅರಿವಿಂಗೆ ಕ್ರಿಯಾಭೇದ ಚಿಂತನೆದೋರುತ್ತಿದ್ದಿತ್ತು. ಆ ತನು ಮನ ಪ್ರಾಣಂಗಳ ಲಿಂಗ ಜಂಗಮ ಪ್ರಸಾದಕ್ಕೆ ಅರ್ಪಿಸಿ, ಲಿಂಗ ಜಂಗಮ ಪ್ರಸಾದದೊಳೈಕ್ಯವಾದಲ್ಲಿ ಅರಿವಿನ ಭೇದಚಿಂತನೆಯಳಿದು, ಶರಣನೆಲ್ಲಾ ಲಿಂಗವೆಯಾಗಿರ್ದನು. ಅಂತು ಲಿಂಗವೆಯಾಗಿರ್ದ ಶರಣನು

ಮಾಡುತ್ತಿರ್ಪ ಕ್ರೀಯೆಲ್ಲವು ತನ್ನ ತಾನರ್ಚಿಸಿಕೊಂಬ ಸ್ವಲೀಲಾನಂದಭಕ್ತಿಯೆಂಬುದೀ ವಚನದ ತಾತ್ಪರ್ಯಾರ್ಥ.

೨

ಮಾಡಿ ಮಾಡಿಸಿಕೊಂಬವೆರಡರ ನಿಲುಕಡೆ ಒಂದೇ. ಗುರು ಒಂದೇ, ಲಿಂಗವೊಂದೇ. ಜಂಗಮವೊಂದೇ, ಪ್ರಸಾದವೊಂದೇ. ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ ಕೂಡಲಸಂಗಮದೇವಾ!

ಟೀ. ಒಂದೆಯಾಗಿರ್ದ ಪರಬ್ರಹ್ಮವು ತಾನೆ ತನ್ನ ಸ್ವಲೀಲಾನಂದದಿಂದ ಗುರು ಲಿಂಗ ಜಂಗಮ ಪ್ರಸಾದವೆಂಬ ಚತುರ್ವಿಧವಾಗಿ, ಆ ಚತುರ್ವಿಧಕ್ಕೆ ಭಕ್ತಿಯ ಮಾಡುವ ಭಕ್ತ ತಾನೆಯಾಗಿ, ತನ್ನ ತಾನರ್ಚಿಸಿಕೊಳ್ಳುತ್ತಿಹ ಶಿವ ತಾನೆ ಎಂಬುದೀ ವಚನದ ತಾತ್ಪರ್ಯಾರ್ಥ.

೩

ಭಕ್ತಂಗೆ ಉತ್ಪತ್ಯವಿಲ್ಲವಾಗಿ ಸ್ಥಿತಿಯಿಲ್ಲ. ಸ್ಥಿತಿಯಿಲ್ಲವಾಗಿ ಲಯವಿಲ್ಲ. ಲಯವಿಲ್ಲವಾಗಿ ದೇಹನಾಮ ಪ್ರವರ್ತನೆಯಿಲ್ಲ. ಇವಾವವೂ ಇಲ್ಲದ ಕಾರಣ ನಿಮ್ಮ ಶರಣನಂಗ ಬಚ್ಚಬರಿಯ ಬಯಲು ಗೊಹೇಶ್ವರಾ!

ಟೀ. ಪೂಜ್ಯ ಪೂಜಕನಾದ ಲಿಂಗಾಂಗವೆರಡೂ ಒಂದೇ ವಸ್ತುವೆಂದರಿದು ಭೇದವಳಿದ ಕೂಟವೀಗ ಭಕ್ತಿ. ಅಂತು ಭೇದವಳಿದು ತಾನೆಲ್ಲಾ ಲಿಂಗವೆಯಾಗಿಪ್ಪ ಸದ್ಭಕ್ತಂಗೆ ಉತ್ಪತ್ಯ ಸ್ಥಿತಿ ಲಯವಿಲ್ಲವಾಗಿ, ದೇಹ ವಿಡಿದಿರ್ದು ದೇಹವಾಸನೆಯಿಲ್ಲ. ಆ ಶರಣನ ಅಂಗವೆಲ್ಲಾ ಬಚ್ಚಬರಿಯ ಲಿಂಗವೆಂಬುದೀ ವಚನದ ತಾತ್ಪರ್ಯಾರ್ಥ.

೪

ಶರಣ ಮೂರ್ತನಲ್ಲ, ಅಮೂರ್ತನಲ್ಲ. ಲಿಂಗದಲ್ಲಿ ಪ್ರಾಣ ಸಂಚಿತ. ಪ್ರಾಣದಲ್ಲಿ ಪ್ರಸಾದ ಸಂಹರಣೆ. ಪ್ರಸಾದದಲ್ಲಿ ಕಾಯಾಶ್ರಿತನು. ಲೋಕಲೌಕಿಕ ಪ್ರಕಾರದುದಯನಲ್ಲ—ಕೂಡಲಚೆನ್ನಸಂಗಾ, ನಿಮ್ಮ ಶರಣ.

ಟೀ. ಸಾಕಾರವಾಗಿಪ್ಪ ಬದ್ಧಜೀವನಲ್ಲ ಶರಣ. ಏನೂ ಇಲ್ಲದ ನಿರಾಕಾರವಾಗಿಪ್ಪ ಶೂನ್ಯನಲ್ಲ ಶರಣ. ಅಖಂಡ ಚೈತನ್ಯವಾಗಿಪ್ಪ ಆ

ಲಿಂಗದ ತದಂಶವೇ ಪ್ರಾಣವಾಗಿ ಉದಯಿಸಿದ ಶರಣನೆಂಬುದೀಗ 'ಶರಣ ಮೂರ್ತನಲ್ಲ, ಅಮೂರ್ತ್ತನಲ್ಲ. ಲಿಂಗದಲ್ಲಿ ಪ್ರಾಣಸಂಚಿತ'ನೆಂಬ ಶಬ್ದಕ್ಕರ್ಥ. ಅಂತು ಶಿವಾಂಶಿಕನಾದ ಶರಣನ ಪ್ರಾಣವು ತನ್ನ ನಿಜವಪ್ಪ ಲಿಂಗಸ್ವರೂಪವ ಬಿಡದೆ ಧರಿಸಿಕೊಂಡು ಶರಣರೂಪಾಯಿತ್ತೆಂಬುದೀಗ 'ಪ್ರಾಣದಲ್ಲಿ ಪ್ರಸಾದ ಸಂಹರಣೆ'ಯೆಂಬ ಶಬ್ದಕ್ಕರ್ಥ. ಅಂತು ಶರಣ ತನ್ನ ಲಿಂಗಸ್ವರೂಪವ ಬಿಡದೆ ಧರಿಸಿಕೊಂಡು, ದೇಹವನಾಶ್ರಯಿಸಿ ತನ್ನ ತಾನರ್ಚಿಸಿಕೊಳುತ ಲಿಂಗವೆಯಾಗಿಪ್ಪ ಶರಣನೆಂಬುದೀಗ 'ಪ್ರಸಾದದಲ್ಲಿ ಕಾಯಾಶ್ರಿತನು' ಎಂಬ ಶಬ್ದಕ್ಕರ್ಥ. ಅಂತು ಶಿವನ ಸಂಕಲ್ಪದಿಂದಾದ ಜಗದುತ್ಪತ್ಯದಂತಲ್ಲ ಶರಣ ನುತ್ಪತ್ಯವೆಂಬುದೀಗ 'ಲೋಕಲೌಕಿಕ ಪ್ರಕಾರದುದಯನಲ್ಲ ಕೂಡಲ ಚೆನ್ನಸಂಗಾ, ನಿಮ್ಮ ಶರಣನೆಂ'ಬ ಶಬ್ದಕ್ಕರ್ಥ.

೫

ಅನಾಯಸದಿಂದ ಮನೆಯ ಮಾಡಿ, ನಿರಾಯಸದಿಂದ ಪರಮಸುಖಿ. ರೂಹಿಸುವಲ್ಲಿ ರೂಪಾಧಿಕ, ನೋಡುವಲ್ಲಿ ನೋಟ ಘನ. ಇಂತು ಸಹಜ ಸಂಶಯ ನಿಲವಿನ ಪರಿ ಉದಕದೊಳಗಣ ಬಿಂದು ಉದಯರತ್ನದಂತೆ,– ಕೂಡಲಚೆನ್ನಸಂಗಾ, ನಿಮ್ಮ ಶರಣನ ಪರಿ ಬೇರೆ.

ಟೀ. ಮಹಾಘನಲಿಂಗವು ತನ್ನ ತಾನರ್ಚಿಸಿಕೊಂಬ ಲೀಲಾ ವಿಲಾಸದಿಂದ ದೇಹವೆಂಬ ಮನೆಯ ಮಾಡಿಕೊಂಡು, ಶರಣರೂಪಾಗಿ, ತನ್ನ ನಿಜಸ್ವರೂಪವನೆ ಸಾಕಾರವ ಮಾಡಿ ಕರಸ್ಥಳದಲ್ಲಿ ಮೂರ್ತಿಗೊಳಿಸಿ, ತನ್ನ ತಾನರ್ಚಿಸಿಕೊಳುತ, ಆ ಇಷ್ಟಲಿಂಗವ ಭಿನ್ನವಿಡದೆ ಅಖಂಡಜ್ಞಾನ ದೃಷ್ಟಿಯಿಂದ ನೋಡುತ್ತ, ತನ್ನ ಶಿವತ್ವದ ಘನಸುಖವ ಹಿಂಗದೆ ಸುಖಿ ಸುತ್ತಿಪ್ಪ ಶರಣನು. ಅಂತಿಪ್ಪ ಶರಣನ ಇರವಿನ ಪರಿ ಎಂತೆಂದಡೆ: ಉದಯ ಕಾಲದ ಸೂರ್ಯನ ತೇಜ ಜಲಬಿಂದುಗಳಲ್ಲಿ ಪ್ರತಿಬಿಂಬಿಸಿ ಬೆಳಗಿ ತೋರು ತ್ತಿರ್ದು, ಆ ಜಲಬಿಂದುಗಳಲ್ಲಿ ಆ ತೇಜ ನಿರ್ಲೇಪವಾಗಿಪ್ಪಂತೆ ಶರಣ ದೇಹ ವಿಡಿದಿರ್ದು ದೇಹಿಯಲ್ಲದೆ ನಿರ್ಲೇಪನಾಗಿಪ್ಪ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೬

ಶರಣ ದೃಷ್ಟಾದೃಷ್ಟ ಕಾಣಯ್ಯಾ! ಮುಟ್ಟದೆ ಮುಟ್ಟುವನಯ್ಯಾ! ಆಗಿನ ಆಗು ಕಾಣಯ್ಯಾ! ಭೇದದ ಭೇದ ಕಾಣಯ್ಯಾ! ಅರುಹಿನ ಅರುಹು ಕಾಣಯ್ಯಾ! ಲಿಂಗದಲ್ಲಿ ಹಿಂಗದ ಬಿಂದು,–ಕೂಡಲಚೆನ್ನಸಂಗಾ, ನಿಮ್ಮಲ್ಲಿ ಸಂಗನಬಸವಣ್ಣನಯ್ಯಾ!!

ಟೀ. ಶರಣನು ತಾನೇ ಇಷ್ಟಲಿಂಗವಾಗಿ, ತಾನೇ ಪ್ರಾಣಲಿಂಗವಾಗಿ ತನ್ನ ತಾನರ್ಚಿಸಿಕೊಳ್ಳುತ್ತಿಹನೆಂಬುದೀಗ 'ಶರಣ ದೃಷ್ಟಾದೃಷ್ಟ ಕಾಣಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಶರಣ ಸಕಲವಿಷಯ ಪದಾರ್ಥಂಗಳ ಜೀವನಾಗಿ ಮುಟ್ಟುವನಲ್ಲ. ಶರಣ ಲಿಂಗವಾಗಿ ಮುಟ್ಟಿ ನಿರ್ಲೇಪಿಯಾಗಿಹನೆಂಬುದೀಗ 'ಮುಟ್ಟದೆ ಮುಟ್ಟುವನಯ್ಯಾ' ಎಂಬ ಶಬ್ದಕ್ಕರ್ಥ. ಸಕಲಫಲಭೋಗಂಗಳೆಲ್ಲವೂ ಚೇಗೆಯನುಳ್ಳವು. ನಿತ್ಯವಾದ ಆಗಿನ ಮುಕ್ತಿಸ್ವರೂಪು. ಆ ಮುಕ್ತಿಸ್ವರೂಪವೇ ಶರಣನೆಂಬುದೀಗ 'ಆಗಿನ ಆಗು ಕಾಣಯ್ಯಾ' ಎಂಬ ಶಬ್ದಕ್ಕರ್ಥ. ಸಕಲ ಜಗತ್‌ಪ್ರಪಂಚಿನ ಒಳಗಿರ್ದು ಹೊದ್ದಿಯೂ ಹೊದ್ದದೆಯಿಪ್ಪುದೀಗ ಬ್ರಹ್ಮದ ಭೇದ. ಅಂತಪ್ಪ ಭೇದವನುಳ್ಳ ಆ ಬ್ರಹ್ಮವು ತಾನೆ ಶರಣನೆಂಬುದೀಗ 'ಭೇದದ ಭೇದ ಕಾಣಯ್ಯಾ' ಎಂಬ ಶಬ್ದಕ್ಕರ್ಥ. ತನ್ನನೆಲ್ಲಾ ಪರಬ್ರಹ್ಮವೆಯಾಗಿ ಕಂಡರಿದು ಭಿನ್ನದೋರದೆಯಿಪ್ಪುದೀಗ ಅರಿವು. ಅಂತಪ್ಪ ಅಖಂಡಜ್ಞಾನಸ್ವರೂಪನು ಶರಣನೆಂಬುದೀಗ 'ಅರುಹಿನ ಅರುಹು ಕಾಣಯ್ಯಾ' ಎಂಬ ಶಬ್ದಕ್ಕರ್ಥ. ಮಹಾಘನಲಿಂಗದ ಚಿತ್‌ಪ್ರಭಾಂಗವೆಂಬುದೀಗ ಚಿದ್ಬಿಂದು. ಅಂತು ಲಿಂಗದಂಗವಾಗಿ ಹಿಂಗಲಿಲ್ಲದೆಯಿಪ್ಪ ಚಿದ್ಬಿಂದು ತಾನೆ ಲಿಂಗವ ಕೂಡಿಕೊಂಡು ಶರಣರೂಪಾಯಿತ್ತೆಂಬುದೀಗ 'ಲಿಂಗದಲ್ಲಿ ಹಿಂಗದ ಬಿಂದು ಕೂಡಲಚೆನ್ನಸಂಗಾ, ನಿಮ್ಮಲ್ಲಿ ಸಂಗನಬಸವಣ್ಣನಯ್ಯಾ' ಎಂಬ ಶಬ್ದಕ್ಕರ್ಥ.

೭

ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಹಿರಿದುಕಿರಿದಾದುದನಾರೂ ಅರಿಯರು. ಪಾಷಾಣ ಪರೀಕ್ಷೆವಂತನಂತೆ,–ಕೂಡಲಸಂಗಮದೇವಯ್ಯಾ, ಗುರುಕರುಣವುಳ್ಳವರ ನಿಜವಿಂತುಟು.

ಟೀ. ಅಖಂಡಚಿದಾನಂದ ಸುಖರತಿಕಳಾಪರಿಪೂರ್ಣಸ್ವರೂಪನಾಗಿ ಹೆಚ್ಚು ಕುಂದಿಲ್ಲದೆಯಿರ್ದ ಮಹಾಘನಲಿಂಗವು ತನ್ನ ಸ್ವಭಾವದಿಂದವೆ ತನ್ನ ತಾನರ್ಚಿಸಿಕೊಂಬ ಲೀಲಾವಿಲಾಸದೋರಿ, ಲಿಂಗವು ಶರಣನೆಂಬ ಹಿರಿದು ಕಿರಿದಾಯಿತ್ತು. ಅಂತು ಹಿರಿದು ಕಿರಿದಾದುದು ಒಂದೇ ವಸ್ತುವೆಂದು ಶರಣ ತನ್ನ ನಿಜವ ಗುರುಕರುಣದಿಂದರಿದು, ಶರಣನೆಲ್ಲಾ ಲಿಂಗವೆಯೆಂದು ತನ್ನ ಲಿಂಗಸ್ವರೂಪವ ತಾನೆ ಅರ್ಚಿಸಿಕೊಳುತಿಪ್ಪನು. ಅಂತಪ್ಪ ಶರಣನ ಚಾರಿತ್ರವ ಇತರ ಮಾರ್ಗಿಗಳಾರೂ ಅರಿಯರು. ಅದು ಹೇಗೆಂದಡೆ: ರತ್ನ ಪಾಷಾಣದ ತೇಜ ಕಾಂತಿ ಎಲ್ಲಾ ಪಾಷಾಣಗಳಿಗಿಲ್ಲದಂತೆ. ಅಂತಪ್ಪ ರತ್ನ ಪಾಷಾಣದ ಜಾತಿ ಕಲೆಗಳನರಿವ ದೃಷ್ಟಿವಾಳಿಕೆಯೂ ಒಬ್ಬಂಗಲ್ಲದೆ ಎಲ್ಲ ರಿಗೆಯೂ ಇಲ್ಲದಂತೆ ಶರಣನ ಜ್ಞಾನಚಾರಿತ್ರವಾರಿಗೆಯೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೮

ಹಸಿವಿನ ಪ್ರೇಮಕ್ಕಾಗಿ ಹುಸಿದು ಮಜ್ಜನಕ್ಕೆರೆವರು. ದೇವರಿಲ್ಲ, ಭಕ್ತರಿಲ್ಲ. ನಾನೂ ಇಲ್ಲ, ಮತ್ತೆ ನೀನೂ ಇಲ್ಲ. ಗೊಹೇಶ್ವರಾ, ಪೂಜಿಸು ವವರೂ ಇಲ್ಲ, ಪೂಜೆಗೊಂಬವರೂ ಇಲ್ಲ!!

ಟೀ. ಮಹಾಘನಲಿಂಗವು ತನ್ನ ತಾನರ್ಚಿಸಿಕೊಂಬ ಜ್ಞಾನಾ ಪ್ಯಾಯನದೋರಿ, ಶರಣರೂಪಾಗಿ ತನ್ನ ತಾನರ್ಚಿಸಿಕೊಳುತ್ತಿಹನು. ಅಂತು ತನ್ನ ತಾನರ್ಚಿಸಿಕೊಂಬ ಪೂಜಾಕ್ರಿಯೆಗಳಿಗೆ ಫಲವಿಲ್ಲ, ಪದವಿಲ್ಲ. ಪದವಿಲ್ಲಾಗಿ ಆ ಶರಣ ಮಾಡುವ ಪೂಜಾಕ್ರೀಗಳೆಲ್ಲವೂ ಹುಸಿಕ್ರೀ. ಅಂತು ದೇವ ಭಕ್ತ, ಪೂಜ್ಯ ಪೂಜಕನೆಂಬ ಎರಡಿಲ್ಲದೆ ಲಿಂಗವೆ ಶರಣನಾಗಿ, ತನ್ನ ಸ್ವಲೀಲೆಯಿಂದ ತನ್ನ ತಾನರ್ಚಿಸಿಕೊಳುತ್ತಿಹನಾಗಿ ಶರಣನ ಪೂಜಾಜ್ಞಾನ ಕ್ರಿಯೆಗಳು ಬದ್ಧವಲ್ಲ, ಹುಸಿ ಎಂಬುದೀ ವಚನದ ತಾತ್ಪರ್ಯಾರ್ಥ.

೯

ಶರಣ ದೃಷ್ಟಾದೃಷ್ಟವನರಿಯನು. ಸಾವಯ ನಿರವಯನೆಂದೂ ಉಪಮಿಸನು. ಶರಣ ತಾನು ಸ್ವತಂತ್ರನಾಗಿ ಭಾವರಹಿತನು. ವಿಕೃತ

ವೇಷದಿಂದ ಸುಕೃತವ ಜೋಡಿಸುವನಲ್ಲ ಶರಣನು. ಪ್ರಕೃತಿಗುಣವಿಡಿದು ಮೂರ್ತಿಯಾದ ಉಪಜೀವಿ ತಾನಲ್ಲ. ಕೂಡಲಚೆನ್ನಸಂಗನ ಶರಣ ಸಾರಾಯಸನುಮತನು.

ಟೀ. ಶರಣ ಇಷ್ಟಲಿಂಗ ಪ್ರಾಣಲಿಂಗವೆಂದು ಲಿಂಗವ ಭಿನ್ನವಿಟ್ಟು ಅರಿವನಲ್ಲ. ಶರಣ ತಾನೆಲ್ಲಾ ಲಿಂಗವೆಯಾಗಿಪ್ಪನೆಂಬುದೀಗ 'ಶರಣ ದೃಷ್ಟಾದೃಷ್ಟವನರಿಯನು' ಎಂಬ ಶಬ್ದಕ್ಕರ್ಥ. ಸಾವಯುವೆಂದರೆ ಜೀವಾತ್ಮನು, ನಿರವಯುವೆಂದಡೆ ಪರಮಾತ್ಮನು. ಅಂತಪ್ಪ ಜೀವ ಪರಮರ ಯೋಗದ ಎಣಿಕೆಯ ಲೆಕ್ಕಿಸುವನಲ್ಲ ಶರಣ. ತಾನೆಲ್ಲಾ ಚಿತ್‌ಪರಮಲಿಂಗವೆಯಾಗಿಪ್ಪನು ಎಂಬುದೀಗ 'ಸಾವಯ ನಿರವಯುವನೆಂದೂ ಉಪಮಿಸನು' ಎಂಬ ಶಬ್ದಕ್ಕರ್ಥ. ಶರಣನು ತಾನೇ ಸ್ವತಂತ್ರ ಲಿಂಗವೆಯಾಗಿಪ್ಪನಾಗಿ, ಶರಣಂಗೆ ಲಿಂಗವ ಭಿನ್ನವಿಟ್ಟು ಭಾವಿಸಿಹೆನೆಂಬ ಭಾವವಿಲ್ಲವೆಂಬುದೀಗ 'ಶರಣ ತಾನು ಸ್ವತಂತ್ರನಾಗಿ ಭಾವರಹಿತನು' ಎಂಬ ಶಬ್ದಕ್ಕರ್ಥ. ತಪೋವೇಷ ಮೊದಲಾದ ವೇಷಂಗಳ ತಾಳಿ, ಮೋಕ್ಷವ ಸಾಧಿಸಿಹೆನೆಂಬ ಬದ್ಧನಲ್ಲ. ಶರಣ ತಾನೆ ಮುಕ್ತಿ ಸ್ವರೂಪನೆಂಬುದೀಗ 'ವಿಕೃತವೇಷದಿಂದ ಸುಕೃತವ ಜೋಡಿಸುವನಲ್ಲ ಶರಣ'ನೆಂಬ ಶಬ್ದಕ್ಕರ್ಥ. ಪ್ರಕೃತಿಯೆಂದಡೆ ಮಾಯಾಶಕ್ತಿ. ಅಂತಪ್ಪ ಮಾಯಾಮರವೆಯಿಂದ ತನ್ನ ನಿಜವ ಮರೆದು, ದೇಹಿಯಾಗಿ ಹುಟ್ಟಿ ಹುಟ್ಟಿ ಬರುತ್ತಿಹ ಜೀವನಲ್ಲ ಶರಣನು. ಮತ್ತೆಂತೆಂದಡೆ: ಮಾಯಾವಿರಹಿತವಾಗಿಪ್ಪ ಬಚ್ಚಬರಿಯ ಅಖಂಡ ಜ್ಞಾನಾನಂದ ಸ್ವರೂಪಾದ ಲಿಂಗವೇ ಶರಣನಾದನೆಂಬುದೀಗ 'ಪ್ರಕೃತಿ ಗುಣವಿಡಿದು ಮೂರ್ತಿಯಾದ ಉಪಜೀವಿ ತಾನಲ್ಲ. ಕೂಡಲಚೆನ್ನಸಂಗನ ಶರಣನು ಸಾರಾಯಸನುಮತನು' ಎಂಬ ಶಬ್ದಕ್ಕರ್ಥ.

೧೦

ಸಂಗವಿಡಿದಂತೆ ಸಂಗವಿಡಿದು ನೋಡದಿರಯ್ಯಾ! ಶರಣ ಸಂಗಸೂತಕಿಯಲ್ಲ ನೋಡಯ್ಯಾ! ಲಿಂಗಪರೀಕ್ಷಿತ ಸಂಗವಂತನೆಂದೆನ್ನದಿರಯ್ಯ! ಶರಣ ಮನ ಬಂದಂತೆ ಮಾಡುವ. ಅರಸಿ ಸಕಲಾಗಮಾಚಾರ್ಯ

ನಪ್ಪ ನೋಡಯ್ಯಾ! ಮಿಂಚಿನ ಗೊಂಚಲಂತೆ ಮುಂದೆ ರೂಪಾಗಿ ತೋರು ತ್ತಿಪ್ಪುದು! ಹಿಂದೆ ನೋಡಲು ಬಯಲಾಗಿರುತ್ತಿಪ್ಪುದು! ಶರಣನೊಡಲು ಗೊಂಡಡೆ-ಸಾಮಾನ್ಯನೇ? ಪ್ರಕೃತಿಗುಣ ಭಿನ್ನಭಾವಿಯಲ್ಲ,–ಕೂಡಲಚೆನ್ನ ಸಂಗಾ, ನಿಮ್ಮ ಶರಣನ ಪರಿ ಬೇರೆ.

ಟೀ. ಈ ವಚನ ಕಾಣಬಂದರ್ಥ.

೧೧

ಕುಲದೊಳಗೆ ಹುಟ್ಟಿ ಕುಲವ ಬೆರಸದೆ ತಮ್ಮ ನಿಲವ ಬಲಿದಿ ಪ್ಪವರು ಇನ್ನಾರು ಹೇಳಾ? ಹಬ್ಬಿದ ಮೂರು ಬೆಟ್ಟಕ್ಕೆ ತನ್ನ ಮನವ ಹಬ್ಬ ಲೀಯದೆ ಲಿಂಗ ಜಂಗಮಕ್ಕೆ ಸವೆಸಿ ಸ್ವಯಲಿಂಗವಪ್ಪವರಿನ್ನಾರು ಹೇಳಾ? ಸ್ವಯೋ ಲಿಂಗ, ಸ್ವಯೋ ಶರಣ, ಸ್ವಯೋ ಭೋಗವೆಂದುದಾಗಿ,–ಗೊಹೇ ಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ನಿಲವಿಂಗೆ ನಮೋ ನಮೋ ಎಂಬೆನು!

ಟೀ. ದೇಹಿಗಳೊಳಗೆ ದೇಹವಿಡಿದು ಹುಟ್ಟಿ ಜೀವನಾಗದೆ ತನ್ನ ಶಿವತ್ವದ ಇರವ ಬಲಿದುಕೊಂಡಿಪ್ಪನು ಶರಣನಲ್ಲದೆ ಮತ್ತಾರೂ ಇಲ್ಲವೆಂಬು ದೀಗ 'ಕುಲದಲ್ಲಿ ಹುಟ್ಟಿ ಕುಲವ ಬೆರಸದೆ ತಮ್ಮ ನಿಲವ ಬಲಿದಿಪ್ಪವರಿ ನ್ನಾರು ಹೇಳಾ' ಎಂಬ ಶಬ್ದಕ್ಕರ್ಥ. ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಅಹಂ ಮಮತೆಗಳೀಗ ಜಗವೆಲ್ಲವ ಸುತ್ತಿ ಹಬ್ಬಿ ಮುಚ್ಚಿಕೊಂಡಿಹ ಪರ್ವತಂ ಗಳು. ಅಂತಪ್ಪ ತ್ರಿವಿಧ ಅಹಂಮಮತೆಗಳ ಶರಣ ತನ್ನ ಮನದಲ್ಲಿ ಹಬ್ಬ ಲೀಯದೆ, ಆ ಹೊನ್ನು ಹೆಣ್ಣು ಮಣ್ಣುಗಳ ಗುರು ಲಿಂಗ ಜಂಗಮಕ್ಕರ್ಪಿಸಿ ತಾನೆಲ್ಲಾ ಲಿಂಗವೆಯಾಗಿಪ್ಪುದು ಶರಣಂಗಲ್ಲದೆ ಮತ್ತಾರಿಗೂ ಇಲ್ಲವೆಂಬು ದೀಗ 'ಹಬ್ಬಿದ ಮೂರು ಬೆಟ್ಟಕ್ಕೆ ತನ್ನ ಮನವ ಹಬ್ಬಲೀಯದೆ ಲಿಂಗ ಜಂಗ ಮಕ್ಕರ್ಪಿಸಿ, ಸ್ವಯಲಿಂಗವಪ್ಪವರಿನ್ನಾರು ಹೇಳಾ' ಎಂಬ ಶಬ್ದಕ್ಕರ್ಥ. ಮಹಾಘನವಸ್ತು ತಾನೇ ಲಿಂಗವಾಗಿ, ತಾನೇ ಶರಣನಾಗಿ, ತಾನೇ ಉಭ ಯದ ಸಂಗಸುಖಭೋಗವು ತಾನೆಯಾಗಿ ಭೋಗಿಸುತಿಪ್ಪನು ಶಿವನು. ಅಂತಾಗಿ ಶಿವಶರಣರಿಗೆ ಶರಣುವೊಕ್ಕವರೆಲ್ಲರೂ ಮುಕ್ತರೆಂಬುದೀಗ

'ಸ್ವಯೋಲಿಂಗ, ಸ್ವಯೋ ಶರಣ, ಸ್ವಯೋ ಭೋಗವೆಂದುದಾಗಿ ಗೊಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ನಿಲವಿಂಗೆ ನಮೋ ನಮೋ ಎಂಬೆನೆಂ'ಬ ಶಬ್ದಕ್ಕರ್ಥ.

೧೨

ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ! ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ! ಕೂಡಲ ಸಂಗನ ಶರಣರು ಕಾಯುವ ನೆವದಿಂದಲರ್ಪಿಸುವ ಬೆಡಗ ನಾನೇನೆಂಬೆನಯ್ಯಾ!!

ಟೀ. ಅಖಂಡಪರಿಪೂರ್ಣ ಚಿತ್‌ಪರಮಲಿಂಗವು ಮಾಯಾದೇಹ ಸಂಸಾರ ಸಂಗವಿಲ್ಲದೆಯಿರ್ದು ತನ್ನ ತಾನರ್ಚಿಸಿಕೊಂಬ ಲೀಲಾವಿಲಾಸದಿಂದ ಶರಣರೂಪಾಗಿ ದೇಹಸಂಗವಿಡಿದಿರ್ದು, ಆ ದೇಹವಾಸನೆಯ ಹೊದ್ದದೆ ಇಪ್ಪ ಶರಣರ ಪರಿ ಆಶ್ಚರ್ಯವೆಂಬುದೀಗ 'ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಚಿತ್ಪರಮ ಲಿಂಗವು ತಾನೇ ಶರಣನಾಗಿ ತನ್ನ ತಾನರ್ಚಿಸಿಕೊಳ್ಳುತಿಹನು. ಅಂತು ತನ್ನ ತಾನರ್ಚಿಸಿಕೊಂಬ ಶಿವಜ್ಞಾನಾಚಾರವನುಪಮಿಸಬಾರದೆಂಬುದೀಗ 'ಪರ ಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಚಿತ್ಪರಮಲಿಂಗವು ತಾನೇ ಶರಣನಾಗಿ, ತನ್ನ ತಾನರ್ಚಿಸಿಕೊಂಬ ಭಕ್ತಿಯ ನೆವದಿಂದ ದೇಹಸುಖಂಗಳನರ್ಪಿಸಿಕೊಂಡು ನಿರ್ಲೇಪಿಯಾಗಿಪ್ಪ ಶರಣನ ಬೆಡಗು ಆಶ್ಚರ್ಯವೆಂಬುದೀಗ 'ಕೂಡಲಸಂಗನ ಶರಣರು ಕಾಯುವ ನೆವದಿಂದಲರ್ಪಿಸುವ ಬೆಡಗ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ.

೧೩

ನಾ ನೀನೆಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ. ಸಾಲೋಕ್ಯನಲ್ಲ, ಸಾಮೀಪ್ಯನಲ್ಲ ಶರಣ. ಸಾರೂಪ್ಯನಲ್ಲ, ಸಾಯುಜ್ಯನಲ್ಲ ಶರಣ. ಸಕಾಯ ನಲ್ಲ, ಅಕಾಯನಲ್ಲ ಗೊಹೇಶ್ವರಲಿಂಗವು ತಾನಾಗಿ.

ಟೀ. ನಾ ನೀನೆಂಬ ದ್ವೈತವಿಲ್ಲದೆ ಒಂದೆಯಾಗಿರ್ದ ಪರವಸ್ತು ತಾನೇ ತನ್ನ ಲೀಲಾವಿಲಾಸದಿಂದ ಶರಣ ರೂಪಾಗಿ ತನ್ನ ತಾನರ್ಚಿಸಿ

ಕೊಳ್ಳುತ್ತಿಪ್ಪನು. ಅಂತು ವಸ್ತು ಶರಣರೂಪಾಗಿ ತನ್ನ ತಾನರ್ಚಿಸಿ ಪೂಜಿಸಿಕೊಂಬಲ್ಲಿಯೂ ದ್ವೈತವಿಲ್ಲ. ಅಂತು ದ್ವೈತವಂದೂ ಇಂದೂ ಎಂದೂ ಇಲ್ಲದೆ ಒಂದೇ ವಸ್ತುವಾಗಿಪ್ಪನಾಗಿ, ಶರಣನು ಚತುರ್ವಿಧ ಪದಂಗಳ ಪಡೆದಿಪ್ಪ ಭಿನ್ನಮುಕ್ತರೊಳಗಲ್ಲ. ಅದು ಕಾರಣ, ದೇಹಿಯಾಗಿಪ್ಪ ಬದ್ಧನಲ್ಲ. ನಿರ್ದೇಹಿಯಾಗಿಪ್ಪ ಶೂನ್ಯನಲ್ಲ. ಸ್ವತಂತ್ರ ಶಿವ ತಾನೆ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೪

ಸಕಲ ನಿಃಕಲನಯ್ಯಾ, ನಿಃಕಲ ಸಕಲನಯ್ಯಾ! ಸಕಲನಾಗಿ ಸಂಸಾರಿಯಲ್ಲ. ನಿಃಕಲನಾಗಿ ವೈರಾಗಿಯಲ್ಲ. ಸಂಸಾರಿಯಲ್ಲದ ಸಂಗ, ವೈರಾಗಿಯಲ್ಲದ ನಿಸ್ಸಂಗ. ಇಂತೀ ಉಭಯಸಂಗದಿಂದ ಮುಹವನೆಯ್ದಿಪ್ಪನಾಗಿ,–ಕೂಡಲಚೆನ್ನಸಂಗಾ, ನಿಮ್ಮ ಶರಣನೆಂತಿರ್ದಡೇನಯ್ಯಾ?

ಟೀ. ಶರಣನು ಸಾಕಾರವಾಗಿ ದೃಶ್ಯನಪ್ಪ ಜೀವನಲ್ಲ. ನಿರಾಕಾರನಾಗಿ ಸಾಕಾರವ ನೇತಿಮಾಡಿ ತೋರದಿಪ್ಪವನಲ್ಲ. ಶರಣ ಸಕಲ ನಿಃಕಲವ ಮಾಡಿಕೊಂಡು ತನ್ನ ಶಿವತ್ವದ ಘನಪದವ ಬಿಡದೆ, ತನ್ನ ತಾನರ್ಚಿಸಿಕೊಳ್ಳುತ್ತ, ತನ್ನ ಸ್ವಲೀಲೆಯಲಿಪ್ಪ ಸ್ವತಂತ್ರ ಶಿವನು ತಾನೆ ಶರಣನು. ಅಂತಪ್ಪ ಶರಣನೆಂತಿರ್ದಡೆಯೂ ಅಂತಿಂತೆನಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೧೫

ಇಹಪರವೆಂಬ ಇದ್ದೆಸೆಗೆ ಇದ್ದೆಸೆಯಾಗಿರ್ದನ ಪರಿಹೊಸತು! ನೆಯಿ ಹತ್ತದ ನಾಲಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಯಂತೆ ಇರ್ದನಯ್ಯಾ! ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸುತ್ತ, ಆಚರಿಸದಂತಿರ್ದ ನೋಡಯ್ಯಾ!!

ಟೀ. ಇಹ ಪರವೆಂಬೆರಡಕ್ಕೆ ಬೇರೆ ಎರಡು ಇಹಪರಂಗಳಾಗಿರ್ದ ಶರಣನು. ಅದು ಹೇಗೆಂದಡೆ: ಇಹಲೋಕದ ದೇಹಿಗಳಂತಲ್ಲ, ಲಿಂಗದೇಹಿ

ಯಾಗಿಪ್ಪನಾಗಿ ಶರಣನ ಇಹದ ಪರಿ ಬೇರಾಯಿತ್ತು. ಪರಲೋಕದ ಚತುರ್ವಿಧ ಪದಂಗಳ ಹೊದ್ದದೆಯಿಪ್ಪ ಪರಶಿವನು ತಾನೆಯಾಗಿಪ್ಪನಾಗಿ ಶರಣನ ಪರದ ಪರಿ ಬೇರೆಯಿತ್ತು. ಅಂತು ಇಹಕ್ಕೆ ಇಹ, ಪರಕ್ಕೆ ಪರವಾಗಿರ್ದ ಶರಣನ ಪರಿ ಹೊಸತು ಎಂಬುದೀಗ 'ಇಹಪರವೆಂಬ ಇದ್ದೆಸೆಗೆ ಇದ್ದೆಸೆಯಾಗಿರ್ದನ ಪರಿ ಹೊಸತು' ಎಂಬ ಶಬ್ದಕ್ಕರ್ಥ. ಅಂತು ಶರಣನು ಇಹಪರವೆಂಬ ಜಗವ ಹೊದ್ದಿಯೂ ಹೊದ್ದದೆ ಮಹಾಘನವು ತಾನೆಯಾಗಿರ್ಪನೆಂಬುದೀಗ 'ನೆಯಿ ಹತ್ತದ ನಾಲಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದಾಲಿಯಂತೆ ಇರ್ದೆನಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಶರಣನೆಲ್ಲಾ ಮಹಾಘನಲಿಂಗವೆಯಾಗಿರ್ದು, ತನ್ನ ಸ್ವಲೀಲೆಯಿಂದ ತನ್ನ ತಾನೆ ಭಕ್ತನಾಗಿ ಲಿಂಗಕ್ರೀಯನಾಚರಿಸುತ್ತಿಪ್ಪನು. ಅಂತು ಶರಣನಾಚರಿಸುವ ಕ್ರಿಯಾಚಾರವು ಫಲ ಪದವನೆಯ್ದುವ ಕ್ರಿಯಾಚಾರವಲ್ಲವೆಂಬುದೀಗ 'ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸುತ್ತ, ಆಚರಿಸದಂತಿರ್ದೆನಯ್ಯಾ' ಎಂಬ ಶಬ್ದಕ್ಕರ್ಥ.

೧೬

ಊಷ್ಮದ ಒರತೆಯಂತೆ, ಉರಿಯ ನೆಳಲಂತೆ, ಮಂಜಿನ ಮಳೆಯಂತೆ, ಬಿಸಿಲ ಕುದುರೆಯಂತೆ, ಬೆಟ್ಟದ ಶಬ್ದದಂತೆ ಸುಳಿವ,—ಸಿದ್ಧಸೋಮನಾಥ ಲಿಂಗ, ನಿಮ್ಮ ಶರಣ!

ಟೀ. ಊಷ್ಮದ ಗಮ್ಮಕ್ಕೆ ಬೆಮರ್ತುರ್ದ ಒರೆತ ಬೆಮರು ಭೂಮಿಯ ಒರತೆಯಂತಲ್ಲ. ಅದು ಹೇಂಗೆ ಹಾಂಗೆ; ಕಿಚ್ಚಿನ ಉರಿಯ ನೆಳಲು ಎಲ್ಲಾ ವೃಕ್ಷಂಗಳ ನೆಳಲಂತಲ್ಲ, ಅದು ಹೇಂಗೆ ಹಾಂಗೆ; ಮಂಜಿನ ಮಳೆ ಎಲ್ಲಾ ಮಳೆಗಳಂತಲ್ಲ, ಅದು ಹೇಂಗೆ ಹಾಂಗೆ; ಬಿಸಿಲ ಕುದುರೆ ಎಲ್ಲಾ ಕುದುರೆಗಳಂತಲ್ಲ, ಅದು ಹೇಂಗೆ ಹಾಂಗೆ; ಶರಣ ದೇಹವಿಡಿದು ಚರಿಸಿದಡೆಯೂ ಎಲ್ಲಾ ದೇಹಿಗಳಂತೆ ದೇಹಿಯಲ್ಲ. ಶರಣನು ನಿರ್ದೇಹಿಯೆಂಬುದೀ ವಚನದ ತಾತ್ಪರ್ಯಾರ್ಥ.

೧೭

ಹಿರಿಯರೆಂತಿಪ್ಪರಯ್ಯಾ? ಅಯ್ಯಾ, ದಿಟದ ರಾಸಿಗೆ ಅವರ ಘಟ ಲಕ್ಷಣ. ನಿಸ್ಸೀಮರೆಂತಿಪ್ಪರಯ್ಯಾ? ಅಯ್ಯಾ, ಸೀಮೆಗೆಡೆಗುಡದ

ಬಯಲನೊಳಕೊಂಡಿಪ್ಪರು. ಭಾವರೆಂತಿಪ್ಪರಯ್ಯಾ? ಅಯ್ಯಾ, ಕಣ್ಣಾಲಿ ದೃಷ್ಟಿಯ ನುಂಗಿದಂತೆ. ನೀರೆಂತು ನನೆವುದೆಂದು ಬೆಸಗೊಂಡಡೆ ಹೇಳುವ ಶಬ್ದದಂತಿಹುದವರ ನಿಲವು. 'ಲಿಂಗಮಧ್ಯೇ ಜಗತ್ಸರ್ವಂ' ಲಿಂಗದಂಗ ರೇಕಣ್ಣಪ್ರಿಯ ನಾಗಿನಾಥನಂತಿಪ್ಪರು.

೬೬. ಮಾಯಾತೋರಿಕೆಯ ಸಟೆಯೇನೂ ಇಲ್ಲದಿರ್ದ ಬಚ್ಚ ಬರಿಯ ಮಹಾಘನವೆಂಬ ನಿಜದ ನಿಧಿಯೆಲ್ಲಾ ತಾವೆಯಾಗಿರ್ಪರು ಶರಣರು. ಅಂತಿರ್ಪ ಶರಣರೇ ಹಿರಿಯರು. ಆ ಶರಣರ ದೇಹ ಆ ನಿಜದ ನಿಧಿಗೆ ಇಕ್ಕಿದ ಸಮುದ್ರವೆಯಾಗಿಪ್ಪುದು. ಅದೆಂತೆಂದಡೆ: ಭಕ್ತ ಲಿಂಗದ ರಾಸಿಗೆ ಇಕ್ಕಿದ ಮಣ್ಣ ಮುದ್ರೆಯಂತೆ ಇದ್ದಿತ್ತೆಂಬುದೀಗ 'ಹಿರಿಯರೆಂತಿಪ್ಪ ರಯ್ಯಾ? ಅಯ್ಯಾ, ದಿಟದ ರಾಸಿಗವರ ಘಟ ಲಕ್ಷಣ'ವೆಂಬ ಶಬ್ದಕ್ಕರ್ಥ. ನಾಮ ಸೀಮೆಗಳಿಗೆ ಬಾರದೆ, ವಾಙ್ಮನಕ್ಕಗೋಚರವಾಗಿಪ್ಪ ಪರವಸ್ತುವೆ ತಾನಾಗಿಪ್ಪರು ಶರಣರು. ಅಂತಿಪ್ಪ ಶರಣರು ನಿಸ್ಸೀಮರೆಂಬುದೀಗ 'ನಿಸ್ಸೀ ಮರೆಂತಿಪ್ಪರಯ್ಯಾ? ಅಯ್ಯಾ, ಸೀಮೆಗೆಡೆಗುಡದ ಬಯಲನೊಳಕೊಂಡಿಪ್ಪ ರೆಂಬ ಶಬ್ದಕ್ಕರ್ಥ. ಕಣ್ಣಿನ ಕರಿಯಾಲಿಯಲ್ಲಿ ಮಹಾಘನ ತೇಜೋದೃಕ್ಕ ಡಗಿ ತೋರಿ ಪ್ರಕಾಶಿಸುವಂತೆ, ಶರಣ ಸ್ವಾನುಭಾವದಲ್ಲಿ ಭಿನ್ನವಿಲ್ಲದೆ ಅಖಂಡಜ್ಞಾನಪ್ರಕಾಶಲಿಂಗವೇ ಬೆಳಗುತ್ತಿದ್ದಿತ್ತು. ಅಂತಿಪ್ಪ ಶರಣರೇ ಭಾವಸ್ವರೂಪರೆಂಬುದೀಗ 'ಭಾವರೆಂತಿಪ್ಪರಯ್ಯಾ? ಅಯ್ಯಾ, ಕಣ್ಣಾಲಿ ದೃಷ್ಟಿಯ ನುಂಗಿದಂತೆ' ಎಂಬ ಶಬ್ದಕ್ಕರ್ಥ. ನೀರೆಂತು ನನೆವುದೆಂದು ಬೆಸ ಗೊಂಡಡೆ ಉಪಮಿಸಿ ಹೇಳಬಹುದೆ? ಹೇಳಬಾರದು ಹೇಂಗೆ ಹಾಂಗೆ, ಆ ಮಹಾಘನಲಿಂಗವೆಯಾಗಿಪ್ಪ ಶರಣನ ನಿಲವ ಅಂತಿಂತೆಂದು ವಚಿಸಿ ಹೇಳ ಬಾರದೆಂಬುದೀಗ 'ನೀರೆಂತು ನನೆವುದೆಂದು ಬೆಸಗೊಂಡಡೆ ಹೇಳುವ ಶಬ್ದ ದಂತಿಹುದವರ ನಿಲವು' ಎಂಬ ಶಬ್ದಕ್ಕರ್ಥ. ಅಂತಪ್ಪ ಶರಣರ ನಿಲವು ಮತ್ತೆಂತೆಂದಡೆ: ಮಹಾಘನವಸ್ತು ತನ್ನ ತಾನರ್ಚಿಸಿಕೊಂಬ ಲೀಲಾವಿಲಾ ಸದಿಂದ ತನ್ನೊಳಗೆ ತಾನೆ ಲಿಂಗಾಂಗವೆರಡಾಯಿತ್ತು. ಅಂತಾದ ಎರಡ ರೊಳಗೆ ಅಂಗವೇ ಆತ್ಮನೆನಿಸಿ ಸಕಲ ತತ್ವಮಯವಾಗಿ ಜಗತ್ತಾಯಿತ್ತು. ಅಂತಾದ ಅಂಗ ತತ್ತ್ವಂಗಳಲ್ಲಿ ವಿಯೋಗವಿಲ್ಲದೆ, ಪ್ರಾಣಸ್ವರೂಪನಾಗಿ ಲಿಂಗವಿರ್ದು ಶರಣನೆನಿಸಿ ತನ್ನ ತಾನರ್ಚಿಸಿಕೊಳ್ಳುತ್ತ, ತನ್ನ ಶಿವತ್ವವೆಂತಿ

ರ್ದಂತೆ ಇಹನು ಶರಣನೆಂಬುದೀಗ 'ಲಿಂಗಮಧ್ಯೇ ಜಗತ್ಸರ್ವಂ ಲಿಂಗದಂಗ ರೇಕಣ್ಣಪ್ರಿಯ ನಾಗಿನಾಥನಂತಿಪ್ಪರು' ಎಂಬ ಶಬ್ದಕ್ಕರ್ಥ.

೧೮

ಕುಲವಿಲ್ಲದ ಅಕುಲನು, ಶರೀರವಿಲ್ಲದ ಸಂಬಂಧಿ. ಮತ್ಸರವಿಲ್ಲದ ಮಹಿಮನು, ಕರ್ಮವಿಲ್ಲದ ಕಾರಣಿಕನು. ಅರ್ಪಿತವಿಲ್ಲದ ಆಪ್ಯಾಯನಿ, ಜಂಗಮವಿಲ್ಲದ ಸಮಶೀಲನು. ಲಿಂಗವಿಲ್ಲದ ನಿರುತನು, ಪ್ರಸಾದವಿಲ್ಲದ ಪರಿಣಾಮಿ,–ಕೂಡಲಚೆನ್ನಸಂಗಾ, ನಿಮ್ಮ ಶರಣನು.

ಟೀ. ಗುರುಕರಜಾತನಾಗಿ ಮಲತ್ರಯಂಗಳ ಕಳೆದು, ಸರ್ವಾಂಗ ಲಿಂಗವಾದ ಶರಣನು ದೇಹಿಯಲ್ಲ; ಜಗದ ಕುಲಾಶ್ರಮದೊಳಗಲ್ಲ. ಆ ಶರಣನು ಮನ ಕರಣಂಗಳ ನೇತಿಮಾಡಿ ಕಳೆಯಬೇಕೆಂದು ವೈರಾಗ್ಯ ತಾಳಿ ಕರಣಂಗಳ ಕೂಡ ಮತ್ಸರಿಸುವನಲ್ಲ. ಆ ಕರಣಂಗಳನೆಲ್ಲವ ಲಿಂಗೋಪಕರ ಣಂಗಳ ಮಾಡಿ ಲಿಂಗವಾಗಿಪ್ಪ ಘನಮಹಿಮನು. ಆ ಶರಣನು ಪುಣ್ಯ ಪಾಪ ವೆಂಬ ಉಭಯ ಕರ್ಮವೇನೂ ಇಲ್ಲದೆ ಶಿವನೆಯಾಗಿಪ್ಪನು. ಆ ಶರಣನ ಮನ ಪ್ರಾಣ ಕರಣ ಇಂದ್ರಿಯ ವಿಷಯ ಆಪ್ಯಾಯನವೆಲ್ಲಾ ಲಿಂಗವೆ ಯಾಗಿ, ಲಿಂಗವು ಭೋಗಿಸುತ್ತಿಪ್ಪನಾಗಿ ಲಿಂಗವ ಭಿನ್ನವಿಟ್ಟು ಅರ್ಪಿಸುವ ನಲ್ಲ. ಆ ಶರಣ ಲಿಂಗ ಜಂಗಮ ಪ್ರಸಾದವ ತನ್ನಿಂದ ಭಿನ್ನವಿಟ್ಟು ಕ್ರೀಯ ನಾಚರಿಸುವನಲ್ಲ. ಆ ಲಿಂಗ ಜಂಗಮ ಪ್ರಸಾದವೆಲ್ಲಾ ತಾನೆಂದು ಅಭಿನ್ನ ಕ್ರಿಯಾಶೀಲನಾಗಿ ಅರ್ಚಿಸುತ್ತಿಪ್ಪನು. ಅಂತು ಶರಣನು ಮಹಾಘನಲಿಂ ಗವು ತಾನಾಗಿರ್ದು, ತನ್ನ ತಾನರ್ಚಿಸಿಕೊಂಬ ಸ್ವಲೀಲಾನಂದಕ್ರೀಯಲ್ಲಿ ವಿಶ್ರಮಿಸಿ ಪರಮಸುಖವನೆಯ್ದಿಪ್ಪನು ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೯

ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು. ತೆರಹಿಲ್ಲದ ನಂಬುಗೆ, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ,– ಕೂಡಲಚೆನ್ನಸಂಗಾ, ನಿಮ್ಮ ಶರಣಂಗೆ.

ಟೀ. ಲಿಂಗಾಂಗವೆಂಬ ಭೇದವೇನೂ ಇಲ್ಲದೆ, ಅಖಂಡ ಪರಿಪೂರ್ಣ ಲಿಂಗವು ತಾನಾಗಿರ್ದ ಶರಣಂಗೆ ಲಿಂಗವ ಭಿನ್ನವಿಟ್ಟು ಆಚರಿಸುವ ಭಿನ್ನ ಕ್ರಿಯಾಜ್ಞಾನವಿಲ್ಲ. ಆ ಶರಣ ತಾನೇ ಲಿಂಗವಾಗಿ ತನ್ನ ತಾನರ್ಚಿಸಿಕೊಳು ತ್ತಿಪ್ಪ ಅಭಿನ್ನಜ್ಞಾನಕ್ರೀಯಿಂದ ಆಚರಿಸುತ್ತಿಪ್ಪನು ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೦

ಆತ್ಮನ ನಿಜವನರಿದು, ಪರಮಾತ್ಮಲಿಂಗ ತಾನೆಂದರಿದ ಶರಣಂಗೆ ಎಂತಿರ್ದಂತೆ ಪೂಜೆ ನೋಡಾ! ಶರಣ ಭೋಗಿಸಿದುದೆಲ್ಲಾ ಶಿವಾರ್ಪಿತ. ರುಚಿಸಿದುದೆಲ್ಲಾ ಪ್ರಸಾದ. ಶರಣನರಿದುದೆಲ್ಲಾ ಪರಬ್ರಹ್ಮ. ಮರೆದುದೆಲ್ಲಾ ಪರಮಸುಖ. ನುಡಿದುದೆಲ್ಲಾ ಶಿವತತ್ವ. ಶರಣ ತಾನೆ ಕೂಡಲಚೆನ್ನ ಸಂಗಮದೇವ.

ಟೀ. ಈ ವಚನ ಕಾಣಬಂದರ್ಥ.

೨೧

ಶರಣ ನಿದ್ರೆಗೈದರೆ ಜಪವೋ, ಶರಣನೆದ್ದಿರ್ದಡೆ ಶಿವರಾತ್ರಿ ಕಾಣಿ ಭೋ! ಶರಣ ನಡೆದುದೇ ಪಾವನ ಭೋ! ನುಡಿದುದೇ ಶಿವತತ್ತ್ವ ಭೋ! ಕೂಡಲಸಂಗಮದೇವ ಶರಣನ ಕಾಯವೇ ಕೈಲಾಸ ಕಾಣಿ ಭೋ!

ಟೀ. ಈ ವಚನ ಕಾಣಬಂದರ್ಥ.

೨೨

ಅರಿದೆನೆಂಬುದು ತಾ ಬಯಲು. ಅರಿಯೆನೆಂಬುದು ತಾ ಬಯಲು. ಮರೆದೆನೆಂಬುದು ತಾ ಬಯಲು. ಅರುಹಿನ ಕುರುಹಿನ ಮರವಿನೊಳಗೆ ಗೊಹೇಶ್ವರನೆಂಬುದು ತಾ ಬಯಲು ನೋಡಾ!

ಟೀ. ಬಯಲೆಂದಡೆ ಮಹಾಘನಲಿಂಗವು. ಅಂತಪ್ಪ ಮಹಾಘನ ಲಿಂಗವೇ ಶರಣನಾದನಾಗಿ, ಆ ಶರಣನ ಅರಿವು ಮರಹು ಕುರುಹುಗಳೆಲ್ಲವೂ ಬಚ್ಚಬರಿಯ ಲಿಂಗವೆಯಾಗಿದ್ದಿತ್ತು. ಅಂತು ದೇಹವೆಂಬ ಗುಹೆಗೆ ಈಶ್ವರ

ನೆನಿಸಿಕೊಂಡು, ಮಹಾಘನಲಿಂಗವು ತನ್ನ ತಾನರ್ಚಿಸಿಕೊಳ್ಳುತ್ತ ತನ್ನ ಸ್ವಲೀಲೆಯಿಂದ ಶರಣರೂಪಾಗಿ ಚರಿಸುತ್ತಿಹನೆಂಬುದೀ ವಚನದ ತಾತ್ಪರ್ಯಾರ್ಥ.

೨೩

ನನಗೆ ನಾನೇ ಗುರುವಾದೆನಯ್ಯಾ! ನನಗೆ ನಾನೇ ಲಿಂಗವಾದೆನಯ್ಯಾ! ನನಗೆ ನಾನೇ ಜಂಗಮವಾದೆನಯ್ಯಾ! ನನಗೆ ನಾನೇ ಪ್ರಸಾದವಾದೆನಯ್ಯಾ! ನನಗೆ ನಾನೇ ಭಕ್ತನಾದೆನಯ್ಯಾ! ರೇಕಣ್ಣಪ್ರಿಯ ನಾಗಿನಾಥನಲ್ಲಿ ಆಗುಹೋಗನರಿಯೆನಯ್ಯಾ ನಾನು!

ಟೀ. ಪರಶಿವನು ತನ್ನ ಸ್ವಲೀಲೆಯಿಂದ ತಾನೇ ಗುರುವಾಗಿ, ತಾನೇ ಲಿಂಗವಾಗಿ, ತಾನೇ ಜಂಗಮವಾಗಿ, ತಾನೇ ಪ್ರಸಾದವಾಗಿ, ತಾನೇ ಭಕ್ತನಾಗಿ ತನಗೆ ತಾನೇ ಭಕ್ತಿಯ ಮಾಡಿಕೊಳ್ಳುತ್ತಿಹನು. ಅಂತು ಪರಶಿವನು ತಾನೇ ಭಕ್ತನಾದ ಕಾರಣ, ಆ ಭಕ್ತಂಗೆ ಸುಖದುಃಖ ಬಂಧಮೋಕ್ಷವೆಂಬ ಆಗು ಭೇಗೆಗಳಿಲ್ಲ. ಆ ಭಕ್ತನೆಂತಿರ್ದುದೆಲ್ಲಾ ಮುಕ್ತಿಸುಖವೆಂಬುದೀ ವಚನದ ತಾತ್ಪರ್ಯಾರ್ಥ.

೨೪

ಪರವೇ ಹಮ್ಮಿನಿಂದ ಜೀವನಾಯಿತ್ತೆಂಬುವನೊಬ್ಬ ವಾದಿ. ಆತ್ಮನು ಪಶುಪಾಶಬದ್ಧನು, ಅನಾದಿ ಮಲಯುಕ್ತನೆಂಬವನೊಬ್ಬ ವಾದಿ. ಇವರಿಬ್ಬರೂ ತರ್ಕಕ್ಕೆ ಸಿಲುಕಿ ದುಃಖಕ್ಕೊಳಗಾದರು. ಅದೆಂತೆಂದಡೆ: ಆತ್ಮನು ಅನಾದಿ ಮಲಸಂಬಂಧಿಯಾದಡೆ, ಆತ್ಮಸ್ವರೂಪ ಮಲಸ್ವರೂಪ ಬಲ್ಲಡೆ ನೀವು ಹೇಳಿರೇ? ಪೃಥ್ವಿ ಅಪ್ಪು ಕೂಡಿ ಸ್ಥೂಲತನು. ತೇಜ ವಾಯು ಕೂಡಿ ಸೂಕ್ಷ್ಮತನು. ಅಂಬರ ಅಹಂಕಾರಗೂಡಿ ಕಾರಣತನು. ಈ ತನುತ್ರಯವಿಲ್ಲದಂದು, ಪಂಚತತ್ವಂಗಳು ಶಾಖೆದೋರದಂದು, ಆದಿ ಅನಾದಿ, ಸ್ವರೂಪ ನಿರೂಪ, ಹಮ್ಮು ಬಿಮ್ಮು, ಯುಗ ಜುಗ, ಸುರಾಳ ನಿರಾಳವಿಲ್ಲದಂದು ಆತ್ಮನಲ್ಲಿ ಮಲ ಹುದುಗಿರ್ದ ಭೇದವ ತಿಳಿದು ರೂಹಿಸಿ ಹೇಳಬಲ್ಲರೆ

ಸಿದ್ಧಾಂತಿಯೆಂಬೆ. ಹಮ್ಮಿನಿಂದ ಶಿವನೇ ಜೀವನು, ಹಮ್ಮಳಿದ ಜೀವನೇ ಶಿವನಾದಡೆ, ಸೃಷ್ಟಿ ಸ್ಥಿತಿ ಸಂಹಾರಂಗಳೇಕಾದವು? ವಾಚ್ಯಾವಾಚ್ಯಂಗಳೇಕಾದವು? ಜಾತಿ ವಿಜಾತಿಗಳೇಕಾದವು? ಸ್ಥಾನಾಸ್ಥಾನಂಗಳೇಕಾದವು? ಪಕ್ಷಾಪಕ್ಷಂಗಳೇಕಾದವು? ದೇಹಾದೇಹಂಗಳೇಕಾದವು? ಅಂಡಜ ಸ್ವೇದಜ ಜರಾಯುಜ ಉದ್ಭಿಜವೆಂಬ ಚೌರಾಸಿಲಕ್ಷ ಜೀವಂಗಳೇಕಾದವು? ಆದಡೂ ಆಗಲಿ. ಬ್ರಹ್ಮಕ್ಕೆ ತಥ್ಯ ಮಿಥ್ಯ, ರಾಗ ದ್ವೇಷ, ಹಮ್ಮು ಬಿಮ್ಮು, ಮದ ಮತ್ಸರ, ನಾನೀನೆಂಬ ಭ್ರಾಂತಿಸೂತಕವುಂಟೇ? ಅದಲ್ಲ ನಿಲ್ಲು. ಬ್ರಹ್ಮಕ್ಕೆ ಹಮ್ಮು ಹೋಹ ಬಹ ಭೇದವ ತಿಳಿದು, ಸಂಕಲ್ಪ ವಿಕಲ್ಪವಿಲ್ಲದೆ, ಸ್ತುತಿ ನಿಂದೆಗಳನರಿಯದೆ, ಪಕ್ಷಾಪಕ್ಷಂಗಳಿಲ್ಲದೆ, ಕಾಮ ನಿಃಕಾಮವಿಲ್ಲದೆ, ಭೀತಿ ನಿರ್ಭೀತಿಯಿಲ್ಲದೆ ನಿರಂಗಸ್ವರೂಪನಾದಡೆ ವೇದಾಂತಿಯೆಂಬೆ. ಈ ಉಭಯದ ವಾದವ ಹೊದ್ದರು ನಮ್ಮ ಶರಣರು, ಆದಿಯನಾದಿಯಿಂದತ್ತಣ ಶರಣ ಲಿಂಗ ಸಂಬಂಧವನರಿದರಾಗಿ. ಅದೆಂತೆಂದಡೆ: ಸತ್ತುವೆನಿಸಿ ಶಬ್ದ ನಿಶ್ಶಬ್ದಕ್ಕೆ ಬಾರದ ನಿಶ್ಶೂನ್ಯಲಿಂಗವೆ ಪ್ರಾಣವಾಗಿ ಚಿತ್ತುವೆನಿಸಿ, ನಾಮ ನಿರ್ನಾಮಕ್ಕೆ ಬಾರದ ಸ್ವರೂಪು ನಿರೂಪಲ್ಲದ ಶರಣನೆ ಅಂಗವಾಗಿ, ಈ ಉಭಯ ಸಂಪುಟದಿಂದ ಸಕಲನಿಃಕಲವೆನಿಸಿತ್ತು. ಆ ಸಕಲನಿಃಕಲತತ್ವವೆ ತನ್ನ ಶಕ್ತಿಸಮರಸ ಸಂಭಾಷಣೆಯಿಂದ ಲೀಲೆದೋರಲಾಗಿ ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ, ತಾನೇ ಜಂಗಮವಾದ, ತಾನೇ ಪ್ರಸಾದವಾದ, ತಾನೇ ಸರ್ವಚೈತನ್ಯಾತ್ಮಕನಾದ ಭೇದವ ತಮ್ಮಿಂದ ತಾವೇ ಅರಿದರಾಗಿ ವೇದಾಂತ ಸಿದ್ಧಾಂತವೆಂಬ ವಾಗ್ಜಾಲವ ನುಡಿಯರು. ಅದೆಂತೆಂದಡೆ: ತರ್ಕಕ್ಕತರ್ಕ್ಯರು. ಸಾಧ್ಯಕ್ಕಸಾಧ್ಯರು. ಭೇದಕ್ಕಭೇದ್ಯರು. ದ್ವೈತಾದ್ವೈತವ ಮೀರಿ ನಿಂದ ನಿಜಸುಖಿಗಳಯ್ಯಾ ನಿಮ್ಮ ಶರಣರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!

ಟೀ. ಈ ವಚನ ಕಾಣಬಂದರ್ಥ.

೨೫

'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ ಗುರುವಾದ. 'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ ಶಿಷ್ಯನಾದ. 'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ

ಜಂಗಮವಾದ. 'ಯದ್ಭಾವಂ ತದ್ಭವತಿ' ಎಂದುದಾಗಿ ಶಿವ ತಾನೆ ಭಕ್ತನಾದ. 'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ ಪ್ರಸಾದವಾದ. 'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ ಪ್ರಸಾದಿಯಾದ. 'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಕೂಡಲ ಚೆನ್ನಸಂಗ ತಾನಾದ.

ಟೀ. ಪರಶಿವನು ತಾನೆಂತೆಂದು ಭಾವಿಸಿದಂತೆ ಅಹುದು ಸತ್ಯ. ಅದು ಕಾರಣ ಪರಶಿವನು ತಾನೆ ತನ್ನನರ್ಚಿಸಿಕೊಂಬ ಇಚ್ಛಾಭಾವದೋರಿ ತಾನೇ ಗುರು ಲಿಂಗ ಜಂಗಮ ಪ್ರಸಾದವೆಂಬ ಚತುರ್ವಿಧವಾಗಿ, ಆ ಚತುರ್ವಿಧಕ್ಕೆ ಭಕ್ತನು ತಾನೆಯಾಗಿ, ಪರಶಿವನು ತನ್ನ ಸ್ವೇಚ್ಛಾಭಾವದಿಂದ ತನಗೆ ತಾನೇ ಭಕ್ತಿಯ ಮಾಡಿಕೊಳ್ಳುತ್ತಿಹನೆಂಬುದೀ ವಚನದ ತಾತ್ಪರ್ಯಾರ್ಥ.

೨೬

ಸ್ವಯಂ ಪ್ರಸಾದಂ ವಾ, ಸ್ವಯಂ ಲಿಂಗಂ ವಾ, ಸ್ವಯಂ ದಾಸೋಹಂ ವಾ, ಸ್ವಯಂ ಶರಣಂ ವಾ, ಸ್ವಯಂ ವಾ ಕೂಡಲಚೆನ್ನಸಂಗ ಪ್ರಸಾದಂ ವಾ.

ಟೀ. ಪ್ರಸಾದವೆಂದಡೆ ಪರವಸ್ತು. ಅಂತಪ್ಪ ಪರವಸ್ತು ತಾನೇ ಲಿಂಗವಾಗಿ, ತಾನೇ ಜಂಗಮವಾಗಿ, ತಾನೇ ಭಕ್ತನಾಗಿ, ತನಗೆ ತಾನೇ ಭಕ್ತಿಯ ಮಾಡಿಕೊಳುತ್ತಿಹನು ಪರಶಿವಲಿಂಗವು ತಾನೇ ತನ್ನ ಸ್ವಲೀಲೆಯಿಂದಲೆಂಬುದೀ ವಚನದ ತಾತ್ಪರ್ಯಾರ್ಥ.

೨೭

ಸರ್ವಾಂಗ ಪ್ರಸಾದಂ ವಾ, ಸರ್ವಾರ್ಥ ಪ್ರಸಾದಂ ವಾ, ಸರ್ವಾಂಗ ಸ್ವಯಂ ವಾ ಕೂಡಲಚೆನ್ನಸಂಗ ಪ್ರಸಾದಂ ವಾ.

ಟೀ. ಪ್ರಸಾದವೆಂದಡೆ ಲಿಂಗವು. ಅಂತಪ್ಪ ಲಿಂಗವು ತಾನೇ ಜೀವಾತ್ಮ ಮೊದಲಾದ ತನುಕರಣ ಸರ್ವಾಂಗ ಸ್ವರೂಪಾಗಿ ಶರಣನೆನಿಸಿ

ಅಂಗಲಿಂಗವು ತಾನೇ ಸಕಲ ವಿಷಯ ಪದಾರ್ಥಂಗಳಾಗಿ, ತನಗೆ ತಾನೇ ಭಕ್ತಿಯ ಮಾಡಿಕೊಳ್ಳುತ್ತಿಹನು. ಅಂತು ಭಕ್ತಿಯ ಮಾಡಿಕೊಳ್ಳುತ್ತಿಹ ಭಕ್ತನ ಸರ್ವಾಂಗವೆಲ್ಲವು ಲಿಂಗವು ತಾನೆ ಎಂಬುದೀ ವಚನದ ತಾತ್ಪರ್ಯಾರ್ಥ.

೩೮

ಒಲಿತ ಫಲಿತ ಪ್ರಸಾದಂ ವಾ, ಆಧಿ ವ್ಯಾಧಿ ಪ್ರಸಾದಂ ವಾ, ಗಮನಾಗಮನ ಪ್ರಸಾದಂ ವಾ, ಸ್ವಯಂ ವಾ ಕೂಡಲಚೆನ್ನಸಂಗ ಪ್ರಸಾದಂ ವಾ.

ಟೀ. ಪ್ರಸಾದವೆಂದಡೆ ಪರಶಿವಲಿಂಗವು. ಅಂತಪ್ಪ ಪರಶಿವ ಲಿಂಗವು ತಾನೇ ದೇಹ ಕರಣಂಗಳಾಗಿ, ಲಿಂಗವು ತಾನೆ ಬಾಲ ಯೌವನ ವೃದ್ಧನಾಗಿ, ಲಿಂಗವು ತಾನೆ ನರೆತೆರೆಗಳಾಗಿ, ಲಿಂಗವು ತಾನೆ ಆಧಿವ್ಯಾಧಿ ಗಳಾಗಿ, ಲಿಂಗವು ತಾನೆ ಗಮನಾಗಮನಂಗಳು ಆಗಿ, ಎಲ್ಲಾ ದೇಹಿಗಳಂತೆ ಶರಣರೂಪಿಂದ ಚರಿಸುತ್ತಿಹನಾ ಪರಶಿವಲಿಂಗವು ತಾನೇ ತನ್ನ ಸ್ವಲೀಲೆ ಯಿಂದಲೆಂಬುದೀ ವಚನದ ತಾತ್ಪರ್ಯಾರ್ಥ.

೩೯

ಭಾಂಡ ಭಾಜನ ಪದಾರ್ಥ ತ್ರೈವಿಧ ಪ್ರಸಾದಂ ವಾ, ಅಂಗಲೇಪನ ಸರ್ವಪ್ರಸಾದಂ ವಾ, ರೋಮ ರೋಮ ಪ್ರಸಾದಂ ವಾ, ಸ್ವಯಂ ವಾ ಕೂಡಲಚೆನ್ನಸಂಗ ವಾ.

ಟೀ. ಪ್ರಸಾದವೆಂದಡೆ ಪರಶಿವಲಿಂಗವು. ಅಂತಪ್ಪ ಪರಶಿವ ಲಿಂಗವು ತಾನೇ ಭಾಂಡ ಭಾಜನ ಪದಾರ್ಥಂಗಳಾಗಿ, ಆ ಲಿಂಗವು ತಾನೇ ಗಂಧ ಕಸ್ತೂರಿ ಪುಷ್ಪ ವಸ್ತ್ರಾಭರಣಂಗಳಾಗಿ, ಆ ಲಿಂಗವು ತಾನೇ ರೋಮ ರೋಮಂಗಳು ಮೊದಲಾದ ಸರ್ವಾಂಗ ಸ್ವರೂಪನಾಗಿ ಶರಣನೆನಿಸಿ, ತಾನೆ ತನ್ನನರ್ಚಿಸಿಕೊಳ್ಳುತ್ತಿಹನು ಪರಶಿವಲಿಂಗವು ತನ್ನ ಸ್ವಲೀಲಾನಂದದಿಂದ ಲೆಂಬುದೀ ವಚನದ ತಾತ್ಪರ್ಯಾರ್ಥ.

೩೦

ಸರ್ವತ್ರಯ ಸರ್ವಗುಣತ್ರಯ ಪ್ರಸಾದಂ ವಾ, ಸರ್ವಾ ಭಾವ ಪ್ರಸಾದಂ ವಾ, ಪರಿಪೂರ್ಣ ಪ್ರಸಾದಂ ವಾ, ಸ್ವಯಂ ವಾ ಶರಣಂ ವಾ, ಸ್ವಯಂ ವಾ ಕೂಡಲಚೆನ್ನಸಂಗ ಸರ್ವಪ್ರಸಾದಂ ವಾ.

ಟೀ. ಪ್ರಸಾದವೆಂದಡೆ ಪರಶಿವಲಿಂಗವು. ಅಂತಪ್ಪ ಪರಶಿವ ಲಿಂಗವು ತಾನೆ ತನುತ್ರಯುವಾಗಿ, ಜೀವತ್ರಯುವಾಗಿ, ಅವಸ್ಥಾತ್ರಯುವಾಗಿ, ಗುಣತ್ರಯುವಾಗಿ, ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನ ಭಾವಂಗಳಾಗಿ, ಸಕಲೇಂದ್ರಿಯ ವಿಷಯಂಗಳೆಲ್ಲವೂ ತಾನೆಯಾಗಿ, ಲಿಂಗವು ತಾನೆ ಪರಿ ಪೂರ್ಣವಾದ ದೇಹ ಗುಣಸ್ವರೂಪನಾಗಿ, ಲಿಂಗವು ತಾನೆ ಶರಣನೆನಿಸಿ, ತನ್ನ ತಾನರ್ಚಿಸಿಕೊಳುತ್ತಿಹನು ಪರಶಿವಲಿಂಗವು ತನ್ನ ಸ್ವಲೀಲಾನಂದ ದಿಂದಲೆಂಬುದೀ ವಚನದ ತಾತ್ಪರ್ಯಾರ್ಥ.

೩೧

ಕಂಡುದೆಲ್ಲಾ ಪಾವನ, ಕೇಳುವುದೆಲ್ಲಾ ಪರಮಬೋಧೆ. ಮುಟ್ಟಿ ತೆಲ್ಲಾ ಪರುಷದ ಸೋಂಕು, ಒಡನೆ ನುಡಿದವರೆಲ್ಲರೂ ಸದ್ಯೋನ್ಮು ಕ್ತರು. ಸುಳಿದ ಸುಳುಹೆಲ್ಲಾ ಜಗತ್ಪಾವನ. ಮೆಟ್ಟಿದ ಧರೆಯೆಲ್ಲವೂ ಅವಿ ಮುಕ್ತಿಕ್ಷೇತ್ರ. ಸೋಂಕಿದ ಜಗವೆಲ್ಲವೂ ಪುಣ್ಯತೀರ್ಥಂಗಳು. ಶರಣೆಂದು ಭಕ್ತಿ ಮಾಡಿದವರೆಲ್ಲರೂ ಸಾಯುಜ್ಯರು. ಗೊಹೇಶ್ವರನ ಶರಣನ ಸುಳುಹಿನ ಸೊಗಸನುಪಮಿಸಬಾರದು.

ಟೀ. ಈ ವಚನ ಕಾಣಬಂದರ್ಥ.

೧೯

ಬೆಡಗಿನ ವಚನಗಳು

ಬೆಡಗಿನ ವಚನಗಳು

೧

ಕಾಳಮೇಘವೆಂಬ ಭೂಮಿಯಲ್ಲಿ ಕಾಳರಾತ್ರಿಯೆಂಬ ಏರಿಗಟ್ಟಿ, ಮಂಜಿನ ನೀರು ತೊರೆಗಟ್ಟಿ ಹಾಯ್ದು ತುಂಬಿತ್ತು. ಆ ಕೆರೆಗೆ ತೂಬು ಬಿಸಿಲ ಸಂಭ್ರಮದ ಕಲ್ಲು, ಕಂಜನಾಳದ ನೂಲಿನ ಕಂಭ. ಆ ತಲಿಪಿಂಗೆ ಅಂದಿನ ಮುಚ್ಚುಳು ಇಂದಿನ ದ್ವಾರದಲ್ಲಿ ಸೂಸುತ್ತಿರಲಾಗಿ, ಸಾಳಿವನ ಬೆಳೆಯಿತ್ತು. ಕೊಯ್ದು ಅರಿಯ ಹಾಕಲಾಗಿ ಒಂದಕ್ಕೆ ಎರಡಾಗಿ, ಎರಡಕ್ಕೆ ಮೂರುಗೂಡಿ ಹೊರೆಗಟ್ಟಿತ್ತು. ಒಕ್ಕುವದಕ್ಕೆ ಕಣವಿಲ್ಲದೆ, ನೆಡುವದಕ್ಕೆ ಮೇಟಿ ಇಲ್ಲದೆ, ಒಕ್ಕುವದಕ್ಕೆ ಎತ್ತಿಲ್ಲದೆ, ಹೊರೆ ಎತ್ತ ಹೋಯಿತ್ತೆಂದರಿಯೆ; ನಾ ಹೋದೆ ಸದ್ಯೋಜಾತಲಿಂಗದಲ್ಲಿಗಾಗಿ.

ಟೀ. ಅಭ್ರಚ್ಛಾಯಮಾತ್ರವಾದ ತನು ಅಜ್ಞಾನ ಸಂಬಂಧವಾಗಿರುತ್ತಿಹುದೆಂಬುದೀಗ 'ಕಾಳಮೇಘವೆಂಬ ಭೂಮಿಯಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ಸುಜ್ಞಾನೋದಯವಾಗಲು, ಸಕಲಕರಣಂಗಳೆಲ್ಲ ನಿವೃತ್ತಿಯಾಗಿ ಜ್ಞಾನಕರಣಂಗಳಾಗಿ ಮಹಾಜ್ಞಾನದಲ್ಲಿ ಪರವಶವಾಗಿರುತ್ತಿಹವೆಂಬುದೀಗ 'ಕಾಳರಾತ್ರಿಯೆಂಬ ಏರಿಗಟ್ಟಿ' ಎಂಬ ಶಬ್ದಕ್ಕರ್ಥ. ಆ ಸಕಲಕರಣಂಗಳ ತನ್ನ ಮಹಾಜ್ಞಾನದ ಪರವಶದಲ್ಲಿ ಏಕೀಕರಿಸಿದ ಶರಣನು ಚಿದ್‌ಘನಲಿಂಗದಲ್ಲಿ ಮೋರೆಯಡಗಲು ಪಟ್ಟ ಸದ್ವಿವೇಕ ಸ್ವರೂಪವಾದ ಪರಮಾನಂದ ಜಲವನು ತನ್ನ ಸರ್ವಾಂಗದಲ್ಲಿ ಪರಿಪೂರ್ಣವಾಗಿ ವೇಧಿಸಿದನೆಂಬುದೀಗ 'ಮಂಜಿನ ನೀರು ತೊರೆಗಟ್ಟಿ ಹಾಯ್ದು ತುಂಬಿತ್ತೆಂ'ಬ ಶಬ್ದಕ್ಕರ್ಥ. ಶರಣನಾಚಾರಂಗದಲ್ಲಿ ವೇಧಿಸಿರ್ಪ ಪರಿಪೂರ್ಣವಾದ ಪರಮಾನಂದ ಜಲಕ್ಕೆ ಉನ್ಮನಿದ್ವಾರವೆ ತೂಬಾಗಿ ಪರಿಪೂರ್ಣ ಜ್ಞಾನಪ್ರಕಾಶದ ಹೆಚ್ಚಿಗೆಯೆ ಆ ತೂಬಿನಲ್ಲಿ ಸಂಬಂಧವಾಗಿಹುದೆಂಬುದೀಗ 'ಆ ಕೆರೆಗೆ ತೂಬು ಬಿಸಿಲ ಸಂಭ್ರಮದ ಕಲ್ಲು' ಎಂಬ ಶಬ್ದಕ್ಕರ್ಥ. ಅಲ್ಲಿ ಸ್ವಾನುಭಾವಸೂತ್ರವನೊಳಕೊಂಡು ಶಿವಭಾವಸ್ತಂಭ ಒಪ್ಪುತ್ತಿಹುದೆಂಬುದೀಗ 'ನೂಲಿನ ಕಂಭ'

ವೆಂಬ ಶಬ್ದಕ್ಕರ್ಥ. ಆ ಶಿವಭಾವದಗ್ರದಲ್ಲಿ ಪರಶಿವನಂತರ್ಗತವಾಗಿರ್ದ ಪರಿಪೂರ್ಣ ಜ್ಞಾನಚಿತ್ತೆ ಅವಗ್ರಹಿಸಿಕೊಂಡಿರುತ್ತಿಹುದೆಂಬುದೀಗ 'ಆ ತಲಪಿಂಗೆ ಅಂದಿನ ಮುಚ್ಚುಳು' ಎಂಬ ಶಬ್ದಕ್ಕರ್ಥ. ಅಂತಪ್ಪ ಪರಮಾನಂದ ಜಲವೆ ಚಿದ್ರೂಪನಾದ ಶರಣನ ಒಳಹೊರಗೆನ್ನದೆ ಸರ್ವಾಂಗದಲ್ಲಿ ತುಂಬಿ ಕ್ರಿಯಾಚಾರದಲ್ಲಿ ಸಂಬಂಧವಾಗಿ ಚರಿಸುತ್ತಿರಲು ಎಂಬುದೀಗ 'ಇಂದಿನ ದ್ವಾರದಲ್ಲಿ ಸೂಸುತ್ತಿರಲಾಗಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಸದ್ವಿವೇಕ ಜಲಸೇವನೆಯಿಂದ ಜ್ಞಾನಕರಣಂಗಳಾಗಿ ಪ್ರಭಾವಿಸಿದವೆಂಬುದೀಗ 'ಸಾಳಿವನ ಬೆಳೆಯಿತ್ತೆ'ಂಬ ಶಬ್ದಕ್ಕರ್ಥ. ಅಂತು ಸುಜ್ಞಾನೋದಯದಿಂ ಗುರೂಪಾವಸ್ಥೆಯ ಮಾಡುವ ಶಿಷ್ಯನ ಜ್ಞಾನಕರಣಂಗಳ ಮಧ್ಯದಲ್ಲಿರ್ಪ ಪರಮಚಿತ್ಕಲೆಯನು ತನ್ನ ಭಾವ ಮನ ದೃಕ್ಕಿಂ ಬಹಿಷ್ಕರಿಸಿ ಸತ್ಕ್ರಿಯಾಚಾರದಲ್ಲಿ ಸಂಬಂಧವ ಮಾಡಿದನೆಂಬುದೀಗ 'ಕೊಯ್ದು ಅರಿಯ ಹಾಕಲಾಗಿ' ಎಂಬ ಶಬ್ದಕ್ಕರ್ಥ. ಆ ಸತ್ಕ್ರಿಯಾಚಾರದಲ್ಲಿ ಸಂಬಂಧವಾದ ಒಂದೇ ಪರಬ್ರಹ್ಮವು ಲಿಂಗಾಂಗವೆಂದೆರಡಾಗಿ ತೋರಿತ್ತೆಂಬುದೀಗ 'ಒಂದಕ್ಕೆ ಎರಡಾಗಿ' ಎಂಬ ಶಬ್ದಕ್ಕರ್ಥ. ಆ ಲಿಂಗಸ್ಥಲವೇ ತ್ರಿವಿಧಲಿಂಗ ಸ್ವರೂಪವಾಗಿ, ಆ ಅಂಗಸ್ಥಲವೆ ತ್ರಿವಿಧಾಂಗ ಸ್ವರೂಪವಾಯಿತ್ತೆಂಬುದೀಗ 'ಎರಡಕ್ಕೆ ಮೂರುಗೂಡಿ' ಎಂಬ ಶಬ್ದಕ್ಕರ್ಥ. ಇಂತಪ್ಪ ಇಷ್ಟ ಪ್ರಾಣ ಭಾವಲಿಂಗದಲ್ಲಿ ಕ್ರಿಯಾಜ್ಞಾನ ಭಾವವಿಡಿದಾಚರಿಸುತ್ತಿರ್ದ ಶರಣನ ತ್ರಿವಿಧಾಂಗವು ತ್ರಿವಿಧಲಿಂಗದಲ್ಲಿ ಸ್ವಾನುಭವಸೂತ್ರದಿಂದ ಏಕಾರ್ಥವಾದವೆಂಬುದೀಗ 'ಹೊರೆಗಟ್ಟಿತ್ತೆಂ'ಬ ಶಬ್ದಕ್ಕರ್ಥ. ಆ ಲಿಂಗದಲ್ಲಿ ಸಮರಸೈಕ್ಯವಾದ ಶರಣನು ತ್ರಿವಿಧಲಿಂಗಾಂಗ ಸ್ಥಲವಿಡಿದಾಚರಿಸಿಹೆನೆಂದೊಡೆ, ಆಚಾರ ಇದಿರಿಟ್ಟು ತೋರಲಿಲ್ಲವೆಂಬುದೀಗ 'ನೆಡುವದಕ್ಕೆ ಮೇಟಿ ಇಲ್ಲದೆ' ಎಂಬ ಶಬ್ದಕ್ಕರ್ಥ. ಆ ಶರಣನ ಆತ್ಮತ್ರಯಂಗಳು ತ್ರಿವಿಧಲಿಂಗದಲ್ಲಿ ನಿಷ್ಪತಿಯಾದ ಬಳಿಕ ಕ್ರಿಯಾಜ್ಞಾನಭಾವವಿಡಿದು ಆಚರಿಸಲಿಲ್ಲವೆಂಬುದೀಗ 'ಒಕ್ಕುವದಕ್ಕೆ ಎತ್ತಿಲ್ಲದೆ' ಎಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗಾಂಗಸ್ಥಲಂಗಳು ಅವಿರಳ ಪರಬ್ರಹ್ಮದಲ್ಲಿ ಸಮರಸವಾಗಲು, ಶರಣ ಪರಮಕಾಷ್ಟೆಯನೆಯ್ದಿದನೆಂಬುದೀಗ 'ಹೊರೆಯೆತ್ತ ಹೋಯಿತ್ತೆಂದರಿಯೆ ; ನಾ ಹೋದೆ ಸದ್ಯೋಜಾತ ಲಿಂಗದಲ್ಲಿಗಾಗಿ' ಎಂಬ ಶಬ್ದಕ್ಕರ್ಥ.

೨

ಕೊಂಬಿನ ಮೇಲಣ ಹಕ್ಕಿಯು ಆಕಾಶದ ಮೇಲಣ ಗಿಡುಗ ಹಿಡಿಯಿತ್ತು. ಕೊಂಬು ಹಕ್ಕಿಯ ಕೊಡದೆ ಗಿಡುಗನ ಕಡಿಯಿತ್ತು. ಹಕ್ಕಿಯ, ಗಿಡುಗನ, ಕೂಡೆ ಕಡಿವ ಕೊಂಬ ಚಿಟ್ಟೆಯು ಮರಿ ನುಂಗಿತ್ತು, ಸದಾಶಿವ ಮೂರ್ತಿ ಲಿಂಗವನರಿಯಿತ್ತು.

ಟೀ. ಶಿವಜ್ಞಾನೋದಯವಾದ ಶರಣನ ಶಿವಭಾವದಲ್ಲಿ ಸನ್ನಿಹಿತ ವಾಗಿರ್ಪ ಪರಮಾತ್ಮನೆಂಬುದೀಗ 'ಕೊಂಬಿನ ಮೇಲಣ ಹಕ್ಕಿ'ಯೆಂಬ ಶಬ್ದಕ್ಕರ್ಥ. ಆತ್ಮಾಕಾಶದಲ್ಲಿರ್ಪ ಮಾಯೆಯು ಆ ಪರಮಾತ್ಮನನವಗ್ರಹಿ ಸಿತ್ತೆಂಬುದೀಗ 'ಆಕಾಶದ ಮೇಲಣ ಗಿಡುಗ ಹಿಡಿಯಿತ್ತೆ'ಂಬ ಶಬ್ದಕ್ಕರ್ಥ. ಆ ಶಿವಭಾವವು ಪರಮಾತ್ಮನೆಂಬ ಪಕ್ಷಿಯ ಮಾಯೆಗೆ ಕೊಡದೆ ಎಂಬುದೀಗ 'ಕೊಂಬು ಹಕ್ಕಿಯ ಕೊಡದೆ' ಎಂಬ ಶಬ್ದಕ್ಕರ್ಥ. ಆ ಶಿವಭಾವವು ಮಾಯೆಯ ಸಂಹರಿಸಿತ್ತೆಂಬುದೀಗ 'ಗಿಡುಗನ ಕಡಿಯಿತ್ತೆಂಬ' ಶಬ್ದ ಕ್ಕರ್ಥ. ಆ ಪರಮಾತ್ಮನೆಂಬ ಪಕ್ಷಿಯನು, ಮಾಯೆಯೆಂಬ ಗಿಡುಗನನು, ಆ ಸಕಲಪ್ರಪಂಚ ನಿವೃತ್ತಿಯ ಮಾಡುವ ಶಿವಭಾವವನು ಸೂಕ್ಷ್ಮವಾದ ಚಿತ್ತಿ ನಿಂದುದಯಿಸಿದ ಸುಜ್ಞಾನಪ್ರಕಾಶವವಗ್ರಹಿಸಿತ್ತೆಂಬುದೀಗ 'ಹಕ್ಕಿಯ ಗಿಡುಗನ, ಕೂಡೆ ಕಡಿವ ಕೊಂಬ ಚಿಟ್ಟೆಯು ಮರಿ ನುಂಗಿತ್ತು, ಸದಾಶಿವ ಮೂರ್ತಿ ಲಿಂಗವನರಿಯಿತ್ತೆ'ಂಬ ಶಬ್ದಕ್ಕರ್ಥ.

೩

ಕೋಡಗದ ಚೇಷ್ಟೆ ಉಡುಗಿ, ಹಾವಿನ ಹಲ್ಲ ಮುರಿದು, ಆಡಿ ಸುವ ಜೋಗಿಯ ನಾಮ ನಷ್ಟವಾಗಿ, ಸದಾಶಿವಮೂರ್ತಿಲಿಂಗದ ಇರವು ನಿರಾಳವಾಯಿತ್ತು.

ಟೀ. ಅಂತರಂಗದಲ್ಲಿ ಸುಜ್ಞಾನೋದಯವಾದ ಶರಣಂಗೆ ಮನೋ ವಿಕಾರವಳಿದು ಉನ್ಮನಿತತ್ವ ಸ್ವರೂಪವನೆಯ್ದಿತ್ತೆಂಬುದೀಗ 'ಕೋಡ ಗದ ಚೇಷ್ಟೆ ಉಡುಗಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಮನೋ ವಿಕಾರ ನಷ್ಟವಾಗಲು, ಜೀವನ ಸಂಕಲ್ಪವಿಕಲ್ಪಗಳೆಂಬ ದಂತ ಭಗ್ನವಾದ ವೆಂಬುದೀಗ 'ಹಾವಿನ ಹಲ್ಲ ಮುರಿದು' ಎಂಬ ಶಬ್ದಕ್ಕರ್ಥ. ಆ ಎರಡನು

ನಿವೃತ್ತಿಮುಖಕ್ಕೆ ತಂದು, ಲಿಂಗದಲ್ಲಿ ಏಕಾರ್ಥವ ಮಾಡಿ, ಇಷ್ಟಲಿಂಗ ಪ್ರಾಣಲಿಂಗದಲ್ಲಿ ಜ್ಞಾನಕ್ರೀಯಿಂದಾಚರಿಸುತ್ತಿಹ ಶರಣನ ಸರ್ವಾಂಗವು ಲಿಂಗಮಯವಾಯಿತ್ತೆಂಬುದೀಗ 'ಆಡಿಸುವ ಜೋಗಿಯು' ಎಂಬ ಶಬ್ದಕ್ಕರ್ಥ. ಆ ಸರ್ವಾಂಗ ಲಿಂಗಸಂಬಂಧಿಯಾದ ಶರಣನು ಮಹಾಘನಲಿಂಗದಲ್ಲಿ ನಿಷ್ಪತಿಯಾಗಲು, ಉಭಯನಾಮವಳಿದು ನಿರ್ನಾಮ ಸ್ವರೂಪವಾಯಿತ್ತೆಂಬುದೀಗ 'ನಾಮ ನಷ್ಟವಾಗಿ ಸದಾಶಿವಮೂರ್ತಿಲಿಂಗದ ಇರವು ನಿರಾಳವಾಯಿತ್ತೆ'ಂಬ ಶಬ್ದಕ್ಕರ್ಥ.

೪

ಕಣ್ಣಿನ ಮನೆಯಲ್ಲಿ ಕನ್ನದ ಗರತಿ ಹಡೆದುಂಬುತ್ತೈದಾಳೆ. ಅವಳ ಕೂಟವ ಕೂಡುವದಕ್ಕೆ ತಲೆ ಕೆಳಗಾಗಿ, ಕಾಲು ಮೇಲಾಗಿ, ಕೈಯ ಪ್ರದಕ್ಷಿಣವಾಗಿ ತರ್ಕಿಸಿಕೊಂಡು, ಹಿಂದು ಮುಂದಾಗಿ ಮುತ್ತನಿಕ್ಕಿ, ಶಕ್ತಿಯ ಸುಖ ಲೇಸಾಯಿತ್ತು. ಸದಾಶಿವಮೂರ್ತಿಲಿಂಗ ಬಚ್ಚಬಯಲು.

ಟೀ. ಕಣ್ಣೆಂದೊಡೆ ಸುಜ್ಞಾನದೃಷ್ಟಿ, ಆ ಸುಜ್ಞಾನದೃಷ್ಟಿಯನೊಳಕೊಂಡಿರ್ಪ ಚಿದಾಲಯದಲ್ಲಿ ಎಂಬುದೀಗ 'ಕಣ್ಣಿನ ಮನೆಯಲ್ಲಿ' ಯೆಂಬ ಶಬ್ದಕ್ಕರ್ಥ. ಆ ಸುಜ್ಞಾನಕಾಯದಲ್ಲಿ ಸಕಲಪ್ರಪಂಚ ಹೊದ್ದದೆ ಚದುರಿನಿಂದಿರ್ಪ ಜ್ಞಾನಶಕ್ತಿ ಶಿವಸುಖಪ್ರಸಂಗಪ್ರಸಾದವ ಹಡೆದು ಹರುಷಾನಂದದಿಂ ಸ್ವೀಕರಿಸುತ್ತಿರ್ದಳೆಂಬುದೀಗ 'ಕನ್ನದ ಗರತಿ ಹಡೆದುಂಬುತ್ತೈದಾಳೆಂ'ಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಶಕ್ತಿಯಲ್ಲಿ ಬೆರಸುವದಕ್ಕೆ ಎಂಬುದೀಗ 'ತಲೆ ಕೆಳಗಾಗಿ, ಕಾಲು ಮೇಲಾಗಿ' ಎಂಬ ಶಬ್ದಕ್ಕರ್ಥ. ಆ ಶರಣಸತಿಯ ಸುಜ್ಞಾನಹಸ್ತವು ಪೂರ್ವಕ್ರಿಯಾಚಾರವ ಮೀರಿಹುದೆಂಬುದೀಗ 'ಕೈಯ ಪ್ರದಕ್ಷಿಣವಾಗಿ'ಯೆಂಬ ಶಬ್ದಕ್ಕರ್ಥ. ಆ ಶರಣನು ಸದ್ಭಾವಹಸ್ತದಿಂದ ಜ್ಞಾನಶಕ್ತಿಯನಾಲಿಂಗಿಸಿಕೊಂಡನೆಂಬುದೀಗ 'ತರ್ಕಿಸಿಕೊಂಡು' ಎಂಬ ಶಬ್ದಕ್ಕರ್ಥ. ಆ ಜ್ಞಾನಶಕ್ತಿಯಲ್ಲೊಡಗೂಡಿರ್ಪ ಶರಣನು ತನ್ನ ಸುಜ್ಞಾನದೃಷ್ಟಿಯ ಮುಂದೆ ತೋರುವ ಪರಶಿವತತ್ತ್ವದಲ್ಲಿ ಸಮರಸವಾದನೆಂಬುದೀಗ 'ಹಿಂದು ಮುಂದಾಗಿ' ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವೆ ತಾನಾದ ಶರಣನು ಶಿವೋಹಂ ಎಂಬ ಪಂಚಾಕ್ಷರಾಮೃತರಸವನು ಜ್ಞಾನಶಕ್ತಿಯ ಮುಖದಿಂ ಸ್ವೀಕರಿಸುತ್ತಿಹನೆಂಬುದೀಗ 'ಮುತ್ತ

ನಿಕ್ಕಿ' ಎಂಬ ಶಬ್ದಕ್ಕರ್ಥ. ಇಂತಪ್ಪ ಜ್ಞಾನಶಕ್ತಿಯ ಸಮರಸಕೂಟದ ಸುಖವು ಶರಣಂಗೆ ಲೇಸಾಯಿತ್ತೆಂಬುದೀಗ 'ಶಕ್ತಿಯ ಸುಖ ಲೇಸಾಯಿತ್ತು. ಸದಾಶಿವಮೂರ್ತಿಲಿಂಗ ಬಚ್ಚಬಯಲೆಂ'ಬ ಶಬ್ದಕ್ಕರ್ಥ.

೫

ಹೂವಿನ ಮೇಲಣ ತುಂಬಿ ಹೂವ ತಿಂದು, ಗಂಧವನುಳುಹಿತ್ತು. ಉಳಿದ ಗಂಧ ತುಂಬಿಯ ತಿಂದು, ತುಂಬಿ ಗಂಧ ಒಂದೆಯಾಯಿತ್ತು. ಅದು ನಿರಂಗದಿರವು, ಸದಾಶಿವಮೂರ್ತಿಲಿಂಗವು ತಾನೆ.

ಟೀ. ಶರಣನ ಹೃದಯಕಮಲದಲ್ಲಿರ್ಪ ಪರಿಪೂರ್ಣಜ್ಞಾನವೆಂಬುದೀಗ 'ಹೂವಿನ ಮೇಲಣ ತುಂಬಿ'ಯೆಂಬ ಶಬ್ದಕ್ಕರ್ಥ. ಆ ಚಿತ್ಸ್ವರೂಪವಾದ ಶರಣನು ತನ್ನ ಪರಿಪೂರ್ಣಜ್ಞಾನದಿಂ ಹೃದಯಕಮಲವನವಗ್ರಹಿಸಿ, ಸದ್ವಾಸನಾಸ್ವರೂಪವಾದ ಪ್ರಾಣಲಿಂಗವನು ತನ್ನ ನಿಜಾಂತರಂಗದಲ್ಲಿ ಮೂರ್ತಿಗೊಳಿಸಿದನೆಂಬುದೀಗ 'ಹೂವ ತಿಂದು ಗಂಧವನುಳುಹಿತ್ತೆ'ಂಬ ಶಬ್ದಕ್ಕರ್ಥ. ಅಂತರಂಗದಲ್ಲಿ ಉಳುಮೆಯ ಸ್ವರೂಪವಾಗಿರ್ಪ ಪ್ರಾಣಲಿಂಗವು ಶರಣನ ಪರಿಪೂರ್ಣಜ್ಞಾನವನವಗ್ರಹಿಸಿತ್ತೆಂಬುದೀಗ 'ಉಳಿದ ಗಂಧ ತುಂಬಿಯ ತಿಂದು' ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣಜ್ಞಾನಸ್ವರೂಪನಾದ ಶರಣನ ಪ್ರಾಣಲಿಂಗವವಗ್ರಹಿಸಿ, ಸದ್ಭಾವನಾಸ್ವರೂಪವಾದ ಪ್ರಾಣಲಿಂಗವ ಶರಣನವಗ್ರಹಿಸಿ, ಎರಡೂ ಏಕವಾಗಿ ಒಂದೇ ಸ್ವರೂಪವಾದಲ್ಲಿ, ಅಂಗರಹಿತವಾಯಿತ್ತೆಂಬುದೀಗ 'ತುಂಬಿ ಗಂಧ ಒಂದೆಯಾಯಿತ್ತು. ಅದು ನಿರಂಗದಿರವು ಸದಾಶಿವಮೂರ್ತಿಲಿಂಗ ತಾನೆ' ಎಂಬ ಶಬ್ದಕ್ಕರ್ಥ.

ನಡೆದು ನಡೆಯುದವನ ಕಂಡು, ನುಡಿದು ನುಡಿಯುದವನ ಕಂಡು, ಅರಿದು ಅರಿಯುದವನ ಕಂಡು, ತ್ರಿವಿಧಭೇದಂಗಳಲ್ಲಿ ಭೇದಿಸಿ, ವೇಧಿಸಿ ನಿಂದುದು, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ನಿವಾಸ.

ಟೀ. ಶಿವಜ್ಞಾನೋದಯವಾಗಿ ಶ್ರೀಗುರುಕಾರುಣ್ಯದಿಂ ಸರ್ವಾಂಗ ಲಿಂಗಸಂಬಂಧವಾದ ಶರಣನು ಅಭಿನ್ನಕ್ರಿಯಾಚಾರವಿಡಿದು ಆಚರಿಸುತ್ತಿಹನಲ್ಲದೆ, ಭಿನ್ನಕ್ರಿಯಾಚಾರವಿಡಿದು ಆಚರಿಸನೆಂಬುದೀಗ 'ನಡೆದು ನಡೆಯುದವನ ಕಂಡು' ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನದಲ್ಲಿ ನಿರ್ಧರವಾದ ಶರಣನು ಶಿವೋಹಂ ಶಿವೋಹಂ ಎನುತ್ತಿಹನಲ್ಲದೆ ಅಹಂ ಬ್ರಹ್ಮವೆಂದು ವಾಗದ್ವೈತವ ನುಡಿಯನೆಂಬುದೀಗ 'ನುಡಿದು ನುಡಿಯುದವನ ಕಂಡು' ಎಂಬ ಶಬ್ದಕ್ಕರ್ಥ. ಆ ಶಿವೋಹಂಭಾವದಲ್ಲಿರ್ಪ ಶರಣ ತನ್ನ ನಿಜಸ್ವರೂಪವಾದ ಪರಬ್ರಹ್ಮವನು ಅಭಿನ್ನಜ್ಞಾನದಿಂದರಿವುತ್ತಿಹನಲ್ಲದೆ, ಭಿನ್ನಜ್ಞಾನದಿಂದರಿಯನೆಂಬುದೀಗ 'ಅರಿದು ಅರಿಯುದವನ ಕಂಡು' ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನದೃಷ್ಟಿಯಿಂ ನೋಡುತ್ತಿರ್ದ ಶರಣ ತನ್ನಂಗತ್ರಯಂಗಳಲ್ಲಿ ಸಂಬಂಧವಾದ ತ್ರಿವಿಧಲಿಂಗಂಗಳ ತ್ರಿವಿಧಭಕ್ತಿಗಳಿಂದವಗ್ರಹಿಸಿ, ತ್ರಿವಿಧ ಭಕ್ತಿಯನು ತ್ರಿವಿಧಲಿಂಗಾಂಗಗಳಲ್ಲಿ ಏಕಾರ್ಥವ ಮಾಡಿ ಸಮರಸೈಕ್ಯವಾದನೆಂಬುದೀಗ 'ತ್ರಿವಿಧ ಭೇದಂಗಳಲ್ಲಿ ಭೇದಿಸಿ, ವೇಧಿಸಿ ನಿಂದುದು, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ನಿವಾಸ'ವೆಂಬ ಶಬ್ದಕ್ಕರ್ಥ.

೭

ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಯಿತ್ತು. ಕಾಯಿ ಉದುರಿ, ಹಣ್ಣು ಬಲಿಯಿತ್ತು. ಕಣ್ಣಿಗೆ ಹಣ್ಣಿಲ್ಲದೆ ಮೆಲುವುದಕ್ಕಿಲ್ಲ. ಏಣಾಂಕಧರ ಸೋಮೇಶ್ವರಲಿಂಗಕ್ಕೆ ಓಗರವಾಯಿತ್ತು.

ಟೀ. ಇಂದ್ರಿಯಂಗಳುಲುಹಿಲ್ಲದಿರ್ಪ ಶರಣನ ನಿಜಾಂತರಂಗದಲ್ಲಿ ಸದ್‌ವಿವೇಕ ವೃಕ್ಷವಿರುತ್ತಿಹುದೆಂಬುದೀಗ 'ಎಲೆಯಿಲ್ಲದ ವೃಕ್ಷದಲ್ಲಿ' ಎಂಬ ಶಬ್ದಕ್ಕರ್ಥ. ಪಂಚ ವಿಷಯಂಗಳ ತೋರಿಕೆಯಿಲ್ಲದೆ ಮುಕ್ತಿಫಳ ತಲೆದೋರಿತ್ತೆಂಬುದೀಗ 'ಹೂವಿಲ್ಲದ ಕಾಯಾಯಿತ್ತೆ'ಂಬ ಶಬ್ದಕ್ಕರ್ಥ. ಆ ಮುಕ್ತಿಯ ಫಳವ ಸುಜ್ಞಾನಮುಖದಿಂದವಗ್ರಹಿಸಿಕೊಂಡಿರ್ಪ ಶರಣಂಗೆ ಇದಿರಿಟ್ಟು ತೋರುವ ಭಿನ್ನ ಫಲಪದಂಗಳು ನಷ್ಟವಾದವು ಎಂಬುದೀಗ 'ಕಾಯಿ ಉದುರಿ' ಎಂಬ ಶಬ್ದಕ್ಕರ್ಥ. ಆ ಖಂಡಿತ ಫಲಪದ ನಷ್ಟವಾದ ಶರಣನ ನಿಜಾಂತರಂಗದಲ್ಲಿರ್ಪ ಸದ್‌ವಿವೇಕವೃಕ್ಷದಲ್ಲಿ ಚಿದಮೃತರಸವನೊಳಕೊಂಡಿರ್ಪ ಮುಕ್ತಿ

ಫಳಸ್ವರೂಪವಾದ ಚಿದ್‌ಘನಲಿಂಗ ಘಟ್ಟಿಗೊಂಡಿತ್ತೆಂಬುದೀಗ 'ಹಣ್ಣು ಬಲಿಯಿತ್ತು' ಎಂಬ ಶಬ್ದಕ್ಕರ್ಥ. ಆ ಚಿದಮೃತಸ್ವರೂಪವಾದ, ಆ ಪರಮ ಚಿತ್‌ಕಲಾಲಿಂಗವು ಶರಣನ ಸುಜ್ಞಾನದೃಷ್ಟಿಗೆ ತೋರುತ್ತಿಹುದಲ್ಲದೆ, ಸಾಕಾರಕ್ಕೆ ತಂದು ಸ್ವೀಕರಿಸಲಿಲ್ಲವೆಂಬುದೀಗ, 'ಕಣ್ಣಿಗೆ ಹಣ್ಣಲ್ಲದೆ ಮೆಲುವುದಕ್ಕಿಲ್ಲ'ವೆಂಬ ಶಬ್ದಕ್ಕರ್ಥ. ಆ ಶರಣನು ತನ್ನ ಸುಜ್ಞಾನದೃಷ್ಟಿಯಿಂ ತೋರುವ ಮಹಾಘನಲಿಂಗಕ್ಕೆ ಚಿತ್‌ಸ್ವರೂಪವಾದ ಆತ್ಮದ್ರವ್ಯವನು ಸುಜ್ಞಾನಾಗ್ನಿಯಲ್ಲಿ ಸಮರಸಪಾಕವ ಮಾಡಿ ಭಕ್ತಿಯಿಂ ಸಮರ್ಪಿಸುತ್ತಿರ್ದನೆಂಬುದೀಗ 'ಏಣಾಂಕಧರ ಸೋಮೇಶ್ವರಲಿಂಗಕ್ಕೆ ಓಗರವಾಯಿತ್ತು' ಎಂಬ ಶಬ್ದಕ್ಕರ್ಥ.

೮

ಮಧುರವಾಣಿಯ ಉದರದಲ್ಲಿ ಒಂದು ನಿಜ ಕುಕ್ಕುಟ ಕೂಗುತ್ತಿದೆ. ಮೂವರ ಮೊಲೆಯನುಂಡು ಮರೆದೊರಗಬೇಡೆಂದು, ಬೆಳಗಾಯಿತ್ತು, ಅರ್ಕೇಶ್ವರಲಿಂಗವ ನೋಡುವ ಬನ್ನಿಯೆಂದು ಕೂಗುತ್ತಿದ್ದಿತ್ತು.

ಟೀ. ಭಕ್ತಿಯುಕ್ತವಾದ ಜ್ಞಾನಶಕ್ತಿಯ ನಿಜಾಂತರಂಗದಲ್ಲಿ ಎಂಬುದೀಗ 'ಮಧುರವಾಣಿಯ ಉದರದಲ್ಲಿ' ಎಂಬ ಶಬ್ದಕ್ಕರ್ಥ. ಆ ನಿಜಾಂತರಂಗದಲ್ಲಿರ್ಪ ಸತ್‌ಪ್ರಣವಜ್ಞಾನವು ಉದಯವಾಗಿ ಶಿವೋಹಂ ಶಿವೋಹಂ ಎಂದು ಧ್ವನಿಗೈಯುತ್ತಿಹುದೆಂಬುದೀಗ 'ಒಂದು ನಿಜ ಕುಕ್ಕುಟ ಕೂಗುತ್ತಿದೆ' ಎಂಬ ಶಬ್ದಕ್ಕರ್ಥ. ಇಚ್ಛಾ ಜ್ಞಾನ ಕ್ರಿಯೆಯೆಂಬ ತ್ರಿಶಕ್ತಿಗಳಿಂದುದಯವಾದ ಹೊನ್ನು ಮಣ್ಣು ಹೆಣ್ಣೆಂಬ ತ್ರಿವಿಧಸ್ಥಲವ ಸ್ವೀಕರಿಸಿ ನಿನ್ನ ನಿಜವ ಕೊಟ್ಟು, ಮರೆದು ಮಾಯಾಪ್ರಪಂಚಿನಲ್ಲಿ ಮಗ್ನವಾಗಬೇಡೆಂದು ಎಚ್ಚರಿಸುತ್ತಿಹುದೆಂಬುದೀಗ 'ಮೂವರ ಮೊಲೆಯನುಂಡು ಮರೆದೊರಗಬೇಡ' ಎಂಬ ಶಬ್ದಕ್ಕರ್ಥ. ಆ ಶರಣನ ಅಂತರಂಗದಲ್ಲಿ ಶಿವಜ್ಞಾನ ಪ್ರಕಾಶವಾಗಲು,ಆ ಸತ್‌ಪ್ರಣವವು ಲಿಂಗದ ನಿಜವನೆಚ್ಚರಿಸಿಕೊಟ್ಟು ಶಿವೋಹಂಭಾವದಿಂ ಧ್ವನಿಗೈಯುತ್ತಿಹುದೆಂಬುದೀಗ 'ಬೆಳಗಾಯಿತ್ತು, ಅರ್ಕೇಶ್ವರಲಿಂಗವ ನೋಡುವ ಬನ್ನಿ ಎಂದು ಕೂಗುತ್ತಿದ್ದಿತ್ತೆ'ಂಬ ಶಬ್ದಕ್ಕರ್ಥ.

೯

ಭವಸಾಗರವೆಂಬ ಸಮುದ್ರದಲ್ಲಿ ಸಾಕಾರವೆಂಬ ಹಡಗು ಚೇತನವೆಂಬ ಅಶ್ವ ಕಟ್ಟಿ ಬರುತ್ತಿರಲಾಗಿ, ತ್ರಿವಿಧದ ಬಲುಗಿರಿಯ ಹಾಯ್ದು ಹಡಗೊಡೆಯಿತ್ತು. ಲಾಯದ ಅಶ್ವ ನೀರನೊಡಗೂಡಿತ್ತು. ಹಡಗಿನ ಸಿಟ್ಟಿ ಪರಪತಿಗಡಹಿಲ್ಲಾ ಎಂದು ಕುದುರೆಯನೊಡಗೂಡಿ ಅರ್ಕೇಶ್ವರಲಿಂಗವ ಕೇಳುವ ಬನ್ನಿ.

ಟೀ. ಭವಾಂಬುಧಿಯೆಂಬುದೀಗ 'ಭವಸಾಗರವೆಂಬ ಸಮುದ್ರದಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಸಾಗರ ವಿಷಯರಸಾಂಬುಧಿಯ ಮಧ್ಯದಲ್ಲಿ ಪಂಚಭೌತಿಕಸಂಬಂಧವಾದ ದೇಹವಿರುತ್ತಿಹುದೆಂಬುದೀಗ 'ಸಾಕಾರವೆಂಬ ಹಡಗು' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ಜೀವಾತ್ಮನೆಂಬ ಕುದುರೆ ಮಾಯಾಪಾಶದಿಂ ಬಿಗಿವಡೆದು ಭವಕ್ಕೆ ಬರುತ್ತಿಹನೆಂಬುದೀಗ 'ಚೇತನವೆಂಬ ಅಶ್ವ ಕಟ್ಟಿ ಬರುತ್ತಿರಲಾಗಿ' ಎಂಬ ಶಬ್ದಕ್ಕರ್ಥ. ಅಂತಪ್ಪಾತ್ಮಂಗೆ ಸುಜ್ಞಾನೋದಯವಾಗಿ ಗುರೂಪಾವಸ್ಥೆಯ ಮಾಡಲು, ಶ್ರೀಗುರು ಕಾರುಣ್ಯದಿಂದಂತರ್ಗತವಾಗಿರ್ಪ ಸಚ್ಚಿದಾನಂದಸ್ವರೂಪವಾದ ಗುರುಲಿಂಗ ಜಂಗಮವೇ ಪ್ರಭಾವಿಸಿ ಅಂಗತ್ರಯಂಗಳನವಗ್ರಹಿಸಿದಲ್ಲಿ, ದೇಹಭಾವ ನಷ್ಟವಾಯಿತ್ತೆಂಬುದೀಗ 'ತ್ರಿವಿಧದ ಬಲುಗಿರಿಯ ಹಾಯ್ದು ಹಡಗೊಡೆಯಿತ್ತೆಂಬ' ಶಬ್ದಕ್ಕರ್ಥ. ಆ ದೇಹಭಾವ ನಷ್ಟವಾದಲ್ಲಿ, ಅಂತರಂಗದಲ್ಲಿರ್ಪ ಜೀವಾತ್ಮನು ಪರಮಾನಂದಸ್ವರೂಪವಾದ ಸದ್ವಿವೇಕಜಲದಲ್ಲಿ ಸಮರಸವಾದನೆಂಬುದೀಗ 'ಲಾಯದ ಅಶ್ವ ನೀರನೊಡಗೂಡಿತ್ತೆ'ಂಬ ಶಬ್ದಕ್ಕರ್ಥ. ದೇಹಭಾವ ನಷ್ಟವಾಗಿ ಸರ್ವಾಂಗವು ಚಿದಂಗಸ್ವರೂಪವಾದ ಶರಣನು ಇದಿರಿಟ್ಟುಬಾಹ್ಯಕ್ರಿಯೆಗಳ ಮಾಡಿ ಫಲಪದಂಗಳ ಪಡೆಯಲಿಲ್ಲವೆಂಬುದೀಗ, 'ಹಡಗಿನ ಸಿಟ್ಟಿ ಪರಪತಿಗಡಹಿಲ್ಲಾ'ಎಂಬ ಶಬ್ದಕ್ಕರ್ಥ. ಆ ಭಿನ್ನಮುಕ್ತಿಯ ಕಾಮಿಸದೆ ಇರ್ಪ ಶರಣನು ತನ್ನಾತ್ಮಚೈತನ್ಯಸ್ವರೂಪವಾದ ಪ್ರಣವ ಮಧ್ಯದಲ್ಲಿ ಏಕಾರ್ಥವಾಗಿ ಲಿಂಗವ ಬೆಸಗೊಳ್ಳುತ್ತಿರ್ದನೆಂಬುದೀಗ 'ಕುದುರೆಯನೊಡಗೂಡಿ ಅರ್ಕೇಶ್ವರಲಿಂಗವ ಕೇಳುವ ಬನ್ನಿ' ಎಂಬ ಶಬ್ದಕ್ಕರ್ಥ.

೧೦

ಬೆಲ್ಲವ ಮೆಲುವಾತನ ಹಲ್ಲು ಕಹಿಯಾಗಿ, ಹಲ್ಲು ಕಲ್ಲಿಯೊಳಗಾಗಿ ಅಲ್ಲಿಯೆ ಅಡಗಿ ನೋಡುತ್ತದೆ. ಅದ ನಾವು ನೀವು ಅರಿವ ಬನ್ನಿ,—ಅರ್ಕೇಶ್ವರಲಿಂಗವ ಬಲ್ಲವರಹರೆ.

ಟೀ. ಅಖಂಡ ಪರಿಪೂರ್ಣಜ್ಞಾನವಪ್ಪ ಚಿದ್‌ಘನಲಿಂಗವೆಂಬುದೀಗ, 'ಬೆಲ್ಲವ' ಎಂಬ ಶಬ್ದಕ್ಕರ್ಥ. ಅಂತಪ್ಪ ಚಿದ್‌ಘನಲಿಂಗವ ಭಿನ್ನವಿಟ್ಟರ್ಚಿಸಿ, ಪೂಜಿಸಿ, ಫಲಪದಂಗಳ ಪಡೆದು ಭೋಗಿಸುತ್ತಿಹರು ದ್ವೈತಿಗಳೆಂಬುದೀಗ 'ಬೆಲ್ಲವ ಮೆಲುವಾತನ' ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವನ ಸಕಲಕರಣಂಗಳೆಲ್ಲವೂ ವಿಷಯಪ್ರಪಂಚಿನಲ್ಲಿ ಮಗ್ನವಾಗಿಹವೆಂಬುದೀಗ 'ಹಲ್ಲು ಕಹಿಯಾಗಿ' ಎಂಬ ಶಬ್ದಕ್ಕರ್ಥ. ಅಂತಪ್ಪ ವಿಷಯರೂಪವಾದ ಕರಣಂಗಳೆಲ್ಲ ಅಹಮ್ಮೆಂಬ ಅಹಂಕಾರಕ್ಕೀಡಾಗಿರುತ್ತಿಹವೆಂಬುದೀಗ, 'ಹಲ್ಲು ಕಲ್ಲಿನೊಳಗಾಗಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರದಲ್ಲಿ ಲಯವಾದ ಜೀವನು ಭಿನ್ನಜ್ಞಾನದಿಂ ಲಿಂಗವನೆರಡಿಟ್ಟು ನೋಡುತ್ತಿಹನೆಂಬುದೀಗ 'ಅಲ್ಲಿಯೆ ಅಡಗಿ ನೋಡುತ್ತದೆ' ಎಂಬ ಶಬ್ದಕ್ಕರ್ಥ. ಸುಜ್ಞಾನೋದಯವಾದ ಶರಣನು ಎರಡಿಟ್ಟಾಚರಿಸುವ ಭಿನ್ನಕ್ರಿಯಾಚಾರವ ನಷ್ಟವ ಮಾಡಿ, ಶ್ರೀಗುರುಕಾರುಣ್ಯದಿಂ ಸರ್ವಾಂಗ ಲಿಂಗಸಂಬಂಧವಾಗಿ ಜ್ಞಾನಕ್ರೀವಿಡಿದಾಚರಿಸುವ ಶರಣರು, ಮುಮುಕ್ಷುಗಳಾದ ಭಕ್ತಜನಂಗಳಿಗೆ ಅನ್ಯೋಪದೇಶವಾಗಿ ನಿರೂಪಿಸುತ್ತಿರ್ದರೆಂಬುದೀಗ 'ಅದ ನಾವು ನೀವು ಅರಿವ ಬನ್ನಿ ಅರ್ಕೇಶ್ವರಲಿಂಗವ ಬಲ್ಲವರಹರೆ' ಎಂಬ ಶಬ್ದಕ್ಕರ್ಥ.

೧೧

ಸತ್ತವನ ಮನೆಯಲ್ಲಿ ಹೊತ್ತವರೆಲ್ಲರು ಅಳುತ್ತಿರ್ದರು. ಮತ್ತೊಬ್ಬನ ಮದುವೆಗೆ ನಿಬ್ಬಣಕ್ಕೆ ಬಂದು, ಮದವಳಿಗನ ಕಾಣದೆ ಮನೆಮನೆಯ ಹೊಕ್ಕು ಸುತ್ತುತ್ತೈದಾರೆ! ಕೇಳುವ ಬನ್ನಿ ಅರ್ಕೇಶ್ವರ ಲಿಂಗವ.

ಟೀ. ಶಿವಜ್ಞಾನ ನಷ್ಟವಾಗಿರ್ಪ ಜೀವಂಗಾಶ್ರಯವಾದ ದೇಹವೆಂಬುದೀಗ 'ಸತ್ತವನ ಮನೆಯಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ಸಾಕಾರವಾದ ಇಷ್ಟಲಿಂಗವ ಭಿನ್ನವಿಟ್ಟು ಧರಿಸಿಕೊಂಡು ಭಿನ್ನಕ್ರೀವಿ

ಡಿದಾಚರಿಸಿ, ಭಿನ್ನಫಲಪದಭೋಗಂಗಳ ಪಡೆದು, ಸಂಸಾರದಲ್ಲಿ ದುಃಖಜೀವಿಗಳಾಗುತ್ತಿಹರು ದ್ವೈತಿಗಳು ಎಂಬುದೀಗ, 'ಹೊತ್ತವರೆಲ್ಲರು ಅಳುತ್ತಿರ್ದರೆ'ಂಬ ಶಬ್ದಕ್ಕರ್ಥ. 'ಮತ್ತೊಬ್ಬನೆ'ಂದೊಡೆ ಚೈತನ್ಯಸ್ವರೂಪನಾದ ಪ್ರಾಣಲಿಂಗವು. ಅಂತಪ್ಪ ಪ್ರಾಣಲಿಂಗದಲ್ಲಿ ಸಮರಸವನೆಯ್ದಬೇಕೆನುತ್ತಿಹರು ಅದ್ವೈತಿಗಳೆಂಬುದೀಗ, 'ಮತ್ತೊಬ್ಬನ ಮದುವೆಗೆ ನಿಬ್ಬಣಕ್ಕೆ ಬಂದು' ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅದ್ವೈತಜ್ಞಾನಕ್ಕೆ ಅಸಾಧ್ಯವಾಯಿತ್ತೆಂಬುದೀಗ 'ಮದುವಳಿಗನ ಕಾಣದೆ' ಎಂಬ ಶಬ್ದಕ್ಕರ್ಥ. ಅಂತಪ್ಪ ಅಸಾಧ್ಯವಾದ ಪರಬ್ರಹ್ಮವ ಷಡಾಧಾರ ಚಕ್ರದಲ್ಲಿ ಷಡುಸೋಪಾನವಿಟ್ಟರಸುತ್ತಿಹರೆಂಬುದೀಗ 'ಮನೆ ಮನೆಯ ಹೊಕ್ಕು ಸುತ್ತುತ್ತೈದಾರೆ' ಎಂಬ ಶಬ್ದಕ್ಕರ್ಥ. ಇಂತಪ್ಪ ದ್ವೈತಕ್ರೀ ಅದ್ವೈತಜ್ಞಾನವ ಶಿವಾದ್ವೈತಭಕ್ತಿಯಿಂ ಕೆಡೆಮೆಟ್ಟಿ ಶ್ರೀಗುರುಕರುಣದಿಂ ಸರ್ವಾಂಗ ಲಿಂಗಸಂಬಂಧವಾಗಿ ಶಿವತತ್ವದಲೆಯ್ದುವ ಮೋಕ್ಷಮಾರ್ಗವ ಜ್ಞಾನಗುರುಮುಖದಿಂ ಬೆಸಗೊಳುತ್ತಿರ್ದನೆಂಬುದೀಗ, 'ಕೇಳುವ ಬನ್ನಿ ಅರ್ಕೇಶ್ವರ ಲಿಂಗವ' ಎಂಬ ಶಬ್ದಕ್ಕರ್ಥ.

೧೨

ಪಂಜರದ ಕೋಳಿ ಮಾರ್ಜಾಲನ ಕೊಂದು ತಿಂದು, ಬಂಧುಗಳ ಹೊಂದದೆ, ತಾನೊಂದೆ ಹೊಂದಿತ್ತು ಪಂಜರದ ಹೊರಗೆ,–ಅರ್ಕೇಶ್ವರ ಲಿಂಗವನರಿದ ಕಾರಣ.

ಟೀ. ಪಂಚಭೂತಾಶ್ರಯುವಾದ ದೇಹದಲ್ಲಿರ್ಪ ಸತ್‌ಪ್ರಣವವೆಂಬುದೀಗ 'ಪಂಜರದ ಕೋಳಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಸತ್‌ಪ್ರಣವಜ್ಞಾನೋದಯವಾಗಿ ಮನೋಮಾರ್ಜಾಲನನವಗ್ರಹಿಸಿತ್ತೆಂಬುದೀಗ 'ಮಾರ್ಜಾಲನ ಕೊಂದು ತಿಂದು' ಎಂಬ ಶಬ್ದಕ್ಕರ್ಥ. ಆ ಮನವನವಗ್ರಹಿಸಿದ ಸತ್‌ಪ್ರಣವ ಸಕಲಕರಣಂಗಳ ವ್ಯವಹಾರವ ಹೊದ್ದದೆಂಬುದೀಗ 'ಬಂಧುಗಳ ಹೊಂದದೆ' ಎಂಬ ಶಬ್ದಕ್ಕರ್ಥ. ಆ ಸತ್‌ಪ್ರಣವ ಜ್ಞಾನ ಲಿಂಗದಲ್ಲಿ ನಿಷ್ಪತ್ತಿಯಾದಲ್ಲಿ, ಶರಣನ ಸರ್ವಾಂಗವು ಮಹಾಘನ ಲಿಂಗದಲ್ಲಿ ಸಮರಸಭಾವದಿಂದಡಗಿತ್ತೆಂಬುದೀಗ 'ಪಂಜರದ ಹೊರಗೆ ಅರ್ಕೇಶ್ವರಲಿಂಗವನರಿದ ಕಾರಣ' ಎಂಬ ಶಬ್ದಕ್ಕರ್ಥ.

೧೩

ಮೂರು ಕೋಲು ಬ್ರಹ್ಮಂಗೆ ಅಳಿದು ಕೊಟ್ಟೆ. ನಾಲ್ಕು ಕೋಲು ವಿಷ್ಣುವಿಂಗೆ ಅಳಿದು ಕೊಟ್ಟೆ. ಐದು ಕೋಲು ರುದ್ರಂಗೆ ಅಳಿದು ಕೊಟ್ಟೆ. ಆರು ಕೋಲು ಈಶ್ವರಂಗೆ ಅಳಿದು ಕೊಟ್ಟೆ. ಒಂದು ಕೋಲು ಸದಾ ಶಿವಂಗೆ ಅಳಿದು ಕೊಟ್ಟೆ. ಇಂತೀ ಐವರು ಕೋಲಿನ ಒಳಹೊರಗಿನಲ್ಲಿ ಅಳಲುತ್ತ ಬಳಲುತ್ತ ಒಳಗಾದರು. ಇಂತೀ ಒಳಹೊರಗೆ ಶೋಧಿಸಿಕೊಂಡು ಅಳಿವುಳಿವಿನ ವಿವರವನರಿಯಬೇಕು ದಾರೇಶ್ವರಲಿಂಗವನರಿವುದಕ್ಕೆ.

ಟೀ. ಜ್ಞಾನಕಲಾತ್ಮಂಗೆ ದೇಹ ಸಂಬಂಧವಾಗಲು, ಆ ದೇಹದ ವಿವರವೆಂತೆಂದೊಡೆ: ಗುಣತ್ರಯಯುಕ್ತವಾದ ಸ್ಥೂಲತನು ಬ್ರಹ್ಮನ ಸೃಷ್ಟಿ ಯೊಳಗಾಗಿಹುದೆಂಬುದೀಗ 'ಮೂರು ಕೋಲು ಬ್ರಹ್ಮಂಗೆ ಅಳಿದು ಕೊಟ್ಟೆ' ನೆಂಬ ಶಬ್ದಕ್ಕರ್ಥ. ಚತುಃಕರಣಯುಕ್ತವಾದ ಸೂಕ್ಷ್ಮತನು ವಿಷ್ಣುವಿನ ಪ್ರಾರಬ್ಧ ಭೋಕ್ತೃಕರ್ಮವೆಂಬ ಸ್ಥಿತಿಗೊಳಗಾಗಿರ್ಪುದು ಎಂಬುದೀಗ 'ನಾಲ್ಕು ಕೋಲು ವಿಷ್ಣುವಿಂಗೆ ಅಳಿದು ಕೊಟ್ಟೆ'ನೆಂಬ ಶಬ್ದಕ್ಕರ್ಥ. ಪಂಚ ಕರಣಯುಕ್ತವಾದ ಕಾರಣತನು ರುದ್ರನ ಲಯೋಧರ್ಮವೆಂಬ ಹೊಡೆಗಿಚ್ಚಿ ನೊಳಗಾಗಿಹುದೆಂಬುದೀಗ 'ಐದು ಕೋಲು ರುದ್ರಂಗೆ ಅಳಿದು ಕೊಟ್ಟೆ'ನೆಂಬ ಶಬ್ದಕ್ಕರ್ಥ. ಷಡ್ವಿಧಾವಸ್ಥೆಯನುಳ್ಳ ಜೀವರು ಆಹಾರ ವ್ಯವಹಾರ ವಿಷಯ ಜ್ಞಾನಯುಕ್ತರಾಗಿ, ಈಶ್ವರನ ತಿರೋಧಾನಶಕ್ತಿಯಲ್ಲಿ ಶಿಕ್ಷೆಗೊಳಗಾಗಿರ್ಪ ರೆಂಬುದೀಗ 'ಆರು ಕೋಲು ಈಶ್ವರಂಗೆ ಅಳಿದು ಕೊಟ್ಟೆ'ನೆಂಬ ಶಬ್ದಕ್ಕರ್ಥ. ಅಜ್ಞಾನ ಅಹಂಕಾರಯುಕ್ತವಾಗಿರ್ಪ ಜೀವರು ಸದಾಶಿವನ ಅನುಗ್ರಹ ಶಕ್ತಿಯೆಂಬ ಶಿಕ್ಷೆಗೊಳಗಾಗಿರ್ಪರೆಂಬುದೀಗ 'ಒಂದು ಕೋಲು ಸದಾಶಿವಂಗೆ ಅಳಿದು ಕೊಟ್ಟೆನೆ'ಂಬ ಶಬ್ದಕ್ಕರ್ಥ. ಇಂತು ಐದು ತತ್ವಂಗಳು ಬ್ರಹ್ಮಾಂಡ ದಲ್ಲಿಯೆ ಹುಟ್ಟಿ, ಆ ಬ್ರಹ್ಮಾಂಡದ ವ್ಯಾಪಾರ ಬಲ್ಲವರಾಗಿ ಅಲ್ಲಿಯೇ ಸುಖ ದುಃಖಗಳನ್ನು ಅನುಭವಿಸುತ್ತ ಅಳಿವುಳಿವಿಗೊಳಗಾದರೆಂಬುದೀಗ 'ಇಂತೀ ಐವರು ಕೋಲಿನ ಒಳಹೊರಗಿನಲ್ಲಿ ಅಳಲುತ್ತ ಬಳಲುತ್ತ ಒಳಗಾದರು' ಎಂಬ ಶಬ್ದಕ್ಕರ್ಥ. ಇಂತಿವರ ಅಳಿವುಳಿವ ಹೊದ್ದದೆ, ಅಭಿನ್ನಜ್ಞಾನಿ ಯಾಗಿರ್ದ ಶರಣನು ಜನನಮರಣಂಗಳನಳಿದು ಲಿಂಗವಾಗಿರ್ಪನೆಂಬು

ದೀಗ 'ಇಂತೀ ಒಳಹೊರಗೆ ಶೋಧಿಸಿಕೊಂಡು ಅಳಿವುಳಿವಿನ ವಿವರವನರಿಯಬೇಕು ದಾರೇಶ್ವರ ಲಿಂಗವನರಿವುದಕ್ಕೆ' ಎಂಬ ಶಬ್ದಕ್ಕರ್ಥ.

೧೪

ಉರಿಯ ಗಿರಿಯಲ್ಲಿ ಕರ್ಪುರದ ತರು ಹುಟ್ಟಿ, ಉರಿ ನಷ್ಟವಾಗಿ ಆ ತರುವಿನಲ್ಲಿ ಬೆಂಕಿಯ ಹಣ್ಣು ಹುಟ್ಟಿ, ಅಪ್ಪುವಿನ ಪಕ್ಷಿ ಬಂದು ಮೆಟ್ಟಿ ಕುಡುಕಲಾಗಿ, ಹಣ್ಣಿನ ತೊಟ್ಟಿನೊಳಡಗಿತ್ತು ಹಕ್ಕಿ. ಮಧುಕೇಶ್ವರ ಲಿಂಗ ಎತ್ತ ಹೋದನೆಂದರಿಯೆ!

ಟೀ. ಜ್ಞಾನಾಗ್ನಿಸ್ವರೂಪವಾದ ಚಿದಹಂಕಾರದಲ್ಲಿ ಎಂಬುದೀಗ 'ಉರಿಯ ಗಿರಿಯಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಚಿದಹಂಕಾರದಗ್ರದಲ್ಲಿ ಸದ್ವಾಸನಾಸ್ವರೂಪವಾದ ಸದ್ವಿವೇಕವೃಕ್ಷ ಹುಟ್ಟಿತ್ತೆಂಬುದೀಗ 'ಕರ್ಪುರದ ತರುಹುಟ್ಟಿ' ಎಂಬ ಶಬ್ದಕ್ಕರ್ಥ. ಆ ಜ್ಞಾನಾಗ್ನಿಪ್ರಕಾಶವು ತನ್ನಲ್ಲಡಗಿತ್ತೆಂಬುದೀಗ 'ಉರಿ ನಷ್ಟವಾಗಿ' ಎಂಬ ಶಬ್ದಕ್ಕರ್ಥ. ಆ ಸದ್ವಿವೇಕವೃಕ್ಷದಲ್ಲಿ ಚಿತ್‌ಪ್ರಕಾಶವಾಗಿ ತೊಳಗಿ ಬೆಳಗುತ್ತಿರ್ದ ಚಿದಗ್ನಿಸ್ವರೂಪವಾದ ಮುಕ್ತಾಫಳ ಗುರುಮುಖದಿಂ ಪ್ರತ್ಯಕ್ಷವಾಯಿತ್ತೆಂಬುದೀಗ 'ಆ ತರುವಿನಲ್ಲಿ ಬೆಂಕಿಯ ಹಣ್ಣು ಹುಟ್ಟಿ' ಎಂಬ ಶಬ್ದಕ್ಕರ್ಥ. ತನ್ನ ಸರ್ವಾಂಗದಲ್ಲಿ ಪರಮಶಾಂತಿಯ ಜಲವನೊಳಕೊಂಡ ಚಿತ್‌ಸ್ವರೂಪನಾದ ಶರಣ ಕ್ರಿಯೆ ಜ್ಞಾನ ಸಂಬಂಧವಾಗಿ, ಇಷ್ಟ ಪ್ರಾಣಲಿಂಗದಲ್ಲಿ ಆಚರಿಸುತ್ತಿರ್ದನೆಂಬುದೀಗ 'ಅಪ್ಪುವಿನ ಪಕ್ಷಿ ಬಂದು ಮೆಟ್ಟಿ' ಎಂಬ ಶಬ್ದಕ್ಕರ್ಥ. ಆ ಇಷ್ಟ ಪ್ರಾಣಲಿಂಗಕ್ಕೆ ರೂಪುರುಚಿಗಳನರ್ಪಿಸಿ, ಲಿಂಗಸುಖಪ್ರಸನ್ನಪ್ರಸಾದವನು ಸ್ವೀಕರಿಸುತ್ತಿರ್ದನೆಂಬುದೀಗ 'ಕುಡುಕಲಾಗಿ' ಎಂಬ ಶಬ್ದಕ್ಕರ್ಥ. ಹಣ್ಣೆಂದೊಡೆ ಮುಕ್ತಿಫಳ, ತೊಟ್ಟೆಂದೊಡೆ ಮೂಲಜ್ಞಾನ ಚಿತ್ತು. ಆ ಚಿತ್‌ಸ್ವರೂಪನಾದ ಶರಣನು ಆ ಮೂಲಜ್ಞಾನ ಚಿತ್ತುವಿನಲ್ಲಿ ಸಮರಸವಾದನೆಂಬುದೀಗ ಹಣ್ಣಿನ ತೊಟ್ಟಿನೊಳಗಡಗಿತ್ತು ಹಕ್ಕಿ. ಮಧುಕೇಶ್ವರಲಿಂಗ ಎತ್ತಹೋದನೆಂದರಿಯೆ' ಎಂಬ ಶಬ್ದಕ್ಕರ್ಥ.

೧೫

ಗಿರಿಯ ಗುಹೆಯಲ್ಲಿ ಒಂದರಿಬಿರುದಿನ ಹುಲಿ, ಹುಲ್ಲೆಯ ಭಯಕ್ಕಾಗಿ ಎಲ್ಲಿಯೂ ಹೊರಡಲಮ್ಮದೆ ಅಲ್ಲಿಯೆ ಅದೆ. ಅದ ಮೆಲ್ಲನೆ

ನೋಡಿ ಬಿಲ್ಲಂಬಿನಲ್ಲಿ ಎಸೆಯೆ, ಹುಲಿ ಹಾರಿ ಹುಲ್ಲೆಯಾಯಿತ್ತು. ಆ ಹುಲ್ಲೆ ಬಲೆಯೊಳಗಲ್ಲ, ಬಾಣದೊಳಗಲ್ಲ. ಎಲ್ಲಿಯೂ ಸಿಕ್ಕದು. ಇದ ಬಲ್ಲವರಾರು? ಗೂಡಿನೊಡೆಯ ಗುಮ್ಮಟನಾಥ ಆಗಮೇಶ್ವರಲಿಂಗ ಪರಿಪೂರ್ಣಭರಿತನು.

ಟೀ. ಅಹಂಕಾರಯುಕ್ತವಾದ ದೇಹಮಧ್ಯದಲ್ಲಿ ಎಂಬುದೀಗ 'ಗಿರಿಯ ಗುಹೆಯಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದ ಮಧ್ಯದಲ್ಲಿ ಆರಿಗು ಅಸಾಧ್ಯವಾದ, ಅನಂತ ಬ್ರಹ್ಮಾಂಡಂಗಳನವಗ್ರಹಿಸಿಕೊಂಡಿರ್ಪ ಪರಶಿವತತ್ವವು ಅಂತರ್ಗತವಾಗಿಹುದೆಂಬುದೀಗ 'ಒಂದರಿಬಿರುದಿನ ಹುಲಿ' ಯೆಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವು ಮಾಯಾಸಂಬಂಧಿಗಳಾದ ಜೀವಂಗೆ ಕಾಣಿಸಿಕೊಳ್ಳದೆ, ಅಲ್ಲಿಯೆ ಗೋಪ್ಯವಾಗಿಹುದೆಂಬುದೀಗ 'ಹುಲ್ಲೆಯ ಭಯಕ್ಕಾಗಿ ಎಲ್ಲಿಯೂ ಹೊರಡಲಮ್ಮದೆ ಅಲ್ಲಿಯೆ ಅದೆ'ಯೆಂಬ ಶಬ್ದಕ್ಕರ್ಥ. ಇಂತಪ್ಪ ಮಾಯಾಸಂಬಂಧವಾದ ದೇಹದ ಮಧ್ಯದಲ್ಲಿ ಸುಜ್ಞಾನೋದಯವಾದ ಶರಣನು, ಸದ್ಭಾವವೆಂಬ ಬಿಲ್ಲಿಗೆ ಸುಮನವೆಂಬ ನಾರಿಯ ಹೂಡಿ, ಸುಜ್ಞಾನವೆಂಬ ಬಾಣದಿಂ ಪ್ರಯೋಗಿಸಲು, ಆ ಪರಶಿವತತ್ವವು ಶ್ರೀಗುರುಮುಖದಿಂ ಪ್ರಭಾವಿಸಿ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು, ಮಾಯೆಯುಳಿದು ಚಿಚ್ಛಕ್ತಿಸ್ವರೂಪವಾಯಿತ್ತೆಂಬುದೀಗ 'ಅದ ಮೆಲ್ಲನೆ ನೋಡಿ ಬಿಲ್ಲಂಬಿನಲ್ಲಿ ಎಸೆಯೆ, ಹುಲಿ ಹಾರಿ ಹುಲ್ಲೆಯಾಯಿತ್ತೆ'ಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಸ್ವರೂಪವಾದ ಜ್ಞಾನಕಲಾತ್ಮನು ಮಾಯಾಪಾಶ ಭಿನ್ನಜ್ಞಾನವ ಹೊದ್ದನೆಂಬುದೀಗ 'ಆ ಹುಲ್ಲೆ ಬಲೆಯೊಳಗಲ್ಲ, ಬಾಣದೊಳಗಲ್ಲ'ವೆಂಬ ಶಬ್ದಕ್ಕರ್ಥ. ಚಿತ್‌ಸ್ವರೂಪನಾದ ಶರಣನು ಸಕಲ ಪ್ರಪಂಚ ಹೊದ್ದದೆ ವಿಲಕ್ಷಣವಾಗಿಹನೆಂಬುದೀಗ 'ಎಲ್ಲಿಯೂ ಸಿಕ್ಕದೆ'ಂಬ ಶಬ್ದಕ್ಕರ್ಥ. ಈ ಲಿಂಗಾಂಗ ಸಮರಸದ ಸುಖವ ದ್ವೈತಾದ್ವೈತಿಗಳರಿಯರೆಂಬುದೀಗ 'ಇದ ಬಲ್ಲವರಾರು? ಗೂಡಿನೊಡೆಯ ಗುಮ್ಮಟನಾಥ ಆಗಮೇಶ್ವರಲಿಂಗ ಪರಿಪೂರ್ಣಭರಿತನು' ಎಂಬ ಶಬ್ದಕ್ಕರ್ಥ.

೧೬

ವೇದ ಕಲ್ಲಿಯಾಗಿ, ಶಾಸ್ತ್ರ ಮಣಿಯಾಗಿ, ಪುರಾಣ ತೊಡಕಿನ ಬಂಧದ ನೂಲಾಗಿ, ಶಾಸ್ತ್ರದ ಪಸರದಲ್ಲಿ ಆಯತವ ಮಾಡಿ, ಗುರುವೆಂಬ

ತಡಿಯ ಮೆಟ್ಟಿ, ನಾಭಿಯ ಮಧ್ಯವೆಂಬ ಲಿಂಗದ ಜಲವ ಹೊಕ್ಕು, ಮಹಾಸ್ಥಳಕುಳವಿವರಂಗಳೆಂಬ ಮಡುವಿಂಗೆ ಇಡಲಾಗಿ, ಅಡಗಿದ್ದ ಮತ್ಸ್ಯ ಎದ್ದಿತ್ತು. ಬಲೆಯ ಹೊಲಬ ಕಂಡು ಅದು ಸ್ಥೂಲಕ್ಕೆ ಸೂಕ್ಷ್ಮವಾಗಿ, ಸೂಕ್ಷ್ಮಕ್ಕೆ ಸ್ಥೂಲವಾಗಿ, ಆ ಕಲ್ಲಿಯ ದ್ವಾರದಲ್ಲಿಯೇ ನುಸುಳುತ್ತ, ಕಲ್ಲಿಗೆ ಹೊರಗಾಗುತ್ತ, ಮತ್ತಾ ಕಲ್ಲಿಗೆ ಒಳಗಾಗುತ್ತ, ಮತ್ತಾಸ್ಥಳಕುಳಂಗಳಲ್ಲಿ ಕೂಡುತ್ತ, ಸ್ಥಲಂಗಳನರಿದು ಹೊರಗಾಗುತ್ತ ಭಾವಜ್ಞನಾಗಿ ಭಾವರಹಿತನಾದೆಯಲ್ಲಾ, ಮಾವನ ಮಗಳಿಗೆ ಅಣ್ಣನಾದೆಯಲ್ಲಾ ಚೆನ್ನಕದಂಬಲಿಂಗಾ!

ಟೀ. ನಾಲ್ಕು ವೇದಂಗಳಿಂದ ಅರಿದ ಅರಿವೇ ಕಲ್ಲಿಯಾಗಿಹುದೆಂಬುದೀಗ 'ವೇದ ಕಲ್ಲಿಯಾಗಿ' ಎಂಬ ಶಬ್ದಕ್ಕರ್ಥ. ಹದಿನಾರು ಧರ್ಮಶಾಸ್ತ್ರಂಗಳಿಂದ ಅರಿದ ಅರಿವೇ ಚಿನ್ಮಣಿಯಾಗಿಹುದು ಎಂಬುದೀಗ 'ಶಾಸ್ತ್ರ ಮಣಿಯಾಗಿ' ಎಂಬ ಶಬ್ದಕ್ಕರ್ಥ. ಅಷ್ಟಾದಶಪುರಾಣಂಗಳಿಂದ ಅರಿದ ಅರಿವೇ ಆ ಮಣಿಗಳ ಸುತ್ತುವದಕ್ಕೆ ಸ್ವಾನುಭಾವಸೂತ್ರವಾಗಿಹುದೆಂಬುದೀಗ 'ಪುರಾಣ ತೊಡಕಿನ ಬಂಧದ ನೂಲಾಗಿ' ಎಂಬ ಶಬ್ದಕ್ಕರ್ಥ. ಸಕಲ ಶಾಸ್ತ್ರಂಗಳ ವಿವೇಕಮುಖದಿಂದ ಪರಬ್ರಹ್ಮದ ನಿಜಸ್ವರೂಪವನರಿದಲ್ಲಿ ಎಂಬುದೀಗ 'ಶಾಸ್ತ್ರದ ಪಸರದಲ್ಲಿ' ಎಂಬ ಶಬ್ದಕ್ಕರ್ಥ. ಇಂತಿವೆಲ್ಲವನು ತನ್ನ ಸದ್ಭಾವದಲ್ಲಿ ಅಳವಡಿಸಿದನು ಎಂಬುದೀಗ 'ಆಯತವ ಮಾಡಿ' ಎಂಬ ಶಬ್ದಕ್ಕರ್ಥ. ಸ್ವಾಧಿಷ್ಠಾನಚಕ್ರದಲ್ಲಿ ಸ್ವಸ್ಥಿರವಾಗಿ ನಿಂದ ಶರಣನೆಂಬುದೀಗ 'ಗುರುವೆಂಬ ತಡಿಯ ಮೆಟ್ಟಿ' ಎಂಬ ಶಬ್ದಕ್ಕರ್ಥ. ದಶದಳ ಕಮಲದಲ್ಲಿರ್ಪ ಸದ್ವಿವೇಕಜಲಸ್ವರೂಪವಾದ ಶಿವಲಿಂಗದಲ್ಲಿ ತನ್ನ ಅರಿವ ಸಮರಸವ ಮಾಡಿದನೆಂಬುದೀಗ 'ನಾಭಿ ಮಧ್ಯವೆಂಬ ಲಿಂಗದ ಜಲವ ಹೊಕ್ಕು' ಎಂಬ ಶಬ್ದಕ್ಕರ್ಥ. ಅಂಗಸ್ಥಲ ನಾಲ್ವತ್ತುನಾಲ್ಕು, ಲಿಂಗಸ್ಥಲ ಐವತ್ತೇಳು. ಅಂತು ಉಭಯ ನೂರೊಂದು ಸ್ಥಲವಿಡಿದು ಆಚರಿಸುತ್ತಿರ್ದ ಸಮರಸಭಾವದಲ್ಲಿ ಎಂಬುದೀಗ 'ಮಹಾಸ್ಥಲ ಕುಳ ವಿವರಂಗಳ ಮಡುವಿಗೆ ಇಡಲಾಗಿ' ಎಂಬ ಶಬ್ದಕ್ಕರ್ಥ. ನಿಜಾಂತರಂಗದಲ್ಲಿ ಪರಿಪೂರ್ಣವಾದ ಸದ್ವಿವೇಕಜಲದಲಡಗಿರ್ಪ ಚಿತ್‌ಪ್ರಭಾಲಿಂಗವೆ ಶರಣನ ಸುಜ್ಞಾನಕ್ಕೆ ಗೋಚರಿಸಿತ್ತೆಂಬುದೀಗ 'ಅಡಗಿದ್ದ ಮತ್ಸ್ಯ ಎದ್ದಿತ್ತು' ಎಂಬ ಶಬ್ದಕ್ಕರ್ಥ. ಆ ಚಿದ್‌ಘನಲಿಂಗವು ಶರಣನ ಶಿವಾದ್ವೈತಭಕ್ತಿಗೆ ಪ್ರತ್ಯಕ್ಷವಾಯಿತ್ತೆಂಬುದೀಗ. 'ಬಲೆಯ

ಹೊಲಬ ಕಂಡು' ಎಂಬ ಶಬ್ದಕ್ಕರ್ಥ. ಕ್ರೀಯಿಂದ ಭಿನ್ನವಿಟ್ಟು ಸಾಧಿಸಿಹೆನೆಂಬವರಿಗೆ ಕಾಣಿಸಿಕೊಳ್ಳದೆ ಸೂಕ್ಷ್ಮವಾಗಿಹುದೆಂಬುದೀಗ 'ಅದು ಸ್ಥೂಲಕ್ಕೆ ಸೂಕ್ಷ್ಮವಾಗಿ' ಎಂಬ ಶಬ್ದಕ್ಕರ್ಥ. ಸೂಕ್ಷ್ಮವಾದ ಪರಬ್ರಹ್ಮವು ಶರಣನ ಸಮ್ಯಗ್‌ಜ್ಞಾನಕ್ಕೆ ಶ್ರೀಗುರುಕಾರುಣ್ಯದಿಂ ಪ್ರತ್ಯಕ್ಷವಾಗಿ ಸಾಕಾರವಾದ ಇಷ್ಟಲಿಂಗವಾಗಿ ತೋರಿತ್ತೆಂಬುದೀಗ 'ಸೂಕ್ಷ್ಮಕ್ಕೆ ಸ್ಥೂಲವಾಗಿ' ಎಂಬ ಶಬ್ದಕ್ಕರ್ಥ. 'ಕಲ್ಲಿ' ಎಂದೊಡೆ ಶರಣನ ಶಿವಾದ್ವೈತಭಕ್ತಿ. 'ದ್ವಾರ'ವೆಂದೊಡೆ ಉನ್ಮನಿಸ್ವರೂಪವಾದ ಸದ್ವಿವೇಕದ್ವಾರ. ಆ ಎರಡರಲ್ಲಿ ಸಂಚರಿಸುತ್ತಿಹುದು ಚಿದ್‌ಘನಲಿಂಗವೆಂಬುದೀಗ 'ಆ ಕಲ್ಲಿಯ ದ್ವಾರದಲ್ಲಿಯೆ ನುಸುಳುತ್ತ' ಎಂಬ ಶಬ್ದಕ್ಕರ್ಥ. ಎರಡಿಟ್ಟು ಮಾಡುವ ಭಿನ್ನಭಕ್ತಿಗೆ ಸಿಕ್ಕದು ಆ ಚಿದ್‌ಘನಲಿಂಗವೆಂಬುದೀಗ 'ಕಲ್ಲಿಗೆ ಹೊರಗಾಗುತ್ತ' ಎಂಬ ಶಬ್ದಕ್ಕರ್ಥ. ಶರಣನ ಶಿವಾದ್ವೈತಭಕ್ತಿಯಲ್ಲಿ ಸಮರಸವಾಗಿಹುದು ಆ ಚಿದ್‌ಘನಲಿಂಗವೆಂಬುದೀಗ 'ಮತ್ತೆ ಕಲ್ಲಿಗೊಳಗಾಗುತ್ತ' ಎಂಬ ಶಬ್ದಕ್ಕರ್ಥ. ಸರ್ವಾಚಾರ ಸಂಪತ್ತು ಮುಖ್ಯವಾಗಿರ್ದ ಸ್ಥಲ ಕುಳಾದಿಗಳಲ್ಲಿ ಏಕವಾಗಿಹುದು ಆ ಚಿದ್‌ಘನಲಿಂಗವೆಂಬುದೀಗ 'ಮತ್ತು ಸ್ಥಳ ಕುಳಂಗಳಲ್ಲಿ ಕೂಡುತ್ತಾ' ಎಂಬ ಶಬ್ದಕ್ಕರ್ಥ. ಆ ಸ್ಥಲಗಳನರಿದ ವಸ್ತು ಸಕಲಪ್ರಪಂಚಿಗೆ ವಿಲಕ್ಷಣವಾಗಿ ಶರಣನ ನಿರ್ಮಲಭಾವದಲ್ಲಿ ಅರಿವುಸ್ವರೂಪವಾಗಿ ಭಾವವಿರಹಿತವಾದ ಮಹಾಘನ ಲಿಂಗವು ಜ್ಞಾನಶಕ್ತಿಗೆ ಹಿರಿಯನಾಗಿಹನೆಂಬುದೀಗ 'ಸ್ಥಲಂಗಳನರಿದು ಹೊರಗಾಗುತ್ತ ಭಾವಮಗ್ನನಾಗಿ ಭಾವವಿರಹಿತನಾದೆಯಲ್ಲ, ಮಾವನ ಮಗಳಿಗೆ ಅಣ್ಣನಾದೆಯಲ್ಲ, ಚೆನ್ನಕದಂಬಲಿಂಗಾ' ಎಂಬ ಶಬ್ದಕ್ಕರ್ಥ.

೧೭

ಅಂಗವೆಂಬ ಮೊರದಲ್ಲಿ ವಿಕಾರವೆಂಬ ಕೋಣನನೇರಿ ತಾಯಿ ಬಂದಳಯ್ಯಾ. ಮೂರು ಮುಖವಾಗಿ, ಮೂರು ಮುಖದವ್ವೆಯ ಬಾಗಿಲಲ್ಲಿ ಬಾಧೆಪಡುವವರೆಲ್ಲರು ಹೋದರು ಹೊಲಬುದಪ್ಪಿ,–ಕಾಲಾಂತಕ ಭೀಮೇಶ್ವರಲಿಂಗವನರಿಯದೆ.

ಟೀ. ಪಂಚಭೂತಾಶ್ರಯವಾದ ದೇಹವೆಂಬುದೀಗ, 'ಅಂಗವೆಂಬ ಮೊರದಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹದಲ್ಲಿ ದೇಹಿಯಾಗಿರ್ದಾ

ತ್ಮನು ಕಾಮವಿಕಾರದಿಂದ ಅಹಂಕಾರಯುಕ್ತನಾಗಿರ್ದನೆಂಬುದೀಗ 'ವಿಕಾರವೆಂಬ ಕೋಣನೆ'ಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರದಗ್ರದಲ್ಲಿ ಆ ಜೀವನಿಗೆ ಮಾತೃಸ್ಥಾನವಾಗಿರ್ದ ಮಾಯಾಶಕ್ತಿ ಇರುತ್ತಿಹಳೆಂಬುದೀಗ 'ಕೋಣನನೇರಿ ತಾಯಿ ಬಂದಳಯ್ಯಾ' ಎಂಬ ಶಬ್ದಕ್ಕರ್ಥ. ಅಂತಪ್ಪ ಮಾಯಾಶಕ್ತಿಗೆ ಹೊನ್ನು ಹೆಣ್ಣು ಮಣ್ಣು ಮೂರು ಮುಖವಾಗಿಹವೆಂಬುದೀಗ 'ಮೂರು ಮುಖವಾಗಿ' ಎಂಬ ಶಬ್ದಕ್ಕರ್ಥ. ಅಂತು ಮಲತ್ರಯ ಮೂರು ಮುಖವಾಗಿಯುಳ್ಳ ಮಾಯಾಶಕ್ತಿಗೆ ಇಂದ್ರಿಯಂಗಳೆ ಬಾಗಿಲಾದ ಕಾರಣ ಆ ಇಂದ್ರಿಯಭೋಗಕ್ಕೆ ಸಿಲ್ಕಿದ ಜೀವರು, ಕಾಲಕಾಮಾದಿಗಳ ಬಾಧೆಯಿಂ ದುಃಖಬಡುತ್ತಿಹರೆಂಬುದೀಗ 'ಮೂರು ಮುಖದವ್ವೆಯ ಬಾಗಿಲಲ್ಲಿ ಬಾಧೆಬಡುವವರೆಲ್ಲರು' ಎಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯಸುಖವನನುಭವಿಸಿದಾತ್ಮರು ಶಿವತತ್ವಕ್ಕೆ ಭಿನ್ನವಾಗಿ ಹೋದರೆಂಬುದೀಗ, 'ಹೋದರು ಹೊಲಬುದಪ್ಪಿ ಕಾಲಾಂತಕ ಭೀಮೇಶ್ವರಲಿಂಗವನರಿಯದೆ' ಎಂಬ ಶಬ್ದಕ್ಕರ್ಥ.

೧೮

ಮಹಾಮನೆಯ ಮಂಟಪದಲ್ಲಿ ನಾಲ್ಕು ನಡುವಣ ಕಂಭದ ನಡುವಣ ಕಂಭದಲ್ಲಿ ಒಂದೊರಲೆ ಮನೆಯ ಮಾಡಿತ್ತು. ಅದಕ್ಕೆ ಎಂಟು ಕಂಬ, ಒಂಬತ್ತು ಬಾಗಿಲು, ಹತ್ತು ಕದ. ಮಿಗಿಲೊಂದ ಮುಚ್ಚುವದಕ್ಕೆ ಬಾಗಿಲಿಲ್ಲ. ತುಂಬಿಯಲ್ಲಿ ಹಾರಿತ್ತು; ಆ ಆತ್ಮನ ನೆಲೆಯನರಿ ಪುಣ್ಯಾರಣ್ಯ ದಹನ ಭೀಮೇಶ್ವರ ಲಿಂಗ ನಿರಂಗಸಂಗ.

ಟೀ. ಸಕಲ ತತ್ವಂಗಳಿಗಾಶ್ರಯವಾದ ಚಿದಾಲಯದಲ್ಲಿ ಚಿದ್ಘನಲಿಂಗವಿರ್ಪುದೆಂಬುದೀಗ 'ಮಹಾಮನೆಯ ಮಂಟಪದಲ್ಲಿ' ಎಂಬ ಶಬ್ದಕ್ಕರ್ಥ. ನಾದ ಬಿಂದು ಕಳೆ ಕಲಾನ್ವಿತ ನಾಲ್ಕರ ಮಧ್ಯದಲ್ಲಿರ್ಪ ತುರಿಯಾವಸ್ಥೆ. ಆ ತುರಿಯಾವಸ್ಥೆಯ ಭಾವ ಒಂದೆಂಬುದೀಗ 'ನಾಲ್ಕು ನಡುವಣ ಕಂಭದ ನಡುವಣ ಕಂಭದಲ್ಲಿ'ಎಂಬ ಶಬ್ದಕ್ಕರ್ಥ. ಅಂತಪ್ಪಭಾವದಿಂದ ಶಿವಾಂಶಿಕನಾದಾತ್ಮನುದಯನಾಗಿ, ಅನಿತ್ಯವಾದ ದೇಹವನಾಶ್ರಯು

ಮಾಡಿದನೆಂಬುದೀಗ 'ಒಂದೊರಲೆ ಮನೆಯ ಮಾಡಿತ್ತು' ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹಕ್ಕೆ ಅಷ್ಟತನುಗಳೇ ಕಂಭವಾಗಿಹುದೆಂಬುದೀಗ 'ಅದಕ್ಕೆ ಎಂಟು ಕಂಭ'ವೆಂಬ ಶಬ್ದಕ್ಕರ್ಥ. ಅಂತಪ್ಪ ಅಷ್ಟತನುಯುಕ್ತವಾದ ದೇಹಕ್ಕೆ ನವದ್ವಾರಂಗಳೇ ಬಾಗಿಲುಮಾಡವಾಗಿಹವೆಂಬುದೀಗ 'ಒಂಭತ್ತು ಬಾಗಿಲು' ಎಂಬ ಶಬ್ದಕ್ಕರ್ಥ. ಅಂತಪ್ಪ ನವದ್ವಾರಂಗಳ ದಶವಾಯುಗಳು ಬಂಧಿಸಿಕೊಂಡಿಹುದೆಂಬುದೀಗ 'ಹತ್ತು ಕದ'ವೆಂಬ ಶಬ್ದಕ್ಕರ್ಥ. ಮಿಗಿಲೊಂದು ಬಾಗಿಲೆಂದೊಡೆ, ಪಶ್ಚಿಮದ್ವಾರವಪ್ಪ ಸುಷುಮ್ನನಾಳ. ಆ ಸುಷುಮ್ನದ್ವಾರ, ಸುಜ್ಞಾನೋದಯವಾದ ಶರಣಂಗೆ ತೆರೆದಿಹುದಾಗಿ ಎಂಬುದೀಗ 'ಮಿಗಿಲೊಂದು ಮುಚ್ಚುವದಕ್ಕೆ ಬಾಗಿಲಿಲ್ಲ' ಎಂಬ ಶಬ್ದಕ್ಕರ್ಥ. ಶ್ರೀಗುರುಕಾರುಣ್ಯದಿಂ ಸರ್ವಾಂಗಲಿಂಗಸಂಬಂಧಿಯಾದ ಶರಣನು ತನ್ನ ಮೂಲಜ್ಞಾನದೃಷ್ಟಿವಿಡಿದು ನಿರವಯ ಪರಬ್ರಹ್ಮದಲ್ಲಿಯೆಯ್ದುತ್ತಿರ್ದನೆಂಬುದೀಗ 'ತುಂಬಿಯಲ್ಲಿ ಹಾರಿತ್ತು; ಆ ಆತ್ಮನ ನೆಲೆಯನರಿ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ' ಎಂಬ ಶಬ್ದಕ್ಕರ್ಥ.

೧೯

ಬೇರು ಮೇಲಾದ ವೃಕ್ಷದ ತುದಿಯಲ್ಲಿ, ನಾದ ಬಿಂದು ಕಳೆಯಿಲ್ಲದ ಹಣ್ಣು ತಲೆದೋರಿತ್ತು. ವಿಭೇದವಿಲ್ಲದ ಪಕ್ಷಿ ಸುನಾದವಿಲ್ಲದೆರಗಿತ್ತು. ಎರಗಿ ಮುಟ್ಟುವದಕ್ಕೆ ಮುನ್ನವೇ ಹಣ್ಣು ತೊಟ್ಟುಬಿಟ್ಟು ಬಯಲಾಯಿತ್ತು,—ಕಾಮಧೂಮಧೂಳೇಶ್ವರ ಭಾವವಿಲ್ಲವಾಗಿ.

ಟೀ. ಮೂಲಜ್ಞಾನವೇ ಮೇಲಾಗಿರ್ದ ಸದ್ವಿವೇಕವೃಕ್ಷದಗ್ರದಲ್ಲಿ ಎಂಬುದೀಗ 'ಬೇರು ಮೇಲಾದ ವೃಕ್ಷದ ತುದಿಯಲ್ಲಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಸದ್ವಿವೇಕವೃಕ್ಷದಲ್ಲಿ ದೇಹಪ್ರಾಣೇಂದ್ರಿಯಂಗಳೆಂಬ ತ್ರಿವಿಧವು ಹೊದ್ದದೆಯಿರ್ದ ಚಿದಮೃತರಸಮಯದಿಂದೊಪ್ಪುತಿರ್ದ ಮುಕ್ತಿಫಳ ಗುರುಮುಖದಿಂ ಪ್ರತ್ಯಕ್ಷವಾಯಿತೆಂಬುದೀಗ 'ನಾದ ಬಿಂದು ಕಳೆಯಿಲ್ಲದ ಹಣ್ಣು ತಲೆದೋರಿತ್ತೆ'ಂಬ ಶಬ್ದಕ್ಕರ್ಥ. ಅಂತಪ್ಪ ಚಿದಮೃತರಸಮಯದಿಂದೊಪ್ಪುತ್ತಿರ್ದ ಮುಕ್ತಿಫಳವನು ಎರಡಿಲ್ಲದೆ ಇರ್ಪ ಪರಮಾತ್ಮಸ್ವರೂಪವಾದ ಶರಣನು ಸೋಹಂಭಾವವಿಲ್ಲದೆ ದಾಸೋಹಂಭಾವದಿಂದವಗ್ರಹಿಸಿತ್ತೆಂಬು

ದೀಗ 'ವಿಭೇದವಿಲ್ಲದ ಪಕ್ಷಿ ಸುನಾದವಿಲ್ಲದೆರಗಿತ್ತು' ಎಂಬ ಶಬ್ದಕ್ಕರ್ಥ. ಆ ಮುಕ್ತಿಫಳಸ್ವರೂಪವಾದ ಚಿದ್‌ಘನಲಿಂಗವನು ಚಿತ್‌ಸ್ವರೂಪನಾದ ಶರಣನು ನಿರಹಂಭಾವದಿಂದವಗ್ರಹಿಸಿದಾಕ್ಷಣವೆ, ಒಳಹೊರಗೆನ್ನದೆ ಸರ್ವಾಂಗದಲ್ಲಿ ತತ್ಪರಿಪೂರ್ಣವಾಗಿ, ತಾನೆಂಬ ಮೂಲಾಹಂಕಾರವು ನಷ್ಟವಾದಲ್ಲಿ, ಶರಣನನೊಳಕೊಂಡು ಮುಕ್ತಿಫಳಸ್ವರೂಪವಾದ ಚಿದ್‌ಘನಲಿಂಗವು ನಿರ್ವಯಲಾಯಿತ್ತೆಂಬುದೀಗ 'ಎರಗಿ ಮುಟ್ಟುವದಕ್ಕೆ ಮುನ್ನವೆ ಹಣ್ಣು ತೊಟ್ಟು ಬಿಟ್ಟು ಬಟ್ಟಬಯಲಾಯಿತ್ತು,-ಕಾಮಧೂಮಧೂಳೇಶ್ವರ ಭಾವವಿಲ್ಲವಾಗಿ' ಎಂಬ ಶಬ್ದಕ್ಕರ್ಥ.

೨೦

ಎಲ್ಲರ ಪರಿಯಲ್ಲ ಎನ್ನ ಊಳಿಗ. ಬಸವಣ್ಣ ಚೆನ್ನಬಸವಣ್ಣ ಕೊಟ್ಟ ಕಾಯಕ. ಸತ್ಕ್ರೀ ಎಂಬ ಅರಸಿಯು ಅಪಮಾನಕ್ಕೆ ಲೌಕಿಕಕ್ಕೆ, ಬೊಕ್ಕಸದ ಭಂಡಾರಕ್ಕೆ ಇವು ವರ್ತಕ ಶುದ್ಧವಾದ ಮುತ್ತೆ, ಒಳಗಣ ಮುತ್ತು, ಬೆಳಗುವ ರತ್ನ, ಥಳಥಳಿಸುವ ವಜ್ರ. ಈ ಕಾಯಕದ ಹೊಲಬ ಕೊಟ್ಟ ಮುತ್ತೆ ಕಳವಿನಿಸಿಲ್ಲದಿರಬೇಕು ಬಸವಣ್ಣಪ್ರಿಯ ನಾಗೇಶ್ವರಲಿಂಗವ ನರಿಯಬಲ್ಲಡೆ.

ಟೀ. ದ್ವೈತಭಾವದಿಂ ಲಿಂಗಾಂಗಕ್ಕೆ ಭಿನ್ನವಿಟ್ಟಾಚರಿಸುವ ಆಚಾರಕ್ರಿಯಾಮಾರ್ಗವಲ್ಲ ಶರಣನ ಅಭಿನ್ನಕ್ರಿಯಾಚಾರವೆಂಬುದೀಗ 'ಎಲ್ಲರ ಪರಿಯಲ್ಲ ಎನ್ನ ಊಳಿಗ'ವೆಂಬ ಶಬ್ದಕ್ಕರ್ಥ. ಬಸವಣ್ಣನೆ ಗುರುಸ್ವರೂಪವಾಗಿ ಬಂದು ಸತ್‌ಕ್ರಿಯಾಚಾರವ ನೆಲೆಗೊಳಿಸಿದ. ಚೆನ್ನಬಸವಣ್ಣನೆ ಲಿಂಗಸ್ವರೂಪವಾಗಿ ಬಂದು ಸುಜ್ಞಾನದ ಸಂಬಂಧವ ಮಾಡಿದನೆಂಬುದೀಗ 'ಬಸವಣ್ಣ ಚೆನ್ನಬಸವಣ್ಣ ಕೊಟ್ಟ ಕಾಯಕ'ವೆಂಬ ಶಬ್ದಕ್ಕರ್ಥ. ಇಂತಪ್ಪ ಸುಜ್ಞಾನಕ್ರಿಯಾಚಾರವಿಡಿದು ಆಚರಿಸುತ್ತಿರ್ದ ಶರಣಸತಿಯ ಭಕ್ತ್ಯಾಭಿಮಾನವು ಲೌಕಿಕಾಚಾರದಲ್ಲಿ ಕೂಡಿ ಕೆಡದಂತೆ ಎಂಬುದೀಗ 'ಸತ್ಕ್ರೀ ಎಂಬ ಅರಸಿಯು ಅಪಮಾನಕ್ಕೆ ಲೌಕಿಕಕ್ಕೆ' ಎಂಬ ಶಬ್ದಕ್ಕರ್ಥ. ಇಂತು ಸರ್ವಾಚಾರಸಂಪತ್ತುವಿಡಿದಾಚರಿಸುವ ಶರಣಂಗೆ ಅನುಸರಣೆ ಇಲ್ಲದೆ ಆಚಾರಶುದ್ಧವಾಗಿ ನಿರ್ಧರವಾದಲ್ಲಿ ಎಂಬುದೀಗ 'ಬೊಕ್ಕ

ಸದ ಭಂಡಾರಕ್ಕೆ ಇವು ವರ್ತಕ ಶುದ್ಧವಾದ ಮುತ್ತೆ'ಯೆಂಬ ಶಬ್ದಕ್ಕರ್ಥ. ಶರಣಂಗೆ ನಿಜಾಂತರಂಗದಲ್ಲಿ ಮುಕ್ತಿಸ್ವರೂಪವಾಗಿರ್ಪ ಮಹಾಘನ ಲಿಂಗವೆ ಕರಸ್ಥಲಕ್ಕೆ ಇಷ್ಟಲಿಂಗಸ್ವರೂಪವಾಯಿತ್ತೆಂಬುದೀಗ 'ಒಳಗಣ ಮುತ್ತು' ಎಂಬ ಶಬ್ದಕ್ಕರ್ಥ. ಚಿದ್ರೂಪನಾದ ಶರಣನ ಹೃದಯಕಮಲದಲ್ಲಿ ಚಿತ್‌ಪ್ರಕಾಶವಾಗಿ ಬೆಳಗುತ್ತಿರ್ದ ಪ್ರಾಣಲಿಂಗವೆಂಬುದೀಗ 'ಬೆಳಗುವ ರತ್ನ' ಎಂಬ ಶಬ್ದಕ್ಕರ್ಥ. ಚಿತ್‌ಸ್ವರೂಪನಾದ ಶರಣಾತ್ಮನಾತ್ಮಾಂಗದಲ್ಲಿ ಅತ್ಯಂತಪ್ರಕಾಶವಾಗಿ ಬೆಳಗುತ್ತಿರ್ದ ಅಭೇದ್ಯಸ್ವರೂಪವಾದ ಭಾವಲಿಂಗ ವೆಂಬುದೀಗ ಥಳಥಳಿಸುವ ವಜ್ರವೆಂಬ ಶಬ್ದಕ್ಕರ್ಥ. ಇಂತಪ್ಪ ತ್ರಿವಿಧ ಲಿಂಗದಲ್ಲಿ ಕ್ರಿಯಾಜ್ಞಾನಭಾವವಿಡಿದು ಆಚರಿಸುತ್ತಿರ್ದ ಶರಣನು ತನು ಮನಧನಂಗಳ ಗುರುಲಿಂಗ ಜಂಗಮಕ್ಕೆ ಸಮರ್ಪಣೆಯ ಮಾಡುವಲ್ಲಿ ಅಣು ಮಾತ್ರ ವಂಚನೆಯಿಲ್ಲದೆ ಇರುತ್ತಿಹನೆಂಬುದೀಗ 'ಈ ಕಾಯಕದ ಹೊಲಬ ಕೊಟ್ಟ ಮುತ್ತೆ ಕಳವಿನಿಸಿಲ್ಲದಿರಬೇಕು ಬಸವಣ್ಣಪ್ರಿಯ ನಾಗೇಶ್ವರಲಿಂಗ ವನು ಅರಿಯಬಲ್ಲಡೆ' ಎಂಬ ಶಬ್ದಕ್ಕರ್ಥ.

೨೧

ಅಂಗದ ಬೊಕ್ಕಸದ ಮಂದಿರಕ್ಕೆ ಲಿಂಗವೆಂಬುದೊಂದು ಬೀಗ. ತ್ರಿಗುಣವೆಂಬ ಮೂರೆಸಳಿನ ಸಿಕ್ಕು. ಒಂದು ಪೂರ್ವಗತಿ, ಒಂದು ಮಧ್ಯಗತಿ, ಒಂದು ಉತ್ತರಗತಿಯಾಗಿ ಸಿಕ್ಕಿದವು ಮೂರೆಸಳು. ಆ ಎಸಳಿಗೆ ಪುಟ ಒಂದೆ ಒಡಲು. ಎಸಳು ತೆಗೆವುದಕ್ಕೆ ಕೈಯ ಕಾಣೆ. ಪ್ರತಿ ಕೈಗೆ ಆ ಎಸಳು ಅಸಾಧ್ಯ ನೋಡಾ! ಇಂತೀ ಬೀಗದ ಗುಣ ಬಸವಣ್ಣಪ್ರಿಯ ನಾಗೇಶ್ವರನಲ್ಲಿ ನಿಶ್ಚಯವಾದ ಶರಣಂಗೆ.

ಟೀ. ಸುಜ್ಞಾನೋದಯವಾದ ಶರಣನ ಜ್ಞಾನಕಾಯವೆಂಬುದೀಗ 'ಅಂಗದ' ಎಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಕಾಯದಲ್ಲಿ ಸರ್ವಾಚಾರಸಂಪತ್ತನೊಳಕೊಂಡು ಶರಣನಾಚಾರಾಂಗ ತೋರುತ್ತಿಹುದೆಂಬುದೀಗ 'ಅಂಗದ ಬೊಕ್ಕಸದ ಮಂದಿರಕ್ಕೆ' ಎಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಸ್ವರೂಪವಾದ ಆಚಾರಾಂಗಕ್ಕೆ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೆ ಚೈತನ್ಯಸ್ವರೂಪವಾಗೊಪ್ಪುತ್ತಿಹುದೆಂಬುದೀಗ 'ಚಿದ್‌ಘನಲಿಂಗ ವೆಂಬುದೊಂದು ಬೀಗ'ವೆಂಬ ಶಬ್ದಕ್ಕರ್ಥ. ಅಂತಪ್ಪ ನಿರವಯ ಪರಬ್ರಹ್ಮ

ದಿಂದೊದಗಿದ ಕ್ರಿಯಾ ಜ್ಞಾನ ಭಾವಂಗಳೆಂಬ ಎಸಳುಗಳಿಗೆ ಆ ಪರಬ್ರಹ್ಮವೆ ಚೈತನ್ಯಸ್ವರೂಪವಾಗಿ ಬಂಧಿಸಿಕೊಂಡಿಹುದೆಂಬುದೀಗ 'ತ್ರಿಗುಣವೆಂಬ ಮೂರೆಸಳಿನ ಸಿಕ್ಕು'ಎಂಬ ಶಬ್ದಕ್ಕರ್ಥ. ಶರಣನ ಸ್ಥೂಲಾಂಗದ ಸತ್ಕ್ರಿಯಾಚಾರದಲ್ಲಿ ಇಷ್ಟಲಿಂಗ ಸಂಬಂಧವಾಗಿಹುದೆಂಬುದೀಗ 'ಒಂದು ಪೂರ್ವಗತಿ' ಎಂಬ ಶಬ್ದಕ್ಕರ್ಥ. ಸೂಕ್ಷ್ಮಾಂಗದ ಸುಜ್ಞಾನಪ್ರಕಾಶದಲ್ಲಿ ಪ್ರಾಣಲಿಂಗ ಸಂಬಂಧವಾಗಿಹುದೆಂಬುದೀಗ 'ಒಂದು ಮಧ್ಯಗತಿ' ಎಂಬ ಶಬ್ದಕ್ಕರ್ಥ. ಕಾರಣಾಂಗದ ಭಾವಪ್ರಕಾಶದಲ್ಲಿ ತೃಪ್ತಿಲಿಂಗ ಸಂಬಂಧವಾಗಿಹುದೆಂಬುದೀಗ 'ಒಂದು ಉತ್ತರಗತಿಯಾಗಿ' ಎಂಬ ಶಬ್ದಕ್ಕರ್ಥ. ಅಂತಪ್ಪ ಕ್ರಿಯಾಜ್ಞಾನ ಭಾವಂಗಳನು ಒಳಗೊಂಡಿರ್ಪ ಇಷ್ಟ ಪ್ರಾಣ ಭಾವಲಿಂಗಂಗಳಿಗೆ ಚಿತ್ಸ್ವರೂಪನಾದ ಶರಣನ ಆಚಾರಾಂಗ ಒಂದೇ ಆಶ್ರಯವಾಗಿಹುದೆಂಬುದೀಗ 'ಸಿಕ್ಕಿದವು ಮೂರೆಸಳು ಆ ಎಸಳಿಗೆ ಪುಟ ಒಂದೇ ಒಡಲು' ಎಂಬ ಶಬ್ದಕ್ಕರ್ಥ. ಇಂತಪ್ಪ ತ್ರಿವಿಧಲಿಂಗವಿಡಿದಾಚರಿಸಿದ ಶರಣನ ಶಿವಭಾವವು ಆ ಪರಬ್ರಹ್ಮದಲ್ಲಿ ನಿಷ್ಪತಿಯಾಗಲು ಶ್ರುತಜ್ಞಾನಕ್ಕೆ ಆ ಪರಬ್ರಹ್ಮವು ಅಸಾಧ್ಯವಾಯಿತ್ತೆಂಬುದೀಗ 'ಎಸಳ ತೆಗೆವುದಕ್ಕೆ ಕೈಯ ಕಾಣೆ. ಪ್ರತಿ ಕೈಗೆ ಆ ಎಸಳು ಅಸಾಧ್ಯ ನೋಡಾ. ಇಂತೀ ಬೀಗದ ಗುಣವ ಬಸವಣ್ಣಪ್ರಿಯ ನಾಗೇಶ್ವರನಲ್ಲಿ ನಿಶ್ಚಯವಾದ ಶರಣಂಗೆ' ಎಂಬ ಶಬ್ದಕ್ಕರ್ಥ.

೨೨

ಊರೊಳಗಣ ಅರಳಿಯ ಮರದಲ್ಲಿ, ಮೂರು ವರ್ಣದ ಗಿಣಿ ಮರಿಯನಿಕ್ಕಿತ್ತು. ರಟ್ಟೆ ಬಲಿದು ಹಾರಲಾರದು, ಕೊಕ್ಕು ಬಲಿದು ಕೆಂಪಾಗದು, ಬಾಯಿ ಬಲಿದು ಹಣ್ಣ ಮೆಲಲಾರದು. ಅದು ಓದಿಸುವವರಿಗಸಾಧ್ಯ. ಅಲೇಖನಾದ ಶೂನ್ಯ ಇದರೊಲವರವ ಕೇಳಿಹರೆಂದು ಕಲ್ಲಿನೊಳಗಾದ.

ಟೀ. ಪಂಚಭೂತಗ್ರಾಮವೆಂಬುದೀಗ 'ಊರೆ'ಂಬ ಶಬ್ದಕ್ಕರ್ಥ. ಅಂತಪ್ಪ ದೇಹಮಧ್ಯದಲ್ಲಿ ಶಬ್ದಜಾಲಂಗಳಿಂದುಲಿವುತ್ತಿಹ ವಾಗ್ಜಾಲವೆಂಬುದೀಗ 'ಊರೊಳಗಣ ಅರಳಿಯ ಮರದಲ್ಲಿ' ಎಂಬ ಶಬ್ದಕ್ಕರ್ಥ. ಆ ವಾಗ್ಜಾಲ ಭ್ರಾಂತಿನಲ್ಲಿರ್ಪ ಗುಣತ್ರಯಸಂಬಂಧಿಯಾದ ಜೀವಹಂಸನಿಂ ಜೀವತ್ರಯಂಗಳು ಉದಯಿಸಿದವೆಂಬುದೀಗ 'ಮೂರು ವರ್ಣದ ಗಿಣಿ ಮರಿಯನಿಕ್ಕಿ

ತ್ತೆಂ'ಬ ಶಬ್ದಕ್ಕರ್ಥ. ಶಿವಕೃಪೆಯಿಂದ ಜೀವತ್ರಯಂಗಳ ಮಧ್ಯದಲ್ಲಿ ಸಮ್ಯಗ್‌ಜ್ಞಾನ ಪ್ರಭಾವಿಸಲು, ಶ್ರೀಗುರುಕಾರುಣ್ಯದಿಂ ಸರ್ವಾಂಗ ಲಿಂಗ ಸಂಬಂಧಿಯಾಗಲು ಭಕ್ತಿಜ್ಞಾನಂಗಳು ನಿರ್ಭರವಾದವೆಂಬುದೀಗ 'ರಟ್ಟೆ ಬಲಿದು' ಎಂಬ ಶಬ್ದಕ್ಕರ್ಥ. ಆ ಭಕ್ತಿಜ್ಞಾನಂಗಳೆರಡೂ ನಿರ್ಭರವಾದ ಚಿದಾತ್ಮನು ಅನ್ಯವಾದ ಮಾಯಾಪ್ರಪಂಚಿನತ್ತ ಹೋಗದೆಂಬುದೀಗ 'ಹಾರಲಾರದು' ಎಂಬ ಶಬ್ದಕ್ಕರ್ಥ. ಅಂತು ಮಾಯಾಪ್ರಪಂಚು ನಷ್ಟವಾಗಲು,ಶರಣನ ಶಿವಭಾವ ನಿರ್ಭರವಾಗಿ ರಜೋಗುಣ ಹೊದ್ದದೆಂಬುದೀಗ 'ಕೊಕ್ಕುಬಲಿದು ಕೆಂಪಾಗದು' ಎಂಬ ಶಬ್ದಕ್ಕರ್ಥ. ಅಂತು ರಜೋಗುಣ ನಿವೃತ್ತಿಯಾಗಲು, ಶರಣನ ಶಿವಾಪೇಕ್ಷೆ ಲಿಂಗದಲ್ಲಿ ಸ್ವಸ್ಥಿರವಾಗಿ ಭಿನ್ನಫಲ ಪದಂಗಳ ಸ್ವೀಕರಿಸದೆಂಬುದೀಗ 'ಬಾಯಿ ಬಲಿದು ಹಣ್ಣು ಮೆಲಲಾರದು' ಎಂಬ ಶಬ್ದಕ್ಕರ್ಥ. ಆ ಜ್ಞಾನಕಲಾತ್ಮನ ಶ್ರುತಜ್ಞಾನದಿಂದರಿದಿಹೆನೆಂದೊಡೆ ಸಾಧ್ಯವಲ್ಲವೆಂಬುದೀಗ 'ಅದ ಓದಿಸುವವರಿಗೆ ಅಸಾಧ್ಯ ಅಲೇಖನಾದ ಶೂನ್ಯ ಇದರೊಲವರವ ಕೇಳಿಹರೆಂದು ಕಲ್ಲಿನೊಳಗಾದ' ಎಂಬ ಶಬ್ದಕ್ಕರ್ಥ.

೨೩

ಒಂದು ಕೋಲಿನಲ್ಲಿ ಮೂರುಲೋಕ ಮಡಿಯಿತ್ತು. ಬಿಲ್ಲಿನ ಕೊಪ್ಪು ಹಾರಿ, ನಾರಿ ಹಿಡಿದು, ನಾರಾಯಣನ ತಾಗಿತ್ತು. ನಾರಾಯಣನ ಹಲ್ಲು ಮುರಿದು, ಬ್ರಹ್ಮನ ಹಣೆ ಒಡೆಯಿತ್ತು. ಹಣೆ ಮುರಿದು, ರುದ್ರನ ಹಣೆಗಿಚ್ಚಿನ ಕಣ್ಣಿನಲ್ಲಿ ಬಿದ್ದಿತ್ತು, ನಷ್ಟವಾಯಿತ್ತು ಗೊಹೇಶ್ವರನ ಶರಣ ಅಲ್ಲಮ ಬದುಕಿದ ಬದುಕು ನಾಮ ನಷ್ಟವಾಯಿತ್ತು.

ಟೀ. ಪೂರ್ಣಜ್ಞಾನವೆಂಬುದೀಗ 'ಒಂದು ಕೋಲೆ'ಂಬ ಶಬ್ದಕ್ಕರ್ಥ. ಅಂತಪ್ಪ ಪರಿಪೂರ್ಣಜ್ಞಾನ ತನುತ್ರಯಂಗಳನವಗ್ರಹಿಸಿದಲ್ಲಿ, ಆ ತನುತ್ರಯಂಗಳ ಅನಿತ್ಯವಾದ ಭಾವ ನಷ್ಟವಾಗಿ, ಸರ್ವಾಂಗವು ಜ್ಞಾನ ಕಾಯಸ್ವರೂಪವಾಯಿತ್ತೆಂಬುದೀಗ 'ಒಂದು ಕೋಲಿನಲ್ಲಿ ಮೂರು ಲೋಕ ಮಡಿಯಿತ್ತೆ'ಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಕಾಯದಲ್ಲಿ ಶ್ರೀಗುರು ಕಾರುಣ್ಯದಿಂದ ಇಷ್ಟಪ್ರಾಣಭಾವಲಿಂಗ ಸಂಬಂಧವಾಗಲು, ಸದ್ಭಾವವೆಂಬ ಬಿಲ್ಲಿಗೆ ಸುಮನವೆಂಬ ನಾರಿಯ ಹೂಡಿ, ಸುಜ್ಞಾನವೆಂಬ ಸರಳ

ತೊಟ್ಟು ಪ್ರಯೋಗಿಸುತ್ತಿರುವಲ್ಲಿ, ಆ ಭಾವ ಸಂಬಂಧವಾದ ನಿಷ್ಠೆಯು ಇಷ್ಟ ಲಿಂಗದಲ್ಲಿ ನಿಷ್ಪತಿಯಾಗಿ, ಆ ಸುಮನವು ಪ್ರಾಣಲಿಂಗದಲ್ಲಿ ವಿಶ್ರಾಂತಿಯ ನೆಯ್ದಲು, ಶರಣನ ಸುಜ್ಞಾನಪ್ರಕಾಶವು ಅಂತರ್ದೇಹದಲ್ಲಿ ಪ್ರಯೋಗಿಸುತ್ತಿರಲು ಆ ಸಂಕಲ್ಪವಿಕಲ್ಪಂಗಳೆಂಬ ದಂತಂಗಳು ಭಗ್ನವಾದವೆಂಬುದೀಗ 'ಬಿಲ್ಲಿನ ಕೊಪ್ಪು ಹಾರಿ, ನಾರಿ ಸಿಡಿದು ನಾರಾಯಣನ ತಾಗಿತ್ತು, ನಾರಾಯಣನ ಹಲ್ಲು ಮುರಿದು' ಎಂಬ ಶಬ್ದಕ್ಕರ್ಥ. ಅಂತು ಸಂಕಲ್ಪವಿಕಲ್ಪ ನಷ್ಟವಾಗಲು, ಜಗತ್‌ಸೃಷ್ಟಿಯ ಮಾಡುವ ಬ್ರಹ್ಮನ ಅಹಂಕಾರವು ನಾಸ್ತಿಯಾಯಿತ್ತೆಂಬುದೀಗ 'ಬ್ರಹ್ಮನ ಹಣೆ ಒಡೆಯಿತ್ತು' ಎಂಬ ಶಬ್ದಕ್ಕರ್ಥ. ಅಂತು ಬ್ರಹ್ಮನ ಉತ್ಪತ್ಯಕ್ಕೆ ಕಾರಣವಾದ ಅಹಂಕಾರ ನಷ್ಟವಾದಲ್ಲಿ, ಆ ಸುಜ್ಞಾನಪ್ರಕಾಶವು ಶರಣನ ಮಹಾಜ್ಞಾನಾಗ್ನಿಪ್ರಕಾಶದ ಮಧ್ಯದಲ್ಲಿ ಲೀಯವಾಯಿತ್ತೆಂಬುದೀಗ 'ಹಣೆ ಮುರಿದು ರುದ್ರನ ಹಣೆಗಿಚ್ಚಿನ ಕಣ್ಣಿನಲ್ಲಿ ಬಿದ್ದಿತ್ತು, ನಷ್ಟವಾಯಿತ್ತು ಗೊಹೇಶ್ವರನ ಶರಣ ಅಲ್ಲಮ ಬದುಕಿದ ಬದುಕು ನಾಮ ನಷ್ಟವಾಯಿತ್ತು' ಎಂಬ ಶಬ್ದಕ್ಕರ್ಥ.

೨೪

ಬಂದ ಬಂದವರೆಲ್ಲರು ನೀರ ಕಾಸುವರಲ್ಲದೆ, ಮಿಂದುಂಡು ಹೋಹವರ ನಾರನು ಕಾಣೆ. ಕಾಗಲೆತ್ತಿತ್ತು, ಮೇಲು ಮಡಕೆಯಿಲ್ಲ. ಸೌದೆ ಬೆಂದಿತ್ತು, ಬೆಂಕಿಯ ಕಾಣೆ. ಮೀವಾತ ಬಂದು ಉದಕವನೆರೆವರನಾರನು ಕಾಣೆ. ಕಂಡವರ ಹೇಳಿದಾತ ಬಂದ, ಕಾಣಿಸಿಕೊಂಡವನಿಲ್ಲ ಆತುರವೈರಿ ಮಾರೇಶ್ವರಾ!

ಟೀ. ತಮ್ಮ ನಿಜವ ಮರೆದು ಅನಂತಭವಂಗಳಲ್ಲಿ ಬರ್ಪ ವೇದಾಂತಜ್ಞಾನಿಗಳೆಲ್ಲರು ಸದ್ವಿವೇಕಜಲಸ್ವರೂಪವಾದ ಪರಬ್ರಹ್ಮವನು ಆತ್ಮಜ್ಞಾನವೆಂಬ ವಹ್ನಿಯಿಂದ ಮಥನಿಸುತ್ತಿರ್ಪರಲ್ಲದೆ, ಅದನಾಧರಿಸುವದಕ್ಕೆ ಆಚಾರವೆಂಬ ಭಾಂಡವಿಲ್ಲವೆಂಬುದೀಗ 'ಕಾಗಲೆತ್ತಿತ್ತು. ಮೇಲು ಮಡಕೆಯಿಲ್ಲ'ವೆಂಬ ಶಬ್ದಕ್ಕರ್ಥ. ಸಕಲಕರಣಂಗಳ ನಿಗ್ರಹಿಸಿದ ಜ್ಞಾನಾಗ್ನಿ ಅಲ್ಲಿಯೆ ಸ್ಥಮಿಸಿತ್ತಲ್ಲದೆ ನಿರ್ಧರವಾಗಿ ನಿಲ್ಲದೆಂಬುದೀಗ 'ಸೌದೆ ಬೆಂದಿತ್ತು ಬೆಂಕಿಯ ಕಾಣೆನೆ'ಂಬ ಶಬ್ದಕ್ಕರ್ಥ. ಆ ಸುಖಜಲವ ತ್ರಿಪುಟಜ್ಞಾನದಿಂದ

ಧರಿಸುವ ವೇದಾಂತಿ, ಕರ್ಮಯೋಗದಲ್ಲಿ ವರ್ತಿಸುತ್ತಿರ್ಪ ಕಾರಣ ಆ ಚಿಜ್ಜ್ಞಲವ ಸರ್ವಾಂಗದಲ್ಲಿ ಧರಿಸುವ ಚಿಚ್ಛಕ್ತಿಸ್ವರೂಪವಾದ ಜ್ಞಾನ ಗುರೂಪದೇಶವಿಲ್ಲದೆ ಹೋಯಿತ್ತೆಂಬುದೀಗ 'ಮೀವಾತ ಬಂದ ಉದಕವನೆರೆವವರನಾರನು ಕಾಣೆನೆ'ಂಬ ಶಬ್ದಕ್ಕರ್ಥ. ತನ್ನ ಭಿನ್ನಜ್ಞಾನಕ್ಕೆ ಗೋಚರಿಸುವ ಪರಬ್ರಹ್ಮವ ಕಂಡು ಕೂಡಿದೆನೆಂಬ ವೇದಾಂತಿಗೆ ಬ್ರಹ್ಮಾನುಸಂಧಾನ ಘಟಿಸದೆ ತನುಕರಣೇಂದ್ರಿಯವಿಷಯಪ್ರಪಂಚಿನಲ್ಲಿ ವರ್ತಿಸಲು, ಆ ನಿಜವಸ್ತು ಜ್ಞಾನಾನಂದಕ್ಕೆ ಗೋಚರಿಸಿ, ಧ್ಯಾನ ನಿಂದಲ್ಲಿ ಅಡಗಿತ್ತೆಂಬುದೀಗ 'ಕಂಡವರ ಹೇಳಿದಾತ ಬಂದ ಕಾಣಿಸಿಕೊಂಡವನಿಲ್ಲ ಆತುರವೈರಿ ಮಾರೇಶ್ವರಾ' ಎಂಬ ಶಬ್ದಕ್ಕರ್ಥ.

೨೫

ಕತ್ತಲೆಯಲಿ ಕನ್ನವನಿಕ್ಕಿದರೆ, ಕತ್ತಿಯ ಕೊಟ್ಟ ಕರ್ತೃವಿಂಗೆ ಭಂಗ. ಅವರು ಮರೆದಿರ್ದಲ್ಲಿ ಮನೆಯ ಹೊಕ್ಕಡೆ, ಎನ್ನ ಚೋರತನದ ಅರಿಕೆಗೆ ಭಂಗ. ಮರೆದಿರ್ದವರನು ಎಬ್ಬಿಸಿ, ಅವರಿಗೆ ಅವರೊಡವೆಯ ತೋರಿ, ಎನ್ನೊಡವೆಯ ತಂದೆ, ಮದನಂಗೆ ದೂರ ಮಾರೇಶ್ವರಾ!

ಟೀ. ದೇಹಸಂಬಂಧಿಯಾಗಿರ್ದ ಆತ್ಮನು ಅಜ್ಞಾನದಲ್ಲಿ ಕೂಡಿರ್ದ ದೇಹಭಾವವ ನಿವೃತ್ತಿಮಾಡಿಹೆನೆಂದೊಡೆ ಆಗದೆಂಬುದೀಗ 'ಕತ್ತಲೆಯಲ್ಲಿ ಕನ್ನವನಿಕ್ಕಿದಡೆ' ಎಂಬ ಶಬ್ದಕ್ಕರ್ಥ. ಅಂತು ಅಜ್ಞಾನದಿಂ ದೇಹಭಾವವ ನಿವೃತ್ತಿಮಾಡಿಹೆನೆಂದೊಡೆ, ತನಗೆ ಸುಜ್ಞಾನವನು ಅಳವಡಿಸಿ ಕೊಟ್ಟ ಶ್ರೀಗುರುವಿಂಗೆ ಹಾಸ್ಯವೆಂದರಿದ ಶರಣನು ಆ ಅಜ್ಞಾನವ ಹೊದ್ದದೆ ವಿಲಕ್ಷಣವಾಗಿರ್ದನೆಂಬುದೀಗ 'ಎನಗೆ ಕತ್ತಿಯ ಕೊಟ್ಟಕರ್ತೃವಿಂಗೆ ಭಂಗ'ವೆಂಬ ಶಬ್ದಕ್ಕರ್ಥ. ಅಂತು ಸಕಲಕರಣಂಗಳೆಲ್ಲವು ನಿಸಜ್ಜರೂಪ ಮರೆದು ಅಜ್ಞಾನಿಗಳಾಗಿರ್ದಲ್ಲಿ ಎಂಬುದೀಗ 'ಅವರು ಮರೆದಿರ್ದಲ್ಲಿ ಮನೆಯ ಹೊಕ್ಕಡೆ' ಎಂಬ ಶಬ್ದಕ್ಕರ್ಥ. ಆ ಸಕಲಕರಣಂಗಳೆಲ್ಲವನು ಜ್ಞಾನಕರಣಂಗಳ ಮಾಡಿ ಪ್ರಾಣಲಿಂಗದ ಸೇವಕರೆನಿಸುವರಲ್ಲದೆ, ದೇಹಭಾವವ ಕೂಡಿಕೊಂಡು ಸಕಲಕರಣಂಗಳ ವರ್ತನೆಯಲ್ಲಿ ಹೊದ್ದ ಶರಣನೆಂಬುದೀಗ 'ಎನ್ನ ಚೋರತನದರಿಕೆಗೆ ಭಂಗ; ಮರೆದಿರ್ಪವರನೆಬ್ಬಿಸಿ' ಎಂಬ ಶಬ್ದ

ಕ್ಕರ್ಥ. ಆ ಸಕಲಕರಣಂಗಳಿಗೆ ಪ್ರಾಣಲಿಂಗದ ನಿಜಸ್ವರೂಪವನು ಅರುಹಿದನೆಂಬುದೀಗ 'ಅವರಿಗೆ ಅವರೊಡವೆಯ ತೋರಿ' ಎಂಬ ಶಬ್ದಕ್ಕರ್ಥ. ಆತ್ಮಾಂತರ್ಗತವಾಗಿರ್ದ ಸದ್ರೂಪವಾದ ಪರಬ್ರಹ್ಮವ ಗುರುಮುಖದಿಂ ಬಹಿಷ್ಕರಿಸಿ ತನ್ನಾಚಾರಂಗದಲ್ಲಿ ಇಷ್ಟಲಿಂಗಸ್ವರೂಪವಾಗಿ ಧರಿಸಿದನೆಂಬುದೀಗ 'ಎನ್ನೊಡವೆಯ ತಂದೆ, ಮದನಂಗೆ ದೂರ ಮಾರೇಶ್ವರಾ' ಎಂಬ ಶಬ್ದಕ್ಕರ್ಥ.

೨೬

ಎಲ್ಲರ ಗಂಡಂದಿರು ಪರದಳ ವಿಭಾಡರು, ಎನ್ನ ಗಂಡ ಮನೆದಳ ವಿಭಾಡ. ಎಲ್ಲರ ಗಂಡರು ಗಜ ಬೇಟೆಕಾರರು, ಎನ್ನ ಗಂಡ ಮನೆಯ ಬೇಟೆಕಾರ. ಎಲ್ಲರ ಗಂಡರು ತಂದಿಕ್ಕಿಸಿಕೊಂಬರು, ಎನ್ನ ಗಂಡ ತಾರದೆ ಇಕ್ಕಿಸಿಕೊಂಬ. ಎಲ್ಲರ ಗಂಡಂದಿರಿಗೆ ಮೂರು, ಎನ್ನ ಗಂಡಂಗೆ ಒಂದೇ. ಅದೊಂದು ಸಂದೇಹ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ!

ಟೀ. ಮಾಯಾಶಕ್ತಿಯ ವಲ್ಲಭರಾದ ಖಂಡಿತಜ್ಞಾನಿಗಳೆಲ್ಲರು ಬಹಿರಂಗದ ಪ್ರಪಂಚ ತನುದಂಡಣೆಗಳಿಂ ನಿವೃತ್ತಿಮಾಡಬೇಕೆನ್ನುತ್ತಿಹರೆಂಬುದೀಗ, 'ಎಲ್ಲರ ಗಂಡಂದಿರು ಪರದಳ ವಿಭಾಡರು' ಎಂಬ ಶಬ್ದಕ್ಕರ್ಥ. ಚಿತ್‌ಸ್ವರೂಪವಾದ ಶರಣಸತಿಗೆ ಮಹಾಘನಲಿಂಗವೆ ಪತಿಯಾದ ಕಾರಣ, ಆ ಮಹಾಘನಲಿಂಗವು ಶರಣನ ಸರ್ವಾಂತರಂಗವನು ಅವಗ್ರಹಿಸಿ, ಮನಸ್ಸಿನಿಂ ತೋರುವ ಸಂಕಲ್ಪ ವಿಕಲ್ಪ ಮೊದಲಾದ ಸಕಲಪ್ರಪಂಚ ನಿವೃತ್ತಿಮಾಡಿ ಶಿವಜ್ಞಾನವ ಪ್ರಭಾವಿಸಿ ಕೊಡುತ್ತಿಹುದೆಂಬುದೀಗ 'ಎನ್ನ ಗಂಡ ಮನದಳ ವಿಭಾಡ'ಎಂಬ ಶಬ್ದಕ್ಕರ್ಥ. ಮಾಯಾಶಕ್ತಿವಲ್ಲಭರಾದ ಭಿನ್ನಜ್ಞಾನಿಗಳೆಲ್ಲರು ಬಹಿರಂಗದ ಅಷ್ಟಮದಂಗಳ ನಷ್ಟವ ಮಾಡಬೇಕು ಎನ್ನುತ್ತಿಹರು. ಚಿದ್ರೂಪನಾದ ಶರಣನ ಬಾಹ್ಯಾಭ್ಯಂತರಗಳನೊಳಕೊಂಡು ಪರಿಪೂರ್ಣವಾಗಿರ್ಪ ಪರಶಿವತತ್ವವು ಅಂತರಂಗದ ಅಷ್ಟಮದಗಳ ನಷ್ಟವ ಮಾಡಿ ಚಿದಹಂಕಾರ ಸ್ವರೂಪವನೆಯ್ದಿಸುತ್ತಿಹನೆಂಬುದೀಗ 'ಎಲ್ಲರ ಗಂಡಂದಿರು ಗಜ ಬೇಟೆಕಾರರು, ಎನ್ನ ಗಂಡ ಮನೆಯ ಬೇಟೆಕಾರ'ನೆಂಬ ಶಬ್ದ

ಕ್ಕರ್ಥ. ತಮ್ಮ ನಿಜವೆ ಪರಬ್ರಹ್ಮವೆಂದರಿಯದೆ, ದ್ವೈತಭಾವದಿಂದ ಲಿಂಗಕ್ಕೆ ಸರ್ವಕ್ರಿಯೋಪಚಾರಂಗಳ ಮಾಡಿ, ಭಿನ್ನಫಲಪದಂಗಳ ಪಡೆದು ಭೋಗಿಸಿದವರು ಭವಹೇತುವಪ್ಪ ಜನ್ಮಾಂತರಕ್ಕೆ ಬಂದು ಮಾಯಾಸಂಬಂಧವಾದ ಸಕಲವಿಷಯಪದಾರ್ಥಂಗಳ ಜೀವಭಾವದಿಂದ ಭುಂಜಿಸುತ್ತಿಹರು. ಸುಜ್ಞಾನ ಸನ್ನಿಹಿತವಾದ ಶರಣಸತಿಗೆ ಪತಿಯಾಗಿರ್ಪ ಮಹಾಘನಲಿಂಗವು ಫಲಪದಂಗಳ ಕೊಟ್ಟು, ಭವಕ್ಕೆ ತಾರದೆ, ಅಂಗ ಮನ ಪ್ರಾಣ ಸರ್ವೇಂದ್ರಿಯಂಗಳಲ್ಲಿ ಸಂಬಂಧವಾದ ಸಕಲಪದಾರ್ಥಂಗಳ ಭಕ್ತಿಯಿಂದರ್ಪಿಸಿಕೊಂಡು, ಪ್ರಸಾದವ ಕರುಣಿಸಿ, ನಿತ್ಯವಾದ ಮುಕ್ತಿಯ ಕೊಡುತ್ತಿಹುದು ಶರಣಂಗೆ ಎಂಬುದೀಗ 'ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು, ಎನ್ನ ಗಂಡ ತಾರದೆ, ಇಕ್ಕಿಸಿಕೊಂಬನೆ'ಂಬ ಶಬ್ದಕ್ಕರ್ಥ. ಮಾಯಾಶಕ್ತಿಯ ವಲ್ಲಭರಾದ ಭಿನ್ನಜ್ಞಾನಿಗಳೆಲ್ಲರು ತ್ರಿಪುಟಿಜ್ಞಾನ ಸಂಬಂಧಿಗಳಾಗಿಹರು, ಚಿತ್‌ಪ್ರಭಾಂಗಸ್ವರೂಪವಾದ ಶರಣಸತಿಗೆ ಪ್ರಾಣವಲ್ಲಭನಾದ ಪರಬ್ರಹ್ಮಲಿಂಗಕ್ಕೆ ಅಖಂಡಜ್ಞಾನಪ್ರಕಾಶವೊಂದೇ ಶರಣನ ಸರ್ವಾಂಗವನವಗ್ರಹಿಸಿ ನಿಷ್ಪತಿಯಾಯಿತ್ತೆಂಬುದೀಗ 'ಎಲ್ಲರ ಗಂಡಂದಿರಿಗೆ ಮೂರು, ಎನ್ನ ಗಂಡಂಗದೊಂದೆ, ಅದೊಂದು ಸಂದೇಹ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ' ಎಂಬ ಶಬ್ದಕ್ಕರ್ಥ.

೨೦

ಶರಣರು

೧. ಅಜಗಣ್ಣ

೧

ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ? ಕಾಯದೊಳಗೆ ಮಾಯವಿಲ್ಲ; ಭಾವದೊಳಗೆ ಭ್ರಮೆಯಿಲ್ಲ. ಕರೆದು ಬೆಸಗೊಂಬರೆ ಕುರುಹಿಲ್ಲ. ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು ದುರ್ಬುದ್ಧಿಯಾದವಳನೇನೆಂಬೆನಣ್ಣಾ! ತಲೆಯುಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ ಎನ್ನ ಅಜಗಣ್ಣತಂದೆಯು ಬೆನ್ನ ಬಳಿಯವಳಾಸಯ್ಯಾ.

೨

ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋರುವ ಪರಿಯ ನೋಡಾ! ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದನು. ಅಜಗಣ್ಣನ ಯೋಗಕ್ಕೆ ಬೆರಗಾದೆನು! ಈ ಅರಿವಂತುಟೆಲ್ಲವನೊಳಗಿಟ್ಟುಕೊಂಡನು, ಶಿವಗಣಸಂಚ ಶಿವಯೋಗಿ ಅಜಗಣ್ಣದೇವನು.

೩

ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು. ಮೂಗನ ಕಯ್ಯಲ್ಲಿ ಕಾವ್ಯವ ಕೇಳಿದಂತಿರಬೇಕು. ದರ್ಪಣದೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು ಅಣ್ಣಾ. ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ ಅರೂಢಗೆಟ್ಟೆಯೊ ಅಜಗಣ್ಣಾ.

೪

ನುಡಿಯ ಹಂಗಿನ್ನೂ ನಿಮಗೆ ಹಿಂಗದು. ನಡೆಯನೆಂತು ಪರರಿಗೆ ಹೇಳುವಿರಿ? ಒಡಲ ಹಂಗಿನ ಸುಳುಹು ಬಿಡದು; ಎನ್ನೊಡನೆ ಮತ್ತೇತರನುಭವವಣ್ಣಾ? ತಾನಾದಲ್ಲದೆ ಇದಿರಿಂಗೆ ಹೇಳಬಹುದೆ? ಅರಿವ ತೋರಬಲ್ಲರೆ, ತನ್ನನರುಹದೆ ಅರಿವನು ಕಾಣಾ ಎನ್ನ ಅಜಗಣ್ಣತಂದೆ.

೫

ನುಡಿಯೆನೆಂಬಲ್ಲಿಯೆ ನುಡಿಯದೆ. ನಡೆಯೆನೆಂಬಲ್ಲಿಯೆ ನಡೆಯದೆ. ಭಾವಿಸೆನೆಂಬಲ್ಲಿಯೆ ಭಾವವದೆ. ಅರಿದು ಮರೆದೆನೆಂದಲ್ಲಿಯೆ ಅರಿವು ಮರವೆಯದೆ. ಅಂಗದಲ್ಲಿ ಲಿಂಗ ಲೀಯವಾಯಿತ್ತೆಂದರೆ, ಅಲ್ಲಿಯೆ ಅಂಗವದೆ. ಅನಂಗಸಂಗಿಯಾದೆನೆಂಬಲ್ಲಿಯೆ ವಿಷಯಸೂತಕವದೆ. ನಾನೆ ನಾನಾದೆನೆಂಬಲ್ಲಿ ನೀನೆಂಬುದದೆ. ಅರಿದು ಮರೆದ ಪರಿ ಎಂತು ಹೇಳಾ? ಅರಿವು ನಷ್ಟವಾಗಿ ಮರಹು ಲಯವಾಗಿಪ್ಪರೆ, ಎನ್ನ ಅಜಗಣ್ಣ ತಂದೆಯಲ್ಲದೆ ಮತ್ತಾರನು ಕಾಣೆ.

೬

ಅಂಬರದಲಾಡುವ ತುಂಬಿಯ ಬಿಂಬವ, ಕಂಬನಿಯೊಳಗಣ ರತ್ನದ ಬಯಕೆಯನಾದ್ಯಂತವನೇನೆಂಬೆನಯ್ಯಾ? ವೇದ ಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಸಲರಿಯವು. ನಾದವಲ್ಲ, ಸುನಾದದ ನಿಲವಲ್ಲ. ಭೇದಿಸುವರೆ ಅಗಮ್ಯ ನೋಡಾ! ಸೊಲ್ಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು? ಎಂತು ಮರೆವೆನಯ್ಯಾ ಎನ್ನ ಅಜಗಣ್ಣ ತಂದೆಯನು?

೨. ಅಲ್ಲಮಪ್ರಭು

೭

ಹರನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ, ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು. ಶಿವಗಣ ಪ್ರಮಥಗಣಂಗಳೆಂಬ ಮಹಾಮಹಿಮರ ಸುಳುಹು ಧರೆಯ ಮೇಲೆ ಕಾಣಬಂದಿತ್ತು ನೋಡಯ್ಯಾ. ಪರುಷವ ಸಾಧಿಸಿದಂತಾಯಿತ್ತು ನಿಮ್ಮ ಶರಣರ ಸಂಗದಿಂದ. ಎನ್ನ ನಂದಿಯ ಮೊಗವಾಡ, ನೊಸಲ ಕಣ್ಣೆಂಬ ಅಹಂಕಾರವ ಮುಂದುಗೊಂಡಿರ್ದೆನಯ್ಯಾ. ಎನ್ನ ಮದ ಉಡುಗಿ ಸಂಗನಬಸವಣ್ಣನ ಕರುಣದಿಂದ

ಪ್ರಭುದೇವರ ನಿರಾಳವ ಕಂಡು ಬದುಕಿದೆನು ಕಾಣಾ ನಿಜಗುರು ಶಂಕರ ದೇವಾ.

೮

ಎನ್ನ ಕಾಯದ ಕಳವಳವ ನಿಲಿಸಿ, ಗುರುಲಿಂಗವ ತೋರಿದ. ಎನ್ನ ಮನದ ವ್ಯಾಕುಳವ ನಿಲಿಸಿ, ಜಂಗಮವ ತೋರಿದ. ಇಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ ಎನ್ನ ಪಾವನವ ಮಾಡಿದನು. ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೊಯ್ದರೆ, ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ ಸಂಗನಬಸವಣ್ಣನೆ ಗುರುವೆನಗೆ. ಸಂಗನ ಬಸವಣ್ಣನೆ ಪರವೆನಗೆ. ಸಂಗನಬಸವಣ್ಣನ ಕರುಣದಿಂದ ಘನಕ್ಕೆ ಘನ ಮಹಿಮ ಅಲ್ಲಮಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ ಗೌರೇಶ್ವರಾ.

೯

ಆಸೆಯಾಮಿಷವಳಿದು, ಹುಸಿವಿಷಯಂಗಳೆಲ್ಲಾ ಹಿಂಗಿ, ಸಂಶಯ ಸಂಬಂಧವಾಯಿತ್ತು ನೋಡಾ. ಎನ್ನ ಮನದೊಳಗೆ ಘನಪರಿಣಾಮವ ಕಂಡು ಮನ ಮಗ್ನವಾಯಿತ್ತಯ್ಯಾ. ಅಭಿನವಮಲ್ಲಿಕಾರ್ಜುನಾ, ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನು!

೧೦

ಕಷ್ಟಕುಲದಲ್ಲಿ ಹುಟ್ಟಿದ ಕರ್ಮವ ಕಳೆದು, ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ. ಆ ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ. ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ. ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ. ಎನ್ನ ಅರಿವಿನಲ್ಲಿ ಪ್ರಸಾದವ ನೆಲೆಗೊಳಿಸಿದ. ಇಂತೀ ತ್ರಿವಿಧಸ್ಥಾನವ ಶುದ್ಧವ ಮಾಡಿದ ಬಸವಣ್ಣನ ಕರುಣದಿಂದ ಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ ಅಭಿನವಮಲ್ಲಿಕಾರ್ಜುನಾ!

೧೧

ಅರಿಯದೆ ಮರಹಿಂದ ಭವದಲ್ಲಿ ಬಂದೆನಲ್ಲದೆ, ಇನ್ನು ಅರಿದ ಬಳಿಕ ಬಳಲಲುಂಟೆ? ಹೃದಯಕಮಲಮಧ್ಯದಲ್ಲಿ ನಿಜವು ನೆಲೆಗೊಂಡ ಬಳಿಕ ಪುಣ್ಯಪಾಪವೆಂಬಿವಕ್ಕೆ ಹೊರಗಾದೆನು. ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ ಬಸವಣ್ಣಪ್ರಿಯ ಚೆನ್ನಸಂಗಯ್ಯಾ.

೧೨

ಲೋಕಾಂತವಳಿದು ಏಕಾಂತ ಉಳಿದಲ್ಲಿ, ಏಕೈಕಮೂರ್ತಿಯ ಸಂಗ ಸಮನಿಸಿತ್ತೆನಗೆ. ಎನ್ನ ನುಡಿ ಆತನ ಕಿವಿಗಿನಿದಾಯಿತ್ತು. ಆತನ ನುಡಿ ಎನ್ನ ಕಿವಿಗೆ ಇನಿದಾಯಿತ್ತು. ಇಬ್ಬರ ನುಡಿಯು ಒಂದೆಯಾಗಿ ನಿಶ್ಶಬ್ದ ವೇಧಿಸಿತ್ತು. ಈ ಸುಖದ ಸೋಂಕಿನ ಪುಣ್ಯದ ಫಲದಿಂದ ಅನುಪಮಚರಿತ್ರ ಅಲ್ಲಮಪ್ರಭುದೇವರ ನಿಲವ ಕಂಡು ನಾನು ಧನ್ಯನಾದೆನು ಕಾಣಾ ಏಕಾಂತ ವೀರ ಸೊಡ್ಡಳಾ.

೧೩

ಕೂರ್ಮನ ಶಿಶುವಿನ ಸ್ನೇಹದಂತಿಪ್ಪ ದೇವನೆನಗಿಂದು ಪ್ರತ್ಯಕ್ಷ ಕಣ್ಣ ಮುಂದೆ ಗೋಚರವಾದ ನೋಡಾ! ಎನ್ನಂತರಂಗದಲ್ಲಿ ಹೂಣಿ ಹೊಕ್ಕು ವಿನಯ ಸದ್ಗೋಷ್ಠಿಯ ಮಾಡುವ ನಿಃಕಳಂಕ ಚೈತನ್ಯನು ಸಕಲರೂಪು ಸನ್ನಿಹಿತನಾದ ನೋಡಾ! ಬಟ್ಟಬಯಲು ಗಟ್ಟಿಗೊಂಡಂತೆ, ಏಕಾಂತವೀರ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರ ನಿಲವು.

೧೪

ಸಿಂಬಿಗೆ ರಂಭೆತನ ಉಂಟೆ? ಸಂಭ್ರಮವಳಿದುದಕ್ಕೆ ನವರಸದಂಗದ ಕಳೆಯುಂಟೆ? ಡಿಂಗರಿಗಂಗೆ ಸಮವೆಂಬ ಸಂಭ್ರಮ ಉಂಟೆ? ಪರುಷದ ದೆಸೆಯಿಂದ ಪಾಷಾಣದ ಕುಲ ಹರಿವಂತೆ ನೀ ಬಂದೆಯಲ್ಲಾ! ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ, ಪ್ರಭುದೇವರ ಕಾರುಣ್ಯದಿಂದ ಬದುಕಿದೆ!

೧೫

ಎನಗೆ ಹರಿಯಿತ್ತು, ತಮವೆಂಬ ಸಂಸಾರದ ಬಂಧ. ಅಡಗಿ ಉಡುಗಿ ಕಂಡೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು. ನಿತ್ಯ ನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ, ಪ್ರಭುದೇವರ ಕಾರುಣ್ಯದಿಂದ ಬದುಕಿದೆನು?

೧೬

ಬೆಟ್ಟವ ನೆಮ್ಮಿ ಕಟ್ಟಿಗೆಯ ತಳ್ಳುವುದು ಅದಾವಚ್ಚರಿ? ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವುದು ಅದಾವಚ್ಚರಿ? ಪರಕಾಯವ ತೊಟ್ಟದ್ದಲ್ಲಿ ಅಚ್ಚರಿ ಅತಿ ಬಿರಿದೆ? ನಿಮ್ಮುವ ಕಾರುಣ್ಯವಾಗಿದ್ದಲ್ಲಿ ಎನಗೆಲ್ಲಿಯು ಸುಖ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ, ಪ್ರಭುದೇವರಿಂದ ಬದುಕಿದೆ!

೧೭

ಸ್ಥೂಲ ಕಂಥೆ, ಸೂಕ್ಷ್ಮ ಟೊಪ್ಪರ, ಸತ್ಯ ದಂಡ, ಶಾಂತಿ ಭಸಿತ, ಸುಚಿತ್ತ ಮಣಿ, ತತ್ವ ಕರ್ಪುರ, ವೈರಾಗ್ಯ ಹಾವುಗೆ, ಮನದೃಢವೇ ಕೌಪೀನ, ಆಚಾರವೇ ಕಂಕಣ, ಕ್ಷಮೆ ದಯೆಯೇ ಕರ್ಣಕುಂಡಲ. ಇಂತೀ ವೆರಸಿ ಸುಳಿವನು, ಜಗತ್ಪಾವನ ಮಾಡಲೆಂದು, ತನ್ನ ಒಲುಮೆಯ ಶರಣರಿಗೆ ನಿಜಸುಖವನೀಯಲೆಂದು. ಕಲಿದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದವ ಕಂಡು ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನು.

೧೮

ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು; ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು; ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು; ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು; ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಇಂತೀ ಪಂಚೇಂದ್ರಿಯಗಳಲ್ಲಿ ಬ್ರಹ್ಮ

ಚಾರಿಯಾಗಿ ಕೂಡಲಸಂಗಮದೇವರಲ್ಲಿ ಎನ್ನನಾಗುಮಾಡಲಿಕೆ ಬ್ರಹ್ಮಚಾರಿಯಾದನು ಪ್ರಭುದೇವರು.

೧೯

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ, ಬೆರಸಿಯಲ್ಲದೆ ಅಗಲಿ ಸೈರಿಸಲಾರೆನಯ್ಯಾ! ತ್ರಾಹಿ ತ್ರಾಹಿ! ಘನಮಹಿಮ ನಿಮ್ಮ ಪಾದಾರ್ಚನೆಗೆ ಪರಮಾನಂದ ಜಲವ ತುಂಬುವೆನಯ್ಯಾ. ಪೂಜೆಯ ಮಾಡುವರೆ ಎನ್ನ ಹೃದಯಕಮಳವನರ್ಚಿಸುವೆ ; ಆ ರತಿಯಿಂದ ಆರತಿಯನೆತ್ತುವೆ ; ಎನ್ನ ಮಹಾಪ್ರಕಾಶದ ಧೂಪವ ಬೀಸುವೆ ; ಎನ್ನ ಸ್ವಾನುಭಾವದ ಗಂಧವನೀವೆ. ಈ ತೆರನಲ್ಲದೆ ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದಕ್ಕೆ ತೆರಹ ಕಾಣೆನಯ್ಯಾ. ಕೂಡಲಸಂಗಮದೇವಾ, ಪ್ರಭುವೆನ್ನ ಪ್ರಾಣಲಿಂಗವೆಂಬುದು ಎನಗಿಂದು ಕಾಣಬಂದಿತ್ತು ನೋಡಾ ಅಯ್ಯಾ.

೨೦

ಅಹುದಹುದು, ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು. ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ, ಉರಿಯೊಳಗಡಗಿದ ಕರ್ಪುರದಂತೆ, ಬಯಲನಪ್ಪಿದ ವಾಯುವಿನಂತೆ ಇಪ್ಪ ನಿಲವ ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ? ಅರಿವಡೆ ಮತಿಯಿಲ್ಲ, ನೆನೆವರೆ ಮನವಿಲ್ಲ. ಎನ್ನ ಅಜಗಣ್ಣತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು.

೨೧

ನೀರೊಳಗೆ ಕಿಚ್ಚೆದ್ದು ಸುಟ್ಟಿತ್ತು. ನೆಳಲ ಸುಟ್ಟ ವಿಭೂತಿಯನಿಟ್ಟುಕೊಂಡರೆ ಭೂಮಿ ಸತ್ತಿತ್ತು. ಆಕಾಶ ಹೊತ್ತಿತ್ತು. ದೇವನ ದೇವತ್ವ ಕೆಟ್ಟಿತ್ತು. ದೇವಿಯ ಒಕತನ ಮುರಿಯಿತ್ತು. ಹೇಳಬಾರದ ಠಾವಿನಲ್ಲಿ ಕಾಣಬಾರದ ಲಿಂಗ ಮೂರ್ತಿಗೊಂಡಡೆ, ನೋಡಬಾರದ ಪೂಜೆಯಾಯಿತ್ತು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಪ್ರಭುದೇವರ ನಿಲವ ಕಂಡು ಇಲ್ಲ ಇಲ್ಲಾ ಎನುತಿರ್ದೆನು.

೩. ಬಸವಣ್ಣ

೨೨

ಆದಿಯಾಧಾರವಿಲ್ಲದ ಮುನ್ನ, ನಾದಬಿಂದುಕಳೆಗಳಿಲ್ಲದ ಮುನ್ನ, ಭೇದಾಭೇದ ಬ್ರಹ್ಮಾಂಡಕೋಟಿಗಳಿಲ್ಲದ ಮುನ್ನ ಬಸವನೆಂಬ ಬೀಜದ ಮಧ್ಯದಲ್ಲಿ ಲಿಂಗವೆಂಬ ಅಂಕುರ ಉದಯವಾಯಿತ್ತು. ಆ ಲಿಂಗಾಂಕುರವೆ ಸಕಲ ತತ್ವತೋರಿಕೆಯೆಂಬ ಶಾಖೆ ಪರ್ಣಂಗಳು ಪಸರಿಸಿ, ವೃಕ್ಷ ಪಲ್ಲವಿಸಿತ್ತು. ಇಂತಪ್ಪ ಚಿದ್‌ಬ್ರಹ್ಮವೃಕ್ಷವೆಂಬ ಪರಮಗುರುಸಂಗನ ಬಸವಣ್ಣನ ಶ್ರೀಪಾದಕಮಲದಲ್ಲಿ ಭ್ರಮರನಾಗಿರಿಸಯ್ಯಾ ಎನ್ನ ಅಖಂಡೇಶ್ವರಾ.

೨೩

ಬೀಜದೊಳಗೆ ಅಂಕುರವಿರ್ಪುದು; ಅಂಕುರದೊಳಗೆ ಬೀಜವಿರ್ಪುದು. ಅಂಕುರ ಬೀಜವೆಂದು ಹೆಸರು ಎರಡಾದಡೇನು? ಒಳಗಿರ್ಪ ಸಾರವು ಒಂದೇ ಆಗಿರ್ಪಂತೆ ಬಸವಣ್ಣನೆ ಶಿವನು; ಶಿವನೆ ಬಸವಣ್ಣನು. ಬಸವಣ್ಣ ಶಿವನೆಂಬ ಹೆಸರೆರಡಾದಡೇನು? ಅಖಂಡ ವಸ್ತು ಒಂದೇ ಆದ ಕಾರಣ, ನಿಮ್ಮ ಅಖಂಡೇಶ್ವರನೆಂದು ಹೆಸರಿಟ್ಟು ಕರೆದೆನಯ್ಯಾ ದೇವರ ದೇವಾ.

೨೪

ಬಸವನ ನಾಮವು ಕಾಮಧೇನು ಕಾಣಿರೊ. ಬಸವನ ನಾಮವು ಕಲ್ಪವೃಕ್ಷ ಕಾಣಿರೊ. ಬಸವನ ನಾಮವು ಚಿಂತಾಮಣಿ ಕಾಣಿರೊ. ಬಸವನ ನಾಮವು ಪರುಷದ ಖಣಿ ಕಾಣಿರೊ. ಬಸವನ ನಾಮವು ಸಂಜೀವನ ಮೂಲಿಕೆ ಕಾಣಿರೊ. ಇಂತಪ್ಪ ಬಸವನಾಮಾಮೃತವು ಎನ್ನ ಜಿಹ್ವೆಯ ತುಂಬಿ ಹೊರಸೂಸಿ ಮನವ ತುಂಬಿತ್ತು. ಆ ಮನವ ತುಂಬಿ ಹೊರಸೂಸಿ ಭಾವವ ತುಂಬಿತ್ತು. ಆ ಭಾವವ ತುಂಬಿ ಹೊರಸೂಸಿ ಸಕಲ ಕರಣೇಂದ್ರಿಯಂಗಳ ತುಂಬಿತ್ತು. ಆ ಸಕಲ ಕರಣೇಂದ್ರಿಯಂಗಳ ತುಂಬಿ ಹೊರಸೂಸಿ ಸರ್ವಾಂಗದ ರೋಮಕುಳಿಗಳನೆಲ್ಲ ವೇಧಿಸಿತ್ತಾಗಿ, ನಾನು ಬಸವಾಕ್ಷರವೆಂಬ

ಹಡಗವನೇರಿ ಬಸವ ಬಸವ ಬಸವಾ ಎಂದು ಭವಸಾಗರವ ದಾಟಿದೆನಯ್ಯಾ ಅಖಂಡೇಶ್ವರಾ.

೨೫

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದರೆ, ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲ ಪಸರಿಸಿತಯ್ಯಾ. ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರೊ ಅಣ್ಣಾ? ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ! ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ! ನಿಮ್ಮೊಡನೆ ಅಸಂಖ್ಯಾತರು ಹೋದರು ಅಣ್ಣಾ! ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ! ಎನ್ನನೊಯ್ಯದೆ ಹೋದೆಯಲ್ಲಾ, ಪಂಚ ಪರುಷ ಮೂರುತಿ ಬಸವಣ್ಣಾ! ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ ಪ್ರಾಣ ಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ!

೨೬

ಎನ್ನ ಕುಲಸೂತಕವನಳಿದ ಬಸವಣ್ಣ. ಎನ್ನ ಛಲಸೂತಕವ ಕಳೆದ ಬಸವಣ್ಣ. ಎನ್ನ ತನುಸೂತಕವ ಕಳೆದ ಬಸವಣ್ಣ. ಎನ್ನ ಮನಸೂತಕವ ಕಳೆದ ಬಸವಣ್ಣ. ಎನ್ನ ಪ್ರಾಣಸೂತಕವ ಕಳೆದ ಬಸವಣ್ಣ. ಎನ್ನ ಭಾವ ಸೂತಕವ ಕಳೆದ ಬಸವಣ್ಣ. ಎನ್ನರಿವು ಮರಹಿನ ಸಂದ ಬಿಡಿಸಿದ ಬಸವಣ್ಣ. ಎನ್ನ ತನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ. ತನ್ನ ಎನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ. ನಿಜ ನಿರ್ವಯಲ ಸಮಾಧಿಯ ನಿಜವಾಸದ ಬಾಗಿಲ ತೋರಿದ ಬಸವಣ್ಣ. ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ ಸಯ ವಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು.

೨೭

ಆಚಾರವೆಂಬುದು ಅಗೋಚರ ನೋಡಯ್ಯಾ; ಆರಿಗೆಯೂ ಸಾಧ್ಯ ವಲ್ಲ. ಮರ್ತ್ಯಲೋಕದಲ್ಲಿ ಸದಾಚಾರವ ಬೆಳವಿಗೆಯ ಮಾಡಲೆಂದು ಬಸ ವಣ್ಣ ಬಂದು ಭಕ್ತಿಸ್ಥಲವನರುಹಿದನು. ಗುರುಲಿಂಗಜಂಗಮದಾಸೋಹ

ಪ್ರಸಾದಪಾದೋದಕದ ಹಾದಿಯನೆಲ್ಲರಿಗೆ ತೋರಿದ. ಶಿವಾಚಾರದ ಬೆಳವಿಗೆಯನಹುದಲ್ಲವೆಂದು ಬಿಜ್ಜಳ ತರ್ಕಿಸಲು, ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ. ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಬಗಿದು ಹೊಕ್ಕಡೆ, ಹಿಂದೆ ಲೋಕವರಿದು ಬದುಕಬೇಕೆಂದು ಸೆರಗ ಕೊಟ್ಟನು. ನಾನು ಹಿಂದುಳಿದಹಳೆಂದು ಮುಂದಣಗತಿಯ ತೋರಿ, ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ ತನ್ನ ಪ್ರಸನ್ನದೊಳಗೆ ಇಂಬಿಟ್ಟು ಕೊಂಡನು, ಎನ್ನ ಹೆತ್ತ ತಂದೆ ಸಂಗನಬಸವಣ್ಣನು.

೨೮

ಇಂದು ಬಂದ ಬಹುರೂಪವ ನೋಡಿರಯ್ಯಾ. ಗತಿಯ ಹೊದ್ದದೆ, ಮತಿಯ ಹೊದ್ದದೆ, ಸ್ಥಿತಿಯ ಹೊದ್ದದೆ, ಸ್ಥಾನವ ಹೊದ್ದದೆ, ಐವರು ಕಟ್ಟಿದ ಕಟ್ಟಳೆಯ ಮೀರಿ ನಾನಾಡುವೆ ಬಹುರೂಪ. ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿದೆನು.

೨೯

ಸರದೊಳಗೆ ಸರಗಟ್ಟಿ ಸರ ಹರಿದವ ನಾನಯ್ಯಾ. ಮಹದಲ್ಲಿ ಮನೆ ಗಟ್ಟಿ ಮನೆ ಬೆಂದವ ನಾನಯ್ಯಾ. ಕಿಚ್ಚಿನೊಳಗೆ ಕಿಚ್ಚನೊಟ್ಟಿ ಕಾದವ ನಾನಯ್ಯಾ. ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯಾ. ಬಸವಣ್ಣನು ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ. ಸೂಕ್ಷ್ಮನಾಗಿ ಹೋದೆ ನಾ, ಬಸವಣ್ಣನಿಂದ ಕೆಟ್ಟೆ ಕಾಣಾ. ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕುತ್ತೀ ಲೋಕವೆಲ್ಲಾ !

೩೦

ಇನ್ನಾಡುವೆ ಜಂಗಮರೂಪ ಅಲ್ಲಮನಂತೆ. ಆಡುವೆ ಬಹುರೂಪ ಅಜಗಣ್ಣನಂತೆ. ಆಡುವೆ ಬಹುರೂಪ ಮುಖವಾಡದಯ್ಯಗಳಂತೆ. ಆಡುವೆ ಬಹುರೂಪ ಪುರುಷಾಂಗಣ ಮೆಟ್ಟಿ, ಆಡುವೆ ಬಹುರೂಪ. ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕುತ್ತೀ ಲೋಕವೆಲ್ಲಾ !

೩೧

ಭಕ್ತರ ಭಾವದಲ್ಲಿ ಸುಳಿವ ಸುಳುಹು, ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ! ಸೂರ್ಯನ ಬೆಳಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ, ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ. ಅಮರೇಶ್ವರಲಿಂಗದ ಒಡಲು ಸಂಗನಬಸವಣ್ಣನೆಂಬುದನು ಮಡಿವಾಳ ಮಾಚಿತಂದೆಗಳೆ ಬಲ್ಲರು ಕಾಣಾ ಸಂಗನಬಸವಣ್ಣಾ.

೩೨

ಹಮ್ಮುಬಿಮ್ಮಳಿದ ಅನವರತ ಶಿವ ನೀನು! ಎನ್ನ ಕರಸ್ಥಲದ ಕಳೆ ನೀನು! ಎನ್ನ ಮನೋಮಧ್ಯದ ಸ್ವಯಂಜ್ಯೋತಿ ನೀನು! ಅಮರೇಶ್ವರ ಲಿಂಗದ ಅನುವಿನ ಕಳೆ ನೀನು ಸಂಗನಬಸವಣ್ಣಾ !!

೩೩

ಮಾರಾರಿಯ ಬೆಸನದಿಂದ ಬಸವಣ್ಣ ಧಾರುಣಿಗೆ ಅವತರಿಸಿ, ಸಾರಾಯ ಸದ್ಭಕ್ತಿಯ ತೋರಿದನು ಶಿವಶರಣರೆಲ್ಲರಿಗೆ. ಭಕ್ತಿಯ ಸಂಚವ ಮುಕ್ತಿಯ ಭೇದವನುಪದೇಶಿಸಿದನು ಬಸವಣ್ಣ ಶಿವಶರಣರೆಲ್ಲರಿಗೆ. ನಿತ್ಯ ಲಿಂಗಾರ್ಚನೆಯೊಳಗೆ ಎನ್ನನಿರಿಸಿ ರಕ್ಷಿಸಿದಾತ ಬಸವಣ್ಣ ಕಾಣಾ ಕಲಿದೇವಯ್ಯಾ.

೩೪

ಮಾಡುವಾತ ಗುರುವಯ್ಯ. ಮಾಡಿಸಿಕೊಂಬಾತ ಭಕ್ತನಯ್ಯ. ಮಾಡುವ ಮಾಡಿಸಿಕೊಂಬುವೆರಡರ ಚೈತನ್ಯವೇ ಲಿಂಗವಯ್ಯ. ಸಂಗನ ಬಸವಣ್ಣನು ಸ್ಥೂಲವ ನಿಃಕರಿಸಿ, ಸೂಕ್ಷ್ಮವ ಕರಸ್ಥಲದಲ್ಲಿ ಅನುಕರಿಸಿ ತೋರಿದನು. ಆ ಬಸವಣ್ಣನ ನಿಲವ ನೆನೆದು ಬದುಕಿದೆನು ಕಾಣಾ ಕಲಿ ದೇವರದೇವಾ.

೩೫

ಗುರು ಸ್ವಾಯತವಾಯಿತ್ತು. ಎಂಟು ಭಾವ ಸ್ವಾಯತವಾಯಿತ್ತು. ಹದಿನಾರು ತೆರದ ಭಕ್ತಿ ಸ್ವಾಯತವಾಯಿತ್ತು. ಅಷ್ಟವಿಧಾರ್ಚನೆ ಸ್ವಾಯತವಾಯಿತ್ತು. ತ್ರಿವಿಧದರಿವು ಸ್ವಾಯತವಾಯಿತ್ತು. ಮಹಾಲಿಂಗದ ನಿಲವು ಮಹಾಜಂಗಮದ ನಿಜವು ಸ್ವಾಯತವಾಯಿತ್ತು. ಶುದ್ಧಪ್ರಸಾದದ ತನು ಸ್ವಾಯತವಾಯಿತ್ತು. ಸಿದ್ಧಪ್ರಸಾದ ಚೈತನ್ಯ ಸ್ವಾಯತವಾಯಿತ್ತು. ಪ್ರಸಿದ್ಧಪ್ರಸಾದ ಮನ ಸ್ವಾಯತವಾಯಿತ್ತು. ವಾಮಭಾಗದಲ್ಲಿ ಮಹವು ಉದಯವಾಯಿತ್ತು. ಶಿವಾಚಾರದಲ್ಲಿ ನಿರವಯ ಉದಯವಾಯಿತ್ತು. ನಿಜಸ್ಥಾನದಲ್ಲಿ ನಿಂದಿತ್ತು. ಕ್ಷೀರಸ್ಥಾನದಲ್ಲಿ ಸಾರಾಯವಾಯಿತ್ತು. ಅನುಭಾವದಲ್ಲಿ ಘನಾಗಮವೆನಿಸಿತ್ತು. ಸ್ವಾನುಭವದಲ್ಲಿ ನಿಮ್ಮ ಬಸವಣ್ಣಂಗೆ ಶರಣೆಂದಿತ್ತು. ನೆಮ್ಮುಗೆವಿಡಿದು ನಿಮ್ಮ ಬಸವಣ್ಣನ ಪ್ರಸಾದವ ಕೊಂಡಿತ್ತು. ನಿಮ್ಮ ಬಸವಣ್ಣನ ಪ್ರಸಾದದಿಂದ ಇಂತಹ ಘನವು ಸ್ವಾಯತವಾಯಿತ್ತು. ಬಸವಣ್ಣನಿಂದ ನೀವಾದಿರಾಗಿ—ಕಲಿದೇವ, ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೩೬

ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ. ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದಾತ ಬಸವಣ್ಣ. ಎನ್ನ ಕಾರಣತನುವಿಂಗೆ ಭಾವಲಿಂಗವಾದಾತ ಬಸವಣ್ಣ. ಎನ್ನ ದೃಕ್ಕಿಂಗೆ ಇಷ್ಟಲಿಂಗವಾದಾತ ಬಸವಣ್ಣ. ಎನ್ನ ಮನಕ್ಕೆ ಪ್ರಾಣಲಿಂಗವಾದಾತ ಬಸವಣ್ಣ. ಎನ್ನ ಭಾವಕ್ಕೆ ತೃಪ್ತಿಲಿಂಗವಾದಾತ ಬಸವಣ್ಣ. ಎನ್ನ ನಾಸಿಕಕ್ಕೆ ಆಚಾರಲಿಂಗವಾದಾತ ಬಸವಣ್ಣ. ಎನ್ನ ಜಿಹ್ವೆಗೆ ಗುರುಲಿಂಗವಾದಾತ ಬಸವಣ್ಣ. ಎನ್ನ ನೇತ್ರಕ್ಕೆ ಶಿವಲಿಂಗವಾದಾತ ಬಸವಣ್ಣ. ಎನ್ನ ತ್ವಕ್ಕಿಂಗೆ ಜಂಗಮಲಿಂಗವಾದಾತ ಬಸವಣ್ಣ. ಎನ್ನ ಶ್ರೋತ್ರಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ. ಎನ್ನ ಹೃದಯಕ್ಕೆ ಮಹಾಲಿಂಗವಾದಾತ ಬಸವಣ್ಣ. ಎನ್ನ ಸುಚಿತ್ತೆಂಬ ಹಸ್ತಕ್ಕೆ ಆಚಾರಲಿಂಗವಾದಾತ ಬಸವಣ್ಣ. ಎನ್ನ ಸುಬುದ್ಧಿಯೆಂಬ ಹಸ್ತಕ್ಕೆ ಗುರುಲಿಂಗವಾದಾತ ಬಸವಣ್ಣ. ಎನ್ನ ನಿರಹಂಕಾರವೆಂಬ ಹಸ್ತಕ್ಕೆ ಶಿವಲಿಂಗ

ವಾದಾತ ಬಸವಣ್ಣ. ಎನ್ನ ಸುಮನವೆಂಬ ಹಸ್ತಕ್ಕೆ ಜಂಗಮಲಿಂಗವಾದಾತ ಬಸವಣ್ಣ. ಎನ್ನ ಸುಜ್ಞಾನವೆಂಬ ಹಸ್ತಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ. ಎನ್ನ ಸದ್ಭಾವವೆಂಬ ಹಸ್ತಕ್ಕೆ ಮಹಾಲಿಂಗವಾದಾತ ಬಸವಣ್ಣ. ಎನ್ನ ಆಧಾರಚಕ್ರದಲ್ಲಿ ಆಚಾರಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಗುರುಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಮಣಿಪೂರಕ ಚಕ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಅನಾಹತಚಕ್ರದಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡಾತ ಬಸವಣ. ಎನ್ನ ವಿಶುದ್ಧಿಚಕ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಆಜ್ಞಾಚಕ್ರದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಬ್ರಹ್ಮರಂಧ್ರದಲ್ಲಿ ನಿಷ್ಕಲಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ಪಶ್ಚಿಮ ಚಕ್ರದಲ್ಲಿ ನಿರಂಜನಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ. ಎನ್ನ ವದನಕ್ಕೆ ಓಂಕಾರವಾದಾತ ಬಸವಣ್ಣ. ಎನ್ನ ಬಲದ ಭುಜಕ್ಕೆ ನಕಾರವಾದಾತ ಬಸವಣ್ಣ. ಎನ್ನ ಎಡದ ಭುಜಕ್ಕೆ ಮಕಾರವಾದಾತ ಬಸವಣ್ಣ. ಎನ್ನ ಒಡಲಿಂಗೆ ಶಿಕಾರವಾದಾತ ಬಸವಣ್ಣ. ಎನ್ನ ಬಲದ ಪಾದಕ್ಕೆ ವಕಾರವಾದಾತ ಬಸವಣ್ಣ. ಎನ್ನ ಎಡದ ಪಾದಕ್ಕೆ ಯಕಾರವಾದಾತ ಬಸವಣ್ಣ. ಎನ್ನ ಆಪಾದಮಸ್ತಕ ಪರಿಯಂತರ ಮಾತ್ರರೂಪ ಸಂಬಧವಾದಾತ ಬಸವಣ್ಣ. ಎನ್ನ ನಾದಕ್ಕೆ ಅಕಾರವಾದಾತ ಬಸವಣ್ಣ. ಎನ್ನ ಬಿಂದುವಿಂಗೆ ಉಕಾರವಾದಾತ ಬಸವಣ್ಣ. ಎನ್ನ ಕಳೆಗೆ ಮಕಾರವಾದಾತ ಬಸವಣ್ಣ. ಎನ್ನ ರುಧಿರಕ್ಕೆ ನಕಾರವಾದಾತ ಬಸವಣ್ಣ. ಎನ್ನ ಮಾಂಸಕ್ಕೆ ಮಕಾರವಾದಾತ ಬಸವಣ್ಣ. ಎನ್ನ ಮೇಧಸ್ಸಿಂಗೆ ಶಿಕಾರವಾದಾತ ಬಸವಣ್ಣ. ಎನ್ನ ಅಸ್ಥಿಗೆ ವಕಾರವಾದಾತ ಬಸವಣ್ಣ. ಎನ್ನ ಮಜ್ಜೆಗೆ ಯಕಾರವಾದಾತ ಬಸವಣ್ಣ. ಎನ್ನ ಸರ್ವಾಂಗಕ್ಕೆ ಓಂಕಾರವಾದಾತ ಬಸವಣ್ಣ. ಇಂತು ಬಸವಣ್ಣನೇ ಪರಿಪೂರ್ಣನಾಗಿ, ಬಸವಣ್ಣನೇ ಪ್ರಾಣವಾಗಿ, ಬಸವಣ್ಣನೇ ಅಂಗವಾಗಿ, ಬಸವಣ್ಣನೇ ಲಿಂಗವಾಗಿದ್ದ ಕಾರಣ, ನಾನು ಬಸವಣ್ಣ ಬಸವಣ್ಣ ಎಂದು ಬಯಲಾದೆನು ಕಾಣಾ ಕಲಿದೇವರ ದೇವಾ.

೩೭

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ. ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು. ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯ. ಆಯತವು ಸ್ವಾಯತವು ಸನ್ನಿಹಿತವು ಬಸವಣ್ಣನಿಂದ. ಇದ ಬಲ್ಲರೆ ನೀವು ಹೇಳಿರೇ, ಇತ್ತ ಬಲ್ಲರೆ ನೀವು ಕೇಳಿರೇ. ಬಸವಾ ಬಸವಾ ಎಂದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವಾ.

೩೮

ಶಬ್ದ ಸ್ಪರ್ಶ ರೂಪು ರಸ ಗಂಧ ವಿಷಯಸಂಗತಿಗಳಾವಾವೆಂದಡೆ: ಶಬ್ದ ಗುರು, ಸ್ಪರ್ಶ ಲಿಂಗ, ರೂಪು ಶಿವಲಾಂಛನ, ರಸ ಶಿವಪ್ರಸಾದ, ಗಂಧ ಶಿವಾನುಭವ. ಇಂತಿವನರಿದು ಮಾಡಬಲ್ಲ ನಮ್ಮ ಬಸವಣ್ಣನು. ಮನ ಬುದ್ಧಿ ಚಿತ್ತ ಅಹಂಕಾರಂಗಳಾವಾವೆಂದಡೆ: ಮನ ಧ್ಯಾನ, ಬುದ್ಧಿ ವಂಚನೆ ಇಲ್ಲದಿಹುದು. ಚಿತ್ತ ದಾಸೋಹ, ಅಹಂಕಾರ ಶಿವಜ್ಞಾನ. ಇಂತಿವರಲ್ಲಿ ಸನ್ನಿಹಿತನು ಬಸವಣ್ಣನು. ಸತ್ವ ರಜ ತಮಂಗಳಾವಾವೆಂದಡೆ: ಸತ್ವ ಶುದ್ಧ, ರಜ ಸಿದ್ಧ, ತಮ ಪ್ರಸಿದ್ಧ. ಇಂತೀ ತ್ರಿವಿಧದಲ್ಲಿ ಸಂಪನ್ನನು ಬಸವಣ್ಣನು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಾವಾವೆಂದಡೆ: ಕಾಮ ಪೂಜೆ, ಕ್ರೋಧ ಅನುಮಿಷ, ಲೋಭ ಭಕ್ತಿ, ಮೋಹ ಅಷ್ಟವಿಧಾರ್ಚನೆ, ಮದ ನಿರಹಂಕಾರಭಾವ, ಮತ್ಸರ ಭವಂನಾಸ್ತಿ. ಇಂತಿವರಲ್ಲಿ ನಿಪುಣನು ನಮ್ಮ ಬಸವಣ್ಣನು. ಮಹಾದೇವನು ನಮ್ಮ ಬಸವಣ್ಣನು. ಮಹಾಲಿಂಗವು ನಮ್ಮ ಬಸವಣ್ಣನು. ನಮ್ಮ ಬಸವಣ್ಣಂಗೆ ಮತ್ತೆ ನಾನು ಪ್ರತಿಗಾಣೆನು ಕಾಣಾ ಕಲಿದೇವರ ದೇವಾ.

೩೯

ಬಿಂದುವ ಹರಿದು, ನಾದವನತಿಗಳೆದು, ಕಳೆಯ ಬೆಳಗ ಸಾಧಿಸಿ ಅಸಾಧ್ಯಸಾಧಕನಾದೆಯಲ್ಲಾ! ಕಾಯುವ ಹೊದ್ದದೆ, ಮಾಯುವ ಸೋಂಕದೆ, ನಿರಾಳದಲ್ಲಿ ನಿಂದೆಯಲ್ಲಾ! ನೀನೆನ್ನನವಗ್ರಹಿಸಿ ಸಂದುಭೇದವಿಲ್ಲದಿಪ್ಪಲ್ಲಿ

ಹೊಗಳಲಿಂಬುಂಟೇ? ಕಲಿದೇವರ ದೇವನು ಕಾಯಗೊಂಡಿಪ್ಪುದ ನಿಮ್ಮಿಂದ ಕಂಡೆನು ಕಾಣಾ ಸಂಗನ ಬಸವಣ್ಣಾ.

೪೦

ಬಿಂದುವ ಹರಿದೆಯಲ್ಲಾ ಬಸವಣ್ಣ. ನಾದವ ಸಿಂಹಾಸನವ ಮಾಡಿಕೊಂಡೆಯಲ್ಲಾ ಬಸವಣ್ಣ. ಅಷ್ಟಗುಣಂಗಳ ನಷ್ಟವ ಮಾಡಿದೆಯಲ್ಲಾ ನಿಜಲಿಂಗ ಬಸವಯ್ಯ. ಭಕ್ತಿರೂಪುಗೆಟ್ಟು ಮತ್ತೊಂದು ರೂಪಾದೆಯಲ್ಲಾ ವಿರೂಪ ಬಸವಣ್ಣಯ್ಯ. ಶುಕ್ಲಶೋಣಿತದಿಂದಾದ ಈ ಕಾಯವೆತ್ತ ಹೋಯಿತ್ತು ಘನಲಿಂಗ ಬಸವಯ್ಯ? ಮೂರ್ತನಲ್ಲದ ಲಿಂಗವ ತೋರಿದೆಯಲ್ಲಾ ಬಸವಣ್ಣ. ಅಯೋನಿಜವಲ್ಲದ ಭಕ್ತಿಯ ಹರಹಿದೆಯಲ್ಲಾ ಬಸವಣ್ಣತಂದೆ. ಬೆಳಗನುಟ್ಟು ಬಯಲಾದನು ನಮ್ಮ ಬಸವಣ್ಣನು. ನಿರಾಕಾರವಾದನು ನಮ್ಮ ಬಸವರಾಜನು. ನಿರವಯವಾದನು ನಮ್ಮ ಬಸವದೇವನು. ನಿರಾಲಂಬವಾದನು ನಮ್ಮ ಬಸವಯ್ಯ. ಇದು ಕಾರಣ ನಾನು ಬಸವಣ್ಣ ಬಸವಣ್ಣ ಬಸವಣ್ಣ ಎಂದೆನಲಮ್ಮೆನು. ಎನ್ನ ವಾಙ್ಮನಕ್ಕೆ ಅಗೋಚರವಾದನಾಗಿ, ಆ ಬಸವಣ್ಣನ ಹಿಂದುಗೊಂಡು ಹರಪಥವನೇ ತೋರು ಕಂಡಾ ಕಲಿದೇವರ ದೇವಾ.

೪೧

ಪೃಥ್ವಿಯ ಚಿತ್ತದ ಪಂಚಕರ್ಮೇಂದ್ರಿಯಂಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ. ಅಪ್ಪುವಿನ ಬುದ್ಧಿಯ ಪದಾರ್ಥಂಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ. ಅಗ್ನಿಯ ಅಹಂಕಾರ ಪಂಚೇಂದ್ರಿಯಂಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ. ವಾಯುವಿನ ಮನದ ಪಂಚಪ್ರಾಣವಾಯುಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ. ಆಕಾಶದ ಸುಜ್ಞಾನಂಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ.ಆತ್ಮನ ಪರಮಾತ್ಮನ ಹಸ್ತಂಗಳೈದು ಲಿಂಗೈಕ್ಯವಾದವು ಬಸವಣ್ಣ ನಿಮ್ಮಿಂದ. ಕಲಿದೇವಾ, ನಿಮ್ಮ ಶರಣ ಸಂಗನಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು.

೫೨

ಉಟ್ಟ ಸೀರೆಯು ಹರಿದು ಹೋದಾತ ನೀನಲ್ಲಾ ಬಸವಣ್ಣ! ಮೆಟ್ಟಿದ ಕೆರಹ ಕಳೆದು ಹೋದಾತ ನೀನಲ್ಲಾ ಬಸವಣ್ಣ! ಕಟ್ಟಿದ ಮುಡಿಯು ಬಿಟ್ಟು ಹೋದಾತ ನೀನಲ್ಲಾ ಬಸವಣ್ಣ! ಸೀಮೆ ಸಂಬಂಧವ ತಪ್ಪಿ ಹೋದಾತ ನೀನಲ್ಲಾ ಬಸವಣ್ಣ! ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ! ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣ! ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ! ಬಸವಣ್ಣಂಗೆ ಶರಣೆಂಬೆ. ಪಥವನೇ ತೋರು ಕಂಡಾ ಕಲಿದೇವರ ದೇವಾ.

೫೩

ನಿನ್ನಾಕಾರ ನಿರಾಕಾರವಾಯಿತಲ್ಲ ಬಸವಣ್ಣ! ನಿನ್ನ ಪ್ರಾಣ ನಿಃಪ್ರಾಣವಾಯಿತಲ್ಲ ಬಸವಣ್ಣ! ಲಿಂಗ ಜಂಗಮದ ಮಾಟ ಸಮರ್ಪಿತ ವಾಯಿತಲ್ಲ ಬಸವಣ್ಣ! ನಿಶ್ಶಬ್ದವೇದಿಯಾದೆಯಲ್ಲ ಬಸವಣ್ಣ! ಕಲಿದೇವರ ದೇವನ ಹೃದಯಕಮಲವ ಹೊಕ್ಕು, ದೇವರಿಗೆ ದೇವನಾಗಿ ಹೋದೆಯಲ್ಲ ಸಂಗನ ಬಸವಣ್ಣ!!

೫೪

ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ. ಅಯ್ಯಾ, ನಿಮ್ಮ ಶರಣರು ಇದ್ದ ಪುರವೇ ಕೈಲಾಸಪುರವಯ್ಯಾ. ಅಯ್ಯಾ, ನಿಮ್ಮ ಶರಣರು ನಿಂದುದೇ ನಿಜನಿವಾಸವಯ್ಯಾ. ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರವೇ ಅವಿಮುಕ್ತಕ್ಷೇತ್ರ. ಆನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು!

೫೫

ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು. ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು. ಎನ್ನ ಪ್ರಾಣದಲ್ಲಿ ಅರಿವ

ತೋರಿದನಯ್ಯ ಬಸವಣ್ಣನು. ಅರಿವೇ ಜಂಗಮವೆಂದು ಅರುಹಿದನಯ್ಯ ಬಸವಣ್ಣನು. ಚೆನ್ನಮಲ್ಲಿಕಾರ್ಜುನಯ್ಯ, ಎನ್ನ ಹೆತ್ತ ತಂದೆ ಸಂಗನ ಬಸವಣ್ಣ ಎನಗೀ ಕ್ರಮವನರುಹಿದನಯ್ಯ.

೪೬

ಕಾಮನ ಗೆಲಿದೆನು ಬಸವಾ ನಿಮ್ಮ ದಯೆಯಿಂದ. ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪು ಬಸವಾ ನಿಮ್ಮ ದಯದಿಂದ. ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ, ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ.

೪೭

ಶಿವ ಶಿವಾ! ಆದಿಯುನಾದಿ ಎಂಬೆರಡೂ ಇಲ್ಲದ ನಿರವಯನಾಗಿಪ್ಪ ಶಿವನೇ, ನಿಮ್ಮ ನಿಜವನಾರು ಬಲ್ಲರಯ್ಯ? ವೇದಂಗಳಿಗಭೇದ್ಯನು, ಶಾಸ್ತ್ರಂಗಳಿಗಸಾಧ್ಯನು, ಪುರಾಣಂಗಳಿಗಗಮ್ಯನು, ಆಗಮಂಗಳಿಗಗೋಚರನು, ತರ್ಕಕ್ಕತರ್ಕ್ಯನು, ವಾಙ್ಮನಕ್ಕತೀತನೆನಿಪ ಪರಶಿವಲಿಂಗವನು ಕೆಲಂಬರು ಸಕಲನೆಂಬರು, ಕೆಲಂಬರು ನಿಷ್ಕಲನೆಂಬರು. ಕೆಲಂಬರು ಸೂಕ್ಷ್ಮನೆಂಬರು, ಕೆಲಂಬರು ಸ್ಥೂಲನೆಂಬರು. ಈ ಬಗೆಯ ಭಾವದಿಂದ ಹರಿ ಬ್ರಹ್ಮ ಇಂದ್ರ ಚಂದ್ರ ರವಿ ಕಾಲ ಕಾಮ ದಕ್ಷ ಇವರೊಳಗಾದ ಸಮಸ್ತ ದೇವ ದಾನವ ಮಾನವರೆಲ್ಲರೂ ಕಾಣಲರಿಯದೆ ಅಜ್ಞಾನದಿಂದ ಭವಭಾರಿಗಳಾದರು. ಈ ಪರಿಯಲ್ಲಿ ಇವರು ಭವಭಾರಿಗಳಾಗಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಬಂದು, ವೀರಶೈವಮಾರ್ಗವನರಿಪುವುದಕ್ಕೆ ಐವತ್ತೆರಡು ವಿಧವನೊಳಕೊಂಡು ಚರಿಸಿದನು. ಅದೆಂತೆಂದೊಡೆ: ಗುರುಕಾರುಣ್ಯವೇದ್ಯನು. ವಿಭೂತಿ ರುದ್ರಾಕ್ಷಿಧಾರಕನು. ಪಂಚಾಕ್ಷರೀಭಾಷಾಸಮೇತನು. ಲಿಂಗಾಂಗಸಂಬಂಧಿ. ನಿತ್ಯ ಲಿಂಗಾರ್ಚಕನು. ಅರ್ಪಿತದಲ್ಲಿ ಅವಧಾನಿ. ಪಾದೋದಕ ಪ್ರಸಾದ ಗ್ರಾಹಕನು. ಗುರುಭಕ್ತಿಸಂಪನ್ನನು. ಏಕಲಿಂಗನಿಷ್ಠಾಪರನು. ಚರಲಿಂಗ

ಲೋಲುಪ್ತನು. ಶರಣ ಸಂಗಮೇಶ್ವರನು. ತ್ರಿವಿಧಕ್ಕೆ ಆಯತನು. ತ್ರಿಕರಣಶುದ್ಧನು. ತ್ರಿವಿಧಲಿಂಗಾಂಗಸಂಬಂಧಿ. ಅನ್ಯದೈವಸ್ಮರಣೆಯ ಹೊದ್ದ. ಭವಿಸಂಗವ ಮಾಡ. ಭವಿಪಾಕವ ಕೊಳ್ಳ. ಪರಸ್ತ್ರೀಯರ ಬೆರಸ. ಪರಧನವನೊಲ್ಲ. ಪರನಿಂದೆಯನಾಡ. ಸ್ತುತಿನಿಂದೆಗಳ ಹೊದ್ದ. ಆತ್ಮ ಸ್ತುತಿಯ ಮಾಡ. ಅನೃತವ ನುಡಿಯ. ಅನ್ಯರ ಬೇಡ. ಹಿಂಸೆಯ ಮಾಡ. ತಾಮಸಭಕ್ತಸಂಗವ ಮಾಡ. ಸದಾಚಾರಸಂಪನ್ನ. ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದ ಸಮಸ್ತವೆಲ್ಲವ ಸಮರ್ಪಿಸಿ, ಪ್ರಸಾದ ಮುಂತಾಗಿ ಭೋಗಿಸುವ. ಜಂಗಮನಿಂದೆಯ ಸೈರಿಸ. ಪ್ರಸಾದ ನಿಂದೆಯ ಕೇಳ. ಅನ್ಯರನಾಶೆಗೆಯ್ಯ. ಪಾತ್ರಾಪಾತ್ರವನರಿದೀವ. ಚತುರ್ವಿಧಪದವಿಯ ಹಾರ. ಅರಿಷಡ್ವರ್ಗಕ್ಕಳುಕ. ಕುಲಾದಿ ಮದಂಗಳ ಬಗೆಗೊಳ್ಳ. ದ್ವೈತಾದ್ವೈತವ ನುಡಿವನಲ್ಲ. ಸಂಕಲ್ಪ ವಿಕಲ್ಪವ ಮಾಡುವವ ನಲ್ಲ. ಕಾಲೋಚಿತವ ಬಲ್ಲ. ಕ್ರಮಯುಕ್ತನಾಗಿಹ. ಷಟ್‌ಸ್ಥಲಭರಿತ. ಸರ್ವಾಂಗಲಿಂಗಿ. ದಾಸೋಹಸಂಪನ್ನ. ನ್ಯಾಯನಿಷ್ಠುರ. ನುಡಿದಂತೆ ನಡೆವ. ಮಾಟಕೂಟಂಗಳ ಸಂಧಾನಿ. ಮರಹಿಲ್ಲದ ಮಹಾಜ್ಞಾನಿ. ಶಿವಶರಣರನುಭಾವಿ. ಕರ್ಮದ ಬಟ್ಟೆಯ ಮೆಟ್ಟ. ಕಲುಷ ಕಾರ್ಪಣ್ಯವ ಮುಟ್ಟ. ಕಾಯಕಕ್ಕಲ್ಲದೆ ಸಲ್ಲ. ಕಾಯದ ಕಳವಳಕ್ಕಂಜ. ಶಿವಧರ್ಮದ ಪುಂಜ. ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

೪೮

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ. ಬ್ರಹ್ಮವ ನುಡಿದು ಭ್ರಮಿತನಾದೆನಯ್ಯ. ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆ ನಯ್ಯ. ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯ.

೪೯

ಶಿವ ಗುರುವೆಂದು ಬಲ್ಲಾತನೆ ಗುರು. ಶಿವ ಲಿಂಗವೆಂದು ಬಲ್ಲಾತನೆ ಗುರು. ಶಿವ ಜಂಗಮವೆಂದು ಬಲ್ಲಾತನೆ ಗುರು. ಶಿವ ಪ್ರಸಾದವೆಂದು

ಬಲ್ಲಾತನೆ ಗುರು. ಶಿವ ಆಚಾರವೆಂದು ಬಲ್ಲಾತನೆ ಗುರು. ಇಂತೀ ಪಂಚ ವಿಧವೆ ಪಂಚಬ್ರಹ್ಮವೆಂದು ಅರಿದ ಮಹಾಮಹಿಮ ಸಂಗನಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರು; ನಿಜವೆಲ್ಲಕ್ಕೆಯೂ ಗುರು ಕಾಣಾ ಗೊಹೇಶ್ವರಾ!

೫೦

ತನುವ ಗೆಲಲರಿಯದೆ, ಮನವ ಗೆಲಲರಿಯದೆ, ಧನವ ಗೆಲಲರಿಯದೆ ಭ್ರಮೆಗೊಂಡಿತ್ತು ಲೋಕವೆಲ್ಲವು. ತನುವ ದಾಸೋಹಕ್ಕೆ ಸವೆಸಿ, ಮನವ ಲಿಂಗಧ್ಯಾನದಲ್ಲಿ ಸವೆಸಿ, ಧನವ ಜಂಗಮದಲ್ಲಿ ಸವೆಸಿ ಗೆಲಬಲ್ಲಡೆ ಸಂಗನಬಸವಣ್ಣನಲ್ಲದೆ ಮತ್ತಾರನು ಕಾಣೆ. ಗೊಹೇಶ್ವರ, ನಿಮ್ಮ ಶರಣ ಸಂಗನಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

೫೧

ಆದಿಯಲ್ಲಿ ಬಸವಣ್ಣನುತ್ಪತ್ತಿಯಾದ ಕಾರಣ, ನಾಗಲೋಕದ ನಾಗಗಣಂಗಳಿಗೆಯೂ ಬಸವಣ್ಣನ ಪ್ರಸಾದ; ಮರ್ತ್ಯಲೋಕದ ಮಹಾ ಗಣಂಗಳಿಗೆಯೂ ಬಸವಣ್ಣನ ಪ್ರಸಾದ; ದೇವಲೋಕದ ದೇವಗಣಂ ಗಳಿಗೆಯೂ ಬಸವಣ್ಣನ ಪ್ರಸಾದ. ಗೊಹೇಶ್ವರ ನಿಮ್ಮಾಣೆ, ಎನಗೆಯೂ ನಿನಗೆಯೂ ಬಸವಣ್ಣನ ಪ್ರಸಾದ.

೫೨

ಧರೆಯಾಕಾಶ ತಾರಾಮಂಡಲ ಸಪ್ತಸಮುದ್ರಂಗಳಿಲ್ಲದಂದು, ಒಂದು ಮಹಾವೃಕ್ಷವಿದ್ದಿತಯ್ಯ. ಆ ವೃಕ್ಷವ ಕಂಡು ನಾನು ಓಂನಮಶ್ಶಿವಾಯ ಎನುತಿದ್ದೆನು. ಆ ವೃಕ್ಷದಿಂದ ಷಡುಸಾದಾಖ್ಯಂಗಳು ಹುಟ್ಟಿದವು. ಆ ಷಡು ಸಾದಾಖ್ಯಂಗಳ ನೆಳಲಲ್ಲಿ ಕುಳ್ಳಿರ್ದು, ನಾನು ಬಸವ ಬಸವ ಎನುತಿರ್ದೆನು ಕಾಣಾ ಗೊಹೇಶ್ವರಾ.

೫೩

ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ ನಯ್ಯ ಬಸವಣ್ಣ! ಲಾಂಛನದ ಪೂರ್ವಾಶ್ರಯವ ಕಳೆಯಲೆಂದು ಜಂಗಮ ಪ್ರಾಣಿಯಾದನಯ್ಯ ಬಸವಣ್ಣ! ಪ್ರಸಾದದ ಪೂರ್ವಾಶ್ರಯವ ಕಳೆಯ

ಲೆಂದು ಮಹಾಪ್ರಸಾದಿಯಾದನಯ್ಯ ಬಸವಣ್ಣ! ಈ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು ಬಸವಣ್ಣ ಮರ್ತ್ಯಕ್ಕೆ ಬಂದನು ಕಾಣಾ ಗೊಹೇಶ್ವರಾ.

೫೪

ಆಚಾರವಂಗಲೇಪವಾಗಿ ಕಾಯಮುಕ್ತನು ನೀನು ನೋಡಯ್ಯ! ಅರಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ ಮನೋಮುಕ್ತನು ನೀನು ನೋಡಯ್ಯ! ಅರ್ಪಿತ ಪರಿಣಾಮದಲ್ಲಿ ಅವಿರಳವಾಗಿಪ್ಪುದಾಗಿ ಸರ್ವಾಂಗ ಲಿಂಗೈಕ್ಯ ನೋಡಾ! ಮುಕ್ತನಲ್ಲೆಂಬ ಬಳಕೆಯ ಮಾತಂತಿರಲಿ. ಬಯಲ ಭ್ರಮೆಯನೆ ಕಳೆದು, ಭವದ ಬಟ್ಟೆಯ ಹರಿದಿಪ್ಪುದ ನಮ್ಮ ಗೊಹೇಶ್ವರಲಿಂಗ ಬಲ್ಲನು. ನೀನು ಮರೆಯಾಗಿ ನುಡಿವರೇ ಸಂಗನಬಸವಣ್ಣಾ?

೫೫

ಅಂಗದಲ್ಲಿ ಆಚಾರಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ಆಚಾರದಲ್ಲಿ ಪ್ರಾಣಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ಪ್ರಾಣದಲ್ಲಿ ಲಿಂಗಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ಲಿಂಗದಲ್ಲಿ ಜಂಗಮಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ಜಂಗಮದಲ್ಲಿ ಪ್ರಸಾದಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ಪ್ರಸಾದದಲ್ಲಿ ನಿತ್ಯಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ನಿತ್ಯದಲ್ಲಿ ದಾಸೋಹಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು. ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತವಾಸಿಯಾಗೈದಾನೆ ಗೊಹೇಶ್ವರಲಿಂಗದಲ್ಲಿ. ಸಂಗನ ಬಸವಣ್ಣಂಗೆ ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯಾ.

೫೬

ಕೌಪು ಕಾಷಾಂಬರವ ಕಟ್ಟಿ, ಮುಂಡೆ ಬೋಳಾದರೇನಯ್ಯ, ಮನದಲ್ಲಿ ನಿಜವಿಲ್ಲದನ್ನಕ್ಕರ? ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೊರೆದರೇನಯ್ಯ, ಮನದಲ್ಲಿ ಪ್ರತಿಯಾಗದನ್ನಕ್ಕರ? ಹಸಿವು ತೃಷೆ ವ್ಯಸನಾದಿಗಳ ಬಿಟ್ಟರೇನಯ್ಯ, ಅರ್ಥದಿಚ್ಛೆ ಮನದಲ್ಲಿ ಹಿಂಗದನ್ನಕ್ಕರ? ಆನು ಜಂಗಮವೆ? ಆನು

ಹಿರಿಯನಾದೆನಲ್ಲದೆ, ಆನು ಜಂಗಮವೆ? ಒಡಲಿಲ್ಲದಾತ ಬಸವಣ್ಣ, ಪ್ರಾಣವಿಲ್ಲದಾತ ಬಸವಣ್ಣ. ಬಸವಣ್ಣನಾಗಿ ಹುಟ್ಟಿಸದೆ, ಎನ್ನ ಪ್ರಭುವಾಗಿ ಹುಟ್ಟಿಸಿದೆ ಗೊಹೇಶ್ವರಾ.

೫೭

ಕೆಳಗೇಳು ಲೋಕಂಗಳಿಲ್ಲದ ಮುನ್ನ, ಮೇಲೇಳು ಲೋಕಂಗಳಿಲ್ಲದ ಮುನ್ನ, ಸಮಸ್ತ ಬ್ರಹ್ಮಾಂಡಗಳಿಲ್ಲದ ಮುನ್ನ ಅಲ್ಲಿಂದತ್ತತ್ತ, ಬಸವಣ್ಣಾ, ನೀನು ಲಿಂಗಭಕ್ತ, ಜಂಗಮಪ್ರಾಣಿ! ಶಶಿಧರನ ಶರಣಂಗೆ ವೃಷಧರಸ್ವಾಯತವಾಗಿ, ನಮ್ಮ ಗೊಹೇಶ್ವರಲಿಂಗಕ್ಕೆ ಸಂಗನಬಸವಣ್ಣನೇ ಭಕ್ತನೆಂದರಿದು, ನಾನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿದ್ದೆನು.

೫೮

ಅಂಗನೆಯ ಮೊಲೆ ಲಿಂಗವೆ? ಬಳ್ಳ ಲಿಂಗವೆ? ಕಿತ್ತು ಬಹ ಸಾಣೆ ಲಿಂಗವೆ? ಆಡಿನ ಹಿಕ್ಕೆ ಲಿಂಗವೆ? ಮೆಚ್ಚುವರೆ ಪ್ರಮಥರು? ಮೆಚ್ಚುವರೆ ಪುರಾತರು? ನಿಮ್ಮ ಭಕ್ತರು ಭಾವಭ್ರಮೆಯುಳಿದು, ಗೊಹೇಶ್ವರ, ನಿಮ್ಮಲ್ಲಿ ಅನಾದಿಸಂಸಿದ್ಧವಾದ ಜಂಗಮವನರಿದಾತ ಬಸವಣ್ಣನೊಬ್ಬನೆ.

೫೯

'ಬ' ಎಂಬಲ್ಲಿ ಎನ್ನ ಭವ ಹರಿಯಿತ್ತು. 'ಸ' ಎಂಬಲ್ಲಿ ಸರ್ವಜ್ಞನಾದೆನು. 'ವ' ಎಂಬಲ್ಲಿ ವಚಿಸುವರೆ ಚೈತನ್ಯಾತ್ಮಕನಾದೆನು. ಇಂತೀ ಬಸವಾಕ್ಷರತ್ರಯ ಎನ್ನ ಸರ್ವಾಂಗದಲ್ಲಿ ತೊಳಗಿ ಬೆಳಗುವುದ ಕಂಡು, ಆನು ನೀನು, ಬಸವಾ ಬಸವಾ ಬಸವಾ ಎನುತಿರ್ದೆನಯ್ಯ ಗೊಹೇಶ್ವರಾ!

೬೦

ಸಕಲವನೆ ಬಲ್ಲ; ಲಿಂಗದೊಳಗೆ ತೋರಿದನು. ಲಿಂಗದ ಬೆಳಗ ಸಕಲದೊಳಗೆ ತೋರಿದನು. ಎನ್ನ ಮನಕ್ಕೆ ಅತಿಶಯುವ ತೋರಿ ರಕ್ಷಿಸಿದನು. ಎನ್ನೊಳಗೆ ತನ್ನ ತೋರಿದನು; ತನ್ನೊಳಗೆ ಎನ್ನ ತೋರಿದನು. ಮತ್ತೆರಡು

ವನೇಕವ ಮಾಡಿ, ಎನ್ನೊಳಗೆ ಗೊಹೇಶ್ವರನಾದನು ; ಹೊರಗೆ ಮಹಾಲಿಂಗ ವಾಗಿ ನಿಂದನು ಶ್ರೀಗುರುಲಿಂಗ ಬಸವಣ್ಣನು.

೬೧

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತ ನಟ್ಟಿದನಯ್ಯ ಒಬ್ಬ ಶಿವಶರಣನ. ಆ ಶರಣ ಬಂದು ಕಲ್ಯಾಣವೆಂಬ ಶಿವ ಪುರವ ಕೈಲಾಸವ ಮಾಡಿ, ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು ಅಸಂಖ್ಯಾತರೆಂದು ಹೆಸರಿಟ್ಟು ಕರೆದು, ಭಕ್ತಿಯ ಕುಳಸ್ಥಳವ ಶ್ರುತದೃಷ್ಟ ಪವಾಡವಂ ಮೆರೆದು ತೋರಿ, ಜಗವರಿಯೆ ಶಿವಾಚಾರದ ಧ್ವಜವನೆತ್ತಿಸಿ, ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು. ಶಿವಶರಣನ ಮನೆಯೊಳಗಿಪ್ಪ ಶಿವಗಣಂಗಳ ತಿಂಥಿಣಿಯ ಕಂಡು, ಎನ್ನ ಮನ ಉಬ್ಬಿ ಕೊಬ್ಬಿ ಓಲಾಡುತ್ತಿರ್ದೆನಯ್ಯ. ನಮ್ಮ ಗೊಹೇಶ್ವರನ ಶರಣ ಸಂಗನ ಬಸವಣ್ಣನ ದಾಸೋಹದ ಘನವನೇನೆಂದೆನಬಹುದು ನೋಡಾ ಸಿದ್ಧ ರಾಮಯ್ಯಾ!

೬೨

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತರಸವೆಂಬ ತೈಲವನೆರೆದು, ಆಚಾರ ವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು, ತೊಳಗಿ ಬೆಳಗುತ್ತಿರ್ದುದಯ್ಯ ಶಿವನ ಪ್ರಕಾಶ! ಆ ಬೆಳಗಿನೊಳಗೊಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತಮಹಾಗಣಂಗಳು! ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ? ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೆ? ಗೊಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆ ಕಾಣಾ ಸಿದ್ಧರಾಮಯ್ಯ !

೬೩

ಉಪಪಾತಕ ಮಹಾಪಾತಕಂಗಳ ಮಾಡಿದ ಕರ್ಮಂಗಳು ಕೋಟ್ಯನು ಕೋಟಿ ಒಬ್ಬ ಶಿವಶರಣನ ಅಂಗಳವ ಕಂಡಲ್ಲಿ ಹರಿದು ಹೋಹವು ನೋಡಾ! ಅದೇನು ಕಾರಣವೆಂದರೆ, ಶಿವಶರಣನಂತರಂಗದಲ್ಲಿ ಶಿವನಿಪ್ಪನಯ್ಯ! ಶಿವ

ನಿದ್ದಲ್ಲಿ ಕೈಲಾಸವಿಪ್ಪುದು! ಕೈಲಾಸವಿದ್ದಲ್ಲಿ ಸರ್ವರುದ್ರಗಣಂಗಳಿರ್ಪರು! ಅಷ್ಟಾಷಷ್ಠಿ ತೀರ್ಥಂಗಳಿಪ್ಪವು! ಶಿವನು ಒಲಿದಲ್ಲಿ ಇನಿತು ನೆಲಸಿಪ್ಪವಯ್ಯ! ಇಂತಪ್ಪ ಶರಣ ಬಸವಣ್ಣನಂಗಳವ ಕಂಡೆನಾಗಿ, ಗೊಹೇಶ್ವರಲಿಂಗನ ಕಂಗಳಿಗೆ ತೃಪ್ತಿಯಾಯಿತ್ತು ಕಾಣಾ ಸಿದ್ಧರಾಮಾ!

೬೪

ಇಂದುವಿನ ಬೆಳಗಿನ ಸಂಪತ್ತನಿಂಬುಗೊಂಡ ಚಕೋರನ ಧ್ಯಾನವೆಂತಿರ್ಪುದು ಅಂತಾಗಿದ್ದೆ ನಾನು. ಮಾತೆವಿಯೋಗವಾದ ಶಿಶುವಿನ ಧ್ಯಾನವೆಂತಿರ್ಪುದು ಅಂತಾಗಿದ್ದೆ ನಾನು. ಬಂಧನದಲ್ಲಿ ಸಿಕ್ಕಿದ ಫಣಿಯ ಧ್ಯಾನವೆಂತಿರ್ಪುದು ಅಂತಾಗಿರ್ದೆ ನಾನು. ರಾತ್ರಿಯೊಳು ಮುಗಿದ ಪದ್ಮದ ಭ್ರಮರನ ಧ್ಯಾನವೆಂತಿರ್ಪುದು ಅಂತಾಗಿದ್ದೆ ನಾನು. ಸ್ವಪ್ನದಲ್ಲಿ ದೃಷ್ಟ ಕೇಸರಿಯ ಧ್ಯಾನದ ಮದಹಸ್ತಿಯೆಂತಿರ್ಪುದು ಅಂತಾಗಿದ್ದೆ ನಾನು. ನೋಟವಗಲಿದ ನೇಹದ ಧ್ಯಾನವೆಂತಿರ್ಪುದು ಅಂತಾಗಿದ್ದೆ ನಾನು. ಬ್ರಹ್ಮಪಾಶ ವಿಷ್ಣುಮಾಯವನತಿಗಳೆದ ಛಲದಲ್ಲಿ ಏನೆಂದರಿಯದಿದ್ದೆ ನಾನು. ಗೊಹೇಶ್ವರಲಿಂಗ -ಸಂಗನಬಸವಣ್ಣನೊಳಗೆ ಲೀಯವಹ ಭರದಲ್ಲಿ ಏನೆಂದರಿಯದಿರ್ದೆ ನಾನು.

೬೫

ಎತ್ತೆತ್ತ ನೋಡಿದರೆ ಬಸವಣ್ಣನೆಂಬ ಬಳ್ಳಿ. ಆ ಬಳ್ಳಿಯ ಹಿಡಿದೆತ್ತಿದರೆ ಲಿಂಗವೆಂಬ ಗೊಂಚಲು. ಆ ಲಿಂಗದ ಗೊಂಚಲ ಹಿಡಿದೆತ್ತಿದರೆ ಭಕ್ತಿರಸಮಯವಾಯಿತ್ತಯ್ಯ! ಇದಾರಯ್ಯ ಅಮಳೋಕ್ಯವ ಮಾಡಬಲ್ಲವರು? ಇದಾರಯ್ಯ ಹೊರಗೆ ಪ್ರಜ್ವಲಿಸಿ ತೋರಬಲ್ಲವರು? ಬಸವಗುರು ಎನ್ನ ಕರಸ್ಥಲದ ಲಿಂಗದ ಆದಿಯನರುಹಿ ತೋರಿದ ಕಾರಣ, ಗೋಹೇಶ್ವರಲಿಂಗದ ನಿಲವ ನಿನ್ನಿಂದಲರಿದೆ. ಈ ಉಳಿದ ಲೋಕಾದಿ ಲೋಕಂಗಳೆಲ್ಲ ಎನ್ನ ಮುಖದಲ್ಲಿ ಕಿಂಚಿತ್ತು.

೬೬

ಕೃತಯುಗದಲ್ಲಿ ನೀನು ಸ್ಕಂದನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ. ತ್ರೇತಾಯುಗದಲ್ಲಿ ನೀನು ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ

ನಾನು ಬಲ್ಲೆ. ದ್ವಾಪರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ. ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿ, ಸರ್ವಾಚಾರಸಂಪನ್ನನಾಗಿ, ಭಕ್ತಿಜ್ಞಾನವ ಕಂದೆರವೆಯ ಮಾಡಿ, ಶಿವಾಚಾರದ ಘನದ ಬೆಳವಿಗೆಯ ಮಾಡಿ, ಶಿವಭಕ್ತಿಯ ಧ್ವಜವನೆತ್ತಿಸಿ ಮರ್ತ್ಯಲೋಕದೊಳಗೆ ಹರಹಿದ ಭೇದವ ಭೇದಸಿ ನೋಡಿ ಆನು ಅರಿದೆ. ಗೊಹೇಶ್ವರ ಸಾಕ್ಷಿಯಾಗಿ, ನಿಮ್ಮ ಮಹಾತ್ಮೆಗೆ ನಮೋ ನಮೋ ಎನುತಿರ್ದೆನು ಕಾಣಾ ಸಂಗನ ಬಸವಣ್ಣಾ.

೬೭

ಆದಿ ಜಂಗಮ, ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸವಣ್ಣ, ನೀನಲ್ಲದೆ? ನಿತ್ಯನಿರಾಕಾರ ಘನವು ಶಕ್ತಿಯಿಲ್ಲದಿದ್ದರೆ ಆಗಳೆ ಬಯಲಾದಹುದೆಂದು, ನೀನು ಘನಚೈತನ್ಯವೆಂಬ ಕಾಯುವ ಧರಿಸಿದಡೆ, ಆ ಬಯಲು ಪರಬ್ರಹ್ಮವೆಂಬ ನಾಮವನೆಯ್ದಿತ್ತು ನೋಡಾ ಬಸವಣ್ಣ ನಿನ್ನಿಂದ. ಆ ಘನವು ನಿನ್ನ ವಿನೋದದಿಂದ ಸಾಕಾರವನೆಯ್ದಿದಡೆ, ನೀನು ಧರ್ಮಕಾಯುವ ಧರಿಸಿ ಆ ಮೂರ್ತಿಗಾಧಾರವಾದೆಯಾಗಿ, ಜಗದ ಕರ್ತ ಶಿವನೆಂಬ ನಾಮವಾಯಿತ್ತು ನೋಡಾ ಬಸವಣ್ಣ ನಿನ್ನಿಂದ! ಜಂಗಮವೇ ಲಿಂಗವೆಂದು ಭಾವಿಸಲಾಗಿ, ನಿನ್ನ ಸನ್ನಿಧಿಯಿಂದ ಪ್ರತಿನಿದಿಯಾಯಿತ್ತು ನೋಡಾ ಬಸವಣ್ಣ ನಿನ್ನಿಂದ. ಲಿಂಗವ ಹಿಡಿದು ನೀನು ಪೂಜಿಸಲಾಗಿ, ಲಿಂಗವು ಹೆಸರುವಡೆಯಿತ್ತು ನೋಡಾ ಬಸವಣ್ಣ ನಿನ್ನಿಂದ! ಪ್ರಸಾದವ ನೀನು ಕೊಂಡು ಪಥವ ತೋರಿದೆಯಾಗಿ, ಪ್ರಸಾದವು ಹೆಸರಾಯಿತ್ತು ನೋಡಾ ಬಸವಣ್ಣ ನಿನ್ನಿಂದ! ಇದು ಕಾರಣ ನೀನೆ ಅನಾದಿಭಕ್ತನು; ನಾನೆ ಅನಾದಿಯಿಂದಿತ್ತಿತ್ತ. ನೀ ಮಾಡಲಾನಾದೆನೆಂಬುದ ನಮ್ಮ ಗೊಹೇಶ್ವರಲಿಂಗವು ಬಲ್ಲನು ಕಾಣಾ ಸಂಗನ ಬಸವಣ್ಣ.

೬೮

ಅಂಗಸಂಸಾರ ಲಿಂಗದಲರತು, ಕಾಯುವೆಂಬ ಸಂದು ಸಂಶಯುವಿಲ್ಲದೆ, ನಿಸ್ಸಂದೇಹಿಯಾಗಿಪ್ಪನು ನೋಡಾ ಬಸವಣ್ಣನು! ಪ್ರಾಣಭಾವವಳಿದು

ಶಂಕೆ ತಲೆದೋರದೆ, ನಿಶ್ಶಂಕನಾಗಿ ನಿಜೈಕ್ಯನಾಗಿಪ್ಪನು ನೋಡಾ ಬಸವಣ್ಣನು. ಆ ಬಸವಣ್ಣನ ಅಂತರಂಗದೊಳಗೆ ನಿಶ್ಚಿಂತನಿವಾಸಿಯಾಗಿದ್ದೆನು. ಆ ಬಸವಣ್ಣನ ಬಹಿರಂಗದಲ್ಲಿ ನಿರಾಲಂಬಜ್ಞಾನಿಯಾಗಿದ್ದೆನು. ಆ ಬಸವಣ್ಣನೊಳಗೆ ನಾನು ಅಳಿದುಳಿದೆನು. ಆ ಬಸವಣ್ಣ ಎನ್ನಂತರಂಗದೊಳಗೆ ನಿಜನಿವಾಸಿಯಾಗಿದ್ದನು. ಇದು ಕಾರಣ, ಒಂದಕ್ಕೊಂದ ಬಿಚ್ಚಿ ಬೇರುಮಾಡಬಾರದು. ಗೊಹೇಶ್ವರಲಿಂಗದಲ್ಲಿ ಬಸವ-ಪ್ರಭುವೆಂಬ ಎರಡು ಭಾವ ಭ್ರಾಂತಿಯಳಿದುಳಿದು, ವಿಭ್ರಾಂತಿ ಎಡೆಗೊಂಡಿತ್ತು ಕಾಣಾ ಚೆನ್ನಬಸವಣ್ಣಾ.

೬೯

ಭೂಮಿಯಿಂದ ಹುಟ್ಟಿ ಅಂತರದಲ್ಲಿ ಬೆಳೆವ ವೃಕ್ಷದಂತೆ, ಸರ್ವರಿಗೆ ಭೂತಹಿತವಾಗಿ ಫಲರಸವನೀವಂತೆ, ನೀ ಭೂಮಿಯಾಗಿ ನಾ ಸಸಿಯಾಗಿ ಬೆಳೆದ ಬೆಂಬಳಿಯಲ್ಲಿ ಗೊಹೇಶ್ವರಲಿಂಗವೆಂಬುದು ಫಲವಾಯಿತ್ತು. ಅರಿದ ಅರಿಕೆ ರಸವಾಯಿತ್ತು. ಸಂಗನ ಬಸವಣ್ಣನಿಂದ ಎನ್ನಂಗ ಬಯಲಾಯಿತ್ತು.

೪. ಮಹಾದೇವಿಯಕ್ಕ

೭೦

ಕಾಯದ ಲಜ್ಜೆಯ ಕಲ್ಪಿತವ ಕಳೆದು, ಜೀವದ ಲಜ್ಜೆಯ ಮೋಹವನಳಿದು, ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು ತವಕದ ಸ್ನೇಹ ವ್ಯವಹಾರಕ್ಕೆ ಹೊಗದು! ಕೂಡಲಸಂಗಮದೇವಯ್ಯ, ಎನ್ನ ಹೆತ್ತತಾಯಿ ಮಹದೇವಿಯಕ್ಕನ ನಿಲವ ನೋಡಯ್ಯ ಪ್ರಭುವೆ.

೭೧

ಕಾಮಿಯಾಗಿ ನಿಃಕಾಮಿಯಾದಳು. ಸೀಮೆಯಲ್ಲಿದ್ದು ನಿಸ್ಸೀಮೆಯಾದಳು. ಭವಿಯ ಸಂಗವ ತೊರೆದು ಭವಬಾಧೆಯ ಹರಿದಳು. ಬಸವಣ್ಣ

ಗತಿ ಎಂದು ಬರಲು, ನಾನು ಮಡಿಯು ಹಾಸಿ ನಡೆಸಿದೆನು. ನಾ ನಡೆವುದಕ್ಕೆ ಹಾಸಿದ ಮಡಿಯು ಸರ್ವಾಂಗಕ್ಕೆ ಹೊದ್ದಳು. ಆ ಮಡಿಯು ಬೆಳಗಿನ ಬೆಳಗಿನೊಳಗೆ ನಿರ್ವಯಲಾದಳು. ಕಲಿದೇವಾ, ಮಹಾದೇವಿಯಕ್ಕಗಳ ನಿಲವ ಬಸವಣ್ಣನ ಕೃಪೆಯಿಂದಲರಿದೆನಯ್ಯಾ.

೭೨

ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು. ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು. ತಾನಿದಿರೆಂಬೆರಡಳಿದು, ನಮ್ಮ ಗೊಹೇಶ್ವರಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕಗಳ ನಿಲವಿಂಗೆ ಶರಣೆನುತಿರ್ದೆನು.

೭೩

ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೆ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ? ನಡು ಮುರಿದು, ಗುಡುಗೂರಿ, ತವೆ ನಡುಗಿ, ನರೆತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತ ನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ? ಅನುವನರಿದು, ಘನವ ಬೆರಸಿ, ಹಿರಿದುಕಿರಿದೆಂಬ ಭೇದವ ಮರೆದು, ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು.

೫. ಚೆನ್ನಬಸವಣ್ಣ

೭೪

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯ ಶಿವನು. ಕತ್ತಲೆಯ ಪಾಳೆಯುವ ರವಿ ಹೊಕ್ಕಂತಾಯಿತ್ತಯ್ಯ. ಚಿತ್ತದ ಪ್ರವೃತ್ತಿಯ ಹಿಂಗಿಸಿ, ಮುಕ್ತಿಪಥವ ತೋರಿದನಲ್ಲಾ ಅಸಂಖ್ಯಾತರುಗಳಿಗೆ! ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ, ಭಾವವೆಲ್ಲ ಮಹಾ

ಘನದ ಬೆಳಗು. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣ ಸಮ್ಯಗ್‌ಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯ ಪ್ರಭುವೇ.

೭೫

ಅಂಗವೆಂಬ ಸಂಸಾರದೊಳಗೆ ಸವೆದವರೆಲ್ಲರೂ ಶಿವನನರಿವರೆ? ಮನವೆಂಬ ಸಂಕಲ್ಪದ ಕುಳಿಗೆ ಒಳಗಾದವರೆಲ್ಲರೂ ಮಾಯದ ಹೊಡೆಗಿಚ್ಚ ಗೆಲಬಲ್ಲರೆ? ಗೊಹೇಶ್ವರಲಿಂಗದಲ್ಲಿ ಸರ್ವಸಂದೇಹವ ಕಳೆದಿಪ್ಪ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆ.

೭೬

ನರಲೋಕದ ನರರುಗಳೆಲ್ಲರು ನರಸಂಸಾರಕ್ಕೊಳಗಾದರು. ಸುರಲೋಕದ ಮುನಿಗಳೆಲ್ಲರು ತಪೋಸಂಸಾರಕ್ಕೊಳಗಾದರು. ಜಂಗಮವ ಪೂಜಿಸುವರೆಲ್ಲರು ಸಾಯುಜ್ಯಸಂಸಾರಕ್ಕೊಳಗಾದರು. ರುದ್ರಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ ಸಂಸಾರಕ್ಕೊಳಗಾದರು. ಪ್ರಸಾದ ಪಾದೋದಕಸಂಬಂಧಿಗಳೆಲ್ಲರು ಪ್ರಸಾದಸಂಸಾರಕ್ಕೊಳಗಾದರು. ಗೊಹೇಶ್ವರಲಿಂಗದಲ್ಲಿ ಸರ್ವಸಂಸಾರವಿರಹಿತ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು.

೭೭

ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿಯನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡಕೋಟಿಗಳುದಯವಾಗದಂದು, ಗೊಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿಯೆಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣಾ.

೭೮

ಷಡಾಧಾರಂ ಸರ್ವಭೇದಂ ಸರ್ವಾಚಾರಂ ತು ಲಿಂಗಯೋಃ।
ಷಡೂರ್ಮಿಂ ತ್ರಿವಿಧಂ ಚೈಕಂ ತಸ್ಮಾಲ್ಲಿಂಗಂ ಪ್ರಪೂಜನಂ॥

ಇಂತೆಂದುದಾಗಿ, ಇಂತಪ್ಪ ಲಿಂಗಾಂಗಿಯಯ್ಯಾ ಚೆನ್ನಬಸವಣ್ಣನು. ಆಚಾರವೆ ಕಾಯ, ಆಚಾರವೆ ಪ್ರಾಣ, ಆಚಾರವೆ ಲಿಂಗ, ಆಚಾರವೆ ಸಂಗ— ಇಂತಪ್ಪ ಆಚಾರಸನ್ನಹಿತನಯ್ಯ ನಮ್ಮ ಚೆನ್ನಬಸವಣ್ಣನು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯ, ನಿಮ್ಮ ಚೆನ್ನಬಸವಣ್ಣನು ಸರ್ವಾಚಾರ ಸಂಪನ್ನನು. ಇಂತಪ್ಪ ಚೆನ್ನ ಬಸವಣ್ಣನ ನಿಲವ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ!

೭೯

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ! ಸುಗಂಧ ಬಂಧ ಬಂಧುರದಂತೆ ಹುಟ್ಟುತ್ತವೆ ಪರಿಮಳ! ಆದಿ ಅನಾದಿ ಯಿಲ್ಲದೆ ಮುನ್ನವೆ ತನ್ನಿಂದವೆ ತಾನಾಗಿರ್ದ ಕಾರಣ, ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗಸ್ವಯವಾಗಿ ಎನಗೆ ಗತಿಪಥವ ತೋರಿಸ ಬೇಕೆಂದು ಆಗಾದನು ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು!

೮೦

ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ನಾನು ಪ್ರಳಾಪಿಸುತ್ತಿರ್ದೆ ನಯ್ಯಾ! ಕಡುದುಃಖದಿಂದ ಮರುಗಲು, ಶರಣ ಚೆನ್ನನರಿದು ಶಿವ ಶಿವಾ ಎಂಬ ಮಂತ್ರವನರುಹಿ, ಅಳಲುವ ಬಳಲಿಕೆಯ ಕಳೆದನಯ್ಯಾ. ಸಂಗಯ್ಯ ನಲ್ಲಿ ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

೮೧

ಭೂಮಿಯ ಸಾರಾಯದಲೊಂದು ತರು ಬೆಳೆಯಿತ್ತು, ನವರಸ ಫಲವನಿತ್ತಿತ್ತು ನೋಡಾ! ಏನೆಂದರಿಯದೆ, ಎಂತೆಂದರಿಯದೆ ಮರುಳಾ ದೆನು ನಾನು! ಮಾರಾರಿಯ ಬಲೆಯಲ್ಲಿ ಸಿಲುಕಿದೆನು. ಕೂಡಲಸಂಗಮ ದೇವಯ್ಯ, ಚೆನ್ನಬಸವಣ್ಣನಿಂದಲಾನು ಬದುಕಿದೆನು!

೬. ಘಟ್ಟಿವಾಳಯ್ಯ

೮೨

ಅಶನಕ್ಕಂಜಿ ವೇಷವನೆ ಹೊತ್ತು ದೇಶವ ತೊಳಲುವ ಹಿರಿಯರ ಗಂಡ. ಕಾಲದ ಗಂಡ. ಕರ್ಮದ ಗಂಡ. ಲಿಂಗವಿಡಿದು ಸಾವ ಹಿರಿಯರ ಗಂಡ. ಗೊಹೇಶ್ವರ, ನಿಮ್ಮ ಶರಣ ಘಟ್ಟಿವಾಳ ಅಲ್ಲಮನಂತಿಂತೆಂಬವರ ಗಂಡ.

೭. ಸಿದ್ಧರಾಮ

೮೩

ಕಾಯದೊಳಗೆ ಕರಣವಿಲ್ಲ. ಪ್ರಾಣದೊಳಗೆ ಭಾವವಿಲ್ಲ, ಭಾವದೊಳಗೆ ಭ್ರಮೆಯಿಲ್ಲ. ನವನಾಳದೊಳಗೆ ಸುಳಿಹು ಮುನ್ನಿಲ್ಲ. ಬ್ರಹ್ಮರಂಧ್ರದಲ್ಲಿ ಅರಿವರತ ಶಿವಯೋಗಿ, ಗೊಹೇಶ್ವರನ ಶರಣ ಸಿದ್ಧರಾಮಯ್ಯಾ, ನಿನ್ನ ಕಂಡೆನ್ನ ಭವಂ ನಾಸ್ತಿಯಾಯಿತ್ತು ಕೇಳಾ!

೮. ಮಡಿವಾಳ ಮಾಚಿದೇವ

೮೪

ಮಡಿವಾಳ ಮಡಿವಾಳನೆಂಬರು. ಮಡಿವಾಳನೆಂಬುದನಾರೂ ಅರಿಯರು. ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಮೈಲಿಗೆಯ ತಂದು, ನಾನು ತನ್ನ ಮನೆಗೆ ಕೊಂಡು ಹೋಗಿ ಹಾಯ್ಕಿದರೆ, ಆಗದೆಂದು ತನ್ನ ಪಾದದೊಳಗೆ ಮೆಟ್ಟಿ ಅಲುಬಿ ಸೆಳೆದನಯ್ಯ. ತನ್ನ ನಿರ್ಮಲವ

ಕೊಟ್ಟನೆನಗೆ. ಆ ತೊಟ್ಟ ಬೀಳುಡಿಗೆಯ ಹೊದೆದುಕೊಂಡೆನಾಗಿ ಆ ಮಡಿವಳಮಾಚಿತಂದೆಯ ಕೃಪೆಯಿಂದ ಆನು ಬದುಕಿದೆನಯ್ಯ ಕೂಡಲಸಂಗಮದೇವಾ.

೯. ಮರಳು ಶಂಕರದೇವ

೮೫

ಬೀದಿಯಲ್ಲಿ ಬಿದ್ದ ಮಾಣಿಕ್ಯವ, ಹೂಳಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ. ಮರಣವುಳ್ಳವರಿಗೆ ಮರುಜವಣಿ ಸಿಕ್ಕುವುದೆ? ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ ಇಪ್ಪರಯ್ಯಾ ಶಿವಶರಣರು. ನಮ್ಮ ಗೊಹೇಶ್ವರನ ಶರಣ ಮರಳುಶಂಕರದೇವರ ನಿಲವ ನೋಡಾ ಸಂಗನಬಸವಣ್ಣಾ!

೮೬

ಯುಗಜುಗಂಗಳ ಅಳಿವುಳಿವನರಿಯದೆ, ಹಗಲಿರುಳೆಂಬವ ನೆನಹಿನಲ್ಲೂ ಅರಿಯದೆ, ಲಿಂಗದಲ್ಲಿ ಪರವಶನಾಗಿರ್ದ ಪರಮಪರಿಣಾಮಿಯನೇನೆಂದುಪಮಿಸುವೆನಯ್ಯಾ? ಆಹಾ, ಎನ್ನ ಮುಕ್ತಿಯ ಮುಕುರದ ಇರವ ನೋಡಾ! ಆಹಾ, ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ! ಆಹಾ, ಅಷ್ಟಮದಂಗಳ ಹಂಗನುಳಿದು, ನಿಷ್ಠೆ ನಿಬ್ಬೆರಗಾಗಿ ನಿಂದ ಚಿತ್ಸುಖಿಯ ನೋಡಾ! ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ, ಪರಮಪ್ರಸಾದಿ ಮರುಳುಶಂಕರದೇವರ ನಿಲವ ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು! ಬದುಕಿದೆನು!!

೧೦. ಸಂಗಮ ಗೀತ

೮೭

ಭಕ್ತನೆಂಬೆನು ಬಸವಣ್ಣನ. ಶರಣನೆಂಬೆನು ಪ್ರಭುದೇವರ. ಐಕ್ಯನೆಂಬೆನು ಅಜಗಣ್ಣನ. ಹಿಂದೆ ಆದವರಿಲ್ಲ, ಇನ್ನು ಮುಂದೆ ಅವರಿಲ್ಲ. ಸಕಳೇಶ್ವರದೇವಾ, ನಿಮ್ಮ ಶರಣರು ಮೂವರೆ.

೮೮

ಶರಣ ಶರಣಾರ್ಥಿ. ಎನ್ನ ಭಿನ್ನಪವನವಧರಿಸಯ್ಯಾ. ಬಸವಣ್ಣನೇ ಗುರುರೂಪಾಗಿ ಮರ್ತ್ಯಕ್ಕೆ ಬಂದನು. ಪ್ರಭುವೇ ನೀವು ಜಂಗಮರೂಪಾಗಿ ಮರ್ತ್ಯಕ್ಕೆ ಬಂದಿರಿ. ಭಕ್ತಿಯ ಬೆಳವಿಗೆಗೆ ಬಸವಣ್ಣನೇ ಕಾರಣಿಕನಾದ. ಅರಿವಿನ ಬೆಳವಿಗೆಗೆ ಚೆನ್ನಬಸವಣ್ಣನೇ ಕಾರಣಿಕನಾದ. ಈ ಇಬ್ಬರನೊಳಗೊಂಬ ಮಹಾಘನಕ್ಕೆ ಪ್ರಭುವೇ ನೀವು ಕಾರಣರಾದಿರಿ. ಇಂತೀ ಗುರುಲಿಂಗಜಂಗಮ ಒಂದೇ ಅಲ್ಲದೆ ಭಿನ್ನ ಉಂಟೇ ಪ್ರಭುವೆ? ಬಸವಣ್ಣ ಚೆನ್ನಬಸವಣ್ಣನ ಭಿನ್ನಪವ ಮೀರದೆ ಬಿಜಯಂಗೆಯ್ವುದಯ್ಯಾ ಕಲಿದೇವರದೇವಾ.

೮೯

ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ, ಸಂಗನಬಸವಣ್ಣನ ಒಕ್ಕುದ ಕೊಂಡೆನಾಗಿ. ಎನ್ನ ಮನದ ಕಪಟ ಹಿಂಗಿತ್ತಯ್ಯಾ, ಚೆನ್ನಬಸವಣ್ಣನ ಕರುಣವ ಪಡೆದೆನಾಗಿ. ಎನ್ನ ಮನದ ಸಂಶಯ ತೊಲಗಿತ್ತಿಂದು, ಬಸವಣ್ಣಪ್ರಿಯ ಚೆನ್ನಸಂಗಯ್ಯ, ಎನ್ನ ಪರಮಗುರು ಪ್ರಭುವಿನ ಶ್ರೀಪಾದವ ಕಂಡೆನಾಗಿ.

೯೦

ಎನ್ನಂಗದ ಆಚಾರದಲ್ಲಿ ಸಂಗನಬಸವಣ್ಣನ ಕಂಡೆನು. ಎನ್ನ ಮನದರಿವಿನಲ್ಲಿ ಚೆನ್ನಬಸವಣ್ಣನ ಕಂಡೆನು. ಎನ್ನ ಭಾವದ ಕೊನೆಯ ಮೊನೆಯ

ಮೇಲೆ ಅಲ್ಲಮಪ್ರಭುದೇವರ ಕಂಡೆನು. ಎಲೆ ಕಲಿದೇವಯ್ಯ, ನಿಮ್ಮ ಶರಣರ ಘನವನೆನ್ನ ಸರ್ವಾಂಗದಲ್ಲಿ ಕಂಡು ನಮೋ ನಮೋ ಎನುತಿರ್ದೆನು.

೯೧

ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು. ಅಗ್ನಿಯ ಪುರುಷನ ಮುಸುಕ ತೆಗೆದ ಕರ್ಪುರದ ಪುತ್ಥಳಿಯಂತಾಯಿತ್ತು. ಕತ್ತಲೆಯೊಳಗೆ ರವಿಯ ಬೆಳಗು ಹೊಕ್ಕಂತಾಯಿತ್ತು. ಗೊಹೇಶ್ವರನ ಶರಣ ಮಡಿವಾಳ ಮಾಚಿತಂದೆಯ ಕೃಪೆಯಿಂದ—ಬಸವಣ್ಣ, ನಿನ್ನ ಕಂಡೆನು. ನಿನ್ನನೂ ಮಡಿವಾಳಯ್ಯನನೂ ನೀನೆಂದೆ ಕಂಡೆನಯ್ಯ.

೯೨

ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಳ, ನಿಜಗುಣನ ಆರೂಢಸ್ಥಲ, ಸಿದ್ಧರಾಮಯ್ಯನ ಸಮಾಧಿಸ್ಥಲ. ಇಂತಿವರ ಕರುಣ ಪ್ರಸಾದವೆನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯಾ.

೯೩

ಬಸವಣ್ಣ, ಎನ್ನ ಭಕ್ತಿಯೇ ನಿಮ್ಮ ಧರ್ಮ, ಎನ್ನ ಜ್ಞಾನವೇ ಪ್ರಭುದೇವರ ಧರ್ಮ, ಎನ್ನ ಪರಿಣಾಮವೇ ಚೆನ್ನಬಸವಣ್ಣನ ಧರ್ಮ. ಇಂತೀ ಮೂವರು ಒಂದೊಂದು ಕೊಟ್ಟ ಕಾರಣ ಎನಗೆ ಮೂರು ಭಾವವಾಯಿತ್ತು. ಆ ಮೂರು ಭಾವವ ನಿಮ್ಮಲ್ಲಿ ಸಮರ್ಪಿಸಿದ ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ನೆನಹು ಹೋದಲ್ಲಿಯೇ ನಿಮ್ಮ ಕರುಣದ ಕಂದನು ಕಾಣಾ ಸಂಗನಬಸವಣ್ಣಾ.

೯೪

ಬಸವಣ್ಣನ ಮನೆಯ ಮಗಳಾದ ಕಾರಣ, ಭಕ್ತಿಪ್ರಸಾದವ ಕೊಟ್ಟನು. ಪ್ರಭುದೇವರ ತೊತ್ತಿನ ತೊತ್ತಿನ ಮರಿದೊತ್ತಿನ ಮಗಳಾದ ಕಾರಣ,

ಜ್ಞಾನಪ್ರಸಾದವ ಕೊಟ್ಟನು. ಸಿದ್ಧರಾಮಯ್ಯನ ಶಿಸುಮಗಳಾದ ಕಾರಣ, ಪ್ರಾಣಪ್ರಸಾದವ ಕರುಣಿಸಿ ಕೊಟ್ಟನು. ಮಡಿವಾಳಯ್ಯನ ಮನೆಯ ಮಗಳಾದ ಕಾರಣ, ನಿರ್ಮಲಪ್ರಸಾದವ ನಿಶ್ಚಯಿಸಿ ಕೊಟ್ಟನು. ಇಂತೀ ಅಸಂಖ್ಯಾತಗಣಂಗಳೆಲ್ಲರೂ ತಮ್ಮ ಕರುಣದ ಕಂದನೆಂದು ತಲೆದಡಹಿದ ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು.

೯೫

ಸಂಗನಬಸವಣ್ಣನಂತೆ ಸದ್ಭಕ್ತನೆನಿಸಯ್ಯ ಎನ್ನ. ಮಡಿವಾಳ ಮಾಚಯ್ಯಗಳಂತೆ ವೀರಮಾಹೇಶ್ವರನೆಂದೆನಿಸಯ್ಯ ಎನ್ನ. ಚೆನ್ನಬಸವಣ್ಣನಂತೆ ಪರಮಪ್ರಸಾದಿಯೆನಿಸಯ್ಯ ಎನ್ನ. ಸಿದ್ಧರಾಮನಂತೆ ಶುದ್ಧಪ್ರಾಣಲಿಂಗಿಯೆನಿಸಯ್ಯ ಎನ್ನ. ಉರಿಲಿಂಗಪೆದ್ದಯ್ಯಗಳಂತೆ ಉರುತರ ಶರಣನೆಂದೆನಿಸಯ್ಯ ಎನ್ನ. ಅಜಗಣ್ಣತಂದೆಗಳಂತೆ ನಿಜಲಿಂಗೈಕ್ಯನೆಂದೆನಿಸಯ್ಯ ಎನ್ನ. ನಿಜಗುಣಯೋಗಿಗಳಂತೆ ಪರಮ ಆರೂಢನೆಂದೆನಿಸಯ್ಯ ಎನ್ನ. ಅಕ್ಕಮಹಾದೇವಿಯಂತೆ ನಿಷ್ಕಾಮಿಯೆಂದೆನಿಸಯ್ಯ ಎನ್ನ. ಪ್ರಭುದೇವರಂತೆ ಪರಿಪೂರ್ಣನೆಂದೆನಿಸಯ್ಯ ಎನ್ನ. ಇಂತಿವರ ಕಾರುಣ್ಯದ ನಿಲವನೇ ಕರುಣಿಸಿ, ನಿಮ್ಮ ಗಣಂಗಳ ಸಮ್ಮೇಳನದಲ್ಲಿರಿಸಿ ಸಲಹಯ್ಯ ಎನ್ನ ಅಖಂಡೇಶ್ವರಾ.

೯೬

ಬಸವಣ್ಣನ ಭಕ್ತಿಸ್ಥಲ, ಮಡಿವಳಮಾಚಣ್ಣನ ಮಹೇಶ್ವರಸ್ಥಲ, ಘಟ್ಟಿವಾಳಯ್ಯಮುದ್ದಣ್ಣನ ಪ್ರಸಾದಿಸ್ಥಲ, ಚೆನ್ನಬಸವಣ್ಣನ ಪ್ರಾಣಲಿಂಗಿಸ್ಥಲ, ಪ್ರಭುವಿನ ಶರಣಸ್ಥಲ, ಸೊಡ್ಡಳಬಾಚರಸರ ಐಕ್ಯಸ್ಥಲ, ಅಜಗಣ್ಣನ ಆರೂಢ, ನಿಜಗುಣನ ನಿಬ್ಬೆರಗು, ಅನುಮಿಷನ ನಿಶ್ಚಲ, ಮಹಾದೇವಿಯಕ್ಕನ ಜ್ಞಾನ, ನಂಬಿಯಕ್ಕನ ಜ್ಞಾನನಿಶ್ಚಯ, ಮುಕ್ತಾಯಕ್ಕನ ಅಕ್ಕರು, ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸತ್ಯ ಸನುತೆ, ರೇವಣಸಿದ್ಧಯ್ಯದೇವರ ನಿಷ್ಠೆ, ಸಿದ್ಧರಾಮತಂದೆಗಳ ಮಹಿಮೆ,

ಮರುಳಸಿದ್ಧಯ್ಯದೇವರ ಅದೃಷ್ಟಪ್ರಸಾದ ನಿಷ್ಠೆ, ಏಕೋ ರಾಮಯ್ಯಗಳ ಆಚಾರನಿಷ್ಠೆ, ಪಂಡಿತಾರಾಧ್ಯರ ಸ್ವಯಂಪಾಕ, ಮುಗ್ಧಸಂಗಯ್ಯ, ಮೈದುನ ರಾಮಣ್ಣ, ಬೇಡರ ಕನ್ನಪ್ಪ, ಕೋಳೂರು ಕೂಡಗೂಸು, ತಿರುನೀಲನಕ್ಕರು, ರುದ್ರಪಶುಪತಿಗಳು, ದೀಪದ ಕಲಿಯರ ಮೂಢಭಕ್ತಿ ಎನ್ನೊಳಗೆಂದಪ್ಪುದೊ ಸೌರಾಷ್ಟ್ರಸೋಮೇಶ್ವರಾ ?

೯೭

ಎನ್ನ ಕಾಯುವ ಬಸವಣ್ಣನಳವಡಿಸಿಕೊಂಡ. ಎನ್ನ ಮನವ ಚೆನ್ನಬಸವಣ್ಣನಳವಡಿಸಿಕೊಂಡ. ಎನ್ನ ಭಾವವ ಮಡಿವಾಳನಳವಡಿಸಿಕೊಂಡ. ಇಂತೀ ಮೂವರು ಒಂದೊಂದಳವಡಿಸಿಕೊಂಡ ಕಾರಣ, ಗೊಹೇಶ್ವರ, ನಿಮ್ಮ ಶರಣರೆಂಬ ತ್ರೈಮೂರ್ತಿಗಳಿಗೆ ನಮೋ ನಮೋ ಎನುತಿರ್ದೆನು.

೯೮

ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು. ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು. ಎನ್ನ ಪ್ರಾಣ ಪ್ರಭುದೇವರ ಬಯಲ ಬೆರಸಿತ್ತು. ಬಸವಪ್ರಿಯ ಚೆನ್ನಸಂಗನ ಶರಣರು ಒಬ್ಬರೊಂದ ಹಂಚಿಕೊಂಡ ಕಾರಣ, ಎನಗೇನೂ ಇಲ್ಲದೆ ಮಹಾಘನದಲ್ಲಿ ನಿಜನಿವಾಸಿಯಾಗಿದ್ದೆನು.

೯೯

ಬಸವಣ್ಣನೆನ್ನ ಅಂಗ. ಮಡಿವಾಳನೆನ್ನ ಮನ. ಪ್ರಭು ಎನ್ನ ಪ್ರಾಣ. ಚೆನ್ನಬಸವಣ್ಣನೆನ್ನ ಕರಸ್ಥಲದ ಲಿಂಗ. ಘಟ್ಟಿವಾಳನೆನ್ನ ಭಾವ. ಸೊಡ್ಡಳಬಾಚರಸರೆನ್ನ ಅರಿವು. ಮಹದೇವಿಯಕ್ಕನೆನ್ನ ಜ್ಞಾನ. ಮುಕ್ತಾಯಕ್ಕನೆನ್ನ ಅಕ್ಕರು. ಸತ್ಯಕ್ಕನೆನ್ನ ಯುಕ್ತಿ. ನಂಬಿಯಕ್ಕನೆನ್ನ ನಿಶ್ಚಯ. ಅಲ್ಲಾಳಿಯಕ್ಕನೆನ್ನ ಸಮತೆ. ಅನುಮಿಷನೆನ್ನ ನಿಶ್ಚಲ. ನಿಜಗುಣನೆನ್ನ ಕ್ಷಮೆ. ರೇವಣಸಿದ್ಧೇಶ್ವರನೆನ್ನ ನೇತ್ರ. ಸಿದ್ಧರಾಮತಂದೆಗಳೆನ್ನ ನೇತ್ರದ

ದೃಕ್ಕು. ಮರುಳಸಿದ್ಧೇಶ್ವರದೇವರೆನ್ನ ಶ್ರೋತ್ರ. ಪಂಡಿತಾರಾಧ್ಯರೆನ್ನ ಜಿಹ್ವೆ. ಏಕೋರಾಮತಂದೆಗಳೆನ್ನ ನಾಸಿಕ. ಅಸಂಖ್ಯಾತರೆನ್ನ ಅವಯವ. ಪುರಾತರೆನ್ನ ಪುಣ್ಯದ ಪುಂಜ. ಏಳುನೂರೆಪ್ಪತ್ತು ಅಮರಗಣಂಗಳೆನ್ನ ಗತಿಮತಿ. ಸೌರಾಷ್ಟ್ರ ಸೋಮೇಶ್ವರಾ. ನಿಮ್ಮ ಶರಣರ ಪಡಿದೊತ್ತಯ್ಯ.

೨೧

ಶರಣ ಸಂದೇಶ

೧. ಇಲ್ಲಿ ಅಲ್ಲಿ ಎಂಬುದೆಲ್ಲಿ?

೧

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ : ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ, ಕೂಡಲಸಂಗಮದೇವಾ.

೨

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ! ಸತ್ಯವ ನುಡಿವುದೆ ದೇವಲೋಕ ; ಮಿಥ್ಯವ ನುಡಿವುದೆ ಮರ್ತ್ಯಲೋಕ! ಆಚಾರವೆ ಸ್ವರ್ಗ, ಅನಾಚಾರವೇ ನರಕ—ಕೂಡಲಸಂಗಮದೇವಾ, ನೀವೇ ಪ್ರಮಾಣು.

೩

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯೆ. ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ.

೪

ಸುಖ ಬಂದರೆ ಪುಣ್ಯದ ಫಲವೆನ್ನೆನು; ದುಃಖ ಬಂದರೆ ಪಾಪದ ಫಲವೆನ್ನೆನು. ನೀ ಮಾಡಿದೊಡಾಯಿತ್ತೆಂದೆನ್ನೆನು ; ಕರ್ಮಕ್ಕೆ ಕರ್ತನವೆ ಕಡೆಯೆಂದೆನ್ನೆನು. ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ : ಸಂಸಾರವ ಸವೆಯೆ ಬಳಸುವೆನು.

೫

ಉಣ್ಣೆ ಕೆಚ್ಚಲು ಹತ್ತಿ ಉಂಬುದೇ ನೊರೆವಾಲ? ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು, ಆ ಉಣ್ಣೆಯಿಂದ ಕರಕಷ್ಟ ರಾಮನಾಥಾ.

೬

ಇದಿರೆನ್ನ ಹಳಿವರು ಮತಿಯ ಬೆಳಗುವರು. ಮನದ ಕಾಳಿಕೆಯ ಕಳೆವರೆನ್ನ ನಂಟರು. ದುರಾಚಾರದಲ್ಲಿ ನಡೆವರು ಕನ್ನಡಿ ಎನಗೆ, ಹೇಯೋಪಾಯುವ ತೋರುವವರು. ಇದು ಕಾರಣ ಅನ್ಯದೇಶಕ್ಕೆ ಹೋಗಲೊಲ್ಲೆ. ಸಕಳೇಶ್ವರದೇವರ ತೋರುವವರೊಳರಿಲ್ಲಿಯೆ.

೭

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ, ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥಾ.

೮

ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆ! ಗಂಡ ಕೊಂಬುದು ಪಾದೋದಕ-ಪ್ರಸಾದ: ಹೆಂಡತಿ ಕೊಂಬುದು ಸುರೆ-ಮಾಂಸ! ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ, ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

೯

ಸತಿ ಭಕ್ತೆಯಾದಡೆ ಹೊಲೆಗಂಜಲಾಗದು; ಪತಿ ಭಕ್ತನಾದಡೆ ಕುಲಕಂಜಲಾಗದು. ಸತಿಪತಿಯೆಂಬ ಅಂಗಸುಖ ಹಿಂಗಿ, ಲಿಂಗವೆ ಪತಿಯಾದ ಬಳಿಕ, ಸತಿಗೆ ಪತಿಯುಂಟೆ, ಪತಿಗೆ ಸತಿಯುಂಟೆ? ಪಾಲುಂಡು ಮೇಲುಂಬರೆ ಗೊಹೇಶ್ವರಾ?

೧೦

ಅಂಧಕಂಗೆ ಜೀವವಿದ್ದಡೆ ಕಣ್ಣಿಂದಲೆ ಕಂಡು ನಡೆಯಬಲ್ಲನೆ? ನೀ ಸತಿಯಾಗಿ, ನಾ ಪತಿಯಾಗಿ, ಉಭಯ ಪ್ರಾಣ ಏಕರೂಪಾಗಿ, ಯೋಗದ ಅಂಗನೆ, ಅಮರೇಶ್ವರಲಿಂಗವ ತೋರಾ.

೧೧

ಕೈದ ಕೊಡುವರಲ್ಲದೆ ಕಲಿತನವ ಕೊಡುವರುಂಟೆ ಮಾರಯ್ಯಾ? ಹೆಣ್ಣು ಕೊಡುವರಲ್ಲದೆ ಕೂಟಕ್ಕೊಳಗಾದವರುಂಟೆ ಮಾರಯ್ಯಾ? ಕಳುವ ಚೋರಂಗೆ ಬಡವರೆಂದು ದಯ ಉಂಟೆ ಮಾರಯ್ಯಾ? ಮನವ ನೋಡಿ ಭಕ್ತಿಯ ನೋಡಿಹೆನೆಂಬವಂಗೆ ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯಾ. ಶೂಲವ ಹಾಯಬಂದಲ್ಲಿ, ಮತ್ತಿನ್ನು ಸಾವಿಂಗೆ ಹಂಗು ಪಡಲೇಕೆ? ಮಾರಯ್ಯಪ್ರಿಯ ಅಮರೇಶ್ವರಲಿಂಗ, ನೀನೆ ಬಲ್ಲೆ.

೧೨

ಆವ ಬೀಜವು ಬೀಳುವಲ್ಲಿ, ಮೊಳೆಯ ಮುಖ ಹಿಂಚು ಮುಂಚುಂಟೆ? ನೀನು ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ? ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು. ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂದೊಡಲುಂಟೆ? ಬೇರೊಂದಡಿಯಿಡದಿರು, ಮಾರಯ್ಯಪ್ರಿಯ ಅಮರೇಶ್ವರಲಿಂಗವನರಿಯಬಲ್ಲರೆ.

೧೩

ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈಕೂಲಿಯೇ? ಮುಂದೊಂದ ಕಲ್ಪಿಸದೆ, ಹಿಂದೊಂದ ಭಾವಿಸದೆ ಸಲೆ ಸಂದಿದ್ದಾಗವೆ, ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ.

೧೪

ಪ್ರತಿಷ್ಠೆಗೆ ಮಾಟವಲ್ಲದೆ ಸ್ವಯಂಭುವಿಗುಂಟೆ ಉಳಿ? ನನಗು ನಿನಗು ಮಾರಯ್ಯಪ್ರಿಯ ಅಮಳೇಶ್ವರಲಿಂಗವನರಿವುದಕ್ಕೆ ಬೇರೊಂದು ಠಾವುಂಟೆ ಮಾರಯ್ಯಾ?

೧೫

ಮನೆ ನೋಡಾ, ಬಡವರು: ಮನ ನೋಡಾ, ಸಂಪನ್ನರು! ಧನ ನೋಡಾ, ಬಡವರು: ಘನಮನ ಸಂಪನ್ನರು. ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು. ಆರಿಗೂ ಉಪಮಿಸಬಾರದು.

೧೬

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ, ಹಾವಿನ ಸಂಗವೇ ಲೇಸು ಕಂಡಯ್ಯ. ಕಾಯವಿಕಾರವ ಕಳೆದು ಕಾಯದಲಿರ್ದರೆ, ಕಾಯದ ಸಂಗವೇ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ ಕಾಯವಿಕಾರವು. ಚೆನ್ನಮಲ್ಲಿಕಾರ್ಜುನಯ್ಯ, ನೀನೊಲಿದವರು ಕಾಯಗೊಂಡಿದ್ದರೆನಬೇಡ.

೧೭

ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ, ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗವು ಬೇರಿಲ್ಲ ಕಾಣಿರೊ.

೧೮

ಲಿಂಗ ತನುವಿಂಗೆ ಶೃಂಗಾರವಪ್ಪ ತೆರನಾವುದೆಂದೊಡೆ : ಕಾಮ ಕ್ರೋಧ ಲೋಭ ಮೋಹಾದಿಗಳಲ್ಲಿ ತೆರಪುಗೊಡದಿಪ್ಪುದು. ಲಿಂಗವೇ ಅಂಗವಾಗಿ ಧ್ಯಾನ ಧಾರಣ ನಿಜಸಮಾಧಿ ನಿವಾಸವಾಗಿ, ನಿಶ್ಚಯ ನಿಜತತ್ವವಾಗಿ ನಿಂದುದೆ ಆಭರಣವೆಂದನಂಬಿಗ ಚೌಡಯ್ಯ.

೧೯

ಕಂಗಳೇಕೆ ನೋಡಬೇಡ ಎಂದಡೆ ಮಾಣವು? ಶ್ರೋತ್ರಂಗಳೇಕೆ ಆಲಿಸಬೇಡ ಎಂದಡೆ ಮಾಣವು? ಜಿಹ್ವೆಯೇಕೆ ರುಚಿಸಬೇಡ ಎಂದಡೆ ಮಾಣವು? ನಾಸಿಕವೇಕೆ ವಾಸಿಸಬೇಡ ಎಂದಡೆ ಮಾಣವು? ತ್ವಕ್ಕೇಕೆ ಸೋಂಕಬೇಡ ಎಂದಡೆ ಮಾಣವು? ಈ ಭೇದವನರಿದು ನುಡಿಸಲು ಸಮಧಾತುವಾಯಿತ್ತು. ಗೊಹೇಶ್ವರಲಿಂಗಕ್ಕೆ ಒಲಿದ ಕಾರಣ, ಅಭಿಮಾನದ ಲಜ್ಜೆ ಬೇಸತ್ತು ಹೋಯಿತ್ತು.

೨೦

ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಘನವೇನೋ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ವಿಷಯವನತಿಗಳೆದಲ್ಲಿ ಫಲವೇನೊ? ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು ಗೊಹೇಶ್ವರಾ.

೨೧

ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ, ಜಗವ ಗೆಲ್ಲಲರಿಯದೆ ನಗೆಗೆಡೆಯಾಗಿ ಹೋದರು. 'ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ! ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು, ಜಗದಂತೆ ಇದ್ದು, ಈ ಜಗವ ಗೆದ್ದು ಹೋಗುವರು. ನಿಗಮಶಾಸ್ತ್ರ ಸಾಕ್ಷಿಯಾಗಿ, ಚೆನ್ನಮಲ್ಲೇಶ್ವರ ನಿನಗಾಯಿತ್ತಯ್ಯ. ಅಂತಪ್ಪ ಚೆನ್ನಮಲ್ಲೇಶ್ವರನ ಪಾದವಿಡಿದು ಅವರ ಹೋದ ಹಾದಿಗೊಂಡು ಹೋಗುವೆನಲ್ಲದೆ, ಈ ಮೇದಿನಿಯೊಳಗೆ ಕಾಮಕಾಲಾದಿಗಳ ಬಲೆಯೊಳಗೆ ಸಿಕ್ಕಿ ಬಿದ್ದುಹೋದೆನಾದರೆ, ನಿಮ್ಮ ಪಾದಕ್ಕೆ ಅಂದೇ ದೂರವಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

೨೨

ಒಲ್ಲೆನೆಂಬುದು ವೈರಾಗ್ಯ; ಒಲಿವೆನೆಂಬುದು ಕಾಯಗುಣ. ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ. ಕೂಡಲಸಂಗಮದೇವನನೊಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು.

೨೩

ಅಂಗವನರಿವನ್ನಕ್ಕ ಶಿವಲಿಂಗಪೂಜೆಯ ಮಾಡಲೇಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತ ಮಾಡಲೇಬೇಕು. ಇದು ಅರುವಿನ ಬಿತ್ತು, ಜ್ಞಾನದ ಗೊತ್ತು. ಸರ್ವಮಯದ ಯುಕ್ತಿ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವ ಶಕ್ತಿ.

೨೪

ಇಂದ್ರಿಯನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು; ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು! ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು? ಸತಿಪತಿ ರತಿಸುಖಭೋಗೋಪ

ಭೋಗವಿಳಾಸವ ಬಿಟ್ಟ[ನೆ] ಸಿಂಧುಬಲ್ಲಾಳನು ? ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳಸಿದರೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮ ದೇವಾ !

೨೫

ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು ಬ್ರಹ್ಮಚಾರಿಗಳಾಗ ಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೇ. ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡರಿ. ಹೊನ್ನ ಬಿಟ್ಟಡೆಯೂ ಮಣ್ಣ ಬಿಡಿರಿ. ಒಂದ ಬಿಟ್ಟಡೆಯೂ ಒಂದ ಬಿಡಿರಿ. ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ? ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಅವರೆಂತು ಹೇಳಿದರು ? ನೀವೆಂತು ಕೇಳಿದರಿ ? ಹೆಣ್ಣನು ಹೆಣ್ಣೆಂದರಿವಿರಿ. ಹೊನ್ನನು ಹೊನ್ನೆಂದರಿವಿರಿ. ಮಣ್ಣನು ಮಣ್ಣೆಂದರಿವಿರಿ. ಬ್ರಹ್ಮಚಾರಿಗಳೆಂತಪ್ಪಿರಣ್ಣಾ? ಬಿಟ್ಟಡೆ, ಹೆಣ್ಣು ಹೊನ್ನು ಮಣ್ಣು ಈ ಮೂರನೂ ಬಿಟ್ಟು, ನಿರಾಭಾರಿ ಜಂಗಮವಾಗಿ ಜ್ಞಾನದಲ್ಲಿ ಸುಳಿಯಬಲ್ಲಡೆ ಭವಂ ನಾಸ್ತಿ ತಪ್ಪದು. ಹಿಡಿದಡೆ, ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು, ಗುರುಲಿಂಗಜಂಗಮಕ್ಕೆ ಸದ್ಭಕ್ತಿ ಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ ತಪ್ಪದು. ಅದೆಂತೆಂ ದೊಡೆ : ವೀರಾಗಮದಲ್ಲಿ ॥ಶ್ಲೋ॥ ಮಾತರಃ ಪಿತರಶ್ಚೈವ ಸ್ವಪತ್ನಿ ಬಾಲ ಕಾಂಸ್ತಥಾ । ಹೇಮ ಭೂಮಿ ವಿನಾಶಶ್ಚ ನ ದುಃಖೀ ಬ್ರಹ್ಮಚಾರಿಣಾಂ॥ ಎಂದುದಾಗಿ; ಇಂತು ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು ಗುರು ಲಿಂಗ ಜಂಗಮಕ್ಕೆಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ. ಅಲ್ಲಿ ಇದ್ದರೆಯೂ ನೀರ ತಾವರೆಯಂತಿಪ್ಪರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ಶರಣರು.

೨೬

ಪಂಕವಿಲ್ಲದೆ ಕಮಲಕ್ಕೆ ಸುಲಲಿತವೆಂತಪ್ಪುದಯ್ಯ? ಹೊನ್ನು ಹೆಣ್ಣು ಮಣ್ಣು ಇಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯ ? ಕಮಲ ಪಂಕದಲ್ಲಿ ವರ್ತಿಸಿದಂತೆ ಇಹರು ನಿಮ್ಮ ಶರಣರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೨೭

ಮನ ಮಗ್ನವಾಗಿ ಅರಿವನು ಘನಪ್ರಾಣಲಿಂಗದಲ್ಲಿ ಸವೆದು, ತನುವನು ಕ್ರಿಯಾಚಾರವಿಡಿದು ಇಷ್ಟಲಿಂಗದಲ್ಲಿ ಸವೆದು, ಮಹಾನುಭಾವವನರಿದಂತಹ ವೀರಶೈವಸಂಪನ್ನರಾದ ಶಿವಶರಣರಿಗೆ ಸಂಸಾರಿಗಳೆನಬಹುದೇ ಅಯ್ಯಾ? ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಪದಾರ್ಥಂಗಳ ವಿವರಿಸಿ, ಇಷ್ಟ ಪ್ರಾಣ ಭಾವವೆಂಬ ಮೂರು ಲಿಂಗದ ಮುಖವನರಿದರ್ಪಿಸಿ ಆರು ಲಿಂಗದನುವಿನಲ್ಲಿ ಕೈಕೊಂಡು, ಬಂದ ಬಂದ ಸಕಲ ಪದಾರ್ಥವನು ಅದರ ಪೂರ್ವಾಶ್ರಯವನಳಿದು, ಶಿವಪ್ರಸಾದವೆಂದು ಅನುಭವಿಸುತಿರ್ಪರು. ಅಂತಪ್ಪ ನಿರುಪಮ ನಿರ್ಭೇದ್ಯ ನಿರಾಳ ನಿಶ್ಶೂನ್ಯ ಪರಮಪ್ರಸಾದಿಗಳಿಗೆ ಸಂಸಾರಿಗಳೆಂದು ನುಡಿವರು ಅಜ್ಞಾನಿ ಸಂದೇಹಿಗಳು. ಅಘೋರ ನರಕದಲ್ಲಿ ಮುಳುಗುವರೆಂದಾತನಂಬಿಗ ಚೌಡಯ್ಯ.

೨೮

ಅಡವಿಯ ತೊಪ್ಪಲ ತಿರಿತಂದು, ತಿಂದುಂಡು ಒಡಲ ದಂಡಿಸಿಕೊಂಡು, ಪಡೆಗವಿಯೊಳಗೆ ತಪವನೈದಿಹೆನೆಂದು ಕಡುಹೆಮ್ಮೆಯಲಿ ನುಡಿವ ಅಣ್ಣಗಳು ನೀವು ಕೇಳಿರೋ! ಷಡುರುಚಿಗಳ ಹುಟ್ಟಿಸಿದ ಶಿವನ ಕರುಣರಸದಲ್ಲಿ, ಆ ರುಚಿಯ ಸುಖವಂ ಪಡೆವುದಕ್ಕೆ ಹೆಣ್ಣು ಹೊನ್ನು ಮಣ್ಣು ಈ ತ್ರಿವಿಧ ಪದಾರ್ಥವ ಪಿಡಿದು, ಗುರುಲಿಂಗಜಂಗಮಕ್ಕೆ ನೀಡಿ ಮಾಡಿಹೆನೆಂಬ ಷಡ್ರುಚಿಗೆ ಷಡ್ವಿಧಲಿಂಗಂಗಳುಂಟು. ಅವಂ ನೋಡಿ ಎಚ್ಚತ್ತು, ಸವಿಸವಿದರ್ಪಿಸಬಲ್ಲ ಮಹಾತ್ಮನು ತಾನೇನು ಜಡನಲ್ಲ, ಅಜಡನಲ್ಲೆಂದಾತ ನಮ್ಮ ಅಂಬಿಗರ ಚೌಡಯ್ಯ.

೨೯

ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ; ಇವ ಮಾಡಲೇಬೇಕು. ಸುಳಿವ ಸುಳುಹುಳ್ಳನ್ನಕ್ಕ ಇವ ಮಾಡಲೇಬೇಕು. ಗೊಹೇಶ್ವರನೆಂಬ ಆತ್ಮನುಳ್ಳನ್ನಕ್ಕರ ಭಕ್ತಿಯ ಮಾಡಲೇಬೇಕು.

೩೦

ತಾ ಮೀವನ್ನಕ್ಕ ಲಿಂಗಕ್ಕೆ ಮಜ್ಜನ, ತಾನುಂಬುನ್ನಕ್ಕ ಲಿಂಗಕ್ಕೆ ನೈವೇದ್ಯ. ತನ್ನ ತನು ಭೋಗವ ಮಾಡುವನ್ನಕ್ಕ ಲಿಂಗಾರ್ಪಿತ ಮುಖವಾಗಬೇಕು. ಇದು ಸದ್ಭಕ್ತ ಮಾರ್ಗದಿರವು, ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ.

೩೧

ಮೌನದಲುಂಬುದು ಆಚಾರವಲ್ಲ. ಲಿಂಗಾರ್ಪಿತವ ಮಾಡಿದ ಬಳಿಕ, ತುತ್ತಿಗೊಮ್ಮೆ "ಶಿವಶರಣೆ"ನ್ನುತ್ತಿರಬೇಕು. ಕರಣವೃತ್ತಿಗಳಡಗುವುವು, ಕೂಡಲಸಂಗನ ನೆನೆಯುತ್ತ ಉಂಡರೆ.

೩೨

ಪೌರ್ಣಮಿ ಬಪ್ಪನ್ನಕ್ಕ ಬಾಯಿ ಬಂಧನದಲ್ಲಿದ್ದ ಚಕೋರನಂತೆ ಇದ್ದೆನಯ್ಯ. ಉಣಲಾಗದೆಂಬ ಶಾಸ್ತ್ರವಿಡಿದು ಇದ್ದವನಲ್ಲ. ಉಣಲಾಗದೆಂಬ ಶಾಸ್ತ್ರವುಂಟೆ ಲಿಂಗವಂತಂಗೆ? ಅಹೋರಾತ್ರಿ ಅಷ್ಟಭೋಗಂಗಳ ಲಿಂಗಕ್ಕೆ ಕೊಟ್ಟು ಕೊಳಬೇಕು. ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ, ಬಾಯ್ದೆರೆಯದಿರ್ದೆನು. ಮಾಡಿಹೆ ನೀಡಿಹೆನೆಂಬ ಶಬ್ದಕ್ಕೆ ಸಂತೋಷದಾಪ್ಯಾಯನ ಹಿರಿದಾಯಿತ್ತು. ನೀಡಯ್ಯ ಸಂಗನಬಸವಣ್ಣ, ಗೊಹೇಶ್ವರಂಗೆ.

೩೩

ತಾ ಸುಖಿಯಾದಡೆ ನಡೆಯಲು ಬೇಡ? ತಾ ಸುಖಿಯಾದಡೆ ನುಡಿಯಲು ಬೇಡ? ತಾನು ಸುಖಿಯಾದಡೆ ಪೂಜಿಸಲು ಬೇಡ? ಉಣಬೇಡ ಗೊಹೇಶ್ವರ?

೩೪

ಎನ್ನ ಕಾಯವ ದಂಡಿಗೆಯ ಮಾಡಯ್ಯಾ; ಎನ್ನ ಸಿರವ ಸೋರೆಯ ಮಾಡಯ್ಯ; ಎನ್ನ ನರವ ತಂತಿಯ ಮಾಡಯ್ಯಾ; ಎನ್ನ ಬೆರಳ ಕಡ್ಡಿಯ ಮಾಡಯ್ಯ! ಬತ್ತೀಸರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ.

೩೫

ಕೋಲ ತುದಿಯ ಕೋಡಗನಂತೆ, ನೇಣ ತುದಿಯ ಬೊಂಬೆಯಂತೆ, ಆಡಿದೆನಯ್ಯ ನೀನಾಡಿಸಿದಂತೆ. ಆನು ನುಡಿದೆನಯ್ಯ ನೀನು ನುಡಿಸಿದಂತೆ. ಆನು ಇದ್ದೆನಯ್ಯ ನೀನು ಇರಿಸಿದಂತೆ, ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ.

೩೬

ಕಾಷ್ಠದಲ್ಲಿ ಬೊಂಬೆಯ ಮಾಡಿ, ಪಟ್ಟು ನೂಲ ಸೂತ್ರವ ಹೂಡಿ, ತೆರೆಯ ಮರೆಯಲ್ಲಿ ನಿಂದು ಸೂತ್ರಿಕನು ಕುಣಿಸಿದಡೆ ಕುಣಿಯುತಿರ್ಪುದಲ್ಲದೆ, ಆ ಅಚೇತನಬೊಂಬೆ ತನ್ನ ತಾನೆ ಕುಣಿವುದೆ ಅಯ್ಯ? ಎನ್ನ ತನುವೆಂಬ ಅಚೇತನಬೊಂಬೆಗೆ ಪ್ರಾಣವಾಯುವೆಂಬ ಜೀವಸೂತ್ರವ ಹೂಡಿ, ಮನವೆಂಬ ತೆರೆಯ ಮರೆಯಲ್ಲಿ ನಿಂದು ನೀನಾಡಿಸಿದಡೆ ನಾನಾಡುತಿರ್ಪೆನಲ್ಲದೆ, ಎನಗೆ ಬೇರೆ ಸ್ವತಂತ್ರವೆ ಹೇಳಾ ಅಖಂಡೇಶ್ವರಾ ?

೩೭

ಅಂಗಸಂಗಿಯಾದವಂಗೆ, ಲಿಂಗಸಂಗವಿಲ್ಲ. ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ. ಅಂಗಸಂಗವೆಂಬುದೆ ಅನಾಚಾರ, ಲಿಂಗಸಂಗವೆಂಬುದೆ ಸದಾಚಾರ. ಇದು ಕಾರಣವಾಗಿ, ಅಂಗಸಂಗವಂ ಬಿಟ್ಟು, ಲಿಂಗಸಂಗವಾಗಿರಬೇಕು ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೩೮

ಎನ್ನ ಮನಸ್ಸು ಮತ್ತೊಂದ ನೆನೆಯಲರಿಯದು,—ನೀವು ನೆನೆಹುರೂಪಾಗಿ ಎನ್ನ ಮನವನವಗ್ರಹಿಸಿದಿರಾಗಿ, ಆ ಮನಸ್ಸು ನಿಮ್ಮನವಗ್ರಹಿಸಿತ್ತಾಗಿ. ಎನ್ನ ವಾಕ್ಕು ಮತ್ತೊಂದ ನುಡಿಯಲರಿಯದು,—ನೀವು ಮಹಾಮಂತ್ರರೂಪಾಗಿ ಎನ್ನ ವಾಕ್ಕನವಗ್ರಹಿಸಿದರಾಗಿ, ಆ ವಾಕ್ಕು ನಿಮ್ಮನವಗ್ರಹಿಸಿತ್ತಾಗಿ. ಎನ್ನ ಕಾಯ ಮತ್ತೊಂದ ಭೋಗಿಸಲರಿಯದು,—ನೀವು ಪ್ರಸಾದರೂಪಾಗಿ ಎನ್ನ ಕಾಯವನವಗ್ರಹಿಸಿದಿರಾಗಿ, ಆ ಕಾಯ ನಿಮ್ಮನವ

ಗ್ರಹಿಸಿತ್ತಾಗಿ. ಎನ್ನ ಮನೋವಾಕ್ಕಾಯದ ಅಂತರಂಗ ಬಹಿರಂಗ ಸರ್ವಾಂಗವು ಇತರ ದೇವತೆಗಳ ವಾಙ್ಮನಕ್ಕತೀತವನವಗ್ರಹಿಸಿತ್ತಾಗಿ, ಎನ್ನ ಮನೋವಾಕ್ಕಾಯದ ಸ್ಥಿತಿ ಗತಿ ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩೯

ಎನ್ನ ಗತಿ ನಿನ್ನ ಗತಿ. ಎನ್ನ ಕೇಳಿಕೆ ನಿನ್ನ ಕೇಳಿಕೆ. ಎನ್ನ ನೋಟ ನಿನ್ನ ನೋಟ. ಎನ್ನಂಗಸ್ಪರ್ಶನ ನಿನ್ನಂಗಸ್ಪರ್ಶನ. ಎನ್ನ ಸುಖಭೋಗವೆಲ್ಲ ನಿನ್ನ ಸುಖಭೋಗ. ಎನ್ನೊಳಗೆ ನೀನು, ನಿನ್ನೊಳಗೆ ನಾನು. ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ !

೪೦

ಎನ್ನಂಗದಲ್ಲಿ ನಿನಗೆ ಮಜ್ಜನ. ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ. ಎನ್ನ ತುರುಬಿನಲ್ಲಿ ನಿನಗೆ ಕುಸುಮಪೂಜೆ. ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪು ವಿಚಿತ್ರ ವಿನೋದ. ಎನ್ನ ಶ್ರೋತ್ರದಲ್ಲಿ ನಿನಗೆ ಪಂಪಮಹಾವಾದ್ಯ ಕೇಳಿರೇ. ಎನ್ನ ನಾಸಿಕದಲ್ಲಿ ನಿನಗೆ ಸುಗಂಧಧೂಪ ಪರಿಮಳ. ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ. ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ. ಎನ್ನ ಸಚ್ಚಿದಾನಂದವೆಂಬ ಸೆಜ್ಜೆಗೃಹದಲ್ಲಿ ನೀನು ಸ್ಪರ್ಶನಂಗೈದು ನೆರೆದಿಪ್ಪೆಯಾಗಿ, ನೀ ನಾನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ !

೪೧

ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ. ದೇವ ನೀನಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ. ಈ ಪರಿಯಲಿ ಮಾಡುವರಿನ್ನಾರು ಹೇಳಾ? ಎನಗೆ ನೀನೆ ಗತಿ, ನಿನಗೆ ನಾನೆ ಗತಿ. ಇನ್ನೇಕೆ ಜವನಿಕೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ?

೪೨

ರಸವನರಿವುದಕ್ಕೆ ಜಿಹ್ವೆಯಾಗಿ ಬಂದು, ಗಂಧವನರಿವುದಕ್ಕೆ ನಾಸಿಕವಾಗಿ ಬಂದು, ರೂಪನರಿವುದಕ್ಕೆ ನೇತ್ರವಾಗಿ ಬಂದು, ಶಬ್ದವನರಿವುದಕ್ಕೆ

ಶ್ರೋತ್ರವಾಗಿ ಬಂದು, ಸ್ಪರ್ಶವನರಿವುದಕ್ಕೆ ತ್ವಕ್ಕಾಗಿ ಬಂದು — ಇಂತೆನ್ನ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ !

೪೩

ಕೈ ಮುಟ್ಟುವಲ್ಲಿ, ಕಿವಿ ಕೇಳುವಲ್ಲಿ, ಬಾಯಿ ಕೊಂಬಲ್ಲಿ, ಮೂಗು ವಾಸಿಸುವಲ್ಲಿ, ಕಣ್ಣು ನೋಡುವಲ್ಲಿ–ಐದರ ಮಾಟವನ್ನು ವಿಚಾರಿಸದೆ, ಸಂಚಿತ ಪ್ರಾರಬ್ಧ ಆಗಾಮಿ ಎಂಬ ಹಿಂಚುಮುಂಚಿಗೆ ಸಿಕ್ಕದೆ, ಕುಡಿವೆಳಗಿನ ಮಿಂಚಿನ ಸಂಚದಂತಿರಬೇಕೆಂದಾತ ನಮ್ಮ ಅಂಬಿಗರ ಚೌಡಯ್ಯನು.

೪೪

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ, ಕೂಡಲ ಸಂಗಮದೇವಾ, ನಿಮ್ಮ ಚರಣಕಮಲದಲಾನು ತುಂಬಿ !

೪೫

ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ, ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ, ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ, ಮನ ತುಂಬಿದ ಬಳಿಕ ನೆನೆಯಲಿಲ್ಲ ಮಹಂತ ಕೂಡಲಸಂಗಮದೇವನ !

೪೬

ಆಗದಾಗದು ಮರ್ತ್ಯದ ಮನುಜರಿಗೆ ಶಿವಸುಖ. ಅದೆಂತೆಂದರೆ: ಕಾಳು ವಿಷಯದಲ್ಲಿ ಬಿದ್ದು ನುಡಿವುತ್ತ, ಮರವೆ ನಡೆವುತ್ತ, ಮರವೆ ಮುಟ್ಟುತ್ತ, ಮರವೆ ಕೇಳುತ್ತ, ಮರವೆ ನೋಡುತ್ತ–ಇಂತು ಮರಹಿನೊಳಗಿರ್ದು, ಅರುಹ ಕಂಡಿಹೆನೆಂಬ ಅಣ್ಣಗಳಿರಾ ನೀವು ಕೇಳಿರೋ. ನಮ್ಮ ಶರಣರ ನಡೆ ಎಂತೆಂದರೆ: ಐದು ಗುಣವನೆ ಅಳಿದು, ನುಡಿವುತ್ತ ಲಿಂಗವಾಗಿ ನುಡಿವರು, ಮುಟ್ಟುತ್ತ ಲಿಂಗವಾಗಿ ಮುಟ್ಟುವರು, ನಡೆವುತ್ತ ಲಿಂಗವಾಗಿ ನಡೆವರು,

ಕೇಳುತ್ತ ಲಿಂಗವಾಗಿ ಕೇಳುವರು, ನೋಡುತ್ತ ಲಿಂಗವಾಗಿ ನೋಡುವರು,— ಸರ್ವಾಂಗವು ಲಿಂಗವಾಗಿ, ಅಂಗ ಲಿಂಗವೆಂಬ ಉಭಯವಳಿದು ಮಂಗಳದ ಮಹಾಬೆಳಗಿನಲ್ಲಿ ಲಿಂಗವೇ ಗೂಡಾಗಿರ್ದ ಕಾರಣ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೪೭

ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು, ಸಂತೆಯ ಸೂಳೆಯ ರಂತೆ. ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ. ಅಂತರಂಗ ವೆಲ್ಲ ಅರುಹಾಯಿತ್ತು. ಬಹಿರಂಗವೆಲ್ಲ ಲಿಂಗವಾಯಿತ್ತು. ಆ ಲಿಂಗದಲ್ಲಿ ನುಡಿದು, ಲಿಂಗದಲ್ಲಿ ನಡೆದು, ಲಿಂಗದಲ್ಲಿ ಮುಟ್ಟಿ, ಲಿಂಗದಲ್ಲಿ ವಾಸಿಸಿ, ಲಿಂಗದಲ್ಲಿ ಕೇಳಿ, ಲಿಂಗವಾಗಿ ನೋಡಿ, ಸರ್ವಾಂಗವು ಲಿಂಗವಾಗಿ, ಆ ಲಿಂಗವ ನೋಡುವ ಕಂಗಳಲ್ಲಿ ಐಕ್ಯ ಕಂಡಯ್ಯಾ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣ.

೪೮

ನುಡಿದರೆ ಗುರುವಾಗಿ ನುಡಿಯಬೇಕು. ನಡೆದರೆ ಪರವಾಗಿ ನಡೆಯ ಬೇಕು. ಕುಳಿತರೆ ಲಿಂಗವಾಗಿ ಕುಳಿತಿರಬೇಕು. ಇದ್ದರೆ ಜಂಗಮವಾಗಿ ಇರಬೇಕು. ಈ ನಾಲ್ಕರ ಹೊಂದಿಗೆಯನರಿಯದವರು ಎಷ್ಟು ದಿನವಿದ್ದರೂ ಫಲವೇನು ಹೇಳಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ?

೪೯

ಅರಿವ ಬೈಚಿಟ್ಟುಕೊಂಡು, ಮರೆಯ ಮಾನವನಂತೆ ಕುರುಹಿನ ಹೆಸರಲ್ಲಿ ಕರೆದರೆ, ಓ ಎನುತಿಪ್ಪವರು ನರರೇ ಅಯ್ಯಾ,—ನಿಮ್ಮ ಶರಣರು? ಕುರುಹಿಲ್ಲ ಲಿಂಗಕ್ಕೆ, ತೆರಹಿಲ್ಲ ಶರಣಂಗೆ. ಬರಿಯ ಸಂಸಾರವ ಬಳಸಿಯೂ ಬಳಸದಂತಿಪ್ಪರು ಮಹಾಲಿಂಗಕಲ್ಲೇಶ್ವರಾ, ನಿಮ್ಮ ಶರಣರು.

೫೦

ಉಂಡರೇನೋ? ಉಣದಿದ್ದರೇನೋ? ಸೋಂಕಿತವೇನೋ? ಅಸೋಂಕಿತವೇನೋ? ಹುಟ್ಟುವುದಿಲ್ಲಾಗಿ ಹೊಂದುವುದಿಲ್ಲ. ಸತ್ತು ಬದುಕಿ ನಿಶ್ಚಿಂತವಾಯಿತ್ತು ಗೊಹೇಶ್ವರ.

೫೧

ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ, ಲಿಂಗಜಂಗಮದ ಚೈತನ್ಯವೆ, ನಿಮ್ಮನಗಲಿ ಎಂತು ಸೈರಿಸುವೆನು! ಎಲೆ ಅಯ್ಯಾ, ಪರಮ ಗುರುವೆ! ಆಹಾ! ಎನ್ನ ಅಂತರಂಗದ ಜ್ಯೋತಿಯೆ, ನಿಮ್ಮ ಒಕ್ಕ ಶೇಷ ಪ್ರಸಾದವನಿಕ್ಕಿ, ಎನ್ನ ಪಾವನವ ಮಾಡಿ ಉಳುಹಿದೆಯಯ್ಯಾ! ಲಿಂಗವೆ, ಎನಗಿನ್ನಾರು ಹೇಳಯ್ಯಾ ನೀನಲ್ಲದೆ? ಬಸವಣ್ಣಪ್ರಿಯ ಚೆನ್ನಸಂಗಯ್ಯಾ, ನೀವಗಲಿದರೆ ಎನ್ನ ಪ್ರಾಣ ನಿಮ್ಮೊಳಗೆ ಅಗಲಬಲ್ಲುದೆ?

೫೨

ಎಲೆ ಅಯ್ಯಾ, ಕರಸ್ಥಲ ಬಯಲಾಯಿತ್ತೆನಗೆ. ಕರಸ್ಥಲ ಮನಸ್ಥಲ ವಾಯಿತ್ತು. ಸಂಗಯ್ಯಾ, ಬಸವ ಹೋದನತ್ತ; ನಾನಡಗಿದೆನಯ್ಯಾ ನಿನ್ನತ್ತ!

೫೩

ಆದಿಯನಾದಿಯ ತತ್ವವ ಭೇದಿಸಿಕೊಟ್ಟ ಗುರುವೆ, ಅಪ್ರಮಾಣದ ಬೆಳಗ ಭೇದಿಸಿ ಕೊಟ್ಟ ಗುರುವೆ, ಅಕಾರ ಉಕಾರ ಮಕಾರ ಕಳೆಯನರುಹಿಸಿ ಕೊಟ್ಟ ಗುರುವೆ, ಇಷ್ಟ ಪ್ರಾಣ ಭಾವವಿದೆಂದು ತೋರಿದ ಗುರುವೆ, ನಿಜದರಿವನರುಹಿಸಿ ಕೊಟ್ಟ ಗುರುವೆ, ನಿರ್ಮಳಪ್ರಭೆಯ ತೋರಿದ ಗುರುವೆ, ನಿಜವನನುಭವಕ್ಕೆ ತಂದ ಗುರುವೆ, ನಿಮ್ಮ ಘನವ ಕಾಂಬ ಕಣ್ಣು ಕ್ರಮ ಗೆಟ್ಟಿತ್ತು; ಸಂಗಯ್ಯ ಬಸವಯ್ಯನ ಪ್ರಭೆಯಲ್ಲಿ ಅಡಗಿತ್ತೊ!

೫೪

ಭಕ್ತಿಯೆಂಬ ಪೃಥ್ವಿಯ ಮೇಲೆ, ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು, ಆಚಾರವೆಂಬ ಕಾಯಾಯಿತ್ತು, ನಿಷ್ಪತ್ತಿಯೆಂಬ ಹಣ್ಣಾ ಯಿತ್ತು. ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ, ಕೂಡಲಸಂಗಮದೇವ ತಮಗೆ ಬೇಕೆಂದು ಎತ್ತಿಕೊಂಡ.

೫೫

ಭಕ್ತರಿಗೆ ಅಕ್ಕೆ ಶೋಕ ದುಃಖ ಉಂಟೇ ಅಯ್ಯ? ಅತ್ತು ಕಳೆವ ನೋವ ಹಾಡಿ ಕಳೆಯರೇಕಯ್ಯ? ಮುಕ್ತಾಯಕ್ಕಗಳ ಕಕ್ಕುಲಿತೆಯ ಶಂಭುಜಕ್ಕೇಶ್ವರನ ಶರಣರೊಪ್ಪರಯ್ಯ.

೫೬

ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ? ನಾನಾರ ಹೊದ್ದುವೆನೆಂದು ಭ್ರಮೆ ಪಡಲೇತಕ್ಕಯ್ಯಾ? ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕ್ಕಯ್ಯಾ? ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ, ಸಂಗಯ್ಯನ ಹಂಗು ನಮಗೇತಕಯ್ಯಾ ಅಪ್ಪಣ್ಣಾ?

೨. ಕಾಯವೆ ಕೈಲಾಸ – ದೇಹವೆ ದೇಗುಲ

೫೭

ಕಾಯದಿಂದ ಗುರುವ ಕಂಡೆ. ಕಾಯದಿಂದ ಲಿಂಗವ ಕಂಡೆ. ಕಾಯದಿಂದ ಜಂಗಮವ ಕಂಡೆ. ಕಾಯದಿಂದ ಪ್ರಸಾದವ ಕಂಡೆ. ಕಾಯದಿಂದ ಸಕಳೇಶ್ವರದೇವರ ಪೂಜಿಸುವಲ್ಲಿ, ಉತ್ತರಸಾಧಕನಾದೆಯಲ್ಲಾ ಎಲೆ ಕಾಯವೆ.

೫೮

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ? ಈ ಲೋಕದೊಳಗೆ ಮತ್ತೆ ಅನಂತಲೋಕ! ಶಿವಲೋಕ ಶಿವಾಚಾರವಯ್ಯಾ. ಭಕ್ತನಿರ್ದ ಠಾವೇ ದೇವಲೋಕ. ಭಕ್ತನಂಗಳವೇ ವಾರಣಾಸಿ. ಕಾಯವೇ ಕೈಲಾಸ! ಇದು ಸತ್ಯ ಕೂಡಲಸಂಗಮದೇವಾ.

೫೯

ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ, ಬಲಿದು ಷಡ್ವಿಧ ಭಕ್ತಿಯೆಂಬ ಸೋಪಾನದಿಂದ, ಪರಮಾನಂದಜಲವ ತುಂಬಿ, ಕೆರೆಯ

ಕಟ್ಟಬಲ್ಲವರನಾರನೂ ಕಾಣೆ, ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗೊಹೇಶ್ವರ ನಿಮ್ಮಾಣೆ.

೬೦

ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ, ಅಗಿದು ಕಳೆದೆನಯ್ಯ ಭ್ರಾಂತಿನ ಬೇರ. ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ. ಅಖಂಡ ಮಂಡಲವೆಂಬ ಬಾವಿ, ಪವನವೆ ರಾಟಾಳ, ಸುಷುಮ್ನನಾಳದಿಂದ ಉದಕವ ತಿದ್ದಿ, ಬಸವಗಳೈವರು ಹಸಗೆ ಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ, ಆವಾಗಳೂ ಈ ತೋಟದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗೊಹೇಶ್ವರಾ.

೬೧

ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ, ಬಯಲ ಗಾಳಿಯ ಹಿಡಿದು ಘಟ್ಟ ಮಾಡದನ್ನಕ್ಕ ಬರಿದೆ ಬಹುದೇ ಶಿವಜ್ಞಾನ? ಷಡುವರ್ಗವಳಿಯದನ್ನಕ್ಕ ಬರಿದೆಬಹುದೇ? ಅಷ್ಟಮದವಳಿಯದನ್ನಕ್ಕ? ಮದಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ. ಗೊಹೇಶ್ವರಲಿಂಗ ಕಲ್ಪಿತದೊಳಗಲ್ಲ.

೬೨

ಕಾಯವೆಂಬ ಕದಳಿಯ ಹೊಕ್ಕು, ಪ್ರಾಣವೆಂಬ ಗಹ್ವರದಲ್ಲಿ ಸಕಲೇಂದ್ರಿಯವೆಂಬ ಕೋಣೆಕೋಣೆಗಳಲ್ಲಿ ತಿರುಗಾಡುತ್ತ ಬರಲಾಗಿ ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು; ಗೊಹೇಶ್ವರಲಿಂಗ ವೆಂಬುದು ರೂಪಾಯಿತ್ತು, ಸಂಗನಬಸವಣ್ಣ.

೬೩

ಅಂಗದ ಕಳೆಯುಲೊಂದು ಲಿಂಗವ ಕಂಡೆ, ಲಿಂಗದ ಕಳೆಯುಲೊಂದು ಅಂಗವ ಕಂಡೆ, ಅಂಗ ಲಿಂಗ ಸಂದಣಿಯನರಸಿ ಕಂಡೆ ನೋಡಿರೇ. ಇಲ್ಲಿ ಐದಾನೆ ಶಿವನು, ಬಲ್ಲಡೆ ಇರಿಸಿಕೊಳ್ಳಿರೇ. ಕಾಯವಳಿಯದ ಮುನ್ನ ನೋಡ ಬಲ್ಲಡೆ, ಗೊಹೇಶ್ವರಲಿಂಗಕ್ಕೆ ಬೇರೆ ಠಾವುಂಟೆ ಹೇಳಿರೇ?

೬೪

ನೆನೆ ನೆನೆಯೆಂದಡೆ ಏನ ನೆನೆವೆನಯ್ಯ? ಎನ್ನ ಕಾಯವೇ ಕೈಲಾಸವಾಯಿತ್ತು; ಮನವೆ ಲಿಂಗವಾಯಿತ್ತು; ತನುವೆ ಸೆಜ್ಜೆಯಾಯಿತ್ತು. ನೆನೆವಡೆ ದೇವನುಂಟೆ? ನೋಡುವಡೆ ಭಕ್ತನುಂಟೆ? ಗೊಹೇಶ್ವರಲಿಂಗ ಲೀಯವಾಯಿತ್ತು.

೬೫

ಉದಕ ಮೂರುತಿಯಾಗಿ ಉದಯವಾಯಿತ್ತು. ಪಿಂಡಿಗೆಯಲ್ಲಿ ಮೂಲಸ್ಥಾನ ಸ್ಥಾಪ್ಯವಾಯಿತ್ತು. ಸ್ವದೇಹಶಿವಪುರದಲ್ಲಿ ವಾಯು ಪೂಜಾರಿಯಾಗಿ, ಪರಿಮಳದಿಂಡೆಯ ಕಟ್ಟಿ, ಪೂಜಿಸುತ್ತಿರ್ದುದೋ ನವ ದ್ವಾರ ಶಿವಾಲಯದಾದಿ ಮಧ್ಯಸ್ಥಾನದಲ್ಲಿ! ಗೊಹೇಶ್ವರನೆಂಬುದಲ್ಲಿಯೆ ನಿಂದಿತ್ತು.

೬೬

ದೇಹದೊಳಗೆ ದೇವಾಲಯವಿದ್ದು, ಮತ್ತೆ ಬೇರೆ ದೇವಾಲಯವೇಕೆ? ಎರಡಕ್ಕೆ ಹೇಳಲಿಲ್ಲಯ್ಯ! ಗೊಹೇಶ್ವರ, ನೀನು ಕಲ್ಲಾದರೆ ನಾನೇನಪ್ಪೆನು?

೬೭

ಉಳ್ಳವರು ಶಿವಾಲಯವ ಮಾಡುವರು: ನಾನೇನ ಮಾಡುವೆ? ಬಡವನಯ್ಯಾ. ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರ ಹೊನ್ನ ಕಳಸವಯ್ಯಾ. ಕೂಡಲಸಂಗಮದೇವ, ಕೇಳಯ್ಯಾ: ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ!

೬೮

ಕಾಲೇ ಕಂಭಗಳಾದವೆನ್ನ! ದೇಹವೇ ದೇಗುಲವಾಯಿತ್ತಯ್ಯ! ಎನ್ನ ನಾಲಿಗೆಯೆ ಘಂಟೆ, ಶಿರ ಸುವರ್ಣದ ಕಳಶ—ಇದೇನಯ್ಯ? ಸರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯ. ಗೊಹೇಶ್ವರ, ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ ಪಲ್ಲಟವಾಗದಂತಿದ್ದೆನಯ್ಯ.

೧೯

ಎನ್ನ ಕಾಯುವೇ ದೇಗುಲವಾಗಿ, ಕುರುಹಿಟ್ಟು ಕೊಟ್ಟ ಕುರುಹೇ ಪ್ರಾಣಲಿಂಗವಾಗಿ, ನೋಡುವ ಕಣ್ಣೇ ಪೂಜಿಸುವ ಪುಷ್ಪವಾಗಿ, ಆನಂದಾಶ್ರುಗಳೇ ಸಕಲಭೋಗವಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರವರತುದೇ ಅಡ್ಡವಣಿಗೆ ಪರಿಯಾಣವಾಗಿ, ಪರಿಣಾಮುವೇ ನೈವೇದ್ಯವಾಗಿ, ಅಖಂಡ ಭಕ್ತಿರತಿಯೇ ತಾಂಬೂಲವಾಗಿ, ಪೂಜಿಸುತ್ತಿರ್ದೆನಯ್ಯ. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ, ಎನ್ನ ಪ್ರಾಣ ಪೂಜೆ ನಿಮಗೆ.

೨೦

ತನುವೆಂಬ ದೇವಸ್ಥಾನದೊಳಗೆ, ಮನಕಾಗ್ರವೆಂಬ ಸೆಜ್ಜಾಗೃಹದಲ್ಲಿ ಪ್ರಾಣಲಿಂಗ ಸ್ವಯಂಭು ಪ್ರತಿಷ್ಠೆಯಾಗಿರಲು, ಗುರುವೆಂಬರ್ಚಕನು ಮಂತ್ರವೆಂಬಾಗಮಿಕನು ಸಹ, ಇಷ್ಟಲಿಂಗವೆಂಬುತ್ಸವ ವಿಗ್ರಹವನು ಕರಸ್ಥಲವೆಂಬ ರಥದಲ್ಲಿ ಮೂರ್ತಿಗೊಳಿಸಿ, ಆ ಕರಸ್ಥಲವೆಂಬ ರಥಕ್ಕೆ ಜ್ಞಾನಕ್ರಿಯೆಯೆರಡು ಪಾದದ್ವಯುವೆರಡು ಕೂಡಿ ನಾಲ್ಕು ಗಾಲಿಗಳಂ ಹೂಡಿ, ಪಂಚೇಂದ್ರಿಯಂಗಳೆಂಬ ಪತಾಕೆಗಳ ಧರಿಸಿ, ಏಕೋಭಾವವೆಂಬ ಕಳಶವನಿಟ್ಟು, ದಶವಾಯುಗಳೆಂಬ ಪಾಶವಂ ಬಂಧಿಸಿ, ಷಡಂಗಗಳೆಂಬ ಮೊಳೆಗಳಂ ಬಲಿದು, ಸಪ್ತಧಾತುವೆಂಬ ಜಲ್ಲಿಪಟ್ಟೆಯನಲಂಕರಿಸಿ, ಅಷ್ಟಮದ ಸಪ್ತವ್ಯಸನಂಗಳೆಂಬಾನೆ ಕುದುರೆಗಳು ಸಹ ಮಹಾನಾದವೆಂಬ ಭೇರೀ ವಾದ್ಯಂಗಳಿಂ ಷೋಡಶವಿಕಾರಗಳೆಂಬ ನರ್ತಕೀಮೇಳದಾರತಿಯಿಂ, ಅಂತಃಕರಣ ಚತುಷ್ಟಯಂಗಳೆಂಬ ಚಾಮರಧಾರಕರಿಂ, ಮನವೆಂಬ ಹೊರಜಿಯುಂ ಕರಣಂಗಳೆಂಬ ಕಾಲಾಳ್ಗಳಿಂ ಪಿಡಿಸಿ, ಸುಬುದ್ಧಿಯೆಂಬ ಭೂಮಿಯಲ್ಲಿ ಆನಂದವೆಂಬರಸು ರಥವಂ ನಡೆಸಿ, ನೆನಹುನಿಷ್ಪತ್ತಿಯೆಂಬ ಸ್ಥಾನದಲ್ಲಿ ನಿಲ್ಲಿಸಿ, ಇಷ್ಟಲಿಂಗವೆಂಬುತ್ಸವವಿಗ್ರಹವನು ಹೃದಯಕಮಲವೆಂಬಂತರಾಳದಲ್ಲಿ ಮೂರ್ತಿಗೊಳಿಸಿ, ಆನಂದವೆಂಬರಸು ನಿರಾಳವೆಂಬಪರಿಮಿತ ಪಟ್ಟಣವ ಪ್ರವೇಶವಾದನು ಕಾಣಾ ಗೊಹೇಶ್ವರಾ.

೭೧

ಉದಕದಲುತ್ಪತ್ತಿಯಾದ ಶತಪತ್ರದಂತೆ ಸಂಸಾರಸಂಗವ ಹೊದ್ದದಿರಬೇಕು. ಕಾಯವೆ ಪೀಠ ಮನವೇ ಲಿಂಗವಾದರೆ, ಕೊರಳಲ್ಲಿ ನಾಗವತ್ತಿಗೆಯೇಕೋ ಶರಣಂಗೆ, ಗೊಹೇಶ್ವರಾ ?

೭೨

ಪೂಜಿಸಿ ಕೆಳಯಿಂಕೆ ಇಳುಹಲದೇನೋ? ಅನಾಗತ ಪೂಜೆಯ ಮಾಡಲದೇನೋ ? ದೇಹವೇ ಪಿಂಡಿಗೆ, ಜೀವವೇ ಲಿಂಗ ಗೊಹೇಶ್ವರ.

೭೩

ಪೂರಾಯ ಘಾಯ ತಾಗಿ ನೊಂದೆನೆಂದರಿಯೆನಯ್ಯ! ಇದ್ದೆನೆಂದರಿಯೆನಯ್ಯ! ಸತ್ತೆನೆಂದರಿಯೆನಯ್ಯ! ಕಾಯ ಪಲ್ಲಟವಾಯಿತ್ತು,—ಗೊಹೇಶ್ವರಲಿಂಗ ಸ್ವಾಯತವಾಗಿ.

೭೪

ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯಕಮಲದಲ್ಲಿ ಶಿವ ಶಿವಾ ಎಂಬ ಶಬ್ದ. ಇದು ಅದ್ವೈತ ಕಾಣಾ ಗೊಹೇಶ್ವರಾ.

೭೫

ಕಾಯದೊಳಗಣ ಜೀವ ಹೇಗಿಪ್ಪುದೆಂದರೆ: ಒಳಗೊಂದು ಬೆಳಗುವ ಜ್ಯೋತಿಯಂತೆ ಇಪ್ಪುದಯ್ಯ. ಕಾಯವೇ ಶರಣ, ಜೀವವೇ ಲಿಂಗವೆಂಬ ಉಪಾಯವನಾರೂ ತಿಳಿಯರಲ್ಲಾ. ಜೀವನ ಬೆಳಗು ಕಾಯವ ನುಂಗಲು, ಕಾಯ ನಿರವಯವಾಯಿತ್ತೆಂಬೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೭೬

ಅಂಗವೆ ಲಿಂಗ, ಲಿಂಗವೆ ಅಂಗವೆಂದರಿದ ಬಳಿಕ, ನಮ್ಮ ಕೂಡಲ ಚೆನ್ನಸಂಗಮದೇವರು ಅಲ್ಲಿ ಹೆರಹಿಂಗದಿರ್ಪ ಕಾಣಿರೋ.

೭೭

ನಿಂದ ನೆಲೆಯ ನೀರಿನಂತೆ, ಮರ ಶಿಲೆಗಳಲ್ಲಿ ಸಂದಿಸಿ ನಿಂದ ಪಾವಕನಂತೆ, ಕರಂಡದಲ್ಲಿ ಬಂಧಿಸಿ ನಿಂದ ಸುವಾಸನೆಯಂತೆ, ಈ ಅಂಗದಲ್ಲಿ ನಿಂದ ನಿಜಲಿಂಗಾಂಗ ಸಂಬಂಧ. ಈ ಗುಣ ಸಂಗನಬಸವಣ್ಣಂಗೆ ಸಂಬಂಧವಾಯಿತ್ತು. ಬ್ರಹ್ಮೇಶ್ವರಲಿಂಗವು ಅವರಿಗೆ ಒಳಗಾದ.

೭೮

ಅಂಗದಿಂದೆ ಲಿಂಗಸುಖ, ಲಿಂಗದಿಂದೆ ಅಂಗಸುಖ. ಆ ಅಂಗಲಿಂಗ ಸಂಗಸುಖದಿಂದೆ ಪರಮಸುಖ ದೊರೆಕೊಂಬುದು ನೋಡಾ. ಆ ಅಂಗಲಿಂಗ ಸಂಗ ಪರಮರಸೈಕ್ಯವನು, ಕೂಡಲಚೆನ್ನಸಂಗ, ನಿಮ್ಮ ಶರಣನಾದ ಮಹಾಲಿಂಗೈಕ್ಯ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರಯ್ಯಾ?

3. ಮನವೇ ಚಿನ್ಮಯಲಿಂಗ

೭೯

ಶುಕ್ಲಶೋಣಿತದಿಂದ ತನು ಮನ ಜನಿಸಿತ್ತು. ತನು ಮನದಿಂದ ನಡೆ ನುಡಿ ಜನಿಸಿತ್ತು. ನಡೆನುಡಿಯಿಂದ ಅಹಂಕಾರ ಮಮಕಾರ ಜನಿಸಿತ್ತು. ಇವರ ದೆಸೆಯಿಂದ ರಸ ಗಂಧ ರೂಪು ಶಬ್ದ ಸ್ಪರ್ಶನ ಜನಿಸಿತ್ತು. ಇವಕ್ಕಾಶ್ರಯವಾಗಿ ಮನ ಒಂದಿದ್ದಿತಲ್ಲದೆ, ಆ ಮನವು ಮಹದಲ್ಲಿ ಲಯವಾದಲ್ಲಿ, ಆತ್ಮನಾವೆಡೆಯಲ್ಲಿದ್ದಿತ್ತು? ಷಡುವರ್ಣದೊಳಗಲ್ಲ. ನಡೆನುಡಿ ಚೈತನ್ಯದಲ್ಲಿ ಹಿಡಿತಕ್ಕೆ ಬರಲಿಲ್ಲ. ಇನ್ನೆಂತಿಪ್ಪುದೊ? ದರ್ಪಣದ ಪ್ರತಿಬಿಂಬಕ್ಕೊಂದು ಚೇಷ್ಟೆಯುಂಟೆ? ನೆಳಲಿಂಗೊಂದು ಹರಿದಾಟ ಉಂಟೆ? ನಿಃಕಳಂಕ ಶಾಂತಮಲ್ಲಿಕಾರ್ಜುನಯ್ಯ, ಮನದ ನೆನಹೆ ಆತ್ಮನಲ್ಲದೆ, ಬೇರೊಬ್ಬ ಆತ್ಮನಿಲ್ಲ ಕಾಣಾ ಸೌರಾಷ್ಟ್ರಸೋಮೇಶ್ವರಾ.

೮೦

ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ. ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ. ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ.

೮೧

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ. ಎನಗುಳ್ಳುದೊಂದು ಮನ. ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗೆ ಭವ ಉಂಟೇ ಚೆನ್ನಮಲ್ಲಿಕಾರ್ಜುನಾ?

೮೨

ಶ್ರೀಗುರು ಮಾಡಿದ ಗುರುತ್ವವು ಉಪಮಾತೀತವಯ್ಯ. ನೇತ್ರದಲ್ಲಿ ತನ್ನ ರೂಪ ತುಂಬಿ, ನೇತ್ರವನು ಗುರುವ ಮಾಡಿದ. ಶ್ರೋತ್ರದಲ್ಲಿ ಮಹಾ ಮಂತ್ರವ ತುಂಬಿ, ಶ್ರೋತ್ರವ ಗುರುವ ಮಾಡಿದ. ಘ್ರಾಣದಲ್ಲಿ ಗುರುಪಾದ ಪದ್ಮದಲ್ಲಿಯ ಮಹಾಗಂಧವನು ತುಂಬಿ, ಘ್ರಾಣವನು ಗುರುವ ಮಾಡಿದ. ಜಿಹ್ವೆಯಲ್ಲಿ ತನ್ನ ಕರುಣಪ್ರಸಾದವ ತುಂಬಿ, ಜಿಹ್ವೆಯನ್ನು ಗುರುವ ಮಾಡಿದ. ಕಾಯುವನು ಭಕ್ತಕಾಯ ಮಮಕಾಯುವೆಂದು ಪ್ರಸಾದಕಾಯ ವೆಂದೆನಿಸಿ, ಕಾಯುವನು ಗುರುವ ಮಾಡಿದ. ಅಂತು ಅಂತರಂಗಬಹಿರಂಗ ವನು ಗುರುವ ಮಾಡಿ, ಸರ್ವಾಂಗವನು ಪ್ರಾಣವನು ಲಿಂಗಪ್ರಾಣ ಸಂಬಂಧವ ಮಾಡಿ, ಪ್ರಾಣವನು ಗುರುವ ಮಾಡಿದ. ಗುರುವ ಮಾಡಿದ ಮಹಾಗುರುವಿಂಗೆ ನಾನಿನ್ನೇನ ಮಾಡುವೆನಯ್ಯಾ? ಗುರು ಪೂಜೆಯ ಮಾಡಲು, ಆವಾವ ದ್ರವ್ಯಂಗಳನು ಆವಾವ ಪದಾರ್ಥಂ ಗಳನು, ಆವಾವ ಪುಷ್ಪಫಲಾದಿಗಳನು ವಿಚಾರಿಸಿ ನೋಡಿದಡೆ, ಆವಾವೂ ಗುರುತ್ವವಿಲ್ಲ. ಸರ್ವದ್ರವ್ಯಮೂಲವು, ಸರ್ವಪದಾರ್ಥಮೂಲವು, ಸರ್ವರಸ ಪುಷ್ಪಫಲಾದಿಗಳನು ವಿಚಾರಿಸಿ ನೋಡಿದಡೆ, ಆವಾವೂ ಗುರುತ್ವವಿಲ್ಲ. ಸರ್ವದ್ರವ್ಯಮೂಲವು ಸರ್ವಪದಾರ್ಥಮೂಲವು, ಸರ್ವರಸಪುಷ್ಪಫಲಾದಿ

ಗಳೆಲ್ಲಕ್ಕೆಯು ಮೂಲಿಗ ಮನವು ಗುರುತ್ವವುಳ್ಳದ್ದು. ನನ್ನ ಮನೋವಾಕ್ಕಾಯ ಸಹಿತ ಕಾಯವನು ಗುರುವಿಂಗಿತ್ತು, ಎನ್ನ ಶಿರವನು ಶ್ರೀಗುರುವಿನ ದರ್ಶನ ಸ್ಪರ್ಶನವ ಮಾಡಿ ಸುಖಿಯುಪ್ಪೆನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೩

ಇಚ್ಛಾ ಜ್ಞಾನ ಕ್ರಿಯಾಶಕ್ತಿ ನಿಮ್ಮಿಚ್ಛೆ ಎಂಬುದ ನಾ ಬಲ್ಲೆನು. ಸರ್ವವೂ ನಿಮ್ಮಾಜ್ಞೆ ಎಂಬುದ ನಿಮ್ಮಡಿಗಳು ಬೆಸಸಿದ ಶ್ರುತಿಗಳ ಕೇಳಿ ಬಲ್ಲೆನು. ಇದನರಿದಿರ್ದು, ಈ ಮನವು ಮರಳಿ ಬಿರ್ದು, ಗುರುಲಿಂಗ ಜಂಗಮಕ್ಕೆ ನಾ ಮಾಡಿದೆನೆಂಬ ಅವಿಚಾರದ ಮನದ ಪರಿಯ ನೋಡಾ! ಇದಿರ ಬೇಡಿದರೆ ಕೊಡರೆಂಬ ಮನದ ಗಸಣಿಯ ನೋಡಾ! ಶಿವಶಿವಾ, ಅರಿವಿಂಗಿದು ಲಕ್ಷಣವೇ? ಮಹಾದೇವಾ, ಎನ್ನ ಮನವ ನೋಡಾ! ಎನ್ನ ಮನವ ಸಂತವ ಮಾಡಿ, ನಿಮ್ಮಲ್ಲಿ ಬೆರಿಸಾ. ಬೆರಿಸದಿರ್ದಡೆ ನಿಮಗೆ ಮಹಾಗಣಂಗಳಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೪

ನಚ್ಚುಗೆ ಮನ ನಿಮ್ಮಲ್ಲಿ. ಮೆಚ್ಚುಗೆ ಮನ ನಿಮ್ಮಲ್ಲಿ. ಸಲ್ಲುಗೆ ಮನ ನಿಮ್ಮಲ್ಲಿ. ಸೋಲುಗೆ ಮನ ನಿಮ್ಮಲ್ಲಿ. ಅಳಲುಗೆ ಮನ ನಿಮ್ಮಲ್ಲಿ. ಬಳಲುಗೆ ಮನ ನಿಮ್ಮಲ್ಲಿ. ಕರಗುಗೆ ಮನ ನಿಮ್ಮಲ್ಲಿ. ಕೊರಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಯ್ಯ.

೮೫

ಮುಂದನರಿಯದ ಮತಿಗೆಟ್ಟ ಮರುಳು ಮನವೇ, ಕಾಲಕಾಮರ ಗೆಲುವ ಉಪಾಯವಾವುದೆಂದು ತಲೆಯೂರಿ ನೆಲನ ಬರೆಯುತಿಪ್ಪೆ. ಮೊಲ ಜಂಬುಕಂಗಳ ಹುಯ್ಯಲಿಗೆ ಆನೆ ಪೌಜನಡ್ಡ ಮಾಡಬೇಕೇ? ಕಾಲಕಾಮರ ಗೆಲುವುದಕ್ಕೆ ಆಲೋಚನೆ ಏತಕಯ್ಯಾ ಮನವೇ? ಪಂಚೇಂದ್ರಿಯಂಗಳು ಪಂಚಬ್ರಹ್ಮವನಪ್ಪಿ ಅಗಲದಿಪ್ಪುದೆ ಪಂಚಬಾಣನ ಹರಣದ ಕೇಡು. ನಾನು

ಪರಬ್ರಹ್ಮದಲ್ಲಿಯೇ ಜನನ, ಎನ್ನ ತನುಮನಧನಂಗಳ ಪರಬ್ರಹ್ಮಕ್ಕೆ ಮಾರುಗೊಟ್ಟೆನೆಂಬ ನಿಚ್ಚಟದ ನುಡಿಯೆ ಕಾಲನ ಗಂಟಲ ಗಾಣ. ಅದು ಹೇಗೆಂದೊಡೆ, ಲಿಂಗಾಂಕಿತವಾದ ವೃಕ್ಷಂಗಳ ಮಂಡಲಾಧಿಪತಿ ಮೊದಲಾಗಿ ಮುಟ್ಟಲಮ್ಮ; ತನುಜನ ಆಡು ಮುರಿದಡೆ, ಹೀನವಾರಿಗಪ್ಪುದಯ್ಯ? ಈ ಪ್ರಕಾರದ ಸಮ್ಯಗ್‌ಜ್ಞಾನದಿಂದ ನಿಮ್ಮ ಶರಣರು ಕಾಲಕಾಮರ ಗೆಲಿದರಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೮೬

ಗಿರಿ ಗಗನ ಗಹ್ವರದೊಳಗಿರ್ದಡಲ್ಲೇನೋ? ಮನವು ಲೇಸಾದಡೆ ಸಾಲದೆ? ಮನವು ಲೇಸಾಗಿರ್ದಡೆ ಸಾಲದೆ? ಪರಮಸುಖಿಯಾಗಿಪ್ಪ ಶರಣನ ಹೃದಯದಲ್ಲಿ ಸದಾ ಸನ್ನಿಹಿತ ಸಕಳೇಶ್ವರದೇವ.

೮೭

ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು. ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು. ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು. ಅಂತಹ ಪಾರ್ವತಿ ಘನವೆಂಬೆನೆ? ಪರಮೇಶ್ವರನ ಅರ್ಧಾಂಗಿಯಾದಳು. ಅಂತಹ ಪರಮೇಶ್ವರನ ಘನವೆಂಬೆನೆ? ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು!

೮೮

ಎನ್ನ ಸರ್ವಾಂಗದಲ್ಲಿ ಲಿಂಗವೈದಾನೆ, ಅಯ್ದಾನೆ. ಎನ್ನ ಮನವರಿಯದೆ ಕೆಟ್ಟೆಕೆಟ್ಟೆನಯ್ಯ. ಎನ್ನಂತರಂಗಬಹಿರಂಗದಲ್ಲಿ ಲಿಂಗವೈದಾನೆ, ಮನವರಿಯದೆ ಕೆಟ್ಟೆಕೆಟ್ಟೆ. ವಿಶ್ವಾಸದಿಂದ ಗ್ರಹಿಸಲೊಲ್ಲದೆ ಕೆಟ್ಟೆಕೆಟ್ಟೆನಯ್ಯಾ. ಈ ಮನ ವಿಶ್ವಾಸದಿಂದ ಗ್ರಹಿಸಿದೊಡೆ ಸತ್ಯನಹೆ; ನಿತ್ಯನಹೆ; ಮುಕ್ತನಹೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೮೯

ಅಂಗದ ಮೇಲಣ ಲಿಂಗ ಹಿಂಗಿತ್ತೆಂಬರು. ಅಂಗ ಲಿಂಗಸಂಬಂಧಿಯಾ ದಲ್ಲಿ ಫಲವೇನು, ಮನ ಲಿಂಗಸಂಬಂಧಿಯಾಗದನ್ನಕ್ಕರ? ಮನದಿಂದಲೇನು ಘನವಿಲ್ಲವಯ್ಯಾ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ.

೯೦

ಕೈಯಲ್ಲಿ ಕಟ್ಟುವರು, ಕೊರಳಲ್ಲಿ ಕಟ್ಟುವರು, ಮಂಡೆಯಲ್ಲಿ ಕಟ್ಟುವರು,—ಮನದಿ ಲಿಂಗವ ಕಟ್ಟರಾಗಿ. ಆದ್ಯರು ಹೋದರೆಂದು ವಾಯಕ್ಕೆ ಸಾವುದು ವಿಚಾರವೆ ಗೊಹೇಶ್ವರಾ?

೯೧

ತನುಗುಣ, ಮನಗುಣ, ಪ್ರಾಣಗುಣದಲ್ಲಿ ಹುದುಗಿದಡೆ, ಪಂಚೇಂದ್ರಿಯ ಅರಿಷಡ್ವರ್ಗಂಗಳೊಳು ಮನ ಕೂರ್ತು ಬೆರಸಿದಲ್ಲಿ, ಆ ಮನದ ಹಸ್ತದಲ್ಲಿ ಲಿಂಗವಿಲ್ಲ. ಲಿಂಗವಿಲ್ಲವಾಗಿ ಭಕ್ತಿ ಇಲ್ಲ. ಭಕ್ತಿ ಇಲ್ಲವಾಗಿ ವಿವೇಕವಿಲ್ಲ. ವಿವೇಕವಿಲ್ಲವಾಗಿ ಅರುಹಿಲ್ಲ. ಅರುಹಿಲ್ಲವಾಗಿ ಸುಜ್ಞಾನವಿಲ್ಲ. ಸುಜ್ಞಾನವಿಲ್ಲವಾಗಿ ಪಾರಮಾರ್ಥ ಸೂಸದು. ಇವೆಲ್ಲವ ಕಳೆದುಳಿದಲ್ಲಿ, ಮನದ ಹಸ್ತದಲ್ಲಿ ಲಿಂಗವಿದ್ದಿತ್ತು. ಲಿಂಗದಲ್ಲಿ ಮನ ಸಂದಿತ್ತು. ಮನ ಸಂದಲ್ಲಿ ಸೌರಾಷ್ಟ್ರಸೋಮೇಶ್ವರ ಸ್ಥಿರವಾದನು.

೯೨

ಈಶ್ವರ ನುಡಿದ ನುಡಿಯನರಿದೆವೆಂದು ಬೀಸರವೋದರಣ್ಣಗಳೆಲ್ಲ. ಪ್ರಾಣ ಲಿಂಗವೆಂಬರಯ್ಯ! ಮನ ಘನವೆಂದರಿಯದೆ ಮರುಳುಗೊಂಡರು ಈಶ್ವರನನರಿದಡೆ ತಾ ಶಿವನು. ಗೊಹೇಶ್ವರನೆಂಬುದು ಬೇರಿಲ್ಲ.

೯೩

ಮನವ ಗೆದ್ದೆವೆಂದು ತನುವ ಕರಗಿಸಿ, ಕಾಯುವ ಮರುಗಿಸಿ, ನಿದ್ರೆಯ ಕೆಡಿಸಿ, ವಿದ್ಯೆಯ ಕಲಿತೆನೆಂಬ ಬುದ್ಧಿಹೀನರಿರಾ, ನೀವು

ಕೇಳಿರೋ, ನಮ್ಮ ಶರಣರು ಮನವನೆಂತು ಗೆದ್ದರೆಂದರೆ; ಕಾಮ ಕ್ರೋಧವ ನೀಗಿ, ಮೋಹ ಮದಮತ್ಸರವ ನಿಶ್ಚೈಸಿ, ಆಶೆ ರೋಷವಳಿದು, ಜಗದ ಪಾಶವ ಬಿಟ್ಟು, ಮರುಗಿಸುವ ಕಾಯುವನೆ ಪ್ರಸಾದವ ಮಾಡಿ ಸಲಹಿದರು. ಕೆಡಿಸುವ ನಿದ್ರೆಯನೆ ಯೋಗ ಸಮಾಧಿಯ ಮಾಡಿ, ಸುಖವ ನಡೆಸಿ, ಜಗವ ಗೆದ್ದ ಶರಣರ ಬುದ್ಧಿಹೀನರೆತ್ತ ಬಲ್ಲರೋ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ ?

೯೪

ಅಷ್ಟಮದಂಗಳ ಘಟ್ಟಿಯನೆ ಕರಗಿಸಿ, ಸತ್ವ ರಜ ತಮಂಗಳ ಬಿಟ್ಟು ಕಳೆದು, ಸುತ್ತುವ ಮನದ ಸುಳಿಯ ತಪ್ಪಿಸಿ, ಮುಂದೆ ಹುಟ್ಟದೆ ಹೋಗೆಂದ ನಂಬಿಗ ಚೌಡಯ್ಯ.

೯೫

ಮನ ನಿರ್ಮಳವ ಮಾಡಿದೆನೆಂದು, ತನುವ ಕರಗಿಸಿ, ಮನವ ಬಳಲಿಸಿ, ಕಣ್ಣು ಕಾಣದ ಅಂಧಕರಂತೆ ಮುಂದುಗಾಣದೆ, ಸಂದೇಹದಲ್ಲಿ ಮುಳುಗಿರುವ ಮನುಜರಿರಾ, ನೀವು ಕೇಳಿರೋ, ಹೇಳಿಹೆನು. ಆ ಮನವ ನಿರ್ಮಳವ ಮಾಡಿ, ಆ ಘನವ ಕಾಂಬುವುದಕ್ಕೆ ಆ ಮನ ಎಂತಾಗ ಬೇಕೆಂದರೆ: ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ, ಬೆಳಗಿದ ದರ್ಪಣದಂತೆ ಮನ ನಿರ್ಮಳವಾದಲ್ಲದೆ, ಆ ಮಹಾಘನವ ಕಾಣಬಾರದೆಂದರು ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೯೬

ಮಿಂದು ದೇವರ ಪೂಜಿಸಿಹೆನೆಂಬ ಸಂದೇಹಿಮಾನವ ನೀ ಕೇಳಾ! ಮಿಾಯದೆ ಮಿಾನು? ಮಿಾಯದೆ ಮೊಸಳೆ? ತಾ ಮಿಂದು, ತನ್ನ ಮನ ಮಿಾಯದನ್ನಕ್ಕರ, ಈ ಬೆಡಗಿನ ಮಾತ ಮೆಚ್ಚುವನೆ ನಮ್ಮ ಗೊಹೇಶ್ವರ ಲಿಂಗವು ?

೯೭

ಮನವ ತೊಳೆದು ನಿರ್ಮಲವ ಮಾಡಿಹೆನೆಂಬ ಯೋಗವೆಂತುಟೋ? ಮನವ ಹಿಡಿದು ತಡೆದಿಹೆನೆಂಬವರ ಮರುಳಾಗಿ ಕಾಡಿತ್ತು ನೋಡಾ

ಮನವು! ಮನವಿಕಲ್ಪಜ್ಞಾನದಿಂದರಿದು, ಅದ ಶುದ್ಧವ ಮಾಡಿಹೆನೆಂಬುದು ತಾನೆ ಮನ ನೋಡಾ. ನಮ್ಮ ಗೊಹೇಶ್ವರಲಿಂಗದ ಅನುವರಿದಿಹೆನೆಂಬವರು ಮನವಿಲ್ಲದಿರಬೇಕು ನೋಡಾ ಸಿದ್ಧರಾಮಯ್ಯಾ.

೯೮

ಮನವ ನಿಲಿಸಿಹೆನೆಂದು ನುಡಿವ ಅಣ್ಣಗಳ ಕಣ್ಣುಗೆಡಿಸಿ, ಬಣ್ಣಗುಂದಿಸಿ, ಬಂಧನಕ್ಕೊಳಗು ಮಾಡಿ, ಭವದಲ್ಲಿ ಸೆರೆಹಿಡಿದಿರ್ಪುದು ನೋಡಾ ಮನವು. ಅದೆಂತೆಂದೊಡೆ: ವ್ರತವುಳ್ಳವರ ಬತಗೆಡಿಸಿತ್ತು ಮನವು. ಯತಿಗಳೆಂಬವರ ನೋಡಾ ಮತಿಹೀನರ ಮಾಡಿತ್ತು ನೋಡಾ ಮನವು. ಕಣ್ಣ ಮುಚ್ಚಿ ಧ್ಯಾನಿಸುವ ಅಣ್ಣಗಳ ಕಳವಳಗೊಳಿಸಿತ್ತು ನೋಡಾ ಮನವು. ಏಕಾಂತವಾಸಿಗಳೆಲ್ಲರ ಹಿಡಿತಂದು ಲೋಕದ ಮಧ್ಯದೊಳಗಿರಿಸಿ ಕಾಕುತನದಲಿ ಕಾಡಿ ಏಡಿಸಿತ್ತು ನೋಡಾ ಮನವು. ಯೋಗಿಗಳೆಂಬವರ ಭೋಗಕ್ಕೊಳಗು ಮಾಡಿ ಕಾಡಿತ್ತು ನೋಡಾ ಮನವು. ಇಂತೀ ಮನವ ನಿಲಿಸಿಹೆವೆಂದು ನುಡಿದು ಮತಿಗೆಟ್ಟು ಮಣ್ಣುಮುಸಿಯಾಗಿ ಹೋದರು ನೋಡಾ ಹಲಕೆಲಬರು. ಅವರಂತಿರಲಿ. ಇನ್ನು ಮನವ ನಿಲಿಸುವ ಭೇದವ ಹೇಳಿಹೆ ಕೇಳಿರೆ: ಆದಿ ಅನಾದಿ ಸುರಾಳ ನಿರಾಳ ಶೂನ್ಯ ನಿಃಶೂನ್ಯ ಸಾಕಾರ ನಿರಾಕಾರ ಸಗುಣ ನಿರ್ಗುಣ ಮೂರ್ತಿ ಅಮೂರ್ತಿ ಶಿವ ಶಕ್ತಿ ನಾಮ ರೂಪು ಕ್ರಿಯೆ ಸಕಲ ಬಹ್ಮಾಂಡ ಸಚರಾಚರಾದಿ ನಾನಾತೋರಿಕೆಯೆಲ್ಲವು ತಾನೆ ಎಂದು ತಿಳಿಯಲು, ಆ ತಿಳಿದ ಮಾತ್ರದಲ್ಲಿಯೆ ಮನದ ಕಲ್ಪಿತವಳಿದು, ಕಾಯಿ ಹಣ್ಣಾದಂತೆ ಆ ಮನವು ಮಹಾಘನ ಪರಬ್ರಹ್ಮವೆ ಅಪ್ಪುದು. ಆ ಮನವು ಮಹಾಘನವಾದಲ್ಲಿಯೆ ಶರಣನ ಹುಟ್ಟುಹೊಂದು ನಷ್ಟವಾಗಿರ್ಪುದು. ಆ ಶರಣನ ಹುಟ್ಟುಹೊಂದು ನಷ್ಟವಾದಲ್ಲಿಯೆ ಅಖಂಡೇಶ್ವರನೆಂಬ ಕುರುಹು ನಿರ್ವಯಲು ನೋಡಾ.

೯೯

ಘಟವೆಂಬ ಮಠದೊಳಗೆ ಮನವೆಂಬ ಮರ ಹುಟ್ಟಿತ್ತು. ಬೇರುವರಿಯಿತ್ತು. ಅದಕೆ ಶತಕೋಟಿ ಶಾಖೆ ಬಿಟ್ಟಿತ್ತು. ಆಸೆ ಬೆಂಬಳಿಗೊಂಡು

ಆಡುವರೆಲ್ಲ ಮುಂದುಗಾಣದೆ ಸಂದುಹೋದರು. ನಮ್ಮ ಶರಣರು ಇದನರಿದು, ಹಿಂದೆ ನೋಡಿ, ಮುಂದೆ ಲಿಂಗದಲ್ಲಿ ಬೆರೆದ ಭೇದವ ಕಂಡು, ಮನವೆಂಬ ಮರದ ಬೇರನಗಿದು, ಶತಕೋಟಿ ಶಾಖೆಯನು ಸವರಿ, ತುಟ್ಟತುದಿಯ ಮೇಲೆ ನಿಂದು ನೋಡುವನ್ನಕ್ಕ, ನಾನೆತ್ತ ಹೋದೆನೆಂದರಿಯೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೦೦

ನೆನೆವುತ್ತಿದೆ ಮನ ದುರ್ವಾಸನೆಗೆ; ಹರಿವುತ್ತಿದೆ ಕೊನೆಕೊಂಬೆಗೆ; ಎಳೆವುತ್ತಿದೆ! ಕಟ್ಟಿಗೆ ನಿಲ್ಲದು, ಬಿಟ್ಟರೆ ಹೋಗದು. ತನ್ನ ಇಚ್ಛೆಯಲಾಡುವ ಮನವ ಕಟ್ಟಿಗೆ ತಂದು, ಗೊತ್ತಿಗೆ ನಿಲ್ಲಿಸಿ, ಬಚ್ಚಬರಿಯ ಬೆಳಗಿನೊಳಗೆ ಓಲಾಡುವ ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

೧೦೧

ಒಳಹೊರಗೆಂಬೆರಡು ಬಟ್ಟೆಗಳೊಳು ಸುಳಿದು ಸೂಸುವ ಬೆಳಗನೆ ಕಂಡು, ತಳುವಿಲ್ಲದೆ ಮನವನೆ ನೋಡಿ, ಆ ಬೆಳಗಿನೊಳ್ಬೆರೆದರೆ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೦೨

ಮರ್ಕಟನ ತಲೆಯಲ್ಲಿ ಮಾಣಿಕವಿಪ್ಪುದ ಕಂಡೆನಯ್ಯ! ಮರ್ಕಟನ ಹಿಡಿದು ಮಾಣಿಕವ ತೆಕ್ಕೊಳಲಾರಳವಲ್ಲ ನೋಡಾ. ಆ ಮರ್ಕಟನ ಕೊಂದು, ಮಾಣಿಕವ ತೆಕ್ಕೊಳಬಲ್ಲರೆ ಮುಕ್ಕಣ್ಣ ಶಿವನೆಂದು ಬೇರೆ ಉಂಟೇ ಹೇಳಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

೧೦೩

ಸುತ್ತಿಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ, ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ, ನಿತ್ಯನೇಮದಿಂದ ತನುವ ಮುಟ್ಟಿ

ಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಂಗೆ ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ, ಬಚ್ಚ ಬರಿಯ ಬೆಳಗು ಗೊಹೇಶ್ವರ ಲಿಂಗವು.

೧೦೪

ಎಲೆ ಮನವೇ, ಎಲ್ಲಿ ಹವಣಿಸಬಾರದ ಅಖಂಡಬೆಳಗು ತೋರುತ್ತಿಹುದು ಅದೀಗ ನಿನ್ನ ನಿಜ. ಎಲೆ ಮನವೇ, ಆವಲ್ಲಿ ನೀನೆಂಬ ಶಂಕೆ ಹಿಂಗಿ ತಾನೆ ತೋರುತ್ತಿಹುದು ಅದೀಗ ನಿನ್ನ ನಿಜ. ಎಲೆ ಮನವೇ, ನಿನ್ನ ನಿಜವನರಿಯಬಲ್ಲಡೆ, ಅದೇ ಬ್ರಹ್ಮಜ್ಞಾನ, ಅದೇ ಕೇವಲ ಮುಕ್ತಿ. ಅದೇ ನಮ್ಮ ಗೊಹೇಶ್ವರಲಿಂಗವನರಿವ ಸಹಜಭಕ್ತಿಯ ಕುಳ ಕಾಣಾ! ಎಲೆ ಮನವೆ, ನೀನಿದ ನಿಶ್ಚಯಿಸಿಕೋ ಮರೆಯದೆ.

೧೦೫

ಎಲೆ ಮನವೆ, ನೀ ನಿನ್ನ ನಿಜವ ತಿಳಿವಡೆ, ಆ ನಿನ್ನ ನಿಜವ ಹೇಳುವೆ ಕೇಳು: ಅದು ಕೇವಲ ಜ್ಯೋತಿ, ಅದು ವರ್ಣಾತೀತ. ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು, ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ, ಅದೇ ನಿನ್ನ ಸಮ್ಯಗ್‌ಜ್ಞಾನದ ತೋರಿಕೆ. ಆ ತೋರಿಕೆಯ ಅಖಂಡಬೆಳಗಿನ ಹೊಳಹಿನೊಳಗೆ ನೀ ನಮ್ಮ ಗೊಹೇಶ್ವರಲಿಂಗದ ಶ್ರೀಚರಣವನರಸಿಕೊಂಡು ನಿಶ್ಚಿಂತನಾಗೆಲೆ ಮನವೇ.

೧೦೬

ನೆನಹು ನೆನೆವ ಮನದಲ್ಲಿಲ್ಲ. ತನುವಿನಾಸೆ ಮುನ್ನಿಲ್ಲ. ಮನಮನವನೊಳಕೊಂಡ ಘನಘನವನೆಂತೆಂಬೆ! ತನ್ನಲ್ಲಿ ತಾನೆಯಾಯಿತ್ತು. ನೆನೆಯಲಿಲ್ಲದ, ನಿಂದ ನಿರಾಳ ಅನಾಗತವಾದುದ ಕಂಡು ನಾನು ಬೆರಗಾದೆ!

ಅಂತು ಇಂತು ಎನಲಿಲ್ಲ. ಚಿಂತೆಯಿಲ್ಲದ ಮಹಾಘನವ, ಗೊಹೇಶ್ವರಲಿಂಗವ ಬೇರೆ ಅರಸಲಿಲ್ಲ.

೧೦೭

ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟು ದಿವ್ಯಾಗಮಂಗಳು, ಇವು ಯಾಕೆ ನಿರ್ಮಾಣಮಾಡಿದಿರಿ ಸ್ವಾಮಿ? ದಯದಿಂದೆ ಕರಣಿಪುದು. ಕೇಳೈ ಮಗನೆ, ಹರಿಸುರಬ್ರಹ್ಮಾದಿಗಳು ದೇವದಾನವ ಮಾನವರುಗಳು ಎಂಬತ್ತೆಂಟುಕೋಟಿ ಮುನಿಗಳು ಇವರೆಲ್ಲರು ಮನವ ನಿಲಿಸಿಹೆವೆಂದು ಬಿನ್ನಹಮಾಡಿಕೊಳಲು, ಶಿವನು ಸರ್ವಶ್ರುತಿ ಸ್ಮೃತಿ ಶಾಸ್ತ್ರಗಳನು ನಿರ್ಮಾಣವ ಮಾಡಿದನು. 'ವೇದಾಂತ ತತ್ತ್ವಮಧಿಕಂ ನವನೀತಸಾರಂ' ಎಂದುದಾಗಿ, ವೇದ ಮೊದಲಾದವೆಲ್ಲವು ಮಜ್ಜಿಗೆಯು ಹಾಗೆ, ಪುರಾತನರ ವಚನಗಳು ಗುರುವಾಕ್ಯವೆಲ್ಲವೂ ಬೆಣ್ಣೆಯು ಹಾಗೆ. ಈ ಗುರುವಾಕ್ಯವಿಡಿದು ಲಿಂಗದಲ್ಲಿ ಮನವ ನಿಲಿಸಿದೊಡೆ, ಸರ್ವಶಾಸ್ತ್ರವೇಕೆ? ಮನವು ಲಿಂಗದಲ್ಲಿ ನಿಲ್ಲದಿರ್ದೊಡೆ, ಏನು ಮಾಡಿದಡೂ ನಿಷ್ಫಲ. ಇದನು ಜ್ಞಾನಿಗಳು ತಿಳಿದು, ಗುರುಕಾರಣ್ಯ ಕೃಪೆಯಿಂದ ತಿಳಿದು, ಲಿಂಗದಲ್ಲಿ ಬೆರೆದು, ಲಿಂಗವೇ ತಾನು ತಾನಾಗಿ, ಜ್ಯೋತಿ ಜ್ಯೋತಿ ಕೂಡಿದಂತೆ ನಿಜಲಿಂಗೈಕ್ಯವಾದರು ಎಂದಾತ ನಮ್ಮ ಶಾಂತಕೂಡಲಸಂಗಮದೇವ.

೧೦೮

ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ. ನಿರಾಳಲಿಂಗಕ್ಕೆ ಬಯಲೆ ಸೆಜ್ಜೆ, ವಾಯುವೆ ಶಿವದಾರ, ಬೆಳಗೆ ಸಿಂಹಾಸನ. ಅತ್ತಲಿತ್ತ ಚಿತ್ತವ ಹರಿಯಲೀಯದೆ ಮಜ್ಜನಕ್ಕೆರೆದು ಸುಖಿಯಾದೆ ಗೊಹೇಶ್ವರಾ.

೧೦೯

ಮಹಾಘನವಪ್ಪ ಬೋನವನು ಒಂದನುವಿನ ಪರಿಯಾಣದಲ್ಲಿ ಹಿಡಿದು, ಗುರುಲಿಂಗವು ಒಳಗಾದ ಲಿಂಗವಾರೋಗಣೆಯು ಮಾಡಿ, ಮಿಕ್ಕುದು ಪ್ರಸಾದವೇ? ಅಲ್ಲಲ್ಲ. ಮಹಾಘನವಪ್ಪ ಲಿಂಗವನೊಂದನುವಿನಲ್ಲಿ ತಂದಿರಿಸಿದಾತನ ಮನವೇ ಪ್ರಸಾದ ಕಾಣಾ ರಾಮನಾಥಾ.

೧೧೦

ಮನೋಮಧ್ಯದಲ್ಲಿ ಒಂದು ಶಶಿಸಂಧಾನದ ಕಳೆ ಸಂಧಿಸಿ, ಅರುಣೋದಯವಾದಂತೆ ಇದೆ. ಇದೇನಯ್ಯ? ಅದು ಎನ್ನ ಭಾಗ್ಯದಿಂದ ಮತಿ ಪ್ರಕಾಶನವಾಗಿತ್ತಯ್ಯ. ಆ ಪ್ರಸನ್ನಪ್ರಸಾದವನೊಳಕೊಂಡು, ಉತ್ತ ಮೋತ್ತಮವಾಗಿ ನಿಮಗೆ ನಿಲುವಳಿಯಾದುದನು ಆರು ಬಲ್ಲರಯ್ಯ ಮಹಾ ಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

೧೧೧

ಹತ್ತು ದಿಕ್ಕಿನ ಒಳಹೊರಗೆ ಸುತ್ತಿ ಸುಳಿದಾಡುವ ಎನ್ನ ಮನವು ನಿಲುವುದಕ್ಕೆ ನೀವೇ ಗೊತ್ತಲ್ಲದೆ, ಬೇರೆ ಸ್ಥಾನ ಉಂಟೆ ಅಯ್ಯ? ಗಾಳಿ ಗಂಧವನಪ್ಪಿದಂತೆ, ನಿಮ್ಮ ಮುಟ್ಟಿದ ಚಿತ್ತ ಎತ್ತೆತ್ತ ಹರಿದಾಡಿದಡೇನು? ಅತ್ತತ್ತ ನೀವೇ ಅಲ್ಲದೆ ಅನ್ಯವಿಲ್ಲವಯ್ಯ ಅಖಂಡೇಶ್ವರಾ.

೧೧೨

ತೆರಹಿಲ್ಲದ ಘನವ ಮನ ಒಳಕೊಂಡು, ತಲೆಯಿಲ್ಲದ ಮನವ ಘನ ಒಳಕೊಂಡು, ತನಗೆ ತಾ ತರಹರವಾದ ಬಳಿಕ, ಮರಳಿ ಇನ್ನು ಇಂಬುಗೊಡಲು ಉಂಟೆ? ಗೊಹೇಶ್ವರನ ಮಾಬನ್ನಕ್ಕರ ಉರಿಯೊಳಗಣ ಕರ್ಪುರದಂತಿರಬೇಕು ಕಾಣಾ ಸಿದ್ಧರಾಮಯ್ಯಾ.

೧೧೩

ಅಂಗೈಯ ಲಿಂಗವ ಕಂಗಳಿಂ ನೋಡಿ ಮನ ಹಾರೈಸಿದಲ್ಲಿ, ಅಂಗೇಂದ್ರಿಯಂಗಳೆಲ್ಲವು ಲಿಂಗೇಂದ್ರಿಯಂಗಳಾದವು. ಇನ್ನು ನೀನಂಜದಿರು ಮನವೇ, ಲಿಂಗವು ನಿನಗೆ ದೂರವೆಂದು. ಮನೋಮಧ್ಯದೊಳಿಪ್ಪನು. ಅಂಗ ಪ್ರಾಣ ಭಾವ ಸರ್ವಾಂಗ ಲಿಂಗವಾದ ಬಳಿಕ, ಲಿಂಗಮಧ್ಯೇ ಪ್ರಾಣ ವಾಯಿತ್ತು; ಪ್ರಾಣಮಧ್ಯೇ ಲಿಂಗವಾಯಿತ್ತು. ಎಲೆ ಮನವೇ, ಇನ್ನು ಉತ್ಪತ್ತಿ ಸ್ಥಿತಿ ಲಯವಿಲ್ಲಾಗಿ, ಲಿಂಗದಿಂ ಜನಿಸಿ, ಲಿಂಗೇಂದ್ರಿಯ ಲಿಂಗ ಜ್ಞಾನದಲ್ಲಿ ವರ್ತಿಸಿ, ದ್ವೈತಾದ್ವೈತವಿಲ್ಲಾಗಿ, ಬಂದುದೇ ಲಿಂಗದ ಲೀಲೆ,

ಇದ್ದುದೇ ಲಿಂಗದಾನಂದ, ಮನೋಲಯವೇ ಲಿಂಗದ ನಿರವಯವು. ಇದು ಸತ್ಯ. ಶಿವ ಬಲ್ಲ. ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೧೪

ಸೀಮರ ಕಂಡೆ, ನಿಸ್ಸೀಮರ ಕಂಡೆ. ಭಾವರ ಕಂಡೆ, ನಿರ್ಭಾವರ ಕಂಡೆ. ಅನುಭಾವರ ಕಂಡೆ, ಮಹಾನುಭಾವರ ಕಂಡೆ, ಮಹಿಮರ ಕಂಡೆ. ನಮ್ಮ ಚೆನ್ನಸಂಗಯ್ಯನಲ್ಲಿ ಸಾತ್ವಿಕವಾಗಿ ಮನಸ್ಸಮಾಧಿಯನೆಯ್ದಿದ ಚಿನ್ಮಯರಾರನು ಕಾಣೆನು.

೪. ಕಂಡು ಬದುಕಿದೆನು

೧೧೫

ಕಾಯದಲ್ಲಿ ಕಳವಳಗೊಂಡ ಬಳಿಕ, ಅರಿವಿನಲ್ಲಿ ಮರವೆ ತಾನೆ ನಿಂದಿತ್ತು ನೋಡಾ! ಕಾಯದ ಕಳವಳವ ವಾಯುವೆಂದರಿಯಬಲ್ಲಡೆ, ದೇವ ಗೊಹೇಶ್ವರನ ನಿಲವು ತಾನೆ.

೧೧೬

ವನವೆಲ್ಲ ಕಲ್ಪತರು. ಗಿಡವೆಲ್ಲ ಮರುಜೀವಣಿ. ಶಿಲೆಗಳೆಲ್ಲ ಪರುಷ. ನೆಲವೆಲ್ಲ ಅವಿಮುಕ್ತಕ್ಷೇತ್ರ. ಜಲವೆಲ್ಲ ನಿರ್ಜರಾಮೃತ. ಮೃಗವೆಲ್ಲ ಪರುಷ ಮೃಗ. ಎಡಹುವ ಹರಳುಗಳೆಲ್ಲ ಚಿಂತಾಮಣಿ. ಚೆನ್ನಮಲ್ಲಿಕಾರ್ಜುನಯ್ಯನ ಮಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು, ಕದಳಿಯ ಬನವ ಕಂಡೆ ನಾನು.

೧೧೭

ಹೊಳೆವ ಕೆಂಜೆಡೆಗಳು! ಮಣಿಮುಕುಟ! ಒಪ್ಪುವ ಸುಲಿಪಲ್ಲ ನಗೆಮೊಗದ ಕಂಗಳ ಕಾಂತಿಯಿಂ ಈರೇಳು ಭವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು! ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು. ಗಂಡಗಂಡ

ರನೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು. ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು !

೧೧೮

ಕಂಡ ಕನಸು ನಿಧಾನವ ಕಂಡೆನಯ್ಯಾ! ಬಿಡಲಾರದ ನಿಧಾನವ ಕಂಡೆನಯ್ಯ! ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.

೧೧೯

ಬೆಳಗಿನೊಳಗಣ ಬೆಳಗು, ಮಹಾಬೆಳಗು, ಶಿವ ಶಿವಾ! ಪರಮಾಶ್ರಯವೆ ತಾನಾಗಿ ಶತಪತ್ರಕಮಳಕರ್ಣಿಕಾಮಧ್ಯದಲ್ಲಿ ಸ್ವತಃಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವ.

೧೨೦

ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು, ಶತಕೋಟಿ ಸೂರ್ಯರು ಮೂಡಿದಂತೆ ಇರ್ದುದಯ್ಯ. ಮಿಂಚಿನ ಬಳ್ಳಿಯ ಸಂಚವ ಕಂಡರೆ, ಎನಗಿದು ಸೋಜಿಗವಾಯಿತ್ತು! ಗೊಹೇಶ್ವರಾ, ನೀನು ಜ್ಯೋತಿರ್ಲಿಂಗವಾದಡೆ ಉಪಮಿಸಿ ನೋಡಬಲ್ಲವರಿಲ್ಲಯ್ಯ.

೧೨೧

ಒಳಗಿದ್ದಾನೆಂಬೆನೆ? ಹೊರಗೆಲ್ಲಾ ತಾನೆ ನೋಡಾ. ಹೊರಗಿದ್ದಾನೆಂಬೆನೆ? ಒಳಹೊರಗೆ ಸರ್ವಾಂಗದಲ್ಲಿ ಸನ್ನಿಹಿತನಾಗಿರ್ದ. ಅಗಲಲಿಲ್ಲದ ಘನವನಗಲಿದೆನೆಂಬ ಮಾತು ಶಿವಶರಣರ ಮನಕ್ಕೆ ಬಹುದೆ? ತೆರಹಿಲ್ಲದ ಘನವು ಕಲಿದೇವಯ್ಯನು ಕರಸ್ಥಲದೊಳಗೈದಾನೆ ಕಾಣಾ!

೧೨೨

ಒಳಗೆ ನೋಡಿದಡೆ, ನಿಮ್ಮನೆ ನೋಡುವೆನಯ್ಯಾ. ಹೊರಗೆ ನೋಡಿದಡೆ, ನಿಮ್ಮನೆ ನೋಡುವೆನಯ್ಯಾ. ಒಳಗೆ ಪೂಜಿಸಿದಡೆ, ನಿಮ್ಮನೆ ಪೂಜಿಸುವೆನಯ್ಯಾ. ಹೊರಗೆ ಪೂಜಿಸಿದಡೆ, ನಿಮ್ಮನೆ ಪೂಜಿಸುವೆನಯ್ಯಾ. ಒಳಗೆ

ಧ್ಯಾನಿಸಿದಡೆ, ನಿಮ್ಮನೆ ಧ್ಯಾನಿಸುವೆನಯ್ಯಾ. ಹೊರಗೆ ಧ್ಯಾನಿಸಿದಡೆ, ನಿಮ್ಮನೆ ಧ್ಯಾನಿಸುವೆನಯ್ಯಾ. ನೀವು ಭಕ್ತ್ಯನುಕಂಪಿತನಾದ ಕಾರಣ, ಎನ್ನ ಭಾವವು ಎಲ್ಲಿ ನಿಂದಿಹುದು ಅಲ್ಲಿ ನಿಮ್ಮ ನಿಲವೆ ತುಂಬಿರ್ಪುದಯ್ಯಾ ಅಖಂಡೇಶ್ವರಾ.

೧೨೩

ಒಳಗಿಪ್ಪಾತನ ಹೊರಗೆ ನೋಡಿ ಕಂಡೆನಯ್ಯ. ಹೊರಗಿಪ್ಪಾತನನು ಒಳಗೆ ನೋಡಿ ಕಂಡೆನಯ್ಯ. ಒಳಹೊರಗಿಪ್ಪವರಿಬ್ಬರು ಒಂದಾಗಿ ನಿಂದ ನಿಲವು, ಬಯಲ ಬಯಲ ಬೆರಸಿದಂತೆ ನಿರಾಳವಾಯಿತ್ತು ಕಾಣಾ ಮಹಾ ಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೧೨೪

ನೆನಹಿಗೆ ಬಾರದ ವಸ್ತುವ ನೆನೆವ ಪರಿ ಎಂತೋ! ಭಾವಕ್ಕೆ ಬಾರದ ವಸ್ತುವ ಭಾವಿಸುವ ಪರಿ ಎಂತೋ! ನೆನೆಯದೆ ಭಾವಿಸದೆ ಎನ್ನೊಳಗೆ ಬಯಲು ರೂಪವಾಗಿ ತೋರಿದನು ನೋಡಾ ಅಖಂಡೇಶ್ವರ.

೫. ಒಂದಾಗಿ ನಿಂದ ನಿಲವು

೧೨೫

ಲಿಂಗವ ಪೂಜಿಸಿ ಫಲವೇನಯ್ಯಾ, ಸಮರತಿ ಸಮಕಳೆ ಸಮಸುಖವ ನರಿಯದನಕ್ಕ? ಲಿಂಗವ ಪೂಜಿಸಿ ಫಲವೇನಯ್ಯಾ, ಕೂಡಲಸಂಗಮ ದೇವರ ಪೂಜಿಸಿ ನದಿಯೊಳಗೆ ನದಿಯ ಬೆರಸಿದಂತಾಗದನ್ನಕ್ಕ?

೧೨೬

ಅರಸನ ಕಾಣದ ಬಳಿಕ ಹರುಷವಿಲ್ಲವ್ವಾ ಎನಗೆ. ಅರಸು ಅಖಂ ಡೇಶ್ವರನೆಂಬ ಪರಶಿವನ ಬೆರಸಿದ ಬಳಿಕ ಸಮರಸವೆಲ್ಲಿಯದವ್ವಾ ಎನಗೆ?

೧೨೭

ಬೆರಸುವರೆ ಬೇಗ ತೋರಾ; ಹೊರಹಾಕದಿರಯ್ಯ. ನಿಮ್ಮಲ್ಲಿಗೆ ಸಲೆ ಸಂದ ತೊತ್ತಾನು; ಎನ್ನ ಹೊರಹಾಕದಿರಯ್ಯ. ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ನಂಬಲೆಂದು ಬಳಿಯ ಬಂದೆನು. ಇಂಬುಗೊಳ್ಳಯ್ಯ ಬೇಗದಲಿ.

೧೨೮

ಪಿಂಡದೊಳಗೆ ಪ್ರಾಣವಿರ್ಪುದ ಎಲ್ಲರು ಬಲ್ಲರಲ್ಲದೆ, ಪ್ರಾಣದೊಳಗೆ ಶಬ್ದವಿರ್ಪುದನಾರೂ ಅರಿಯರಲ್ಲ! ಪ್ರಾಣದೊಳಗೆ ಶಬ್ದವಿರ್ಪುದ ಎಲ್ಲರು ಬಲ್ಲರಲ್ಲದೆ, ಶಬ್ದದೊಳಗೆ ನಾದವಿರ್ಪುದನಾರೂ ಅರಿಯರಲ್ಲ! ಶಬ್ದದೊಳಗೆ ನಾದವಿರ್ಪುದ ಎಲ್ಲರು ಬಲ್ಲರಲ್ಲದೆ, ನಾದದೊಳಗೆ ಮಂತ್ರವಿರ್ಪುದನಾರೂ ಅರಿಯರಲ್ಲ! ಮಂತ್ರದೊಳಗೆ ಶಿವನಿರ್ಪುದ ಎಲ್ಲರು ಬಲ್ಲರಲ್ಲದೆ, ಶಿವನ ಕೂಡುವ ಅವಿರಳಸಮರಸವನಾರೂ ಅರಿಯರಲ್ಲ ಅಖಂಡೇಶ್ವರಾ.

೧೨೯

ಅರತುದಯ್ಯ ಅಂಗಗುಣ; ಒರೆತುದಯ್ಯ ಭಕ್ತಿರಸ; ಆವರಿಸಿತಯ್ಯ ಅಂಗ ಲಿಂಗವನು! ಏನೆಂದರಿಯೆನಯ್ಯ ಲೋಕ ಲೌಕಿಕದ ಮದವ. ಲಿಂಗಭ್ರಾಂತನಾದೆನಯ್ಯಾ,—ಕೂಡಲಸಂಗಮದೇವಾ, ನಿಮ್ಮ ಕರುಣವೆನ್ನ ನೆಡೆಗೊಂಡಿಶಾತ್ತಗಿ.

೧೩೦

ನಾನು ನಿನಗೊಲಿದೆ. ನೀನು ಎನಗೊಲಿದೆ. ನೀನೆನ್ನನಗಲದಿಪ್ಪೆ. ನಾ ನಿನ್ನನಗಲದಿಪ್ಪೆನಯ್ಯ. ನಿನಗೆ ನನಗೆ ಬೇರೊಂದು ಠಾವುಂಟೇ? ನೀನು ಕರುಣಿ ಎಂಬುದ ನಾನು ಬಲ್ಲೆನು. ನೀನಿರಿಸಿದ ಗತಿಯೊಳಗೆ ಇಪ್ಪಳಾನಯ್ಯ. ನೀನೇ ಬಲ್ಲೆ ಚೆನ್ನಮಲ್ಲಿಕಾರ್ಜುನಾ.

೧೩೧

ಆತನ ದಿವ್ಯರೂಪ ನೋಡಿ, ಎನ್ನ ಕಂಗಳು ದಣಿಯವು. ಆತನ ಲಲ್ಲೆವಾತ ಕೇಳಿ, ಎನ್ನ ಕಿವಿಗಳು ದಣಿಯವು. ಆತನ ಜಿಹ್ವೆಯ ಚುಂಬಿಸಿ,

ಎನ್ನ ಬಾಯಿ ದಣಿಯದು. ಆತನ ಸರ್ವಾಂಗವನ್ನಪ್ಪಿ, ಎನ್ನ ತನು ದಣಿಯದು. ಆ ಅಖಂಡೇಶ್ವರನ ಕೂಡಿ, ಒಳಪೊಕ್ಕು ಪರಿಣಾಮ ಸೂರೆಗೊಂಡು, ಎನ್ನ ಮನ ದಣಿಯದು ನೋಡಿರವ್ವಾ!

೧೩೨

ಬಾಯೊಳಗೆ ಬಾಯನಿಕ್ಕಿ, ಎದೆಗೆ ಎದೆಯ ತರ್ಕೈಸಿ, ಮೈಗೆ ಮೈಯ ಹೊಂದಿಸಿ ಕೂಡಿದ ಅಖಂಡೇಶ್ವರನ ಸುಖವು ಜೇನು ಸಕ್ಕರೆ ಸವಿದಂತಾಯಿತ್ತು ನೋಡಿರವ್ವಾ!

೧೩೩

ಕಂಗಳ ನೋಟ, ಹೃದಯದ ಜ್ಞಾನ! ಮನದಲ್ಲಿ ಮಾತನಾಡುತಿರ್ದೆನಯ್ಯಾ. ಜೇನ ಮಳೆಗಳು ಕರೆದುವು, ಅಮೃತ ಕಳೆಗಳು ಸುರಿದುವು! ಕೂಡಲಸಂಗಮದೇವರೆಂಬ ರಸಸಾಗರದೊಳೋಲಾಡುತಿರ್ದೆನಯ್ಯಾ!

೧೩೪

ಸೆಜ್ಜೆಯುಪ್ಪರಿಸಿ ಶಿವಲಿಂಗ, ನೀನೆನ್ನ ಕರಸ್ಥಲಕ್ಕೆ ಬರೆ, ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ ಜಜ್ಜರಿಸಿ, ತನು ಮನ ದೃಷ್ಟಿ ನಟ್ಟು, ಲಿಂಗದಲ್ಲಿ ಜಜ್ಜರಿಸಿ, ಸುರಿವ ಶಿವಸುಖರತಿಯೊಳೋಲಾಡುತ್ತ, ಸಜ್ಜನ ಸದ್ಭಕ್ತಿರತಿಯೊಡನೆ ಕೂಡಿಯಾಡಿ, ಲಜ್ಜೆಗೆಟ್ಟು ನಿಮ್ಮ ನೆರೆವೆ ಚೆನ್ನಮಲ್ಲಿಕಾರ್ಜುನಾ.

೧೩೫

ನಾನೊಂದು ಹಾಳೂರಿಗೆ ಹೋದರೆ, ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು. ಹುಲಿ ಕರಡಿ ಅಡ್ಡಲಾದವು. ಇವ ಕಂಡು ನಾ ಹೆದರಿಕೊಂಡು, ನನ್ನ ಕೈಗೊಂದು ಕಲ್ಲ ತಕ್ಕೊಂಡು ನೋಡುತ್ತ ಬರುತಿರಲು, ಆ ನಾಯಿಗಳು ಓಡಿದವು. ಹುಲಿ ಕರಡಿಗಳು ಅಲ್ಲಿಯೇ ಬಯಲಾದವು. ಆ ಊರು ನಿರ್ಮಳವಾಯಿತ್ತು. ಆ ನಿರ್ಮಳವಾದ ಊರ ಹೊಕ್ಕು ನೋಡಲು, ಆ ನೋಡುವ ನೋಟವು, ಆ ಊರನಾಳುವ ಅರಸು, ಆ ಊರಲೆ ಕೂಡಿ ಒಂದಾದವರು. ಆ ಒಂದಾದುದನೆ ನೋಡಿ, ದ್ವಂದ್ವವನೆ ಹರಿದು, ನಿಮ್ಮ

ಸಂಗಸುಖದೊಳಗೋಲಾಡಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣಾ.

೧೩೬

ಎನ್ನ ತನುವಿನೊಳಗೆ ನಿಮ್ಮ ತನುವಡಗಿರ್ಪುದು; ನಿಮ್ಮ ತನುವಿನೊಳಗೆ ಎನ್ನ ತನುವಡಗಿರ್ಪುದು. ಎನ್ನ ಮನದೊಳಗೆ ನಿಮ್ಮ ಮನವಡಗಿರ್ಪುದು; ನಿಮ್ಮ ಮನದೊಳಗೆ ಎನ್ನ ಮನವಡಗಿರ್ಪುದು. ಎನ್ನ ಪ್ರಾಣದೊಳಗೆ ನಿಮ್ಮ ಪ್ರಾಣವಡಗಿರ್ಪುದು; ನಿಮ್ಮ ಪ್ರಾಣದೊಳಗೆ ಎನ್ನ ಪ್ರಾಣವಡಗಿರ್ಪುದು. ಎನ್ನ ಜೀವದೊಳಗೆ ನಿಮ್ಮ ಜೀವವಡಗಿರ್ಪುದು; ನಿಮ್ಮ ಜೀವದೊಳಗೆ ಎನ್ನ ಜೀವವಡಗಿರ್ಪುದು. ಎನ್ನ ಭಾವದೊಳಗೆ ನಿಮ್ಮ ಭಾವವಡಗಿರ್ಪುದು; ನಿಮ್ಮ ಭಾವದೊಳಗೆ ಎನ್ನ ಭಾವವಡಗಿರ್ಪುದು. ಎನ್ನ ಕರಣಂಗಳೊಳಗೆ ನಿಮ್ಮ ಕರಣಂಗಳಡಗಿರ್ಪುವು; ನಿಮ್ಮ ಕರಣಂಗಳೊಳಗೆ ಎನ್ನ ಕರಣಂಗಳಡಗಿರ್ಪುವು. ಎನ್ನ ಇಂದ್ರಿಯಂಗಳೊಳಗೆ ನಿಮ್ಮ ಇಂದ್ರಿಯಂಗಳಡಗಿರ್ಪುವು; ನಿಮ್ಮ ಇಂದ್ರಿಯಂಗಳೊಳಗೆ ಎನ್ನ ಇಂದ್ರಿಯಂಗಳಡಗಿರ್ಪುವು. ಎನ್ನ ವಿಷಯಂಗಳೊಳಗೆ ನಿಮ್ಮ ವಿಷಯಂಗಳಡಗಿರ್ಪುವು; ನಿಮ್ಮ ವಿಷಯಂಗಳೊಳಗೆ ಎನ್ನ ವಿಷಯಂಗಳಡಗಿರ್ಪುವು. ನಾನು ನೀನೆಂಬ ಭಿನ್ನಭಾವವಳಿದು, ಪುಷ್ಪಪರಿಮಳದಂತೆ, ರೂಪುರುಚಿಯಂತೆ ಅವಿರಳ ಸಮರಸವಾಗಿರ್ದೆನಯ್ಯಾ ಅಖಂಡೇಶ್ವರಾ!

೧೩೭

ಕೇಳಿರೇ ಕೇಳಿರವ್ವಾ ಕೆಳದಿಯರೆಲ್ಲ. ಮನಕ್ಕೆ ಮನೋಹರವಾದ, ಕಂಗಳಿಗೆ ಮಂಗಳವಾದ, ಶೃಂಗಾರದ ಸೊಬಗಿನ ನಲ್ಲ ಬಂದು ಎನ್ನ ತನ್ನೊಳಗೆ ಮಾಡಿಕೊಂಡ. ಒಂದು ವಿಪರೀತವ ಹೇಳುವೆ ಚಿತ್ತವೊಲಿದು ಲಾಲಿಸಿರವ್ವಾ. ಎನ್ನ ತನುವಿನೊಳಗೆ ತನ್ನ ತನುವನಿಟ್ಟು, ಮಹಾತನುವ ಮಾಡಿದ. ಎನ್ನ ಮನದೊಳಗೆ ತನ್ನ ಮನವನಿಟ್ಟು, ಘನಮನವ ಮಾಡಿದ. ಎನ್ನ ಪ್ರಾಣದೊಳಗೆ ತನ್ನ ಪ್ರಾಣವನಿಟ್ಟು, ಚಿತ್‌ಪ್ರಾಣವ ಮಾಡಿದ. ಎನ್ನ ಜೀವದೊಳಗೆ ತನ್ನ ಜೀವವನಿಟ್ಟು, ಸಂಜೀವನವ ಮಾಡಿದ. ಎನ್ನ ಭಾವದೊಳಗೆ ತನ್ನ ಭಾವವನಿಟ್ಟು, ಸದ್ಭಾವವ ಮಾಡಿದ. ಎನ್ನ ಕರಣಂಗಳೊಳಗೆ

ತನ್ನ ಕರಣಂಗಳನಿಟ್ಟು, ಚಿತ್‌ಕರಣಂಗಳ ಮಾಡಿದ. ಎನ್ನ ಇಂದ್ರಿಯಂಗಳೊಳಗೆ ತನ್ನ ಇಂದ್ರಿಯಂಗಳನಿಟ್ಟು, ಚಿದಿಂದ್ರಿಯಂಗಳ ಮಾಡಿದ. ಎನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು, ನಿರ್ವಿಷಯಂಗಳ ಮಾಡಿದನಾಗಿ, ಅಖಂಡೇಶ್ವರನೆಂಬ ನಲ್ಲನೊಳಗೆ ಕರ್ಪುರವೆಣ್ಣು ಉರಿಪುರುಷನನಪ್ಪಿ ರೂಪಳಿದಂತಾದೆನು ಕೇಳಿರವ್ವಾ.

೧೩೮

ಅಂಗವ ಲಿಂಗಮುಖದಲ್ಲಿ ಅರ್ಪಿಸಿ, ಅಂಗವನಂಗವಾಯಿತ್ತು. ಮನವರಿದು ಲಿಂಗಕ್ಕರ್ಪಿಸಿ, ಮನ ಲೀಯವಾಯಿತ್ತು. ಭಾವವ ನಿರ್ಭಾವಕ್ಕರ್ಪಿಸಿ, ಭಾವ ಬಯಲಾಯಿತ್ತು. ಇಂತೀ ಅಂಗ ಮನ ಭಾವವಳಿದ ಕಾರಣ, ಕಾಯವಕಾಯವಾಯಿತ್ತು. ಎನ್ನ ಅಕಾಯದ ಸುಖಭೋಗವ ಲಿಂಗವೇ ಭೋಗಿಸುವನಾಗಿ, ಶರಣಸತಿ ಲಿಂಗಪತಿಯಾದೆನು. ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು.

೧೩೯

ಮುಡಿ ಬಿಟ್ಟು, ಮೊಗ ಬಾಡಿ, ತನು ಕರಗಿದವಳ ಎನ್ನನೇಕೆ ನುಡಿಸುವಿರಿ ಅಣ್ಣಗಳಿರಾ? ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ,—ಬಲುಹಳಿದು ಭವಗೆಟ್ಟು, ಛಲವಳಿದು ಭಕ್ತೆಯಾಗಿ, ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ?

೧೪೦

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಭೇದವುಂಟೇ? ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ? ಆತ್ಮಕ್ಕೆ ಅಂಗಕ್ಕೆ ಭೇದವುಂಟೇ ಅಯ್ಯಾ? ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ, ಸಾವಯವಕ್ಕೆ ನಿರವಯಕ್ಕೆ ಭಿನ್ನವಿಲ್ಲವಯ್ಯ! ಚೆನ್ನಮಲ್ಲಿಕಾರ್ಜುನದೇವರ ಬೆರಸಿ ಮತಿಗೆಟ್ಟವಳ ಏನ ನುಡಿಸುವಿರಯ್ಯ?

೧೪೧

ಅಂಗದ ಮೇಲೆ ಲಿಂಗ ಸಂಬಂಧವಾದ ಬಳಿಕ, ಪ್ರಾಣದ ಮೇಲೆ ಜ್ಞಾನ ನಿರ್ಧರವಾಯಿತ್ತು ನೋಡಾ! ಒಳಹೊರಗೆಂಬ ಉಭಯವೂ ಏಕಾರ್ಥವಾಯಿತ್ತು,—ಗೊಹೇಶ್ವರಾ, ನಿಮ್ಮ ನೆರೆದೆನಾಗಿ.

೧೪೨

ಹೊನ್ನು ತನ್ನ ಬಣ್ಣದ ಲೇಸಸು ತಾನರಿಯದಂತೆ, ಜೇನು ತನ್ನ ಮಧುರವ ತಾನರಿಯದಂತೆ, ಪುಷ್ಪ ತನ್ನ ಪರಿಮಳವ ತಾನರಿಯದಂತೆ, ವಾರಿಶಿಲೆ ಅಂಬುಧಿಯೊಳು ಲೀಯವಾದಂತೆ, ಮನ ಮಹಾಲಿಂಗದಲ್ಲಿ ಲೀಯವಾಗಿ, ಮನವು ಅಳಿದು ನೆನಹು ಉಳಿದು, ನೆನಹು ನಿಷ್ಪತ್ತಿಯಾಗಿ ನಾನು ನೀನಾಗಿರ್ದೆನಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೧೪೩

ಕಾಮಿಸದೆ ನೆನೆದಡೆ, ಕಲ್ಪಿತವಿಲ್ಲದ ಪುರುಷ ಬಂದನೆನಗೆ ನೋಡಾ! ಕಲ್ಪಿತವಿಲ್ಲದೆ ನೆರೆದಡೆ, ಭಾವಿಸಲಿಲ್ಲದ ಸುಖವು ದೊರಕಿತ್ತು ನೋಡಾ! ಗೊಹೇಶ್ವರನೆಂಬ ಲಿಂಗವನರಿದ ಬಳಿಕ, ನೀ ನಾನೆಂಬುದಿಲ್ಲ ನೋಡಾ!

೧೪೪

ಸಮಸ್ತ ಕತ್ತಲೆಯ ಮುಸಕ ಕಳೆದಿಪ್ಪ ಇರವ ನೋಡಾ! ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗ ಕೂಡಿದ ಕೂಟವ ಕೂಡಲ ಸಂಗಯ್ಯ ತಾನೆ ಬಲ್ಲ!

೧೪೫

ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ, ಅಚಲಾನಂದ ದೊಳಿಪ್ಪ ಪರಮನಿರ್ಲೇಪಿಗೆ ಭಾವವಿಲ್ಲ. ಭಾವವಿಲ್ಲವಾಗಿ ಜ್ಞಾನವಿಲ್ಲ. ಜ್ಞಾನವಿಲ್ಲವಾಗಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ; ನಿಲ್ಲು ಮಾಣು!

೬. ತುಂಬಿ

೧೪೬

ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ; ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ; ಸಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ! ಎಡಹುಗುಳಿಗಳ ದಾಂಟಿ, ಬರಬರ ಲಿಂಗೈಕ್ಯನೆನಿಸುವೆನಯ್ಯಾ. ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ!

೧೪೭

ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಹೇಶ್ವರ, ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ, ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯನಾದೆನೆಂಬರು ನಿಮ್ಮ ಶರಣರು. ತಾವೇನು ಮರುಜೀವಣಿಯ ಕೊಂಡಿದ್ದರೆ? ಅಮೃತಸೇವನೆಯ ಮಾಡಿದ್ದರೆ? ಆವ ಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗದಿದ್ದಡೆ, ಆ ಭಕ್ತನ ಬಾಯಲ್ಲಿ ಹುಡಿಮಣ್ಣ ಹೊಯ್ದು ಹೋಗನೆ ನಮ್ಮ ಕೂಡಲಚೆನ್ನಸಂಗಮದೇವ?

೧೪೮

ಗುರುವ ಮುಟ್ಟಿ ಗುರುವಿನಂತಾಗಬೇಡವೆ? ಲಿಂಗವ ಮುಟ್ಟಿ ಪೂಜಿಸಿ, ಲಿಂಗದಂತಾಗಬೇಡವೇ? ಜಂಗಮವ ಮುಟ್ಟಿ ಪೂಜಿಸಿ, ಪಾದೋದಕ ಪ್ರಸಾದವ ಕೊಂಡು, ಜಂಗಮದಂತಾಗಬೇಡವೆ? ಈ ತ್ರಿವಿಧ ವಿಡಿದು, ತ್ರಿವಿಧವ ಬಿಟ್ಟು, ತ್ರಿವಿಧವ ಮುಟ್ಟಿ, ತ್ರಿವಿಧವನೇಕವ ಮಾಡಿ, ಈ ಭವವ ದಾಂಟಿ ಹೋದವರ ಭಕ್ತರೆಂಬೆ; ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬೆ. ಇದನರಿಯದೆ, ಮದಮತ್ಸರವ ಬಿಡದೆ, ಕುದಿದು ಕೋಟಲೆಗೊಂಬ ಬಿನುಗರನೊಲ್ಲ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೪೯

ಬೀಜ ವೃಕ್ಷ ಯೋಗದಂತೆ ಭಕ್ತಸ್ಥಲ. ಜಲ ಮೌಕ್ತಿಕ ಯೋಗದಂತೆ ಮಾಹೇಶ್ವರಸ್ಥಲ. ಅನಲ ಕಾಷ್ಠ ಯೋಗದಂತೆ ಪ್ರಸಾದಿಸ್ಥಲ. ಕೀಟ ಭ್ರಮರ ಯೋಗದಂತೆ ಪ್ರಾಣಲಿಂಗಿಸ್ಥಲ. ಕರಕ ವಾರಿ ಯೋಗದಂತೆ ಶರಣಸ್ಥಲ. ಇಂತು ನಿರ್ಭಾವ, ನಿರ್ಭೇದ್ಯವಾದಂಗೆ ಸೌರಾಷ್ಟ್ರಸೋಮೇಶ್ವರನಲ್ಲಿ ಲಿಂಗೈಕ್ಯವು.

೧೫೦

ಭಕ್ತನಾದರೆ, ಮುಕ್ತಿಪಥ ಗತಿಗೆ ನಿಲುಕದಂತಿರಬೇಕು. ಮಹೇಶ್ವರನಾದರೆ, ಮನದಲ್ಲಿ ಮನ್ಮಥ ಹೊಗದಂತಿರಬೇಕು. ಪ್ರಸಾದಿಯಾದರೆ, ತನ್ನ ಪ್ರಾಣವೇ ಅಗ್ನಿಸ್ವರೂಪವೆಯಾಗಿರಬೇಕು. ಪ್ರಾಣಲಿಂಗಿಯಾದರೆ, ಪ್ರಾಣವ ನಿಲ್ಲಿಸಿ ಲಿಂಗಪ್ರಾಣಿಯಾಗಿರಬೇಕು. ಶರಣನಾದರೆ, ತನ್ನ ಮರಣಭಾಧೆಯ ಗೆಲಿದಿರಬೇಕು. ಐಕ್ಯನಾದರೆ, ಅನ್ನಪಾನಾದಿಗೆ ಇಚ್ಛೆ ಇಲ್ಲದಿರಬೇಕು. ನಿರ್ವಯಲಾದರೆ, ಸರ್ವರ ಕಣ್ಣಿಗೆ ಬಯಲು ಬಯಲಾಗಿರಬೇಕು. ಈ ಷಟ್‌ಸ್ಥಲಸಂಪನ್ನತೆಯಲ್ಲಿ ಇರಬಲ್ಲಡೆ ಎಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

೧೫೧

ನಮ್ಮಂತುವ ತಿಳಿದು ನೋಡಿದರೆ ಹೇಳಿಹೆನು. ಅದೆಂತೆಂದರೆ: ಮೇಲು ಕೀಳಾಯಿತ್ತು, ಕೀಳು ಮೇಲಾಯಿತ್ತು. ನಿರಾಳ ಆಳವಾಯಿತ್ತು, ಆಳ ನಿರಾಳವಾಯಿತ್ತು. ಉತ್ತರ ಪೂರ್ವವಾಯಿತ್ತು, ಪೂರ್ವ ಉತ್ತರವಾಯಿತ್ತು. ಗುರುವು ಶಿಷ್ಯವಾಯಿತ್ತು, ಶಿಷ್ಯ ಗುರುವಾಯಿತ್ತು. ಅರ್ಪಿತ ಅನರ್ಪಿತವಾಯಿತ್ತು, ಅನರ್ಪಿತ ಅರ್ಪಿತವಾಯಿತ್ತು. ಇಂತಪ್ಪ ಘನವ ವೇಧಿಸಿ ನುಡಿಯಬಲ್ಲರೆ, ಆತನೇ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಆತ ಸರ್ವಾಂಗಲಿಂಗಿ. ಆತನಿರ್ದುದೇ ಕೈಲಾಸ. ನಡೆದುದೆ ಬಟ್ಟೆ, ನುಡಿದುದೆ ತತ್ವ. ಇಂತಪ್ಪ ಸರ್ವಾಂಗಪ್ರಸಾದಿಯ ಪ್ರಸಾದವ ಕೊಂಡು ಸರ್ವಾಂಗ ಶುದ್ಧವಾಯಿತ್ತು. ನಾ ನಿಮ್ಮ ಪಾದದೊಳು

ನಿರ್ಮುಕ್ತನಾಗಿ, ಏನೂ ಇಲ್ಲದಂತಾದೆನಯ್ಯ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

೧೫೭

ಭಕ್ತನಾದರೆ, ಪೃಥ್ವಿಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ. ಮಹೇಶ್ವರನಾದರೆ, ಅಪ್ಪುವಿನ ಸಾರದಿಂದ ಉದಕವ ಲಿಂಗಕ್ಕೆ ಮಜ್ಜನಕ್ಕೆರೆಯದ ಭಾಷೆ. ಪ್ರಸಾದಿಯಾದರೆ, ಅಗ್ನಿಯಿಂದಾದ ಕಳೆಯ ಲಿಂಗಕ್ಕೆ ವೇಧಿಸದ ಭಾಷೆ. ಪ್ರಾಣಲಿಂಗಿಯಾದರೆ, ವಾಯುವಿನಿಂದಾದ ಧ್ಯಾನವ ಲಿಂಗದಲ್ಲಿ ನೋಡದ ಭಾಷೆ. ಶರಣನಾದರೆ, ಆಕಾಶದಿಂದಾದ ಸ್ತುತ್ಯವ ಲಿಂಗಕ್ಕೆ ಮಾಡದ ಭಾಷೆ. ಐಕ್ಯನಾದರೆ, ಆತ್ಮದಿಂದಾದ ಅಹಂ ಮಮತೆಯಲಿ ಲಿಂಗವ ಭಾವಿಸದ ಭಾಷೆ. ಇಂತೀ ಆರರಿಂದ ಮೀರಿ ತೋರುವ ಘನವು ಬಸವಪ್ರಿಯ ಕೂಡಲಚೆನ್ನಬಸವಣ್ಣ.

೧೫೮

ಪ್ರಥಮದಲ್ಲಿ ಭಕ್ತಸ್ಥಲವೆಂದು ನುಡಿವಿರಿ. ಆ ಭಕ್ತಸ್ಥಲವೆಲ್ಲರಿಗೆಂತಾಯಿತ್ತು ಹೇಳಿರಣ್ಣಾ? ಸತಿಪತಿಸುತರು ಭೃತ್ಯಾಚಾರದಲ್ಲಿ ಭಕ್ತಿಯ ಮಾಡಿಹೆನೆಂಬಣ್ಣಗಳು ಕೇಳಿರೊ. ಪತಿಯ ಮಾತ ಮೀರುವಾಕೆ ಸತಿಯಲ್ಲ. ಪಿತನ ಮಾತ ಮೀರುವಾತ ಸುತನಲ್ಲ. ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನಿತ್ತ ಗುರುವಿನಾಜ್ಞೆಯ ಮೀರುವಾತ ಶಿಷ್ಯನಲ್ಲ. ಇಂತಿವು ಭಕ್ತಸ್ಥಲಕ್ಕೆ ಸಲ್ಲವು ಕೇಳಿರಣ್ಣಾ! ಆ ಸತಿಗೆ ಪತಿಯೇ ಗುರುವಾಗಿ, ಆ ಸುತಗೆ ಪಿತನೇ ಗುರುವಾಗಿ, ಆ ಪಿತಗೆ ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನಿತ್ತ ಗುರುವೇ ಗುರುವಾಗಿ, ಏಕಪದವಿಲ್ಲಾಗಿ ಭಕ್ತಸ್ಥಲವ ಮಾಡಿಹೆನೆಂಬಣ್ಣಗಳಿರಾ ಕೇಳಿ. ಈ ಒಂದು ಸ್ಥಲವುಳ್ಳವರಿಗೆ ಆರು ಸ್ಥಲವು ಅಡಗಿತ್ತು. ಇಂತಿವು ಏಕಸ್ಥಲವಾದ ಮೇಲೆ ಮುಂದೆಂತೆಂದಡೆ: ಆ ಪತಿಗೆ ಸತಿಯೇ ಗುರುವಾಗಿ, ಆ ಪಿತಗೆ ಸುತನೇ ಗುರುವಾಗಿ, ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನಿತ್ತ ಗುರುವೇ ಶಿಷ್ಯನಾಗಿ, ಇಂತಿದೀಗ ನಿರ್ಣಯಸ್ಥಲವು. ಇದನರಿಯದೆ, ಅವಳು ಸತಿ ತಾ ಪತಿ ಎಂಬ ಹಮ್ಮಿಂದವೇ, ಅವರು ಸುತರು ತಾ ಪಿತನೆಂಬ ಹಮ್ಮಿಂದವೇ, ಅವರು ಶಿಷ್ಯರು ತಾ ಗುರುವೆಂಬ ಹಮ್ಮಿಂದವೇ ಇದು ಲಿಂಗಪಥಕ್ಕೆ ಸಲ್ಲದು.

ಹಿಡಿದ ವ್ರತಕ್ಕೆ ನಿಲ್ಲದು. ಇದರ ಮುಂದೆ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

೧೫೪

ತುಂಬಿ ಪರಿಮಳವನುಂಡುದೋ? ಪರಿಮಳ ತುಂಬಿಯನುಂಡುದೋ? ಲಿಂಗ ಪ್ರಾಣವಾಯಿತೋ? ಪ್ರಾಣ ಲಿಂಗವಾಯಿತೋ? ಗೊಹೇಶ್ವರಾ, ಈ ಉಭಯದ ಭೇದವ ನೀನೆ ಬಲ್ಲೆ!

ವಚನಕಾರರು, ಅಂಕಿತ, ವಚನಸಂಖ್ಯೆ

ವಚನಕಾರರು, ಅಂಕಿತ, ವಚನಸಂಖ್ಯೆ

ವಚನಕಾರರು	ಅಂಕಿತ	ವಚನಸಂಖ್ಯೆ
೧. ಅಕ್ಕನಾಗಮ್ಮ	ಬಸವಣ್ಣಪ್ರಿಯ ಚೆನ್ನಸಂಗ	೮
೨. ಅಗ್ಗವಣಿ ಹಂಪಯ್ಯ	ಹಂಪೆಯ ವಿರುಪ	೧
೩. ಅಮುಗಿದೇವಯ್ಯ	ಸಿದ್ಧಸೋಮನಾಥಲಿಂಗ	೩
೪. ಅಂಬಿಗರ ಚೌಡಯ್ಯ	ಅಂಬಿಗ ಚೌಡಯ್ಯ	೬೭
೫. ಅರುವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೫
೬. ಅಲ್ಲಮಪ್ರಭು	ಗೊಹೇಶ್ವರ	೫೦೦
೭. ಅವಸರದ ರೇಚಣ್ಣ	ಸದ್ಯೋಜಾತಲಿಂಗ	೧
೮. ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೪೫
೯. ಆಯ್ದಕ್ಕಿ ಮಾರಯ್ಯ	ಅಮರೇಶ್ವರ ಲಿಂಗ	೧೪
೧೦. ಉರಿಲಿಂಗದೇವ	ಉರಿಲಿಂಗ ದೇವ	೩೩
೧೧. ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೭೨
೧೨. ಕಕ್ಕಯ್ಯ	ಅಭಿನವ ಮಲ್ಲಿಕಾರ್ಜುನ	೪
೧೩. ಕದಿರ ರೆಮ್ಮವ್ವೆ	ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ	೧
೧೪. ಕನ್ನದ ಮಾರಿತಂದೆ	ಮದನಂಗೆ ದೂರ ಮಾರೇಶ್ವರ	೧
೧೫. ಕಂಭದ ಮಾರಿತಂದೆ	ಚೆನ್ನಕದಂಬಲಿಂಗ	೧
೧೬. ಕಾಡಸಿದ್ಧೇಶ್ವರ	ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೆ	೧೨
೧೭. ಕಾಮಾಟದ ಭೀಮಣ್ಣ	ದಾರೇಶ್ವರಲಿಂಗ	೧
೧೮. ಕೋಲ ಶಾಂತಯ್ಯ	ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗಸಂಗ	೨

೧೯. ಗಜೇಶ ಮಸಣಯ್ಯ	ಮಹಾಲಿಂಗ ಗಜೇಶ್ವರ	೧
೨೦. ಗಣದಾಸಿ ವೀರಣ್ಣ	ಶಾಂತಕೂಡಲಸಂಗಮದೇವ	೯
೨೧. ಗೋರಕ್ಷ	ಗೋರಕ್ಷಪಾಲಕ ಮಹಾಪ್ರಭು ಸಿದ್ಧ ಸೋಮನಾಥಲಿಂಗ	೧
೨೨. ಘಟ್ಟಿವಾಳಯ್ಯ	ಚಿಕ್ಕಯ್ಯಪ್ರಿಯ ಸಿದ್ಧಲಿಂಗ	೨೫
೨೩. ಘನಲಿಂಗದೇವ	ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನ	೧೮
೨೪. ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೧
೨೫. ಚಿಕ್ಕಣ್ಣ (ನಿಜಲಿಂಗ ಚಿಕ್ಕಯ್ಯ)	ಉಳಿಯುಮೇಶ್ವರ	೧
೨೬. ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೧
೨೭. ಜೋದರ ಮಾಯಣ್ಣ	ಶಂಭುಸೋಮನಾಥಲಿಂಗ	೧
೨೮. ಢಕ್ಕೆಯ ಬೊಮ್ಮಣ್ಣ	ಕಾಲಾಂತಕ ಭೀಮೇಶ್ವರಲಿಂಗ	೧
೨೯. ತುರುಗಾಹಿ ರಾಮಣ್ಣ	ಗೋಪತಿನಾಥ ವಿಶ್ವೇಶ್ವರಲಿಂಗ	೧೨
೩೦. ತೆಲುಗು ಜೊಮ್ಮಯ್ಯ	ತೆಲುಗೇಶ್ವರ	೧
೩೧. ತೋಂಟದ ಸಿದ್ಧಲಿಂಗ	ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೆ	೩೫
೩೨. ದಾಸೋಹದ ಸಂಗಣ್ಣ	ಮಾತುಳಂಗ ಮಧುಕೇಶ್ವರ	೧
೩೩. ದೇವರ ದಾಸಿಮಯ್ಯ	ರಾಮನಾಥ	೯೦
೩೪. ನಗೆಮಾರಿತಂದೆ	ಆತುರವೈರಿ ಮಾರೇಶ್ವರ	೧
೩೫. ನೀಲಲೋಚನೆ	ಸಂಗಯ್ಯ	೯
೩೬. ನುಲಿಯ ಚಂದಯ್ಯ	ಚಂದೇಶ್ವರ	೨೬
೩೭. ಬಸವಣ್ಣ	ಕೂಡಲಸಂಗಮದೇವ	೨೮೬
೩೮. ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೧
೩೯. ಬಾಹೂರ ಬೊಮ್ಮಯ್ಯ	ಬ್ರಹ್ಮೇಶ್ವರಲಿಂಗ	೪
೪೦. ಬಿಬ್ಬಿ ಬಾಚಯ್ಯ	ಏಣಾಂಕಧರ ಸೋಮೇಶ್ವರಲಿಂಗ	೨
೪೧. ಬೊಕ್ಕಸದ ಸಂಗಣ್ಣ	ಬಸವಣ್ಣಪ್ರಿಯ	

	ನಾಗೇಶ್ವರಲಿಂಗ	೨
೪೨. ಭಂಡಾರಿ ಶಾಂತಯ್ಯ	ಅಲೇಖನಾದ ಶೂನ್ಯ ಕಲ್ಲಿನೊಳಗಾದ	೧
೪೩. ಮಡಿವಾಳ ಮಾಚಿದೇವ	ಕಲಿದೇವರ ದೇವ	೬೯
೪೪. ಮಧುವಯ್ಯ	ಅರ್ಕೇಶ್ವರಲಿಂಗ	೫
೪೫. ಮನುಮುನಿ ಗೊಮ್ಮಟಯ್ಯ	ಗೂಡಿನೊಡೆಯ ಗುಮ್ಮಟನಾಥ ಆಗಮೇಶ್ವರಲಿಂಗ	೧
೪೬. ಮರುಳು ಶಂಕರದೇವ	ಶುದ್ಧಸಿದ್ಧಪ್ರಸಿದ್ಧಪ್ರಸನ್ನಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನ	೬
೪೭. ಮಹಾದೇವಿಯಕ್ಕ	ಚೆನ್ನಮಲ್ಲಿಕಾರ್ಜುನ	೧೪೬
೪೮. ಮಾದಾರ ಧೂಳಯ್ಯ	ಕಾಮಧೂಮ ಧೂಳೇಶ್ವರಲಿಂಗ	೧
೪೯. ಮುಕ್ತಾಯಕ್ಕ	ಅಜಗಣ್ಣ	೨೦
೫೦. ಮೆರೆಮಿಂಡದೇವ	ಐಘಟದೂರ ರಾಮೇಶ್ವರಲಿಂಗ	೧೮
೫೧. ಮೋದಾರ ಕೇತಯ್ಯ	ಗೌರೇಶ್ವರ	೧
೫೨. ರಾಯಸದ ಮಂಚಣ್ಣ	ಜಾಂಬೇಶ್ವರ	೧
೫೩. ಲಕ್ಕಮ್ಮ	ಮಾರಯ್ಯಪ್ರಿಯ ಅಮರೇಶ್ವರ ಲಿಂಗ	೧೯
೫೪. ಲಿಂಗಮ್ಮ	ಅಪ್ಪಣ್ಣಪ್ರಿಯ ಚೆನ್ನಬಸವಣ್ಣ	೩೫
೫೫. ಶಂಕರದಾಸಿಮಯ್ಯ	ನಿಜಗುರು ಶಂಕರದೇವ	೨
೫೬. ಶಿವನಾಗಮಯ್ಯ	ನಾಗಪ್ರಿಯ ಚೆನ್ನರಾಮೇಶ್ವರ	೧
೫೭. ಶಿವಲೆಂಕ ಮಂಚಣ್ಣ	ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗ	೧೧
೫೮. ಷಣ್ಮುಖಸ್ವಾಮಿ	ಅಖಂಡೇಶ್ವರ	೧೯
೫೯. ಸಕಳೇಶ ಮಾದರಸ	ಸಕಳೇಶ್ವರ	೪೩
೬೦. ಸತ್ಯಕ್ಕ	ಶಂಭು ಜಕ್ಕೇಶ್ವರ	೩
೬೧. ಸಿದ್ಧರಾಮ	ಯೋಗಿನಾಥ (ಕಪಿಲಸಿದ್ಧಮಲ್ಲಿಕಾರ್ಜುನ)	೧

೬೨. ಸೊಡ್ಡಳ ಬಾಚರಸ	ಮಹಾದಾನಿ ಸೊಡ್ಡಳ	೬
೬೩. ಸ್ವತಂತ್ರ ಸಿದ್ಧಲಿಂಗೇಶ್ವರ	ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ	೨೦
೬೪. ಹಡಪದಪ್ಪಣ್ಣ	ಬಸವಪ್ರಿಯ ಕೂಡಲಚೆನ್ನ ಸಂಗಮದೇವ (ಬಸವಪ್ರಿಯ ಕೂಡಲ ಚೆನ್ನಬಸವಣ್ಣ)	೧೧೬
೬೫. ಹಾವಿನಹಾಳ ಕಲ್ಲಯ್ಯ	ಮಹಾಲಿಂಗ ಕಲ್ಲೇಶ್ವರ	೧೩
೬೬. ?	ಕದಂಬ ಕಳಾಸ ಕೂಡಲ ಚೆನ್ನಸಂಗ	೧
		೨೧೩೯

ವಚನಗಳ ವರ್ಣಾನುಕ್ರಮಣಿಕೆ

ವಚನಗಳ ವರ್ಣಾನುಕ್ರಮಣಿಕೆ

ಪುಟ

ಅ

ಪುಟ

ಇ

ಏ

ಕ

ಘ

ಚ

ದ

ಪ

ಫ

ಬ

ಭ

ಯ

ರ

ಲ

ವ

ಶ

ಷ

ಸ

ಹ

ಕ್ಷ

ಜ್ಞ